# ಶ್ರೀಮದ್ವಾಲ್ಮೀಕಿ

# ರಾಮಾಯಣಮ್

## ಯುದ್ಧಕಾಂಡಃ

### ಪೂರ್ವಾರ್ಧಃ

(ಕನ್ನಡ ಅನುವಾದ ಸಹಿತ)



# ಶ್ರೀ ಮದ್ವಾಲ್ಮೀಕಿರಾಮಾಯಣಮ್

# ಯುದ್ಧಕಾಂಡಃ

## ಪೂರ್ವಾರ್ಧಃ

೧-೬೭ ಸರ್ಗಗಳು

(ಕನ್ನಡ ಅನುವಾದ ಸಹಿತ)

ಮುನ್ನುಡಿ

ಡಾ|| ಡಿ. ವಿ. ಗುಂಡಪ್ಪನವರಿಂದ

ಅನುವಾದಕರು

ವಿದ್ವಾನ್ ಎನ್. ರಂಗನಾಥಶರ್ಮಾ

ಪ್ರಕಾಶಕರು

ರಾಮಾಯಣ ಪ್ರಕಾಶನ ಸಮಿತಿ

ನರಸಿಂಹರಾಜ ಕಾಲೋನಿ, ಬೆಂಗಳೂರು – ೫೬೦ ೦೦೪.

ಐದನೆಯ ಮುದ್ರಣ 2007

ಇದರ ಹಕ್ಕುಗಳೆಲ್ಲವೂ
ರಾಮಾಯಣ ಪ್ರಕಾಶನ ಸಮಿತಿಯವು
**(All Rights Reserved)**

**ಬೆಲೆ : ರೂ. 80-00**

**ಮುದ್ರಣಕಾರರು**
**ಪರಿಮಳ ಮುದ್ರಣಾಲಯ**
ನಂ. 4/1, 'ಎ' ಅಡ್ಡರಸ್ತೆ, ಬ್ಯಾಟರಾಯನಪುರ
ಮೈಸೂರು ರಸ್ತೆ, **ಬೆಂಗಳೂರು – 26.** ದೂ. 26758058

# ಶ್ರೀಮದ್ವಾಲ್ಮೀಕಿ ರಾಮಾಯಣದ
# ಯುದ್ಧ ಕಾಂಡ ಪೂರ್ವಾರ್ಧಃ

## ಗ್ರಂಥಕ್ಕೆ ಸಹಾಯ ಮಾಡಿದ ರಾಮಭಕ್ತ ಮಹನೀಯರುಗಳು

| | |
|---|---|
| **ಶ್ರೀಮತಿ ಸಂಧ್ಯಾ ಮತ್ತು ಶ್ರೀ ಎಂ. ಮಂಜುನಾಥ್** | **5000.00** |
| **ಶ್ರೀಮತಿ ಮಹಾಲಕ್ಷ್ಮಮ್ಮ ಮತ್ತು ಶ್ರೀ ಎಸ್.ಎನ್. ಮೂರ್ತಿ** | **3000.00** |
| **ಶ್ರೀಮತಿ ಉಷಾ ಮತ್ತು ಶ್ರೀ ಎಸ್.ಎನ್. ಉಮಾಶಂಕರ್** | **2000.00** |

ಮೇಲ್ಕಂಡ ಸರ್ವರಿಗೂ ಶ್ರೀ ಸೀತಾರಾಮಚಂದ್ರರು ಆಯುರಾರೋಗ್ಯ, ಐಶ್ವರ್ಯವನ್ನು ನೀಡಿ ಕಾಪಾಡಲೆಂದು ಪ್ರಾರ್ಥನೆ.

**ಎಸ್. ಎನ್. ಮೂರ್ತಿ**

ರಾಮಾಯಣ ಪ್ರಕಾಶನ ಸಮಿತಿ

# ಅರಿಕೆ
# ಐದನೆಯ ಮುದ್ರಣಕ್ಕೆ ಮುನ್ನ ............
# ಯುದ್ಧಕಾಂಡ ಭಾಗ 1

ರಾಮಾಯಣದ ಜನಪ್ರಿಯತೆ ಭಾರತಕ್ಕಷ್ಟೇ ಸೀಮಿತವಲ್ಲ. ಅದು ವಿಶ್ವವ್ಯಾಪಿಯಾದುದು. ಜಗತ್ತಿನ ಎಲ್ಲ ಪ್ರಮುಖ ಭಾಷೆಗಳಲ್ಲಿ ರಾಮಾಯಣ ಮುದ್ರಣಗೊಂಡಿದೆ. ಆಗ್ನೇಯ ಏಷ್ಯಾದಲ್ಲಿಯಂತೂ ಕಥಾನಕ–ಚಿತ್ರ–ರೂಪಕ–ನಾಟಕ ಪುರಾತನ ಶಿಲ್ಪಗಳಲ್ಲಿ ರಾಮಾಯಣವು ಪಡೆದಿರುವ ಸ್ಥಾನ ತುಂಬಾ ಹಿರಿದಾದುದು.

ನಮ್ಮ ಈ ಕಾರ್ಯಕ್ಕೆ ಮುಖ್ಯ ಪ್ರೇರಕರು **ದಿ|| ಪೂಜ್ಯ ಡಿ.ವಿ.ಜಿ.ಯವರು.** ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದವನ್ನು ಪ್ರಕಟಿಸುವುದು ಸ್ತುತ್ಯವೂ, ಅಗತ್ಯವೂ ಆದ ಕೆಲಸವೆಂದು ಪ್ರೇರಣೆ ನೀಡಿದ ಅವರು ಅನುವಾದ ಕಾರ್ಯಕ್ಕೆ ವಿದ್ವಾನ್ ರಂಗನಾಥಶರ್ಮಾರ ಹೆಸರನ್ನೂ ಸೂಚಿಸಿದರು ಹಾಗೂ ಈ ಗ್ರಂಥಕ್ಕೆ ಅಮೂಲ್ಯವಾದ ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿದ್ದಾರೆ. ಅವರಿಗೆ ನಮ್ಮ ಸಂಘದ ಅನಂತ ವಂದನೆಗಳು.

ಶ್ರೀಮದ್ವಾಲ್ಮೀಕಿ ರಾಮಾಯಣವನ್ನು ಅನುವಾದ ಸಹಿತ ಪ್ರಕಟಿಸಿದಾಗ ಪ್ರತಿಯೊಂದು ಕಾಂಡಕ್ಕೂ ದಿ|| ಪೂಜ್ಯ ಡಿ.ವಿ.ಜಿ.ಯವರ ಅನುಭವ– ಅಧ್ಯಯನ ಪೂರ್ಣ– ಸಾರಭೂತ ಮುನ್ನುಡಿಯನ್ನು ಪಡೆಯುವ ಭಾಗ್ಯ ನಮ್ಮದಾಗಿತ್ತು. ಆ ಮುನ್ನುಡಿಗಳು ಎಷ್ಟು ಮಟ್ಟಿಗೆ ಗ್ರಂಥದ ತೂಕವನ್ನು ಹೆಚ್ಚಿಸಿ ಜನಪ್ರಿಯತೆ ತಂದು ಕೊಟ್ಟಿವೆಯೆಂಬುದು ಓದುಗರಿಗೆ ತಿಳಿದೇ ಇದೆ. ಎಲ್ಲಾ ಕಾಂಡಗಳ ಮುನ್ನುಡಿಗಳು ಪ್ರತ್ಯೇಕ ಪುಸಕರೂಪದಲ್ಲಿ ಪ್ರಕಟಿಸಲ್ಪಟ್ಟಿದೆ. ಆ ಮಹಾದಿಗ್ಗಜ ಡಿ.ವಿ.ಜಿ.ಯವರ ಪೂರ್ಣ ವಿಶ್ವಾಸಪಾತ್ರರಾದ ಶ್ರೀ ರಂಗನಾಥಶರ್ಮಾರು ನಿಜಕ್ಕೂ ಸ್ತುತ್ಯರ್ಹರು. ಎಂದಿನಂತೆ ಮಹಾಜನಗಳು ಸಹಕರಿಸಬೇಕಾಗಿ ವಿನಂತಿ.

ಪರಿಮಳ ಮುದ್ರಣಾಲಯದವರು ಅಂದವಾಗಿ ಈ ಯುದ್ಧಕಾಂಡ ಭಾಗ–1 ಮುದ್ರಣ ಮಾಡಿಕೊಟ್ಟು ಉಪಕಾರ ಮಾಡಿದ್ದಾರೆ. ಅವರಿಗೆ ಸಂಘದ ವಂದನೆಗಳು.

ಬೆಂಗಳೂರು — **ಎಸ್.ಎನ್.ಮೂರ್ತಿ,** ಅಧ್ಯಕ್ಷರು
10.2.2007 — ದೂರವಾಣಿ : 26622231, 26770680

**ರಾಮಾಯಣ ಪ್ರಕಾಶನ ಸಮಿತಿಯ ಸದಸ್ಯರುಗಳು**

**ಶ್ರೀ ಎಸ್.ಎನ್. ಮೂರ್ತಿ**
**ಶ್ರೀ ಕೆ.ಎನ್. ವೆಂಕಟನಾರಾಯಣ**
**ಶ್ರೀ ಎ. ಎಸ್. ನಂಜುಂಡರಾವ್**
**ಶ್ರೀ ಬಿ.ವಿ. ಚಂದ್ರಶೇಖರ್**
**ಶ್ರೀ ಎನ್.ಕೆ. ನರಸಿಂಹಮೂರ್ತಿ**
**ಶ್ರೀಮತಿ ಸಂಧ್ಯಾ ಎನ್. ಮಂಜುನಾಥ್**
**ಶ್ರೀ ಎಸ್.ಎನ್. ಉಮಾಶಂಕರ**

# ನಿವೇದನೆ

ಶ್ರೀರಾಮಚಂದ್ರನ ಅನುಗ್ರಹ, ಶ್ರೀ ಡಿ. ವಿ. ಜಿ. ಯವರ ಆಶೀರ್ವಾದ, ರಾಮಾಯಣ ಪ್ರಕಾಶನ ಸಮಿತಿಯ ಪ್ರೋತ್ಸಾಹ—ಇವು ಮುಪ್ಪುರಿಗೊಂಡು ನನ್ನ ಲೇಖನಿಗೆ ಯುದ್ಧ ಕಾಂಡದಲ್ಲಿಳಿಯುವ ಧೈರ್ಯವನ್ನು ಕೊಟ್ಟವು. ಅದರ ಫಲವಾಗಿ ಈ ಪೂರ್ವಾರ್ಧವನ್ನು ವಾಚಕರ ಕೈಯಲ್ಲಿಡಲು ನನಗೆ ಸಂತೋಷ ವಾಗಿದೆ. ಶೀಘ್ರದಲ್ಲಿಯೇ ಉತ್ತರಾರ್ಧವನ್ನೂ ಕೈಯಲ್ಲಿಟ್ಟು ಕೃತಕೃತ್ಯನಾಗುವ ಆಸೆ ಇದೆ.

ಯುದ್ಧಪ್ರಕರಣವನ್ನು ವಾಲ್ಮೀಕಿಮುನಿಗಳು ಇಷ್ಟು ವಿಸ್ತಾರವಾಗಿ ಬೆಳೆಸಿ ಚಿತ್ರಿಸಿದ ಉದ್ದೇಶವೇನಿರಬಹುದೆಂದು ನಾನು ಚಿಂತಿಸಿದ್ದುಂಟು. ನಾಯಕ—ಪ್ರತಿನಾಯಕರಾದ ಶ್ರೀ ರಾಮ—ರಾವಣರ ನಿಸ್ಸೀಮವಾದ ಶೌರ್ಯ, ಪರಾಕ್ರಮ, ಸಾಹಸಗಳ ಅಭಿವ್ಯಕ್ತಿ ಇಲ್ಲಿ ಉದ್ದಿಷ್ಟವೆಂಬುದೇನೋ ಸರಿಯೇ. ಧರ್ಮಾಧರ್ಮಗಳ ಹೋರಾಟದಲ್ಲಿ ಧರ್ಮದೆದುರಿಗೆ ಅಧರ್ಮವು ನಿಲ್ಲಲಾರದೆ ಮಣಿಯ ಬೇಕಾದರೂ ಅಧರ್ಮದ ಪಿಡುಗು ಸಾಮಾನ್ಯವಲ್ಲ, ಅದನ್ನೆದುರಿಸುವುದು ಅತಿಕಠಿಣ ಎಂಬುದನ್ನು ತೋರಿಸುವುದೂ ಕವಿಗಳ ಆಶಯವಿರಬಹುದು. ಒಬ್ಬ ಮಹಾ ಸಾಧ್ವಿಯ ಮಾನಸಂರಕ್ಷಣೆಗಾಗಿ ಕೋಟಿ ಕೋಟಿ ಯೋಧರು ಜೀವದ ಹಂಗಿಲ್ಲದೆ ಹೋರಾಡಿದರೆಂಬುದು ಇತಿಹಾಸದಲ್ಲಿ ಮೈನವಿರೇಳಿಸುವ ಸಂಗತಿ. ಧರ್ಮದ ರಕ್ಷಣೆ ಭೀಕರವಾದ ತ್ಯಾಗವನ್ನಪೇಕ್ಷಿಸುತ್ತದೆಯೆಂಬ ಸತ್ಯವು ಇಲ್ಲಿ ಸೂಚ್ಯವಾಗಿದೆ.

ಯುದ್ಧ ಕಾಂಡದ ಅನುವಾದದಲ್ಲಿ ಕನ್ನಡನುಡಿಯು ಸ್ವಲ್ಪ ಗಡುಸಾಯಿತೆಂದು ತೋರಬಹುದು. ಸಂಸ್ಕೃತಶಬ್ದಗಳ ಬಳಿಕೆ ಹೆಚ್ಚಾಯಿತೆನಿಸಬಹುದು. ಆದರೆ ವೀರ ರೌದ್ರಬೀಭತ್ಸಗಳ ವರ್ಣನೆಯಲ್ಲಿ ನುಡಿಯು ಗಡುಸಾಗುವುದು ಅನಿವಾರ್ಯವೆಂದೂ ಆವಶ್ಯಕವೆಂದೂ ನಾನು ತಿಳಿಯುತ್ತೇನೆ. ಓಜೋಬಂಧವು ಲಲಿತಪದಗಳಿಂದ ಆಗತಕ್ಕದ್ದಲ್ಲ.

ಮುನ್ನುಡಿಯನ್ನು ಬರೆದುಕೊಟ್ಟ ಶ್ರೀ ಡಿ. ವಿ. ಜಿ. ಯವರಿಗೂ ಕನ್ನಡ ಲಿಪಿಯಲ್ಲಿ ಶ್ಲೋಕಗಳನ್ನು ಬರೆದು ಮುದ್ರಣಕ್ಕೆ ನೆರವು ನೀಡಿದ ಶ್ರೀ ಡಿ. ಸಿ. ಅನಂತರಾಮಯ್ಯನವರಿಗೂ ಎಂದಿನಂತೆ ಪ್ರೋತ್ಸಾಹವನ್ನಿತ್ತ ರಾಮಾಯಣ ಪ್ರಕಾಶನ ಸಮಿತಿಯ ಸಕಲ ಸದಸ್ಯರಿಗೂ ಅತ್ಯಂತ ಕೃತಜ್ಞನಾಗಿದ್ದೇನೆ.

ಬೆಂಗಳೂರು
ಸೌಮ್ಯ ಸಂ|| ವಿಜಯದಶಮೀ
ತಾ|| ೨೦-೧೦-೧೯೬೯

— **ಅನುವಾದಕ**

# ಮುನ್ನುಡಿ

**ಅಭಿನಂದಾಮ ವೈದೇಹೀಂ ಕಾರವಾಸತಪಸ್ವಿನೀಮ್ ।**
**ಯಾಂ ವಿಮೋಚಯಿತುಂ ಸೇತುಂ ಕಾರಯಾಮಾಸ ರಾಘವಃ ॥**

ಯುದ್ಧಕಾಂಡಗ್ರಂಥದ ಈ ಪ್ರಥಮ ಸಂಪುಟದಲ್ಲಿ ಸೇತುನಿರ್ಮಾಣ ದಿಂದ ಕುಂಭಕರ್ಣವಧೆಯವರೆಗಿನ ಕಥಾಭಾಗ ಸೇರಿದೆ.

ಶ್ರೀಮದ್ರಾಮಾಯಣದ ಏಳು ಕಾಂಡಗಳಲ್ಲಿ ಯುದ್ಧಕಾಂಡ ಬಹು ದೊಡ್ಡದು. ಅಯೋಧ್ಯಾಕಾಂಡ ಕೂಡ ಗಾತ್ರದಲ್ಲಿ ಇಷ್ಟಿಲ್ಲ. ಬರಿಯ ಯುದ್ಧಕಥೆಗೆ ಇಷ್ಟು ದೊಡ್ಡ ಗ್ರಂಥವೆ? ಯುದ್ಧವೆಂದರೆ ಹೊಡೆತ, ಬಡಿತ, ಕಡಿಯೋಣ, ಕೊಲ್ಲೋಣ–ಇಷ್ಟು ತಾನೆ? ಆಗ್ನೇಯಾಸ್ತ್ರ, ಐಂದ್ರಸ್ತ್ರ, ವಾರುಣಾಸ್ತ್ರ, ವಾಯವ್ಯಾಸ್ತ್ರ; ಇವನು ಬಿದ್ದ, ಅವನು ಸತ್ತ, ಮತ್ತೊಬ್ಬ ಮಡಿದ, ಇನ್ನೊಬ್ಬ ಓಡಿಹೋದ–ಇಷ್ಟು ತಾನೆ ವಿಷಯ? ಇಷ್ಟಲ್ಲದೆ ಬೇರೆ ಸಂಗತಿ ಏನಿದ್ದೀತು? ಇದು ಯಾರ ಮನಸ್ಸಿಗಾದರೂ ಮೊದಲು ಹೊಳೆಯುವ ಪ್ರಶ್ನೆ.

ಆದರೆ ಗ್ರಂಥದ ಒಳಹೊಕ್ಕಮೇಲೆ ಆ ಪ್ರಶ್ನೆಯ ಸುಳಿವಿರದು. ಗ್ರಂಥ ದಲ್ಲಿರುವುದೆಲ್ಲ ಅವಶ್ಯವಾದದ್ದೇ, ಎಲ್ಲ ಉಚಿತವಾದದ್ದೇ, ಎಲ್ಲ ಸ್ವಾರಸ್ಯವೇ– ಎಂದು ಆಗ ಮನದಟ್ಟಾಗುತ್ತದೆ. ವಾಲ್ಮೀಕಿಗಳು ಯಾವ ಸಂದರ್ಭವನ್ನೂ ಅನವಶ್ಯವಾಗಿ ಬೆಳಸಿಲ್ಲ; ಎಲ್ಲಿಯೂ ಕೃತಕವಾಗಿಲ್ಲ. ಎಲ್ಲಿ ಎಷ್ಟಿದ್ದರೆ ಪರಿಣಾಮ ಕಾರಿಯಾದಿತೋ ಅಷ್ಟು ಇದೆ; ಎಲ್ಲ ಸಮಂಜಸವಾಗಿದೆ.

ಆಂಗ್ಲ ಸಾಹಿತ್ಯ ವಿಮರ್ಶಕರಲ್ಲಿ ಹೆಸರಾದ ಕ್ವಿಲ್ಲರ್–ಕೌಚ್ (Quiller Couch) ಎಂಬಾತನು ಕಾವ್ಯಕರ್ತನಿಗಿರುವ ಕಷ್ಟಗಳು ಎರಡು ಜಾತಿಯವೆನ್ನು ತ್ತಾನೆ : (೧) ಪದ್ಯ ಲೇಖಕನಿಗೆ ಸಾಮಾನ್ಯ ಸಂದರ್ಭ; (೨) ಗದ್ಯ (ವಚನ) ಲೇಖಕನಿಗೆ ವಿಶೇಷ ಸಂದರ್ಭ–ಇರುವ ಕಷ್ಟ.

ನಮ್ಮ ದಿನಚರಿಯ ಸಾಮಾನ್ಯ ಸಂಗತಿಗಳು–ಊಟ, ನಿದ್ದೆ, ಹರಟೆ, ಪೇಟೆಯ ವ್ಯಾಪಾರ, ಲೇವಾದೇವಿ, ಕೊಂಡದ್ದು, ಮಾರಿದ್ದು, ಬೆಳಗಾದದ್ದು, ರಾತ್ರಿಯಾದದ್ದು, ಊರು ತಲಪಿದ್ದು, ಊರು ಬಿಟ್ಟದ್ದು–ಇಂಥ ಸಂಗತಿಗಳನ್ನು ರಸವತ್ತಾದ ಪದ್ಯಗಳಿಂದ ಹೇಳುವುದು ಕಷ್ಟ. ಅವು ಜನದ ಬಳಕೆಯ ಮಾತಿನ ವಿಷಯಗಳು, ವಚನಕ್ಕೆ ಸುಲಭವಾಗುತ್ತವೆ.

ಇಂಥ ಸಾಮಾನ್ಯ ಬಾಹ್ಯವ್ಯಾಪಾರಗಳಾಗದೆ, ವಿಶೇಷವಾಗಿ ಹೃದಯವನ್ನು ಮುಟ್ಟುವ ಸನ್ನಿವೇಶಗಳಾದರೋ–ರೋಷ, ಅಸೂಯೆ, ಪ್ರಣಯ, ಉತ್ಸಾಹ, ಭಯ–ಇಂಥ ಮನೋವಿಕಾರಾವೇಶಗಳು ಪದ್ಯಕ್ಕೆ ಸುಲಭ. ವಚನಲೇಖಕನಿಗೆ ಅವು ಅಷ್ಟು ಸುಲಭವಲ್ಲ.

## ಯುದ್ಧ ಕಥೆಯ ಕಾವ್ಯಾರ್ಹತೆ

ಕಾವ್ಯವು ಮುಖ್ಯವಾಗಿ ರಸೋತ್ಪಾದಕವಾದ ವಾಕ್ಯರಚನೆ. ಅದನ್ನೋದಿದಾಗ ಓದುಗನ ಅಂತರಂಗದಲ್ಲಿ ಭಾವಗಳು ತರಂಗತರಂಗವಾಗಿ ಎದ್ದು ಚಲಿಸಬೇಕು. ಯುದ್ಧದ ವರದಿ ಹಾಗಿದ್ದೀತೆ? ಅದರಲ್ಲೆಲ್ಲಿದೆ ಭಾವೋದ್ದೀಪಕ ವಸ್ತು?

ವಾಲ್ಮೀಕಿಗಳ ರಚನೆಯನ್ನು ನೋಡೋಣವಾಗಲಿ. ಕ್ವಿಲ್ಲರ್–ಕೌಚನು ಹೇಳಿರುವ ಕಷ್ಟ ವಾಲ್ಮೀಕಿಗಳಿಗೆ ಇದ್ದಂತೆ ತೋರುವುದಿಲ್ಲ. ಅವರ ಆಖ್ಯಾಯಿಕೆಯಲ್ಲಿ ಎಲ್ಲಿ ನೋಡಿದರೂ ಗಲಭೆ, ಉದ್ರೇಕ, ಗುಡುಗಾಟ, ಗದ್ದಲ, ಉಭಯ ಪಕ್ಷಗಳ ಸನ್ನಾಹಗಳು, ಉಪಾಯಚಿಂತನೆಗಳು, ಹಾರಾಟ ಓಡಾಟಗಳು. ಇದರಲ್ಲಿ ನಮ್ಮ ಮನಸ್ಸು ತೂಕಡಿಸುವುದಕ್ಕೆ ಅವಕಾಶವೇ ಇಲ್ಲ. ಮೊದಲಿನಿಂದ ಕಡೆಯವರೆಗೂ ಮನಸ್ಸಿನ ಹುರಿ ಸಡಿಲಬೀಳದೆ ಒಂದೇ ಬಿಕ್ಕಟ್ಟಿನಲ್ಲಿರುತ್ತದೆ. ಅಷ್ಟು ಸ್ವಾರಸ್ಯವನ್ನು ತುಂಬಿದ್ದಾರೆ ಬರಿಯ (Prosaic) ವಚನಮಾತ್ರಕ್ಕೆ ತಕ್ಕ ಒಣವಿಷಯವೆನಿಸಿದ ಯುದ್ಧರಂಗ ಪ್ರಕರಣದಲ್ಲಿ. ವಾಚಕರು ಶಬ್ದ ಶಬ್ದದ ಮೇಲೂ ಅಲ್ಲ, ಅಕ್ಷರ ಅಕ್ಷರದ ಮೇಲೂ ಗಮನವಿರಿಸಬೇಕು. ಭೋಜನಸುಖಿ ಕವಳವನ್ನು ಉಂಡುಂಡೆಯಾಗಿ ನುಂಗುವುದಿಲ್ಲ, ಅಗಳಗಳನ್ನೂ ಅಗಿದು ಸವಿಯುತ್ತಾನೆ. ಒಗ್ಗರಣೆಗೆ ಹಾಕಿದ ಕಡಲೆಯ ಬೇಳೆ ಉದ್ದಿನ ಬೇಳೆಯ ಕಾಳುಗಳನ್ನು ಅಗಿದು ಆ ಘಮಲನ್ನನುಭವಿಸುತ್ತಾನೆ. ಮಹಾಕಾವ್ಯವ್ಯಾಸಂಗಿ ಹಾಗೆ ಮಾತುಮಾತಿನಲ್ಲಿಯೂ ಭಾವಪುಷ್ಟಿಯನ್ನು ಸಂಪಾದಿಸುತ್ತಾನೆ.

ವಾಲ್ಮೀಕಿಗಳ ಸಮುದ್ರವರ್ಣನೆಯನ್ನು ನೋಡಿರಿ (ಸರ್ಗ ೪) :

**ಸಾಗರಂ ಚಾಂಬರಪ್ರಖ್ಯಮಂಬರಂ ಸಾಗರೋಪಮಮ್ ।**
**ಸಾಗರಂ ಚಾಂಬರಂ ಚೇತಿ ನಿರ್ವಿಶೇಷಮದೃಶ್ಯತ ॥**

– ಸರ್ಗ ೪, ಶ್ಲೋ. ೧೨೦, ಪು. ೩೬

ಸಮುದ್ರತೀರವರ್ಣನೆಯಲ್ಲಿ ನಾನಾ ತರುಲತೆಗಳ ಹೆಸರುಗಳು, ನಾನಾ ಜೀವಜಂತುಗಳ ಹೆಸರುಗಳು ಪಟ್ಟಿಪಟ್ಟಿಯಾಗಿ ಬರುತ್ತವೆ. ಸಮುದ್ರದ ಹೆಸರು

ಸಾಲ್ಕಾರುಸಲ ಬರುತ್ತದೆ : ಅರ್ಣವಃ, ಮಹಾರ್ಣವಃ, ವರುಣಾಲಯಂ, ಮಕರಾಲಯಂ, ಸಲಿಲಾಶಯಂ, ಜಲರಾಶಯಃ–ಹೀಗೆ ಪುನರುಕ್ತಿಗಳು ಬಂಡಿ ಬಂಡಿಯಾಗಿ ಬರುತ್ತವೆ. ಇದರ ಮರ್ಮವೇನು? ನನಗೆ ಎರಡು ಉತ್ತರಗಳು ತೋರುತ್ತವೆ :

## ವಾಗ್ಧೋರಣೆ, ಆವರಣಕಲ್ಪನೆ

(೧) ಕವಿಯು ಪುಸ್ತಕದಿಂದ ಓದುತ್ತಿಲ್ಲ; ಸ್ವತಂತ್ರಮನಸ್ಸಿನಿಂದ ಹಾಡುತ್ತಿದ್ದಾನೆ. ಆಗಾಗ ಸಭೆಯ ಕಡೆ ನೋಡುತ್ತಾನೆ. ಅವರು ಕುತೂಹಲದಿಂದ ಕೇಳುತ್ತಿದ್ದಾರೆ. ಅವನಲ್ಲಿ ಕಾವೇರುತ್ತದೆ. ಆ ಆವೇಶದಲ್ಲಿ ಅವನ ಬಾಯಿಗೆ ಶಬ್ದಭಂಡಾರ ನುಗ್ಗಿಕೊಂಡು ಒದಗಿಬರುತ್ತದೆ. ಆತನು ವಿದ್ವಾಂಸ. ಆದ್ದರಿಂದ ಅವನಿಗೆ ವಾಕ್ಯರಚನೆ ಒಂದು ಕಷ್ಟವಲ್ಲ. ಸನ್ನಿವೇಶಕ್ಕೆ ತಕ್ಕ ಶಬ್ದ ಸಂಚಯ ತಾನಾಗಿ ಮುನ್ನುಗ್ಗಿಕೊಂಡು ಬರುತ್ತದೆ. ಅವನು ವಾಕ್ಸಂಪತ್ತನ್ನು ಧೋರಣೆಯಿಂದ ಧಾರಾಳವಾಗಿ ಎಸೆದಾಡುತ್ತಾನೆ. ಹೀಗೆ ಪದವರ್ಷಣ, ಪುನರುಕ್ತಿ, ಮಹಾಪ್ರವಾಹ.

(೨) ಇದಕ್ಕೆ ಸಾರ್ಥಕ್ಯವುಂಟು. ರಾಶೀಕರಣದಿಂದ ವಾತಾವರಣವುಂಟಾಗುತ್ತದೆ. ಈ ''ವಾತಾವರಣ'' ಎಂಬ ರೂಪಕಪದವನ್ನು ನಾವು ಇಂಗ್ಲಿಷಿನಿಂದ ತಗದುಕೊಂಡಿದ್ದೇವೆ. ''ಅಟ್ಮೊಸ್ಫಿಯರ್'' (Atmosphere) ಎಂದರೆ ನಮ್ಮ ದೇಹವನ್ನು ಹತ್ತು ದಿಕ್ಕುಗಳಿಂದಲೂ ಸುತ್ತುಗಟ್ಟಿರುವ ಹವೆ ಅಥವಾ ವಾಯುಮಂಡಲ. ನಮ್ಮ ಮನಸ್ಸಿಗೂ ಇಂಥ ಸಂದರ್ಭ ಪರಿಸರವುಂಟು. ಅದೇ ಕಾವ್ಯದ ವಾತಾವರಣ. ಈ ವಾತಾವರಣವನ್ನು ಕಟ್ಟುವುದು ಮಹಾಕವಿಯ ಮೊದಲ ಕೆಲಸ. ವಾತಾವರಣದಿಂದ ಭಾವೋದ್ದೀಪನ ; ಅದರಿಂದ ರಸೋತ್ಪತ್ತಿ

ಕಾದ ಲೋಹದ ಮೇಲೆ ಸುತ್ತಿಗೆಯ ಪೆಟ್ಟು ಬಿದ್ದು, ಪೆಟ್ಟಿನ ಮೇಲೆ ಪೆಟ್ಟು, ಇನ್ನೂ ಪೆಟ್ಟು, ಮತ್ತೂ ಪೆಟ್ಟು ಬಿದ್ದದ್ದಾದರ ಆಗ ಆ ಲೋಹದ ತುಂಡು ನಾವು ಬಯಸಿದ ರೂಪವನ್ನು ತಾಳುತ್ತದೆ. ಇಂಥ ಸಂಸ್ಕಾರವು ಮನಸ್ಸಿಗೂ ಅವಶ್ಯವಾಗುತ್ತದೆ. ಆದದ್ದರಿಂದ ಕವಿ ಯಾವುದೋ ಒಂದು ಶಬ್ದವನ್ನು ಅಥವಾ ಒಂದು ಭಾವವನ್ನು ಪುನಃ ಪುನಃ, ಪದೇ ಪದೇ ನಮ್ಮ ಕಿವಿಗಳಲ್ಲಿ ತುಂಬುತ್ತಾನೆ. ''ರಾಮಸ್ಸತ್ಯಪರಾಕ್ರಮಃ'' ''ರಾಮೋ ರಾಜೀವ–ಲೋಚನಃ'', ''ರಾಮಶ್ಶಸ್ತ್ರಭೃತಾಂ ವರಃ'', ''ಕೌಸಲ್ಯಾನಂದವರ್ಧನಃ'',

"ಧರ್ಮಜ್ಞೋ ಧರ್ಮವತ್ಸಲಃ"–ಎಷ್ಟುಸಾರಿ, ಇದು, ಎಷ್ಟು ನೂರುಸಾರಿ! ಅದರ ಉದ್ದೇಶವು ವಾತಾವರಣಕಲ್ಪನೆ. ಒಂದೇ ಭಾವ ಮನಸ್ಸಿನ ಮೇಲೆ ಬಿದ್ದೂ ಬಿದ್ದೂ ಪರಿಣಾಮಮಾಡಬೇಕು. ಒಂದೇ ಒಂದು ಮರದಿಂದ ಕಾಡಾಗುವುದಿಲ್ಲ. ಕಾಡಿನ ಕಲ್ಪನೆ ನಮ್ಮ ಮನಸ್ಸಿನಲ್ಲಿ ಬರಬೇಕಾದರೆ ಹತ್ತಾರು ಜಾತಿಯ ಮರಗಳ ಹೆಸರುಗಳು, ಆ ಮರಗಳ ಹತ್ತಾರು ಗುಂಪುಗಳು ನಮ್ಮ ಮನಸ್ಸಿನಲ್ಲಿ ಕಲ್ಪಿತವಾಗಬೇಕು. ಭಗವನ್ನಾಮ ಸಂಕೀರ್ತನೆ ಭಜನೆಗಳ ಮರ್ಮವೂ ಇದೇ–ಮನಸ್ಸಿನ ಮೃದೂಕರಣ, ಮನಸ್ಸಿನ ರೂಪಾಂತರ ಗ್ರಹಣಸಿದ್ಧತೆ.

## ಪೌನಃಪುನ್ಯದ ಔಚಿತ್ಯ

ಕಾವ್ಯವು ಸೂತ್ರಗ್ರಂಥವಲ್ಲ. ಶಾಸ್ತ್ರವ್ಯಾಸಂಗಿಗೆ ಒಂದು ವಿಷಯವನ್ನು ಒಂದುಸಾರಿ ಹೇಳಿದರೆ ಸಾಕು ಅದೂ ಅಡಕವಾದ ಸಣ್ಣ ಮಾತಿನಲ್ಲಿ ಹೇಳಿದರೆ ಸಾಕು. ಅದೇ ಸೂತ್ರ. ಕಾವ್ಯಶ್ರೋತನಿಗೆ–ಕಿವಿಯಿಂದ ಕೇಳುವವನಿಗೆ ಹಾಗಾಗದು. ಅವನಿಗೆ ಅನ್ಯಮನಸ್ಕತೆ, ಅನವಧಾನ ಮೊದಲಾದ ಎಷ್ಟೋ ಅಪಾಯಗಳಿರುವುದರಿಂದ ಅವನ ವಿಷಯದಲ್ಲಿ ಪೌನಃಪುನ್ಯವು ಎಷ್ಟೋ ಸಂದರ್ಭಗಳಲ್ಲಿ ದೋಷವಾಗದೆ ಗುಣವೇ ಆದೀತು.

ಆದರೆ ಪೌನಃಪುನ್ಯದಿಂದ ಬೇಸರವಾಗದೆ? ಅದು ಅತಿಯಾಗದೆ? ಅದಕ್ಕೆ ಒಂದು ಮಿತಿ ಇರಬೇಡವೆ?

ಹೌದು. ಅದು ಅತಿಯಾದರೆ ಬೇಸರವುಂಟುಮಾಡೀತು. ಇಲ್ಲಿ ಎರಡು ಸಂಗತಿ :

(೧) ಸನ್ನಿವೇಶದ ಸ್ವಾರಸ್ಯವು ಮಾತಿನ ಅತಿಯನ್ನು ದೃಷ್ಟಿಗೆ ತಾರದೆ ಮರೆಯಿಸೀತು.

(೨) ಔಚಿತ್ಯವಿವೇಕವು ಕವಿಗಿರುವ ಕರ್ತವ್ಯಗಳಲ್ಲಿ ಮುಖ್ಯವಾದದ್ದು. ಎಲ್ಲಿ ಅತಿಯಾಯಿತು, ಎಲ್ಲಿ ತಕ್ಕಷ್ಟು ಆಗಿದೆ–ಎಂಬುದನ್ನು ಗೊತ್ತುಮಾಡುವುದರಲ್ಲಿರುತ್ತದೆ ಅವನ ವಿವೇಕ.

ನನ್ನಂಥ ಅಲ್ಪನ ಅನುಭವಕ್ಕೆ ವಾಚಕರು ಬೆಲೆ ಕೊಡುವುದಾದರೆ ಇದು ನಿಜಃ–ನಾನು ವಾಲ್ಮೀಕಿರಾಮಾಯಣವನ್ನು ಆಗಾಗ ನೋಡುವುದುಂಟು. ನಾಲ್ಕು ಸಾರಿ ಐದು ಸಾರಿ ಓದಿದ ಭಾಗವನ್ನೇ ಆರನೆಯ ಸಾರಿ ಏಳನೆಯ ಸಾರಿ

ಓದುತ್ತೇನೆ. ಒಂದೊಂದುಸಾರಿಯೂ ನನಗೆ ಸ್ವಾರಸ್ಯ ಕಾಣುತ್ತದೆಯೇ ಅಲ್ಲದೆ,–ಹೊಸ ಹೊಸ ಸ್ವಾರಸ್ಯ ಕಾಣುತ್ತದೆಯೇ ಅಲ್ಲದೆ,–ಬೇಸರವೆಷ್ಟು ಮಾತ್ರವೂ ತೋರಿಲ್ಲ.

ಇನ್ನೊಂದು ವಿಚಾರಕ್ಕೆ ಹೋಗುವ ಮುನ್ನ ವಾಲ್ಮೀಕಿಗಳು ಸ್ವಾರಸ್ಯ ಹುದುಗಿಸಿರುವುದರ ರೀತಿಯ ಉದಾಹರಣೆಯೊಂದನ್ನು ನೋಡೋಣ. ಚಲುವೆಯ ಅಗಲವಾದ ಹಣೆಯ ನಡುವೆ ಇಟ್ಟ ಕುಂಕುಮದ ಬೊಟ್ಟಿನಂತೆ, ಅವಳ ಭಾರೀ ಕರಿತುರುಬಿನ ನಡುವಣ ವಿಳುಸುತ್ತಿನ ಮಲ್ಲಿಗೆಯ ಒಂದು ಹೂವಿನಂತೆ, ಮಹಾಸಮುದ್ರದ ತೆರೆಗಳ ಚಲನವಲನಗಳ ವರ್ಣನೆಯ ಮಧ್ಯೆ ಈ ಸೌಂದರ್ಯ ಕಂಗೊಳಿಸುತ್ತದೆ.

**ಚಂಡನಕ್ರಗ್ರಹಂ ಘೋರಂ ಕ್ಷಪಾದೌ ದಿವಸಕ್ಷಯೇ ।**
**ಹಸಂತಮಿವ ಫೇನೌಘೈರ್ನೃತ್ಯಂತಮಿವ ಚೋರ್ಮಿಭಿಃ ।**
**ಚಂದ್ರೋದಯಸಮುದ್ಧೂತಂ ಪ್ರತಿಚಂದ್ರ ಸಮಾಕುಲಮ್॥**
**ಪಿನಷ್ಟೀವ ತರಂಗಾಗ್ರೈರರ್ಣವಃ ಫೇನಚಂದನಮ್ ।**
**ತದಾದಾಯ ಕರೈರಿಂದುರ್ಲಿಂಪತೀವ ದಿಗಂಗನಾಃ ॥**

—ಸರ್ಗ ೪, ಶ್ಲೋ. ೧೧೩–೧೧೫, ಪು. ೩೫

ವಾಲ್ಮೀಕಿಗಳು ಋಷಿಗಳು, ಹಾಗೆಯೇ ಸರಸಿಗಳು. ಮಡಿಯುಟ್ಟಿದ್ದಾಗಲೂ ಅವರು ಅರಳುತ್ತಿರುವ ಹೂ ಮೊಗ್ಗನ್ನು ನೋಡದೆನ್ನರು.

ಇಲ್ಲಿ ಹೀಗೆ ಸೊಗಯಿಸುವ ರೂಪಕವು ಕ್ಷುದ್ರಕವಿಯ ಪ್ರಯೋಗದಲ್ಲಿ ಕೃತಕಸೃಷ್ಟಿ (Conceit) ಆದೀತು. ಶ್ರೀರಾಮನ ಕೈಯಲ್ಲಿ ಕೋದಂಡ ವಾದವನ್ನು ಸಣ್ಣಪುಟ್ಟನು ಕೈಗೆ ತಗದುಕೊಂಡಾಗ ಅದು ಸೂಟ್ಟುಕಟ್ಟಿಗೆಯಾಗಬಹುದು. ಯಾವುದಕ್ಕೂ ಅಧಿಕಾರಯೋಗ್ಯತೆ ಇರಬೇಕಲ್ಲವೆ?

ಈಗ ಕಥೆಗೆ ತಿರುಗೋಣ.

### ಶ್ರೀರಾಮನ ಚಿಂತಾಕುಲತೆ

ಶ್ರೀರಾಮಚಂದ್ರನು ಸಮುದ್ರವನ್ನು ನೋಡಿ ಚಿಂತಾಕ್ರಾಂತನಾದ. ಸೀತೆಯನ್ನು ರಾವಣನು ಸೆರೆಯಲ್ಲಿಟ್ಟಿದ್ದುದನ್ನು ಹನುಮಂತನು ಪತ್ತೆಮಾಡಿದ್ದೇನೋ

ಆಯಿತು. ರಾಮನ ಗುರುತನ್ನು ಆಕೆಗೂ ಆಕೆಯ ಗುರುತನ್ನು ಆತನಿಗೂ ತಂದುಕೊಟ್ಟಿದ್ದ ಅಷ್ಟರಿಂದ ಏನು ಸಾಧಿಸಿದಹಾಗಾಯಿತು? ಮಹಾಸಮುದ್ರವಿದೆಯಲ್ಲ ಅಡ್ಡಲಾಗಿ! ಅದನ್ನು ದಾಟುವವರಾರು? ಇದು ಅಸಾಧ್ಯವಾದ ಸಾಹಸ.

**ಸಾಗರಂ ತು ಸಮಾಸಾದ್ಯ ಭೂಯೋ ನಷ್ಟಂ ಮನೋ ಮಮ ॥**

– ಸರ್ಗ ೧, ಶ್ಲೋ. ೧೭, ಪು. ೪

ಇಂಥ ನಿರಾಸೆಯ ಸಮಯದಲ್ಲಿ ರಾಮನು ಆಂಜನೇಯನನ್ನು ನೆನೆಸಿಕೊಂಡ. ಆಗ ಸುಗ್ರೀವಾಂಜನೇಯರು ಧೈರ್ಯಹೇಳಿ ಭರವಸೆಕೊಟ್ಟ ಬಳಿಕ ಮುಂದಿನ ಕಾರ್ಯ.

ವಾನರಸೈನ್ಯ ಸಮುದ್ರತೀರಕ್ಕೆ ಬಂದಿದೆ. ತೆರೆಗಳ ಹೊಡೆತವನ್ನೂ ಮೊರೆತವನ್ನೂ ನೋಡಿ ಕಪಿಗಳು ವಿಸ್ಮಯಗೊಂಡಿದ್ದಾರೆ. ಶ್ರೀರಾಮನಿಗಾದರೋ ಕ್ಷಣೇ ಕ್ಷಣೇ ತವಕ ಹೆಚ್ಚುತ್ತಿದೆ.

**ವಾಹಿ ವಾತ ಯತಃ ಕಾಂತಾ ತಾಂ ಸ್ಪೃಷ್ಟ್ವಾ ಮಾಮಪಿ ಸ್ಪೃಶ ॥**

– ಸರ್ಗ ೫, ಶ್ಲೋ. ೬, ಪು. ೩೯

''ಎಲೆ ಗಾಳಿಯೇ, ನನ್ನ ಪ್ರಾಣಕಾಂತೆಯೆಲ್ಲಿದ್ದಾಳೋ ಅಲ್ಲಿಂದ ಬೀಸಿಕೊಂಡು ಬಾ; ಆಕೆಯುನ್ನು ಸೋಕಿ ಬಂದು ನನ್ನನ್ನು ಸೋಕು.''

ಹೀಗಿತ್ತು ರಾಮಚಂದ್ರನ ಕಾತರ. ತಾನೂ ತನ್ನ ಸೈನ್ಯವೂ ಲಂಕೆಗೆ ಹೋಗಲು ದಾರಿ ಬಿಟ್ಟುಕೊಡೆಂದು ಸಮುದ್ರನನ್ನೇ ತಾನು ಬೇಡತಕ್ಕದ್ದೆಂದು ನಿಶ್ಚಯಿಸಿ, ಸಮುದ್ರತೀರದಲ್ಲಿ ದರ್ಭೆಯ ಹಾಸುಗೆಯಮೇಲೆ ಮಲಗಿ ಶಪಥ ಮಾಡಿದನು :

**ಅದ್ಯ ಮೇ ಮರಣಂ ವಾಥ ತರಣಂ ಸಾಗರಸ್ಯ ವಾ ॥**

– ಸರ್ಗ ೨೧, ಶ್ಲೋ. ೮, ಪು. ೧೪೪.

## ಸೇತುನಿರ್ಮಾಣ

ಮೂರು ರಾತ್ರಿ ಕಳೆಯಿತು. ಉತ್ತರ ಬರಲಿಲ್ಲ. ಆಗ ರೋಷಾವೇಶದಲ್ಲಿ–

**ಸಮುದ್ರಂ ಶೋಷಯಿಷ್ಯಾಮಿ ಪದ್ಭ್ಯಾಂ ಯಾಂತು ಪ್ಲವಂಗಮಾಃ ॥**

– ಸ. ೨೧, ಶ್ಲೋ – ೨೨, ಪು. ೧೪೭

''ಈ ಸಮುದ್ರವನ್ನು ಬತ್ತಿಸಿಬಿಡುತ್ತೇನೆ. ಕಪಿಗಳು ಲಂಕೆಗೆ ಕಾಲಿನಿಂದ ನಡೆದು ಹೋಗಲಿ''–ಎಂದು ಗರ್ಜಿಸಿ ಸಮುದ್ರದ ಮೇಲೆ ಬಾಣವನ್ನು ಪ್ರಯೋಗಿಸಿದ.

ಸಮುದ್ರ ಅದುರಿತು; ಅದರಲ್ಲಿಯ ಮಕರ ಮೀನ ನಾಗಾದಿಗಳು ತಲ್ಲಣಿಸಿ ಕಂಗೆಟ್ಟವು. ಸಮುದ್ರರಾಜನು ಶ್ರೀರಾಮನ ಮುಂದೆ ಬಂದು ನಿಂತು, ''ದೇವಾ, ಸೈರಿಸಬೇಕು. ನನ್ನನ್ನು ನೀನು ಶೋಷಣಮಾಡಿದರೆ ನನ್ನಲ್ಲಿರುವ ಅಸಂಖ್ಯಾಂತಗಳಾದ ಜಲಜಂತುಗಳ ಗತಿಯೇನು? ಲಂಕೆಗೆ ಹೋಗಲು ಸೇತುವೆಯನ್ನು ಕಟ್ಟು. ನಲನೆಂಬ ವಾನರನು ಹಾಕಿದ ಕಲ್ಲು ನೀರಿನಲ್ಲಿ ಮುಳುಗಲಾರದೆಂದು ಅವನಿಗೆ ವರವಿದೆ. ಅವನ ಮೂಲಕ ಸೇತುವೆಯ ನಿರ್ಮಾಣವಾಗಲಿ'' ಎಂದು ಉಪಾಯಸೂಚನೆ ಮಾಡಿದ. ಆ ಮೇರೆಗೆ ಸೇತುವೆಯ ನಿರ್ಮಾಣವಾಯಿತು. ಕಪಿಸೈನ್ಯವು ಬೆಟ್ಟಗಳನ್ನೂ ಬಂಡೆಗಳನ್ನೂ ಮರಗಳನ್ನೂ ಕೊಂಬೆರೆಂಬೆಗಳನ್ನೂ ತಂದು ತಂದು ತುಂಬಿದವು. ಸೇತುವೆ ಸಿದ್ಧವಾಯಿತು.

## ವಿಭೀಷಣ ಶರಣಾಗತಿ

ಈ ಸಮಾಚಾರವನ್ನು ರಾವಣಾಸುರನು ತನ್ನ ಚಾರರಿಂದ ತಿಳಿದು ಕೊಂಡು ತನ್ನ ಸಿದ್ಧತೆಯನ್ನು ಆಲೋಚಿಸಿದ. ಅಲ್ಲಿಯೂ ''ಡೆಮಾಕ್ರಸಿ'' ತಾನೆ? ಮಂತ್ರಿ ಮಿತ್ರರುಗಳ ಸಭೆ; ಭಾಷಣಗಳು, ಚರ್ಚೆಗಳು, ಅಭಿಪ್ರಾಯ ವಿನಿಮಯ; ಆಮೇಲೆ ನಿರ್ಣಯ. ರಾವಣನ ಮೂಗಿಗೆ ನೇರವಾಗಿ ಮಾತನಾಡಿದವರು ಬಹುಮಂದಿ. ಅಡ್ಡಮಾತಾಡಿದವರಲ್ಲಿ ಮುಖ್ಯನು ವಿಭೀಷಣ–ರಾವಣನ ತಮ್ಮ.

**ಪ್ರದೀಯತಾಂ ದಾಶರಥಾಯ ಮೈಥಿಲೀ ||**

ಇದೊಂದೇ ಅವನ ಪಲ್ಲವಿ. ಇದನ್ನು ಹತ್ತಾರು ಕಾರಣಗಳೊಡನೆ ಹತ್ತಾರು ರೀತಿಗಳಲ್ಲಿ ಹೇಳಿದ. ರಾವಣನು ಒಪ್ಪಿಯಾನೆ? ಒಪ್ಪಿಕೊಂಡಿದ್ದಿದ್ದರೆ ಅವನು ರಾವಣನಾಗುತ್ತಿದ್ದನೆ? ಅವನಿಗೆ ತನ್ನ ಮಗ ಇಂದ್ರಜಿತ್ತು ಮೊದಲಾದ ಕ್ರೋಧ ಪರವಶರಾದವರು ಹೇಳಿದ್ದೇ ದೊಡ್ಡದಾಯಿತು. ಆಗ ವಿಭೀಷಣನು ತನಗೆ ಇನ್ನು ಮುಂದೆ ಲಂಕೆಯಲ್ಲಿ ಸ್ಥಳವಿರಲಾರದೆಂದು ಕಂಡುಕೊಂಡು ರಾವಣ ಸಹವಾಸವನ್ನು ಪರಿತ್ಯಜಿಸಿ ರಾಮನಲ್ಲಿ ಮರೆಹೊಕ್ಕ.

ಇಲ್ಲಿಯೂ–ಶ್ರೀರಾಮನ ಶಿಬಿರದಲ್ಲಿಯೂ ಒಂದಷ್ಟು ''ಡೆಮಾಕ್ರಸಿ''. ಸುಗ್ರೀವ ಮೊದಲಾದವರ ಸಂಗಡ ''ಕುಂಸಲ್ಲು'' (Council) ನಡೆಯಿತು. ಕಡೆಗೆ ಶ್ರೀರಾಮನು ವಿಭೀಷಣನನ್ನು ಅಂಗೀಕರಿಸತಕ್ಕದ್ದೆಂದು ನಿಶ್ಚಯಿಸಿದನು.

ಇಲ್ಲಿ ಎರಡು ಪ್ರಶ್ನೆಗಳು ಏಳುತ್ತವೆ :

(೧) ವಿಭೀಷಣನ ಮನಸ್ಸಿನಲ್ಲಿದ್ದದ್ದೇನು?

೧. ಪಾಪವಿರೋಧವೆ?

೨. ಪ್ರಾಣಭೀತಿಯೆ ?

೩. ಧರ್ಮಸಹಾಯಬುದ್ಧಿಯೆ?

(೨) ಶ್ರೀರಾಮನ ಮುಖ್ಯ ತಾತ್ಪರ್ಯವೇನು?

೧. ಉಪಾಯ ಚಿಂತನೆಯೇ?

೨. ಆತ್ಮರಕ್ಷಣೆಯೇ ?

## ವಿಭೀಷಣನ ಇಂಗಿತ

ವಿಭೀಷಣನು ಪಾಪವಿರೋಧಿಯೆಂದು ಅವನಾಡಿದ ಮಾತುಗಳಿಂದ ವ್ಯಕ್ತಪಡುತ್ತದೆ. ಅವನಿಗೆ ದುಷ್ಟಾಲೋಚನೆಯ ವಿಷಯದಲ್ಲಿ ಅಸಮ್ಮತಿ ಮಾತ್ರವಲ್ಲದೆ ಕುಲಗೌರವದ ಮೇಲೆಯೂ ದೃಷ್ಟಿಯಿತ್ತು. ಆದ್ದರಿಂದ ಅವನು ರಾವಣನನ್ನು ತ್ಯಜಿಸುವುದು ಅನಿವಾರ್ಯವಾಯಿತು.

ಹಾಗೆ ಮಾಡಿದರೂ ರಾಮನಲ್ಲಿ ಮರೆಹೋಗಬೇಕಾದ್ದದ್ದೇಕೆ? ತಟಸ್ಥನಾಗಿರಬಹುದಾಗಿತ್ತಲ್ಲ? ಮತ್ತೆಲ್ಲಾದರೂ ಹೋಗಬಹುದಾಗಿತ್ತಲ್ಲ?

ರಾವಣನು ಛಲವಂತ. ತನ್ನನ್ನು ಅನುಮೋದಿಸದೆ ವಿರೋಧಿಸಿದವರನ್ನು ಅವನು ಸುಮ್ಮನೆ ಬಿಡುತ್ತಿರಲಿಲ್ಲ. ಸೇಡು ತೀರಿಸಿಯೇ ತೀರಿಸಿಕೊಳ್ಳುತ್ತಿದ್ದ. ಈ ಭಯವಿದ್ದದ್ದರಿಂದ ವಿಭೀಷಣನಿಗೆ ಬಲವತ್ತರವಾದ ಆಶ್ರಯ ಬೇಕೆನಿಸಿತು. ಅದಕ್ಕಾಗಿ ರಾಮನಲ್ಲಿ ಬಂದ.

ಶಾಪಕ್ಕೆ ಪ್ರತೀಕಾರಮಾಡಿಸುವುದೂ ವಿಭೀಷಣನ ಉದ್ದೇಶದಲ್ಲಿದ್ದಿರಬೇಕು. ಅಧರ್ಮ–ಅಸಹನೆಯ ಜೊತೆಗೆ ಧರ್ಮಸಂರಕ್ಷಣೆ ಸೇರಿರಬೇಕು. ರಾವಣನ ಬಲವನ್ನು ತಗ್ಗಿಸುವುದರ ಜೊತೆಗೆ ರಾವಣಪ್ರತ್ಯರ್ಥಿಯನ್ನು ಬಲಪಡಿಸಬೇಕು. ಇದು ವಿಭೀಷಣನ ಮನೋಗತ.

## ಶ್ರೀರಾಮನ ಇಂಗಿತ

ಇನ್ನು ಶ್ರೀರಾಮನ ಇಂಗಿತವೇನಿದ್ದಿರಬಹುದು ?

(೧) **ಆರ್ತತ್ರಾಣ :** ಮರೆಹೊಕ್ಕು ಬಂದವರನ್ನು ಕಾಪಾಡುವುದು. ಇದು ಕ್ಷತ್ರಿಯನಿಗೆ ಆರ್ಷೇಯವಾಗಿ ಬಂದಿರುವ ಧರ್ಮ. ಅದನ್ನು ಅನುಸರಿಸಿಯೇ ಶ್ರೀರಾಮನು ''ಯದಿ ವಾ ರಾವಣಃ ಸ್ವಯಂ'' ಎಂದು ಹೇಳಿದ್ದು. ಯಾರು ''ನೀನೇ ನನಗೆ ಗತಿ, ಬೇರೆ ದಿಕ್ಕಿಲ್ಲ'' ಎಂದು ಶರಣಾಗತನಾಗಿ ಬರುತ್ತಾನೋ ಅವನನ್ನು ಕಾಪಾಡುವುದು ಧರ್ಮ. ಇದು ವಿಭೀಷಣನೊಬ್ಬನಿಗೆ ಮಾತ್ರವೇ ಅನ್ವಯಿಸಿದ್ದೇನೂ ಅಲ್ಲ. ಯಾರು ಹಾಗೆ ಬಂದಿದ್ದರೂ ಅವರಿಗೆ ಅಭಯಕೊಡತಕ್ಕವನು ರಾಮ.

(೨) **ಲೌಕಿಕೋಪಾಯ:** ಆರ್ತತ್ರಾಣಧರ್ಮದ ಜೊತೆಗೆ ಲೌಕಿಕೋಪಾಯ ಸೇರಿರಲಿಲ್ಲವೆ? ಸುಗ್ರೀವಸಖ್ಯದಲ್ಲಿ ಸ್ವಕಾರ್ಯೋಪಾಯ ಚಿಂತನೆ ಸೇರಿದ್ದದ್ದು ಸ್ಪಷ್ಟವಾಗಿದೆ. ತಾನು ಯುದ್ಧಕ್ಕೆ ಹೊರಟವನು. ಶತ್ರುಪಕ್ಷದ ಕಡೆಯಿಂದ ತನ್ನ ಕಡೆಗೆ ಯಾರಾದರೂ ಬಂದರೆ ಅದರಿಂದ ಶತ್ರುಬಲ ಕೊಂಚ ಕಡಿಮೆಯಾಗುವುದೂ ತನ್ನ ಬಲ ಹೆಚ್ಚುವುದೂ ಸ್ಪಷ್ಟವಾಗಿಯೇ ಇದೆ. ಶ್ರೀರಾಮನ ಮನಸ್ಸಿನಲ್ಲಿ ಇಂಥ ಯೋಚನೆ ಇದ್ದಿದ್ದರೆ ಅದನ್ನು ಯಾರೂ ಅಸಂಗತವೆನ್ನಲಾರರು. ಈ ಕಾರಣದಿಂದಲೂ ಶ್ರೀರಾಮನು ವಿಭೀಷಣನಿಗೆ ಆಶ್ರಯಕೊಟ್ಟಿರಬಹುದು.

## ''ವಿಭೀಷಣನೀತಿ''

ಈಗಿಗೆ ಅರವತ್ತೈದು ವರ್ಷಗಳ ಹಿಂದೆ–ಬಹುಶಃ ೧೯೦೫–೬ ರಲ್ಲಿ – ವಿಭೀಷಣನ ಹೆಸರು ಇಂಡಿಯದ ರಾಜಕೀಯದಲ್ಲಿ ಒಂದು ಪಕ್ಷಕ್ಕೆ ಅವಹೇಳನದ ಮಾತಾಗಿತ್ತು. ಆ ಕಾಲದಲ್ಲಿ ಎರಡು ಪಕ್ಷಗಳಿದ್ದವಷ್ಟೆ? ಒಂದು ಅತಿವಾದಿಗಳ (Extremists) ಪಕ್ಷ. ಇನ್ನೊಂದು ಮಿತವಾದಿಗಳ (Moderates) ಪಕ್ಷ. ಎರಡು ಪಕ್ಷಗಳ ಉದ್ದೇಶವೂ ದೇಶಸ್ವಾತಂತ್ರ್ಯವೇ ಆಗಿದ್ದರೂ, ಕಾರ್ಯೋಪಾಯಗಳ ವಿಷಯದಲ್ಲಿ ಭೇದವಿತ್ತು.

ಅತಿವಾದ ಪಕ್ಷದವರು ಜನರಲ್ಲಿ ಚಳವಳಿ ಹೂಡಿ ದೊಂಬಿ ಧಾಳಿಯನ್ನೆಬ್ಬಿಸಿ ಬ್ರಿಟಿಷರು ಇಲ್ಲಿರುವುದು ಅಸಾಧ್ಯವಾಗುವಂತೆ ಮಾಡಬೇಕೆಂದರು. ಈ ಪಕ್ಷದ ಮುಖ್ಯ ನಾಯಕರು ಬಾಲಗಂಗಾಧರ ತಿಲಕರು.

ಮಿತವಾದಿಗಳು ಈ ದಾರಿ ಸರಿಯಲ್ಲವೆಂದರು. ದೊಂಬಿ ಧಾಳಿಗಳನ್ನು ಬ್ರಿಟಿಷರು ಆಗಗೊಡರು. ಅವರು ಪ್ರತಿಬಂಧಕ ಒಡ್ಡುವುದು ಮಾತ್ರವಲ್ಲದೆ

ದೊಂಬಿಯನ್ನು ನೆವಮಾಡಿಕೊಂಡು ಜನರನ್ನು ತುಳಿದುಹಾಕಿಯಾರು. ದೇಶದ ಸ್ಥಿತಿ ಇನ್ನೂ ಕೆಟ್ಟೀತು. ನಿಷ್ಠುರ ಮಾರ್ಗಕ್ಕೆ ಹೋಗದೆ, ಈಗ ಬ್ರಿಟಿಷರು ಒದಗಿಸಿರುವ ಅಲ್ಪಸ್ವಲ್ಪದ ಅವಕಾಶಗಳನ್ನು ಉಪಯೋಗಪಡಿಸಿಕೊಂಡು ಇನ್ನೂ ಹೊಸ ಹೊಸ ಅವಕಾಶಗಳನ್ನು ಸಂಪಾದಿಸಿಕೊಂಡು ನಮ್ಮ ಶಕ್ತಿ ಸಂಪತ್ತುಗಳನ್ನು ಬೆಳಸಿಕೊಳ್ಳೋಣ. ನಮ್ಮ ಸ್ವಂತದ ಬಲ ಬೆಳೆದಂತೆ ಬ್ರಿಟಿಷರಿಗೆ ಇಲ್ಲಿ ನಿಲ್ಲಲು ಕಾರಣವಿಲ್ಲದೆ ಹೋಗುತ್ತದೆ. ಅವರ ಹಿಡಿತ ಸಡಿಲು ತ್ತದೆ. ನಾವು ಅವರನ್ನು ಹೊರಟುಹೋಗಿರೆಂದು ಹೇಳುವುದಕ್ಕಿಂತ, ಅವರು ತಾವಾಗಿಯೇ ಹೊರಟುಹೋಗುವಂತೆ ಮಾಡುವುದು ಮೇಲು. ಸಾಮೋಪಾಯವೇ ನಮಗೆ ಉಪಾಯ. ಇದು ಮಿತವಾದಿಗಳ ಪಕ್ಷ. ಈ ಪಕ್ಷದ ನಾಯಕರಲ್ಲೊಬ್ಬರು ಗೋಪಾಲಕೃಷ್ಣ ಗೋಖಲೆಯವರು.

ಗೋಖಲೆಯವರು ಹೀಗೆ ಸ್ನೇಹಮಾರ್ಗವನ್ನೂ ಸೌಮ್ಯನೀತಿಯನ್ನೂ ಎತ್ತಿಹಿಡಿದಿದ್ದ ಕಾರಣದಿಂದ ಅವರನ್ನು ಪ್ರತಿಪಕ್ಷದವರು ವಿಭೀಷಣಪಂಥಿಯೆಂದು ಕರೆದರು. ವಿಭೀಷಣನು ಸ್ವಪಕ್ಷವನ್ನು ತೊರೆದು ಶತ್ರುಪಕ್ಷದಲ್ಲಿ ಸೇರಿಕೊಂಡವನಷ್ಟೆ? ಗೋಖಲೆಯವರು ಅದೇ ರೀತಿ ಸ್ವದೇಶಾಭಿಮಾನವನ್ನು ತೊರೆದು ಸ್ವದೇಶವಿರೋಧಿಗಳಲ್ಲಿ ಸ್ನೇಹದಿಂದ ವರ್ತಿಸಬೇಕೆನ್ನುತ್ತಾರೆ. ಅದು ವಿಭೀಷಣನೀತಿ. ಹೀಗೆ ಅತಿವಾದಿ ಪಕ್ಷದವರ ಅವಹೇಳನೆ. ಈ ಅಪವಾದ ಕರ್ತರಲ್ಲಿ ತಿಲಕರು ಮುಖ್ಯರೆಂದು ಕೆಲವರು ಹೇಳಿದ್ದನ್ನು ನಾನು ಕೇಳಿದ್ದೇನೆ. ರಾಜಕೀಯದಲ್ಲಿ ಪಕ್ಷ–ಪ್ರತಿಪಕ್ಷಗಳ ಉದ್ವೇಗಾವೇಶಗಳು ಎಂಥವರ ಬಾಯಿಂದಲೂ ಆಡಬಾರದ್ದನ್ನು ಆಡಿಸುವುದುಂಟು. ಅಂಥ ಮಾತನ್ನು ಹೆಚ್ಚು ಗಮನಿಸತಕ್ಕದ್ದಲ್ಲ. ಗೋಖಲೆಯವರ ನೀತಿ ವಿಭೀಷಣ ನೀತಿಯೆಂಬುದಾದರೆ, ಗೋಖಲೆಯವರು ತ್ಯಜಿಸಿದ ಪಕ್ಷ ರಾವಣಪಕ್ಷವೆನ್ನಬೇಕಾದೀತು.

ಅತಿವಾದಿಗಳು ಮಾಡಿದ ಅವಹೇಳನದಿಂದ ಗೋಖಲೆಯವರಿಗೂ ಅವರ ಸ್ನೇಹಿತರಿಗೂ ಕೊಂಚ ಬೇಸರವಾದದ್ದರ ಹೊರತು ಬೇರೆ ಯಾವ ಲಾಭವೂ ಯಾರಿಗೂ ಆಗಲಿಲ್ಲ.

ಅದು ಹಾಗಿರಲಿ

ಈಗ ವಿಭೀಷಣನೀತಿಯ ಯುಕ್ತಾಯುಕ್ತಗಳನ್ನು ಸ್ವತಂತ್ರವಾಗಿ ವಿಚಾರಮಾಡೋಣ–ಸಾಧ್ಯವಿರುವ ಮಟ್ಟಿಗೆ.

## ವಿಭೀಷಣ–ಭೀಷ್ಮ

ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ವಿಭೀಷಣನ ಪಕ್ಕದಲ್ಲಿ ನಿಂತು ಹೋಲಿಸಿಕೊಳ್ಳಲರ್ಹನಾದ ಇನ್ನೊಬ್ಬ ಮಹಾಪುರುಷನು ಭೀಷ್ಮಾಚಾರ್ಯ.

ವಿಭೀಷಣ, ಭೀಷ್ಮ–ಶಬ್ದಾರ್ಥದಲ್ಲಿ ಎರಡೂ ಒಂದೇ. ಇಬ್ಬರನ್ನೂ ಭಗವದ್ಭಕ್ತ ಶ್ರೇಣಿಯಲ್ಲಿ ಎಣಿಸಿದ್ದಾರೆ. ಇಬ್ಬರ ಎದುರಿಗೂ ಒಂದೇ ಬಗೆಯ ಧರ್ಮಸೂಕ್ಷ್ಮದ ಪ್ರಶ್ನೆ ಎದ್ದುಕಾಣಿಸಿತು. ಆದರೆ ಅವರು ಕೊಟ್ಟ ಉತ್ತರಗಳು ಬೇರೆ ಬೇರೆ ಬಗೆಯಾಯಿತು. ಪ್ರಶ್ನೆ ಹೀಗೆ :

(೧) ಸ್ವಾಮಿಯು ದುಷ್ಟನಾದರೆ ಸಾತ್ತ್ವಿಕ ಸೇವಕನು ಏನು ಮಾಡಬೇಕಾದದ್ದು?
(೨) ರಾಜ ದುಷ್ಟನಾದರೆ ಸಾತ್ತ್ವಿಕ ಮಂತ್ರಿ ಏನು ಮಾಡಬೇಕಾದದ್ದು?
(೩) ಪತಿ ದುಷ್ಟನಾದರೆ ಸಾತ್ತ್ವಿಕ ಪತ್ನಿ ಏನು ಮಾಡಬೇಕಾದದ್ದು?
(೪) ಪತ್ನಿ ದುಷ್ಟಳಾದರೆ ಪತಿ ಏನು ಮಾಡಬೇಕಾದದ್ದು?

ಮೂರು ದಾರಿಗಳು ಸಾಧ್ಯ ತೋರುತ್ತವೆ :

(೧) ಪರಿತ್ಯಜಿಸುವುದು ; ತ್ಯಜಿಸಿ ತಟಸ್ಥನಾಗಿರುವುದು.

(೨) ತ್ಯಜಿಸಿ ವಿರೋಧಿಸುವುದು.

(೩) ತ್ಯಜಿಸದೆ ಸಹಿಸಿಕೊಂಡು ನಿಯತಕರ್ತವ್ಯವನ್ನು ಮಾಡುವುದು.

ವಿಭೀಷಣನು ಎರಡನೆಯ ದಾರಿ ಹಿಡಿದ; ಭೀಷ್ಮನದು ಮೂರನೆಯ ದಾರಿ.

ಶಾಶ್ವತ ವಿಶ್ವಧರ್ಮನಿಷ್ಠೆಯೇ ದೊಡ್ಡದೆನಿಸಿತು ವಿಭೀಷಣನಿಗೆ.

ಸ್ವಾಮಿ–ಭೃತ್ಯ ಋಣವೇ ದೊಡ್ಡದಾಯಿತು ಭೀಷ್ಮದ್ರೋಣರಿಗೆ.

ಈ ಧರ್ಮತಾರತಮ್ಯ ನಿರ್ಣಯ ಅವರವರ ಅಂತಃಪ್ರೇರಣೆಯಿಂದ. ಮನುಗಳು ''ಹೃದಯೇನಾಭ್ಯನುಜ್ಞಾತಃ'' ಎಂದು ಹೇಳಿದ್ದಾರೆ. ಧರ್ಮ ಸೂಕ್ಷ್ಮ ಪ್ರಶ್ನೆಗಳಿಗೆ ಬಾಹ್ಯನಿರ್ಣಯವಿಲ್ಲ ಅಂತರಂಗನಿರ್ಣಯವೇ ನಿರ್ಣಯ; ''ಮನೋಜಯಂ ತು ಮಾಂಡವ್ಯ'' ಎಂದಹಾಗೆ. ಆಳವಾಗಿ ನೋಡಿದರೆ ಸ್ವಾಮಿ–ಭೃತ್ಯ ಋಣಸೂತ್ರವೂ ಶಾಶ್ವತ ವಿಶ್ವಧರ್ಮದ ಒಂದು ಅಂಶವೇ ಅಲ್ಲವೆ? ವಿಭೀಷಣ–ಭೀಷ್ಮರಿಬ್ಬರೂ ಒಂದೇ ವಿಶ್ವಧರ್ಮವನ್ನು ಬೇರೆಬೇರೆ ಕೋನಗಳಿಂದ ನೋಡಿದರು. ವಿಭೀಷಣನು ಸಮಗ್ರದ ದೃಷ್ಟಿಯಿಂದ; ಭೀಷ್ಮರು ವ್ಯಕ್ತಿದೃಷ್ಟಿಯಿಂದ.

## ಪ್ರಪತ್ತಿಯ ಘೋಷಣೆ

ವಿಭೀಷಣಪ್ರಕರಣವನ್ನು ಭಕ್ತಿಪಂಥಿಗಳು ಶರಣಾಗತಿಶಾಸ್ತ್ರವೆಂದು ಕರೆಯುವುದುಂಟು. ಭಗವಂತನು ಅಪಾರವಾದ ಶರಣಾಗತವಾತ್ಸಲ್ಯಕ್ಕೆ ವಿಭೀಷಣಚರಿತ್ರೆ ನಿದರ್ಶನವೆಂದು ಅವರ ಭಾವನೆ.

**ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।**
**ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ॥**

**ಆನಯೈನಂ ಹರಿಶ್ರೇಷ್ಠ ದತ್ತಮಸ್ಯಾಭಯಂ ಮಯಾ ।**
**ವಿಭೀಷಣೋ ವಾ ಸುಗ್ರೀವ ಯದಿ ವಾ ರಾವಣಃ ಸ್ವಯಮ್ ॥**

ಸರ್ಗ ೧೮, ಶ್ಲೋ. ೩೩–೩೪, ಪ್ರ. ೧೨೬

ಇದು ಪ್ರಪತ್ತಿಮತದ ಘೋಷಣೆ.

ಇದರಮೇಲೂ ಒಂದು ಕೋಟಯುಂಟು. ಪ್ರಹ್ಲಾದ ಕಥೆ, ಗಜೇಂದ್ರ ಕಥೆ ಮೊದಲಾದ ಪುರಾಣಪ್ರಕರಣಗಳೂ ಶರಣಾಗತಿಯ ಮಹಿಮೆಯನ್ನು ಹೇಳುತ್ತವಲ್ಲವೆ? ಮೇಲಾಗಿ, ಯುದ್ಧ ಪ್ರವೃತ್ತನಾಗಿರುವಾತನು ಶತ್ರುಪಕ್ಷ ದಿಂದೊಬ್ಬನು ತನ್ನ ಪಕ್ಷಕ್ಕೆ ಬಂದರೆ ಅವನನ್ನು ಸ್ವಾಗತಿಸಿ ಪ್ರೋತ್ಸಾಹಿಸುವುದು ಸ್ವಕಾರ್ಯಸಾಧನೆಯ ನೀತಿಯೇ ಅಲ್ಲವೆ? ಅದರಲ್ಲಿ ಶರಣಾಗತರಕ್ಷಣೆಯೆಂಬ ವಿಶೇಷವೆಲ್ಲಿದೆ? ಎಲ್ಲ ಲೌಕಿಕರೂ ಅನುಸರಿಸುವ ಕಾರ್ಯೋಪಾಯವೇ ಅದಲ್ಲವೆ?

ಹೀಗೆ ಅಭಿಪ್ರಾಯವುಳ್ಳವರು ಶರಣಾಗತಿಯಲ್ಲಿ ನಂಬಿಕೆಯಿಲ್ಲದವ ರೆಂದಾಗಲಿ, ಶ್ರೀರಾಮನ ಶರಣಾಗತರಕ್ಷಣೆಯಲ್ಲಿ ನಂಬಿಕೆಯಿಲ್ಲದವರೆಂದಾಗಲಿ, ಅನುಮಾನಿಸಲಾಗದು. ಅವರೂ ಪೂರ್ಣವಾಗಿ ರಾಮಭಕ್ತರೇ. ಆದರೆ ವಿಭೀಷಣ ಪ್ರಕರಣವು ಸುಗ್ರೀವಪ್ರಕರಣದಂತೆ, ಶ್ರೀರಾಮನ ನಯಕುಶಲತೆಯನ್ನೂ ಉಪಾಯಜ್ಞತೆಯನ್ನೂ ತೋರಿಸುತ್ತದೆ ಎಂಬುದು ಅವರ ಮನೋಗತ.

ಧರ್ಮಸೂಕ್ಷ್ಮವಿಚಾರದಲ್ಲಿ ನಿರ್ಣಯ ಹೇಗೋ ಕಾವ್ಯಸಂದರ್ಭದ ಆಶಯನಿರ್ಧಾರವೂ ಹಾಗೆ ಬಹುಮಟ್ಟಿಗೆ ನಮ್ಮ ನಮ್ಮ ಅಂತರಂಗಪ್ರವೃತ್ತಿ ಗಳನ್ನವಲಂಬಿಸಿಕೊಂಡಿರುತ್ತದೆ.

## ಕಪಿಲೋಕ

ರಾಮರಾವಣ ಪ್ರಪಂಚದೊಳಕ್ಕೆ ಕವಿಯು ಕಪಿಗಳನ್ನೇಕೆ ತಂದಿದ್ದಾನೆ? ಈ ಪ್ರಶ್ನೆಯನ್ನು ಸುಂದರಕಾಂಡದ ಮುನ್ನುಡಿಯಲ್ಲೆತ್ತಿದ್ದೇನೆ. ಆ ಪ್ರಶ್ನೆಗೆ ಸಮಾಧಾನವು ಯುದ್ಧಕಾಂಡದ ಸೇತುಬಂಧಪ್ರಕರಣದಲ್ಲಿ ದೊರೆಯುತ್ತದೆ. ಇಲ್ಲಿ ಸೇತುವೆಯಾಗಬೇಕಾಗಿದ್ದದ್ದು ಕಾಲುವೆಗಲ್ಲ, ಹೊಳೆಗಲ್ಲ, ನದಿಗಲ್ಲ; ಮಹಾಸಮುದ್ರಕ್ಕೆ. ಈ ಸೇತುವೆಗೆ ಬೇಕಾಗಿದ್ದ ಸಾಮಾಗ್ರಿ ಒಡೆದ ಕಲ್ಲಲ್ಲ, ಇಟ್ಟಿಗೆಯಲ್ಲ, ಮರಳೂ ಮಣ್ಣೂ ಅಲ್ಲ. ಇಲ್ಲಿ ಬೆಟ್ಟ ಗುಡ್ಡಗಳನ್ನೂ ಬಂಡೆ ಗುಂಡುಗಳನ್ನೂ ರಾಶಿರಾಶಿಯಾಗಿ ತಂದು ತುಂಬಬೇಕು. ಮತ್ತು ಬೇಗ ಬೇಗ ತುಂಬಬೇಕು. ಅದು ಮನುಷ್ಯರಿಂದ ಆಗುವ ಕೆಲಸವೆ? ಸಾವಿರಮಂದಿ ಮನುಷ್ಯರನ್ನು ತಂದಿಟ್ಟರೆ ಎಷ್ಟು ಕಾಲ ಬೇಕಾಗುತ್ತಿತ್ತು? ಆ ಮನುಷ್ಯರಿಗೆ ಅನ್ನವಸತಿಗಳ ಏರ್ಪಾಟು ಮಾಡುವವರಾರು? ಶಾಖಾಮೃಗಗಳಿಗಾದರೆ ಆ ಭೋಜನವಸತಿಗಳ ಚಿಂತೆಯಿಲ್ಲ. ಅವು ತಮ್ಮ ಜೀವನವನ್ನು ತಾವೇ ಹೇಗೆ ಹೇಗೋ ನಡೆಸಿಕೊಂಡು, ಸೇತುಕಾರ್ಯಕ್ಕೆ ಸಿದ್ಧವಾಗಿ ಬರುತ್ತವೆ. ಬೆಟ್ಟ ಬೆಟ್ಟಗಳನ್ನೇ ಹೊತ್ತುತಂದು ಸಮುದ್ರದಲ್ಲಿ ಉರುಳಿಸಿಬಿಡುತ್ತವೆ; ಎಲೆ ಕೊಂಬೆ ಕಲ್ಲು ಮರಳುಗಳನ್ನು ಹಾಕಿ ಗಟ್ಟಿಮಾಡುತ್ತವೆ. ಈ ಅವಶ್ಯಕತೆಯನ್ನು ದೃಷ್ಟಿಯಲ್ಲಿರಿಸಿಕೊಂಡು ವಾಲ್ಮೀಕಿಗಳು ಕಪಿಲೋಕವನ್ನು ಬರಮಾಡಿ ಕೊಂಡಿದ್ದಾರೆ.

## ವಿನೋದಾವಕಾಶ

ಒಂದಿಷ್ಟು ವಿನೋದಾವಕಾಶಕಲ್ಪನೆಯೂ ವಾಲ್ಮೀಕಿಗಳ ಉದ್ದೇಶದಲ್ಲಿದ್ದಿರ ಬೇಕು. ಅವರು ಋಷಿಗಳಾದರೂ ಹುಬ್ಬುಗಂಟಿಕ್ಕಿ ಗುರುಗುರ್‍ರೆಂದು ಗದ್ದರಿಸು ತ್ತಿದ್ದವರಲ್ಲ ; ಮನಸಾರ ನಗುತ್ತಿದ್ದವರು. ಕಾವ್ಯದ ಗಂಭೀರ ಸಂದರ್ಭಗಳು ಮನಸ್ಸಿಗೆ ಉಂಟುಮಾಡಿದ ಒತ್ತಡವನ್ನು ಇಳಿಸಿ ಹಗುರಪಡಿಸುವುದಕ್ಕಾಗಿ ಅಲ್ಲಲ್ಲಿ ನಗುವಿನ ಪೊಟ್ಟಲಗಳನ್ನಿರಿಸಿದ್ದಾರೆ. ಸುಂದರಕಾಂಡದ ಮಧುವನ ಪ್ರಕರಣವನ್ನು ಜ್ಞಾಪಕಕ್ಕೆ ತಂದುಕೊಳ್ಳಬಹುದು. ಕಪಿಗಳ ನಿರ್ಭೀತತೆ, ಕಪಿಗಳ ಮನಸ್ಥಿತಿ, ಕಪಿಗಳ ಚಪಲಚೇಷ್ಟೆ–ಇವೆಲ್ಲ ಅಲ್ಲಲ್ಲಿ ಕಾಣಬರುತ್ತವೆ. ಪ್ರಕೃತ, ಯುದ್ಧಕಾಂಡದಲ್ಲಿ ದಂಡಯಾತ್ರೆಯ ಪ್ರಕರಣವನ್ನು ನೋಡೋಣ.

**ಆಪ್ಲವಂತಃ ಪ್ಲವಂತಶ್ಚ ಗರ್ಜಂತಶ್ಚ ಪ್ರವಂಗಮಾಃ ।**
**ಭಕ್ಷಯಂತಸ್ಸುಗಂಧೀನಿ ಮಧೂನಿ ಚ ಫಲಾನಿ ಚ ॥**

**ಉದ್ವಹಂತೋ ಮಹಾವೃಕ್ಷಾನ್ ಮಂಜರೀಪುಂಜಧಾರಿಣಃ ।**
**ಅನ್ಯೋನ್ಯಂ ಸಹಸಾ ದೃಪ್ತಾ ನಿರ್ವಹಂತಿ ಕ್ಷಿಪಂತಿ ಚ ॥**

–ಸರ್ಗ ೪, ಶ್ಲೋ. ೨೭–೨೮, ಪು. ೨೧

ವಾಚಕರು ಮನಸ್ಸಿಗೆ ಬಿಡುವುಮಾಡಿಕೊಂಡು ಯಾವ ಅವಸರವನ್ನೂ ಸ್ಮರಿಸಿಕೊಳ್ಳದೆ ಸಾವಧಾನವಾಗಿ ಓದಬೇಕು. ಆಗ ಆಗುತ್ತದೆ ಈ ಕಪಿಲೋಕಾನುಭವದ ಸಂತೋಷ. ಪುನಃಪುನಃ ನಾನು ಹೇಳುತ್ತೇನೆ: ರಾಮಾಯಣ ವನ್ನೋದುವುದು ನ್ಯೂಸ್‌ಪೇಪರನ್ನು ಓದುವಹಾಗಲ್ಲ. ಇದು ಸಾವಕಾಶವಾಗಿ ಮಾಡಬೇಕಾದ ಕೆಲಸ.

## ಕುಂಭಕರ್ಣನ ವ್ಯಕ್ತಿ ವೈಶಿಷ್ಟ್ಯ

ಕುಂಭಕರ್ಣವ್ಯಕ್ತಿಯ ಕಲ್ಪನೆಯೂ ಇದೇ ಜಾತಿಗೆ ಸೇರಿದ್ದು–ವಿನೋದಾವಕಾಶದ್ದು. ವಾಲ್ಮೀಕಿಗಳು ಹತ್ತಾರು ಮಂದಿ ರಾಕ್ಷಸರನ್ನು ನಮ್ಮ ಮುಂದೆ ತಂದಿದ್ದಾರೆ. ಅವರೆಲ್ಲರೂ ಒಬ್ಬೊಬ್ಬರು ಒಂದೊಂದು ಅಂಶ ದಲ್ಲಿ ವಿಕಾರಿಗಳು–ಅತಿಕಾಯ, ಮಹಾಪಾರ್ಶ್ವ, ಮಹೋದರ, ವಜ್ರದಂಷ್ಟ್ರ, ಹೀಗೆ–ಮನುಷ್ಯರ ಕಣ್ಣಿಗೆ ವಿಕಾರಗಳು. ಇಂಥ ವಕ್ರವಿಕಾರಗಳು ಕುಂಬಕರ್ಣ ನಲ್ಲಿ ಅತಿಶಯಿತವಾಗಿವೆ. ಈ ಅತಿಶಯಿತತೆ ಕಥಾದೃಷ್ಟಿಯಿಂದ ಅವಶ್ಯವೇನೂ ಅಲ್ಲ. ಕುಂಭಕರ್ಣನು ಇತರ ರಾಕ್ಷಸರಂತೆ ಇದ್ದಿದ್ದರೂ ಪರಾಕ್ರಮ ಸಾಹಸಗಳಿಂದ ಯುದ್ಧಮಾಡಬಹುದಾಗಿತ್ತು. ಅವನನ್ನು ಕೊಂಚ ಹಾಸ್ಯಕ್ಕೆ ಆಸ್ಪದ ಕೊಡುವಂತೆಯೂ ಮಾಡಿದ್ದಾರೆ ವಾಲ್ಮೀಕಿಗಳು. ಇದರ ಉದ್ದೇಶವೇನು? ಕೊಂಚ ನಗು ತರಬೇಕೆಂಬುದು. ಕುಂಭಕರ್ಣನ ಆಕಾರ, ಅವನ ಆಹಾರ, ಅವನ ಬಾಯಾರಿಕೆ, ಅವನ ನಿದ್ರೆ–ಎಲ್ಲವೂ ನಮಗೆ ಹಾಸ್ಯಾಸ್ಪದಗಳು.

ಅವನನ್ನು ನಿದ್ರೆಯಿಂದ ಎಬ್ಬಿಸುವುದಕ್ಕೆ :

**ಮೃದಂಗಪಣವಾನ್ ಭೇರೀಃ ಶಂಖಕುಂಭಗಣಾಂಸ್ತದಾ ।**
**ದಶರಾಕ್ಷಸಸಾಹಸ್ರಾ ಯುಗಪತ್ ಪರ್ಯವಾದಯನ್ ॥**

**ಅಶ್ವಾನುಷ್ಟ್ರಾನ್ ಖರಾನ್ನಾಗಾನ್ ಜಘ್ನುರ್ದಂಡಕಶಾಂಕುಶೈಃ ।**
**ಭೇರಿಶಂಖಮೃದಂಗಾಂಶ್ಚ ಸರ್ವಪ್ರಾಣೈರವಾದಯನ್ ॥**

— ಸರ್ಗ ೬೦, ಶ್ಲೋ. ೪೨–೪೬, ಪೃ. ೪೭೨

**ವಾರಣಾನಾಂ ಸಹಸ್ರಂ ತು ಶರೀರೇಽಸ್ಯ ಪ್ರಧಾವಿತಮ್ ॥**

....................................

**ನಿದ್ರಾಕ್ಷಯಾತ್ ಕ್ಷುದ್ಭಯಪೀಡಿತಶ್ಚ**
**ವಿಜೃಂಭಮಾಣಃ ಸಹಸೋತ್ಪಪಾತ ॥**

— ಸರ್ಗ. ೬೦, ಶ್ಲೋ. ೫೫–೫೬, ಪೃ. ೪೭೪

ಹೀಗೆ ಉದಾಹರಿಸಹೊರಟರೆ ಸ್ವಾರಸ್ಯಾಂಶಗಳು ಮಿತಿಯಿಲ್ಲದಷ್ಟು ದೊರೆಯುತ್ತವೆ. ಮಕ್ಕಳು ಕಥೆ ಕೇಳುವ ಕುತೂಹಲದಿಂದ ಕೂಡುವಂತೆ ನಾವು ಕಥೆಗೆ ಸಿದ್ಧರಾಗಬೇಕು.

ಕುಂಭಕರ್ಣಕಥೆ ಮಹಾಭಾರತದ ಬಕಾಸುರಕಥೆಯಂತೆ, ಕುತುಕಕಾರಿಯಾದದ್ದು.

ಈಗಿಗೆ ಅರುವತ್ತೈದು–ಎಪ್ಪತ್ತು ವರ್ಷಗಳ ಹಿಂದೆ ಮೋಕ್ಷಗುಂಡಂ ಲಕ್ಷ್ಮೀಪತಯ್ಯನವರು ''ಚಿತ್ರ ಕಥಾಲಹರಿ'' ಎಂಬ ಸಣ್ಣ ಗ್ರಂಥವನ್ನು ಸಂಸ್ಕೃತದಲ್ಲಿ ಬರೆದಿದ್ದರು. ಅವರು ದಿವಾನ್ ವಿಶ್ವೇಶ್ವರಯ್ಯನವರ ಸಮೀಪದ ಜ್ಞಾತಿ. ಒಳ್ಳೆಯ ವಿದ್ವಾಂಸರು, ಸ್ಕೂಲ್‌ಮೇಷ್ಟರಾಗಿದ್ದವರು. ಅವರ ಕಥೆಗಳಲ್ಲೊಂದು ಕುಂಭಕರ್ಣನನ್ನು ಕುರಿತದ್ದು. ನಾನು ಚಿಕ್ಕಂದಿನಲ್ಲಿ ಅದನ್ನು ಓದಿದ ಜ್ಞಾಪಕವಿದೆ.

ಕುಂಭಕರ್ಣನನ್ನು ನಿದ್ರೆಯಿಂದ ಎಬ್ಬಿಸುವುದಕ್ಕೆಂದು ಏನೇನೋ ಉಪಾಯ ಮಾಡಿ ನೋಡಿದರು. ಯಾವುದೂ ಕೆಲಸಕ್ಕೆ ಬರಲಿಲ್ಲ. ಮುಳ್ಳು ಕೋಲುಗಳನ್ನೂ ಕಂಪು ಕಡ್ಡಿಗಳನ್ನೂ ಮೂಗಿನಲ್ಲಿ ತೂರಿಸಿದರು ಪ್ರಯೋಜನಕ್ಕೆ ಬರಲಿಲ್ಲ. ಕಡೆಗೆ ರಾವಣಾಸುರನು ನೂರು ಮಂದಿ ತಮಟೆ ಯವರನ್ನು ಕರಯಿಸಿ ತಪಟೆ ಹೊಡಯುವಂತೆ ಆಜ್ಞಾಪಿಸಿದ. ಅವರು ಕುಂಭಕರ್ಣನ ಎದೆಯಮೇಲೆ ನಿಂತು ತಪಟೆ ಬಾರಿಸುತ್ತಿದ್ದರು. ಆ ರಾಕ್ಷಸನು ನಿದ್ರೆಯ ಭರದಲ್ಲಿ ಒಂದು ಸಾರಿ ಉಸಿರನ್ನೆಳೆದುಕೊಂಡ. ಆ ಉಸಿರು ನೂರು ಮಂದಿ ತಮಟೆಯವರನ್ನೂ ತಮಟೆಗಳೊಡನೆ ಸುಂಟರಗಾಳಿಯಂತೆ ಬಂದು ಒಳಕ್ಕೆ ಸೆಳೆದುಕೊಂಡಿತು. ಆಮೇಲೆ

ಎಷ್ಟು ಹೊತ್ತಾದರೂ ಬರಲೇ ಇಲ್ಲ. ಆಗ ರಾವಣಾಸುರನು ಲಂಕಾಪಟ್ಟಣದಲ್ಲಿದ್ದ ಕ್ಷೌರಿಕರನ್ನು ಕರೆಯಿಸಿ ಮೂಗಿನೊಳಗಿನ ಕಾಡುಗಳನ್ನು ಕಡಿಯುವಂತೆ ಆಜ್ಞಮಾಡಿದ. ಆಗ ಮತ್ತೊಂದು ಸಾರಿ ಸುಂಟರಗಾಳಿ ಬೀಸಿ ಹಜಾಮರೂ ಕತ್ತಿಗಳೂ ಎಲ್ಲರೂ ಒಳಕ್ಕೆ ಎಳೆದುಕೊಳ್ಳಲ್ಪಟ್ಟರು. ಒಳಕ್ಕೆ ಹೋದ ತಮಟೆಯವರೂ ಹಜಾಮರೂ ಕಾಡುಗಳಲ್ಲಿ ದಿಕ್ಕೆಟ್ಟು ಓಡುತ್ತಿದ್ದರಂತೆ.

ಆಗ ಕುಂಭಕರ್ಣನಿಗೆ ಸೀನು ಬಂತು. ಅವನು ಎದ್ದು ಒಂದು ಸೀನು ಸೀದಿದ ; ಮೂಗು ಸೀದಿಕೊಂಡ. ಆ ಸಿಂಬಳದ ಮಹಾಪ್ರವಾಹದಲ್ಲಿ ತಪಟೆಯವರೂ ಹಜಾಮರೂ ಎಲ್ಲ ಹೊರಕ್ಕೆ ಬಂದರಂತೆ !

**ಚಿತ್ರಕಥಾ ಸಂಕಲಿತಂ ಮಾಣವಕಾಮೋದಯುತಮ್ ॥**

ಹೀಗೆ ಇನ್ನೆಷ್ಟೋ ಮಂದಿ ಕಲ್ಪನಾಚತುರರು ಕುಂಭಕರ್ಣನನ್ನು ಚಿತ್ರಿಸಿದ್ದಾರೆ.

## ಕುಂಭಕರ್ಣನ ಧರ್ಮಪ್ರಜ್ಞೆ

ಆಕಾರಚರ್ಯೆಗಳಲ್ಲಿ ಕುಂಭಕರ್ಣನು ಇಷ್ಟು ವಿಪರೀತನಾಗಿದ್ದರೂ ವಿವೇಕ ಶಕ್ತಿಯಲ್ಲಿ ಅವನು ಸರ್ವಶೂನ್ಯನಾಗಿರಲಿಲ್ಲ. ಅವನು ಮೊದಲು ಯುದ್ಧೋತ್ಸಾಹಿಯಾಗಿರಲಿಲ್ಲ. ರಾವಣನು ವಿಚಾರಮಾಡದೆ ದುಡುಕಿದನೆಂದೇ ಅವನ ಅಭಿಪ್ರಾಯ. "ಅಹಿತಂ ಚ ಹಿತಾಕಾರಂ" – ಉಪದೇಶಿಸುವವರ ಮಾತನ್ನು ರಾವಣನು ಗೌರವಿಸಿದನೆಂದು ಆಕ್ಷೇಪಣೆ ಮಾಡಿದ. ಆದರೆ ರಾವಣನು ಒಪ್ಪಿಯಾನೆ? ಇಲ್ಲ, ಸರ್ವಥಾ ಇಲ್ಲ ಮತ್ತಷ್ಟು ರೋಷಾವಿಷ್ಟನಾದ. ಅದರ ಅರ್ಥವನ್ನು ಕುಂಭಕರ್ಣನು ಗ್ರಹಿಸಿದ. ಋಷಿಶಾಪ ಸುಳ್ಳಾಗದು ; ಪಾಪದ ಫಲವನ್ನು ತಪ್ಪಿಸಿಕೊಳ್ಳಲಾಗದು ; ಅಣ್ಣನು ಆಪತ್ತಿಗೆ ಸಿಕ್ಕಿದ್ದಾನೆ. ತನ್ನಿಂದಾದಷ್ಟು ಸಹಾಯವನ್ನು ತಾನು ಮಾಡಿದರಾಯಿತು – ಎಂದು ಚಿಂತಿಸಿ ಗತ್ಯಂತರ ಕಾಣದ ಹತಾಶತೆಯಿಂದ (desperate) ಯುದ್ಧಕ್ಕೆ ನಿಂತ. ತಕ್ಕದ್ದು ಆಯಿತು. ಅದರಲ್ಲೊಂದು ಸುಯೋಗ : ರಾಮಬಾಣದಿಂದ ಸಾವು ; ಸಣ್ಣದ್ದರಿಂದ ಅಲ್ಲ.

**ತಸ್ಮಿನ್ ಹತೇ ಬ್ರಾಹ್ಮಣದೇವಶತ್ರೌ**
**ಮಹಾಬಲೇ ಸಂಯತಿ ಕುಂಭಕರ್ಣೇ ।**
**ಚಚಾಲ ಭೂರ್ಭೂಮಿಧರಾಶ್ಚ ಸರ್ವೇ**
**ಹರ್ಷಾಚ್ಚ ದೇವಾಸ್ತುಮುಲಂ ಪ್ರಣೇದುಃ ॥**

— ಸರ್ಗ ೬೭, ಶ್ಲೋ. ೧೮೬, ಪು. ೫೪೯

ಶ್ರೀ ಟಿ. ಸಿ. ಅನಂತರಾಮಯ್ಯನವರು ರಾಮಾಯಣ ಪ್ರಕಟನೆಯ ಸಂಕಲ್ಪವನ್ನು ಮನಸ್ಸಿನಲ್ಲಿ ಮಾಡಿಕೊಂಡಾಗ ಅದು ಸಾಹಸವೆಂದು ಬಹು ಮಂದಿಗೆ ತೋರಿತು. ಭಗವಂತನ ಕೃಪೆಯಿಂದ ಒಳ್ಳೊಳ್ಳೆಯ ಸ್ನೇಹಿತರು ಅವರೊಡನೆ ಏಕೀಭವಿಸಿ ಸಹಕಾರ ಕೊಡುವವರಾದರು. ಶ್ರೀಸೀತಾರಾಮರ ಕಟಾಕ್ಷದಿಂದ ಆ ಕೆಲಸ ಈಗ ಮುಪ್ಪಾಗಪಾಲು ನಡೆದಂತಾಯಿತು. ಈಗ ಮಿಕ್ಕಿರುವುದು ಯುದ್ಧಕಾಂಡದ ದ್ವಿತೀಯಭಾಗ ಮತ್ತು ಉತ್ತರಕಾಂಡ. ಈಶ್ವರಾನುಗ್ರಹದಿಂದ ಈ ಭಾಗವೂ ತೃಪ್ತಿಕರವಾಗಿ ಮುಗಿದು ಪೂರ್ಣಗ್ರಂಥ ಮಹಾಜನರ ಕೈಸೇರಲಾದೀತೆಂದು ನಾನು ನಿರೀಕ್ಷಿಸಿಕೊಂಡಿದ್ದೇನೆ.

ವಿದ್ವಾನ್ ಎನ್. ರಂಗನಾಥಶರ್ಮಾರವರ ಪಾಂಡಿತ್ಯವೂ ರಸಸೂಕ್ಷ್ಮಜ್ಞತೆಯೂ ಭಾಷಾಂತರ ಲೇಖನದಲ್ಲಿ ಪ್ರತಿಬಿಂಬಿತವಾಗಿವೆ. ಅವರು ಈ ಕಾರ್ಯದಲ್ಲಿ ಎಂಥ ಶ್ರದ್ಧೆ, ಎಂಥ ಉತ್ಸಾಹವನ್ನು ತೋರಿಸಿದ್ದಾರೆ ಮತ್ತು ಎಷ್ಟು ಶ್ರಮಪಟ್ಟಿದ್ದಾರೆ, ನಾನಾ ವ್ಯಾಖ್ಯಾನಗಳನ್ನು ಪರಿಶೀಲಿಸಿ ಅರ್ಥವಿವೇಚನೆ ಮಾಡಿದ್ದಾರೆ – ಎಂಬುದನ್ನು ನಾನು ಅಷ್ಟಿಷ್ಟು ಕಂಡು ಕೊಂಡಿದ್ದೇನೆ. ಅವರು ಮಾಡಿರುವ ಸಾಹಿತ್ಯಸೇವೆಗಾಗಿ ಕನ್ನಡ ಮಹಾಜನರು ಕೃತಜ್ಞರಾಗಿರುವರೆಂದು ನಂಬಿದ್ದೇನೆ.

ಗ್ರಂಥ ಪ್ರಕಟನ ಸಮಿತಿಗೂ, ಭಾಷಾಂತರಕರ್ತರಿಗೂ ವಾಚಕ ಮಹಾಶಯರಿಗೂ ಶ್ರೀಸೀತಾರಾಮರ ಕರುಣೆ ಸರ್ವದಾ ದೊರೆತಿರಲಿ ಎಂದು ಹಾರೈಸುತ್ತೇನೆ. ಇತಿ ಶಿವಂ.

ಇಂತು ಸಜ್ಜನವಿಧೇಯ,

**ಡಿ. ವಿ. ಜಿ.**

# ಅನುಕ್ರಮಣಿಕೆ


| ಸರ್ಗ | ವಿಷಯ | | ಪುಟ |
|---|---|---|---|
| ೧ | ಹನೂಮತ್ಪ್ರಶಂಸನಮ್ (ಶ್ರೀರಾಮನು ಹನುಮಂತನನ್ನು ಹೊಗಳಿ ಆಲಿಂಗಿಸಿಕೊಳ್ಳುವುದು) | ... | ೧ |
| ೨ | ರಾಮಪ್ರೋತ್ಸಾಹನಮ್ (ಸುಗ್ರೀವನು ಶ್ರೀರಾಮನಿಗೆ ಸಮಾಧಾನ ಹೇಳಿ ಪ್ರೋತ್ಸಾಹಿಸುವುದು) | ... | ೫ |
| ೩ | ಲಂಕಾದುರ್ಗಾದಿಕಥನಮ್ (ಹನುಮಂತನು ಶ್ರೀರಾಮನಿಗೆ ಲಂಕೆಯ ರಕ್ಷಣಾವ್ಯವಸ್ಥೆಯನ್ನು ತಿಳಿಸುವುದು) | ... | ೧೦ |
| ೪ | ರಾಮಾಭಿಷೇಣನಮ್ (ಶ್ರೀರಾಮನು ವಾನರಸೇನೆಯೊಡನೆ ದಂಡಯಾತ್ರೆಗೆ ಹೊರಡುವುದು) | ... | ೧೬ |
| ೫ | ರಾಮವಿಪ್ರಲಂಭಃ (ಶ್ರೀರಾಮನು ಸೀತೆಯನ್ನು ಸ್ಮರಿಸಿಕೊಂಡು ದುಃಖಿಸುವುದು) | ... | ೩೮ |
| ೬ | ರಾವಣಮಂತ್ರಣಮ್ (ಲಂಕೆಯಲ್ಲಿ ರಾವಣನ ಮಂತ್ರಾಲೋಚನೆ) | ... | ೪೩ |
| ೭ | ಸಚಿವೋಕ್ತಿಃ (ಮಂತ್ರಿಗಳು ರಾವಣನನ್ನು ಯುದ್ಧಕ್ಕೆ ಪ್ರೋತ್ಸಾಹಿಸುವುದು) | ... | ೪೭ |
| ೮ | ಪ್ರಹಸ್ತಾದಿವಚನಮ್ (ಪ್ರಹಸ್ತಾದಿಗಳು ತಮ್ಮ ಪರಾಕ್ರಮವನ್ನು ಹೊಗಳಿಕೊಳ್ಳುವುದು) | ... | ೫೨ |
| ೯ | ವಿಭೀಷಣಸಮಾಲೋಚನಮ್ (ವಿಭೀಷಣನಿಂದ ರಾಕ್ಷಸರಿಗೆ ಬುದ್ಧಿವಾದ) | ... | ೫೭ |
| ೧೦ | ವಿಭೀಷಣಪಥ್ಯೋಪದೇಶಃ (ವಿಭೀಷಣನಿಂದ ರಾವಣನಿಗೆ ಹಿತೋಪದೇಶ) | ... | ೬೨ |
| ೧೧ | ದ್ವಿತೀಯಮಂತ್ರಾಧಿವೇಶಃ (ಎರಡನೆಯಸಲ ರಾವಣನ ಮಂತ್ರಾಲೋಚನೆ) | ... | ೬೮ |
| ೧೨ | ಕುಂಭಕರ್ಣಮತಿಃ (ರಾವಣನ ಪ್ರಲಾಪ. ಕುಂಭಕರ್ಣನ ಉತ್ತರ) | ... | ೭೬ |
| ೧೩ | ಮಹಾಪಾರ್ಶ್ವವಚೋಽಭಿನಂದನಮ್ (ಸೀತೆಯನ್ನು ಬಲಾತ್ಕರಿಸಬೇಕೆಂಬ ಮಹಾಪಾರ್ಶ್ವನ ಮಾತಿಗೆ ರಾವಣನ ಉತ್ತರ) | ... | ೮೪ |
| ೧೪ | ಪ್ರಹಸ್ತವಿಭೀಷಣವಿವಾದಃ (ಪ್ರಹಸ್ತವಿಭೀಷಣರ ವಾಗ್ವಾದ) | ... | ೮೯ |
| ೧೫ | ಇಂದ್ರಜಿದ್ವಿಭೀಷಣವಿವಾದಃ (ಇಂದ್ರಜಿತು ವಿಭೀಷಣರ ವಿವಾದ) | ... | ೯೬ |
| ೧೬ | ವಿಭೀಷಣಾಕ್ರೋಶಃ (ರಾವಣನ ಪರುಷೋಕ್ತಿಯನ್ನ ಕೇಳಲಾರದೆ ವಿಭೀಷಣನು ಅವನನ್ನು ತ್ಯಜಿಸಿ ತೆರಳುವುದು) | ... | ೧೦೧ |
| ೧೭ | ವಿಭೀಷಣಶರಣಾಗತಿ ನಿವೇದನಮ್ (ವಿಭೀಷಣನು ಕಪಿಗಳಿಗೆ ತನ್ನ ಆಗಮನೋದ್ದೇಶವನ್ನು ತಿಳಿಸುವುದು) | ... | ೧೦೭ |

| ಸರ್ಗ | ವಿಷಯ | ಪುಟ |
|---|---|---|
| ೧೮ | ವಿಭೀಷಣಸಂಗ್ರಹನಿರ್ಣಯಃ (ವಿಭೀಷಣನಿಗ ಆಶ್ರಯವನ್ನೀಯಬೇಕೆಂದು ಶ್ರೀರಾಮನ ನಿರ್ಧಾರ) | ... ೧೨೦ |
| ೧೯ | ದರ್ಭಶಯನಮ್ (ಸಮುದ್ರವನ್ನೊಲಿಸಿಕೊಳ್ಳಲು ದರ್ಭಶಯನ) | ... ೧೨೮ |
| ೨೦ | ಸುಗ್ರೀವಭೇದನೋಪಾಯಃ (ಭೇದೋಪಾಯವನ್ನು ಹೂಡಲು ಶುಕನ ಆಗಮನ. ಅವನ ಬಂಧನವಿಮೋಚನಗಳು) | ... ೧೩೬ |
| ೨೧ | ಸಮುದ್ರಸಂಕ್ಷೋಭಃ (ಸಮುದ್ರನು ಪ್ರಸನ್ನನಾಗದಿರಲು ಶ್ರೀರಾಮನ ರೋಷ) | ... ೧೪೩ |
| ೨೨ | ಸೇತುಬಂಧಃ (ಸೇತುಬಂಧನ. ಸಮುದ್ರವನ್ನು ದಾಟುವುದು) | ... ೧೫೦ |
| ೨೩ | ಲಂಕಾಭಿಷೇಣನಮ್ (ಕಪಿಸೇನೆಯೊಡನೆ ಲಂಕಾಭಿಮುಖವಾಗಿ ಪ್ರಯಾಣ) | ... ೧೬೬ |
| ೨೪ | ರಾವಣಪ್ರತಿಜ್ಞಾ (ಸೀತೆಯನ್ನು ಹಿಂದಿರುಗಿಸುವುದಿಲ್ಲವೆಂದು ರಾವಣನ ಪ್ರತಿಜ್ಞೆ) | ... ೧೬೯ |
| ೨೫ | ಶುಕಸಾರಣಪ್ರೇಷಣಾದಿಕಮ್ (ಶುಕಸಾರಣರು ಶ್ರೀರಾಮನ ಸೇನಾ ಸನ್ನಾಹವನ್ನು ತಿಳಿದುಬರುವುದು) | ... ೧೭೭ |
| ೨೬ | ಕಪಿಬಲಾವೇಕ್ಷಣಮ್ (ರಾವಣನು ಸೌಧವನ್ನೇರಿ ಕಪಿಸೇನೆಯನ್ನು ನೋಡುವುದು) | ... ೧೮೪ |
| ೨೭ | ಹರಾದಿವಾನರಪರಾಕ್ರಮಾಖ್ಯಾನಮ್ (ಸಾರಣನು ಕೆಲವು ವಾನರ ಸೇನಾಪತಿಗಳನ್ನು ರಾವಣನಿಗೆ ತೋರಿಸುವುದು) | ... ೧೯೩ |
| ೨೮ | ಮೈಂದಾದಿಪರಾಕ್ರಮಾಖ್ಯಾನಮ್ (ಶುಕನು ಮೈಂದಾದಿಗಳ ಪರಾಕ್ರಮವನ್ನು ವರ್ಣಿಸುವುದು) | ... ೨೦೨ |
| ೨೯ | ಶಾರ್ದೂಲಾದಿಚಾರಪ್ರೇಷಣಮ್ (ರಾವಣನು ಕಳಿಸಿದ ಶಾರ್ದೂಲಾದಿ ಚಾರರ ಬಂಧನ ಮತ್ತು ವಿಮೋಚನೆ) | ... ೨೧೦ |
| ೩೦ | ವಾನರಬಲಸಂಖ್ಯಾನಮ್ (ಶಾರ್ದೂಲನು ಕಪಿಸೇನಾಬಲವನ್ನು ರಾವಣನಿಗ ಹೇಳುವುದು) | ... ೨೧೬ |
| ೩೧ | ವಿದ್ಯುಜ್ಜಿಹ್ವಮಾಯಾಪ್ರಯೋಗಃ (ವಿದ್ಯುಜ್ಜಿಹ್ವನು ಸೀತೆಯನ್ನು ವಂಚಿಸುವುದಕ್ಕಾಗಿ ಮಾಯಿಕವಾದ ರಾಮಶಿರಸ್ಸನ್ನು ನಿರ್ಮಿಸುವುದು) | ... ೨೨೨ |
| ೩೨ | ಸೀತಾವಿಲಾಪಃ (ಮಾಯಿಕ ಶಿರಸ್ಸನ್ನು ಕಂಡು ಸೀತೆಯ ವಿಲಾಪ) | ... ೨೩೦ |
| ೩೩ | ಸರಮಾಸಮಾಶ್ವಾಸನಮ್ (ಸರಮೆಯು ಸೀತೆಯನ್ನು ಸಂತೈಸುವುದು) | ... ೨೩೯ |
| ೩೪ | ರಾವಣನಿಶ್ಚಯಕಥನಮ್ (ಸರಮೆಯು ರಾವಣನ ಅಭಿಪ್ರಾಯವನ್ನು ತಿಳಿದುಬರುವುದು) | ... ೨೪೭ |

| ಸರ್ಗ | ವಿಷಯ | ಪುಟ |
|---|---|---|
| ೩೫ | ಮಾಲ್ಯವದುಪದೇಶಃ (ಮಾಲ್ಯವಂತನಿಂದ ರಾವಣನಿಗೆ ಹಿತೋಪದೇಶ) | ... ೨೫೩ |
| ೩೬ | ಪುರದ್ವಾರರಕ್ಷಾ (ರಾವಣನು ಮಾಲ್ಯವಂತನ ಉಪದೇಶವನ್ನು ಧಿಕ್ಕರಿಸಿ ನಗರದ್ವಾರಗಳಿಗೆ ರಕ್ಷಣಾವಸ್ಥೆಯನ್ನೇರ್ಪಡಿಸುವುದು) | ... ೨೬೦ |
| ೩೭ | ರಾಮಗುಲ್ಮವಿಭಾಗಃ (ಶ್ರೀರಾಮನು ಲಂಕೆಯನ್ನಾಕ್ರಮಿಸಲು ವಾನರ ಯೋಧರನ್ನು ನಿಯಮಿಸುವುದು) | ... ೨೬೫ |
| ೩೮ | ಸುವೇಲಾರೋಹಣಮ್ (ಶ್ರೀರಾಮನು ಕಪಿನಾಯಕರೊಡನೆ ಸುವೇಲಾದ್ರಿಯನ್ನೇರುವುದು) | ... ೨೭೨ |
| ೩೯ | ಲಂಕಾದರ್ಶನಮ್ (ಶ್ರೀರಾಮಾದಿಗಳು ಲಂಕಾಪುರಿಯನ್ನು ನೋಡಿ ವಿಸ್ಮಿತರಾಗುವುದು) | ... ೨೭೬ |
| ೪೦ | ರಾವಣಸುಗ್ರೀವನಿಯುದ್ಧಮ್ (ರಾವಣಸುಗ್ರೀವರ ಯುದ್ಧ) | ... ೨೮೧ |
| ೪೧ | ಅಂಗದದೂತ್ಯಮ್ (ಅಂಗದನ ರಾಯಭಾರ) | ... ೨೮೮ |
| ೪೨ | ಯುದ್ಧಾರಂಭಃ (ವಾನರರಿಂದ ಲಂಕೆಯ ಆಕ್ರಮಣ. ರಾವಣನ ಆದೇಶದಂತೆ ಯುದ್ಧಾರಂಭ) | ... ೩೦೫ |
| ೪೩ | ದ್ವಂದ್ವಯುದ್ಧಮ್ (ದ್ವಂದ್ವಯುದ್ಧದಲ್ಲಿ ದುರ್ಧರ್ಷ ನಿಕುಂಭ ಸುಷೇಣರ ಶಿರಶ್ಛೇದ) | ... ೩೧೩ |
| ೪೪ | ನಿಶಾಯುದ್ಧಮ್ (ರಾತ್ರಿಯಲ್ಲಿ ಇಂದ್ರಜಿತುವಿನ ಮಾಯಾಯುದ್ಧ) | ... ೩೨೧ |
| ೪೫ | ನಾಗಪಾಶಬಂಧಃ (ನಾಗಪಾಶದಿಂದ ಶ್ರೀರಾಮಲಕ್ಷ್ಮಣರ ಬಂಧನ) | ... ೩೨೮ |
| ೪೬ | ಸುಗ್ರೀವಾದ್ಯನುಶೋಕಃ (ಸುಗ್ರೀವಾದಿಗಳ ಶೋಕ. ಹರ್ಷೋನ್ಮತ್ತನಾದ ಇಂದ್ರಜಿತುವಿನ ಲಂಕಾಪ್ರವೇಶ) | ... ೩೩೩ |
| ೪೭ | ನಾಗಬದ್ಧರಾಮಲಕ್ಷ್ಮಣಪರದರ್ಶನಮ್ (ರಾಕ್ಷಸಿಯರು ಸೀತೆಗೆ ನಾಗಪಾಶ ಬದ್ಧರಾದ ಶ್ರೀರಾಮಲಕ್ಷ್ಮಣರನ್ನು ತೋರಿಸುವುದು) | ... ೩೪೨ |
| ೪೮ | ಸೀತಾಶ್ವಾಸನಮ್ (ತ್ರಿಜಟೆಯು ಸೀತೆಯನ್ನು ಸಂತೈಸುವುದು) | ... ೩೪೬ |
| ೪೯ | ರಾಮನಿರ್ವೇದಃ (ಶ್ರೀರಾಮನು ಲಕ್ಷ್ಮಣನಿಗಾಗಿ ಶೋಕಿಸುವುದು) | ... ೩೫೪ |
| ೫೦ | ನಾಗಪಾಶವಿಮೋಕ್ಷಣಮ್ (ಗರುಡನು ರಾಘವರಿಬ್ಬರನ್ನೂ ನಾಗಪಾಶ ದಿಂದ ವಿಮೋಚನೆಗೊಳಿಸುವುದು) | ... ೩೬೦ |
| ೫೧ | ಧೂಮ್ರಾಕ್ಷಾಭಿಷೇಣನಮ್ (ರಾವಣನು ಧೂಮ್ರಾಕ್ಷನನ್ನು ಯುದ್ಧಕ್ಕೆ ಕಳಿಸುವುದು) | ... ೩೭೨ |

| ಸರ್ಗ | ವಿಷಯ | ಪುಟ |
|---|---|---|
| ೫೨ | ಧೂಮ್ರಾಕ್ಷವಧಃ (ಹನುಮಂತನಿಂದ ಧೂಮ್ರಾಕ್ಷನ ವಧೆ) | ... ೩೭೯ |
| ೫೩ | ವಜ್ರದಂಷ್ಟ್ರಯುದ್ಧಮ್ (ವಜ್ರದಂಷ್ಟ್ರನ ಯುದ್ಧ) | ... ೩೮೬ |
| ೫೪ | ವಜ್ರದಂಷ್ಟ್ರವಧಃ (ಅಂಗದನಿಂದ ವಜ್ರದಂಷ್ಟ್ರನ ವಧೆ) | ... ೩೯೨ |
| ೫೫ | ಅಕಂಪನಯುದ್ಧಮ್ (ಅಕಂಪನನ ಯುದ್ಧ) | ... ೩೯೯ |
| ೫೬ | ಅಕಂಪನವಧಃ (ಹನುಮಂತನಿಂದ ಅಕಂಪನನ ವಧೆ) | ... ೪೦೫ |
| ೫೭ | ಪ್ರಹಸ್ತಯುದ್ಧಮ್ (ಪ್ರಹಸ್ತನ ಯುದ್ಧ) | ... ೪೧೨ |
| ೫೮ | ಪ್ರಹಸ್ತವಧಃ (ನೀಲನಿಂದ ಪ್ರಹಸ್ತನ ವಧೆ) | ... ೪೨೦ |
| ೫೯ | ರಾವಣಾಭಿಷೇಣನಮ್ (ಯುದ್ಧರಂಗಕ್ಕೆ ರಾವಣನ ಪ್ರವೇಶ. ಲಕ್ಷ್ಮಣನ ಮೂರ್ಛೆ. ಶ್ರೀರಾಮನಿಂದ ರಾವಣನ ಪರಾಜಯ) | ... ೪೩೧ |
| ೬೦ | ಕುಂಭಕರ್ಣಪ್ರಬೋಧಃ (ರಾಕ್ಷಸರು ಕುಂಭಕರ್ಣನನ್ನು ನಿದ್ರೆಯಿಂದ ಎಬ್ಬಿಸುವುದು) | ... ೪೬೪ |
| ೬೧ | ಕುಂಭಕರ್ಣವೃತ್ತಕಥನಮ್ (ವಿಭೀಷಣನು ಕುಂಭಕರ್ಣನ ವೃತ್ತಾಂತವನ್ನು ಶ್ರೀರಾಮನಿಗೆ ತಿಳಿಸುವುದು) | ... ೪೮೩ |
| ೬೨ | ರಾವಣಾಭ್ಯರ್ಥನಾ (ತನಗೊದಗಿದ ವಿಪತ್ತನ್ನು ನೀಗಿಸಬೇಕೆಂದು ರಾವಣನು ಕುಂಭಕರ್ಣನನ್ನು ಕೇಳಿಕೊಳ್ಳುವುದು) | ... ೪೯೧ |
| ೬೩ | ಕುಂಭಕರ್ಣಾನುಶೋಕಃ (ರಾವಣನ ವರ್ತನೆಗಾಗಿ ಕುಂಭಕರ್ಣನ ವ್ಯಥೆ. ಯುದ್ಧಮಾಡುವುದಾಗಿ ನಿಶ್ಚಯ) | ... ೪೯೬ |
| ೬೪ | ಸೀತಾಪ್ರಲೋಭನೋಪಾಯಃ (ವಂಚನೆಯಿಂದ ಸೀತೆಯನ್ನು ವಶಪಡಿಸಿಕೊಳ್ಳಬೇಕೆಂದು ಮಹೋದರನ ಹೇಳಿಕೆ) | ... ೫೦೭ |
| ೬೫ | ಕುಂಭಕರ್ಣಾಭಿಷೇಣನಮ್ (ಕುಂಭಕರ್ಣನು ಯುದ್ಧಸನ್ನದ್ಧನಾಗಿ ಹೊರಡುವುದು) | ... ೫೦೫ |
| ೬೬ | ವಾನರಪರ್ಯವಸ್ಥಾಪನಮ್ (ಅಂಗದನು ಕಪಿಗಳಿಗೆ ಧೈರ್ಯವನ್ನು ಹೇಳಿ ನಿಲ್ಲಿಸುವುದು) | ... ೫೨೬ |
| ೬೭ | ಕುಂಭಕರ್ಣವಧಃ (ಶ್ರೀರಾಮನಿಂದ ಕುಂಭಕರ್ಣನ ವಧೆ) | ... ೫೩೩ |
|  | ಅನುಬಂಧ | ... ೫೭೩ |

॥ ಶ್ರೀಃ ॥

# ಶ್ರೀಮದ್ವಾಲ್ಮೀಕಿರಾಮಾಯಣಮ್

## ಯುದ್ಧ ಕಾಂಡಃ

### ಪ್ರಥಮಃ ಸರ್ಗಃ

ಹನೂಮತ್ ಪ್ರಶಂಸನಮ್

ಶ್ರುತ್ವಾ ಹನುಮತೋ ವಾಕ್ಯಂ ಯಥಾವದಭಿಭಾಷಿತಮ್ ।
ರಾಮಃ ಪ್ರೀತಿಸಮಾಯುಕ್ತೋ ವಾಕ್ಯಮುತ್ತರಮಬ್ರವೀತ್ ॥ ೧

ಕೃತಂ ಹನುಮತಾ ಕಾರ್ಯಂ ಸುಮಹದ್ ಭುವಿ ದುಷ್ಕರಮ್ ।
ಮನಸಾಪಿ ಯದನ್ಯೇನ ನ ಶಕ್ಯಂ ಧರಣೀತಲೇ ॥ ೨

ನ ಹಿ ತಂ ಪರಿಪಶ್ಯಾಮಿ ಯಸ್ತರೇತ ಮಹೋದಧಿಮ್ ।
ಅನ್ಯತ್ರ ಗರುಡಾದ್ವಾಯೋರನ್ಯತ್ರ ಚ ಹನೂಮತಃ ॥ ೩

ದೇವದಾನವಯಕ್ಷಾಣಾಂ ಗಂಧರ್ವೋರಗರಕ್ಷಸಾಮ್ ।
ಅಪ್ರಧೃಷ್ಯಾಂ ಪುರೀಂ ಲಂಕಾಂ ರಾವಣೇನ ಸುರಕ್ಷಿತಾಮ್ ॥ ೪

## ಯುದ್ಧಕಾಂಡ

### ಸರ್ಗ ೧

ಶ್ರೀ ರಾಮನು ಹನುಮಂತನನ್ನು ಹೊಗಳಿ ಆಲಿಂಗಿಸಿಕೊಳ್ಳುವುದು.

ಹನುಮಂತನು ಈ ರೀತಿಯಲ್ಲಿ ಯಥಾವತ್ತಾಗಿ ನುಡಿಯಲು, ಅದನ್ನು ಕೇಳಿ ಶ್ರೀರಾಮನು ಸಂಪ್ರೀತನಾಗಿ ಹೀಗೆಂದನು ''ಹನುಮಂತನು ಸಾಧಿಸಿರುವ ಕಾರ್ಯ ಬಹು ದೊಡ್ಡದು; ಕಠಿಣವಾದುದು. ಈ ಜಗತ್ತಿನಲ್ಲಿ ಇನ್ನೊಬ್ಬನು ಇದನ್ನು ಸಾಧಿಸಿಬಲ್ಲನೆಂದು ಮನಸ್ಸಿನಲ್ಲಿ ಊಹಿಸಲು ಸಹ ಶಕ್ಯವಲ್ಲ (೧-೨). ಮಹಾಸಾಗರವನ್ನು ಲಂಘಿಸಿ ಹೋಗಬಲ್ಲವನಾದರೂ ಯಾರು? ವೈನತೇಯ, ವಾಯುದೇವ, ಈ ಹನುಮಂತ – ಇವರನ್ನಲ್ಲದೆ

ಯೋ ವೀರ್ಯಬಲಸಂಪನ್ನೋ ದ್ವಿಷದ್ಭಿರನಿವಾರಿತಃ ।
ಪ್ರವಿಷ್ಟಃ ಸತ್ತ್ವಮಾಶ್ರಿತ್ಯ ಶ್ವಸನ್ ಕೋ ನಾಮ ನಿಷ್ಕ್ರಮೇತ್ ॥ ೫

ಕೋ ವಿಶೇತ್ಸುದುರಾಧರ್ಷಾಂ ರಾಕ್ಷಸೈಶ್ಚ ಸುರಕ್ಷಿತಾಮ್ ।
ಯೋ ವೀರ್ಯಬಲಸಂಪನ್ನೋ ನ ಸಮಃ ಸ್ಯಾದ್ಧನೂಮತಃ ॥ ೬

ಭೃತ್ಯಕಾರ್ಯಂ ಹನುಮತಾ ಸುಗ್ರೀವಸ್ಯ ಕೃತಂ ಮಹತ್ ।
ಏವಂ ವಿಧಾಯ ಸ್ವಬಲಂ ಸದೃಶಂ ವಿಕ್ರಮಸ್ಯ ಚ ॥ ೭

ಯೋ ಹಿ ಭೃತ್ಯೋ ನಿಯುಕ್ತಃ ಸನ್ ಭರ್ತ್ರಾ ಕರ್ಮಣಿ ದುಷ್ಕರೇ ।
ಕುರ್ಯಾತ್ತದನುರಾಗೇಣ ತಮಾಹುಃ ಪುರುಷೋತ್ತಮಮ್ ॥ ೮

ಭೃತ್ಯಸ್ತು ಯಃ ಪರಂ ಕಾರ್ಯಂ ನ ಕುರ್ಯಾನ್ನೃಪತೇಃ ಪ್ರಿಯಂ ।
ಭೃತ್ಯೋ ಯುಕ್ತಃ ಸಮರ್ಥಶ್ಚ ತಮಾಹುರ್ಮಧ್ಯಮಂ ನರಮ್ ॥

---

ಸಮುದ್ರವನ್ನು ದಾಟಬಲ್ಲ ಇನ್ನೊಬ್ಬ ಪುರುಷನನ್ನೇ ನಾನು ಕಾಣೆ. ರಾವಣನಿಂದ ಸುರಕ್ಷಿತವಾದ ಲಂಕಾಪುರಿಯು ದುರ್ದಮ್ಯವಾದುದು. ದೇವ ದಾನವ ಯಕ್ಷರಿಗೂ ಗಂಧರ್ವೋರಗ ರಾಕ್ಷಸರಿಗೂ ದುರ್ಗಮವಾದುದು (೩-೪). ಬಲಾಢ್ಯನಾದ ಈ ವೀರನು ತನ್ನ ಪರಾಕ್ರಮವನ್ನೇ ನೆಚ್ಚಿಕೊಂಡು ಶತ್ರುಗಳಿಗೆ ಜಗ್ಗದೆ ಆ ನಗರಿಯೊಳಗೆ ನುಗ್ಗಿದನಲ್ಲ! ಇನ್ನೊಬ್ಬನಾಗಿದ್ದರೆ ಉಸಿರು ಸಹಿತ ಹೊರಬರುತ್ತಿದ್ದನೆ? ರಾಕ್ಷಸರ ಕಾವಲಿನಲ್ಲಿ ದುರ್ಧರ್ಷವಾಗಿರುವ ಲಂಕೆಯನ್ನು ಹನುಮಂತನಿಗೆ ಸಾಟಿಯಲ್ಲದ ಯಾವ ವೀರನು ಪ್ರವೇಶಿಸಬಲ್ಲನು? (೫-೬). ಸುಗ್ರೀವನಿಗಾಗಿ ಹನುಮಂತನು ಮಹತ್ತರವಾದ ಭೃತ್ಯಕಾರ್ಯವನ್ನೆಸಗಿದ್ದಾನೆ. ಈ ಬಗೆಯಲ್ಲಿ ತನ್ನ ಬಲವನ್ನು ಪ್ರದರ್ಶಿಸಿ, ವಿಕ್ರಮಕ್ಕೆ ಅನುಗುಣವಾದ ಕಾರ್ಯವನ್ನು ಸಾಧಿಸಿದ್ದಾನೆ. ಸ್ವಾಮಿಯು ದುಷ್ಕರವಾದ ಕಾರ್ಯದಲ್ಲಿ ತೊಡಗಿಸಿದಾಗ, ಯಾವ ಸೇವಕನು ಶ್ರದ್ಧೆಯಿಂದ ಅದನ್ನು ಸಾಧಿಸಿ (ಅನುಗುಣವಾದ ಮತ್ತೊಂದು ಕಾರ್ಯವನ್ನು ಸಾಧಿಸುವನೋ), ಆತನು ಉತ್ತಮಪುರುಷನೆನಿಸುವನು (೭-೮). ರಾಜನಿಂದ ಆಜ್ಞಪ್ತನಾದ ಯಾವ ಸೇವಕನು ಆ ಕಾರ್ಯವನ್ನು ಮಾತ್ರವೇ ನಡೆಸಿ ಅದಕ್ಕೆ ಅನುಗುಣವಾದ ಮತ್ತೊಂದು ಕಾರ್ಯವನ್ನು, ಸಮರ್ಥನಾಗಿದ್ದರೂ ನಡೆಸದೆ ಸುಮ್ಮನಾಗುವನೋ ಅವನು ಮಧ್ಯಮನೆನಿಸುವನು. ಯಾವನು ಸಮರ್ಥನಾಗಿದ್ದರೂ

ನಿಯುಕ್ತೋ ನೃಪತೇಃ ಕಾರ್ಯಂ ನ ಕುರ್ಯಾದ್ಯಃ ಸಮಾಹಿತಃ ।
ಭೃತ್ಯೋ ಯುಕ್ತಃ ಸಮರ್ಥಶ್ಚ ತಮಾಹುಃ ಪುರುಷಾಧಮಮ್ ॥ ೧೦

ತನ್ನಿಯೋಗೇ ನಿಯುಕ್ತೇನ ಕೃತಂ ಕೃತ್ಯಂ ಹನೂಮತಾ ।
ನ ಚಾತ್ಮಾ ಲಘುತಾಂ ನೀತಃ ಸುಗ್ರೀವಶ್ಚಾಪಿ ತೋಷಿತಃ ॥ ೧೧

ಅಹಂ ಚ ರಘುವಂಶಶ್ಚ ಲಕ್ಷ್ಮಣಶ್ಚ ಮಹಾಬಲಃ ।
ವೈದೇಹ್ಯಾ ದರ್ಶನೇನಾದ್ಯ ಧರ್ಮತಃ ಪರಿರಕ್ಷಿತಾಃ ॥ ೧೨

ಇದಂ ತು ಮಮ ದೀನಸ್ಯ ಮನೋ ಭೂಯಃ ಪ್ರಕರ್ಷತಿ ।
ಯದಿಹಾಸ್ಯ ಪ್ರಿಯಾಖ್ಯಾತುರ್ನ ಕುರ್ಮಿ ಸದೃಶಂ ಪ್ರಿಯಮ್ ॥ ೧೩

ಏಷ ಸರ್ವಸ್ವಭೂತಸ್ತು ಪರಿಷ್ವಂಗೋ ಹನೂಮತಃ ।
ಮಯಾ ಕಾಲಮಿಮಂ ಪ್ರಾಪ್ಯ ದತ್ತಶ್ಚಾಸ್ತು ಮಹಾತ್ಮನಃ ॥ ೧೪

ಇತ್ಯುಕ್ತ್ವಾ ಪ್ರೀತಿಹೃಷ್ಟಾಂಗೋ ರಾಮಸ್ತಂ ಪರಿಷಸ್ವಜೇ ।
ಹನೂಮಂತಂ ಮಹಾತ್ಮಾನಂ ಕೃತಕಾರ್ಯಮುಪಾಗತಮ್ ॥ ೧೫

---

ಆಜ್ಞಪ್ತವಾದ ಕಾರ್ಯವನ್ನು ಎಚ್ಚರಿಕೆಯಿಂದ ನಡೆಸುವುದಿಲ್ಲವೋ ಅವನು ಅಧಮಭೃತ್ಯನೆನಿಸುವನು (೯–೧೦). ಈ ಹನುಮಂತನು ತನಗೆ ನಿಯಮಿತವಾದ ಕಾರ್ಯವನ್ನು ಉತ್ತಮರೀತಿಯಲ್ಲಿ ಸಾಧಿಸಿದ್ದಾನೆ. ತಾನೂ ಅವಮಾನಕ್ಕೊಳಗಾಗದೆ ಸುಗ್ರೀವನನ್ನೂ ಸಂತೋಷಪಡಿಸಿದ್ದಾನೆ. ವೈದೇಹಿಯನ್ನು ಕಂಡುಬಂದುದರಿಂದ ನಾನೂ ಬಲಶಾಲಿಯಾದ ಲಕ್ಷ್ಮಣನೂ ಜೀವ ಹಿಡಿದು ಉಳಿಯುವಂತಾಯಿತು. ರಘುವಂಶವು ಬದುಕಿತು. ಹನುಮಂತನು ತನ್ನ ಭೃತ್ಯಧರ್ಮದಿಂದ ನಮ್ಮನ್ನುಳಿಸಿದನು (೧೧–೧೨). ಆದರೆ, ದೀನನಾದ ನನ್ನ ಮನಸ್ಸನ್ನು ಇದೊಂದು ವಿಷಯವು ತೀವ್ರವಾಗಿ ಕೊರೆಯುತ್ತಿದೆ. ಏನೆಂದರೆ, ಇಂತಹ ಸಂತೋಷದ ಸುದ್ದಿಯನ್ನು ತಂದಿರುವ ಹನುಮಂತನಿಗೆ, ಸರಿಯಾಗಿ ಒಂದು ಸಂತೋಷದ ಕಾರ್ಯವನ್ನು ಮಾಡಲಾರದ ಸ್ಥಿತಿಯಲ್ಲಿ ಇರುವೆನಲ್ಲ! (೧೩). ಈ ಸಮಯದಲ್ಲಿ ನನ್ನಲ್ಲಿರುವ ಸರ್ವಸ್ವವೆಂದರೆ ಈ ಆಲಿಂಗನ ! ಈ ಮಹಾತ್ಮನಿಗೆ ಇದನ್ನೇ ಕೊಡುವೆನು!'' ಎಂದು ಹೇಳಿ ಶ್ರೀರಾಮನು ಆನಂದದಿಂದ ರೋಮಾಂಚಿತಾಂಗನಾಗಿ ಹನುಮಂತನನ್ನು ಅಪ್ಪಿಕೊಂಡನು. ಕಾರ್ಯವನ್ನು ಸಾಧಿಸಿ ಕೃತಕೃತ್ಯನಾಗಿ ಬಂದ ಮಹಾತ್ಮ

ಧ್ಯಾತ್ವಾ ಪುನರುವಾಚೇದಂ ವಚನಂ ರಘುಸತ್ತಮಃ ।
ಹರೀಣಾಮೀಶ್ವರಸ್ಯೈವ ಸುಗ್ರೀವಸ್ಯೋಪಶೃಣ್ವತಃ ॥ ೧೬

ಸರ್ವಥಾ ಸುಕೃತಂ ತಾವತ್ಸೀತಾಯಾಃ ಪರಿಮಾರ್ಗಣಮ್ ।
ಸಾಗರಂ ತು ಸಮಾಸಾದ್ಯ ಭೂಯೋ ನಷ್ಟಂ ಮನೋ ಮಮ ॥ ೧೭

ಕಥಂ ನಾಮ ಸಮುದ್ರಸ್ಯ ದುಷ್ಪಾರಸ್ಯ ಮಹಾಂಭಸಃ ।
ಹರಯೋ ದಕ್ಷಿಣಂ ಪಾರಂ ಗಮಿಷ್ಯಂತಿ ಸಮಾಹಿತಾಃ ॥ ೧೮

ಯದ್ಯಪ್ಯೇಷ ತು ವೃತ್ತಾಂತೋ ವೈದೇಹ್ಯಾ ಗದಿತೋ ಮಮ ।
ಸಮುದ್ರಪಾರಗಮನೇ ಹರೀಣಾಂ ಕಿಮಿವೋತ್ತರಮ್ ॥ ೧೯

ಇತ್ಯುಕ್ತ್ವಾ ಶೋಕಸಂಭ್ರಾಂತೋ ರಾಮಃ ಶತ್ರುನಿಬರ್ಹಣಃ ।
ಹನುಮಂತಂ ಮಹಾಬಾಹುಸ್ತತೋ ಧ್ಯಾನಮುಪಾಗಮತ್ ॥ ೨೦

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಚತುರ್ವಿಂಶತಿ ಸಹಸ್ರಿಕಾಯಾಂ ಸಂಹಿತಾಯಾಂ ಯುದ್ಧಕಾಂಡೇ ಪ್ರಥಮಃ ಸರ್ಗಃ

---

ನನ್ನ ಅಪ್ಪಿಕೊಂಡು, ಶ್ರೀರಾಮನು ಸ್ವಲ್ಪಹೊತ್ತಿನವರೆಗೆ ಮೈಮರೆತಿದ್ದನು (೧೪–೧೫). ಅನಂತರ ರಘುನಾಥನು ಕಪೀಶ್ವರನಾದ ಸುಗ್ರೀವನಿಗೆ ಕೇಳಿಸು ವಂತೆ ''ಸೀತೆಯನ್ನು ಹುಡುಕಲು ನಡೆಸಿದ ಪ್ರಯತ್ನವೇನೋ ಸರ್ವವಿಧ ದಲ್ಲಿಯೂ ಸಫಲವಾಯಿತು. ಆದರೆ ಸಮುದ್ರವನ್ನು ನೆನಿಸಿಕೊಂಡಾಗ ನನ್ನ ಮನಸ್ಸು ಮತ್ತೆ ವಿಕಲವಾಗುತ್ತಿದೆ (೧೬–೧೭). ದುಸ್ತರವಾದ ಮಹಾ ಸಾಗರವನ್ನು ದಾಟಿ ಈ ವಾನರರು ಅಪಾಯವಿಲ್ಲದೆ ತೆಂಕಣತೀರವನ್ನು ಸೇರು ವುದಾದರೂ ಹೇಗೆ? ವೈದೇಹಿಯ ಸುದ್ದಿಯನ್ನೇನ್ನೋ ನನಗೆ ತಿಳಿಸಿದು ದಾಯಿತು. ಆದರೆ ಕಡಲಿನ ಆಚೆಯ ದಡವನ್ನು ನಾವು ಮುಟ್ಟಬೇಕಾಗಿದೆ ಯಲ್ಲ, ಇದಕ್ಕ ಕಪಿವೀರರ ಉತ್ತರವೇನು?'' ಎಂದನು (೧೮–೧೯). ಆಜಾನುಬಾಹುವೂ ಶತ್ರುಸೂದನನೂ ಆದ ಶ್ರೀರಾಮನು ಹನುಮಂತನನ್ನು ದೃಷ್ಟಿಸುತ್ತ ಈ ರೀತಿಯಲ್ಲಿ ಶೋಕಸಂತಪ್ತನಾಗಿ ನುಡಿದನು. ನುಡಿದು, ತನ್ನಲ್ಲಿ ತಾನು ಧ್ಯಾನಸ್ಥನಾದನು (೨೦).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಒಂದನೆಯ ಸರ್ಗ

## ದ್ವಿತೀಯಃ ಸರ್ಗಃ

ರಾಮಪ್ರೋತ್ಸಾಹನಮ್

ತಂ ತು ಶೋಕಪರಿದ್ಯೂನಂ ರಾಮಂ ದಶರಥಾತ್ಮಜಮ್ ।
ಉವಾಚ ವಚನಂ ಶ್ರೀಮಾನ್ ಸುಗ್ರೀವಃ ಶೋಕನಾಶನಮ್ ॥ ೧

ಕಿಂ ತ್ವಂ ಸಂತಪ್ಯಸೇ ವೀರ ಯಥಾನ್ಯಃ ಪ್ರಾಕೃತಸ್ತಥಾ ।
ಮೈವಂ ಭೂಸ್ತ್ಯಜ ಸಂತಾಪಂ ಕೃತಘ್ನ ಇವ ಸೌಹೃದಮ್ ॥ ೨

ಸಂತಾಪಸ್ಯ ಚ ತೇ ಸ್ಥಾನಂ ನ ಹಿ ಪಶ್ಯಾಮಿ ರಾಘವ ।
ಪ್ರವೃತ್ತಾವುಪಲಬ್ಧಾಯಾಂ ಜ್ಞಾತೇ ಚ ನಿಲಯೇ ರಿಪೋಃ ॥ ೩

ಮತಿಮಾನ್ ಶಾಸ್ತ್ರವಿತ್ ಪ್ರಾಜ್ಞಃ ಪಂಡಿತಶ್ಚಾಸಿ ರಾಘವ ।
ತ್ಯಜೇಮಾಂ ಪ್ರಾಕೃತಾಂ ಬುದ್ಧಿಂ ಕೃತಾತ್ಮೇವಾತ್ಮದೂಷಣೀಮ್ ॥ ೪

### ಸರ್ಗ ೨

ಸುಗ್ರೀವನು ಶ್ರೀರಾಮನಿಗೆ ಸಮಾಧಾನ ಹೇಳಿ ಪ್ರೋತ್ಸಾಹಿಸುವುದು.

ಹೀಗೆ ದಶರಥಾತ್ಮಜನು ಶೋಕದಿಂದ ವಿಷಣ್ಣನಾಗಿರುವುದನ್ನು ಕಂಡು ಗುಣಶಾಲಿಯಾದ ಸುಗ್ರೀವನು ಶೋಕನಿವಾರಕವಾದ ಈ ಮಾತನ್ನಾಡಿದನು : ''ಶ್ರೀರಾಮ, ಕಡುಗಲಿಯಾದ ನೀನು ಸಾಮಾನ್ಯಪುರುಷನಂತೆ ಈ ರೀತಿಯಲ್ಲಿ ಕೊರಗಬಹುದೆ? ಹೀಗೆ ವಿಷಣ್ಣನಾಗಬೇಡ. ಶೋಕವನ್ನು ದೂರ ಮಾಡು. ಕೃತಘ್ನನಲ್ಲಿ ಸ್ನೇಹವು ಸುಳಿಯದಂತೆ ನಿನ್ನಲ್ಲಿ ಖೇದವು ಸುಳಿಯದಿರಲಿ (೧–೨). ರಾಘವ, ನಮಗೆ ಸೀತಾವೃತ್ತಾಂತವು ತಿಳಿದಮೇಲೆ – ವೈರಿಯು ಎಲ್ಲಿರುವನೆಂದು ಗೊತ್ತಾದಮೇಲೆ, ನಿನ್ನ ದುಃಖಕ್ಕೆ ಕಾರಣ ವೇನೆಂಬುದೇ ನನಗೆ ಗೊತ್ತಾಗದು ! ನೀನು ವಿವೇಕಶಾಲಿಯೂ ರಾಜನೀತಿ ಕೋವಿದನೂ ಮೇಧಾವಿಯೂ ಆಗಿದ್ದೀಯೆ. ಕೃತ್ಯಾಕೃತ್ಯಗಳನ್ನು ಬಲ್ಲ ಪಂಡಿತನಾಗಿದ್ದೀಯೆ. ಯೋಗಿಯು ಆತ್ಮಜ್ಞಾನಕ್ಕೆ ಘಾತಕವಾಗಿ ಕ್ಷುದ್ರವಾಗಿರುವ ಚಿತ್ತವ್ಯಾಪಾರವನ್ನು ತೊರೆಯುವಂತೆ, ನೀನು ಈ ವ್ಯಸನವನ್ನು ತೊರೆದುಬಿಡಬೇಕು (೩–೪).

ಸಮುದ್ರಂ ಲಂಘಯಿತ್ವಾ ತು ಮಹಾನಕ್ರಸಮಾ ಕುಲಮ್ ।
ಲಂಕಾಮಾರೋಹಯಿಷ್ಯಾಮೋ ಹನಿಷ್ಯಾಮಶ್ಚ ರಾವಣಮ್ ॥ ೫

ನಿರುತ್ಸಾಹಸ್ಯ ದೀನಸ್ಯ ಶೋಕಪರ್ಯಾಕುಲಾತ್ಮನಃ ।
ಸರ್ವಾರ್ಥಾ ವ್ಯವಸೀದಂತಿ ವ್ಯಸನಂ ಚಾಧಿಗಚ್ಛತಿ ॥ ೬

ಇಮೇ ಶೂರಾಃ ಸಮರ್ಥಾಶ್ಚ ಸರ್ವೇ ನೋ ಹರಿಯೂಥಪಾಃ ।
ತ್ವತ್ಪ್ರಿಯಾರ್ಥಂ ಕೃತೋತ್ಸಾಹಾಃ ಪ್ರವೇಷ್ಟುಮಪಿ ಪಾವಕಮ್ ॥ ೭

ಏಷಾಂ ಹರ್ಷೇಣ ಜಾನಾಮಿ ತರ್ಕಶ್ಚಾಸ್ತಿ ದೃಢೋ ಮಮ ।
ವಿಕ್ರಮೇಣ ಸಮಾನೇಷ್ಯೇ ಸೀತಾಂ ಹತ್ವಾ ಯಥಾ ರಿಪುಮ್ ॥ ೮

ರಾವಣಂ ಪಾಪಕರ್ಮಾಣಂ ತಥಾ ತ್ವಂ ಕರ್ತುಮರ್ಹಸಿ ।
ಸೇತುಮತ್ರ ಯಥಾ ಬದ್ಧ್ವಾ ಯಥಾ ಪಶ್ಯಾಮ ತಾಂ ಪುರೀಮ್॥ ೯

ತಸ್ಯ ರಾಕ್ಷಸರಾಜಸ್ಯ ತಥಾ ತ್ವಂ ಕುರು ರಾಘವ ।
ತಾಂ ದೃಷ್ಟ್ವಾ ತು ಪುರೀಂ ಲಂಕಾಂ ತ್ರಿಕೂಟಶಿಖರೇ ಸ್ಥಿತಾಮ್ ॥

---

ಮಹಾನಕ್ರಗಳಿಂದ ನಿಬಿಡವಾದ ಸಮುದ್ರವನ್ನು ಲಂಘಿಸಿ, ನಾವು ಲಂಕೆಯ ಮೇಲೆ ಏರಿಹೋಗುವೆವು. ರಾವಣನನ್ನು ಕೊಂದುಹಾಕುವೆವು ! ಯಾವಾತನು ಉತ್ಸಾಹವಿಲ್ಲದೆ ದೈನ್ಯದಿಂದ ಚಿಂತಾವ್ಯಾಕುಲನಾಗಿರುವನೋ, ಆತನ ಸರ್ವಕಾರ್ಯಗಳೂ ಹಾಳಾಗುತ್ತವೆ. ವ್ಯಸನವು ಅಧಿಕವಾಗುತ್ತದೆ (೫–೬). ನಮ್ಮ ಈ ಕಪಿನಾಯಕರು ಶೂರರೂ ಕಾರ್ಯದಕ್ಷರೂ ಆಗಿದ್ದಾರೆ. ನಿನ್ನ ಸಂತೋಷಕ್ಕಾಗಿ ಇವರು ಬೆಂಕಿಯಲ್ಲಿ ಬೀಳಲೂ ಹಿಂಜರಿಯತಕ್ಕವರಲ್ಲ! ಇವರ ಹರ್ಷವನ್ನು ಕಂಡೇ ಕಾರ್ಯಸಿದ್ಧಿಯಾಗುವುದೆಂದು ನನಗೆ ನಂಬಿಕೆಯಾಗಿದ. ನಮ್ಮ ವಿಕ್ರಮವನ್ನು ಮರೆಸಿ, ಶತ್ರುವನ್ನು ಸಂಹರಿಸಿ, ಸೀತಾದೇವಿಯನ್ನು ತರಬಲ್ಲೆನೆಂದು ಲಕ್ಕಹಾಕಿ ದೃಢಪಡಿಸಿಕೊಂಡಿದ್ದೇನೆ! (೭–೮). ಪಾಪಿಯಾದ ರಾವಣನನ್ನು ಸಂಹರಿಸುವುದು ದಿಟ. ನೀನು ಉತ್ಸಾಹಪೂರ್ಣನಾಗಿ ನಮಗೆ ಬೆಂಬಲವನ್ನು ಕೊಡುತ್ತಿದ್ದರೆ ಸಾಕು! ಸಮುದ್ರಕ್ಕೆ ಸೇತುವೆಯನ್ನಾದರೂ ಕಟ್ಟಿ ಆ ರಾಕ್ಷಸರಾಜನ ಲಂಕೆಗೆ ಹೋಗೋಣ. ನಮ್ಮನ್ನು ಹುರಿದುಂಬಿಸುತ್ತಿರು, ರಾಘವ, ತ್ರಿಕೂಟಶಿಖರದಲ್ಲಿರುವ ಲಂಕೆಯು ನಮ್ಮ ಕಣ್ಣಿಗೆ ಬಿದ್ದರೆ ಸಾಕು, ಯುದ್ಧದಲ್ಲಿ ರಾವಣನು ಮಡಿದುರುಳಿದನೆಂದೇ ತಿಳಿ!

ಹತಂ ಚ ರಾವಣಂ ಯುದ್ಧೇ ದರ್ಶನಾದುಪಧಾರಯ ।
ಅಬದ್ಧ್ವಾ ಸಾಗರೇ ಸೇತುಂ ಘೋರೇ ತು ವರುಣಾಲಯೇ ॥ ೧೧

ಲಂಕಾ ನೋ ಮರ್ದಿತುಂ ಶಕ್ಯಾ ಸೇಂದ್ರೈರಪಿ ಸುರಾಸುರೈಃ ।
ಸೇತುರ್ಬದ್ಧಃ ಸಮುದ್ರೇ ಚ ಯಾವಲ್ಲಂಕಾಸಮೀಪತಃ ॥ ೧೨

ಸರ್ವಂ ತೀರ್ಣಂ ಚ ಮೇ ಸೈನ್ಯಂ ಜಿತಮಿತ್ಯುಪಧಾರಯ ।
ಇಮೇ ಹಿ ಸಮರೇ ಶೂರಾ ಹರಯಃ ಕಾಮರೂಪಿಣಃ ॥ ೧೩

ತದಲಂ ವಿಕ್ಲವಾ ಬುದ್ಧೀ ರಾಜನ್ ಸರ್ವಾರ್ಥನಾಶಿನೀ ।
ಪುರುಷಸ್ಯ ಹಿ ಲೋಕೇಽಸ್ಮಿನ್ ಶೋಕಃ ಶೌರ್ಯಾಪಕರ್ಷಣಃ ॥ ೧೪

ತನ್ನ ಕಾರ್ಯಂ ಮನುಷ್ಯೇಣಾಂ ಶೌಂಡೀರ್ಯಮವಲಂಬತಾ ।
ತದಲಂಕರಣಾಯೈವ ಕರ್ತುರ್ಭವತಿ ಸತ್ವರಮ್ ॥ ೧೫

ಅಸ್ಮಿನ್ ಕಾಲೇ ಮಹಾಪ್ರಾಜ್ಞ ಸತ್ತ್ವಮಾತಿಷ್ಠ ತೇಜಸಾ ।
ಶೂರಾಣಾಂ ಹಿ ಮನುಷ್ಯೇಣ ತ್ವದ್ವಿಧಾನಾಂ ಮಹಾತ್ಮನಾಮ್ ॥ ೧೬

ವಿನಷ್ಟೇ ವಾ ಪ್ರನಷ್ಟೇ ವಾ ಕ್ಷಮಂ ನ ಹ್ಯನುಶೋಚಿತುಮ್ ।
ತ್ವಂ ತು ಬುದ್ಧಿಮತಾಂ ಶ್ರೇಷ್ಠಃ ಸರ್ವಶಾಸ್ತ್ರಾರ್ಥಕೋವಿದಃ ॥ ೧೭

---

(೯–೧೦) ವರುಣಾಲಯವೆನಿಸಿದ ಘೋರಸಾಗರದಲ್ಲಿ ಸೇತುವೆಯನ್ನು ಕಟ್ಟದೆ, ಲಂಕೆಯನ್ನು ಮರ್ದಿಸುವುದು ಅಸಾಧ್ಯ. ಇಂದ್ರಸಹಿತರಾಗಿ ದೇವಾಸುರರೇ ಬಂದರೂ ಸಾಧ್ಯವಿಲ್ಲ. ಸೇತುವೆಯನ್ನು ನಿರ್ಮಿಸಿದಮೇಲೆ ನನ್ನ ಈ ಕಪಿಸೇನೆಯು ಲಂಕಾಸಮೀಪಕ್ಕೆ ಹೋದೊಡನೆ, ಶ್ರೀರಾಮ, ನಾವು ಗೆದ್ದೆವೆಂದೇ ತಿಳಿ. ಕಾಮರೂಪಿಗಳಾದ ಈ ವಾನರ ವೀರರು ಯುದ್ಧದಲ್ಲಿ ಗಟ್ಟಿಗರು (೧೧–೧೩). ಆದ್ದರಿಂದ, ರಾಜಕುಮಾರ, ಸರ್ವಕಾರ್ಯಗಳಿಗೂ ಘಾತುಕವಾದ ಈ ಬುದ್ಧಿ ವೈಕ್ಲವ್ಯವನ್ನು ಪರಿತ್ಯಜಿಸು. ಶೋಕವೆಂಬುದು ಪುರುಷನ ಶೌರ್ಯವನ್ನು ಹಿಡಿದು ಹೀಚುವಂತಹದು. ವೀರ್ಯದ ಕೆಚ್ಚನ್ನು ನಂಬಿದವನು ಚಿಂತಾಕುಲನಾಗಬಾರದು. ವೀರ್ಯದ ಕೆಚ್ಚೆಂಬುದೇ ಕಾರ್ಯನಿಷ್ಠನಿಗೆ ಭೂಷಣ (೧೪–೧೫). ಆದ್ದರಿಂದ, ಎಲೈ ಮಹಾಪ್ರಾಜ್ಞನೆ, ಈ ಸಮಯದಲ್ಲಿ ನಿನ್ನ ತೇಜೋಗುಣದಿಂದ ಶೋಕವನ್ನು ಬದಿಗೊತ್ತಿ ಧೈರ್ಯವನ್ನವಲಂಬಿಸು. ಶೂರರಾದ ನಿನ್ನಂತಹ ಮಹಾಪುರುಷರಿಗೆ

**ಮದ್ವಿಧೈಃ ಸಚಿವೈಃ ಸಾರ್ಧಮರಿಂ ಜೇತುಮಿಹಾರ್ಹಸಿ ।**
**ನ ಹಿ ಪಶ್ಯಾಮ್ಯಹಂ ಕಂಚಿತ್ತ್ರಿಷು ಲೋಕೇಷು ರಾಘವ ॥ ೧೮**

**ಗೃಹೀತಧನುಷೋ ಯಸ್ತೇ ತಿಷ್ಠೇದಭಿಮುಖೋ ರಣೇ ।**
**ವಾನರೇಷು ಸಮಾಸಕ್ತಂ ನ ತೇ ಕಾರ್ಯಂ ವಿಪತ್ಸ್ಯತೇ ॥ ೧೯**

**ಅಚಿರಾದ್ದ್ರಕ್ಷ್ಯಸೇ ಸೀತಾಂ ತೀರ್ತ್ವಾ ಸಾಗರಮಕ್ಷಯಮ್ ।**
**ತದಲಂ ಶೋಕಮಾಲಂಬ್ಯ ಕ್ರೋಧಮಾಲಂಬ ಭೂಪತೇ ॥ ೨೦**

**ನಿಶ್ಚೇಷ್ಟಾಃ ಕ್ಷತ್ರಿಯಾ ಮಂದಾಃ ಸರ್ವೇ ಚಂಡಸ್ಯ ಬಿಭ್ಯತಿ ।**
**ಲಂಘನಾರ್ಥಂ ಚ ಘೋರಸ್ಯ ಸಮುದ್ರಸ್ಯ ನದೀಪತೇಃ ॥ ೨೧**

**ಸಹಾಸ್ಮಾಭಿರಿಹೋಪೇತಃ ಸೂಕ್ಷ್ಮಬುದ್ಧಿರ್ವಿಚಾರಯ ।**
**ಸರ್ವಂ ತೀರ್ಣಂ ಚ ಮೇ ಸೈನ್ಯಂ ಜಿತಮಿತ್ಯುಪಧಾರಯ ॥ ೨೨**

**ಇಮೇ ಹಿ ಸಮರೇ ಶೂರಾ ಹರಯಃ ಕಾಮರೂಪಿಣಃ ।**
**ತಾನರೀನ್ ವಿಧಮಿಷ್ಯಂತಿ ಶಿಲಾಪಾದಪವೃಷ್ಟಿಭಿಃ ॥ ೨೩**

---

ಕೈದಪ್ಪಿದ ವಿಷಯದಲ್ಲಾಗಲಿ, ಸಂಪೂರ್ಣವಾಗಿ ನಷ್ಟವಾದ ವಿಷಯದಲ್ಲಾಗಲಿ, ಶೋಕಿಸುವುದು ತರವಲ್ಲ. ನೀನಾದರೋ ಬುದ್ಧಿಶಾಲಿಗಳಲ್ಲಿ ಶ್ರೇಷ್ಠನಾಗಿದ್ದೀಯೆ. ಸಮಸ್ತಶಾಸ್ತ್ರಾರ್ಥಗಳನ್ನೂ ಬಲ್ಲವನಾಗಿದ್ದೀಯೆ (೧೬–೧೭). ನನ್ನಂತಹ ಸಚಿವರ ನೆರವಿನಿಂದ ವೈರಿಯನ್ನು ಗೆಲ್ಲಲು ಸಮರ್ಥನಾಗಿದ್ದೀಯೆ. ರಾಘವ, ರಣರಂಗದಲ್ಲಿ ನೀನು ಧನುರ್ಧಾರಿಯಾಗಿ ನಿಂತೆಯಾದರೆ, ನಿನ್ನನ್ನೆದುರಿಸಬಲ್ಲ ಗಂಡಸನ್ನು ಮೂರು ಲೋಕದಲ್ಲಿಯೂ ನಾನು ಕಾಣೆ. ನಮ್ಮ ವಾನರರಿಗೆ ವಹಿಸಿದ ಕಾರ್ಯಭಾರವು ಎಂದಿಗೂ ಕೆಡದು ! (೧೮–೧೯). ಸ್ವಲ್ಪ ದಿನಗಳಲ್ಲಿಯೇ ಅಪಾರವಾದ ಸಾಗರವನ್ನು ದಾಟಿಹೋಗಿ ಸೀತಾದೇವಿಯನ್ನು ನೀನು ಕಾಣುವೆ. ಆದ್ದರಿಂದ, ಪೃಥ್ವೀಶ್ವರ, ಈ ದುಃಖವನ್ನು ದೂರಮಾಡಿ ಕೋಧೋದ್ದೀಪ್ತನಾಗು! ಉದ್ಯಮಶೀಲರಲ್ಲದ ಕ್ಷತ್ರಿಯರು ಮಂದಭಾಗ್ಯರಾಗುವರು. ಕ್ರೋಧೋದ್ದೀಪ್ತನನ್ನು ಕಂಡರೆ ಎಲ್ಲರೂ ಹೆದರಿ ನಡುಗುವರು ! ನದೀಪತಿಯೆನಿಸಿದ ಘೋರಸಾಗರವನ್ನೀಗ ನಾವು ದಾಟಬೇಕು (೨೦–೨೧). ಇದು ಹೇಗೆ ಸಾಧ್ಯವೆಂದು ಸೂಕ್ಷ್ಮಬುದ್ಧಿಯಾದ ನೀನು ನಮ್ಮೊಡನೆ ವಿಚಾರಮಾಡು. ನನ್ನ ಸೈನ್ಯವು ಕಡಲನ್ನು ದಾಟಿತೆಂದರೆ

**ಕಥಂಚಿತ್ ಪರಿಪಶ್ಯಾಮಿ ಲಂಘಿತಂ ವರುಣಾಲಯಮ್ ।**
**ಹತಮಿತ್ಯೇವ ತಂ ಮನ್ಯೇ ಯುದ್ಧೇ ಸಮಿತಿನಂದನ ॥ ೨೪**

**ಕಿಮುಕ್ತ್ವಾ ಬಹುಧಾ ಚಾಪಿ ಸರ್ವಥಾ ವಿಜಯೀ ಭವಾನ್ ।**
**ನಿಮಿತ್ತಾನಿ ಚ ಪಶ್ಯಾಮಿ ಮನೋ ಮೇ ಸಂಪ್ರಹೃಷ್ಯತಿ ॥ ೨೫**

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವಿತೀಯಃ ಸರ್ಗಃ

---

ಶ್ರೀರಾಮ, ಜಯವು ನಮಗೆ ದಕ್ಕಿತೆಂದೇ ತಿಳಿ. ಈ ವಾನರರು ಮಹಾ ಶೂರರು; ಕಾಮರೂಪಿಗಳು. ಬಂಡೆಗಳ–ಮರಗಳ ಮಳೆಯನ್ನೇ ಸುರಿಸಿ ಆ ಶತ್ರುಗಳನ್ನು ನಿರ್ನಾಮಗೈಯುವರು (೨೨–೨೩). ಹೇಗಾದರೂ ಆ ಕಡಲೊಂದನ್ನು ದಾಟುವ ಉಪಾಯ ಗೊತ್ತಾದರೆ, ರಾವಣನು ಯುದ್ಧದಲ್ಲಿ ಸತ್ತನೆಂದೇ ತಿಳಿಯುತ್ತೇನೆ! ಹೆಚ್ಚು ಮಾತನಾಡಿ ಪ್ರಯೋಜನವೇನು? ರಾಘವ, ಯುದ್ಧೋತ್ಸುಕನಾಗು. ವಿಜಯವು ನಿನ್ನ ಕೈಹಿಡಿಯಿತೆಂದು ತಿಳಿ. ನನಗೆ ಶುಭನಿಮಿತ್ತಗಳಾಗುತ್ತಿವೆ. ಮುಂದಿನ ಜಯಸೂಚಕವಾಗಿ ನನ್ನ ಮನಸ್ಸು ಹರ್ಷೋನ್ಮತ್ತವಾಗಿದೆ!'' ಎಂದನು (೨೪–೨೫).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಎರಡನೆಯ ಸರ್ಗ

---

## ತೃತೀಯಃ ಸರ್ಗಃ

ಲಂಕಾದುರ್ಗಾದಿ ಕಥನಮ್

ಸುಗ್ರೀವಸ್ಯ ವಚಃ ಶ್ರುತ್ವಾ ಹೇತುಮತ್ಪರಮಾರ್ಥವಿತ್ ।
ಪ್ರತಿಜಗ್ರಾಹ ಕಾಕುತ್ಸ್ಥೋ ಹನುಮಂತಮಥಾಬ್ರವೀತ್ ॥ ೧

ತಪಸಾ ಸೇತುಬಂಧೇನ ಸಾಗರೋಚ್ಛೋಷಣೇನ ವಾ ।
ಸರ್ವಥಾಪಿ ಸಮರ್ಥೋಽಸ್ಮಿ ಸಾಗರಸ್ಯಾಸ್ಯ ಲಂಘನೇ ॥ ೨

ಕತಿ ದುರ್ಗಾಣಿ ದುರ್ಗಾಯಾ ಲಂಕಾಯಾ ಬ್ರೂಹಿ ತಾನಿ ಮೇ ।
ಜ್ಞಾತುಮಿಚ್ಛಾಮಿ ತತ್ಸರ್ವಂ ದರ್ಶನಾದಿವ ವಾನರ ॥ ೩

ಬಲಸ್ಯ ಪರಿಮಾಣಂ ಚ ದ್ವಾರದುರ್ಗ ಕ್ರಿಯಾಮಪಿ ।
ಗುಪ್ತಿ ಕರ್ಮ ಚ ಲಂಕಾಯಾ ರಕ್ಷಸಾಂ ಸದನಾನಿ ಚ ॥ ೪

ಯಥಾಸುಖಂ ಯಥಾವಚ್ಚ ಲಂಕಾಯಾಮಸಿ ದೃಷ್ಟವಾನ್ ।
ಸರ್ವಮಾಚಕ್ಷ್ವ ತತ್ತ್ವೇನ ಸರ್ವಥಾ ಕುಶಲೋ ಹ್ಯಸಿ ॥ ೫

### ಸರ್ಗ ೩

ಹನುಮಂತನು ಶ್ರೀರಾಮನಿಗೆ ಲಂಕೆಯ ದುರ್ಗರಕ್ಷಣಾದಿ
ವ್ಯವಸ್ಥೆಗಳನ್ನು ತಿಳಿಸುವುದು.

ಸಾರಜ್ಞನಾದ ಕಾಕುತ್ಸ್ಥನು ಸುಗ್ರೀವನ ಯುಕ್ತಿಯುಕ್ತವಾದ ವಚನವನ್ನು ಅನುಮೋದಿಸಿ,ಹನುಮಂತನನ್ನು ನೋಡಿ "ಹನುಮಂತ, ಕಡಲನ್ನು ದಾಟಿಹೋಗುವ ಸಾಮರ್ಥ್ಯ ನನಗುಂಟು! ತಪಶ್ಶಕ್ತಿಯಿಂದಲೋ ಸೇತುವೆಯನ್ನು ಕಟ್ಟಿಯೋ ಅಥವಾ ಕಡಲನ್ನೆ ಒಣಗಿಸಿಯೋ ಅದನ್ನು ನಾನು ಲಂಘಿಸಿಹೋಗಬಲ್ಲನು (೧–೨). ವಾನರೋತ್ತಮ, ದುರ್ಗಮವೆನಿಸಿದ ಲಂಕಾನಗರಿಗಿರುವ ರಕ್ಷಣಾವಿಧಾನಗಳೆಷ್ಟು? ಯಾವುವು? ಅವನ್ನು ನನಗೆ ಹೇಳು. ಕಣ್ಣೆದುರಿಗೆ ನೋಡಿದಂತೆ ಅವುಗಳನ್ನು ವಿಶದವಾಗಿ ತಿಳಿಯಲು ಅಪೇಕ್ಷಿಸುತ್ತೇನೆ. ರಾಕ್ಷಸ ಸೇನೆಯ ಪರಿಮಾಣ, ದ್ವಾರದುರ್ಗಗಳ ನಿರ್ಮಾಣ, ರಕ್ಷಣಾವಿಧಾನ, ರಾಕ್ಷಸಗೃಹಗಳ ಸನ್ನಿವೇಶ – ಇವೆಲ್ಲವನ್ನೂ ಹೇಳು (೩–೪) ಲಂಕೆಯಲ್ಲಿ ನಿನಗೆ ಸೌಕರ್ಯವಾದಂತೆ ಯಾವಯಾವುದನ್ನು ನೋಡಿದ್ದೀಯೋ,

ಶ್ರುತ್ವಾ ರಾಮಸ್ಯ ವಚನಂ ಹನೂಮಾನ್ ಮಾರುತಾತ್ಮಜಃ ।
ವಾಕ್ಯಂ ವಾಕ್ಯವಿದಾಂ ಶ್ರೇಷ್ಠೋ ರಾಮಂ ಪುನರಥಾಬ್ರವೀತ್॥ ೬

ಶ್ರೂಯತಾಂ ಸರ್ವಮಾಖ್ಯಾಸ್ಯೇ ದುರ್ಗಕರ್ಮವಿಧಾನತಃ ।
ಗುಪ್ತಾ ಪುರೀ ಯಥಾ ಲಂಕಾ ರಕ್ಷಿತಾ ಚ ಯಥಾ ಬಲೈಃ ॥ ೭

ರಾಕ್ಷಸಾಶ್ಚ ಯಥಾ ಸ್ನಿಗ್ಧಾ ರಾವಣಸ್ಯ ಚ ತೇಜಸಾ ।
ಪರಾಂ ಸಮೃದ್ಧಿಂ ಲಂಕಾಯಾಃ ಸಾಗರಸ್ಯ ಚ ಭೀಮತಾಮ್ ॥ ೮

ವಿಭಾಗಂ ಚ ಬಲೌಘಸ್ಯ ನಿರ್ದೇಶಂ ವಾಹನಸ್ಯ ಚ ।
ಏವಮುಕ್ತ್ವಾ ಹರಿಶ್ರೇಷ್ಠಃ ಕಥಯಾಮಾಸ ತತ್ತ್ವತಃ ॥ ೯

ಹೃಷ್ಟಾ ಪ್ರಮುದಿತಾ ಲಂಕಾ ಮತ್ತದ್ವಿಪಸಮಾಕುಲಾ ।
ಮಹತೀ ರಥಸಂಪೂರ್ಣಾ ರಕ್ಷೋಗಣಸಮಾಕುಲಾ ॥ ೧೦

ವಾಜಿಭಿಶ್ಚ ಸುಸಂಪೂರ್ಣಾ ಸಾ ಪುರೀ ದುರ್ಗಮಾ ಪರೈಃ ।
ದೃಢಬದ್ಧ ಕವಾಟಾನಿ ಮಹಾಪರಿಘವಂತಿ ಚ ॥ ೧೧

---

ಅದೆಲ್ಲವನ್ನೂ ಯಥಾವತ್ತಾಗಿ ತಿಳಿಸು. ಆಂಜನೇಯ, ನೀನು ಸರ್ವವಿಧದಲ್ಲಿಯೂ ಸಮರ್ಥ'' ಎಂದು ಹೇಳಿದನು. ಶ್ರೀರಾಮನ ನುಡಿಯನ್ನು ಕೇಳಿ, ಮಹಾವಾಗ್ಮಿಯಾದ ಮಾರುತಾತ್ಮಜನು ''ಶ್ರೀರಾಮ, ಎಲ್ಲವನ್ನೂ ಹೇಳುವೆನು, ಕೇಳು. ಲಂಕಾಪುರಿಯು ದುರ್ಗರಚನಾವಿಧಾನದಿಂದಲೂ ರಾಕ್ಷಸಬಲದಿಂದಲೂ ಹೇಗೆ ರಕ್ಷಿತವಾಗಿದೆಯೆಂಬುದನ್ನು ತಿಳಿಸುವೆನು (೫-೭). ರಾಕ್ಷಸರು ರಾವಣನಲ್ಲಿ ಎಷ್ಟು ರಾಜಭಕ್ತಿಯಿಂದಿದ್ದಾರೆ, ಅವನ ತೇಜಸ್ಸಿನಿಂದ ಲಂಕೆಯು ಎಂತಹ ಉತ್ಕೃಷ್ಟವಾದ ಸಮೃದ್ಧಿಯನ್ನು ಪಡೆದಿದೆ, ಮಹಾಸಾಗರವು ಎಷ್ಟು ಭೀಷಣವಾಗಿದೆ, ದೈತ್ಯಸೇನೆಯ ವಿಭಾಗವೂ ವಾಹನಗಳ ಸಂಪತ್ತೂ ಹೇಗಿದೆ ಎಂಬುದೆಲ್ಲವನ್ನೂ ವಿವರಿಸುವೆನು'' ಎಂದನು. ಅನಂತರ ಆ ಕಪಿಶ್ರೇಷ್ಠನು ಸಕಲವನ್ನೂ ಯಥಾಸ್ಥಿತವಾಗಿ ವಿವರಿಸುತ್ತ ಇಂತೆಂದನು (೮-೯); ''ರಾಘವ, ಲಂಕೆಯು ಸರ್ವಸಮೃದ್ಧವಾಗಿ ಹರ್ಷದಿಂದ ಬೀಗುತ್ತಿದೆ. ಆ ವಿಶಾಲನಗರವು ಮದ್ದಾನೆಗಳಿಂದಲೂ ರಥಗಳಿಂದಲೂ ರಾಕ್ಷಸಭಟರಿಂದಲೂ ಕುದುರೆಗಳಿಂದಲೂ ತುಂಬಿದೆ. ಶತ್ರುಗಳಿಗೆ ದುರ್ಧರ್ಷವಾಗಿದೆ. ಮಹಾದ್ವಾರದ ಕದಗಳು ಪ್ರಬಲವಾದ ಕಬ್ಬಿಣದ ಅಗುಳಿಗಳಿಂದ ಕೀಲಿತವಾಗಿ ದೃಢ

ಚತ್ವಾರಿ ವಿಪುಲಾನ್ಯಸ್ಯಾ ದ್ವಾರಾಣಿ ಸುಮಹಾಂತಿ ಚ ।
ತತ್ರೇಷೂಪಲಯಂತ್ರಾಣಿ ಬಲವಂತಿ ಮಹಾಂತಿ ಚ ॥ ೧೨

ಆಗತಂ ಪ್ರತಿಸೈನ್ಯಂ ತೈಸ್ತತ್ರ ಪ್ರತಿನಿವಾರ್ಯತೇ ।
ದ್ವಾರೇಷು ಸಂಸ್ಕೃತಾ ಭೀಮಾಃ ಕಾಲಾಯಸಮಯಾಃ ಶಿತಾಃ ॥ ೧೩

ಶತಶೋ ರಚಿತಾ ವೀರೈಃ ಶತಘ್ನ್ಯೋ ರಕ್ಷಸಾಂ ಗಣೈಃ ।
ಸೌವರ್ಣಶ್ಚ ಮಹಾಂಸ್ತಸ್ಯಾಃ ಪ್ರಾಕಾರೋ ದುಷ್ಪ್ರಧರ್ಷಣಃ ॥ ೧೪

ಮಣಿವಿದ್ರುಮವೈದೂರ್ಯಮುಕ್ತಾವಿರಚಿತಾಂತರಃ ।
ಸರ್ವತಶ್ಚ ಮಹಾಭೀಮಾಃ ಶೀತತೋಯವಹಾಃ ಶುಭಾಃ ॥ ೧೫

ಅಗಾಧಾ ಗ್ರಾಹವತ್ಯಶ್ಚ ಪರಿಖಾ ಮೀನಸೇವಿತಾಃ ।
ದ್ವಾರೇಷು ತಾಸಾಂ ಚತ್ವಾರಃ ಸಂಕ್ರಮಾಃ ಪರಮಾಯತಾಃ ॥ ೧೬

ಯಂತ್ರೈರುಪೇತಾ ಬಹುಭಿರ್ಮಹದ್ಭಿರ್ಗೃಹಪಙ್ಕ್ತಿಭಿಃ ।
ತ್ರಾಯಂತೇ ಸಂಕ್ರಮಾಸ್ತತ್ರ ಪರಸೈನ್ಯಾಗಮೇ ಸತಿ ॥ ೧೭

---

ಬದ್ಧವಾಗಿವೆ (೧೦–೧೧). ಲಂಕಗೆ ಇಂತಹ ದೃಢಕವಾಟಗಳುಳ್ಳ ನಾಲ್ಕು ಮಹಾದ್ವಾರಗಳಿವೆ. ಈ ದ್ವಾರಗಳಲ್ಲಿ ಬಾಣಗಳನ್ನೂ ಶಿಲೆಗಳನ್ನೂ ವರ್ಷಿಸುವ ಪ್ರಬಲವಾದ ಮಹಾಯಂತ್ರಗಳಿವೆ. ಅಲ್ಲಿಗೆ ಬಂದ ಶತ್ರುಸೈನ್ಯಗಳನ್ನು ಈ ಯಂತ್ರಗಳೇ ಅಡ್ಡಗಟ್ಟುತ್ತವೆ! ಅಲ್ಲದೆ ಬಾಗಿಲುಗಳಲ್ಲಿ ತೀಕ್ಷ್ಣವೇಗವುಳ್ಳ ಅದ್ಭುತಾಕಾರದ ನೂರಾರು ಉಕ್ಕಿನ ಶತಘ್ನಿಗಳನ್ನು ವೀರರಾದ ರಾಕ್ಷಸರು ಸ್ಥಾಪಿಸಿದ್ದಾರೆ. ಲಂಕೆಯ ಸುತ್ತಲೂ ವಿಶಾಲವೂ ದುರ್ಧರ್ಷವೂ ಆದ ಸುವರ್ಣಮಯ ಪ್ರಾಕಾರವಿದೆ (೧೨–೧೪). ಪ್ರಾಕಾರದ ಗೋಡೆಯಮೇಲೆ ವಜ್ರ, ಹವಳ, ವೈಡೂರ್ಯ, ಮುತ್ತುಗಳಿಂದ ಅಲ್ಲಲ್ಲಿ ಚಿತ್ರಿಸಿದ್ದಾರೆ. ಸುತ್ತಲೂ ಭೀಕರವಾದ ಕಂದಕಗಳಿವೆ. ಅದರಲ್ಲಿ ಅಗಾಧವಾಗಿ ಶೀತಲಜಲವು ಹರಿಯುತ್ತಿದೆ. ಕಂದಕಗಳಲ್ಲಿ ಮೊಸಳೆಗಳೂ ಮೀನುಗಳೂ ತುಂಬಿವೆ. ಆ ಕಂದಕಗಳಮೇಲೆ (ಸಂಚಾರಾರ್ಥವಾಗಿ) ವಿಸ್ತಾರವಾದ ಸಂಕ್ರಮಗಳನ್ನು ನಿರ್ಮಿಸಿದ್ದಾರೆ (೧೫–೧೬). ಆ ಸಂಕ್ರಮಗಳನ್ನು ಮೇಲೆತ್ತುವುದಕ್ಕೂ ಮತ್ತೆ ಹಾಸುವುದಕ್ಕೂ ಉಪಯುಕ್ತವಾದ ದೊಡ್ಡ ದೊಡ್ಡ ಯಂತ್ರಗಳು ಅಲ್ಲಿ ಬಹಳ ಇವೆ. ಸಮೀಪದಲ್ಲಿ ಕಾವಲುಗಾರರ ಮನೆಗಳಿವೆ. ಶತ್ರುಸೈನ್ಯ

ಯಂತ್ರೈಸ್ತೈರವಕೀರ್ಯಂತೇ ಪರಿಘಾಸು ಸಮಂತತಃ ।
ಏಕಸ್ತ್ವಕಂಪ್ಯೋ ಬಲವಾನ್ ಸಂಕ್ರಮಃ ಸುಮಹಾನ್ ದೃಢಃ ॥ ೧೮

ಕಾಂಚನೈರ್ಬಹುಭಿಃ ಸ್ತಂಭೈರ್ವೇದಿಕಾಭಿಶ್ಚ ಶೋಭಿತಃ ।
ಸ್ವಯಂ ಪ್ರಕೃತಿಸಂಪನ್ನೋ ಯುಯುತ್ಸೂ ರಾಮ ರಾವಣಃ ॥ ೧೯

ಉತ್ಥಿತಶ್ಚಾಪ್ರಮತ್ತಶ್ಚ ಬಲಾನಾಮನುದರ್ಶನೇ ।
ಲಂಕಾ ಪುನರ್ನಿರಾಲಂಬಾ ದೇವದುರ್ಗಾ ಭಯಾವಹಾ ॥ ೨೦

ನಾದೇಯಂ ಪಾರ್ವತಂ ವಾನ್ಯಂ ಕೃತ್ರಿಮಂ ಚ ಚತುರ್ವಿಧಮ್ ।
ಸ್ಥಿತಾ ಪಾರೇ ಸಮುದ್ರಸ್ಯ ದೂರಪಾರಸ್ಯ ರಾಘವ ॥ ೨೧

ನೌಪಥೋಽಪಿ ಚ ನಾಸ್ತ್ಯತ್ರ ನಿರಾದೇಶಶ್ಚ ಸರ್ವತಃ ।
ಶೈಲಾಗ್ರೇ ರಚಿತಾ ದುರ್ಗಾ ಸಾ ಪೂರ್ದೇವಪುರೋಪಮಾ ॥ ೨೨

---

ವೇನಾದರೂ ಬಂದರೆ, (ಆ ಯಂತ್ರಗಳು ಸಂಕ್ರಮಗಳನ್ನು ಮೇಲಕ್ಕೆ ಹಾರಿಸಿ) ಶತ್ರುಗಳು ಮುಂದೆ ಬರದಂತೆ ಮಾಡಿ ಲಂಕೆಯನ್ನು ರಕ್ಷಿಸುತ್ತವೆ. ಬೇಕಾದಾಗ ಆ ಯಂತ್ರಗಳೇ ಸಂಕ್ರಮಗಳನ್ನು ಕೆಳಗೆ ಹಾಸಿ ಜನಸಂಚಾರಕ್ಕೆ ಅವಕಾಶ ಮಾಡಿಕೊಡುತ್ತವೆ. ಅದರಲ್ಲಿಯೂ (ಉತ್ತರ ದ್ವಾರದಲ್ಲಿರುವ) ಒಂದು ಸಂಕ್ರಮವು ಬಹಳ ಅಗಲವಾಗಿಯೂ ದೃಢವಾಗಿಯೂ ಇದೆ. ಅದನ್ನು ಅಲ್ಲಾಡಿಸಲು ಶಕ್ಯವಿಲ್ಲ (೧೭–೧೮). ಅದಕ್ಕೆ ಆಧಾರವಾಗಿ ಕಂದಕದಲ್ಲಿ ಅನೇಕ ಸುವರ್ಣಸ್ತಂಭಗಳಿವೆ. ಕಾವಲಿರುವ ರಾಕ್ಷಸಭಟರು ಕುಳ್ಳಿರುವುದ ಕ್ಕಾಗಿ ವೇದಿಕೆಗಳಿವೆ. ಶ್ರೀರಾಮ, ರಾವಣನು ಸೇನಾಧಿಕಾರಿಗಳಿಂದ ಯುಕ್ತ ನಾಗಿ ಸೇನಾಬಲವನ್ನು ಪರಿಶೀಲಿಸುವುದರಲ್ಲಿ ಅತ್ಯಂತ ಜಾಗರೂಕನಾಗಿದ್ದಾನೆ. ಸದಾ ಎಚ್ಚರಿಕೆಯಿಂದ ಯುದ್ಧೋದ್ಯಮದಲ್ಲಿಯೇ ಇರುತ್ತಾನೆ. ಅಲ್ಲದೆ ಲಂಕಾಪಟ್ಟಣವು (ತ್ರಿಕೂಟಪರ್ವತದ ಶಿಖರದಲ್ಲಿರುವುದರಿಂದ) ಅದನ್ನೇರಿ ಹೋಗುವುದಕ್ಕೆ ತಕ್ಕ ಅವಲಂಬನವಿಲ್ಲ. ಅದು ದೇವತೆಗಳಿಗೂ ದುರ್ಗಮ ವಾಗಿ ಭಯಂಕರವಾಗಿದೆ (೧೯–೨೦). ರಾಘವ, ಜಲದುರ್ಗ, ಗಿರಿದುರ್ಗ, ವನದುರ್ಗ, ಕೃತ್ರಿಮದುರ್ಗ – ಎಂಬ ನಾಲ್ಕು ಬಗೆಯ ದುರ್ಗಗಳೂ ಅದನ್ನು ರಕ್ಷಿಸುತ್ತಿವೆ. ಅದು ಅಪಾರವಾದ ಸಮುದ್ರದ ಆಚೆಯ ದಡದಲ್ಲಿದೆ. ಲಂಕೆಗೆ ಹೋಗಲು ನೌಕಾಮಾರ್ಗವಿಲ್ಲ. ಯಾವ ಎಡೆಯಿಂದಲೂ ಅಲ್ಲಿಯ

ವಾಜಿವಾರಣಸಂಪೂರ್ಣಾ ಲಂಕಾ ಪರಮದುರ್ಜಯಾ ।
ಪರಿಘಾಶ್ಚ ಶತಘ್ನ್ಯಶ್ಚ ಯಂತ್ರಾಣಿ ವಿವಿಧಾನಿ ಚ ॥ ೨೩

ಶೋಭಯಂತಿ ಪುರೀಂ ಲಂಕಾಂ ರಾವಣಸ್ಯ ದುರಾತ್ಮನಃ ।
ಅಯುತಂ ರಕ್ಷಸಾಮತ್ರ ಪೂರ್ವದ್ವಾರಂ ಸಮಾಶ್ರಿತಮ್ ॥ ೨೪

ಶೂಲಹಸ್ತಾ ದುರಾಧರ್ಷಾಃ ಸರ್ವೇ ಖಡ್ಗಾಗ್ರಯೋಧಿನಃ ।
ನಿಯುತಂ ರಕ್ಷಸಾಮತ್ರ ದಕ್ಷಿಣದ್ವಾರಮಾಶ್ರಿತಮ್ ॥ ೨೫

ಚತುರಂಗೇಣ ಸೈನ್ಯೇನ ಯೋಧಾಸ್ತತ್ರಾಪ್ಯನುತ್ತಮಾಃ ।
ಪ್ರಯುತಂ ರಕ್ಷಸಾಮತ್ರ ಪಶ್ಚಿಮದ್ವಾರಮಾಶ್ರಿತಮ್ ॥ ೨೬

ಚರ್ಮಖಡ್ಗಧರಾಃ ಸರ್ವೇ ತಥಾ ಸರ್ವಾಸ್ತ್ರಕೋವಿದಾಃ ।
ನ್ಯರ್ಬುದಂ ರಕ್ಷಸಾಮತ್ರ ಉತ್ತರದ್ವಾರಮಾಶ್ರಿತಮ್ ॥ ೨೭

ರಥಿನಶ್ಚಾಶ್ವವಾಹಾಶ್ಚ ಕುಲಪುತ್ರಾಃ ಸುಪೂಜಿತಾಃ ।
ಶತಶೋಽಥ ಸಹಸ್ರಾಣಿ ಮಧ್ಯಮಂ ಸ್ಕಂಧಮಾಶ್ರಿತಾಃ ॥ ೨೮

---

ವೃತ್ತಾಂತವನ್ನು ತಿಳಿಯಲು ಅವಕಾಶವಿಲ್ಲ. ಆ ಲಂಕಾನಗರವು ತ್ರಿಕೂಟ ಶೈಲಾಗ್ರದಲ್ಲಿದೆ. ದೇವನಗರದಂತೆ ಅಂತರಿಕ್ಷದಲ್ಲಿದೆ (೨೧–೨೨). ಅಶ್ವಸೈನ್ಯ ಗಜಸೈನ್ಯಗಳಿಂದ ಸಜ್ಜಾದ ಲಂಕೆಯನ್ನು ವಶಪಡಿಸಿಕೊಳ್ಳುವುದು ಅತ್ಯಂತ ದುಷ್ಕರವೇ ಸರಿ. ಕಂದಕಗಳೂ ಶತಘ್ನಿಗಳೂ ವಿವಿಧ ಯಂತ್ರಗಳೂ ದುರಾತ್ಮನಾದ ಆ ರಾವಣನ ಲಂಕಾಪುರಕ್ಕೆ ಒಂದು ಶೋಭೆಯನ್ನುಂಟುಮಾಡಿವೆ. ನಗರದ ಪೂರ್ವದ್ವಾರದಲ್ಲಿ ಹತ್ತುಸಾವಿರ ರಾಕ್ಷಸಭಟರು ಕಾವಲಿದ್ದಾರೆ (೨೩–೨೪). ಅವರೆಲ್ಲರೂ ಶೂಲಗಳನ್ನೂ ಖಡ್ಗಗಳನ್ನೂ ಹಿಡಿದು ಹೋರಾಡುವ ಮಹಾಶೂರರು. ದಕ್ಷಿಣದ್ವಾರದಲ್ಲಿ ಒಂದು ಲಕ್ಷ ರಾಕ್ಷಸರಿದ್ದಾರೆ. ಅವರು ಚತುರಂಗಸೇನೆಯೊಡನೆ ಸಜ್ಜಾಗಿ ನಿಂತ ವೀರಯೋದರು. ಪಶ್ಚಿಮದ್ವಾರದಲ್ಲಿ ಹತ್ತುಲಕ್ಷ ಸೈನಿಕರಿದ್ದಾರೆ (೨೫–೨೬). ಅವರೆಲ್ಲರೂ ಡಾಲುಗಳನ್ನೂ ಕತ್ತಿಗಳನ್ನೂ ಹಿಡಿದಿರುತ್ತಾರೆ. ಎಲ್ಲರೂ ಸರ್ವಾಸ್ತ್ರಕೋವಿದರು. ಉತ್ತರದ್ವಾರದಲ್ಲಿ ಮಾತ್ರ ನೂರು ಕೋಟಿ ರಾಕ್ಷಸರಿದ್ದಾರೆ. ಅವರಲ್ಲಿ ಕೆಲವರು ರಥಿಕರು, ಕೆಲವರು ಅಶ್ವಾರೋಹಿಗಳಾದ ರಾವುತರು. ಸರ್ವರೂ ಉತ್ತಮ ಕುಲದಲ್ಲಿ ಜನಿಸಿ ರಾವಣನ ಗೌರವಕ್ಕೆ ಪಾತ್ರರಾಗಿದ್ದಾರೆ. ಅಲ್ಲದೆ ಲಂಕೆಯ

ಯಾತುಧಾನಾ ದುರಾಧರ್ಷಾಃ ಸಾಗ್ರಕೋಟಿಶ್ಚ ರಕ್ಷಸಾಮ್ ।
ತೇ ಮಯಾ ಸಂಕ್ರಮಾ ಭಗ್ನಾಃ ಪರಿಖಾಶ್ಚಾವಪೂರಿತಾಃ ॥ ೨೯

ದಗ್ಧಾ ಚ ನಗರೀ ಲಂಕಾ ಪ್ರಾಕಾರಾಶ್ಚಾವಸಾದಿತಾಃ ।
ಬಲೈಕದೇಶಃ ಕ್ಷಪಿತೋ ರಾಕ್ಷಸಾನಾಂ ಮಹಾತ್ಮನಾಮ್ ॥ ೩೦

ಯೇನ ಕೇನ ಚ ಮಾರ್ಗೇಣ ತರಾಮ ವರುಣಾಲಯಮ್ ।
ಹತೇತಿ ನಗರೀ ಲಂಕಾ ವಾನರೈರವಧಾರ್ಯತಾಮ್ ॥ ೩೧

ಅಂಗದೋ ದ್ವಿವಿದೋ ಮೈಂದೋ ಜಾಂಬವಾನ್ ಪನಸೋ ನಲಃ ।
ನೀಲಃ ಸೇನಾಪತಿಶ್ಚೈವ ಬಲಶೇಷೇಣ ಕಿಂ ತವ ॥ ೩೨

ಪ್ಲವಮಾನಾ ಹಿ ಗತ್ವಾ ತಾಂ ರಾವಣಸ್ಯ ಮಹಾಪುರೀಮ್ ।
ಸಪರ್ವತವನಾಂ ಭಿತ್ತ್ವಾ ಸಖಾತಾಂ ಸಪ್ರತೋರಣಾಮ್ ॥ ೩೩

---

ನಡುವೆ ನೂರುಗಟ್ಟಲೆ—ಸಾವಿರಗಟ್ಟಲೆ ರಾಕ್ಷಸರು ಕಾವಲಾಗಿದ್ದಾರೆ (೨೭–೨೮). ದುರ್ಧರ್ಷರಾದ ಆ ರಾಕ್ಷಸರ ಸಂಖ್ಯೆ ಒಂದು ಕೋಟಿಗಿಂತ ಹೆಚ್ಚಾಗಬಹುದು. ಆದರೆ, ಶ್ರೀರಾಮ, ನಾನು ಆ ಸಂಕ್ರಮಗಳನ್ನು ಕುಟ್ಟಿ ಒಡೆದು ಚೆಲ್ಲಿ ಕಂದಕಗಳನ್ನು ತಕ್ಕಮಟ್ಟಿಗೆ ಮುಚ್ಚಿಬಿಟ್ಟಿದ್ದೇನೆ! ಲಂಕೆಯನ್ನು ಸುಟ್ಟುರುಹಿ ಪ್ರಾಕಾರಗಳನ್ನು ಒಡೆದು ಹಾಕಿದ್ದೇನೆ! ಬಲಾಢ್ಯರಾದ ರಾಕ್ಷಸರ ಸೈನ್ಯದಲ್ಲಿ ಒಂದು ಭಾಗವನ್ನೇ ನಿರ್ನಾಮಮಾಡಿದ್ದೇನೆ! (೨೯–೩೦). ಯಾವುದಾದರೊಂದು ಉಪಾಯದಿಂದ ಕಡಲನ್ನು ನಾವು ದಾಟೋಣ! ಈ ವಾನರವೀರರು ಲಂಕಾನಗರವನ್ನು ಅಳಿಸಿಹಾಕಿದರೆಂದೇ ತಿಳಿದುಕೊ! ಈ ಅಂಗದ, ದ್ವಿವಿದ, ಮೈಂದ, ಜಾಂಬವಂತ, ಪನಸ, ನಳ, ಸೇನಾಪತಿ ಯಾದ ಈ ನೀಲ – ಇವರಿಷ್ಟು ಮಂದಿಯೇ ಸಾಕು ! ಉಳಿದ ಕಪಿಸೇನೆಯಿಂದ ನಿನಗೆ ಆಗಬೇಕಾದ್ದೇನಿದೆ ! (೩೧–೩೨). ಈ ವೀರರು ಆಕಾಶಮಾರ್ಗ ದಿಂದಲೇ ಸಾಗಿ, ರಾವಣನ ಆ ಲಂಕೆಯನ್ನು ಕಿತ್ತು ತರಬಲ್ಲರು. ಅಲ್ಲಿರುವ ಪರ್ವತಾರಣ್ಯಗಳನ್ನೂ ಕಂದಕ ತೋರಣ ಪ್ರಾಕಾರಗಳನ್ನೂ ರಾಕ್ಷಸಭವನ ಗಳನ್ನೂ ಹುಡಿಗರೆದು ತಂದೊಪ್ಪಿಸಬಲ್ಲರು ! ಆದ್ದರಿಂದ, ಓ ಸ್ವಾಮಿ, ಕೂಡಲೆ

ಸಪ್ರಾಕಾರಾಂ ಸಭವನಾಮಾನಯಿಷ್ಯಂತಿ ರಾಘವ ।
ಏವಮಾಜ್ಞಾಪಯ ಕ್ಷಿಪ್ರಂ ಬಲಾನಾಂ ಸರ್ವಸಂಗ್ರಹಮ್ ॥ ೩೪

ಮುಹೂರ್ತೇನ ತು ಯುಕ್ತೇನ ಪ್ರಸ್ಥಾನಮಭಿರೋಚಯ ॥

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತೃತೀಯಃ ಸರ್ಗಃ

------

## ಚತುರ್ಥಃ ಸರ್ಗಃ

ರಾಮಾಭಿಷೇಣನಮ್

ಶ್ರುತ್ವಾ ಹನುಮತೋ ವಾಕ್ಯಂ ಯಥಾವದನುಪೂರ್ವಶಃ ।
ತತೋಽಬ್ರವೀನ್ಮಹಾತೇಜಾ ರಾಮಃ ಸತ್ಯಪರಾಕ್ರಮಃ ॥ ೧

ಯಾಂ ನಿವೇದಯಸೇ ಲಂಕಾಂ ಪುರೀಂ ಭೀಮಸ್ಯ ರಕ್ಷಸಃ ।
ಕ್ಷಿಪ್ರಮೇನಾಂ ಮಥಿಷ್ಯಾಮಿ ಸತ್ಯಮೇತದ್ಬ್ರವೀಮಿ ತೇ ॥ ೨

---

ಈ ಕಪಿಸೇನೆಗಳು ಸರ್ವಸನ್ನದ್ಧತೆಯಿಂದ ಹೊರಡಬೇಕೆಂದು ಆಜ್ಞೆಮಾಡು. ಶುಭಮುಹೂರ್ತದಲ್ಲಿ ಪ್ರಯಾಣಮಾಡಲು ಸಮ್ಮತಿಸು!'' ಎಂದು ಹೇಳಿದನು. (೩೩–೩೪).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಮೂರನೆಯ ಸರ್ಗ

-------

## ಸರ್ಗ ೪

ಶ್ರೀರಾಮನ ಆಜ್ಞೆಯಂತೆ ಸುಗ್ರೀವನು ಕಪಿಸೇನೆಯೊಡನೆ ದಂಡಯಾತ್ರೆಗೆ ಹೊರಡುವುದು. ಸರ್ವರೂ ಸಮುದ್ರತೀರವನ್ನು ಸೇರುವುದು.

ಮಹಾತೇಜಸ್ವಿಯೂ ಸತ್ಯಪರಾಕ್ರಮನೂ ಆದ ಶ್ರೀರಾಮನು ಹನುಮಂತನ ಹೇಳಿಕೆಯನ್ನು ಕ್ರಮವಾಗಿ ಆಲಿಸಿ ''ಹನುಮಂತ, ಆ ರಾಕ್ಷಸನು ಭೀಕರನೆಂದೂ ಲಂಕೆಯು ದುರ್ಧರ್ಷವೆಂದೂ ತಿಳಿಸಿದೆಯಲ್ಲ

ಅಸ್ಮಿನ್ ಮುಹೂರ್ತೇ ಸುಗ್ರೀವ ಪ್ರಯಾಣಮಭಿರೋಚಯೇ ।
ಯುಕ್ತೋ ಮುಹೂರ್ತೋ ವಿಜಯಃ ಪ್ರಾಪ್ತೋ ಮಧ್ಯಂ ದಿವಾಕರಃ

ಅಸ್ಮಿನ್ ಮುಹೂರ್ತೇ ವಿಜಯೇ ಪ್ರಾಪ್ತೇ ಮಧ್ಯಂ ದಿವಾಕರೇ ।
ಸೀತಾಂ ಹೃತ್ವಾ ತು ಮೇ ಯಾತು ಕ್ವಾಸೌ ಯಾಸ್ಯತಿ ಯಾಸ್ಯತಃ ॥

ಸೀತಾ ಶ್ರುತ್ವಾಭಿಯಾನಂ ಮೇ ಆಶಾಮೇಷ್ಯತಿ ಜೀವಿತೇ ।
ಜೀವಿತಾಂತೇಽಮೃತಂ ಸ್ಪೃಷ್ಟ್ವಾ ಪೀತ್ವಾ ವಿಷಮಿವಾತುರಃ ॥ ೫

ಉತ್ತರಾ ಫಲ್ಗುನೀ ಹ್ಯದ್ಯ ಶ್ವಸ್ತು ಹಸ್ತೇನ ಯೋಕ್ಷ್ಯತೇ ।
ಅಭಿಪ್ರಯಾಮ ಸುಗ್ರೀವ ಸರ್ವಾನೀಕಸಮಾವೃತಾಃ ॥ ೬

ನಿಮಿತ್ತಾನಿ ಚ ಧನ್ಯಾನಿ ಯಾನಿ ಪ್ರಾದುರ್ಭವಂತಿ ಚ ।
ನಿಹತ್ಯ ರಾವಣಂ ಸೀತಾಮಾನಯಿಷ್ಯಾಮಿ ಜಾನಕೀಮ್ ॥ ೭

---

ಆ ಲಂಕೆಯನ್ನು ಧ್ವಂಸಮಾಡುತ್ತೇನೆ; ಇದು ಸತ್ಯವೆಂದು ತಿಳಿ !'' ಎಂದು ನುಡಿದು, ಸುಗ್ರೀವನನ್ನು ನೋಡಿ ಹೀಗೆಂದನು (೧–೨): ''ಸುಗ್ರೀವ, ಈ ಮುಹೂರ್ತದಲ್ಲಿಯೇ ದಂಡಯಾತ್ರೆಗೆ ಹೊರಡಬೇಕೆಂದು ನನ್ನ ಉದ್ದೇಶ. ಈಗ ವಿಜಯಸೂಚಕವಾದ ಅಭಿಜಿನ್ಮುಹೂರ್ತವಾಗಿದೆ. ಸೂರ್ಯನು ಆಕಾಶದ ಮಧ್ಯವನ್ನಡರಿದ್ದಾನೆ. ದಿವಾಕರನು ಆಕಾಶಮಧ್ಯಕ್ಕೆ ಬಂದು ವಿಜಯಮುಹೂರ್ತವು ಪ್ರಾಪ್ತವಾಗಿರಲಾಗಿ, ನಾನು ದಂಡಯಾತ್ರೆಗೆ ಹೊರಟರೆ, ಸುಗ್ರೀವ, ನನ್ನ ಸೀತೆಯನ್ನಪಹರಿಸಿದ ಆ ದುರುಳನು ಎಲ್ಲಿ ಹೋಗಿ ತಪ್ಪಿಸಿಕೊಂಡಾನು? (೩–೪). ನಾನು ಯುದ್ಧಯಾತ್ರೆಗೆ ಹೊರಟಿರುವೆನೆಂಬ ಸುದ್ದಿಯನ್ನು ಕೇಳಿದರೆ, ಸೀತೆಯು ಬದುಕುವ ಆಸೆಯನ್ನು ಹಿಡಿದಾಳು. ವಿಷವನ್ನು ಕುಡಿದು ಸಾಯುವ ಸ್ಥಿತಿಯಲ್ಲಿರುವ ರುಗ್ಣನ ಕೈಗೆ ಅಮೃತದ ಬಟ್ಟಲು ಸೋಕಿದಂತಾಗಿ, ಸೀತೆಗೆ ಬದುಕುವ ಆಸೆ ಹುಟ್ಟೀತು (೫). ಈದಿನ ಉತ್ತರಾನಕ್ಷತ್ರವಲ್ಲವೆ? ನಾಳೆ ಹಸ್ತನಕ್ಷತ್ರವು ಬರುವುದು. ಆದ್ದರಿಂದ, ಸುಗ್ರೀವ, ಈ ದಿನವೇ* ಸಮಸ್ತ ಸೇನೆಯೊಡನೆ ಪ್ರಯಾಣಮಾಡೋಣ. ನನಗೀಗ ಶುಭನಿಮಿತ್ತಗಳಾಗುತ್ತಿವೆ. ರಾವಣನನ್ನು ಕೊಂದು ಜಾನಕಿಯನ್ನು

---

* ಶ್ರೀರಾಮನಿಗೆ ಪುನರ್ವಸು ಜನ್ಮನಕ್ಷತ್ರ. ಅವನಿಗೆ ಉತ್ತರೆಯು ಸಾಧನತಾರೆ. ಹಸ್ತವು ವಧತಾರೆ. ಆದ್ದರಿಂದ ಉತ್ತರಾನಕ್ಷತ್ರವು ಶುಭಕರವೆಂದು ಅಭಿಪ್ರಾಯ.

ಉಪರಿಷ್ಟಾದ್ಧಿ ನಯನಂ ಸ್ಫುರಮಾಣಮಿದಂ ಮಮ ।
ವಿಜಯಂ ಸಮನುಪ್ರಾಪ್ತಂ ಶಂಸತೀವ ಮನೋರಥಮ್ ॥ ೮

ತತೋ ವಾನರರಾಜೇನ ಲಕ್ಷ್ಮಣೇನ ಚ ಪೂಜಿತಃ ।
ಉವಾಚ ರಾಮೋ ಧರ್ಮಾತ್ಮಾ ಪುನರಪ್ಯರ್ಥಕೋವಿದಃ ॥ ೯

ಅಗ್ರೇ ಯಾತು ಬಲಸ್ಯಾಸ್ಯ ನೀಲೋ ಮಾರ್ಗಮವೇಕ್ಷಿತುಮ್ ।
ವೃತಃ ಶತಸಹಸ್ರೇಣ ವಾನರಾಣಾಂ ತರಸ್ವಿನಾಮ್ ॥ ೧೦

ಫಲಮೂಲವತಾ ನೀಲ ಶೀತಕಾನನವಾರಿಣಾ ।
ಪಥಾ ಮಧುಮತಾ ಚಾಶು ಸೇನಾಂ ಸೇನಾಪತೇ ನಯ ॥ ೧೧

ದೂಷಯೇಯುರ್ದುರಾತ್ಮಾನಃ ಪಥಿ ಮೂಲಫಲೋದಕಮ್ ।
ರಾಕ್ಷಸಾಃ ಪರಿರಕ್ಷೇಥಾಸ್ತೇಭ್ಯಸ್ತ್ವಂ ನಿತ್ಯಮುದ್ಯತಃ ॥ ೧೨

ನಿಮ್ನೇಷು ಗಿರಿದುರ್ಗೇಷು ವನೇಷು ಚ ವನೌಕಸಃ ।
ಅಭಿಪ್ಲುತ್ಯಾಭಿಪಶ್ಯೇಯುಃ ಪರೇಷಾಂ ನಿಹಿತಂ ಬಲಮ್ ॥ ೧೩

---

ಬಿಡಿಸಿ ಕರತರುವೆನೆಂದು ಇದರಿಂದ ಸೂಚಿತವಾಗುತ್ತದೆ. ನನ್ನ ಕಣ್ಣು ಮೇಲಕ್ಕೆ ಅದಿರುತ್ತಿದೆ. ಅಭೀಷ್ಟವಾದ ವಿಜಯವನ್ನು ಸಾರುವಂತಿದೆ'' ಎಂದನು (೬–೮). ವಾನರೇಶ್ವರನಾದ ಸುಗ್ರೀವನೂ ಲಕ್ಷ್ಮಣನೂ ಶ್ರೀರಾಮನ ಮಾತನ್ನು ಸಂತೋಷದಿಂದ ಅನುಮೋದಿಸಿದರು. ಆಗ ಕಾರ್ಯದಕ್ಷನೂ ಧರ್ಮಾತ್ಮನೂ ಆದ ಶ್ರೀರಾಮನು ''ಹಾಗಾದರೆ, ನೀಲನು ವೇಗಶಾಲಿಗಳಾದ ಒಂದು ಲಕ್ಷ ಕಪಿವೀರರೊಡನೆ ಮುಂದೆ ಹೊರಡಲಿ! (೯–೧೦). ಸೇನಾಪತಿ – ನೀಲ, ಈ ಸೇನೆಯೊಡನೆ ನೀನು ಪ್ರಯಾಣಮಾಡು. ಫಲಮೂಲಗಳಿಂದಲೂ ಶೀತಲ ಜಲದಿಂದಲೂ ಜೇನಿನಿಂದಲೂ ಸಮೃದ್ಧವಾದ ತಂಪಾದ ಅರಣ್ಯಮಾರ್ಗವನ್ನು ಹಿಡಿದು ಸೇನೆಯನ್ನು ನೀನು ಕರೆದೊಯ್ಯಬೇಕು. ದುರಾತ್ಮರಾದ ರಾಕ್ಷಸರು ದಾರಿಯಲ್ಲಿ ಫಲ ಮೂಲ ಜಲಗಳಿಗೆ (ವಿಷವನ್ನು ಬೆರೆಸಿ) ಕೆಡಿಸಿಯಾರು. ಹಾಗಾಗದಂತೆ ನೀನು ಬಹಳ ಎಚ್ಚರಿಕೆಯಿಂದಿದ್ದು ರಾಕ್ಷಸರ ಹಾವಳಿಯಿಂದ ಸೇನೆಯನ್ನು ರಕ್ಷಿಸಿಕೊಳ್ಳಬೇಕು (೧೧–೧೨). ಬೆಟ್ಟಗಳ ಮಧ್ಯದಲ್ಲಿರುವ ತಗ್ಗಾದ ಕಂದರಗಳಲ್ಲಿಯೂ ಕಾಡುಗಳಲ್ಲಿಯೂ ಶತ್ರುಗಳು ತಮ್ಮ ಬಲವನ್ನು ಇರಿಸಿರುವ ಸಂಭವವುಂಟು. ಆದ್ದರಿಂದ ವಾನರರು ಆಕಾಶಮಾರ್ಗದಲ್ಲಿ ಹಾರಿ

ಯಚ್ಚ ಫಲ್ಗು ಬಲಂ ಕಿಂಚಿತ್ತದತ್ರೈವೋಪಯುಜ್ಯತಾಮ್ ।
ಏತದ್ಧಿ ಕೃತ್ಯಂ ಘೋರಂ ನೋ ವಿಕ್ರಮೇಣ ಪ್ರಯುಧ್ಯತಾಮ್ ॥

ಸಾಗರೌಘನಿಭಂ ಭೀಮಮಗ್ರಾನೀಕಂ ಮಹಾಬಲಾಃ ।
ಕಪಿಸಿಂಹಾಃ ಪ್ರಕರ್ಷಂತು ಶತಶೋಽಥ ಸಹಸ್ರಶಃ ॥ ೧೫

ಗಜಶ್ಚ ಗಿರಿಸಂಕಾಶೋ ಗವಯಶ್ಚ ಮಹಾಬಲಃ ।
ಗವಾಕ್ಷಶ್ಚಾಗ್ರತೋ ಯಾಂತು ವಾಹಿನ್ಯಾ ವಾನರರ್ಷಭಾಃ ॥ ೧೬

ಯಾತು ವಾನರವಾಹಿನ್ಯಾ ವಾನರಃ ಪ್ಲವತಾಂ ವರಃ ।
ಪಾಲಯನ್ ದಕ್ಷಿಣಂ ಪಾರ್ಶ್ವಮೃಷಭೋ ವಾನರರ್ಷಭಃ ॥ ೧೭

ಗಂಧಹಸ್ತೀವ ದುರ್ಧರ್ಷಸ್ತರಸ್ವೀ ಗಂಧಮಾದನಃ ।
ಯಾತು ವಾನರವಾಹಿನ್ಯಾಃ ಸವ್ಯಂ ಪಾರ್ಶ್ವಮಧಿಷ್ಠಿತಃ ॥ ೧೮

ಯಾಸ್ಯಾಮಿ ಬಲಮಧ್ಯೇಽಹಂ ಬಲೌಘಮಭಿಹರ್ಷಯನ್ ।
ಅಧಿರುಹ್ಯ ಹನೂಮಂತಮೈರಾವತಮಿವೇಶ್ವರಃ ॥ ೧೯

---

ಹೋಗುತ್ತ ಎಚ್ಚರಿಕೆಯಿಂದ ಪರೀಕ್ಷಿಸುತ್ತಿರಲಿ. ನಮ್ಮ ಸೇನೆಯಲ್ಲಿ ಯಾವುದು ಸಾಮಾನ್ಯಬಲವುಳ್ಳದಾಗಿ ನಿಸ್ಸಾರವೆಂದು ತೋರುವುದೋ ಆ ವಿಭಾಗವು ಇಲ್ಲಿಯೇ ಕಿಷ್ಕಿಂಧೆಯಲ್ಲಿ ಕಾವಲಾಗಿ ಉಳಿಯಲಿ. ಏಕೆಂದರೆ, ನೀಲ, ನಾವು ತೊಡಗಿರುವ ಕಾರ್ಯಭಾರವು, ಭೀಕರವಾದದ್ದು. ನಮ್ಮ ವಿಕ್ರಮವನ್ನು ಮೆರೆಸಿ ಹೋರಾಡಬೇಕಾದ ಸಂದರ್ಭವಿದು (೧೩–೧೪) ಭೀಷಣವಾದ ನಮ್ಮ ಮುಖಸೇನೆಯು ಸಮುದ್ರ ಪ್ರವಾಹದಂತೆ ಮುಂದೆ ತೆರಳಲಿ ! ಪರಾಕ್ರಮಿಗಳಾದ ನೂರಾರು ಸಾವಿರಾರು ಕಪಿಸಿಂಹರು ಆ ಸೇನೆಯನ್ನು ವ್ಯವಸ್ಥೆಯಿಂದ ಕರೆದೊಯ್ಯಲಿ. ಪರ್ವತಾಕಾರರೂ ಬಲಾಢ್ಯರೂ ಆದ ಗಜ, ಗವಯ, ಗವಾಕ್ಷ ಮೊದಲಾದ ವಾನರವೀರರು ಸೇನೆಯ ಅಗ್ರಭಾಗದಲ್ಲಿ ನಡೆಯಲಿ (೧೫–೧೬). ವಾನರೋತ್ತಮನಾದ ಋಷಭನು ಸೈನ್ಯದ ಬಲಭಾಗದಲ್ಲಿದ್ದು ಅದನ್ನು ರಕ್ಷಿಸುತ್ತಿರಲಿ. ಮತ್ತಮಾತಂಗದಂತೆ ದುರ್ಧರ್ಷನೂ ವೇಗಶಾಲಿಯೂ ಆದ ಗಂಧಮಾದನನು ಕಪಿಸೇನೆಯ ಎಡಭಾಗದಲ್ಲಿ ರಕ್ಷಕನಾಗಿರಲಿ (೧೭–೧೮). ನಾನು ಐರಾವತವನ್ನೇರಿದ ಇಂದ್ರನಂತೆ ಈ ಹನುಮಂತನ ಹೆಗಲಮೇಲೆ ಕುಳಿತು, ಸಮಸ್ತ ಸೈನಿಕರಿಗೂ ಉತ್ಸಾಹವನ್ನು ಕೊಡುತ್ತ

**ಅಂಗದೇನೈಷ ಸಂಯಾತು ಲಕ್ಷ್ಮಣಶ್ಚಾಂತಕೋಪಮಃ ।**
**ಸಾರ್ವಭೌಮೇನ ಭೂತೇಶೋ ದ್ರವಿಣಾಧಿಪತಿರ್ಯಥಾ ॥ ೨೦**

**ಜಾಂಬವಾಂಶ್ಚ ಸುಷೇಣಶ್ಚ ವೇಗದರ್ಶೀ ಚ ವಾನರಃ ।**
**ಋಕ್ಷರಾಜೋ ಮಹಾಸತ್ತ್ವಃ ಕುಕ್ಷಿಂ ರಕ್ಷಂತು ತೇ ತ್ರಯಃ ॥ ೨೧**

**ರಾಘವಸ್ಯ ವಚಃ ಶ್ರುತ್ವಾ ಸುಗ್ರೀವೋ ವಾಹಿನೀಪತಿಃ ।**
**ವ್ಯಾದಿದೇಶ ಮಹಾವೀರ್ಯಾನ್ ವಾನರಾನ್ ವಾನರರ್ಷಭಃ ॥ ೨೨**

**ತೇ ವಾನರಗಣಾಃ ಸರ್ವೇ ಸಮುತ್ಪತ್ಯ ಯುಯುತ್ಸವಃ ।**
**ಗುಹಾಭ್ಯಃ ಶಿಖರೇಭ್ಯಶ್ಚ ಆಶು ಪುಪ್ಲುವಿರೇ ತದಾ ॥ ೨೩**

**ತತೋ ವಾನರರಾಜೇನ ಲಕ್ಷ್ಮಣೇನ ಚ ಪೂಜಿತಃ ।**
**ಜಗಾಮ ರಾಮೋ ಧರ್ಮಾತ್ಮಾ ಸಸೈನ್ಯೋ ದಕ್ಷಿಣಾಂ ದಿಶಮ್ ॥ ೨೪**

**ಶತೈಃ ಶತಸಹಸ್ರೈಶ್ಚ ಕೋಟೀಭಿರಯುತೈರಪಿ ।**
**ವಾರಣಾಭೈಶ್ಚ ಹರಿಭಿರ್ಯಯೌ ಪರಿವೃತಸ್ತದಾ ॥ ೨೫**

---

ಸೇನೆಯ ಮಧ್ಯದಲ್ಲಿ ಬರುವನು ! ಯಮನಂತೆ ಧೀರೋದ್ಧತನಾದ ಲಕ್ಷ್ಮಣನು ಅಂಗದನ ಹೆಗಲನ್ನೇರಿ, ಯಕ್ಷರಾಜನಾದ ಕುಬೇರನು ಸಾರ್ವಭೌಮನೆಂಬ ದಿಗ್ಗಜವನ್ನೇರಿಬರುವಂತೆ ನನ್ನ ಜೊತೆಯಲ್ಲಿ ಬರಲಿ ! (೧೯-೨೦). ಭಲ್ಲೂಕರಾಜನೂ ಮಹಾಧೀರನೂ ಆದ ಜಾಂಬವಂತ, ಸುಷೇಣ, ವೇಗದರ್ಶಿ– ಈ ಮೂವರು ಸೇನೆಯ ಮಧ್ಯಭಾಗವನ್ನು ರಕ್ಷಿಸುತ್ತ ಬರಲಿ'' ಎಂದು ತಿಳಿಸಿದನು (೨೧). ಶ್ರೀ ರಾಮನ ನುಡಿಯನ್ನು ಕೇಳಿ ವಾನರೇಶ್ವರನಾದ ಸುಗ್ರೀವನು ಶೂರಾಗ್ರೇಸರರಾದ ಆ ವಾನರರಿಗೆ ಶ್ರೀರಾಮನು ಹೇಳಿದಂತೆ ಸಕಲರೂ ದಂಡಯಾತ್ರೆಗೆ ಹೊರಡಬೇಕೆಂದು ಆಜ್ಞಾಪಿಸಿದನು. ಕೂಡಲೆ ಸಮಸ್ತ ವಾನರಯೋಧರೂ ಗುಹೆಗಳಿಂದಲೂ ಗಿರಿಶಿಖರಗಳಿಂದಲೂ ಮೇಲೆ ಹಾರಿ, ಯುದ್ಧೋತ್ಸಾಹದಿಂದ ನಗೆಯುತ್ತ ಪ್ರಯಾಣಮಾಡಿದರು (೨೨-೨೩). ಧರ್ಮಾತ್ಮನಾದ ಶ್ರೀರಾಮನು ಸುಗ್ರೀವ ಲಕ್ಷ್ಮಣರಿಂದ ಸಮ್ಮಾನಿಸಲ್ಪಡುತ್ತ ವಾನರಸೇನೆಯೊಡನೆ ದಕ್ಷಿಣದಿಕ್ಕಿಗೆ ಪ್ರಯಣ ಬೆಳೆಸಿದನು. ಆನೆಗಳಂತೆ ಬೃಹದಾಕಾರದ ಕಪಿವೀರರು ಲಕ್ಷಗಟ್ಟಲೆ – ಕೋಟಿಗಟ್ಟಲೆ ಅವನ ಸುತ್ತಲೂ ಹೋದರು (೨೪-೨೫).

ತಂ ಯಾಂತಮನುಯಾತಿ ಸ್ಮ ಮಹತೀ ಹರಿವಾಹಿನೀ ।
ಹೃಷ್ಟಾಃ ಪ್ರಮುದಿತಾಃ ಸರ್ವೇ ಸುಗ್ರೀವೇಣಾಭಿಪಾಲಿತಾಃ ॥ ೨೬

ಆಪ್ಲವಂತಃ ಪ್ಲವಂತಶ್ಚ ಗರ್ಜಂತಶ್ಚ ಪ್ಲವಂಗಮಾಃ ।
ಕ್ಷ್ವೇಲಂತೋ ವಿನದಂತಶ್ಚ ಜಗ್ಮುರ್ವೈ ದಕ್ಷಿಣಾಂ ದಿಶಮ್॥ ೨೭

ಭಕ್ಷಯಂತಃ ಸುಗಂಧೀನಿ ಮಧೂನಿ ಚ ಫಲಾನಿ ಚ ।
ಉದ್ವಹಂತೋ ಮಹಾವೃಕ್ಷಾನ್ ಮಂಜರೀಪುಂಜಧಾರಿಣಃ ॥ ೨೮

ಅನ್ಯೋನ್ಯಂ ಸಹಸಾ ದೃಪ್ತಾ ನಿರ್ವಹಂತಿ ಕ್ಷಿಪಂತಿ ಚ ।
ಪತತಶ್ಚೋತ್ಪತಂತ್ಯನ್ಯೇ ಪಾತಯಂತ್ಯಪರೇ ಪರಾನ್ ॥ ೨೯

ರಾವಣೋ ನೋ ನಿಹಂತವ್ಯಃ ಸರ್ವೇ ಚ ರಜನೀಚರಾಃ ।
ಇತಿ ಗರ್ಜಂತಿ ಹರಯೋ ರಾಘವಸ್ಯ ಸಮೀಪತಃ ॥ ೩೦

ಪುರಸ್ತಾದೃಷಭೋ ವೀರೋ ನೀಲಃ ಕುಮುದ ಏವ ಚ ।
ಪಂಥಾನಂ ಶೋಧಯಂತಿ ಸ್ಮ ವಾನರೈರ್ಬಹುಭಿರ್ವೃತಾಃ ॥ ೩೧

---

ಸುಗ್ರೀವನಿಂದ ಪಾಲಿತವಾದ ಬಹುದೊಡ್ಡದಾದ ಕಪಿಸೇನೆಯು ದಂಡಯಾತ್ರೆಗೆ ಹೊರಟ ಶ್ರೀರಾಮನನ್ನು ಹಿಂಬಾಲಿಸಿ ಹೊರಟಿತು. ಆ ಕಪಿ ಸೈನಿಕರು ಹಾರುತ್ತ ನೆಗೆಯುತ್ತ ಗರ್ಜಿಸುತ್ತ ಓಡುತ್ತ ಚೀರುತ್ತ ದಕ್ಷಿಣದಿಕ್ಕಿಗೆ ಹೋದರು. ದಾರಿಯಲ್ಲಿ ಸುಗಂಧವನ್ನು ಬೀರುವ ಮಧುವನ್ನು ಕುಡಿಯುತ್ತ ಹಣ್ಣುಗಳನ್ನು ತಿನ್ನುತ್ತ ಹೋದರು. ಹೂಗೊಂಚಲುಗಳಿಂದ ರಮ್ಯವಾದ ದೊಡ್ಡ ದೊಡ್ಡ ಮರಗಳನ್ನೇ ಕಿತ್ತು ಹೊತ್ತುಕೊಂಡು ಹೋದರು (೨೬–೨೮). ಕೊಬ್ಬಿದ ಆ ವಾನರಯೋಧರು ಬಳಿಯಲ್ಲಿದ್ದವರನ್ನು (ವಿನೋದಕ್ಕಾಗಿ) ಇದ್ದಕ್ಕಿದ್ದಂತೆ ಎತ್ತಿ ಹೊರುತ್ತಿದ್ದರು! ಕೆಲವರನ್ನು ಮೇಲಕ್ಕೆ ಎಸೆಯುತ್ತಿದ್ದರು. ಅವರು ಕೆಳಗೆ ಬೀಳುವಷ್ಟರಲ್ಲಿ ಇವರು ಮೇಲೆ ನೆಗೆದು ಅವರನ್ನು ಆತು ಹಿಡಿಯುತ್ತಿದ್ದರು! ಕೆಲವರು ಇತರರನ್ನು ತೊಡರುಗಾಲಿಕ್ಕಿ ಬೀಳಿಸುತ್ತಿದ್ದರು! (೨೯). ಶ್ರೀರಾಮನ ಸಮೀಪದಲ್ಲಿ ಆ ಕಪಿವೀರರು "ರಾವಣನನ್ನು ನಾವು ಕೊಲ್ಲಬೇಕು! ಸಕಲ ರಾಕ್ಷಸರನ್ನೂ ಬಗ್ಗು ಬಡಿಯಬೇಕು!" ಎಂದು ಆರ್ಭಟಿಸುತ್ತಿದ್ದರು. ಶೂರರಾದ ಋಷಭ, ನೀಲ ಮತ್ತು ಕುಮುದರು ಅನೇಕ ವಾನರ ಸಮೂಹದೊಡನೆ ಸೇನೆಯ ಮುಂಭಾಗದಲ್ಲಿ ದಾರಿಯನ್ನು ಶೋಧಿಸುತ್ತ

ಮಧ್ಯೇ ತು ರಾಜಾ ಸುಗ್ರೀವೋ ರಾಮೋ ಲಕ್ಷ್ಮಣ ಏವ ಚ ।
ಬಲಿಭಿರ್ಬಹುಭಿಃ ಶೂರೈರ್ವೃತಾಃ ಶತ್ರುನಿಬರ್ಹಣೈಃ ॥ ೩೨

ಹರಿಃ ಶತಬಲಿರ್ವೀರಃ ಕೋಟೀಭಿರ್ದಶಭಿರ್ವೃತಃ ।
ಸರ್ವಾಮೇಕೋ ಹ್ಯವಷ್ಟಭ್ಯ ರರಕ್ಷ ಹರಿವಾಹಿನೀಮ್ ॥ ೩೩

ಕೋಟೀಶತಪರೀವಾರಃ ಕೇಸರೀ ಪನಸೋ ಗಜಃ ।
ಅರ್ಕಶ್ಚಾತಿಬಲಃ ಪಾರ್ಶ್ವಮೇಕಂ ತಸ್ಯಾಭಿರಕ್ಷತಿ ॥ ೩೪

ಸುಷೇಣೋ ಜಾಂಬವಾಂಶ್ಚೈವ ಋಕ್ಷೈಶ್ಚ ಬಹುಭಿರ್ವೃತೌ ।
ಸುಗ್ರೀವಂ ಪುರತಃ ಕೃತ್ವಾ ಜಘನಂ ಸಂರರಕ್ಷತುಃ ॥ ೩೫

ತೇಷಾಂ ಸೇನಾಪತಿರ್ವೀರೋ ನೀಲೋ ವಾನರಪುಂಗವಃ ।
ಸಂಪತನ್ ಪ್ಲವತಾಂ ಶ್ರೇಷ್ಠಸ್ತದ್ಬಲಂ ಪರ್ಯಪಾಲಯತ್ ॥ ೩೬

ದರೀಮುಖಃ ಪ್ರಜಂಘಶ್ಚ ರಂಭೋಽಥ ರಭಸಃ ಕಪಿಃ ।
ಸರ್ವತಶ್ಚ ಯಯುರ್ವೀರಾಸ್ತ್ವರಯಂತಃ ಪ್ಲವಂಗಮಾನ್ ॥ ೩೭

---

ಹೋದರು (೩೦-೩೧). ಕಪಿರಾಜನಾದ ಸುಗ್ರೀವನೂ ಶ್ರೀರಾಮನೂ ಲಕ್ಷ್ಮಣನೂ ಸೇನೆಯ ಮಧ್ಯಭಾಗದಲ್ಲಿ ಬಲಾಢ್ಯರೂ ವೈರಿವಿಧ್ವಂಸಕರೂ ಆದ ಬಹಳ ಮಂದಿ ಕಪಿನಾಯಕರೊಂದಿಗೆ ಹೋಗುತ್ತಿದ್ದರು. ಪರಾಕ್ರಮಿಯಾದ ಶತಬಲಿಯು ಹತ್ತುಕೋಟಿ ಕಪಿಸೇನೆಯಿಂದ ಪರಿವೃತನಾಗಿ ಸಮಸ್ತ ಸೇನಯ ಸಾಮಾನ್ಯ ರಕ್ಷಣಾವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದನು (೩೨-೩೩). ಕೇಸರಿ, ಪನಸ, ಗಜ ಮತ್ತು ಅರ್ಕ ಎಂಬ ಕಪಿವೀರರು ನೂರುಕೋಟಿ ಸೇನೆಯೊಡನೆ ಒಂದು ಪಾರ್ಶ್ವದಲ್ಲಿ ಸೇನೆಯನ್ನು ರಕ್ಷಿಸುತ್ತ ನಡದರು. ಸುಷೇಣ, ಭಲ್ಲೂಕಸೇನೆಯಿಂದ ಪರಿವೃತನಾದ ಜಾಂಬವಂತ-ಇವರಿಬ್ಬರೂ ಸುಗ್ರೀವನನ್ನು ಮುಂದೆಮಾಡಿಕೊಂಡು ಸೇನೆಯ ಮಧ್ಯಭಾಗವನ್ನು ರಕ್ಷಿಸುತ್ತ ಹೋದರು (೩೪-೩೫). ವಾನರಶ್ರೇಷ್ಠನೂ ಸೇನಾಪತಿಯೂ ಆದ ನೀಲನು ಸೇನೆಯ ಸಕಲಭಾಗಗಳಿಗೂ ಹೋಗಿ ಅದರ ರಕ್ಷಣಾವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದನು. ದರೀಮುಖ, ಪ್ರಜಂಘ, ರಂಭ, ರಭಸ ಎಂಬ ಕಪಿನಾಯಕರು ವಾನರರನ್ನು ತ್ವರೆಗೊಳಿಸುತ್ತ ಸೇನೆಯಲ್ಲಿ ಸುತ್ತುತ್ತಿದ್ದರು. (೩೬-೩೭).

ಏವಂ ತೇ ಹರಿಶಾರ್ದೂಲಾ ಗಚ್ಛಂತೋ ಬಲದರ್ಪಿತಾಃ ।
ಅಪಶ್ಯಂಸ್ತೇ ಗಿರಿಶ್ರೇಷ್ಠಂ ಸಹ್ಯಂ ದ್ರುಮಲತಾಯುತಮ್ ॥ ೩೮

ಸರಾಂಸಿ ಚ ಸುಫುಲ್ಲಾನಿ ತಟಾಕಾನಿ ಮಹಾಂತಿ ಚ ।
ರಾಮಸ್ಯ ಶಾಸನಂ ಜ್ಞಾತ್ವಾ ಭೀಮಕೋಪಸ್ಯ ಭೀತವತ್ ॥ ೩೯

ವರ್ಜಯನ್ನಗರಾಭ್ಯಾಶಾಂಸ್ತಥಾ ಜನಪದಾನಪಿ ।
ಸಾಗರೌಘನಿಭಂ ಭೀಮಂ ತದ್ವಾನರಬಲಂ ಮಹತ್ ॥ ೪೦

ನಿಃಸಸರ್ಪ ಮಹಾಘೋಷಂ ಭೀಮಘೋಷ ಇವಾರ್ಣವಃ ।
ತಸ್ಯ ದಾಶರಥೇಃ ಪಾರ್ಶ್ವೇ ಶೂರಾಸ್ತೇ ಕಪಿಕುಂಜರಾಃ ॥ ೪೧

ತೂರ್ಣಮಾಪುಪ್ಲುವುಃ ಸರ್ವೇ ಸದಶ್ವಾ ಇವ ಚೋದಿತಾಃ ।
ಕಪಿಭ್ಯಾಮುಹ್ಯಮಾನೌ ತೌ ಶುಶುಭಾತೇ ನರರ್ಷಭೌ ॥ ೪೨

ಮಹದ್ಭ್ಯಾಮಿವ ಸಂಸ್ಪೃಷ್ಟೌ ಗ್ರಹಾಭ್ಯಾಂ ಚಂದ್ರಭಾಸ್ಕರೌ ।
ತತೋ ವಾನರರಾಜೇನ ಲಕ್ಷ್ಮಣೇನ ಚ ಪೂಜಿತಃ ॥ ೪೩

---

ಈ ಪ್ರಕಾರದಲ್ಲಿ ಆ ವಾನರಭಟರು ಬಲದರ್ಪದಿಂದ ಪ್ರಯಾಣಮಾಡುತ್ತ ಹೋಗುತ್ತಿರಲಾಗಿ, ವಿವಿಧ ವೃಕ್ಷಲತೆಗಳಿಂದ ತುಂಬಿದ ಸಹ್ಯಾದ್ರಿಯೂ ಅರಳಿದ ಹೂಗಳಿಂದ ರಂಜಿಸುವ ಕೊಳಗಳೂ ದೊಡ್ಡ ದೊಡ್ಡ ಕೆರೆಗಳೂ ಕಂಗೊಳಿಸಿದವು (೩೮). ಸಮುದ್ರದ ಪ್ರವಾಹದಂತೆ ಅಪಾರವೂ ಭೀಕರವೂ ಆಗಿದ್ದ ವಾನರಸೇನೆಯು ರುದ್ರಕೋಪನಾದ ಶ್ರೀರಾಮನ ಆಜ್ಞೆಗೆ ಹೆದರಿ, ಅಕ್ಕಪಕ್ಕದ ನಗರಗಳನ್ನೂ ಗ್ರಾಮಗಳನ್ನೂ ಪರಿತ್ಯಜಿಸಿ ನೆಟ್ಟಗೆ ಮುಂದೆ ಸಾಗಿತು; ಭಯಂಕರವಾಗಿ ಮೊರೆಯುವ ಮಹಾಸಾಗರದಂತೆ ಕೋಲಾಹಲ ಮಾಡುತ್ತಾ ಮುಂದೆ ಹೋಯಿತು (೩೯–೪೦). ಶೂರರಾದ ಆ ಕಪಿಕುಂಜರರು ಚುಬುಕಿನಿಂದ ಚೋದಿಸಿದ ಉತ್ತಮಾಶ್ವಗಳಂತೆ ಕುಪ್ಪಳಿಸುತ್ತ ಶ್ರೀರಾಮನ ಪಾರ್ಶ್ವದಲ್ಲಿ ಪ್ರಯಾಣಮಾಡಿದರು. ಆಂಜನೇಯನ ಮತ್ತು ಅಂಗದನ ಹೆಗಲನ್ನೇರಿ ಕುಳಿತಿದ್ದ ಪುರುಷೋತ್ತಮರಾದ ಶ್ರೀರಾಮಲಕ್ಷ್ಮಣರು ಗುರು ಶುಕ್ರರೆಂಬ ಮಹಾ ಗ್ರಹಗಳೊಡನೆ ಕೂಡಿದ ಸೂರ್ಯಚಂದ್ರರಂತೆ ಕಂಗೊಳಿಸು ತ್ತಿದ್ದರು ಕಪಿರಾಜನಾದ ಸುಗ್ರೀವನೂ ಲಕ್ಷ್ಮಣನೂ ಶ್ರೀರಾಮನನ್ನು ಗೌರವ ದಿಂದ ಆದರಿಸುತ್ತಿದ್ದರು (೪೧–೪೩).

ಜಗಾಮ ರಾಮೋ ಧರ್ಮಾತ್ಮಾ ಸಸೈನ್ಯೋ ದಕ್ಷಿಣಾಂ ದಿಶಮ್ ।
ತಮಂಗದಗತೋ ರಾಮಂ ಲಕ್ಷ್ಮಣಃ ಶುಭಯಾ ಗಿರಾ ॥ ೪೪

ಉವಾಚ ಪರಿಪೂರ್ಣಾರ್ಥೋ ವಚನಂ ಪ್ರತಿಭಾನವಾನ್ ।
ಹೃತಾಮವಾಪ್ಯ ವೈದೇಹೀಂ ಕ್ಷಿಪ್ರಂ ಹತ್ವಾ ಚ ರಾವಣಮ್ ॥ ೪೫

ಸಮೃದ್ಧಾರ್ಥಃ ಸಮೃದ್ಧಾರ್ಥಾಮಯೋಧ್ಯಾಂ ಪ್ರತಿ ಯಾಸ್ಯಸಿ ।
ಮಹಾಂತಿ ಚ ನಿಮಿತ್ತಾನಿ ದಿವಿ ಭೂಮೌ ಚ ರಾಘವ ॥ ೪೬

ಶುಭಾನಿ ತವ ಪಶ್ಯಾಮಿ ಸರ್ವಾಣ್ಯೇವಾರ್ಥಸಿದ್ಧಯೇ ।
ಅನುವಾತಿ ಶುಭೋ ವಾಯುಃ ಸೇನಾಂ ಮೃದುಹಿತಃ ಸುಖಃ ॥ ೪೭

ಪೂರ್ಣವಲ್ಗು ಸ್ವರಾಶ್ಚೇಮೇ ಪ್ರವದಂತಿ ಮೃಗದ್ವಿಜಾಃ ।
ಪ್ರಸನ್ನಾಶ್ಚ ದಿಶಃ ಸರ್ವಾ ವಿಮಲಶ್ಚ ದಿವಾಕರಃ ॥ ೪೮

ಉಶನಾ ಚ ಪ್ರಸನ್ನಾರ್ಚಿರನು ತ್ವಾಂ ಭಾರ್ಗವೋ ಗತಃ ।
ಬ್ರಹ್ಮರಾಶಿರ್ವಿಶುದ್ಧಶ್ಚ ಶುದ್ಧಾಶ್ಚ ಪರಮರ್ಷಯಃ ॥ ೪೯

---

ಈ ರೀತಿಯಲ್ಲಿ ಧರ್ಮಾತ್ಮನು ಸೇನಾಪರಿವೃತನಾಗಿ ದಕ್ಷಿಣದಿಕ್ಕಿಗೆ ಪ್ರಯಾಣಮಾಡಿದನು. ಆ ಸಮಯದಲ್ಲಿ ಅಂಗದನ ಹೆಗಲನ್ನೇರಿ ಕುಳಿತಿದ್ದ ಲಕ್ಷ್ಮಣನು ಶುಭಶಕುನಗಳಾಗುವುದನ್ನು ಗಮನಿಸಿದನು. ಶಕುನಗಳ ಸೂಚ್ಯಾರ್ಥವನ್ನು ಬಲ್ಲ ಆ ಪ್ರತಿಭಾಶಾಲಿಯು ಶ್ರೀರಾಮನನ್ನು ಕುರಿತು ಹೀಗೆಂದನು : ''ಅಣ್ಣ, ವೈದೇಹಿಯು ಶೀಘ್ರದಲ್ಲಿ ನಿನ್ನ ಕೈ ಸೇರುವಳು ; ರಾವಣನು ಹತನಾಗುವನು (೪೪–೪೫). ನಿನ್ನ ಇಷ್ಟಾರ್ಥವನ್ನು ಕೈಗೂಡಿಸಿಕೊಂಡು ಸರ್ವಸಮೃದ್ಧವಾದ ಅಯೋಧ್ಯೆಗೆ ಹಿಂದಿರುಗುವೆ. ರಾಘವ, ಅಂತರಿಕ್ಷದಲ್ಲಿಯೂ ಭೂಮಿಯಲ್ಲಿಯೂ ದೊಡ್ಡ ದೊಡ್ಡ ಶುಭಶಕುನಗಳಾಗುತ್ತಿವೆ. ಇವೆಲ್ಲವೂ ನಿನ್ನ ಕಾರ್ಯಸಿದ್ಧಿಯನ್ನು ಸೂಚಿಸುತ್ತವೆಯೆಂದು ತಿಳಿಯುತ್ತೇನೆ. ಹಿತಕರವಾದ ತಂಗಾಳಿಯು ಸುಖವಾಗುವಂತೆ ಮೆಲ್ಲಗೆ ಸೇನೆಯ ಹಿಂಭಾಗದಿಂದ ಬೀಸುತ್ತಿದೆ (೪೬–೪೭). ಮೃಗಪಕ್ಷಿಗಳು ಇಂಪಾದ ದನಿಯಿಂದ ಕೂಗುತ್ತಿವೆ. ದಿಕ್ಕುಗಳು ಪ್ರಶಾಂತವಾಗಿವೆ. ಸೂರ್ಯಮಂಡಲವು ಶುದ್ಧವಾಗಿ ಪ್ರಕಾಶಿಸುತ್ತಿದೆ. ಸಕಲ ವೇದಜ್ಞನಾದ ಶುಕ್ರನು ಪಾಪಗ್ರಹಸಂಬಂಧವಿಲ್ಲದೆ ಶುದ್ಧನಾಗಿ ಪ್ರಸನ್ನಕಾಂತಿಯಿಂದ ನಿನ್ನ ಹಿಂದುಗಡೆ

ಅರ್ಚಿಷ್ಮಂತಃ ಪ್ರಕಾಶಂತೇ ಧ್ರುವಂ ಸರ್ವೇ ಪ್ರದಕ್ಷಿಣಮ್ ।
ತ್ರಿಶಂಕುರ್ವಿಮಲೋ ಭಾತಿ ರಾಜರ್ಷಿಃ ಸಪುರೋಹಿತಃ ॥ ೫೦

ಪಿತಾಮಹಃ ಪುರೋಽಸ್ಮಾಕಮಿಕ್ಷ್ವಾಕೂಣಾಂ ಮಹಾತಮನಾಮ್।
ವಿಮಲೇ ಚ ಪ್ರಕಾಶೇತೇ ವಿಶಾಖೇ ನಿರುಪದ್ರವೇ ॥ ೫೧

ನಕ್ಷತ್ರವರಮಸ್ಮಾಕಮಿಕ್ಷ್ವಾಕೂಣಾಂ ಮಹಾತ್ಮನಾಮ್ ।
ನೈರ್ಋತಂ ನೈರ್ಋತಾನಾಂ ಚ ನಕ್ಷತ್ರಮಭಿಪೀಡ್ಯತೇ ॥ ೫೨

ಮೂಲೋ ಮೂಲವತಾ ಸ್ಪೃಷ್ಟೋ ಧೂಪ್ಯತೇ ಧೂಮಕೇತುನಾ।
ಸರ್ವಂ ಚೈತದ್ವಿನಾಶಾಯ ರಾಕ್ಷಸಾನಾಮುಪಸ್ಥಿತಮ್ ॥ ೫೩

ಕಾಲೇ ಕಾಲಗೃಹೀತಾನಾಂ ನಕ್ಷತ್ರಂ ಗ್ರಹಪೀಡಿತಮ್ ।
ಪ್ರಸನ್ನಾಃ ಸುರಸಾಶ್ಚಾಪೋ ವನಾನಿ ಫಲವಂತಿ ಚ ॥ ೫೪

ಪ್ರವಾಂತ್ಯಭ್ಯಧಿಕಂ ಗಂಧಾನ್ ಯಥರ್ತುಕುಸುಮಾ ದ್ರುಮಾಃ ।
ವ್ಯೂಢಾನಿ ಕಪಿಸೈನ್ಯಾನಿ ಪ್ರಕಾಶಂತೇಽಧಿಕಂ ಪ್ರಭೋ ॥ ೫೫

---

ಯಲ್ಲಿ ವಿರಾಜಿಸುತ್ತಿದ್ದಾನೆ. ಸಪ್ತರ್ಷಿಮಂಡಲವು ನಿರ್ಮಲವಾಗಿದೆ (೪೮–೪೯). ಆ ಸಪ್ತನಕ್ಷತ್ರಗಳೆಲ್ಲವೂ ಧ್ರುವನಕ್ಷತ್ರಕ್ಕೆ ಪ್ರದಕ್ಷಿಣಾಭಿಮುಖ ವಾಗಿವೆ. ಮಹಾತ್ಮರಾದ ನಮ್ಮ ಇಕ್ಷ್ವಾಕುವಂಶೀಯರಿಗೆ ಪಿತಾಮಹನೆನಿಸಿದ ರಾಜರ್ಷಿಯಾದ ತ್ರಿಶಂಕುವು ನಿರ್ಮಲನಾಗಿದ್ದಾನೆ. ಅವನ ಸಮೀಪದಲ್ಲಿ ವಸಿಷ್ಠ ನಕ್ಷತ್ರವು ಬೆಳಗುತ್ತಿದೆ. ವಿಶಾಖನಕ್ಷತ್ರಗಳೆರಡೂ ಕ್ರೂರಗ್ರಹಬಾಧೆ ಯಿಲ್ಲದೆ ಹೊಳೆಯುತ್ತಿವೆ (೫೦–೫೧). ಇವು ಮಹಾತ್ಮರಾದ ಇಕ್ಷ್ವಾಕು ವಂಶದವರಿಗೆ ಮುಖ್ಯವಾದವು. ರಾಕ್ಷಸರಿಗೆ ಪ್ರಧಾನವೂ ನಿರ್ಋತಿದೇವ ತಾಕವೂ ಆದ ಮೂಲನಕ್ಷತ್ರವು ಬಾಲದಿಂದೊಡಗೂಡಿದ ಧೂಮಕೇತುವಿನಿಂದ ಸ್ಪೃಷ್ಟವಾಗಿ ಕಂದಿಹೋಗಿದೆ. ಇವೆಲ್ಲವೂ ರಾಕ್ಷಸರ ವಿನಾಶಕ್ಕಾಗಿ ಸಂಭವಿ ಸಿವೆ (೫೨–೫೩). ಕಾಲವಶರಾಗಿ ಮೃತ್ಯುಪೀಡಿತರಾದವರ ನಕ್ಷತ್ರವು ಅಂತ್ಯ ಕಾಲದಲ್ಲಿ ಹೀಗೆ ದುಷ್ಟಗ್ರಹದಿಂದ ಬಾಧಿಸಲ್ಪಡುತ್ತದೆ. ಶ್ರೀರಾಮ, ಅಲ್ಲಲ್ಲಿ ಕಂಗೊಳಿಸುವ ಜಲಾಶಯದಲ್ಲಿರುವ ನೀರು ತಿಳಿಯಾಗಿ ರುಚಿಕರವಾಗಿದೆ. ಕಾಡುಗಳು ಹಣ್ಣುಗಳಿಂದ ತುಂಬಿವೆ. ಋತುಮರ್ಯಾದೆಯಂತೆ ಅರಳಿದ ಮರಗಳು ಕಂಪನ್ನು ಸೂಸುತ್ತಿವೆ. ಹೇ ಪ್ರಭು. ತಾರಕಾಸುರನ ಸಂಹಾರ

ದೇವಾನಾಮಿವ ಸೈನ್ಯಾನಿ ಸಂಗ್ರಾಮೇ ತಾರಕಾಮಯೇ ।
ಏವಮಾರ್ಯ ಸಮೀಕ್ಷ್ಯೈತಾನ್ ಪ್ರೀತೋ ಭವಿತುಮರ್ಹಸಿ ॥ ೫೬

ಇತಿ ಭ್ರಾತರಮಾಶ್ವಾಸ್ಯ ಹೃಷ್ಟಃ ಸೌಮಿತ್ರಿರಬ್ರವೀತ್ ।
ಅಥಾವೃತ್ಯ ಮಹೀಂ ಕೃತ್ಸ್ನಾಂ ಜಗಾಮ ಮಹತೀ ಚಮೂಃ ॥ ೫೭

ಋಕ್ಷವಾನರಶಾರ್ದೂಲೈರ್ನಖದಂಷ್ಟ್ರಾಯುಧೈರ್ವೃತಾ ।
ಕರಾಗ್ರೈಶ್ಚರಣಾಗ್ರೈಶ್ಚ ವಾನರೈರುತ್ಥಿತಂ ರಜಃ ॥ ೫೮

ಭೀಮಮಂತರ್ದಧೇ ಲೋಕಂ ನಿವಾರ್ಯ ಸವಿತುಃ ಪ್ರಭಾಮ್ ।
ಸಪರ್ವತವನಾಕಾಶಾಂ ದಕ್ಷಿಣಾಂ ಹರಿವಾಹಿನೀ ॥ ೫೯

ಛಾದಯಂತೀ ಯಯೌ ಭೀಮಾ ದ್ಯಾಮಿವಾಂಬುದಸಂತತಿಃ ।
ಉತ್ತರಂತ್ಯಾಂ ಚ ಸೇನಾಯಾಂ ಸತತಂ ಬಹುಯೋಜನಮ್॥ ೬೦

ನದೀಸ್ರೋತಾಂಸಿ ಸರ್ವಾಣಿ ಸಸ್ಯಂದುರ್ವಿಪರೀತವತ್ ।
ಸರಾಂಸಿ ವಿಮಲಾಂಭಾಂಸಿ ದ್ರುಮಾಕೀರ್ಣಾಂಶ್ಚ ಪರ್ವತಾನ್ ॥ ೬೧

---

ಕಾಲದಲ್ಲಿ ಸಮ್ಮಿಳಿತವಾದ ದೇವಸೇನೆಯಂತೆ ಈ ಕಪಿಸೇನೆಯು ಉತ್ಸಾಹದಿಂದ ಮೆರೆಯುತ್ತಿದೆ (೫೪–೫೫). ಆದ್ದರಿಂದ, ಅಣ್ಣ, ಇವೆಲ್ಲವನ್ನೂ ಗಮನಿಸಿ ಸಂತುಷ್ಟನಾಗು'' ಎಂದು ಲಕ್ಷ್ಮಣನು ಹರ್ಷದಿಂದ ತನ್ನ ಸೋದರನನ್ನು ಸಮಾಶ್ವಾಸಗೊಳಿಸಿದನು. ಕಪಿಗಳ ಮಹಾಸೇನೆಯು ಸಮಸ್ತ ಭೂಮಂಡಲವನ್ನು ವ್ಯಾಪಿಸುತ್ತ ಮುಂದೆ ಸಾಗಿತು (೫೬–೫೭). ನಖದಂಷ್ಟ್ರಾಯುಧರಾದ ಭಲ್ಲೂಕವಾನರವೀರರು ಧೂಳಿಯನ್ನು ಕೈಗಳಿಂದ ಚಿಮ್ಮುತ್ತ ಕಾಲುಗಳಿಂದ ಕೆದರಿ ಹಾರಿಸುತ್ತ ನಡೆದರು. ವಾನರವಾಹಿನಿಯು ರಭಸದಿಂದ ದಕ್ಷಿಣಕ್ಕೆ ಪ್ರಯಾಣಮಾಡುವಾಗ, ಭೀಷಣಾಕಾರವಾಗಿ ಧೂಳಿ ಯೆದ್ದು ಭೂಲೋಕವನ್ನು ಮುಚ್ಚಿತು. ಸೂರ್ಯಪ್ರಭೆಯು ಮಾಸಿತು. ಪರ್ವತವನಾಕಾಶಗಳು ಮರೆಯಾದವು (೫೮–೫೯). ಭೀಕರಾಕೃತಿಯ ಮೇಘಪಂಕ್ತಿಯು ಮೇಲಡರಿ ಗಗನಮಾರ್ಗವನ್ನು ಆಚ್ಛಾದಿಸುವಂತೆ, ಆ ವಾನರಸೇನೆಯು ಸುತ್ತಲೂ ಹರಡಿ ದಕ್ಷಿಣಮಾರ್ಗವನ್ನೇ ಮರೆಮಾಡುತ್ತ ಸಾಗಿತು. ಆ ಸೈನ್ಯವು ಹೊಳೆಗಳಲ್ಲಿಯೂ ಹಳ್ಳಕೊಳ್ಳಗಳಲ್ಲಿಯೂ ಇಳಿದು ಸತತವಾಗಿ ಸಾಗುತ್ತಿರುವಾಗ, (ಹರಿಯುವ ನೀರಿಗೆ ಅಡ್ಡಗಟ್ಟೆಯನ್ನು ಹಾಕಿ

ಸಮಾನ್ ಭೂಮಿಪ್ರದೇಶಾಂಶ್ಚ ವನಾನಿ ಫಲವಂತಿ ಚ ।
ಮಧ್ಯೇನ ಚ ಸಮಂತಾಚ್ಚ ತಿರ್ಯಕ್ಚಾ ಧಶ್ಚ ಸಾವಿಶತ್ ॥ ೬೨

ಸಮಾವೃತ್ಯ ಮಹೀಂ ಕೃತ್ಸ್ನಾಂ ಜಗಾಮ ಮಹತೀ ಚಮೂಃ ।
ತೇ ಹೃಷ್ಟಮನಸಃ ಸರ್ವೇ ಜಗ್ಮುರ್ಮಾರುತರಂಹಸಃ ॥ ೬೩

ಹರಯೋ ರಾಘವಸ್ಯಾರ್ಥೇ ಸಮಾರೋಪಿತವಿಕ್ರಮಾಃ ।
ಹರ್ಷವೀರ್ಯಬಲೋದ್ರೇಕಾನ್ ದರ್ಶಯಂತಃ ಪರಸ್ಪರಮ್॥೬೪

ಯೌವನೋತ್ಸೇಕಜಾನ್ ದರ್ಪಾನ್ ವಿವಿಧಾಂಶ್ಚಕ್ರುರಧ್ವನಿ ।
ತತ್ರ ಕೇಚಿದ್ದ್ರುತಂ ಜಗ್ಮುರುತ್ಪೇತುಶ್ಚ ತಥಾಪರೇ ॥ ೬೫

ಕೇಚಿತ್ಕಿಲಕಿಲಾಂ ಚಕ್ರುರ್ವಾನರಾ ವನಗೋಚರಾಃ ।
ಪ್ರಾಸ್ಫೋಟಯಂಶ್ಚ ಪುಚ್ಛಾನಿ ಸಂನಿಜಘ್ನುಃ ಪದಾನ್ಯಪಿ ॥ ೬೬

ಭುಜಾನ್ ವಿಕ್ಷಿಪ್ಯ ಶೈಲಾಂಶ್ಚ ದ್ರುಮಾನನ್ಯೇ ಬಭಂಜಿರೇ ।
ಆರೋಹಂತಶ್ಚ ಶೃಂಗಾಣಿ ಗಿರೀಣಾಂ ಗಿರಿಗೋಚರಾಃ ॥ ೬೭

---

ದಂತಾಗಲು) ನೀರು ಹಿಮ್ಮೊಗವಾಗಿ ಬಹು ಯೋಜನಗಳವರೆಗೆ ಹರಿಯಿತು! (೬೦–೬೧). ತಿಳಿನೀರಿನ ಕೊಳಗಳು, ಮರಗಳು ಬೆಳೆದಿರುವ ಬೆಟ್ಟಗಳು, ಮೈದಾನ, ಹಣ್ಣುಗಳಿಂದ ತುಂಬಿದ ಕಾಡುಗಳು ಮೊದಲಾದವುಗಳಲ್ಲಿ ನುಗ್ಗುತ್ತ ಅವುಗಳ ನಡುವೆ ಸುತ್ತ–ಪಕ್ಕ–ಕೆಳಗೆ, ಹೀಗೆ ಎಲ್ಲೆಲ್ಲಿಯೂ ಭೂಪ್ರದೇಶವನ್ನು ವ್ಯಾಪಿಸುತ್ತ ಆ ಮಹಾಸೈನ್ಯವು ಭರದಿಂದ ಸಾಗಿತು. ವಾನರಯೋಧರೆಲ್ಲರೂ ಹರ್ಷದಿಂದ ಉಬ್ಬುತ್ತ ವಾಯುವೇಗದಿಂದ ಹೋಗುತ್ತಿದ್ದರು (೬೨–೬೩). ಶ್ರೀರಾಮನ ಕಾರ್ಯಕ್ಕಾಗಿ ಹೋಗುವೆವೆಂದು ಆ ವಾನರರು ಮಹೋತ್ಸಾಹವನ್ನು ತಾಳಿ, ತಮ್ಮ ಆನಂದವನ್ನೂ ಬಲಪರಾಕ್ರಮಗಳನ್ನೂ ಮೆರೆಸುತ್ತ ಹೋಗುತ್ತಿದ್ದರು. ನವಯೌವನದ ದರ್ಪವನ್ನು ತೋರಿಸುತ್ತ ದಾರಿಹಿಡಿದು ಸಾಗುತ್ತಿದ್ದರು. ಇತರರನ್ನು ಮೀರಿಸಬೇಕೆಂದು ಕೆಲವರು ಓಡತೊಡಗಿದರು! ಕೆಲವರು ಮೇಲಕ್ಕೆ ಕುಪ್ಪಳಿಸಿದರು! (೬೪–೬೫). ಕೆಲವು ಕಪಿವೀರರು ಕಿಲಕಿಲಯೆಂದು ವಟಗುಟ್ಟಿದರು! ಹಲವರು ಬಾಲವನ್ನು ನೆಲಕ್ಕೆ ಬಡಿದರು! ಹಲವರು ಸೆಡ್ಡುಹೊಡೆದರು! ಕೆಲವರು ಬಂಡೆಗಳನ್ನೆತ್ತಿ ತೋಳುಗಳಿಂದ ಬೀಸಿ ಎಸೆದರು! ಕೆಲವರು ಮರಗಳನ್ನು ಮುರಿದರು ! ಆ ವಾನರರು

ಮಹಾನಾದಾನ್ ವಿಮುಂಚಂತಿ ಕ್ಷ್ವೇಲಾಮನ್ಯೇ ಪ್ರಚಕ್ರಿರೇ ।
ಊರುವೇಗೈಶ್ಚ ಮಮೃದುರ್ಲತಾಜಾಲಾನ್ಯನೇಕಶಃ ॥ ೬೮

ಜೃಂಭಮಾಣಾಶ್ಚ ವಿಕ್ರಾಂತಾ ವಿಚಿಕ್ರೀಡುಃ ಶಿಲಾದ್ರುಮೈಃ ।
ಶತೈಃ ಶತಸಹಸ್ರೈಶ್ಚ ಕೋಟೀಭಿಶ್ಚ ಸಹಸ್ರಶಃ ॥ ೬೯

ವಾನರಾಣಾಂ ಸುಘೋರಾಣಾಂ ಯೂಥೈಃ ಪರಿವೃತಾ ಮಹೀ ।
ಸಾ ಸ್ಮ ಯಾತಿ ದಿವಾರಾತ್ರಂ ಮಹತೀ ಹರಿವಾಹಿನೀ ॥ ೭೦

ಹೃಷ್ಟಾ ಪ್ರಮುದಿತಾ ಸೇನಾ ಸುಗ್ರೀವೇಣಾಭಿರಕ್ಷಿತಾ ।
ವಾನರಾಸ್ತ್ವರಿತಂ ಯಾಂತಿ ಸರ್ವೇ ಯುದ್ಧಾಭಿನಂದಿನಃ ॥ ೭೧

ಮುಮೋಕ್ಷಯಿಷವಃ ಸೀತಾಂ ಮುಹೂರ್ತಂ ಕ್ವಾಪಿ ನಾಸತ ।
ತತಃ ಪಾದಪಸಂಬಾಧಂ ನಾನಾಮೃಗಸಮಾಯುತಮ್ ॥ ೭೨

ಸಹ್ಯಪರ್ವತಮಾಸೇದುರ್ಮಲಯಂ ಚ ಮಹೀಧರಮ್ ।
ಕಾನನಾನಿ ವಿಚಿತ್ರಾಣಿ ನದೀಪ್ರಸ್ರವಣಾನಿ ಚ ॥ ೭೩

---

ಬೆಟ್ಟಗಳ ತುದಿಗಳನ್ನೇರಿ ಗರ್ಜಿಸಿದರು ! ಕೆಲವರು ಕೇಕೆಹಾಕಿದರು. ಅವರು ಹೋಗುವಾಗ ಅಡ್ಡಲಾದ ಪೊದೆಗಳನ್ನು ತೊಡೆಗಳ ವೇಗದಿಂದಲೇ ತೀಡಿದರು! (೬೭–೬೮). ಆ ಕಪಿವೀರರು ಪರಾಕ್ರಮದಿಂದ ವಿಜೃಂಭಿಸುತ್ತ ಬಂಡೆಗಳನ್ನೂ ಮರಗಳನ್ನೂ ಕಿತ್ತು ಈಡಾಡಿ ಕ್ರೀಡಿಸಿದರು! ನೂರು ಸಾವಿರ ಲಕ್ಷ ಕೋಟಿ ಗಟ್ಟಲೆ ಗುಂಪುಗುಂಪಾಗಿ ಸಾಗುತ್ತಿದ್ದ ಘೋರ ವಾನರ ವೀರರಿಂದ ಮಹೀತಳವು ವ್ಯಾಪಿಸಿಹೋಯಿತು. ಆದರೂ (ಮಿತಿಮೀರಿ ನಡೆಯದಂತೆ) ಸುಗ್ರೀವನಿಂದ ಪರಿರಕ್ಷಿತವಾಗಿದ್ದ ಆ ವಾನರವಾಹಿನಿಯು ಸಂತೋಷದಿಂದ ಅಹೋರಾತ್ರವೂ ಪ್ರಯಾಣಮಾಡಿತು (೬೯–೭೦). ಯುದ್ಧವು ಯಾವಾಗ ಒದಗುವುದೋ ಎಂಬ ಆಕಾಂಕ್ಷೆಯಿಂದ ಹಿಗ್ಗುತ್ತ ಆ ಕಪಿಯೋಧರು ಬೇಗಬೇಗನೆ ಪ್ರಯಾಣ ಬೆಳೆಸಿದರು. ಆದಷ್ಟು ಬೇಗನೆ ಸೀತಾದೇವಿಯನ್ನು ಸೆರೆಯಿಂದ ಬಿಡಿಸ ಬೇಕೆಂಬ ಉತ್ಸಾಹದಿಂದ ಆ ವೀರರು ಎಲ್ಲಿಯೂ ಕ್ಷಣಕಾಲವೂ ತಂಗಲಿಲ್ಲ (೭೧–೭೨). ಹೀಗೆ ಪ್ರಯಾಣಮಾಡುತ್ತ ಅವರು ಸಹ್ಯಾದ್ರಿಯನ್ನೂ ಮಲಯಮಹೀಧರವನ್ನೂ ಸೇರಿದರು. ಅಲ್ಲಿ ಮರಗಳು ದಟ್ಟವಾಗಿ ಬೆಳೆದಿದ್ದವು. ವಿವಿಧ ಮೃಗಗಳು ಸಂಚರಿಸುತ್ತಿದ್ದವು. ಹೂಗಳಿಂದ ಚಿತ್ರವರ್ಣವಾದ

ಪಶ್ಯನ್ನಭಿಯಯೌ ರಾಮಃ ಸಹ್ಯಸ್ಯ ಮಲಯಸ್ಯ ಚ ।
ಚಂಪಕಾಂಸ್ತಿಲಕಾಂಶ್ಚೂತಾನಶೋಕಾನ್ ಸಿಂಧುವಾರಕಾನ್ ॥ ೭೪

ಕರವೀರಾಂಶ್ಚ ತಿನಿಶಾನ್ ಭಂಜಂತಿ ಸ್ಮ ಪ್ಲವಂಗಮಾಃ ।
ಅಂಕೋಲಾಂಶ್ಚ ಕರಂಜಾಂಶ್ಚ ಪ್ಲಕ್ಷನ್ಯಗ್ರೋಧತಿಂದುಕಾನ್॥ ೭೫

ಜಂಬೂಕಾಮಲಕಾನ್ನೀಪಾನ್ ಭಂಜಂತಿ ಸ್ಮ ಪ್ಲವಂಗಮಾಃ ।
ಪ್ರಸ್ತರೇಷು ಚ ರಮ್ಯೇಷು ವಿವಿಧಾಃ ಕಾನನದ್ರುಮಾಃ ॥ ೭೬

ವಾಯುವೇಗಪ್ರಚಲಿತಾಃ ಪುಷ್ಪೈರವಕಿರಂತಿ ತಾನ್ ।
ಮಾರುತಃ ಸುಖಸಂಸ್ಪರ್ಶೋ ವಾತಿ ಚಂದನಶೀತಲಃ ॥ ೭೭

ಷಟ್ಪದೈರನುಕೂಜದ್ಭಿರ್ವನೇಷು ಮಧುಗಂಧಿಷು ।
ಅಧಿಕಂ ಶೈಲರಾಜಸ್ತು ಧಾತುಭಿಃ ಸುವಿಭೂಷಿತಃ ॥ ೭೮

ಧಾತುಭ್ಯಃ ಪ್ರಸೃತೋ ರೇಣುರ್ವಾಯುವೇಗವಿಘಟ್ಟಿತಃ ।
ಸುಮಹದ್ವಾನರಾನೀಕಂ ಛಾದಯಾಮಾಸ ಸರ್ವತಃ ॥ ೭೯

ಗಿರಿಪ್ರಸ್ಥೇಷು ರಮ್ಯೇಷು ಸರ್ವತಃ ಸಂಪ್ರಪುಷ್ಪಿತಾಃ ।
ಕೇತಕ್ಯಃ ಸಿಂದುವಾರಾಶ್ಚ ವಾಸಂತ್ಯಶ್ಚ ಮನೋರಮಾಃ ॥ ೮೦

---

ಕಾನನಗಳೂ ನದಿಗಳೂ ಹಳ್ಳಗಳೂ ಗೋಚರಿಸಿದವು (೭೩). ಶ್ರೀರಾಮನು ಅವುಗಳ ಸೌಂದರ್ಯವನ್ನು ನೋಡುತ್ತ ಹೋದನು. ಚಂಪಕ, ತಿಲಕ, ಚೂತ, ಅಶೋಕ, ಸಿಂಧುವಾರ, ಕರವೀರ, ತಿನಿಶ, ಅಂಕೋಲ, ಕರಂಜ, ಪ್ಲಕ್ಷ, ನ್ಯಗ್ರೋಧ, ತಿಂದುಕ, ನೇರಿಳೆ, ನೆಲ್ಲಿ, ತಮಾಲ ಮುಂತಾದ ಮರಗಳು ಹೇರಳವಾಗಿ ಬೆಳೆದಿದ್ದವು. ಗಾಳಿಯ ವೇಗಕ್ಕೆ ಚಲಿಸುತ್ತಿದ್ದ ಆ ಮರಗಳು ವಾನರಸೇನೆಯಮೇಲೆ ಹೂಮಳೆಯನ್ನು ಸುರಿಸುತ್ತಿದ್ದವು. ವಾನರರು ಆ ಮರ ಗಳನ್ನು ಮುರಿದೆಸೆಯುತ್ತಿದ್ದರು! (೭೪–೭೬). ಚಂದನಶೀತಲವಾದ ಮಂದ ಮಾರುತವು ಸುಖಕರವಾಗಿ ಬೀಸುತ್ತಿದ್ದಿತು. ಹೂಗಳ ಬಂಡಿನಿಂದ ಕಂಪಾದ ಕಾಡುಗಳಲ್ಲಿ ದುಂಬಿಗಳು ಝೇಂಕರಿಸುತ್ತಿದ್ದವು. ಆ ಪರ್ವತವು ವಿವಿಧ ಗೈರಿಕಧಾತುಗಳಿಂದ ಶೋಭಿಸುತ್ತ ಮನೋಹರವಾಗಿತ್ತು. ಗಾಳಿಯ ಬಡಿತ ದಿಂದ ಹಾರಿಬರುತ್ತಿದ್ದ ಗೈರಿಕಧಾತುಗಳ ಧೂಳಿಯು ಮಹತ್ತರವಾದ ಆ ವಾನರ ಸೇನೆಯನ್ನೇ ಆವರಿಸಿತು (೭೭–೭೯). ಬೆಟ್ಟದ ಸಮೀಪದಲ್ಲಿದ್ದ ರಮ್ಯವಾದ

ಮಾಧವ್ಯೋ ಗಂಧಪೂರ್ಣಾಶ್ಚ ಕುಂದಗುಲ್ಮಾಶ್ಚ ಪುಷ್ಪಿತಾಃ ।
ಚಿರಿಬಿಲ್ವಾ ಮಧೂಕಾಶ್ಚ ವಂಜುಲಾ ವಕುಲಾಸ್ತಥಾ ॥ ೮೧

ಸ್ಫೂರ್ಜಕಾಸ್ತಿಲಕಾಶ್ಚೈವ ನಾಗವೃಕ್ಷಾಶ್ಚ ಪುಷ್ಪಿತಾಃ ।
ಚೂತಾಃ ಪಾಟಲಯಶ್ಚೈವ ಕೋವಿದಾರಾಶ್ಚ ಪುಷ್ಪಿತಾಃ ॥ ೮೨

ಮುಚುಲಿಂದಾರ್ಜುನಾಶ್ಚೈವ ಶಿಂಶಪಾಃ ಕುಟಜಾಸ್ತಥಾ ।
ಧವಾಃ ಶಾಲ್ಮಲಯಶ್ಚೈವ ರಕ್ತಾಃ ಕುರಬಕಾಸ್ತಥಾ ॥ ೮೩

ಹಿಂತಾಲಾಸ್ತಿನಿಶಾಶ್ಚೈವ ಚೂರ್ಣಕಾ ನೀಪಕಾಸ್ತಥಾ ।
ನೀಲಾಶೋಕಾಶ್ಚ ವರಣಾ ಅಂಕೋಲಾಃ ಪದ್ಮಕಾಸ್ತಥಾ ॥ ೮೪

ಪ್ಲವಮಾನೈಃ ಪ್ಲವಂಗೈಸ್ತು ಸರ್ವೇ ಪರ್ಯಾಕುಲೀಕೃತಾಃ ।
ವಾಪ್ಯಸ್ತಸ್ಮಿನ್ ಗಿರೌ ಶೀತಾಃ ಪಲ್ವಲಾನಿ ತಥೈವ ಚ ॥ ೮೫

ಚಕ್ರವಾಕಾನುಚರಿತಾಃ ಕಾರಂಡವನಿಷೇವಿತಾಃ ।
ಪ್ಲವೈಃ ಕ್ರೌಂಚೈಶ್ಚ ಸಂಕೀರ್ಣಾ ವರಾಹಮೃಗಸೇವಿತಾಃ ॥ ೮೬

ಋಕ್ಷೈಸ್ತರಕ್ಷುಭಿಃ ಸಿಂಹೈಃ ಶಾರ್ದೂಲೈಶ್ಚ ಭಯಾವಹೈಃ ।
ವ್ಯಾಲೈಶ್ಚ ಬಹುಭಿರ್ಭೀಮೈಃ ಸೇವ್ಯಮಾನಃ ಸಮಂತತಃ ॥ ೮೭

---

ಪ್ರಸ್ಥಭೂಮಿಯಲ್ಲಿ ನಾನಾತರುಗಳು ಅರಳಿನಿಂತಿದ್ದುವು. ಕೇತಕಿ, ಸಿಂಧುವಾರ, ವಾಸಂತಿ, ಮಾಧವೀ, ಕುಂದ ಮುಂತಾದ ಲತಾಕುಂಜಗಳಲ್ಲಿ ಹೂಗಳು ಅರಳಿದ್ದುವು. ಚಿರಿಬಿಲ್ವ, ಮಧೂಕ, ವಂಜುಲ, ಬಕುಲ, ಸ್ಫೂರ್ಜಕ, ತಿಲಕ, ನಾಗವೃಕ್ಷ, ಚೂತ, ಪಾಟಲಿ, ಕೋವಿದಾರ ಮೊದಲಾದವುಗಳು ಕುಸುಮಿತವಾಗಿದ್ದುವು (೮೦–೮೨). ಮುಚುಲಿಂದ, ಅರ್ಜುನ, ಶಿಂಶಪ, ಕುಟಜ, ಧವ, ಶಾಲ್ಮಲಿ, ರಕ್ತಕುರಬಕ, ಹಿಂತಾಲ, ತಿನಿಶ, ಚೂರ್ಣಕ, ನೀಪಕ, ನೀಲಾಶೋಕ, ವರಣ, ಅಂಕೋಲ, ಪದ್ಮಕ ಮೊದಲಾದ ಮರಗಳು ಪುಷ್ಪಿತಗಳಾಗಿದ್ದುವು (೮೩–೮೪). ಅವೆಲ್ಲವೂ ಈ ಕಪಿಗಳ ಹಾರಾಟಗಳಿಂದ ಚಲ್ಲಾಪಿಲ್ಲಿಯಾದವು. ಆ ಶೈಲದಲ್ಲಿ ತಣ್ಣೀರಿನಿಂದ ತುಂಬಿದ ಕೆರೆ ಕೊಳಗಳಲ್ಲಿ ಚಕ್ರವಾಕಗಳೂ ಕಾರಂಡವಗಳೂ ಈಜಾಡುತ್ತಿದ್ದುವು. ಪ್ಲವ, ಕ್ರೌಂಚ ಮುಂತಾದ ನೀರುಹಕ್ಕಿಗಳು ತುಂಬಿದ್ದುವು (೮೫–೮೬). ಕಾಡುಗಳಲ್ಲಿ ಹಂದಿ, ಕರಡಿ, ಚಿರತ, ಸಿಂಹ, ಹುಲಿ, ಸರ್ಪ ಮುಂತಾದ ಭೀಕರ ಜಂತುಗಳಿದ್ದುವು. ಅಲ್ಲಿದ್ದ

ಪದ್ಮೈಃ ಸೌಗಂಧಿಕೈಃ ಕುಮುದೈಶ್ಚೋತ್ಪಲೈಸ್ತಥಾ ।
ವಾರಿಜೈರ್ವಿವಿಧೈಃ ಪುಷ್ಪೈ ರಮ್ಯಾಸ್ತತ್ರ ಜಲಾಶಯಾಃ ॥ ೮೮

ತಸ್ಯ ಸಾನುಷು ಕೂಜಂತಿ ನಾನಾದ್ವಿಜಗಣಾಸ್ತಥಾ ।
ಸ್ನಾತ್ವಾ ಪೀತ್ವೋದಕಾನ್ಯತ್ರ ಜಲೇ ಕ್ರೀಡಂತಿ ವಾನರಾಃ ॥ ೮೯

ಅನ್ಯೋನ್ಯಂ ಪ್ಲಾವಯಂತಿ ಸ್ಮ ಶೈಲಮಾರುಹ್ಯ ವಾನರಾಃ ।
ಫಲಾನ್ಯಮೃತಗಂಧೀನಿ ಮೂಲಾನಿ ಕುಸುಮಾನಿ ಚ ॥ ೯೦

ಬಭಂಜುರ್ವಾನರಾಸ್ತತ್ರ ಪಾದಪಾನಾಂ ಮದೋತ್ಕಟಾಃ ।
ದ್ರೋಣಮಾತ್ರಪ್ರಮಾಣಾನಿ ಲಂಬಮಾನಾನಿ ವಾನರಾಃ ॥ ೯೧

ಯಯುಃ ಪಿಬಂತೋ ಹೃಷ್ಟಾಸ್ತೇ ಮಧೂನಿ ಮಧುಪಿಂಗಲಾಃ ।
ಪಾದಪಾನವಭಂಜಂತೋ ವಿಕರ್ಷಂತಸ್ತಥಾ ಲತಾಃ ॥ ೯೨

ವಿಧಮಂತೋ ಗಿರಿವರಾನ್ ಪ್ರಯಯುಃ ಪ್ಲವಗರ್ಷಭಾಃ ।
ವೃಕ್ಷೇಭ್ಯೋಽನ್ಯೇ ತು ಕಪಯೋ ನರ್ದಂತೋ ಮಧುದರ್ಪಿತಾಃ ॥

---

ಜಲಾಶಯಗಳಲ್ಲಿ ತಾವರೆ, ಸೌಗಂಧಿಕ, ಬಿಳಿಯನ್ನೈದಿಲೆ, ಇಂದೀವರ ಮುಂತಾದ ಜಲಪುಷ್ಪಗಳು ಶೋಭಿಸುತ್ತಿದ್ದವು (೮೭–೮೮). ಆ ಪರ್ವತದ ಸಾನುಪ್ರದೇಶ ಗಳಲ್ಲಿ ಬಗೆಬಗೆಯ ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿದ್ದವು. ಈ ವಾನರರು ಆ ಜಲಾಶಯಗಳಲ್ಲಿ ಸ್ನಾನಮಾಡಿ ನೀರು ಕುಡಿದು ಜಲಕ್ರೀಡೆಯಾಡಿದರು. ಒಬ್ಬರನ್ನೊಬ್ಬರು ನೀರಿಗೆ ತಳ್ಳಿದರು! (೮೯). ಅನಂತರ ಬೆಟ್ಟವನ್ನು ಹತ್ತಿ ಅಮೃತದಂತೆ ಸವಿಯಾದ ಹಣ್ಣುಗಳನ್ನು ಬಿಟ್ಟಿದ್ದ ಮರಗಳನ್ನು ಬಲದ ಕೊಬ್ಬಿ ನಿಂದ ಉರುಳಿಸಿದರು (ಹಣ್ಣುಗಳನ್ನು ತಿಂದರು). ಅಲ್ಲಲ್ಲಿ ಜೋತಾಡುತ್ತಿದ್ದ ದೊಡ್ಡ ದೊಡ್ಡ ಜೇನುಗೂಡುಗಳನ್ನು ಕಿತ್ತು ಜೇನನ್ನು ಕುಡಿಯುತ್ತ ಉಲ್ಲಾಸ ದಿಂದ ಮುಂದೆ ಸಾಗಿದರು! (೯೦–೯೧). ಆ ವಾನರವೀರರು ಮರಗಳನ್ನು ಮುರಿದು ಈಡಾಡುತ್ತ ಬಳ್ಳಿಗಳನ್ನು ಕಿತ್ತೆಳೆಯುತ್ತ ಬೆಟ್ಟಗಳನ್ನು ಹುಡಿಗರೆ ಯುತ್ತ ಪ್ರಯಾಣಮಾಡಿದರು. ಕೆಲವರು ಮರಗಳನ್ನು ಹತ್ತಿ ಜೇನನ್ನು ಕುಡಿದು ದರ್ಪದಿಂದ ಕೂಗುತ್ತಿದ್ದರು. ಅದನ್ನು ಕಂಡು ಕೆಲವರು ಥಟ್ಟನೆ ಆ ಮರಗಳನ್ನು ಹತ್ತುತ್ತಿದ್ದರು. ಕೆಲವರು ಕೂಡಲೆ ಆ ಮರಗಳಿಂದ ಧುಮುಕು ತ್ತಿದ್ದರು! (೯೨–೯೩).

**ಅನ್ಯೇ ವೃಕ್ಷಾನ್ ಪ್ರಪದ್ಯಂತೇ ಪ್ರಪತಂತ್ಯಪಿ ಚಾಪರೇ ।**
**ಬಭೂವ ವಸುಧಾ ತೈಸ್ತು ಸಂಪೂರ್ಣಾ ಹರಿಯೂಥಪೈಃ ॥ ೯೪**

**ಯಥಾ ಕಲಮಕೇದಾರೈಃ ಪಕ್ವೈರಿವ ವಸುಂಧರಾ ।**
**ಮಹೇಂದ್ರಮಥ ಸಂಪ್ರಾಪ್ಯ ರಾಮೋ ರಾಜೀವಲೋಚನಃ ॥ ೯೫**

**ಅಧ್ಯಾರೋಹನ್ಮಹಾಬಾಹುಃ ಶಿಖರಂ ದ್ರುಮಭೂಷಿತಮ್ ।**
**ತತಃ ಶಿಖರಮಾರುಹ್ಯ ರಾಮೋ ದಶರಥಾತ್ಮಜಃ ॥ ೯೬**

**ಕೂರ್ಮಮೀನಸಮಾಕೀರ್ಣಮಪಶ್ಯತ್ಸಲಿಲಾಕರಮ್ ।**
**ತೇ ಸಹ್ಯಂ ಸಮತಿಕ್ರಮ್ಯ ಮಲಯಂ ಚ ಮಹಾಗಿರಿಮ್ ॥ ೯೭**

**ಆಸೇದುರಾನುಪೂರ್ವ್ಯೇಣ ಸಮುದ್ರಂ ಭೀಮನಿಃಸ್ವನಮ್ ।**
**ಅವರುಹ್ಯ ಜಗಾಮಾಶು ವೇಲಾವನಮನುತ್ತಮಮ್ ॥ ೯೮**

**ರಾಮೋ ರಮಯತಾಂ ಶ್ರೇಷ್ಠಃ ಸಸುಗ್ರೀವಃ ಸಲಕ್ಷ್ಮಣಃ ।**
**ಅಥ ಧೌತೋಪಲತಲಾಂ ತೋಯೌಘೈಃ ಸಹಸೋತ್ಥಿತೈಃ ॥ ೯೯**

**ವೇಲಾಮಾಸಾದ್ಯ ವಿಪುಲಾಂ ರಾಮೋ ವಚನಮಬ್ರವೀತ್ ।**
**ಏತೇ ವಯಮನುಪ್ರಾಪ್ತಾಃ ಸುಗ್ರೀವ ವರುಣಾಲಯಮ್ ॥ ೧೦೦**

---

ಬಳೆದ ಬತ್ತದ ಪೈರುಗಳಿಂದ ತುಂಬಿದ ಗದ್ದೆಗಳಂತೆ, ಆ ವನಪ್ರದೇಶ ವಲ್ಲವೂ ಕಪಿಯೋಧರಿಂದ ತುಂಬಿಹೋಯಿತು. ಹೀಗೆ ಪದ್ಮದಳಾಯತಾಕ್ಷ ನಾದ ಶ್ರೀರಾಮನು ಕಪಿಸೇನೆಯೊಡನೆ ಪ್ರಯಾಣಮಾಡುತ್ತ ಮಹೇಂದ್ರಗಿರಿ ಯನ್ನು ತಲುಪಿದನು (೯೪–೯೫). ಅನಂತರ ಆಜಾನುಬಾಹುವಾದ ಆ ದಶರಥಾತ್ಮಜನು ಮಹೇಂದ್ರಗಿರಿಯ ಶಿಖರವನ್ನೇರಿ ನೋಡಲಾಗಿ, ಮತ್ಸ್ಯ ಕೂರ್ಮಾದಿ ಜಲಜಂತುಗಳಿಂದ ತುಂಬಿದ ಮಹಾಸಾಗರವು ಗೋಚರಿಸಿತು ! ವಾನಸೇನೆಯೂ ಕ್ರಮವಾಗಿ ಸಹ್ಯಮಲಯಾಚಲಗಳನ್ನು ದಾಟಿಹೋಗಿ, ಭೀಕರವಾಗಿ ಮೊರೆಯುತ್ತಿದ್ದ ಆ ಸಮುದ್ರವನ್ನು ಕಂಡಿತು (೯೬–೯೭). ಆಮೇಲ ಶ್ರೀರಾಮನು ಮಹೇಂದ್ರಶಿಖರದಿಂದಿಳಿದು ಸುಗ್ರೀವ ಲಕ್ಷ್ಮಣ ಸಮೇತನಾಗಿ ಸಮುದ್ರದ ಕಡೆಗೆ ಬೇಗಬೇಗನೆ ಪ್ರಯಾಣಮಾಡಿದನು (೯೮). ಸಮುದ್ರತೀರದಲ್ಲಿರುವ ಶಿಲೆಗಳು ಉಕ್ಕಿಬಂದ ಅಲೆಗಳಿಂದ ತೊಳೆಯಲ್ಪಟ್ಟು ಸ್ವಚ್ಛವಾಗಿದ್ದವು. ವಿಶಾಲವಾದ ಆ ಸಮುದ್ರವೇಲೆಯನ್ನು ಸೇರಿ, ಶ್ರೀರಾಮನು

ಇಹೇದಾನೀಂ ವಿಚಿಂತಾ ಸಾ ಯಾ ನಃ ಪೂರ್ವಂ ಸಮುತ್ಥಿತಾ ।
ಅತಃ ಪರಮತೀರೋಽಯಂ ಸಾಗರಃ ಸರಿತಾಂ ಪತಿಃ ॥ ೧೦೧

ನ ಚಾಯಮನುಪಾಯೇನ ಶಕ್ಯಸ್ತರಿತುಮರ್ಣವಃ ।
ತದಿಹೈವ ನಿವೇಶೋಽಸ್ತು ಮಂತ್ರಃ ಪ್ರಸ್ತೂಯತಾಮಿತಿ ॥ ೧೦೨

ಯಥೇದಂ ವಾನರಬಲಂ ಪರಂ ಪಾರಮವಾಪ್ನುಯಾತ್ ।
ಇತೀವ ಸ ಮಹಾಬಾಹುಃ ಸೀತಾಹರಣಕರ್ಶಿತಃ ॥ ೧೦೩

ರಾಮಃ ಸಾಗರಮಾಸಾದ್ಯ ವಾಸಮಾಜ್ಞಾಪಯತ್ತದಾ ।
ಸರ್ವಾಃ ಸೇನಾ ನಿವೇಶ್ಯಂತಾಂ ವೇಲಾಯಾಂ ಹರಿಪುಂಗವ ॥ ೧೦೪

ಸಂಪ್ರಾಪ್ತೋ ಮಂತ್ರಕಾಲೋ ನಃ ಸಾಗರಸ್ಯಾಸ್ಯ ಲಂಘನೇ ।
ಸ್ವಾಂ ಸ್ವಾಂ ಸೇನಾಂ ಸಮುತ್ಸೃಜ್ಯ ಮಾ ಚ ಕಶ್ಚಿತ್ಕುತೋ ವ್ರಜೇತ್

ಗಚ್ಛಂತು ವಾನರಾಃ ಶೂರಾಃ ಜ್ಞೇಯಂ ಛನ್ನಂ ಭಯಂ ಚ ನಃ ।
ರಾಮಸ್ಯ ವಚನಂ ಶ್ರುತ್ವಾ ಸುಗ್ರೀವಃ ಸಹಲಕ್ಷ್ಮಣಃ ॥ ೧೦೬

---

ಸುಗ್ರೀವನನ್ನು ಕುರಿತು ''ಮಿತ್ರ–ಸುಗ್ರೀವ, ನಾವು ಸಮುದ್ರದ ಬಳಿಗೆ ಬಂದಂತಾಯಿತು (೯೯–೧೦೦). ಈಗ ನಮಗೆ ಹಿಂದೊದಗಿದ ಚಿಂತೆಯೇ ಪ್ರಾಪ್ತವಾಯಿತು! ಆಚೆಯ ತೀರವೇ ಇಲ್ಲವೋ ಎಂಬಂತೆ ಈ ಮಹಾ ಸಾಗರವು ಅಪಾರವಾಗಿದೆ! ಉಪಾಯದಿಂದಲ್ಲದೆ ಇದನ್ನು ದಾಟುವುದು ಶಕ್ಯ ವಲ್ಲ. ಆದ್ದರಿಂದ ಸೇನೆಯು ಇಲ್ಲಿಯೇ ಬಿಡಾರವನ್ನು ಹೂಡಲಿ. ಈ ವಾನರ ಬಲವು ಸಮುದ್ರದ ಆಚೆಯ ತೀರವನ್ನು ಸೇರುವ ಬಗೆ ಯಾವುದು ಎಂಬ ವಿಷಯದಲ್ಲಿ ಮುಂದಿನ ಮಂತ್ರಾಲೋಚನೆಯನ್ನು ಆರಂಭಿಸೋಣ!'' ಎಂದು ಹೇಳಿದನು (೧೦೧–೧೦೨). 'ಸೀತಾಪಹರಣದಿಂದ ಖಿನ್ನನಾಗಿದ್ದ ಆ ವೀರನು ಸಮುದ್ರತೀರದಲ್ಲಿ ನಿಂತು ''ವಾನರೋತ್ತಮ, ಇಲ್ಲಿ ಸಕಲಸೇನೆಯೂ ಬಿಡಾರ ಹೂಡಲಿ. ಈ ಕಡಲನ್ನು ದಾಟುವುದು ಹೇಗೆಂದು ಮಂತ್ರಾಲೋಚನೆ ಮಾಡಬೇಕಾದ ಕಾಲವು ನಮಗೆ ಪ್ರಾಪ್ತವಾಯಿತು. ಈಗ ಯಾವ ವಾನರ ಯೋಧನೂ ತನ್ನ ತನ್ನ ಸೇನಾಯೂಥವನ್ನಗಲಿ ಎಲ್ಲಿಯೂ ಕದಲಕೂಡದು (೧೦೩–೧೦೫). ಶೂರರಾದ ಕೆಲವು ವಾನರರು ಮಾತ್ರ ಅಲ್ಲಲ್ಲಿ ಸುತ್ತಾಡಿ, ಶತ್ರುಗಳು ರಹಸ್ಯವಾಗಿ ನಮಗೆ ಕಲ್ಪಿಸಿರಬಹುದಾದ ಅಪಾಯವನ್ನು ಎಚ್ಚರಿಕೆ

ಸೇನಾಂ ನ್ಯವೇಶಯತ್ತೀರೇ ಸಾಗರಸ್ಯ ದ್ರುಮಾಯತೇ ।
ವಿರರಾಜ ಸಮೀಪಸ್ಥಂ ಸಾಗರಸ್ಯ ಚ ತದ್ಬಲಮ್ ೧೦೭

ಮಧುಪಾಂಡುಜಲಃ ಶ್ರೀಮಾನ್ ದ್ವಿತೀಯ ಇವ ಸಾಗರಃ ।
ವೇಲಾವನಮುಪಾಗಮ್ಯ ತತಸ್ತೇ ಹರಿಪುಂಗವಾಃ ॥ ೧೦೮

ವಿನಿವಿಷ್ಟಾಃ ಪರಂ ಪಾರಂ ಕಾಂಕ್ಷಮಾಣಾ ಮಹೋದಧೇಃ ।
ತೇಷಾಂ ನಿವಿಶಮಾನಾನಾಂ ಸೈನ್ಯಸನ್ನಾಹನಿಃಸ್ವನಃ ॥ ೧೦೯

ಅಂತರ್ಧಾಯ ಮಹಾನಾದಮರ್ಣವಸ್ಯ ಪ್ರಶುಶ್ರುವೇ ।
ಸಾ ವಾನರಾಣಾಂ ಧ್ವಜಿನೀ ಸುಗ್ರೀವೇಣಾಭಿಪಾಲಿತಾ ॥ ೧೧೦

ತ್ರಿಧಾ ನಿವಿಷ್ಟಾ ಮಹತೀ ರಾಮಸ್ಯಾರ್ಥಪರಾಭವತ್ ।
ಸಾ ಮಹಾರ್ಣವಮಾಸಾದ್ಯ ಹೃಷ್ಟಾ ವಾನರವಾಹಿನೀ ॥ ೧೧೧

ವಾಯುವೇಗಸಮಾಧೂತಂ ಪಶ್ಯಮಾನಾ ಮಹಾರ್ಣವಮ್ ।
ದೂರಪಾರಮಸಂಬಾಧಂ ರಕ್ಷೋಗಣನಿಷೇವಿತಮ್ ॥ ೧೧೨

---

ಯಿಂದ ತಿಳಿಯಲು ಪ್ರಯತ್ನಿಸಲಿ'' ಎಂದು ಸುಗ್ರೀವನಿಗೆ ತಿಳಿಸಿದನು. ಶ್ರೀರಾಮನ ಆದೇಶದಂತೆ ಸುಗ್ರೀವನು ಲಕ್ಷ್ಮಣಸಮೇತನಾಗಿ ಹೊರಟು, ವೃಕ್ಷಗಳಿಂದ ನಿಬಿಡವಾದ ಸಮುದ್ರತೀರದಲ್ಲಿ ವಾನರಸೇನೆಯು ಬಿಡಾರಮಾಡು ವಂತೆ ಏರ್ಪಡಿಸಿದನು (೧೦೬–೧೦೭). ಅನಂತರ ಕಡಲಿನ ದಂಡೆಯಲ್ಲಿ ಬಿಡಾರಹೂಡಿದ ಆ ಕಪಿಸೇನೆಯು ಜೇನುನೊರೆಯಂತೆ ಧೂಸರವರ್ಣದ ಜಲ ದಿಂದ ಕಂಗೊಳಿಸುವ ಮತ್ತೊಂದು ಮಹಾಸಾಗರವೋ ಎಂಬಂತೆ ವಿರಾಜಿ ಸಿತು. ಆ ವಾನರವೀರರು ಕಡಲಿನ ಆಚೆಯ ದಡವನ್ನು ಸೇರುವ ತವಕದಿಂದ ಅವಕಾಶವನ್ನು ಕಾಯುತ್ತ ಸಮುದ್ರತೀರದಲ್ಲಿ ಬಿಡಾರಹೂಡಿದರು (೧೦೮). ಆ ಸಮಯದಲ್ಲಿ ಸಮುದ್ರದ ಮೊರೆತವನ್ನು ಮರೆಸಿ, ಸೇನಾಸನ್ನಾಹದಿಂದ ಸಂಭವಿಸಿದ ಕೋಲಾಹಲಧ್ವನಿಯೊಂದೇ ಕೇಳಿಸುತ್ತಿತ್ತು! ಸುಗ್ರೀವನಿಂದ ಪರಿರಕ್ಷಿತವಾದ ಆ ಮಹಾಕಪಿಸೇನೆಯು ಮೂರು ಗುಂಪುಗಳಾಗಿ ಬಿಡಾರ ಹೂಡಿ, ಶ್ರೀರಾಮನ ಕಾರ್ಯವನ್ನು ಸಾಧಿಸಬೇಕೆಂಬ ತೀವ್ರಾಭಿಲಾಷೆಯಿಂದ ಕಾದಿತ್ತು, ಸಮುದ್ರದ ಬಳಿಗೆ ಬಂದೆವೆಂದು ಆನಂದದಿಂದ ಉಬ್ಬಿತ್ತು (೧೦೯–೧೧೧). ಇತ್ತ ವಾನರಸೇನೆಯ ದಂಡನಾಯಕರು ಅಪಾರವಾದ

ಪಶ್ಯಂತೋ ವರುಣಾವಾಸಂ ವಿಷೇದುರ್ಹರಿಯೂಥಪಾಃ ।
ಚಂಡನಕ್ರಗ್ರಹಂ ಘೋರಂ ಕ್ಷಪಾದೌ ದಿವಸಕ್ಷಯೇ ॥ ೧೧೩

ಹಸಂತಮಿವ ಫೇನೌಘೈರ್ನೃತ್ಯಂತಮಿವ ಚೋರ್ಮಿಭಿಃ ।
ಚಂದ್ರೋದಯಸಮುದ್ಧೂತಂ ಪ್ರತಿಚಂದ್ರಸಮಾಕುಲಮ್ ॥ ೧೧೪

ಪಿನಷ್ಟೀವ ತರಂಗಾಗ್ರೈರರ್ಣವಃ ಫೇನಚಂದನಮ್ ।
ತದಾದಾಯ ಕರೈರಿಂದುರ್ಲಿಂಪತೀವ ದಿಗಂಗನಾಃ ॥ ೧೧೫

ಚಂಡಾನಿಲಮಹಾಗ್ರಾಹೈಃ ಕೀರ್ಣಂ ತಿಮಿತಿಮಿಂಗಿಲೈಃ ।
ದೀಪ್ತಭೋಗೈರಿವಾಕೀರ್ಣಂ ಭುಜಂಗೈರ್ಭುಜಗಾಲಯಮ್ ॥ ೧೧೬

---

ಮಹಾಸಾಗರವನ್ನು ಗಮನಿಸಿ ನೋಡುತ್ತಿದ್ದರು. ಗಾಳಿಯ ಹೊಡೆತದಿಂದ ಸಾಗರವು ಉಲ್ಲೋಲಕಲ್ಲೋಲವಾಗಿತ್ತು. ಅಲ್ಲಲ್ಲಿ ರಾಕ್ಷಸರು ಸಂಚರಿಸುತ್ತಿದ್ದರು. ಆ ಕಡಲು ಅಕ್ಷೋಭ್ಯವಾದುದೆಂದು ತಿಳಿದು ಕಪಿನಾಯಕರು ಚಿಂತೆಗೊಳಗಾದರು. ಭೀಕರಾಕಾರದ ಮೊಸಳೆ ಮೊದಲಾದ ಜಲಜಂತುಗಳು ಈಜಾಡುತ್ತಿದ್ದವು. ಹಗಲು ಕಳೆದು ರಾತ್ರಿಯಾಗುವ ಸಮಯದಲ್ಲಂತೂ ಸಮುದ್ರವು ಅತಿಘೋರವಾಗಿ ಕಾಣಿಸಿತು (೧೧೨–೧೧೩). ನೊರೆಗಳ ರಾಶಿಯನ್ನು ನೋಡಿದರೆ, ಸಮುದ್ರರಾಜನು ಅಟ್ಟಹಾಸಮಾಡುವಂತೆಯೂ, ಅಲೆಗಳ ಅಬ್ಬರವನ್ನು ನೋಡಿದರೆ ಅವನು ಹುಚ್ಚೆದ್ದು ಕುಣಿಯುವಂತೆಯೂ ತೋರುತ್ತಿದ್ದನು. ಚಂದ್ರೋದಯದಿಂದ ಸಮುದ್ರವು ಉಕ್ಕಿಬರುತ್ತಿತ್ತು. ತೆರೆಗಳ ರಾಶಿಯಲ್ಲಿ ಚಂದ್ರನು ಎಲ್ಲೆಲ್ಲಿಯೂ ಪ್ರತಿಬಿಂಬಿಸಿದ್ದನು (೧೧೪). ಸಮುದ್ರವು ತೆರೆಗಳೆಂಬ ಕೈಗಳಿಂದ ನೊರೆಯೆಂಬ ಚಂದನವನ್ನು ತೇಯುತ್ತಿರಬಹುದೆ! ಆ ಚಂದನವನ್ನು ಚಂದ್ರನು ತನ್ನ ಕರಗಳಿಂದ* ತೆಗೆದುಕೊಂಡು ದಿಗಂಗನೆಯರಿಗೆ ಬಳಿಯುತ್ತಿರಬಹುದೆ! (೧೧೫). ಬಿರುಗಾಳಿಯು ಬಿರ್ರನೆ ಬೀಸುತ್ತಿತ್ತು. ಬೃಹದಾಕಾರದ ಮೊಸಳೆಗಳೂ ತಿಮಿತಿಮಿಂಗಿಲಗಳೂ ಸಂಚರಿಸುತ್ತಿದ್ದವು (ಫಣಾರತ್ನಗಳಿಂದ) ದೀಪ್ತಕಾಯಗಳಾದ ಸರ್ಪಗಳು

* ಕರ = ಕಿರಣ ; ಕೈ.

**ಅವಗಾಢಂ ಮಹಾಸತ್ತ್ವೈರ್ನಾನಾಶೈಲಸಮಾಕುಲಮ್ ।
ಸುದುರ್ಗಂ ದುರ್ಗಮಾರ್ಗಂ ತಮಗಾಧಮಸುರಾಲಯಮ್ ॥ ೧೧೭**

**ಮಕರೈರ್ನಾಗಭೋಗೈಶ್ಚ ವಿಗಾಢಾ ವಾತಲೋಲಿತಾಃ ।
ಉತ್ಪೇತುಶ್ಚ ನಿಪೇತುಶ್ಚ ಪ್ರವೃದ್ಧಾ ಜಲರಾಶಯಃ ॥ ೧೧೮**

**ಅಗ್ನಿಚೂರ್ಣಮಿವಾವಿದ್ಧಂ ಭಾಸ್ವರಾಂಬು ಮಹೋರಗಮ್ ।
ಸಾರಾರಿವಿಷಯಂ ಘೋರಂ ಪಾತಾಲವಿಷಮಂ ಸದಾ ॥ ೧೧೯**

**ಸಾಗರಂ ಚಾಂಬರಪ್ರಖ್ಯಮಂಬರಂ ಸಾಗರೋಪಮಮ್ ।
ಸಾಗರಂ ಚಾಂಬರಂ ಚೇತಿ ನಿರ್ವಿಶೇಷಮದೃಶ್ಯತ ॥ ೧೨೦**

**ಸಂಪೃಕ್ತಂ ನಭಸಾಪ್ಯಂಭಃ ಸಂಪೃಕ್ತಂ ಚ ನಭೋಽಂಭಸಾ ।
ತಾದೃಗ್ರೂಪೇ ಸ್ಮ ದೃಶ್ಯೇತೇ ತಾರಾರತ್ನ ಸಮಾಕುಲೇ ॥ ೧೨೧**

---

ಹರಿದಾಡುತ್ತಿದ್ದುದರಿಂದ ಆ ಸಮುದ್ರವು ಪಾತಾಳಲೋಕದಂತೆ ಭೀಕರವಾಗಿತ್ತು. ಮಹಾಶರೀರದ ವಿವಿಧ ಜಲಜಂತುಗಳು ಅಲ್ಲಿ ಸುಳಿದಾಡುತ್ತಿದ್ದವು, ವಿವಿಧಾಕೃತಿಯ ದೊಡ್ಡ ದೊಡ್ಡ ಬಂಡೆಗಳು ಕಾಣಿಸುತ್ತಿದ್ದವು. ಅಗಾಧವೂ ಅತಿ ದುರ್ಗಮವೂ ಆದ ಆ ಕಡಲಿನಲ್ಲಿ ದೈತ್ಯರ ಗಡಣವು ನೆಲೆಸಿತ್ತು! (೧೧೬–೧೧೭). ಬಿರುಗಾಳಿಯ ಹೊಡೆತದಿಂದ ಬಿರಿದು ಭೋರ್ಗರೆಯುತ್ತ ಮೇಲೇರಿದ ಜಲರಾಶಿಗಳು ಹಾರಿಹಾರಿ ಉರುಳುತ್ತಿದ್ದವು! ಆ ಜಲರಾಶಿಗಳೊಡನೆ ಮೊಸಳೆಗಳೂ ಮಹಾಸರ್ಪಗಳೂ ತೂರಾಡಿ ಉರುಳುವುದನ್ನು ಕಾಣಬಹುದಾಗಿತ್ತು! (೧೧೮). ಹೊಳೆಹೊಳೆಯುವ ಕಡಲಿನ ಜಲರಾಶಿಯು ಬೆಂಕಿಯ ಪುಡಿಯನ್ನೆರಚಿದಂತೆ ಥಳಥಳಿಸುತ್ತಿದ್ದಿತು. ಮಹಾಸರ್ಪಗಳಿಗೂ ಅಸುರರಿಗೂ ನೆಲೆಯಾದ ಆ ಸಮುದ್ರವು ಪಾತಾಳದಂತೆ ಘೋರವಾಗಿದ್ದಿತು. ಕೆಳಗೆ ಬೃಹದಾಕಾರದ ಮಹಾಸಾಗರ; ಮೇಲೆ ವಿಸ್ತೃತವಾದ ಗಗನತಳ. ಸಾಗರವು ಗಗನದಂತೆಯೂ ಗಗನವು ಸಾಗರದಂತೆಯೂ ನೀಲವಿಶಾಲವಾಗಿತ್ತು. ಸಾಗರವಾವುದು ಗಗನವಾವುದು – ಎಂದು ಅವುಗಳ ಭೇದವೇ ತೋರಲಿಲ್ಲ! (೧೧೯–೧೨೦). ಆಕಾಶವು ಸಮುದ್ರದ ನೀರಿನಲ್ಲಿ ಪ್ರತಿಬಿಂಬಿಸಿ ಅದರಲ್ಲಿ ತಾರೆಗಳು ಮಿಣುಗುವಂತೆ ಕಾಣುತ್ತಿತ್ತು. ಸಮುದ್ರದ ನೀರು ಆಕಾಶಕ್ಕೆ ತೂರಿ ಆಕಾಶದಲ್ಲಿ ಸಮುದ್ರದ ರತ್ನಗಳು ಹೊಳೆಯುತ್ತಿದ್ದವು. ಆದ್ದರಿಂದ

ಸಮುತ್ಪತಿತಮೇಘಸ್ಯ ವೀಚಿಮಾಲಾಕುಲಸ್ಯ ಚ ।
ವಿಶೇಷೋ ನ ದ್ವಯೋರಾಸೀತ್ಸಾಗರಸ್ಯಾಂಬರಸ್ಯ ಚ ॥ ೧೨೨

ಅನ್ಯೋನ್ಯಮಾಹತಾಃ ಸಕ್ತಾಃ ಸಸ್ವನುರ್ಭೀಮನಿಃಸ್ವನಾಃ ।
ಊರ್ಮಯಃ ಸಿಂಧುರಾಜಸ್ಯ ಮಹಾಭೇರ್ಯ ಇವಾಹವೇ ॥ ೧೨೩

ರತ್ನೌಘಜಲಸನ್ನಾದಂ ವಿಷಕ್ತಮಿವ ವಾಯುನಾ ।
ಉತ್ಪತಂತಮಿವ ಕ್ರುದ್ಧಂ ಯಾದೋಗಣಸಮಾಕುಲಮ್ ॥ ೧೨೪

ದದೃಶುಸ್ತೇ ಮಹೋತ್ಸಾಹಾ ವಾತಾಹತಮಪಾಂ ಪತಿಮ್ ।
ಅನಿಲೋದ್ಧತಮಾಕಾಶೇ ಪ್ರವಲ್ಗಂತಮಿವೋರ್ಮಿಭಿಃ ॥ ೧೨೫

ತತೋ ವಿಸ್ಮಯಾಪನ್ನಾ ದದೃಶುರ್ಹರಯಸ್ತದಾ ।
ಭ್ರಾಂತೋರ್ಮಿಜಲಸನ್ನಾದಂ ಪ್ರಲೋಲಮಿವ ಸಾಗರಮ್ ॥ ೧೨೬

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುರ್ಥಃ ಸರ್ಗಃ

---

ಸಮುದ್ರವು ಆಕಾಶದಂತೆಯೂ ಆಕಾಶವು ಸಮುದ್ರದಂತೆಯೂ ಕಾಣಿಸಿದವು ! (೧೨೧). ಮೇಘಮಾಲೆಗಳಿಂದ ಅಂಬರವು ರಂಜಿಸುತ್ತಿದ್ದರೆ, ತರಂಗಮಾಲೆಗಳಿಂದ ಅಂಬುಧಿಯು ರಮಣೀಯವಾಗಿತ್ತು. ಅಂಬರವಾವುದು, ಅಂಬುಧಿ ಯಾವುದು ಎಂಬ ನಿರ್ಣಯಕ್ಕೆ ಇಂಬು ದೊರೆಯಲಿಲ್ಲ! ಸಮುದ್ರರಾಜನ ಮಹಾತರಂಗಗಳು ಒಂದಕ್ಕೊಂದು ಅಪ್ಪಳಿಸಿ, ಯುದ್ಧರಂಗದಲ್ಲಿ ಬಾರಿಸುವ ರಣಭೇರಿಗಳಂತೆ ಕರ್ಣಕಠೋರವಾಗಿ ಅಬ್ಬರಿಸುತ್ತಿದ್ದವು! (೧೨೨–೧೨೩). ವಾಯುವು ರತ್ನಗಳನ್ನು ಕೊಳ್ಳೆಹೊಡೆಯಲು ಬಂದನೆಂದು ಸಮುದ್ರರಾಜನು ರತ್ನಗಳ ರಕ್ಷಣೆಗಾಗಿ ನೀರೆರಚುತ್ತ ಅರಚುತ್ತಿರುವಂತೆಯೂ ವಾಯುವನ್ನೆದುರಿಸಲು ಜಲಚರಗಳೆಂಬ ಯೋಧರೊಡಗೂಡಿ ಕ್ರೋಧದಿಂದ ಏರಿಬರುತ್ತಿರುವಂತೆಯೂ ತೋರುತ್ತಿದ್ದನು! (೧೨೪). ಅಲ್ಲದೆ ಬಿರುಗಾಳಿಯ ಹೊಡೆತದಿಂದ ಸಮುದ್ರರಾಜನು ತತ್ತರಿಸಿ ಆಕಾಶದಲ್ಲಿ ಅಲೆಗಳ ರೂಪದಿಂದ ಉರುಳುರುಳಿ ಬೀಳುವುದನ್ನು ಕಪಿನಾಯಕರು ಉತ್ಸಾಹದಿಂದ ನೋಡುತ್ತಿದ್ದರು! ಅಲೆಗಳ ಏರಿಳಿತಗಳೊಡನೆ ಮೊರೆಯುತ್ತ ಹೊರಳಾಡುತ್ತಿರುವನೋ ಎಂಬಂತಿದ್ದ ಸಮುದ್ರವನ್ನು ವಾನರರು ವಿಸ್ಮಿತರಾಗಿ ನೋಡುತ್ತ ನಿಂತರು (೧೨೫–೧೨೬).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ನಾಲ್ಕನೆಯ ಸರ್ಗ

## ಪಂಚಮಃ ಸರ್ಗಃ

ರಾಮವಿಪ್ರಲಂಭಃ

**ಸಾ ತು ನೀಲೇನ ವಿಧಿವತ್ಸ್ವರಕ್ಷಾ ಸುಸಮಾಹಿತಾ ।**
**ಸಾಗರಸ್ಯೋತ್ತರೇ ತೀರೇ ಸಾಧು ಸೇನಾ ನಿವೇಶಿತಾ ॥** ೧

**ಮೈಂದಶ್ಚ ದ್ವಿವಿದಶ್ಚೋಭೌ ತತ್ರ ವಾನರಪುಂಗವೌ ।**
**ವಿಚೇರತುಶ್ಚ ತಾಂ ಸೇನಾಂ ರಕ್ಷಾರ್ಥಂ ಸರ್ವತೋ ದಿಶಮ್ ॥** ೨

**ನಿವಿಷ್ಟಾಯಾಂ ತು ಸೇನಾಯಾಂ ತೀರೇ ನದನದೀಪತೇಃ ।**
**ಪಾರ್ಶ್ವಸ್ಥಂ ಲಕ್ಷ್ಮಣಂ ದೃಷ್ಟ್ವಾ ರಾಮೋ ವಚನಮಬ್ರವೀತ್ ॥** ೩

**ಶೋಕಶ್ಚ ಕಿಲ ಕಾಲೇನ ಗಚ್ಛತಾ ಹ್ಯಪಗಚ್ಛತಿ ।**
**ಮಮ ಚಾಪಶ್ಯತಃ ಕಾಂತಾಮಹನ್ಯಹನಿ ವರ್ಧತೇ ॥** ೪

**ನ ಮೇ ದುಃಖಂ ಪ್ರಿಯಾ ದೂರೇ ನ ಮೇ ದುಃಖಂ ಹೃತೇತಿ ವಾ ।**
**ಏತದೇವಾನುಶೋಚಾಮಿ ವಯೋಽಸ್ಯಾ ಹ್ಯತಿವರ್ತತೇ ॥** ೫

### ಸರ್ಗ ೫

ಶ್ರೀರಾಮನು ಸೀತೆಯನ್ನು ಸ್ಮರಿಸಿಕೊಂಡು ದುಃಖಿಸುವುದು. ಲಕ್ಷ್ಮಣನ ಸಮಾಧಾನ.

ಆಮೇಲೆ ಸೇನಾಪತಿಯಾದ ನೀಲನು ಸಮುದ್ರದ ಉತ್ತರತೀರದಲ್ಲಿ ಸರಿಯಾದ ಕ್ರಮದಿಂದ ಬಿಡಾರಹೂಡಿಸಿ, ಸಮರನೀತಿಯನ್ನನುಸರಿಸಿ ಎಚ್ಚರಿಕೆಯಿಂದ ರಕ್ಷಣಾವ್ಯವಸ್ಥೆಯನ್ನೇರ್ಪಡಿಸಿದನು. ಮೈಂದ ದ್ವಿವಿದರೆಂಬ ಕಪಿವೀರರಿಬ್ಬರು ಸೇನಾರಕ್ಷಣಾರ್ಥವಾಗಿ ಎಲ್ಲೆಡೆಯೂ ಸಂಚರಿಸುತ್ತ ಕಾವಲಾಗಿದ್ದರು (೧–೨). ಹೀಗೆ ಸಮುದ್ರತೀರದಲ್ಲಿ ಸೇನಾನಿವೇಶವು ಸಾಂಗವಾಗಿ ನಡೆದಮೇಲೆ ಶ್ರೀರಾಮನು ಬಳಿಯಲ್ಲಿದ್ದ ಲಕ್ಷ್ಮಣನನ್ನು ನೋಡಿ ಹೀಗೆಂದನು : ''ವತ್ಸ–ಲಕ್ಷ್ಮಣ, ಕಾಲವು ಕಳೆದಂತೆ ಶೋಕವು ಯಾರಿಗಾದರೂ ಕಡಿಮೆಯಾಗುವುದುಂಟು. ನನಗಾದರೋ ನನ್ನ ಕಾಂತೆಯನ್ನು ನೋಡದೆ ಶೋಕವು ದಿನದಿನವೂ ಹೆಚ್ಚುತ್ತಲಿದೆ! (೩–೪). ಲಕ್ಷ್ಮಣ, ನನ ಇನಿಯಳು ದೂರವಾದಳೆಂಬ ಚಿಂತೆಯಲ್ಲ, ಅಪಹರಿಸಲ್ಪಟ್ಟಳೆಂಬ ಚಿಂತೆಯೂ ಅಲ್ಲ, ನನ್ನ

ವಾಹಿ ವಾತ ಯತಃ ಕಾಂತಾ ತಾಂ ಸ್ಪೃಷ್ಟ್ವಾ ಮಾಮಪಿಸ್ಪೃಶ ।
ತ್ವಯಿ ಮೇ ಗಾತ್ರಸಂಸ್ಪರ್ಶಶ್ಚಂದ್ರೇ ದೃಷ್ಟಿಸಮಾಗಮಃ ॥ ೬

ತನ್ಮೇ ದಹತಿ ಗಾತ್ರಾಣಿ ವಿಷಂ ಪೀತಮಿವಾಶಯೇ ।
ಹಾ ನಾಥೇತಿ ಪ್ರಿಯಾ ಸಾ ಮಾಂ ಹ್ರಿಯಮಾಣಾ ಯದಬ್ರವೀತ್ ॥

ತದ್ವಿಯೋಗೇಂಧನವತಾ ತಚ್ಚಿಂತಾವಿಪುಲಾರ್ಚಿಷಾ ।
ರಾತ್ರಿಂದಿವಂ ಶರೀರಂ ಮೇ ದಹ್ಯತೇ ಮದನಾಗ್ನಿನಾ ॥ ೮

ಅವಗಾಹ್ಯಾರ್ಣವಂ ಸ್ವಪ್ಸ್ಯೇ ಸೌಮಿತ್ರೇ ಭವತಾ ವಿನಾ ।
ಕಥಂಚಿತ್ಪ್ರಜ್ವಲನ್ ಕಾಮೋ ನ ಮಾಂ ಸುಪ್ತಂ ಜಲೇ ದಹೇತ್ ॥ ೯

ಬಹ್ವೇತತ್ಕಾಮಯಾನಸ್ಯ ಶಕ್ಯಮೇತೇನ ಜೀವಿತುಮ್ ।
ಯದಹಂ ಸಾ ಚ ವಾಮೋರೂರೇಕಾಂ ಧರಣಿಮಾಶ್ರಿತೌ ॥ ೧೦

---

ದುಃಖವೇನೆಂದರೆ, ಅವಳ ತಾರುಣ್ಯವು ವ್ಯರ್ಥವಾಗಿ ಕಳೆದುಹೋಗುತ್ತಿದೆಯಲ್ಲ ಎಂದು! ಓ ತಂಗಾಳಿಯೆ, ನನ್ನ ಇನಿಯಳು ಎಲ್ಲಿರುವಳೋ ಆ ದಿಕ್ಕಿನಿಂದ ಬೀಸುತ್ತ ಬಾ! ಅವಳನ್ನು ಸ್ಪರ್ಶಿಸಿ ಬಂದು ನನ್ನನ್ನೂ ಸ್ಪರ್ಶಿಸು! ಆಗ ನಿನ್ನನ್ನು ಮುಟ್ಟಿದರೆ ನಾನು ಆಕೆಯನ್ನು ಮುಟ್ಟಿದಂತಾಗುವುದು! ಸೀತೆಯು ನೋಡುವ ಚಂದ್ರನನ್ನು ನಾನು ನೋಡಿದಾಗ, ನಮ್ಮೀರ್ವರ ದೃಷ್ಟಿಯು ಕೂಡಿತು– ಒಬ್ಬರನ್ನೊಬ್ಬರು ನೋಡಿದೆವೆಂದು ತಿಳಿಯುತ್ತಿದ್ದೇನೆ! (೫–೬). ರಾಕ್ಷಸನು ಅವಳನ್ನು ಎಳೆದೊಯ್ಯುವಾಗ, 'ಹಾ ನಾಥ!' ಎಂಬ ನನ್ನ ಕಾಂತೆಯ ಮೊರೆಯು, ಲಕ್ಷ್ಮಣ, ನನ್ನ ಸರ್ವಾಂಗಗಳನ್ನೂ ಸುಡುತ್ತಿದೆ; ಕುಡಿದ ವಿಷದಂತೆ ನನ್ನ ಎದೆಯನ್ನು ದಹಿಸುತ್ತಿದೆ; ಮನ್ಮಥಾಗ್ನಿಯು ಅಹೋರಾತ್ರವೂ ನನ್ನನ್ನು ಉರುಬುತ್ತಿದೆ. ಈ ಅಗ್ನಿಗೆ ಅವಳ ವಿರಹವೇ ಇಂಧನವಾಯಿತು. ಅವಳ ಚಿಂತೆಯೇ ಕರಾಳಜ್ವಾಲೆಯಾಯಿತು (೭–೮). ತಮ್ಮ ಈಗ ನಿನ್ನನ್ನು ಬಿಟ್ಟು ಈ ಸಮುದ್ರದಲ್ಲಿ ಮುಳುಗಿ ಮಲಗಿಬಿಡುವೆನು! ನೀರಲ್ಲಿ ಮುಳುಗಿದ ನನ್ನನ್ನು ಈ ಮನ್ಮಥಾಗ್ನಿಯು ಸುಟ್ಟು ಬೂದಿಮಾಡಲಾರದು! ಅಬ್ಬಾ! ಅವಳು ಬದುಕಿರುವಳೆಂಬುದೇ ನನಗೆ ದೊಡ್ಡ ಆಶ್ವಾಸನದ ಸುದ್ದಿಯಾಗಿದೆ. ನಾನೂ ಆ ಸುಂದರಿಯೂ ಒಂದೇ ನೆಲದಮೇಲೆ ನಿಂತಿರುವೆವಲ್ಲ! (೯–೧೦).

**ಕೇದಾರಸ್ಯೇವ ಕೇದಾರಃ ಸೋದಕಸ್ಯ ನಿರೂದಕಃ ।**
**ಉಪಸ್ನೇಹೇನ ಜೀವಾಮಿ ಜೀವಂತೀಂ ಯಚ್ಛೃಣೋಮಿ ತಾಮ್ ॥**

**ಕದಾ ನು ಖಲು ಸುಶ್ರೋಣೀಂ ಶತಪತ್ರಾಯತೇಕ್ಷಣಾಮ್ ।**
**ವಿಜಿತ್ಯ ಶತ್ರೂನ್ ದ್ರಕ್ಷ್ಯಾಮಿ ಸೀತಾಂ ಸ್ಫೀತಾಮಿವ ಶ್ರಿಯಮ್ ॥**

**ಕದಾ ನು ಚಾರುಬಿಂಬೋಷ್ಠಂ ತಸ್ಯಾಃ ಪದ್ಮಮಿವಾನನಮ್ ।**
**ಈಷದುನ್ನಮ್ಯ ಪಾಸ್ಯಾಮಿ ರಸಾಯನಮಿವಾತುರಃ ॥ ೧೩**

**ತಸ್ಯಾಸ್ತು ಸಂಹತೌ ಪೀನೌ ಸ್ತನೌ ತಾಲಫಲೋಪಮೌ ।**
**ಕದಾ ನು ಖಲು ಸೋತ್ಕಂಪೌ ಶ್ಲಿಷ್ಯಂತ್ಯಾ ಮಾಂ ಭಜಿಷ್ಯತಃ ॥ ೧೪**

---

ನೀರಿಲ್ಲದ ಗದ್ದೆಯ ಮೇಲ್ಗಡೆ ನೀರು ತುಂಬಿದ ಗದ್ದೆಯಿದ್ದರೆ, ಜಿನುಗುವ ತೇವದಿಂದ ಕೆಳಗದ್ದೆಯ ಪೈರು ಸ್ವಲ್ಪ ಮಟ್ಟಿಗಾದರೂ ಜೀವಹಿಡಿದಿರುವುದಲ್ಲವೆ? ಹಾಗೆ ಜಾನಕಿಯು ಬದುಕಿರುವಳೆಂಬುದನ್ನು ಕೇಳಿ ನಾನು ಜೀವಹಿಡಿದಿದ್ದೇನೆ (೧೧). ಹಗೆಗಳನ್ನು ಬಗೆದೊಗೆದು, ನಳಿನಾಯತೇಕ್ಷಣೆಯಾದ ನನ್ನ ಕಾಂತೆಯನ್ನು ಯಾವಾಗ ನೋಡುವೆನೊ! ಭಾಗ್ಯಲಕ್ಷ್ಮಿಯಂತಿರುವ ಸೀತೆಯನ್ನು ಯಾವಾಗ ಕಾಣುವೆನೊ! ಅರಳಿದ ತಾವರೆಯಂತಿರುವ ಅವಳ ಮುಖವನ್ನು ಮೆಲ್ಲಗೆ ಮೇಲೆತ್ತಿ ತೊಂಡೆಯ ಹಣ್ಣಿನಂತಿರುವ ಚೆಂದುಟಿಯ ಸವಿಯನ್ನು ಯಾವಾಗ ಸವಿಯುವೆನೊ! ರೋಗಿಯು ರಸಾಯನವನ್ನು ಹೀರುವಂತೆ ಅಧರಾಮೃತವನ್ನು ಯಾವಾಗ ಹೀರುವೆನೊ! (೧೨–೧೩). ಅವಳು ನನ್ನನ್ನು ಅಪ್ಪಿಕೊಳ್ಳುವಾಗ (ಭಾವೋದ್ವೇಗದಿಂದ) ಅದುರುತ್ತ ತಾಳೆಯ ಹಣ್ಣಿನಂತಿರುವ ಒತ್ತಾದ ಪೀನಸ್ತನಗಳು ಯಾವಾಗ ನನ್ನ ಮೈಯನ್ನು ಸೋಕುತ್ತವೆಯೊ!* ಅಯ್ಯೊ! ಆ ನೀಲನೇತ್ರೆಗೆ ನಾನು ನಾಥನಾಗಿದ್ದರೂ

---

* ಶ್ರೀರಾಮನು ಲಕ್ಷ್ಮಣನೆದುರಿಗೆ ಈ ಬಗೆಯಲ್ಲಿ ತನ್ನ ಕಾಮಸಂತಾಪವನ್ನು ಹೇಳಿಕೊಳ್ಳಬಹುದೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದರೆ ಇದೆಲ್ಲವೂ ಶ್ರೀರಾಮನ ಬಾಯಿಂದ ಬಂದುದಲ್ಲ, ಅವನ ಚಿತ್ತವಿಕಾರಗಳನ್ನು ವಾಲ್ಮೀಕಿಮುನಿಗಳು ವರ್ಣಿಸಿದ್ದಾರೆ ಎಂದು ತಿಳಿಯಬೇಕು. ಮತ್ತು ಕಾಮಿಗಳಿಗೆ 'ಹ್ರೀತ್ಯಾಗ' ಎಂಬ ಒಂದು ಅವಸ್ಥೆಯುಂಟು. ಆ ಸಮಯದಲ್ಲಿ ನಾಚಿಕೆ, ಯುಕ್ತಾಯುಕ್ತವಿವೇಚನೆಗಳು ಇರುವುದಿಲ್ಲವೆಂಬುದು ಕವಿಸಮಯ.

ಸಾ ನೂನಮಸಿತಾಪಾಂಗೀ ರಕ್ಷೋಮಧ್ಯಗತಾ ಸತೀ ।
ಮನ್ನಾಥಾ ನಾಥಹೀನೇವ ತ್ರಾತಾರಂ ನಾಧಿಗಚ್ಛತಿ ॥ ೧೫

ಕಥಂ ಜನಕರಾಜಸ್ಯ ದುಹಿತಾ ಸಾ ಮಮ ಪ್ರಿಯಾ ।
ರಾಕ್ಷಸೀಮಧ್ಯಗಾ ಶೇತೇ ಸ್ನುಷಾ ದಶರಥಸ್ಯ ಚ ॥ ೧೬

ಕದಾ ವಿಕ್ಷೋಭ್ಯ ರಕ್ಷಾಂಸಿ ಸಾ ವಿಧೂಯೋತ್ಪತಿಷ್ಯತಿ ।
ವಿಧೂಯ ಜಲದಾನ್ನೀಲಾನ್ ಶಶಿರೇಖಾ ಶರತ್ಸ್ವಿವ ॥ ೧೭

ಸ್ವಭಾವತನುಕಾ ನೂನಂ ಶೋಕೇನಾನಶನೇನ ಚ ।
ಭೂಯಸ್ತನುತರಾ ಸೀತಾ ದೇಶಕಾಲವಿಪರ್ಯಯಾತ್ ॥ ೧೮

ಕದಾ ನು ರಾಕ್ಷಸೇಂದ್ರಸ್ಯ ನಿಧಾಯೋರಸಿ ಸಾಯಕಾನ್ ।
ಸೀತಾಂ ಪ್ರತ್ಯಾಹರಿಷ್ಯಾಮಿ ಶೋಕಮುತ್ಸೃಜ್ಯ ಮಾನಸಮ್ ॥ ೧೯

ಕದಾ ನು ಖಲು ಮಾಂ ಸಾಧ್ವೀ ಸೀತಾ ಸುರಸುತೋಪಮಾ ।
ಸೋತ್ಕಂಠಾ ಕಂಠಮಾಲಂಬ್ಯ ಮೋಕ್ಷ್ಯತ್ಯಾನಂದಜಂ ಪಯಃ ॥ ೨೦

---

ರಾಕ್ಷಸರ ಮಧ್ಯದಲ್ಲಿ ಸಿಕ್ಕಿ ರಕ್ಷಕನಿಲ್ಲದೆ, ಆ ಸಾಧ್ವಿಯು ಅನಾಥೆಯಂತೆ ಪರಿತಪಿಸುವಳಲ್ಲ! (೧೪–೧೫). ಜನಕಮಹಾರಾಜನಿಗೆ ಮಗಳಾಗಿ ದಶರಥ ಚಕ್ರವರ್ತಿಗೆ ಸೊಸೆಯಾಗಿ ನನಗೆ ಪತ್ನಿಯಾಗಿರುವ ನನ್ನ ಕಾಂತೆಯು, ರಾಕ್ಷಸಿಯರ ನಡುವೆ ಅಂಜುತ್ತ ಮಲಗುವಂತಾಯಿತೆ! ಕಾರ್ಮೋಡಗಳನ್ನು ಬದಿಗೊತ್ತಿ ಶರತ್ಕಾಲದಲ್ಲಿ ಚಂದ್ರರೇಖೆಯು ಹೊರಗೆ ಮೂಡಿಬರುವಂತೆ, ನನ್ನ ಸೀತೆಯು ರಾಕ್ಷಸಿಯರನ್ನು ಲಕ್ಷಿಸದೆ ನನ್ನೆದುರಿಗೆ ನಲಿಯುತ್ತ ಬರುವ ಸಮಯವು ಯಾವಾಗ ಬರುವುದೊ? (೧೬–೧೭). ಲಕ್ಷ್ಮಣ, ಸೀತೆಯು ಸಹಜವಾಗಿಯೇ ಕೃಶಾಂಗಿ. ಈಗ ದೇಶಕಾಲಗಳ ವಿಷಮಪರಿಸ್ಥಿತಿಯಿಂದಾಗಿ, ಶೋಕದಿಂದಲೂ ಉಪವಾಸದಿಂದಲೂ ಮತ್ತಷ್ಟು ಕೃಶಳಾಗಿಹೋಗಿರಬೇಕು. ಆ ರಾಕ್ಷಸರಾಜನ ಎದೆಯಲ್ಲಿ ನನ್ನ ತೀಕ್ಷ್ಣಾಸ್ತ್ರಗಳನ್ನು ನೆಟ್ಟು, ಅವಳನ್ನು ಯಾವಾಗ ಬಿಡಿಸಿಕೊಂಡುಬರುವೆನೊ! ಯಾವಾಗ ನನ್ನ ಮನೋವ್ಯಥೆಯು ನೀಗುವುದೊ! (೧೮–೧೯). ಸುರಸುಂದರಿಯಾದ ಆ ಸಾಧ್ವಿಯು ಯಾವಾಗ ಬಂದು ಗಾಢಪ್ರೇಮದಿಂದ ನನ್ನ ಕೊರಳನ್ನು ಅಪ್ಪಿಕೊಳ್ಳುವಳೊ! ಅಪ್ಪಿ

ಕದಾ ಶೋಕಮಿಮಂ ಘೋರಂ ಮೈಥಿಲೀವಿಪ್ರಯೋಗಜಮ್ ।
ಸಹಸಾ ವಿಪ್ರಮೋಕ್ಷ್ಯಾಮಿ ವಾಸಃ ಶುಕ್ಲೇತರಂ ಯಥಾ ॥ ೨೧

ಏವಂ ವಿಲಪತಸ್ತಸ್ಯ ತತ್ರ ರಾಮಸ್ಯ ಧೀಮತಃ ।
ದಿನಕ್ಷಯಾನ್ಮಂದರುಚಿರ್ಭಾಸ್ಕರೋಽಸ್ತಮುಪಾಗಮತ್ ॥ ೨೨

ಆಶ್ವಾಸಿತೋ ಲಕ್ಷ್ಮಣೇನ ರಾಮಃ ಸಂಧ್ಯಾಮುಪಾಸತ ।
ಸ್ಮರನ್ ಕಮಲಪತ್ರಾಕ್ಷೀಂ ಸೀತಾಂ ಶೋಕಾಕುಲೀಕೃತಃ ॥ ೨೩

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚಮಃ ಸರ್ಗಃ

---

ಆನಂದಬಾಷ್ಪಗಳನ್ನು ಸುರಿಸುವಳೊ! ತಮ್ಮ-ಲಕ್ಷ್ಮಣ, ಮೈಥಿಲೀವಿರಹದಿಂದಾದ ಈ ದಾರುಣಶೋಕವು ನನಗೆ ಎಂದಿಗೆ ಕೊನೆಗೊಂಡೀತು? ಕೊಳೆಬಟ್ಟೆಯಂತಿರುವ ಈ ಶೋಕವನ್ನು ಎಂದು ನೀಗಿಸಿಕೊಂಡೇನು?'' (೨೦-೨೧). ಧೀರನಾದ ಶ್ರೀರಾಮನೂ ಸಹ ಈ ರೀತಿಯಲ್ಲಿ ವಿಲಪಿಸುತ್ತಿರಲು ಸಂಜೆಯಾಯಿತು. ಭಾಸ್ಕರನು ತೇಜೋಹೀನನಾಗಿ ಅಸ್ತಂಗತನಾದನು. ಆಗ ಲಕ್ಷ್ಮಣನು ಯುಕ್ತರೀತಿಯಿಂದ ಸಮಾಧಾನಹೇಳಲಾಗಿ, ಶ್ರೀರಾಮನು ಸಂಧ್ಯಾವಂದನೆಯನ್ನು ಆಚರಿಸಿದನು. ನಳಿನಾಯತಾಕ್ಷಿಯಾದ ಸೀತೆಯ ನೆನಪು ಹೃದಯದಲ್ಲಿ ನೆಲೆಸಿತ್ತು. ದುಃಖದಿಂದ ಶ್ರೀರಾಮನ ಚಿತ್ತವು ವ್ಯಾಕ್ಷಿಪ್ತವಾಗಿತ್ತು(೨೨-೨೩).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಐದನೆಯ ಸರ್ಗ

---

## ಷಷ್ಠಃ ಸರ್ಗಃ

### ರಾವಣಮಂತ್ರಣಮ್

**ಲಂಕಾಯಾಂ ತು ಕೃತಂ ಕರ್ಮ ಘೋರಂ ದೃಷ್ಟ್ವಾ ಭಯಾವಹಮ್**
**ರಾಕ್ಷಸೇಂದ್ರೋ ಹನುಮತಾ ಶಕ್ರೇಣೇವ ಮಹಾತ್ಮನಾ ॥ ೧**

**ಅಬ್ರವೀದ್ರಾಕ್ಷಸಾನ್ ಸರ್ವಾನ್ ಹ್ರಿಯಾ ಕಿಂಚಿದವಾಙ್ಮುಖಃ ।**
**ಧರ್ಷಿತಾ ಚ ಪ್ರವಿಷ್ಟಾ ಚ ಲಂಕಾ ದುಷ್ಪ್ರಸಹಾ ಪುರೀ ॥ ೨**

**ತೇನ ವಾನರಮಾತ್ರೇಣ ದೃಷ್ಟಾ ಸೀತಾ ಚ ಜಾನಕೀ ।**
**ಪ್ರಾಸಾದೋ ಧರ್ಷಿತಶ್ಚೈತ್ಯಃ ಪ್ರಬಲಾ ರಾಕ್ಷಸಾ ಹತಾಃ ॥ ೩**

**ಆಕುಲಾ ಚ ಪುರೀ ಲಂಕಾ ಸರ್ವಾ ಹನುಮತಾ ಕೃತಾ ।**
**ಕಿಂ ಕರಿಷ್ಯಾಮಿ ಭದ್ರಂ ವಃ ಕಿಂ ವಾ ಯುಕ್ತಮನಂತರಮ್ ॥ ೪**

## ಸರ್ಗ ೬

### ಲಂಕೆಯಲ್ಲಿ ರಾವಣನ ಮಂತ್ರಾಲೋಚನೆ.

ಇತ್ತ ಲಂಕಾನಗರದಲ್ಲಿ ಮಹೇಂದ್ರನಂತೆ ಮಹಾಪರಾಕ್ರಮಿಯಾದ ಆಂಜನೇಯನು ನಡೆಸಿದ ಭಯಂಕರವೂ ಅದ್ಭುತವೂ ಆದ ಸಾಹಸಕೃತ್ಯವನ್ನು ಕಂಡು ರಾಕ್ಷಸೇಂದ್ರನಾದ ರಾವಣನು ಕಳವಳಗೊಂಡನು. ಅವನು ರಾಜಸಭೆಯಲ್ಲಿ ಲಜ್ಜೆಯಿಂದ ಕೊಂಚ ತಲೆತಗ್ಗಿಸಿಕೊಂಡು ಸಮಸ್ತ ರಾಕ್ಷಸನಾಯಕರನ್ನು ಉದ್ದೇಶಿಸಿ ಹೀಗೆಂದನು : "ಎಲೈ ರಾಕ್ಷಸವೀರರೆ, ದುರ್ಧರ್ಷವೆನಿಸಿದ ಈ ಲಂಕಾನಗರದೊಳಗೆ ವಾನರನೊಬ್ಬನು ನುಗ್ಗಿ ಬಂದು ನಗರವನ್ನೇ ಕ್ಷೋಭೆಗೆ ಈಡುಮಾಡಿದನಲ್ಲ! (೧–೨). ಅಲ್ಲದೆ ಜನಕಪುತ್ರಿಯಾದ ಸೀತೆಯನ್ನು ಪ್ರತ್ಯಕ್ಷವಾಗಿ ನೋಡಿಹೋದನು! ಚೈತ್ಯಪ್ರಾಸಾದವನ್ನು ಉರುಳಿಸಿಬಿಟ್ಟು ಬಲಾಢ್ಯರಾದ ರಾಕ್ಷಸರನ್ನು ಕೊಂದುಹಾಕಿದನು. ಆ ಹನುಮಂತನಿಂದ ನಮ್ಮ ಲಂಕೆಯೆಲ್ಲವೂ ಶೋಕಾಕುಲವಾಯಿತು. ಇರಲಿ; ಒಳ್ಳೆಯದು. ಈಗ ನಾನು ಏನುಮಾಡಲಿ? ಮುಂದೆ ಯಾವುದು ಯುಕ್ತವಾದ ಮಾರ್ಗ? (೩–೪).

ಉಚ್ಯತಾಂ ನಃ ಸಮರ್ಥಂ ಯತ್ಕೃತಂ ಚ ಸುಕೃತಂ ಭವೇತ್ ।
ಮಂತ್ರಮೂಲಂ ಹಿ ವಿಜಯಂ ಪ್ರಾಹುರಾರ್ಯಾ ಮನಸ್ವಿನಃ ॥ ೫

ತಸ್ಮಾದ್ವೈ ರೋಚಯೇ ಮಂತ್ರಂ ರಾಮಂ ಪ್ರತಿ ಮಹಾಬಲಾಃ ।
ತ್ರಿವಿಧಾಃ ಪುರುಷಾ ಲೋಕೇ ಉತ್ತಮಾಧಮಮಧ್ಯಮಾಃ ॥ ೬

ತೇಷಾಂ ತು ಸಮವೇತಾನಾಂ ಗುಣದೋಷೌ ವದಾಮ್ಯಹಮ್ ।
ಮಂತ್ರಸ್ತ್ರಿಭಿರ್ಹಿ ಸಂಯುಕ್ತಃ ಸಮರ್ಥೈರ್ಮಂತ್ರನಿರ್ಣಯೇ ॥ ೭

ಮಿತ್ರೈರ್ವಾಪಿ ಸಮಾನಾರ್ಥೈರ್ಬಾಂಧವೈರಪಿ ವಾಧಿಕೈಃ ।
ಸಹಿತೋ ಮಂತ್ರಯಿತ್ವಾ ಯಃ ಕರ್ಮಾರಂಭಾನ್ ಪ್ರವರ್ತಯೇತ್ ॥

ದೈವೇ ಚ ಕುರುತೇ ಯತ್ನಂ ತಮಾಹುಃ ಪುರುಷೋತ್ತಮಮ್ ।
ಏಕೋಽರ್ಥಂ ವಿಮೃಶೇದೇಕೋ ಧರ್ಮೇ ಪ್ರಕುರುತೇ ಮನಃ ॥ ೯

---

ನಮ್ಮ ಯೋಗ್ಯತೆಗೆ ಯಾವುದು ತಕ್ಕುದೆಂದು ಆಲೋಚಿಸಿ ಹೇಳಿರಿ. ನಾವು ಯಾವ ಮಾರ್ಗವನ್ನು ಕೈಗೊಂಡರೂ ಅದನ್ನು ಸರಿಯಾಗಿ ನಿರ್ವಹಿಸಿ ಫಲಕಾರಿಯಾಗುವಂತೆ ಮಾಡಬೇಕು. ಮಂತ್ರಾಲೋಚನೆಯೇ ವಿಜಯಕ್ಕೆ ಮೂಲವೆಂದು ಬಲ್ಲವರು ಹೇಳುತ್ತಾರೆ (೫). ಆದ್ದರಿಂದ, ಎಲೈ ಶೂರರೆ, ರಾಮನ ವಿಷಯವಾಗಿ ಮಂತ್ರಾಲೋಚನೆಯನ್ನು ನಡೆಸಬೇಕೆಂದು ನನಗನಿಸಿದೆ. ಲೋಕದಲ್ಲಿ ಉತ್ತಮ, ಮಧ್ಯಮ, ಅಧಮ ಎಂದು ಮೂರು ಬಗೆಯ ಜನರಿದ್ದಾರೆ (೬). ಅವರು ಯಾರು, ಅವರ ಗುಣದೋಷಗಳೇನೆಂಬುದನ್ನು ನಾನು ವಿವರಿಸುತ್ತೇನೆ. ಸಮರ್ಥರಾದ ಮೂರು ವಿಧದ ಜನರಿಂದ ಪರ್ಯಾಲೋಚನೆಗೆ ಒಳಗಾಗಿ ನಿರ್ಣೀತವಾದುದೇ ಮಂತ್ರಾಲೋಚನೆಯೆನಿಸುವುದು. ಅವರು ಯಾರೆಂದರೆ : ಹಿತಕಾರಿಗಳಾದ ಮಂತ್ರಿಗಳು, ಒಂದೇ ಗುರಿಯುಳ್ಳ ಮಿತ್ರರು ಮತ್ತು ಹಿತವನ್ನು ಬಯಸುವ ಬಂಧುಗಳು (೭). ಯಾವಾತನು ಇವರೊಡನೆ ಸೇರಿ ಮಂತ್ರಾಲೋಚನೆಯನ್ನು ನಡೆಸಿ ಕಾರ್ಯವನ್ನಾರಂಭಿಸುವನೋ ಮತ್ತು ದೈವವನ್ನೂ ನಂಬಿ ನಡೆಯುವನೋ ಆತನೇ ಉತ್ತಮಪುರುಷನೆನಿಸುತ್ತಾನೆ. ಇನ್ನು ಯಾವನು ತಾನೊಬ್ಬನೇ ಆಲೋಚಿಸಿ ಧರ್ಮದಲ್ಲಿ ಮನಸ್ಸನ್ನಿಟ್ಟು ಕಾರ್ಯವನ್ನಾರಂಭಿಸುವನೋ ಅವನು ಪುರುಷರಲ್ಲಿ ಮಧ್ಯಮನೆನಿಸುತ್ತಾನೆ (೮–೯).

ಏಕಃ ಕಾರ್ಯಾಣಿ ಕುರುತೇ ತಮಾಹುರ್ಮಧ್ಯಮಂ ನರಮ್ ।
ಗುಣದೋಷಾವನಿಶ್ಚಿತ್ಯ ತ್ಯಕ್ತ್ವಾ ಧರ್ಮವ್ಯಪಾಶ್ರಯಮ್ ॥ ೧೦

ಕರಿಷ್ಯಾಮೀತಿ ಯಃ ಕಾರ್ಯಮುಪೇಕ್ಷೇತ್ಸ ನರಾಧಮಃ ।
ಯಥೇಮೇ ಪುರುಷಾ ನಿತ್ಯಮುತ್ತಮಾಧಮಮಧ್ಯಮಾಃ ॥ ೧೧

ಏವಂ ಮಂತ್ರಾ ಹಿ ವಿಜ್ಞೇಯಾ ಉತ್ತಮಾಧಮಮಧ್ಯಮಾಃ ।
ಐಕಮತ್ಯಮುಪಾಗಮ್ಯ ಶಾಸ್ತ್ರದೃಷ್ಟೇನ ಚಕ್ಷುಷಾ ॥ ೧೨

ಮಂತ್ರಿಣೋ ಯತ್ರ ನಿರತಾಸ್ತಮಾಹುರ್ಮಂತ್ರಮುತ್ತಮಮ್ ।
ಬಹ್ವ್ಯೋಽಪಿ ಮತಯೋ ಭೂತ್ವಾ ಮಂತ್ರಿಣಾಮರ್ಥನಿರ್ಣಯೇ ॥

ಪುನರ್ಯತ್ರೈಕತಾಂ ಪ್ರಾಪ್ತಾಃ ಸ ಮಂತ್ರೋ ಮಧ್ಯಮಃ ಸ್ಮೃತಃ ।
ಅನ್ಯೋನ್ಯಂ ಮತಿಮಾಸ್ಥಾಯ ಯತ್ರ ಸಂಪ್ರತಿಭಾಷ್ಯತೇ ॥ ೧೪

ನ ಚೈಕಮತ್ಯೇ ಶ್ರೇಯೋಽಸ್ತಿ ಮಂತ್ರಃ ಸೋಽಧಮ ಉಚ್ಯತೇ ।
ತಸ್ಮಾತ್ಸುಮಂತ್ರಿತಂ ಸಾಧು ಭವಂತೋ ಮತಿಸತ್ತಮಾಃ ॥ ೧೫

---

ಆದರೆ ಯಾವನು ಗುಣದೋಷಗಳನ್ನು ವಿಮರ್ಶಿಸದೆ ಧರ್ಮವನ್ನು ಬದಿಗೊತ್ತಿ ನಾನೇ ನಡೆಸುವೆನೆಂದು ಅಹಂಕಾರದಿಂದ ಕಾರ್ಯವನ್ನಾರಂಭಿಸಿ ಅದನ್ನೂ ಸರಿಯಾಗಿ ಮಾಡದೆ ಉಪೇಕ್ಷಿಸುವನೋ ಅವನು ಅಧಮನೆನಿಸುತ್ತಾನೆ. ಹೀಗೆ ಜನರಲ್ಲಿ ಉತ್ತಮ, ಮಧ್ಯಮ, ಅಧಮ ಎಂದು ಮೂರು ಬಗೆಯವರಿದ್ದಾರೆ (೧೦–೧೧). ಇದೇ ರೀತಿಯಲ್ಲಿ ಮಂತ್ರಾಲೋಚನೆಯೂ ಮೂರು ಬಗೆಯಾಗಿರುತ್ತದೆ. ಮಂತ್ರಿಗಳೆಲ್ಲರೂ ಶಾಸ್ತ್ರೋಕ್ತವಾದ ಮಾರ್ಗದಿಂದ ವಿಮರ್ಶಿಸಿ ಐಕಮತ್ಯದಿಂದ ಯಾವುದನ್ನು ನಿರ್ಣಯಿಸುವರೋ ಅದು ಉತ್ತಮ ಮಂತ್ರವೆನಿಸುತ್ತದೆ (೧೨). ಕಾರ್ಯವನ್ನು ನಿರ್ಣಯಿಸುವಾಗ ಮಂತ್ರಿಗಳಲ್ಲಿ ಭಿನ್ನಾಭಿಪ್ರಾಯಗಳು ಬಂದರೂ ಕಡೆಯಲ್ಲಿ ಎಲ್ಲರೂ ಅದನ್ನು ಒಪ್ಪಿದರೆ, ಆಗ ಅದು ಮಧ್ಯಮ ಮಂತ್ರವೆನಿಸುವುದು. ಆದರೆ ಯಾವುದರ ವಿಷಯದಲ್ಲಿ ಎಲ್ಲರಿಗೂ ಭಿನ್ನಾಭಿಪ್ರಾಯಗಳುಂಟಾಗಿ ಹೊಂದಾಣಿಕೆಯೇ ಆಗುವುದಿಲ್ಲವೋ ಐಕಮತ್ಯದಲ್ಲಿ ವಿಶ್ವಾಸವೇ ಮೂಡುವುದಿಲ್ಲವೋ, ಅದು ಅಧಮವಾದ ಮಂತ್ರಾಲೋಚನೆಯೆನಿಸುತ್ತದೆ. ಆದ್ದರಿಂದ, ಬುದ್ಧಿಶಾಲಿಗಳಾದ ನೀವು ಸರಿಯಾಗಿ ವಿಮರ್ಶಿಸಿ ನಿರ್ಣಯ ಮಾಡಿರಿ (೧೩–೧೫).

ಕಾರ್ಯಂ ಸಂಪ್ರತಿಪದ್ಯಂತಾಮೇತತ್ಕೃತ್ಯಂ ಮತಂ ಮಮ ।
ವಾನರಾಣಾಂ ಹಿ ವೀರಾಣಾಂ ಸಹಸ್ರೈಃ ಪರಿವಾರಿತಃ ॥ ೧೬

ರಾಮೋಽಭ್ಯೇತಿ ಪುರೀಂ ಲಂಕಾಮಸ್ಮಾಕಮುಪರೋಧಕಃ ।
ತರಿಷ್ಯತಿ ಚ ಸುವ್ಯಕ್ತಂ ರಾಘವಃ ಸಾಗರಂ ಸುಖಮ್ ॥ ೧೭

ತರಸಾ ಯುಕ್ತರೂಪೇಣ ಸಾನುಜಃ ಸಬಲಾನುಗಃ ।
ಸಮುದ್ರಮುಚ್ಛೋಷಯತಿ ವೀರ್ಯೇಣಾನ್ಯತ್ಕರೋತಿ ವಾ ॥ ೧೮

ಅಸ್ಮಿನ್ನೇವಂಗತೇ ಕಾರ್ಯೇ ವಿರುದ್ಧೇ ವಾನರೈಃ ಸಹ ।
ಹಿತಂ ಪುರೇ ಚ ಸೈನ್ಯೇ ಚ ಸರ್ವಂ ಸಂಮಂತ್ರ್ಯತಾಂ ಮಮ ॥ ೧೯

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಷ್ಠಃ ಸರ್ಗಃ

---

ಮುಂದಿನ ಕರ್ತವ್ಯವೇನೆಂದು ನಿಶ್ಚಯಿಸಿರಿ. ನಿಮ್ಮ ನಿರ್ಣಯಕ್ಕೆ ನನ್ನ ಒಪ್ಪಿಗೆಯುಂಟು. ಈಗಲಾದರೋ ರಾಮನು ಸಾವಿರಾರು ಮಂದಿ ಕಪಿವೀರರೊಡನೆ ನಮ್ಮ ಲಂಕಾಪುರಿಯ ಮೇಲೆ ಧಾಳಿಮಾಡಲು ಬರುವನು. ಲಂಕೆಯನ್ನು ಮುತ್ತುವುದಕ್ಕಾಗಿ ಅವನು ಸಮುದ್ರವನ್ನು ದಾಟುವನೆಂಬುದೂ ಸುಸ್ಪಷ್ಟ (೧೬–೧೭). ಅವನು ತನ್ನ ತಮ್ಮನೊಡನೆಯೂ ಕಪಿಸೇನೆಯೊಡನೆಯೂ ಬಂದು, ಯುಕ್ತವೆನಿಸಿದ ರೀತಿಯಲ್ಲಿ ತನ್ನ ಸಂಪೂರ್ಣಶಕ್ತಿಯನ್ನೂ ತೋರಿಸುವನು. ತನ್ನ ಪರಾಕ್ರಮದಿಂದ ಸಮುದ್ರವನ್ನೇ ಒಣಗಿಸುವನೋ ಅಥವಾ ಇನ್ನೇನಾದರೂ ಉಪಾಯವನ್ನು ಹೂಡುವನೋ! (ಅಂತೂ ರಾಮನು ಬರುವುದು ದಿಟ.) ಪರಿಸ್ಥಿತಿಯು ಈ ಹಂತವನ್ನು ಮುಟ್ಟಿದೆ. ವಾನರರೊಡನೆ ಯುದ್ಧವು ಒದಗಿಬಂದಿದೆ. ಈಗ ನಮ್ಮ ನಗರಕ್ಕೂ ಸೈನ್ಯಕ್ಕೂ ಹಿತಕರವಾದ ಮಂತ್ರಾಲೋಚನೆಯನ್ನು ನನಗೆ ಹೇಳಿರಿ'' ಎಂದನು (೧೮–೧೯).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಆರನೆಯ ಸರ್ಗ

---

## ಸಪ್ತಮಃ ಸರ್ಗಃ

### ಸಚಿವೋಕ್ತಿಃ

ಇತ್ಯುಕ್ತಾ ರಾಕ್ಷಸೇಂದ್ರೇಣ ರಾಕ್ಷಸಾಸ್ತೇ ಮಹಾಬಲಾಃ ।
ಊಚುಃ ಪ್ರಾಂಜಲಯಃ ಸರ್ವೇ ರಾವಣಂ ರಾಕ್ಷಸೇಶ್ವರಮ್ ॥ ೧

ದ್ವಿಷತ್ಪಕ್ಷಮವಿಜ್ಞಾಯ ನೀತಿಬಾಹ್ಯಾಸ್ತ್ವಬುದ್ಧಯಃ ।
ಅವಿಜ್ಞಾಯಾತ್ಮಪಕ್ಷಂ ಚ ರಾಜಾನಂ ಭೀಷಯಂತಿ ಹಿ ॥ ೨

ರಾಜನ್ ಪರಿಘಶಕ್ತ್ಯೃಷ್ಟಿ ಶೂಲಪಟ್ಟಸಸಂಕುಲಮ್ ।
ಸುಮಹನ್ನೋ ಬಲಂ ಕಸ್ಮಾದ್ವಿಷಾದಂ ಭಜತೇ ಭವಾನ್ ॥ ೩

ತ್ವಯಾ ಭೋಗವತೀಂ ಗತ್ವಾ ನಿರ್ಜಿತಾಃ ಪನ್ನಗಾ ಯುಧಿ ।
ಕೈಲಾಸಶಿಖರಾವಾಸೀ ಯಕ್ಷೈರ್ಬಹುಭಿರಾವೃತಃ ॥ ೪

### ಸರ್ಗ ೭

ಮಂತ್ರಿಗಳು ಮುಖಸ್ತುತಿಯಿಂದ ರಾವಣನನ್ನು ಯುದ್ಧಕ್ಕೆ ಪ್ರೋತ್ಸಾಹಿಸುವುದು.

ರಾಕ್ಷಸೇಂದ್ರನು ಈ ರೀತಿಯಲ್ಲಿ ಹೇಳಲಾಗಿ, ಬಲಾಢ್ಯರಾದ ಆ ರಾಕ್ಷಸರು ಕೈ ಮುಗಿದುಕೊಂಡು ರಾವಣನನ್ನು ಕುರಿತು ಹೀಗೆ ನಿವೇದಿಸಿದರು : ''ಮಹಾರಾಜ, ಈ ಜಗತ್ತಿನಲ್ಲಿ ಕೆಲವರು ರಾಜನೀತಿಯನ್ನರಿಯದ ಬುದ್ಧಿಹೀನರಾಗಿದ್ದಾರೆ. ವೈರಿಯ ಬಲವೇನು? ತಮ್ಮ ಬಲವೇನು? ಎಂಬುದನ್ನರಿಯದೆ ಸುಮ್ಮನೆ ತಮ್ಮ ರಾಜನನ್ನು ಅವರು ಹೆದರಿಸುತ್ತಾರೆ (೧–೨). ನಮ್ಮ ಸೇನೆಯೇನು ಸಾಮಾನ್ಯವೆ? ಬಲು ದೊಡ್ಡದಾದ ನಮ್ಮ ರಾಕ್ಷಸಸೇನೆಯು ಪರಿಘ, ಶಕ್ತಿ ಖಡ್ಗ ಶೂಲ, ಪಟ್ಟಸ ಮುಂತಾದ ಆಯುಧಗಳಿಂದ ಸಜ್ಜಾಗಿ ನಿಂತಿದೆ. ಹೀಗಿರುವಾಗ ನಿನಗೆ ವಿಷಾದವೇಕೆ? (೩). ನೀನು ಪಾತಾಳದಲ್ಲಿರುವ ಭೋಗವತೀನಗರಕ್ಕೆ ಹೋಗಿ ಯುದ್ಧದಲ್ಲಿ ಪನ್ನಗರನ್ನು ಗೆದ್ದು ಬರಲಿಲ್ಲವೆ? ಕೈಲಾಸಶಿಖರದಲ್ಲಿರುವ ಕುಬೇರನು ಬಹುಮಂದಿ ಯಕ್ಷರೊಡನೆ ಯುದ್ಧಕ್ಕೆ

ಸುಮಹತ್ಕದನಂ ಕೃತ್ವಾ ವಶ್ಯಸ್ತೇ ಧನದಃ ಕೃತಃ ।
ಸ ಮಹೇಶ್ವರಸಖ್ಯೇನ ಶ್ಲಾಘಮಾನಸ್ತ್ವಯಾ ವಿಭೋ ॥ ೫

ನಿರ್ಜಿತಃ ಸಮರೇ ರೋಷಾಲ್ಲೋಕಪಾಲೋ ಮಹಾಬಲಃ ।
ವಿನಿಹತ್ಯ ಚ ಯಕ್ಷೌಘಾನ್ ವಿಕ್ಷೋಭ್ಯ ಚ ವಿಗೃಹ್ಯ ಚ ॥ ೬

ತ್ವಯಾ ಕೈಲಾಸಶಿಖರಾದ್ವಿ ಮಾನಮಿದಮಾಹೃತಮ್ ।
ಮಯೇನ ದಾನವೇಂದ್ರೇಣ ತ್ವದ್ಭಯಾತ್ಸಖ್ಯಮಿಚ್ಛತಾ ॥ ೭

ದುಹಿತಾ ತವ ಭಾರ್ಯಾರ್ಥೇ ದತ್ತಾ ರಾಕ್ಷಸಪುಂಗವ ।
ದಾನವೇಂದ್ರೋ ಮಧುರ್ನಾಮ ವೀರ್ಯೋತ್ಸಿಕ್ತೋ ದುರಾಸದಃ ॥

ವಿಗೃಹ್ಯ ವಶಮಾನೀತಃ ಕುಂಭೀನಸ್ಯಾಃ ಸುಖಾವಹಃ ।
ನಿರ್ಜಿತಾಸ್ತೇ ಮಹಾಬಾಹೋ ನಾಗಾ ಗತ್ವಾ ರಸಾತಲಮ್ ॥ ೯

ವಾಸುಕಿಸ್ತಕ್ಷಕಃ ಶಂಖೋ ಜಟೀ ಚ ವಶಮಾಹೃತಾಃ ।
ಅಕ್ಷಯಾ ಬಲವಂತಶ್ಚ ಶೂರಾ ಲಬ್ಧವರಾಃ ಪುರಾ ॥ ೧೦

---

ಸಿದ್ಧನಾಗಲು, ಅವನೊಡನೆ ಖಾಡಾಖಾಡಿಯಾಗಿ ಹೋರಾಡಿ ಅವನನ್ನು ಸೆರೆಹಿಡಿಯಲಿಲ್ಲವೆ? ಆ ಕುಬೇರನು ತಾನು ಪರಮೇಶ್ವರನ ಮಿತ್ರನೆಂದೂ ಲೋಕಪಾಲನೆಂದೂ ಮಹಾಬಲನೆಂದೂ ಜಂಬ ಕೊಚ್ಚಿಕೊಂಡರೂ, ಪ್ರಭು, ನೀನು ರೋಷದಿಂದ ಸಮರದಲ್ಲಿ ಅವನನ್ನು ಸದೆಬಡಿದಿದ್ದಿಯೆ (೪–೫). ಅವನ ಯಕ್ಷರ ಹಿಂಡನ್ನು ಚಲ್ಲಾಪಿಲ್ಲಿಯಾಗಿ ಹೊಡೆದೋಡಿಸಿ, ಪುಷ್ಪಕವಿಮಾನ ವನ್ನು ಕೈಲಾಸಶಿಖರದಿಂದ ಕಿತ್ತುಕೊಂಡು ಬಂದಿದ್ದೀಯೆ. ಓ ರಾಕ್ಷಸೋತ್ತಮ, ದಾನವೇಂದ್ರನಾದ ಮಯನು ನಿನಗೆ ಹೆದರಿ ತತ್ತರಿಸಿ, ಕಡೆಗೆ ನಿನ್ನೊಡನೆ ಸ್ನೇಹವನ್ನು ಬೆಳೆಸುವುದಕ್ಕಾಗಿ ತನ್ನ ಮಗಳನ್ನು ನಿನಗೆ ಕೊಟ್ಟು ಮದುವೆ ಮಾಡಿದನಲ್ಲವೆ? ಮಧುವೆಂಬ ದಾನವೆಂದ್ರನು ವೀರ್ಯದಿಂದ ಕೊಬ್ಬಿ ದುರ್ಧರ್ಷನೆನಿಸಿಕೊಂಡವನು (೬–೮). ನಿನ್ನ ತಂಗಿ ಕುಂಭೀನಸಿಯ ಪ್ರಿಯಕರನಾದ ಆತನೊಡನೆ ಹೋರಾಡಿ ಆತನನ್ನು ಸೋಲಿಸಿದ್ದೀಯೆ. ಹೇ ಪರಾಕ್ರಮಿ, ನೀನು ರಸಾತಳಕ್ಕೆ ಹೋಗಿ ನಾಗಗಳನ್ನು ಗೆದ್ದು ವಾಸುಕಿ, ತಕ್ಷಕ, ಶಂಖ, ಜಟಿ ಮುಂತಾದ ಮಹಾನಾಗಗಳನ್ನು ಕೈವಶಪಡಿಸಿಕೊಂಡಿ ದ್ದೀಯೆ. ಅಲ್ಲದೆ ಕಾಲಕೇಯರೆಂಬ ದಾನವರು ಸಾಮಾನ್ಯರೆ? ನಾಶರಹಿತರು,

**ತ್ವಯಾ ಸಂವತ್ಸರಂ ಯುದ್ಧ್ವಾ ಸಮರೇ ದಾನವಾ ವಿಭೋ ।**
**ಸ್ವಬಲಂ ಸಮುಪಾಶ್ರಿತ್ಯ ನೀತಾ ವಶಮರಿಂದಮ ॥ ೧೧**

**ಮಾಯಾಶ್ಚಾಧಿಗತಾಸ್ತತ್ರ ಬಹವೋ ರಾಕ್ಷಸಾಧಿಪ ।**
**ನಿರ್ಜಿತಾಃ ಸಮರೇ ರೋಷಾಲ್ಲೋಕಪಾಲಾ ಮಹಾಬಲಾಃ ॥ ೧೨**

**ದೇವಲೋಕಮಿತೋ ಗತ್ವಾ ಶಕ್ರಶ್ಚಾಪಿ ವಿನಿರ್ಜಿತಃ ।**
**ಶೂರಾಶ್ಚ ಬಲವಂತಶ್ಚ ವರುಣಸ್ಯ ಸುತಾ ರಣೇ ॥ ೧೩**

**ನಿರ್ಜಿತಾಸ್ತೇ ಮಹಾಬಾಹೋ ಚತುರ್ವಿಧಬಲಾನುಗಾಃ ।**
**ಮೃತ್ಯುದಂಡಮಹಾಗ್ರಾಹಂ ಶಾಲ್ಮಲಿದ್ರುಮಮಂಡಿತಮ್ ॥ ೧೪**

**ಕಾಲಪಾಶಮಹಾವೀಚಿಂ ಯಮಕಿಂಕರಪನ್ನಗಮ್ ।**
**ಅವಗಾಹ್ಯ ತ್ವಯಾ ರಾಜನ್ ಯಮಲೋಕಮಹಾರ್ಣವಮ್ ॥ ೧೫**

**ಜಯಶ್ಚ ವಿಪುಲಃ ಪ್ರಾಪ್ತೋ ಮೃತ್ಯುಶ್ಚ ಪ್ರತಿಷೇಧಿತಃ ।**
**ಸುಯುದ್ಧೇನ ಚ ತೇ ಸರ್ವೇ ಲೋಕಾಸ್ತತ್ರ ಸುತೋಷಿತಾಃ ॥ ೧೬**

---

ಬಲಾಢ್ಯರು, ಶೂರರು, ತುಂಡುತುಂಡಾಗಿ ಕಡಿದರೂ ಪುನಃ ತಿರುಗಿ ಮೇಲೆದ್ದು ಬರುವಂತೆ ವರವನ್ನು ಪಡೆದವರು (೯–೧೦). ಅಂಥವರೊಡನೆ ನೀನು ಒಂದು ವರ್ಷದವರೆಗೆ ಅಖಂಡವಾಗಿ ಹೋರಾಡಿ, ನಿನ್ನ ಬಾಹುಸಾಮರ್ಥ್ಯದಿಂದಲೇ ಅವರನ್ನು ಕೈಸೆರೆ ಹಿಡಿದಿದ್ದೀಯೆ. ರಾಕ್ಷಸೇಶ್ವರ, ಅವರಿಂದ ವಿವಿಧ ಮಾಯಾವಿದ್ಯೆಗಳನ್ನು ಬೇರೆ ಕಲಿತುಕೊಂಡಿದ್ದೀಯೆ! ಮಹಾಬಲಶಾಲಿಗಳೆನಿಸಿದ ದಿಕ್ಪಾಲರನ್ನು ರೋಷಾವೇಶದಿಂದ ಸೋಲಿಸಿದ್ದೀಯೆ (೧೧–೧೨). ಇಲ್ಲಿಂದ ದೇವಲೋಕಕ್ಕೆ ಹೋಗಿ ದೇವೇಂದ್ರನನ್ನೂ ಜಯಿಸಲಿಲ್ಲವೆ? ಚತುರಂಗಬಲ ಸಹಿತರಾಗಿ ಬಂದ ಶೂರರಾದ ವರುಣಪುತ್ರರೂ ನಿನಗೆ ಸೋತುಹೋಗಲಿಲ್ಲವೆ? ಅಲ್ಲದೆ ಯಮಲೋಕವೆಂಬ ಮಹಾಸಾಗರವನ್ನು ಲೆಕ್ಕಿಸದೆ ಅದರೊಳಗೆ ನುಗ್ಗಿ ಹೋಗಿದ್ದೀಯೆ. ಅಲ್ಲಿ ಮೃತ್ಯುದಂಡವೇ ಭೀಕರವಾದ ಮೊಸಳೆ. ಶಾಲ್ಮಲಿಗಳೆಂಬ ಯಾತನಾಸ್ತಂಭಗಳೇ ಮಹಾವೃಕ್ಷಗಳು (೧೩–೧೪). ಕಾಲಪಾಶವೇ ಎದ್ದೆದ್ದು ಬರುವ ಮಹತ್ತರವಾದ ಅಲೆ. ಯಮಕಿಂಕರರೇ ಘೋರ ಸರ್ಪಗಳು. ಇಂತಹ ಯಮಲೋಕವೆಂಬ ಮಹಾಸಾಗರದಲ್ಲಿ ನುಗ್ಗಿ, ಯಮನನ್ನು ಅಡ್ಡಗಟ್ಟಿ ವಿಪುಲವಾದ ವಿಜಯವನ್ನು ಪಡೆದುಬಂದಿದ್ದೀಯೆ. ಘನ

ಕ್ಷತ್ರಿಯೈರ್ಬಹುಭಿರ್ವೀರ್ಯೈಃ ಶಕ್ರತುಲ್ಯಪರಾಕ್ರಮೈಃ ।
ಆಸೀದ್ವಸುಮತೀ ಪೂರ್ಣಾ ಮಹದ್ಭಿರಿವ ಪಾದಪೈಃ ॥ ೧೭

ತೇಷಾಂ ವೀರ್ಯಗುಣೋತ್ಸಾಹೈರ್ನ ಸಮೋ ರಾಘವೋ ರಣೇ ।
ಪ್ರಸಹ್ಯ ತೇ ತ್ವಯಾ ರಾಜನ್ ಹತಾಃ ಪರಮದುರ್ಜಯಾಃ ॥ ೧೮

ತಿಷ್ಠ ವಾ ಕಿಂ ಮಹಾರಾಜ ಶ್ರಮೇಣ ತವ ವಾನರಾನ್ ।
ಅಯಮೇಕೋ ಮಹಾಬಾಹುರಿಂದ್ರಜಿತ್ಕ್ಷಪಯಿಷ್ಯತಿ ॥ ೧೯

ಅನೇನ ಹಿ ಮಹಾರಾಜ ಮಾಹೇಶ್ವರಮನುತ್ತಮಮ್ ।
ಇಷ್ಟ್ವಾ ಯಜ್ಞಂ ವರೋ ಲಬ್ಧೋ ಲೋಕೇ ಪರಮದುರ್ಲಭಃ ॥

ಶಕ್ತಿತೋಮರಮೀನಂ ಚ ವಿನಿಕೀರ್ಣಾಂತ್ರ ಶೈವಲಮ್ ।
ಗಜಕಚ್ಛಪಸಂಬಾಧಮಶ್ವಮಂಡೂಕಸಂಕುಲಮ್ ॥ ೨೧

---

ಘೋರಯುದ್ಧವನ್ನು ಹೂಡಿ ಸಕಲದಿಕ್ಪಾಲಕರನ್ನೂ ಗೆದ್ದು ಮೆಚ್ಚುಗೆಯನ್ನು ಗಳಿಸಿದ್ದೀಯೆ (೧೫–೧೭). ಮಹಾರಾಜ, ಈ ಭೂಲೋಕದಲ್ಲಿ ದೇವೇಂದ್ರ ತುಲ್ಯಪರಾಕ್ರಮಿಗಳಾದ ಕ್ಷತ್ರಿಯ ವೀರರು ಹೆಮ್ಮರಗಳಂತೆ ಎಲ್ಲೆಲ್ಲಿಯೂ ವ್ಯಾಪಿಸಿದ್ದರಲ್ಲವೆ? ರಾಕ್ಷಸೇಂದ್ರ, ಅಜೇಯರೆನಿಸಿದ್ದ ಆ ಶೂರರನ್ನೇ ನೀನು ರಣರಂಗದಲ್ಲಿ ಎದುರಿಸಿ ಕೊಂದುಹಾಕಿ ಸಾಹಸವನ್ನು ಮೆರೆಸಿರುವಾಗ, ಈ ರಾಮನು ಯಾವ ಲೆಕ್ಕದವನು! ವೀರ್ಯದಲ್ಲಾಗಲಿ ಗುಣೋತ್ಕರ್ಷ ದಲ್ಲಾಗಲಿ ಉತ್ಸಾಹದಲ್ಲಾಗಲಿ ಈ ರಾಮನು ಆ ಕ್ಷತ್ರಿಯರಿಗೆ ಎಣೆಯಲ್ಲ! (೧೭–೧೮). ಅಥವಾ ರಾಜೇಂದ್ರ, ನಿನಗೇಕೆ ಈ ಆಯಾಸ? ಮಹಾಬಾಹು ವಾದ ಇಂದ್ರಜಿತುವೊಬ್ಬನೇ ಸಮಸ್ತವಾನರರನ್ನೂ ಕೊಂದು ಅವರ ಹುಟ್ಟಡಗಿಸುವನು. ಈತನು ಮಹೇಶ್ವರನನ್ನುದ್ದೇಶಿಸಿ ಮಹಾಯಾಗವನ್ನು ಆಚರಿಸಿ, ಇನ್ನೊಬ್ಬನು ಪಡೆಯದಿರುವ ಶ್ರೇಷ್ಠ ವರವನ್ನು ಪಡೆದುಕೊಂಡಿದ್ದಾನೆ (೧೯–೨೦). ಇಂದ್ರನೊಡನೆ ಘನಘೋರವಾದ ಯುದ್ಧವನ್ನು ನಡೆಸಿದ್ದಾನೆ. ಶಕ್ತಿತೋಮರಗಳೆಂಬ ಮೀನುಗಳಿಂದಲೂ ಚೆಲ್ಲಾಪಿಲ್ಲಿಯಾದ ಕರುಳುಗಳೆಂಬ ಪಾಚಿಗಳಿಂದಲೂ ಮದ್ದಾನೆಗಳೆಂಬ ಆಮೆಗಳಿಂದಲೂ ಕುದುರೆ ಗಳೆಂಬ ಕಪ್ಪೆಗಳಿಂದಲೂ ಸಂಭಿನ್ನವಾದ ದೇವತಾಸೈನ್ಯವೆಂಬ ಕಡಲನ್ನು ಈಡಾಡಿದ್ದಾನೆ (೨೧).

ರುದ್ರಾದಿತ್ಯಮಹಾಗ್ರಾಹಂ ಮರುದ್ವಸುಮಹೋರಗಮ್ ।
ರಥಾಶ್ವಗಜತೋಯೌಘಂ ಪದಾತಿಪುಲಿನಂ ಮಹತ್ ॥ ೨೨

ಅನೇನ ಹಿ ಸಮಾಸಾದ್ಯ ದೇವಾನಾಂ ಬಲಸಾಗರಮ್ ।
ಗೃಹೀತೋ ದೈವತಪತಿರ್ಲಂಕಾಂ ಚಾಪಿ ಪ್ರವೇಶಿತಃ ॥ ೨೩

ಪಿತಾಮಹನಿಯೋಗಾಚ್ಚ ಮುಕ್ತಃ ಶಂಬರವೃತ್ರಹಾ ।
ಗತಸ್ತ್ರಿವಿಷ್ಟಪಂ ರಾಜನ್ ಸರ್ವದೇವನಮಸ್ಕೃತಃ ॥ ೨೪

ತಮೇವ ತ್ವಂ ಮಹಾರಾಜ ವಿಸೃಜೇಂದ್ರಜಿತಂ ಸುತಮ್ ।
ಯಾವದ್ವಾನರಸೇನಾಂ ತಾಂ ಸರಾಮಾಂ ನಯತಿ ಕ್ಷಯಮ್ ॥ ೨೫

ರಾಜನ್ನಾಪದಯುಕ್ತೇಯಮಾಗತಾ ಪ್ರಾಕೃತಾಜ್ಜನಾತ್ ।
ಹೃದಿ ನೈವ ತ್ವಯಾ ಕಾರ್ಯಾ ತ್ವಂ ವಧಿಷ್ಯಸಿ ರಾಘವಮ್ ॥ ೨೬

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತಮಃ ಸರ್ಗಃ

---

ಆ ಕಡಲಿನಲ್ಲಿ ಏಕಾದಶರುದ್ರರೂ ದ್ವಾದಶಾದಿತ್ಯರೂ ಸಮುದ್ರವ್ಯಾಪ್ರಗಳಂತೆ ಆರ್ಭಟಿಸುತ್ತಿದ್ದರು. ಸಪ್ತಮರುತ್ತುಗಳೂ ಅಷ್ಟವಸುಗಳೂ ಘೋರ ಸರ್ಪಗಳಂತೆ ಸುಳಿಯುತ್ತಿದ್ದರು. ರಥಾಶ್ವಗಜಗಳು ಜಲಪ್ರವಾಹದಂತೆ ಅಪಾರವಾಗಿದ್ದವು. ಪದಾತಿಗಳು ಮರಳುದಿಣ್ಣೆಗಳಂತೆ ರಾಶಿರಾಶಿಯಾಗಿ ನೆರೆದಿದ್ದರು (೨೨). ಅಂಥ ಭೀಕರವಾದ ಶತ್ರು ಸೈನ್ಯವೆಂಬ ಕಡಲಿನೊಳಗೆ ನುಗ್ಗಿ ಈ ಮೇಘನಾದನು ಇಂದ್ರನನ್ನು ಸೆರೆಹಿಡಿದು ಲಂಕಾನಗರದೊಳಗೆ ದರದರನೆ ಎಳೆತರಲಿಲ್ಲವೆ? ಮಹಾರಾಜ, ಶಂಬರಾಸುರನನ್ನೂ ವೃತ್ರಾಸುರನನ್ನೂ ಸಂಹರಿಸಿದ ವೀರನಾದ ಆ ಇಂದ್ರನಿಗೆ ಬ್ರಹ್ಮದೇವನ ಮಾತಿನಂತೆ ಬಿಡುಗಡೆಯಾಗಬೇಕಾಯಿತು! ಸರ್ವದೇವನಮಸ್ಕೃತನಾದ ಇಂದ್ರನು ಈ ರೀತಿಯಲ್ಲಿ ತಿರುಗಿ ಸ್ವರ್ಗಕ್ಕೆ ಹೋಗಿ ಸೇರಿಕೊಂಡನು ! (೨೩–೨೪). ಆದ್ದರಿಂದ, ಮಹಾರಾಜ, ನಿನ್ನ ಕುಮಾರನಾದ ಆ ಇಂದ್ರಜಿತುವೊಬ್ಬನನ್ನೇ ಯುದ್ಧಕ್ಕೆ ಕಳಿಸಿದರೆ ಸಾಕು. ರಾಮಸಹಿತವಾಗಿ ಆ ಕೋತಿಗಳ ಪಡೆಯನ್ನು ಕೊಂದುಹಾಕುವನು. ರಾಕ್ಷಸೇಂದ್ರ, ನಿನಗೆ ಕಷ್ಟಬಂದಿದೆಯೆಂದುಕೊಂಡಿರುವುದು ಕೇವಲ ಅಲ್ಪಜನರ ದೆಸೆಯಿಂದ ; ಇದಕ್ಕಾಗಿ ಸ್ವಲ್ಪವೂ ಕೊರಗಬೇಡ. ರಾಮನನ್ನು ನೀನು ವಧಿಸಿ ಜಯಶಾಲಿಯಾಗುವೆ'' ಎಂದು ಹೇಳಿದರು (೨೫–೨೬).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಏಳನೆಯ ಸರ್ಗ

## ಅಷ್ಟಮಃ ಸರ್ಗಃ

ಪ್ರಹಸ್ತಾದಿವಚನಮ್

ತತೋ ನೀಲಾಂಬುದನಿಭಃ ಪ್ರಹಸ್ತೋ ನಾಮ ರಾಕ್ಷಸಃ ।
ಅಬ್ರವೀತ್ಪ್ರಾಂಜಲಿರ್ವಾಕ್ಯಂ ಶೂರಃ ಸೇನಾಪತಿಸ್ತದಾ ॥ ೧

ದೇವದಾನವಗಂಧರ್ವಾಃ ಪಿಶಾಚಪತಗೋರಗಾಃ ।
ನ ತ್ವಾಂ ಧರ್ಷಯಿತುಂ ಶಕ್ತಾಃ ಕಿಂ ಪುನರ್ಮಾನವೌ ರಣೇ ॥ ೨

ಸರ್ವೇ ಪ್ರಮತ್ತಾ ವಿಶ್ವಸ್ತಾ ವಂಚಿತಾಃ ಸ್ಮ ಹನೂಮತಾ ।
ನ ಹಿ ಮೇ ಜೀವತೋ ಗಚ್ಛೇಜ್ಜೀವನ್ ಸ ವನಗೋಚರಃ ॥ ೩

ಸರ್ವಾಂ ಸಾಗರಪರ್ಯಂತಾಂ ಸಶೈಲವನಕಾನನಾಮ್ ।
ಕರೋಮ್ಯವಾನರಾಂ ಭೂಮಿಮಾಜ್ಞಾಪಯತು ಮಾಂ ಭವಾನ್ ॥ ೪

### ಸರ್ಗ ೮

ಪ್ರಹಸ್ತ, ದುರ್ಮುಖ, ವಜ್ರದಂಷ್ಟ್ರ, ನಿಕುಂಭ ಮತ್ತು ವಜ್ರಹನು ಎಂಬ ರಾಕ್ಷಸನಾಯಕರು ತಮ್ಮ ಪರಾಕ್ರಮವನ್ನು ಹೊಗಳಿಕೊಳ್ಳುವುದು.

ಆಮೇಲೆ ಪ್ರಹಸ್ತನೆಂಬ ಶೂರನಾದ ಸೇನಾಪತಿಯು ಮಾತಾಡಿದನು. ಕಾಲಮೇಘದಂತೆ ಕಪ್ಪಗಿದ್ದ ಆ ರಾಕ್ಷಸನು ಕೈಜೋಡಿಸಿ "ಮಹಾರಾಜ, ದೇವದಾನವಗಂಧರ್ವರಾಗಲಿ, ಪಿಶಾಚಪತಗೋರಗರಾಗಲಿ ನಿನ್ನನ್ನು ಎದುರಿಸಲು ಶಕ್ತರಲ್ಲ. ಹೀಗಿರುವಾಗ ಇಬ್ಬರು ಮನುಷ್ಯರು ಬಂದು ನಿನ್ನೊಡನೆ ಹೋರಾಡಬಲ್ಲರೆ? (೧–೨). ಹನುಮಂತನು ನಮಗೆ ಮೋಸಮಾಡಿದನು. ನಮ್ಮನ್ನು ಯಾರೂ ಕೆಣಕಲಾರರೆಂಬ ನಂಬಿಕೆಯಿಂದ ನಾವು ತಕ್ಕಷ್ಟು ಎಚ್ಚರಿಕೆಯನ್ನು ವಹಿಸಿರಲಿಲ್ಲ. ನಾನು ಬದುಕಿರುವಾಗ ಆ ಕೋಡಗನು ಜೀವಂತನಾಗಿ ತಪ್ಪಿಸಿಕೊಂಡುಹೋಗೋಣವೆಂದರೇನು? ರಾಜೇಂದ್ರ, ನನಗೆ ಆಜ್ಞೆಯನ್ನು ಕೊಟ್ಟು ನೋಡು ಸಮುದ್ರಪರ್ಯಂತವಾಗಿ ಯಾವ ಶೈಲಾರಣ್ಯಗಳಲ್ಲಿಯೂ – ಇಡೀ ಜಗತ್ತಿನಲ್ಲಿಯೇ ಇರದಂತೆ ಕಪಿಕುಲವನ್ನು ನಿರ್ನಾಮಗೊಳಿಸುವೆನು! (೩–೪).

ರಕ್ಷಾಂ ಚೈವ ವಿಧಾಸ್ಯಾಮಿ ವಾನರಾದ್ರಜನೀಚರ ।
ನಾಗಮಿಷ್ಯತಿ ತೇ ದುಃಖಂ ಕಿಂಚಿದಾತ್ಮಾಪರಾಧಜಮ್ ॥ ೫

ಅಬ್ರವೀತ್ತು ಸುಸಂಕ್ರುದ್ಧೋ ದುರ್ಮುಖೋ ನಾಮ ರಾಕ್ಷಸಃ ।
ಇದಂ ನ ಕ್ಷಮಣೀಯಂ ಹಿ ಸರ್ವೇಷಾಂ ನಃ ಪ್ರಧರ್ಷಣಮ್ ॥ ೬

ಅಯಂ ಪರಿಭವೋ ಭೂಯಃ ಪುರಸ್ಯಾಂತಃ ಪುರಸ್ಯ ಚ ।
ಶ್ರೀಮತೋ ರಾಕ್ಷಸೇಂದ್ರಸ್ಯ ವಾನರೇಣ ಪ್ರಧರ್ಷಣಮ್ ॥ ೭

ಅಸ್ಮಿನ್ ಮುಹೂರ್ತೇ ಹತ್ವೈಕೋ ನಿವರ್ತಿಷ್ಯಾಮಿ ವಾನರಾನ್ ।
ಪ್ರವಿಷ್ಟಾನ್ ಸಾಗರಂ ಭೀಮಮಂಬರಂ ವಾ ರಸಾತಲಮ್ ॥ ೮

ತತೋಽಬ್ರವೀತ್ತುಸಂಕ್ರುದ್ಧೋ ವಜ್ರದಂಷ್ಟ್ರೋ ಮಹಾಬಲಃ ।
ಪ್ರಗೃಹ್ಯ ಪರಿಘಂ ಘೋರಂ ಮಾಂಸಶೋಣಿತರೂಷಿತಮ್ ॥ ೯

ಕಿಂ ವೋ ಹನುಮತಾ ಕಾರ್ಯಂ ಕೃಪಣೇನ ದುರಾತ್ಮನಾ ।
ರಾಮೇ ತಿಷ್ಠತಿ ದುರ್ಧರ್ಷೇ ಸಸುಗ್ರೀವೇ ಸಲಕ್ಷ್ಮಣೇ ॥ ೧೦

---

ಯಾವ ವಾನರನಿಂದಲೂ ಇನ್ನೊಮ್ಮೆ ತೊಂದರೆಯಾಗದಂತೆ, ಲಂಕಾ ನಗರಕ್ಕೆ ರಕ್ಷಣಾವ್ಯವಸ್ಥೆಯನ್ನೇರ್ಪಡಿಸುವೆನು ನಮ್ಮ ಪ್ರಮಾದದಿಂದ ಹಿಂದೆ ಸಂಭವಿಸಿದಂತೆ, ಮತ್ತೆ ಯಾವ ಕ್ಲೇಶವೂ ನಿನಗೆ ಸಂಭವಿಸದು'' ಎಂದು ಹೇಳಿದನು (೫). ಆಗ ದುರ್ಮುಖನೆಂಬ ರಾಕ್ಷಸನು ಸಿಟ್ಟಿನಿಂದ ಮೇಲೆದ್ದು, ''ಇದನ್ನು ಸಹಿಸಲು ಸಾಧ್ಯವಿಲ್ಲ! ಕಪಿಯೊಂದು ಬಂದು ಅಸಡ್ಡೆಯಿಂದ ನಮ್ಮನ್ನು ಕೆಣಕಿದೆ ! ಅಲ್ಲದೆ ನಗರದೊಳಗೂ ನಮ್ಮ ರಾಕ್ಷಸೇಂದ್ರನ ಅಂತಃ ಪುರದೊಳಗೂ ನುಗ್ಗುವುದೆಂದರೆ, ನಾಚಿಕೆಗೇಡಿನ ಪ್ರಸಂಗವಿದು! ಅದರಲ್ಲಿಯೂ ಒಬ್ಬ ವಾನರನ ಕೈವಾಡ ಇಲ್ಲಿಯವರೆಗೆ ಬಂದಿತೆ! (೬–೭). ನಾನೊಬ್ಬನೇ ಈ ಕ್ಷಣದಲ್ಲಿ ಹೊರಟು ಸಕಲವಾನರರನ್ನೂ ಸದೆಬಡಿಯುವೆನು. ಅವರು ಭೀಕರವಾದ ಕಡಲಲ್ಲಿ ಮುಳುಗಲಿ, ಅಂಬರಕ್ಕೆ ನೆಗೆಯಲಿ, ರಸಾತಳದಲ್ಲೇ ಅಡಗಲಿ – ಎಲ್ಲರನ್ನೂ ಸಂಹರಿಸಿಯೇ ಹಿಂದಿರುಗುವೆನು!'' ಎಂದು ಅಬ್ಬರಿಸಿದನು (೮). ಅಷ್ಟರಲ್ಲಿ ಬಲಾಢ್ಯನಾದ ವಜ್ರದಂಷ್ಟ್ರನ ಸಿಟ್ಟು ನೆತ್ತಿಗೇರಿತು. ಮಾಂಸವೂ ಕೆನ್ನೆತ್ತರೂ ಮೆತ್ತಿಕೊಂಡಿದ್ದ ಘೋರಪರಿಘವನ್ನು ಹಿಡಿದು, ''ಎಲೈ ರಾಕ್ಷಸರೆ, ಹನುಮಂತನೆಂಬವನು ಕಳ್ಳತನದಿಂದ ನುಸುಳಿಬಂದ ಹೇಡಿ, ದುರಾತ್ಮ ಅವನಿಂದ ನಿಮಗಾಗಬೇಕಾದ್ದೇನು? ದುರ್ಧರ್ಷನಾದ ವೀರ

ಅದ್ಯ ರಾಮಂ ಸಸುಗ್ರೀವಂ ಪರಿಘೇಣ ಸಲಕ್ಷ್ಮಣಮ್ ।
ಆಗಮಿಷ್ಯಾಮಿ ಹತ್ವೈಕೋ ವಿಕ್ಷೋಭ್ಯ ಹರಿವಾಹಿನೀಮ್ ॥ ೧೧

ಇದಂ ಮಮಾಪರಂ ವಾಕ್ಯಂ ಶೃಣು ರಾಜನ್ ಯದೀಚ್ಛಸಿ ।
ಉಪಾಯಕುಶಲೋ ಹ್ಯೇವಂ ಜಯೇಚ್ಛತ್ರೂನತಂದ್ರಿತಃ ॥ ೧೨

ಕಾಮರೂಪಧರಾಃ ಶೂರಾಃ ಸುಭೀಮಾ ಭೀಮದರ್ಶನಾಃ ।
ರಾಕ್ಷಸಾ ವೈ ಸಹಸ್ರಾಣಿ ರಾಕ್ಷಸಾಧಿಪ ನಿಶ್ಚಿತಾಃ ॥ ೧೩

ಕಾಕುತ್ಸ್ಥಮುಪಸಂಗಮ್ಯ ಬಿಭ್ರತೋ ಮಾನುಷಂ ವಪುಃ ।
ಸರ್ವೇ ಹ್ಯಸಂಭ್ರಮಾ ಭೂತ್ವಾ ಬ್ರುವಂತು ರಘುಸತ್ತಮಮ್ ॥ ೧೪

ಪ್ರೇಷಿತಾ ಭರತೇನ ಸ್ಮ ತವ ಭ್ರಾತ್ರಾ ಯವೀಯಸಾ ।
ತವಾಗಮನಮುದ್ದಿಶ್ಯ ಕೃತ್ಯಮಾತ್ಯಯಿಕಂ ತ್ವಿತಿ ॥ ೧೫

ಸ ಹಿ ಸೇನಾಂ ಸಮುತ್ಥಾಪ್ಯ ಕ್ಷಿಪ್ರಮೇವೋಪಯಾಸ್ಯತಿ ।
ತತೋ ವಯಮಿತಸ್ತೂರ್ಣಂ ಶೂಲಶಕ್ತಿಗದಾಧರಾಃ ॥ ೧೬

---

ನೆನಿಸಿಕೊಂಡ ರಾಮನು ಲಕ್ಷ್ಮಣ ಸುಗ್ರೀವ ಸಮೇತನಾಗಿ ಬಂದು ನಿಂತಿರುವ ನಲ್ಲ ! (೯–೧೦). ಇದೋ, ಈ ನಾನು ಒಬ್ಬನೇ ಹೊರಟು ವಾನರಸೇನೆ ಯನ್ನು ಕಲಕಿ ಕೋಲಾಹಲವೆಬ್ಬಿಸಿ, ಈ ಪರಿಘದಿಂದ ರಾಮನನ್ನೂ ಲಕ್ಷ್ಮಣ ಸುಗ್ರೀವರನ್ನೂ ವಧಿಸಿಯೇ ಬರುವೆನು! ಇರಲಿ, ಮಹಾರಾಜ, ನನ್ನ ವಿಜ್ಞಾಪನೆಯೊಂದನ್ನು ಲಾಲಿಸು, ಉಪಾಯಕುಶಲನಾದ ರಾಜನು ಎಚ್ಚರಿಕೆ ಯಿಂದ ಈ ರೀತಿಯಲ್ಲಿ ಶತ್ರುಗಳನ್ನು ಜಯಿಸಬೇಕು (೧೧–೧೨). ಪ್ರಕೃತ ದಲ್ಲಿ ಹೇಗೆಂದರೆ, ನಮ್ಮಲ್ಲಿ ಶೂರರೂ ಭೀಕರಾಕೃತಿಯವರೂ ಆದ ಹಲವು ಸಾವಿರ ರಾಕ್ಷಸರನ್ನು ಆರಿಸಬೇಕು. ಅವರು ಇಷ್ಟಬಂದ ರೂಪವನ್ನು ಧರಿಸಲು ಸಮರ್ಥರಾಗಿರಬೇಕು ಅವರೆಲ್ಲರೂ ಮನುಷ್ಯರೂಪವನ್ನು ಧರಿಸಿ ರಾಮನ ಬಳಿಗೆ ಹೋಗಿ ನಿರ್ಭೀತಿಯಿಂದ ಹೀಗೆ ತಿಳಿಸಬೇಕು (೧೩–೧೪); 'ರಘುನಾಥ, ನಿನ್ನ ತಮ್ಮನಾದ ಭರತನು ನಮ್ಮನ್ನು ಕಳಿಸಿದ್ದಾನೆ! ನೀನು ಕೂಡಲೆ ಅಯೋಧ್ಯೆಗೆ ಬರಬೇಕು. ಒಂದು ಆಕಸ್ಮಿಕವಾದ ಭೀಕರಘಟನೆಯು ಸಂಭವಿಸಿದೆ' ಎಂದು ಹೇಳಬೇಕು. ಅದನ್ನು ಕೇಳಿ ರಾಮನು ವಾನಸೇನೆ ಯನ್ನು ತೊರೆದು ತ್ವರೆಯಿಂದ ಅಯೋಧ್ಯೆಯ ಕಡೆಗೆ ಹೊರಟುಹೋಗುವನು !

**ಚಾಪಬಾಣಾಸಿಹಸ್ತಾಶ್ಚ ತ್ವರಿತಾಸ್ತತ್ರ ಯಾಮ ಹೇ ।**
**ಆಕಾಶೇ ಗಣಶಃ ಸ್ಥಿತ್ವಾ ಹತ್ವಾ ತಾಂ ಹರಿವಾಹಿನೀಮ್ ॥ ೧೭**

**ಅಶ್ಮಶಸ್ತ್ರಮಹಾವೃಷ್ಟ್ಯಾ ಪ್ರಾಪಯಾಮ ಯಮಕ್ಷಯಮ್ ।**
**ಏವಂ ಚೇದುಪಸರ್ಪೇತಾಮನಯಂ ರಾಮಲಕ್ಷ್ಮಣೌ ॥ ೧೮**

**ಅವಶ್ಯಮಪನೀತೇನ ಜಹತಾಮೇವ ಜೀವಿತಮ್ ।**
**ಕೌಂಭಕರ್ಣಿಸ್ತತೋ ವೀರೋ ನಿಕುಂಭೋ ನಾಮ ವೀರ್ಯವಾನ್**

**ಅಬ್ರವೀತ್ಪರಮಕ್ರುದ್ಧೋ ರಾವಣಂ ಲೋಕರಾವಣಮ್ ।**
**ಸರ್ವೇ ಭವಂತಸ್ತಿಷ್ಠಂತು ಮಹಾರಾಜೇನ ಸಂಗತಾಃ ॥ ೨೦**

**ಅಹಮೇಕೋ ಹನಿಷ್ಯಾಮಿ ರಾಘವಂ ಸಹಲಕ್ಷ್ಮಣಮ್ ।**
**ಸುಗ್ರೀವಂ ಚ ಹನೂಮಂತಂ ಸರ್ವಾನೇವ ಚ ವಾನರಾನ್ ॥ ೨೧**

**ತತೋ ವಜ್ರ ಹನುರ್ನಾಮ ರಾಕ್ಷಸಃ ಪರ್ವತೋಪಮಃ ।**
**ಕ್ರುದ್ಧಃ ಪರಿಲಿಹನ್ ವಕ್ತ್ರಂ ಜಿಹ್ವಯಾ ವಾಕ್ಯಮಬ್ರವೀತ್ ॥ ೨೨**

---

ಇತ್ತ ನಾವು ಶೂಲ ಶಕ್ತಿ ಗದಾದರರಾಗಿ ಕಪಿಸೇನೆಯನ್ನು ಮುತ್ತೋಣ! (೧೫–೧೬). ಬಿಲ್ಲುಬಾಣಗಳನ್ನೂ ಖಡ್ಗಗಳನ್ನೂ ಹಿಡಿದು ಬೇಗಬೇಗನೆ ದಾವಿಸಿ ಗುಂಪುಗುಂಪಾಗಿ ಆಕಾಶದಲ್ಲಿ ನಿಂತು, ಆ ಕಪಿಸೇನೆಯನ್ನು ಧ್ವಂಸ ಮಾಡೋಣ ! ಬಂಡೆಗಳನ್ನೂ ಆಯುಧಗಳನ್ನೂ ಧಾರಾವೃಷ್ಟಿಯಂತೆ ತೆರವಿಲ್ಲದೆ ಪ್ರಯೋಗಿಸಿ ಅವರನ್ನು ಯಮನ ಮನೆಗೆ ಸೇರಿಸೋಣ ! ಈ ರೀತಿ ಯಲ್ಲಿ ರಾಮಲಕ್ಷ್ಮಣರನ್ನು ನಮ್ಮ ಕುಟಿಲನೀತಿಗೆ ಸಿಕ್ಕಿಸಿದೆವೆಂದರೆ, ಸೇನೆಯ ನೆರವಿಲ್ಲದೆ ನಿಶ್ಚಯವಾಗಿ ಅವರು ಸಾಯಲೇ ಬೇಕಾಗುವುದು!'' ಎಂದು ನುಡಿ ದನು (೧೭–೧೮). ಅನಂತರ ಕುಂಭಕರ್ಣನ ಮಗನಾದ ನಿಕುಂಭನೆಂಬ ರಾಕ್ಷಸವೀರನು ಕ್ರೋಧಾವೇಶದಿಂದೆದ್ದು, ಲೋಕರಾವಣನೆನಿಸಿದ ರಾವಣ ನನ್ನು ನೋಡುತ್ತ ''ಎಲೈ ವೀರರೆ, ನೀವೆಲ್ಲರೂ ಮಹಾರಾಜನೊಡನೆ ಇಲ್ಲಿಯೇ ಸುಮ್ಮನಿರಿ! ನಾನೊಬ್ಬನೇ ಹೋಗಿ ರಾಮನನ್ನೂ ಲಕ್ಷ್ಮಣನನ್ನೂ ವಧಿಸಿಬರುವೆನು. ಸುಗ್ರೀವ, ಹನುಮಂತ ಮೊದಲಾದ ಸಮಸ್ತಕಪಿಗಳನ್ನೂ ಕೊಂದೆಸೆಯುವೆನು!''ಎಂದು ಆರ್ಭಟಿಸಿದನು (೧೯–೨೧). ಆಗ ವಜ್ರಹನು ವೆಂಬ ಪರ್ವತಾಕಾರನಾದ ರಾಕ್ಷಸನೊಬ್ಬನು ಕೋಪಗೊಂಡು, ಉದ್ದವಾದ

ಸ್ವೈರಂ ಕುರ್ವಂತು ಕಾರ್ಯಾಣಿ ಭವಂತೋ ವಿಗತಜ್ವರಾಃ ।
ಏಕೋಽಹಂ ಭಕ್ಷಯಿಷ್ಯಾಮಿ ತಾನ್ ಸರ್ವಾನ್ ಹರಿಯೂಥಪಾನ್ ॥

ಸ್ವಸ್ಥಾಃ ಕ್ರೀಡಂತು ನಿಶ್ಚಿಂತಾಃ ಪಿಬಂತೋ ಮಧು ವಾರುಣೀಮ್ ।
ಅಹಮೇಕೋ ವಧಿಷ್ಯಾಮಿ ಸುಗ್ರೀವಂ ಸಹಲಕ್ಷ್ಮಣಮ್ ॥ ೨೪

ಅಂಗದಂ ಚ ಹನೂಮಂತಂ ರಾಮಂ ಚ ರಣಕುಂಜರಮ್ ॥

ಇತಿ ಶ್ರೀ ಮದ್ರಾಮಾಯಣೇ ಯುದ್ಧಕಾಂಡೇ ಅಷ್ಟಮಃ ಸರ್ಗಃ

---

ನಾಲಗೆಯಿಂದ ತನ್ನ ಮೋರೆಯನ್ನೇ ನೆಕ್ಕುವನೋ ಎಂಬಂತೆ ತುಟಿಗಳನ್ನು ಸವರಿಕೊಳ್ಳುತ್ತು "ಎಲೈ ಮಿತ್ರರೆ, ನೀವು ನಿಶ್ಚಿಂತೆಯಿಂದ ನಿಮ್ಮ ನಿಮ್ಮ ಕೆಲಸಗಳಲ್ಲಿ ತೊಡಗಿರಿ. ನಾನೊಬ್ಬನೇ ಕಪಿನಾಯಕರೆಲ್ಲರನ್ನೂ ತಿಂದುಬಿಡು ವೆನು! (೨೨–೨೩). ನೀವು ನಿಶ್ಚಿಂತರಾಗಿ ನಿಮ್ಮ ಪಾಡಿಗೆ ಮಧ್ಯವನ್ನು ಕುಡಿಯುತ್ತ ಕ್ರೀಡಿಸುತ್ತಿರಿ! ನಾನೊಬ್ಬನೇ ಲಕ್ಷ್ಮಣ ಸುಗ್ರೀವರನ್ನು ಸಂಹರಿಸುವೆನು. ಅಂಗದ ಹನುಮಂತರನ್ನು ಸದೆಬಡಿಯುವೆನು. ರಣ ಕುಂಜರನೆನಿಸಿದ ರಾಮನನ್ನು ಮುಗಿಸುವೆನು!" ಎಂದು ಕೂಗಿದನು (೨೪)

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಎಂಟನೆಯ ಸರ್ಗ

---

## ನವಮಃ ಸರ್ಗಃ

### ವಿಭೀಷಣಸಮಾಲೋಚನಮ್

ತತೋ ನಿಕುಂಭೋ ರಭಸಃ ಸೂರ್ಯಶತ್ರುರ್ಮಹಾಬಲಃ ।
ಸುಪ್ತಘ್ನೋ ಯಜ್ಞಹಾ ರಕ್ಷೋ ಮಹಾಪಾರ್ಶ್ವೋ ಮಹೋದರಃ ॥

ಅಗ್ನಿಕೇತುಶ್ಚ ದುರ್ಧರ್ಷೋ ರಶ್ಮಿಕೇತುಶ್ಚ ವೀರ್ಯವಾನ್ ।
ಇಂದ್ರಜಿಚ್ಚ ಮಹಾತೇಜಾ ಬಲವಾನ್ ರಾವಣಾತ್ಮಜಃ ॥ ೨

ಪ್ರಹಸ್ತೋಽಥ ವಿರೂಪಾಕ್ಷೋ ವಜ್ರದಂಷ್ಟ್ರೋ ಮಹಾಬಲಃ ।
ಧೂಮ್ರಾಕ್ಷಶ್ಚಾತಿಕಾಯಶ್ಚ ದುರ್ಮುಖಶ್ಚೈವ ರಾಕ್ಷಸಃ ॥ ೩

ಪರಿಘಾನ್ಪಟ್ಟಸಾನ್ಪ್ರಾಸಾನ್ ಶಕ್ತಿಶೂಲಪರಶ್ವಧಾನ್ ।
ಚಾಪಾನಿ ಚ ಸಬಾಣಾನಿ ಖಡ್ಗಾಂಶ್ಚ ವಿಪುಲಾನ್ ಶಿತಾನ್ ॥ ೪

ಪ್ರಗೃಹ್ಯ ಪರಮಕ್ರುದ್ಧಾಃ ಸಮುತ್ಪತ್ಯ ಚ ರಾಕ್ಷಸಾಃ ।
ಅಬ್ರುವನ್ ರಾವಣಂ ಸರ್ವೇ ಪ್ರದೀಪ್ತಾ ಇವ ತೇಜಸಾ ॥ ೫

### ಸರ್ಗ ೯

ಯುದ್ಧೋತ್ಸಾಹಿಗಳಾದ ರಾಕ್ಷಸರನ್ನು ತಡೆದು ವಿಭೀಷಣನು ಹೇಳಿದ ಬುದ್ಧಿವಾದ.

ವಜ್ರಹನುವಿನ ಮಾತನ್ನು ಕೇಳಿ ನಿಕುಂಭನು ಮತ್ತೆ ಎದ್ದುನಿಂತನು! ಹಾಗೆಯೇ ರಭಸ, ಸೂರ್ಯಶತ್ರು, ಸುಪ್ತಘ್ನ, ಯಜ್ಞಹ, ಮಹಾಪಾರ್ಶ್ವ, ಮಹೋದರ, ಅಗ್ನಿಕೇತು, ರಶ್ಮಿಕೇತು – ಎಂಬ ವೀರರಾದ ರಾಕ್ಷಸರು ಎದ್ದು ನಿಂತರು! ರಾವಣಪುತ್ರನೂ ಮಹಾತೇಜಸ್ವಿಯೂ ಆದ ಇಂದ್ರಜಿತುವೂ ಎದ್ದನು! (೧–೨). ಪ್ರಹಸ್ತ ವಿರೂಪಾಕ್ಷ, ವಜ್ರದಂಷ್ಟ್ರ, ಧೂಮ್ರಾಕ್ಷ, ಅತಿಕಾಯ, ದುರ್ಮುಖ ಎಂಬ ರಾಕ್ಷಸರೂ ಆವೇಶದಿಂದ ಎದ್ದರು! ಅವರೆಲ್ಲರೂ ಕೋಪಾಟೋಪದಿಂದ ಪರಿಘ, ಪಟ್ಟಸ, ಪ್ರಾಸ, ಶಕ್ತಿ ಶೂಲ, ಕೊಡಲಿ, ಬಿಲ್ಲುಬಾಣಗಳು, ಖಡ್ಗ ಮುಂತಾದ ತೀಕ್ಷ್ಣಾಯುಧಗಳನ್ನು ಝಳಪಿಸುತ್ತ ಎದ್ದುನಿಂತರು (೩–೪). ತೇಜೋವಿಶೇಷದಿಂದ ಪ್ರಜ್ವಲಿಸುತ್ತಿದ್ದ ಆ ರಾಕ್ಷಸರು ರಾವಣನನ್ನು ಕುರಿತು ''ಈ ದಿನವೇ ರಾಮನನ್ನೂ ಲಕ್ಷ್ಮಣ

**ಅದ್ಯರಾಮಂ ವಧಿಷ್ಯಾಮಃ ಸುಗ್ರೀವಂ ಚ ಸಲಕ್ಷ್ಮಣಮ್ ।**
**ಕೃಪಣಂ ಚ ಹನೂಮಂತಂ ಲಂಕಾ ಯೇನ ಪ್ರಧರ್ಷಿತಾ ॥ ೬**

**ತಾನ್ ಗೃಹೀತಾಯುಧಾನ್ಸರ್ವಾನ್ವಾರಯಿತ್ವಾ ವಿಭೀಷಣಃ ।**
**ಅಬ್ರವೀತ್ಪ್ರಾಂಜಲಿರ್ವಾಕ್ಯಂ ಪುನಃ ಪ್ರತ್ಯುಪವೇಶ್ಯ ತಾನ್ ॥ ೭**

**ಅಪ್ಯುಪಾಯೈಸ್ತ್ರಿಭಿಸ್ತಾತ ಯೋಽರ್ಥಃ ಪ್ರಾಪ್ತುಂ ನ ಶಕ್ಯತೇ ।**
**ತಸ್ಯ ವಿಕ್ರಮಕಾಲಾಂಸ್ತಾನ್ ಯುಕ್ತಾನಾಹುರ್ಮನೀಷಿಣಃ ॥ ೮**

**ಪ್ರಮತ್ತೇಷ್ವಭಿಯುಕ್ತೇಷು ದೈವೇನ ಪ್ರಹೃತೇಷು ಚ ।**
**ವಿಕ್ರಮಾಸ್ತಾತ ಸಿಧ್ಯಂತಿ ಪರೀಕ್ಷ್ಯ ವಿಧಿನಾ ಕೃತಾಃ ॥ ೯**

**ಅಪ್ರಮತ್ತಂ ಕಥಂ ತಂ ತು ವಿಜಿಗೀಷುಂ ಬಲೇ ಸ್ಥಿತಮ್ ।**
**ಜಿತರೋಷಂ ದುರಾಧರ್ಷಂ ಪ್ರಧರ್ಷಯಿತುಮಿಚ್ಛಥ ॥ ೧೦**

---

ಸುಗ್ರೀವರನ್ನೂ ಮುಗಿಸಿಬಿಡುವೆವು! ನಮ್ಮ ಲಂಕಾನಗರದಮೇಲೆ ಹಲ್ಲೆಯೆಸಗಿದ ವಂಚಕನಾದ ಹನುಮಂತನನ್ನೂ ತೀರಿಸಿಬಿಡುವೆವು!'' ಎಂದು ಆರ್ಭಟಿಸ ತೊಡಗಿದರು (೫–೬). ಹೀಗೆ ಆಯುಧಗಳನ್ನು ಹೆಗಲೇರಿಸಿ ಸಿದ್ಧರಾದ ಆ ರಾಕ್ಷಸರನ್ನು ವಿಭೀಷಣನು ತಡೆದು ಕುಳ್ಳಿರಿಸಿ ಸಂತೈಸುತ್ತ ಕೈಮುಗಿದು ಹೀಗೆಂದನು : ''ಅಪ್ಪಾ ರಾಕ್ಷಸರೆ, ಮೊದಲು ಸಾಮ ದಾನ ಭೇದಗಳೆಂಬ ಮೂರು ಉಪಾಯಗಳನ್ನು ಪ್ರಯೋಗಿಸಿ ನೋಡಬೇಕು. ಅವುಗಳಿಂದ ಕಾರ್ಯವು ಸಿದ್ಧಿಸದೆಹೋದರೆ, ಆಗ ಪರಾಕ್ರಮವನ್ನು ಮೆರೆಸಬೇಕೆಂದು ಬಲ್ಲವರು ಹೇಳುತ್ತಾರೆ (೭–೮). ಪರಾಕ್ರಮವನ್ನು ಮೆರೆಸುವುದಾದರೂ ಯಾರಲ್ಲಿ? ವಿಷಯಲೋಲುಪರಾಗಿ ಎಚ್ಚರಿಕೆದಪ್ಪಿದವರು, ಶತ್ರುಗಳಿಂದ ಮುತ್ತಲ್ಪಟ್ಟವರು, ದೈವಬಲವಿಲ್ಲದೆ ಕಂಗೆಟ್ಟವರು – ಇಂಥವರ ವಿಷಯದಲ್ಲಿ ಪರೀಕ್ಷಿಸಿ ಕ್ರಮವರಿತು ಪರಾಕ್ರಮವನ್ನು ತೋರಿಸಿದರೆ ಕಾರ್ಯಸಿದ್ಧಿಯಾಗುವುದು (೯). ರಾಮನಾದರೋ ವಿಷಯಲೋಲುಪನಾಗಿ ಎಚ್ಚರದಪ್ಪಿದವನಲ್ಲ. ವಿಜಿಗೀಷುವಾಗಿ ಆಕ್ರಮಣಮಾಡಲು ಸೇನೆಯೊಡನೆ ಸಿದ್ಧನಾಗಿ ಬಂದಿದ್ದಾನೆ. ಅವನು ಕೋಪಾವೇಶದಿಂದ ದುಡುಕಿ ಬಂದವನಲ್ಲ. ದುರ್ಧರ್ಷನಾಗಿರುವ ಆತನನ್ನು ಥಟ್ಟನೆ ಎದುರಿಸಬೇಕೆಂದು ಅಭಿಪ್ರಾಯಪಡುವಿರಲ್ಲ(೧೦).

ಸಮುದ್ರಂ ಲಂಘಯಿತ್ವಾ ತು ಘೋರಂ ನದನದೀಪತಿಮ್ ।
ಗತಂ ಹನುಮತೋ ಲೋಕೇ ಕೋ ವಿದ್ಯಾತ್ತರ್ಕಯೇತ ವಾ ॥ ೧೧

ಬಲಾನ್ಯಪರಿಮೇಯಾಣಿ ವೀರ್ಯಾಣಿ ಚ ನಿಶಾಚರಾಃ ।
ಪರೇಷಾಂ ಸಹಸಾವಜ್ಞಾ ನ ಕರ್ತವ್ಯಾ ಕಥಂಚನ ॥ ೧೨

ಕಿಂ ಚ ರಾಕ್ಷಸರಾಜಸ್ಯ ರಾಮೇಣಾಪಕೃತಂ ಪುರಾ ।
ಆಜಹಾರ ಜನಸ್ಥಾನಾದ್ಯಸ್ಯ ಭಾರ್ಯಾಂ ಯಶಸ್ವಿನಃ ॥ ೧೩

ಖರೋ ಯದ್ಯತಿವೃತ್ತಸ್ತು ರಾಮೇಣ ನಿಹತೋ ರಣೇ ।
ಅವಶ್ಯಂ ಪ್ರಾಣಿನಾಂ ಪ್ರಾಣಾ ರಕ್ಷಿತವ್ಯಾ ಯಥಾಬಲಮ್ ॥ ೧೪

ಅಯಶಸ್ಯ ಮನಾಯುಷ್ಯಂ ಪರದಾರಾಭಿಮರ್ಶನಮ್ ।
ಅರ್ಥಕ್ಷಯಕರಂ ಘೋರಂ ಪಾಪಸ್ಯ ಚ ಪುನರ್ಭವಮ್ ॥ ೧೫

ಏತನ್ನಿಮಿತ್ತಂ ವೈದೇಹೀ ಭಯಂ ಸುಮಹದ್ಭವೇತ್ ।
ಆಹೃತಾ ಸಾ ಪರಿತ್ಯಾಜ್ಯಾ ಕಲಹಾರ್ಥೇ ಕೃತೇನ ಕಿಮ್ ॥ ೧೬

---

ಎಲೈ ಮಿತ್ರರೆ, ನದನದೀಪತಿಯೆನಿಸಿದ ಭೀಕರಸಮುದ್ರವನ್ನು ದಾಟಿ ಬಂದು, ಹನುಮಂತನು ಸುಖವಾಗಿ ಮರಳಿಹೋದನಲ್ಲ. ಇಂತಹ ದುಷ್ಕರ ವಾದ ಕಾರ್ಯವು ಸಾಧ್ಯವಾದೀತೆಂದು ಈ ಲೋಕದಲ್ಲಿ ಯಾವನು ತಿಳಿ ದಾನು? ಊಹಿಸಿಯಾನು? ರಾಕ್ಷಸರೆ, ವೈರಿಗಳ ಸೇನಾಬಲವೂ ಪರಾಕ್ರಮವೂ ಕಲ್ಪನೆಗೆ ಮೀರಿದ್ದಾಗಿರುವಾಗ, ಹೀಗೆ ದುಡುಕಿನಿಂದ ಅವರನ್ನು ಅಲಕ್ಷಿಸು ವುದು ಎಂದಿಗೂ ತರವಲ್ಲ (೧೧-೧೨). ಅಲ್ಲದೆ ನಮ್ಮ ಪ್ರಭುವಾದ ರಾವಣ ನಿಗೆ ರಾಮನಿಂದಾದ ಅಪಕಾರವಾದರೂ ಯಾವುದು? ಕೀರ್ತಿಶಾಲಿಯಾದ ಆತನ ಪತ್ನಿಯನ್ನು ನಮ್ಮ ರಾಜನು ಜನಸ್ಥಾನದಿಂದ ಅಪಹರಿಸಿ ತಂದುದೇಕೆ? ಖರನೇ ಔದ್ಧತ್ಯದಿಂದ ರಾಮನಮೇಲೆ ಏರಿಹೋದಾಗ, ರಾಮನು ರಣಾಂಗಣ ದಲ್ಲಿ ಅವನನ್ನು ಕೊಲ್ಲಬೇಕಾಯಿತು. ಯಾವನಾದರೂ ಯಥಾಶಕ್ತಿಯಾಗಿ ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಅವಶ್ಯವಾಗಿ ಯತ್ನಿಸಬೇಕಲ್ಲವೆ? (೧೩-೧೪). ಪರಸ್ತ್ರೀಯರನ್ನು ಮುಟ್ಟುವುದರಿಂದ ಅಪಕೀರ್ತಿಗೆ ದಾರಿ ಯಾಗುವುದಲ್ಲದೆ ಆಯುಸ್ಸು ಕ್ಷೀಣಿಸುವುದು ; ಭಾಗ್ಯಹಾನಿಯಾಗುವುದು. ಪರಸ್ತ್ರೀ ಸ್ಪರ್ಶವು ಘೋರವಾದ ಪಾಪದ ಇನ್ನೊಂದು ರೂಪ. ಇದೇ

ನ ನಃ ಕ್ಷಮಂ ವೀರ್ಯವತಾ ತೇನ ಧರ್ಮಾನುವರ್ತಿನಾ ।
ವೈರಂ ನಿರರ್ಥಕಂ ಕರ್ತುಂ ದೀಯತಾಮಸ್ಯ ಮೈಥಿಲೀ ॥ ೧೭

ಯಾವನ್ನ ಸಗಜಾಂ ಸಾಶ್ವಾಂ ಬಹುರತ್ನ ಸಮಾಕುಲಾಮ್ ।
ಪುರೀಂ ದಾರಯತೇ ಬಾಣೈರ್ದೀಯತಾಮಸ್ಯ ಮೈಥಿಲೀ ॥ ೧೮

ಯಾವತ್ಸುಘೋರಾ ಮಹತೀ ದುರ್ಧರ್ಷಾ ಹರಿವಾಹಿನೀ ।
ನಾವಸ್ಕಂದತಿ ನೋ ಲಂಕಾಂ ದೀಯತಾಮಸ್ಯ ಮೈಥಿಲೀ ॥ ೧೯

ವಿನಶ್ಯೇದ್ಧಿ ಪುರೀ ಲಂಕಾ ಶೂರಾಃ ಸರ್ವೇ ಚ ರಾಕ್ಷಸಾಃ ।
ರಾಮಸ್ಯ ದಯಿತಾ ಪತ್ನೀ ಸ್ವಯಂ ಯದಿ ನ ದೀಯತೇ ॥ ೨೦

ಪ್ರಸಾದಯೇ ತ್ವಾಂ ಬಂಧುತ್ವಾತ್ಕುರುಷ್ವ ವಚನಂ ಮಮ ।
ಹಿತಂ ತಥ್ಯಮಹಂ ಬ್ರೂಮಿ ದೀಯತಾಮಸ್ಯ ಮೈಥಿಲೀ ॥ ೨೧

---

ನಿಮಿತ್ತವಾಗಿ ನಮ್ಮೆಲ್ಲರಿಗೂ ದೊಡ್ಡ ವಿಪತ್ತು ಸಂಭವಿಸೀತು. ಅಪಹೃತಳಾಗಿರುವ ವೈದೇಹಿಯನ್ನು ಈಗ ಹಿಂದಿರುಗಿಸಬೇಕು. ಜಗಳಕ್ಕಾಗಿ ಕಾಲು ಕೆರೆಯುವುದರಿಂದ ಏನು ಪ್ರಯೋಜನ ? (೧೫–೧೬). ಧರ್ಮಮಾರ್ಗದಲ್ಲಿ ನಡೆಯುತ್ತ ಮಹಾಶೂರನಾಗಿರುವ ರಾಮನೊಡನೆ ವ್ಯರ್ಥವಾಗಿ ವೈರವನ್ನು ಬೆಳೆಸುವುದು ನಮಗೆ ಯೋಗ್ಯವಲ್ಲ. ಆದ್ದರಿಂದ ಸೀತೆಯನ್ನು ರಾಮನಿಗೆ ಒಪ್ಪಿಸಬೇಕು. ಗಜಾಶ್ವಗಳಿಂದಲೂ ಹೇರಳವಾದ ರತ್ನರಾಶಿಗಳಿಂದಲೂ ತುಂಬಿದ ನಮ್ಮ ಲಂಕಾನಗರಿಯನ್ನು, ರಾಮನು ತನ್ನ ಬಾಣಗಳಿಂದ ಭೇದಿಸಿ – ನಾಶಪಡಿಸುವುದರೊಳಗೆ ಮೈಥಿಲಿಯನ್ನು ಅವನಿಗೆ ಒಪ್ಪಿಸಬೇಕು (೧೭–೧೮). ಭೀಕರವೂ ದುರ್ಧರ್ಷವೂ ಆದ ಕಪಿಗಳ ಮಹಾಸೈನ್ಯವು ನಮ್ಮ ಲಂಕೆಗೆ ಲಗ್ಗೆ ಹತ್ತುವುದರೊಳಗೆ ಮೈಥಿಲಿಯನ್ನು ಒಪ್ಪಿಸಿಬಿಡಬೇಕು. ರಾಮನ ಕಾಂತೆಯಾದ ಸೀತೆಯನ್ನು ನಾವಾಗಿ ಆತನಿಗೆ ಒಪ್ಪಿಸದಿದ್ದರೆ, ಲಂಕಾನಗರವು ನಿರ್ನಾಮವಾದೀತು (೧೯–೨೦). ಶೂರರಾದ ಸಮಸ್ತ ರಾಕ್ಷಸರೂ ನಾಶವಾದಾರು. ಅಣ್ಣ – ರಾವಣ, ಸೆರಗೊಡ್ಡಿ ನಿನ್ನನ್ನು ಬೇಡಿಕೊಳ್ಳುತ್ತೇನೆ. ನನ್ನ ಮಾತನ್ನು ನಡೆಸು. ನಾನಾಡುವ ಮಾತು ನಿನಗೆ ಹಿತಕರವಾದುದು ; ಸತ್ಯವಾದುದು. ಮೈಥಿಲಿಯನ್ನು ರಾಮನಿಗೆ ಒಪ್ಪಿಸಿಬಿಡು (೨೧).

ಪುರಾ ಶರತ್ಸೂರ್ಯಮರೀಚಿಸನ್ನಿಭಾ-
ನ್ನವಾನ್ ಸುಪುಂಖಾನ್ ಸುದೃಢಾನ್ನೃಪಾತ್ಮಜಃ ।
ಸೃಜತ್ಯಮೋಘಾನ್ ವಿಶಿಖಾನ್ ವಧಾಯ ತೇ
ಪ್ರದೀಯತಾಂ ದಾಶರಥಾಯ ಮೈಥಿಲೀ ॥ ೨೨

ತ್ಯಜಸ್ವ ಕೋಪಂ ಸುಖಧರ್ಮನಾಶನಂ
ಭಜಸ್ವ ಧರ್ಮಂ ರತಿಕೀರ್ತಿವರ್ಧನಮ್ ।
ಪ್ರಸೀದ ಜೀವೇಮ ಸಪುತ್ರಬಾಂಧವಾಃ
ಪ್ರದೀಯತಾಂ ದಾಶರಥಾಯ ಮೈಥಿಲೀ ॥ ೨೩

ವಿಭೀಷಣವಚಃ ಶ್ರುತ್ವಾ ರಾವಣೋ ರಾಕ್ಷಸೇಶ್ವರಃ ।
ವಿಸರ್ಜಯಿತ್ವಾ ತಾನ್ ಸರ್ವಾನ್ ಪ್ರವಿವೇಶ ಸ್ವಕಂ ಗೃಹಮ್॥ ೨೪

ಇತಿ ಶ್ರೀ ಮದ್ರಾಮಾಯಣೇ ಯುದ್ಧಕಾಂಡೇ ನವಮಃ ಸರ್ಗಃ

---

ಆ ರಾಜಪುತ್ರನು ನಿನ್ನನ್ನು ಸಂಹರಿಸಬೇಕೆಂದು ಅಮೋಘಾಸ್ತ್ರಗಳನ್ನು ಪ್ರಯೋಗಿಸುವನು. ಆತನ ಅಸ್ತ್ರಗಳು ಶರತ್ಕಾಲದ ಸೂರ್ಯಕಿರಣಗಳಂತೆ ತಾಪದಾಯಕವಾದವು. ಗರಿಗಟ್ಟಿದ ಆ ಬಾಣಗಳು ಹೊಸ ಅಲಗುಳ್ಳವು ; ತೀಕ್ಷ್ಣವಾದವು. ಆದ್ದರಿಂದ ಬೇಗನೆ ಮೈಥಿಲಿಯನ್ನು ಅವನಿಗೆ ಒಪ್ಪಿಸಿಬಿಡು (೨೨) ಅಣ್ಣ, ಸಿಟ್ಟುಮಾಡಬೇಡ. ಸಿಟ್ಟೆಂಬುದು ಸೌಖ್ಯವನ್ನೂ ಧರ್ಮವನ್ನೂ ನಾಶಗೊಳಿಸುವುದು. ಧರ್ಮಮಾರ್ಗವನ್ನವಲಂಬಿಸು. ಧರ್ಮದಿಂದ ಸೌಖ್ಯವೂ ಕೀರ್ತಿಯೂ ವರ್ಧಿಸುತ್ತವೆ. ಪ್ರಸನ್ನನಾಗು. ಮಕ್ಕಳು ಮನೆಮಂದಿ ಬಳಗದೊಡನೆ ಇನ್ನೂ ಕೆಲವು ಕಾಲ ಬದಕಿರೋಣ ! ಆ ದಶರಥ ಪುತ್ರನಿಗೆ ಸೀತೆಯನ್ನೊಪ್ಪಿಸಿಬಿಡು'' ಎಂದು ಪ್ರಾರ್ಥಿಸಿದನು (೨೩). ರಾಕ್ಷಸೇಶ್ವರನಾದ ರಾವಣನು ವಿಭೀಷಣನ ಮಾತನ್ನು ಕೇಳಿ ಗಪ್ಪನೆ ಸಭೆಯನ್ನು ಮುಕ್ತಾಯಗೊಳಿಸಿದನು. ಅವರೆಲ್ಲರನ್ನೂ ಕಳಿಸಿ ತಾನು ಅರಮನೆಯೊಳಗೆ ಹೋದನು (೨೪).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಒಂಬತ್ತನೆಯ ಸರ್ಗ

## ದಶಮಃ ಸರ್ಗಃ

### ವಿಭೀಷಣಪಥ್ಯೋಪದೇಶಃ

ತತಃ ಪ್ರತ್ಯುಷಸಿ ಪ್ರಾಪ್ತೇ ಪ್ರಾಪ್ತಧರ್ಮಾರ್ಥನಿಶ್ಚಯಃ ।
ರಾಕ್ಷಸಾಧಿಪತೇರ್ವೇಶ್ಮ ಭೀಮಕರ್ಮಾ ವಿಭೀಷಣಃ ॥ ೧

ಶೈಲಾಗ್ರಚಯಸಂಕಾಶಂ ಶೈಲಶೃಂಗಮಿವೋನ್ನತಮ್ ।
ಸುವಿಭಕ್ತಮಹಾಕಕ್ಷ್ಯಂ ಮಹಾಜನಪರಿಗ್ರಹಮ್ ॥ ೨

ಮತಿಮದ್ಭಿರ್ಮಹಾಮಾತ್ಯೈರನುರಕ್ತೈರಧಿಷ್ಠಿತಮ್ ।
ರಾಕ್ಷಸೈಶ್ಚಾಪ್ತಪರ್ಯಾಪ್ತೈಃ ಸರ್ವತಃ ಪರಿರಕ್ಷಿತಮ್ ॥ ೩

ಮತ್ತಮಾತಂಗನಿಃಶ್ವಾಸೈರ್ವ್ಯಾಕುಲೀಕೃತಮಾರುತಮ್ ।
ಶಂಖಘೋಷಮಹಾಘೋಷಂ ತೂರ್ಯನಾದಾನುನಾದಿತಮ್ ॥ ೪

### ಸರ್ಗ ೧೦

ವಿಭೀಷಣನು ರಾವಣನ ಅರಮನೆಗೆ ಹೋಗಿ ಅವನಿಗೆ ಹಿತೋಪದೇಶಮಾಡುವುದು.

ಇತ್ತ ವಿಭೀಷಣನು ಧರ್ಮಾರ್ಥಗಳ ಸ್ವರೂಪವನ್ನು ವಿಮರ್ಶಿಸಿ ಯಾವುದು ಸರಿಯೆಂದು ನಿರ್ಣಯಿಸಿಕೊಂಡನು. ಪರಾಕ್ರಮಿಯಾದ ಆ ವೀರನು ಮಾರನೆಯದಿನ ಬೆಳಗಾಗುತ್ತಲೇ ರಾಕ್ಷಸೇಂದ್ರನಾದ ರಾವಣನ ಅರಮನೆಗೆ ತೆರಳಿದನು (೧). ಶೈಲಶೃಂಗದಂತೆ ಉನ್ನತವಾಗಿದ್ದ ರಾಜಭವನವು (ವಿವಿಧ ಗೋಪುರಗಳಿಂದ) ಶೈಲಶಿಖರಗಳ ಸಮುದಾಯದಂತೆ ಕಾಣುತ್ತಿದ್ದಿತು. ಅಲ್ಲಿ ದೊಡ್ಡ ದೊಡ್ಡ ಕೊಠಡಿಗಳು ಓರಣವಾಗಿ ವಿಂಗಡಿಸಲ್ಪಟ್ಟಿದ್ದವು. ಗೌರವಾನ್ವಿತರಾದ ಮಹಾಜನರು ಅಲ್ಲಲ್ಲಿ ಗೋಚರಿಸುತ್ತಿದ್ದರು (೨). ಬುದ್ಧಿಶಾಲಿಗಳೂ ರಾಜಭಕ್ತಿಯುಳ್ಳವರೂ ಆದ ಅಮಾತ್ಯರು ನೆರೆದಿದ್ದರು. ಆಪ್ತರೂ ಸಮರ್ಥರೂ ಆದ ರಾಕ್ಷಸರು ಸುತ್ತಲೂ ಅರಮನೆಗೆ ಕಾವಲಾಗಿದ್ದರು. ಮತ್ತಮಾತಂಗಗಳ ಫೂತ್ಕಾರದಿಂದ ಗಾಳಿಯು ಸುಳಿಗಾಳಿಯಂತೆ ಹೊಯ್ದಾಡುತ್ತಿದ್ದಿತು! ಶಂಖಗಳು ಮೊಳಗುತ್ತಿದ್ದವು. ಅವುಗಳೊಡನೆ ವಿವಧವಾದ್ಯಗಳು ದನಿಗೂಡಿಸುತ್ತಿದ್ದವು (೩–೪).

**ಪ್ರಮದಾಜನಸಂಬಾಧಂ ಪ್ರಜಲ್ಪಿತಮಹಾಪಥಮ್ ।**
**ತಪ್ತಕಾಂಚನನಿರ್ಯೂಹಂ ಭೂಷಣೋತ್ತಮಭೂಷಿತಮ್ ॥ ೫**

**ಗಂಧರ್ವಾಣಾಮಿವಾವಾಸಮಾಲಯಂ ಮರುತಾಮಿವ ।**
**ರತ್ನಸಂಚಯಸಂಬಾಧಂ ಭವನಂ ಭೋಗಿನಾಮಿವ ॥ ೬**

**ತಂ ಮಹಾಭ್ರಮಿವಾದಿತ್ಯಸ್ತೇಜೋವಿಸ್ರುತರಶ್ಮಿಮಾನ್ ।**
**ಅಗ್ರಜಸ್ಯಾಲಯಂ ವೀರಃ ಪ್ರವಿವೇಶ ಮಹಾದ್ಯುತಿಃ ॥ ೭**

**ಪುಣ್ಯಾನ್ ಪುಣ್ಯಾಹಘೋಷಾಂಶ್ಚ ವೇದವಿದ್ಭಿರುದಾಹೃತಾನ್ ।**
**ಶುಶ್ರಾವ ಸುಮಹಾತೇಜಾ ಭ್ರಾತುರ್ವಿಜಯಸಂಶ್ರಿತಾನ್ ॥ ೮**

**ಪೂಜಿತಾನ್ ದಧಿಪಾತ್ರೈಶ್ಚ ಸರ್ಪಿಭಿಃ ಸುಮನೋಽಕ್ಷತೈಃ ।**
**ಮಂತ್ರವೇದವಿದೋ ವಿಪ್ರಾನ್ ದದರ್ಶ ಸುಮಹಾಬಲಃ ॥ ೯**

---

(ರಾಜಭವನದ ಪ್ರಾಂಗಣದಲ್ಲಿರುವ ದಾರಿಗಳಲ್ಲಿ) ಮಹಿಳೆಯರು ಮುತ್ತಿಕೊಂಡು ಮಾತಾಡುತ್ತಿದ್ದರು. ಅರಮನೆಯು ಚಿನ್ನದ ದ್ವಾರಗಳಿಂದಲೂ ವಿವಿಧಾಲಂಕಾರಗಳಿಂದಲೂ ಭೂಷಿತವಾಗಿತ್ತು. ರತ್ನರಾಶಿಗಳಿಂದ ರಂಜಿಸುತ್ತಿದ್ದ ರಾಜಭವನವು, ಇದೇನು ಗಂಧರ್ವರ ಗೃಹವೋ – ಮರುತ್ತುಗಳ ಮನೆಯೋ– ನಾಗರ ನಿವಾಸವಾದ ಭೋಗವತಿಯೋ ಎಂಬಂತೆ ಚಂದವಾಗಿತ್ತು (೫–೬). ರಶ್ಮಿಗಳಿಂದ ರಾಜಿಸುವ ರವಿಯು ಮಹಾಮೇಘಮಂಡಲದಲ್ಲಿ ಮುನ್ನುಗ್ಗುವಂತೆ, ತೇಜೋರಾಶಿಯೂ ಶೂರನೂ ಆದ ವಿಭೀಷಣನು ರಾವಣನ ಅರಮನೆಯನ್ನು ಪ್ರವೇಶಿಸಿದನು (೭). ಅಲ್ಲಿ ವೈದಿಕರು ರಾವಣನಿಗೆ ವಿಜಯವಾಗಲೆಂದು ಹರಸಿ ಉಚ್ಚರಿಸುತ್ತಿದ್ದ ಪವಿತ್ರವಾದ ಪುಣ್ಯಾಹಮಂತ್ರಘೋಷಗಳು ವಿಭೀಷಣನಿಗೆ ಕೇಳಿಸುತ್ತಿದ್ದವು. ಮಂತ್ರ ಬ್ರಾಹ್ಮಣ*ಗಳನ್ನರಿತ ವಿಪ್ರರಿಗೆ ಮೊಸರು, ತುಪ್ಪಗಳನ್ನು ತುಂಬಿದ ಪಾತ್ರೆಗಳನ್ನು ದಾನವಾಗಿ ಕೊಟ್ಟು ಹೂ ಅಕ್ಷತೆಗಳಿಂದ ಸತ್ಕರಿಸುತ್ತಿರುವುದು ವಿಭೀಷಣನಿಗೆ ಗೋಚರಿಸಿತು (೮–೯).

---

* ಕರ್ಮಾಂಗವಾಗಿ ವಿನಿಯುಕ್ತವಾದ ವೇದಭಾಗಕ್ಕೆ ಮಂತ್ರವೆಂದು ಹೆಸರು. ಉದಾ : ಇಷೇ ತ್ವಾ, ಇತ್ಯಾದಿ. ಕರ್ಮವನ್ನು ಚೋದಿಸುವ ಇತರ ವೇದಭಾಗಕ್ಕೆ ಬ್ರಾಹ್ಮಣವೆಂದು ಹೆಸರು. ಉದಾ : ಅಗ್ನಿಹೋತ್ರಂ ಜುಹೋತಿ – ಇತ್ಯಾದಿ.

**ಸ ಪೂಜ್ಯಮಾನೋ ರಕ್ಷೋಭಿರ್ದೀಪ್ಯಮಾನಃ ಸ್ವತೇಜಸಾ ।**
**ಆಸನಸ್ಥಂ ಮಹಾಬಾಹುರ್ವವಂದೇ ಧನದಾನುಜಮ್ ॥ ೧೦**

**ಸರಾಜದೃಷ್ಟಿಸಂಪನ್ನಮಾಸನಂ ಹೇಮಭೂಷಿತಮ್ ।**
**ಜಗಾಮ ಸಮುದಾಚಾರಂ ಪ್ರಯುಜ್ಯಾಚಾರಕೋವಿದಃ ॥ ೧೧**

**ಸ ರಾವಣಂ ಮಹಾತ್ಮಾನಂ ವಿಜನೇ ಮಂತ್ರಿಸಂನಿಧೌ ।**
**ಉವಾಚ ಹಿತಮತ್ಯರ್ಥಂ ವಚನಂ ಹೇತುನಿಶ್ಚಿತಮ್ ॥ ೧೨**

**ಪ್ರಸಾದ್ಯ ಭ್ರಾತರಂ ಜ್ಯೇಷ್ಠಂ ಸಾಂತ್ವೇನೋಪಸ್ಥಿತಕ್ರಮಃ ।**
**ದೇಶಕಾಲಾರ್ಥಸಂವಾದೀ ದೃಷ್ಟಲೋಕಪರಾವರಃ ॥ ೧೩**

**ಯದಾಪ್ರಭೃತಿ ವೈದೇಹೀ ಸಂಪ್ರಾಪ್ತೇ ಮಾಂ ಪುರೀಂ ತವ ।**
**ತದಾಪ್ರಭೃತಿ ದೃಶ್ಯಂತೇ ನಿಮಿತ್ತಾನ್ಯಶುಭಾನಿ ನಃ ॥ ೧೪**

---

ತೇಜಸ್ಸಿನಿಂದ ವಿರಾಜಿಸುತ್ತಿದ್ದ ಆಜಾನುಬಾಹುವಾದ ವಿಭೀಷಣನು ಅಲ್ಲಿದ್ದ ರಾಕ್ಷಸರಿಂದ ರಾಕ್ಷಸರಿಂದ ಗೌರವಿಸಲ್ಪಡುತ್ತ ಒಳಗೆ ಹೋಗಿ ಸಿಂಹಾಸನದಲ್ಲಿ ಕುಳಿತಿದ್ದ ರಾವಣನಿಗೆ ವಂದಿಸಿದನು. ರಾಜಮರ್ಯಾದೆಯನ್ನು ಬಲ್ಲ ಆತನು ರಾವಣನನ್ನು ಕಂಡು "ಜಯತು ಮಹಾರಾಜಃ" ಎಂದು ಸಾಂಪ್ರದಾಯಿಕವಾದ ಘೋಷಣೆಯನ್ನು ಮಾಡಲು, ರಾವಣನು ಕಣ್ಣು ಸನ್ನೆಯಿಂದ ಸುವರ್ಣ ಪೀಠವೊಂದನ್ನು ತೋರಿಸಿದನು. ವಿಭೀಷಣನು ಅದರಲ್ಲಿ ಕುಳಿತನು (೧೦–೧೧). ಅಲ್ಲಿ ರಾವಣನ ಆಪ್ತಸಚಿವರಲ್ಲದೆ ಇನ್ನಾರೂ ಇರಲಿಲ್ಲ. (ಅದು ಸರಿಯಾದ ಸ್ಥಳವೆಂದು ನಿಶ್ಚಯಿಸಿ) ವಿಭೀಷಣನು ಯುಕ್ತಿಯುಕ್ತವೂ ಶ್ರೇಯಸ್ಕರವೂ ಆದ ಮಾತನ್ನು ರಾವಣನಿಗೆ ಹೇಳಲುಪಕ್ರಮಿಸಿದನು. ವಿಭೀಷಣನಾದರೋ ದೇಶಕಾಲಾರ್ಥಗಳನ್ನು ತಿಳಿದು ಅನುಸರಿಸತಕ್ಕವನು. ಲೋಕದಲ್ಲಿ ಉತ್ತಮವೂ ಗ್ರಾಹ್ಯವೂ ಆದ ವಸ್ತು ಯಾವುದು, ನಿಕೃಷ್ಟವೂ ತ್ಯಾಜ್ಯವೂ ಆದ ವಸ್ತು ಯಾವುದು ಎಂಬುದನ್ನು ಚೆನ್ನಾಗಿ ಬಲ್ಲವನು. ಆತನು ತನ್ನ ಅಣ್ಣನನ್ನು ಒಳ್ಳೆಯ ನುಡಿಯಿಂದ ಶ್ಲಾಘಿಸಿ ಪ್ರಸನ್ನನನ್ನಾಗಿ ಮಾಡಿಕೊಂಡು ಹೀಗೆಂದನು (೧೨–೧೩): "ಅಣ್ಣ ನಿನ್ನ ರಾಜಧಾನಿಗೆ ಸೀತೆಯು ಎಂದು ಬಂದು ಸೇರಿದಳೋ ಅಂದಿನಿಂದ ನಮಗೆ ಕೆಟ್ಟ ಶಕುನ

ಸಸ್ಫುಲಿಂಗಃ ಸಧೂಮಾರ್ಚಿಃ ಸಧೂಮಕಲುಷೋದಯಃ ।
ಮಂತ್ರಸಂಧುಕ್ಷಿತೋಽಪ್ಯಗ್ನಿರ್ನ ಸಮ್ಯಗಭಿವರ್ಧತೇ ॥ ೧೫

ಅಗ್ನಿಷ್ಠೇಷ್ವಗ್ನಿಶಾಲಾಸು ತಥಾ ಬ್ರಹ್ಮಸ್ಥಲೀಷು ಚ ।
ಸರೀಸೃಪಾಣಿ ದೃಶ್ಯಂತೇ ಹವ್ಯೇಷು ಚ ಪಿಪೀಲಿಕಾಃ ॥ ೧೬

ಗವಾಂ ಪಯಾಂಸಿ ಸ್ಕನ್ನಾನಿ ವಿಮದಾ ವೀರಕುಂಜರಾಃ ।
ದೀನಮಶ್ವಾಃ ಪ್ರಹೇಷಂತೇ ನ ಚ ಗ್ರಾಸಾಭಿನಂದಿನಃ ॥ ೧೭

ಖರೋಷ್ಟ್ರಾಶ್ವತರಾ ರಾಜನ್ ಭಿನ್ನರೋಮಾಃ ಸ್ರವಂತಿ ನಃ ।
ನ ಸ್ವಭಾವೇಽವತಿಷ್ಠಂತೇ ವಿಧಾನೈರಪಿ ಚಿಂತಿತಾಃ ॥ ೧೮

ವಾಯಸಾಃ ಸಂಘಶಃ ಕ್ರೂರಾ ವ್ಯಾಹರಂತಿ ಸಮಂತತಃ ।
ಸಮವೇತಾಶ್ಚ ದೃಶ್ಯಂತೇ ವಿಮಾನಾಗ್ರೇಷು ಸಂಘಶಃ ॥ ೧೯

ಗೃಧ್ರಾಶ್ಚ ಪರಿಲೀಯಂತೇ ಪುರೀಮುಪರಿ ಪಿಂಡಿತಾಃ ।
ಉಪಪನ್ನಾಶ್ಚ ಸಂಧ್ಯೇ ದ್ವೇ ವ್ಯಾಹರಂತ್ಯಶಿವಂ ಶಿವಾಃ ॥ ೨೦

---

ಗಳಾಗುತ್ತಿವೆ. ಮಂತ್ರಪೂರ್ವಕವಾಗಿ ಹವಿಸ್ಸನ್ನರ್ಪಿಸಿ ಪ್ರಜ್ವಲಿಸುವಂತೆ ಯತ್ನಿಸಿದರೂ ಅಗ್ನಿಯು ಕಿಡಿಗೆದರುತ್ತ ಹೊಗೆಯುಗುಳುತ್ತದೆ. ಸ್ವಲ್ಪ ಉರಿದರೂ ಹೊಗೆಯಿಂದ ಮುಚ್ಚಿಹೋಗುತ್ತದೆಯೇ ಹೊರತು ಚೆನ್ನಾಗಿ ಜ್ವಲಿಸುವುದಿಲ್ಲ (೧೪–೧೫). ಅಡಿಗೆಮನೆಗಳಲ್ಲಿಯೂ ಅಗ್ನಿಶಾಲೆಗಳಲ್ಲಿಯೂ ವೇದಾಧ್ಯಯನಸ್ಥಳಗಳಲ್ಲಿಯೂ ಹಾವುಗಳು ಕಾಣಿಸಿಕೊಳ್ಳುತ್ತಿವೆ. ಹವಿಸ್ಸು ಗಳಿಗೆ ಇರುವೆಗಳು ಮುತ್ತಿಕೊಳ್ಳುತ್ತಿವೆ. ಹಸುಗಳ ಹಾಲು ಇದ್ದಕ್ಕಿದ್ದಂತೆ ಬತ್ತಿಹೋಗಿದೆ. ಮತ್ತಗಜಗಳ ಮದ ಉಡುಗಿದೆ. ಕುದುರೆಗಳು ದೈನ್ಯದಿಂದ ಕೆನೆಯುತ್ತಿವೆ ; ಮೇವನ್ನು ಮುಟ್ಟುವುದಿಲ್ಲ (೧೬–೧೭). ಮಹಾರಾಜ, ಕತ್ತೆ ಒಂಟೆ ಹೇಸರಗತ್ತೆ – ಮೊದಲಾದ ಪ್ರಾಣಿಗಳು ತಮ್ಮ ರೋಮಗಳನ್ನು ನಿಮಿರಿಸಿಕೊಂಡು ಕಣ್ಣೀರು ಸುರಿಸುತ್ತಿವೆ. ಯಾವ ಚಿಕಿತ್ಸೆಮಾಡಿದರೂ (ಹತೋಟಿಗೊಳಪಟ್ಟು) ತಮ್ಮ ಸ್ವಭಾವಕ್ಕೆ ತಕ್ಕಂತೆ ನಡೆದುಕೊಳ್ಳುತ್ತಿಲ್ಲ (೧೮). ಕಾಗೆಗಳು ಹಿಂಡುಹಿಂಡಾಗಿ ಸೇರಿ ಕೆಟ್ಟ ಧ್ವನಿಯಲ್ಲಿ ಕೂಗಿಕೊಳ್ಳು ತ್ತಿವೆ. ಅವು ಸೌಧಾಗ್ರಗಳಲ್ಲಿ ಗುಂಪುಗಟ್ಟಿ ಕುಳಿತಿರುವುದು ಕಂಡುಬರುತ್ತಿದೆ. ಹದ್ದುಗಳು ರಾಜಧಾನಿಯಮೇಲೆ ಮಂಡಲಾಕಾರವಾಗಿ ಸುತ್ತುತ್ತಿವೆ.

**ಕ್ರವ್ಯಾದಾನಾಂ ಮೃಗಾಣಾಂ ಚ ಪುರದ್ವಾರೇಷು ಸಂಘಶಃ ।**
**ಶ್ರೂಯಂತೇ ವಿಪುಲಾ ಘೋಷಾಃ ಸವಿಸ್ಫೂರ್ಜಿತನಿಃಸ್ವನಾಃ ॥ ೨೧**

**ತದೇವಂ ಪ್ರಸ್ತುತೇ ಕಾರ್ಯೇ ಪ್ರಾಯಶ್ಚಿತ್ತಮಿದಂ ಕ್ಷಮಮ್।**
**ರೋಚತೇ ಯದಿ ವೈದೇಹೀ ರಾಘವಾಯ ಪ್ರದೀಯತಾಮ್ ॥ ೨೨**

**ಇದಂ ಚ ಯದಿ ವಾ ಮೋಹಾಲ್ಲೋಭಾದ್ವಾ ವ್ಯಾಹೃತಂ ಮಯಾ ।**
**ತತ್ರಾಪಿ ಚ ಮಹಾರಾಜ ನ ದೋಷಂ ಕರ್ತುಮರ್ಹಸಿ ॥ ೨೩**

**ಅಯಂ ಚ ದೋಷಃ ಸರ್ವಸ್ಯ ಜನಸ್ಯಾಸ್ಯೋಪಲಕ್ಷ್ಯತೇ ।**
**ರಕ್ಷಸಾಂ ರಾಕ್ಷಸೀನಾಂ ಚ ಪುರಸ್ಯಾಂತಃಪುರಸ್ಯ ಚ ॥ ೨೪**

**ಪ್ರಾಪಣೇ ಚಾಸ್ಯ ಮಂತ್ರಸ್ಯ ನಿವೃತ್ತಾಃ ಸರ್ವಮಂತ್ರಿಣಃ ।**
**ಅವಶ್ಯಂ ಚ ಮಯಾ ವಾಚ್ಯಂ ಯದ್ದೃಷ್ಟಮಪಿ ವಾ ಶ್ರುತಮ್ ॥ ೨೫**

---

ಪ್ರಾತಃಕಾಲ ಸಾಯಂಕಾಲಗಳೆರಡರಲ್ಲಿಯೂ ನರಿಗಳು ಒಟ್ಟುಗೂಡಿ ಅಪಸ್ವರದಿಂದ ಊಳಿಡುತ್ತಿವೆ (೧೯–೨೦). ಅಲ್ಲದೆ ಮಾಂಸಾಹಾರಿಗಳಾದ ಮೃಗಗಳು ನಗರದ್ವಾರಗಳ ಬಳಿಯಲ್ಲಿ ಸಿಡಿಲು ಅಬ್ಬರಿಸಿದಂತೆ ಗರ್ಜಿಸುವುದು ಅತಿಯಾಗಿ ಕೇಳಿಸುತ್ತಿದೆ. ಹೀಗೆ ಎಲ್ಲೆಡೆಯೂ ದುರ್ನಿಮಿತ್ತದ ಕಾರ್ಯವು ಸಂಭವಿಸಿದಾಗ ಇದೊಂದೇ ಇದಕ್ಕೆ ಸರಿಯಾದ ಶಾಂತಿಕರ್ಮ. ಏನೆಂದರೆ, ನಿನಗೆ ರುಚಿಸುವುದಾದರೆ ವೈದೇಹಿಯನ್ನು ರಾಮನಿಗೆ ಬಿಟ್ಟುಕೊಡಬೇಕು (೨೧–೨೨). ಮಹಾರಾಜ, ನಾನು ಕಾರ್ಯತತ್ತ್ವವನ್ನರಿಯದೆಯೋ ಜೀವವನ್ನುಳಿಸಿಕೊಳ್ಳಬೇಕೆಂಬ ದುರಾಸೆಯಿಂದಲೋ ಈ ಮಾತನ್ನಾಡುತ್ತಿರಬಹುದು. ಇದರಲ್ಲಿ ತಪ್ಪನ್ನೆಣಿಸಬೇಡ; ಮನ್ನಿಸು. ನಾನು ಹೇಳಿದ ಅಪಶಕುನಗಳು ಮಾತ್ರ ಎಲ್ಲರ ಗಮನಕ್ಕೂ ಬಂದಿವೆ. ನಗರದಲ್ಲಿರುವ ರಾಕ್ಷಸ ರಾಕ್ಷಸಿಯರೂ ಅಂತಃಪುರದವರೂ ಇದನ್ನು ಲಕ್ಷಿಸುತ್ತಿದ್ದಾರೆ (೨೩–೨೪). ಮಂತ್ರಾಲೋಚನೆಯ ಮುಖ್ಯವಾದ ಈ ಅಂಶವನ್ನು ಮಾತ್ರ ನಿನಗೆ ತಿಳಿಸಲು ಸಕಲ ಮಂತ್ರಿಗಳೂ ಹಿಂಜರಿದು ಸುಮ್ಮನಿದ್ದಾರೆ. ಆದರೆ ನಾನು ಕಂಡದ್ದನ್ನೂ ಕೇಳಿದ್ದನ್ನೂ ನಿನಗೆ ತಿಳಿಸಲೇಬೇಕು. ಅದು ನನ್ನ ಕರ್ತವ್ಯ (೨೫).

ಸಂಪ್ರಧಾರ್ಯ ಯಥಾನ್ಯಾಯಂ ತದ್ಭವಾನ್ ಕರ್ತುಮರ್ಹತಿ ।
ಇತಿ ಸ್ಮ ಮಂತ್ರಿಣಾಂ ಮಧ್ಯೇ ಭ್ರಾತಾ ಭ್ರಾತರಮೂಚಿವಾನ್ ॥ ೨೬

ರಾವಣಂ ರಾಕ್ಷಸಶ್ರೇಷ್ಠಂ ಪಥ್ಯಮೇತದ್ವಿಭೀಷಣಃ ॥

ಹಿತಂ ಮಹಾರ್ಥಂ ಮೃದು ಹೇತುಸಂಹಿತಂ
ವ್ಯತೀತಕಾಲಾಯತಿ ಸಂಪ್ರತಿ ಕ್ಷಮಮ್ ।
ನಿಶಮ್ಯ ತದ್ವಾಕ್ಯಮುಪಸ್ಥಿತಜ್ವರಃ
ಪ್ರಸಂಗವಾನುತ್ತರಮೇತದಬ್ರವೀತ್ ॥ ೨೭

ಭಯಂ ನ ಪಶ್ಯಾಮಿ ಕುತಶ್ಚಿದಪ್ಯಹಂ
ನ ರಾಘವಃ ಪ್ರಾಪ್ಸ್ಯತಿ ಜಾತು ಮೈಥಿಲೀಮ್ ।
ಸುರೈಃ ಸಹೇಂದ್ರೈರಪಿ ಸಂಗತಃ ಕಥಂ
ಮಮಾಗ್ರತಃ ಸ್ಥಾಸ್ಯತಿ ಲಕ್ಷ್ಮಣಾಗ್ರಜಃ ॥ ೨೮

ಇತೀದಮುಕ್ತ್ವಾ ಸುರಸೈನ್ಯನಾಶನೋ
ಮಹಾಬಲಃ ಸಂಯತಿ ಚಂಡವಿಕ್ರಮಃ ।

---

ಆದ್ದರಿಂದ, ಅಣ್ಣ ಇವೆಲ್ಲವನ್ನೂ ಸರಿಯಾಗಿ ಪರಿಶೀಲಿಸಿ ಯುಕ್ತವಾದ ಕಾರ್ಯವನ್ನು ಕೈಗೊಳ್ಳು'' ಎಂಬುದಾಗಿ ತಮ್ಮನು ಅಣ್ಣನಿಗೆ ಅರಿಕೆಮಾಡಿದನು. ಮಂತ್ರಿಗಳೆದುರಿಗೆ ರಾಕ್ಷಸೇಶ್ವರನಾದ ರಾವಣನನ್ನು ಕುರಿತು ವಿಭೀಷಣನು ಪಥ್ಯಮಾರ್ಗವನ್ನು ಉಪದೇಸಿಸಿದನು (೨೬). ಹೀಗೆ ವಿಭೀಷಣನಾಡಿದ ನುಡಿಯು ಶ್ರೇಯಸ್ತರವೂ ಉತ್ತಮವಾದ ನೀತಿತತ್ತ್ವವನ್ನೊಳಗೊಂಡುದೂ ಆಗಿತ್ತು. ಅದು ಸಕಾರವಾಗಿತ್ತಲ್ಲದೆ ಭೂತಭವಿಷ್ಯದ್ ವರ್ತಮಾನಕಾಲಗಳಿಗೆ ಅನ್ವಯಿಸುವಂತೆ ಹಿತಕರವಾಗಿತ್ತು. ಅಲ್ಲದೆ ವಿಭೀಷಣನು ಅದನ್ನು ಮೃದುವಾಗಿ ವಿನಯದಿಂದ ವಿಜ್ಞಾಪಿಸಿದ್ದನು. ಆದರೂ ರಾವಣನಿಗೆ ಅದನ್ನು ಕೇಳಿ ಬಿಸಿಯೇರಿತು (೨೭). ಆ ಹಠಮಾರಿಯು ''ಈ ಜಗತ್ತಿನಲ್ಲಿ ಯಾರಿಂದಲೂ ನನಗೆ ಹೆದರಿಕೆ ಎಂಬುದೇ ಇಲ್ಲ. ರಾಮನಿಗೆ ಸೀತೆಯು ಎಂದಿಗೂ ದಕ್ಕಲಾರಳು! ಇಂದ್ರನೊಡನೆ ದೇವತೆಗಳ ಪಡೆಯನ್ನೇ ಕಟ್ಟಿಕೊಂಡು ಬಂದರೂ ರಾಮನು ನನ್ನೆದುರಿಗೆ ನಿಲ್ಲಲಾರ'' ಎಂದು ಉತ್ತರವನ್ನಿತ್ತನು (೨೮). (ರಾವಣನೇನು ಸಾಮಾನ್ಯನೆ!) ಸುರಸೈನ್ಯವನ್ನು

ದಶಾನನೋ ಭ್ರಾತರಮಾಪ್ತವಾದಿನಂ
ವಿಸರ್ಜಯಾಮಾಸ ತದಾ ವಿಭೀಷಣಮ್ ॥ ೨೯

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದಶಮಃ ಸರ್ಗಃ

## ಏಕಾದಶಃ ಸರ್ಗಃ

ದ್ವಿತೀಯಮಂತ್ರಾಧಿವೇಶಃ

ಸಬಭೂವ ಕೃಶೋ ರಾಜಾ ಮೈಥಿಲೀಕಾಮಮೋಹಿತಃ ।
ಅಸಂಮಾನಾಚ್ಚ ಸುಹೃದಾಂ ಪಾಪಃ ಪಾಪೇನ ಕರ್ಮಣಾ ॥ ೧

ಅತೀತಸಮಯೇ ಕಾಲೇ ತಸ್ಮಿನ್ ವೈ ಯುಧಿ ರಾವಣಃ ।
ಅಮಾತ್ಯೈಶ್ಚ ಸುಹೃದ್ಭಿಶ್ಚ ಪ್ರಾಪ್ತ ಕಾಲಮಮನ್ಯತ ॥ ೨

ಸದೆಬಡಿದವನು ಮಹಾಬಲಾಢ್ಯ. ರಣರಂಗದಲ್ಲಿ ಚಂಡವಿಕ್ರಮ. ಆ ದಶಮುಖನು ಹಿತೋಕ್ತಿಯನ್ನಾಡಿದ ತಮ್ಮನಾದ ವಿಭೀಷಣನಿಗೆ ಈ ರೀತಿಯಲ್ಲಿ ಉತ್ತರವನ್ನಿತ್ತು ಅವನನ್ನು ಮನೆಗೆ ಕಳಿಸಿದನು! (೨೯).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಹತ್ತನೆಯ ಸರ್ಗ

## ಸರ್ಗ ೧೧

ರಾವಣನು ಎರಡನೆಯ ಸಲ ಮಂತ್ರಾಲೋಚನೆಗಾಗಿ ಸಭೆಯನ್ನು ಸೇರಿಸುವುದು.

ಇತ್ತ ರಾವಣನಾದರೋ ಮೈಥಿಲಿಯ ವಿಷಯದಲ್ಲಿ ಕಾಮಾರ್ತನಾಗಿ ಚಿಂತೆಯಿಂದ ಕೃಶನಾಗತೊಡಗಿದನು. ಆಪ್ತರಾದ ವಿಭೀಷಣಾದಿಗಳು ತನ್ನ ಪಾಪಕರ್ಮವನ್ನು ಅನುಮೋದಿಸಲಿಲ್ಲವಾದ್ದರಿಂದ ಆ ಪಾಪಿಗೆ ಚಿಂತೆ ಹೆಚ್ಚಿತು (೧). ಮಂತ್ರಾಲೋಚನಾಸಮಯವು ಮಿಂಚಿಹೋಗಿತು. ಯುದ್ಧಕಾಲವು ಸನ್ನಿಹಿತವಾಗಿತ್ತು. ಆಗ ರಾವಣನು ಸಚಿವರನ್ನೂ ಮಿತ್ರರನ್ನೂ ಸೇರಿಸಿ

ಸ ಹೇಮಜಾಲವಿತತಂ ಮಣಿವಿದ್ರುಮಭೂಷಿತಮ್ ।
ಉಪಗಮ್ಯ ವಿನೀತಾಶ್ವಮಾರುರೋಹ ಮಹಾರಥಮ್ ॥ ೩

ತಮಾಸ್ಥಾಯ ರಥಶ್ರೇಷ್ಠಂ ಮಹಾಮೇಘಸಮಸ್ವನಮ್ ।
ಪ್ರಯಯೌ ರಾಕ್ಷಸಶ್ರೇಷ್ಠೋ ದಶಗ್ರೀವಃ ಸಭಾಂ ಪ್ರತಿ ॥ ೪

ಅಸಿಚರ್ಮಧರಾ ಯೋಧಾಃ ಸರ್ವಾಯುಧಧರಾಸ್ತಥಾ ।
ರಾಕ್ಷಸಾ ರಾಕ್ಷಸೇಂದ್ರಸ್ಯ ಪುರಸ್ತಾತ್ಸಂಪ್ರತಿಸ್ಥಿರೇ ॥ ೫

ನಾನಾವಿಕೃತವೇಷಾಶ್ಚ ನಾನಾಭೂಷಣಭೂಷಿತಾಃ ।
ಪಾರ್ಶ್ವತಃ ಪೃಷ್ಠತಶ್ಚೈನಂ ಪರಿವಾರ್ಯ ಯಯುಸ್ತದಾ॥ ೬

ರಥೈಶ್ಚಾತಿರಥಾಃ ಶೀಘ್ರಂ ಮತ್ತೈಶ್ಚ ವರವಾರಣೈಃ ।
ಅನೂತ್ಪೇತುರ್ದಶಗ್ರೀವಮಾಕ್ರೀಡದ್ಭಿಶ್ಚ ವಾಜಿಭಿಃ ॥ ೭

ಗದಾಪರಿಘಹಸ್ತಾಶ್ಚ ಶಕ್ತಿತೋಮರಪಾಣಯಃ ।
ಪರಶ್ವಧಧರಾಶ್ಚಾನ್ಯೇ ಯಥಾನ್ಯೇ ಶೂಲಪಾಣಯಃ ॥ ೮

---

ಮಂತ್ರಾಲೋಚನೆಮಾಡಲು ಸರಿಯಾದ ಕಾಲವಿದು ಎಂದು ಭಾವಿಸಿದನು ! ಅನಂತರ ರಾವಣನು ಪಳಗಿದ ಅಶ್ವಗಳನ್ನು ಹೂಡಿದ ಒಂದು ಮಹಾರಥದ ಬಳಿಗೆ ಹೋಗಿ ಅದನ್ನೇರಿದನು. ಆ ರಥವು ಸುವರ್ಣಮಯವಾಗಿತ್ತಲ್ಲದೆ ರತ್ನಗಳಿಂದಲೂ ಹವಳಗಳಿಂದಲೂ ಅಲಂಕೃತವಾಗಿತ್ತು (೨–೩). ರಾಕ್ಷಸೋತ್ತಮನಾದ ದಶಕಂಠನು ಮಹಾಮೇಘದಂತೆ ಮೊರೆಯುವ ಆ ರಥವನ್ನೇರಿ ರಾಜಸಭೆಗೆ ಹೊರಟನು. ಆಗ ರಾಜಪರಿವಾರದ ರಾಕ್ಷಸಯೋಧರು ಕತ್ತಿಗಳನ್ನೂ ಗುರಾಣಿಗಳನ್ನೂ ಇತರ ವಿವಿಧಾಯುಧಗಳನ್ನೂ ಹಿಡಿದು ರಾಕ್ಷಸೇಂದ್ರನ ಮುಂದೆ ಮೆರವಣಿಗೆಯನ್ನು ಸಾಗಿದರು (೪–೫). ಮಹಾರಾಜನ ಎರಡು ಪಾರ್ಶ್ವಗಳಲ್ಲಿಯೂ ಹಿಂಭಾಗದಲ್ಲಿಯೂ ಸಹ ವಿಕಾರರೂಪದ ರಾಕ್ಷಸರು ನಾನಾ ಭೂಷಣಗಳಿಂದ ಭೂಷಿತರಾಗಿ ಹೋದರು. ಅತಿರಥರೆನಿಸಿದ ವೀರರು ರಥಗಳಲ್ಲಿ ಕುಳಿತೂ ಮತ್ತಮಾತಂಗಗಳನ್ನೇರಿಯೂ ವಿಲಾಸಗಾಮಿಗಳಾದ ಅಶ್ವಗಳಮೇಲೆ ಸವಾರಿಮಾಡುತ್ತಲೂ ರಾವಣನನ್ನು ಹಿಂಬಾಲಿಸಿ ನಡೆದರು (೬–೭). ಕೆಲವರು ಗದೆಗಳನ್ನೂ ಪರಿಘಗಳನ್ನೂ ಹಿಡಿದಿದ್ದರು. ಕೆಲವರು ಶಕ್ತಿತೋಮರಗಳನ್ನು ಧರಿಸಿದ್ದರು. ಕೆಲವರ ಕೈಯಲ್ಲಿ ಗಂಡುಗೊಡಲಿ

ತತಸ್ತೂರ್ಯಸಹಸ್ರಾಣಾಂ ಸಂಜಜ್ಞೇ ನಿಃಸ್ವನೋ ಮಹಾನ್ ।
ತುಮುಲಃ ಶಂಖಶಬ್ದಶ್ಚ ಸಭಾಂ ಗಚ್ಛತಿ ರಾವಣೇ ॥ ೯

ಸ ನೇಮಿಘೋಷೇಣ ಮಹಾನ್ ಸಹಸಾಭಿವಿನಾದಯನ್ ।
ರಾಜಮಾರ್ಗಂ ಶ್ರಿಯಾ ಜುಷ್ಟಂ ಪ್ರತಿಪೇದೇ ಮಹಾರಥಃ ॥ ೧೦

ವಿಮಲಂ ಚಾತಪತ್ರಾಣಾಂ ಪ್ರಗೃಹೀತಮಶೋಭತ ।
ಪಾಂಡರಂ ರಾಕ್ಷಸೇಂದ್ರಸ್ಯ ಪೂರ್ಣಸ್ತಾರಾಧಿಪೋ ಯಥಾ ॥ ೧೧

ಹೇಮಮಂಜರಿಗರ್ಭೇ ಚ ಶುದ್ಧಸ್ಫಟಿಕವಿಗ್ರಹೇ ।
ಚಾಮರವ್ಯಜನೇ ಚಾಸ್ಯ ರೇಜತುಃ ಸವ್ಯದಕ್ಷಿಣೇ ॥ ೧೨

ತೇ ಕೃತಾಂಜಲಯಃ ಸರ್ವೇ ರಥಸ್ಥಂ ಪೃಥಿವೀಸ್ಥಿತಾಃ ।
ರಾಕ್ಷಸಾ ರಾಕ್ಷಸಶ್ರೇಷ್ಠಂ ಶಿರೋಭಿಸ್ತಂ ವವಂದಿರೇ ॥ ೧೩

ರಾಕ್ಷಸೈಃ ಸ್ತೂಯಮಾನಃ ಸನ್ ಜಯಾಶೀರ್ಭಿರರಿಂದಮಃ ।
ಆಸಸಾದ ಮಹಾತೇಜಾಃ ಸಭಾಂ ಸುವಿಹಿತಾಂ ಶುಭಾಮ್ ॥ ೧೪

---

ಗಳಿದ್ದವು. ಕೆಲವರು ಶೂಲಗಳನ್ನು ಎತ್ತಿಹಿಡಿದಿದ್ದರು. ಹೀಗೆ ರಾವಣನು ವೈಭವದಿಂದ ರಾಜಸಭೆಗೆ ಹೋಗುತ್ತಿರಲು ಸಾವಿರಾರು ವಾದ್ಯಗಳು ಭೋರ್ಗರೆದವು. ಶಂಖಗಳು ಮೊಳಗಿದವು (೮–೯). ರಾವಣನೇರಿದ ಮಹಾರಥವು ವೈಭವೋಪೇತವಾದ ರಾಜವೀಥಿಯಲ್ಲಿ ಚಕ್ರನೇಮಿಧ್ವನಿಯಿಂದ ಭೋರೆನ್ನುತ್ತ ಸಾಗಿತು. ರಾಕ್ಷಸೇಂದ್ರನ ರಥದಮೇಲೆ ಹಿಡಿದಿದ್ದ ಶುಭ್ರವಾದ ಶ್ವೇತಛತ್ರವು ಪೂರ್ಣಚಂದ್ರನಂತೆ ಪರಿಶೋಭಿಸುತ್ತಿತ್ತು (೧೦–೧೧). ಅವನ ಎಡಬಲಗಳಲ್ಲಿ ಬೀಸುತ್ತಿದ್ದ ಎರಡು ಚಾಮರಗಳು ಶುದ್ಧಸ್ಫಟಿಕನಿರ್ಮಿತಗಳೋ ಎಂಬಂತೆ ಬೆಳ್ಳಗೆ ವಿರಾಜಿಸುತ್ತಿದ್ದವು. ಆ ಚಾಮರಗಳನ್ನು ಚಿನ್ನದ ಪುಷ್ಪಗುಚ್ಛಗಳಿಂದ ಅಲಂಕರಿಸಲಾಗಿತ್ತು. ರಾಜರಥದಲ್ಲಿ ಕುಳಿತು ಪ್ರಯಾಣಮಾಡುತ್ತಿದ್ದ ಆ ರಾಕ್ಷಸೇಂದ್ರನನ್ನು ಕಂಡು, ಪ್ರಜೆಗಳಾದ ರಾಕ್ಷಸರು ಎದ್ದುನಿಂತು ಕೈಜೋಡಿಸಿ ನೆಲದವರೆಗೆ ತಲೆಬಾಗಿ ವಂದಿಸುತ್ತಿದ್ದರು (೧೨–೧೩). ಕೆಲವರು ಸ್ತೋತ್ರಮಾಡುತ್ತಿದ್ದರು. ಕೆಲವರು 'ಜಯ ಜಯ' ಎಂದು ಘೋಷಿಸುತ್ತಿದ್ದರು. ಈ ಪ್ರಕಾರದಲ್ಲಿ ಶತ್ರುವಿಧ್ವಂಸಕನೂ ತೇಜೋರಾಶಿಯೂ ಆದ ರಾವಣನು ಓರಣವಾಗಿ ಏರ್ಪಡಿಸಿದ್ದ ತನ್ನ ರಾಜಸಭೆಗೆ

ಸುವರ್ಣರಜತಸ್ಥೂಣಾಂ ವಿಶುದ್ಧಸ್ಫಟಿಕಾಂತರಾಮ್ ।
ವಿರಾಜಮಾನೋ ವಪುಷಾ ರುಕ್ಮಪಟ್ಟೋತ್ತರಚ್ಛದಾಮ್ ॥ ೧೫

ತಾಂ ಪಿಶಾಚಶತೈಃ ಷಡ್ಭಿರಭಿಗುಪ್ತಾಂ ಸದಾ ಶುಭಾಮ್ ।
ಪ್ರವಿವೇಶ ಮಹಾತೇಜಾಃ ಸುಕೃತಾಂ ವಿಶ್ವಕರ್ಮಣಾ ॥ ೧೬

ತಸ್ಯಾಂ ತು ವೈದೂರ್ಯಮಯಂ ಪ್ರಿಯಕಾಜಿನಸಂವೃತಮ್ ।
ಮಹತ್ಸೋಪಾಶ್ರಯಂ ಭೇಜೇ ರಾವಣಃ ಪರಮಾಸನಮ್ ॥ ೧೭

ತತಃ ಶಶಾಸೇಶ್ವರವದ್ದೂತಾನ್ ಲಘುಪರಾಕ್ರಮಾನ್ ।
ಸಮಾನಯತ ಮೇ ಕ್ಷಿಪ್ರಮಿಹೈತಾನ್ ರಾಕ್ಷಸಾನಿತಿ ॥ ೧೮

ಕೃತ್ಯಮಸ್ತಿ ಮಹಜ್ಜಾತಂ ಸಾಮರ್ಥ್ಯಮಿಹ ನೋ ಮಹತ್ ।
ರಾಕ್ಷಸಾಸ್ತದ್ವಚಃ ಶ್ರುತ್ವಾ ಲಂಕಾಯಾಂ ಪರಿಚಕ್ರಮುಃ ॥ ೧೯

---

ಆಗಮಿಸಿದನು (೧೪). ಆ ಸಭಾಸ್ಥಾನದಲ್ಲಾದರೋ ಚಿನ್ನಬೆಳ್ಳಿಗಳಿಂದ ಅಲಂಕರಿಸಿದ ಕಂಬಗಳು. ಸ್ಫಟಿಕಮಯವಾದ ನೆಲಗಟ್ಟು. ಬಂಗಾರದ ಜರಿಯಿಂದ ಚಿತ್ರಿತವಾದ ರೇಷ್ಮೆಯ ವಸ್ತ್ರಗಳನ್ನು ಹೊದಿಸಿದ ದಿವ್ಯಪೀಠಗಳು. ಆ ಸಭಾಮಂಟಪಕ್ಕೆ ಆರುನೂರು ಮಂದಿ ವಿಕೃತಾಕಾರದ ರಾಕ್ಷಸರು ಕಾವಲಾಗಿದ್ದರು! ವಿಶ್ವಕರ್ಮನಿಂದ ನಿರ್ಮಿತವಾಗಿದ್ದ ಆ ಸಭಾಭವನವನ್ನು ತೇಜೋಮೂರ್ತಿಯಾದ ರಾವಣನು ಪ್ರವೇಶಿಸಿದನು (೧೫–೧೬). ಅನಂತರ ರಾವಣನು ವೈಡೂರ್ಯಮಯವಾದ ತನ್ನ ದಿವ್ಯಪೀಠವನ್ನೇರಿ ಕುಳಿತನು. ಆ ಪೀಠವು ಪ್ರಿಯಕವೆಂಬ ಮೃಗದ ಚರ್ಮದಿಂದ ಹೊದಿಸಲ್ಪಟ್ಟಿತ್ತು. ವಿಶಾಲವಾಗಿ ಅಂದವಾಗಿದ್ದ ಒರಗುದಿಂಬುಗಳಿಂದ ಶೋಭಿಸುತ್ತಿತ್ತು (೧೭). ಆಮೇಲೆ ರಾವಣನು ಶೀಘ್ರಗಾಮಿಗಳಾದ ದೂತರನ್ನು ಕರೆದು, ಪ್ರಭುವಿಗೆ ತಕ್ಕ ಅಧಿಕಾರದರ್ಪದಿಂದ "ಎಲೈ ದೂತರೆ, ಪ್ರಮುಖರಾದ ರಾಕ್ಷಸರೆಲ್ಲರನ್ನೂ ಕೂಡಲೆ ಇಲ್ಲಿ ಕರೆತನ್ನಿರಿ. ಈಗ ಒಂದು ಮಹಾಕಾರ್ಯವನ್ನು ನಿರ್ವಹಿಸಬೇಕಾಗಿದೆ. ನಮ್ಮ ಸಾಮರ್ಥ್ಯವನ್ನು ಇಂದು ನಿರ್ಧರಿಸಿಕೊಳ್ಳಬೇಕಾಗಿದೆ" ಎಂದು ಆಜ್ಞೆಯನ್ನಿತ್ತನು. ಒಡೆಯನ ನುಡಿಯನ್ನು ಕೇಳಿದೊಡನೆ ಆ ದೂತರು ಲಂಕೆಯ ಬೀದಿಬೀದಿಗಳಿಗೆ ಹೊರಟರು (೧೮–೧೯).

**ಅನುಗೇಹಮವಸ್ಥಾಯ ವಿಹಾರಶಯನೇಷು ಚ ।**
**ಉದ್ಯಾನೇಷು ಚ ರಕ್ಷಾಂಸಿ ಚೋದಯಂತೋ ಹ್ಯಭೀತವತ್ ॥ ೨೦**

**ತೇ ರಥಾನ್ ರುಚಿರಾನೇಕೇ ದೃಪ್ತಾನೇಕೇ ಪೃಥಗ್ಘಯಾನ್ ।**
**ನಾಗಾನನ್ಯೇಽಧಿರುರುಹುರ್ಜಗ್ಮುಶ್ಚೈಕೇ ಪದಾತಯಃ ॥ ೨೧**

**ಸಾ ಪುರೀ ಪರಮಾಕೀರ್ಣಾ ರಥಕುಂಜರವಾಜಿಭಿಃ ।**
**ಸಂಪತದ್ಭಿರ್ವಿರುರುಚೇ ಗರುತ್ಮದ್ಭಿರಿವಾಂಬರಮ್ ॥ ೨೨**

**ತೇ ವಾಹನಾನ್ಯವಸ್ಥಾಪ್ಯ ಯಾನಾನಿ ವಿವಿಧಾನಿ ಚ ।**
**ಸಭಾಂ ಪದ್ಭಿಃ ಪ್ರವಿವಿಶುಃ ಸಿಂಹಾ ಗಿರಿಗುಹಾಮಿವ ॥ ೨೩**

**ರಾಜ್ಞಃ ಪಾದೌ ಗೃಹೀತ್ವಾ ತು ರಾಜ್ಞಾ ತೇ ಪ್ರತಿಪೂಜಿತಾಃ ।**
**ಪೀಠೇಷ್ವನ್ಯೇ ಬೃಸೀಷ್ವನ್ಯೇ ಭೂಮೌ ಕೇಚಿದುಪಾವಿಶನ್ ॥ ೨೪**

---

ಅವರು ನಗರದ ಮನೆಮನೆಗಳಿಗೂ ಹೋಗಿ, ವಿಹಾರಸ್ಥಳಗಳಲ್ಲಿಯೂ ಶಯನಾಗಾರಗಳಲ್ಲಿಯೂ ಉದ್ಯಾನಗಳಲ್ಲಿಯೂ ವಿಶ್ರಮಿಸುತ್ತಿದ್ದ ರಾಕ್ಷಸರನ್ನು ನಿರ್ಭಯವಾಗಿ ಕಂಡು ರಾಜಾಜ್ಞೆಯನ್ನು ತಿಳಿಸಿ ಸಭೆಗೆ ಬರುವಂತೆ ಸೂಚನೆ ಯನ್ನಿತ್ತರು (೨೦). ರಾಜಾಜ್ಞೆಯನ್ನು ಕೇಳಿದೊಡನೆ ಸಮಸ್ತ ರಾಕ್ಷಸರೂ ಸಭಾಮಂಟಪಕ್ಕೆ ಹೊರಟರು. ಕೆಲವರು ಸುಂದರವಾದ ರಥಗಳನ್ನೇರಿಯೂ ಕೆಲವರು ಸೊಕ್ಕಿದ ಕುದುರೆಗಳಮೇಲೆ ಸವಾರಿಮಾಡುತ್ತಲೂ ಕೆಲವರು ಆನೆಗಳ ಮೇಲೆ ಕುಳಿತುಕೊಂಡೂ ರಾಜಸಭೆಗೆ ಹೊರಟರು. ಮತ್ತೆ ಕೆಲವರು ನಡೆಯುತ್ತಲೇ ಹೋದರು (೨೧). ಹೀಗೆ ರಥ ಗಜ ತುರಗಾದಿಗಳು ಚಟುವಟಿಕೆಯಿಂದ ಬೀದಿಬೀದಿಗಳಲ್ಲಿ ಹೋಗುತ್ತಿರಲು, ಆ ನಗರವು ಪಕ್ಷಿಗಳಿಂದ ಕವಿದಿರುವ ವಿಶಾಲವಾದ ಗಗನತಳದಂತೆ ಕಂಗೊಳಿಸಿತು. ಆ ರಾಕ್ಷಸರು ಸಭಾಮಂಟಪದ ಹೊರಗಡೆ ತಮ್ಮ ರಥಗಳನ್ನೂ ವಿವಿಧ ವಾಹನಗಳನ್ನೂ ನಿಲ್ಲಿಸಿ, ಕಾಲುನಡೆಯಿಂದ ಸಭಾಮಂಟಪವನ್ನು ಪ್ರವೇಶಿಸಿ ದರು. ಸಿಂಹಗಳು ಗಿರಿಗುಹೆಗಳನ್ನು ಪ್ರವೇಶಿಸುವಂತೆ ರೀತಿಯಿಂದ ಒಳಗೆ ಹೋದರು (೨೨–೨೩). ಅವರು ತಮ್ಮ ಸ್ವಾಮಿಯಾದ ರಾವಣನ ಪಾದ ಗಳಿಗೆ ವಂದಿಸಲು, ಆತನು ಆ ರಾಕ್ಷಸರನ್ನು ಗೌರವದಿಂದ ಬರಮಾಡಿಕೊಂಡನು. ಆಮೇಲೆ ಆ ರಾಕ್ಷಸರಲ್ಲಿ ಕೆಲವರು ಪೀಠಗಳಲ್ಲಿಯೂ ಕೆಲವರು ಚಾಪೆಗಳಲ್ಲಿಯೂ

ತೇ ಸಮೇತ್ಯ ಸಭಾಯಾಂ ವೈ ರಾಕ್ಷಸಾ ರಾಜಶಾಸನಾತ್ ।
ಯಥಾರ್ಹಮುಪತಸ್ಥುಸ್ತೇ ರಾವಣಂ ರಾಕ್ಷಸಾಧಿಪಮ್ ॥ ೨೫

ಮಂತ್ರಿಣಶ್ಚ ಯಥಾ ಮುಖ್ಯಾ ನಿಶ್ಚಿತಾರ್ಥೇಷು ಪಂಡಿತಾಃ ।
ಅಮಾತ್ಯಾಶ್ಚ ಗುಣೋಪೇತಾಃ ಸರ್ವಜ್ಞಾ ಬುದ್ಧಿದರ್ಶನಾಃ ॥ ೨೬

ಸಮೇಯುಸ್ತತ್ರ ಶತಶಃ ಶೂರಾಶ್ಚ ಬಹವಸ್ತದಾ ।
ಸಭಾಯಾಂ ಹೇಮವರ್ಣಾಯಾಂ ಸರ್ವಾರ್ಥಸ್ಯ ಸುಖಾಯ ವೈ ॥ ೨೭

ರಮ್ಯಾಯಾಂ ರಾಕ್ಷಸೇಂದ್ರಸ್ಯ ಸಮೇಯುಸ್ತತ್ರ ಸಂಘಶಃ ।
ರಾಕ್ಷಸಾ ರಾಕ್ಷಸಶ್ರೇಷ್ಠಂ ಪರಿವಾರ್ಯೋಪತಸ್ಥಿರೇ ॥ ೨೮

ತತೋ ಮಹಾತ್ಮಾ ವಿಪುಲಂ ಸುಯುಗ್ಯಂ
ಕರಾರ್ಹಜಾಂಬೂನದಚಿತ್ರಿತಾಂಗಮ್ ।

---

ಇನ್ನು ಕೆಲವರು ನೆಲದಲ್ಲಿಯೂ ಯಥೋಚಿತವಾಗಿ ಕುಳಿತುಕೊಂಡರು (೨೪). ಹೀಗೆ ಪುರನಿವಾಸಿಗಳಾದ ರಾಕ್ಷಸರು ರಾಜಶಾಸನದಂತೆ ಸಭೆಯಲ್ಲಿ ನೆರೆದು ರಾಕ್ಷಸೇಂದ್ರನಾದ ರಾವಣನ ಸುತ್ತಲೂ ತಮ್ಮ ತಮ್ಮ ಸ್ಥಾನಗಳಲ್ಲಿ ಉಪವಿಷ್ಟ ರಾದರು. ಕಾರ್ಯನಿರ್ವಹಣದಕ್ಷರೂ ಕರ್ತವ್ಯವನ್ನು ನಿರ್ಣಯಿಸುವುದರಲ್ಲಿ ಪಂಡಿತರೂ ಆದ ಮಂತ್ರಿಗಳೆಲ್ಲರೂ ಬಂದರು. ಅವರು ರಾವಣನಿಗೆ ಆಪ್ತರೂ* ಗುಣಾಢ್ಯರೂ ಸಕಲ ರಾಜಕಾರ್ಯವನ್ನು ಬಲ್ಲವರೂ ಬುದ್ಧಿಯೆಂಬ ನೇತ್ರ ದಿಂದ ಕಾರ್ಯವನ್ನು ತಿಳಿದು ಸಾಗಿಸಬಲ್ಲವರೂ ಆಗಿದ್ದರು (೨೫–೨೬). ಹಾಗೆಯೇ ಶೂರರಾದ ಬಹುಮಂದಿ ರಾಕ್ಷಸರು ಗುಂಪುಗುಂಪಾಗಿ ಬಂದು ಸೇರಿದರು. ಸುವರ್ಣಕಾಂತಿಯಿಂದ ರಮಣೀಯವಾಗಿದ್ದ ಆ ಸಭಾಮಂಟಪ ದಲ್ಲಿ ರಾಕ್ಷಸೇಂದ್ರನಾದ ರಾವಣನ ಸಕಲ ಕಾರ್ಯವೂ ಸುಗಮವಾಗಿ ನೆರವೇರ ಲೆಂಬ ಉದ್ದೇಶದಿಂದ ರಾಕ್ಷಸರೆಲ್ಲರೂ ಬಂದು ಸುತ್ತಲೂ ನೆರೆದರು (೨೭–೨೮). ಅಷ್ಟರಲ್ಲಿ ಮಹಾತ್ಮನೂ ಕೀರ್ತಿಶಾಲಿಯೂ ಆದ ವಿಭೀಷಣನು ಬಂಗಾರದಲ್ಲಿ

---

* ಮೂಲದಲ್ಲಿ ಮಂತ್ರಿ, ಅಮಾತ್ಯ ಎಂದು ಎರಡು ಶಬ್ದಗಳಿವೆ. ಅಮಾತ್ಯರೆಂದರೆ ಆಪ್ತರೆಂದರ್ಥ. ಕೆಲವರು ಹೀಗೆ ಅರ್ಥಭೇದವನ್ನು ಹೇಳುತ್ತಾರೆ : ಮಂತ್ರಿ = ಬುದ್ಧಿ. ಸಹಾಯ ; ಮುಖ್ಯಮಂತ್ರಿ. ಅಮಾತ್ಯ = ಕಾರ್ಯಸಹಾಯ ; ಉಪಮಂತ್ರಿ.

ರಥಂ ಸಮಾಸ್ಥಾಯ ಯಯೌ ಯಶಸ್ವೀ
ವಿಭೀಷಣಃ ಸಂಸದಮಗ್ರಜಸ್ಯ ॥ ೨೯

ಸಂ ಪೂರ್ವಜಾಯಾವರಜಃ ಶಶಂಸ
ನಾಮಾಥ ಪಶ್ಚಾಚ್ಚರಣೌ ವವಂದೇ ।
ಶುಕಃ ಪ್ರಹಸ್ತಶ್ಚ ತಥೈವ ತೇಭ್ಯೋ
ದದೌ ಯಥಾರ್ಹಂ ಪೃಥಗಾಸನಾನಿ ॥ ೩೦

ಸುವರ್ಣನಾನಾಮಣಿಭೂಷಣಾನಾಂ
ಸುವಾಸಸಾಂ ಸಂಸದಿ ರಾಕ್ಷಸಾನಾಮ್ ।
ತೇಷಾಂ ಪರಾರ್ಧ್ಯಾಗರುಚಂದನಾನಾಂ
ಸ್ರಜಶ್ಚ ಗಂಧಾಃ ಪ್ರವವುಃ ಸಮಂತಾತ್ ॥ ೩೧

ನ ಚುಕ್ರುಶುರ್ನಾನೃತಮಾಹ ಕಶ್ಚಿ-
ತ್ಸಭಾಸದೋ ನೈವ ಜಜಲ್ಪುರುಚ್ಚೈಃ ।
ಸಂಸಿದ್ಧಾರ್ಥಾಃ ಸರ್ವ ಏವೋಗ್ರವೀರ್ಯಾ
ಭರ್ತುಃ ಸರ್ವೇ ದದೃಶುಶ್ಚಾನನಂ ತೇ ॥ ೩೨

---

ಚಿತ್ರಿತವಾಗಿ ಉತ್ತಮಾಶ್ವಗಳನ್ನು ಹೂಡಿದ ಮಹಾರಥದಲ್ಲಿ ಕುಳಿತು ಅಣ್ಣನ ಸಭಾಸ್ಥಾನಕ್ಕೆ ಆಗಮಿಸಿದನು (೨೯). ಆತನು 'ವಿಭೀಷಣೋಽಹಮಭಿ-ವಾದಯೇ' ಎಂಬುದಾಗಿ ತನ್ನ ಹೆಸರನ್ನು ಹೇಳಿ ಅಣ್ಣನ ಪಾದಗಳಿಗೆ ಅಭಿವಾದನೆ ಮಾಡಿದನು. ಶುಕ, ಪ್ರಹಸ್ತರೂ ಬಂದು ರಾವಣನನ್ನು ವಂದಿಸಿದರು. ರಾವಣನು ಅವರೆಲ್ಲರಿಗೂ ಯಥಾರ್ಹವಾದ ಆಸನಗಳಲ್ಲಿ ಕುಳಿತುಕೊಳ್ಳುವಂತೆ ಸೂಚಿಸಿದನು (೩೦). ಆ ಸಭೆಯಲ್ಲಿದ್ದ ರಾಕ್ಷಸರು ದಿವ್ಯವಸ್ತ್ರಗಳನ್ನುಟ್ಟು ರತ್ನಖಚಿತವಾದ ಕಾಂಚನಭೂಷಣಗಳನ್ನು ತೊಟ್ಟಿದ್ದರು. ಅತ್ಯುತ್ತಮವಾದ ಅಗರುಚಂದನಗಳನ್ನು ಮೈಗೆ ಪೂಸಿಕೊಂಡಿದ್ದರು. ಪುಷ್ಪಮಾಲೆಗಳನ್ನು ಧರಿಸಿದ್ದರು. ಸುಗಂಧವು ಎಲ್ಲೆಲ್ಲಿಯೂ ಪ್ರಸರಿಸಿತ್ತು (೩೧). ಅಂಥ ಮಹಾಸಭೆಯು ನೆರೆದಿರುವಾಗ ಸಭಾಸದರಲ್ಲಿ ಒಬ್ಬರೂ ಸದ್ದುಮಾಡಲಿಲ್ಲ! ಒಬ್ಬರೂ ಹರಟಲಿಲ್ಲ! ಒಬ್ಬರೂ ಗಟ್ಟಿಯಾಗಿ ಮಾತಾಡಲಿಲ್ಲ ! ಅವರೆಲ್ಲರೂ

**ಸ ರಾವಣಃ ಶಸ್ತ್ರಭೃತಾಂ ಮನಸ್ವಿನಾಂ**
**ಮಹಾಬಲಾನಾಂ ಸಮಿತೌ ಮನಸ್ವೀ ।**
**ತಸ್ಯಾಂ ಸಭಾಯಾಂ ಪ್ರಭಯಾ ಚಕಾಶೇ**
**ಮಧ್ಯೇ ವಸೂನಾಮಿವ ವಜ್ರಹಸ್ತಃ ॥** ೩೩

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕಾದಶಃ ಸರ್ಗಃ

---

ತಮ್ಮ ಇಷ್ಟಾರ್ಥಗಳನ್ನು ಪಡೆದು ತೃಪ್ತರಾದವರು. ಎಲ್ಲರೂ ಉಗ್ರಪರಾಕ್ರಮಿಗಳು. ಸಕಲರೂ ರಾವಣನ ಮುಖವನ್ನೇ ನೋಡುತ್ತ ಕುಳಿತಿದ್ದರು! (೩೨). ಹೀಗೆ ಶಸ್ತ್ರಧಾರಿಗಳೂ ಧೀರರೂ ಬಲಾಢ್ಯರೂ ಆದ ರಾಕ್ಷಸರು ನೆರೆದ ಆಸ್ಥಾನಮಂಟಪದಲ್ಲಿ, ವಸುಗಳ ನಡುವೆ ವಜ್ರಧಾರಿಯಾದ ದೇವೇಂದ್ರನಂತೆ, ದರ್ಪಶಾಲಿಯಾದ ರಾವಣನು ತೇಜೋವಿಶೇಷದಿಂದ ತೊಳತೊಳಗುತ್ತಿದ್ದನು (೩೩).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಹನ್ನೊಂದನೆಯ ಸರ್ಗ

---

## ದ್ವಾದಶಃ ಸರ್ಗಃ

ಕುಂಭಕರ್ಣಮತಿಃ

ಸ ತಾಂ ಪರಿಷದಂ ಕೃತ್ಸ್ನಾಂ ಸಮೀಕ್ಷ್ಯ ಸಮಿತಿಂಜಯಃ ।
ಪ್ರಚೋದಯಾಮಾಸ ತದಾ ಪ್ರಹಸ್ತಂ ವಾಹಿನೀಪತಿಮ್ ॥ ೧

ಸೇನಾಪತೇ ಯಥಾ ತೇ ಸ್ಯುಃ ಕೃತವಿದ್ಯಾಶ್ಚತುರ್ವಿಧಾಃ ।
ಯೋಧಾ ನಗರರಕ್ಷಾಯಾಂ ತಥಾ ವ್ಯಾದೇಷ್ಟುಮರ್ಹಸಿ ॥ ೨

ಸ ಪ್ರಹಸ್ತಃ ಪ್ರಣೀತಾತ್ಮಾ ಚಿಕೀರ್ಷನ್ ರಾಜಶಾಸನಮ್ ।
ವಿನಿಕ್ಷಿಪದ್ಬಲಂ ಸರ್ವಂ ಬಹಿರಂತಶ್ಚ ಮಂದಿರೇ ॥ ೩

ತತೋ ವಿನಿಕ್ಷಿಪ್ಯ ಬಲಂ ಪೃಥಙ್ನಗರಗುಪ್ತಯೇ ।
ಪ್ರಹಸ್ತಃ ಪ್ರಮುಖೇ ರಾಜ್ಞೋ ನಿಷಸಾದ ಜಗಾದ ಚ ॥ ೪

ನಿಹಿತಂ ಬಹಿರಂತಶ್ಚ ಬಲಂ ಬಲವತಸ್ತವ ।
ಕುರುಷ್ವಾವಿಮನಾಃ ಕೃತ್ಯಂ ಯದಭಿಪ್ರೇತಮಸ್ತಿ ತೇ ॥ ೫

### ಸರ್ಗ ೧೨

ಸೀತೆಯು ತನ್ನ ವಶಳಾಗಲಿಲ್ಲವೆಂದು ರಾವಣನ ಪ್ರಲಾಪ. ರಾಮಲಕ್ಷ್ಮಣರನ್ನು ಸಂಹರಿಸುವ ಮಾರ್ಗವೇನೆಂದು ಅವನ ಪ್ರಶ್ನೆ. ಕುಂಭಕರ್ಣನ ಉತ್ತರ.

ಯುದ್ಧವಿಶಾರದನಾದ ರಾವಣನು ಸಭೆಯೆಲ್ಲವನ್ನೂ ಒಮ್ಮೆ ಸಮೀಕ್ಷಿಸಿ, ಸೇನಾಪತಿಯಾದ ಪ್ರಹಸ್ತನನ್ನು ಕುರಿತು ''ಸೇನಾಪತಿ, ಶಸ್ತ್ರಾಸ್ತ್ರವಿಶಾರದರಾದ ಚತುರಂಗಬಲದ ಯೋಧರು ನಗರರಕ್ಷಣೆಯನ್ನು ನೋಡಿಕೊಳ್ಳಬೇಕೆಂದು ಆಜ್ಞೆಯನ್ನು ಹೊರಡಿಸು'' ಎಂದು ನಿಯಮಿಸಿದನು (೧–೨). ಒಡನೆಯೇ ಕಾರ್ಯದಕ್ಷನಾದ ಪ್ರಹಸ್ತನು ರಾಜಾಜ್ಞೆಯನ್ನು ನಡೆಸಬೇಕೆಂದು ಸಮಸ್ತ ಸೇನೆಯೂ ನಗರದ ಒಳಹೊರಗೆ ಎಚ್ಚರಿಕೆಯಿಂದ ಕಾವಲಿರುವಂತೆ ಆಜ್ಞೆ ಮಾಡಿದನು. ನಗರದ ನಾನಾಭಾಗಗಳಲ್ಲಿ ಯಾವಯಾವ ಪಡೆಯು ನಿಂತಿರ ಬೇಕೆಂದು ವ್ಯವಸ್ಥೆಮಾಡಿ, ಪ್ರಹಸ್ತನು ತನ್ನ ರಾಜನೆದುರಿಗೆ ಬಂದು ಕುಳಿತನು (೩–೪). ಅನಂತರ ರಾವಣನನ್ನುದ್ದೇಶಿಸಿ ''ಸ್ವಾಮಿ, ಬಲಾಢ್ಯನಾದ ನಿನ್ನ

ಪ್ರಹಸ್ತಸ್ಯ ವಚಃ ಶ್ರುತ್ವಾ ರಾಜಾ ರಾಜ್ಯಹಿತೈಷಿಣಃ ।
ಸುಖೇಪ್ಸುಃ ಸುಹೃದಾಂ ಮಧ್ಯೇ ವ್ಯಾಜಹಾರ ಸ ರಾವಣಃ ॥ ೬

ಪ್ರಿಯಾಪ್ರಿಯೇ ಸುಖಂ ದುಃಖಂ ಲಾಭಾಲಾಭೌ ಹಿತಾಹಿತೇ ।
ಧರ್ಮಕಾಮಾರ್ಥಕೃಚ್ಛ್ರೇಷು ಯೂಯಮರ್ಹಥ ವೇದಿತುಮ್ ॥ ೭

ಸರ್ವಕೃತ್ಯಾನಿ ಯುಷ್ಮಾಭಿಃ ಸಮಾರಬ್ಧಾನಿ ಸರ್ವದಾ ।
ಮಂತ್ರಕರ್ಮನಿಯುಕ್ತಾನಿ ನ ಜಾತು ವಿಫಲಾನಿ ಮೇ ॥ ೮

ಸಸೋಮಗ್ರಹನಕ್ಷತ್ರೈರ್ಮರುದ್ಭಿರಿವ ವಾಸವಃ ।
ಭವದ್ಭಿ ರಹಮತ್ಯರ್ಥಂ ವೃತಃ ಶ್ರಿಯಮವಾಪ್ನುಯಾಮ್ ॥ ೯

ಅಹಂ ತು ಖಲು ಸರ್ವಾನ್ ವಃ ಸಮರ್ಥಯಿತುಮುದ್ಯತಃ ।
ಕುಂಭಕರ್ಣಸ್ಯ ತು ಸ್ವಪ್ನಾನ್ನೇಮಮರ್ಥಮಚೋದಯಮ್ ॥ ೧೦

---

ಆಣತಿಯಂತೆ ನಗರದ ಒಳಹೊರಗೆ ನಮ್ಮ ಪಡೆಯು ಎಚ್ಚರಿಕೆಯಿಂದ ಕಾವಲಿರುವಂತೆ ಏರ್ಪಡಿಸಿದ್ದೇನೆ. ಇನ್ನು ನೆಮ್ಮದಿಯಿಂದ ನಿನಗೆ ಇಷ್ಟಬಂದ ಕಾರ್ಯದಲ್ಲಿ ಉದ್ಯುಕ್ತನಾಗು'' ಎಂದು ನಿವೇದಿಸಿದರು (೫). ರಾಜ್ಯಹಿತದಲ್ಲಿ ನಿರತನಾದ ಪ್ರಹಸ್ತನ ಮಾತನ್ನು ಕೇಳಿ, ಸುಖಾಭಿಲಾಷಿಯಾದ ರಾವಣನು ತನ್ನ ಆಪ್ತರಾದ ಸಭಾಸದರೆದುರಿಗೆ ಹೀಗೆಂದನು : ''ಮಿತ್ರರೆ, ಧರ್ಮಾರ್ಥಕಾಮಗಳ ವಿಷಯದಲ್ಲಿ ಕ್ಲಿಷ್ಟಪರಿಸ್ಥಿತಿಯುಂಟಾದಾಗ ಸುಖದುಃಖಗಳ ಕಾರಣಗಳು, ಸುಖದುಃಖಗಳು, ಲಾಭನಷ್ಟಗಳು, ಮುಂದಾಗುವ ಹಿತಾಹಿತಗಳು – ಇವೆಲ್ಲವನ್ನೂ ಪರಿಶೀಲಿಸಿ ನಿಶ್ಚಯಿಸಲು ನೀವು ಶಕ್ತರಾಗಿದ್ದೀರಿ (೬–೭). ಇದುವರೆಗೆ ಮಂತ್ರಾಲೋಚನಾಪೂರ್ವಕವಾಗಿ ನೀವು ಆರಂಭಿಸಿದ ಯಾವ ಕಾರ್ಯಗಳೂ ನಿಷ್ಫಲವಾಗಿ ಎಂದೂ ಪರಿಣಮಿಸಿಲ್ಲ. ಚಂದ್ರನೇ ಮೊದಲಾದ ಗ್ರಹಗಳಿಂದಲೂ ನಕ್ಷತ್ರಗಳಿಂದಲೂ ದೇವತೆಗಳಿಂದಲೂ ಪರಿವೃತನಾದ ಇಂದ್ರನಂತೆ, ನಿಮ್ಮಿಂದ ಪರಿವೃತನಾದ ನಾನು ಇನ್ನೂ ವಿಪುಲವಾದ ಐಶ್ವರ್ಯವನ್ನು ಪಡೆದು ವಿರಾಜಿಸಿಯೇನು! (೮–೯). ನನ್ನ ಅಭಿಲಾಷೆಯೇನಿದೆಯೆಂಬುದನ್ನು ನಿಮಗೆ ತಿಳಿಸಲು ಈ ಹಿಂದೆಯೇ ಯತ್ನಿಸಿದ್ದೇನೆ. ಆದರೆ ಕುಂಭಕರ್ಣನು ನಿದ್ರಾವಶನಾಗಿದ್ದುದರಿಂದ

ಅಯಂ ಹಿ ಸುಪ್ತಃ ಷಣ್ಮಾಸಾನ್ ಕುಂಭಕರ್ಣೋ ಮಹಾಬಲಃ ।
ಸರ್ವಶಸ್ತ್ರಭೃತಾಂ ಮುಖ್ಯಃ ಸ ಇದಾನೀಂ ಸಮುತ್ಥಿತಃ ॥ ೧೧

ಇಯಂ ಚ ದಂಡಕಾರಣ್ಯಾದ್ರಾಮಸ್ಯ ಮಹಿಷೀ ಪ್ರಿಯಾ ।
ರಕ್ಷೋಭಿಶ್ಚರಿತಾದ್ದೇಶಾದಾನೀತಾ ಜನಕಾತ್ಮಜಾ ॥ ೧೨

ಸಾ ಮೇ ನ ಶಯ್ಯಾಮಾರೋಢುಮಿಚ್ಛತ್ಯಲಸಗಾಮಿನೀ ।
ತ್ರಿಷು ಲೋಕೇಷು ಚಾನ್ಯಾ ಮೇ ನ ಸೀತಾಸದೃಶೀ ಮತಾ ॥ ೧೩

ತನುಮಧ್ಯಾ ಪೃಥುಶ್ರೋಣೀ ಶಾರದೇಂದುನಿಭಾನನಾ ।
ಹೇಮಬಿಂಬನಿಭಾ ಸೌಮ್ಯಾ ಮಾಯೇವ ಮಯನಿರ್ಮಿತಾ ॥ ೧೪

ಸುಲೋಹಿತತಲೌ ಶ್ಲಕ್ಷ್ಣೌ ಚರಣೌ ಸುಪ್ರತಿಷ್ಠಿತೌ ।
ದೃಷ್ಟ್ವಾ ತಾಮ್ರನಖೌ ತಸ್ಯಾ ದೀಪ್ಯತೇ ಮೇ ಶರೀರಜಃ ॥ ೧೫

ಹುತಾಗ್ನೇರರ್ಚಿಸಂಕಾಶಾಮೇನಾಂ ಸೌರೀಮಿವ ಪ್ರಭಾಮ್ ।
ದೃಷ್ಟ್ವಾ ಸೀತಾಂ ವಿಶಾಲಾಕ್ಷೀಂ ಕಾಮಸ್ಯ ವಶಮೇಯಿವಾನ್ ॥ ೧೬

---

ಈ ವಿಷಯವನ್ನು ಅವನಿಗೆ ತಿಳಿಸಿರಲಿಲ್ಲ. ಅತ್ಯಂತ ಬಲಶಾಲಿಯಾದ ಈ ಕುಂಭಕರ್ಣನು ಆರು ತಿಂಗಳಿಂದ ನಿದ್ರಿಸುತ್ತಿದ್ದನಲ್ಲವೆ! ಶಸ್ತ್ರಧಾರಿಗಳಲ್ಲಿ ಶ್ರೇಷ್ಠನೆನಿಸಿದ ಈತನು ಈಗ ಎದ್ದಿದ್ದಾನೆ (೧೦–೧೧). ತಮ್ಮ – ಕುಂಭಕರ್ಣ, ನಮ್ಮ ರಾಕ್ಷಸರು ಸಂಚರಿಸುವ ದಂಡಕಾರಣ್ಯಕ್ಕೆ ರಾಮ ಎಂಬುವನು ತನ್ನ ಪ್ರಿಯಮಹಿಷಿಯಾದ ಸೀತೆಯನ್ನು ಕರೆತಂದಿದ್ದನು. ಅವಳು ಜನಕರಾಜನ ಮಗಳು. ನಾನು ಅವಳನ್ನು ಅಪಹರಿಸಿ ತಂದಿದ್ದೇನೆ ! (೧೨). ಮಂದ ಗಮನೆಯಾದ ಆ ಸುಂದರಿಯು ನನ್ನ ಹಾಸಿಗೆಯನ್ನೇರಲು ಸಮ್ಮತಿಸುತ್ತಿಲ್ಲ. ಸೌಂದರ್ಯದಲ್ಲಿ ಸೀತೆಯಂಥ ಇನ್ನೊಬ್ಬಳು ಮೂರುಲೋಕಗಳಲ್ಲಿಯೂ ಇಲ್ಲವೆಂದೇ ನನ್ನ ಅಭಿಪ್ರಾಯ (೧೩). ಕೃಶವಾದ ನಡು, ವಿಶಾಲವಾದ ಶ್ರೋಣೀತಳ, ಶರತ್ಕಾಲದ ಪೂರ್ಣಚಂದ್ರನಂತಿರುವ ಮುಖ. ಆ ಸೀತೆಯು ಒಂದು ಚಿನ್ನದ ಪುತ್ಥಳಿ. ಅವಳೊಬ್ಬಳು ಮಯನಿರ್ಮಿತವಾದ ರಮಣೀಯ ಮಾಯೆಯೋ ಏನೋ (೧೪). ಅಚ್ಚಗೆಂಪಿನ ಅವಳ ಪಾದಗಳೋ! ಕೆಂಪುಗುರಿನ ಮಾಟವಾದ ಅವಳ ಪಾದಗಳನ್ನು ನೋಡಿದರೆ ನನ್ನ ಕಾಮವು ಕೆರಳುವುದು! ಹೋಮಮಾಡಿದಾಗ ಉರಿಯುವ ಅಗ್ನಿಜ್ವಾಲೆಯಂತೆ ಅವಳ

ಉನ್ನಸಂ ವದನಂ ವಲ್ಗು ವಿಪುಲಂ ಚಾರುಲೋಚನಮ್ ।
ಪಶ್ಯಂಸ್ತದಾಽವಶಸ್ತಸ್ಯಾಃ ಕಾಮಸ್ಯ ವಶಮೇಯಿವಾನ್ ॥ ೧೭

ಕ್ರೋಧಹರ್ಷಸಮಾನೇನ ದುರ್ವರ್ಣಕರಣೇನ ಚ ।
ಶೋಕಸಂತಾಪನಿತ್ಯೇನ ಕಾಮೇನ ಕಲುಷೀಕೃತಃ ॥ ೧೮

ಸಾ ತು ಸಂವತ್ಸರಂ ಕಾಲಂ ಮಾಮಯಾಚತ ಭಾಮಿನೀ ।
ಪ್ರತೀಕ್ಷಮಾಣಾ ಭರ್ತಾರಂ ರಾಮಮಾಯತಲೋಚನಾ ॥ ೧೯

ತನ್ಮಯಾ ಚಾರುನೇತ್ರಾಯಾಃ ಪ್ರತಿಜ್ಞಾತಂ ವಚಃ ಶುಭಮ್ ।
ಶ್ರಾಂತೋಽಹಂ ಸತತಂ ಕಾಮಾದ್ಯಾತೋ ಹಯ ಇವಾಧ್ವನಿ ॥ ೨೦

ಕಥಂ ಸಾಗರಮಕ್ಷೋಭ್ಯಂ ತರಿಷ್ಯಂತಿ ವನೌಕಸಃ ।
ಬಹುಸತ್ತ್ವಸಮಾಕೀರ್ಣಂ ತೌ ವಾ ದಶರಥಾತ್ಮಜೌ ॥ ೨೧

---

ಮೈಬಣ್ಣ, ಸೂರ್ಯಪ್ರಭೆಯಂತೆ ಮಿರುಗುವ ದೇಹಕಾಂತಿ. ವಿಶಾಲ ನಯನೆಯಾದ ಆ ಸೀತೆಯನ್ನು ನೋಡಿ ನಾನು ಕಾಮವಶನಾಗಿಬಿಟ್ಟೆನು! (೧೫–೧೭). ನೀಳಮೂಗಿನ, ಚಾರುನೇತ್ರದ, ಬಟ್ಟನೆಯ ಮುಗ್ಧಮುಖದ ಆ ಚೆಲುವೆಯನ್ನು ಕಂಡು ನಾನು ಕಾಮವಶನಾಗಿಬಿಟ್ಟೆನು! ಮನಸ್ಸು ನನ್ನ ಹಿಡಿತದಲ್ಲುಳಿಯಲಿಲ್ಲ, ನನಗೆ ಕ್ರೋಧ ಬಂದಿರಲಿ– ಹರ್ಷವಾಗಿರಲಿ, ಅವಳ ವಿಷಯದಲ್ಲಿ ಕಾಮವು ಒಂದೇ ಬಗೆಯಲ್ಲಿ ನಿರಂತರವಾಗಿದೆ. ಆದರಿಂದ ನನ್ನ ಮೈ ಬಣ್ಣವೇ ವ್ಯತ್ಯಸ್ತವಾಗಿದೆ ! ಮನಸ್ಸಿಗೆ ವ್ಯಥೆಯಾಗಿರಲಿ – ದೇಹಕ್ಕೆ ಪೀಡೆಯಾಗಿರಲಿ, ಸತತವಾಗಿ ಜ್ವಲಿಸುವ ಕಾಮದಿಂದ ವ್ಯಾಕುಲನಾಗಿದ್ದೇನೆ (೧೭–೧೮). ಕುಪಿತಳಾಗಿರುವ ಆ ಸೀತೆಯು ಒಂದು ವರ್ಷದವರೆಗೆ ಅವಧಿಯು ಬೇಕೆಂದು ನನ್ನನ್ನು ಕೇಳಿಕೊಂಡಳು. ವಿಶಾಲನಯನೆಯಾದ ಆ ಮುಗ್ಧೆಯು ತನ್ನ ಗಂಡನಾದ ರಾಮನು ಅಷ್ಟರಲ್ಲಿ ಬಂದಾನೆಂದು ನಿರೀಕ್ಷಿಸಿಕೊಂಡಿದ್ದಾಳೆ. ಬಗಸೆಗಣ್ಣಿನ ಆ ಯುವತಿಯ ಮಾತಿಗೆ ಮಾರುಹೋಗಿ ನಾನು ಒಳ್ಳೆಯದೆಂದು ಒಪ್ಪಿಕೊಂಡಿದ್ದೇನೆ. ನಾನಂತೂ ಈ ಕಾಮದಿಂದ ಬಳಲಿ ಬೆಂಡಾಗಿದ್ದೇನೆ. ದೂರದ ದಾರಿಯನ್ನು ತುಕ್ಕಿ ಸೊರಗಿದ ಕುದುರೆಯಂತಾಗಿದ್ದೇನೆ! (೧೯–೨೦). ರಾಕ್ಷಸವೀರರೆ, ಅಕ್ಷೋಭ್ಯವಾದ ಮಹಾಸಾಗರವನ್ನು ಆ ಕಪಿಗಳು ದಾಟಬರುವುದೆಂತು ? ಘೋರಜಲಜಂತುಗಳಿಂದ

ಅಥವಾ ಕಪಿನೈಕೇನ ಕೃತಂ ನಃ ಕದನಂ ಮಹತ್ ।
ದುರ್ಜ್ಞೇಯಾಃ ಕಾರ್ಯಗತಯೋ ಬ್ರೂತ ಯಸ್ಯ ಯಥಾಮತಿ ॥ ೨೨

ಮಾನುಷಾನ್ಮೇ ಭಯಂ ನಾಸ್ತಿ ತಥಾಪಿ ತು ವಿಮೃಶ್ಯ ತಾಮ್ ।
ತದಾ ದೇವಾಸುರೇ ಯುದ್ಧೇ ಯುಷ್ಮಾಭಿಃ ಸಹಿತೋಽಜಯಮ್ ॥

ತೇ ಮೇ ಭವಂತಶ್ಚ ತಥಾ ಸುಗ್ರೀವಪ್ರಮುಖಾನ್ ಹರೀನ್ ।
ಪರೇ ಪಾರೇ ಸಮುದ್ರಸ್ಯ ಪುರಸ್ಕೃತ್ಯ ನೃಪಾತ್ಮಜೌ ॥ ೨೪

ಸೀತಾಯಾಃ ಪದವೀಂ ಪ್ರಾಪ್ಯ ಸಂಪ್ರಾಪ್ತೌ ವರುಣಾಲಯಮ್ ।
ಅದೇಯಾ ಚ ಯಥಾ ಸೀತಾ ವಧ್ಯೌ ದಶರಥಾತ್ಮಜೌ ॥ ೨೫

ಭವದ್ಭಿರ್ಮಂತ್ರ್ಯತಾಂ ಮಂತ್ರಃ ಸುನೀತಿಶ್ಚಾಭಿಧೀಯತಾಮ್ ।
ನ ಹಿ ಶಕ್ತಿಂ ಪ್ರಪಶ್ಯಾಮಿ ಜಗತ್ಯನ್ಯಸ್ಯ ಕಸ್ಯಚಿತ್ ॥ ೨೬

---

ವ್ಯಾಪ್ತವಾದ ಸಾಗರವನ್ನು ಆ ದಶರಥನ ಮಕ್ಕಳೀರ್ವರು ದಾಟಬಂದಾರೆ? (೨೧). ಅಥವಾ ಯಾರಿಗೆ ಗೊತ್ತು? ಒಬ್ಬ ಕಪಿಯು ಬಂದು ಇಲ್ಲಿ ದೊಡ್ಡ ಹಾವಳಿಯನ್ನೇ ಮಾಡಿಹೋಯಿತು! ಕಾರ್ಯದ ಆಗುಹೋಗುಗಳನ್ನು ಊಹಿಸುವುದು ಅಸಾಧ್ಯವೇ ಸರಿ. ನಿಮ್ಮ ಬುದ್ಧಿಗೆ ಹೇಗೆನಿಸುವುದು, ಹೇಳಿರಿ (೨೨). ಮಿತ್ರರೆ, ಮನುಷ್ಯಜಾತಿಯವನಿಂದ ನನಗೆ ಯಾವ ಭಯವೂ ಇಲ್ಲ! ದೇವಾಸುರ ಯುದ್ಧದಲ್ಲಿ ನಿಮ್ಮ ನೆರವಿನಿಂದ ಜಯವನ್ನು ಪಡೆದವನು ನಾನು. ಆಗ ನೆರವಿತ್ತ ನೀವೇ ಈಗಲೂ ನನಗೆ ಸಹಾಯಕರಾಗಿದ್ದೀರಿ. ಆದರೂ ವಿಮರ್ಶಿಸಿ ನೋಡಿರಿ. ಸುಗ್ರೀವನೇ ಮೊದಲಾದ ವಾನರರ ಪಡೆಯನ್ನು ಕಲೆಹಾಕಿ, ಆ ರಾಜಪುತ್ರರು ಸಮುದ್ರದ ಆಚೆಯ ದಂಡೆಯಲ್ಲಿ ಬಂದಿಳಿದಿದ್ದಾರೆ ! (೨೩–೨೪). ಸೀತೆಯ ನೆಲೆಯನ್ನು ಗೊತ್ತು ಹಚ್ಚಿ ಸಮುದ್ರದವರೆಗೆ ಬಂದುಬಿಟ್ಟಿದ್ದಾರೆ. ಆದರೇನು? ಈಗ ಸೀತೆಯನ್ನು ಕೊಡಕೂಡದು; ಆ ದಶರಥನ ಮಕ್ಕಳೀರ್ವರನ್ನೂ ಕೊಲ್ಲಬೇಕು. ಇದಕ್ಕೆ ಹಂಚಿಕೆಯೇನೆಂದು ಗೊತ್ತುಮಾಡಿರಿ. ಸರಿಯಾದ ಕಾರ್ಯನೀತಿಯನ್ನು ನಿರೂಪಿಸಿರಿ. ಈ ಜಗತ್ತಿನಲ್ಲಿ ನಮ್ಮನ್ನು ಜಯಿಸುವ ಶಕ್ತಿಯನ್ನು ಇಂದ್ರಾದಿಗಳಲ್ಲೊಬ್ಬರಲ್ಲೂ ಕಾಣೆನು (೨೫–೨೬).

ಸಾಗರಂ ವಾನರೈಸ್ತೀರ್ತ್ವಾ ನಿಶ್ಚಯೇನ ಜಯೋ ಮಮ ।
ತಸ್ಯ ಕಾಮಪರೀತಸ್ಯ ನಿಶಮ್ಯ ಪರಿದೇವಿತಮ್ ॥ ೨೭

ಕುಂಭಕರ್ಣಃ ಪ್ರಚುಕ್ರೋಧ ವಚನಂ ಚೇದಮಬ್ರವೀತ್ ॥

ಯದಾ ತು ರಾಮಸ್ಯ ಸಲಕ್ಷ್ಮಣಸ್ಯ
ಪ್ರಸಹ್ಯ ಸೀತಾ ಖಲು ಸಾ ಇಹಾಹೃತಾ ।
ಸಕೃತ್ಸಮೀಕ್ಷ್ಯೈವ ಸುನಿಶ್ಚಿತಂ ತದಾ
ಭಜೇತ ಚಿತ್ತಂ ಯಮುನೇವ ಯಾಮುನಮ್ ॥ ೨೮

ಸರ್ವಮೇತನ್ಮಹಾರಾಜ ಕೃತಮಪ್ರತಿಮಂ ತವ ।
ವಿಧೀಯೇತ ಸಹಾಸ್ಮಾಭಿರಾದಾವೇವಾಸ್ಯ ಕರ್ಮಣಃ ॥ ೨೯

ನ್ಯಾಯೇನ ರಾಜಾ ಕಾರ್ಯಾಣಿ ಯಃ ಕರೋತಿ ದಶಾನನ ।
ನ ಸ ಸಂತಪ್ಯತೇ ಪಶ್ಚಾನ್ನಿಶ್ಚಿತಾರ್ಥಮತಿರ್ನೃಪಃ ॥ ೩೦

---

ಹೀಗಿರುವಲ್ಲಿ ರಾಮನು ಕಪಿಗಳ ಹಿಂಡಿನೊಡನೆ ಕಡಲನ್ನು ದಾಟಿಬಂದು ಯುದ್ಧಮಾಡುವನೆ? ಜಯವು ನನಗೆ ನಿಶ್ಚಯವಾಗಿಯೂ ಕಟ್ಟಿಟ್ಟಬುತ್ತಿ'' ಎಂದು ಹೇಳಿದನು (೨೭). ಹೀಗೆ ಕಾಮಾರ್ತನಾದ ರಾವಣನು ಹಲುಬುವುದನ್ನು ಕೇಳುತ್ತಿದ್ದ ಕುಂಭಕರ್ಣನಿಗೆ ಸಿಟ್ಟುಬಂದಿತು. ಅವನು ರಾವಣನನ್ನು ನೋಡುತ್ತ ''ನೀನೊಬ್ಬನೇ ಆಲೋಚಿಸಿ ರಾಮಲಕ್ಷ್ಮಣರನ್ನು ವಂಚಿಸಿ ಧಿಡೀರನೆ ಸೀತೆಯನ್ನು ಇಲ್ಲಿಗೆ ಅಪಹರಿಸಿ ತಂದೆಯಲ್ಲ; ಆಗಲೇ ಎಲ್ಲರೊಡನೆ ಸಮಾಲೋಚಿಸಿದ್ದರೆ, ಮನಸ್ಸು ಒಂದು ದೃಢನಿರ್ಧಾರವನ್ನು ಹೊಂದುತ್ತಿತ್ತು. ಯಮುನಾನದಿಯು ತನ್ನ ಪಾತ್ರವನ್ನು ಸೇರಿ ಏಕಮುಖವಾಗಿ ಹರಿಯುವಂತೆ ಮನಸ್ಸು ಸುಸೂತ್ರವಾಗಿ ಓಡುತ್ತಿತ್ತು! (೨೮). ಇದೆಲ್ಲವೂ, ಮಹಾರಾಜ, ನಿನಗೆ ಅನುಚಿತವಾದ ಸಾಹಸಕಾರ್ಯ. ಈ ವಿಷಯವನ್ನು ಕುರಿತು ಮೊದಲೇ ನಮ್ಮೊಡನೆ ಸಮಾಲೋಚಿಸಬೇಕಾಗಿತ್ತು! ಯಾವ ರಾಜನು ಮಂತ್ರಾಲೋಚನೆಯಿಂದ ನಿಶ್ಚಯಿಸಿ ಕ್ರಮಬದ್ಧವಾಗಿ ಕಾರ್ಯವನ್ನು ಕೈಗೊಳ್ಳುವನೋ, ಅವನು ಅನಂತರ ಪಶ್ಚಾತ್ತಾಪಪಡಬೇಕಾಗುವುದಿಲ್ಲ (೨೯–೩೦).

**ಅನುಪಾಯೇನ ಕರ್ಮಾಣಿ ವಿಪರೀತಾನಿ ಯಾನಿ ಚ ।**
**ಕ್ರಿಯಮಾಣಾನಿ ದುಷ್ಯಂತಿ ಹವೀಂಷ್ಯಪ್ರಯತೇಷ್ವಿವ ॥ ೩೧**

**ಯಃ ಪಶ್ಚಾತ್ಪೂರ್ವಕಾರ್ಯಾಣಿ ಕುರುತೇ ಬುದ್ಧಿಮೋಹಿತಃ ।**
**ಪೂರ್ವಂ ಚೋತ್ತರಕಾರ್ಯಾಣಿ ನ ಸ ವೇದ ನಯಾನಯೌ ॥ ೩೨**

**ಚಪಲಸ್ಯ ತು ಕೃತ್ಯೇಷು ಪ್ರಸಮೀಕ್ಷ್ಯಾಧಿಕಂ ಬಲಮ್ ।**
**ಛಿದ್ರಮನ್ಯೇ ಪ್ರಪದ್ಯಂತೇ ಕ್ರೌಂಚಸ್ಯ ಖಮಿವ ದ್ವಿಜಾಃ ॥ ೩೩**

**ತ್ವಯೇದಂ ಮಹದಾರಬ್ಧಂ ಕಾರ್ಯಮಪ್ರತಿಚಿಂತಿತಮ್ ।**
**ದಿಷ್ಟ್ಯಾ ತ್ವಾಂ ನಾವಧೀದ್ರಾಮೋ ವಿಷಮಿಶ್ರಮಿವಾಮಿಷಮ್ ॥ ೩೪**

**ತಸ್ಮಾತ್ತ್ವಯಾ ಸಮಾರಬ್ಧಂ ಕರ್ಮ ಹ್ಯಪ್ರತಿಮಂ ಪರೈಃ ।**
**ಅಹಂ ಸಮೀಕರಿಷ್ಯಾಮಿ ಹತ್ವಾ ಶತ್ರೂಂಸ್ತವಾನಘ ॥ ೩೫**

---

ಸಾಮಾದ್ಯುಪಾಯಗಳ ಪರಿಶೀಲನೆಯಿಲ್ಲದೆ ಮಾಡುವ ವಿಪರೀತಕೃತ್ಯಗಳು, ಅಶುಚಿಯಾದ ಅಪಾತ್ರದಲ್ಲೀಯುವ ಹವಿಸ್ಸುಗಳಂತೆ ನಿಷ್ಫಲಗಳೂ ಅನರ್ಥಕರಗಳೂ ಆಗುತ್ತವೆ (೩೧). ಮೊದಲು ಮಾಡಬೇಕಾದ ಕರ್ತವ್ಯವನ್ನು ಯಾವನು ಚಿತ್ತವ್ಯಾಮೋಹದಿಂದ ಕಡೆಗೆ ಮಾಡುವನೋ, ಕಡೆಗೆ ಮಾಡಬೇಕಾದ್ದನ್ನು ಮೊದಲು ಮಾಡುವನೋ, ಆತನಿಗೆ ನೀತಿಯೂ ತಿಳಿಯದು, ಅನೀತಿಯೂ ತಿಳಿಯದು (೩೨). ವೈರಿಯು ಪ್ರಬಲನೆಂದರಿತಾಗ, ಚಪಲನಾದ ಆ ದುಡುಕನ ಕೃತ್ಯವಲ್ಲಿ ಯಾವ ಒಡಕು ಸಂಭವಿಸಿತೆಂದು ಶತ್ರುಗಳ ಕಾದು ಕುಳಿತಿರುತ್ತಾರೆ. ಒಡಕು ಸಿಕ್ಕಿದೊಡನೆ ಅದರಲ್ಲಿ ತೂರಿಹೋಗುತ್ತಾರೆ. ರಾವಣ, ಕ್ರೌಂಚಪರ್ವತವನ್ನು ಹಾಯಲು ಅಶಕ್ಯವಾದರೂ ಷಣ್ಮುಖನು ಮಾಡಿದ ರಂಧ್ರದ ಮೂಲಕ ಹಕ್ಕಿಗಳು ಹಾದುಹೋಗುತ್ತವೆ ! (೩೩). ಅಣ್ಣ, ಊಹಾತೀತವಾದ ಒಂದು ದೊಡ್ಡ ಸಾಹಸಕೃತ್ಯಕ್ಕೆ ದುಡುಕಿ ಕೈಹಾಕಬಿಟ್ಟೆಯಲ್ಲ! ರಾಮನು ಆಗಲೇ ನಿನ್ನನ್ನು ಕೊಲ್ಲದೆ ಇದ್ದುದು ನಮ್ಮ ಅದೃಷ್ಟ! ವಿಷಮಿಶ್ರವಾದ ತಿನಿಸು, ತಿಂದವನನ್ನು ಸಾಯಿಸದೆ ಉಳಿಸಿದಂತಾಯಿತು! (೩೪). ಇನ್ನೊಬ್ಬರು ಕೈಹಾಕಲಾರದ ಸಾಹಸಕಾರ್ಯವನ್ನು ಆರಂಭಿಸಿಬಿಟ್ಟಿದ್ದೀಯೆ. ಒಳ್ಳೆಯದು. ನಿನ್ನ ಶತ್ರುಗಳನ್ನು ಧ್ವಂಸ

ಯದಿ ಶಕ್ರವಿವಸ್ವಂತೌ ಯದಿ ಪಾವಕಮಾರುತೌ ।
ತಾವಹಂ ಯೋಧಯಿಷ್ಯಾಮಿ ಕುಬೇರವರುಣಾವಪಿ ॥ ೩೬

ಗಿರಿಮಾತ್ರಶರೀರಸ್ಯ ಶಿತಶೂಲಧರಸ್ಯ ಚ ।
ನರ್ದತಸ್ತೀಕ್ಷ್ಣದಂಷ್ಟ್ರಸ್ಯ ಬಿಭೀಯಾದ್ವೈ ಪುರಂದರಃ ॥ ೩೭

ಪುನರ್ಮಾಂ ಸ ದ್ವಿತೀಯೇನ ಶರೇಣ ನಿಹನಿಷ್ಯತಿ ।
ತತೋಽಹಂ ತಸ್ಯ ಪಾಸ್ಯಾಮಿ ರುಧಿರಂ ಕಾಮಮಾಶ್ವಸ ॥ ೩೮

ವಧೇನ ವೈ ದಾಶರಥೇಃ ಸುಖಾವಹಂ
ಜಯಂ ತವಾಹರ್ತುಮಹಂ ಯತಿಷ್ಯೇ ।
ಹತ್ವಾ ಚ ರಾಮಂ ಸಹ ಲಕ್ಷ್ಮಣೇನ
ಖಾದಾಮಿ ಸರ್ವಾನ್ ಹರಿಯೂಥಮುಖ್ಯಾನ್ ॥ ೩೯

ರಮಸ್ವ ಕಾಮಂ ಪಿಬ ಚಾಗ್ರ್ಯವಾರುಣೀಂ
ಕುರುಷ್ವ ಕಾರ್ಯಾಣಿ ಹಿತಾನಿ ವಿಜ್ವರಃ ।

---

ಮಾಡಿ, ಆಗಿಹೋದ್ದನ್ನು ನಾನು ಸರಿಪಡಿಸುವೆನು! ಇಂದ್ರನೇ ಬರಲಿ – ಸೂರ್ಯನೇ ಬರಲಿ – ಅಗ್ನಿವಾಯುಗಳೇ ಬರಲಿ, ನಾನು ಅವರೊಡನೆ ಹೊಡೆದಾಡುವೆನು. ಕುಬೇರ ವರುಣರೇ ಬಂದರೂ ಕಾದಾಡುವೆನು! (೩೫–೩೬). ಪರ್ವತದಂತೆ ಮಹಾಶರೀರವುಳ್ಳ ನಾನು ಮೊನಚಾದ ಶೂಲ ವನ್ನು ಹಿಡಿದು, ಹರಿತವಾದ ಕೋರೆದಾಡೆಗಳನ್ನು ಸುಲಿದು. ಗರ್ಜಿಸತ್ತ ಯುದ್ಧಕ್ಕಿಳಿದೆನೆಂದರೆ – ದೇವೇಂದ್ರನು ಹೆದರಿ ಓಡಿಹೋಗುವನು ! (೩೭). (ರಾಮನು ಹೇಗೋ ಒಂದು ಬಾಣವನ್ನು ನನ್ನಮೇಲೆ ಹೊಡೆದನು.) ಎರಡನೆಯ ಬಾಣವನ್ನು ಬಿಡುವುದರೊಳಗೆ, ಅಣ್ಣ, ಅವನ ರಕ್ತವನ್ನು ನಾನು ಕುಡಿದುಬಿಟ್ಟಿರುವೆನು ! ನೀನು ನಿಶ್ಚಿಂತನಾಗಿ ನೆಮ್ಮದಿಯಲ್ಲಿರು (೩೮). ರಾಮನನ್ನು ವಧಿಸಿ ನಿನಗೆ ಸಂತೋಷಕರವಾದ ಜಯವನ್ನು ತಂದುಕೊಡಲು ನಾನು ಪ್ರಯತ್ನಿಸುವೆನು. ಲಕ್ಷ್ಮಣನೊಡನೆ ರಾಮನನ್ನೂ ಸದೆಬಡಿದು ಕೊಂದುಹಾಕುವೆನು. ಇನ್ನು ಉಳಿದ ವಾನರಮುಖ್ಯರನ್ನು ತಿಂದುಹಾಕು ವೆನು! (೩೯). ನೀನು ಯಾವ ಚಿಂತೆಯನ್ನೂ ಇಟ್ಟುಕೊಳ್ಳಬೇಡ. ಮನಸ್ಸುಬಂದಂತೆ ಉಲ್ಲಾಸದಿಂದ ವಿಹರಿಸು! ಉತ್ತಮವಾದ ಹೆಂಡವನ್ನು

ಮಯಾ ತು ರಾಮೇ ಗಮಿತೇ ಯಮಕ್ಷಯಂ
ಚಿರಾಯ ಸೀತಾ ವಶಗಾ ಭವಿಷ್ಯತಿ ॥ ೪೦

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವಾದಶಃ ಸರ್ಗಃ

---

## ತ್ರಯೋದಶಃ ಸರ್ಗಃ

ಮಹಾಪಾರ್ಶ್ವವಚೋಽಭಿನಂದನಮ್

ರಾವಣಂ ಕ್ರುದ್ಧಮಾಜ್ಞಾಯ ಮಹಾಪಾರ್ಶ್ವೋ ಮಹಾಬಲಃ ।
ಮುಹೂರ್ತಮನುಸಂಚಿಂತ್ಯ ಪ್ರಾಂಜಲಿರ್ವಾಕ್ಯಮಬ್ರವೀತ್ ॥ ೧

ಯಃ ಖಲ್ವಪಿ ವನಂ ಪ್ರಾಪ್ಯ ಮೃಗವ್ಯಾಲಿಸಮಾಕುಲಮ್ ।
ನ ಪಿಬೇನ್ಮಧು ಸಂಪ್ರಾಪ್ತಂ ಸ ನರೋ ಬಾಲಿಶೋ ಭವೇತ್ ॥ ೨

---

ಯಥೇಚ್ಛೆಯಾಗಿ ಕುಡಿಯತ್ತಿರು! ನಿನಗೆ ಬೇಕಾದ ಕಾರ್ಯಗಳಲ್ಲಿ ಮಗ್ನನಾಗು! ನಾನು ರಾಮನನ್ನು ಯಮನ ಮನೆಗೆ ಸಾಗಿಸುವೆನು! ಸೀತೆಯು ಶಾಶ್ವತವಾಗಿ ನಿನ್ನ ಕೈಸೇರುವಳು !'' ಎಂದು ಹೇಳಿದನು (೪೦).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಹನ್ನೆರಡನೆಯ ಸರ್ಗ

---

## ಸರ್ಗ ೧೩

ಸೀತೆಯನ್ನು ಬಲಾತ್ಕರಿಸಬೇಕೆಂದು ಮಹಾಪಾರ್ಶ್ವನ ಹೇಳಿಕೆ. ಅದು ಸಾಧ್ಯವಿಲ್ಲವೆಂದು ರಾವಣನು ಪೂರ್ವವೃತ್ತಾಂತವೊಂದನ್ನು ಹೇಳುವುದು.

ರಾವಣನು ದುಡುಕಿದನೆಂದು ಕುಂಭಕರ್ಣನು ಹೇಳಿದುದರಿಂದ ರಾವಣನಿಗೆ ಕೋಪಬಂದಿತ್ತು. ಆದನ್ನರಿತು ಮಹಾಪಾರ್ಶ್ವನು ಒಂದು ಕ್ಷಣಕಾಲ ಚಿಂತಿಸಿ ಕೈ ಮುಗಿದುಕೊಂಡು ಈ ರೀತಿಯಲ್ಲಿ ವಿಜ್ಞಾಪಿಸಿದನು; ''ಮಹಾರಾಜ, ಕ್ರೂರಮೃಗಗಳಿಂದಲೂ ಸರ್ಪಗಳಿಂದಲೂ ತುಂಬಿದ ಅರಣ್ಯದೊಳಗೆ ಹೋದ ಮೇಲೆ, ಕೈಗೆ ಸಿಕ್ಕಿದ ಜೇನನ್ನು ಯಾವನು ಸವಿಯುದಿಲ್ಲವೋ ಅವನನ್ನು

ಈಶ್ವರಸ್ಯೇಶ್ವರಃ ಕೋऽಸ್ತಿ ತವ ಶತ್ರುನಿಬರ್ಹಣ ।
ರಮಸ್ವ ಸಹ ವೈದೇಹ್ಯಾ ಶತ್ರೂನಾಕ್ರಮ್ಯ ಮೂರ್ಧಸು ॥ ೩

ಬಲಾತ್ಕುಕ್ಕುಟವೃತ್ತೇನ ವರ್ತಸ್ವ ಸುಮಹಾಬಲ ।
ಆಕ್ರಮ್ಯ ಸೀತಾಂ ವೈದೇಹೀಂ ತಥಾ ಭುಙ್ಕ್ಷ್ವ ರಮಸ್ವ ಚ ॥ ೪

ಲಬ್ಧಕಾಮಸ್ಯ ತೇ ಪಶ್ಚಾದಾಗಮಿಷ್ಯತಿ ಯದ್ಭಯಮ್ ।
ಪ್ರಾಪ್ತಮಪ್ರಾಪ್ತ ಕಾಲಂ ವಾ ಸರ್ವಂ ಪ್ರತಿಸಹಿಷ್ಯಸಿ ॥ ೫

ಕುಂಭಕರ್ಣಃ ಸಹಾಸ್ಮಾಭಿರಿಂದ್ರಜಿಚ್ಚ ಮಹಾಬಲಃ ।
ಪ್ರತಿಷೇಧಯಿತುಂ ಶಕ್ತೌ ಸವಜ್ರಮಪಿ ವಜ್ರಿಣಮ್ ॥ ೬

ಉಪಪ್ರದಾನಂ ಸಾಂತ್ವಂ ವಾ ಭೇದಂ ವಾ ಕುಶಲೈಃ ಕೃತಮ್ ।
ಸಮತಿಕ್ರಮ್ಯ ದಂಡೇನ ಸಿದ್ಧಿ ಮರ್ಥೇಷು ರೋಚಯ ॥ ೭

ಇಹ ಪ್ರಾಪ್ತಾನ್ ವಯಂ ಸರ್ವಾನ್ ಶತ್ರೂಂಸ್ತವ ಮಹಾಬಲ ।
ವಶೇ ಶಸ್ತ್ರಪ್ರಪಾತೇನ ಕರಿಷ್ಯಾಮೋ ನ ಸಂಶಯಃ ॥ ೮

---

ಮೂಢನೆನ್ನಬೇಕಾಗುತ್ತದೆ ! (೧–೨). ಶತ್ರುವಿಧ್ವಂಸಕ, ಸರ್ವಶಕ್ತನಾದ ನಿನ್ನನ್ನು ತಡೆಯತಕ್ಕ ಈಶ್ವರನಾದರೂ ಯಾರು? ಶತ್ರುಗಳ ತಲೆಯನ್ನು ಮೆಟ್ಟಿ ಸೀತೆಯೊಡನೆ ವಿಹರಿಸು ! ಹುಂಜದಂತೆ ಬಲಾತ್ಕಾರದಿಂದ ಹಿಡಿದೆಳೆದು ಅವಳನ್ನು ಭೋಗಿಸು! ಆನಂದಿಸು! (೩–೪). ನಿನ್ನ ಇಷ್ಟಾರ್ಥವು ಸಿದ್ಧಿಸಿದಮೇಲೆ ಯಾವ ಕಷ್ಟವಾದರೂ ಬರಲಿ, ನೋಡಿಕೊಳ್ಳುವೆಯಂತೆ! ಬಂದದ್ದು, ಮುಂದೆ ಬರತಕ್ಕದ್ದು ಎಲ್ಲವನ್ನೂ ಎದುರಿಸಬಹುದು. ವಜ್ರಧಾರಿಯಾಗಿ ಇಂದ್ರನೇ ಬಂದರೂ ಬಲಸಂಪನ್ನರಾದ ಕುಂಭಕರ್ಣ, ಇಂದ್ರಜಿತು–ಇವರಿಬ್ಬರೇ ಅವನನ್ನು ಅಡ್ಡಗಟ್ಟಿ ನಿಲ್ಲಿಸಬಲ್ಲರು. ನಾವು ಇವರಿಗೆ ಸಹಾಯ ಮಾಡುವೆವು (೫–೬). ಸಾಮ, ದಾನ, ಭೇದಗಳೆಂಬ ಉಪಾಯಗಳನ್ನು ನೀತಿಕುಶಲರು ಹೇಳಿದರೆ ಹೇಳಿಕೊಳ್ಳಲಿ! ಅವೆಲ್ಲವನ್ನೂ ಉಲ್ಲಂಘಿಸಿ ದಂಡೋಪಾಯದಿಂದಲೇ ಕಾರ್ಯಸಿದ್ಧಿಯಾಗುವುದೆಂದು ಮನಸ್ಸಿಗೆ ತಂದುಕೊ. ನಿನ್ನ ಯಾವ ವೈರಿಗಳು ಬಂದರೂ ನಾವು ಶಸ್ತ್ರಗಳನ್ನು ಹಿಡಿದು ಹೋರಾಡಿ, ನಿಶ್ಚಯವಾಗಿಯೂ ಅವರನ್ನು ಸದೆಬಡಿಯುತ್ತೇವೆ'' ಎಂದನು

ಏವಮುಕ್ತಸ್ತದಾ ರಾಜಾ ಮಹಾಪಾರ್ಶ್ವೇನ ರಾವಣಃ ।
ತಸ್ಯ ಸಂಪೂಜಯನ್ ವಾಕ್ಯಮಿದಂ ವಚನಮಬ್ರವೀತ್ ॥ ೯

ಮಹಾಪಾರ್ಶ್ವ ನಿಬೋಧ ತ್ವಂ ರಹಸ್ಯಂ ಕಿಂಚಿದಾತ್ಮನಃ ।
ಚಿರವೃತ್ತಂ ತದಾಖ್ಯಾಸ್ಯೇ ಯದವಾಪ್ತಂ ಮಯಾ ಪುರಾ ॥ ೧೦

ಪಿತಾಮಹಸ್ಯ ಭವನಂ ಗಚ್ಛಂತೀಂ ಪುಂಜಿಕಸ್ಥಲಾಮ್ ।
ಚಂಚೂರ್ಯಮಾಣಾಮದ್ರಾಕ್ಷಮಾಕಾಶೇಽಗ್ನಿಶಿಖಾಮಿವ ॥ ೧೧

ಸಾ ಪ್ರಸಹ್ಯ ಮಯಾ ಭುಕ್ತಾ ಕೃತಾ ವಿವಸನಾ ತತಃ ।
ಸ್ವಯಂಭೂಭವನಂ ಪ್ರಾಪ್ತಾ ಲೋಲಿತಾ ನಲಿನೀ ಯಥಾ ॥ ೧೨

ತಸ್ಯ ತಚ್ಚ ತದಾ ಮನ್ಯೇ ಜ್ಞಾತಮಾಸೀನ್ಮಹಾತ್ಮನಃ ।
ಅಥ ಸಂಕುಪಿತೋ ವೇಧಾ ಮಾಮಿದಂ ವಾಕ್ಯಮಬ್ರವೀತ್ ॥ ೧೩

ಅದ್ಯಪ್ರಭೃತಿ ಯಾಮನ್ಯಾಂ ಬಲಾನ್ನಾರೀಂ ಗಮಿಷ್ಯಸಿ ।
ತದಾ ತೇ ಶತಧಾ ಮೂರ್ಧಾ ಫಲಿಷ್ಯತಿ ನ ಸಂಶಯಃ ॥ ೧೪

---

(೭–೮). ಮಹಾಪಾರ್ಶ್ವನ ವಚನವನ್ನಾಲಿಸಿ ರಾಕ್ಷಸೇಂದ್ರನಾದ ರಾವಣನು ಪ್ರಸನ್ನನಾದನು. ಅವನನ್ನು ಆದರಿಸುತ್ತ ಹೀಗೆಂದನು: ''ಮಹಾಪಾರ್ಶ್ವ, ಕೇಳು. ನನಗೆ ಸಂಬಂಧಿಸಿದ ಒಂದು ಅಂತರಂಗದ ವಿಷಯವಿದೆ. ಅದು ಬಹಳ ಹಿಂದೆ ನಡೆದದ್ದು. ಏನು ನಡೆಯಿತೆಂಬದನ್ನು ಹೇಳುತ್ತೇನೆ (೯–೧೦): ಒಮ್ಮೆ ನಾನು ಆಕಾಶಮಾರ್ಗದಲ್ಲಿ ಪ್ರಯಾಣಮಾಡುತ್ತಿರುವಾಗ ಪುಂಜಿಕಸ್ಥಲೆ ಯೆಂಬ ಅಪ್ಸರೆಯನ್ನು ಕಂಡೆನು. ಅವಳು ಬ್ರಹ್ಮಲೋಕಕ್ಕೆ ಹೋಗು ತ್ತಿದ್ದಳು. ನನಗೆ ಅಂಜಿ ಮರೆಯಾಗಲು ಹವಣಿಸುತ್ತಿದ್ದಳು. ಅಗ್ನಿ ಶಿಖೆಯಂತಿದ್ದ ಆ ಸುಂದರಿಯನ್ನು ಕಂಡು ನನ್ನ ಮನಸ್ಸು ವಿಚಲಿತವಾಗಲು ಅವಳನ್ನು ಬಲಾತ್ಕರಿಸಿದೆನು. ಆ ಪುಂಜಿಕಸ್ಥಲೆಯನ್ನು ವಿವಸ್ತ್ರಗೊಳಿಸಿ ಭೋಗಿಸಿದೆನು! ಅವಳು ಎಳೆದಾಡಿದ ತಾವರೆಯ ಬಳ್ಳಿಯಂತಾಗಿ ಬ್ರಹ್ಮಲೋಕಕ್ಕೆ ಹೋದಳು (೧೧–೧೨). ಮಹಾಪಾರ್ಶ್ವ, ಈ ಸಂಗತಿಯು ತರವಾಯ ಮಹಾತ್ಮನಾದ ಬ್ರಹ್ಮದೇವನಿಗೆ ತಿಳಿಯಿತೆಂದು ತೋರುತ್ತದೆ. ಆತನು ಕುಪಿತನಾಗಿ 'ಎಲೈ ರಾವಣ, ಇನ್ನು ಮುಂದೆ ನೀನು ಯಾವಳಾದರೂ ಸ್ತ್ರೀಯನ್ನು ಬಲಾತ್ಕರಿಸಿ ಭೋಗಿಸಿದರೆ, ನಿನ್ನ ಶಿರಸ್ಸು ತಪ್ಪದೆ ನೂರು ಹೋಳಾಗಿ ಸೀಳಿಹೋಗು

ಇತ್ಯಹಂ ತಸ್ಯ ಶಾಪಸ್ಯ ಭೀತಃ ಪ್ರಸಭಮೇವ ತಾಮ್ ।
ನಾರೋಪಯೇ ಬಲಾತ್ಸೀತಾಂ ವೈದೇಹೀಂ ಶಯನೇ ಸ್ವಕೇ ॥ ೧೫

ಸಾಗರಸ್ಯೇವ ಮೇ ವೇಗೋ ಮಾರುತಸ್ಯೇವ ಮೇ ಗತಿಃ ।
ನೈತದ್ದಾಶರಥಿರ್ವೇದ ಹ್ಯಾಸಾದಯತಿ ತೇನ ಮಾಮ್ ॥ ೧೬

ಯಸ್ತು ಸಿಂಹಮಿವಾಸೀನಂ ಸುಪ್ತಂ ಗಿರಿಗುಹಾಶಯೇ ।
ಕ್ರುದ್ಧಂ ಮೃತ್ಯುಮಿವಾಸೀನಂ ಪ್ರಬೋಧಯಿತುಮಿಚ್ಛತಿ ॥ ೧೭

ನ ಮತ್ತೋ ನಿರ್ಗತಾನ್ ಬಾಣಾನ್ ದ್ವಿಜಿಹ್ವಾನಿವ ಪನ್ನಗಾನ್ ।
ರಾಮಃ ಪಶ್ಯತಿ ಸಂಗ್ರಾಮೇ ತೇನ ಮಾಮಭಿಗಚ್ಛತಿ ॥ ೧೮

ಕ್ಷಿಪ್ರಂ ವಜ್ರೋಪಮೈರ್ಬಾಣೈಃ ಶತಧಾ ಕಾರ್ಮುಕಚ್ಯುತೈಃ ।
ರಾಮಮಾದೀಪಯಿಷ್ಯಾಮಿ ಉಲ್ಕಾಭಿರಿವ ಕುಂಜರಮ್ ॥ ೧೯

ತಚ್ಚಾಸ್ಯ ಬಲಮಾದಾಸ್ಯೇ ಬಲೇನ ಮಹತಾ ವೃತಃ ।
ಉದಯನ್ ಸವಿತಾ ಕಾಲೇ ನಕ್ಷತ್ರಾಣಾಮಿವ ಪ್ರಭಾಮ್ ॥ ೨೦

---

ವುದು!' ಎಂದು ನನಗೆ ಶಾಪವನ್ನಿತ್ತನು (೧೩–೧೪). ಹೀಗಾಗಿ ನಾನು ಶಾಪದ ಹೆದರಿಕೆಯಿಂದ ಸೀತೆಯನ್ನು ಬಲಾತ್ಕರಿಸಿ ನನ್ನ ಹಾಸಿಗೆಯಮೇಲೆ ಹತ್ತಿಸಿಲ್ಲ. ಇರಲಿ; ಮಹಾಪಾರ್ಶ್ವ, ನನ್ನ ವೇಗವು ಮಹಾಸಮುದ್ರದ ವೇಗದಂತೆ ಅದಮ್ಯವಾದುದು. ನನ್ನ ಗತಿಶಕ್ತಿಯು ಚಂಡಮಾರುತದ ಗತಿಶಕ್ತಿಯಂತೆ ದುಸ್ಸಹವಾದುದು. ಆದಶರಥನ ಮಗನಿಗೆ ಇದು ಗೊತ್ತಿಲ್ಲ. ಆದ್ದರಿಂದ ನನ್ನ ಹತ್ತಿರಕ್ಕೆ ಬರುತ್ತಿದ್ದಾನೆ! (೧೫–೧೬). ಗಿರಿಗಹ್ವರದಲ್ಲಿ ಮಲಗಿದ ಸಿಂಹವನ್ನು ಆತನು ಎಬ್ಬಿಸಲು ಹೊರಟಿದ್ದಾನೆ! ಕೆರಳಿದ ಮತ್ಯುವನ್ನು ಕೆಣಕಲು ಹೊರಟಿದ್ದಾನೆ! ಎರಡು ನಾಲಗೆಯ ಸರ್ಪಗಳಂತೆ ಭೋರ್ಗರೆಯುತ್ತ ಹೊಮ್ಮುವ ನನ್ನ ನಾರಾಚಗಳನ್ನು ರಾಮನು ಕಂಡಿಲ್ಲ. ಆದ್ದರಿಂದ ನನ್ನೊಡನೆ ಹೋರಾಡಲು ಬರುತ್ತಿದ್ದಾನೆ (೧೭–೧೮). ನನ್ನ ಧನುಸ್ಸಿನಿಂದ ನೂರುನೂರಾಗಿ ಸಿಡಿಲುಗಳಂತೆ ಸಿಡಿದೆರಗುವ ಶರಗಳಿಂದ, ಆನೆಯನ್ನು ಬೆಂಕಿಯ ಕೊಳ್ಳಿಗಳಿಂದ ಬೆದರಿಸುವಂತೆ, ರಾಮನನ್ನು ಬೆದರಿಸಿ ಉರುಬಿಹಾಕುವೆನು! ಉದಯಕಾಲದಲ್ಲಿ ಆದಿತ್ಯನು ನಕ್ಷತ್ರಗಳ ಪ್ರಭೆಯನ್ನು ಅಡಗಿಸುವಂತೆ, ದುರ್ದಮ್ಯಬಲಸಂಪನ್ನನಾದ ನಾನು ರಾಮನ ಬಲವನ್ನು

ನ ವಾಸವೇನಾಪಿ ಸಹಸ್ರಚಕ್ಷುಷಾ
ಯುಧಾಸ್ಮಿ ಶಕ್ಯೋ ವರುಣೇನ ವಾ ಪುನಃ ।
ಮಯಾ ತ್ವಿಯಂ ಬಾಹುಬಲೇನ ನಿರ್ಜಿತಾ
ಪುರೀ ಪುರಾ ವೈಶ್ರವಣೇನ ಪಾಲಿತಾ ॥ ೨೧

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರಯೋದಶಃ ಸರ್ಗಃ

---

ಹೀರಿಬಿಡುವೆನು! (೧೯–೨೦). ಸಾವಿರಕಣ್ಣುಗಳಿರುವ ಇಂದ್ರನೇ ಬಂದರೂ ವರುಣನೇ ಬಂದರೂ ಸಂಗ್ರಾಮಭೂಮಿಯಲ್ಲಿ ನಾನು ಜಗ್ಗುವವನಲ್ಲ. ಹಿಂದೆ ಕುಬೇರನೇ ಪಾಲಿಸುತ್ತಿದ್ದ ಈ ಲಂಕಾನಗರಿಯನ್ನು ನಾನು ನನ್ನ ಭುಜಬಲ ದಿಂದಲೇ ಕಸಿದುಕೊಳ್ಳಲಿಲ್ಲವೆ?'' ಎಂದನು (೨೧).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಹದಿಮೂರನೆಯ ಸರ್ಗ

---

## ಚತುರ್ದಶಃ ಸರ್ಗಃ

ಪ್ರಹಸ್ತವಿಭೀಷಣವಿವಾದಃ

ನಿಶಾಚರೇಂದ್ರಸ್ಯ ನಿಶಮ್ಯ ವಾಕ್ಯಂ
ಸ ಕುಂಭಕರ್ಣಸ್ಯ ಚ ಗರ್ಜಿತಾನಿ ।
ವಿಭೀಷಣೋ ರಾಕ್ಷಸರಾಜಮುಖ್ಯ-
ಮುವಾಚ ವಾಕ್ಯಂ ಹಿತಮರ್ಥಯುಕ್ತಮ್ ॥ ೧

ವೃತೋ ಹಿ ಬಾಹ್ವಂತರಭೋಗರಾಶಿ-
ಶ್ಚಿಂತಾವಿಷಃ ಸುಸ್ಮಿತತೀಕ್ಷ್ಣದಂಷ್ಟ್ರಃ ।
ಪಂಚಾಂಗುಲೀಪಂಚಶಿರೋಽತಿಕಾಯಃ
ಸೀತಾಮಹಾಹಿಸ್ತವ ಕೇನ ರಾಜನ್ ॥ ೨

ಯಾವನ್ನ ಲಂಕಾಂ ಸಮಭಿದ್ರವಂತಿ
ವಲೀಮುಖಾಃ ಪರ್ವತಕೂಟಮಾತ್ರಾಃ ।
ದಂಷ್ಟ್ರಾಯುಧಾಶ್ಚೈವ ನಖಾಯುಧಾಶ್ಚ
ಪ್ರದೀಯತಾಂ ದಾಶರಥಾಯ ಮೈಥಿಲೀ ॥ ೩

## ಸರ್ಗ ೧೪

ಪ್ರಹಸ್ತ ವಿಭೀಷಣರ ವಾಗ್ವಾದ

ರಾವಣದ ದರ್ಪೋಕ್ತಿಗಳನ್ನೂ ಕುಂಭಕರ್ಣನ ಗರ್ಜನೆಗಳನ್ನೂ ಕೇಳುತ್ತಿದ್ದ ವಿಭೀಷಣನು, ರಾಕ್ಷಸರಾಜನನ್ನು ಸಂಬೋಧಿಸಿ ಹಿತಕರವೂ ವಾಸ್ತವಾರ್ಥಯುಕ್ತವೂ ಆದ ಮಾತನ್ನಾಡಿದನು (೧): ''ಮಹಾರಾಜ, ಸೀತೆಯೆಂಬ ಘೋರಸರ್ಪಿಣಿಯನ್ನು ತಂದು ಏಕೆ ಕೊರಳಿಗೆ ಸುತ್ತಿಕೊಂಡಿದ್ದೀಯೆ? ಅವಳ ತೋಳುಗಳ ಮಧ್ಯಭಾಗವೆಂಬುದು ನೀಳವಾದ ಸರ್ಪದೇಹ. ಅವಳ ಚಿಂತೆಯೇ ನಿನಗೆ ವಿಷರೂಪವಾದದ್ದು. ಮುಗುಳ್ನಗೆಯೇ ಹರಿತವಾದ ಕೋರೆಯಹಲ್ಲೆಂದು ತಿಳಿ. ಸೀತೆಯ ಐದು ಬೆರಳುಗಳೇ ಸರ್ಪದ ಐದು ಹೆಡೆಗಳೆಂದು ತಿಳಿದುಕೊ (೨). ಗಿರಿಶೃಂಗದಂತೆ ಬೃಹತ್ಕಾಯರೂ ಕೋರೆಯ ಹಲ್ಲುಗಳಿಂದಲೂ ಉಗುರುಗಳಿಂದಲೂ ಹೊಡೆದಾಡುವವರೂ ಆದ ವಾನರರು

ಯಾವನ್ನ ಗೃಹ್ಣಂತಿ ಶಿರಾಂಸಿ ಬಾಣಾ
ರಾಮೇರಿತಾ ರಾಕ್ಷಸಪುಂಗವಾನಾಮ್ ।
ವಜ್ರೋಪಮಾ ವಾಯುಸಮಾನವೇಗಾಃ
ಪ್ರದೀಯತಾಂ ದಾಶರಥಾಯ ಮೈಥಿಲೀ ॥ ೪

ನ ಕುಂಭಕರ್ಣೇಂದ್ರಜಿತೌ ಚ ರಾಜಂ-
ಸ್ತಥಾ ಮಹಾಪಾರ್ಶ್ವಮಹೋದರೌ ವಾ ।
ನಿಕುಂಭಕುಂಭೌ ಚ ತಥಾತಿಕಾಯಃ
ಸ್ಥಾತುಂ ನ ಶಕ್ತಾ ಯುಧಿ ರಾಘವಸ್ಯ ॥ ೫

ಜೀವಂಸ್ತು ರಾಮಸ್ಯ ನ ಮೋಕ್ಷ್ಯಸೇ ತ್ವಂ
ಗುಪ್ತಃ ಸವಿತ್ರಾಪ್ಯಥ ವಾ ಮರುದ್ಭಿಃ ।
ನ ವಾಸವಸ್ಯಾಂಕಗತೋ ನ ಮೃತ್ಯೋ-
ರ್ನ ಖಂ ನ ಪಾತಾಲಮನುಪ್ರವಿಷ್ಟಃ ॥ ೬

---

ಈ ಲಂಕಾನಗರವನ್ನು ಮುತ್ತುವುದರೊಳಗೆ, ಮಹಾರಾಜ, ಮೈಥಿಲಿಯನ್ನು ರಾಮನಿಗೆ ಒಪ್ಪಿಸಿಬಿಡು (೩). ವಾಯುವೇಗದಿಂದ ಸಿಡಿಲಿನಂತೆ ನುಗ್ಗಿಬರುವ ರಾಮಬಾಣಗಳು ರಾಕ್ಷಸನಾಯಕರ ತಲೆಗಳನ್ನು ಆಹುತಿಯಾಗಿ ತೆಗೆದುಕೊಳ್ಳು ವುದರೊಳಗೆ ಮೈಥಿಲಿಯನ್ನು ರಾಮನಿಗೆ ಒಪ್ಪಿಸಿಬಿಡು. ರಾಕ್ಷಸೇಶ್ವರ, ರಾಘವನು ಯುದ್ಧಭೂಮಿಗೆ ಬಂದು ನಿಂತಾಗ ಕುಂಭಕರ್ಣನಾಗಲಿ ಇಂದ್ರಜಿತು ವಾಗಲಿ ಅವನನ್ನು ಎದುರಿಸಲಾರರು. ಮಹಾಪಾರ್ಶ್ವ, ಮಹೋದರ, ನಿಕುಂಭ, ಕುಂಭ, ಅತಿಕಾಯ – ಇವರಾರೂ ರಾಮನನ್ನೆದುರಿಸಲು ಶಕ್ತರಲ್ಲ (೪–೫). ರಾಮನಿಗೆ ವಿರುದ್ಧವಾಗಿ ನಡೆದರೆ ನೀನು ಜೀವಂತವಾಗಿ ಉಳಿಯ ಲಾರೆ. ಸೂರ್ಯನಾಗಲಿ ಮರುತ್ತುಗಳಾಗಲಿ ನಿನ್ನನ್ನು ಉಳಿಸಲಾರರು. ಇಂದ್ರನ ಬಳಿಗೆ ಹೋದರೂ ಮೃತ್ಯುವಿನ ರಕ್ಷಣೆಯನ್ನು ಪಡೆದರೂ ನೀನು ಬದುಕಲಾರೆ ! ಆಕಾಶವನ್ನೇ ಅಡರು, ಪಾತಾಳದಲ್ಲಿಯೇ ಅಡಗು – ನೀನು ಉಳಿಯಲಾರೆ!'' ಎಂದು ಹೇಳಿದನು (೬).

ನಿಶಮ್ಯ ವಾಕ್ಯಂ ತು ವಿಭೀಷಣಸ್ಯ
　　ತತಃ ಪ್ರಹಸ್ತೋ ವಚನಂ ಬಭಾಷೇ ।
ನ ನೋ ಭಯಂ ವಿದ್ಮ ನ ದೈವತೇಭ್ಯೋ
　　ನ ದಾನವೇಭ್ಯೋ ಹ್ಯಥವಾ ಕುತಶ್ಚಿತ್ ॥ ೭

ನ ಯಕ್ಷಗಂಧರ್ವಮಹೋರಗೇಭ್ಯೋ
　　ಭಯಂ ನ ಸಂಖ್ಯೇ ಪತಗೋತ್ತಮೇಭ್ಯಃ ।
ಕಥಂ ನು ರಾಮಾದ್ಭವಿತಾ ಭಯಂ ನೋ
　　ನರೇಂದ್ರಪುತ್ರಾತ್ಸಮರೇ ಕದಾಚಿತ್ ॥ ೮

ಪ್ರಹಸ್ತವಾಕ್ಯಂ ತ್ವಹಿತಂ ನಿಶಮ್ಯ
　　ವಿಭೀಷಣೋ ರಾಜಹಿತಾನುಕಾಂಕ್ಷೀ ।
ತತೋ ಮಹಾರ್ಥಂ ವಚನಂ ಬಭಾಷೇ
　　ಧರ್ಮಾರ್ಥಕಾಮೇಷು ನಿವಿಷ್ಟಬುದ್ಧಿಃ ॥ ೯

ಪ್ರಹಸ್ತ ರಾಜಾ ಚ ಮಹೋದರಶ್ಚ
　　ತ್ವಂ ಕುಂಭಕರ್ಣಶ್ಚ ಯದರ್ಥಜಾತಮ್ ।

---

ವಿಭೀಷಣನ ವಚನವನ್ನು ಕೇಳಿ ಪ್ರಹಸ್ತನು ''ವಿಭೀಷಣ, ನಮಗೆ ಹೆದರಿಕೆಯೆಂದರೇನೆಂಬುದೇ ತಿಳಿಯದು! ದೇವದಾನವರಿಗೂ ನಾವು ಅಂಜ ತಕ್ಕವರಲ್ಲ. ಜಗತ್ತಿನಲ್ಲಿ ಯಾರಿಂದಲೂ ನಮಗೆ ಭೀತಿಯೇ ಇಲ್ಲ. ರಣರಂಗ ದಲ್ಲಿ ನಾವು ಯಕ್ಷಗಂಧರ್ವಪನ್ನಗರಿಗೂ ವೈನತೇಯಾದಿ ಪಕ್ಷಿಶ್ರೇಷ್ಠರಿಗೂ ಜಗ್ಗತಕ್ಕವರಲ್ಲ. ಹೀಗಿರುವಾಗ ಮನುಷ್ಯಮಾತ್ರನೂ ಯಾವನೋ ಒಬ್ಬ ರಾಜನ ಮಗನೂ ಆದ ರಾಮನ ದೆಸೆಯಿಂದ ನಮಗೆ ಭಯವಾದೀತೆ?'' ಎಂದು ಗಜರಿದನು (೭–೮). ಧರ್ಮಾರ್ಥಕಾಮಗಳಲ್ಲಿ ನಿಶ್ಚಿತಜ್ಞಾನವಿದ್ದ ವಿಭೀಷಣನು ತನ್ನ ರಾಜನಾದ ರಾವಣನಿಗೆ ಹಿತವನ್ನೇ ಬಯಸತಕ್ಕವನಾಗಿ ದ್ದನು. ಪ್ರಹಸ್ತನ ಹೇಳಿಕೆಯು ಘಾತುಕವೆಂಬುದನ್ನರಿತು, ಆತನು ''ಪ್ರಹಸ್ತ ನಮ್ಮ ಮಹಾರಾಜನೂ ಮಹೋದರ ಕುಂಭಕರ್ಣರೂ ರಾಮನನ್ನು ಗೆಲ್ಲಬಹು ದೆಂದು ಲಘುವಾಗಿ ಯಾವ ಮಾತನ್ನಾಡಿದರೋ ಅದು ಕಾರ್ಯಸಾಧ್ಯವಲ್ಲ.

ಬ್ರವೀಥ ರಾಮಂ ಪ್ರತಿ ತನ್ನ ಶಕ್ಯಂ
ಯಥಾ ಗತಿಃ ಸ್ವರ್ಗಮಧರ್ಮಬುದ್ಧೇಃ ॥ ೧೦

ವಧಸ್ತು ರಾಮಸ್ಯ ಮಯಾ ತ್ವಯಾ ವಾ
ಪ್ರಹಸ್ತ ಸರ್ವೈರಪಿ ರಾಕ್ಷಸೈರ್ವಾ ।
ಕಥಂ ಭವೇದರ್ಥವಿಶಾರದಸ್ಯ
ಮಹಾರ್ಣವಂ ತರ್ತುಮಿವಾಪ್ಲವಸ್ಯ ॥ ೧೧

ಧರ್ಮಪ್ರಧಾನಸ್ಯ ಮಹಾರಥಸ್ಯ
ಇಕ್ಷ್ವಾಕುವಂಶಪ್ರಭವಸ್ಯ ರಾಜ್ಞಃ ।
ಪುರೋಽಸ್ಯ ದೇವಾಶ್ಚ ತಥಾವಿಧಸ್ಯ
ಕೃತ್ಯೇಷು ಶಕ್ತಸ್ಯ ಭವಂತಿ ಮೂಢಾಃ ॥ ೧೨

ತೀಕ್ಷ್ಣಾ ನ ತಾವತ್ತವ ಕಂಕಪತ್ರಾ
ದುರಾಸದಾ ರಾಘವವಿಪ್ರಮುಕ್ತಾಃ ।
ಭಿತ್ತ್ವಾ ಶರೀರಂ ಪ್ರವಿಶಂತಿ ಬಾಣಾಃ
ಪ್ರಹಸ್ತ ತೇನೈವ ವಿಕತ್ಥಸೇ ತ್ವಮ್ ॥ ೧೩

---

ಧರ್ಮದಲ್ಲಿ ಶ್ರದ್ಧೆಯಿಲ್ಲದವನಿಗೆ ಸ್ವರ್ಗವನ್ನು ಪಡೆಯುವುದು ಹೇಗೆ ಸಾಧ್ಯ ವಿಲ್ಲವೋ ಹಾಗೆಯೇ ಇದು (೯–೧೦) ನನಗಾಗಲಿ ನಿನಗಾಗಲಿ ಸಕಲ ರಾಕ್ಷಸರಿಗೇ ಆಗಲಿ, ಕಾರ್ಯದಕ್ಷನಾದ ರಾಮನನ್ನು ಸಂಹರಿಸುವುದು ಶಕ್ಯ ವೆಂದು ತಿಳಿದೆಯಾ? ದೋಣಿಯೇ ಇಲ್ಲದವನು ಮಹಾಸಾಗರವನ್ನು ದಾಟ ಬಲ್ಲನೆ? (೧೧). ಇಕ್ಷ್ವಾಕುವಂಶದ ರಾಜಪುತ್ರನಾದ ರಾಮನು ಸಾಮಾನ್ಯ ನಲ್ಲ, ಧರ್ಮಶೀಲನಾದ ಮಹಾರಥನವನು. ಅಷ್ಟು ಸುಲಭವಾಗಿ ಖರ ದೂಷಣಾದಿಗಳನ್ನು ವಧಿಸಿದವನೂ ಕಾರ್ಯಸಮರ್ಥನೂ ಆದ ಆತನೆದುರಿಗೆ ದೇವತೆಗಳೂ ಸಹ ದಿಙ್ಮೂಢರಾಗುತ್ತಾರೆ (೧೨). ದುರ್ಧರ್ಷಗಳೂ ನಿಶಿತ ಗಳೂ ಆದ ರಾಘವನ ಗರಿಗಟ್ಟಿದ ಶರಗಳೂ, ಪ್ರಹಸ್ತ, ನಿನ್ನ ದೇಹವನ್ನು ಸೀಳಿ ನುಗ್ಗಿಲ್ಲ, ಆದ್ದರಿಂದ ಈ ಬಗೆಯಲ್ಲಿ ಜಂಭ ಹೊಡೆಯುತ್ತಿದ್ದೀಯೆ! ಶಕ್ರತುಲ್ಯಪರಾಕ್ರಮಿಯಾದ ರಾಘವನ ಆಕ್ರಮಣವನ್ನು ಸಹಿಸಿಕೊಳ್ಳಲು

ನ ರಾವಣೋ ನಾತಿಬಲಸ್ತ್ರಿಶೀರ್ಷೋ
　　ನ ಕುಂಭಕರ್ಣೋಽಸ್ಯ ಸುತೋ ನಿಕುಂಭಃ ।
ನ ಚೇಂದ್ರಜಿದ್ದಾಶರಥಿಂ ಪ್ರಸೋಢುಂ
　　ತ್ವಂ ವಾ ರಣೇ ಶಕ್ರಸಮಂ ಸಮರ್ಥಾಃ ॥ ೧೪

ದೇವಾಂತಕೋ ವಾಪಿ ನರಾಂತಕೋ ವಾ
　　ತಥಾತಿಕಾಯೋಽತಿರಥೋ ಮಹಾತ್ಮಾ ।
ಅಕಂಪನಶ್ಚಾದ್ರಿಸಮಾನಸಾರಃ
　　ಸ್ಥಾತುಂ ನ ಶಕ್ತಾ ಯುಧಿ ರಾಘವಸ್ಯ ॥ ೧೫

ಅಯಂ ಹಿ ರಾಜಾ ವ್ಯಸನಾಭಿಭೂತೋ
　　ಮಿತ್ರೈರಮಿತ್ರಪ್ರತಿಮೈರ್ಭವದ್ಭಿಃ ।
ಅನ್ವಾಸ್ಯತೇ ರಾಕ್ಷಸನಾಶನಾಯ
　　ತೀಕ್ಷ್ಣಃ ಪ್ರಕೃತ್ಯಾ ಹ್ಯಸಮೀಕ್ಷ್ಯಕಾರೀ ॥ ೧೬

ಅನಂತಭೋಗೇನ ಸಹಸ್ರಮೂರ್ಧ್ನಾ
　　ನಾಗೇನ ಭೀಮೇನ ಮಹಾಬಲೇನ ।

---

ಬಲಾಢ್ಯನಾದ ರಾವಣನಿಗೂ ಆಗದು, ತ್ರಿಶಿರನಿಗೂ* ಆಗದು. ಕುಂಭಕರ್ಣನಾಗಲಿ ಅವನ ಮಗನಾದ ನಿಕುಂಭನಾಗಲಿ ರಾಮನನ್ನೆದುರಿಸಲಾರರು. ಇಂದ್ರಜಿತುವಿಗೂ ಆಗದ ಕಾರ್ಯವಿದು. ನಿನ್ನಿಂದಲೂ ಶಕ್ಯವಿಲ್ಲ (೧೩-೧೪). ದೇವಾಂತಕ ನರಾಂತಕರೂ ಅತಿರಥನಾದ ಅತಿಕಾಯನೂ ಪರ್ವತದಂತೆ ಗಟ್ಟಿಗನಾದ ಅಕಂಪನನೂ ಸಹ ರಾಮನೆದುರಿಗೆ ಕಾಳಗ ಹೂಡಲು ಸಮರ್ಥರಲ್ಲ. ನಮ್ಮ ಮಹಾರಾಜನಾದರೋ ಕಾಮವ್ಯಸನಕ್ಕೆ ಬಲಿಯಾಗಿ ವಿವೇಕವಿಲ್ಲದೆ ವರ್ತಿಸುತ್ತಿದ್ದಾನೆ. ಸಹಜವಾಗಹಿಯೇ ಕಠೋರ ಸ್ವಭಾವದವನಾದ ಈತನನ್ನು ಶತ್ರುಗಳಾದ ನಿಮ್ಮಂಥ ಮಿತ್ರರು ಹುರಿದುಂಬಿಸುತ್ತಿದ್ದೀರಿ! ಇದೆಲ್ಲವೂ ಸಮಸ್ತರಾಕ್ಷಸರ ನಾಶಕ್ಕಾಗಿಯೇ ಸರಿ! (೧೫-೧೬). ಎಲೈ ರಾಕ್ಷಸರೆ, ಅತಿದೀರ್ಘಶರೀರವುಳ್ಳ ಸಾವಿರ ಹೆಡೆಯ ಭೀಕರಸರ್ಪವು

---

* ಈ ತ್ರಿಶಿರನು ಅರಣ್ಯ ಕಾಂಡದಲ್ಲಿ ಶ್ರೀರಾಮನಿಂದ ಹತನಾದವನಲ್ಲ. ಅದೇ ಹೆಸರಿನ ಬೇರೊಬ್ಬ ರಾಕ್ಷಸ.

ಬಲಾತ್ಪರಿಕ್ಷಿಪ್ತಮಿಮಂ ಭವಂತೋ
ರಾಜಾನಮುತ್ಕ್ಷಿಪ್ಯ ವಿಮೋಚಯಂತು ॥ ೧೭

ಯಾವದ್ಧಿ ಕೇಶಗ್ರಹಣಾತ್ ಸುಹೃದ್ಭಿಃ
ಸಮೇತ್ಯ ಸರ್ವೈಃ ಪರಿಪೂರ್ಣಕಾಮೈಃ ।
ನಿಗೃಹ್ಯ ರಾಜಾ ಪರಿರಕ್ಷಿತವ್ಯೋ
ಭೂತೈರ್ಯಥಾ ಭೀಮಬಲೈರ್ಗೃಹೀತಃ ॥ ೧೮

ಸುವಾರಿಣಾ ರಾಘವಸಾಗರೇಣ
ಪ್ರಚ್ಛಾದ್ಯಮಾನಸ್ತರಸಾ ಭವದ್ಭಿಃ ।
ಯುಕ್ತಸ್ತ್ವಯಂ ತಾರಯಿತುಂ ಸಮೇತ್ಯ
ಕಾಕುತ್ಸ್ಥಪಾತಾಲಮುಖೇ ಪತನ್ ಸಃ ॥ ೧೯

ಇದಂ ಪುರಸ್ಯಾಸ್ಯ ಸರಾಕ್ಷಸಸ್ಯ
ರಾಜ್ಞಶ್ಚ ಪಥ್ಯಂ ಸಸುಹೃಜ್ಜನಸ್ಯ ।
ಸಮ್ಯಗ್ಘಿ ವಾಕ್ಯಂ ಸತತಂ ಬ್ರವೀಮಿ
ನರೇಂದ್ರಪುತ್ರಾಯ ದದಾಮ ಪತ್ನೀಮ್ ॥ ೨೦

---

ನಿಮ್ಮ ರಾಜನನ್ನು ಸುತ್ತಿಬಿಗಿಯುತ್ತಿದೆ ! ಅದು ಅತ್ಯಂತ ಬಲಶಾಲಿಯಾದ ಸರ್ಪ! ನಿಮ್ಮ ರಾಜನನ್ನು ಅದರಿಂದ ತಪ್ಪಿಸಿ ಬಿಡಿಸಿಕೊಳ್ಳಿರಿ ! (೧೭). ನೀವು ನಿಮ್ಮ ಪ್ರಭುವಿನಿಂದ ಇಷ್ಟಾರ್ಥಗಳೆಲ್ಲವನ್ನೂ ಪಡೆದು ನೆಮ್ಮದಿಯಿಂದ ಬಾಳುತ್ತಿದ್ದೀರಿ. ಆತನಿಗೆ ಮಿತ್ರರಾಗಿದ್ದೀರಿ. ಬಲಶಾಲಿಗಳಾದ ಭೂತಗಳು ಆತನನ್ನು ಈಗ ಹಿಡಿದೆಳೆಯುತ್ತಿವೆ! ನೀವೆಲ್ಲರೂ ಸೇರಿ ನಿಮ್ಮ ರಾಜನನ್ನು ಉಳಿಸಿಕೊಳ್ಳಿರಿ. ಜುಟ್ಟನ್ನು ಹಿಡಿದೆಳೆದು ಬದುಕಿಸಿಕೊಳ್ಳಿರಿ! (೧೮). ರಾಮನೆಂಬ ಮಹಾಸಾಗರವು ವಾನರಸೇನೆಯೆಂಬ* ಜಲರಾಶಿಯಿಂದ ರಾವಣನನ್ನು ಸೆಳೆದು ಮುಳುಗಿಸುತ್ತಿದೆ. ಈತನು ಸದ್ಯದಲ್ಲಿಯೇ ಕಾಕುತ್ಸ್ಥನೆಂಬ ಪಾತಾಳದ ಬಾಯಲ್ಲಿ ಬಿದ್ದು ಹೋಗುವನು. ನೀವೆಲ್ಲರೂ ಸೇರಿ ಇವನನ್ನು ರಕ್ಷಿಸುವುದು ನಿಮ್ಮ ಕರ್ತವ್ಯವಾಗಿದೆ (೧೯). ಎಲೈ ರಾಕ್ಷಸರೆ, ಈ ಲಂಕಾನಗರಿಗೂ ನಿಖಿಲರಾಕ್ಷಸರಿಗೂ ನಮ್ಮ ಮಹಾರಾಜನಿಗೂ ಅವನ ಬಂಧುಬಳಗ

---

* ಸುವಾರಿಣಾ = ವಾರವೆಂದರೆ ಸೇನೆ. ಉತ್ತಮವಾದ ವಾರವುಳ್ಳವನು ಸುವಾರಿ.

ಪರಸ್ಯ ವೀರ್ಯಂ ಸ್ವಬಲಂ ಚ ಬುದ್ಧ್ವಾ
ಸ್ಥಾನಂ ಕ್ಷಯಂ ಚೈವ ತಥೈವ ವೃದ್ಧಿಮ್ ।
ತಥಾ ಸ್ವಪಕ್ಷೇಽಪ್ಯನುಮೃಶ್ಯ ಬುದ್ಧ್ಯಾ
ವದೇತ್ಕ್ಷಮಂ ಸ್ವಾಮಿಹಿತಂ ಚ ಮಂತ್ರೀ ॥ ೨೧

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುರ್ದಶಃ ಸರ್ಗಃ

---

ಗಳಿಗೂ ಪಥ್ಯವಾದ ಮಾತನ್ನು ಹೇಳುತ್ತಿದ್ದೇನೆ! ಅದನ್ನೇ ಮತ್ತೆಮತ್ತೆ ಒತ್ತಿಹೇಳುತ್ತೇನೆ: ಶ್ರೀರಾಮನಿಗೆ ಅವನ ಪತ್ನಿಯನ್ನು ಒಪ್ಪಿಸಿಬಿಡೋಣ (೨೦). ಮಂತ್ರಿಯಾದವನು ಒಡೆಯನಿಗೆ ಸಲಹೆಯನ್ನು ಕೊಡುವಾಗ ಪರಪಕ್ಷದ ಮತ್ತು ತಮ್ಮ ಪಕ್ಷದ ಬಲಾಬಲಗಳನ್ನು ಪರೀಕ್ಷಿಸಿಕೊಳ್ಳಬೇಕು. ಉಭಯಪಕ್ಷದಲ್ಲಿರುವ ಸಂಪತ್ತುಗಳ ಸಾಮ್ಯ, ಕ್ಷಯ, ವೃದ್ಧಿಗಳನ್ನು ಪರಿಶೀಲಿಸಬೇಕು. ಇವೆಲ್ಲವನ್ನೂ ಸರಿಯಾಗಿ ಆಲೋಚಿಸಿ ಮಂತ್ರಿಯು ತನ್ನ ಸ್ವಾಮಿಗೆ ಹಿತಕರವೂ ಯೋಗ್ಯವೂ ಆದ ಸಲಹೆಯನ್ನೀಯಬೇಕು'' ಎಂದು ಹೇಳಿದನು (೨೧).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಹದಿನಾಲ್ಕನೆಯ ಸರ್ಗ

---

## ಪಂಚದಶಃ ಸರ್ಗಃ

### ಇಂದ್ರಜಿದ್ವಿಭೀಷಣವಿವಾದಃ

ಬೃಹಸ್ಪತೇಸ್ತುಲ್ಯಮತೇರ್ವಚಸ್ತ-
ನ್ನಿಶಮ್ಯ ಯತ್ನೇನ ವಿಭೀಷಣಸ್ಯ ।
ತತೋ ಮಹಾತ್ಮಾ ವಚನಂ ಬಭಾಷೇ
ತತ್ರೇಂದ್ರಜಿನ್ನೈರ್ಋತಯೋಧಮುಖ್ಯಃ ॥ ೧

ಕಿಂ ನಾಮ ತೇ ತಾತಕನಿಷ್ಠ ವಾಕ್ಯ-
ಮನರ್ಥಕಂ ಚೈವ ಸುಭೀತವಚ್ಚ ।
ಅಸ್ಮಿನ್ ಕುಲೇ ಯೋಽಪಿ ಭವೇನ್ನ ಜಾತಃ
ಸೋಽಪೀದೃಶಂ ನೈವ ವದೇನ್ನ ಕುರ್ಯಾತ್ ॥ ೨

ಸತ್ತ್ವೇನ ವೀರ್ಯೇಣ ಪರಾಕ್ರಮೇಣ
ಶೌರ್ಯೇಣ ಧೈರ್ಯೇಣ ಚ ತೇಜಸಾ ಚ ।

### ಸರ್ಗ ೧೫

ಇಂದ್ರಜಿತು ವಿಭೀಷಣರ ವಿವಾದ. ಶ್ರೀರಾಮನನ್ನು ಸಂತೈಸುವುದೇ ಯುಕ್ತವೆಂದು ವಿಭೀಷಣನ ಹೇಳಿಕೆ.

ಬೃಹಸ್ಪತಿಯಂತೆ ಮತಿವಿಶಾರದನಾದ ವಿಭೀಷಣನ ನುಡಿಯನ್ನು ಒಲ್ಲದ ಮನಸ್ಸಿನಿಂದಲೇ ಇಂದ್ರಜಿತುವು ಕೇಳುತ್ತಲಿದ್ದನು. ಅನಂತರ ರಾಕ್ಷಸ ಯೋಧವೀರನೂ ಧೀರನೂ ಆದ ಆ ಇಂದ್ರಜಿತುವು ಹೀಗೆಂದನು: ''ಚಿಕ್ಕಪ್ಪ, ನೀನು ಹೇಳುವುದೇನು? ನಿರರ್ಥಕವಾದ ಹೇಡಿತನದ ಮಾತಿದು! ಈ ಪೌಲಸ್ತ್ಯವಂಶವಲ್ಲಿ ಜನಿಸದಿರುವ ಇನ್ನೊಬ್ಬನೂ ಸಹ ಇಂಥ ಮಾತನ್ನು ಆಡಲಾರ. ಇನ್ನು ಮಾಡುವುದು ದೂರ ಉಳಿಯಿತು! (1–2). ಈ ಮಹಾ ವಂಶದಲ್ಲಿ ಬಲ *– ವೀರ್ಯ – ಪರಾಕ್ರಮಗಳಾಗಲಿ, ಶೌರ್ಯ – ಧೈರ್ಯ –

---

* ಬಲ = ದೇಹಬಲ, ವೀರ್ಯ = ಅಸ್ತ್ರಾದಿಗಳಿಂದ ಸಂಪಾದಿಸಿರುವ ಶಕ್ತಿ ಪರಾಕ್ರಮ = ವೈರಿಗಳನ್ನು ಆಕ್ರಮಿಸುವ ಸಾಮರ್ಥ್ಯ, ಶೌರ್ಯ = ಹೋರಾಡಬಲ್ಲ ಗಡಸುತನ.

ಏಕಃ ಕುಲೇಽಸ್ಮಿನ್ ಪುರುಷೋ ವಿಮುಕ್ತೋ
ವಿಭೀಷಣಸ್ತಾತಕನಿಷ್ಠ ಏಷಃ ॥ ೩

ಕಿಂ ನಾಮ ತೌ ರಾಕ್ಷಸ ರಾಜಪುತ್ರಾ –
ವಸ್ಮಾಕಮೇಕೇನ ಹಿ ರಾಕ್ಷಸೇನ ।
ಸುಪ್ರಾಕೃತೇನಾಪಿ ರಣೇ ನಿಹಂತುಂ
ಶಕ್ಯೌ ಕುತೋ ಭೀಷಯಸೇ ಸ್ಮ ಭೀರೋ ॥ ೪

ತ್ರಿಲೋಕನಾಥೋ ನನು ದೇವರಾಜಃ
ಶಕ್ರೋ ಮಯಾ ಭೂಮಿತಲೇ ನಿವಿಷ್ಟಃ ।
ಭಯಾರ್ದಿತಾಶ್ಚಾಪಿ ದಿಶಃ ಪ್ರಪನ್ನಾಃ
ಸರ್ವೇ ತಥಾ ದೇವಗಣಾಃ ಸಮಗ್ರಾಃ ॥ ೫

ಐರಾವತೋ ವಿಸ್ವರಮುನ್ನದನ್ ಸ
ನಿಪಾತಿತೋ ಭೂಮಿತಲೇ ಮಯಾ ತು ।
ವಿಕೃಷ್ಯ ದಂತೌ ತು ಮಯಾ ಪ್ರಸಹ್ಯ
ವಿತ್ರಾಸಿತಾ ದೇವಗಣಾಃ ಸಮಗ್ರಾಃ ॥ ೬

ಸೋಽಹಂ ಸುರಾಣಾಮಪಿ ದರ್ಪಹಂತಾ
ದೈತ್ಯೋತ್ತಮಾನಾಮಪಿ ಶೋಕದಾತಾ ।

---

ಆತ್ಮಾಭಿಮಾನಗಳಾಗಲಿ ಇಲ್ಲದಿರುವ ಒಬ್ಬ ವ್ಯಕ್ತಿಯೆಂದರೆ ಚಿಕ್ಕಪ್ಪನೆನಿಸಿ ಕೊಂಡಿರುವ ಈ ವಿಭೀಷಣನೊಬ್ಬನೇ! (೩). ಎಲಾ ಹೇಡಿ! ನಮ್ಮನ್ನು ಏಕೆ ಹೆದರಿಸುತ್ತೀಯೆ? ನಮ್ಮಲ್ಲಿರುವ ಒಬ್ಬ ಸಾಮಾನ್ಯರಾಕ್ಷಸನೂ ಆ ರಾಜ ಪುತ್ರರನ್ನು ರಣರಂಗದಲ್ಲಿ ಕೊಂದೆಸೆಯಲಾರನೆ ? ತ್ರಿಲೋಕನಾಥನೂ ದೇವರಾಜನೂ ಆದ ಇಂದ್ರನನ್ನು ನಾನು ದರದರನೆ ಭೂಮಿಗೆ ಎಳೆತಂದು ಸೆರೆಮನೆಗೆ ದಬ್ಬಲಿಲ್ಲವೆ? ಸಮಸ್ತದೇವತೆಗಳೂ ತರತರನೆ ನಡುಗುತ್ತ ದಿಕ್ಕು ದಿಕ್ಕುಗಳಿಗೆ ಓಡಿಹೋಗಲಿಲ್ಲವೆ? (೪-೫). ನಾನು ಐರಾವತವನ್ನು ಬಡಿದಾಗ ಅದು ಕಿರ್ರನೆ ಕಿರಿಚುತ್ತ ನೆಲದಮೇಲೆ ಉರುಳಿಬಿತ್ತು ! ಅದರ ಕೋರೆಹಲ್ಲುಗಳನ್ನೇ ಕಿತ್ತು ಬೀಸಿ ಸಕಲದೇವತೆಗಳನ್ನೂ ಹೆದರಿಸಿ ಓಡಿಸಿ ದ್ದೇನೆ! ದೇವತೆಗಳ ದರ್ಪವನ್ನು ಮುರಿದವನು ನಾನು. ಬಹುಮಂದಿ

ಕಥಂ ನರೇಂದ್ರಾತ್ಮಜಯೋರ್ನ ಶಕ್ತೋ
ಮನುಷ್ಯಯೋಃ ಪ್ರಾಕೃತಯೋಃ ಸುವೀರ್ಯಃ ॥ ೭

ಅಥೇಂದ್ರಕಲ್ಪಸ್ಯ ದುರಾಸದಸ್ಯ
ಮಹೌಜಸಸ್ತದ್ವಚನಂ ನಿಶಮ್ಯ ।
ತತೋ ಮಹಾರ್ಥಂ ವಚನಂ ಬಭಾಷೇ
ವಿಭೀಷಣಃ ಶಸ್ತ್ರಭೃತಾಂ ವರಿಷ್ಠಃ ॥ ೮

ನ ತಾತ ಮಂತ್ರೇ ತವ ನಿಶ್ಚಯೋಽಸ್ತಿ
ಬಾಲಸ್ತ್ವಮದ್ಯಾಪ್ಯವಿಪಕ್ವಬುದ್ಧಿಃ ।
ತಸ್ಮಾತ್ತ್ವಯಾ ಹ್ಯಾತ್ಮವಿನಾಶನಾಯ
ವಚೋಽರ್ಥಹೀನಂ ಬಹು ವಿಪ್ರಲಪ್ತಮ್ ॥ ೯

ಪುತ್ರ ಪ್ರವಾದೇನ ತು ರಾವಣಸ್ಯ
ತ್ವಮಿಂದ್ರಜಿನ್ಮಿತ್ರಮುಖೋಽಸಿ ಶತ್ರುಃ ।
ಯಸ್ಯೇದೃಶಂ ರಾಘವತೋ ವಿನಾಶಂ
ನಿಶಮ್ಯ ಮೋಹಾದನುಮನ್ಯಸೇ ತ್ವಮ್ ॥ ೧೦

---

ದೈತ್ಯವೀರರನ್ನು ಗೆದ್ದು ಅವರನ್ನು ಅಳಿಸಿದವನು ನಾನು ! ಇಂಥ ವೀರಾದಿ ವೀರನಾದ ನಾನು ಕೇವಲ ಮನುಷ್ಯ ಸಾಮಾನ್ಯರಾದ ಆ ಇಬ್ಬರು ರಾಜಪುತ್ರ ರನ್ನು ವಧಿಸಲಾರೆನೆ!'' ಎಂದು ಅಬ್ಬರಿಸಿದನು (೬–೭). ಹೀಗೆ ಇಂದ್ರ ಸಮಾನನೂ ದುರ್ಧರ್ಷನೂ ಮಹಾಪರಾಕ್ರಮಿಯೂ ಆದ ಇಂದ್ರಜಿತುವಿನ ನುಡಿಯನ್ನು ಕೇಳಿ, ಶಸ್ತ್ರಧಾರಿಗಳಲ್ಲಿ ಅಗ್ರಗಣ್ಯನೆನಿಸಿದ ವಿಭೀಷಣನು ಅರ್ಥಗರ್ಭಿತವಾಗಿ ಮಾತಾಡಿದನು : ''ಅಪ್ಪಾ – ಮೇಘನಾದ, ನಿನಗೆ ಮಂತ್ರಾಲೋಚನೆಗೆ ಬೇಕಾದ ವಿವೇಚನಾಸಾಮರ್ಥ್ಯವಿಲ್ಲ. ಇನ್ನೂ ನೀನು ಹುಡುಗ ; ಬುದ್ಧಿ ಬೆಳೆದಿಲ್ಲ! ಅರ್ಥಶೂನ್ಯವಾಗಿ ಏನೇನೋ ಬಹಳ ಹಲುಬಿ ದ್ದೀಯೆ. ಇದೆಲ್ಲವೂ ಆತ್ಮಘಾತುಕವಾದದು (೮–೯). ಎಲಾ ಇಂದ್ರಜಿತು, ನೀನು ರಾವಣನಿಗೆ ಪುತ್ರನೆಂಬ ಹೆಸರಿನ ಶತ್ರುವಾಗಿದ್ದೀಯೆ! ಮಿತ್ರನಂತೆ ಮಾತಾಡುತ್ತೀಯೆ. ರಾಘವನಿಂದ ಈ ರೀತಿಯಲ್ಲಿ ಸರ್ವನಾಶವಾಗುತ್ತದೆ ಯೆಂದು ಕೇಳಿ ತಿಳಿದರೂ ಅವಿವೇಕದಿಂದ ಅದಕ್ಕೆ ಒಪ್ಪಿಗೆ ಕೊಡುತ್ತಿರುವೆ

ತ್ವಮೇವ ವಧ್ಯಶ್ಚ ಸುದುರ್ಮತಿಶ್ಚ
ಸಚಾಪಿ ವಧ್ಯೋ ಯ ಇಹಾನಯತ್ತ್ವಾಮ್ ।
ಬಾಲಂ ದೃಢಂ ಸಾಹಸಿಕಂ ಚ ಯೋಽದ್ಯ
ಪ್ರಾವೇಶಯನ್ಮಂತ್ರಕೃತಾಂ ಸಮೀಪಮ್ ॥ ೧೧

ಮೂಢೋಽಪ್ರಗಲ್ಭೋಽವಿನಯೋಪಪನ್ನ –
ಸ್ತೀಕ್ಷ್ಣ ಸ್ವಭಾವೋಽಲ್ಪ ಮತಿರ್ದುರಾತ್ಮಾ ।
ಮೂರ್ಖಸ್ತ್ವಮತ್ಯಂ ತಸುದುರ್ಮತಿಶ್ಚ
ತ್ವಮಿಂದ್ರಜಿದ್ಬಾಲತಯಾ ಬ್ರವೀಷಿ ॥ ೧೨

ಕೋ ಬ್ರಹ್ಮದಂಡಪ್ರತಿಮಪ್ರಕಾಶಾ–
ನರ್ಚಿಷ್ಮತಃ ಕಾಲನಿಕಾಶರೂಪಾನ್ ।
ಸಹೇತ ಬಾಣಾನ್ ಯಮದಂಡಕಲ್ಪಾನ್
ಸಮೀಕ್ಷ್ಯ ಮುಕ್ತಾನ್ ಯುಧಿ ರಾಘವೇಣ ॥ ೧೩

ಯಲ್ಲ! (೧೦) ಈಗ ನಿನ್ನನ್ನೇ ದಂಡಿಸಬೇಕು. ಈ ಮಂತ್ರಾಲೋಚನಾ ಸಭೆಗೆ ಯಾವನು ನಿನ್ನನ್ನು ಕರೆತಂದನೋ ಆ ದುರ್ಬುದ್ಧಿಯನ್ನು ಶಿಕ್ಷೆಗೆ ಒಳಪಡಿಸಬೇಕು! ಅವಿವೇಕಿಯೂ ಹಠಮಾರಿಯೂ ದುಡುಕಿನವನೂ ಆದ ನಿನ್ನನ್ನು ಮಂತ್ರಾಲೋಚನೆ ಹೇಳತಕ್ಕವರ ಬಳಿಗೆ ಕರೆತಂದವನನ್ನು ಮರಣ ಶಿಕ್ಷೆಗೆ ಗುರಿಪಡಿಸಬೇಕು! (೧೧). ಎಲಾ ಇಂದ್ರಜಿತು, ನೀನು ಮೂಢ; ವಿವೇಚನಾಸಾಮರ್ಥ್ಯವು ನಿನ್ನಲ್ಲಿಲ್ಲ. ಅಲ್ಲದೆ ನೀನು ಉದ್ಧತನೂ ಕ್ರೂರ ಸ್ವಭಾವದವನೂ ಆಗಿದ್ದೀಯೆ ಅಲ್ಪಬುದ್ಧಿಯಾದ ದುರಾತ್ಮ ನೀನು. ಹಠಮಾರಿಯಾದ ದುರುಳ ನೀನು. ಹುಡುಗಾಟಿಕೆಯಿಂದ ಮಾತನ್ನಾಡುತ್ತಿದ್ದೀಯೆ (೧೨). ರಣರಂಗದಲ್ಲಿ ರಾಘವನು ಗುರಿಯಿಟ್ಟು ತೂರುವ ಸರಳುಗಳನ್ನೆದುರಿಸುವ ಧೀರನಾರು? ಬ್ರಹ್ಮ ದಂಡದಂತೆ * ತೊಳತೊಳಗುತ್ತ ಕಾಲಾಗ್ನಿಯಂತೆ ಕಿಡಿಗೆದರುತ್ತ ಯಮದಂಡದಂತೆ ಭೋರ್ಗರೆಯುತ್ತ ಬರುವ

* ಬ್ರಹ್ಮದಂಡ = ಬ್ರಹ್ಮತೇಜಸ್ಸಿನಿಂದ ಅಭಿಮಂತ್ರಿತವಾದ ದಂಡ; ಸಂಹಾರ ಕಾಲದಲ್ಲಿ ಬ್ರಹ್ಮನು ಕೈಯಲ್ಲಿ ಹಿಡಿದಿರುವ ಶಕ್ತಿ; ಪ್ರಳಯಕಾಲದಲ್ಲಿ ಉದ್ಭವಿಸುವ ಧೂಮಕೇತು; ಬ್ರಹ್ಮಶಾಪ.

ಧನಾನಿ ರತ್ನಾನಿ ವಿಭೂಷಣಾನಿ
ವಾಸಾಂಸಿ ದಿವ್ಯಾನಿ ಮಣೀಂಶ್ಚ ಚಿತ್ರಾನ್ ।
ಸೀತಾಂ ಚ ರಾಮಾಯ ನಿವೇದ್ಯ ದೇವೀಂ
ವಸೇಮ ರಾಜನ್ನಿಹ ವೀತಶೋಕಾಃ ॥ ೧೪

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚದಶಃ ಸರ್ಗಃ

---

ಅವನ ಬಾಣಗಳ ಹೊಡೆತವನ್ನು ತಡೆದುಕೊಳ್ಳುವ ವೀರನಾರು ? (೧೩). ಆದ್ದರಿಂದ, ಮಹಾರಾಜ – ರಾಕ್ಷಸೇಶ್ವರ, ನಮ್ಮಲ್ಲಿರುವ ಧನ, ಶ್ರೇಷ್ಠ ವಸ್ತುಗಳು, ಒಡವೆಗಳು, ದಿವ್ಯವಸ್ತ್ರಗಳು, ವಿವಿಧವರ್ಣದ ರತ್ನಗಳು – ಮೊದಲಾದುವನ್ನು ರಾಮನಿಗೆ ಕೊಟ್ಟು ಅವನನ್ನು ಸಂತೃಸೋಣ. ಸೀತಾದೇವಿಯನ್ನು ಅವನಿಗೆ ಅರ್ಪಿಸಿ ನೆಮ್ಮದಿಯಿಂದ ಬಾಳೋಣ'' ಎಂದು ಹೇಳಿದನು (೧೪).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಹದಿನೈದನೆಯ ಸರ್ಗ

---

## ಷೋಡಶಃ ಸರ್ಗಃ

### ವಿಭೀಷಣಾಕ್ರೋಶಃ

ಸುನಿವಿಷ್ಟಂ ಹಿತಂ ವಾಕ್ಯಮುಕ್ತವಂತಂ ವಿಭೀಷಣಮ್ ।
ಅಬ್ರವೀತ್ಪರುಷಂ ವಾಕ್ಯಂ ರಾವಣಃ ಕಾಲಚೋದಿತಃ ॥ ೧

ವಸೇತ್ಸಹ ಸಪತ್ನೇನ ಕ್ರುದ್ಧೇನಾಶೀವಿಷೇಣ ವಾ ।
ನ ತು ಮಿತ್ರಪ್ರವಾದೇನ ಸಂವಸೇಚ್ಛತ್ರುಸೇವಿನಾ ॥ ೨

ಜಾನಾಮಿ ಶೀಲಂ ಜ್ಞಾತೀನಾಂ ಸರ್ವಲೋಕೇಷು ರಾಕ್ಷಸ ।
ಹೃಷ್ಯಂತಿ ವ್ಯಸನೇಷ್ವೇತೇ ಜ್ಞಾತೀನಾಂ ಜ್ಞಾತಯಃ ಸದಾ ॥ ೩

ಪ್ರಧಾನಂ ಸಾಧಕಂ ವೈದ್ಯಂ ಧರ್ಮಶೀಲಂ ಚ ರಾಕ್ಷಸ ।
ಜ್ಞಾತಯೋ ಹ್ಯವಮನ್ಯಂತೇ ಶೂರಂ ಪರಿಭವಂತಿ ಚ ॥ ೪

### ಸರ್ಗ ೧೬

ವಿಭೀಷಣನಿಗ ರಾವಣನ ಪರುಷೋಕ್ತಿ, ಅದನ್ನು ಸಹಿಸಲಾರದೆ
ವಿಭೀಷಣನು ರಾವಣನನ್ನು ತ್ಯಜಿಸಿ ತೆರಳುವುದು.

ಹೀಗೆ ವಿಭೀಷಣನು ಮನದಟ್ಟುವಂತೆ ಮಾತನಾಡಿ ಹಿತಕರವಾದ ಸಲಹೆಯನ್ನಿತ್ತರೂ ರಾವಣನು ಅವನಿಗೆ ಕಠೋರವಾದ ಮಾತನ್ನೇ ಆಡಿದನು. ಮೃತ್ಯುವು ಆ ರೀತಿಯಲ್ಲಿ ಅವನನ್ನು ಪ್ರೇರಿಸುತ್ತಿತ್ತು. ರಾವಣನು ವಿಭೀಷಣನ ಕಡೆಗೆ ತಿರುಗಿ ''ಎಲಾ ರಾಕ್ಷಸ, ಶತ್ರುವಿನೊಡನಾದರೂ ಬಾಳಬಹುದು. ಕೆರಳಿದ ಸರ್ಪದೊಡನಾದರೂ ಇರಬಹುದು. ಆದರೆ ಶತ್ರುಪಕ್ಷವನ್ನು ವಹಿಸಿ ಮಿತ್ರನೆಂದು ನಟಿಸುವ ಪುರುಷನೊಡನೆ ಬಾಳುವುದು ಕಷ್ಟ (೧–೨). ಎಲ್ಲೆಡೆಯೂ ದಾಯಾದಿಗಳ ಸ್ವಭಾವ ಹೇಗಿರುವುದೆಂಬುದು ನನಗೆ ಗೊತ್ತಿದೆ. ತಮ್ಮವರಿಗೆ ಕಷ್ಟಗಳು ಬಂದರೆ ದಾಯಾದಿಗಳು ಸಂತೋಷಪಡುತ್ತಾರೆ. ತಮ್ಮ ಬಂಧುವೊಬ್ಬನು ಪ್ರಖ್ಯಾತನೂ ಕಾರ್ಯಸಮರ್ಥನೂ ವಿದ್ವಾಂಸನೂ ಧರ್ಮಶೀಲನೂ ಆಗಿದ್ದರೆ, ದಾಯಾದಿಗಳು ಅವನನ್ನು ಉಪೇಕ್ಷೆಯಿಂದ ಕಾಣುತ್ತಾರೆ. ಶೂರನಾಗಿದ್ದರೆ ಅವಮಾನಪಡಿಸಲು ಹವಣಿಸುತ್ತಾರೆ (೩–೪).

ನಿತ್ಯಮನ್ಯೋನ್ಯಸಂಹೃಷ್ಟಾ ವ್ಯಸನೇಷ್ವಾತತಾಯಿನಃ ।
ಪ್ರಚ್ಛನ್ನಹೃದಯಾ ಘೋರಾ ಜ್ಞಾತಯಸ್ತು ಭಯಾವಹಾಃ ॥ ೫

ಶ್ರೂಯಂತೇ ಹಸ್ತಿಭಿರ್ಗೀತಾಃ ಶ್ಲೋಕಾಃ ಪದ್ಮವನೇ ಕ್ವಚಿತ್ ।
ಪಾಶಹಸ್ತಾನ್ನರಾನ್ ದೃಷ್ಟ್ವಾ ಶೃಣು ತಾನ್ ಗದತೋ ಮಮ ॥ ೬

ನಾಗ್ನಿರ್ನಾನ್ಯಾನಿ ಶಸ್ತ್ರಾಣಿ ನ ನಃ ಪಾಶಾ ಭಯಾವಹಾಃ ।
ಘೋರಾಃ ಸ್ವಾರ್ಥಪ್ರಯುಕ್ತಾಸ್ತು ಜ್ಞಾತಯೋ ನೋ ಭಯಾವಹಾಃ

ಉಪಾಯಮೇತೇ ವಕ್ಷ್ಯಂತಿ ಗ್ರಹಣೇ ನಾತ್ರ ಸಂಶಯಃ ।
ಕೃತ್ಸ್ನಾದ್ಭಯಾತ್ ಜ್ಞಾತಿಭಯಂ ಸುಕಷ್ಟಂ ವಿದಿತಂ ಚ ನಃ ॥ ೮

ವಿದ್ಯತೇ ಗೋಷು ಸಂಪನ್ನಂ ವಿದ್ಯತೇ ಬ್ರಾಹ್ಮಣೇ ದಮಃ ।
ವಿದ್ಯತೇ ಸ್ತ್ರೀಷು ಚಾಪಲ್ಯಂ ವಿದ್ಯತೇ ಜ್ಞಾತಿತೋ ಭಯಮ್ ॥ ೯

---

ಇನ್ನೊಬ್ಬರಿಗೆ ಆಪತ್ತುಗಳು ಬಂದರೆ ಇವರು ಒಬ್ಬರಿಗೊಬ್ಬರು ಹೇಳಿಕೊಂಡು ಆನಂದಿಸುತ್ತಾರೆ ! ತಮ್ಮ ಹೃದಯವನ್ನು ತೋರಗೊಡಿಸದೆ ದ್ರೋಹವನ್ನೆಣಿಸುತ್ತಾರೆ. ಕ್ರೂರಚಿತ್ತರಾದ ಈ ದಾಯಾದಿಗಳಿಂದ ಯಾವಾಗಲೂ ಭಯವುಂಟು (೫). ಎಲೈ ವಿಭೀಷಣ, ಹಿಂದೆ ಪದ್ಮವನದಲ್ಲಿ ಆನೆಗಳನ್ನು ಬಂಧಿಸಲು ಜನರು ಬಲೆಗಳನ್ನು ಹಿಡಿದು ಹೋಗಿದ್ದರಂತೆ. ಅವರನ್ನು ಕಂಡು ಆನೆಗಳು ಏನು ಹೇಳಿದವೆಂಬುದನ್ನು ಕೇಳು : ಅವು ಬಲೆಗಳನ್ನು ಹಿಡಿದ ಜನರನ್ನು ನೋಡಿ 'ನಮಗೆ ಬೆಂಕಿಯಿಂದಾಗಲಿ ಶಸ್ತ್ರಗಳಿಂದಾಗಲಿ ಭಯವಿಲ್ಲ. ಈ ಬಲೆಗಳಿಗೂ ನಾವು ಹೆದರುವುದಿಲ್ಲ. ಕ್ರೂರರೂ ಸ್ವಾರ್ಥಿಗಳೂ ಆದ ನಮ್ಮ ದಾಯಾದಿಗಳಿದ್ದಾರಲ್ಲ – ಪಳಗಿಸಿದ ಆನೆಗಳು, ಅವುಗಳಿಗೆ ನಾವು ಹೆದರಬೇಕಾಗಿದೆ!(೬–೭). ನಮ್ಮನ್ನು ಹಿಡಿಯಲು ಉಪಾಯವೇನೆಂಬುದನ್ನು ಈ ನಮ್ಮ ದಾಯಾದಿಗಳು ಮನುಷ್ಯರಿಗೆ ಹೇಳಿಕೊಡುತ್ತವೆ ! ಇದರಲ್ಲಿ ಸಂದೇಹವೇ ಇಲ್ಲ! ಎಲ್ಲಾ ಭಯಕ್ಕಿಂತಲೂ ಬಂಧುಗಳಿಂದ ಬರುವ ಭಯ ಬಹುದೊಡ್ಡದು. ನಮಗಿದು ಚೆನ್ನಾಗಿ ಗೊತ್ತಿದೆ (೮). ಗೋವುಗಳಲ್ಲಿ ಕ್ಷೀರಸಂಪನ್ನೂ ಬ್ರಾಹ್ಮಣರಲ್ಲಿ ಇಂದ್ರಿಯನಿಗ್ರಹವೂ ಹೆಂಗಸರಲ್ಲಿ ಚಂಚಲಮನಸ್ಸೂ ಇರುವುದು ಸಹಜ. ದಾಯಾದಿಗಳಲ್ಲಿ ಭಯಂಕರತ್ವವಿರುವುದೂ ಸಹಜ !' (೯).

ತತೋ ನೇಷ್ಟಮಿದಂ ಸೌಮ್ಯ ಯದಹಂ ಲೋಕಸತ್ಕೃತಃ ।
ಐಶ್ವರ್ಯಮಭಿಜಾತಶ್ಚ ರಿಪೂಣಾಂ ಮೂರ್ಧ್ನ್ಯವಸ್ಥಿತಃ ॥ ೧೦

ಯಥಾ ಪುಷ್ಕರಪರ್ಣೇಷು ಪತಿತಾಸ್ತೋಯಬಿಂದವಃ ।
ನ ಶ್ಲೇಷಮುಪಗಚ್ಛಂತಿ ತಥಾನಾರ್ಯೇಷು ಸೌಹೃದಮ್ ॥ ೧೧

ಯಥಾ ಮಧುಕರಸ್ತರ್ಷಾದ್ರಸಂ ವಿಂದನ್ನ ವಿದ್ಯತೇ ।
ತಥಾ ತ್ವಮಪಿ ತತ್ರೈವ ತಥಾನಾರ್ಯೇಷು ಸೌಹೃದಮ್ ॥ ೧೨

ಯಥಾ ಪೂರ್ವಂ ಗಜಃ ಸ್ನಾತ್ವಾ ಗೃಹ್ಯ ಹಸ್ತೇನ ವೈ ರಜಃ ।
ದೂಷಯತ್ಯಾತ್ಮನೋ ದೇಹಂ ತಥಾನಾರ್ಯೇಷು ಸೌಹೃದಮ್ ॥

ಯಥಾ ಶರದಿ ಮೇಘಾನಾಂ ಸಿಂಚತಾಮಪಿ ಗರ್ಜತಾಮ್ ।
ನ ಭವತ್ಯಂಬುಸಂಕ್ಲೇದಸ್ತಥಾನಾರ್ಯೇಷು ಸೌಹೃದಮ್ ॥ ೧೪

ಅನ್ಯಸ್ತ್ವೇವಂವಿಧಂ ಬ್ರೂಯಾದ್ವಾಕ್ಯಮೇತನ್ನಿಶಾಚರಂ ।
ಅಸ್ಮಿನ್ ಮುಹೂರ್ತೇ ನ ಭವೇತ್ತ್ವಾಂ ತು ಧಿಕ್ಕುಲಪಾಂಸನಮ್ ॥

---

ಆದ್ದರಿಂದ, ಸೌಮ್ಯ – ವಿಭೀಷಣ ! ಸತ್ಕುಲಪ್ರಸೂತನಾದ ನಾನು ಜಗದ್ವಂದಿತನಾಗಿ ಐಶ್ವರ್ಯವಂತನಾಗಿರುವುದೂ ವೈರಿಗಳ ತಲೆಯನ್ನು ಮೆಟ್ಟಿ ನಿಂತಿರುವುದೂ ನಿನಗೆ ಇಷ್ಟವಾಗಿಲ್ಲ! ತಾವರೆಯೆಲೆಗಳಲ್ಲಿ ಬಿದ್ದ ನೀರುಹನಿಗಳು ಹೇಗೆ ಒಂದಕ್ಕೊಂದು ಕೂಡಿಕೊಳ್ಳುವುದಿಲ್ಲವೊ, ಹಾಗೆ ದುಷ್ಟಜನರಲ್ಲಿಡುವ ಪ್ರೀತಿಯು ಸ್ನೇಹಬಂಧನದಿಂದ ಬಿಗಿಯಾಗುವುದಿಲ್ಲ (೧೦–೧೧). ದುಂಬಿಯು ಆಸೆಯಿಂದ ಬಂದು ಹೂವಿನ ಬಂಡನ್ನು ಸವಿದಮೇಲೆ ಅಲ್ಲಿ ನಿಲ್ಲದೆ ಹಾರಿ ಹೋಗುತ್ತದೆ. ಹಾಗೆ ದುಂಬಿಯಂಥವನು ನೀನು ! ದುಷ್ಟರಲ್ಲಿ ಸ್ನೇಹವು ನೆಲೆಯಾಗಿ ನಿಲ್ಲದು. ಆನೆಯು ಮೊದಲು ಸ್ನಾನಮಾಡಿ ಆಮೇಲೆ ಸೊಂಡಿಲಿನಿಂದ ಧೂಳೆರಚಿಕೊಂಡು ತನ್ನ ಮೈಯನ್ನೇ ಹೇಗೆ ಕೊಳೆಮಾಡಿಕೊಳ್ಳುವುದೋ ಹಾಗೆ ದುಷ್ಟರು ತಾವಾಗಿ ಬೆಳೆಸಿಕೊಂಡ ಸ್ನೇಹವನ್ನು ತಾವಾಗಿಯೇ ಕೆಡಿಸಿಕೊಳ್ಳುತ್ತಾರೆ (೧೨–೧೩). ಮಳೆಗಾಲದಲ್ಲಿ ಮಳೆಸುರಿಸುತ್ತ ಗುಡುಗುತ್ತಿರುವ ಮೋಡಗಳು ಶರತ್ಕಾಲವು ಬಂದಾಗ ಭೂಮಿ ನೆನೆಯುವಷ್ಟು ನೀರನ್ನೂ ಹೇಗೆ ಸುರಿಸುವುದಿಲ್ಲವೊ, ಹಾಗೆ ದುಷ್ಟರ ಸ್ನೇಹವು ಕ್ರಮವಾಗಿ ಕುಗ್ಗಿ ನಶಿಸಿಹೋಗುವುದು. ಎಲೈ ರಾಕ್ಷಸ ! ಇನ್ನೊಬ್ಬನು ಈ ಬಗೆಯ

ಇತ್ಯುಕ್ತಃ ಪರುಷಂ ವಾಕ್ಯಂ ನ್ಯಾಯವಾದೀ ವಿಭೀಷಣಃ ।
ಉತ್ಪಪಾತ ಗದಾಪಾಣಿಶ್ಚತುರ್ಭಿಃ ಸಹ ರಾಕ್ಷಸೈಃ ॥ ೧೬

ಅಬ್ರವೀಚ್ಚ ತದಾ ವಾಕ್ಯಂ ಜಾತಕ್ರೋಧೋ ವಿಭೀಷಣಃ ।
ಅಂತರಿಕ್ಷಗತಃ ಶ್ರೀಮಾನ್ ಭ್ರಾತರಂ ರಾಕ್ಷಸಾಧಿಪಮ್ ॥ ೧೭

ಸ ತ್ವಂ ಭ್ರಾತಾಸಿ ಮೇ ರಾಜನ್ ಬ್ರೂಹಿ ಮಾಂ ಯದ್ಯದಿಚ್ಛಸಿ ।
ಜ್ಯೇಷ್ಠೋ ಮಾನ್ಯಃ ಪಿತೃಸಮೋ ನ ಚ ಧರ್ಮಪಥೇ ಸ್ಥಿತಃ ॥ ೧೮

ಇದಂ ತು ಪರುಷಂ ವಾಕ್ಯಂ ನ ಕ್ಷಮಾಮ್ಯನೃತಂ ತವ ।
ಸುನೀತಂ ಹಿತಕಾಮೇನ ವಾಕ್ಯಮುಕ್ತಂ ದಶಾನನ ॥ ೧೯

ನ ಗೃಹ್ಣಂತ್ಯ ಕೃತಾತ್ಮಾನಃ ಕಾಲಸ್ಯ ವಶಮಾಗತಾಃ ।
ಸುಲಭಾಃ ಪುರುಷಾ ರಾಜನ್ ಸತತಂ ಪ್ರಿಯವಾದಿನಃ ॥ ೨೦

---

ಮಾತನ್ನು ನನ್ನೆದುರಿಗೆ ಆಡಿದ್ದರೆ, ಈ ಕ್ಷಣದಲ್ಲಿ ಅವನು ಜೀವಸಹಿತ ಉಳಿಯುತ್ತಿರಲಿಲ್ಲ! ಥೂ ಕುಲಗೇಡಿ, ನಿನಗೆ ಧಿಕ್ಕಾರ'' ಎಂದು ಮೂದಲಿಸಿದನು (೧೪–೧೫). ನ್ಯಾಯವಾದಿಯಾದ ವಿಭೀಷಣನು ರಾವಣನ ಆ ಪರುಷೋಕ್ತಿಯನ್ನು ಕೇಳಿ ಸಂತಪ್ತನಾದನು. ಅವನು ಗದಾಧಾರಿಯಾಗಿ ಛಂಗನೆ ಎದ್ದು ಆಕಾಶವನ್ನಡರಿದನು. ಅವನ ಮಂತ್ರಿಗಳಾದ ನಾಲ್ವರು ರಾಕ್ಷಸರೂ ವಿಭೀಷಣನೊಡನೆ ಆಕಾಶಕ್ಕೆ ಹಾರಿ ನಿಂತರು (೧೬). ತೇಜಸ್ವಿಯಾದ ವಿಭೀಷಣನು ಅಂತರಿಕ್ಷದಲ್ಲಿ ನಿಂತು ಕ್ರೋಧದಿಂದ ರಾವಣನನ್ನು ಕುರಿತು ''ಮಹಾರಾಜ, ಏನ್ಪಾದರೂ ನೀನು ಸೋದರನಾಗಿದ್ದೀಯೆ, ಅಣ್ಣನಾಗಿದ್ದೀಯೆ. ನಿನಗೆ ಏನೇನು ತೋರುವುದೋ ಅದೆಲ್ಲವನ್ನೂ ಹೇಳಿ ನನ್ನನ್ನು ಬಯ್ಯಬಹುದು. ನನಗೆ ನೀನು ಅಣ್ಣನಾಗಿದ್ದೀಯೆ, ಪೂಜ್ಯನಾಗಿದ್ದೀಯೆ, ತಂದೆಗೆ ಸಮಾನನಾಗಿದ್ದೀಯೆ. ಆದರೆ ಧರ್ಮಮಾರ್ಗವನ್ನು ನೀನು ತುಳಿಯುತ್ತಿಲ್ಲ (೧೭–೧೮). ನಿನ್ನ ಹಿತವನ್ನು ಬಯಸಿಯೇ ನಾನು ಚೆನ್ನಾಗಿ ಆಲೋಚಿಸಿ ನೀತಿಸಮ್ಮತವಾದ ಮಾತನ್ನಾಡಿದ್ದೇನೆ. ನನ್ನ ಮಾತು ದುರುದ್ದೇಶಪೂರ್ಣವಾದದ್ದೆಂದು ನೀನು ಹೇಳುವುದು ಸುಳ್ಳು. ಇದು ಕಠೋರವಾದ ಆಪಾದನೆ. ಇದನ್ನು ಮಾತ್ರ ನಾನು ಸಹಿಸಲಾರೆ (೧೯). ಮುಖ್ಯವಾಗಿ, ಕಾಲವಶರಾದವರಿಗೆ ಇಂದ್ರಿಯಗಳು ಹತೋಟಿಯನ್ನು ತಪ್ಪುತ್ತವೆ.

ಅಪ್ರಿಯಸ್ಯ ತು ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ ।
ಬದ್ಧಂ ಕಾಲಸ್ಯ ಪಾಶೇನ ಸರ್ವಭೂತಾಪಹಾರಿಣಾ ॥ ೨೧

ನ ನಶ್ಯಂತಮುಪೇಕ್ಷೇಯಂ ಪ್ರದೀಪ್ತಂ ಶರಣಂ ಯಥಾ ।
ದೀಪ್ತಪಾವಕಸಂಕಾಶೈಃ ಶಿತೈಃ ಕಾಂಚನಭೂಷಣೈಃ ॥ ೨೨

ನ ತ್ವಾಮಿಚ್ಛಾಮ್ಯಹಂ ದ್ರಷ್ಟುಂ ರಾಮೇಣ ನಿಹತಂ ಶರೈಃ ।
ಶೂರಾಶ್ಚ ಬಲವಂತಶ್ಚ ಕೃತಾಸ್ತ್ರಾಶ್ಚ ರಣಾಜಿರೇ ॥ ೨೩

ಕಾಲಾಭಿಪನ್ನಾಃ ಸೀದಂತಿ ಯಥಾ ವಾಲುಕಸೇತವಃ ।
ತನ್ಮರ್ಷಯತು ಯಚ್ಚೋಕ್ತಂ ಗುರುತ್ವಾದ್ಧಿತಮಿಚ್ಛತಾ ॥ ೨೪

ಆತ್ಮಾನಂ ಸರ್ವಥಾ ರಕ್ಷ ಪುರೀಂ ಚೇಮಾಂ ಸರಾಕ್ಷಸಾಮ್ ।
ಸ್ವಸ್ತಿ ತೇಽಸ್ತು ಗಮಿಷ್ಯಾಮಿ ಸುಖೀ ಭವ ಮಯಾ ವಿನಾ ॥ ೨೫

---

ಬುದ್ಧಿವಾದವು ಅವರಿಗೆ ಹಿಡಿಸುವದಿಲ್ಲ. ಮಹಾರಾಜ, ಯಾವಾಗಲೂ ಪ್ರಿಯವಾದ ಮಾತುಗಳನ್ನಾಡತಕ್ಕ ಜನರು ಸುಲಭವಾಗಿ ಸಿಗುತ್ತಾರೆ. ಅಪ್ರಿಯವಾದರೂ ಪಥ್ಯವಾದ ನುಡಿಯನ್ನು ಹೇಳತಕ್ಕವನು ದುರ್ಲಭ. ಅಂಥ ನುಡಿಯನ್ನು ಕೇಳತಕ್ಕವನೂ ದುರ್ಲಭ! (೨೦-೨೧). ಸಮಸ್ತ ಜಂತುಗಳನ್ನೂ ಸೆಳೆದೊಯ್ಯುವ ಕಾಲಪಾಶವು ನಿನ್ನ ಕೊರಳಿಗೆ ಸುತ್ತಿರುವುದನ್ನು ಕಂಡು ನನಗೆ ಸುಮ್ಮನಿರಲಾಗಲಿಲ್ಲ. ಮನೆಗೆ ಬೆಂಕಿಬಿದ್ದಂತಾಗಿ ಮನಸ್ಸಿಗೆ ಕಳವಳವಾಯಿತು. ಸುವರ್ಣಭೂಷಿತಗಳಾಗಿ ಅಗ್ನಿಯಂತೆ ದೇದೀಪ್ಯಮಾನಗಳಾದ ರಾಮನ ನಿಶಿತಾಸ್ತ್ರಗಳಿಂದ ನೀನು ಹತನಾಗುವುದನ್ನು ನೋಡಲು ನನಗೆ ಇಷ್ಟವಾಗಲಿಲ್ಲ (೨೨). ಮಹಾರಾಜ, ಎಂತಹ ಶೂರರಾಗಿರಲಿ, ಬಲಶಾಲಿಗಳಾಗಿರಲಿ, ಅಸ್ತ್ರವಿದ್ಯಾಪಾರಂಗತರಾಗಿರಲಿ, ಕಾಲ ಪ್ರವಾಹವು ಬಂದು ಒದೆಯಿತೆಂದರೆ – ಮರಳಿನ ಅಡ್ಡಗಟ್ಟೆಗಳಂತೆ ಕುಸಿದು ಬೀಳುತ್ತಾರೆ. ಆದ್ದರಿಂದ ನೀನು ಅಣ್ಣನೆಂದೂ ಗುರುವೆಂದೂ ತಿಳಿದು ನಿನ್ನ ಹಿತವನ್ನು ಬಯಸಿ ನಾನು ಹೇಳಿದ ಮಾತಿನಲ್ಲಿ ಅತಿರೇಕವಿದ್ದರೆ ದಯವಿಟ್ಟು ಮನ್ನಿಸು (೨೩-೨೪). ಒಟ್ಟಿನಲ್ಲಿ ನಿನ್ನ ಪ್ರಾಣವನ್ನುಳಿಸಿಕೊಳ್ಳಲು ಪ್ರಯತ್ನ ಮಾಡು. ಈ ಲಂಕಾನಗರಿಯನ್ನೂ ರಾಕ್ಷಸರನ್ನೂ ಉಳಿಸಿಕೊ. ನಾನು

ನಿವಾರ್ಯಮಾಣಸ್ಯ ಮಯಾ ಹಿತೈಷಿಣಾ
ನ ರೋಚತೇ ತೇ ವಚನಂ ನಿಶಾಚರ ।
ಪರೀತಕಾಲಾ ಹಿ ಗತಾಯುಷೋ ನರಾ
ಹಿತಂ ನ ಗೃಹ್ಣಂತಿ ಸುಹೃದ್ಭಿರೀರಿತಮ್ ॥ ೨೬

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷೋಡಶಃ ಸರ್ಗಃ

---

ಹೊರಡುವೆನು. ನಿನಗೆ ಶುಭವಾಗಲಿ ! ನನ್ನನ್ನು ಪರಿತ್ಯಜಿಸಿ ನೆಮ್ಮದಿಯಿಂದ ಬಾಳು! (೨೫). ರಾಕ್ಷಸೇಂದ್ರ, ನಿನ್ನ ಹಿತೈಷಿಯಾಗಿ ನಾನು ಎಷ್ಟು ಹೇಳಿ ತಡೆದರೂ ನನ್ನ ಮಾತು ನಿನಗೆ ರುಚಿಸಲಿಲ್ಲ ಕಾಲಪಾಶಕ್ಕೆ ಸಿಕ್ಕಿ ಆಯುಸ್ಸು ಮುಗಿಯುತ್ತ ಬಂದಿರುವ ಜನರು ಆಪ್ತರು ಹಿತೋಪದೇಶವನ್ನು ಗ್ರಹಿಸುವುದಿಲ್ಲ'' ಎಂದನು (೨೬).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಹದಿನಾರನೆಯ ಸರ್ಗ

---

## ಸಪ್ತದಶಃ ಸರ್ಗಃ

### ವಿಭೀಷಣಶರಣಾಗತಿ ನಿವೇದನಮ್

ಇತ್ಯುಕ್ತ್ವಾ ಪರುಷಂ ವಾಕ್ಯಂ ರಾವಣಂ ರಾವಣಾನುಜಃ ।
ಆಜಗಾಮ ಮುಹೂರ್ತೇನ ಯತ್ರ ರಾಮಃ ಸಲಕ್ಷ್ಮಣಃ ॥ ೧

ತಂ ಮೇರುಶಿಖರಾಕಾರಂ ದೀಪ್ತಾಮಿವ ಶತಹ್ರದಾಮ್ ।
ಗಗನಸ್ಥಂ ಮಹೀಸ್ಥಾಸ್ತೇ ದದೃಶುರ್ವಾನರಾಧಿಪಾಃ ॥ ೨

ಸ ಹಿ ಮೇಘಾಚಲಪ್ರಖ್ಯೋ ವಜ್ರಾಯುಧಸಮಪ್ರಭಃ ।
ವರಾಯುಧಧರೋ ವೀರೋ ದಿವ್ಯಾಭರಣಭೂಷಿತಃ ॥ ೩

ಯೇ ಚಾಪ್ಯನುಚರಾಸ್ತಸ್ಯ ಚತ್ವಾರೋ ಭೀಮವಿಕ್ರಮಾಃ ।
ತೇಽಪಿ ವರ್ಮಾಯುಧೋಪೇತಾ ಭೂಷಣೈಶ್ಚ ವಿಭೂಷಿತಾಃ ॥ ೪

### ಸರ್ಗ ೧೭

ವಿಭೀಷಣನು ತನ್ನ ಸಚಿವರೊಡನೆ ಶ್ರೀರಾಮನಿಗೆ ಶರಣಾಗತನಾಗಲು ಬರುವುದು.
ಕಪಿಗಳ ಶಂಕೆ. ವಿಭೀಷಣನು ಆಕಾಶದಲ್ಲಿ ನಿಂತು
ತನ್ನ ಉದ್ದೇಶವನ್ನು ತಿಳಿಸುವುದು.

ರಾವಣಾನುಜನಾದ ವಿಭೀಷಣನು ಈ ರೀತಿಯಲ್ಲಿ ರಾವಣನಿಗೆ ನಿಷ್ಠುರ ವಚನವನ್ನು ಹೇಳಿ, ಶ್ರೀರಾಮನು ಲಕ್ಷ್ಮಣಸಮೇತನಾಗಿದ್ದ ಸ್ಥಳಕ್ಕೆ ಮರು ಕ್ಷಣದಲ್ಲಿ ಬಂದುಬಿಟ್ಟನು. ಮೇರು ಶಿಖರದಂತೆ ಉನ್ನತಾಕಾರನಾಗಿಯೂ (ದಿವ್ಯಾಭರಣಗಳಿಂದ) ಮಿಂಚಿನಂತೆ ವಿರಾಜಮಾನನಾಗಿಯೂ ಆಕಾಶಮಧ್ಯ ದಲ್ಲಿ ಬರುತ್ತಿದ್ದ ವಿಭೀಷಣನನ್ನು ನೆಲದಮೇಲಿದ್ದ ಕಪಿನಾಯಕರು ಕಂಡರು (೧–೨). ಆ ರಾಕ್ಷಸವೀರನು ಮೇಘದಂತೆ ಕೃಷ್ಣಕಾಯನೂ ಬೆಟ್ಟದಂತೆ ಪೀವರಾಂಗನೂ ಆಗಿದ್ದನು. ದಿವ್ಯಾಭರಣಭೂಷಿತನಾಗಿ ಗದಾಪಾಣಿಯಾದ ವಿಭೀಷಣನು ವಜ್ರಾಯುಧವನ್ನು ಹಿಡಿದ ದೇವೇಂದ್ರನಂತೆ ಕಂಗೊಳಿಸುತ್ತಿದ್ದನು (೩). ಅವನ ಜೊತೆಯಲ್ಲಿದ್ದ ಭೀಮಪರಾಕ್ರಮಿಗಳಾದ ನಾಲ್ವರು ಸಚಿವರೂ ಸಹ ಕವಚವನ್ನು ತೊಟ್ಟು ಆಯುಧಗಳನ್ನು ಹಿಡಿದು ಉತ್ತಮಾಭರಣಗಳನ್ನು

ತಮಾತ್ಮ ಪಂಚಮಂ ದೃಷ್ಟ್ವಾ ಸುಗ್ರೀವೋ ವಾನರಾಧಿಪಃ।
ವಾನರೈಃ ಸಹ ದುರ್ಧರ್ಷಶ್ಚಿಂತಯಾಮಾಸ ಬುದ್ಧಿಮಾನ್ ॥ ೫

ಚಿಂತಯಿತ್ವಾ ಮುಹೂರ್ತಂ ತು ವಾನರಾಂಸ್ತಾನುವಾಚ ಹ ।
ಹನುಮತ್ಪ್ರಮುಖಾನ್ ಸರ್ವಾನಿದಂ ವಚನಮುತ್ತಮಮ್ ॥ ೬

ಏಷ ಸರ್ವಾಯುಧೋಪೇತಶ್ಚತುರ್ಭಿಃ ಸಹ ರಾಕ್ಷಸೈಃ ।
ರಾಕ್ಷಸೋಽಭ್ಯೇತಿ ಪಶ್ಯಧ್ವಮಸ್ಮಾನ್ ಹಂತುಂನ ಸಂಶಯಃ ॥ ೭

ಸುಗ್ರೀವಸ್ಯ ವಚಃ ಶ್ರುತ್ವಾ ಸರ್ವೇ ತೇ ವಾನರೋತ್ತಮಾಃ ।
ಸಾಲಾನುದ್ಯಮ್ಯ ಶೈಲಾಂಶ್ಚ ಇದಂ ವಚನಮಬ್ರುವನ್ ॥ ೮

ಶೀಘ್ರಂ ವ್ಯಾದಿಶ ನೋ ರಾಜನ್ ವಧಾಯೈಷಾಂ ದುರಾತ್ಮನಾಮ್ ।
ನಿಪತಂತಿ ಹತಾ ಯಾವದ್ಧರಣ್ಯಾಮಲ್ಪ ತೇಜಸಃ ॥ ೯

ತೇಷಾಂ ಸಂಭಾಷಮಾಣಾನಾಮನ್ಯೋನ್ಯಂ ಸ ವಿಭೀಷಣಃ ।
ಉತ್ತರಂ ತೀರಮಾಸಾದ್ಯ ಖಸ್ಥ ಏವ ವ್ಯತಿಷ್ಠತ ॥ ೧೦

---

ಧರಿಸಿದ್ದನು. ಹೀಗೆ ನಾಲ್ವರೊಡನೆ ಐದನೆಯವನಾಗಿದ್ದ ವಿಭೀಷಣವನ್ನು ವಾನರೇಶ್ವರನಾದ ಸುಗ್ರೀವನು ನೋಡಿದನು. ಬುದ್ಧಿಶಾಲಿಯಾದ ಆ ವೀರನು ಇದೇ ನಿರಬಹುದೆಂದು ಇತರ ಕಪಿನಾಯಕರೊಡನೆ ಸಮಾಲೋಚಿಸಿದನು (೪–೫). ಸ್ವಲ್ಪಕಾಲದವರೆಗೆ ಆಲೋಚಿಸಿ ಆ ಸುಗ್ರೀವನು ಹನುಮಂತನೇ ಮೊದಲಾದ ಕಪೀವೀರರನ್ನು ಕುರಿತು "ಅತ್ತ ನೋಡಿರಿ! ಅಲ್ಲೊಬ್ಬ ರಾಕ್ಷಸನು ಸರ್ವಾಯುಧಗಳಿಂದ ಸನ್ನದ್ಧನಾಗಿ ಬಂದಿದ್ದಾನೆ ಅವನೊಡನೆ ಇನ್ನೂ ನಾಲ್ವರು ಇದ್ದಾರೆ, ನಿಸ್ಸಂಶಯವಾಗಿ ಆತನು ನಮ್ಮನ್ನು ಸಂಹರಿಸಬೇಕೆಂದು ಬರುತ್ತಿದ್ದಾನೆ!" ಎಂದನು (೬–೭) ಒಡನೆಯೇ ಆ ವಾನರೋತ್ತಮರೆಲ್ಲರೂ ಮರಗಳನ್ನೂ ಬಂಡೆಗಳನ್ನೂ ಕೈಗೆತ್ತಿಕೊಂಡು "ಮಹಾರಾಜ, ಬೇಗನೆ ಅಪ್ಪಣೆ ಕೊಡು ನಮಗೆ ! ಈ ದುರಾತ್ಮರನ್ನು ಕೊಂದುಹಾಕುವೆವು. ಈ ನಿರ್ವೀರ್ಯರು ಈಗಲೇ ಹತರಾಗಿ ಭೂಮಿಯಲ್ಲೊರಗುವರು" ಎಂದು ಕೂಗಾಡಿದರು (೮–೯). ಈ ರೀತಿಯಲ್ಲಿ ವಾನರರು ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಿರುವಷ್ಟರಲ್ಲಿ ವಿಭೀಷಣನು ಕಡಲಿನ ಉತ್ತರತೀರಕ್ಕೆ

ಉವಾಚ ಚ ಮಹಾಪ್ರಾಜ್ಞಃ ಸ್ವರೇಣ ಮಹತಾ ಮಹಾನ್।
ಸುಗ್ರೀವಂ ತಾಂಶ್ಚ ಸಂಪ್ರೇಕ್ಷ್ಯ ಸರ್ವಾನ್ ವಾನರಯೂಥಪಾನ್ ॥ ೧೧

ರಾವಣೋ ನಾಮ ದುರ್ವೃತ್ತೋ ರಾಕ್ಷಸೋ ರಾಕ್ಷಸೇಶ್ವರಃ ।
ತಸ್ಯಾಹಮನುಜೋ ಭ್ರಾತಾ ವಿಬೀಷಣ ಇತಿ ಶ್ರುತಃ ॥ ೧೨

ತೇನ ಸೀತಾ ಜನಸ್ಥಾನಾದ್ಧೃತಾ ಹತ್ವಾ ಜಟಾಯುಷಮ್ ।
ರುದ್ಧಾ ಚ ವಿವಶಾ ದೀನಾ ರಾಕ್ಷಸೀಭಿಃ ಸುರಕ್ಷಿತಾ ॥ ೧೩

ತಮಹಂ ಹೇತುಭಿರ್ವಾಕ್ಯೈರ್ವಿವಿಧೈಶ್ಚ ನ್ಯದರ್ಶಯಮ್ ।
ಸಾಧು ನಿರ್ಯಾತ್ಯತಾಂ ಸೀತಾ ರಾಮಾಯೇತಿ ಪುನಃ ಪುನಃ ॥ ೧೪

ಸಚನ ಪ್ರತಿಜಗ್ರಾಹ ರಾವಣಃ ಕಾಲಚೋದಿತಃ ।
ಉಚ್ಯಮಾನಂ ಹಿತಂ ವಾಕ್ಯಂ ವಿಪರೀತ ಇವೌಷಧಮ್ ॥ ೧೫

ಸೋಽಹಂ ಪರುಷಿತಸ್ತೇನ ದಾಸವಚ್ಚಾವಮಾನಿತಃ ।
ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ ರಾಘವಂ ಶರಣಂ ಗತಃ ॥ ೧೬

---

ಕ್ಷೇಮವಾಗಿ ಬಂದು ಸೇರಿದನು. ಮಹಾಪ್ರಾಜ್ಞನಾದ ಆ ಧೀರನು ಸುಗ್ರೀವನನ್ನೂ ವಾನರನಾಯಕರನ್ನೂ ಕಂಡು ಉಚ್ಚಸ್ವರದಿಂದ "ಎಲೈ ವಾನರೋತ್ತಮರೆ, ರಾವಣನೆಂಬ ರಾಕ್ಷಸನು ರಾಕ್ಷಸೇಶ್ವರನೆಂದೂ ದುರಾಚಾರನೆಂದೂ ನೀವು ಕೇಳಿರಬಹುದು ನಾನು ಅವನ ತಮ್ಮ ವಿಭೀಷಣನೆಂದು ನನ್ನ ಹೆಸರು (೧೦–೧೨). ಆ ರಾವಣನು ಜಟಾಯುವನ್ನು ಕೊಂದು ಸೀತೆಯನ್ನು ಅಪಹರಿಸಿ ತಂದಿದ್ದಾನೆ. ಅನಾಥಳಾಗಿ ಧೈನ್ಯದಿಂದ ಕೊರಗುತ್ತಿರುವ ಸೀತೆಯನ್ನು ಲಂಕೆಯಲ್ಲಿ ಸೆರೆಯಿಟ್ಟು ರಾಕ್ಷಸಿಯರ ಕಾವಲುಹಾಕಿದ್ದಾನೆ. ಆಕೆಯನ್ನು ರಾಮನಿಗೆ ಹಿಂದಿರುಗಿಸೆಂದು ನಾನು ರಾವಣನಿಗೆ ಸಾರಿಹೇಳಿದೆನು. ನಾನಾ ಕಾರಣಗಳನ್ನು ಕೊಟ್ಟು ಬಗೆಬಗೆಯಲ್ಲಿ ಅವನಿಗೆ ಬುದ್ಧಿವಾದ ಹೇಳಿದೆನು (೧೩–೧೪)ಆದರೆ ರಾವಣನು ನನ್ನ ಒಳ್ಳೆಯ ಮಾತಿಗೆ ಒಪ್ಪಲಿಲ್ಲ. ವಿನಾಶಕಾಲವು ಅವನನ್ನು ಹಾಗೆ ಪ್ರೇರಿಸಿದೆ ಮರಣಕಾಲ ಬಂದವನಿಗೆ ಔಷಧವು ಬೇಡವೆನಿಸುವಂತೆ ಹಿತೋಪದೇಶವು ಅವನಿಗೆ ಬೇಡವಾಗಿದೆ. ಬುದ್ಧಿವಾದ ಹೇಳಿದ ನನಗೆ ರಾವಣನು ಪರುಷೋಕ್ತಿಯನ್ನಾಡಿ ನಿಂದಿಸಿದನು. ಅವನಿಗ ನಾನು ದಾಸನೋ ಎಂಬಂತ ಅವಮಾನಪಡಿಸಿದನು. ಆದ್ದರಿಂದ

**ಸರ್ವಲೋಕಶರಣ್ಯಾಯ ರಾಘವಾಯ ಮಹಾತ್ಮನೇ ।**
**ನಿವೇದಯತ ಮಾಂ ಕ್ಷಿಪ್ರಂ ವಿಭೀಷಣಮುಪಸ್ಥಿತಮ್ ॥ ೧೭**

**ಏತತ್ತು ವಚನಂ ಶ್ರುತ್ವಾ ಸುಗ್ರೀವೋ ಲಘುವಿಕ್ರಮಃ ।**
**ಲಕ್ಷ್ಮಣಸ್ಯಾಗ್ರತೋ ರಾಮಂ ಸಂರಬ್ಧಮಿದಮಬ್ರವೀತ್ ॥ ೧೮**

**ರಾವಣಸ್ಯಾನುಜೋ ಭ್ರಾತಾ ವಿಭೀಷಣ ಇತಿ ಶ್ರುತಃ ।**
**ಚತುರ್ಭಿಃ ಸಹ ರಕ್ಷೋಭಿರ್ಭವಂತಂ ಶರಣಂ ಗತಃ ॥ ೧೯**

**ಮಂತ್ರೇ ವ್ಯೂಹೇ ನಯೇ ಚಾರೇ ಯುಕ್ತೋ ಭವಿತುಮರ್ಹಸಿ ।**
**ವಾನರಾಣಾಂ ಚ ಭದ್ರಂ ತೇ ಪರೇಷಾಂ ಚ ಪರಂತಪ ॥ ೨೦**

**ಅಂತರ್ಧಾನಗತಾ ಹ್ಯೇತೇ ರಾಕ್ಷಸಾಃ ಕಾಮರೂಪಿಣಃ ।**
**ಶೂರಾಶ್ಚ ನಿಕೃತಿಜ್ಞಾಶ್ಚ ತೇಷು ಜಾತು ನ ವಿಶ್ವಸೇತ್ ॥ ೨೧**

---

ನಾನು, ವಾನರರೆ, ಶ್ರೀರಾಮನಿಗೆ ಶರಣಾಗತನಾಗಿ ಬಂದಿದ್ದೇನೆ ನನ್ನ ಮಡದಿ ಮಕ್ಕಳನ್ನು ಬಿಟ್ಟು ಬಂದಿದ್ದೇನೆ (೧೫–೧೬) ಸರ್ವಲೋಕಶರಣ್ಯನೂ ಮಹಾಪುರಷನೂ ಆದ ಶ್ರೀರಾಮನಿಗೆ, ವಿಭೀಷಣನೆಂಬ ನಾನು ಶರಣಾಗತ ನಾಗಿ ಬಂದಿದ್ದೇನೆಂದು ಬೇಗನೆ ಅರಿಕೆಮಾಡಿರಿ'' ಎಂದು ಹೇಳಿದನು (೧೭). ಆ ಮಾತುನ್ನು ಕೇಳಿದೊಡನೆ ಸುಗ್ರೀವನು ತ್ವರೆಯಿಂದ ಧಾವಿಸುತ್ತ ಶ್ರೀರಾಮನ ಬಳಿಗೆ ಹೋಗಿ ಸಮೀಪದಲ್ಲಿದ್ದ ಲಕ್ಷ್ಮಣನಿಗೆ ಕೇಳಿಸುವಂತೆ ಚಿತ್ತೋದ್ವೇಗದಿಂದ ಹೀಗೆಂದನು: ''ಶ್ರೀರಾಮ, ರಾವಣನ ತಮ್ಮನಂತೆ; ವಿಭೀಷಣನೆಂದು ಅವನ ಹೆಸರಂತೆ! ಆತನು ನಾಲ್ವರು ರಾಕ್ಷಸರೊಡನೆ ನಿನಗೆ ಶರಣಾಗತನಾಗಿ ಬಂದಿದ್ದಾನೆ (18–19). ವೀರಾಗ್ರಣಿ, ನಿನಗೆ ಶುಭವಾಗಲಿ! ನೀನು ನಮ್ಮ ವಾನರರ ಮತ್ತು ಶತ್ರುಗಳ ವಿಷಯದಲ್ಲಿ ಸಾವಧಾನವಾಗಿ ವರ್ತಿಸಬೇಕು. ಕಾರ್ಯಾಕಾರ್ಯವಿಚಾರ, ಸೇನಾಸನ್ನಿವೇಶ, ಉಪಾಯಗಳ ಪ್ರಯೋಗ, ಗೂಢಚರ್ಯೆ–ಇವುಗಳ ವಿಷಯದಲ್ಲಿ ಜಾಗರೂಕನಾಗಿರಬೇಕು (೨೦). ಈ ರಾಕ್ಷಸರು ಮಾಯೆಯಿಂದ ಅಂತರ್ಧಾನವನ್ನು ಹೊಂದಿ ಸಂಚರಿಸಬಲ್ಲರೂ. ಇಷ್ಟಬಂದ ರೂಪವನ್ನು ಧರಿಸಬಲ್ಲ ಕಾಮರೂಪಿಗಳು. ಇವರು ಶೂರರೂ ಕಪಟೋಪಾಯನಿಷ್ಣಾತರೂ ಆಗಿರುತ್ತಾರೆ. ಈ ರಾಕ್ಷಸರನ್ನು ಎಂದಿಗೂ ನಂಬಬಾರದು (೨೧).

ಪ್ರಣಿಧೀ ರಾಕ್ಷಸೇಂದ್ರಸ್ಯ ರಾವಣಸ್ಯ ಭವೇದಯಮ್ ।
ಅನುಪ್ರವಿಶ್ಯ ಸೋಽಸ್ಮಾಸು ಭೇದಂ ಕುರ್ಯಾನ್ನ ಸಂಶಯಃ ॥ ೨೨

ಅಥವಾ ಸ್ವಯಮೇವೈಷ ಛಿದ್ರಮಾಸಾದ್ಯ ಬುದ್ಧಿಮಾನ್ ।
ಅನುಪ್ರವಿಶ್ಯ ವಿಶ್ವಸ್ತೇ ಕದಾಚಿತ್ಪ್ರಹರೇದಪಿ ॥ ೨೩

ಮಿತ್ರಾಟವಿಬಲಂ ಚೈವ ಮೌಲಂ ಭೃತ್ಯಬಲಂ ತಥಾ ।
ಸರ್ವಮೇತದ್ಬಲಂ ಗ್ರಾಹ್ಯಂ ವರ್ಜಯಿತ್ವಾ ದ್ವಿಷದ್ಬಲಮ್ ॥ ೨೪

ಪ್ರಕೃತ್ಯಾ ರಾಕ್ಷಸೋ ಹ್ಯೇಷ ಭ್ರಾತಾಮಿತ್ರಸ್ಯವೈ ಪ್ರಭೋ ।
ಆಗತಶ್ಚ ರಿಪೋಃ ಪಕ್ಷಾತ್ಕಥಮಸ್ಮಿನ್ ಹಿ ವಿಶ್ವಸೇತ್ ॥ ೨೫

ರಾವಣೇನ ಪ್ರಣಿಹಿತಂ ತಮವೇಹಿ ವಿಭೀಷಣಮ್ ।
ತಸ್ಯಾಹಂ ನಿಗ್ರಹಂ ಮನ್ಯೇ ಕ್ಷಮಂ ಕ್ಷಮವತಾಂ ವರ ॥ ೨೬

---

ವಿಭೀಷಣನು ರಾವಣನ ಗುಪ್ತಚಾರನಾಗಿರಬೇಕು. ಇವನು ನಮ್ಮೊಡನೆ ಬೆರೆತು ನಿಸ್ಸಂಶಯವಾಗಿ ಭೇದೋಪಾಯವನ್ನು ತಂದೊಡ್ಡುವನು. ಅಥವಾ ಈ ಚತುರನು ಸಮಯವನ್ನು ಕಾದು ನಮ್ಮನ್ನು ಸಂಹರಿಸಲು ಪ್ರಯತ್ನಿಸಬಹುದು (೨೨–೨೩). ನಮ್ಮ ಬಲಸಂವರ್ಧನೆಗಾಗಿ ಕೆಲವು ಬಗೆಯ ಸೈನಿಕರನ್ನು ಮಾತ್ರ ನಮ್ಮ ಸೇನೆಗೆ ಸೇರಿಸಿಕೊಳ್ಳಬಹುದು : ಸ್ನೇಹಿತರ ಪಕ್ಷದವರು, ವನಚಾರಿಗಳಾದ ಕಿರಾತಾದಿಗಳು, ಪರಂಪರೆಯಿಂದ ನಮ್ಮ ಪಕ್ಷವನ್ನು ವಹಿಸಿದವರು, ವೇತನಕ್ಕೆ ನೇಮಿಸಿಕೊಂಡಿರುವ ಯೋಧರು – ಇವರೆಲ್ಲರೂ ನಮ್ಮೊಡನೆ ಸೇರಿಸಿಕೊಳ್ಳಬಹುದೇ ಹೊರತು ಶತ್ರುಪಕ್ಷದವರನ್ನು ಎಂದಿಗೂ ಸೇರಿಸಿಕೊಳ್ಳಬಾರದು (೨೪). ಪ್ರಭು, ಇವನು, ಸಹಜವಾಗಿಯೇ ರಾಕ್ಷಸ; ಶತ್ರುವಿನ ಸೋದರ . ಇದುವರೆಗೆ ಶತ್ರು ಪಕ್ಷದವಲ್ಲಿಯೇ ಇದ್ದು ನೇರವಾಗಿ ಬರುತ್ತಿದ್ದಾನೆ. ಇಂಥವನನ್ನು ಹೇಗೆ ನಂಬಲಾದೀತು? ಆದ್ದರಿಂದ, ಈ ವಿಭೀಷಣನು ರಾವಣನಿಂದ ಕಳಿಸಲ್ಪಟ್ಟ ಗೂಢಚಾರನೆಂದೇ ತಿಳಿ. ಶ್ರೀರಾಮ, ಯುಕ್ತಕಾರ್ಯವನ್ನು ನಡೆಸುವುದರಲ್ಲಿ ನೀನು ಶ್ರೇಷ್ಠನೆನಿಸಿದವನು. ಈ ರಾಕ್ಷಸನನ್ನು ಹಿಡಿದು ದಂಡಿಸುವುದೇ ಯುಕ್ತವೆಂದು ನನ್ನ ಅಭಿಪ್ರಾಯ (೨೫–೨೬).

ರಾಕ್ಷಸೋ ಜಿಹ್ಮಯಾ ಬುದ್ಧ್ಯಾ ಸಂದಿಷ್ಟೋಽಯಮುಪಸ್ಥಿತಃ ।
ಪ್ರಹರ್ತುಂ ಮಾಯಯಾ ಛನ್ನೋ ವಿಶ್ವಸ್ತೇ ತ್ವಯಿ ರಾಘವ ॥ ೨೭

ಪ್ರವಿಷ್ಟಃ ಶತ್ರುಸೈನ್ಯಂ ಹಿ ಪ್ರಾಜ್ಞಃ ಶತ್ರುರತರ್ಕಿತಃ ।
ನಿಹನ್ಯಾದಂತರಂ ಲಬ್ಧ್ವಾ ಉಲೂಕ ಇವ ವಾಯಸಾನ್ ॥ ೨೮

ವಧ್ಯತಾಮೇಷ ದಂಡೇನ ತೀವ್ರೇಣ ಸಚಿವೈಃ ಸಹ ।
ರಾವಣಸ್ಯ ನೃಶಂಸಸ್ಯ ಭ್ರಾತಾ ಹ್ಯೇಷ ವಿಭೀಷಣಃ ॥ ೨೯

ಏವಮುಕ್ತ್ವಾ ತು ತಂ ರಾಮಂ ಸಂರಬ್ಧೋ ವಾಹಿನೀಪತಿಃ ।
ವಾಕ್ಯಜ್ಞೋ ವಾಕ್ಯಕುಶಲಂ ತತೋ ಮೌನಮುಪಾಗಮತ್ ॥ ೩೦

ಸುಗ್ರೀವಸ್ಯ ತು ತದ್ವಾಕ್ಯಂ ಶ್ರುತ್ವಾ ರಾಮೋ ಮಹಾಯಶಾಃ ।
ಸಮೀಪಸ್ಥಾನುವಾಚೇದಂ ಹನುಮತ್ಪ್ರಮುಖಾನ್ ಹರೀನ್ ॥ ೩೧

ಯದುಕ್ತಂ ಕಪಿರಾಜೇನ ರಾವಣಾವರಜಂ ಪ್ರತಿ ।
ವಾಕ್ಯಂ ಹೇತುಮದತ್ಯರ್ಥಂ ಚ ಭವದ್ಭಿರಪಿ ತಚ್ಛ್ರುತಮ್ ॥ ೩೨

---

ರಾವಣನು ಉದ್ದೇಶಪೂರ್ವಕವಾಗಿ ಇವನನ್ನು ಕಳಿಸಿದ್ದಾನೆ. ಈ ರಾಕ್ಷಸನು ಕುಟಿಲಬುದ್ಧಿಯಿಂದಲೇ ಇಲ್ಲಿಗೆ ಬಂದಿದ್ದಾನೆ. ನೀನು ವಿಶ್ವಾಸದಿಂದ ವರ್ತಿಸುವಾಗ ಮೋಸದಿಂದ ಘಾತಿಸುವುದೇ ಇವನ ಉದ್ದೇಶ ! (೨೭). ರಾಘವ, ಸಂದೇಹಕ್ಕೆ ಆಸ್ಪದವಾಗದಂತೆ ಶತ್ರುಸೈನ್ಯವನ್ನು ಸೇರಿಕೊಂಡ ಚತುರನಾದ ಗೂಢಚಾರನು, ಅವಕಾಶ ಸಿಕ್ಕಿದಾಗ ಶತ್ರುಗಳನ್ನು ವಧಿಸದೆ ಬಿಡನು. ಗೂಗೆಯು ಕಾಗೆಗಳ ಹಿಂಡಿಯಲ್ಲಿ ಸೇರಿಕೊಂಡು ಹೀಗೆಯೇ ಕಾಗೆಗಳನ್ನು ಕೊಲ್ಲುತ್ತದೆ (೨೮). ಆದ್ದರಿಂದ, ಶ್ರೀರಾಮ, ಈ ವಿಭೀಷಣನಿಗೂ ಇವನ ನಾಲ್ವರು ಸಚಿವರಿಗೂ ಉಗ್ರದಂಡನೆಯನ್ನು ವಿಧಿಸಿ ವಧಿಸುವಂತೆ ಆಜ್ಞಾಪಿಸು! ಈತನು ಪಾಪಿಯಾದ ರಾವಣನ ತಮ್ಮನಲ್ಲವೆ?'' ಎಂದು ಸುಗ್ರೀವನು ಅರಿಕೆಮಾಡಿದನು (೨೯) ಹೀಗೆ ಕಪಿಸೇನೆಯ ಪರಮೋಚ್ಚನಾಯಕನೂ ವಾಕ್ಯವಿಶಾರದನೂ ಆದ ಸುಗ್ರೀವನು ಚಿತ್ತೋದ್ವೇಗದಿಂದ ಶ್ರೀರಾಮನಿಗೆ ನಿವೇದಿಸಿ ಸುಮ್ಮನಾದನು. ಮಹಾಕೀರ್ತಿಶಾಲಿಯಾದ ಶ್ರೀರಾಮಚಂದ್ರನು ಸುಗ್ರೀವನ ವಚನವನ್ನಾಲಿಸಿ, ಸಮೀಪದಲ್ಲಿದ್ದ ಹನುಮಂತನೇ ಮೊದಲಾದ ಕಪಿಶ್ರೇಷ್ಠರನ್ನು ನೋಡಿ ''ಮಿತ್ರರೇ,

ಸುಹೃದಾಮರ್ಥಕೃಚ್ಛ್ರೇಷು ಯುಕ್ತಂ ಬುದ್ಧಿಮತಾ ಸತಾ ।
ಸಮರ್ಥೇನಾಪಿ ಸಂದೇಷ್ಟುಂ ಶಾಶ್ವತೀಂ ಭೂತಿಮಿಚ್ಛತಾ ॥ ೩೩

ಇತ್ಯೇವಂ ಪರಿಪೃಷ್ಟಾಸ್ತೇ ಸ್ವಂ ಸ್ವಂ ಮತಮತಂದ್ರಿತಾಃ ।
ಸೋಪಚಾರಂ ತದಾ ರಾಮಮೂಚುರ್ಹಿತಚಿಕೀರ್ಷವಃ ॥ ೩೪

ಅಜ್ಞಾತಂ ನಾಸ್ತಿ ತೇ ಕಿಂಚಿತ್ತ್ರಿಷು ಲೋಕೇಷು ರಾಘವ ।
ಆತ್ಮಾನಂ ಸೂಚಯನ್ ರಾಮ ಪೃಚ್ಛಸ್ಯಸ್ಮಾನ್ ಸುಹೃತ್ತಯಾ ॥ ೩೫

ತ್ವಂ ಹಿ ಸತ್ಯವ್ರತಃ ಶೂರೋ ಧಾರ್ಮಿಕೋ ದೃಢವಿಕ್ರಮಃ ।
ಪರೀಕ್ಷ್ಯಕಾರೀ ಸ್ಮೃತಿಮಾನ್ನಿಸೃಷ್ಟಾತ್ಮಾ ಸುಹೃತ್ಸು ಚ ॥ ೩೬

ತಸ್ಮಾದೇಕೈಕಶಸ್ತಾವದ್ಬ್ರುವಂತು ಸಚಿವಾಸ್ತವ ।
ಹೇತುತೋ ಮತಿಸಂಪನ್ನಾಃ ಸಮರ್ಥಾಶ್ಚ ಪುನಃ ಪುನಃ ॥ ೩೭

ಇತ್ಯುಕ್ತೇ ರಾಘವಾಯಾಥ ಮತಿಮಾನಂಗದೋಽಗ್ರತಃ ।
ವಿಭೀಷಣಪರೀಕ್ಷಾರ್ಥಮುವಾಚ ವಚನಂ ಹರಿಃ ॥ ೩೮

---

ಕಪಿರಾಜನು ರಾವಣನ ತಮ್ಮನ ವಿಷಯವಾಗಿ ಹೇಳಿದ ಯುಕ್ತಿಯುಕ್ತವೂ ಅರ್ಥಗರ್ಭಿತವೂ ಆದ ನುಡಿಯನ್ನು ನೀವೆಲ್ಲರೂ ಕೇಳಿದಿರಿ (೩೦–೩೨). ಮಿತ್ರರಿಗಂ ಕಷ್ಟದ ಸಂದಿಗ್ಧಪರಿಸ್ಥಿತಿಯೊದಗಿದಾಗ, ಬುದ್ಧಿಶಾಲಿಯೂ ಸಮರ್ಥನೂ ಆದ ಸತ್ಪುರುಷನು ಅವರಿಗೆ ಶ್ರೇಯಸ್ಸನ್ನು ಬಯಸಿ ಸಲಹೆಯನ್ನೀಯುವುದು ಯುಕ್ತವೇ ಸರಿ ಈಗ ನಾನು ಏನು ಮಾಡಬೇಕೆಂಬುದು ನಿಮ್ಮ ಅಭಿಪ್ರಾಯ?'' ಎಂದು ಕೇಳಿದನು (೩೩). ಆಗ ಶ್ರೀರಾಮನ ಹಿತೈಷಿಗಳಾದ ಆ ವಾನರೋತ್ತಮರು ತಡಮಾಡದೆ ಮುಂದೆ ಬಂದು ಆದರದಿಂದ ''ರಘುನಾಥ, ಈ ಮೂರು ಲೋಕಗಳಲ್ಲಿಯೂ ನಿನಗೆ ತಿಳಿಯದೆ ವಿಷಯವಿಲ್ಲ. ಕೇವಲ ನಿನ್ನ ಸೌಹಾರ್ದವನ್ನು ಪ್ರಕಟಿಸುತ್ತ ನಮ್ಮನ್ನು ಕೇಳುತ್ತಿರುವೆ (೩೪–೩೫). ನೀನು ಸತ್ಯಸಂಧನೂ ಶೂರನೂ ಧಾರ್ಮಿಕನೂ ದೃಢವಾದ ಒಂದೇ ನಿಲುವುಳ್ಳವನೂ ಆಗಿದ್ದೀಯೆ. ಚೆನ್ನಾಗಿ ವಿಮರ್ಶಿಸಿ ಕಾರ್ಯವನ್ನಾರಭಿಸುತ್ತಿಯೆ. ಸಮಯೋಚಿತವಾದ ಪ್ರಜ್ಞೆಯುಳ್ಳವನು ನೀನು. ಮಿತ್ರರಿಗಾಗಿ ನಿನ್ನನ್ನೇ ಅರ್ಪಿಸಿಕೊಂಡಿದ್ದೀಯೆ (೩೬). ಸಮರ್ಥರೂ ಪ್ರಾಜ್ಞರೂ ಆದ ನಿನ್ನ ಸಚಿವರು ಒಬ್ಬೊಬ್ಬರಾಗಿ ತಮ್ಮ ಅಭಿಪ್ರಾಯವನ್ನು ಯುಕ್ತಿಯುಕ್ತವಾಗಿ ಸೂಚಿಸಲಿ'' ಎಂದು ನುಡಿದರು. ಆಮೇಲೆ ಪ್ರಾಜ್ಞನಾದ

ಶತ್ರೋಃ ಸಕಾಶಾತ್ಸಂಪ್ರಾಪ್ತಃ ಸರ್ವಥಾ ಶಂಕ್ಯ ಏವ ಹಿ ।
ವಿಶ್ವಾಸಯೋಗ್ಯಃ ಸಹಸಾ ನ ಕರ್ತವ್ಯೋ ವಿಭೀಷಣಃ ॥ ೩೯

ಛಾದಯಿತ್ವಾತ್ಮಭಾವಂ ಹಿ ಚರಂತಿ ಶಠಬುದ್ಧಯಃ ।
ಪ್ರಹರಂತಿ ಚ ರಂಧ್ರೇಷು ಸೋಽನರ್ಥಃ ಸುಮಹಾನ್ ಭವೇತ್ ॥ ೪೦

ಅರ್ಥಾನರ್ಥೌ ವಿನಿಶ್ಚಿತ್ಯ ವ್ಯವಸಾಯಂ ಭಜೇತ ಹ ।
ಗುಣತಃ ಸಂಗ್ರಹಂ ಕುರ್ಯಾದ್ದೋಷತಸ್ತು ವಿಸರ್ಜಯೇತ್ ॥ ೪೧

ಯದಿ ದೋಷೋ ಮಹಾಂಸ್ತಸ್ಮಿಂಸ್ತ್ಯಜ್ಯತಾಮವಿಶಂಕಿತಮ್ ।
ಗುಣಾನ್ ವಾಪಿ ಬಹೂನ್ ಜ್ಞಾತ್ವಾ ಸಂಗ್ರಹಃ ಕ್ರಿಯತಾಂ ನೃಪ ॥ ೪೨

ಶರಭಸ್ತ್ವಥ ನಿಶ್ಚಿತ್ಯ ಸಾರ್ಥಂ ವಚನಮಬ್ರವೀತ್ ।
ಕ್ಷಿಪ್ರಮಸ್ಮಿನ್ನರವ್ಯಾಘ್ರ ಚಾರಃ ಪ್ರತಿವಿಧೀಯತಾಮ್ ॥ ೪೩

ಪ್ರಣಿಧಾಯ ಹಿ ಚಾರೇಣ ಯಥಾವತ್ಸೂಕ್ಷ್ಮಬುದ್ಧಿನಾ ।
ಪರೀಕ್ಷ್ಯ ಚ ತತಃ ಕಾರ್ಯೋ ಯಥಾನ್ಯಾಯಂ ಪರಿಗ್ರಹಃ ॥ ೪೪

---

ಅಂಗದನು ಮುಂದೆ ಬಂದು ವಿಭೀಷಣನನ್ನು ಪರೀಕ್ಷಿಸಬೇಕೆಂಬ ಆಶಯದಿಂದ ''ವಿಭೀಷಣನು ಶತ್ರುಪಕ್ಷದಿಂದ ಬಂದಿದ್ದಾನೆ. ಅವನ ವಿಷಯದಲ್ಲಿ ಶಂಕಿಸಲೇ ಬೇಕು. ಪರೀಕ್ಷೆಮಾಡದೆ ಥಟ್ಟನೆ ಅವನನ್ನು ನಂಬಕೂಡದು (೩೭–೩೯). ಠಕ್ಕರು ತಮ್ಮ ಹೃದ್ಗತವನ್ನು ಮುಚ್ಚಿಟ್ಟು ವ್ಯವಹರಿಸುತ್ತಾರೆ. ಸಂದು ಸಿಕ್ಕಿದಾಗ ಬಲವಾದ ಹೊಡೆತವನ್ನು ಕೊಡುತ್ತಾರೆ. ಆಗ ದೊಡ್ಡ ಅನರ್ಥವೇ ಸಂಭವಿಸೀತು. ಸಾಧಕಬಾಧಕಗಳನ್ನು ನಿಶ್ಚಯಿಸಿ ಉದ್ಯೋಗವನ್ನು ಆರಂಭಿಸಬೇಕು. ಗುಣವಿದ್ದರೆ ಸ್ವೀಕರಿಸಬೇಕು. ದೋಷವಿದ್ದರೆ ವರ್ಜಿಸಬೇಕು (೪೦–೪೧). ಆದ್ದರಿಂದ, ರಾಜಪುತ್ರ, ವಿಭೀಷಣನನ್ನು ಸೇರಿಸಿಕೊಂಡಲ್ಲಿ ಮಹತ್ತರವಾದ ಬಾಧಕವು ಸಂಭವಿಸುವುದಾದರೆ ಹಿಂದೆ ಮುಂದೆ ನೋಡದೆ ಅವನನ್ನು ತ್ಯಜಿಸಿಬಿಡು! ಸೇರಿಸಿಕೊಂಡಲ್ಲಿ ಬಹಳ ಪ್ರಯೋಜನಗಳಿವೆ – ಸಾಧಕವುಂಟು ಎಂದಾದರೆ ಸೇರಿಸಿಕೊಳ್ಳೋಣ!'' ಎಂದನು (೪೨). ಅನಂತರ ಶಂಭನು ಮನಸ್ಸಿನಲ್ಲಿ ಮುಂದೇನು ಮಾಡಬೇಕೆಂದು ನಿಶ್ಚಯಿಸಿಕೊಂಡು ಅರ್ಥಯುಕ್ತವಾಗಿ ''ನರಶ್ರೇಷ್ಠ, ಈ ವಿಭೀಷಣನನ್ನು ಪರೀಕ್ಷಿಸುವುದಕ್ಕಾಗಿ ಕೂಡಲೆ ಗೂಢಚಾರರನ್ನು ನೇಮಿಸು. ಕುಶಲನಾದ ಚಾರನು

**ಜಾಂಬವಾಂಸ್ತ್ವಥ ಸಂಪ್ರೇಕ್ಷ್ಯ ಶಾಸ್ತ್ರಬುದ್ಧ್ಯಾ ವಿಚಕ್ಷಣಃ ।**
**ವಾಕ್ಯಂ ವಿಜ್ಞಾಪಯಾಮಾಸ ಗುಣವದ್ದೋಷವರ್ಜಿತಮ್ ॥** ೪೫

**ಬದ್ಧವೈರಾಚ್ಚ ಪಾಪಾಚ್ಚ ರಾಕ್ಷಸೇಂದ್ರಾದ್ವಿಭೀಷಣಃ ।**
**ಅದೇಶಕಾಲೇ ಸಂಪ್ರಾಪ್ತಃ ಸರ್ವಥಾ ಶಂಕ್ಯತಾಮಯಮ್ ॥** ೪೬

**ತತೋ ಮೈಂದಸ್ತು ಸಂಪ್ರೇಕ್ಷ್ಯ ನಯಾಪನಯಕೋವಿದಃ ।**
**ವಾಕ್ಯಂ ವಚನಸಂಪನ್ನೋ ಬಭಾಷೇ ಹೇತುಮತ್ತರಮ್ ॥** ೪೭

**ವಚನಂ ನಾಮ ತಸ್ಯೈಷ ರಾವಣಸ್ಯ ವಿಭೀಷಣಃ ।**
**ಪೃಚ್ಛ್ಯತಾಂ ಮಧುರೇಣಾಯಂ ಶನೈರ್ನರವರೇಶ್ವರ ॥** ೪೮

---

ಅವನನ್ನು ಪರೀಕ್ಷಿಸಿ ವಸ್ತುಸ್ಥಿತಿಯನ್ನು ಅರಿಕೆಮಾಡಲಿ. ಆಮೇಲೆ ನ್ಯಾಯವಾಗಿದ್ದರೆ ಆ ರಾಕ್ಷಸನನ್ನು ಸೇರಿಸಿಕೊಳ್ಳಬಹುದು'' ಎಂದು ನುಡಿದನು (೪೩–೪೪). ತರುವಾಯ ಕಾರ್ಯವಿಚಕ್ಷಣನಾದ ಜಾಂಬವಂತನು ರಾಜಶಾಸ್ತ್ರದ ಪ್ರಕಾರ ವಿಮರ್ಶಿಸಿ ''ಈ ವಿಭೀಷಣನು ರಾಕ್ಷಸರಾಜನ ಬಳಿಯಿಂದ ಬಂದಿದ್ದಾನೆ. ಆ ರಾವಣನಾದರೋ ನಮ್ಮೊಡನೆ ಹಗೆತನವನ್ನು ಬೆಳೆಸಿರುವ ಪಾಪಿ. ಅಲ್ಲದೆ ಇವನು ಬಂದ ದೇಶಕಾಲಗಳೂ* ವಿಪರೀತವಾದವುಗಳು. ಆದ್ದರಿಂದ ಇವನನ್ನು ನಂಬಕೂಡದು'' ಎಂದು ದೋಷರಹಿತವೂ ಗುಣಯುಕ್ತವೂ ಆದ ಮಾತನ್ನು ಅರಿಕೆಮಾಡಿದನು (೪೫–೪೬). ಆಮೇಲೆ ಮೈಂದನು ಮಾತಾಡಿದನು. ಅವನು ಸರಿದಪ್ಪುಗಳನ್ನು ನಿರ್ಣಯಿಸುವುದರಲ್ಲಿ ಗಟ್ಟಿಗನೂ ಒಳ್ಳೆಯ ಮಾತುಗಾರನೂ ಆಗಿದ್ದನು. ಆತನು ''ರಾಜಪುತ್ರ, ಆ ವಿಭೀಷಣನೊಡನೆ ಗುಪ್ತಾಚಾರರಿಂದ ಒಳ್ಳೆಯ ಮಾತಿನಿಂದಲೇ ಮೆಲ್ಲಗೆ ಮಾತಾಡಿಸಿ ನೋಡು. ರಾವಣನು ಏನು ಹೇಳಿದನೆಂದು ಕೇಳಿಸಿ ನೋಡು.

---

* ಆದೇಶ = ಶತ್ರುವು ಯುದ್ಧಸನ್ನದ್ಧನಾಗಿರುವ ದೇಶ; ಲಂಕೆಗೆ ಸಮೀಪದಲ್ಲಿರುವ ದೇಶ. ಅಕಾಲ = ಯುದ್ಧವು ಪ್ರಾರಂಭವಾಗುವ ಕಾಲ; ತನ್ನ ಅಣ್ಣನಿಗೆ ಕಷ್ಟ ಬಂದಿರುವ ಕಾಲ ; ಯುದ್ಧದಲ್ಲಿ ರಾವಣನಿಗೆ ಸೋಲಾಗುವುದೆಂಬ ನಿಶ್ಚಯಕ್ಕೆ ಅವಕಾಶವಾಗದಿರುವ ಕಾಲ.

ಭಾವಮಸ್ಯ ತು ವಿಜ್ಞಾಯ ತತಸ್ತತ್ತ್ವಂ ಕರಿಷ್ಯಸಿ ।
ಯದಿ ದುಷ್ಟೋ ನ ದುಷ್ಟೋ ವಾ ಬುದ್ಧಿಪೂರ್ವಂ ನರರ್ಷಭ ॥ ೪೯

ಅಥ ಸಂಸ್ಕಾರಸಂಪನ್ನೋ ಹನೂಮಾನ್ ಸಚಿವೋತ್ತಮಃ ।
ಉವಾಚ ವಚನಂ ಶ್ಲಕ್ಷ್ಣಮರ್ಥವನ್ಮಧುರಂ ಲಘು ॥ ೫೦

ನ ಭವಂತಂ ಮತಿಶ್ರೇಷ್ಠಂ ಸಮರ್ಥಂ ವದತಾಂ ವರಮ್ ।
ಅತಿಶಾಯಯಿತುಂ ಶಕ್ತೋ ಬೃಹಸ್ಪತಿರಪಿ ಬ್ರುವನ್ ॥ ೫೧

ನ ವಾದಾನ್ನಾಪಿ ಸಂಘರ್ಷಾನ್ನಾಧಿಕ್ಯಾನ್ನ ಚ ಕಾಮತಃ ।
ವಕ್ಷ್ಯಾಮಿ ವಚನಂ ರಾಜನ್ ಯಥಾರ್ಥಂ ರಾಮ ಗೌರವಾತ್ ॥ ೫೨

ಅರ್ಥಾನರ್ಥನಿಮಿತ್ತಂ ಹಿ ಯದುಕ್ತಂ ಸಚಿವೈಸ್ತವ ।
ತತ್ರ ದೋಷಂ ಪ್ರಪಶ್ಯಾಮಿ ಕ್ರಿಯಾ ನ ಹ್ಯುಪಪದ್ಯತೇ ॥ ೫೩

---

ಆಗ ಅವನ ಮನಸ್ಸಿನಲ್ಲಿ ಹುದುಗಿರುವ ಭಾವವೇನೆಂಬುದು ತಿಳಿಯುವುದು. ಅವನು ದುಷ್ಟನೋ ಅಲ್ಲವೋ ಎಂಬುದನ್ನು ಆಗ ವಿವೇಚಿಸಿ ಯಥೋಚಿತವಾಗಿ ನಡೆಯಬಹುದು'' ಎಂದು ಯುಕ್ತಿಸಮ್ಮತವಾಗಿ ನಿವೇದಿಸಿದನು (೪೭–೪೯). ಅನಂತರ ಹನುಮಂತನು ಮಾತಾಡಿದನು. ಅವನಾದರೋ ಪರಿಷ್ಕೃತಬುದ್ಧಿಯಾದ ಸಚಿವೋತ್ತಮ. ಅವನ ನುಡಿಯು ನಯವಾಗಿಯೂ ಮಧುರವಾಗಿಯೂ ಸರಳವಾಗಿಯೂ ಇತ್ತು, ಅರ್ಥಗಂಭೀರವಾಗಿತ್ತು (೫೦). ಹನುಮಂತನು ಹೀಗೆಂದನು : ''ಶ್ರೀರಾಮ, ನೀನು ಮಹಾಪ್ರಾಜ್ಞನೂ ಊಹಾಪೋಹವಿಚಕ್ಷಣನೂ ಆದ ಶ್ರೇಷ್ಠವಾಗ್ಮಿಯಾಗಿದ್ದೀಯೆ. ವಾಚಸ್ಪತಿಯೆನಿಸಿದ ಬೃಹಸ್ಪತಿಯೂ ಸಹ ನಿನ್ನನ್ನು ಮೀರಿಸಲಾರ (೫೧). ನಾನು ವಾದಕ್ಕಾಗಿ ಮಾತನಾಡುತ್ತಿಲ್ಲ, ಇತರ ಸಚಿವರೊಡನೆ ಸ್ಪರ್ಧಿಸಬೇಕೆಂದಾಗಲಿ, ನನ್ನ ಹೆಚ್ಚುಗಾರಿಕೆಯನ್ನು ತೋರಿಸಬೇಕೆಂದಾಗಲಿ ಅಲ್ಲ, ಮಾತಾಡುವ ಚಾಪಲ್ಯದಿಂದಲೂ ಅಲ್ಲ, ಕಾರ್ಯಗೌರವವು ಈ ರೀತಿಯಲ್ಲಿ ಸಂಭವಿಸಿರುವುದರಿಂದಲೂ ನೀನು ನನ್ನಲ್ಲಿಟ್ಟಿರುವ ಆದರದಿಂದಲೂ ಚೋದಿತನಾಗಿ, ಪ್ರಭು, ನನಗೆ ಯುಕ್ತವೆನಿಸಿದುದನ್ನು ನಿವೇದಿಸಿಕೊಳ್ಳುತ್ತೇನೆ (೫೨). ವಿಭೀಷಣನನ್ನು ಸಂಗ್ರಹಿಸುವುದರಿಂದ ಲಾಭವೇನು, ಅನರ್ಥವೇನು – ಎಂಬುದನ್ನು ಪರೀಕ್ಷಿಸಬೇಕೆಂದು ಲಾಭವೇನು, ಅನರ್ಥವೇನು – ಎಂಬುದನ್ನು ಪರೀಕ್ಷಿಸಬೇಕೆಂದು ನಿನ್ನ ಸಚಿವನರು ಹೇಳಿದರಷ್ಟೆ. ಆದರಲ್ಲಿ ಒಂದು

ಋತೇ ನಿಯೋಗಾತ್ಸಾಮರ್ಥ್ಯಮವಬೋದ್ಧುಂ ನ ಶಕ್ಯತೇ ।
ಸಹಸಾ ವಿನಿಯೋಗೋ ಹಿ ದೋಷವಾನ್ ಪ್ರತಿಭಾತಿ ಮೇ ॥ ೫೪

ಚಾರಪ್ರಣಿಹಿತಂ ಯುಕ್ತಂ ಯದುಕ್ತಂ ಸಚಿವೈಸ್ತವ ।
ಅರ್ಥಸ್ಯಾಸಂಭವಾತ್ತತ್ರ ಕಾರಣಂ ನೋಪಪದ್ಯತೇ ॥ ೫೫

ಅದೇಶಕಾಲೇ ಸಂಪ್ರಾಪ್ತ ಇತ್ಯಯಂ ಯದ್ವಿಭೀಷಣಃ ।

ವಿವಕ್ಷಾ ತತ್ರ ಮೇಽಸ್ತೀಯಂ ತಾಂ ನಿಬೋಧ ಯಥಾಮತಿ ॥ ೫೬

ಸ ಏಷ ದೇಶಃ ಕಾಲಶ್ಚ ಭವತೀತಿ ಯಥಾ ತಥಾ ।
ಪುರುಷಾತ್ಪುರುಷಂ ಪ್ರಾಪ್ಯ ತಥಾ ದೋಷಗುಣಾವಪಿ ॥ ೫೭

ದೌರಾತ್ಮ್ಯಂ ರಾವಣೇ ದೃಷ್ಟ್ವಾ ವಿಕ್ರಮಂ ಚ ತಥಾ ತ್ವಯಿ ।
ಯುಕ್ತಮಾಗಮನಂ ತಸ್ಯ ಸದೃಶಂ ತಸ್ಯ ಬುದ್ಧಿತಃ ॥ ೫೮

---

ಕೊರತೆಯು ನನಗೆ ಕಾಣಿಸುತ್ತದೆ. ಪರೀಕ್ಷಿಸುವ ವಿಧಾನವಾವುದು ? ಅದೇ ಸಾಧ್ಯವಾದ್ದಲ್ಲ (೫೩). ಆತನನ್ನು ಯಾವುದಾದರೊಂದು ರಾಜಕಾರ್ಯದಲ್ಲಿ ನೇಮಿಸಿದ ಹೊರತು ಅವನ ಯೋಗ್ಯತೆಯನ್ನು ಪರೀಕ್ಷಿಸಲು ಸಾಧ್ಯವಾಗದು. ಮೊದಲೇ ಪರೀಕ್ಷಿಸದೆ ರಾಜಕಾರ್ಯದಲ್ಲಿ ನಿಯೋಜಿಸುವುದೇ ತಪ್ಪಿನ ಕೆಲಸ ವೆಂದು ನನಗೆ ತೋರುತ್ತದೆ ! (೫೪). ಇನ್ನು ಗೂಢಚಾರರನ್ನು ಕಳಿಸಿ ನೋಡಬೇಕೆಂದು ಕೆಲವು ಸಚಿವರು ಹೇಳಿದರು. ಅದೇನೋ ಸರಿ. ಆದರೆ ಅದರಿಂದ ಪ್ರಯೋಜನವೇನು? ಪರೋಕ್ಷದಲ್ಲಿರುವವನಿಗೆ ಗೂಢಚಾರನಿಂದ ಪರೀಕ್ಷೆಯಾಗಬೇಕು. ವಿಭೀಷಣನು ಪ್ರತ್ಯಕ್ಷವಾಗಿ ಎದುರಿಗೆ ಬಂದಿರುವಾಗ ಗೂಢವಾಗಿ ಪರೀಕ್ಷಿಸುವ ಉಪಾಯವಿಲ್ಲ! (೫೫). ವಿಭೀಷಣನು ಆದೇಶ ಕಾಲಗಳಲ್ಲಿ ಬಂದಿದ್ದಾನೆಂಬ ಒಂದು ಅಭಿಪ್ರಾಯವಿದೆ. ಆ ವಿಷಯದಲ್ಲಿ ನಾನು ಹೇಳಬೇಕಾದ ಒಂದು ಅಂಶವಿದೆ. ಯಥಾಮತಿಯಾಗಿ ಹೇಳುವೆನು, ಕೇಳು (೫೬). ಶರಣಾಗತನಾಗಿ ಬರಲು ವಿಭೀಷಣನಿಗೆ ಇದೇ ಯುಕ್ತವಾದ ದೇಶ, ಯುಕ್ತವಾದ ಕಾಲ – ಎಂದು ನನಗನ್ನಿಸುತ್ತದೆ! ಒಬ್ಬನಲ್ಲಿ ದೋಷ ವನ್ನೂ ಇನ್ನೊಬ್ಬನಲ್ಲಿ ಗುಣವನ್ನೂ ಆತನು ಕಂಡಿರುವ ಸಮಯವಿದು. ದುಷ್ಟನನ್ನು ಬಿಟ್ಟೊಡನೆ ಗುಣಶಾಲಿಯನ್ನು ಆಶ್ರಯಿಸಲು ಸರಿಯಾದ ಸ್ಥಳ ವಿದು (೫೭). ರಾವಣನ ದೌರ್ಜನ್ಯವನ್ನೂ ನಿನ್ನ ಅಸಾಧಾರಣವಾದ ಪರಾಕ್ರಮವನ್ನೂ ಕಂಡು ಆತನು ಬಂದಿರುವುದು ಸರಿಯಾಗಿಯೇ ಇದೆ.

ಅಜ್ಞಾತರೂಪೈಃ ಪುರುಷೈಃ ಸ ರಾಜನ್ ಪೃಚ್ಛ್ಯತಾಮಿತಿ ।
ಯದುಕ್ತಮತ್ರ ಮೇ ಪ್ರೇಕ್ಷಾ ಕಾಚಿದಸ್ತಿ ಸಮೀಕ್ಷಿತಾ ॥ ೫೯

ಪೃಚ್ಛ್ಯಮಾನೋ ವಿಶಂಕೇತ ಸಹಸಾ ಬುದ್ಧಿಮಾನ್ ವಚಃ ।
ತತ್ರ ಮಿತ್ರಂ ಪ್ರದುಷ್ಯೇತ ಮಿಥ್ಯಾ ಪೃಷ್ಟಂ ಸುಖಾಗತಮ್ ॥ ೬೦

ಅಶಕ್ಯಃ ಸಹಸಾ ರಾಜನ್ ಭಾವೋ ವೇತ್ತುಂ ಪರಸ್ಯ ವೈ ।
ಅಂತಃಸ್ವಭಾವೈರ್ಗೀತೈಸ್ತೈರ್ನೈಪುಣ್ಯಂ ಪಶ್ಯತಾ ಭೃಶಮ್ ॥ ೬೧

ನ ತ್ವಸ್ಯ ಬ್ರುವತೋ ಜಾತು ಲಕ್ಷ್ಯತೇ ದುಷ್ಟಭಾವತಾ ।
ಪ್ರಸನ್ನಂ ವದನಂ ಚಾಪಿ ತಸ್ಮಾನ್ಮೇ ನಾಸ್ತಿ ಸಂಶಯಃ ॥ ೬೨

ಅಶಂಕಿತಮತಿಃ ಸ್ವಸ್ಥೋ ನ ಶಠಃ ಪರಿಸರ್ಪತಿ ।
ನ ಚಾಸ್ಯ ದುಷ್ಟಾ ವಾಕ್ ಚಾಪಿ ತಸ್ಮಾನ್ನಾಸ್ತೀಹ ಸಂಶಯಃ ॥ ೬೩

---

ಆತನ ಬುದ್ಧಿಗೆ ಅನುಗುಣವಾಗಿದೆ! (೫೮). ಶ್ರೀರಾಮ, ಗುಪ್ತಚಾರರಿಂದ ಅವನನ್ನು ಮಾತಾಡಿಸಿ ನೋಡಬೇಕೆಂದು ಮೈಂದನು ಹೇಳಿದನಷ್ಟೆ. ಆ ವಿಷಯದಲ್ಲಿ ನನ್ನ ಒಂದು ನಿಶ್ಚಿತವಾದ ಅಭಿಪ್ರಾಯವಿದೆ. ಗುಪ್ತಚಾರನು ಹೋಗಿ ಪ್ರಶ್ನೆಮಾಡಿದರೆ 'ಯಾರಿವನು? ಏಕೆ ಹೀಗೆ ಪ್ರಶ್ನೆ ಮಾಡುತ್ತಾನೆ?' ಎಂದು ಯಾವ ಬುದ್ಧಿಶಾಲಿಗಾದರೂ ಸಂದೇಹವಾಗುವುದು. ವಂಚನೆಯ ಪ್ರಶ್ನೆಯನ್ನು ಕೇಳಿದಾಗ, ಸದ್ಭಾವನೆಯಿಂದ ಬಂದ ಮಿತ್ರನಾಗಿದ್ದರೆ, ಅವನ ಮನಸ್ಸು ಕೆಡುವುದು. ಸುಖವಾಗಿ ಕೈಸೇರಿದ ಒಬ್ಬ ಮಿತ್ರನನ್ನು ನಾವು ಕಳೆದುಕೊಂಡಂತಾಗುವುದು (೫೯–೬೦). ಅಲ್ಲದೆ ನರೇಂದ್ರ, ಒಬ್ಬನ ಮನೋಗತವನ್ನು ಒಮ್ಮೆಗೇ ತಿಳಿಯುವುದು ಅಶಕ್ಯವಾದುದು. ತನ್ನ ಉದ್ದೇಶ ವನ್ನು ಒಳಗೇ ಹುದುಗಿಸಿಕೊಂಡು ಹರಟುವ ಮಾತುಗಳಿಂದ ಎಂತಹ ನಿಪುಣ ನಿಗೂ ನಿಜವಾದ ಉದ್ದೇಶವನ್ನು ಅರಿಯುವುದು ಅಶಕ್ಯವಾಗುವುದು (೬೧). ವಿಭೀಷಣನು ಮಾತಾಡುವಾಗ ನಾನು ಅವನನ್ನು ಗಮನಿಸಿದ್ದೇನೆ. ಅವನಲ್ಲಿ ಕೆಟ್ಟ ಉದ್ದೇಶವಿದೆಯೆಂದು ನನಗಂತೂ ತೋರಲಿಲ್ಲ. ಅವನ ಮುಖವು ಪ್ರಸನ್ನವಾಗಿಯೇ ಇತ್ತು. ಆದ್ದರಿಂದ ಅವನು ದುಷ್ಟನೆಂಬ ಶಂಕೆ ನನಗಿಲ್ಲ (೬೨). ಆತನು ಮುಂದೇನಾಗುವುದೋ ಎಂಬ ಯಾವ ಭೀತಿಯನ್ನೂ ಇಟ್ಟುಕೊಳ್ಳದೆ ದೃಢಚಿತ್ತನಾಗಿ ಬಂದಿದ್ದಾನೆ. ಕುಟಿಲಬುದ್ಧಿಯಿಂದ ಬಂದಂತೆ ಕಾಣುವುದಿಲ್ಲ. ಆತನು ಮಾತಾಡುವಾಗ ತೊದಲುವುದೇ ಮೊದಲಾದ

ಆಕಾರಶ್ಛಾದ್ಯಮಾನೋಽಪಿ ನ ಶಕ್ಯೋ ವಿನಿಗೂಹಿತುಮ್ ।
ಬಲಾದ್ಧಿ ವಿವೃಣೋತ್ಯೇವ ಭಾವಮಂತರ್ಗತಂ ನೃಣಾಮ್ ॥ ೬೪

ದೇಶಕಾಲೋಪಪನ್ನಂ ಚ ಕಾರ್ಯಂ ಕಾರ್ಯವಿದಾಂ ವರ ।
ಸಫಲಂ ಕುರುತೇ ಕ್ಷಿಪ್ರಂ ಪ್ರಯೋಗೇಣಾಭಿಸಂಹಿತಮ್ ॥ ೬೫

ಉದ್ಯೋಗಂ ತವ ಸಂಪ್ರೇಕ್ಷ್ಯ ಮಿಥ್ಯಾವೃತ್ತಂ ಚ ರಾವಣಮ್ ।
ವಾಲಿನಶ್ಚ ವಧಂ ಶ್ರುತ್ವಾ ಸುಗ್ರೀವಂ ಚಾಭಿಷೇಚಿತಮ್ ॥ ೬೬

ರಾಜ್ಯಂ ಪ್ರಾರ್ಥಯಮಾನಶ್ಚ ಬುದ್ಧಿಪೂರ್ವಮಿಹಾಗತಃ ।
ಏತಾವತ್ತು ಪುರಸ್ಕೃತ್ಯ ಯುಜ್ಯತೇ ತ್ವಸ್ಯ ಸಂಗ್ರಹಃ ॥ ೬೭

ಯಥಾಶಕ್ತಿ ಮಯೋಕ್ತಂ ತು ರಾಕ್ಷಸಸ್ಯಾರ್ಜವಂ ಪ್ರತಿ ।
ತ್ವಂ ಪ್ರಮಾಣಂ ತು ಶೇಷಸ್ಯ ಶ್ರುತ್ವಾ ಬುದ್ಧಿಮತಾಂ ವರ ॥ ೬೮

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತದಶಃ ಸರ್ಗಃ

---

ಯಾವ ದೋಷವೂ ಗೋಚರಿಸಲಿಲ್ಲ (೬೩). ಮರೆಮಾಚಲು ಎಷ್ಟು ಯತ್ನಿಸಿದರೂ ಮುಖದ ಆಕಾರವನ್ನು ಮುಚ್ಚಿಕೊಳ್ಳಲು ಸಾಧ್ಯವಿಲ್ಲ. ಆಕಾರವು ಜನರ ಮನೋಗತವನ್ನು ಹೊರಡಿಸಿಯೇ ತೀರುತ್ತದೆ. ದೇಶ ಕಾಲಗಳ ಔಚಿತ್ಯವನ್ನು ಮನಗಂಡು ಪ್ರಯೋಗಿಸಿದ ಕಾರ್ಯವು ಶೀಘ್ರವಾಗಿ ಫಲಿಸುವುದಲ್ಲವೆ ? (ಅದನ್ನು ವಿಭೀಷಣನು ಬಲ್ಲನು.) ಕಾರ್ಯಜ್ಞರಲ್ಲಿ ಅಗ್ರಗಣ್ಯನಾದ ನಿನಗೆ ಅದು ತಿಳಿದ ಸಂಗತಿಯೇ ಸರಿ (೬೪–೬೫). ಶ್ರೀರಾಮ, ಕಾರ್ಯೋಚಿತವಾದ ನಿನ್ನ ಕಾರ್ಯಧೋರಣೆಯನ್ನೂ ಇಲ್ಲದ ಬಲ, ಸಲ್ಲದ ನಡತೆಗಳಿಂದ ಗರ್ವಿತನಾದ ರಾವಣನನ್ನೂ ವಿಭೀಷಣನು ಗಮನಿಸಿದ್ದಾನೆ. ವಾಲಿಯ ವಧೆಯನ್ನೂ ಸುಗ್ರೀವನ ಪಟ್ಟಾಭಿಷೇಕವನ್ನೂ ಕೇಳಿದ್ದಾನೆ. ಆದ್ದರಿಂದ ಆತನು ರಾಜ್ಯಕಾಮಿಯಾಗಿ ಬುದ್ಧಿಪೂರ್ವಕವಾಗಿಯೇ ಇಲ್ಲಿಗೆ ಬಂದಿದ್ದಾನೆ! ಇವಿಷ್ಟನ್ನು ಪರಿಶೀಲಿಸಿದರೆ ಅವನನ್ನು ಸೇರಿಸಿಕೊಳ್ಳು ವುದು ಯುಕ್ತವಾಗಿ ತೋರುತ್ತದೆ (೬೬–೬೭). ಪ್ರಭು, ನೀನು ಬುದ್ಧಿಶಾಲಿ ಗಳಲ್ಲಿ ಶ್ರೇಷ್ಠನಾದವನು. ಯಥಾಶಕ್ತಿಯಾಗಿ ನನಗೆ ತಿಳಿದಮಟ್ಟಿಗೆ ಆ ರಾಕ್ಷಸನು ಋಜುಬುದ್ಧಿಯವನೆಂದು ನಿವೇದಿಸಿಕೊಂಡಿದ್ದೇನೆ. ಮುಂದಿನ ತೀರ್ಮಾನವು ನಿನಗೆ ಸೇರಿದ್ದು'' ಎಂದು ಹೇಳಿದನು (೬೮).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಹದಿನೇಳನೆಯ ಸರ್ಗ

## ಅಷ್ಟಾದಶಃ ಸರ್ಗಃ

### ವಿಭೀಷಣಸಂಗ್ರಹನಿರ್ಣಯಃ

ಅಥ ರಾಮಃ ಪ್ರಸನ್ನಾತ್ಮಾ ಶ್ರುತ್ವಾ ವಾಯುಸುತಸ್ಯ ಹ ।
ಪ್ರತ್ಯಭಾಷತ ದುರ್ಧರ್ಷಃ ಶ್ರುತವಾನಾತ್ಮನಿ ಸ್ಥಿತಮ್ ॥ ೧

ಮಮಾಪಿ ತು ವಿವಕ್ಷಾಸ್ತಿ ಕಾಚಿತ್ಪ್ರತಿ ವಿಭೀಷಣಮ್ ।
ಶ್ರುತಿಮಿಚ್ಛಾಮಿ ತತ್ಸರ್ವಂ ಭವದ್ಭಿಃ ಶ್ರೇಯಸಿ ಸ್ಥಿತೈಃ ॥ ೨

ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ ।
ದೋಷೋ ಯದ್ಯಪಿ ತಸ್ಯ ಸ್ಯಾತ್ಸತಾಮೇತದಗರ್ಹಿತಮ್ ॥ ೩

ಸುಗ್ರೀವಸ್ತ್ವಥ ತದ್ವಾಕ್ಯಮಾಭಾಷ್ಯ ಚ ವಿಮೃಶ್ಯ ಚ ।
ತತಃ ಶುಭತರಂ ವಾಕ್ಯಮುವಾಚ ಹರಿಪುಂಗವಃ ॥ ೪

## ಸರ್ಗ ೧೮

### ವಿಭೀಷಣನಿಗೆ ಆಶ್ರಯವನ್ನೀಯಬೇಕೆಂದು ಶ್ರೀರಾಮನ ನಿರ್ಧಾರ.

ವಾಯುತನಯನಾದ ಹನುಮಂತನ ನುಡಿಯನ್ನಾಲಿಸಿ ಶ್ರೀರಾಮನ ಮನಸ್ಸು ಪ್ರಸನ್ನವಾಯಿತು. ವಿದ್ವಾಂಸನಾದ ಆ ವೀರನು ತನ್ನ ಹೃದ್ಗತವನ್ನು ಪ್ರಕಟಿಸಿದನು: ''ಮಿತ್ರರೆ, ವಿಭೀಷಣನ ವಿಷಯವಾಗಿ ನಾನು ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ನನ್ನ ಶ್ರೇಯಸ್ಸಿನಲ್ಲಿ ನಿರತರಾದ ನೀವೆಲ್ಲರೂ ಅದನ್ನು ಮನಸ್ಸಿಟ್ಟು ಕೇಳಬೇಕೆಂದು ನನ್ನ ಅಪೇಕ್ಷೆ (೧–೨). ಮಿತ್ರಭಾವದಿಂದ ನನ್ನನ್ನು ಅರಸಿಕೊಂಡು ಬಂದವನನ್ನು ನಾನು ಎಂದಿಗೂ ತ್ಯಜಿಸಲಾರೆ. ನೀವು ಹೇಳುವಂತೆ ಒಂದು ವೇಳೆ ಆತನಲ್ಲಿ ದೋಷವಿದ್ದರೂ ಆಶ್ರಯವನ್ನೀಯುವುದು ಶಿಷ್ಟರಿಗೆ ನಿಂದನೀಯವಾದ ಕಾರ್ಯವಲ್ಲ. ಅದು ಶಿಷ್ಟಸಮ್ಮತವಾದುದು'' ಎಂದು ಹೇಳಿದನು (೩). ಅನಂತರ ವಾನರೋತ್ತಮನಾದ ಸುಗ್ರೀವನು ಶ್ರೀರಾಮನ ವಾಕ್ಯವನ್ನು ಪುನರುಚ್ಚರಿಸುತ್ತ ವಿಮರ್ಶಿಸಿ

**ಸುದುಷ್ಟೋ ವಾಪ್ಯದುಷ್ಟೋ ವಾ ಕಿಮೇಷ ರಜನೀಚರಃ ।**
**ಈದೃಶಂ ವ್ಯಸನಂ ಪ್ರಾಪ್ತಂ ಭ್ರಾತರಂ ಯಃ ಪರಿತ್ಯಜೇತ್ ॥ ೫**

**ಕೋ ನಾಮ ಸ ಭವೇತ್ತಸ್ಯ ಯಮೇಷ ನ ಪರಿತ್ಯಜೇತ್ ।**
**ವಾನರಾಧಿಪತೇರ್ವಾಕ್ಯಂ ಶ್ರುತ್ವಾ ಸರ್ವಾನುದೀಕ್ಷ್ಯ ಚ ॥ ೬**

**ಈಷದುತ್ಸ್ಮಯಮಾನಸ್ತು ಲಕ್ಷ್ಮಣಂ ಪುಣ್ಯಲಕ್ಷಣಮ್ ।**
**ಇತಿ ಹೋವಾಚ ಕಾಕುತ್ಸ್ಥೋ ವಾಕ್ಯಂ ಸತ್ಯಪರಾಕ್ರಮಃ ॥ ೭**

**ಅನಧೀತ್ಯ ಚ ಶಾಸ್ತ್ರಾಣಿ ವೃದ್ಧಾನನುಪಸೇವ್ಯ ಚ ।**
**ನ ಶಕ್ಯಮೀದೃಶಂ ವಕ್ತುಂ ಯದುವಾಚ ಹರೀಶ್ವರಃ ॥ ೮**

**ಅಸ್ತಿ ಸೂಕ್ಷ್ಮತರಂ ಕಿಂಚಿದ್ಯದತ್ರ ಪ್ರತಿಭಾತಿ ಮೇ ।**
**ಪ್ರತ್ಯಕ್ಷಂ ಲೌಕಿಕಂ ವಾಪಿ ವಿದ್ಯತೇ ಸರ್ವರಾಜಸು ॥ ೯**

**ಅಮಿತ್ರಾಸ್ತತ್ಕುಲೀನಾಶ್ಚ ಪ್ರಾತಿದೇಶ್ಯಾಶ್ಚ ಕೀರ್ತಿತಾಃ ।**
**ವ್ಯಸನೇಷು ಪ್ರಹರ್ತಾರಸ್ತಸ್ಮಾದಯಮಿಹಾಗತಃ ॥ ೧೦**

---

''ಈ ರಾಕ್ಷಸನು ಬಹಳ ನೀಚನಾಗಿರಬಹುದು, ಅಲ್ಲದಿರಬಹುದು – ಆದರೇನು? ಇಂಥ ವಿಪತ್ತಿನಲ್ಲಿ ಸಿಕ್ಕಿರುವ ಅಣ್ಣನನ್ನು ತ್ಯಜಿಸಿ ಬಂದಿರುವನಲ್ಲ ! (೪–೫). ಸಮಯದಲ್ಲಿ ಈತನು ಯಾರನ್ನು ತಾನೇ ಬಿಟ್ಟುಹೋಗದೆ ಇದ್ದಾನು!'' ಎಂದು ಉದ್ಗರಿಸಿದನು. ವಾನರೇಶ್ವರನ ಈ ಮಾತನ್ನು ಕೇಳಿ ಶ್ರೀರಾಮನು ಅಲ್ಲಿ ನೆರೆದವರೆಲ್ಲರನ್ನೂ ನೋಡುತ್ತ ಮುಗುಳ್ನಗೆ ಬೀರಿದನು. ಸತ್ಯಸಂಧನಾದ ಆ ಕಾಕುತ್ಸ್ಥನು ಪುಣ್ಯಾತ್ಮನಾದ ಲಕ್ಷ್ಮಣನ ಕಡೆಗೆ ತಿರುಗಿ ಹೀಗೆಂದನು (೬–೭) ; ''ವಾನರೇಂದ್ರನಾಡಿದುದು ಬಹಳ ತೂಕದ ಮಾತು. ವಿವಿಧಶಾಸ್ತ್ರಗಳನ್ನೋದದೆ, ಹಿರಿಯರನ್ನು ಸೇವಿಸದೆ, ಇಂಥ ಮಾತನ್ನಾಡುವುದು ಸಾಧ್ಯವಿಲ್ಲ. ಆದರೆ, ಈ ವಿಷಯದಲ್ಲಿ ನನಗೆ ಹೊಳೆಯುವ ಒಂದು ಅತಿಸೂಕ್ಷ್ಮವಾದ ಅಂಶವಿದೆ. ಅದು ಲೋಕದಲ್ಲಿ ಪ್ರತ್ಯಕ್ಷಸಿದ್ಧವಾದುದೇ. ಸಮಸ್ತರಾಜರಲ್ಲಿಯೂ ಇರತಕ್ಕದ್ದೇ ಸರಿ (೮–೯). ಶತ್ರುಗಳಲ್ಲಿ ಎರಡು ವಿಧ : ಅದೇ ಕುಲದಲ್ಲಿ ಹುಟ್ಟಿದ ದಾಯಾದಿಗಳು ಮತ್ತು ನೆರೆಹೊರೆಯವರು. ಇವರು ಹೊಂಚುಹಾಕಿಕೊಂಡಿದ್ದು ಸಮಯದಲ್ಲಿ ಹೊಡೆತವನ್ನು ಕೊಡುತ್ತಾರೆ ! ವಿಭೀಷಣನು ಇದು ಸಮಯವೆಂದರಿತು ಇಲ್ಲಿಗೆ ಬಂದಿದ್ದಾನೆ! (೧೦).

ಅಪಾಪಾಸ್ತತ್ಕುಲೀನಾಶ್ಚ ಮಾನಯಂತಿ ಸ್ವಕಾನ್ ಹಿತಾನ್ ।
ಏಷಪ್ರಾಯೋ ನರೇಂದ್ರಾಣಾಂ ಶಂಕನೀಯಸ್ತು ಶೋಭನಃ ॥ ೧೧

ಯಸ್ತು ದೋಷಸ್ತ್ವಯಾ ಪ್ರೋಕ್ತೋ ಹ್ಯಾದಾನೇಽರಿಬಲಸ್ಯ ಚ ।
ತತ್ರ ತೇ ಕೀರ್ತಯಿಷ್ಯಾಮಿ ಯಥಾಶಾಸ್ತ್ರಮಿದಂ ಶೃಣು ॥ ೧೨

ನ ವಯಂ ತತ್ಕುಲೀನಾಶ್ಚ ರಾಜ್ಯಕಾಂಕ್ಷೀ ಚ ರಾಕ್ಷಸಃ ।
ಪಂಡಿತಾ ಹಿ ಭವಿಷ್ಯಂತಿ ತಸ್ಮಾದ್ಗ್ರಾಹ್ಯೋ ವಿಭೀಷಣಃ ॥ ೧೩

ಅವ್ಯಗ್ರಾಶ್ಚ ಪ್ರಹೃಷ್ಟಾಶ್ಚ ನ ಭವಿಷ್ಯಂತಿ ಸಂಗತಾಃ ।
ಪ್ರಣಾದಶ್ಚ ಮಹಾನೇಷ ತತೋಽಸ್ಯ ಭಯಮಾಗತಮ್ ॥ ೧೪

---

ಪಾಪರಹಿತರಾದ ಬಂಧುಗಳು ಹಿತಕಾರಿಗಳಾದ ತಮ್ಮವರನ್ನು ಸಮ್ಮಾನಿಸುತ್ತಾರೆ. ಪಾಪಿಗಳಾದ ನೃಪಾಲರು ಒಳ್ಳೆಯ ನಡತೆಯ ಬಂಧುವನ್ನು ವಿಶೇಷವಾಗಿ ಸಂದೇಹದೃಷ್ಟಿಯಿಂದಲೇ ನೋಡುತ್ತಾರೆ* (೧೧). ಸುಗ್ರೀವ, ವೈರಿಯ ಪಕ್ಷದವರನ್ನು ಸೇರಿಸಿಕೊಂಡರೆ ಕೆಲವು ತೊಂದರೆಗಳು ಸಂಭವಿಸುತ್ತವೆಯೆಂದು ನೀನು ಹೇಳಿದೆಯಲ್ಲ, ಆ ವಿಷಯದಲ್ಲಿ ನಾನು ಹೇಳುವುದನ್ನು ಕೇಳು. ನಾವು ವಿಭೀಷಣನ ದಾಯಾದಿಗಳಲ್ಲ, ನೆರೆಹೊರೆಯವರೂ ಅಲ್ಲ (ಹೀಗಿರುವಾಗ ವಿಭೀಷಣನಿಗೆ ನಮ್ಮಲ್ಲಿ ದ್ವೇಷವಾದರೂ ಏಕೆ?) ಈ ರಾಕ್ಷಸನಿಗೆ ರಾವಣನ ರಾಜ್ಯದಲ್ಲಿ ಅಪೇಕ್ಷೆ ಹುಟ್ಟಿದೆ! ರಾಕ್ಷಸರಲ್ಲಿಯೂ ಚಾಣಾಕ್ಷರಾದವರು ಇದ್ದಾರೆ. ಆದ್ದರಿಂದ ವಿಭೀಷಣನನ್ನು ನಾವು ಸಂಗ್ರಹಿಸಬೇಕು (೧೩). ಜ್ಞಾತಿಗಳು ಎಂದಿಗೂ ಚಿಂತಾರಹಿತರಾಗಿ ಸಂತೃಪ್ತಿಯಿಂದ ಹೊಂದಿಕೊಂಡು ಹೋಗುವುದಿಲ್ಲ! ಈಗಲಾದರೋ ಮಹತ್ತರವಾದ ಯುದ್ಧಕೋಲಾಹಲ ಉಂಟಾಗಿದೆ. ಮುಂದೆ ಏನಾಗುವುದೋ ಎಂದು ಇವನಿಗೆ ಭಯವಾಗಿದೆ. ಈ ರೀತಿಯಲ್ಲಿ ಜ್ಞಾತಿಗಳು ಬೇರೆಯಾಗುವ ಸಂಭವವಿರುತ್ತದೆ. ಆದ್ದರಿಂದ

---

* ಪ್ರಾಯಶಃ ವಿಭೀಷಣನು ಒಳಅಳೆಯವನಾಗಿರಬೇಕು. ಪಾಪಿಯಾದ ರಾವಣನು ಈತನನ್ನು ನಂಬದೆ ದ್ರೋಹವನ್ನೆಣಿಸಿರಬೇಕು. ಆದ್ದರಿಂದ ವಿಭೀಷಣನು ರಾವಣನನ್ನು ವಿರೋಧಿಸಿ ಶರಣಾರ್ಥಿಯಾಗಿಯೇ ಬಂದಿರಬಹುದೆಂದು ಅಭಿಪ್ರಾಯ

ಇತಿ ಭೇದಂ ಗಮಿಷ್ಯಂತಿ ತಸ್ಮಾದ್ಗ್ರಾಹ್ಯೋ ವಿಭೀಷಣಃ ।
ನ ಸರ್ವೇ ಭ್ರಾತರಸ್ತಾತ ಭವಂತಿ ಭರತೋಪಮಾಃ ॥ ೧೫

ಮದ್ವಿಧಾ ವಾ ಪಿತುಃ ಪುತ್ರಾಃ ಸುಹೃದೋ ವಾ ಭವದ್ವಿಧಾಃ ।
ಏವಮುಕ್ತಸ್ತು ರಾಮೇಣ ಸುಗ್ರೀವಃ ಸಹಲಕ್ಷ್ಮಣಃ ॥ ೧೬

ಉತ್ಥಾಯೇದಂ ಮಹಾಪ್ರಾಜ್ಞಃ ಪ್ರಣತೋ ವಾಕ್ಯಮಬ್ರವೀತ್ ।
ರಾವಣೇನ ಪ್ರಣಿಹಿತಂ ತಮವೇಹಿ ವಿಭೀಷಣಮ್ ॥ ೧೭

ತಸ್ಯಾಹಂ ನಿಗ್ರಹಂ ಮನ್ಯೇ ಕ್ಷಮಂ ಕ್ಷಮವತಾಂ ವರ ।
ರಾಕ್ಷಸೋ ಜಿಹ್ಮಯಾ ಬುದ್ಧ್ಯಾ ಸಂದಿಷ್ಟೋಽಯಮಿಹಾಗತಃ ॥ ೧೮

ಪ್ರಹರ್ತುಂ ತ್ವಯಿ ವಿಶ್ವಸ್ತೇ ಪ್ರಚ್ಛನ್ನೋ ಮಯಿ ವಾನಘ ।
ಲಕ್ಷ್ಮಣೇ ವಾ ಮಹಾಬಾಹೋ ಸ ವಧ್ಯಃ ಸಚಿವೈಃ ಸಹ ॥ ೧೯

ರಾವಣಸ್ಯ ನೃಶಂಸಸ್ಯ ಭ್ರಾತಾ ಹ್ಯೇಷ ವಿಭೀಷಣಃ ।
ಏವಮುಕ್ತ್ವಾ ರಘುಶ್ರೇಷ್ಠಂ ಸುಗ್ರೀವೋ ವಾಹಿನೀಪತಿಃ ॥ ೨೦

---

ವಿಭೀಷಣನನ್ನು ನಾವು ಸೇರಿಸಿಕೊಳ್ಳಬೇಕು (೧೪). ಅಪ್ಪಾ – ಸುಗ್ರೀವ, ಸೋದರರೆಲ್ಲರೂ ನಮ್ಮ ಭರತನಂತೆ ಇರುವುದಿಲ್ಲ. ನನ್ನಂತಹ ಪುತ್ರರಾಗಲಿ ನಿನ್ನಂತಹ ಮಿತ್ರರಾಗಲಿ ಇರುವುದು ವಿರಳ'' ಎಂದು ಹೇಳಿದನು. ಈ ರೀತಿಯಲ್ಲಿ ಶ್ರೀರಾಮನು ಸುಗ್ರೀವನನ್ನೂ ಲಕ್ಷ್ಮಣನನ್ನೂ ನೋಡುತ್ತ ನುಡಿಯಲು, ಮಹಾಪ್ರಾಜ್ಞನಾದ ಸುಗ್ರೀವನು ಎದ್ದುನಿಂತು ನಮಸ್ಕರಿಸಿ ಹೀಗೆಂದನು (೧೫–೧೬): ''ಶ್ರೀರಾಮ, ರಾವಣನು ಈ ವಿಭೀಷಣನನ್ನು ಗುಪ್ತಚಾರನನ್ನಾಗಿ ಕಳಿಸಿದ್ದಾನೆಂದೇ ತಿಳಿ! ನೀನು ಬಹಳ ಶಾಂತಸ್ವಭಾವದವನು! ನಾನಂತೂ ಈ ರಾಕ್ಷಸನನ್ನು ಹಿಡಿದು ದಂಡಿಸುವುದೇ ಯುಕ್ತವೆಂದು ತಿಳಿದಿದ್ದಾನೆ. ಈತನು ರಾವಣನಿಂದ ಪ್ರೇರಿತನಾಗಿ ಕುಟಿಲಬುದ್ಧಿಯಿಂದಲೇ ಬಂದಿದ್ದಾನೆ (೧೭–೧೮). ನಮಗೆ ನಂಬಿಕೆಯನ್ನು ಹುಟ್ಟಿಸಿ, ಗುಪ್ತವಾಗಿ ನನ್ನನ್ನೋ ನಿನ್ನನ್ನೋ ಅಥವಾ ಲಕ್ಷ್ಮಣನನ್ನೋ ಸಂಹರಿಸಬೇಕೆಂಬುದು ಇವನ ಉದ್ದೇಶ ! ಆದ್ದರಿಂದ ಇವನ ಮಂತ್ರಿಗಳ ಸಹಿತವಾಗಿ ಈ ರಾಕ್ಷಸನನ್ನು ತೀರಿಸಿಬಿಡಬೇಕು. ಈ ವಿಭೀಷಣನು ದುರಾತ್ಮನಾದ ರಾವಣನ ತಮ್ಮನಲ್ಲವೆ?'' ಎಂದನು (೧೯). ಮಾತುಗಾರರಲ್ಲಿ ಬಲ್ಲಿದನೂ

ವಾಕ್ಯಜ್ಞೋ ವಾಕ್ಯಕುಶಲಂ ತತೋ ಮೌನಮುಪಾಗಮತ್ ।
ಸುಗ್ರೀವಸ್ಯ ತು ತದ್ವಾಕ್ಯಂ ಶ್ರುತ್ವಾ ರಾಮೋ ವಿಮೃಶ್ಯ ಚ ॥ ೨೧

ತತಃ ಶುಭತರಂ ವಾಕ್ಯಮುವಾಚ ಹರಿಪುಂಗವಮ್ ।
ಸುದುಷ್ಟೋ ವಾಪ್ಯದುಷ್ಟೋ ವಾ ಕಿಮೇಷ ರಜನೀಚರಃ ॥ ೨೨

ಸೂಕ್ಷ್ಮಮಪ್ಯಹಿತಂ ಕರ್ತುಂ ಮಮಾಶಕ್ತಃ ಕಥಂಚನ ।
ಪಿಶಾಚಾನ್ ದಾನವಾನ್ ಯಕ್ಷಾನ್ ಪೃಥಿವ್ಯಾಂ ಚೈವ ರಾಕ್ಷಸಾನ್ ॥

ಅಂಗುಲ್ಯಗ್ರೇಣ ತಾನ್ ಹನ್ಯಾಮಿಚ್ಛನ್ ಹರಿಗಣೇಶ್ವರ ।
ಶ್ರೂಯತೇ ಹಿ ಕಪೋತೇನ ಶತ್ರುಃ ಶರಣಮಾಗತಃ ॥ ೨೪

ಅರ್ಚಿತಶ್ಚ ಯಥಾನ್ಯಾಯಂ ಸ್ವೈಶ್ಚ ಮಾಂಸೈರ್ನಿಮಂತ್ರಿತಃ ।
ಸ ಹಿ ತಂ ಪ್ರತಿಜಗ್ರಾಹ ಭಾರ್ಯಾಹರ್ತಾರಮಾಗತಮ್ ॥ ೨೫

---

ವಾನರಸೇನಾಧ್ಯಕ್ಷನೂ ಆದ ಸುಗ್ರೀವನು ವಾಗ್ವಿಶಾರದನಾದ ರಘುನಾಥನಿಗೆ ಈ ಪ್ರಕಾರವಾಗಿ ತಿಳಿಸಿ ಸುಮ್ಮನಾದನು. ಸುಗ್ರೀವನ ನುಡಿಯನ್ನಾಲಿಸಿ ಕೇಳಿದ ಶ್ರೀರಾಮನು ಮನಸ್ಸಿನಲ್ಲಿಯೇ ವಿಮರ್ಶಿಸಿ, ಸುಗ್ರೀವನನ್ನು ನೋಡಿ ಹೀಗೆಂದನು (೨೦-೨೧): ''ಸುಗ್ರೀವ, ಈ ರಾಕ್ಷಸನು ದುಷ್ಟನಾಗಿರಲಿ ಒಳ್ಳೆಯವನೇ ಆಗಿರಲಿ, ಅದರಿಂದ ಅಗತಕ್ಕದ್ದೇನು ? ನನಗೆ ಎಳ್ಳಷ್ಟು ಕೆಡಕು ಮಾಡಲೂ ಈತನಿಂದ ಸಾಧ್ಯವಿಲ್ಲ. ಈ ಪೃಥಿವಿಯಲ್ಲಿರುವ ನಿಖಿಲ ಪಿಶಾಚ ದಾನವರನ್ನೂ ಯಕ್ಷರಾಕ್ಷಸರನ್ನೂ, ವಾನರೇಶ್ವರ, ನಾನು ಇಚ್ಛಿಸಿದಲ್ಲಿ ಕಿರುಬೆರಳಿನ ತುದಿಯಿಂದ ಕೊಂದು ಒಗೆದೇನು! (೨೨-೨೩). ಒಂದು ಪಾರಿವಾಳದ ಕಥೆಯುಂಟು. ಅದರ ಮಡದಿಯನ್ನಪಹರಿಸಿದ ಶತ್ರುವಾದ ವ್ಯಾಧನೊಬ್ಬನು ಒಮ್ಮೆ ಶರಣಾಗತನಾಗಬೇಕಾಯಿತಂತೆ. ಆ ಪಾರಿವಾಳವು ವ್ಯಾಧನನ್ನು ಸತ್ಕರಿಸಿ, ತನ್ನ ಮಾಂಸವನ್ನು ತಿಂದು ಹಸಿವನ್ನು ನೀಗಿಸಿಕೊಳ್ಳು ವಂತೆ ಅವನನ್ನು ಕೇಳಿಕೊಂಡಿತು. ವಾನರೋತ್ತಮ, ಆ ಪಾರಿವಾಳವು ತನ್ನ ಮಡದಿಯನ್ನಪಹರಿಸಿದ ಶತ್ರುವೇ ತನ್ನ ಬಳಿಗೆ ಬಂದಾಗ ಆದರಿಸಿತು. ಹೀಗಿರುವಾಗ ನನ್ನಂಥವನು ವಿಭೀಷಣನಿಗೆ ಆಶ್ರಯವನ್ನು ಕೊಡುವುದರಲ್ಲಿ ಹೆಚ್ಚುಗಾರಿಕೆ ಏನು? (೨೪-೨೫).

ಕಪೋತೋ ವಾನರಶ್ರೇಷ್ಠ ಕಿಂ ಪುನರ್ಮದ್ವಿಧೋ ಜನಃ ।
ಋಷೇಃ ಕಣ್ವಸ್ಯ ಪುತ್ರೇಣ ಕಂಡುನಾ ಪರಮರ್ಷಿಣಾ ॥ ೨೬

ಶೃಣು ಗಾಥಾಂ ಪುರಾ ಗೀತಾಂ ಧರ್ಮಿಷ್ಠಾಂ ಸತ್ಯವಾದಿನಾ ।
ಬದ್ಧಾಂಜಲಿಪುಟಂ ದೀನಂ ಯಾಚಂತಂ ಶರಣಾಗತಮ್ ॥ ೨೭

ನ ಹನ್ಯಾದಾನೃಶಂಸ್ಯಾರ್ಥಮಪಿ ಶತ್ರುಂ ಪರಂತಪ ।
ಆರ್ತೋ ವಾ ಯದಿ ವಾ ದೃಪ್ತಃ ಪರೇಷಾಂ ಶರಣಾಗತಃ ॥ ೨೮

ಅಪಿ ಪ್ರಾಣಾನ್ ಪರಿತ್ಯಜ್ಯ ರಕ್ಷಿತವ್ಯಃ ಕೃತಾತ್ಮನಾ ।
ತಂ ಚೇದ್ಭಯಾದ್ವಾ ಮೋಹಾದ್ವಾ ಕಾಮಾದ್ವಾಪಿ ನ ರಕ್ಷತಿ ॥ ೨೯

ಸ್ವಯಾ ಶಕ್ತ್ಯಾ ಯಥಾನ್ಯಾಯಂ ತತ್ಪಾಪಂ ಲೋಕಗರ್ಹಿತಮ್ ।
ವಿನಷ್ಟಃ ಪಶ್ಯತೋ ಯಸ್ಯರಕ್ಷಿತುಃ ಶರಣಾಗತಃ ॥ ೩೦

ಆದಾಯ ಸುಕೃತಂ ತಸ್ಯ ಸರ್ವಂ ಗಚ್ಛೇದರಕ್ಷಿತಃ ।
ಏವಂ ದೋಷೋ ಮಹಾನತ್ರ ಪ್ರಪನ್ನಾನಾಮರಕ್ಷಣೇ ॥ ೩೧

---

ಹಿಂದೆ ಕಣ್ವಮುನಿಯ ಪುತ್ರನಾದ ಕಂಡುವೆಂಬ ಮಹರ್ಷಿಯು ಒಂದು ಗಾಥೆಯನ್ನು ಹೇಳಿದ್ದಾನೆ. ಸತ್ಯವಾದಿಯಾದ ಆ ಋಷಿಯು ಹಾಡಿದ ಧರ್ಮವಚನದ ತಾತ್ಪರ್ಯವನ್ನು ಕೇಳು (೨೬): 'ಯಾವನಾದರೊಬ್ಬನು ಶರಣಾಗತನಾಗಿ ದೈನ್ಯದಿಂದ ಕೈ ಮುಗಿದು ಬೇಡಿಕೊಳ್ಳುತ್ತಿದ್ದರೆ, ಅವನನ್ನು ಎಂದಿಗೂ ಹಿಂಸಿಸಕೂಡದು. ಅವನು ಶತ್ರುವಾಗಿದ್ದರೂ 'ಅಹಿಂಸಾ ಪರಮೋ ಧರ್ಮಃ' ಎಂದು ತಿಳಿದು, ಅವನನ್ನು ಕೊಲ್ಲಬಾರದು. ಶತ್ರುಪಕ್ಷದಲ್ಲಿ ಯಾವನೇ ಆಗಿರಲಿ–ಆರ್ತನಾಗಿರಲಿ ಉದ್ಧತನಾಗಿರಲಿ–ಶರಣಾಗತನನ್ನು ರಕ್ಷಿಸಬೇಕು (೨೭–೨೮). ತನ್ನ ಪ್ರಾಣವು ಹೋದರೂ ಚಿಂತೆಯಿಲ್ಲ, ಸಂಸ್ಕೃತಿ ಸಂಪನ್ನನಾದ ಪುರುಷನು ಮರೆಹೊಕ್ಕವರನ್ನು ಕಾಪಾಡಬೇಕು. ಭಯ ಲೋಭಗಳಿಂದಲೋ ಅವಿವೇಕದಿಂದಲೋ, ಒಂದುವೇಳೆ, ತನ್ನ ಸಾಮರ್ಥ್ಯವನ್ನುಪಯೋಗಿಸಿ ಯಥೋಚಿತವಾಗಿ ರಕ್ಷಿಸದಿದ್ದರೆ, ಅದು ಮಹಾಪಾಪಕಾರ್ಯವಾಗುತ್ತದೆ, ಲೋಕನಿಂದಿತವಾಗುತ್ತದೆ (೨೯–೩೦). ರಕ್ಷಣೆಯು ದೊರೆಯದೆ ಮರೆಹೊಕ್ಕವನು ಕಣ್ಣೆದುರಿಗೇ ನಾಶಹೊಂದಿದರೆ, ರಕ್ಷಿಸದಿದ್ದವನ ಸಕಲಪುಣ್ಯವೂ ಮರೆಹೊಕ್ಕವನೊಡನೆ ಲಯವಾಗುತ್ತದೆ.' ಸುಗ್ರೀವ,

**ಅಸ್ವರ್ಗ್ಯಂ ಚಾಯಶಸ್ಯಂ ಚ ಬಲವೀರ್ಯವಿನಾಶನಮ್ ।**
**ಕರಿಷ್ಯಾಮಿ ಯಥಾರ್ಥಂ ತು ಕಂಡೋರ್ವಚನಮುತ್ತಮಮ್ ॥ ೩೨**

**ಧರ್ಮಿಷ್ಠಂ ಚ ಯಶಸ್ಯಂ ಚ ಸ್ವರ್ಗ್ಯಂ ಸ್ಯಾತ್ತು ಫಲೋದಯೇ ।**
**ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ॥ ೩೩**

**ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ।**
**ಆನಯೈನಂ ಹರಿಶ್ರೇಷ್ಠ ದತ್ತಮಸ್ಯಾಭಯಂ ಮಯಾ ॥ ೩೪**

**ವಿಭೀಷಣೋ ವಾ ಸುಗ್ರೀವ ಯದಿ ವಾ ರಾವಣಃ ಸ್ವಯಮ್ ।**
**ರಾಮಸ್ಯ ತು ವಚಃ ಶ್ರುತ್ವಾ ಸುಗ್ರೀವಃ ಪ್ಲವಗೇಶ್ವರಃ ॥ ೩೫**

**ಪ್ರತ್ಯಭಾಷತ ಕಾಕುತ್ಸ್ಥಂ ಸೌಹಾರ್ದೇನಾಭಿಚೋದಿತಃ ।**
**ಕಿಮತ್ರ ಚಿತ್ರಂ ಧರ್ಮಜ್ಞ ಲೋಕನಾಥ ಸುಖಾವಹ ॥ ೩೬**

---

ಶರಣಾಗತನಿಗೆ ಆಶ್ರಯವನ್ನೀಯದಿದ್ದರೆ ಇಂಥ ಅನರ್ಥವು ಘಟಿಸುತ್ತದೆ (೩೧). ಆದರಿಂದ ಸದ್ಗತಿಗೆ ಭಂಗವಾಗುವುದಲ್ಲದೆ ಅಪಕೀರ್ತಿಯು ಗಂಟುಬೀಳುತ್ತದೆ. ತೇಜೋಬಲಗಳು ಕ್ಷೀಣಿಸುತ್ತವೆ. ಆದ್ದರಿಂದ ನಾನು ಕಂಡುಮಹರ್ಷಿಯ ಶ್ರೇಷ್ಠವಾದ ಹಿತೋಪದೇಶವನ್ನು ಪಾಲಿಸುವೆನು (೩೨). ಅದು ಧರ್ಮ ಜನಕವೂ ಕೀರ್ತಿಕರವೂ ಆಗಿದೆ. ಫಲೋದಯಕಾಲದಲ್ಲಿ ಸ್ವರ್ಗವನ್ನು ಕೊಡುವುದಾಗಿದೆ. ವಾನರೇಶ್ವರ, ಒಂದೇ ಒಂದುಸಲ ನನಗೆ ಶರಣಾಗತ ನಾಗಿ 'ನಾನು ನಿನ್ನವನು' ಎಂದು ಯಾವನು ಯಾಚಿಸುವನೋ ಅವನಿಗೆ ನಾನು ಅಭಯವನ್ನಿತ್ತು ರಕ್ಷಿಸುತ್ತೇನೆ. ಜೀವಜಾತಗಳಲ್ಲಿ ಯಾರೇ ಆಗಿರಲಿ, ಸಕಲಭೂತಗಳಿಂದಲೂ ಅವನಿಗೆ ಕಷ್ಟ ಬರದಂತೆ ಅವನ ಯೋಗಕ್ಷೇಮವನ್ನು ವಹಿಸಿಕೊಳ್ಳುತ್ತೇನೆ! ಇದು ನನ್ನ ವ್ರತ! ಸುಗ್ರೀವ, ವಿಭೀಷಣನನ್ನು ಕರೆದುಕೊಂಡು ಬಾ. ಅವನಿಗೆ ಅಭಯವನ್ನಿತ್ತಿದ್ದೇನೆ! (೩೩–೩೪). ಬಂದವನು ವಿಭೀಷಣನಾಗಿರಲಿ, ಒಂದುವೇಳೆ ಸಾಕ್ಷಾತ್ ರಾವಣನೇ ಆಗಿರಲಿ – ಅಭಯದಾನ ಉಂಟು!'' ಎಂದು ಹೇಳಿದನು. ಶ್ರೀರಾಮನ ವಚನವನ್ನಾಲಿಸು ತ್ತಿದ್ದ ಸುಗ್ರೀವನು ಆತನ ಸೌಹಾರ್ದಭಾವವನ್ನು ಕಂಡು ವಿಸ್ಮಿತನಾದನು. ವಿಸ್ಮಯಪ್ರೇರಿತನಾದ ಆ ಕಪೀಶ್ವರನು ಕಾಕುತ್ಸ್ಥನನ್ನು ಕುರಿತು ''ಧರ್ಮಜ್ಞ – ಜಗನ್ನಾಥ, ಸಕಲರಿಗೂ ಸೌಖ್ಯವನ್ನು ಕೊಡತಕ್ಕವನು ನೀನು. ನಿನ್ನ

ಯತ್ತ್ವಮಾರ್ಯಂ ಪ್ರಭಾಷೇಥಾಃ ಸತ್ತ್ವವಾನ್ ಸತ್ಪಥೇ ಸ್ಥಿತಃ ।
ಮಮ ಚಾಪ್ಯಂತರಾತ್ಮಾಯಂ ಶುದ್ಧಂ ವೇತ್ತಿ ವಿಭೀಷಣಮ್ ॥ ೩೭

ಅನುಮಾನಾಚ್ಚ ಭಾವಾಚ್ಚ ಸರ್ವತಃ ಸುಪರೀಕ್ಷಿತಃ ।
ತಸ್ಮಾತ್ಕ್ಷಿಪ್ರಂ ಸಹಾಸ್ಮಾಭಿಸ್ತುಲ್ಯೋ ಭವತು ರಾಘವ ॥ ೩೮

ವಿಭೀಷಣೋ ಮಹಾಪ್ರಾಜ್ಞಃ ಸಖಿತ್ವಂ ಚಾಭ್ಯುಪೈತು ನಃ ।

ತತಸ್ತು ಸುಗ್ರೀವವಚೋ ನಿಶಮ್ಯ ತ-
ದ್ಧರೀಶ್ವರೇಣಾಭಿಹಿತಂ ನರೇಶ್ವರಃ ।
ವಿಭೀಷಣೇನಾಶು ಜಗಾಮ ಸಂಗಮಂ
ಪತತ್ರಿರಾಜೇನ ಯಥಾ ಪುರಂದರಃ ॥ ೩೯

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಷ್ಟಾದಶಃ ಸರ್ಗಃ

---

ಈ ನಿಲುವಿನಲ್ಲಿ ಅಚ್ಚರಿ ಏನಿದೆ ? (೩೫-೩೭). ಸನ್ಮಾರ್ಗನಿರತನೂ ಸತ್ತ್ವಗುಣಸಂಪನ್ನನೂ ಆದ ನೀನು ಸರ್ವಾದರಣೀಯವಾದ ಈ ಮಾತನ್ನು ಹೇಳುವುದರಲ್ಲಿ ಆಶ್ಚರ್ಯವೇನು? ಈಗ ನನ್ನ ಅಂತರಾತ್ಮವೂ ಸಹ ವಿಭೀಷಣನು ಪರಿಶುದ್ಧನೆಂದೇ ಹೇಳುತ್ತಿದೆ (೩೭). ನೀನೂ ಹನುಮಂತನೂ ಹೇಳಿದ ಕಾರಣಗಳಿಂದಲೂ ಆತನ ಮುಖಭಾವದಿಂದಲೂ ವಿಭೀಷಣನನ್ನು ಸರಿಯಾಗಿ ಪರೀಕ್ಷಿಸಿದ್ದಾಯಿತು. ಆದ್ದರಿಂದ, ರಾಘವ, ವಿಭೀಷಣನು ನಮ್ಮಂತೆ ಸುಖದುಃಖಗಳಲ್ಲಿ ಭಾಗಿಯಾಗಿ ನಮ್ಮಲ್ಲೊಬ್ಬನಾಗಿರಲಿ. ಪ್ರಾಜ್ಞನಾದ ಆತನು ನಮ್ಮ ಮಿತ್ರನಾಗಲಿ'' ಎಂದನು (೩೮). ಹೀಗೆ ನುಡಿದ ಕಪೀಶ್ವರನ ವಾಕ್ಯವನ್ನು ಕೇಳಿ ನರೇಶ್ವರನಾದ ಶ್ರೀರಾಮನು ಶೀಘ್ರವಾಗಿ ವಿಭೀಷಣನನ್ನು ಕರೆಸಿ, ಅವನೊಡನೆ ಸ್ನೇಹವನ್ನು ಬೆಳೆಸಿದನು. ಪಕ್ಷಿರಾಜನಾದ ವೈನತೇಯನೊಡನೆ ದೇವೇಂದ್ರನು ಸ್ನೇಹವನ್ನು ಬೆಳೆಸಿದಂತೆ, ಆ ಸ್ನೇಹವು ಫಲಕಾರಿಯಾಯಿತು (೩೯).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಹದಿನೆಂಟನೆಯ ಸರ್ಗ

---

## ಏಕೋನವಿಂಶಃ ಸರ್ಗಃ

## ದರ್ಭಶಯನವಮ್

ರಾಘವೇಣಾಭಯೇ ದತ್ತೇ ಸಂನತೋ ರಾವಣಾನುಜಃ ।
ವಿಭೀಷಣೋ ಮಹಾಪ್ರಾಜ್ಞೋ ಭೂಮಿಂ ಸಮವಲೋಕಯನ್ ॥ ೧

ಖಾತ್ಪಪಾತಾವನೀಂ ಹೃಷ್ಟೋ ಭಕ್ತೈರನುಚರೈಃ ಸಹ ।
ಸ ತು ರಾಮಸ್ಯ ಧರ್ಮಾತ್ಮಾ ನಿಪಪಾತ ವಿಭೀಷಣಃ ॥ ೨

ಪಾದಯೋಃ ಶರಣಾನ್ವೇಷೀ ಚತುರ್ಭಿಃ ಸಹ ರಾಕ್ಷಸೈಃ ।
ಅಬ್ರವೀಚ್ಚ ತದಾ ರಾಮಂ ವಾಕ್ಯಂ ತತ್ರ ವಿಭೀಷಣಃ ॥ ೩

ಧರ್ಮಯುಕ್ತಂ ಚ ಯುಕ್ತಂ ಚ ಮನಸಃ ಸಂಪ್ರಹರ್ಷಣಮ್ ।
ಅನುಜೋ ರಾವಣಸ್ಯಾಹಂ ತೇನ ಚಾಸ್ಮ್ಯವಮಾನಿತಃ ॥ ೪

ಭವಂತಂ ಸರ್ವಭೂತಾನಾಂ ಶರಣ್ಯಂ ಶರಣಂ ಗತಃ ।
ಪರಿತ್ಯಕ್ತಾ ಮಯಾ ಲಂಕಾ ಮಿತ್ರಾಣಿ ಚ ಧನಾನಿ ಚ ॥ ೫

### ಸರ್ಗ ೧೯

ವಿಭೀಷಣನು ಶ್ರೀರಾಮನ ಬಳಿಗೆ ಬಂದು ತನ್ನ ವೃತ್ತಾಂತವನ್ನು
ಹೇಳಿಕೊಳ್ಳುವುದು. ವಿಭೀಷಣನಿಗೆ ಅಭಯಪ್ರದಾನ.
ಸಮುದ್ರವನ್ನು ಒಲಿಸಿಕೊಳ್ಳಲು ದರ್ಭಶಯನ.

ಶ್ರೀರಾಮನು ಅಭಯವನ್ನಿತ್ತಮೇಲೆ ಮಹಾಪ್ರಾಜ್ಞನಾದ ವಿಭೀಷಣನು ಭಕ್ತಿನಮ್ರನಾಗಿ ಹರ್ಷದಿಂದ ಭೂಮಿಯಕಡೆಗೆ ನೋಡುತ್ತ ಆಕಾಶದಿಂದ ಕೆಳಗಿಳಿದನು. ಅವನೊಡನೆ ವಿಧೇಯರಾದ ನಾಲ್ವರು ಸಚಿವರೂ ಇಳಿದುಬಂದರು (೧–೨). ಧರ್ಮಾತ್ಮನಾದ ವಿಭೀಷಣನು ಶರಣಾಪೇಕ್ಷಿಯಾಗಿ ಬಂದು, ತನ್ನ ನಾಲ್ವರು ರಾಕ್ಷಸರೊಡನೆ ಶ್ರೀರಾಮನ ಪಾದಗಳಿಗೆ ವಂದಿಸಿದನು. ಅನಂತರ ತನ್ನ ವೃತ್ತಾಂತವನ್ನು ತಿಳಿಸಿದನು. ಅವನ ನುಡಿಯು ಧರ್ಮಯುಕ್ತವೂ ಯೋಗ್ಯವೂ ಚಿತ್ತೋಲ್ಲಾಸಕರವೂ ಆಗಿತ್ತು. ವಿಭೀಷಣನು ''ಶ್ರೀರಾಮ, ನಾನು ರಾವಣನ ತಮ್ಮ. ಅವನಿಂದ ಅವಮಾನಿತನಾಗಿದ್ದೇನೆ (೩–೪). ಆದ್ದರಿಂದ ಸರ್ವಭೂತಗಳಿಗೂ ಶರಣ್ಯನಾದ ನಿನಗೆ ಶರಣಾಗತನಾಗಿದ್ದೇನೆ.

ಭವದ್ಗತಂ ಮೇ ರಾಜ್ಯಂ ಚ ಜೀವಿತಂ ಚ ಸುಖಾನಿ ಚ ।
ತಸ್ಯ ತದ್ವಚನಂ ಶ್ರುತ್ವಾ ರಾಮೋ ವಚನಮಬ್ರವೀತ್ ॥ ೬

ವಚಸಾ ಸಾಂತ್ವಯಿತ್ವೈನಂ ಲೋಚನಾಭ್ಯಾಂ ಪಿಬನ್ನಿವ ।
ಆಖ್ಯಾಹಿ ಮಮ ತತ್ತ್ವೇನ ರಾಕ್ಷಸಾನಾಂ ಬಲಾಬಲಮ್ ॥ ೭

ಏವಮುಕ್ತಂ ತದಾ ರಕ್ಷೋ ರಾಮೇಣಾಕ್ಲಿಷ್ಟ ಕರ್ಮಣಾ ।
ರಾವಣಸ್ಯ ಬಲಂ ಸರ್ವಮಾಖ್ಯಾತುಮುಪಚಕ್ರಮೇ ॥ ೮

ಅವಧ್ಯಃ ಸರ್ವಭೂತಾನಾಂ ದೇವದಾನವರಕ್ಷಸಾಮ್ ।
ರಾಜಪುತ್ರ ದಶಗ್ರೀವೋ ವರದಾನಾತ್ಸ್ವಯಂಭುವಃ ॥ ೯

ರಾವಣಾನಂತರೋ ಭ್ರಾತಾ ಮಮ ಜ್ಯೇಷ್ಠಶ್ಚ ವೀರ್ಯವಾನ್ ।
ಕುಂಭಕರ್ಣೋ ಮಹಾತೇಜಾಃ ಶಕ್ರಪ್ರತಿಬಲೋ ಯುಧಿ ॥ ೧೦

ರಾಮ ಸೇನಾಪತಿಸ್ತಸ್ಯ ಪ್ರಹಸ್ತೋ ಯದಿ ವಾ ಶ್ರುತಃ ।
ಕೈಲಾಸೇ ಯೇನ ಸಂಗ್ರಾಮೇ ಮಾಣಿಭದ್ರಃ ಪರಾಜಿತಃ ॥ ೧೧

---

ಲಂಕೆಯನ್ನು ತೊರೆದು ಬಂದಿದ್ದೇನೆ. ಮಿತ್ರರನ್ನೂ ಸಕಲಸಂಪತ್ತನ್ನೂ ಬಿಟ್ಟು ನಿನಗೆ ಶರಣಾಗಿದ್ದೇನೆ. ನನ್ನ ರಾಜ್ಯ, ನನ್ನ ಜೀವಿತ, ನನ್ನ ಸೌಖ್ಯ – ಎಲ್ಲವೂ ನಿನಗೆ ಸೇರಿದ್ದು'' ಎಂದು ವಿಜ್ಞಾಪಿಸಿದನು (೫–೬). ಶ್ರೀರಾಮನು ಮೃದು ನುಡಿಗಳಿಂದ ವಿಭೀಷಣನನ್ನು ಸಂತೈಸಿ ಕೃಪಾದೃಷ್ಟಿಯಿಂದ ಕುಡಿಯುವನೋ ಎಂಬಂತೆ ಆದರದಿಂದ ನೋಡುತ್ತ ''ವಿಭೀಷಣ, ರಾಕ್ಷಸರ ಬಲಾಬಲ ಗಳೇನೆಂಬುದನ್ನು ಯಥಾರ್ಥವಾಗಿ ನನಗೆ ತಿಳಿಸು'' ಎಂದು ಕೇಳಿದನು (೭). ಹೀಗೆ ಧರ್ಮಶೀಲನಾದ ಶ್ರೀರಾಮನು ಕೇಳಲಾಗಿ, ವಿಭೀಷಣನು ರಾವಣನ ಶಕ್ತಿಯೇನೆಂಬುದೆಲ್ಲವನ್ನೂ ವಿವರಿಸಲುಪಕ್ರಮಿಸಿದನು: ''ರಾಜಪುತ್ರ, ದಶ ಕಂಠನು ಬ್ರಹ್ಮದೇವನಿಂದ ವರವನ್ನು ಪಡೆದಿದ್ದಾನೆ. ದೇವ ದಾನವ ರಾಕ್ಷಸ ರಲ್ಲಿ ಯಾರಿಗೂ ಅವನನ್ನು ವಧಿಸಲು ಸಾಧ್ಯವಿಲ್ಲ (೮–೯). ಕುಂಭಕರ್ಣ ನೆಂಬವನು ರಾವಣನ ಒತ್ತಿನ ತಮ್ಮ – ನನಗೆ ಅಣ್ಣನಾಗಬೇಕು. ಅವನು ಮಹಾವೀರನೂ ತೇಜಸ್ವಿಯೂ ಆಗಿದ್ದಾನೆ. ಸಮರಕರ್ಮದಲ್ಲಿ ದೇವೇಂದ್ರ ನಿಗೆ ಸದೃಶನಾಗಿದ್ದಾನೆ. ರಾವಣನ ಸೇನಾಪತಿಯು ಪ್ರಹಸ್ತನೆಂಬವನು. ಅವನ ಹೆಸರನ್ನು ನೀನು ಕೇಳಿರಬಹುದು. ಆತನು ಕೈಲಾಸಪರ್ವತದಲ್ಲಿ

ಬದ್ಧಗೋಧಾಂಗುಲಿತ್ರಾಣಸ್ತ್ವವಧ್ಯ ಕವಚೋ ಯುಧಿ ।
ಧನುರಾದಾಯ ತಿಷ್ಠನ್ ಸ ತ್ವದೃಶ್ಯೋ ಭವತೀಂದ್ರಜಿತ್ ॥ ೧೨

ಸಂಗ್ರಾಮೇ ಸ ಮಹಾವ್ಯೂಹೇ ತರ್ಪಯಿತ್ವಾ ಹುತಾಶನಮ್ ।
ಅಂತರ್ಧಾನಗತಃ ಶತ್ರೂನಿಂದ್ರಜಿದ್ಧಂತಿ ರಾಘವ ॥ ೧೩

ಮಹೋದರಮಹಾಪಾರ್ಶ್ವೌ ರಾಕ್ಷಸಶ್ಚಾಪ್ಯ ಕಂಪನಃ ।
ಅನೀಕಪಾಸ್ತು ತಸ್ಯೈತೇ ಲೋಕಪಾಲಸಮಾ ಯುಧಿ ॥ ೧೪

ದಶಕೋಟಿಸಹಸ್ರಾಣಿ ರಕ್ಷಸಾಂ ಕಾಮರೂಪಿಣಾಮ್ ।
ಮಾಂಸಶೋಣಿತಭಕ್ಷಾಣಾಂ ಲಂಕಾಪುರನಿವಾಸಿನಾಮ್ ॥ ೧೫

ಸ ತೈಃ ಪರಿವೃತೋ ರಾಜಾ ಲೋಕಪಾಲಾನಯೋಧಯತ್ ।
ಸಹ ದೇವೈಸ್ತು ತೇ ಭಗ್ನಾ ರಾವಣೇನ ಮಹಾತ್ಮನಾ ॥ ೧೬

---

ಕುಬೇರಸೇನಾಪತಿಯಾದ ಮಾಣಿಭದ್ರನನ್ನು ಪರಾಜಯಗೊಳಿಸಿದ್ದಾನೆ (೧೦–೧೧). ಇನ್ನು ಇಂದ್ರಜಿತುವಾದರೋ ಗೋಧಾಚರ್ಮದ ಅಂಗುಲಿತ್ರಾಣವನ್ನೂ ಅಭೇದ್ಯಕವಚವನ್ನೂ ತೊಟ್ಟು ಧನುರ್ಧಾರಿಯಾಗಿ ಸಂಗ್ರಾಮಭೂಮಿಗೆ ಬಂದನೆಂದರೆ, ಮಾಯೆಯಿಂದ ಅದೃಶ್ಯನಾಗಿ ಬಿಡುತ್ತಾನೆ! (೧೨). ರಾಘವ, ಆತನು ಮೊದಲು ಅಗ್ನಿಯಲ್ಲಿ ಹೋಮಮಾಡಿ ಅದಮ್ಯಶಕ್ತಿಯನ್ನು ಪಡೆದು ರಣಭೂಮಿಗೆ ಬರುತ್ತಾನೆ. ಅಲ್ಲಿ ಮಹಾವ್ಯೂಹವನ್ನು ರಚಿಸಿ ಅದೃಶ್ಯನಾಗಿ ಯುದ್ಧ ಮಾಡುತ್ತ ವೈರಿಗಳನ್ನು ಸಂಹರಿಸುತ್ತಾನೆ. ಅಲ್ಲದೆ ಮಹೋದರ, ಮಹಾಪಾರ್ಶ್ವ, ಅಕಂಪನ ಎಂಬ ರಾವಣನ ಸೇನಾಪತಿಗಳು ಹೋರಾಡುವುದರಲ್ಲಿ ದಿಕ್ಪಾಲರಿಗೆ ಸಮಾನರಾದ ಪರಾಕ್ರಮಿಗಳು (೧೩–೧೪). ಮತ್ತು ಲಂಕಾನಗರದಲ್ಲಿ ರಕ್ತಮಾಂಸಗಳನ್ನು ಭಕ್ಷಿಸುತ್ತ ಕೊಬ್ಬಿದ ರಾಕ್ಷಸರ ಸಂಖ್ಯೆ ಹತ್ತುಸಾವಿರ ಕೋಟಿ ಇದೆ! ಅವರೆಲ್ಲರೂ ಕಾಮರೂಪಿಗಳು. ರಾಕ್ಷಸರಾಜನಾದ ರಾವಣನು ಈ ಪರಿವಾರದೊಡನೆ ಹೋಗಿ ದಿಕ್ಪಾಲರೊಡನೆ ಯುದ್ಧವನ್ನು ಹೂಡಿದನು. ಧೀರನಾದ ರಾವಣನು ಆ ದಿಕ್ಪಾಲರನ್ನೂ ದೇವತೆಗಳನ್ನೂ ಸೋಲಿಸಿ ಭಗ್ನಗೊಳಿಸಿದ್ದಾನೆ!'' ಎಂದು ಹೇಳಿದನು (೧೫–೧೬).

ವಿಭೀಷಣವಚಃ ಶ್ರುತ್ವಾ ರಾಮೋ ದೃಢಪರಾಕ್ರಮಃ ।
ಅನ್ವೀಕ್ಷ್ಯ ಮನಸಾ ಸರ್ವಮಿದಂ ವಚನಮಬ್ರವೀತ್ ॥ ೧೭

ಯಾನಿ ಕರ್ಮಾಪದಾನಾನಿ ರಾವಣಸ್ಯ ವಿಭೀಷಣ ।
ಆಖ್ಯಾತಾನಿ ಚ ತತ್ತ್ವೇನ ಹ್ಯವಗಚ್ಛಾಮಿ ತಾನ್ಯಹಮ್ ॥ ೧೮

ಅಹಂ ಹತ್ವಾ ದಶಗ್ರೀವಂ ಸಪ್ರಹಸ್ತಂ ಸಹಾನುಜಮ್ ।
ರಾಜಾನಂ ತ್ವಾಂ ಕರಿಷ್ಯಾಮಿ ಸತ್ಯಮೇತದ್ಬ್ರವೀಮಿ ತೇ ॥ ೧೯

ರಸಾತಲಂ ವಾ ಪ್ರವಿಶೇತ್ಪಾತಾಲಂ ವಾಪಿ ರಾವಣಃ ।
ಪಿತಾಮಹಸಕಾಶಂ ವಾ ನ ಮೇ ಜೀವನ್ ವಿಮೋಕ್ಷ್ಯತೇ ॥ ೨೦

ಅಹತ್ವಾ ರಾವಣಂ ಸಂಖ್ಯೇ ಸಪುತ್ರಬಲಬಾಂಧವಮ್ ।
ಅಯೋಧ್ಯಾಂ ನ ಪ್ರವೇಕ್ಷ್ಯಾಮಿ ತ್ರಿಭಿಸ್ತೈರ್ಭ್ರಾತೃಭಿಃ ಶಪೇ ॥ ೨೧

ಶ್ರುತ್ವಾ ತು ವಚನಂ ತಸ್ಯ ರಾಮಸ್ಯಾಕ್ಲಿಷ್ಟ ಕರ್ಮಣಃ ।
ಶಿರಸಾ ವಂದ್ಯ ಧರ್ಮಾತ್ಮಾ ವಕ್ತುಮೇವೋಪಚಕ್ರಮೇ ॥ ೨೨

---

ಅಸಾಧಾರಣಪರಾಕ್ರಮಿಯಾದ ಶ್ರೀರಾಮನು ವಿಭೀಷಣನ ಹೇಳಿಕೆಯನ್ನು ಆಲಿಸಿ, ಮನಸ್ಸಿನಲ್ಲಿ ಎಲ್ಲವನ್ನೂ ಗುಣಿಸಿ "ವಿಭೀಷಣ, ರಾವಣನು ಯಾವ ಯಾವ ಸಾಹಸಕೃತ್ಯಗಳನ್ನು ಹಿಂದೆ ನಡೆಸಿದ್ದಾನೆಂದು ಹೇಳಿದೆಯೋ ಅವೆಲ್ಲವೂ ಯಥಾರ್ಥವೆಂದು ನಾನು ನಂಬುತ್ತೇನೆ (೧೭–೧೮). (ಒಳ್ಳೆಯದು) ಆ ದಶಕಂಠ, ಅವನ ತಮ್ಮ ಕುಂಭಕರ್ಣ, ಪ್ರಹಸ್ತ– ಇವರೆಲ್ಲರನ್ನೂ ಕೊಂದು, ವಿಭೀಷಣ, ನಿನ್ನನ್ನು ಲಂಕೆಗ ಅಧಿಪತಿಯನ್ನಾಗಿ ಮಾಡುವೆನು! ಇದು ಸತ್ಯ! ರಾವಣನು ರಸಾತಳಕ್ಕೆ ಹೋಗಲಿ, ಪಾತಾಳಕ್ಕಿಳಿಯಲಿ, ಬ್ರಹ್ಮನ ಬಳಿಗೆ ಹೋಗಿ ಮರೆಹೊಗಲಿ – ಅವನು ನನ್ನಿಂದ ತಪ್ಪಿಸಿಕೊಂಡು ಜೀವಸಹಿತವಾಗಿ ಉಳಿಯುವುದಿಲ್ಲ (೧೯–೨೦). ಇದೋ, ರಣರಂಗದಲ್ಲಿ ರಾವಣನನ್ನು ಅವನ ಮಕ್ಕಳು ಬಂಧುಬಳಗ ಸಮೇತವಾಗಿ ಧ್ವಂಸಮಾಡದೆ, ನಾನು ಅಯೋಧ್ಯೆಯ ಒಳಹೋಗುವುದಿಲ್ಲ, ನನ್ನ ಮೂವರು ತಮ್ಮಂದಿರ ಆಣೆ!" ಎಂದು ಘೋಷಿಸಿದನು (೨೧). ಮಹಾಕಾರ್ಯವನ್ನು ಕ್ಲೇಶವಿಲ್ಲದೆ ಸಾಧಿಸುವ ಸಾಮರ್ಥ್ಯವುಳ್ಳ ಶ್ರೀರಾಮನ ವೀರವಾಣಿಯನ್ನು ಕೇಳಿ ಧರ್ಮಾತ್ಮನಾದ

**ರಾಕ್ಷಸಾನಾಂ ವಧೇ ಸಾಹ್ಯಂ ಲಂಕಾಯಾಶ್ಚ ಪ್ರಧರ್ಷಣೇ ।**
**ಕರಿಷ್ಯಾಮಿ ಯಥಾಪ್ರಾಣಂ ಪ್ರವೇಕ್ಷ್ಯಾಮಿ ಚ ವಾಹಿನೀಮ್ ॥ ೨೩**

**ಇತಿ ಬ್ರುವಾಣಂ ರಾಮಸ್ತು ಪರಿಷ್ವಜ್ಯ ವಿಭೀಷಣಮ್ ।**
**ಅಬ್ರವೀಲ್ಲಕ್ಷ್ಮಣಂ ಪ್ರೀತಃ ಸಮುದ್ರಾಜ್ಜಲಮಾನಯ ॥ ೨೪**

**ತೇನ ಚೈನಂ ಮಹಾಪ್ರಾಜ್ಞಮಭಿಷಿಂಚ ವಿಭೀಷಣಮ್ ।**
**ರಾಜಾನಂ ರಕ್ಷಸಾಂ ಕ್ಷಿಪ್ರಂ ಪ್ರಸನ್ನೇ ಮಯಿ ಮಾನದ ॥ ೨೫**

**ಏವಮುಕ್ತಸ್ತು ಸೌಮಿತ್ರಿರಭ್ಯಷಿಂಚದ್ವಿಭೀಷಣಮ್ ।**
**ಮಧ್ಯೇ ವಾನರಮುಖ್ಯಾನಾಂ ರಾಜಾನಂ ರಾಮಶಾಸನಾತ್ ॥ ೨೬**

**ತಂ ಪ್ರಸಾದಂ ತು ರಾಮಸ್ಯ ದೃಷ್ಟ್ವಾ ಸದ್ಯಃ ಪ್ಲವಂಗಮಾಃ ।**
**ಪ್ರಚುಕ್ರುಶುರ್ಮಹಾತ್ಮಾನಂ ಸಾಧು ಸಾಧ್ವಿತಿ ಚಾಬ್ರುವನ್ ॥ ೨೭**

**ಅಬ್ರವೀಚ್ಚ ಹನೂಮಾಂಸ್ತಂ ಸುಗ್ರೀವಶ್ಚ ವಿಭೀಷಣಮ್ ।**
**ಕಥಂ ಸಾಗರಮಕ್ಷೋಭ್ಯಂ ತರಾಮ ವರುಣಾಲಯಮ್ ॥ ೨೮**

---

ವಿಭೀಷಣನು ಅವನಿಗೆ ತಲೆಬಾಗಿ ವಂದಿಸಿದನು; ಮತ್ತು "ಶ್ರೀರಾಮ, ಲಂಕೆಯನ್ನು ಮುತ್ತುವುದಕ್ಕೂ ರಾಕ್ಷಸರನ್ನು ವಧಿಸುವುದಕ್ಕೂ ನನ್ನ ಶಕ್ತಿಯಿದ್ದಷ್ಟು ನಿನಗೆ ಸಹಾಯಮಾಡುವೆನು. ನಿನ್ನ ಸೇನೆಯನ್ನು ಕೂಡಿಕೊಳ್ಳುವೆನು" ಎಂದನು (೨೨–೨೩). ಆಗ ಶ್ರೀರಾಮನು ವಿಭೀಷಣನನ್ನು ಆಲಿಂಗಿಸಿಕೊಂಡು ಸಂಪ್ರೀತನಾಗಿ ಲಕ್ಷ್ಮಣನನನ್ನು ಕುರಿತು "ಲಕ್ಷ್ಮಣ, ಸಮುದ್ರದಿಂದ ಜಲವನ್ನು ತಂದು ವಿವೇಕಿಯಾದ ಈ ವಿಭೀಷಣನಿಗೆ ಅಭಿಷೇಕ ಮಾಡು. ನಾನು ಸಂಪ್ರೀತನಾಗಿರುವೆನು. ಈತನು ರಾಕ್ಷಸರಾಜನೆಂದು ಘೋಷಿಸು" ಎಂದು ಆದೇಶವನ್ನಿತ್ತನು (೨೪–೨೫). ಆಮೇಲೆ ಸೌಮಿತ್ರಿಯು ಶ್ರೀರಾಮನ ಆಜ್ಞೆಯಂತೆ ಸಮುದ್ರಜಲವನ್ನು ತಂದು, ಕಪಿವೀರರ ಮಧ್ಯದಲ್ಲಿ ವಿಭೀಷಣನು ರಾಕ್ಷಸರಾಜನೆಂದು ಘೋಷಿಸಿ ಅಭಿಷೇಕಮಾಡಿದನು (೨೬). ಆ ಪ್ರಕಾರವಾದ ಶ್ರೀರಾಮನ ಅನುಗ್ರಹವು ಶ್ರೀಘ್ರದಲ್ಲಿಯೇ ವಿಭೀಷಣನಿಗೆ ದೊರಕಿದುದನ್ನು ಕಂಡು ಕಪಿನಾಯಕರು ಆನಂದದಿಂದ ಕೋಲಾಹಲಮಾಡಿದರು. ಮಹಾತ್ಮನಾದ ಶ್ರೀರಾಮನನ್ನು ಹೊಗಳುತ್ತ 'ಭಲಾ! ಭಲಾ!' ಎಂದು ಕೊಂಡಾಡಿದರು (೨೭). ಅನಂತರ ಹನುಮಂತನೂ ಸುಗ್ರೀವನೂ

ಸೈನ್ಯೈಃ ಪರಿವೃತಾಃ ಸರ್ವೇ ವಾನರಾಣಾಂ ಮಹೌಜಸಾಮ್ ।
ಉಪಾಯಂ ನಾಧಿಗಚ್ಛಾಮೋ ಯಥಾ ನದನದೀಪತಿಮ್ ॥ ೨೯

ತರಾಮ ತರಸಾ ಸರ್ವೇ ಸಸೈನ್ಯಾ ವರುಣಾಲಯಮ್ ।
ಏವಮುಕ್ತಸ್ತು ಧರ್ಮಜ್ಞಃ ಪ್ರತ್ಯುವಾಚ ವಿಭೀಷಣಃ ॥ ೩೦

ಸಮುದ್ರಂ ರಾಘವೋ ರಾಜಾ ಶರಣಂ ಗಂತುಮರ್ಹತಿ ।
ಖಾನಿತಃ ಸಗರೇಣಾಯಮಪ್ರಮೇಯೋ ಮಹೋದಧಿಃ ॥ ೩೧

ಕರ್ತುಮರ್ಹತಿ ರಾಮಸ್ಯ ಜ್ಞಾತೇಃ ಕಾರ್ಯಂ ಮಹೋದಧಿಃ ।
ಏವಂ ವಿಭೀಷಣೇನೋಕ್ತೋ ರಾಕ್ಷಸೇನ ವಿಪಶ್ಚಿತಾ ॥ ೩೨

ಆಜಗಾಮಾಥ ಸುಗ್ರೀವೋ ಯತ್ರ ರಾಮಃ ಸಲಕ್ಷ್ಮಣಃ ।
ತತಶ್ಚಾಖ್ಯಾತುಮಾರೇಭೇ ವಿಭೀಷಮವಚಃ ಶುಭಮ್ ॥ ೩೩

ಸುಗ್ರೀವೋ ವಿಪುಲಗ್ರೀವಃ ಸಾಗರಸ್ಯೋಪವೇಶನಮ್ ।
ಪ್ರಕೃತ್ಯಾ ಧರ್ಮಶೀಲಸ್ಯ ರಾಘವಸ್ಯಾಪ್ಯರೋಚತ ॥ ೩೪

---

ವಿಭೀಷಣನನ್ನು ಕಂಡು ಮಾತಾಡುತ್ತ ''ಮಿತ್ರ– ವಿಭೀಷಣ, ದುರ್ಧರ್ಷವಾದ ಈ ಸಮುದ್ರವನ್ನು ದಾಟುವ ಮಾರ್ಗವಾವುದು? ವೀರರಾದ ವಾನರಸೈನಿಕರೊಡನೆ ನಾವೆಲ್ಲರೂ ಶೀಘ್ರವಾಗಿ ಈ ಸಮುದ್ರವನ್ನು ದಾಟಬೇಕಾಗಿದೆ; ಉಪಾಯವು ಕಾಣದಾಗಿದೆ'' ಎಂದರು (೨೮–೨೯). ಆಗ ಧರ್ಮಜ್ಞನಾದ ವಿಭೀಷಣನು ''ರಘುನಾಥನು ಸಮುದ್ರರಾಜನಿಗೆ ಶರಣಾಗತನಾಗಿ ಪ್ರಾರ್ಥಿಸಿಕೊಳ್ಳಲಿ. ಈ ಮಹಾಸಾಗರವು ಹಿಂದೆ ಸಗರಚಕ್ರವರ್ತಿಯಿಂದ ನಿರ್ಮಿತವಾಗಿದೆ. ಆದ್ದರಿಂದ ಸಗರವಂಶೀಯನಾದ ಶ್ರೀರಾಮನಿಗೆ ಸಮುದ್ರನು ಒಂದು ಪ್ರತ್ಯುಪಕಾರವನ್ನು ಮಾಡುವುದು ಯೋಗ್ಯವಾಗಿದೆ'' ಎಂದು ಸಲಹೆ ಕೊಟ್ಟನು (೩೦–೩೧). ಬುದ್ಧಿಶಾಲಿಯಾದ ವಿಭೀಷಣನ ನುಡಿಯನ್ನು ಕೇಳಿ ಸುಗ್ರೀವನು ರಾಮಲಕ್ಷ್ಮಣರಿದ್ದಲ್ಲಿಗೆ ಬಂದು, ವಿಭೀಷಣನ ಸಲಹೆಯನ್ನು ತಿಳಿಸಿದನು. ಶ್ರೀರಾಮನು ಕುಶತಲ್ಪಶಯನದಲ್ಲಿ ನಿಯಮಪೂರ್ವಕವಾಗಿದ್ದು ಸಮುದ್ರರಾಜನನ್ನು ಮೆಚ್ಚಿಸಬೇಕೆಂದು ವಿಷಯವನ್ನರುಹಿದನು. ಸ್ವಭಾವದಿಂದಲೇ ಧರ್ಮಶೀಲನಾದ ರಾಘವನಿಗೆ ಅದು ಸರಿಯೆನ್ನಿಸಿತು (೩೨–೩೪).

ಸ ಲಕ್ಷ್ಮಣಂ ಮಹಾತೇಜಾಃ ಸುಗ್ರೀವಂ ಚ ಹರೀಶ್ವರಮ್ ।
ಸತ್ಕ್ರಿಯಾರ್ಥಂ ಕ್ರಿಯಾದಕ್ಷಃ ಸ್ಮಿತಪೂರ್ವಮಭಾಷತ ॥ ೩೫

ವಿಭೀಷಣಸ್ಯ ಮಂತ್ರೋಽಯಂ ಮಮ ಲಕ್ಷ್ಮಣ ರೋಚತೇ ।
ಬ್ರೂಹಿ ತ್ವಂ ಸಹಸುಗ್ರೀವಸ್ತವಾಪಿ ಯದಿ ರೋಚತೇ ॥ ೩೬

ಸುಗ್ರೀವಃ ಪಂಡಿತೋ ನಿತ್ಯಂ ಭವಾನ್ ಮಂತ್ರವಿಚಕ್ಷಣಃ ।
ಉಭಾಭ್ಯಾಂ ಸಂಪ್ರಧಾರ್ಯಾರ್ಥಂ ರೋಚತೇ ಯತ್ತದುಚ್ಯತಾಮ್

ಏವಮುಕ್ತೌ ತು ತೌ ವೀರಾವುಭೌ ಸುಗ್ರೀವಲಕ್ಷ್ಮಣೌ ।
ಸಮುದಾಚಾರಸಂಯುಕ್ತಮಿದಂ ವಚನಮೂಚತುಃ ॥ ೩೮

ಕಿಮರ್ಥಂ ನೌ ನರವ್ಯಾಘ್ರ ನ ರೋಚಿಷ್ಯತಿ ರಾಘವ ।
ವಿಭೀಷಣೇನ ಯಚ್ಚೋಕ್ತಮಸ್ಮಿನ್ ಕಾಲೇ ಸುಖಾವಹಮ್ ॥ ೩೯

ಅಬದ್ಧ್ವಾ ಸಾಗರೇ ಸೇತುಂ ಘೋರೇಽಸ್ಮಿನ್ ವರುಣಾಲಯೇ ।
ಲಂಕಾ ನಾಸಾದಿತುಂ ಶಕ್ಯಾ ಸೇಂದ್ರೈರಪಿ ಸುರಾಸುರೈಃ ॥ ೪೦

---

ಕಾರ್ಯದಕ್ಷನಾದ ಆ ತೇಜೋನಿಧಿಯು ಲಕ್ಷ್ಮಣ ಸುಗ್ರೀವರಿಗೆ ಒಂದು ಮನ್ನಣೆಯನ್ನು ಸಲ್ಲಿಸಬೇಕೆಂಬ ಉದ್ದೇಶವುಳ್ಳವನಾಗಿ ಕಿರುನಗೆಯಿಂದ "ಲಕ್ಷ್ಮಣ, ವಿಭೀಷಣನ ಸಲಹೆಯು ನನಗೆ ಯುಕ್ತವಾಗಿ ತೋರುತ್ತಿದೆ. ನೀನೂ ಸುಗ್ರೀವನೂ ಆಲೋಚಿಸಿ ಹೇಳಿರಿ – ನಿಮಗೆ ಹೇಗೆನಿಸುವುದು ? (೩೫–೩೬). ಸುಗ್ರೀವನು ರಾಜನೀತಿಯಲ್ಲಿ ಪಂಡಿತ; ನೀನು ಮಂತ್ರಾಲೋಚನೆಯಲ್ಲಿ ವಿಚಕ್ಷಣ. ನೀವಿಬ್ಬರೂ ಈ ವಿಷಯವನ್ನು ಪರಿಶೀಲಿಸಿ ನಿಮಗೆ ಯುಕ್ತವೆನಿಸುವುದನ್ನು ತಿಳಿಸಿರಿ" ಎಂದನು. ಆಗ ಸುಗ್ರೀವ ಲಕ್ಷ್ಮಣರಿಬ್ಬರೂ ಸದಾಚಾರವನ್ನು ಅನುಮೋದಿಸುವ ವಚನವನ್ನೇ ಆಡಿದರು: "ಪುರುಷೋತ್ತಮ, ವಿಭೀಷಣನ ಸಲಹೆಯು ನಮಗೆ ರುಚಿಸದಿರಲು ಕಾರಣವಾದರೂ ಏನು? ಈ ಸಮಯದಲ್ಲಿ ಅದು ಹಿತಕರವಾದ ಮಾರ್ಗವಾಗಿದೆ (೩೭–೩೯). ಈ ಘೋರ ಸಾಗರದಲ್ಲಿ ಸೇತುವೆಯನ್ನು ಕಟ್ಟದೆ ಲಂಕೆಗೆ ಹೇಗೆತಾನೆ ಹೋಗಲಾದೀತು? ಇಂದ್ರನಿಗಾಗಲಿ ದೇವಾಸುರರಿಗಾಗಲಿ ಈ ವಾನರಸೇನೆಯನ್ನು ಆಚೆಗೆ ದಾಟಿಸುವುದು ಶಕ್ಯವಲ್ಲ. ಶೂರನಾದ

ವಿಭೀಷಣಸ್ಯ ಶೂರಸ್ಯ ಯಥಾರ್ಥಂ ಕ್ರಿಯತಾಂ ವಚಃ ।
ಅಲಂ ಕಾಲಾತ್ಯಯಂ ಕೃತ್ವಾ ಸಮುದ್ರೋಽಯಂ ನಿಯುಜ್ಯತಾಮ್ ॥

ಯಥಾ ಸೈನ್ಯೇನ ಗಚ್ಛೇಮ ಪುರೀಂ ರಾವಣಪಾಲಿತಾವ್ ।
ಏವಮುಕ್ತಃ ಕುಶಾಸ್ತೀರ್ಣೇ ತೀರೇ ನದನದೀಪತೇಃ ॥ ೪೨

ಸಂವಿವೇಶ ತದಾ ರಾಮೋ ವೇದ್ಯಾಮಿವ ಹುತಾಶನಃ ॥

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕೋನವಿಂಶಃ ಸರ್ಗಃ

---

ವೀಭೀಷಣನ ಸೂಚನೆ ಯಥಾರ್ಥವಾದದ್ದು. ಅದನ್ನು ನಡೆಸಬಹುದು. ಇನ್ನು ತಡವಾಗುವುದು ಬೇಡ. ದಾರಿಯನ್ನು ಕೊಡುವಂತೆ ಸಮುದ್ರರಾಜನನ್ನು ಕೇಳಿಕೊಳ್ಳಬೇಕು (೪೦–೪೧). ರಾವಣರಕ್ಷಿತವಾದ ಲಂಕೆಗೆ ನಾವು ಸೇನಾಸಮೇತರಾಗಿ ಹೋಗಲು ಅವಕಾಶವನ್ನೀಯುವಂತೆ ಕೇಳಬೇಕು'' ಎಂದು ಹೇಳಿದರು. ಆಗ ಶ್ರೀರಾಮನು ಸಮುದ್ರತೀರದಲ್ಲಿ ದರ್ಭೆಗಳನ್ನು ಹರಡಿ ನಿಯಮಪೂರ್ವಕವಾಗಿ ಪವಡಿಸಿದನು. ಕುಶತಲ್ಪದಲ್ಲಿ ಮಲಗಿದ ಆ ತೇಜೋರಾಶಿಯು ವೇದಿಕೆಯಲ್ಲಿ ಜ್ವಲಿಸುವ ಅಗ್ನಿಯಂತೆ ಕಂಗೊಳಿಸಿದನು (೪೨).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಹತ್ತೊಂಬತ್ತನೆಯ ಸರ್ಗ

## ವಿಂಶಃ ಸರ್ಗಃ

### ಸುಗ್ರೀವಭೇದನೋಪಾಯಃ

ತತೋ ನಿವಿಷ್ಟಾಂ ಧ್ವಜಿನೀಂ ಸುಗ್ರೀವೇಣಾಭಿಪಾಲಿತಾಮ್ ।
ದದರ್ಶ ರಾಕ್ಷಸೋಽಭ್ಯೇತ್ಯ ಶಾರ್ದೂಲೋ ನಾಮ ವೀರ್ಯವಾನ್ ॥

ಚಾರೋ ರಾಕ್ಷಸರಾಜಸ್ಯ ರಾವಣಸ್ಯ ದುರಾತ್ಮನಃ ।
ತಾಂ ದೃಷ್ಟ್ವಾ ಸರ್ವಮವ್ಯಗ್ರಂ ಪ್ರತಿಗಮ್ಯ ಸ ರಾಕ್ಷಸಃ ॥ ೨

ಪ್ರವಿಶ್ಯ ಲಂಕಾಂ ವೇಗೇನ ರಾವಣಂ ವಾಕ್ಯಮಬ್ರವೀತ್ ।
ಏಷ ವಾನರಋಕ್ಷೌಘೋ ಲಂಕಾಂ ಸಮಭಿವರ್ತತೇ ॥ ೩

ಅಗಾಧಶ್ಚಾಪ್ರಮೇಯಶ್ಚ ದ್ವಿತೀಯ ಇವ ಸಾಗರಃ ।
ಪುತ್ರೌ ದಶರಥಸ್ಯೇಮೌ ಭ್ರಾತರೌ ರಾಮಲಕ್ಷ್ಮಣೌ ॥ ೪

ಉತ್ತಮಾಯುಧಸಂಪನ್ನೌ ಸೀತಾಯಾಃ ಪದಮಾಗತೌ ।
ಏತೌ ಸಾಗರಮಾಸಾದ್ಯ ಸಂನಿವಿಷ್ಟೌ ಮಹಾದ್ಯುತೀ ॥ ೫

## ಸರ್ಗ ೨೦

ಭೇದೋಪಾಯವನ್ನು ಹೂಡಲು ರಾವಣನ ಯತ್ನ. ಶುಕನೆಂಬ ರಾಕ್ಷಸನೊಡನೆ ಸುಗ್ರೀವನಿಗೆ ಸಂದೇಶವನ್ನು ಕಳಿಸುವುದು. ಶುಕನ ಬಂಧನ. ಶ್ರೀರಾಮನ ಸೂಚನೆಯಂತೆ ಶುಕನ ವಿಮೋಚನೆ.

ಹೀಗೆ ಸುಗ್ರೀವರಕ್ಷಿತವಾದ ವಾನರಸೇನೆಯು ಸಮುದ್ರತೀರದಲ್ಲಿ ಬೀಡು ಬಿಟ್ಟಿರುವುದನ್ನು ಶಾರ್ದೂಲನೆಂಬ ರಾಕ್ಷಸನು ಬಂದು ನೋಡಿದನು. ಅವನು ದುರಾತ್ಮನಾದ ರಾವಣನ ಗುಪ್ತಚಾರ (೧). ಆತನು ಸೇನೆಯೆಲ್ಲವನ್ನೂ ಗಮನಿಸಿ ನೋಡಿ, ಬೇಗಬೇಗನೆ ಲಂಕೆಗೆ ಹಿಂದಿರುಗಿ ರಾವಣನನ್ನು ಕಂಡು "ರಾಕ್ಷಸೇಂದ್ರ, ವಾನರ ಮತ್ತು ಭಲ್ಲೂಕಗಳ ಮಹಾಸೈನ್ಯವು ಲಂಕಾಭಿಮುಖವಾಗಿ ಬರುತ್ತಿದೆ! (೨–೩). ಇನ್ನೊಂದು ಸಮುದ್ರವೋ ಎಂಬಂತೆ ಅಗಾಧವಾಗಿದೆ. ಅದರ ಸಂಖ್ಯೆಯು ಊಹಾತೀತವಾಗಿದೆ. ದಶರಥಪುತ್ರರಾದ ರಾಮಲಕ್ಷ್ಮಣರೆಂಬ ಆ ಸೋದರರು ಉತ್ತಮಾಯುಧಗಳನ್ನು ಧರಿಸಿ ಸೀತೆಯನ್ನು ಹುಡುಕಿಕೊಂಡು ಬಂದಿದ್ದಾರೆ! ಸಮುದ್ರತೀರಕ್ಕೆ ಬಂದಿಳಿದಿದ್ದಾರೆ!

ಬಲಮಾಕಾಶಮಾವೃತ್ಯ ಸರ್ವತೋ ದಶಯೋಜನಮ್ ।
ತತ್ತ್ವಭೂತಂ ಮಹಾರಾಜ ಕ್ಷಿಪ್ರಂ ವೇದಿತುಮರ್ಹಸಿ ॥ ೬

ತವ ದೂತಾ ಮಹಾರಾಜ ಕ್ಷಿಪ್ರಮರ್ಹಂತ್ಯವೇಕ್ಷಿತುಮ್ ।
ಉಪಪ್ರದಾನಂ ಸಾಂತ್ವಂ ವಾ ಭೇದೋ ವಾತ್ರ ಪ್ರಯುಜ್ಯತಾಮ್ ॥

ಶಾರ್ದೂಲಸ್ಯ ವಚಃ ಶ್ರುತ್ವಾ ರಾವಣೋ ರಾಕ್ಷಸೇಶ್ವರಃ ।
ಉವಾಚ ಸಹಸಾ ವ್ಯಗ್ರಃ ಸಂಪ್ರಧಾರ್ಯಾರ್ಥಮಾತ್ಮನಃ ॥ ೮

ಶುಕಂ ನಾಮ ತದಾ ರಕ್ಷೋ ವಾಕ್ಯಮರ್ಥವಿದಾಂ ವರಮ್ ।
ಸುಗ್ರೀವಂ ಬ್ರೂಹಿ ಗತ್ವಾ ತ್ವಂ ರಾಜಾನಂ ವಚನಾನ್ಮಮ ॥ ೯

ಯಥಾಸಂದೇಶಮಕ್ಲೀಬಂ ಶ್ಲಕ್ಷ್ಣಯಾ ಪರಯಾ ಗಿರಾ ॥

ತ್ವಂ ವೈ ಮಹಾರಾಜಕುಲಪ್ರಸೂತೋ
ಮಹಾಬಲಶ್ಚರ್ಕ್ಷರಜಃ ಸುತಶ್ಚ ।
ನ ಕಶ್ಚಿದರ್ಥಸ್ತವ ನಾಸ್ತ್ಯನರ್ಥ-
ಸ್ತಥಾ ಹಿ ಮೇ ಭ್ರಾತೃಸಮೋ ಹರೀಶ ॥ ೧೦

---

ಅವರಿಬ್ಬರೂ ಮಹಾತೇಜಸ್ವಿಗಳು (೪–೫) ಕಪಿಸೇನೆಯು. ಹತ್ತುಯೋಜನಗಳವರೆಗೆ ಹರಡಿಕೊಂಡು ಆಕಾಶವನ್ನು ವ್ಯಾಪಿಸುವಂತಿದೆ. ಮಹಾರಾಜ, ಇದು ಸತ್ಯವಾದ ಸಂಗತಿ. ಈ ಅಂಶವನ್ನು ನೀನು ತ್ವರೆಯಿಂದ ಪರಿಶೀಲಿಸಬೇಕು. ನಿನ್ನ ದೂತರು ಹೋಗಿ ಇದನ್ನು ವಿವರವಾಗಿ ಪರೀಕ್ಷಿಸಲಿ. ಪ್ರಭು, ಈಗ ಸಾಮದಾನಗಳನ್ನೋ ಭೇದೋಪಾಯವನ್ನೋ ಆಶ್ರಯಿಸಬೇಕಾಗಿದೆ'' ಎಂದು ಅರಿಕೆಮಾಡಿದನು (೬–೭). ಶಾರ್ದೂಲನ ನುಡಿಯನ್ನು ಕೇಳಿ ರಾಕ್ಷಸೇಶ್ವರನು ಚಿಂತಾಕುಲನಾದನು. ಅನಂತರ ಏನುಮಾಡಬೇಕೆಂದಾಲೋಚಿಸಿ, ಕಾರ್ಯಜ್ಞರಲ್ಲಿ ನಿಪುಣನಾದ ಶುಕನೆಂಬ ರಾಕ್ಷಸನನ್ನು ಕರೆದು ''ಅಯ್ಯಾ – ಶುಕ, ಈಗ ನೀನು ಕಪಿರಾಜನಾದ ಸುಗ್ರೀವನ ಬಳಿಗೆ ಹೋಗಿ ನಾನು ಹೇಳಿದೆನೆಂದು ಈ ಮಾತನ್ನು ತಿಳಿಸು. ನನ್ನ ಸಂದೇಶವು ಪರಿಣಾಮಕಾರಿಯಾಗುವಂತೆ ಮೃದುವಚನಗಳಿಂದಲೇ ಹೇಳು (೮–೯). ಏನೆಂದರೆ, 'ಅಯ್ಯಾ – ಸುಗ್ರೀವ, ನೀನು ಮಹಾರಾಜವಂಶದಲ್ಲಿ ಜನಿಸಿ ಮಹಾಶೂರನೆಂದು ವಿಖ್ಯಾತನಾಗಿದ್ದೀಯೆ. ಋಕ್ಷರಜಸ್ಸೆಂಬ ವಾನರೋತ್ತಮನ ಪುತ್ರನಾಗಿದ್ದೀಯೆ.

ಅಹಂ ಯದ್ಯಹರಂ ಭಾರ್ಯಾಂ ರಾಜಪುತ್ರಸ್ಯ ಧೀಮತಃ ।
ಕಿಂ ತತ್ರ ತವ ಸುಗ್ರೀವ ಕಿಷ್ಕಿಂಧಾಂ ಪ್ರತಿ ಗಮ್ಯತಾಮ್ ॥ ೧೧

ನ ಹೀಯಂ ಹರಿಭಿರ್ಲಂಕಾ ಶಕ್ಯಾ ಪ್ರಾಪ್ತುಂ ಕಥಂಚನ ।
ದೇವೈರಪಿ ಸಗಂಧರ್ವೈಃ ಕಿಂ ಪುನರ್ನರವಾನರೈಃ ॥ ೧೨

ಸ ತಥಾ ರಾಕ್ಷಸೇಂದ್ರೇಣ ಸಂದಿಷ್ಟೋ ರಜನೀಚರಃ ।
ಶುಕೋ ವಿಹಂಗಮೋ ಭೂತ್ವಾ ತೂರ್ಣಮಾಪ್ಲುತ್ಯ ಚಾಂಬರಮ್ ॥

ಸ ಗತ್ವಾ ದೂರಮಧ್ವಾನಮುಪರ್ಯುಪರಿ ಸಾಗರಮ್ ।
ಸಂಸ್ಥಿತೋ ಹ್ಯಂಬರೇ ವಾಕ್ಯಂ ಸುಗ್ರೀವಮಿದಮಬ್ರವೀತ್ ॥ ೧೪

ಸರ್ವಮುಕ್ತಂ ಯಥಾದಿಷ್ಟಂ ರಾವಣೇನ ದುರಾತ್ಮನಾ ।
ತಂ ಪ್ರಾಪಯಂತಂ ವಚನಂ ತೂರ್ಣಮಾಪ್ಲುತ್ಯ ವಾನರಾಃ ೧೫

ಪ್ರಾಪದ್ಯಂತ ದಿವಂ ಕ್ಷಿಪ್ರಂ ಲೋಪ್ತುಂ ಹಂತುಂ ಚ ಮುಷ್ಟಿಭಿಃ ।
ಸ ತೈಃ ಪ್ಲವಂಗೈಃ ಪ್ರಸಭಂ ನಿಗೃಹೀತೋ ನಿಶಾಚರಃ ॥ ೧೬

---

ನೀನು ರಾಮನಿಗೆ ಸಹಾಯಮಾಡಿದರೆ, ನಿನಗೆ ಬರುವ ಲಾಭವೇನು ! ಸಹಾಯಮಾಡದಿದ್ದರೆ ಆಗುವ ನಷ್ಟವೇನು! ವಾನರೇಶ್ವರ, ನೀನು ನನ್ನ ಸೋದರನಿಗೆ ಸಮನಾದವನು (೧೦). ಆ ಬುದ್ಧಿವಂತನಾದ ರಾಮನ ಮಡದಿಯನ್ನು ನಾನು ಅಪಹರಿಸಿ ತಂದರೆ, ನಿನಗೆ ಆದದ್ದೇನು? ಸುಗ್ರೀವ, ಸುಮ್ಮನೆ ಕಿಷ್ಕಿಂಧೆಗೆ ಹೊರಟುಹೋಗು! ನಿನ್ನ ಕಪಿಸೇನೆಗೆ ಈ ಲಂಕಾನಗರದ ಹತ್ತಿರ ಬರುವುದಕ್ಕೂ ಸಹ ಸಾಧ್ಯವಿಲ್ಲ. ದೇವಗಂಧರ್ವರಿಗೂ ಆಗದ ಕಾರ್ಯವನ್ನು ಮನುಷ್ಯರೂ ಮಂಗಗಳೂ ಸಾಧಿಸಲು ಶಕ್ಯವೆ?' ಎಂಬುದಾಗಿ ತಿಳಿಸು'' ಎಂದನು (೧೧–೧೨). ಆಗ ಶುಕನು ರಾಕ್ಷಸರಾಜನ ಸಂದೇಶವನ್ನು ಹೊತ್ತು ಒಂದು ಪಕ್ಷಿಯ ವೇಷವನ್ನು ಧರಿಸಿ ಆಕಾಶಕ್ಕೆ ಹಾರಿದನು. ಸಮುದ್ರದಮೇಲ್ಗಡೆ ಬಹುದೂರದವರೆಗೆ ಹಾರುತ್ತ ಹೋಗಿ ದಕ್ಷಿಣತೀರವನ್ನು ಸೇರಿ ಸುಗ್ರೀವನನ್ನು ಕಂಡನು. ಆತನು ಆಕಾಶದಲ್ಲಿಯೇ ನಿಂತು, ರಾವಣನ ಸಂದೇಶವನ್ನು ಸುಗ್ರೀವನಿಗೆ ಮುಟ್ಟಿಸಿದನು (೧೩–೧೪). ಶುಕನು ಸಂದೇಶ ವನ್ನು ಹೇಳುತ್ತಿರುವಾಗಲೇ ವಾನರರು ಕುಪಿತರಾಗಿ ಅವನನ್ನು ಗುದ್ದಬೇಕೆಂದು ಆಕಾಶಕ್ಕೆ ನೆಗೆದರು! ಅವನನ್ನು ಹಿಡಿದೆಳೆದು ನೆಲದಮೇಲೆ ಕುಕ್ಕಿದರು!

ಗಗನಾದ್ಭೂತಲೇ ಚಾಶು ಪರಿಗೃಹ್ಯ ನಿಪಾತಿತಃ ।
ವಾನರೈಃ ಪೀಡ್ಯಮಾನಸ್ತು ಶುಕೋ ವಚನಮಬ್ರವೀತ್ ॥ ೧೭

ನ ದೂತಾನ್ ಘ್ನಂತಿ ಕಾಕುತ್ಸ್ಥ ವಾರ್ಯಂತಾಂ ಸಾಧು ವಾನರಾಃ ।
ಯಸ್ತು ಹಿತ್ವಾ ಮತಂ ಭರ್ತುಃ ಸ್ವಮತಂ ಸಂಪ್ರಭಾಷತೇ ॥ ೧೮

ಅನುಕ್ತವಾದೀ ದೂತಃ ಸನ್ ಸ ದೂತೋ ವಧಮರ್ಹತಿ ।
ಶುಕಸ್ಯ ವಚನಂ ಶ್ರುತ್ವಾ ರಾಮಸ್ತು ಪರಿದೇವಿತಮ್ ॥ ೧೯

ಉವಾಚ ಮಾ ವಧಿಷ್ಟೇತಿ ಘ್ನತಃ ಶಾಖಾಮೃಗರ್ಷಭಾನ್ ।
ಸ ಚ ಪತ್ರಲಘುರ್ಭೂತ್ವಾ ಹರಿಭಿರ್ದರ್ಶಿತೇಽಭಯೇ ॥ ೨೦

ಅಂತರಿಕ್ಷಸ್ಥಿತೋ ಭೂತ್ವಾ ಪುನರ್ವಚನಮಬ್ರವೀತ್ ।
ಸುಗ್ರೀವ ಸತ್ತ್ವ ಸಂಪನ್ನ ಮಹಾಬಲಪರಾಕ್ರಮ ॥ ೨೧

ಕಿಂ ಮಯಾ ಖಲು ವಕ್ತವ್ಯೋ ರಾವಣೋ ಲೋಕರಾವಣಃ ॥

ಸ ಏವಮುಕ್ತಃ ಪ್ಲವಗಾಧಿಪಸ್ತಥಾ
ಪ್ಲವಂಗಮಾನಾಮೃಷಭೋ ಮಹಾಬಲಃ ।

---

(೧೪–೧೭). ಹೀಗೆ ಕಪಿಗಳ ಕೈಗೆ ಸಿಕ್ಕಿ ಗುದ್ದುಗಳನ್ನು ತಿನ್ನುತ್ತ ಹಿಂಸೆಗೊಳಗಾದ ಶುಕನು "ರಾಮಾ ರಾಮಾ! ದೂತರನ್ನು ಯಾರೂ ಹೊಡೆದು ಕೊಲ್ಲುವುದಿಲ್ಲ! ಈ ಕಪಿಗಳನ್ನು ನೀನು ತಡೆಯಬಾರದೆ? ಒಡೆಯನ ಸಂದೇಶವನ್ನು ತಿಳಿಸುವ ದೂತ ನಾನು. ಒಡೆಯನು ಹೇಳದಿದ್ದ ಮಾತನ್ನು ಹೇಳಿದರೆ ಮಾತ್ರ ದೂತನನ್ನು ಕೊಲ್ಲಬಹುದು" ಎಂದು ಅರಚಿದನು. ಶುಕನ ಅರಚಾಟವು ಶ್ರೀರಾಮನಿಗೆ ಕೇಳಿಸಿತು (೧೭–೧೯). ಕೂಡಲೆ ಆತನು, ಶುಕನನ್ನು ಹೊಡೆಯುತ್ತಿದ್ದ ವಾನರರಿಗೆ "ಅವನನ್ನು ಹಿಂಸಿಸಬೇಡಿರಿ" ಎಂದು ಆಜ್ಞಾಪಿಸಿದನು. ಆಗ ವಾನರರು ಶುಕನನ್ನು ಪೀಡಿಸದೆ ಅಭಯವನ್ನಿಯಲಾಗಿ, ಆತನು ರೆಕ್ಕೆಗಳನ್ನು ಪಟಪಟನೆ ಬಡಿಯುತ್ತ ಬೇಗನೆ ಅಂತರಿಕ್ಷವನ್ನಡರಿ ಮತ್ತೆ "ಸುಗ್ರೀವ, ನೀನು ಸತ್ತ್ವಸಂಪನ್ನನೂ ಮಹಾಪರಾಕ್ರಮಿಯೂ ಆಗಿದ್ದೀಯೆ. ಲೋಕರಾವಣನೆನಿಸಿದ ರಾವಣನಿಗೆ ನಾನು ಹೇಳಬೇಕಾದ್ದೇನು" ಎಂದು ಕೇಳಿದನು (೨೦–೨೧). ಈ ರೀತಿಯಲ್ಲಿ ದೈನ್ಯದಿಂದ ಕೇಳಿದ ರಾಕ್ಷಸರಾಜಚಾರನಾದ ಶುಕನನ್ನು ಕುರಿತು ಮಹಾಬಲನಾದ ಕಪೀಶ್ವರನು

ಉವಾಚ ವಾಕ್ಯಂ ರಜನೀಚರಸ್ಯ
ಚಾರಂ ಶುಕಂ ದೀನಮದೀನಸತ್ತ್ವಃ ॥ ೨೨

ನ ಮೇಽಸಿ ಮಿತ್ರಂ ನ ತಥಾನುಕಂಪ್ಯೋ
ನ ಚೋಪಕರ್ತಾಽಸಿ ನ ಮೇ ಪ್ರಿಯೋಽಸಿ ।
ಅರಿಶ್ಚ ರಾಮಸ್ಯ ಸಹಾನುಬಂಧಃ
ಸ ಮೇಽಸಿ ವಾಲೀವ ವಧಾರ್ಹ ವಧ್ಯಃ ॥ ೨೩

ನಿಹನ್ಮ್ಯಹಂ ತ್ವಾಂ ಸಸುತಂ ಸಬಂಧುಂ
ಸಜ್ಞಾತಿವರ್ಗಂ ರಜನೀಚರೇಶ ।
ಲಂಕಾಂ ಚ ಸರ್ವಾಂ ಮಹತಾ ಬಲೇನ
ಕ್ಷಿಪ್ರಂ ಕರಿಷ್ಯಾಮಿ ಸಮೇತ್ಯ ಭಸ್ಮ ॥ ೨೪

ನ ಮೋಕ್ಷ್ಯಸೇ ರಾವಣ ರಾಘವಸ್ಯ
ಸುರೈಃ ಸಹೇಂದ್ರೈರಪಿ ಮೂಢ ಗುಪ್ತಃ ।
ಅಂತರ್ಹಿತಃ ಸೂರ್ಯಪಥಂ ಗತೋ ವಾ
ನಭೋ ನ ಪಾತಾಲಮನುಪ್ರವಿಷ್ಟಃ ॥ ೨೫

---

ಹೀಗೆಂದನು : "ಎಲೈ ಚಾರನೆ, ರಾವಣನಿಗೆ ಹೀಗೆ ಹೇಳು : 'ರಾಕ್ಷಸರಾಜ, ನೀನು ನನಗೆ ಮಿತ್ರನೂ ಅಲ್ಲ, ದಯಾಪಾತ್ರನೂ ಅಲ್ಲ! ನನಗೆ ಯಾವ ಉಪಕಾರವನ್ನೂ ಮಾಡಿದವನಲ್ಲ! ನಿನ್ನ ವಿಷಯದಲ್ಲಿ ನನಗೆ ಪ್ರೀತಿಯೂ ಇಲ್ಲ! ಶ್ರೀರಾಮನಿಗೆ ವೈರಿಯಾದ ನೀನು ನನಗೂ ವೈರಿಯಾಗಿದ್ದೀಯೆ. ವಾಲಿಯಂತೆ ವಧ್ಯನಾಗಿದ್ದೀಯೆ. ಬುಡಸಹಿತವಾಗಿ ನಿನ್ನನ್ನು ಕೀರಿಸಬೇಕಾಗಿದೆ (೨೨-೨೩). ನಿನ್ನ ಮಕ್ಕಳು ಬಂಧುಬಾಂಧವರೊಡನೆ ನಿನ್ನನ್ನು ಕೊಲ್ಲುವುದೇ ದಿಟ! ನಾನು ಶೀಘ್ರದಲ್ಲಿಯೇ ಮಹತ್ತರವಾದ ಸೇನೆಯೊಡನೆ ಬಂದು ಆಕ್ರಮಿಸಿ, ಲಂಕಾನಗರವನ್ನು ಸುಟ್ಟು ಬೂದಿಮಾಡುವೆನೆಂದು ತಿಳಿ! (೨೪). ಎಲೈ ಮೂಢ- ರಾವಣ, ಇಂದ್ರಾದಿದೇವತೆಗಳು ನಿನ್ನನ್ನು ಉಳಿಸಲು ಬಂದರೂ ತಪ್ಪಿಸಿಕೊಳ್ಳಲಾರೆ. ಎಲ್ಲಿಯಾದರೂ ಮರೆಯಾಗು ಸೂರ್ಯಲೋಕವನ್ನೇ ಅಡರು, ಆಕಾಶದಲ್ಲಿಯೇ ಅಡಗು, ಪಾತಾಳವನ್ನೇ ಸೇರು- ನಿನ್ನನ್ನು ಬಿಡುವುದಿಲ್ಲ! (೨೫).

**ತಸ್ಯ ತೇ ತ್ರಿಷು ಲೋಕೇಷು ನ ಪಿಶಾಚಂ ನ ರಾಕ್ಷಸಮ್ ।**
**ತ್ರಾತಾರಮನುಪಶ್ಯಾಮಿ ನ ಗಂಧರ್ವಂ ನ ಚಾಸುರಮ್ ॥ ೨೬**

**ಅವಧೀಯರ್ತ್ ಜರಾವೃದ್ಧಂ ಗೃಧ್ರರಾಜಂ ಜಟಾಯುಷಮ್ ।**
**ಕಿಂ ನು ತೇ ರಾಮಸಾನ್ನಿಧ್ಯೇ ಸಕಾಶೇ ಲಕ್ಷ್ಮಣಸ್ಯ ವಾ ॥ ೨೭**

**ಹೃತಾ ಸೀತಾ ವಿಶಾಲಾಕ್ಷೀ ಯಾಂ ತ್ವಂ ಗೃಹ್ಯ ನ ಬುಧ್ಯಸೇ ।**
**ಮಹಾಬಲಂ ಮಹಾಪ್ರಾಜ್ಞಂ ದುರ್ಧರ್ಷಮಮರೈರಪಿ ॥ ೨೮**

**ನ ಬುಧ್ಯಸೇ ರಘುಶ್ರೇಷ್ಠಂ ಯಸ್ತೇ ಪ್ರಾಣಾನ್ ಹರಿಷ್ಯತಿ ।**
**ತತೋಽಬ್ರವೀದ್ವಾಲಿಸುತಸ್ತ್ವಂಗದೋ ಹರಿಸತ್ತಮಃ ॥ ೨೯**

**ನಾಯಂ ದೂತೋ ಮಹಾರಾಜ ಚಾರಿಕಃ ಪ್ರತಿಭಾತಿ ಮೇ ।**
**ತುಲಿತಂ ಹಿ ಬಲಂ ಸರ್ವಮನೇನಾತ್ರೈವ ತಿಷ್ಠತಾ ॥ ೩೦**

**ಗೃಹ್ಯತಾಂ ಮಾ ಗಮಲ್ಲಂ ಕಾಮೇತದ್ಧಿ ಮಮ ರೋಚತೇ ।**
**ತತೋರಾಜ್ಞಾ ಸಮಾದಿಷ್ಟಾಃ ಸಮುತ್ಪ್ಲುತ್ಯ ವಲೀಮುಖಾಃ ॥ ೩೧**

---

ಎಲೈ ರಾವಣ, ಮೂರು ಲೋಕಗಳಲ್ಲಿ ನಿನ್ನನ್ನು ರಕ್ಷಿಸಿಕೊಳ್ಳತಕ್ಕವರೊಬ್ಬರನ್ನೂ ನಾನು ಕಾಣೆ. ಪಿಶಾಚರಾಕ್ಷಸರಲ್ಲಾಗಲಿ ಅಸುರಗಂಧರ್ವರಲ್ಲಾಗಲಿ ಯಾವನೂ ನಿನ್ನನ್ನು ಉಳಿಸಿಕೊಳ್ಳಲಾರ (೨೬). ಗೃಧ್ರರಾಜನಾದ ಜಟಾಯು ಮುಪ್ಪಿನ ಮುದುಕ. ಅವನನ್ನು ಗೆದ್ದು ಸೀತಾದೇವಿಯನ್ನಪಹರಿಸಿದ್ದು ನಿನ್ನ ಪರಾಕ್ರಮಕ್ಕೆ ಸಾಕ್ಷಿಯೆ? ಶ್ರೀರಾಮನೆದುರಿಗಾಗಲಿ ಲಕ್ಷ್ಮಣನೆದುರಿಗಾಗಲಿ ಆ ದೇವಿಯನ್ನು ಒಯ್ದೆಯಾ? (೨೭). ಇಷ್ಟೂ ನಿನಗ ತಿಳಿಯದಾಯಿತೆ? ಮಹಾಬಲನೂ ಮಹಾಪ್ರಾಜ್ಞನೂ ಸಂಗ್ರಾಮಭೂಮಿಯಲ್ಲಿ ದೇವತೆಗಳಿಗೂ ಸಹ ದುರ್ಧರ್ಷನೂ ಆದ ರಘುನಾಥನು ಎಂಥವನೆಂದು ನೀನು ಅರಿಯೆ. ಅವನು ನಿನ್ನ ಪ್ರಾಣವನ್ನೇ ಅಪಹರಿಸುವುದು ನಿಶ್ಚಯ' ಎಂದು ತಿಳಿಸು'' ಎಂದನು (೨೮). ಅಷ್ಟರಲ್ಲಿ ವಾಲಿಪುತ್ರನಾದ ಅಂಗದನು ''ಮಹಾರಾಜ, ಈತನು ರಾಜದೂತನಲ್ಲ ಗೂಢಚಾರನಾಗಿ ಬಂದಿದ್ದಾನೆಂದು ನನಗೆ ತೋರುತ್ತದೆ. ಈ ಶುಕನು ಆಕಾಶದಲ್ಲಿಯೇ ನಿಂತು ನಮ್ಮ ಸೈನ್ಯವೆಲ್ಲವನ್ನೂ ತೂಗಿನೋಡಿದನು ! (೨೯–೩೦). ಲಂಕೆಗೆ ಹಿಂದಿರುಗದಂತೆ ಇವನನ್ನು ಇಲ್ಲಿಯೆ ಸೆರೆಹಿಡಿಯಬೇಕೆಂದು ನನ್ನ ಅಭಿಪ್ರಾಯ'' ಎಂದು

ಜಗೃಹುಸ್ತಂ ಬಬಂಧುಶ್ಚ ವಿಲಪಂತಮನಾಥವತ್ ।
ಶುಕಸ್ತು ವಾನರೈಶ್ಚಂಡೈಸ್ತತ್ರ ತೈಃ ಸಂಪ್ರಪೀಡಿತಃ ॥ ೩೨

ವ್ಯಾಕ್ರೋಶತ ಮಹಾತ್ಮಾನಂ ರಾಮಂ ದಶರಥಾತ್ಮಜಮ್ ।
ಲುಪ್ಯೇತೇ ಮೇ ಬಲಾತ್ಪಕ್ಷೌ ಭಿದ್ಯೇತೇ ಚ ತಥಾ ಕ್ಷಿಣೀ ॥ ೩೩

ಯಾಂ ಚ ರಾತ್ರಿಂ ಮರಿಷ್ಯಾಮಿ ಜಾಯೇ ರಾತ್ರಿಂ ಚ ಯಾಮಹಮ್
ಏತಸ್ಮಿನ್ನಂತರೇ ಕಾಲೇ ಯನ್ಮಯಾ ಹ್ಯಶುಭಂ ಕೃತಮ್ ॥ ೩೪

ಸರ್ವಂ ತದುಪಪದ್ಯೇಥಾ ಜಹ್ಯಾಂ ಚೇದ್ಯದಿ ಜೀವಿತಮ್ ।
ನಾಘಾತಯತ್ತದಾ ರಾಮಃ ಶ್ರುತ್ವಾ ತತ್ಪರಿದೇವನಮ್ ॥ ೩೫

ವಾನರಾನಬ್ರವೀದ್ರಾಮೋ ಮುಚ್ಯತಾಂ ದೂತ ಆಗತಃ ॥

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ವಿಂಶಃ ಸರ್ಗಃ

---

ಹೇಳಿದನು. ಕೂಡಲೆ ಸುಗ್ರೀವನ ಆಜ್ಞೆಯಂತೆ ವಾನರರು ಆಕಾಶಕ್ಕೆ ನೆಗೆದು ಶುಕನನ್ನು ಹಿಡಿದು ಹೆಡಮುರಿಗೆ ಕಟ್ಟಿದರು! ಶುಕನು ಪ್ರಚಂಡರಾದ ವಾನರರ ಹಿಂಸೆಗೆ ಸಿಕ್ಕಿ ಅನಾಥನಂತೆ ಅರಚುತ್ತ ಮಹಾತ್ಮನಾದ ಶ್ರೀರಾಮನ ಮರೆ ಹೊಕ್ಕು ಕೂಗಿಕೊಳ್ಳತೊಡಗಿದನು (೩೧–೩೨); ''ಓ ರಾಮ, ರಾಮ, ನನ್ನ ರೆಕ್ಕೆಗಳನ್ನು ಬಲಾತ್ಕಾರದಿಂದ ಕೀಳುತ್ತಿದ್ದಾರೆ! ಕಣ್ಣುಗುಡ್ಡೆಗಳು ಒಡೆದು ಹೋಗುತ್ತಿವೆ! ಈಗ ನಾನು ಸತ್ತುಹೋದರೆ, ರಾಮ, ನಾನು ಮಾಡಿದ ಸಕಲ ಪಾಪಕರ್ಮವೂ ನಿನಗೇ ಸೇರುತ್ತದೆ! ನಾನು ಹುಟ್ಟಿದ ರಾತ್ರಿಯಿಂದ ಇದುವರೆಗೆ ಮಾಡಿದ ಪಾಪವೆಲ್ಲವೂ ನಿನಗೇ ತಗಲುತ್ತದೆ!'' ಎಂದು ಕೂಗಾಡಿದನು (೩೩–೩೪). ಅವನ ಅರಚಾಟವು ಶ್ರೀರಾಮನಿಗೆ ಕೇಳಿಸಿತು. ಆತನು ''ಎಲೈ ಕಪಿಗಳೆ, ಅವನು ದೂತನಾಗಿ ಬಂದಿದ್ದಾನೆ ಹೊಡೆಯುವುದನ್ನು ಬಿಡಿರಿ'' ಎಂದು ಆಜ್ಞಾಪಿಸಿ ಶುಕನ್ನು ಬಿಡಿಸಿದನು (೩೫).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಇಪ್ಪತ್ತನೆಯ ಸರ್ಗ

---

## ಏಕವಿಂಶಃ ಸರ್ಗಃ

ಸಮುದ್ರಸಂಕ್ಷೋಭಃ

ತತಃ ಸಾಗರವೇಲಾಯಾಂ ದರ್ಭಾನಾಸ್ತೀರ್ಯ ರಾಘವಃ ।
ಅಂಜಲಿಂ ಪ್ರಾಙ್ಮುಖಃ ಕೃತ್ವಾ ಪ್ರತಿಶಿಶ್ಯೇ ಮಹೋದಧಿಮ್ ॥ ೧

ಬಾಹುಂ ಭುಜಗಭೋಗಾಭಮುಪಧಾಯಾರಿಸೂದನಃ ।
ಜಾತರೂಪಮಯೈಶ್ಚೈವ ಭೂಷಣೈರ್ಭೂಷಿತಂ ಪುರಾ ॥ ೨

ವರಕಾಂಚನಕೇಯೂರಮುಕ್ತಾಪ್ರವರಭೂಷಣೈಃ ।
ಭುಜೈಃ ಪರಮನಾರೀಣಾಮಭಿಮೃಷ್ಟಮನೇಕಧಾ ॥ ೩

ಚಂದನಾಗರುಭಿಶ್ಚೈವ ಪುರಸ್ತಾದಧಿವಾಸಿತಮ್ ।
ಬಾಲಸೂರ್ಯಪ್ರತೀಕಾಶೈಶ್ಚಂದನೈರುಪಶೋಭಿತಮ್ ॥ ೪

### ಸರ್ಗ ೨೧

ಸಮುದ್ರನು ಪ್ರಸನ್ನನಾಗದಿರಲು ಶ್ರೀರಾಮನ ರೋಷ.

ಇತ್ತ ಶ್ರೀರಾಮನು ಸಮುದ್ರತೀರದಲ್ಲಿ ದರ್ಭೆಗಳನ್ನು ಹರಡಿ ಪೂರ್ವಾಭಿಮುಖನಾಗಿ ಕೈಮುಗಿದು, ಸಮುದ್ರರಾಜನು ಪ್ರಸನ್ನನಾಗಲೆಂಬ ಉದ್ದೇಶದಿಂದ ದರ್ಭತಲ್ಪದಲ್ಲಿ ಪವಡಿಸಿದನು. ಭುಜಂಗಮದಂತೆ ನೀಳವಾಗಿ ಪುಷ್ಟವಾಗಿದ್ದ ತನ್ನ ಬಾಹುವೇ ಆ ವೀರನಿಗೆ ತಲೆದಿಂಬಾಯಿತು. ಅದು ಎಂತಹ ಬಾಹು? ಹಿಂದೆ ಒಂದು ಕಾಲದಲ್ಲಿ ಸುವರ್ಣಭೂಷಣಗಳಿಂದ ಭೂಷಿತ ವಾದದ್ದು (೧–೨). ಅರಮನೆಯಲ್ಲಿದ್ದ ಉತ್ತಮಸ್ತ್ರೀಯರು* ಕಾಂಚನ ಕೇಯೂರ ಮುಕ್ತಾದ್ಯಲಂಕಾರಗಳಿಂದ ಸಿಂಗರಿಸಿಕೊಂಡ ಕೈಗಳಿಂದ ನೀವು ತ್ತಿದ್ದ ಬಾಹು. ಚಂದನ ಅಗರು ಮುಂತಾದ ಸುಗಂಧದ್ರವ್ಯಗಳ ಪರಿಮಳದಿಂದ ಘಮಘಮಿಸುತ್ತಿದ್ದುದು. ಬಾಲಸೂರ್ಯನಂತೆ ಹೊಳೆವ ಹೊಂಬಣ್ಣದ ಚಂದನ ದಿಂದ ಲಿಪ್ತವಾದುದು (೩–೪).

---

* ಅನುಬಂಧವನ್ನು ನೋಡಿ.

ಶಯನೇ ಚೋತ್ತಮಾಂಗೇನ ಸೀತಾಯಾಃ ಶೋಭಿತಂ ಪುರಾ ।
ತಕ್ಷಕಸ್ಯೇವ ಸಂಭೋಗಂ ಗಂಗಾಜಲ ನಿಷೇವಿತಮ್ ॥ ೫

ಸಂಯುಗೇ ಯುಗಸಂಕಾಶಂ ಶತ್ರೂಣಾಂ ಶೋಕವರ್ಧನಮ್ ।
ಸುಹೃದಾನಂದನಂ ದೀರ್ಘಂ ಸಾಗರಾಂತವ್ಯಪಾಶ್ರಯಮ್ ॥ ೬

ಅಸ್ಯತಾ ಚ ಪುನಃ ಸವ್ಯಂ ಜ್ಯಾಘಾತವಿಗತತ್ವಚಮ್ ।
ದಕ್ಷಿಣೋ ದಕ್ಷಿಣಂ ಬಾಹುಂ ಮಹಾಪರಿಘಸನ್ನಿಭಮ್ ॥ ೭

ಗೋಸಹಸ್ರ ಪ್ರದಾತಾರಮುಪಧಾಯ ಮಹದ್ಭುಜಮ್ ।
ಅದ್ಯಮೇ ಮರಣಂ ವಾಥ ತರಣಂ ಸಾಗರಸ್ಯ ವಾ ॥ ೮

---

ಹಿಂದೆ ಜಾನಕಿಯು ಮಲಗುವಾಗ ಅವಳ ಶಿರಸ್ಸಿನಿಂದ ಶೋಭಿತವಾದುದು. ರಾಘವನ ನೀಳವಾದ ಆ ತೋಳು ಬಿಳಿಯ ಮರಳುರಾಶಿಯಮೇಲೆ, ಗಂಗಾ ಜಲದಲ್ಲಿ ತೇಲುವ ತಕ್ಷಕಸರ್ಪದಂತೆ ರಮಣೀಯವಾಗಿ ರಾಜಿಸಿತು. ನೊಗ ದಂತೆ ದೀರ್ಘವಾಗಿದ್ದ ಆ ಬಾಹು, ಸಂಗ್ರಾಮಭೂಮಿಯಲ್ಲಿ ಶತ್ರುಗಳನ್ನು ಸದೆಬಡಿದು ಅವರ ಶೋಕವನ್ನು ವರ್ಧಿಸುವಂತಹದು. ಮಿತ್ರರ ಆನಂದವನ್ನು ಹಿಗ್ಗಿಸುವಂತಹದು. ಸಮುದ್ರಪರ್ಯಂತವಾದ ಭೂಮಂಡಲಕ್ಕೆ ಆಶ್ರಯ ವನ್ನು ನೀಡಬಲ್ಲಷ್ಟು ನೀಳವಾದುದು! (೫–೬). ಎಡಗೈಯಿಂದಲೂ ಬಾಣ ಗಳನ್ನು ಹೊಡೆಯುವಾಗ ಜ್ಯಾಘಾತದಿಂದ ಕಿತ್ತುಹೋದ ಚರ್ಮವುಳ್ಳುದು. ಮಹಾಪರಿಘದಂತೆ ದೃಢವಾದುದು. ಸಾವಿರಾರು ಗೋದಾನಗಳನ್ನು ಮಾಡಿದ ಆ ದಕ್ಷಿಣಬಾಹುವನ್ನು ಶ್ರೀರಾಮನು ತಲೆದಿಂಬಿನಂತೆ ಅಳವಡಿಸಿಕೊಂಡನು. 'ಈಗ ನನಗೆ ಮರಣವಾಗಬೇಕು * – ಇಲ್ಲವೆ – ಸಾಗರತರಣವಾಗಬೇಕು' ಎಂಬ ದೃಢನಿಶ್ಚಯದಿಂದ ಆ ಮಹಾಬಾಹುವು ಸಮುದ್ರತೀರದಲ್ಲಿ ಪವಡಿಸಿದನು. (೭–೮).

---

* ನನ್ನಿಂದ ಸಾಗರಕ್ಕೆ ಮರಣವಾಗಬೇಕು– ಇಲ್ಲವೆ ಸಾಗರದ ತರಣವಾಗಬೇಕು' ಎಂದು ವ್ಯಾಖ್ಯಾನಕಾರರು ಅರ್ಥಮಾಡಿದ್ದಾರೆ.

ಇಲ್ಲಿ ವಿಷಯದ ಔಚಿತ್ಯವನ್ನು ಗಮನಿಸಿ 'ಈಗ ಸಾಗರತರಣವಾಗಬೇಕು – ಇಲ್ಲವೆ, ನನಗೆ ಮರಣವಾಗಬೇಕು' ಎಂದು 'ಮರಣ' ವನ್ನು ಎರಡನಯ ಪಕ್ಷಕ್ಕೆ ಸೇರಿಸಿ ಅಥವಾ ಮಾಡುವುದೂ ಸಂಗತವಾಗುತ್ತದೆ.

ಇತಿ ರಾಮೋ ಮತಿಂ ಕೃತ್ವಾ ಮಹಾಬಾಹುರ್ಮಹೋದಧಿಮ್ ।
ಅಧಿಶಿಶ್ಯೇ ಚ ವಿಧಿವತ್ ಪ್ರಯತೋ ನಿಯತೋ ಮುನಿಃ ॥ ೯

ತಸ್ಯ ರಾಮಸ್ಯ ಸುಪ್ತಸ್ಯ ಕುಶಾಸ್ತೀರ್ಣೇ ಮಹೀತಲೇ ।
ನಿಯಮಾದಪ್ರಮತ್ತಸ್ಯ ನಿಶಾಸ್ತಿಸ್ರೋಽತಿಚಕ್ರಮುಃ ॥ ೧೦

ಸ ತ್ರಿರಾತ್ರೋಷಿತಸ್ತತ್ರ ನಯಜ್ಞೋ ಧರ್ಮವತ್ಸಲಃ ।
ಉಪಾಸತ ತದಾ ರಾಮಃ ಸಾಗರಂ ಸರಿತಾಂ ಪತಿಮ್ ॥ ೧೧

ನ ಚ ದರ್ಶಯತೇ ಮಂದಸ್ತದಾ ರಾಮಸ್ಯ ಸಾಗರಃ ।
ಪ್ರಯತೇನಾಪಿ ರಾಮೇಣ ಯಥಾರ್ಹಮಭಿಪೂಜಿತಃ ॥ ೧೨

ಸಮುದ್ರಸ್ಯ ತತಃ ಕ್ರುದ್ಧೋ ರಾಮೋ ರಕ್ತಾಂತಲೋಚನಃ ।
ಸಮೀಪಸ್ಥಮುವಾಚೇದಂ ಲಕ್ಷ್ಮಣಂ ಶುಭಲಕ್ಷಣಮ್ ॥ ೧೩

ಅವಲೇಪಃ ಸಮುದ್ರಸ್ಯ ನ ದರ್ಶಯತಿ ಯತ್ ಸ್ವಯಮ್ ।
ಪ್ರಶಮಶ್ಚ ಕ್ಷಮಾ ಚೈವ ಆರ್ಜವಂ ಪ್ರಿಯವಾದಿತಾ ॥ ೧೪

ಅಸಾಮರ್ಥ್ಯಫಲಾ ಹ್ಯೇತೇ ನಿರ್ಗುಣೇಷು ಸತಾಂ ಗುಣಾಃ ।
ಆತ್ಮ ಪ್ರಶಂಸಿನಂ ದುಷ್ಟಂ ಧೃಷ್ಟಂ ವಿಪರಿಧಾವಕಮ್ ॥ ೧೫

---

ಹೀಗೆ ರಘುನಾಥನು ವಿಧಿವತ್ತಾದ ರೀತಿಯಲ್ಲಿ ಕರಣತ್ರಯಪರಿಶುದ್ಧನಾಗಿ ಮುನಿಯಂತೆ ಏಕಾಗ್ರಚಿತ್ತತೆಯಿಂದ ನೆಲದಮೇಲೆ ಕುಶತಲ್ಪದಲ್ಲಿ ಮಲಗಿದನು. ನಿಯಮದಿಂದ ಸ್ವಲ್ಪವೂ ತಪ್ಪದೆ ಮಲಗಿರಲು ಮೂರು ರಾತ್ರಿಗಳು ಕಳೆದವು. ಧರ್ಮವತ್ಸಲನೂ ನೀತಿಜ್ಞನೂ ಆದ ಶ್ರೀರಾಮನು ನದೀಪತಿಯಾದ ಸಮುದ್ರ ರಾಜನನ್ನು ಧ್ಯಾನಿಸುತ್ತ ಹೀಗೆ ಮೂರು ರಾತ್ರಿಗಳನ್ನು ಕಳೆದನು (೯–೧೧). ಆದರೆ ಬುದ್ಧಿಗೇಡಿಯಾದ ಸಮುದ್ರರಾಜನು ಪ್ರತ್ಯಕ್ಷನಾಗಲಿಲ್ಲ! ಪವಿತ್ರಭಾವ ದಿಂದ ಯಥಾಯೋಗ್ಯವಾಗಿ ಮನ್ನಣೆಯನ್ನಿತ್ತು ಧ್ಯಾನಿಸಿದರೂ ಸಮುದ್ರ ರಾಜನು ಕಾಣಿಸಿಕೊಳ್ಳಲಿಲ್ಲ. ಆಗ ಶ್ರೀರಾಮನ ಕಣ್ಣುಗಳು ಕೆಂಪಡರಿದವು. ಅವನು ಕ್ರುದ್ಧನಾಗಿ, ಸಮೀಪದಲ್ಲಿ (ಮುಗುಳ್ನಗೆ ಬೀರುತ್ತಿದ್ದ) ಲಕ್ಷ್ಮಣನನ್ನು ನೋಡಿ ಹೀಗೆಂದನು (೧೨–೧೩): "ಲಕ್ಷ್ಮಣ, ಸಮುದ್ರರಾಜನ ಸೊಕ್ಕನ್ನು ನೋಡು! ಇನ್ನೂ ಪ್ರತ್ಯಕ್ಷನಾಗಲಿಲ್ಲ. ಶಾಂತಿ, ತಾಳ್ಮೆ ಋಜುತ್ವ, ಪ್ರಿಯವಚನ – ಈ ನಮ್ಮ ಸದ್ಗುಣಗಳು ಗುಣಹೀನರ ವಿಷಯದಲ್ಲಿ ಕೆಲಸಕ್ಕೆ

ಸರ್ವತ್ರೋತ್ಸೃಷ್ಟದಂಡಂ ಚ ಲೋಕಃ ಸತ್ಕುರುತೇ ನರಮ್ ।
ನ ಸಾಮ್ನಾ ಶಕ್ಯತೇ ಕೀರ್ತಿರ್ನ ಸಾಮ್ನಾ ಶಕ್ಯತೇ ಯಶಃ ॥ ೧೬

ಪ್ರಾಪ್ತುಂ ಲಕ್ಷ್ಮಣ ಲೋಕೇಽಸ್ಮಿನ್ ಜಯೋ ವಾ ರಣಮೂರ್ಧನಿ ।
ಅದ್ಯ ಮದ್ಬಾಣನಿರ್ಭಿನ್ನೈರ್ಮಕರೈರ್ಮಕರಾಲಯಮ್ ॥ ೧೭

ನಿರುದ್ಧತೋಯಂ ಸೌಮಿತ್ರೇ ಪ್ಲವದ್ಭಿಃ ಪಶ್ಯ ಸರ್ವತಃ ।
ಭೋಗಿನಾಂ ಪಶ್ಯ ಭೋಗಾನಿ ಮಯಾ ಭಿನ್ನಾನಿ ಲಕ್ಷ್ಮಣ ॥ ೧೮

ಮಹಾಭೋಗಾನಿ ಮತ್ಸ್ಯಾನಾಂ ಕರಿಣಾಂ ಚ ಕರಾನಿಹ ।
ಸಶಂಖಶುಕ್ತಿಕಾಜಾಲಂ ಸಮೀನಮಕರಂ ಶರೈಃ ॥ ೧೯

ಅದ್ಯ ಯುದ್ಧೇನ ಮಹತಾ ಸಮುದ್ರಂ ಪರಿಶೋಷಯೇ ।
ಕ್ಷಮಯಾ ಹಿ ಸಮಾಯುಕ್ತಂ ಮಾಮಯಂ ಮಕರಾಲಯಃ ॥ ೨೦

---

ಬಾರವು. ಈ ಸದ್ಗುಣಗಳು ಅಸಾಮರ್ಥ್ಯದ ಲಕ್ಷಣಗಳೆಂದು ಹೇಳುತ್ತಾರೆ! (೧೪–೧೫). ಯಾವನು ತನ್ನನ್ನು ತಾನೇ ಹೊಗಳಿಕೊಳ್ಳುತ್ತ ಖ್ಯಾತಿಗಾಗಿ ಅಲೆಯುತ್ತ ಔದ್ಧತ್ಯದಿಂದ ಎಲ್ಲೆಡೆಯೂ ದಂಡಪ್ರಯೋಗವನ್ನು ಮಾಡುತ್ತ ದೌಷ್ಟ್ಯದಿಂದ ಮೆರೆಯುವನೋ ಅವನನ್ನು ಲೋಕವು ಗೌರವಿಸುತ್ತದೆ! ಲಕ್ಷ್ಮಣ, ಈ ಲೋಕದಲ್ಲಿ ಸಾಮೋಪಾಯದಿಂದ ಪ್ರಖ್ಯಾತಿಯೂ ಬರದು, ಒಳ್ಳೆಯ ಹೆಸರೂ ದೊರೆಯದು (೧೬–೧೭). ರಣಭೂಮಿಯಲ್ಲಿ ಜಯವೂ ಲಭಿಸದು! ಸೌಮಿತ್ರಿ, ಈಗ ನೋಡುತ್ತಿರು. ನನ್ನ ಶರಗಳಿಂದ ತರಿತರಿದು ಈಡಾಡಲ್ಪಡುವ ಮಕರಾದಿ ಮಹಾಜಂತುಗಳಿಂದ ಸಮುದ್ರಜಲವು ಆಚ್ಛಾದಿತ ವಾಗುವುದು! ಕಡಿಕಡಿದು ತುಂಡರಿಸಿ ಚೆಲ್ಲಿದ ಭುಜಂಗಭೋಗಗಳು* ಉರುಳಾಡುತ್ತಿರುವುದನ್ನು ನೋಡುತ್ತಿರು! (೧೮). ಮಹಾಮತ್ಸ್ಯಗಳ ಬೃಹಚ್ಛರೀರಗಳೂ ನೀರಾನೆಗಳ ಸೊಂಡಿಲುಗಳೂ ತಾರಾಡುವುದನ್ನು ಕಾಣು ತ್ತಿರು! ದೊಡ್ಡ ಯುದ್ಧವನ್ನೇ ಹೂಡಿ ನನ್ನ ಬಾಣಗಳಿಂದ ಶಂಖ, ಚಿಪ್ಪು, ಮೀನ, ಮಕರಗಳೊಡನೆ ತುಳುಕುವ ಈ ಸಮುದ್ರವನ್ನು ಒಣಗಿಸಿಬಿಡುತ್ತೇನೆ ! ನನ್ನ ಕ್ಷಮಾಗುಣವನ್ನು ಕಂಡು ಈ ಸಮುದ್ರನು ನಾನೊಬ್ಬ ಕೈಲಾಗದವ

* ಸರ್ಪಗಳ ಶರೀರಗಳು.

ಅಸಮರ್ಥಂ ವಿಜಾನಾತಿ ಧಿಕ್ ಕ್ಷಮಾಮೀದೃಶೇ ಜನೇ ।
ನ ದರ್ಶಯತಿ ಸಾಮ್ನಾ ಮೇ ಸಾಗರೋ ರೂಪಮಾತ್ಮನಃ ॥ ೨೦

ಚಾಪಮಾನಯ ಸೌಮಿತ್ರೇ ಶರಾಂಶ್ಚಾಶೀವಿಷೋಪಮಾನ್ ।
ಸಮುದ್ರಂ ಶೋಷಯಿಷ್ಯಾಮಿ ಪದ್ಭ್ಯಾಂ ಯಾಂತು ಪ್ಲವಂಗಮಾಃ ॥

ಅದ್ಯಾಕ್ಷೋಭ್ಯಮಪಿ ಕ್ರುದ್ಧಃ ಕ್ಷೋಭಯಿಷ್ಯಾಮಿ ಸಾಗರಮ್ ।
ವೇಲಾಸು ಕೃತಮರ್ಯಾದಂ ಸಹಸ್ರೋರ್ಮಿ ಸಮಾಕುಲಮ್ ॥ ೨೨

ನಿರ್ಮರ್ಯಾದಂ ಕರಿಷ್ಯಾಮಿ ಸಾಯಕೈರ್ವರುಣಾಲಯಮ್ ।
ಮಹಾರ್ಣವಂ ಕ್ಷೋಭಯಿಷ್ಯೇ ಮಹಾನಕ್ರಸಮಾಕುಲಮ್ ॥ ೨೪

ಏವಮುಕ್ತ್ವಾ ಧನುಷ್ಪಾಣಿಃ ಕ್ರೋಧವಿಸ್ಫಾರಿತೇಕ್ಷಣಃ ।
ಬಭೂವ ರಾಮೋ ದುರ್ಧರ್ಷೋ ಯುಗಾಂತಾಗ್ನಿರಿವ ಜ್ವಲನ್ ॥ ೨೫

ಸಂಪೀಡ್ಯ ಚ ಧನುರ್ಘೋರಂ ಕಂಪಯಿತ್ವಾ ಶನೈರ್ಜಗತ್ ।
ಮುಮೋಚ ವಿಶಿಖಾನುಗ್ರಾನ್ ವಜ್ರಾನಿವ ಶತಕ್ರತುಃ ॥ ೨೬

---

ನೆಂದು ತಿಳಿದಿದ್ದಾನೆ. ಇಂಥ ಗುಣಹೀನನ ವಿಷಯದಲ್ಲಿ ತೋರಿಸುವ ಕ್ಷಮಾಗುಣಕ್ಕೆ ಧಿಕ್ಕಾರ! ಸಾಮಕ್ಕೆ ಮಣಿದು ಈತನು ಪ್ರತ್ಯಕ್ಷನಾಗುವುದಿಲ್ಲ (೧೯–೨೦). ಸೌಮಿತ್ರಿ, ನನ್ನ ಕೋದಂಡವನ್ನೂ ಸರ್ಪಗಳಂತಿರುವ ಘೋರಾಸ್ತ್ರಗಳನ್ನೂ ಇತ್ತ ತಾ. ಈ ಸಮುದ್ರವನ್ನು ಒಣಗಿಸಿಬಿಡುತ್ತೇನೆ. ವಾನರರು ಕಾಲ್ಗಳಿಂದ ನಡೆಯುತ್ತಲೇ ದಾಟಿಹೋಗಲಿ! (೨೧). ಕಡಲು ಅಕ್ಷೋಭ್ಯವೆಂದು ಜನರು ಆಡಿಕೊಳ್ಳುತ್ತಾರೆ. ಆದರೆ ಇದನ್ನು ಕ್ಷೋಭೆಗೊಳಿಸಿ ತಲ್ಲಣಿಸುವಂತೆ ಮಾಡುವೆನು. ಇದು ತನ್ನ ದಡವನ್ನು ಮೀರಿ ನುಗ್ಗದೆಂದು ಹೇಳಿಕೊಳ್ಳುತ್ತಾರೆ. ಇಂದು ಇದು ಸಾವಿರಾರು ಅಲೆಗಳೊಡನೆ ಸಕಲ ದಡಗಳಲ್ಲಿಯೂ ನುಗ್ಗಿ ಹರಿಯುವಂತೆ ಮಾಡುವೆನು! ಮಹಾನಕ್ರಗಳಿಂದ ಬೀಗುತ್ತಿರುವ ಈ ಸಮುದ್ರವನ್ನು ಬಾಣಗಳಿಂದ ತತ್ತರಗೊಳಿಸಿ ಈಡಾಡುವೆನು'' ಎಂದು ಆರ್ಭಟಿಸಿದನು (೨೨–೨೪). ರೋಷದಿಂದ ಅವನ ಕಣ್ಣಾಲೆಗಳು ತಿರುಗಿದವು. ದುರ್ಧರ್ಷನಾದ ಆ ವೀರನು ಧನುಷ್ಪಾಣಿಯಾಗಿ ಪ್ರಳಯಕಾಲಾಗ್ನಿಯಂತೆ ಪ್ರಜ್ವಲಿಸಿದನು. ಘೋರವಾದ ತನ್ನ ಧನುಸ್ಸಿಗೆ ಹೆದೆಯನ್ನೇರಿಸಿ ದೃಢವಾಗಿ ಹಿಡಿದು ಮಿಡಿಯಲು, ಜಗತ್ತು ತಲ್ಲಣಿಸಿತು.

ತೇ ಜ್ವಲಂತೋ ಮಹಾವೇಗಾಸ್ತೇಜಸಾ ಸಾಯಕೋತ್ತಮಾಃ ।
ಪ್ರವಿಶಂತಿ ಸಮುದ್ರಸ್ಯ ಸಲಿಲಂ ತ್ರಸ್ತಪನ್ನಗಮ್ ॥ ೨೬

ತೋಯವೇಗಃ ಸಮುದ್ರಸ್ಯ ಸನಕ್ರಮಕರೋ ಮಹಾನ್ ।
ಸಂಬಭೂವ ಮಹಾಘೋರಃ ಸಮಾರುತರವಸ್ತದಾ ॥ ೨೮

ಮಹೋರ್ಮಿಮಾಲಾವಿತತಃ ಶಂಖಶುಕ್ತಿಸಮಾವೃತಃ ।
ಸಧೂಮಃ ಪರಿವೃತ್ತೋರ್ಮಿಃ ಸಹಸಾಸೀನ್ಮಹೋದಧಿಃ ॥ ೨೯

ವ್ಯಥಿತಾಃ ಪನ್ನಗಾಶ್ಚಾಸನ್ ದೀಪ್ತಾಸ್ಯಾ ದೀಪ್ತಲೋಚನಾಃ ।
ದಾನವಾಶ್ಚ ಮಹಾವೀರ್ಯಾಃ ಪಾತಾಲತಲವಾಸಿನಃ ॥ ೩೦

ಊರ್ಮಯಃ ಸಿಂಧುರಾಜಸ್ಯ ಸನಕ್ರಮಕರಾಸ್ತದಾ ।
ವಿಂಧ್ಯಮಂದರಸಂಕಾಶಾಃ ಸಮುತ್ಪೇತುಃ ಸಹಸ್ರಶಃ ॥ ೩೧

ಆಘೂರ್ಣಿತತರಂಗೌಘಃ ಸಂಭ್ರಾಂತೋರಗರಾಕ್ಷಸಃ ।
ಉದ್ವರ್ತಿತಮಹಾಗ್ರಾಹಃ ಸಂವೃತ್ತಃ ಸಲಿಲಾಶಯಃ ॥ ೩೨

---

ಇಂದ್ರನ ವಜ್ರಾಯುಧಗಳೋ ಎಂಬಂತೆ ಉಗ್ರಾಸ್ತ್ರಗಳು ಧನುಸ್ಸಿನಿಂದ ಚಿಮ್ಮತೊಡಗಿದವು (೨೫–೨೬). ತೇಜೋವಿಶೇಷದಿಂದ ಉರಿಯುತ್ತಿದ್ದ ನಿಶಿತಶರಗಳು ಸಮುದ್ರಜಲದಲ್ಲಿ ನುಗ್ಗತೊಡಗಲು, ಭುಜಂಗಮಗಳು ಹೆದರಿದವು. ನಕ್ರಮಕರಗಳೊಡನೆ ಜಲಪ್ರವಾಹವು ಭೀಕರವಾಗಿ ಉಕ್ಕತೊಡಗಿತು. ಬಿರುಗಾಳಿಯು ಬಿರ್ರನೆ ಬೀಸತೊಡಗಿತು (೨೬–೨೮). ಮಹಾಸಾಗರದಿಂದ ಬೃಹತ್ತರಂಗಗಳು ಮೇಲೆದ್ದವು. ಶಂಖಶುಕ್ತಗಳು ಚಿಮ್ಮಿದವು. ಹೊಗೆಯು ಆವರಿಸಿತು. ಅಲೆಗಳು ಉರುಳಾಡಿದವು (೨೯). ಉರಿಮೊಗದ ಉರಿಗಣ್ಣಿನ ಸರ್ಪಗಳು ವ್ಯಥೆಯಿಂದ ಕಂಗೆಟ್ಟವು. ಪಾತಾಳದಲ್ಲಿ ನೆಲಸಿದ್ದ ಶೂರರಾದ ದಾನವರು ದಿಗ್ಭ್ರಮೆಗೊಂಡು ಭೀತರಾದರು. ವಿಂಧ್ಯಶೈಲವೋ – ಮಂದರ ಪರ್ವತವೋ ಎಂಬಂತೆ ಬೃಹದಾಕಾರದ ಸಾವಿರಾರು ಅಲೆಗಳು ನಕ್ರಾದಿ ಜಲಜಂತುಗಳೊಡನೆ ಏರೇರಿ ಉರುಳತೊಡಗಿದವು (೩೦–೩೧). ತರಂಗ ಮಾಲೆಗಳು ಉಕ್ಕಿ ಉರುಳಾಡಿದವು ಉರಗರಾಕ್ಷಸರು ದಿಕ್ಕುಗೆಟ್ಟರು. ದೊಡ್ಡ ದೊಡ್ಡ ಮೊಸಳೆಗಳು ಅಂಗಾತನಾಗಿ ಹಾರಿಹಾರಿ ಬಿದ್ದವು. ಮಹಾಸಾಗರವು ಕದಡಿಹೋಯಿತು (೩೨).

ತತಸ್ತು ತಂ ರಾಘವಮುಗ್ರವೇಗಂ
ಪ್ರಕರ್ಷಮಾಣಂ ಧನುರಪ್ರಮೇಯಮ್ ।
ಸೌಮಿತ್ರಿರುತ್ಪತ್ಯ ಸಮುಚ್ಛ್ವಸಂತಂ
ಮಾ ಮೇತಿ ಚೋಕ್ತ್ವಾ ಧನುರಾಲಲಂಬೇ ॥ ೩೩

ಏತದ್ವಿನಾಪಿ ಹ್ಯುದಧೇಸ್ತವಾದ್ಯ
ಸಂಪತ್ಸ್ಯತೇ ವೀರತಮಸ್ಯ ಕಾರ್ಯಮ್ ।
ಭವದ್ವಿಧಾಃ ಕೋಪವಶಂ ನ ಯಾಂತಿ
ದೀರ್ಘಂ ಭವಾನ್ ಪಶ್ಯತು ಸಾಧುವೃತ್ತಮ್ ॥ ೩೪

ಅಂತರ್ಹಿತೈಶ್ಚೈವ ತಥಾಂತರಿಕ್ಷೇ
ಬ್ರಹ್ಮರ್ಷಿಭಿಶ್ಚೈವ ಸುರರ್ಷಿಭಿಶ್ಚ ।
ಶಬ್ದಃ ಕೃತಃ ಕಷ್ಟಮಿತಿ ಬ್ರುವದ್ಭಿ -
ರ್ಮಾ ಮೇತಿ ಚೋಕ್ತ್ವಾ ಮಹತಾ ಸ್ವರೇಣ ॥ ೩೫

ಇತಿ ಶ್ರೀ ಮದ್ರಾಮಾಯಣೇ ಯುದ್ಧಕಾಂಡೇ ಏಕವಿಂಶಃ ಸರ್ಗಃ

---

ಈ ಪ್ರಕಾರದಲ್ಲಿ ಊಹಾತೀತಮಹಿಮಾನ್ವಿತನಾದ ರಾಘವನು ರೋಷದಿಂದ ಬಿಸುಸುಯ್ಯುತ್ತ ಉಗ್ರವೇಗದಿಂದ ಧನುಸ್ಸನ್ನು ಜಗ್ಗಿ ಬಾಣಗಳನ್ನು ತೂರುತ್ತಿರಲು, ಸೌಮಿತ್ರಿಯು "ಅಣ್ಣಾ ಬೇಡ ಬೇಡ" ಎನ್ನುತ್ತ ಥಟ್ಟನೆ ಬಂದು ಧನುಸ್ಸನ್ನು ಹಿಡಿದುಕೊಂಡನು (೩೩). ಅವನು "ಅಣ್ಣಾ ಸಮುದ್ರವನ್ನು ಈ ಬಗೆಯಲ್ಲಿ ಕ್ಷೋಭೆಗೊಳಿಸದಿದ್ದರೂ ವೀರಾಗ್ರಣಿಯಾದ ನಿನ್ನ ಕಾರ್ಯವು ಸಿದ್ಧಿಸುವುದು. ನಿನ್ನಂಥವರು ಹೀಗೆ ಕೋಪಾವಿಷ್ಟರಾಗಬಾರದು. ಸದಾಚಾರವೆನ್ನುವುದನ್ನು ಸರಿಯಾಗಿ ಪರಿಶೀಲಿಸು" ಎಂದನು (೩೪). ಅಂತರಿಕ್ಷದಲ್ಲಿ ಅಂತರ್ಹಿತರಾಗಿ ಇದೆಲ್ಲವನ್ನೂ ನೋಡುತ್ತಿದ್ದ ಬ್ರಹ್ಮರ್ಷಿಗಳೂ ದೇವರ್ಷಿಗಳೂ 'ಹಾ ಕಷ್ಟ! ಹಾ ಕಷ್ಟ! ಬೇಡ ಬೇಡ!' ಎಂದು ಉದ್ಗರಿಸಿದರು (೩೫).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಇಪ್ಪತ್ತೊಂದನೆಯ ಸರ್ಗ

---

## ದ್ವಾವಿಂಶಃ ಸರ್ಗಃ

### ಸೇತುಬಂಧಃ

**ಅಥೋವಾಚ ರಘುಶ್ರೇಷ್ಠಃ ಸಾಗರಂ ದಾರುಣಂ ವಚಃ ।**
**ಅದ್ಯ ತ್ವಾಂ ಶೋಷಯಿಷ್ಯಾಮಿ ಸಪಾತಾಲಂ ಮಹಾರ್ಣವ ॥** ೧

**ಶರನಿರ್ದಗ್ಧತೋಯಸ್ಯ ಪರಿಶುಷ್ಕಸ್ಯ ಸಾಗರ ।**
**ಮಯಾ ಶೋಷಿತಸತ್ತ್ವಸ್ಯ ಪಾಂಸುರುತ್ಪದ್ಯತೇ ಮಹಾನ್ ॥** ೨

**ಮತ್ಕಾರ್ಮುಕವಿಸೃಷ್ಟೇನ ಶರವರ್ಷೇಣ ಸಾಗರ ।**
**ಪಾರಂ ತೇಽದ್ಯ ಗಮಿಷ್ಯಂತಿ ಪದ್ಭಿರೇವ ಪ್ಲವಂಗಮಾಃ ॥** ೩

**ವಿಚಿನ್ವನ್ನಾಭಿಜಾನಾಸಿ ಪೌರುಷಂ ವಾಪಿ ವಿಕ್ರಮಮ್ ।**
**ದಾನವಾಲಯ ಸಂತಾಪಂ ಮತ್ತೋ ನಾಮ ಗಮಿಷ್ಯಸಿ ॥** ೪

## ಸರ್ಗ ೨೨

ಶ್ರೀರಾಮನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಬೇಕೆಂದಿರಲು, ಸಮುದ್ರರಾಜನು ಪ್ರತ್ಯಕ್ಷನಾಗುವುದು ನಳನಿಂದ ಸೇತುಬಂಧನ, ವಾನರರು ಸಮುದ್ರವನ್ನು ದಾಟುವುದು.

ಅನಂತರ ರಘುಕುಲತಿಲಕನಾದ ಶ್ರೀರಾಮನು ಲಕ್ಷ್ಮಣನ ನುಡಿಯನ್ನು ಲಕ್ಷಿಸದೆ ಸಮುದ್ರರಾಜನನ್ನುದ್ದೇಶಿಸಿ ''ಎಲೈ ಮಹಾಸಾಗರವೆ, ಇಂದು ನಿನ್ನನ್ನು ಪಾತಾಳಪರ್ಯಂತವಾಗಿ ಒಣಗಿಸಿಬಿಡುವೆನು! ನನ್ನ ಶರಾಗ್ನಿಯಿಂದ ನಿನ್ನ ನೀರೆಲ್ಲವೂ ಉರುಬಿಹೋಗುವುದು. ಜಲಜಂತುಗಳೆಲ್ಲವೂ ಸುಟ್ಟು ಗರುಕಾಗಿ, ಶುಷ್ಕವಾದ ನಿನ್ನ ಪಾತ್ರದಿಂದ ಧೂಳಿನ ರಾಶಿಯೇ ಮೇಲೇಳುವುದು ! (೧–೨). ನನ್ನ ಧನುಸ್ಸಿನಿಂದ ಹೊರಬರುವ ಶರಜಾಲಗಳ ಪರಿಣಾಮವಾಗಿ, ವಾನರರು ಕಾಲ್ನಡಿಗೆಯಿಂದಲೇ ಆಚೆಯ ಪಾರವನ್ನು ಸೇರುವರು! ನನ್ನ ಪೌರುಷವೇನು, ನನ್ನ ವಿಕ್ರಮವೇನು – ಎಂಬುದನ್ನು ಪರ್ಯಾಲೋಚಿಸುವುದೂ ನಿನಗೆ ತಿಳಿಯದಾಯಿತೆ? ದಾನವರಿಗೆ ಆಶ್ರಯವನ್ನಿತ್ತು ಬುದ್ಧಿಗೆಟ್ಟೆಯಾ? ನನ್ನಿಂದ ನೀನು ಉರಿದು ನಾಶವಾಗುವುದು ನಿಶ್ಚಯ'' ಎಂಬುದಾಗಿ ತಲ್ಲಣಗೊಳ್ಳುವಂತೆ ನುಡಿದನು (೩–೪).

ಬ್ರಾಹ್ಮೇಣಾಸ್ತ್ರೇಣ ಸಂಯೋಜ್ಯ ಬ್ರಹ್ಮದಂಡನಿಭಂ ಶರಮ್ ।
ಸಂಯೋಜ್ಯ ಧನುಷಿ ಶ್ರೇಷ್ಠೇ ವಿಚಕರ್ಷ ಮಹಾಬಲಃ ॥ ೫

ತಸ್ಮಿನ್ ವಿಕೃಷ್ಟೇ ಸಹಸಾ ರಾಘವೇಣ ಶರಾಸನೇ ।
ರೋದಸೀ ಸಂಪಫಾಲೇವ ಪರ್ವತಾಶ್ಚ ಚಕಂಪಿರೇ ॥ ೬

ತಮಶ್ಚ ಲೋಕಮಾವವ್ರೇ ದಿಶಶ್ಚ ನ ಚಕಾಶಿರೇ ।
ಪರಿಚುಕ್ಷುಭಿರೇ ಚಾಶು ಸರಾಂಸಿ ಸರಿತಸ್ತಥಾ ॥ ೭

ತಿರ್ಯಕ್ ಚ ಸಹ ನಕ್ಷತ್ರೈಃ ಸಂಗತೌ ಚಂದ್ರಭಾಸ್ಕರೌ ।
ಭಾಸ್ಕರಾಂಶುಭಿರಾದೀಪ್ತಂ ತಮಸಾ ಚ ಸಮಾವೃತಮ್ ॥ ೮

ಪ್ರಚಕಾಶೇ ತದಾಕಾಶಮುಲ್ಕಾಶತವಿದೀಪಿತಮ್ ।
ಅಂತರಿಕ್ಷಾಚ್ಚ ನಿರ್ಘಾತಾ ನಿರ್ಜಗ್ಮುರತುಲಸ್ವನಾಃ ॥ ೯

ಪುಸ್ಫುರುಶ್ಚ ಘನಾ ದಿವ್ಯಾ ದಿವಿ ಮಾರುತಪಂಕ್ತಯಃ ।
ಬಭಂಜ ಚ ತದಾ ವೃಕ್ಷಾನ್ ಜಲದಾನುದ್ವಹನ್ನಪಿ ॥ ೧೦

---

ಒಡನೆಯೇ ಬ್ರಹ್ಮದಂಡದಂತೆ ಕ್ರೂರವಾದ ಅಸ್ತ್ರವನ್ನು ಹೊರಸೆಳೆದು ಬ್ರಹ್ಮಾಸ್ತ್ರಮಂತ್ರದಿಂದ ಅಭಿಮಂತ್ರಿಸಿ ಕೋದಂಡಕ್ಕೆ ಅಳವಡಿಸಿ, ಬಲಾಢ್ಯನಾದ ರಾಘವನು ಹೆದೆಯನ್ನು ಮೀಟಿದನು (೫) ಶ್ರೀರಾಮನು ಆ ಘೋರಾಸ್ತ್ರವನ್ನು ಧನುಸ್ಸಿಗೆ ಹೂಡಲಾಗಿ ಭೂಮ್ಯಾಕಾಶಗಳು ಬಿರಿದಂತಾದವು. ಪರ್ವತಗಳು ಅಲ್ಲಾಡಿದವು. ಎಲ್ಲೆಲ್ಲಿಯೂ ಕತ್ತಲೆಯು ಮುಸುಕಿತು. ದಿಕ್ಕುಗಳು ಮಾಸಿದವು. ನದಿಗಳೂ ಸರೋವರಗಳೂ ಉಕ್ಕಿದವು (೬–೭). ನಕ್ಷತ್ರಗಳೂ ಸೂರ್ಯಚಂದ್ರರೂ ಅಡ್ಡದಾರಿ ಹಿಡಿದರು. ಸೂರ್ಯಕಿರಣಗಳ ತೇಜಸ್ಸು ಮಂದವಾಗಿ ಕತ್ತಲೆಯು ಆವರಿಸಿತು. ನೂರಾರು ಉಲ್ಕೆಗಳು ಗಗನದಲ್ಲಿ ಬೆಳಗಿದವು. ಬಿರುಗಾಳಿಗಳು ಬಿರ್ರನೆ ಬೀಸಿ ಒಂದಕ್ಕೊಂದು ಅಪ್ಪಳಿಸಲು, ಕೀರೆಂದು ಕರ್ಕಶಧ್ವನಿಯು ಹೊರಟಿತು* (೮–೯). ಆವಹ ನಿವಹಾದಿ ಸಪ್ತವಾಯು

---

* ಮೂಲದಲ್ಲಿ ನಿರ್ಘಾತವೆಂದಿದೆ. ''ಪವನಃ ಪವನಾಭಿಹತೋ ಗಗನಾದವನೌ ಯದಾ ಸಮಾಪತತಿ । ಭವತಿ ತದಾ ನಿರ್ಘಾತಃ ಸ ಚ ಪಾಪೋ ದೀರ್ಘಖಗವಿರುತಃ'' ಎಂದು ವರಾಹಮಿಹರರು ನಿರ್ಘಾತದ ಲಕ್ಷಣವನ್ನು ಹೇಳಿದ್ದಾರೆ

ಅರುಜಂಶ್ಚೈವ ಶೈಲಾಗ್ರಾನ್ ಶಿಖರಾಣಿ ಪ್ರಭಂಜನಃ ।
ದಿವಿಸ್ಪೃಶೋ ಮಹಾಮೇಘಾಃ ಸಂಗತಾಃ ಸಮಹಾಸ್ವನಾಃ ॥ ೧೧

ಮುಮುಚುರ್ವೈದ್ಯುತಾನಗ್ನೀಂಸ್ತೇ ಮಹಾಶನಯಸ್ತದಾ ।
ಯಾನಿ ಭೂತಾನಿ ದೃಶ್ಯಾನಿ ಚುಕ್ರುಶುಶ್ಚಾ ಶನೇಃ ಸಮಮ್ ॥ ೧೨

ಅದೃಶ್ಯಾನಿ ಚ ಭೂತಾನಿ ಮುಮುಚುರ್ಭೈರವಸ್ವನಮ್ ।
ಶಿಶ್ಯಿರೇ ಚಾಪಿ ಭೂತಾನಿ ಸಂತ್ರಸ್ತಾನ್ಯುದ್ವಿಜಂತಿ ಚ ॥ ೧೩

ಸಂಪ್ರವಿವ್ಯಥಿರೇ ಚಾಪಿ ನ ಚ ಪಸ್ಪಂದಿರೇ ಭಯಾತ್ ।
ಸಹಭೂತೈಃ ಸತೋಯೋರ್ಮಿಃ ಸನಾಗಃ ಸಹರಾಕ್ಷಸಃ ॥ ೧೪

ಸಹಸಾಭೂತ್ತತೋ ವೇಗಾದ್ಭೀಮವೇಗೋ ಮಹೋದಧಿಃ ।
ಯೋಜನಂ ವ್ಯತಿಚಕ್ರಾಮ ವೇಲಾಮನ್ಯತ್ರ ಸಂಪ್ಲವಾತ್ ॥ ೧೫

ತಂ ತದಾ ಸಮತಿಕ್ರಾಂತಂ ನಾತಿಚಕ್ರಾಮ ರಾಘವಃ ।
ಸಮುದ್ಧತಮಮಿತ್ರಘ್ನೋ ರಾಮೋ ನದನದೀಪತಿಮ್ ॥ ೧೬

---

ಸ್ಕಂದಗಳು * ಆಕಾಶದಲ್ಲಿ ರಭಸದಿಂದ ಬೀಸಿದವು. ಮೋಡಗಳನ್ನು ಹೊತ್ತು ತಂದ ಬಿರುಗಾಳಿಯು ಮರಗಳನ್ನು ಮುರಿದು ಬಂಡೆಗಳನ್ನು ರುಳಿಸಿ ಗಿರಿಶಿಖರಗಳನ್ನು ಹಾರಿಸಿತು! ಮಹಾಮೇಘಗಳು ಭೋರ್ಗರೆಯುತ್ತ ಗಗನವನ್ನಡರಿ ಮಿಂಚುಗಳನ್ನು ಮಿಂಚಿಸಿ ಸಿಡಿಲುಗಳನ್ನು ಸಿಡಿಸಿದವು. ಕಣ್ಣಿಗೆ ಕಾಣುವ ಸಕಲ ಪ್ರಾಣಿಗಳೂ ದಿಕ್ಕುಗಾಣದೆ ಸಿಡಿಲಿನ ಜೊತೆಗೆ ತಾವೂ ಅರಚಿಕೊಂಡವು! (೧೦–೧೨). ಅದೃಶ್ಯವಾಗಿದ್ದ ಪಿಶಾಚಾದಿಗಳೂ ವಿಕಟಧ್ವನಿಯಿಂದ ಕೂಗಿಕೊಂಡವು! ಸಮಸ್ತ ಭೂತಗಳೂ ಹೆದರಿ ತತ್ತರಿಸಿ ನೆಲವನ್ನು ಹಿಡಿದು ಅಲ್ಲಾಡದೆ ಮಲಗಿದವು! ಆ ಕ್ಷಣದಲ್ಲಿ ಮಹಾಸಾಗರವು ದಡಕ್ಕೆ ಅಪ್ಪಳಿಸುವುದನ್ನು ಬಿಟ್ಟು ಭೀಮವೇಗದಿಂದ ಒಂದು ಯೋಜನದೂರ ಹಿಂದಕ್ಕೆ ಸರಿಯಿತು! ನೀರಿನೊಡನೆ ಜಲಜಂತುಗಳೂ ಪನ್ನಗರಾಕ್ಷಸರೂ ಹಿಂದಕ್ಕೆ ಸರಿದರು (೧೩–೧೫). ಉದ್ಧತನಾದ ಸಮುದ್ರರಾಜನು ಹೆದರಿ ಹಿಂಜರಿದುದನ್ನು ಕಂಡು, ಪರಂತಪನೂ ರಘುಕುಲತಿಲಕನೂ ಆದ ಶ್ರೀರಾಮನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಲಿಲ್ಲ.

* ಆವಹ, ಪ್ರವಹ, ಸಂವಹ, ಉದ್ವಹ, ವಿವಹ, ಪರಿವಹ, ಪರಾವಹ–ಇವು ಸಪ್ತವಾಯುಸ್ಕಂಧಗಳು.

**ತತೋ ಮಧ್ಯಾತ್ ಸಮುದ್ರಸ್ಯ ಸಾಗರಃ ಸ್ವಯಮುತ್ಥಿತಃ ।**
**ಉದಯನ್ ಹಿ ಮಹಾಶೈಲಾನ್ಮೇರೋರಿವ ದಿವಾಕರಃ ॥ ೧೭**

**ಪನ್ನಗೈಃ ಸಹ ದೀಪ್ತಾಸ್ಯೈಃ ಸಮುದ್ರಃ ಪ್ರತ್ಯದೃಶ್ಯತ ।**
**ಸ್ನಿಗ್ಧವೈ ದೂರ್ಯಸಂಕಾಶೋ ಜಾಂಬೂನದವಿಭೂಷಿತಃ ॥ ೧೮**

**ರ್ಕ್ತಮಾಲ್ಯಾಂಬರಧರಃ ಪದ್ಮಪತ್ರನಿಭೇಕ್ಷಣಃ ।**
**ಸರ್ವಪುಷ್ಪಮಯೀಂ ದಿವ್ಯಾಂ ಶಿರಸಾ ಧಾರಯನ್ ಸ್ರಜಮ್ ॥ ೧೯**

**ಜಾತರೂಪಮಯೈಶ್ಚೈವ ತಪನೀಯವಿಭೂಷಿತೈಃ ।**
**ಆತ್ಮಜಾನಾಂ ಚ ರತ್ನಾನಾಂ ಭೂಷಿತೋ ಭೂಷಣೋತ್ತಮೈಃ ॥ ೨೦**

**ಧಾತುಭಿರ್ಮಂಡಿತಃ ಶೈಲೋ ವಿವಿಧೈರ್ಹಿಮವಾನಿವ ।**
**ಏಕಾವಲೀಮಧ್ಯಗತಂ ತರಲಂ ಪಾಟಲಪ್ರಭಮ್ ॥ ೨೧**

**ವಿಪುಲೇನೋರಸಾ ಬಿಭ್ರತ್ಕೌಸ್ತುಭಸ್ಯ ಸಹೋದರಮ್ ।**
**ಆಘೂರ್ಣಿತತರಂಗೌಘಃ ಕಾಲಿಕಾನಿಲಸಂಕುಲಃ ॥ ೨೨**

---

ಅಷ್ಟರಲ್ಲಿ ಸಮುದ್ರರಾಜನು ಜಲರಾಶಿಯ ಮಧ್ಯದಿಂದೆದ್ದು ಪ್ರತ್ಯಕ್ಷನಾದನು! ಮೇರುಪರ್ವತದ ಶಿಖರದಿಂದೆದ್ದು ಬರುವ ಭಾಸ್ಕರನಂತೆ ಕಂಗೊಳಿಸಿದನು (೧೬–೧೭). ಅವನ ಸುತ್ತಲೂ ಉರಿಯುಗುಳವ ಘಟಸರ್ಪಗಳು ಹೆಡೆ ಯಾಡಿಸುತ್ತ ಗೋಚರಿಸಿದವು. ಹೊಳೆಯುವ ವೈಡೂರ್ಯದಂತೆ ಮಿರುಗುವ ಮೈಬಣ್ಣದ ಸಮುದ್ರರಾಜನು ರಕ್ತಾಂಬರವನ್ನುಟ್ಟು ರಕ್ತವರ್ಣದ ಪುಷ್ಪ ಮಾಲೆಯನ್ನು ಧರಿಸಿ ಸುವರ್ಣಭೂಷಣಗಳಿಂದ ಭೂಷಿತನಾಗಿದ್ದನು. ಕಮಲ ದಳಾಯತಾಕ್ಷನಾದ ಆತನ ಶಿರಸ್ಸಿನಲ್ಲಿ ಸಕಲ ಸುಂದರಸುಮಗಳಿಂದ ರಚಿತವಾದ ಮಾಲೆಯು ಶೋಭಿಸುತ್ತಿತ್ತು (೧೮–೧೯). ಸಮುದ್ರದಲ್ಲಿ ಸಿಗುವ ನಾನಾ ರತ್ನಗಳನ್ನು ಕೆತ್ತಿದ ಕನಕಾಭರಣಗಳಿಂದ ಅಲಂಕೃತನಾದ ಆ ಸಮುದ್ರರಾಜನು ವಿವಿಧವರ್ಣದ ಗೈರಿಕಧಾತುಗಳಿಂದ ಮಂಡಿತನಾದ ಹಿಮವಂತನಂತೆ ಕಾಂತಿ ಯುಕ್ತನಾಗಿ ಕಂಗೊಳಿಸಿದನು. ಅವನ ವಿಶಾಲವಾದ ವಕ್ಷಸ್ಥಳದಲ್ಲಿ ವಿರಾಜಿಸು ತ್ತಿದ್ದ ಒಂದೆಳೆಯ ಮುತ್ತಿನಸರದ ಮಧ್ಯದಲ್ಲಿ, ಕೌಸ್ತುಭಮಣಿಯೊಡನೆ ಹುಟ್ಟಿದ ಕೆಂಪುಬಣ್ಣದ ನಾಯಕಮಣಿಯೊಂದು ರಾರಾಜಿಸುತ್ತಿತ್ತು (೨೦–೨೧). ಸಮುದ್ರದ ಮಧ್ಯದಲ್ಲೆದ್ದುಬಂದ ಆ ಸಮುದ್ರರಾಜನ ಸುತ್ತಲೂ ಅಲೆಗಳು

ಉದ್ವರ್ತಿತಮಹಾಗ್ರಾಹಃ ಸಂಭ್ರಾಂತೋರಗರಾಕ್ಷಸಃ ।
ದೇವತಾನಾಂ ಸರೂಪಾಭಿಃ ನಾನಾರೂಪಾಭಿರೀಶ್ವರಃ ॥ ೨೩

ಗಂಗಾಸಿಂಧುಪ್ರಧಾನಾಭಿರಾಪಗಾಭಿಃ ಸಮಾವೃತಃ ।
ಸಾಗರಃ ಸಮುಪಕ್ರಮ್ಯ ಪೂರ್ವಮಾಮಂತ್ರ್ಯ ವೀರ್ಯವಾನ್ ॥ ೨೪

ಅಬ್ರವೀತ್ಪ್ರಾಂಜಲಿರ್ವಾಕ್ಯಂ ರಾಘವಂ ಶರಪಾಣಿನಮ್ ।
ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ರಾಘವ ॥ ೨೫

ಸ್ವಭಾವೇ ಸೌಮ್ಯ ತಿಷ್ಠಂತಿ ಶಾಶ್ವತಂ ಮಾರ್ಗಮಾಶ್ರಿತಾಃ ।
ತತ್ಸ್ವಭಾವೋ ಮಮಾಪ್ಯೇಷ ಯದಗಾಧೋಽಹಮಪ್ಲವಃ ॥ ೨೬

ವಿಕಾರಸ್ತು ಭವೇದ್ಗಾಧ ಏತತ್ತೇ ವೇದಯಾಮ್ಯಹಮ್ ।
ನ ಕಾಮಾನ್ನ ಚ ಲೋಭಾದ್ವಾ ನ ಭಯಾತ್ ಪಾರ್ಥಿವಾತ್ಮಜ ॥ ೨೭

ಗ್ರಾಹನಕ್ರಾಕುಲಜಲಂ ಸ್ತಂಭಯೇಯಂ ಕಥಂಚನ ।
ವಿಧಾಸ್ಯೇ ಯೇನ ಗಂತಾಸಿ ವಿಷಹಿಷ್ಯೇ ಹ್ಯಹಂ ತಥಾ ॥ ೨೮

---

ಚಲಿಸುತ್ತಿದ್ದವು. ಮೇಘಪಂಕ್ತಿಯನ್ನು ಹೊತ್ತು ಗಾಳಿಯು ಬೀಸುತ್ತಿತ್ತು. ದೊಡ್ಡ ದೊಡ್ಡ ಮೊಸಳೆಗಳು ಹೆದರಿ ಉರುಳಾಡುತ್ತಿದ್ದವು. ಜಲರಾಶಿಯಲ್ಲಡಗಿದ್ದ ಪನ್ನಗಗಳೂ ರಾಕ್ಷಸರೂ ದಿಕ್ಕುಗಾಣದಾಗಿದ್ದರು (೨೨). ಆ ಸಮಯದಲ್ಲಿ ಸಮುದ್ರರಾಜನು ದಿವ್ಯರೂಪಗಳನ್ನು ಧರಿಸಿದ್ದ ಗಂಗೆ, ಸಿಂಧು – ಮುಂತಾದ ನದೀದೇವತೆಗಳೊಡನೆ, 'ಶ್ರೀರಾಮ' ಎಂದು ಕರೆಯುತ್ತ ಶ್ರೀರಾಮನ ಬಳಿಗೆ ನಡೆತಂದನು (೨೩–೨೪). ಶರಪಾಣಿಯಾಗಿ ನಿಂತಿದ್ದ ರಾಘವನ ಬಳಿಗೆ ಬಂದು ಕೈಜೋಡಿಸಿ ''ಸೌಮ್ಯ – ರಾಘವ' ಈ ಜಗತ್ತಿನಲ್ಲಿ ಭೂಮಿ, ಜಲ, ಅಗ್ನಿ, ವಾಯು, ಆಕಾಶ – ಈ ಪಂಚಭೂತಗಳು ಶಾಶ್ವತವಾದ ಒಂದು ಮಾರ್ಗವನ್ನು ಹಿಡಿದು ತಮ್ಮ ತಮ್ಮ ಸ್ವಭಾವಗಳಲ್ಲಿ ನಿಂತಿರುತ್ತವೆ. ಹಾಗೆಯೇ ನಾನೂ ದಾಟಲು ಅಸಾಧ್ಯನಾಗಿ ಅಗಾಧರೂಪದಿಂದಿದ್ದೇನೆ. ಇದು ನನ್ನ ಸ್ವಭಾವ (೨೫–೨೬). ಅಗಾಧ ಸ್ಥಿತಿಯನ್ನು ಬಿಟ್ಟರೆ, ನನ್ನ ಸ್ವಭಾವಕ್ಕೆ ವಿರುದ್ಧವಾಗುವುದು. ಇದ್ದುದನ್ನು ನಿನಗೆ ನಿವೇದಿಸಿಕೊಂಡಿದ್ದೇನೆ. ಹೇ, ರಾಜಪುತ್ರ, ಕಾಮಲೋಭಗಳಿಂದಾಗಲಿ ಭಯದಿಂದಾಗಲಿ – ಗ್ರಾಹನಕ್ರಾದಿ ಜಲಜಂತುಗಳಿಂದ ತುಂಬಿದ ನನ್ನ ಜಲರಾಶಿಯನ್ನು ಸ್ತಂಭಿಸುವುದಕ್ಕೆ ನನಗೆ

**ಗ್ರಾಹಾ ನ ಪ್ರಹರಿಷ್ಯಂತಿ ಯಾವತ್ಸೇನಾ ತರಿಷ್ಯತಿ ।**
**ಹರೀಣಾಂ ತರಣೇ ರಾಮ ಕರಿಷ್ಯಾಮಿ ಯಥಾ ಸ್ಥಲಮ್ ॥** ೨೯

**ತಮಬ್ರವೀತ್ತದಾ ರಾಮ ಉದ್ಯತೋ ಹಿ ನದೀಪತೇ ।**
**ಅಮೋಘೋಽಯಂ ಮಹಾಬಾಣಃ ಕಸ್ಮಿನ್ ದೇಶೇ ನಿಪಾತ್ಯತಾಮ್ ॥**

**ರಾಮಸ್ಯ ವಚನಂ ಶ್ರುತ್ವಾ ತಂ ಚ ದೃಷ್ಟ್ವಾ ಮಹಾಶರಮ್ ।**
**ಮಹೋದಧಿರ್ಮಹಾತೇಜಾ ರಾಘವಂ ವಾಕ್ಯ ಮಬ್ರವೀತ್ ॥** ೩೧

**ಉತ್ತರೇಣಾವಕಾಶೋಽಸ್ತಿ ಕಶ್ಚಿತ್ಪುಣ್ಯ ತಮೋ ಮಮ ।**
**ದ್ರುಮಕುಲ್ಯ ಇತಿ ಖ್ಯಾತೋ ಲೋಕೇ ಖ್ಯಾತೋ ಯಥಾ ಭವಾನ್**

**ಉಗ್ರದರ್ಶನಕರ್ಮಾಣೋ ಬಹವಸ್ತತ್ರ ದಸ್ಯವಃ ।**
**ಆಭೀರಪ್ರಮುಖಾಃ ಪಾಪಾಃ ಪಿಬಂತಿ ಸಲಿಲಂ ಮಮ ॥** ೩೩

**ತೈಸ್ತು ಸಂಸ್ಪರ್ಶನಂ ಪ್ರಾಪ್ಯೈರ್ನ ಸಹೇ ಪಾಪಕರ್ಮಭಿಃ ।**
**ಅಮೋಘಃ ಕ್ರಿಯತಾಂ ರಾಮ ತತ್ರ ತೇಷು ಶರೋತ್ತಮಃ ॥** ೩೪

---

ಇಚ್ಛೆಯಿಲ್ಲ. ಆದರೆ ನೀನು ಸಮುದ್ರವನ್ನು ದಾಟಲು ಸಹಾಯಮಾಡಬಲ್ಲೆನು. ಅದರಿಂದಾಗಬಹುದಾದ ಕಷ್ಟವನ್ನು ಸಹಿಸಿಕೊಳ್ಳುವೆನು (೨೬–೨೮). ನಿನ್ನ ವಾನರಸೇನೆಯು ಲಂಘಿಸಿಹೋಗುವವರೆಗೂ ಮೊಸಳೆ ಮೊದಲಾದ. ಕ್ರೂರ ಜಂತುಗಳಿಂದ ಹಿಂಸೆಯಾಗದಂತೆ ನೋಡಿಕೊಳ್ಳುವೆನು. ಶ್ರೀರಾಮ, ವಾನರ ರಿಗೋಸ್ಕರ ಸೇತುವನ್ನು ಕಟ್ಟುವುದಾದರೆ, ನಾನು ನೆಲದಂತಿದ್ದು ಸೇತುಬಂಧನ ಸಾಮಗ್ರಿಗಳನ್ನು ಮುಳುಗಿಸದೆ ಧರಿಸುವೆನು'' ಎಂದು ಅರಿಕೆಮಾಡಿದನು. ಆಗ ಶ್ರೀರಾಮನು ''ಸಮುದ್ರರಾಜ, ಅಮೋಘವಾದ ಈ ಮಹಾಶರವನ್ನು ಬಿಲ್ಲಿಗೆ ಹೂಡಿಬಿಟ್ಟಿರುವೆನಲ್ಲ, ಇದನ್ನು ಎಲ್ಲಿ ಪ್ರಯೋಗಿಸಲಿ?'' ಎಂದು ಕೇಳಿದನು (೨೯–೩೦). ಆಗ ಸಮುದ್ರರಾಜನು, ಕೋದಂಡಕ್ಕೆ ಅಳವಡಿಸಿದ್ದ ಮಹಾಶರವನ್ನು ನೋಡುತ್ತ ಶ್ರೀರಾಮನನ್ನು ಕುರಿತು ''ರಾಘವ, ಇಲ್ಲಿಗೆ ಉತ್ತರದಿಕ್ಕಿನಲ್ಲಿ ದ್ರುಮಕುಲ್ಯವೆಂಬ ಹೆಸರಿನ ಪುಣ್ಯತಮವಾದ ಒಂದು ಪ್ರದೇಶ ವುಂಟು. ಅದು ನಿನ್ನಂತೆಯೇ ಲೋಕವಿಖ್ಯಾತವಾದುದು (೩೧–೩೨). ಅಲ್ಲಿ ವಿಕಟಾಕೃತಿಗಳೂ ಉಗ್ರಕರ್ಮಿಗಳೂ ಆದ ದಸ್ಯುಗಳು ಸೇರಿಕೊಂಡಿದ್ದಾರೆ. ಅವರು ಆಭೀರ ಮುಂತಾದ ನೀಚಜಾತಿಯವರು. ಅವರು ನನ್ನ ನೀರನ್ನು ಕುಡಿದು ಪಾಪಕರ್ಮಗಳನ್ನಾಚರಿಸುತ್ತಾರೆ. ನನ್ನನ್ನು ಮುಟ್ಟಿ ನನ್ನ ನೀರನ್ನು

ತಸ್ಯ ತದ್ವಚನಂ ಶ್ರುತ್ವಾ ಸಾಗರಸ್ಯ ಮಹಾತ್ಮನಃ ।
ಮುಮೋಚ ತಂ ಶರಂ ದೀಪ್ತಂ ವೀರಃ ಸಾಗರದರ್ಶನಾತ್ ॥ ೩೫

ತೇನ ತನ್ಮರುಕಾಂತಾರಂ ಪೃಥಿವ್ಯಾಂ ಖಲು ವಿಶ್ರುತಮ್ ।
ನಿಪಾತಿತಃ ಶರೋ ಯತ್ರ ದೀಪ್ತಾಶನಿಸಮಪ್ರಭಃ ॥ ೩೬

ನನಾದ ಚ ತದಾ ತತ್ರ ವಸುಧಾ ಶಲ್ಯಪೀಡಿತಾ ।
ತಸ್ಮಾದ್ವ್ರಣಮುಖಾತ್ತೋಯಮುತ್ಪಪಾತ ರಸಾತಲಾತ್ ॥ ೩೭

ಸ ಬಭೂವ ತದಾ ಕೂಪೋ ವ್ರಣ ಇತ್ಯಭಿವಿಶ್ರುತಃ ।
ಸತತಂ ಚೋತ್ಥಿತಂ ತೋಯಂ ಸಮುದ್ರಸ್ಯೇವ ದೃಶ್ಯತೇ ॥ ೩೮

ಅವದಾರಣಶಬ್ದಶ್ಚ ದಾರುಣಃ ಸಮಪದ್ಯತ ।
ತಸ್ಮಾತ್ತದ್ಬಾಣಪಾತೇನ ತ್ವಪಃ ಕುಕ್ಷಿಷ್ವಶೋಷಯತ್ ॥ ೩೯

---

ಕುಡಿದು ಪಾಪಕೃತ್ಯಗಳಲ್ಲಿ ನಿರತರಾಗಿರುವುದನ್ನು ನಾನು ಸಹಿಸಲಾರೆ. ಶ್ರೀರಾಮ, ನಿನ್ನ ಅಮೋಘವಾದ ಶರವನ್ನು ಅವರಮೇಲೆ ಪ್ರಯೋಗಿಸಿ ಸಾರ್ಥಕಪಡಿಸು'' ಎಂದು ಹೇಳಿದನು (೩೩–೩೪). ಮಹಾತ್ಮನಾದ ಸಮುದ್ರರಾಜನು ನುಡಿದುದನ್ನು ಕೇಳಿ ವೀರಾಗ್ರಣಿಯಾದ ಶ್ರೀರಾಮನು, ಪ್ರಜ್ವಲಿಸುತ್ತಿದ್ದ ತನ್ನ ಶರವನ್ನು ಸಮುದ್ರರಾಜನು ತೋರಿಸಿದ ಕಡೆಗೆ ಬಿಟ್ಟನು. ಆ ಮಹಾಶರವು ಸಿಡಿಲಿನಂತೆ ಬಂದೆರಗಲು, ಪ್ರಸಿದ್ಧವಾದ ದ್ರುಮಕುಲ್ಯ ಪ್ರದೇಶವು ಸುಟ್ಟು ಮರಳುಗಾಡಾಯಿತು (೩೫–೩೬). ಅಸ್ತ್ರವು ನೆಲವನ್ನು ತಾಗಲು, ಭೂಮಿಯು ಬಿರಿದು ಛಂಗನೆ ಚಿಮ್ಮಿತು! ಆ ಬಿರುಕಿಗೆ ವ್ರಣಕೂಪವೆಂದು ಹೆಸರಾಯಿತು. ಆ ಕೂಪದಲ್ಲಿ ಸಮುದ್ರದಂತೆ ಯಾವಾಗಲೂ ನೀರು ತುಂಬಿ ತುಳುಕುತ್ತಲೇ ಇರುವುದು (೩೭–೩೮). ಭೂಮಿಯು ಬಿರಿದ ಶಬ್ದವು ಕರ್ಣಕಠೋರವಾಗಿ ಕೇಳಿಸಿತು. ಮೊದಲು ಕೊರಕಲುಗಳಲ್ಲಿದ್ದ ಜಲ ವೆಲ್ಲವೂ ರಾಮಾಸ್ತ್ರದ ಪ್ರಭಾವದಿಂದ ಒಣಗಿಹೋಯ್ತು. ಆ ದ್ರುಮಕುಲ್ಯವು ಮರುಕಾಂತಾರವೆಂದು (ಮರಳುಗಾಡು) ಮೂರುಲೋಕಗಳಲ್ಲಿಯೂ ವಿಶ್ರುತ ವಾಯಿತು (೩೯).

ವಿಖ್ಯಾತಂ ತ್ರಿಷು ಲೋಕೇಷು ಮರುಕಾಂತಾರಮೇವ ತತ್ ।
ಶೋಷಯಿತ್ವಾ ತತಃ ಕುಕ್ಷಿಂ ರಾಮೋ ದಶರಥಾತ್ಮಜಃ ॥ ೪೦

ವರಂ ತಸ್ಮೈ ದದೌ ವಿದ್ವಾನ್ ಮರವೇಽಮರವಿಕ್ರಮಃ ।
ಪಶವ್ಯಶ್ಚಾಲ್ಪರೋಗಶ್ಚ ಫಲಮೂಲರಸಾಯುತಃ ॥ ೪೧

ಬಹುಸ್ನೇಹೋ ಬಹುಕ್ಷೀರಃ ಸುಗಂಧಿರ್ವಿವಿಧೌಷಧಃ ।
ಏವಮೇತ್ಯೈರ್ಗುಣೈರ್ಯುಕ್ತೋ ಬಹುಭಿಃ ಸತತಂ ಮರುಃ ॥ ೪೨

ರಾಮಸ್ಯ ವರದಾನಾಚ್ಚ ಶಿವಃ ಪಂಥಾ ಬಭೂವ ಹ ।
ತಸ್ಮಿನ್ ದಗ್ಧೇ ತದಾ ಕುಕ್ಷೌ ಸಮುದ್ರಃ ಸರಿತಾಂ ಪತಿಃ ॥ ೪೩

ರಾಘವಂ ಸರ್ವಶಾಸ್ತ್ರಜ್ಞಮಿದಂ ವಚನಮಬ್ರವೀತ್ ।
ಅಯಂ ಸೌಮ್ಯ ನಲೋ ನಾಮ ತನುಜೋ ವಿಶ್ವಕರ್ಮಣಃ ॥ ೪೪

ಪಿತ್ರಾ ದತ್ತವರಃ ಶ್ರೀಮಾನ್ ಪ್ರತಿಮೋ ವಿಶ್ವಕರ್ಮಣಾ ।
ಏಷ ಸೇತುಂ ಮಹೋತ್ಸಾಹಃ ಕರೋತು ಮಯಿ ವಾನರಃ ॥ ೪೫

---

ಮೊದಲಿದ್ದ ಜಲವನ್ನು ಬುಡಮಟ್ಟದವರೆಗೆ ಶೋಷಿಸಿದಮೇಲೆ, ದೇವತಾಪ್ರಭಾವನೂ ಪ್ರಾಜ್ಞನೂ ಆದ ಶ್ರೀರಾಮನು ಆ ಮರುಕಾಂತಾರಕ್ಕೆ ಒಂದು ವರವನ್ನು ಅನುಗ್ರಹಿಸಿದನು. ಆ ವರದಾನಮಹಿಮೆಯಿಂದ ಆ ಪ್ರದೇಶವು ಪಶುಗಳಿಗೆ ಉಪಯುಕ್ತವಾದ ಸಸ್ಯ ಸಮೃದ್ಧಿಯುಳ್ಳದ್ದೂ ಆರೋಗ್ಯಕರವಾದ ವಾಯುಗುಣವುಳ್ಳದ್ದೂ ಫಲಮೂಲಗಳಿಂದಲೂ ರಸದ್ರವ್ಯಗಳಿಂದಲೂ ಯುಕ್ತವಾದದ್ದೂ ಆಯಿತು (೪೦–೪೧). ತುಪ್ಪ, ಹಾಲು, ಸುಗಂಧದ್ರವ್ಯ, ವಿವಿಧಮೂಲಿಕೆಗಳು – ಮೊದಲಾದವುಗಳಿಂದ ಸಮೃದ್ಧವಾದ ಪ್ರದೇಶವಾಯಿತು. ಶ್ರೀರಾಮನ ವರದಾನದಿಂದ ಆ ಪ್ರದೇಶವೆಲ್ಲವೂ ದಸ್ಯುಬಾಧೆಯಿಂದ ರಹಿತವಾಗಿ ಶುಭಕರವಾಯಿತು (೪೨). ಹೀಗ ಕೊರಕಲುಗಳಿಂದ ತುಂಬಿದ ಆ ದ್ರುಮಕುಲ್ಯವು ದಗವಾಗಿ ಮಾರ್ಪಡಲು, ನದೀನಾಥನಾದ ಸಮುದ್ರರಾಜನು ಸರ್ವಶಾಸ್ತ್ರಕೋವಿದನಾದ ರಾಘವನನ್ನು ಉದ್ದೇಶಿಸಿ ''ಸೌಮ್ಯ – ರಾಘುನಾಥ, ಈ ನಳನೆಂಬವನು ವಿಶ್ವಕರ್ಮನ ತನುಜ (೪೩–೪೪). ಈತನು ತಂದೆಯಿಂದ ವರವನ್ನು ಪಡೆದು ಶಿಲ್ಪವಿದ್ಯೆಯಲ್ಲಿ ವಿಶ್ವಕರ್ಮನಿಗೆ ಸಮಾನನಾಗಿದ್ದಾನೆ. ಉತ್ಸಾಹಶಾಲಿಯಾದ ಈ ವಾನರೋತ್ತಮನು ನನ್ನ

**ತಮಹಂ ಧಾರಯಿಷ್ಯಾಮಿ ತಥಾ ಹ್ಯೇಷ ಯಥಾ ಪಿತಾ ।**
**ಏವಮುಕ್ತ್ವೋದಧಿರ್ನಷ್ಟಃ ಸಮುತ್ಥಾಯ ನಲಸ್ತದಾ ॥ ೪೬**

**ಅಬ್ರವೀದ್ವಾನರಶ್ರೇಷ್ಠೋ ವಾಕ್ಯಂ ರಾಮಂ ಮಹಾಬಲಃ ।**
**ಅಹಂ ಸೇತುಂ ಕರಿಷ್ಯಾಮಿ ವಿಸ್ತೀರ್ಣೇ ವರುಣಾಲಯೇ ॥ ೪೭**

**ಪಿತುಃ ಸಾಮರ್ಥ್ಯಮಾಸ್ಥಾಯ ತತ್ತ್ವಮಾಹ ಮಹೋದಧಿಃ ।**
**ದಂಡ ಏವ ವರೋ ಲೋಕೇ ಪುರುಷಸ್ಯೇತಿ ಮೇ ಮತಿಃ ॥ ೪೮**

**ಧಿಕ್ ಕ್ಷಮಾಮಕೃತಜ್ಞೇಷು ಸಾಂತ್ವಂ ದಾನಮಥಾಪಿ ವಾ ।**
**ಅಯಂ ಹಿ ಸಾಗರೋ ಭೀಮಃ ಸೇತುಕರ್ಮದಿದೃಕ್ಷಯಾ ॥ ೪೯**

**ದದೌ ದಂಡಭಯಾದ್ಗಾಧಂ ರಾಘವಾಯ ಮಹೋದಧಿಃ ।**
**ಮಮ ಮಾತುರ್ವರೋ ದತ್ತೋ ಮಂದರೇ ವಿಶ್ವಕರ್ಮಣಾ ॥ ೫೦**

**ಮಯಾ ತು ಸದೃಶಃ ಪುತ್ರಸ್ತವ ದೇವಿ ಭವಿಷ್ಯತಿ ।**
**ಔರಸಸ್ತಸ್ಯ ಪುತ್ರೋಽಹಂ ಸದೃಶೋ ವಿಶ್ವಕರ್ಮಣಾ ॥ ೫೧**

---

ಮೇಲೆ ಸೇತುವನ್ನು ಕಟ್ಟಲಿ! ಆ ಸೇತುವು ಮುಳುಗದಂತೆ ನಾನು ಹೊತ್ತು ಕೊಳ್ಳುವೆನು! ನಳನು ತಂದೆಯಂತೆಯೇ ಬಲು ಗಟ್ಟಿಗ!'' ಎಂದು ಹೇಳಿ ಅಂತರ್ಹಿತನಾದನು (೪೫–೪೬). ಆಗ ಬಲಾಢ್ಯನೂ ವಾನರೋತ್ತಮನೂ ಆದ ನಳನು ವಾನರಸೇನೆಯ ಮಧ್ಯದಿಂದ ಎದ್ದು ಬಂದು ''ಶ್ರೀರಾಮ, ವಿಶಾಲವಾದ ಈ ಸಮುದ್ರದಲ್ಲಿ ನಾನು ಸೇತುವನ್ನು ಕಟ್ಟುವೆನು! ನನ್ನ ತಂದೆಯ ಸಾಮರ್ಥ್ಯ ನನಗುಂಟು. ಸಮುದ್ರರಾಜನು ಹೇಳಿದುದು ಸತ್ಯ'' ಎಂದನು. ಆಮೇಲೆ ಕಪಿಸೇನೆಯನ್ನು ನೋಡುತ್ತ ''ಕಪಿಶ್ರೇಷ್ಠರೆ, ಪುರುಷನು ದಂಡೋಪಾಯವನ್ನು ಪ್ರಯೋಗಿಸುವುದೇ ಉತ್ತಮವೆಂದು ನನ್ನ ಅಭಿಪ್ರಾಯ! (೪೭–೪೮) ಕೃತಘ್ನರಲ್ಲಿ ತಾಳ್ಮೆ ಸಾಮ, ದಾನ–ಯಾವುದೂ ಉಪಯೋಗಕ್ಕೆ ಬಾರದು. ಸಗರನಿಂದ ಅಸ್ತಿತ್ವವನ್ನು ಪಡೆದ ಭೀಮಾಕಾರದ ಈ ಸಮುದ್ರನು ಶ್ರೀರಾಮನಿಗೆ ಮಾಡಿದ ಉಪಕಾರವೇನು? ಸೇತುನಿರ್ಮಾಣವನ್ನು ನೋಡಬೇಕೆಂದು ಈತನಿಗೆ ಆಸೆಯಾಗಿರಬಹುದೆ? ಕಡೆಗೂ ದಂಡಪ್ರಯೋಗಕ್ಕೆ ಬಗ್ಗಿಯೇ ಸಮುದ್ರನು ತನ್ನ ಅಗಾಧತೆಯನ್ನು ಬಿಟ್ಟು ರಾಘವನಿಗೆ ವಶನಾದನು'' ಎಂದನು (೪೯–೫೦). ನಳನು ಮತ್ತೆ ಶ್ರೀರಾಮನ ಕಡೆಗೆ ತಿರುಗಿ ''ಶ್ರೀರಾಮ, ನನ್ನ ತಂದೆಯಾದ ವಿಶ್ವಕರ್ಮನು

ಸ್ಮಾರಿತೋಽಸ್ಮ್ಯಹಮೇತೇನ ತತ್ತ್ವಮಾಹ ಮಹೋದಧಿಃ ।
ನ ಚಾಪ್ಯಹಮನುಕ್ತೋ ವೈ ಪ್ರಬ್ರೂಯಾಮಾತ್ಮನೋ ಗುಣಾನ್ ॥

ಸಮರ್ಥಶ್ಚಾಪ್ಯಹಂ ಸೇತುಂ ಕರ್ತುಂ ವೈವರುಣಾಲಯೇ ।
ಕಾಮಮದ್ಯೈವ ಬಧ್ನಂತು ಸೇತುಂ ವಾನರಪುಂಗವಾಃ ॥ ೫೩

ತತೋಽತಿಸೃಷ್ಟಾ ರಾಮೇಣ ಸರ್ವತೋ ಹರಿಯೂಥಪಾಃ ।
ಅಭಿಪೇತುರ್ಮಹಾರಣ್ಯಂ ಹೃಷ್ಟಾಃ ಶತಸಹಸ್ರಶಃ ॥ ೫೪

ತೇ ನಗಾನ್ನಗಸಂಕಾಶಾಃ ಶಾಖಾಮೃಗಗಣರ್ಷಭಾಃ ।
ಬಭಂಜುರ್ವಾನರಾಸ್ತತ್ರ ಪ್ರಚಕರ್ಷುಶ್ಚ ಸಾಗರಮ್ ॥ ೫೫

ತೇ ಸಾಲೈಶ್ಚಾಶ್ವಕರ್ಣೈಶ್ಚ ಧವೈರ್ವಂಶೈಶ್ಚ ವಾನರಾಃ ।
ಕುಟಜೈರರ್ಜುನೈಸ್ತಾಲೈಸ್ತಿಲಕೈಸ್ತಿನಿಶೈರಪಿ ॥ ೫೬

ಬಿಲ್ವೈಶ್ಚ ಸಪ್ತಪರ್ಣೈಶ್ಚ ಕರ್ಣಿಕಾರೈಶ್ಚ ಪುಷ್ಪಿತೈಃ ।
ಚೂತೈಶ್ಚಾಶೋಕವೃಕ್ಷೈಶ್ಚ ಸಾಗರಂ ಸಮಪೂರಯನ್ ॥ ೫೭

---

ಮಂದರಪರ್ವತದಲ್ಲಿದ್ದ ನನ್ನ ತಾಯಿಗೆ ಒಂದು ವರವನ್ನು ಕೊಟ್ಟಿದ್ದನು ; 'ದೇವಿ, ಶಿಲ್ಪ ಕರ್ಮದಲ್ಲಿ ನನಗೆ ಸಾಟಿಯಾದ ಪುತ್ರನು ನಿನಗೆ ಜನಿಸುವನು' ಎಂದು ಹೇಳಿದ್ದನು. ನಾನು ವಿಶ್ವಕರ್ಮನ ಔರಸಪುತ್ರ. ಸಾಮರ್ಥ್ಯದಲ್ಲಿ ಆತನಿಗೆ ಸಮ! (೫೧). ಸಮುದ್ರರಾಜನು ಈ ವಿಷಯವನ್ನು ಹೇಳಿದ ಮೇಲೆ ನನಗೆ ನೆನಪಾಯಿತು! ಅವನು ಹೇಳಿದ್ದು ಸತ್ಯ. ಅಲ್ಲದೆ ನಾನಾಗಿ ನನ್ನ ಗುಣಗಳನ್ನು ಹೇಳಿಕೊಳ್ಳುವುದು ನನಗೆ ಒಗ್ಗುವುದಿಲ್ಲ! ಈ ಮಹಾಸಾಗರದಲ್ಲಿ ಸೇತುವನ್ನು ನಿರ್ಮಿಸಲು ನನಗೆ ಸಾಮರ್ಥ್ಯ ಉಂಟು. ಈಗಲೇ ಸೇತು ಬಂಧನವನ್ನಾರಂಭಿಸಲು ಈ ಕಪಿಶ್ರೇಷ್ಠರು ನೆರವಾಗಲಿ'' ಎಂದು ನಿವೇದಿಸಿದನು (೫೨–೫೩). ಅದರಂತೆ ಶ್ರೀರಾಮನು ಆಜ್ಞೆಯನ್ನೀಯಲು, ಕಪಿನಾಯಕರು ಹರ್ಷದಿಂದ ನೂರಾರು ಸಾವಿರಾರು ಸಂಖ್ಯೆಯಲ್ಲಿ ಗುಂಪುಗುಂಪಾಗಿ ಮಹಾರಣ್ಯದೊಳಗೆ ನುಗ್ಗಿದರು. ಪರ್ವತಾಕಾರದ ಆ ಕಪಿನಾಯಕರು ಮರಗಳನ್ನು ಕಿತ್ತು ಮುರಿದು ಸಮುದ್ರದ ಕಡೆಗೆ ಸಾಗಿಸಿದರು (೫೪–೫೫). ಸಾಲ, ಅಶ್ವಕರ್ಣ, ಕೆಂಪು ಮತ್ತಿ, ಬಿದಿರು, ಕೊಡಸು, ಬಿಳಿಯ ಮತ್ತಿ ತಾಳೆ, ತಿಲಕ, ತಿನಿಶ, ಬಿಲ್ವ, ಸಪ್ತಪರ್ಣ, ಅರಳಿದ ಕಣಗಿಲೆ, ಮಾವು,

**ಸಮೂಲಾಂಶ್ಚ ವಿಮೂಲಾಂಶ್ಚ ಪಾದಪಾನ್ ಹರಿಸತ್ತಮಾಃ ।**
**ಇಂದ್ರಕೇತೂನಿವೋದ್ಯಮ್ಯ ಪ್ರಜಹ್ರುರ್ಹರಯಸ್ತರೂನ್ ॥ ೫೮**

**ತಾಲಾನ್ ದಾಡಿಮಗುಲ್ಮಾಂಶ್ಚ ನಾರಿಕೇಲಾನ್ ವಿಭೀತಕಾನ್ ।**
**ಬಕುಲಾನ್ ಖದಿರಾನ್ನಿಂಬಾನ್ ಸಮಾಜಹ್ರುಃ ಸಮಂತತಃ ॥ ೫೯**

**ಹಸ್ತಿಮಾತ್ರಾನ್ ಮಹಾಕಾಯಾಃ ಪಾಷಾಣಾಂಶ್ಚ ಮಹಾಬಲಾಃ ।**
**ಪರ್ವತಾಂಶ್ಚ ಸಮುತ್ಪಾಟ್ಯ ಯತ್ನೈಃ ಪರಿವಹಂತಿ ಚ ॥ ೬೦**

**ಪ್ರಕ್ಷಿಪ್ಯಮಾಣೈರಚಲೈಃ ಸಹಸಾ ಜಲಮುದ್ಧತಮ್ ।**
**ಸಮುತ್ಪತಿತಮಾಕಾಶಮುಪಾಸರ್ಪತ್ತತಸ್ತತಃ ॥ ೬೧**

**ಸಮುದ್ರಂ ಕ್ಷೋಭಯಾಮಾಸುರ್ವಾನರಾಶ್ಚ ಸಮಂತತಃ ।**
**ಸೂತ್ರಾಣ್ಯನ್ಯೇ ಪ್ರಗೃಹ್ಣಂತಿ ವ್ಯಾಯತಂ ಶತಯೋಜನಮ್ ॥ ೬೨**

**ದಶಯೋಜನವಿಸ್ತಾರಂ ಶತಯೋಜನಮಾಯತಮ್ ।**
**ನಲಶ್ಚಕ್ರೇ ಮಹಾಸೇತುಂ ಮಧ್ಯೇ ನದನದೀಪತೇಃ ॥ ೬೩**

---

ಅಶೋಕ – ಮುಂತಾದ ಮರಗಳನ್ನು ತಂದು ಸಮುದ್ರದಲ್ಲಿಡುಕಿದರು. ಆ ವಾನರರು ಕೆಲವು ವೃಕ್ಷಗಳನ್ನು ಬೇರುಸಹಿತವಾಗಿ ಕಿತ್ತು, ಕೆಲವನ್ನು ಬುಡದಲ್ಲಿ ಮುರಿದು, ಇಂದ್ರಧ್ವಜಗಳನ್ನು ಹೊತ್ತಂತೆ ಹೊತ್ತು ತಂದರು (೫೬–೫೮). ತಾಳೆಯ ಮರ, ದಾಳಿಂಬೆ ಗಿಡ, ತೆಂಗಿನ ಮರ, ತಾರೆ ಮರ, ಬಕುಳ, ಖದಿರ, ಬೇವು – ಮೊದಲಾದವುಗಳನ್ನು ಸುತ್ತಲಿದ್ದ ಅಡವಿಗಳಿಂದ ತಂದರು. ಅಲ್ಲದೆ ಬಲಾಢ್ಯರಾದ ಕಪಿನಾಯಕರು ಆನೆಯ ಗಾತ್ರದ ದೊಡ್ಡ ದೊಡ್ಡ ಬಂಡೆಗಳನ್ನೂ ಬೆಟ್ಟಗಳನ್ನೂ ಪ್ರಯತ್ನ ಪೂರ್ವಕವಾಗಿ ಕಿತ್ತು ಹೊತ್ತುತಂದರು (೫೯–೬೦). ಬೆಟ್ಟಗಳನ್ನು ತಂದು ಸಮುದ್ರಜಲದಲ್ಲೆಸೆದಾಗ, ಆಕಾಶದವರೆಗೆ ನೀರು ಚಿಮ್ಮುತ್ತಿತ್ತು. ಈ ರೀತಿಯಲ್ಲಿ ಕಪಿವೀರರು ಪರ್ವತಗಳನ್ನು ತಂದೆಸೆಯುತ್ತಿರಲು, ಸಮುದ್ರವು ಕ್ಷುಬ್ಧವಾಗಿ ಉಲ್ಲೋಲಕಲ್ಲೋಲವಾಯಿತು. ಆ ಸಮಯದಲ್ಲಿ ಕೆಲವು ಕಪಿಶ್ರೇಷ್ಠರು ದಾರಗಳನ್ನು ಹಿಡಿದು ನೂರು ಯೋಜನಗಳವರೆಗೆ ಸೇತುವು ನೇರವಾಗಿರುವಂತೆ ಪರೀಕ್ಷಿಸುತ್ತಿದ್ದರು (೬೧–೬೨). ಶಿಲ್ಪಿಯಾದ ನಳನು ಮಹಾಸಾಗರದಲ್ಲಿ ಹತ್ತು ಯೋಜನ ಅಗಲವೂ ನೂರು ಯೋಜನ ಉದ್ದವೂ ಇರುವ ಮಹಾಸೇತುವನ್ನು ಕಟ್ಟಲು ಉಪಕ್ರಮಿಸಿದನು. ಸಾಹಸ

ಸ ತಥಾ ಕ್ರಿಯತೇ ಸೇತುರ್ವಾನರೈರ್ಘೋರಕರ್ಮಭಿಃ ।
ದಂಡಾನನ್ಯೇ ಪ್ರಗೃಹ್ಣಂತಿ ವಿಚಿನ್ವಂತಿ ತಥಾ ಪರೇ ॥ ೬೪

ವಾನರಾಃ ಶತಶಸ್ತತ್ರ ರಾಮಸ್ಯಾಜ್ಞಾಪುರಃಸರಾಃ ।
ಮೇಘಾಭೈಃ ಪರ್ವತಾಗ್ರೈಶ್ಚ ತೃಣೈಃ ಕಾಷ್ಠೈರ್ಬಬಂಧಿರೇ ॥ ೬೫

ಪುಷ್ಪಿತಾಗ್ರೈಶ್ಚ ತರುಭಿಃ ಸೇತುಂ ಬಧ್ನಂತಿ ವಾನರಾಃ ।
ಪಾಷಾಣಾಂಶ್ಚ ಗಿರಿಪ್ರಖ್ಯಾನ್ ಗಿರೀಣಾಂ ಶಿಖರಾಣಿ ಚ ॥ ೬೬

ದೃಶ್ಯಂತೇ ಪರಿಧಾವಂತೋ ಗೃಹ್ಯ ವಾರಣಸಂನಿಭಾಃ ।
ಶಿಲಾನಾಂ ಕ್ಷಿಪ್ಯಮಾಣಾನಾಂ ಶೈಲಾನಾಂ ಚ ನಿಪಾತ್ಯತಾಮ್ ॥ ೬೭

ಬಭೂವ ತುಮುಲಃ ಶಬ್ದಸ್ತದಾ ತಸ್ಮಿನ್ ಮಹೋದಧೌ ।
ಕೃತಾನಿ ಪ್ರಥಮೇನಾಹ್ನಾ ಯೋಜನಾನಿ ಚತುರ್ದಶ ॥ ೬೮

---

ಕೃತ್ಯಗಳಲ್ಲಿ ನಿಪುಣರಾದ ವಾನರರು ಈ ರೀತಿಯಲ್ಲಿ ಸೇತುವನ್ನು ಕಟ್ಟುತ್ತಿದ್ದರು. ಅವರಲ್ಲಿ ಅಳತೆಯ ಕೋಲನ್ನು ಹಿಡಿದು ನಿಂತವರು ಕೆಲವರು ! (ಕಾರ್ಮಿಕರನ್ನು ತ್ವರೆಪಡಿಸಲು ದೊಣ್ಣೆಗಳನ್ನು ಬೀಸುತ್ತಿದ್ದವರು ಕೆಲವರು!) ಸೇತುವೆಯ ಏರುಪೇರುಗಳನ್ನು ಪರೀಕ್ಷಿಸುತ್ತಿದ್ದವರು ಕೆಲವರು! (ಆಯಾಸದಿಂದಲೋ ಸೋಮಾರಿತನದಿಂದಲೋ ಮರೆಯಲ್ಲಿ ನಿಂತ ಕಪಿಗಳನ್ನು) ಹುಡುಕುತ್ತಿದ್ದವರು ಕೆಲವರು! (೬೩–೬೪). ಶ್ರೀರಾಮನ ಸೂಚನೆಯಂತೆ ವಾನರರು ಗುಂಪು ಗುಂಪಾಗಿ ಸೇತುಬಂಧನಕಾರ್ಯದಲ್ಲಿ ಉದ್ಯುಕ್ತರಾಗಿದ್ದರು. ನಳನು ಕಟ್ಟಿದ ಸೇತುವೆಯ ಮೇಲ್ಭಾಗವನ್ನು ಕಾರ್ಮೋಡಗಳಂತಿರುವ ಗಿರಿಶೃಂಗಗಳಿಂದಲೂ ಹುಲ್ಲಿನಿಂದಲೂ ಕಟ್ಟಿಗೆಗಳಿಂದಲೂ ಕೆಲವರು ಸರಿಪಡಿಸಿದರು (೬೫). ಎಲ್ಲಿ ನೋಡಿದರೂ ಪುಷ್ಪಿತವೃಕ್ಷಗಳನ್ನೂ ಬೆಟ್ಟದಂತಹ ಬಂಡೆಗಳನ್ನೂ ಗಿರಿಶೃಂಗ ಗಳನ್ನೂ ಹೊತ್ತು ತರುವ ಕಪಿಗಳೇ! ಎಲ್ಲಿ ನೋಡಿದರೂ ಪರ್ವತಾದಿಗಳನ್ನು ಹೊತ್ತು ಓಡಿಓಡಿ ಬರುವ ಮಾತಂಗಾಕಾರದ ಕಪಿವೀರರೇ! ಈ ಪ್ರಕಾರದಲ್ಲಿ ಶಿಲೆಗಳನ್ನೂ ಶೈಲಗಳನ್ನೂ ತಂದು ಸಮುದ್ರದಲ್ಲಿ ಇಡುಕುತ್ತಿರಲು, ಬರಿಯ ಕೋಲಾಹಲಶಬ್ದವೇ ಕೇಳಿಸುತ್ತಿತ್ತು (೬೬–೬೭). ಮೊದಲನೆಯ ದಿನ ಹದಿನಾಲ್ಕು ಯೋಜನ ದೂರದ ಸೇತುವೆಯು ನಿರ್ಮಿತವಾಯಿತು. ಭೀಮ

ಪ್ರಹೃಷ್ಟೈರ್ಗಜಸಂಕಾಶೈಸ್ತ್ವರಮಾಣೈಃ ಪ್ಲವಂಗಮೈಃ ।
ದ್ವಿತೀಯೇನ ತಥಾ ಚಾಹ್ನಾ ಯೋಜನಾನಿ ತು ವಿಂಶತಿಃ ॥ ೬೯

ಕೃತಾನಿ ಪ್ಲವಗೈಸ್ತೂರ್ಣಂ ಭೀಮಕಾಯೈರ್ಮಹಾಬಲೈಃ ।
ಅಹ್ನಾ ತೃತೀಯೇನ ತಥಾ ಯೋಜನಾನಿ ಕೃತಾನಿ ತು ॥ ೭೦

ತ್ವರಮಾಣೈರ್ಮಹಾಕಾಯೈರೇಕವಿಂಶತಿರೇವ ಚ ।
ಚತುರ್ಥೇನ ತಥಾ ಚಾಹ್ನಾ ದ್ವಾವಿಂಶತಿರಥಾಪಿ ಚ ॥ ೭೧

ಯೋಜನಾನಿ ಮಹಾವೇಗೈಃ ಕೃತಾನಿ ತ್ವರಿತೈಸ್ತು ತೈಃ ।
ಪಂಚಮೇನ ತಥಾ ಚಾಹ್ನಾ ಪ್ಲವಗೈಃ ಕ್ಷಿಪ್ರಕಾರಿಭಿಃ ॥ ೭೨

ಯೋಜನಾನಿ ತ್ರಯೋವಿಂಶತ್ಸುವೇಲಮಧಿ ಕೃತ್ಯ ವೈ ।
ಸ ವಾನರವರಃ ಶ್ರೀಮಾನ್ ವಿಶ್ವಕರ್ಮಾತ್ಮಜೋ ಬಲೀ ॥ ೭೩

ಬಬಂಧ ಸಾಗರೇ ಸೇತುಂ ಯಥಾ ಚಾಸ್ಯ ಪಿತಾ ತಥಾ ।
ಸ ನಲೇನ ಕೃತಃ ಸೇತುಃ ಸಾಗರೇ ಮಕರಾಲಯೇ ॥ ೭೪

ಶುಶುಭೇ ಸುಭಗಃ ಶ್ರೀಮಾನ್ ಸ್ವಾತೀಪಥ ಇವಾಂಬರೇ ।
ತತೋ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ ॥ ೭೫

---

ಕಾಯರೂ ತ್ವರಾಯುಕ್ತರೂ ಆದ ಆ ಕಪಿಶ್ರೇಷ್ಠರು ಎರಡನೆಯದಿನ ಮುಂದಕ್ಕೆ ಇಪ್ಪತ್ತು ಯೋಜನಗಳ ಸೇತುವನ್ನು ಕಟ್ಟಿದರು. ಮೂರನೆಯ ದಿನ ಅದರ ಮುಂದೆ ಇಪ್ಪತ್ತೊಂದು ಯೋಜನಗಳ ಸೇತುವೆಯನ್ನು ನಿರ್ಮಿಸಿದರು (೬೮–೭೦). ಆಮೇಲೆ ನಾಲ್ಕನೆಯ ದಿನ ಇಪ್ಪತ್ತೆರಡು ಯೋಜನಗಳ ಸೇತುವೆಯನ್ನು ಕಟ್ಟಿ, ಐದನೆಯ ದಿನ ಇನ್ನೂ ತ್ವರೆಯಿಂದ ಕೆಲಸಮಾಡಿ ಉಳಿದ ಇಪ್ಪತ್ತುಮೂರು ಯೋಜನಗಳ ಸೇತುವನ್ನು ಕಟ್ಟಿ ಲಂಕಾದ್ವೀಪದಲ್ಲಿದ್ದ ಸುವೇಲಪರ್ವತಕ್ಕೆ ಕೂಡಿಸಿಬಿಟ್ಟರು! (೭೧–೭೨). ವಿಶ್ವಕರ್ಮನ ತನಯನೂ ಬಲಶಾಲಿಯೂ ವಾನರೋತ್ತಮನೂ ಆದ ನಳನು, ಅವನ ತಂದೆಯಂತೆಯೇ ಕಾರ್ಯದಕ್ಷತೆಯಿಂದ ಕೆಲಸ ಮಾಡಿ, ಮಹಾಸಾಗರದಲ್ಲಿ ಸೇತುವೆಯನ್ನು ಕಟ್ಟಿ ಮುಗಿಸಿದನು. ಭವ್ಯಾಕಾರವಾದ ಆ ಸೇತುವೆಯು ಗಗನಮಾರ್ಗದಲ್ಲಿರುವ ಸ್ವಾತೀಪಥದಂತೆ* ವಿರಾಜಿಸುತ್ತಿತ್ತು (೭೩–೭೪). ಆಗ ದೇವಗಂಧರ್ವರೂ

---

* ಅನುಬಂಧವನ್ನು ನೋಡಿ.

**ಆಗಮ್ಯ ಗಗನೇ ತಸ್ಥುರ್ದ್ರಷ್ಟುಕಾಮಾಸ್ತದದ್ಭುತಮ್ ।**
**ದಶಯೋಜನವಿಸ್ತೀರ್ಣಂ ಶತಯೋಜನಮಾಯತಮ್ ॥ ೭೬**

**ದದೃಶುರ್ದೇವಗಂಧರ್ವಾ ನಲಸೇತುಂ ಸುದುಷ್ಕರಮ್ ।**
**ಆಪ್ಲವಂತಃ ಪ್ಲವಂತಶ್ಚ ಗರ್ಜಂತಶ್ಚ ಪ್ಲವಂಗಮಾಃ ॥ ೭೭**

**ತದಚಿಂತ್ಯಮಸಹ್ಯಂ ಚ ಅದ್ಭುತಂ ರೋಮಹರ್ಷಣಮ್ ।**
**ದದೃಶುಃ ಸರ್ವಭೂತಾನಿ ಸಾಗರೇ ಸೇತುಬಂಧನಮ್ ॥ ೭೮**

**ತಾನಿ ಕೋಟಿಸಹಸ್ರಾಣಿ ವಾನರಾಣಾಂ ಮಹೌಜಸಾಮ್ ।**
**ಬಧ್ನಂತಃ ಸಾಗರೇ ಸೇತುಂ ಜಗ್ಮುಃ ಪಾರಂ ಮಹೋದಧೇಃ ॥ ೭೯**

**ವಿಶಾಲಃ ಸುಕೃತಃ ಶ್ರೀಮಾನ್ ಸುಭೂಮಿಃ ಸುಸಮಾಹಿತಃ ।**
**ಅಶೋಭತ ಮಹಾಸೇತುಃ ಸೀಮಂತ ಇವ ಸಾಗರೇ ॥ ೮೦**

**ತತಃ ಪಾರೇ ಸಮುದ್ರಸ್ಯ ಗದಾಪಾಣಿರ್ವಿಭೀಷಣಃ ।**
**ಪರೇಷಾಮಭಿಘಾತಾರ್ಥಮತಿಷ್ಠತ್ ಸಚಿವೈಃ ಸಹ ॥ ೮೧**

---

ಸಿದ್ಧಪುರುಷರೂ ಮಹರ್ಷಿಗಳೂ ಆ ಅದ್ಭುತನಿರ್ಮಾಣವನ್ನು ನೋಡುವುದಕ್ಕಾಗಿ ಆಕಾಶದಲ್ಲಿ ಬಂದು ನೆರೆದರು. ದಶಯೋಜನ ವಿಸ್ತಾರವಾಗಿಯೂ ಶತಯೋಜನ ದೀರ್ಘವಾಗಿಯೂ ಇದ್ದು, ಅನ್ಯದುಷ್ಕರವಾದ ಆ ನಳಸೇತುವನ್ನು ದೇವಗಂಧರ್ವರು ಬೆರಗಾಗಿ ನೋಡುತ್ತಿದ್ದರು (೭೫–೭೬). ಇತ್ತ ಕಪಿಗಳಾದರೋ ಸೇತುವೆಯನ್ನು ಕಟ್ಟಿ ಮುಗಿಸಿದೆವೆಂಬ ಆನಂದದಿಂದ ಹಾರುತ್ತ ಕುಣಿಯುತ್ತ ಕೇಕೆಹಾಕುತ್ತಿದ್ದರು. ಮಹಾಸಾಗರದಲ್ಲಿ ಸೇತುಬಂಧನವೆಂದರೆ ಊಹಾತೀತವಾದುದು ; ಯತ್ನಿಸಲು ಕೂಡ ಅಶಕ್ಯವಾದುದು. ಮೈನವಿರೇಳಿಸುವ ಆ ಅದ್ಭುತ ನಿರ್ಮಾಣವನ್ನು ಸಮಸ್ತ ಭೂತಗಳೂ ಕೌತುಕದಿಂದ ನೋಡುತ್ತಿದ್ದವು (೭೭–೭೮). ಹೀಗೆ ಮಹಾಸಾಹಸಿಗಳಾದ ಸಾವಿರಾರುಕೋಟಿ ವಾನರರು ಸೇರಿ ಅಪಾರವಾದ ಕಡಲಿನ ಇನ್ನೊಂದು ಪಾರದವರೆಗೆ ಸೇತುವನ್ನು ಕಟ್ಟಿ ಮುಗಿಸಿದರು! ಆ ಮಹಾಸೇತುವು ವಿಶಾಲವಾಗಿಯೂ ದೃಢವಾಗಿಯೂ ಸುಂದರವಾಗಿಯೂ ಇತ್ತು. ಸಮತಳವಾಗಿಯೂ ಬಿರುಕುಗಳಿಲ್ಲದೆಯೂ ಇದ್ದ ನಳಸೇತುವು ಸಮುದ್ರವೆಂಬ ಶಿರಸ್ಸಿನಲ್ಲಿರುವ ಭೂದೇವಿಯ ಬೈತಲೆಯೋ ಎಂಬಂತೆ ಕಂಗೊಳಿಸಿತು (೭೯–೮೦). ಅನಂತರ ವಿಭೀಷಣನು ತನ್ನ ಮಂತ್ರಿಗಳೊಡನೆ ಸಮುದ್ರದ ದಕ್ಷಿಣತೀರಕ್ಕೆ ಹೋಗಿ,

ಸುಗ್ರೀವಸ್ತು ತತಃ ಪ್ರಾಹ ರಾಮಂ ಸತ್ಯ ಪರಾಕ್ರಮಮ್ ।
ಹನುಮಂತಂ ತ್ವಮಾರೋಹ ಅಂಗದಂ ಚಾಪಿ ಲಕ್ಷ್ಮಣಃ ॥ ೮೨

ಅಯಂ ಹಿ ವಿಪುಲೋ ವೀರ ಸಾಗರೋ ಮಕರಾಲಯಃ ।
ವೈಹಾಯಸೌ ಯುವಾಮೇತೌ ವಾನರೌ ತಾರಯಿಷ್ಯತಃ ॥ ೮೩

ಅಗ್ರತಸ್ತಸ್ಯ ಸೈನ್ಯಸ್ಯ ಶ್ರೀಮಾನ್ ರಾಮಃ ಸಲಕ್ಷ್ಮಣಃ ।
ಜಗಾಮ ಧನ್ವೀ ಧರ್ಮಾತ್ಮಾ ಸುಗ್ರೀವೇಣ ಸಮನ್ವಿತಃ ॥ ೮೪

ಅನ್ಯೇ ಮಧ್ಯೇನ ಗಚ್ಛಂತಿ ಪಾರ್ಶ್ವತೋಽನ್ಯೇ ಪ್ಲವಂಗಮಾಃ ।
ಸಲಿಲೇ ಪ್ರಪತಂತ್ಯನ್ಯೇ ಮಾರ್ಗಮನ್ಯೇ ನ ಲೇಭಿರೇ ॥ ೮೫

ಕೇಚಿದ್ವೈಹಾಯಸಗತಾಃ ಸುಪರ್ಣಾ ಇವ ಪುಪ್ಲುವುಃ ।
ಘೋಷೇಣ ಮಹತಾ ತಸ್ಯ ಸಿಂಧೋರ್ಘೋಷಂ ಸಮುಚ್ಛ್ರಿತಮ್ ॥

ಭೀಮಮಂತರ್ದಧೇ ಭೀಮಾ ತರಂತೀ ಹರಿವಾಹಿನೀ ।
ವಾನರಾಣಾಂ ಹಿ ಸಾ ತೀರ್ಣಾ ವಾಹಿನೀ ನಲಸೇತುನಾ ॥ ೮೬

---

ಶತ್ರುಗಳಿಂದ ಸೇತುವೆಗೆ ಅಪಾಯವಾಗದಿರಲೆಂದು ಗದಾಪಾಣಿಯಾಗಿ ಕಾಯುತ್ತ ನಿಂತನು ಸುಗ್ರೀವನು ಸತ್ಯಪರಾಕ್ರಮನಾದ ಶ್ರೀರಾಮನನ್ನು ನೋಡಿ ''ರಾಘವ, ನೀನು ಈ ಹನುಮಂತನ ಭುಜವನ್ನೇರು ಲಕ್ಷ್ಮಣನು ಅಂಗದನ ಭುಜವನ್ನೇರಲಿ (೮೧-೮೨). ಈ ಸಮುದ್ರವು ಅತ್ಯಂತ ವಿಶಾಲ ವಾಗಿದೆ. ಆದ್ದರಿಂದ ಈ ವಾನರರಿಬ್ಬರು ನಿಮ್ಮನ್ನು ಆಕಾಶಮಾರ್ಗದಿಂದ ಸಮುದ್ರವನ್ನು ದಾಟಿಸಲಿ'' ಎಂದನು ಅನಂತರ ಧರ್ಮಾತ್ಮನಾದ ಶ್ರೀರಾಮನು ಲಕ್ಷ್ಮಣನೊಡನೆ ಧನುರ್ಧಾರಿಯಾಗಿ ಸೇನೆಯ ಮುಂದುಗಡೆ ಪ್ರಯಾಣಮಾಡಿದನು. ಜೊತೆಯಲ್ಲಿ ಸುಗ್ರೀವನೂ ಹೋದನು (೮೩-೮೪). ಕಪಿನಾಯಕರೆಲ್ಲರೂ ಹೊರಟರು. ಕೆಲವರು ಸೇತುವೆಯ ನಡುವೆಯೂ ಅಂಚು ಗಳಲ್ಲಿಯೂ ಪ್ರಯಾಣಮಾಡಿದರು ಕೆಲವು ಕಪಿಗಳು ನೀರಿನಲ್ಲಿ ಧುಮುಕಿ ಈಜುತ್ತ ಹೋದರು! ಇನ್ನು ಕೆಲವರಿಗೆ ಸೇತುವೆಯನಲ್ಲಿ ಸ್ಥಳಾವಕಾಶವಿಲ್ಲದೆ ಹಿಂದುಳಿದರು (೮೫). ಕೆಲವರು ಆಕಾಶದಲ್ಲಿ ಗರುಡಪಕ್ಷಿಗಳಂತೆ ಹಾರುತ್ತ ಹೋದರು. ಆ ಸಮಯದಲ್ಲಿ ವಾನರಸೇನೆಯ ಮಹಾಕಲಕಲಧ್ವನಿಯಲ್ಲಿ ಘೋರವಾದ ಸಮುದ್ರಘೋಷವೂ ಅಡಗಿಹೋಯಿತು! ಹೀಗೆ ಸುಗ್ರೀವನ

ತೀರೇ ನಿವಿವಿಶೇ ರಾಜ್ಞೋ ಬಹುಮೂಲಫಲೋದಕೇ ॥

ತದದ್ಭುತಂ ರಾಘವಕರ್ಮ ದುಷ್ಕರಂ
ಸಮೀಕ್ಷ್ಯ ದೇವಾಃ ಸಹ ಸಿದ್ಧಚಾರಣೈಃ ।
ಉಪೇತ್ಯ ರಾಮಂ ಸಹಸಾ ಮಹರ್ಷಿಭಿಃ
ಸಮಭ್ಯಷಿಂಚನ್ ಸುಶುಭೈರ್ಜಲೈಃ ಪೃಥಕ್ ॥ ೮೮

ಜಯಸ್ವ ಶತ್ರೂನ್ನರದೇವ ಮೇದಿನೀಂ
ಸಸಾಗರಾಂ ಪಾಲಯ ಶಾಶ್ವತೀಃ ಸಮಾಃ ।
ಇತೀವ ರಾಮಂ ನರದೇವಸತ್ಕೃತಂ
ಶುಭೈರ್ವಚೋಭಿರ್ವಿವಿಧೈರಪೂಜಯನ್ ॥ ೮೯

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವಾವಿಂಶಃ ಸರ್ಗಃ

---

ವಾನರಸೇನೆಯು ನಳನಿರ್ಮಿತವಾದ ಸೇತುವಿನಿಂದ ಸಮುದ್ರವನ್ನು ದಾಟಿ, ಫಲಮೂಲೋದಕಗಳಿಂದ ಸಮೃದ್ಧವಾದ ದಕ್ಷಿಣತೀರಕ್ಕೆ ಬಂದಿಳಿಯಿತು (೮೬–೮೭). ರಾಘವನು ಸಾಧಿಸಿದ ವಿಸ್ಮಯಕರವಾದ ಆ ಮಹಾಕಾರ್ಯವನ್ನು ಕಂಡು, ದೇವತೆಗಳು ಸಿದ್ಧಚಾರಣಮಹರ್ಷಿಗಳೊಡನೆ ಆಗಮಿಸಿ ಮಂಗಳಕರ ವಾದ ಆಕಾಶಗಂಗಾದಿ ತೀರ್ಥಜಲಗಳಿಂದ ಶ್ರೀರಾಮನನ್ನು ಪ್ರೋಕ್ಷಿಸಿದರು (೮೮). ಅವರು ''ಹೇ ಪುರುಷೋತ್ತಮ, ನಿನಗೆ ಜಯವಾಗಲಿ! ಶತ್ರುಗಳನ್ನು ಜಯಿಸಿ ಸಮುದ್ರಪರ್ಯಂತವಾದ ಭೂಮಂಡಲವನ್ನು ಚಿರಕಾಲದವರೆಗೆ ಪಾಲಿಸುತ್ತಿರು!'' ಎಂದು ಬಗೆಬಗೆಯ ಶುಭವಚನಗಳಿಂದ ಶ್ರೀರಾಮಚಂದ್ರ ನನ್ನು ಸ್ತುತಿಸಿದರು (೮೯).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಇಪ್ಪತ್ತೆರಡನೆಯ ಸರ್ಗ

---

## ತ್ರಯೋವಿಂಶಃ ಸರ್ಗಃ

### ಲಂಕಾಭಿಷೇಣನಮ್

**ನಿಮಿತ್ತಾನಿ ನಿಮಿತ್ತಜ್ಞೋ ದೃಷ್ಟ್ವಾ ಲಕ್ಷ್ಮಣಪೂರ್ವಜಃ ।**
**ಸೌಮಿತ್ರಿಂ ಸಂಪರಿಷ್ವಜ್ಯ ಇದಂ ವಚನಮಬ್ರವೀತ್ ॥ ೧**

**ಪರಿಗೃಹ್ಯೋದಕಂ ಶೀತಂ ವನಾನಿ ಫಲವಂತಿ ಚ ।**
**ಬಲೌಘಂ ಸಂವಿಭಜ್ಯೇಮಂ ವ್ಯೂಹ್ಯ ತಿಷ್ಠೇಮ ಲಕ್ಷ್ಮಣ ॥ ೨**

**ಲೋಕಕ್ಷಯಕರಂ ಭೀಮಂ ಭಯಂ ಪಶ್ಯಾಮ್ಯುಪಸ್ಥಿತಮ್ ।**
**ನಿಬರ್ಹಣಂ ಪ್ರವೀರಾಣಾಮೃಕ್ಷವಾನರರಕ್ಷಸಾಮ್ ॥ ೩**

**ವಾತಾಶ್ಚ ಕಲುಷಾ ವಾಂತಿ ಕಂಪತೇ ಚ ವಸುಂಧರಾ ।**
**ಪರ್ವತಾಗ್ರಾಣಿ ವೇಪಂತೇ ಪತಂತಿ ಚ ಮಹೀರುಹಾಃ ॥ ೪**

**ಮೇಘಾಃ ಕ್ರವ್ಯಾದಸಂಕಾಶಾಃ ಪರುಷಾಃ ಪರುಷಸ್ವನಾಃ ।**
**ಕ್ರೂರಾಃ ಕ್ರೂರಂ ಪ್ರವರ್ಷಂತಿ ಮಿಶ್ರಂ ಶೋಣಿತಬಿಂದುಭಿಃ ॥ ೫**

### ಸರ್ಗ ೨೩

ಶ್ರೀರಾಮನು ಯುದ್ಧಸೂಚಕಗಳಾದ ಉತ್ಪಾತಗಳನ್ನು ಲಕ್ಷ್ಮಣನಿಗೆ ತೋರಿಸುವುದು.
ಕಪಿಸೇನೆಯೊಡನೆ ಲಂಕಾಭಿಮುಖವಾಗಿ ಪ್ರಯಾಣ.

ನಿಮಿತ್ತಶಾಸ್ತ್ರವನ್ನು ಬಲ್ಲ ಶ್ರೀರಾಮನು ಆಗ ಸಂಭವಿಸುತ್ತಿದ್ದ ಉತ್ಪಾತಗಳನ್ನು ಗಮನಿಸಿ, ಸೌಮಿತ್ರಿಯನ್ನಾಲಿಂಗಿಸಿಕೊಂಡು ಹೀಗೆಂದನು : "ಲಕ್ಷ್ಮಣ, ಈಗ ನಾವು ಶೀತೋದಕವೂ ಫಲಗಳೂ ಸಮೃದ್ಧವಾಗಿರುವ ನೆಲೆಗಳನ್ನಾಶ್ರಯಿಸಿ, ಸೇನೆಯನ್ನು ವಿಭಜಿಸಿ ವ್ಯೂಹಾಕಾರವಾಗಿ ನಿಲ್ಲೋಣ! (೧–೨). ಪ್ರಜಾಹಾನಿಕರವಾದ ದೊಡ್ಡ ವಿಪತ್ತು ಉಪಸ್ಥಿತವಾಯಿತೆಂದು ನನಗನ್ನಿಸುವುದು. ವೀರರಾದ ನಮ್ಮ ಭಲ್ಲೂಕವಾನರರಿಗೂ ರಾಕ್ಷಸರಿಗೂ ಇದು ವಿನಾಶಕಾರಿಯಾಗಿದೆ. ನೋಡು! ಧೂಳಿಧೂಸರಿತವಾದ ಗಾಳಿ ಬೀಸುತ್ತಿದೆ, ಭೂಮಿ ಅದುರುತ್ತಿದೆ. ಗಿರಿಶಿಖರಗಳು ಕಂಪಿಸುತ್ತಿವೆ, ಮರಗಳು ಬೀಳುತ್ತಿವೆ (೩–೪). ಭೀಕರಾಕೃತಿಯ ಕಾರ್ಮೋಡಗಳು ನಿಶಾಚರರಂತೆ ಕರ್ಕಶಸ್ವರದಿಂದ ಗುಡುಗುತ್ತ, ರಕ್ತಬಿಂದು ಸಮ್ಮಿಶ್ರವಾದ ನೀರನ್ನು ಸುರಿಸು

**ರಕ್ತಚಂದನಸಂಕಾಶಾ ಸಂಧ್ಯಾ ಪರಮದಾರುಣಾ ।**
**ಜ್ವಲತಃ ಪ್ರಪತತ್ಯೇತದಾದಿತ್ಯಾದಗ್ನಿಮಂಡಲಮ್ ॥ ೬**

**ದೀನಾ ದೀನಸ್ವರಾಃ ಕ್ರೂರಾಃ ಸರ್ವತೋ ಮೃಗಪಕ್ಷಿಣಃ ।**
**ಪ್ರತ್ಯಾದಿತ್ಯಂ ವಿನರ್ದಂತಿ ಜನಯಂತೋ ಮಹದ್ಭಯಮ್ ॥ ೭**

**ರಜನ್ಯಾಮಪ್ರಕಾಶಸ್ತು ಸಂತಾಪಯತಿ ಚಂದ್ರಮಾಃ ।**
**ಕೃಷ್ಣರಕ್ತಾಂಶುಪರ್ಯಂತೋ ಲೋಕಕ್ಷಯ ಇವೋದಿತಃ ॥ ೮**

**ಹ್ರಸ್ವೋ ರೂಕ್ಷೋಽಪ್ರಶಸ್ತಶ್ಚ ಪರಿವೇಷಃ ಸುಲೋಹಿತಃ ।**
**ಆದಿತ್ಯೇ ವಿಮಲೇ ನೀಲಂ ಲಕ್ಷ್ಮ ಲಕ್ಷ್ಮಣ ದೃಶ್ಯತೇ ॥ ೯**

**ರಜಸಾ ಮಹತಾ ಚಾಪಿ ನಕ್ಷತ್ರಾಣಿ ಹತಾನಿ ಚ ।**
**ಯುಗಾಂತಮಿವ ಲೋಕಾನಾಂ ಪಶ್ಯ ಶಂಸಂತಿ ಲಕ್ಷ್ಮಣ ॥ ೧೦**

**ಕಾಕಾಃ ಶ್ಯೇನಾಸ್ತಥಾ ಗೃಧ್ರಾ ನೀಚೈಃ ಪರಿಪತಂತಿ ಚ ।**
**ಶಿವಾಶ್ಚಾಪ್ಯಶಿವಾನ್ನಾದಾನ್ನಾದಂತಿ ಸುಮಹಾಭಯಾನ್ ॥ ೧೧**

---

ತ್ತಿವೆ. ರಕ್ತಚಂದನದಂತೆ ಕೆಂಪಾದ ಸಂಧ್ಯಾಕಾಲವು ನೋಡಲು ಭಯಂಕರವಾಗಿದೆ. ಆದಿತ್ಯಮಂಡಲದಿಂದ ಪಿಂಡಾಕಾರದ ಅಗ್ನಿಯು ಸಿಡಿದುಬೀಳುತ್ತಿದೆ (೫–೬). ತಮ್ಮ – ಲಕ್ಷ್ಮಣ, ಎಲ್ಲೆಡೆಯೂ ಮೃಗಪಕ್ಷಿಗಳು ಸೂರ್ಯನ ಕಡೆಗೆ ತಿರುಗಿ ಕರ್ಣಕಠೋರವಾಗಿ ದೈನ್ಯಸ್ವರದಿಂದ ಅರಚುತ್ತಿವೆ. ಕೇಳುವವರಿಗೆ ಹೆದರಿಕೆಯಾಗುತ್ತಿದೆ. ಈಚೆಗೆ ರಾತ್ರಿಯಹೊತ್ತು ಚಂದ್ರನು ನಿಷ್ಪ್ರಭನಾಗಿ ತನ್ನ ಕಿರಣಗಳಿಂದ ಜನರಿಗೆ ಸೆಕೆಯನ್ನು ಹುಟ್ಟಿಸುತ್ತಿದ್ದಾನೆ! ಸೂರ್ಯನ ಸುತ್ತಲೂ ಪ್ರಳಯಕಾಲದಲ್ಲಿ ಕಾಣಿಸುವಂತೆ, ಕೆಂಪು ಮತ್ತು ಕಪ್ಪುಬಣ್ಣದ ಪರಿವೇಷವು ಗೋಚರಿಸುತ್ತಿದೆ (೭–೮). ಅದು ಕುರುಚಾಗಿ ಭೀಕರವಾಗಿದೆ. ಬಹು ಕೆಂಪಾಗಿರುವ ಆ ಪರಿವೇಷವು ಅಮಂಗಳಕರವಾದುದು. ಲಕ್ಷ್ಮಣ, ನಿರ್ಮಲವಾದ ಸೂರ್ಯಮಂಡಲದ ನಡುವೆ ಕಪ್ಪನೆಯ ಕಳಂಕವು ಕಾಣುತ್ತಿದೆ. ನಕ್ಷತ್ರಗಳು ಧೂಳಿಯಿಂದ ಮುಚ್ಚಿದಂತೆ ಮಬ್ಬಾಗಿವೆ. ಇವೆಲ್ಲವೂ ಲೋಕಕ್ಕೆ ಪ್ರಳಯಕಾಲವೇ ಬಂದಿತೋ ಎಂಬ ಸೂಚನೆಯನ್ನು ಕೊಡುತ್ತಿವೆ (೯–೧೦). ಕಾಗೆ, ಗಿಡಗ, ಹದ್ದು ಮೊದಲಾದ ಪಕ್ಷಿಗಳು ಭೂಮಿಯ ಸಮೀಪದಲ್ಲಿ ಹಾರಾಡುತ್ತಿವೆ. ನರಿಗಳು ಕೆಟ್ಟಸ್ವರದಿಂದ ಭಯಂಕರವಾಗಿ ಊಳಿಡುತ್ತಿವೆ.

ಶೈಲೈಃ ಶೂಲೈಶ್ಚ ಖಡ್ಗೈಶ್ಚ ವಿಸೃಷ್ಟೈಃ ಕಪಿರಾಕ್ಷಸೈಃ ।
ಭವಿಷ್ಯತ್ಯಾವೃತಾ ಭೂಮಿರ್ಮಾಂಸಶೋಣಿತ ಕರ್ದಮಾ ॥ ೧೨

ಕ್ಷಿಪ್ರಮದ್ಯೈವ ದುರ್ಧರ್ಷಾಂ ಪುರೀಂ ರಾವಣಪಾಲಿತಾಮ್ ।
ಅಭಿಯಾಮ ಜವೇನೈವ ಸರ್ವತೋ ಹರಿಭಿರ್ವೃತಾಃ ॥ ೧೩

ಇತ್ಯೇವಮುಕ್ತ್ವಾ ಧರ್ಮಾತ್ಮಾ ಧನ್ವೀ ಸಂಗ್ರಾಮಹರ್ಷಣಃ ।
ಪ್ರತಸ್ಥೇ ಪುರತೋ ರಾಮೋ ಲಂಕಾಮಭಿಮುಖೋ ವಿಭುಃ ॥ ೧೪

ಸವಿಭೀಷಣಸುಗ್ರೀವಾಸ್ತತಸ್ತೇ ವಾನರರ್ಷಭಾಃ ।
ಪ್ರತಸ್ಥಿರೇ ವಿನರ್ದಂತೋ ನಿಶ್ಚಿತಾ ದ್ವಿಷತಾಂ ವಧೇ ॥ ೧೫

ರಾಘವಸ್ಯ ಪ್ರಿಯಾರ್ಥಂ ತು ಧೃತಾನಾಂ ವೀರ್ಯಶಾಲಿನಮ್ ।
ಹರೀಣಾಂ ಕರ್ಮಚೇಷ್ಟಾಭಿಸ್ತುತೋಷ ರಘುನಂದನಃ ॥ ೧೬

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರಯೋವಿಂಶಃ ಸರ್ಗಃ

---

ಲಕ್ಷ್ಮಣ, ಶೀಘ್ರದಲ್ಲಿಯೇ ಕಪಿಸೇನೆಗೂ ರಾಕ್ಷಸರಿಗೂ ಶೈಲ ಶೂಲ ಖಡ್ಗಾದಿಗಳಿಂದ ಹೊಡೆದಾಟವಾರಂಭವಾಗಿ, ನೆಲವೆಲ್ಲವೂ ರಕ್ತಮಾಂಸಗಳಿಂದ ಕೊಚ್ಚೆಯಾಗಿಬಿಡುವುದು! (೧೧–೧೨). ಈಗಲೇ ನಾವು ಕಪಿಸೇನಾಪರಿವೃತರಾಗಿ, ದುರ್ಧರ್ಷವೆನಿಸಿದ ಲಂಕೆಯಮೇಲೆ ತ್ವರೆಯಿಂದ ಏರಿಹೋಗೋಣ!'' ಎಂದನು. ಹೀಗೆಂದು ನುಡಿದು ಧರ್ಮಾತ್ಮನೂ ಸಮರ್ಥನೂ ಆದ ಶ್ರೀರಾಮನು ಕೋದಂಡಧಾರಿಯಾಗಿ, ಯುದ್ಧೋತ್ಸಾಹದಿಂದ ಮುಂದೆ ಹೊರಟನು (೧೩–೧೪). ಅವನೊಡನೆ ವಿಭೀಷಣ ಸುಗ್ರೀವರೂ ಹೊರಟರು. ಕಪಿನಾಯಕರೆಲ್ಲರೂ ಶತ್ರುಗಳನ್ನು ಮರ್ದಿಸಬೇಕೆಂಬ ದೃಢನಿಶ್ಚಯದಿಂದ ಗರ್ಜಿಸುತ್ತ ನುಗ್ಗಿದರು. ಶ್ರೀರಾಮನ ಇಷ್ಟವನ್ನು ಸಾಧಿಸಬೇಕೆಂದು ಪಟತೊಟ್ಟ ಆ ವೀರರ ಕಾರ್ಯಾಚರಣೆಗಳನ್ನು ಕಂಡು, ಶ್ರೀರಾಮಚಂದ್ರನು ಸಂಪ್ರೀತನಾದನು (೧೫–೧೬).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಇಪ್ಪತ್ತು ಮೂರನೆಯ ಸರ್ಗ

---

## ಚತುರ್ವಿಂಶಃ ಸರ್ಗಃ

ರಾವಣಪ್ರತಿಜ್ಞಾ

ಸಾ ವೀರಸಮಿತೀ ರಾಜ್ಞಾ ವಿರರಾಜ ವ್ಯವಸ್ಥಿತಾ ।
ಶಶಿನಾ ಶುಭನಕ್ಷತ್ರಾ ಪೌರ್ಣಮಾಸೀವ ಶಾರದೀ ॥ ೧

ಪ್ರಚಚಾಲ ಚ ವೇಗೇನ ತ್ರಸ್ತಾ ಚೈವ ವಸುಂಧರಾ ।
ಪೀಡ್ಯಮಾನಾ ಬಲೌಘೇನ ತೇನ ಸಾಗರವರ್ಚಸಾ ॥ ೨

ತತಃ ಶುಶ್ರುವುರಾಕ್ರುಷ್ಟಂ ಲಂಕಾಯಾಂ ಕಾನನೌಕಸಃ ।
ಭೇರೀಮೃದಂಗಸಂಘುಷ್ಟಂ ತುಮುಲಂ ರೋಮಹರ್ಷಣಮ್ ॥ ೩

ಬಭೂವುಸ್ತೇನ ಘೋಷೇಣ ಸಂಹೃಷ್ಟಾ ಹರಿಯೂಥಪಾಃ ।
ಅಮೃಷ್ಯಮಾಣಾಸ್ತಂ ಘೋಷಂ ವಿನೇದುರ್ಘೋಷವತ್ತರಮ್ ॥ ೪

ರಾಕ್ಷಸಾಸ್ತು ಪ್ಲವಂಗಾನಾಂ ಶುಶ್ರುವುಶ್ಚಾಪಿ ಗರ್ಜಿತಮ್ ।
ನರ್ದತಾಮಿವ ದೃಪ್ತಾನಾಂ ಮೇಘಾನಾಮಂಬರೇ ಸ್ವನಮ್ ॥ ೫

## ಸರ್ಗ ೨೪

ಶ್ರೀರಾಮನು ಸೇನೆಯನ್ನು ವ್ಯೂಹಾಕಾರವಾಗಿ ನಿಲ್ಲಿಸುವುದು. ಶುಕಸಾರಣರು ರಾವಣನಿಗೆ ಕಪಿಸೇನೆಯ ಅಭೇದ್ಯತೆಯನ್ನು ತಿಳಿಸುವುದು. ರಾವಣನ ಪ್ರತಿಜ್ಞೆ.

ಹೀಗೆ ರಾಜಪುತ್ರನಾದ ಶ್ರೀರಾಮನು ತಂದಿಳಿಸಿದ ಆ ವೀರವಾನರ ಸೇನೆಯು ಶರತ್ಕಾಲದ ಪೂರ್ಣಿಮೆಯಂತೆ ವಿರಾಜಿಸಿತು. ಶ್ರೀರಾಮನು ಪೂರ್ಣಚಂದ್ರನಂತೆಯೂ ವಾನರನಾಯಕರು ಶುಭನಕ್ಷತ್ರಗಳಂತೆಯೂ ಕಂಗೊಳಿಸಿದರು. ಸಮುದ್ರದಂತೆ ಅಪಾರವಾದ ಕಪಿಸೇನೆಯು ಸಂಚರಿಸುವ ರಭಸಕ್ಕೆ ಪೃಥ್ವಿಯು ಹೆದರಿ ಅಲ್ಲಾಡಿತು! (೧–೨). ಆಗ ಲಂಕೆಯೊಳಗೆ ಭೇರೀಮೃದಂಗ ಧ್ವನಿಗಳೊಡನೆ ಸಮ್ಮಿಶ್ರವಾಗಿ ನಡೆಯುತ್ತಿದ್ದ ಮೈನವಿರೇಳಿಸುವ ರಾಕ್ಷಸರ ಗದ್ದಲವು ಕಪಿಸೈನಿಕರಿಗೆ ಕೇಳಿಸಿತು. ಆ ಗದ್ದಲವನ್ನು ಕೇಳಿ ಕಪಿನಾಯಕರು ಹರ್ಷದಿಂದುಬ್ಬಿದರು. ರಾಕ್ಷಸರ ಅಬ್ಬರವನ್ನು ಸಹಿಸಲಾರದೆ ಈ ಕಪಿವೀರರು ರಾಕ್ಷಸರಿಗಿಂತಲೂ ಗಟ್ಟಿಯಾಗಿ ಅಬ್ಬರಿಸಿ ಸಿಂಹನಾದಗೈದರು! (೩–೪). ಲಂಕೆಯೊಳಗಿದ್ದ ರಾಕ್ಷಸರಿಗೆ ವಾನರರ ದರ್ಪದ ಗರ್ಜನೆಯು

ದೃಷ್ಟ್ವಾ ದಾಶರಥಿರ್ಲಂಕಾಂ ಚಿತ್ರಧ್ವಜಪತಾಕಿನೀಮ್ ।
ಜಗಾಮ ಮನಸಾ ಸೀತಾಂ ದೂಯಮಾನೇನ ಚೇತಸಾ ॥ ೬

ಅತ್ರ ಸಾ ಮೃಗಶಾವಾಕ್ಷೀ ರಾವಣೇನೋಪರುಧ್ಯತೇ ।
ಅಭಿಭೂತಾ ಗ್ರಹೇಣೇವ ಲೋಹಿತಾಂಗೇನ ರೋಹಿಣೀ ॥ ೭

ದೀರ್ಘಮುಷ್ಣಂ ಚ ನಿಃಶ್ವಸ್ಯ ಸಮುದ್ವೀಕ್ಷ್ಯ ಚ ಲಕ್ಷ್ಮಣಮ್ ।
ಉವಾಚ ವಚನಂ ವೀರಸ್ತತ್ಕಾಲಹಿತಮಾತ್ಮನಃ ॥ ೮

ಆಲಿಖಂತೀಮಿವಾಕಾಶಮುತ್ಥಿತಾಂ ಪಶ್ಯ ಲಕ್ಷ್ಮಣ ।
ಮನಸೇವ ಕೃತಾಂ ಲಂಕಾಂ ನಗಾಗ್ರೇ ವಿಶ್ವಕರ್ಮಣಾ ॥ ೯

ವಿಮಾನೈರ್ಬಹುಭಿರ್ಲಂಕಾ ಸಂಕೀರ್ಣಾ ಭುವಿ ರಾಜತೇ ।
ವಿಷ್ಣೋಃ ಪದಮಿವಾಕಾರಂ ಛಾದಿತಂ ಪಾಂಡುರೈರ್ಘನೈಃ ॥ ೧೦

ಪುಷ್ಪಿತೈಃ ಶೋಭಿತಾ ಲಂಕಾ ವನೈಶ್ಚೈತ್ರರಥೋಪಮೈಃ ।
ನಾನಾಪತಂಗಸಂಘುಷ್ಟೈಃ ಫಲಪುಷ್ಪೋಪಗೈಃ ಶುಭೈಃ ॥ ೧೧

---

ಕೇಳಿಸಿತು. ಆಕಾಶದಲ್ಲಿ ಮೋಡಗಳು ಕವಿದು ಗುಡುಗುತ್ತಿರುವಂತೆ ತೋರಿತು! ಇತ್ತ ಶ್ರೀರಾಮನಿಗೆ ಚಿತ್ರವರ್ಣದ ಧ್ವಜಪತಾಕೆಗಳಿಂದ ಅಲಂಕೃತವಾದ ಲಂಕೆಯನ್ನು ಕಂಡೊಡನೆ ಸೀತೆಯ ನೆನಪಾಯಿತು. ಹೃದಯವನ್ನು ದುಃಖವು ಆವರಿಸಿತು (೫–೬). "ಅಯ್ಯೋ! ಇಲ್ಲಿಯೇ ಅಲ್ಲವೆ ನನ್ನ ಹರಿಣಾಕ್ಷಿಯು ರಾವಣನ ಹಿಂಸೆಯನ್ನು ಅನುಭವಿಸುತ್ತಿದ್ದಾಳೆ? ಅಂಗಾರಕನ ಪೀಡೆಗೆ ಸಿಕ್ಕಿದ ರೋಹಿಣಿಯಂತೆ ನರಳುತ್ತಿದ್ದಾಳೆ!" ಎಂದು ಶೋಕಸಂತಪ್ತನಾಗಿ ಬಿಸುಸುಯ್ದನು (ದುಃಖವನ್ನು ತನ್ನಲ್ಲಿಯೇ ನುಂಗಿಕೊಂಡು) ಆ ವೀರಾಗ್ರಣಿಯು ಲಕ್ಷ್ಮಣನನ್ನು ಕರೆದು ಕಾಲೋಚಿತವಾಗಿ "ಲಕ್ಷ್ಮಣ, ಆಕಾಶವನ್ನು ಭೇದಿಸುವಂತೆ ಮಹೋನ್ನತವಾಗಿ ವಿರಾಜಿಸುವ ಲಂಕೆಯನ್ನು ನೋಡಿದೆಯಾ? ಈ ತ್ರಿಕೂಟಶಿಖರದಲ್ಲಿ ವಿಶ್ವಕರ್ಮನು ಮನಸ್ಸಂಕಲ್ಪದಿಂದಲೇ ಇದನ್ನು ನಿರ್ಮಿಸಿರಬಹುದೆ! (೭–೯). ಬಿಳಿಯ ಬಣ್ಣದ ಉನ್ನತಸೌಧಗಳಿಂದ ಈ ನಗರಿಯು ಹೇಗೆ ಶೋಭಿಸುತ್ತಿದೆ! ಅಂತರಿಕ್ಷದಲ್ಲಿ ಬಿಳಿಯ ಮೋಡಗಳು ಹರಿದಿಕೊಂಡಂತಿದೆ! ಕುಬೇರನ ಚೈತ್ರರಥದಂತಿರುವ ಪುಷ್ಪಿತೋದ್ಯಾನಗಳಿಂದ ಲಂಕೆಯು ತುಂಬಿರಬಹುದು! ವಿವಿಧ ಪಕ್ಷಿಗಳ ಮಂಜುಳಧ್ವನಿಯು ಕೇಳಿಸು

**ಪಶ್ಯ ಮತ್ತವಿಹಂಗಾನಿ ಪ್ರಲೀನಭ್ರಮರಾಣಿ ಚ ।**
**ಕೋಕಿಲಾಕುಲಷಂಡಾನಿ ದೋಧವೀತಿ ಶಿವೋಽನಿಲಃ ॥ ೧೨**

**ಇತಿ ದಾಶರಥೀ ರಾಮೋ ಲಕ್ಷ್ಮಣಂ ಸಮಭಾಷತ ।**
**ಬಲಂ ಚ ತದ್ವ್ಯೂಹ್ಯ ವಿಭಜನ್ ಶಾಸ್ತ್ರದೃಷ್ಟೇನ ಕರ್ಮಣಾ ॥ ೧೩**

**ಶಶಾಸ ಕಪಿಸೇನಾಯಾ ಬಲಮಾದಾಯ ವೀರ್ಯವಾನ್ ।**
**ಅಂಗದಃ ಸಹ ನೀಲೇನ ತಿಷ್ಠೇದುರಸಿ ದುರ್ಜಯಃ ॥ ೧೪**

**ತಿಷ್ಠೇದ್ವಾನರವಾಹಿನ್ಯಾ ವಾನರೌಘಸಮಾವೃತಃ ।**
**ಆಶ್ರಿತ್ಯ ದಕ್ಷಿಣಂ ಪಾರ್ಶ್ವಮೃಷಭೋ ವಾನರರ್ಷಭಃ ॥ ೧೫**

**ಗಂಧಹಸ್ತೀವ ದುರ್ಧರ್ಷಸ್ತರಸ್ವೀ ಗಂಧಮಾದನಃ ।**
**ತಿಷ್ಠೇದ್ವಾನರವಾಹಿನ್ಯಾಃ ಸವ್ಯಂ ಪಾರ್ಶ್ವಂ ಸಮಾಶ್ರಿತಃ ॥ ೧೬**

**ಮೂರ್ಧ್ನಿ ಸ್ಥಾಸ್ಯಾಮ್ಯಹಂ ಯುಕ್ತೋ ಲಕ್ಷ್ಮಣೇನ ಸಮನ್ವಿತಃ ।**
**ಜಾಂಬವಾಂಶ್ಚ ಸುಷೇಣಶ್ಚ ವೇಗದರ್ಶೀ ಚ ವಾನರಃ ॥ ೧೭**

---

ತ್ತಿದೆ, ಫಲಪುಷ್ಪಗಳು ಕಾಮಿಸುತ್ತಿವೆ, ನೋಡು (೧೦–೧೧) ಮದಿಸಿದ ಹಕ್ಕಿಗಳಿಂದಲೂ ಹೂಗಳಲ್ಲಡಗಿದ ದುಂಬಿಗಳಿಂದಲೂ ಚಿಗುರುಗಳಲ್ಲಿ ಮುಸುಕಿರುವ ಕೋಗಿಲೆಗಳ ಹಿಂಡುಗಳಿಂದಲೂ ರಂಜಿಸುವ ಹೂದೋಟಗಳನ್ನು ಅಲ್ಲಾಡಿಸುತ್ತ ತೀಡುವ ತಂಗಾಳಿಯ ಸೊಗಸನ್ನು ನೋಡು!'' ಎಂದು ಹೇಳಿದನು (೧೨). ಅನಂತರ ವೀರಾಗ್ರಗಣ್ಯನಾದ ಶ್ರೀರಾಮನು ಸಮರನೀತಿಯನ್ನನುಸರಿಸಿ ವಾನರಸೇನೆಯನ್ನು ವ್ಯೂಹಾಕಾರವಾಗಿ ವಿಭಜಿಸಬೇಕೆಂದು ಉದ್ದೇಶಿಸಿ, ವಾನರಸೇನಾಪತಿಗಳನ್ನು ಕರೆದು ಈ ರೀತಿಯಲ್ಲಿ ನಿಯಮಿಸಿದನು (೧೩) : ''ಅಜೇಯನಾದ ಅಂಗದನೂ ನೀಲನೂ ತಮ್ಮ ವಾನರವಾಹಿನಿಯೊಡನೆ ವ್ಯೂಹದ ವಕ್ಷೋಭಾಗದಲ್ಲಿ ನಿಂತಿರಲಿ. ವಾನರೋತ್ತಮನಾದ ಋಷಭನು ತನ್ನ ಸೇನೆಯೊಡನೆ ದಕ್ಷಿಣದಲ್ಲಿರಲಿ (೧೪–೧೫). ಮತ್ತಮತಂಗಜದಂತೆ ದುರ್ಧರ್ಷನೂ ವೇಗಶಾಲಿಯೂ ಆದ ಗಂಧಮಾದನನು ಎಡಭಾಗದಲ್ಲಿ ನಿಂತಿರಲಿ. ನಾನು ಲಕ್ಷ್ಮಣಸಮೇತನಾಗಿ ವಾನರಸೇನೆಯ ಮುಂದುಗಡೆ ನಿಂತಿರುವೆನು! ಜಾಂಬವಂತ, ಸುಷೇಣ, ವೇಗದರ್ಶಿ– ಈ ಮೂವರು ವೀರರು ವ್ಯೂಹದ ಮಧ್ಯಭಾಗದಲ್ಲಿದ್ದು ಸೇನಾ

ಋಕ್ಷಮುಖ್ಯಾ ಮಹಾತ್ಮಾನಃ ಕುಕ್ಷಿಂ ರಕ್ಷಂತು ತೇ ತ್ರಯಃ ।
ಜಘನಂ ಕಪಿಸೇನಾಯಾಃ ಕಪಿರಾಜೋಽಭಿರಕ್ಷತು ॥ ೧೮

ಪಶ್ಚಾರ್ಧಮಿವ ಲೋಕಸ್ಯ ಪ್ರಚೇತಾಸ್ತೇಜಸಾ ವೃತಃ ।
ಸುವಿಭಕ್ತಮಹಾವ್ಯೂಹಾ ಮಹಾವಾನರರಕ್ಷಿತಾ ॥ ೧೯

ಅನೀಕಿನೀ ಸ ವಿಬಭೌ ಯಥಾ ದ್ಯೌಃ ಸಾಭ್ರಸಂಪ್ಲವಾ ।
ಪ್ರಗೃಹ್ಯ ಗಿರಿಶೃಂಗಾಣಿ ಮಹತಶ್ಚ ಮಹೀರುಹಾನ್ ॥ ೨೦

ಆಸೇದುರ್ವಾನರಾ ಲಂಕಾಂ ಮಿಮರ್ದಯಿಷವೋ ರಣೇ ।
ಶಿಖರೈರ್ವಿಕಿರಾಮ್ಯೈನಾಂ ಲಂಕಾಂ ಮುಷ್ಟಿಭಿರೇವ ವಾ ॥ ೨೧

ಇತಿ ಸ್ಮ ದಧಿರೇ ಸರ್ವೇ ಮನಾಂಸಿ ಹರಿಸತ್ತಮಾಃ ।
ತತೋ ರಾಮೋ ಮಹಾತೇಜಾಃ ಸುಗ್ರೀವಮಿದಮಬ್ರವೀತ್ ॥ ೨೨

ಸುವಿಭಕ್ತಾನಿ ಸೈನ್ಯಾನಿ ಶುಕ ಏಷ ವಿಮುಚ್ಯತಾಮ್ ।
ರಾಮಸ್ಯ ವಚನಂ ಶ್ರುತ್ವಾ ವಾನರೇಂದ್ರೋ ಮಹಾಬಲಃ ॥ ೨೩

---

ರಕ್ಷಣೆಯನ್ನು ನೋಡಿಕೊಳ್ಳತಕ್ಕದ್ದು (೧೬–೧೭). ವಾನರೇಶ್ವರನಾದ ಸುಗ್ರೀವನು ವ್ಯೂಹದ ಹಿಂಭಾಗದಲ್ಲಿ ನಿಂತು, ಸೇನೆಯನ್ನು ರಕ್ಷಿಸುತ್ತಿರಲಿ. ತೇಜಸ್ವಿಯಾದ ವರುಣನು ಭೂಲೋಕದ ಪಶ್ಚಿಮಭಾಗವನ್ನು ಕಾಪಾಡುವಂತೆ, ನಮ್ಮ ವಾನರಸೇನೆಯನ್ನು ಸುಗ್ರೀವನು ನೋಡಿಕೊಳ್ಳುತ್ತಿರಲಿ'' ಎಂದು ಗೊತ್ತುಮಾಡಿದನು (೧೮). ಅನಂತರ ಆ ಮಹಾವಾನರಸೇನೆಯು ವ್ಯೂಹಾಕಾರದಿಂದ ವಿಭಕ್ತವಾಗಿ, ಸೇನಾಧ್ಯಕ್ಷರಿಂದ ರಕ್ಷಿತವಾಗಿ, ಯುದ್ಧಕ್ಕೆ ಸಜ್ಜಾಗಿ ನಿಂತಿತು; ತೆರೆತೆರೆಯಾಗಿ ನುಗ್ಗಿಬಂದ ಕಾರ್ಮೋಡಗಳಿಂದ ಮುಚ್ಚಿದ ಆಕಾಶದಂತೆ ಕಂಗೊಳಿಸಿತು (೧೯). ಆ ವಾನರವೀರರು ಪರ್ವತ ಶಿಖರಗಳನ್ನೂ ದೊಡ್ಡ ದೊಡ್ಡ ಮರಗಳನ್ನೂ ಹೊತ್ತು ನಿಂತು ರಣರಂಗದಲ್ಲಿ ಲಂಕೆಯನ್ನು ಧ್ವಂಸಮಾಡಬೇಕೆಂದು ಉದ್ದೇಶಿಸಿದರು. 'ಗಿರಿಶಿಖರಗಳಿಂದ ಅಪ್ಪಳಿಸಿಯೋ ಮುಷ್ಟಿಗಳಿಂದ ಗುದ್ದಿಯೋ ಲಂಕೆಯನ್ನು ಪುಡಿ ಪುಡಿಮಾಡಿ ತೊಡೆದುಹಾಕಬೇಕು' ಎಂದು ಮನಸ್ಸಿನಲ್ಲಿ ಸಂಕಲ್ಪಸಿದರು (೨೦–೨೧). ಆಮೇಲೆ ಶ್ರೀರಾಮನು ಸುಗ್ರೀವನನ್ನು ನೋಡಿ ''ಮಿತ್ರ, ನಮ್ಮ ಸೇನೆಯನ್ನು ವಿಂಗಡಿಸಿ ವ್ಯೂಹಾಕಾರವಾಗಿ ನಿಲ್ಲಿಸಿದ್ದಾಯಿತು. ಇನ್ನು ಆ ಶುಕನನ್ನು

ಮೋಚಯಾಮಾಸ ತುಂ ದೂತಂ ಶುಕಂ ರಾಮಸ್ಯ ಶಾಸನಾತ್ ।
ಮೋಚಿತೋ ರಾಮವಾಕ್ಯೇನ ವಾನರೈಶ್ಚಾಭಿಪೀಡಿತಃ ॥ ೨೪

ಶುಕಃ ಪರಮಸಂತ್ರಸ್ತೋ ರಕ್ಷೋऽಧಿಪಮುಪಾಗಮತ್ ।
ರಾವಣಃ ಪ್ರಹಸನ್ನೇವ ಶುಕಂ ವಾಕ್ಯಮಭಾಷತ ॥ ೨೫

ಕಿಮಿಮೌ ತೇ ಸಿತೌ ಪಕ್ಷೌ ಲೂನಪಕ್ಷಶ್ಚ ದೃಶ್ಯಸೇ ।
ಕಚ್ಚಿನ್ನಾನೇಕಚಿತ್ತಾನಾಂ ತೇಷಾಂ ತ್ವಂ ವಶಮಾಗತಃ ॥ ೨೬

ತತಃ ನ ಭಯಸಂವಿಗ್ನಸ್ತಥಾ ರಾಜ್ಞಾಭಿಚೋದಿತಃ ।
ವಚನಂ ಪ್ರತ್ಯುವಾಚೇದಂ ರಾಕ್ಷಸಾಧಿಪಮುತ್ತಮಮ್ ॥ ೨೭

ಸಾಗರಸ್ಯೋತ್ತರೇ ತೀರೇऽಬ್ರವಂ ತೇ ವಚನಂ ತಥಾ ।
ಯಥಾಸಂದೇಶಮಕ್ಲಿಷ್ಟಂ ಸಾಂತ್ವಯನ್ ಶ್ಲಕ್ಷ್ಣಯಾ ಗಿರಾ ॥ ೨೮

ಕ್ರುದ್ಧೈಸ್ತೈರಹಮುತ್ಪ್ಲುತ್ಯ ದೃಷ್ಟಮಾತ್ರೈಃ ಪ್ಲವಂಗಮೈಃ ।
ಗೃಹೀತೋऽಸ್ಮ್ಯಪಿ ಚಾರಬ್ಧೋ ಹಂತುಂ ಲೋಪ್ತುಂ ಚ ಮುಷ್ಟಿಭಿಃ

---

ಬಿಟ್ಟುಬಿಡು'' ಎಂದನು ಶ್ರೀರಾಮನ ಆಜ್ಞೆಯಂತೆ ಆ ವಾನರೇಂದ್ರನು ಶುಕನನ್ನು ಸೆರೆಯಿಂದ ಬಿಡಿಸಿ ಕಳಿಸಿಬಿಟ್ಟನು ಕಪಿಗಳ ಕೈಗೆ ಸಿಕ್ಕಿ ಹಿಂಸೆಗೊಳಗಾದ ಶುಕನು ಈ ರೀತಿಯಲ್ಲಿ ಶ್ರೀರಾಮನ ಆಜ್ಞೆಯಂತೆ ಬಿಡುಗಡೆ ಹೊಂದಿದನು (೨೨-೨೪). ಹೆದರಿ ಕಂಗಾಲಾಗಿದ್ದ ಆ ಶುಕನು ಅಲ್ಲಿಂದ ರಾಕ್ಷಸರಾಜನ ಬಳಿಗೆ ಹೋದನು. ಶುಕನ ದುರವಸ್ಥೆಯನ್ನು ನೋಡಿ ರಾವಣನು ನಗುತ್ತ ''ಶುಕ. ಏನಯ್ಯಾ ಇದು! ನಿನ್ನ ರೆಕ್ಕೆಗಳನ್ನು ಕಟ್ಟಿ ಬಿಗಿದಿದ್ದರೋ ಹೇಗೆ ? ರೆಕ್ಕೆಗಳು ಹರಿದುಹೋದಂತೆ ಕಾಣುತ್ತವೆಯಲ್ಲ! ಚಪಲಸ್ವಭಾವದ ಕಪಿಗಳ ಕೈಗೆ ಸಿಕ್ಕಿಬೀಳಲಿಲ್ಲವಷ್ಟೆ?'' ಎಂದು ಕೇಳಿದನು (೨೫-೨೬). ಹೀಗೆ ರಾಕ್ಷಸೇಂದ್ರನು ಕೇಳಲಾಗಿ ಶುಕನು ಭಯದಿಂದ ತಡವರಿಸುತ್ತ ''ಮಹಾರಾಜ, ನಾನು ಸಮುದ್ರದ ಉತ್ತರ ತೀರಕ್ಕೆ ಹೋಗಿ ಸುಗ್ರೀವನನ್ನು ಕಂಡು ನಿನ್ನ ಸಂದೇಶವನ್ನು ಮೃದುವಚನಗಳಿಂದ ತಿಳಿಸಿದೆನು. ನನ್ನನ್ನು ಕಂಡೊಡನೆ ಕ್ರುದ್ಧರಾದ ಕಪಿಗಳು ಆಕಾಶಕ್ಕೆ ನೆಗೆದು ನನ್ನನ್ನು ಹಿಡಿದುಕೊಂಡು ಮುಷ್ಟಿಗಳಿಂದ ಗುದ್ದಿ ಕೊಲ್ಲಲಾರಂಭಿಸಿದರು (೨೭-೨೯).

**ನೈವ ಸಂಭಾಷಿತುಂ ಶಕ್ಯಾಃ ಸಂಪ್ರಶ್ನೋಽತ್ರ ನ ಲಭ್ಯತೇ ।**
**ಪ್ರಕೃತ್ಯಾ ಕೋಪನಾಸ್ತೀಕ್ಷ್ಣಾ ವಾನರಾ ರಾಕ್ಷಸಾಧಿಪ ॥ ೩೦**

**ಸ ಚ ಹಂತಾ ವಿರಾಧಸ್ಯ ಕಬಂಧಸ್ಯ ಖರಸ್ಯ ಚ ।**
**ಸುಗ್ರೀವಸಹಿತೋ ರಾಮಃ ಸೀತಾಯಾಃ ಪದಮಾಗತಃ ॥ ೩೧**

**ಸ ಕೃತ್ವಾ ಸಾಗರೇ ಸೇತುಂ ತೀರ್ತ್ವಾ ಚ ಲವಣೋದಧಿಮ್ ।**
**ಏಷ ರಕ್ಷಾಂಸಿ ನಿರ್ಧೂಯ ಧನ್ವೀ ತಿಷ್ಠತಿ ರಾಘವಃ ॥ ೩೨**

**ಋಕ್ಷವಾನರಮುಖ್ಯಾನಾಮನೀಕಾನಿ ಸಹಸ್ರಶಃ ।**
**ಗಿರಿಮೇಘನಿಕಾಶಾನಾಂ ಛಾದಯಂತಿ ವಸುಂಧರಾಮ್ ॥ ೩೩**

**ರಾಕ್ಷಸಾನಾಂ ಬಲೌಘಸ್ಯ ವಾನರೇಂದ್ರಬಲಸ್ಯ ಚ ।**
**ನೈತಯೋರ್ವಿದ್ಯತೇ ಸಂಧಿರ್ದೇವದಾನವಯೋರಿವ ॥ ೩೪**

**ಪುರಾ ಪ್ರಾಕಾರಮಾಯಾಂತಿ ಕ್ಷಿಪ್ರಮೇಕತರಂ ಕುರು ।**
**ಸೀತಾಂ ವಾಸ್ಮೈ ಪ್ರಯಚ್ಛಾಶು ಯುದ್ಧಂ ವಾಪಿ ಪ್ರದೀಯತಾಮ್ ॥**

---

ಮಾತನಾಡಲು ನನಗೆ ಅವಕಾಶವನ್ನೇ ಕೊಡಲಿಲ್ಲ. ಪ್ರಶ್ನೋತ್ತರಗಳಿಗೆ ಸಮಯವೇ ಇಲ್ಲ! ಆ ಕಪಿಗಳು, ರಾಕ್ಷಸೇಶ್ವರ, ಬಹಳ ಕೋಪಿಷ್ಠರು; ಉಗ್ರಸ್ವಭಾವದವರು. ವಿರಾಧಕಬಂಧರನ್ನೂ ಖರನನ್ನೂ ಸಂಹರಿಸಿರುವ ರಾಮನು ಸುಗ್ರೀವಸಹಿತನಾಗಿ, ಸೀತೆಯಿರುವ ಸ್ಥಳವನ್ನೇ ಹುಡುಕಿಕೊಂಡು ಬಂದುಬಿಟ್ಟಿದ್ದಾನೆ (೩೦–೩೧). ಆತನು ಕಡಲಿಗೆ ಸೇತುವೆಯನ್ನು ಕಟ್ಟಿ ದಾಟಿಬಂದಿದ್ದಾನೆ. ರಾಕ್ಷಸರನ್ನು ಲೆಕ್ಕಿಸದೆ ಧನುರ್ಧಾರಿಯಾಗಿ ಬಂದು ನಿಂತಿದ್ದಾನೆ. ಬೆಟ್ಟಗಳಂತೆಯೂ ಮೋಡಗಳಂತೆಯೂ ಮಹೋನ್ನತಕಾಯರಾದ ಭಲ್ಲೂಕ ವಾನರ ಯೋಧರು ಭೂಮಂಡಲವನ್ನು ಮುಚ್ಚುವಂತೆ ಬಂದು ತರುಬಿದ್ದಾರೆ (೩೨–೩೩). ವಾನರೇಂದ್ರನಾದ ಸುಗ್ರೀವನ ಸೇನೆಗೂ ನಮ್ಮ ರಾಕ್ಷಸರ ಸೇನೆಗೂ ಸಂಧಾನವಾಗುವ ಸಂಭವವಿಲ್ಲ. ಹೊಡೆದಾಡಲು ದೇವ ದಾನವರು ರಣರಂಗಕ್ಕೆ ಇಳಿದಂತಾಗಿದೆ (೩೪). ಅವರು ಲಂಕೆಯ ಕೋಟೆಗೆ ಲಗ್ಗೆ ಹತ್ತುವುದರೊಳಗೆ ಯಾವುದಾದರೂ ಒಂದನ್ನು ಬೇಗನೆ ನಿರ್ಣಯಿಸು : ಸೀತೆಯನ್ನಾದರೂ ರಾಮನಿಗೆ ಒಪ್ಪಿಸು, ಇಲ್ಲವೆ, ಯುದ್ಧವನ್ನಾದರೂ ಹೂಡು''

**ಶುಕಸ್ಯ ವಚನಂ ಶ್ರುತ್ವಾ ರಾವಣೋ ವಾಕ್ಯಮಬ್ರವೀತ್ ।**
**ರೋಷಸಂರಕ್ತನಯನೋ ನಿರ್ದಹನ್ನಿವ ಚಕ್ಷುಷಾ ॥ ೩೬**

**ಯದಿ ಮಾಂ ಪ್ರತಿ ಯುಧ್ಯೇರನ್ ದೇವಗಂಧರ್ವದಾನವಾಃ ।**
**ನೈವ ಸೀತಾಂ ಪ್ರಯಚ್ಛಾಮಿ ಸರ್ವಲೋಕಭಯಾದಪಿ ॥ ೩೭**

**ಕದಾ ನಾಮಾಭಿಧಾವಂತಿ ರಾಘವಂ ಮಾಮಕಾಃ ಶರಾಃ ।**
**ವಸಂತೇ ಪುಷ್ಪಿತಂ ಮತ್ತಾ ಭ್ರಮರಾ ಇವ ಪಾದಪಮ್ ॥ ೩೮**

**ಕದಾ ತೂಣೀಶಯೈರ್ದೀಪ್ತೈರ್ಗಣಶಃ ಕಾರ್ಮುಕಚ್ಯುತೈಃ ।**
**ಶರೈರಾದೀಪಯಾಮ್ಯೇನಮುಲ್ಕಾಭಿರಿವ ಕುಂಜರಮ್ ॥ ೩೯**

**ತಚ್ಚಾಸ್ಯ ಬಲಮಾದಾಸ್ಯೇ ಬಲೇನ ಮಹತಾ ವೃತಃ ।**
**ಜ್ಯೋತಿಷಾಮಿವ ಸರ್ವೇಷಾಂ ಪ್ರಭಾಮುದ್ಯನ್ ದಿವಾಕರಃ ॥ ೪೦**

**ಸಾಗರಸ್ಯೇವ ಮೇ ವೇಗೋ ಮಾರುತಸ್ಯೇವ ಮೇ ಗತಿಃ ।**
**ನ ಹಿ ದಾಶರಥಿರ್ವೇದ ತೇನ ಮಾಂ ಯೋದ್ಧುಮಿಚ್ಛತಿ ॥ ೪೧**

ಎಂದು ನಿವೇದಿಸಿದನು. ಶುಕನ ಮಾತನ್ನು ಕೇಳಿ ರಾವಣನ ಕಣ್ಣುಗಳು ಕೆಂಪಡರಿದವು ! (೩೫–೩೬). ಶುಕನನ್ನು ಸುಟ್ಟುಬಿಡುವನೋ ಎಂಬಂತೆ ದುರದುರನೆ ನೋಡುತ್ತ ''ಎಲೈ ಶುಕ, ದೇವದಾನವ ಗಂಧರ್ವರೇ ಬಂದು ನನ್ನನ್ನು ಎದುರಿಸಿದರೂ ಸೀತೆಯನ್ನು ಹಿಂದಿರುಗಿಸುವುದಿಲ್ಲ! ಮೂರು ಲೋಕಗಳೇ ಎದುರಾಗಿ ಹೆದರಿಸಿದರೂ ಸೀತೆಯನ್ನು ಒಪ್ಪಿಸುವುದಿಲ್ಲ! (೩೭). ವಸಂತಕಾಲದಲ್ಲಿ ಅರಳಿದ ಮರವನ್ನು ದುಂಬಿಗಳು ಮುಸುಕುವಂತೆ, ನನ್ನ ಘೋರಶರಗಳು ಯಾವಾಗ ರಾಮನನ್ನು ಅರಸುತ್ತಹೋಗಿ ಎರಗುವುವೋ ಎಂದು ಕಾದಿದ್ದೇನೆ! ಬತ್ತಳಿಕೆಯಲ್ಲಿ ವಿಶ್ರಮಿಸುತ್ತಿರುವ ನನ್ನ ದೀಪ್ತಾಸ್ತ್ರಗಳನ್ನು ಭುಗಿಲ್ಲೆಂದು ಧನುಸ್ಸಿನಿಂದ ಸಿಡಿಸಿ, ಕೊಳ್ಳಿಗಳಿಂದ ಕಾಡಾನೆಯನ್ನು ಸುಡಿಸಿ ಓಡಿಸುವಂತೆ, ಯಾವಾಗ ರಾಮನನ್ನು ಹೆದರಿಸಿ ಓಡಿಸುವೆನೋ ಎಂದು ಕಾದಿದ್ದೇನೆ! (೩೮–೩೯). ಪ್ರಜ್ವಲಿಸುತ್ತ ಉದಿಸಿಬರುವ ಭಾಸ್ಕರನು ಸಕಲ ತಾರಾಗಣಗಳ ಪ್ರಭೆಯನ್ನು ಹೀರುವಂತೆ, ನನ್ನ ಅದ್ಭುತವಾದ ತೇಜಸ್ಸಿನಿಂದ ಅವನ ಬಲವನ್ನು ಹೀರಿಬಿಡುವೆನು! ಎಲೈ ಶುಕ, ಮಹಾ ಸಾಗರದಂತೆ ನನ್ನ ವೇಗವು ದುರ್ವಾರವಾದುದು. ಚಂಡಮಾರುತದಂತೆ ನನ್ನ ಗತಿಶಕ್ತಿಯು ದುರ್ಧರ್ಷವಾದುದು. ಆ ದಶರಥನ ಮಗನಿಗೆ ಇದು

ನ ಮೇ ತೂಣೀಶಯಾನ್ ಬಾಣಾನ್ ಸವಿಷಾನಿವ ಪನ್ನಗಾನ್ ।
ರಾಮಃ ಪಶ್ಯತಿ ಸಂಗ್ರಾಮೇ ತೇನ ಮಾಂ ಯೋದ್ಧುಮಿಚ್ಛತಿ ॥ ೪೨

ನ ಜಾನಾತಿ ಪುರಾ ವೀರ್ಯಂ ಮಮ ಯುದ್ಧೇ ಸ ರಾಘವಃ ।
ಮಮ ಚಾಪಮಯೀಂ ವೀಣಾಂ ಶರಕೋಣೈಃ ಪ್ರವಾದಿತಾಮ್ ॥೪೩

ಜ್ಯಾ ಶಬ್ದ ತುಮುಲಾಂ ಘೋರಾಮಾರ್ತಭೀತಮಹಾಸ್ವನಾಮ್ ।
ನಾರಾಚತಲಸಂನಾದಾಂ ತಾಂ ಮಮಾಹಿತವಾಹಿನೀಮ್ ॥ ೪೪

ಅವಗಾಹ್ಯ ಮಹಾರಂಗಂ ವಾದಯಿಷ್ಯಾಮ್ಯಹಂ ರಣೇ ॥

ನ ವಾಸವೇನಾಪಿ ಸಹಸ್ರಚಕ್ಷುಷಾ
ಯಥಾಸ್ಮಿ ಶಕ್ಯೋ ವರುಣೇನ ವಾ ಸ್ವಯಮ್ ।
ಯಮೇನ ವಾ ಧರ್ಷಯಿತುಂ ಶರಾಗ್ನಿನಾ
ಮಹಾಹವೇ ವೈಶ್ರವಣೇನ ವಾ ಪುನಃ ॥ ೪೫

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುರ್ವಿಂಶಃ ಸರ್ಗಃ

---

ಗೊತ್ತಿಲ್ಲ! ಆದ್ದರಿಂದ ನನ್ನೊಡನೆ ಯುದ್ಧಮಾಡಲು ಬಯಸಿ ಬಂದಿದ್ದಾನೆ (೪೦–೪೧). ನನ್ನ ಬತ್ತಳಿಕೆಯಲ್ಲಿ ವಿಷಸರ್ಪಗಳಂತಿರುವ ಬಾಣಗಳ ರುಚಿಯನ್ನು ಅವನು ಯುದ್ಧದಲ್ಲಿ ಹಿಂದೆ ಕಂಡವನಲ್ಲ! ಆದ್ದರಿಂದ ರಾಮನು ನನ್ನೊಡನೆ ಯುದ್ಧಮಾಡಲು ಬಂದಿದ್ದಾನೆ ರಣರಂಗದಲ್ಲಿ ನನ್ನ ಪರಾಕ್ರಮ ವೇನೆಂಬುದು ರಾಮನಿಗೆ ತಿಳಿಯದು. ಎಲೈ ಶುಕ, ನನ್ನ ಚಾಪವೆಂಬ ವೀಣೆ ಯನ್ನು ಅಸ್ತ್ರಗಳೆಂಬ ಕೋಲುಗಳಿಂದ ಸಂಗ್ರಾಮಭೂಮಿಯಲ್ಲಿ ನುಡಿಸುವೆನು! (೪೨–೪೩). ಘೋರವಾದ ಧನುಷ್ಟಂಕಾರದೊಡನೆ ಆರ್ತರ – ಭೀತರ ಹಾಹಾಕಾರವು ಕೂಡಿಹೋಗಲಿ! ಬಾಣಗಳ ಭರ್‍ರೆಂಬ ನಾದವು ಸೇರಿಕೊಳ್ಳಲಿ! ಶತ್ರುಗಳನ್ನು ಬಡಿದೋಡಿಸುವ ನನ್ನ ರುದ್ರವೀಣೆಯನ್ನು ರಣರಂಗದಲ್ಲಿ ನುಡಿಸುವೆನು (೪೪). ಎಲೈ ದೂತ, ಸಾವಿರ ಕಣ್ಣುಗಳಿರುವ ಇಂದ್ರನೇ ಬರಲಿ, ಸಾಕ್ಷಾತ್ ವರುಣನೇ ಬರಲಿ – ನನ್ನನ್ನು ಗೆಲ್ಲಲು ಸಾಧ್ಯವಿಲ್ಲ, ಮೃತ್ಯುವೇ ಆಗಲಿ, ಕುಬೇರನೇ ಆಗಲಿ – ರಣಭೂಮಿಯಲ್ಲಿ ನನ್ನನ್ನು ಎದುರಿಸ ಲಾರನು'' ಎಂದು ಗುಡುಗಿದನು (೪೫).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಇಪ್ಪತ್ತುನಾಲ್ಕನೆಯ ಸರ್ಗ

## ಪಂಚವಿಂಶಃ ಸರ್ಗಃ

### ಶುಕಸಾರಣಪ್ರೇಷಣಾದಿಕಮ್

**ಸಬಲೇ ಸಾಗರಂ ತೀರ್ಣೇ ರಾಮೇ ದಶರಥಾತ್ಮಜೇ ।**
**ಅಮಾತ್ಯೌ ರಾವಣಃ ಶ್ರೀಮಾನಬ್ರವೀಚ್ಛುಕಸಾರಣೌ ॥ ೧**

**ಸಮಗ್ರಂ ಸಾಗರಂ ತೀರ್ಣಂ ದುಸ್ತರಂ ವಾನರಂ ಬಲಮ್ ।**
**ಅಭೂತಪೂರ್ವಂ ರಾಮೇಣ ಸಾಗರೇ ಸೇತುಬಂಧನಮ್ ॥ ೨**

**ಸಾಗರೇ ಸೇತುಬಂಧಂ ತು ನ ಶ್ರದ್ದಧ್ಯಾಂ ಕಥಂಚನ ।**
**ಅವಶ್ಯಂ ಚಾಪಿ ಸಂಖ್ಯೇಯಂ ತನ್ಮಯಾ ವಾನರಂ ಬಲಮ್ ॥ ೩**

**ಭವಂತೌ ವಾನರಂ ಸೈನ್ಯಂ ಪ್ರವಿಶ್ಯಾನುಪಲಕ್ಷಿತೌ ।**
**ಪರಿಮಾಣಂ ಚ ವೀರ್ಯಂ ಚ ಯೇ ಚ ಮುಖ್ಯಾಃ ಪ್ಲವಂಗಮಾಃ ॥**

### ಸರ್ಗ ೨೫

ಶ್ರೀರಾಮನ ಯುದ್ಧಸನ್ನಾಹವನ್ನು ತಿಳಿಯುವುದಕ್ಕಾಗಿ ರಾವಣನು
ಶುಕ ಸಾರಣರನ್ನು ಕಳಿಸುವುದು, ಅವರು ಹೋಗಿಬಂದು
ರಾವಣನಿಗೆ ಬುದ್ಧಿವಾದವನ್ನು ಹೇಳುವುದು.

ದಶರಥಾತ್ಮಜನಾದ ರಾಘವನು ವಾನರಬಲಸಮೇತನಾಗಿ ಸಮುದ್ರವನ್ನು ದಾಟಿಬರಲಾಗಿ, ಇತ್ತ ರಾವಣನು ಶುಕ ಸಾರಣರೆಂಬ ಅಮಾತ್ಯರನ್ನು ಕರೆಸಿ ಹೀಗೆಂದನು: ''ಎಲೈ ಅಮಾತ್ಯರೆ, ಸಮಸ್ತವಾನರಬಲವೂ ದುಸ್ತರವಾದ ಸಮುದ್ರವನ್ನು ದಾಟಿ ಬಂದಿದೆಯಂತೆ. ರಾಮನು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿರುವಂತೆ ಇದು ಹಿಂದೆ ಯಾವಾಗಲೂ ನಡೆಯದ ಅದ್ಭುತವೇ ಸರಿ (೧–೨). ಸಮುದ್ರದಲ್ಲಿ ಸೇತುಬಂಧವಾದೀತೆಂಬುದನ್ನಂತೂ ನಾನೆಂದಿಗೂ ನಂಬಿರಲಿಲ್ಲ. ಇರಲಿ ವಾನರರ ಸಂಖ್ಯೆ ಎಷ್ಟು? ಅವರ ಸಾಮರ್ಥ್ಯವೆಷ್ಟು? ಎಂದು ಈಗ ತಿಳಿಯಲೇಬೇಕಾಗಿದೆ. ಆದ್ದರಿಂದ ನೀವೀರ್ವರೂ ಯಾರಿಗೂ ತಿಳಿಯದಂತೆ ಕಪಿಸೇನೆಯನ್ನು ಪ್ರವೇಶಿಸಿ, ಅವರ ಸಂಖ್ಯೆಯೆಷ್ಟು, ಸಾಮರ್ಥ್ಯವೆಷ್ಟು, ಮುಖ್ಯರಾದ ಕಪಿನಾಯಕರು ಯಾರುಯಾರು? – ಎಂಬುದನ್ನು ತಿಳಿದು ಬನ್ನಿರಿ (೩–೪).

ಮಂತ್ರಿಣೋ ಯೇ ಚ ರಾಮಸ್ಯ ಸುಗ್ರೀವಸ್ಯ ಚ ಸಂಮತಾಃ ।
ಯೇ ಪೂರ್ವಮಭಿವರ್ತಂತೇ ಯೇ ಚ ಶೂರಾಃ ಪ್ಲವಂಗಮಾಃ ॥ ೫

ಸ ಚ ಸೇತುರ್ಯಥಾ ಬದ್ಧಃ ಸಾಗರೇ ಸಲಿಲಾಶಯೇ ।
ನಿವೇಶಂ ಚ ಯಥಾ ತೇಷಾಂ ವಾನರಾಣಾಂ ಮಹಾತ್ಮನಾಮ್ ॥ ೬

ರಾಮಸ್ಯ ವ್ಯವಸಾಯಂ ಚ ವೀರ್ಯಂ ಪ್ರಹರಣಾನಿ ಚ ।
ಲಕ್ಷ್ಮಣಸ್ಯ ಚ ವೀರಸ್ಯ ತತ್ತ್ವತೋ ಜ್ಞಾತುಮರ್ಹಥಃ ॥ ೭

ಕಶ್ಚ ಸೇನಾಪತಿಸ್ತೇಷಾಂ ವಾನರಾಣಾಂ ಮಹೌಜಸಾಮ್ ।
ಏತಜ್ಜ್ಞಾತ್ವಾ ಯಥಾ ತತ್ತ್ವಂ ಶೀಘ್ರಮಾಗಂತುಮರ್ಹಥಃ ॥ ೮

ಇತಿ ಪ್ರತಿಸಮಾದಿಷ್ಟೌ ರಾಕ್ಷಸೌ ಶುಕಸಾರಣೌ ।
ಹರಿರೂಪಧರೌ ವೀರೌ ಪ್ರವಿಷ್ಟೌ ವಾನರಂ ಬಲಮ್ ॥ ೯

ತತಸ್ತದ್ವಾನರಂ ಸೈನ್ಯಮಚಿಂತ್ಯಂ ರೋಮಹರ್ಷಣಮ್ ।
ಸಂಖ್ಯಾತುಂ ನಾಧ್ಯಗಚ್ಛೇತಾಂ ತದಾ ತೌ ಶುಕಸಾರಣೌ ॥ ೧೦

---

ರಾಮನಿಗೂ ಸುಗ್ರೀವನಿಗೂ ವಿಶ್ವಾಸಪಾತ್ರರಾದ ಮಂತ್ರಿಗಳು ಯಾರು, ಮೊದಲು ಯುದ್ಧಕ್ಕೆ ನುಗ್ಗುವ ಧೀರರಾರು, ವಾನರರಲ್ಲಿ ಯಾರು ಗ್ಚಟಿಗರು? – ಎಂಬುದನ್ನು ತಿಳಿದುಕೊಳ್ಳಿರಿ. ಅಲ್ಲದೆ ಸಮುದ್ರದಲ್ಲಿ ಸೇತುವೆಯನ್ನು ಯಾವ ಪ್ರಕಾರದಿಂದ ಕಟ್ಟಿದರು, ಸೇನಾನಿವೇಶವೆಲ್ಲಿ? ಎಂಬುದನ್ನರಿಯಿರಿ (೫–೬). ಈಗ ರಾಮನು ಯಾವ ಕಾರ್ಯೋದ್ಯಮದಲ್ಲಿದ್ದಾನೆ, ಅವನ ಪರಾಕ್ರಮವೆಂತಹುದು, ಅವನು ಬಳಸುವ ಆಯುಧಗಳು ಯಾವ ಬಗೆಯವು? – ಎಂಬುದನ್ನು ತಿಳಿದುಬರಬೇಕು. ಹಾಗೆಯೇ ಲಕ್ಷ್ಮಣನ ಶೌರ್ಯವನ್ನೂ ಯಥಾರ್ಥವಾಗಿ ತಿಳಿದುಬನ್ನಿರಿ. ಎಲೈ ಅಮಾತ್ಯರೆ, ಸಾಹಸಿಗಳಾದ ಆ ವಾನರರ ಸೇನಾಪತಿ ಯಾರೆಂಬುದನ್ನೂ ಗೊತ್ತುಮಾಡಿಕೊಂಡು ಶೀಘ್ರದಲ್ಲಿ ಬರತಕ್ಕದ್ದು'' ಎಂದು ನಿಯಮಿಸಿದನು (೭–೮). ಆಗ ರಾವಣನ ಆಜ್ಞೆಯಂತೆ ಶುಕ ಸಾರಣರೆಂಬ ಆ ರಾಕ್ಷಸರು ಮಾಯೆಯಿಂದ ಕಪಿವೇಷನವನ್ನು ತಾಳಿ, ಸುಗ್ರೀವನ ಕಪಿಗಳೊಳಗೆ ನುಸುಳಿದರು. ಆ ಸೇನೆಯಾದರೋ ಮೈನವಿರೇಳಿಸುವಂತೆ ಊಹಾತೀತವಾಗಿ ಅಸಂಖ್ಯಾತವಾಗಿತ್ತು. ಅದರ ಪರಿಮಾಣವನ್ನು ಗೊತ್ತು ಮಾಡಲು ಶುಕ ಸಾರಣರಿಗೆ ಸಾಧ್ಯವಾಗಲಿಲ್ಲ

ಸಂಸ್ಥಿತಂ ಪರ್ವತಾಗ್ರೇಷು ನಿರ್ಝರೇಷು ಗುಹಾಸು ಚ ।
ಸಮುದ್ರಸ್ಯ ಚ ತೀರೇಷು ವನೇಷೂಪವನೇಷು ಚ ॥ ೧೧

ತರಮಾಣಂ ಚ ತೀರ್ಣಂ ಚ ತರ್ತುಕಾಮಂ ಚ ಸರ್ವಶಃ ।
ನಿವಿಷ್ಟಂ ನಿವಿಶಚ್ಚೈವ ಭೀಮನಾದಂ ಮಹಾಬಲಮ್ ॥ ೧೨

ತದ್ಬಲಾರ್ಣವಮಕ್ಷೋಭ್ಯಂ ದದೃಶಾತೇ ನಿಶಾಚರೌ ।
ತೌ ದದರ್ಶ ಮಹಾತೇಜಾಃ ಪ್ರತಿಚ್ಛನ್ನೌ ವಿಭೀಷಣಃ ॥ ೧೩

ಆಚಚಕ್ಷೇಽಥ ರಾಮಾಯ ಗೃಹೀತ್ವಾ ಶುಕಸಾರಣೌ ।
ತಸ್ಯೇಮೌ ರಾಕ್ಷಸೇಂದ್ರಸ್ಯ ಮಂತ್ರಿಣೌ ಶುಕಸಾರಣೌ ॥ ೧೪

ಲಂಕಾಯಾಃ ಸಮನುಪ್ರಾಪ್ತೌ ಚಾರೌ ಪರಪುರಂಜಯ ।
ತೌ ದೃಷ್ಟ್ವಾ ವ್ಯಥಿತೌ ರಾಮಂ ನಿರಾಶೌ ಜೀವಿತೇ ತದಾ ॥ ೧೫

ಕೃತಾಂಜಲಿಪುಟೌ ಭೀತೌ ವಚನಂ ಚೇದಮೂಚತುಃ ।
ಆವಾಮಿಹಾಗತೌ ಸೌಮ್ಯ ರಾವಣಪ್ರಹಿತಾವುಭೌ ॥ ೧೬

---

(೯–೧೦). ಗಿರಿಶಿಖರಗಳು, ನಿರ್ಝರಗಳು, ಗುಹೆಗಳು, ಸಮುದ್ರತೀರ, ವನೋಪವನಗಳು – ಇವುಗಳಲ್ಲಿ ಕೊನೆಮೊದಲಿಲ್ಲದೆ ವಾನರಸೇನೆಯು ನೆರೆದು ಹೋಗಿತ್ತು, ಇನ್ನೂ ಕೆಲವು ವಾನರರು ಸೇತುವೆಯನ್ನು ದಾಟಿಬರುತ್ತಿದ್ದರು, ಕೆಲವರು ಆಗತಾನೇ ಬಂದಿದ್ದರು, ಅವಕಾಶವಿಲ್ಲದೆ ಕೆಲವರು ತಮ್ಮ ಸರದಿಗಾಗಿ ಸಮುದ್ರದ ಆಚೆಗೆ ಕಾದಿದ್ದರು ! ಕೆಲವರು ಬಂದು ಠಾಣ್ಯಹೂಡಿದ್ದರು; ಕೆಲವರು ಠಾಣ್ಯಹೂಡಲು ಹವಣಿಸುತ್ತಿದ್ದರು! ಎಲ್ಲೆಲ್ಲಿಯೂ ಕೋಲಾಹಲ, ಗದ್ದಲ! (೧೧–೧೨). ಈ ರೀತಿಯಲ್ಲಿ ಇನ್ನೊಂದು ಮಹಾಸಾಗರದಂತಿದ್ದ ವಾನರಸೇನೆಯನ್ನು ಆ ರಾಕ್ಷಸರು ಕಂಡರು. ಹೀಗೆ ವೇಷಮರೆಸಿಕೊಂಡು ಸುತ್ತಾಡುತ್ತಿದ್ದ ಅವರನ್ನು ವಿಭೀಷಣನು ಗುರುತುಹಿಡಿದನು! ಕೂಡಲೆ ಅವರನ್ನು ಬಂಧಿಸಿ ಶ್ರೀರಾಮನ ಬಳಿಗೆ ಕರೆದೊಯ್ದು "ಶ್ರೀರಾಮ, ಇವರಿಬ್ಬರು ರಾವಣನ ಮಂತ್ರಿಗಳು. ಇವನು ಶುಕ, ಇವನು ಸಾರಣ (೧೩–೧೪). ಗೂಢಚರ್ಯೆಯನ್ನು ನಡೆಸುವುದಕ್ಕಾಗಿ ಇವರು ಲಂಕೆಯಿಂದ ಬಂದಿದ್ದಾರೆ!'' ಎಂದು ತಿಳಿಸಿದನು. ಶುಕ ಸಾರಣರು ಬದುಕುವ ಆಸೆಯನ್ನು ತೊರೆದು ಭಯದಿಂದ ನಡುಗುತ್ತ ಶ್ರೀ ರಾಮನಿಗೆ ಕೈಮುಗಿದು "ಸೌಮ್ಯ–

ಪರಿಜ್ಞಾತುಂ ಬಲಂ ಕೃತ್ಸ್ನಂ ತವೇದಂ ರಘುನಂದನ ।
ತಯೋಸ್ತದ್ವಚನಂ ಶ್ರುತ್ವಾ ರಾಮೋ ದಶರಥಾತ್ಮಜಃ ॥ ೧೭

ಅಬ್ರವೀತ್ಪ್ರಹಸನ್ ವಾಕ್ಯಂ ಸರ್ವಭೂತಹಿತೇ ರತಃ ।
ಯದಿ ದೃಷ್ಟಂ ಬಲಂ ಕೃತ್ಸ್ನಂ ವಯಂ ವಾ ಸುಪರೀಕ್ಷಿತಾಃ ॥ ೧೮

ಯಥೋಕ್ತಂ ವಾ ಕೃತಂ ಕಾರ್ಯಂ ಛಂದತಃ ಪ್ರತಿಗಮ್ಯತಾಮ್ ।
ಅಥ ಕಿಂಚಿದದೃಷ್ಟಂ ವಾ ಭೂಯಸ್ತದ್ದ್ರಷ್ಟುಮರ್ಹಥಃ ॥ ೧೯

ವಿಭೀಷಣೋ ವಾ ಕಾರ್ತ್ಸ್ನ್ಯೇನ ಭೂಯಃ ಸಂದರ್ಶಯಿಷ್ಯತಿ ।
ನ ಚೇದಂ ಗ್ರಹಣಂ ಪ್ರಾಪ್ಯ ಭೇತವ್ಯಂ ಜೀವಿತಂ ಪ್ರತಿ ॥ ೨೦

ನ್ಯಸ್ತಶಸ್ತ್ರೌ ಗೃಹೀತೌ ವಾ ನ ದೂತೌ ವಧಮರ್ಹಥಃ ।
ಪ್ರಚ್ಛನ್ನೌ ಚ ವಿಮುಂಚ್ಯೇತೌ ಚಾರೌ ರಾತ್ರಿಂಚರಾವುಭೌ ॥ ೨೧

ಶತ್ರುಪಕ್ಷಸ್ಯ ಸತತಂ ವಿಭೀಷಣ ವಿಕರ್ಷಣೌ ।
ಪ್ರವಿಶ್ಯ ನಗರೀಂ ಲಂಕಾಂ ಭವದ್ಭ್ಯಾಂ ಧನುದಾನುಜಃ ॥ ೨೨

---

ರಘುನಂದನ, ನಾವಿಬ್ಬರು ರಾವಣನ ಆಜ್ಞೆಯಂತೆ ಬಂದವರು ಹೌದು (೧೫–೧೬). ನಿನ್ನ ಸೇನಾಬಲವನ್ನರಿಯಲು ಬಂದೆವು'' ಎಂದು ಹೇಳಿದರು. ಅದನ್ನು ಕೇಳಿ ಶ್ರೀರಾಮನಿಗೆ ನಗು ಬಂದಿತು. ಸರ್ವಭೂತಗಳ ಹಿತದಲ್ಲಿ ನಿರತನಾದ ಆ ದಶರಥಾತ್ಮಜನು ''ಒಳ್ಳೆಯದು. ನಮ್ಮ ಸೇನೆಯೆಲ್ಲವನ್ನೂ ಸರಿಯಾಗಿ ನೋಡಿದಿರಾ? ನಮ್ಮನ್ನು ಪರೀಕ್ಷಿಸಿದ್ದಾಯಿತೆ? (೧೭–೧೮). ವಹಿಸಿಕೊಂಡ ಕಾರ್ಯವೆಲ್ಲವೂ ಮುಗಿದಿದ್ದರೆ ಯಥೇಷ್ಟವಾಗಿ ಹೊರಟುಹೋಗಬಹುದು! ಇನ್ನೇನಾದರೂ ನೋಡಬೇಕಾದ್ದು ಉಳಿದಿದ್ದರೆ, ಅದನ್ನೂ ನೋಡಬಹುದು! ಬೇಕಾದರೆ ವಿಭೀಷಣನೇ ಸ್ವತಃ ಬಂದು ಸಕಲವನ್ನೂ ಮತ್ತೆ ತೋರಿಸಿ ವಿವರಿಸುವನು! 'ಸೆರೆಸಿಕ್ಕಿದೆವಾದ್ದರಿಂದ ಇನ್ನು ನಮ್ಮ ಪ್ರಾಣ ಉಳಿಯದು' ಎಂದು ಹೆದರಬೇಡಿರಿ (೧೯–೨೦). ಆಯುಧವಿಲ್ಲದವರನ್ನೂ ದೂತರನ್ನೂ ಕೈಗೆ ಸಿಕ್ಕಿದರೆಂದು ಕೊಲ್ಲುವುದು ಯುಕ್ತವಲ್ಲ. ವಿಭೀಷಣ, ಈ ಇಬ್ಬರು ಗೂಢಚಾರರನ್ನೂ ಬಿಟ್ಟುಬಿಡು. ಶತ್ರುಪಕ್ಷದ ರಹಸ್ಯವನ್ನು ಭೇದಿಸುವುದಕ್ಕಾಗಿ ಇವರು ಬಂದಿರುವವರಾದರೂ, ವಿಭೀಷಣ, ಬಿಟ್ಟುಬಿಡು'' ಎಂದನು. ಅನಂತರ ಆ ರಾಕ್ಷಸರನ್ನು ಕುರಿತು ''ಎಲೈ ಶುಕ ಸಾರಣರೆ,

ವಕ್ತವ್ಯೋ ರಕ್ಷಸಾಂ ರಾಜಾ ಯಥೋಕ್ತಂ ವಚನಂ ಮಮ ।
ಯದ್ಬಲಂ ಚ ಸಮಾಶ್ರಿತ್ಯ ಸೀತಾಂ ಮೇ ಹೃತವಾನಸಿ ॥ ೨೩

ತದ್ದರ್ಶಯ ಯಥಾಕಾಮಂ ಸಸೈನ್ಯಃ ಸಹಬಾಂಧವಃ ।
ಶ್ವಃ ಕಲ್ಯೇ ನಗರೀಂ ಲಂಕಾಂ ಸಪ್ರಾಕಾರಾಂ ಸತೋರಣಾಮ್ ॥ ೨೪

ರಕ್ಷಸಾಂ ಚ ಬಲಂ ಪಶ್ಯ ಶರೈರ್ವಿಧ್ವಂಸಿತಂ ಮಯಾ ।
ಕ್ರೋಧಂ ಭೀಮಮಹಂ ಮೋಕ್ಷ್ಯೇ ಸಸೈನ್ಯೇ ತ್ವಯಿ ರಾವಣ ॥ ೨೫

ಶ್ವಃ ಕಲ್ಯೇ ವಜ್ರವಾನ್ ವಜ್ರಂ ದಾನವೇಷ್ವಿವ ವಾಸವಃ ।
ಇತಿ ಪ್ರತಿಸಮಾದಿಷ್ಟೌ ರಾಕ್ಷಸೌ ಶುಕಸಾರಣೌ ॥ ೨೬

ಜಯೇತಿ ಪ್ರತಿನಂದ್ಯೈತೌ ರಾಘವಂ ಧರ್ಮವತ್ಸಲಮ್ ।
ಆಗಮ್ಯ ನಗರೀಂ ಲಂಕಾಮಬ್ರೂತಾಂ ರಾಕ್ಷಸಾಧಿಪಮ್ ॥ ೨೭

---

ನೀವು ಲಂಕೆಗೆ ಹೋಗಿ ಕುಬೇರನ ತಮ್ಮನಾದ ರಾಕ್ಷಸರಾಜನಿಗೆ ನಾನು ಹೇಳಿದೆನೆಂದು ಈ ಮಾತನ್ನು ತಿಳಿಸಿ (೨೧–೨೨): 'ರಾವಣ, ಯಾವ ನಿನ್ನ ಶೌರ್ಯವನ್ನು ನೆಚ್ಚಿ ನನ್ನ ಸೀತೆಯನ್ನು ಕದ್ದೊಯ್ದೆಯೋ, ಆ ಶೌರ್ಯವನ್ನು ಈಗ ಯಥೇಷ್ಟವಾಗಿ ಮೆರೆಸು! ನಿನ್ನ ಸೈನ್ಯವನ್ನೂ ನೆಚ್ಚಿದ ಬಂಧುಗಳನ್ನೂ ಕರೆದುಕೊಂಡು ಬಾ ನಾಳೆ ಪ್ರಾತಃಕಾಲದಲ್ಲಿ ನಿನ್ನ ಲಂಕಾನಗರಿ, ಕೋಟೆಕೊತ್ತಲಗಳು, ಪುರದ್ವಾರಗಳು, ನಿನ್ನ ರಾಕ್ಷಸಸೈನ್ಯ – ಎಲ್ಲವೂ ನನ್ನ ಶರಗಳಿಂದ ಧೂಳೆದ್ದುಹೋಗುವುದನ್ನು ನೋಡುತ್ತಿರು! (೨೩–೨೪). ನಿನ್ನ ಮೇಲೆ– ನಿನ್ನ ಸೇನೆಯಮೇಲೆ ನನ್ನ ಉಗ್ರಕೋಪವನ್ನು ಹೇಗೆ ಪ್ರಯೋಗಿಸುವೆನೆಂಬುದನ್ನು ನೋಡಬಹುದು. ನಾಳೆಯ ಪ್ರಾತಃಕಾಲ, ರಾವಣ, ವಜ್ರಧಾರಿಯಾದ ಇಂದ್ರನು ದಾನವರಮೇಲೆ ವಜ್ರಾಯುಧವನ್ನು ಬಳಸುವಂತೆ, ನನ್ನ ಭೀಮಕ್ರೋಧವನ್ನು ಪ್ರದರ್ಶಿಸುವೆನು!'' ಎಂದು ಹೇಳಿದನು (೨೫–೨೬). ಹೀಗೆ ಶ್ರೀರಾಮನ ಸಂದೇಶವನ್ನು ಕೇಳಿದ ಶುಕಸಾರಣರು ಅವನ ಧರ್ಮವಾತ್ಸಲ್ಯಕ್ಕೆ ಮೆಚ್ಚಿ 'ಜಯ ಜಯ' ಎಂದು ಅಭಿನಂದಿಸಿ ಲಂಕೆಗೆ ಹಿಂದಿರುಗಿದರು. ಅವರು ರಾವಣನನ್ನು ಕಂಡು ಹೀಗೆಂದರು (೨೭):

ವಿಭೀಷಣಗೃಹೀತೌ ತು ವಧಾರ್ಹೌ ರಾಕ್ಷಸೇಶ್ವರ ।
ದೃಷ್ಟ್ವಾ ಧರ್ಮಾತ್ಮನಾ ಮುಕ್ತೌ ರಾಮೇಣಾಮಿತತೇಜಸಾ ॥ ೨೮

ಏಕಸ್ಥಾನಗತಾ ಯತ್ರ ಚತ್ವಾರಃ ಪುರುಷರ್ಷಭಾಃ ।
ಲೋಕಪಾಲೋಪಮಾಃ ಶೂರಾಃ ಕೃತಾಸ್ತ್ರಾ ದೃಢವಿಕ್ರಮಾಃ ॥ ೨೯

ರಾಮೋ ದಾಶರಥಿಃ ಶ್ರೀಮಾನ್ ಲಕ್ಷ್ಮಣಶ್ಚ ವಿಭೀಷಣಃ ।
ಸುಗ್ರೀವಶ್ಚ ಮಹಾತೇಜಾ ಮಹೇಂದ್ರಸಮವಿಕ್ರಮಃ ॥ ೩೦

ಏತೇ ಶಕ್ತಾಃ ಪುರೀಂ ಲಂಕಾಂ ಸಪ್ರಾಕಾರಾಂ ಸತೋರಣಾಂ ।
ಉತ್ಪಾಟ್ಯ ಸಂಕ್ರಾಮಯಿತುಂ ಸರ್ವೇ ತಿಷ್ಠಂತು ವಾನರಾಃ ॥ ೩೧

ಯಾದೃಶಂ ತಸ್ಯ ರಾಮಸ್ಯ ರೂಪಂ ಪ್ರಹರಣಾನಿ ಚ ।
ವಧಿಷ್ಯತಿ ಪುರೀಂ ಲಂಕಾಮೇಕಸ್ತಿಷ್ಠಂತು ತೇ ತ್ರಯಃ ॥ ೩೨

ರಾಮಲಕ್ಷ್ಮಣಗುಪ್ತಾ ಸಾ ಸುಗ್ರೀವೇಣ ಚ ವಾಹಿನೀ ।
ಬಭೂವ ದುರ್ಧರ್ಷತರಾ ಸೇಂದ್ರೈರಪಿ ಸುರಾಸುರೈಃ ॥ ೩೩

"ರಾಕ್ಷಸೇಶ್ವರ, (ನಿನ್ನ ಅಪ್ಪಣೆಯಂತೆ ನಾವು ಕಪಿವೇಷದಿಂದ ವಾನರ ಸೇನೆಯನ್ನು ಪ್ರವೇಶಿಸಿದೆವು). ವಿಭೀಷಣನು ನಮ್ಮ ಗುರುತು ಹಿಡಿದು ನಮ್ಮನ್ನು ಬಂಧಿಸಿದನು. ನಾವು ವಧಾರ್ಹವಾದ ಅಪರಾಧವನ್ನು ಮಾಡಿದ್ದರೂ, ಮಹಾರಾಜ, ಧರ್ಮಾತ್ಮನಾದ ರಾಮನು ನಮ್ಮನ್ನು ಬಿಡುಗಡೆ ಮಾಡಿಸಿದನು. ಅವನು ಮಹಾತೇಜಸ್ವಿ ಎಂಬುದು ನಿಶ್ಚಯ (೨೮). ಈಗ ಶತ್ರುಪಕ್ಷದಲ್ಲಿ ನಾಲ್ವರು ಪುರುಷಶ್ರೇಷ್ಠರಿದ್ದಾರೆ. ಅವರು ದಿಕ್ಪಾಲರಂತೆ ಶೂರರೂ ಅಸ್ತ್ರವಿದ್ಯಾವಿಶಾರದರೂ ಮಹಾಪರಾಕ್ರಮಿಗಳೂ ಆಗಿದ್ದಾರೆ. ಅವರು ಯಾರೆಂದರೆ: ರಾಮ, ಲಕ್ಷ್ಮಣ, ವಿಭೀಷಣ ಮತ್ತು ಸುಗ್ರೀವ. ಸುಗ್ರೀವನು ತೇಜಸ್ವಿಯೂ ಮಹೇಂದ್ರಸಮ ಪರಾಕ್ರಮಿಯೂ ಹೌದು (೨೯–೩೦). ಮಹಾರಾಜ, ಈ ನಾಲ್ವರೇ ನಮ್ಮ ಲಂಕಾಪುರವನ್ನು ಪ್ರಾಕಾರಪುರದ್ವಾರಸಹಿತವಾಗಿ ಕಿತ್ತೊಗೆದು ವಿಧ್ವಂಸಗೊಳಿಸಬಲ್ಲರು. ಉಳಿದ ವಾನರರ ವಿಷಯ ಹಾಗಿರಲಿ! (೩೧). ರಾಮನ ಠೀವಿಯನ್ನೂ ಅವನ ಆಯುಧಗಳ ವೈಖರಿಯನ್ನೂ ನೋಡಿದರೆ, ಲಕ್ಷ್ಮಣಾದಿಗಳೂ ಬೇಡ, ಅವನೊಬ್ಬನೇ ಲಂಕೆಯನ್ನು ಧೂಳೆಬ್ಬಿಸಬಲ್ಲನೆಂದು ತೋರುತ್ತದೆ! (೩೨). ಮಹಾಪ್ರಭು, ರಾಮಲಕ್ಷ್ಮಣರಿಂದಲೂ ಸುಗ್ರೀವನಿಂದಲೂ ಸುರಕ್ಷಿತವಾದ

ವ್ಯಕ್ತಃ ಸೇತುಸ್ತಥಾ ಬದ್ಧೋ ದಶಯೋಜನವಿಸ್ತೃತಃ ।
ಶತಯೋಜನಮಾಯಾಮಸ್ತೀರ್ಣಾ ಸೇನಾ ಚ ಸಾಗರಮ್ ॥ ೩೪

ನಿವಿಷ್ಟೋ ದಕ್ಷಿಣೇ ತೀರೇ ರಾಮಃ ಸ ಚ ನದೀಪತೇಃ ।
ತೀರ್ಣಸ್ಯ ತರಮಾಣಸ್ಯ ಬಲಸ್ಯಾಂತೋ ನ ವಿದ್ಯತೇ ॥ ೩೫

ಪ್ರಹೃಷ್ಟರೂಪಾ ಧ್ವಜಿನೀ ವನೌಕಸಾಂ
ಮಹಾತ್ಮನಾಂ ಸಂಪ್ರತಿ ಯೋದ್ಧುಮಿಚ್ಛತಾಂ ।
ಅಲಂ ವಿರೋಧೇನ ಶಮೋ ವಿಧೀಯತಾಂ
ಪ್ರದೀಯತಾಂ ದಾಶರಥಾಯ ಮೈಥಿಲೀ ॥ ೩೬

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚವಿಂಶಃ ಸರ್ಗಃ

---

ವಾನರಸೇನೆಯು ಅತ್ಯಂತ ದುರ್ಧರ್ಷವಾದುದು. ಇಂದ್ರನಿಗೂ ಸುರಾಸುರರಿಗೂ ಅಜೇಯವಾದುದು. ಅವರು ಕಟ್ಟಿದ ಸೇತುವೆ ಹತ್ತುಯೋಜನ ಅಗಲವಾಗಿಯೂ ನೂರುಯೋಜನ ಉದ್ದವಾಗಿಯೂ ಇದೆ. ವಾನರಸೇನೆಯು ಕಡಲನ್ನು ದಾಟಬಂದಿದೆ (೩೩–೩೪). ರಾಮನು ಕಡಲಿನ ತೆಂಕಣತೀರದಲ್ಲಿ ಠಾಣ್ಯಹೂಡಿದ್ದಾನೆ. ಕಪಿಸೇನೆಯು ಇನ್ನೂ ಬರುತ್ತಲೇ ಇದೆ. ಅದಕ್ಕೆ ಇತಿಮಿತಿಗಳೇ ಇಲ್ಲ! ಯುದ್ಧೋತ್ಸಾಹದಿಂದ ತುಳುಕುತ್ತಿರುವ ವಾನರಯೋಧರ ಆ ಮಹಾಸೇನೆಯು ಹರ್ಷದಿಂದ ಉಬ್ಬುತ್ತಿದೆ. ಮಹಾಸ್ವಾಮಿ, ರಾಮನೊಡನೆ ವಿರೋಧ ಬೇಡ. ಶಾಂತಿಸಂಧಾನವನ್ನು ಮಾಡಿಕೊಳ್ಳುವುದುತ್ತಮ. ರಾಮನಿಗೆ ಮೈಥಿಲಿಯನ್ನೊಪ್ಪಿಸಬೇಕೆಂದು ಬೇಡಿಕೊಳ್ಳುತ್ತೇವೆ'' ಎಂದು ನಿವೇದಿಸಿದರು (೩೫–೩೬).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಇಪ್ಪತ್ತೈದನೆಯ ಸರ್ಗ

---

## ಷಡ್ವಿಂಶಃ ಸರ್ಗಃ

### ಕಪಿಬಲಾವೇಕ್ಷಣಮ್

ತದ್ವಚಃ ಪಥ್ಯಮಕ್ಲೀಬಂ ಸಾರಣೇನಾಭಿಭಾಷಿತಮ್ ।
ನಿಶಮ್ಯ ರಾವಣೋ ರಾಜಾ ಪ್ರತ್ಯಭಾಷತ ಸಾರಣಮ್ ॥ ೧

ಯದಿ ಮಾಮಭಿಯುಂಜೀರನ್ ದೇವಗಂಧರ್ವದಾನವಾಃ ।
ನೈವ ಸೀತಾಂ ಪ್ರದಾಸ್ಯಾಮಿ ಸರ್ವಲೋಕಭಯಾದಪಿ ॥ ೨

ತ್ವಂ ತು ಸೌಮ್ಯ ಪರಿತ್ರಸ್ತೋ ಹರಿಭಿಃ ಪೀಡಿತೋ ಭೃಶಮ್ ।
ಪ್ರತಿಪ್ರದಾನಮದ್ಯೈವ ಸೀತಾಯಾಃ ಸಾಧು ಮನ್ಯಸೇ ॥ ೩

ಕೋ ಹಿ ನಾಮ ಸಪತ್ನೋ ಮಾಂ ಸಮರೇ ಜೇತುಮರ್ಹತಿ ।
ಇತ್ಯುಕ್ತ್ವಾ ಪರುಷಂ ವಾಕ್ಯಂ ರಾವಣೋ ರಾಕ್ಷಸಾಧಿಪಃ ॥ ೪

ಆರುರೋಹ ತತಃ ಶ್ರೀಮಾನ್ ಪ್ರಾಸಾದಂ ಹಿಮಪಾಂಡುರಮ್ ।
ಬಹುತಾಲಸಮುತ್ಸೇಧಂ ರಾವಣೋಽಥ ದಿದೃಕ್ಷಯಾ ॥ ೫

### ಸರ್ಗ ೨೬

ಕಪಿಸೇನೆಯನ್ನು ತಾನು ನೋಡಬೇಕೆಂದು ರಾವಣನು ಉನ್ನತಸೌಧವನ್ನೇರುವುದು.
ಸಾರಣನು ಕಪಿವೀರರನ್ನು ರಾವಣನಿಗೆ ತೋರಿಸುವುದು.

ಹೀಗೆ ಸಾರಣನು ಧೈರ್ಯದಿಂದ ಹಿತವಾಕ್ಯವನ್ನು ನುಡಿಯಲು, ಅದನ್ನಾಲಿಸುತ್ತಿದ್ದ ರಾವಣನು ಕೋಪದಿಂದ "ಎಲೈ ಸಾರಣ, (ನೀನು ಹೇಳುವುದೇನು?) ದೇವದಾನವಗಂದರ್ವರೇ ಬಂದು ಒತ್ತಾಯಪಡಿಸಿದರೂ ಸೀತೆಯನ್ನೆಂದಿಗೂ ಬಿಟ್ಟುಕೊಡುವುದಿಲ್ಲ. ಸಮಸ್ತ ಲೋಕಗಳು ಹೆದರಿಸಿದರೂ ನಾನು ಬಗ್ಗುವವನಲ್ಲ (೧–೨). ನೀನು, ಎಲಾ ಸೌಮ್ಯ, ವಾನರರ ಕೈಗೆ ಸಿಕ್ಕಿ ಬಳಲಿ ತೊಳಲಿ ಕಂಗೆಟ್ಟಿರುವುದರಿಂದ, ಓಹೋ! ಸೀತೆಯನ್ನೀಗಲೇ ಒಪ್ಪಿಸಿಬಿಡಬೇಕೆಂದು ಭಾವಿಸಿದಂತಿದೆ! ರಣರಂಗದಲ್ಲಿ ನನ್ನನ್ನು ಜಯಿಸಬಲ್ಲ ಶತ್ರುವಾದರೂ ಯಾವನವನು?'' ಎಂದು ಕಠೋರವಾಕ್ಯದಿಂದ ಧಿಕ್ಕರಿಸಿ ನುಡಿದನು (೩–೪). ಅನಂತರ ಆ ರಾಕ್ಷಸಾಧಿಪನು ತಾನೇ ಕಪಿಸೇನೆಯನ್ನು

ತಾಭ್ಯಾಂ ಚರಾಭ್ಯಾಂ ಸಹಿತೋ ರಾವಣಃ ಕ್ರೋಧಮೂರ್ಛಿತಃ ।
ಪಶ್ಯಮಾನಃ ಸಮುದ್ರಂ ಚ ಪರ್ವತಾಂಶ್ಚ ವನಾನಿ ಚ ॥ ೬

ದದರ್ಶ ಪೃಥಿವೀದೇಶಂ ಸುಸಂಪೂರ್ಣಂ ಪ್ಲವಂಗಮೈಃ ।
ತದಪಾರಮಸಂಖ್ಯೇಯಂ ವಾನರಾಣಾಂ ಮಹದ್ಬಲಮ್ ॥ ೭

ಆಲೋಕ್ಯ ರಾವಣೋ ರಾಜಾ ಪರಿಪಪ್ರಚ್ಛ ಸಾರಣಮ್ ।
ಏಷಾಂ ವಾನರಮುಖ್ಯಾನಾಂ ಕೇ ಶೂರಾಃ ಕೇ ಮಹಾಬಲಾಃ ॥ ೮

ಕೇ ಪೂರ್ವಮಭಿವರ್ತಂತೇ ಮಹೋತ್ಸಾಹಾಃ ಸಮಂತತಃ ।
ಕೇಷಾಂ ಶೃಣೋತಿ ಸುಗ್ರೀವಃ ಕೇ ವಾ ಯೂಥಪಯೂಥಪಾಃ ॥ ೯

ಸಾರಣಾಚಕ್ಷ್ವ ತತ್ತ್ವೇನ ಕಿಂಪ್ರಭಾವಾಃ ಪ್ಲವಂಗಮಾಃ ।
ಸಾರಣೋ ರಾಕ್ಷಸೇಂದ್ರಸ್ಯ ವಚನಂ ಪರಿಪೃಚ್ಛತಃ ॥ ೧೦

ಆಚಚಕ್ಷೇಽಥ ಮುಖ್ಯಜ್ಞೋ ಮುಖ್ಯಾಂಸ್ತತ್ರ ವನೌಕಸಃ ।
ಏಷ ಯೋಽಭಿಮುಖೋ ಲಂಕಾಂ ನರ್ದಂಸ್ತಿಷ್ಠತಿ ವಾನರಃ ॥ ೧೧

---

ಪರಿಶೀಲಿಸಬೇಕೆಂದು ಉದ್ದೇಶಿಸಿ, ಅನೇಕ ತಾಳವೃಕ್ಷಗಳಷ್ಟು ಉನ್ನತವಾಗಿಯೂ ಹಿಮರಾಶಿಯಂತೆ ಶುಭ್ರವಾಗಿಯೂ ಇದ್ದ ಸೌಧವೊಂದನ್ನೇರಿದನು. ಶುಕ ಸಾರಣರು ಅವನನ್ನು ಹಿಂಬಾಲಿಸಿ ಹೋದರು. ರಾವಣನಂತೂ ಸಿಟ್ಟಿನಿಂದ ಕಿಡಿಕಿಡಿಯಾಗಿದ್ದನು. ಅವನು ಸೌಧವನ್ನೇರಿ ದೂರದಲ್ಲಿದ್ದ ಸಮುದ್ರ, ಪರ್ವತ, ವನಗಳತ್ತ ಕಣ್ಣುಹೊರಳಿಸಿದನು (೫–೬). ಆ ಪ್ರದೇಶದ ಭೂಭಾಗವೆಲ್ಲವೂ ಕಪಿಸೇನೆಯಿಂದ ಕಿಕ್ಕಿರಿದುಹೋಗಿತ್ತು. ಕೊನೆಮೊದಲಿಲ್ಲದೆ ಅಸಂಖ್ಯಾತವಾಗಿ ನೆರೆದಿದ್ದ ವಾನರವಾಹಿನಿಯನ್ನು ನೋಡಿ, ರಾವಣನು ಸಾರಣನನ್ನು ಕರೆದು "ಸಾರಣ, ಈ ವಾನರಸೈನಿಕರಲ್ಲಿ ಯಾರು ಶೂರರು? ಯಾರು ಬಲಾಢ್ಯರು? (೭–೮). ಉತ್ಸಾಹದಿಂದ ಮೊದಲು ನುಗ್ಗಿ ಬರಬಲ್ಲ ಧೀರರಾರು? ಇವರಲ್ಲಿ ಯಾರ ಮಾತನ್ನು ಸುಗ್ರೀವನು ಕೇಳುತ್ತಾನೆ? ಪ್ರಮುಖರಾದ ಯೂಥಪತಿಗಳಾರು? ಸಾರಣ, ಈ ಕಪಿಗಳ ಸಾಮರ್ಥ್ಯವಾದರೂ ಏನು? ನಿನಗೆ ತಿಳಿದಂತೆ ಯಥಾರ್ಥವಾಗಿ ಹೇಳು" ಎಂದು ಪ್ರಶ್ನಿಸಿದನು (೯–೧೦). ಹೀಗೆ ರಾಕ್ಷಸೇಂದ್ರನು ಕೂತೂಹಲದಿಂದ ಕೇಳಲು, ವಾನರಸೇನೆಯ ಮುಖ್ಯಾಂಶಗಳನ್ನು ತಿಳಿದುಬಂದಿದ್ದ ಸಾರಣನು ಕೆಲವು

ಯೂಥಪಾನಾಂ ಸಹಸ್ರಾಣಾಂ ಶತೇನ ಪರಿವಾರಿತಃ ।
ಯಸ್ಯ ಘೋಷೇಣ ಮಹತಾ ಸಪ್ರಾಕಾರಾ ಸತೋರಣಾ ॥ ೧೨

ಲಂಕಾ ಪ್ರವೇಪತೇ ಸರ್ವಾ ಸಶೈಲವನಕಾನನಾ ।
ಸರ್ವಶಾಖಾಮೃಗೇಂದ್ರಸ್ಯ ಸುಗ್ರೀವಸ್ಯ ಮಹಾತ್ಮನಃ ॥ ೧೩

ಬಲಾಗ್ರೇ ತಿಷ್ಠತೇ ವೀರೋ ನೀಲೋ ನಾಮ್ನೈಷ ಯೂಥಪಃ ।
ಬಾಹೂ ಪ್ರಗೃಹ್ಯ ಯಃ ಪದ್ಭ್ಯಾಂ ಮಹೀಂ ಗಚ್ಛತಿ ವೀರ್ಯವಾನ್ ॥

ಲಂಕಾಮಭಿಮುಖಃ ಕ್ರೋಧಾದಭೀಕ್ಷ್ಣಂ ಚ ವಿಜೃಂಭತೇ ।
ಗಿರಿಶೃಂಗಪ್ರತೀಕಾಶಃ ಪದ್ಮಕಿಂಜಲ್ಕ ಸನ್ನಿಭಃ ॥ ೧೫

ಸ್ಫೋಟಯತ್ಯಭಿಸಂರಬ್ಧೋ ಲಾಂಗೂಲಂ ಚ ಪುನಃ ಪುನಃ ।
ಯಸ್ಯ ಲಾಂಗೂಲಶಬ್ದೇನ ಸ್ವನಂತಿ ಪ್ರದಿಶೋ ದಶ ॥ ೧೬

ಏಷ ವಾನರರಾಜೇನ ಸುಗ್ರೀವೇಣಾಭಿಷೇಚಿತಃ ।
ಯೌವರಾಜ್ಯೇಽಂಗದೋ ನಾಮ ತ್ವಾಮಾಹ್ವಯತಿ ಸಂಯುಗೇ ॥ ೧೭

---

ಕಪಿನಾಯಕರನ್ನು ತೋರಿಸಿ ವಿವರಿಸಿ ಹೇಳಿದನು : ''ಮಹಾರಾಜ, ಇತ್ತ ನೋಡು. ಒಬ್ಬ ವಾನರನು ಲಂಕಾಭಿಮುಖವಾಗಿ ನಿಂತು ಗರ್ಜಿಸುತ್ತಿರುವವನಲ್ಲ! (೧೧). ಒಂದು ಲಕ್ಷಯೂಥಪತಿಗಳಿಂದ ಅವನು ಪರಿವೃತನಾಗಿದ್ದಾನೆ. ಅವನ ವೀರಗರ್ಜನೆಗೆ ಪ್ರಾಕಾರತೋರಣಸಹಿತವಾಗಿ ಲಂಕಾನಗರವು ಶೈಲಾರಣ್ಯಗಳೂ ಅದುರುತ್ತಿವೆ! ವಾನರೇಶ್ವರನಾದ ಸುಗ್ರೀವನ ಸಮಸ್ತ ಸೇನೆಗೂ ಅವನೇ ಪ್ರಧಾನ ಸೇನಾನಿ. ಆತನ ಹೆಸರು ನೀಲ (೧೨–೧೩). ಅಲ್ಲಿ ಇನ್ನೊಬ್ಬ ವಾನರವೀರನು ಕೈಗಳನ್ನು ಮೇಲೆತ್ತಿ ನೆಲದ ಮೇಲೆ ನಿಂತಿರುವನಲ್ಲವೆ? ಲಂಕಾಭಿಮುಖವಾಗಿ ಕ್ರೋಧದಿಂದ ವಿಜೃಂಭಿಸುತ್ತಿರುವನಲ್ಲವೆ? ಶೈಲಶೃಂಗ ದಂತೆ ಉನ್ನತಕಾಯನಾಗಿ ಪದ್ಮಕೇಸರದಂತೆ ಹೊಂಬಣ್ಣದವನಾಗಿದ್ದಾನೆ (೧೪–೧೫). ಕೋಪಾವೇಶದಿಂದ ಲಾಂಗೂಲವನ್ನು ಮತ್ತೆಮತ್ತೆ ಬಡಿಯುತ್ತಿದ್ದಾನೆ. ಆ ಶಬ್ದಕ್ಕೆ ದಶದಿಕ್ಕುಗಳೂ ಪ್ರತಿಧ್ವನಿಸುತ್ತಿವೆ. ಮಹಾರಾಜ, ಆತನೇ ಅಂಗದ. ಆತನು ಕಿಷ್ಕಿಂಧೆಗೆ ಯುವರಾಜನೆಂದು ಘೋಷಿಸಿ ಸುಗ್ರೀವನು ಪಟ್ಟಾಭಿಷೇಕಮಾಡಿಸಿದ್ದಾನೆ. ಈ ಅಂಗದನು ನಿನ್ನನ್ನು ಯುದ್ಧಕ್ಕೆ ಕರೆಯುತ್ತಿರುವಂತೆ ಕಾಣುವುದು!

ವಾಲಿನಃ ಸದೃಶಃ ಪುತ್ರಃ ಸುಗ್ರೀವಸ್ಯ ಸದಾ ಪ್ರಿಯಃ ।
ರಾಘವಾರ್ಥೇ ಪರಾಕ್ರಾಂತಃ ಶಕ್ರಾರ್ಥೇ ವರುಣೋ ಯಥಾ ॥ ೧೮

ಏತಸ್ಯ ಸಾ ಮತಿಃ ಸರ್ವಾ ಯದ್ದೃಷ್ಟಾ ಜನಕಾತ್ಮಜಾ ।
ಹನೂಮತಾ ವೇಗವತಾ ರಾಘವಸ್ಯ ಹಿತೈಷಿಣಾ ॥ ೧೯

ಬಹೂನಿ ವಾನರೇಂದ್ರಾಣಾಮೇಷ ಯೂಥಾನಿ ವೀರ್ಯವಾನ್ ।
ಪರಿಗೃಹ್ಯಾಭಿಯಾತಿ ತ್ವಾಂ ಸ್ವೇನಾನೀಕೇನ ದುರ್ಜಯಃ ॥ ೨೦

ಅನು ವಾಲಿಸುತಸ್ಯಾಪಿ ಬಲೇನ ಮಹತಾ ವೃತಃ ।
ವೀರಸ್ತಿಷ್ಠತಿ ಸಂಗ್ರಾಮೇ ಸೇತುಹೇತುರಯಂ ನಲಃ ॥ ೨೧

ಯೇ ತು ವಿಷ್ಟಭ್ಯ ಗಾತ್ರಾಣಿ ಕ್ಷ್ವೇಲಯಂತಿ ನದಂತಿ ಚ ।
ಉತ್ಥಾಯ ಚ ವಿಜೃಂಭಂತೇ ಕ್ರೋಧೇನ ಹರಿಪುಂಗವಾಃ ॥ ೨೨

ಏತೇ ದುಷ್ಪ್ರಸಹಾ ಘೋರಾಶ್ಚಂಡಾಶ್ಚಂಡಪರಾಕ್ರಮಾಃ ।
ಅಷ್ಟೌ ಶತಸಹಸ್ರಾಣಿ ದಶಕೋಟಿಶತಾನಿ ಚ ॥ ೨೩

---

(೧೬–೧೭). ಈತನು ವಾಲಿಗೆ ತಕ್ಕ ಪುತ್ರ. ಸುಗ್ರೀವನಿಗೆ ಇವನನ್ನು ಕಂಡರೆ ಬಹಳ ಪ್ರೀತಿ. ಇಂದ್ರನಿಗಾಗಿ ವರುಣನು ಹೇಗೋ ಹಾಗೆ, ರಾಮನಿಗಾಗಿ ತನ್ನ ಪರಾಕ್ರಮವನ್ನು ಮೆರೆಸಬೇಕೆಂದಿದ್ದಾನೆ (೧೮). ರಾಘವನ ಹಿತೇಚ್ಛೆಯಿಂದ ವೇಗಶಾಲಿಯಾದ ಹನುಮಂತನು ಇಲ್ಲಿಗೆ ಬಂದು ಜನಕಪುತ್ರಿಯನ್ನು ನೋಡಿಹೋದನಷ್ಟೆ. ಈ ಅಂಗದನೇ ಆ ಸಾಹಸಕಾರ್ಯದ ಹಿಂದಿದ್ದ ಬುದ್ಧಿಶಕ್ತಿ! ಈ ವೀರನು ಬಹುಮಂದಿ ವಾನರಯೋಧರೊಡನೆ ಬಂದಿದ್ದಾನೆ. ನಿನ್ನ ಮೇಲೆ ಆಕ್ರಮಣವೆಸಗಲು ಉದ್ದೇಶಿಸಿದ್ದಾನೆ (೧೯–೨೦). ಈ ವಾಲಿಸುತನ ಬಳಿಯಲ್ಲಿ ಮಹತ್ತರವಾದ ಕಪಿಸೇನೆಯೊಡನೆ ಇನ್ನೊಬ್ಬ ವೀರನು ಯುದ್ಧೋತ್ಸಾಹದಿಂದ ನಿಂತಿದ್ದಾನೆ. ಆತನೇ ಸೇತುವೆಯನ್ನು ಕಟ್ಟಿದ ನಳ. ಅವನ ಹಿಂದೆ ಬಹುಮಂದಿ ವಾನರವೀರರು ಮೈಯುಬ್ಬಿಸಿ ಕೂಗುತ್ತ ಗರ್ಜಿಸುತ್ತ ಎದ್ದೆದ್ದು ವಿಜೃಂಭಿಸುತ್ತಿದ್ದಾರಲ್ಲವೆ? (೨೧–೨೨). ಅವರು ಭೀಕರಾಕೃತಿಯವರು, ಉಗ್ರಸ್ವಭಾವದವರು, ಚಂಡಪರಾಕ್ರಮಿಗಳು. ಅವರ ಸಂಖ್ಯೆ ಸಾವಿರಕೋಟಿ ಎಂಬತ್ತುಲಕ್ಷವಿರುವುದು. ಚಂದನವನವಾಸಿ

ಯ ಏನಮನುಗಚ್ಛಂತಿ ವೀರಾಶ್ಚಂದನವಾಸಿನಃ ।
ಏಷ್ಯವಾಶಂಸತೇ ಲಂಕಾಂ ಸ್ವೇನಾ ನೀಕೇನ ಮರ್ದಿತುಮ್ ॥ ೨೪

ಶ್ವೇತೋ ರಜತಸಂಕಾಶಶ್ಚ ಪಲೋ ಭೀಮವಿಕ್ರಮಃ ।
ಬುದ್ಧಿಮಾನ್ ವಾನರೋ ವೀರಸ್ತ್ರಿಷು ಲೋಕೇಷು ವಿಶ್ರುತಃ ॥ ೨೫

ತೂರ್ಣಂ ಸುಗ್ರೀವಮಾಗಮ್ಯ ಪುನರ್ಗಚ್ಛತಿ ಸತ್ವರಃ ।
ವಿಭಜನ್ ವಾನರೀಂ ಸೇನಾಮನೀಕಾನಿ ಪ್ರಹರ್ಷಯನ್ ॥ ೨೬

ಯಃ ಪುರಾ ಗೋಮತೀತೀರೇ ರಮ್ಯಂ ಪರ್ಯೇತಿ ಪರ್ವತಮ್ ।
ನಾಮ್ನಾ ಸಂಕೋಚನೋ ನಾಮ ನಾನಾನಗಯುತೋ ಗಿರಿಃ ॥ ೨೭

ತತ್ರ ರಾಜ್ಯಂ ಪ್ರಶಾಸ್ತ್ಯೇಷ ಕುಮುದೋ ನಾಮ ಯೂಥಪಃ ।
ಯೋಽಸೌ ಶತಸಹಸ್ರಾಣಾಂ ಸಹರ್ಷಂ ಪರಿಕರ್ಷತಿ ॥ ೨೮

ಯಸ್ಯ ವಾಲಾ ಬಹುವ್ಯಾಮಾ ದೀರ್ಘಾ ಲಾಂಗೂಲಮಾಶ್ರಿತಾಃ ।
ತಾಮ್ರಾಃ ಪೀತಾಃ ಸಿತಾಃ ಶ್ವೇತಾಃ ಪ್ರಕೀರ್ಣಾ ಘೋರಕರ್ಮಣಃ ॥

---

ಗಳಾದ ಆ ಯೋಧರೆಲ್ಲರೂ ನಳನ ಕಡೆಯವರು. ನಳನೊಬ್ಬನೇ ತನ್ನ ಸೇನೆಯೊಡನೆ ನುಗ್ಗಿ ನಮ್ಮ ಲಂಕೆಯನ್ನು ಮರ್ದಿಸಬೇಕೆಂದಿದ್ದಾನೆ (೨೩–೨೪). ಮಹಾಪ್ರಭು, ಅತ್ತ ನೋಡು ಬೆಳ್ಳಿಯಂತೆ ಶುಭ್ರವರ್ಣದ ಒಬ್ಬ ವಾನರ ವೀರನು ಕಾಣಿಸುವನಲ್ಲ, ಅವನ ಹೆಸರು ಶ್ವೇತ. ಚಪಲಸ್ವಭಾವದ ಆತನು ಭೀಮವಿಕ್ರಮನೆಂದು ತಿಳಿ. ಆತನು ಬುದ್ಧಿಶಾಲಿಯೆಂದೂ ಶೂರನೆಂದೂ ಮೂರು ಲೋಕಗಳಲ್ಲಿಯೂ ವಿಖ್ಯಾತನಾಗಿದ್ದಾನೆ (೨೫). ಆ ಶ್ವೇತನು ಯಾವುದೋ ನಿಮಿತ್ತವಾಗಿ ಸುಗ್ರೀವನ ಬಳಿಗೆ ಹೋಗಿ ಬೇಗಬೇಗನೆ ಬಂದು ತನ್ನ ವಾನರಸೇನೆಯನ್ನು ವಿಂಗಡಿಸಿ ಸಜ್ಜುಮಾಡುತ್ತಿದ್ದಾನೆ ಅವನ ಆಜ್ಞೆಯನ್ನು ಕೇಳಿ ವಾನರಸೇನೆಯು ಹರ್ಷದಿಂದ ಉಬ್ಬುತ್ತಿದೆ (೨೬). ಮಹಾರಾಜ, ಅದೋ ಅಲ್ಲಿ ಕಾಣತಕ್ಕವನು ಕುಮುದನೆಂಬ ಸೇನಾಪತಿ. ಗೋಮತೀತೀರದಲ್ಲಿರುವ ರಮ್ಯವಾದ ಸಂಕೋಚನಪರ್ವತದಲ್ಲಿ ಅವನು ಕಪಿರಾಜ್ಯವನ್ನು ಪಾಲಿಸುತ್ತಿದ್ದಾನೆ. ಅವನು ಲಕ್ಷಗಟ್ಟಲೆ ತನ್ನ ಸೇನೆಯನ್ನು ತಂದಿದ್ದಾನೆ. ಆತನ ಬಾಲದಲ್ಲಿ ಮಾರುದ್ದದ ಕೂದಲುಗಳಿರುವುದನ್ನು ನೋಡು! ಚಿತ್ರವರ್ಣದ ಆ ರೋಮಗಳು ಕೆಂಪು, ಹಳದಿ, ಬಿಳುಪು, ಅಚ್ಚಬಿಳುಪು ಬಣ್ಣಗಳಿಂದ ಸಂಕೀರ್ಣವಾಗಿವೆ (೨೭–೨೯).

ಅದೀನೋ ರೋಷಣಶ್ಚಂಡಃ ಸಂಗ್ರಾಮಮಭಿಕಾಂಕ್ಷತಿ ।
ಏಷೋಽಪ್ಯಾಶಂಸತೇ ಲಂಕಾಂ ಸ್ವೇನಾನೀಕೇನ ಮರ್ದಿತುಮ್ ॥೩೦

ಯಸ್ತ್ವೇಷ ಸಿಂಹಸಂಕಾಶಃ ಕಪಿಲೋ ದೀರ್ಘಕೇಸರಃ ।
ನಿಭೃತಃ ಪ್ರೇಕ್ಷತೇ ಲಂಕಾಂ ದಿಧಕ್ಷನ್ನಿವ ಚಕ್ಷುಷಾ ॥ ೩೧

ವಿಂಧ್ಯಂ ಕೃಷ್ಣಗಿರಿಂ ಸಹ್ಯಂ ಪರ್ವತಂ ಚ ಸುದರ್ಶನಮ್ ।
ರಾಜನ್ ಸತತಮಧ್ಯಾಸ್ತೇ ರಂಭೋ ನಾಮ್ನೈಷ ಯೂಥಪಃ ॥ ೩೨

ಶತಂ ಶತಸಹಸ್ರಾಣಾಂ ತ್ರಿಂಶಚ್ಚ ಹರಿಪುಂಗವಃ ।
ಯಮೇತೇ ವಾನರಾಃ ಶೂರಾಶ್ಚಂಡಾಶ್ಚಂಡಪರಾಕ್ರಮಾಃ ॥ ೩೩

ಪರಿವಾರ್ಯಾನುಗಚ್ಛಂತಿ ಲಂಕಾಂ ಮರ್ದಿತುಮೋಜಸಾ ।
ಯಸ್ತು ಕರ್ಣೌ ವಿವೃಣುತೇ ಜೃಂಭತೇ ಚ ಪುನಃ ಪುನಃ ॥ ೩೪

ನ ಚ ಸಂವಿಜತೇ ಮೃತ್ಯೋರ್ನ ಚ ಯುದ್ಧಾದ್ವಿಧಾವತಿ ।
ಪ್ರಕಂಪತೇ ಚ ರೋಷೇಣ ತಿರ್ಯಕ್ ಚ ಪುನರೀಕ್ಷತೇ ॥ ೩೫

---

ಘೋರಕೃತ್ಯಗಳನ್ನು ಮಾಡುವ ಆ ಕುಮುದನಲ್ಲಿ ದೈನ್ಯವೆಂಬುದೇ ಇಲ್ಲ. ರೋಷಪ್ರಕೃತಿಯ ಆ ಚಂಡವಾನರನು ಯುದ್ಧಾರಂಭವಾಗಲೆಂದು ಕಾದಿದ್ದಾನೆ. ಆತನೂ ಸಹ ತಾನೊಬ್ಬನೇ ತನ್ನ ಸೇನೆಯೊಡನೆ ಲಂಕೆಯನ್ನು ಮರ್ದಿಸಬೇಕೆಂದು ಹವಣಿಸುತ್ತಿದ್ದಾನೆ (೩೦) ರಾಕ್ಷಸೇಶ್ವರ, ಈ ಕಡೆಯಲ್ಲಿ ನೋಡು. ಕಪಿಲವರ್ಣನೂ ದೀರ್ಘಕೇಸರಶೋಭಿತನೂ ಆದ ಈ ವಾನರನು ಸಿಂಹದಂತೆ ಕಾಣುತ್ತಿದ್ದಾನೆ ಲಂಕೆಯನ್ನು ಸುಟ್ಟುಬಿಡುವನೋ ಎಂಬಂತೆ ಎವೆಯಿಕ್ಕದೆ ನೋಡುತ್ತಿದ್ದಾನೆ! ಈತನು ರಂಭನೆಂಬ ಸೇನಾಪತಿ. ಈ ರಂಭನು ವಿಂಧ್ಯ, ಕೃಷ್ಣಗಿರಿ, ಸಹ್ಯ, ಸುದರ್ಶನಪರ್ವತಗಳಲ್ಲಿ ಸಂತತವಾಗಿ ಸುತ್ತುತ್ತಿರುವನು (೩೧–೩೨). ಒಂದು ಕೋಟಿ ಮೂವತ್ತುಲಕ್ಷ ವಾನರಯೋಧರು ಈತನ ವಶದಲ್ಲಿದ್ದಾರೆ. ಅವರೆಲ್ಲರೂ ತಮ್ಮ ಸಾಹಸದಿಂದ ಲಂಕೆಯನ್ನು ಧೂಳೆಬ್ಬಿಸಬೇಕೆಂದಿದ್ದಾರೆ. ಮಹಾಸ್ವಾಮಿ, ಅಲ್ಲೊಬ್ಬ ವಾನರಯೋಧನು ಕಿವಿಗಳನ್ನು ನಿಮಿರಿಸಿ ಮತ್ತೆ ಮತ್ತೆ ಬಾಯನ್ನು ದೊಡ್ಡದಾಗಿ ತೆರೆಯುತ್ತಿದ್ದಾನಲ್ಲವೆ? (೩೩–೩೪). ಅವನು ಮೃತ್ಯುವಿಗೂ ಹೆದರುವವನಲ್ಲ; ಯುದ್ಧದಿಂದ ಹಿಂಜರಿಯುವವನೇ ಅಲ್ಲ ರೋಷಾ ವೇಷದಿಂದ ನಡುಗುತ್ತಿದ್ದಾನೆ! ಎಡಬಲ

ಪಶ್ಯನ್ ಲಾಂಗೂಲಮಪಿ ಚ ಕ್ಷ್ವೇಲತೇ ಚ ಮಹಾಬಲಃ ।
ಮಹಾಜವೋ ವೀತಭಯೋ ರಮ್ಯಂ ಸಾಲ್ವೇಯಪರ್ವತಮ್ ॥ ೩೬

ರಾಜನ್ ಸತತಮಧ್ಯಾಸ್ತೇ ಶರಭೋ ನಾಮ ಯೂಥಪಃ ।
ಏತಸ್ಯ ಬಲಿನಃ ಸರ್ವೇ ವಿಹಾರಾ ನಾಮ ಯೂಥಪಾಃ ॥ ೩೭

ರಾಜನ್ ಶತಸಹಸ್ರಾಣಿ ಚತ್ವಾರಿಂಶತ್ತಥೈವ ಚ ।
ಯಸ್ತು ಮೇಘ ಇವಾಕಾಶಂ ಮಹಾನಾವೃತ್ಯ ತಿಷ್ಠತಿ ॥ ೩೮

ಮಧ್ಯೇ ವಾನರವೀರಾಣಾಂ ಸುರಾಣಾಮಿವ ವಾಸವಃ ।
ಭೇರೀಣಾಮಿವ ಸಂನಾದೋ ಯಸ್ಯೈಷ ಶ್ರೂಯತೇ ಮಹಾನ್ ॥ ೩೯

ಘೋಷಃ ಶಾಖಾಮೃಗೇಂದ್ರಾಣಾಂ ಸಂಗ್ರಾಮಮಭಿಕಾಂಕ್ಷತಾಮ್ ।
ಏಷ ಪರ್ವತಮಧ್ಯಾಸ್ತೇ ಪಾರಿಯಾತ್ರಮನುತ್ತಮಮ್ ॥ ೪೦

ಯುದ್ಧೇ ದುಷ್ಪ್ರಸಹೋ ನಿತ್ಯಂ ಪನಸೋ ನಾಮ ಯೂಥಪಃ ।
ಏನಂ ಶತಸಹಸ್ರಾಣಾಂ ಶತಾರ್ಧಂ ಪರ್ಯುಪಾಸತೇ ॥ ೪೧

---

ಗಳನ್ನು ಪುನಃಪುನಃ ನೋಡುತ್ತಿದ್ದಾನೆ. ಆಗಾಗ ತನ್ನ ಬಾಲವನ್ನು ನೋಡಿ ಕೊಳ್ಳುತ್ತ ಗರ್ಜಿಸುತ್ತಿದ್ದಾನೆ. ಆತನು ಮಹಾವೇಗಶಾಲಿ ಭಯವೆಂಬದನ್ನೇ ಅರಿಯದವನು. ಆ ವಾನರನು ಸಾಲ್ವೇಯಪರ್ವತದಲ್ಲಿ ವಾಸಿಸುತ್ತಾನೆ (೩೫–೩೬). ಮಹಾರಾಜ, ಆತನ ಹೆಸರು ಶರಭ ಆ ಸೇನಾಪತಿಯ ವಶದಲ್ಲಿ ನಲವತ್ತುಲಕ್ಷ 'ವಿಹಾರ' ಎಂಬ ಹೆಸರಿನ ವಾನರಯೋಧರಿದ್ದಾರೆ. ಅಲ್ಲೊಬ್ಬ ಕಪಿಯೂಥಪನು ಮಹಾಮೇಘದಂತೆ ಆಕಾಶವನ್ನಾವರಿಸಿ ನಿಂತಿರುವನಲ್ಲವೆ? ದೇವತೆಗಳ ಮಧ್ಯದಲ್ಲಿ ಇಂದ್ರನಂತೆ ಠೀವಿಯಿಂದ ಕಪಿವೀರರ ನಡುವೆ ನಿಂತಿದ್ದಾನೆ. ಹಲವಾರು ಭೇರಿಗಳನ್ನು ಮೊಳಗಿಸಿದಂತೆ ಅವನ ಗರ್ಜನೆಯು ಕೇಳಿಸುತ್ತಿದೆ (೩೭–೩೯). ಅವನ ಪರಿವಾರದಲ್ಲಿರುವ ಕಪಿಯೋಧರೆಲ್ಲರೂ ಸಂಗ್ರಾಮಕ್ಕೆ ಸಜ್ಜಾಗಿ ನಿಂತಿದ್ದಾರೆ. ಆ ಕಪಿಯೂಥಪನು ಪಾರಿಯಾತ್ರ ಪರ್ವತದಲ್ಲಿ ವಾಸಮಾಡತಕ್ಕವನು. ಪನಸನೆಂದು ಅವನ ಹೆಸರು. ಯುದ್ಧದಲ್ಲಿ ನಿಷ್ಣಾತ. ಪನಸನ ವಶದಲ್ಲಿ ಐವತ್ತು ಲಕ್ಷ ವಾನರ ಸೇನಾಪತಿಗಳಿದ್ದಾರೆ (೪೦–೪೧).

ಯೂಥಪಾ ಯೂಥಪಶ್ರೇಷ್ಠಂ ಯೇಷಾಂ ಯೂಥಾನಿ ಭಾಗಶಃ ।
ಯಸ್ತು ಭೀಮಾಂ ಪ್ರವಲ್ಗಂತೀಂ ಚಮೂಂ ತಿಷ್ಠತಿ ಶೋಭಯನ್ ॥

ಸ್ಥಿತಾಂ ತೀರೇ ಸಮುದ್ರಸ್ಯ ದ್ವಿತೀಯ ಇವ ಭಾಸ್ಕರಃ ।
ಏಷ ದರ್ದುರಸಂಕಾಶೋ ವಿನತೋ ನಾಮ ಯೂಥಪಃ ॥ ೪೩

ಪಿಬಂಶ್ಚರತಿ ಪರ್ಣಾಸಾಂ ನದೀನಾಮುತ್ತಮಾಂ ನದೀಮ್ ।
ಷಷ್ಟಿಃ ಶತಸಹಸ್ರಾಣಿ ಬಲಮಸ್ಯ ಪ್ಲವಂಗಮಾಃ ॥ ೪೪

ತ್ವಾಮಾಹ್ವಯತಿ ಯುದ್ಧಾಯ ಕ್ರೋಧನೋ ನಾಮ ಯೂಥಪಃ ।
ವಿಕ್ರಾಂತಾ ಬಲವಂತಶ್ಚ ಯಥಾ ಯೂಥಾನಿ ಭಾಗಶಃ ॥ ೪೫

ಯಸ್ತು ಗೈರಿಕವರ್ಣಾಭಂ ವಪುಃ ಪುಷ್ಯತಿ ವಾನರಃ ।
ಅವಮತ್ಯ ಸದಾ ಸರ್ವಾನ್ ವಾನರಾನ್ ಬಲದರ್ಪಿತಾನ್ ॥ ೪೬

ಗವಯೋ ನಾಮ ತೇಜಸ್ವೀ ತ್ವಾಂ ಕ್ರೋಧಾದಭಿವರ್ತತೇ ।
ಏನಂ ಶತಸಹಸ್ರಾಣಿ ಸಪ್ತತಿಃ ಪರ್ಯುಪಾಸತೇ ॥ ೪೭

---

ಆ ಒಬ್ಬೊಬ್ಬ ಸೇನಾಪತಿಯ ಕೈಕೆಳಗೆ ಬಹುಮಂದಿ ಯೋಧರಿದ್ದಾರೆ. ರಾಕ್ಷಸೇಂದ್ರ, ಈ ಕಡೆ ನೋಡು. ಉತ್ಸಾಹದಿಂದ ಉಕ್ಕುತ್ತ ಸಮುದ್ರತೀರದಲ್ಲಿ ಭೀಕರವಾಗಿ ನಿಂತಿರುವ ಕಪಿಸೇನೆಗೆ ಶೋಭೆಯನ್ನುಂಟುಮಾಡುತ್ತ ಇನ್ನೊಬ್ಬ ಸೂರ್ಯನೋ ಎಂಬಂತೆ ತೇಜಸ್ವಿಯಾದ ಸೇನಾನಿಯೋರ್ವನು ನಿಂತಿದ್ದಾನೆ. ದರ್ದುರಪರ್ವತವೋ ಎಂಬಂತೆ ನಿಂತಿರುವ ಈತನು ವಿನತ (೪೨–೪೩). ಶ್ರೇಷ್ಠವಾದ ಪರ್ಣಾಸಾನದಿಯ ನೀರನ್ನು ಕುಡಿದು ಕೊಬ್ಬಿದ್ದಾನೆ. ಇವನ ಕೈಕೆಳಗೆ ಅರುವತ್ತು ಲಕ್ಷವಾನರಯೋಧರಿದ್ದಾರೆ. ಅದೋ, ಕ್ರೋಧನನೆಂಬ ಇನ್ನೊಬ್ಬ ಯೂಥಪನು ನಿನ್ನನ್ನು ಯುದ್ಧಕ್ಕೆ ಕರೆಯುತ್ತಿದ್ದಾನೆ! ಇವನ ವಶದಲ್ಲಿ ವಾನರಯೋಧರಿರುವ ಅನೇಕ ಪಡೆಗಳಿವೆ (೪೪–೪೫). ಮಹಾಪ್ರಭು, ಗೈರಿಕಧಾತುವಿನಂತೆ ಹೊಂಬಣ್ಣದ ವಾನರನೊಬ್ಬನು ಅಲ್ಲಿ ಕಾಣಿಸುವನಷ್ಟೆ. ತೇಜಸ್ವಿಯಾದ ಆ ಸೇನಾಪತಿಯ ಹೆಸರು ಗವಯ. ಬಲದರ್ಪಿತರಾದ ಇತರ ವಾನರರನ್ನು ಇವನು ಉಪೇಕ್ಷೆಯಿಂದ ಧಿಕ್ಕರಿಸುತ್ತಾನೆ. ಕ್ರೋಧದಿಂದ ನಿನ್ನೆದುರಿಗೆ ಬರುತ್ತಿದ್ದಾನೆ. ಈತನ ಬಳಿ ಎಪ್ಪತ್ತು ಲಕ್ಷ ಸೈನಿಕರಿದ್ದಾರೆ (೪೬–೪೭).

**ಏಷೈವಾಶಂಸತೇ ಲಂಕಾಂ ಸ್ವೇನಾನೀಕೇನ ಮರ್ದಿತುಮ್ ।**
**ಏತೇ ದುಷ್ಪ್ರಸಹಾ ಘೋರಾ ಬಲಿನಃ ಕಾಮರೂಪಿಣಃ ॥ ೪೮**

**ಯೂಥಪಾ ಯೂಥಪಶ್ರೇಷ್ಠಾ ಏಷಾಂ ಯೂಥಾನಿ ಭಾಗಶಃ ॥**

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಡ್ವಿಂಶಃ ಸರ್ಗಃ

---

ಈತನೊಬ್ಬನೇ ತನ್ನ ಸೈನಿಕರೊಡನೆ ಲಂಕೆಯನ್ನು ಮರ್ದಿಸಬೇಕೆಂದು ಕಾದಿದ್ದಾನೆ. ಮಹಾರಾಜ, ಇವರೆಲ್ಲರೂ ಕಾಮರೂಪಿಗಳಾದ ಘೋರವಾನರ ಯೂಥಪರು. ಇವರ ವಶದಲ್ಲಿ ಬೇರೆ ಬೇರೆ ಪಡೆಗಳಿರುವ ಅನೇಕ ಸೇನಾಪತಿ ಗಳಿದ್ದಾರೆ'' ಎಂದು ಹೇಳಿದನು (೪೮).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಇಪ್ಪತ್ತಾರನೆಯ ಸರ್ಗ

---

## ಸಪ್ತವಿಂಶಃ ಸರ್ಗಃ

### ಹರಾದಿವಾನರಪರಾಕ್ರಮಾಖ್ಯಾನಮ್

ತಾಂಸ್ತು ತೇಽಹಂ ಪ್ರವಕ್ಷ್ಯಾಮಿ ಪ್ರೇಕ್ಷಮಾಣಸ್ಯ ಯೂಥಪಾನ್ ।
ರಾಘವಾರ್ಥೇ ಪರಾಕ್ರಾಂತಾ ಯೇ ನ ರಕ್ಷಂತಿ ಜೀವಿತಮ್ ॥ ೧

ಸ್ನಿಗ್ಧಾ ಯಸ್ಯ ಬಹುವ್ಯಾಮಾ ವಾಲಾ ಲಾಂಗೂಲಮಾಶ್ರಿತಾಃ ।
ತಾಮ್ರಾಃ ಪೀತಾಃ ಸಿತಾಃ ಶ್ವೇತಾಃ ಪ್ರಕೀರ್ಣಾ ಘೋರಕರ್ಮಣಃ ॥

ಪ್ರಗೃಹೀತಾಃ ಪ್ರಕಾಶಂತೇ ಸೂರ್ಯಸ್ಯೇವ ಮರೀಚಯಃ ।
ಪೃಥಿವ್ಯಾಂ ಚಾನುಕೃಷ್ಯಂತೇ ಹರೋ ನಾಮ್ನೈಷ ಯೂಥಪಃ ॥ ೩

ಯಂ ಪೃಷ್ಠತೋಽನುಗಚ್ಛಂತಿ ಶತಶೋಽಥ ಸಹಸ್ರಶಃ ।
ದ್ರುಮಾನುದ್ಯಮ್ಯ ಸಹಸಾ ಲಂಕಾರೋಹಣತತ್ಪರಾಃ ॥ ೪

ಏಷ ಕೋಟಿಸಹಸ್ರೇಣ ವಾನರಾಣಾಂ ಮಹೌಜಸಾಮ್ ।
ಆಕಾಂಕ್ಷತೇ ತ್ವಾಂ ಸಂಗ್ರಾಮೇ ಜೇತುಂ ಪುರಪುರಂಜಯ ॥ ೫

### ಸರ್ಗ ೨೭

ಸಾರಣನು ಮತ್ತೆ ಹರನೇ ಮೊದಲಾದ ಕೆಲವು ವಾನರಸೇನಾಪತಿಗಳನ್ನು
ರಾವಣನಿಗೆ ತೋರಿಸುವುದು.

ಸಾರಣನು ಮತ್ತೆ ರಾವಣನಿಗೆ ಹೇಳಿದನು : ''ಮಹಾರಾಜ, ನೀನು ಕುತೂಹಲದಿಂದ ವಾನರ ಯೂಥಪರನ್ನು ನೋಡುತ್ತಿರುವೆಯಾದ್ದರಿಂದ, ಇನ್ನೂ ಕೆಲವು ಯೂಥಪರನ್ನು ತೋರಿಸುವೆನು. ಅದೋ, ಅಲ್ಲೊಬ್ಬ ಘೋರಕೃತ್ಯಗಳನ್ನು ಮಾಡಬಲ್ಲ ವಾನರಯೋಧನಿರುವನು, ನೋಡು. ಆತನ ಬಾಲದಲ್ಲಿ ಮಾರುದ್ದದ ಬಣ್ಣ ಬಣ್ಣದ ಕೂದಲುಗಳಿವೆ! ಕೆಂಪು, ಹಳದಿ, ಬಿಳುಪು – ಮುಂತಾದ ಬಣ್ಣದ ಕೂದಲುಗಳಿವೆ (೧–೨). ಅವನು ಬಾಲ ವನ್ನಪ್ಪಳಿಸುವಾಗ ಬಾಲದ ರೋಮಗಳು ಆಕಾಶದಲ್ಲಿ ಸೂರ್ಯಕಿರಣಗಳಂತೆ ರಂಜಿಸುತ್ತಿವೆ. ಒಮ್ಮೊಮ್ಮೆ ನೆಲಕ್ಕೆ ತಾಗುತ್ತವೆ. ಆತನು ಹರನೆಂಬ ಯೂಥಪತಿ. ಅವನ ಹಿಂದೆ ಸಾವಿರಾರು ವಾನರರು ಮರಗಳನ್ನು ಎತ್ತಿ ಹಿಡಿದು ಲಂಕೆಯನ್ನು ಮುತ್ತಬೇಕೆಂದು ಸಿದ್ಧರಾಗಿದ್ದಾರೆ. ಶತ್ರುನಗರ

ಯೂಥಪಾ ಹರಿರಾಜಸ್ಯ ಕಿಂಕರಾಃ ಸಮುಪಸ್ಥಿತಾಃ ।
ನೀಲಾನಿವ ಮಹಾಮೇಘಾಂಸ್ತಿಷ್ಠತೋ ಯಾಂಸ್ತು ಪಶ್ಯಸಿ ॥ ೬

ಅಸಿತಾಂಜನಸಂಕಾಶಾನ್ ಯುದ್ಧೇ ಸತ್ಯ ಪರಾಕ್ರಮಾನ್।
ಅಸಂಖ್ಯೇಯಾನನಿರ್ದೇಶ್ಯಾನ್ ಪರಂ ಪಾರಮಿವೋದಧೇಃ ॥ ೭

ಪರ್ವತೇಷು ಚ ಯೇ ಕೇಚಿದ್ವಿಷಮೇಷು ನದೀಷು ಚ ।
ಏತೇ ತ್ವಾಮಬಿವರ್ತಂತೇ ರಾಜನ್ನೃಕ್ಷಾಃ ಸುದಾರುಣಾಃ ॥ ೮

ಏಷಾಂ ಮಧ್ಯೇ ಸ್ಥಿತೋ ರಾಜನ್ ಭೀಮಾಕ್ಷೋ ಭೀಮದರ್ಶನಂ ।
ಪರ್ಜನ್ಯ ಇವ ಜೀಮೂತೈಃ ಸಮಂತಾತ್ಪರಿವಾರಿತಃ ॥ ೯

ಋಕ್ಷವಂತಂ ಗಿರಿಶ್ರೇಷ್ಠಮಧ್ಯಾಸ್ತೇ ನರ್ಮದಾಂ ಪಿಬನ್ ।
ಸರ್ವರ್ಕ್ಷಾಣಾಮಧಿಪತಿಃ ಧೂಮ್ರೋ ನಾಮ್ನೈಷ ಯೂಥಪಃ ॥ ೧೦

ಯವೀಯಾನಸ್ಯ ತು ಭ್ರಾತಾ ಪಶ್ಯೈನಂ ಪರ್ವತೋಪಮಮ್ ।
ಭ್ರಾತ್ರಾ ಸಮಾನೋ ರೂಪೇಣ ವಿಶಿಷ್ಟಸ್ತು ಪರಾಕ್ರಮೈಃ ॥ ೧೧

---

ಗಳನ್ನು ಧ್ವಂಸಪಡಿಸಿರುವ ಓ ಲಂಕೇಶ್ವರ, ಈ ಹರನ ವಶದಲ್ಲಿ ಒಂದುಸಾವಿರ ಕೋಟಿ ವಾನರವೀರರಿದ್ದಾರೆ (೫–೬). ಈ ಕಡೆಯಲ್ಲಿ ಸುಗ್ರೀವನ ಕಿಂಕರರಾದ ಭಲ್ಲೂಕವೀರರು ಬಂದು ನೆರೆದಿರುವರು, ನೋಡು. ಕಾರ್ಮೋಡಗಳಂತೆಯೂ ನೀಲಾಂಜನಪರ್ವತಗಳಂತೆಯೂ ನೆರೆದಿರುವ ಈ ಭಲ್ಲೂಕಯೋಧರು ಸಾಮಾನ್ಯರಲ್ಲ ಯುದ್ಧದಲ್ಲಿ ಸತ್ಯವಾಗಿಯೂ ಮಹಾಶೂರರು. ಅವರ ಸಂಖ್ಯೆಯನ್ನು ಹೇಳುವುದು ಶಕ್ಯವಿಲ್ಲ, ಸಮುದ್ರತೀರದಲ್ಲಿರುವ ಮರಳಿನ ಕಣಗಳಂತೆ ಅ ಸಂಖ್ಯಾತರಾಗಿದ್ದಾರೆ! (೬–೭). ಗಿರಿಗಳಲ್ಲಿಯೂ ನದೀತೀರಗಳಲ್ಲಿಯೂ ನೆಲೆಸಿದ ದಾರುಣಸ್ವಭಾವದ ಈ ಭಲ್ಲೂಕವೀರರು ನಿನ್ನನ್ನೆದುರಿಸಲು ಬರುತ್ತಿದ್ದಾರೆ. ಇವರ ಮಧ್ಯಮಲ್ಲೊಬ್ಬನು ನಿಂತಿರುವನಲ್ಲ, ಭಯಂಕರವಾಗಿ ಕಣ್ಣುಗಳನ್ನು ತಿರುಗಿಸುತ್ತ ಭೀಮಾಕಾರನಾಗಿರುವನಲ್ಲ, ಅವನ ಹೆಸರು ಧೂಮ್ರ. ಮೋಡಗಳಿಂದ ಪರಿವೃತನಾದ ಪರ್ಜನ್ಯನಂತೆ ನಿಂತಿದ್ದಾನೆ (೮–೯). ಸಮಸ್ತ ಭಲ್ಲೂಕಗಳಿಗೆ ಅಧಿಪತಿಯಾದ ಈತನು ಋಕ್ಷವಂತನೆಂಬ ಗಿರಿಯಲ್ಲಿ ನೆಲೆಸಿ ನರ್ಮದಾ ನದಿಯ ನೀರನ್ನು ಕುಡಿದು ಕೊಬ್ಬಿದ್ದಾನೆ. ಮಹಾರಾಜ, ಧೂಮ್ರನ ತಮ್ಮನು ಪರ್ವತಾಕಾರನಾಗಿ ಇತ್ತ ನಿಂತಿದ್ದಾನೆ,

ಸ ಏಷ ಜಾಂಬವಾನ್ನಾಮ ಮಹಾಯೂಥಪಯೂಥಪಃ ।
ಪ್ರಕ್ರಾಂತೋ ಗುರುವರ್ತೀ ಚ ಸಂಪ್ರಹಾರೇಷ್ವಮರ್ಷಣಃ ॥ ೧೨
ಏತೇನ ಸಾಹ್ಯಂ ಸುಮಹತ್ಕೃತಂ ಶಕ್ರಸ್ಯ ಧೀಮತಾ ।
ದೈವಾಸುರೇ ಜಾಂಬವತಾ ಲಬ್ಧಾಶ್ಚ ಬಹವೋ ವರಾಃ ॥ ೧೩
ಆರುಹ್ಯ ಪರ್ವತಾಗ್ರೇಭ್ಯೋ ಮಹಾಭ್ರವಿಪುಲಾಃ ಶಿಲಾಃ ।
ಮುಂಚಂತಿ ವಿಪುಲಾಕಾರಾನ ಮೃತ್ಯೋರುದ್ವಿಜಂತಿ ಚ ॥ ೧೪
ರಾಕ್ಷಸಾನಾಂ ಚ ಸದೃಶಾಃ ಪಿಶಾಚಾನಾಂ ಚ ಲೋಮಶಾಃ ।
ಏತಸ್ಯ ಸೈನ್ಯಾ ಬಹವೋ ವಿಚರಂತ್ಯಗ್ನಿತೇಜಸಃ ॥ ೧೫
ಯಂ ತ್ವೇನಮಭಿಸಂರಬ್ಧಂ ಪ್ಲವಮಾನಮಿವ ಸ್ಥಿತಮ್ ।
ಪ್ರೇಕ್ಷಂತೇ ವಾನರಾಃ ಸರ್ವೇ ಸ್ಥಿತಾ ಯೂಥಪಯೂಥಪಮ್ ॥ ೧೬
ಏಷ ರಾಜನ್ ಸಹಸ್ರಾಕ್ಷಂ ಪರ್ಯುಪಾಸ್ತೇ ಹರೀಶ್ವರಃ ।
ಬಲೇನ ಬಲಸಂಪನ್ನೋ ದಂಭೋ ನಾಮೈಷ ಯೂಥಪಃ ॥ ೧೭

---

ನೋಡು. ರೂಪದಲ್ಲಿ ಅಣ್ಣನಂತಿದ್ದರೂ ಪರಾಕ್ರಮದಲ್ಲಿ ಅವನಿಗೂ ಮಿಗಿಲು (೧೦–೧೧). ಈತನೇ ಜಾಂಬವಂತ ! ಭಲ್ಲೂಕ ಯೂಥಪತಿಗಳೆಲ್ಲರಿಗೂ ಈತನೇ ಪ್ರಧಾನ ಸೇನಾಪತಿ. ಮಹಾ ಸಾಹಸಿ. ಪ್ರಭುವಿನ ಇಚ್ಛೆಯಂತೆ ನಡೆಯತಕ್ಕವನು. ಯುದ್ಧದಲ್ಲಿ ಶತ್ರುವಿನ ಪರಾಕ್ರಮವನ್ನು ಎಂದಿಗೂ ಸಹಿಸನು (೧೨). ಮಹಾಪ್ರಭು, ಈ ಜಾಂಬವಂತನು ದೇವಾಸುರಸಂಗ್ರಾಮ ದಲ್ಲಿ ದೇವೇಂದ್ರನಿಗೆ ಬಹು ವಿಧದಲ್ಲಿ ಸಾಹಾಯ್ಯವೆಸಗಿದ ಮಹಾಧೀರ. ಇಂದ್ರನಿಂದ ಎಷ್ಟೋ ವರಗಳನ್ನು ಪಡೆದಿದ್ದಾನೆ (೧೩). ಈ ಜಾಂಬವಂತನ ಸೈನಿಕರು ಪರ್ವತಾಗ್ರಗಳನ್ನೇರಿ ಮೇಘಖಂಡಗಳಂತಿರುವ ದೊಡ್ಡ ದೊಡ್ಡ ಬಂಡೆಗಳನ್ನು ಶತ್ರುಸೈನ್ಯದ ಮೇಲೆ ಎಸೆಯಬಲ್ಲರು. ಮೃತ್ಯುವೇ ಎದುರಾದರೂ ಅವರು ಜಗ್ಗತಕ್ಕವರಲ್ಲ (೧೪) ಮೈತುಂಬ ರೋಮರಾಜಿಯುಳ್ಳ ಆ ಭಲ್ಲೂಕ ಯೋಧರು ರಾಕ್ಷಸರಂಥವರು! ಪಿಶಾಚಿಗಳಂಥವರು! ಬೆಂಕಿಯಂತೆ ಭುಗಿಲೆನ್ನುವ ಬಹುಮಂದಿ ಭಲ್ಲೂಕರು ಜಾಂಬವಂತನ ವಶದಲ್ಲಿದ್ದಾರೆ (೧೫). ಓ ಲಂಕೇಶ್ವರ, ಅಲ್ಲೊಬ್ಬ ವಾನರವೀರನು ರೋಷಾವೇಶದಿಂದ ಮೇಲಕ್ಕೆ ನೆಗೆಯುವಂತೆ ನಿಂತಿದ್ದಾನೆ, ನೋಡು ಇತರ ವಾನರರು ಕುತೂಹಲದಿಂದ ಅವನನ್ನು ವೀಕ್ಷಿಸುತ್ತಿದ್ದಾರೆ. ಆ ಸೇನಾಪತಿಯ ಹೆಸರು ದಂಭ. ಮಹಾರಾಜ,

ಯಃ ಸ್ಥಿತಂ ಯೋಜನೇ ಶೈಲಂ ಗಚ್ಛನ್ ಪಾರ್ಶ್ವೇನ ಸೇವತೇ ।
ಊರ್ಧ್ವಂ ತಥೈವ ಕಾಯೇನ ಗತಃ ಪ್ರಾಪ್ನೋತಿ ಯೋಜನಮ್ ॥ ೧೮

ಯಸ್ಮಾನ್ನ ಪರಮಂ ರೂಪಂ ಚತುಷ್ಪಾದೇಷು ವಿದ್ಯತೇ ।
ಶ್ರುತಃ ಸನ್ನಾದನೋ ನಾಮ ವಾನರಾಣಾಂ ಪಿತಾಮಹಃ ॥ ೧೯

ಯೇನ ಯುದ್ಧಂ ಪುರಾ ದತ್ತಂ ರಣೇ ಶಕ್ರಸ್ಯ ಧೀಮತಃ ।
ಪರಾಜಯಶ್ಚ ನ ಪ್ರಾಪ್ತಃ ಸೋಽಯಂ ಯೂಥಪಯೂಥಪಃ ॥ ೨೦

ಯಸ್ಯ ವಿಕ್ರಮಮಾಣಸ್ಯ ಶಕ್ರಸ್ಯೇವ ಪರಾಕ್ರಮಃ ।
ಏಷ ಗಂಧರ್ವಕನ್ಯಾಯಾಮುತ್ಪನ್ನಃ ಕೃಷ್ಣವರ್ತ್ಮನಃ ॥ ೨೧

ತದಾ ದೈವಾಸುರೇ ಯುದ್ಧೇ ಸಾಹ್ಯಾರ್ಥಂ ತ್ರಿದಿವೌಕಸಾಮ್ ।
ಯಸ್ಯ ವೈಶ್ರವಣೋ ರಾಜಾ ಜಂಬೂಮುಪನಿಷೇವತೇ ॥ ೨೨

ಯೋ ರಾಜಾ ಪರ್ವತೇಂದ್ರಾಣಾಂ ಬಹುಕಿನ್ನರಸೇವಿನಾಮ್ ।
ವಿಹಾರಸುಖದೋ ನಿತ್ಯಂ ಭ್ರಾತುಸ್ತೇ ರಾಕ್ಷಸಾಧಿಪ ॥ ೨೩

---

ಬಲಾಢ್ಯನಾದ ಆ ದಂಭನು ತನ್ನ ಸೇನೆಯೊಡನೆ ಹೋಗಿ ಆಗಾಗ ಇಂದ್ರನಿಗೆ ನೆರವೀಯುತ್ತಾನೆ (೧೬–೧೭). ಅಲ್ಲಿ ನಿಂತಿರುವವನು ಸನ್ನಾದನನೆಂಬ ಯೂಥಪಾಲ. ಅವನು ಒಂದು ಹೆಜ್ಜೆಯಿಟ್ಟರೆ ಯೋಜನದೂರದಲ್ಲಿರುವ ಪರ್ವತವು ಸಮೀಪಸ್ಥವಾಗುವುದು. ಹಾಗೆಯೇ ಎದ್ದುನಿಂತರೆ ಒಂದು ಯೋಜನ ಎತ್ತರವನ್ನು ಆಕ್ರಮಿಸುವನು! (೧೮). ಚತುಷ್ಪಾಜ್ಜಾತಿಗಳಲ್ಲಿ ಅವನಿಗಿಂತ ಮಹಾಕಾಯರಿಲ್ಲ, ಕಪಿಗಳೆಲ್ಲರಿಗೂ ಅವನು ಪಿತಾಮಹ! ರಾಕ್ಷಸರೊಡನೆ ಯುದ್ಧವು ಸಂಭವಿಸಿದಾಗ ಸನ್ನಾದನನು ಇಂದ್ರನ ಪಕ್ಷವನ್ನು ವಹಿಸಿ ಹೋರಾಡಿದ್ದಾನೆ. ಸೋಲನ್ನು ಕಂಡರಿಯದವನು (೧೯–೨೦). ಇಂದ್ರನಂತೆ ಮಹಾಪರಾಕ್ರಮಿ. ದೇವಾಸುರ ಸಂಗ್ರಾಮದಲ್ಲಿ ದೇವತೆಗಳ ನೆರವಿಗಾಗಿ, ಒಬ್ಬ ಗಂಧರ್ವಕನ್ಯೆಯಲ್ಲಿ ಈತನು ಅಗ್ನಿಯ ಪುತ್ರನಾಗಿ ಜನಿಸಿದನು (೨೧). ರಾಕ್ಷಸಾಧಿಪ, ಅತ್ತನೋಡು. ಕುಬೇರನು ಯಾವ ಪರ್ವತದಲ್ಲಿರುವ ಜಂಬೂವೃಕ್ಷದ ಫಲವನ್ನು ಸೇವಿಸುವನೋ, ಕಿನ್ನರ ಸೇವಿತ ಪರ್ವತಗಳಲ್ಲಿ ಯಾವುದು ಶ್ರೇಷ್ಠವೋ, ನಿನ್ನ ಅಣ್ಣನಾದ ಕುಬೇರನಿಗೆ ಯಾವುದು ವಿಹಾರಸ್ಥಾನವೋ ಅಂಥ ಪರ್ವತದಲ್ಲಿ ಈ ವಾನರೋತ್ತಮನು

ತತ್ರೈಷ ವಸತಿ ಶ್ರೀಮಾನ್ ಬಲವಾನ್ ವಾನರರ್ಷಭಃ ।
ಯುದ್ಧೇಷ್ವಕತ್ಥನೋ ನಿತ್ಯಂ ಕ್ರಥನೋ ನಾಮ ಯೂಥಪಃ ॥ ೨೪

ವೃತಃ ಕೋಟಿಸಹಸ್ರೇಣ ಹರೀಣಾಂ ಸಮುಪಸ್ಥಿತಃ ।
ಏಷೈವಾಶಂಸತೇ ಲಂಕಾಂ ಸ್ವೇನಾನೀಕೇನ ಮರ್ದಿತುಮ್ ॥ ೨೫

ಯೋ ಗಂಗಾಮನು ಪರ್ಯೇತಿ ತ್ರಾಸಯನ್ ಹಸ್ತಿಯೂಥಪಾನ್ ।
ಹಸ್ತಿನಾಂ ವಾನರಾಣಾಂ ಚ ಪೂರ್ವವೈರಮನುಸ್ಮರನ್ ॥ ೨೬

ಏಷ ಯೂಥಪತಿರ್ನೇತಾ ಗರ್ಜನ್ ಗಿರಿಗುಹಾಶಯಃ ।
ಗಜಾನ್ ಯೋಧಯತೇ ವನ್ಯಾನ್ ಗಿರೀಂಶ್ಚೈವ ಮಹೀರುಹಾನ್ ॥ ೨೭

ಹರೀಣಾಂ ವಾಹಿನೀಮುಖ್ಯೋ ನದೀಂ ಹೈಮವತೀಮನು ।
ಉಶೀರಬೀಜಮಾಶ್ರಿತ್ಯ ಪರ್ವತಂ ಮಂದರೋಪಮಮ್ ॥ ೨೮

ರಮತೇ ವಾನರಶ್ರೇಷ್ಠೋ ದಿವಿ ಶಕ್ರ ಇವ ಸ್ವಯಮ್ ।
ಏನಂ ಶತಸಹಸ್ರಾಣಾಂ ಸಹಸ್ರಮನುವರ್ತತೇ ॥ ೨೯

---

ವಾಸವಾಗಿದ್ದಾನೆ ಈತನ ಹೆಸರು ಕ್ರಥನ. ಯುದ್ಧದಲ್ಲೀತನು ಆತ್ಮಸ್ತುತಿ ಯನ್ನು ಮಾಡಿಕೊಳ್ಳುವವನಲ್ಲ (೨೨–೨೪). ಈ ಕ್ರಥನನ ಕೈಕೆಳಗೆ ಒಂದು ಸಾವಿರ ಕೋಟಿ ವಾನರರಿದ್ದಾರೆ. ತನ್ನ ಪಡೆಯೊಡನೆ ತಾನೊಬ್ಬನೇ ಲಂಕೆಯನ್ನು ಮರ್ದಿಸಬೇಕೆಂದು ಈತನ ಉದ್ದೇಶವಿದೆ. ಮಹಾರಾಜ, ಈ ದಿಕ್ಕಿನಲ್ಲಿರುವವನು ಪ್ರಮಾಥಿಯೆಂಬ ಸೇನಾಪತಿ. ಗಂಗಾತೀರದಲ್ಲಿ ಆನೆ ಗಳನ್ನು ಹೆದರಿಸುತ್ತ ಸುತ್ತಾಡುವನು. ಆನೆಗಳಿಗೂ ವಾನರರಿಗೂ ಸಂಘಟಿಸಿದ ಪೂರ್ವವೈರವನ್ನು* ನೆನಪಿನಲ್ಲಿಟ್ಟುಕೊಂಡಿದ್ದಾನೆ (೨೫–೨೬). ಗಿರಿಗುಹೆ ಯಲ್ಲಿ ತಂಗಿರುವ ಈ ಪ್ರಮಾಥಿಯು ಗರ್ಜಿಸುತ್ತ ಹೊರಬಂದು, ಕಾಡಾನೆ ಗಳನ್ನು ಬೆಟ್ಟಗಳಿಗೆ ಬಡಿದು ಮರಗಳಿಂದ ಆನೆಗಳನ್ನು ಬಡಿದು ಹೋರಾಡು ತ್ತಾನೆ. ಈತನು ಗಂಗಾತೀರದಲ್ಲಿರುವ ಮಂದರಗಿರಿಸದೃಶವಾದ ಉಶೀರ ಬೀಜವೆಂಬ ಪರ್ವತದಲ್ಲಿ ನೆಲೆಸಿದ್ದಾನೆ (೨೭–೨೮). ದೇವಲೋಕದಲ್ಲಿ

---

* ಶಂಬಸಾದನನೆಂಬ ರಾಕ್ಷಸನು ಗಜರೂಪವನ್ನು ಧರಿಸಿ ಮುನಿಗಳನ್ನೂ ವಾನರರನ್ನೂ ಪೀಡಿಸುತ್ತಿದ್ದನು. ಹನುಮಂತನ ತಂದೆಯಾದ ಕೇಸರಿಯು ಆ ರಾಕ್ಷಸನನ್ನು ಕೊಂದನು.

ವೀರ್ಯವಿಕ್ರಮದೃಪ್ತಾನಾಂ ನರ್ದತಾಂ ಬಾಹುಶಾಲಿನಾಮ್ ।
ಸ ಏಷ ನೇತಾ ಚೈತೇಷಾಂ ವಾನರಾಣಾಂ ಮಹಾತ್ಮನಾಮ್ ॥ ೩೦

ಸ ಏಷ ದುರ್ಧರೋ ರಾಜನ್ ಪ್ರಮಾಥೀ ನಾಮ ಯೂಥಪಃ ।
ವಾತೇನೇವೋದ್ಧತಂ ಮೇಘಂ ಯಮೇನಮನುಪಶ್ಯಸಿ ॥ ೩೧

ಅನೀಕಮಪಿ ಸಂರಬ್ಧಂ ವಾನರಾಣಾಂ ತರಸ್ವಿನಾಮ್ ।
ಉದ್ಧೂತಮರುಣಾಭಾಸಂ ಪವನೇನ ಸಮಂತತಃ ॥ ೩೨

ವಿವರ್ತಮಾನಂ ಬಹುಧಾ ಯತ್ರೈತದ್ಬಹುಲಂ ರಜಃ ।
ಏತೇಽಸಿತಮುಖಾ ಘೋರಾ ಗೋಲಾಂಗೂಲಾ ಮಹಾಬಲಾಃ ॥ ೩೩

ಶತಂ ಶತಸಹಸ್ರಾಣಿ ದೃಷ್ಟ್ವಾ ವೈ ಸೇತು ಬಂಧನಮ್ ।
ಗೋಲಾಂಗೂಲಂ ಮಹಾವೇಗಂ ಗವಾಕ್ಷಂ ನಾಮ ಯೂಥಪಮ್ ॥ ೩೪

ಪರಿವಾರ್ಯಾಭಿವರ್ತಂತೇ ಲಂಕಾಂ ಮರ್ದಿತುಮೋಜಸಾ ।
ಭ್ರಮರಾಚರಿತಾ ಯತ್ರ ಸರ್ವಕಾಲಫಲದ್ರುಮಾಃ ॥ ೩೫

---

ಇಂದ್ರನಿರುವಂತೆ ವೈಭವದಲ್ಲಿ ಬಾಳುತ್ತಿದ್ದಾನೆ. ಮಹಾಶೂರರಾದ ಹತ್ತು ಕೋಟಿ ವಾನರರು ಇವನ ವಶದಲ್ಲಿದ್ದಾರೆ. ಅವರೆಲ್ಲರಿಗೂ ಈತನೇ ನಾಯಕ. ಮಹಾರಾಜ, ಈ ಪ್ರಮಾಥಿಯು ದುರ್ಧರ್ಷನೇ ಸರಿ. ಈತನು ಬಿರುಗಾಳಿ ಯಿಂದೆದ್ದು ಮೇಲೇರಿದ ಮೇಘದಂತೆ ಕಾಣಿಸುತ್ತಾನೆ, ನೋಡು (೨೯–೩೧). ಗಾಳಿಯಿಂದ ಕೆದರಿದ ಕೆಂಧೂಳಿಯು ಸುತ್ತಲೂ ಹರಡುತ್ತಿದೆಯಲ್ಲವೆ? ಅಲ್ಲಿ ಉತ್ಸಾಹದಿಂದ ನಿಂತಿರುವ ವಾನರ ವೀರಾನೀಕವು ಈ ಪ್ರಮಾಥಿಯದೇ. ಮಹಾಪ್ರಭು, ಕರಿಮೋರೆಯ ಘೋರಾಕಾರದ ಆ ಸಿಂಗಳೀಕಗಳನ್ನು ನೋಡು! (೩೨–೩೩). ಅವು ಒಂದು ಲಕ್ಷದಷ್ಟಿವೆ. ಸೇತುಬಂಧನವನ್ನು ಕಂಡು ಉತ್ಸಾಹಗೊಂಡಿವೆ. ಅವುಗಳ ಸೇನಾಪತಿ ಮಹಾವೇಗಶಾಲಿಯಾದ ಗವಾಕ್ಷ. ಈ ಸಿಂಗಳೀಕಗಳು ತಮ್ಮ ಬಾಹುಬಲದಿಂದ ಲಂಕೆಯನ್ನು ಸೂರೆಗೊಳ್ಳಬೇಕೆಂದು ಬಂದಿವೆ (೩೪). ಮಹಾರಾಜ, ಎಲ್ಲಿ ದುಂಬಿಗಳಿಗೆ ನಿತ್ಯನಿವಾಸಸ್ಥಾನಗಳಾಗಿ ಹೂಹಣ್ಣುಗಳಿಂದ ತುಂಬಿದ ವೃಕ್ಷಗಳಿರುವುವೋ, ಸೂರ್ಯನು ತನ್ನಂತೆಯೇ ಪ್ರಜ್ವಲಿಸುವ ಯಾವುದರ ಸುತ್ತಲೂ ಪ್ರದಕ್ಷಿಣೆ

ಯಂ ಸೂರ್ಯಸ್ತುಲ್ಯವರ್ಣಾಭಮನು ಪರ್ಯೇತಿ ಪರ್ವತಮ್ ।
ಯಸ್ಯ ಭಾಸಾ ಸದಾ ಭಾಂತಿ ತದ್ವರ್ಣಾ ಮೃಗಪಕ್ಷಿಣಃ ॥ ೩೬

ಯಸ್ಯ ಪ್ರಸ್ಥಂ ಮಹಾತ್ಮಾನೋ ನ ತ್ಯಜಂತಿ ಮಹರ್ಷಯಃ ।
ಸರ್ವೆ ಕಾಮಫಲಾ ವೃಕ್ಷಾಃ ಸದಾ ಫಲಸಮನ್ವಿತಾಃ ॥ ೩೭

ಮಧೂನಿ ಚ ಮಹಾರ್ಹಾಣಿ ಯಸ್ಮಿನ್ ಪರ್ವತಸತ್ತಮೇ ।
ತತ್ರೈಷ ರಮತೇ ರಾಜನ್ ರಮ್ಯೇ ಕಾಂಚನಪರ್ವತೇ ॥ ೩೮

ಮುಖ್ಯೋ ವಾನರಮುಖ್ಯಾನಾಂ ಕೇಸರೀ ನಾಮ ಯೂಥಪಃ ।
ಷಷ್ಟಿರ್ಗಿರಿಸಹಸ್ರಾಣಾಂ ರಮ್ಯಾಃ ಕಾಂಚನಪರ್ವತಾಃ ॥ ೩೯

ತೇಷಾಂ ಮಧ್ಯೇ ಗಿರಿವರಸ್ತ್ವಮಿವಾನಘ ರಕ್ಷಸಾಮ್ ।
ತತ್ರೈತೇ ಕಪಿಲಾಃ ಶ್ವೇತಾಸ್ತಾಮ್ರಾಸ್ಯಾ ಮಧುಪಿಂಗಲಾಃ ॥ ೪೦

ನಿವಸಂತ್ಯುತ್ತಮಗಿರೌ ತೀಕ್ಷ್ಣದಂಷ್ಟ್ರಾ ನಖಾಯುಧಾಃ ।
ಸಿಂಹಾ ಇವ ಚತುರ್ದಂಷ್ಟ್ರಾ ವ್ಯಾಘ್ರಾ ಇವ ದುರಾಸದಾಃ ॥ ೪೧

---

ಮಾಡುವನೋ, ಯಾವುದರ ಕಾಂತಿಯಿಂದ ಅಲ್ಲಿನ ಮೃಗ ಪಕ್ಷಿಗಳೆಲ್ಲವೂ ಬಂಗಾರಬಣ್ಣದವುಗಳಾಗಿ ಶೋಭಿಸುವುವೋ ಅಂಥ ಮೇರುಪರ್ವತವಿದೆಯಷ್ಟೆ (೩೫–೩೬). ಅದರ ತಪ್ಪಲಲ್ಲಿ ಮಹಾತ್ಮರಾದ ಮಹರ್ಷಿಗಳು ಎಡಬಿಡದೆ ವಾಸಿಸುತ್ತಿದ್ದಾರೆ. ಎಲ್ಲ ಬಗೆಯ ಹಣ್ಣುಗಳನ್ನೂ ಎಲ್ಲ ಸಮಯದಲ್ಲಿಯೂ ಕೊಡುವ ಮರಗಳು ಅಲ್ಲಿ ಬೆಳೆದು ನಿಂತಿರುತ್ತವೆ. ಉತ್ತಮಜಾತಿಯ ಜೇನು ಹೇರಳವಾಗಿ ದೊರೆಯುತ್ತದೆ. ಅಂಥ ಸುವರ್ಣಮಯವಾದ ಮೇರುಪರ್ವತದಲ್ಲಿ ಕೇಸರಿಯೆಂಬ ವಾನರೋತ್ತಮನು ನೆಲೆಸಿದ್ದಾನೆ (೩೭–೩೮). ಅದೋ, ಅಲ್ಲಿ ಗೋಚರಿಸತಕ್ಕವನೇ ಕೇಸರಿ. ಆ ಪ್ರಾಂತದಲ್ಲಿ ಕಂಗೊಳಿಸುವ ಅರುವತ್ತು ಸಾವಿರ ಕಾಂಚನಪರ್ವತಗಳ ಮಧ್ಯದಲ್ಲಿ, ರಾಕ್ಷಸೇಶ್ವರ, ರಾಕ್ಷಸರ ನಡುವೆ ನೀನು ವಿರಾಜಿಸುವಂತೆ ಆ ಮೇರುಪರ್ವತವು ವಿರಾಜಿಸುತ್ತದೆ. ಅದರ ಸುತ್ತಲೂ ಇರುವ ಕಾಂಚನಗಿರಿಗಳಲ್ಲಿ ಈ ಕಪಿಲವರ್ಣದವರೂ ಬಿಳಿಯ ಬಣ್ಣದವರೂ ಕೆಂಪುಮೋರೆಯವರೂ ಜೇನಿನಂತೆ ಪಿಂಗಳವರ್ಣದವರೂ ಆದ ಕಪಿಗಳು ವಾಸಿಸುತ್ತಿದ್ದಾರೆ (೩೯–೪೦). ಅವರ ಕೋರೆಹಲ್ಲುಗಳು ಬಹಳ ಹರಿತವಾದವು. ಉಗುರುಗಳೇ ಅವರ ಆಯುಧಗಳು. ನಾಲ್ಕು ಕೋರೆ

ಸರ್ವೇ ವೈಶ್ವಾನರಸಮಾ ಜ್ವಲಿತಾಶೀವಿಷೋಪಮಾಃ ।
ಸುದೀರ್ಘಾಂಚಿತಲಾಂಗೂಲಾ ಮತ್ತಮಾತಂಗಸನ್ನಿಭಾಃ ॥ ೪೨

ಮಹಾಪರ್ವತಸಂಕಾಶಾ ಮಹಾಜೀಮೂತನಿಃಸ್ವನಾಃ ।
ವೃತ್ತ ಪಿಂಗಲರಕ್ತಾಕ್ಷಾ ಭೀಮಭೀಮಗತಿಸ್ವರಾಃ ॥ ೪೩

ಮರ್ದಯಂತೀವ ತೇ ಸರ್ವೇ ತಸ್ಥುರ್ಲಂಕಾಂ ಸಮೀಕ್ಷ್ಯ ತೇ
ಏಷ ಚೈಷಾಮಧಿಪತಿರ್ಮಧ್ಯೇ ತಿಷ್ಠತಿ ವೀರ್ಯವಾನ್ ॥ ೪೪

ಜಯಾರ್ಥೀ ನಿತ್ಯಮಾದಿತ್ಯಮುಪತಿಷ್ಠತಿ ಬುದ್ಧಿಮಾನ್ ।
ನಾಮ್ನಾ ಪೃಥಿವ್ಯಾಂ ವಿಖ್ಯಾತೋ ರಾಜನ್ ಶತಬಲೀತಿ ಯಃ ॥ ೪೫

ಏಷ್ಯೈವಾಶಂಸತೇ ಲಂಕಾಂ ಸ್ವೇನಾನೀಕೇನ ಮರ್ದಿತುಮ್ ।
ವಿಕ್ರಾಂತೋ ಬಲವಾನ್ ಶೂರಃ ಪೌರುಷೇ ಸ್ವೇ ವ್ಯವಸ್ಥಿತಃ ॥ ೪೬

ರಾಮಪ್ರಿಯಾರ್ಥಂ ಪ್ರಾಣಾನಾಂ ದಯಾಂ ನ ಕುರುತೇ ಹರಿಃ ।
ಗಜೋ ಗವಾಕ್ಷೋ ಗವಯೋ ನಲೋ ನೀಲಶ್ಚ ವಾನರಃ ॥ ೪೭

---

ಗಳಿರುವ ಸಿಂಹಗಳಂತೆಯೂ ಹೆಬ್ಬುಲಿಗಳಂತೆಯೂ ಮಹಾಪರಾಕ್ರಮಿಗಳು. ಅಗ್ನಿಯಂತೆ ತೀಕ್ಷ್ಣಸ್ವಭಾವದವರು. ವಿಷಸರ್ಪಗಳಂತೆ ಘಾತುಕರು! ಉದ್ದವಾದ ಬಾಲವುಳ್ಳವರು. ಮದ್ದಾನೆಗಳಂತೆ ಮಹಾಕಾಯರು (೪೧–೪೨). ಈ ಕಪಿಗಳು ಬೆಟ್ಟಗಳಂತೆ ಉನ್ನತಾಕೃತಿಗಳು. ಕಾರ್ಮೋಡಗಳಂತೆ ಗರ್ಜಿಸತಕ್ಕವರು. ದುಂಡಗೆ ಪಿಂಗಳವರ್ಣವಾಗಿ ಅಂಚಿನಲ್ಲಿ ಕೆಂಪುಬಣ್ಣವಿರುವ ಕಣ್ಣುಗಳು ಅವರಿಗೆ! ಅವರ ನಡೆನುಡಿಗಳೆಲ್ಲವೂ ಭೀಕರ (೪೩). ಆ ವಾನರರು ನಿನ್ನ ಲಂಕಾನಗರವನ್ನು ಧ್ವಂಸಮಾಡುವಂತೆ ಉಗ್ರದೃಷ್ಟಿಯಿಂದ ನೋಡುತ್ತಿದ್ದಾರೆ. ಅವರ ಮಧ್ಯದಲ್ಲಿ ವೀರ್ಯಶಾಲಿಯಾದ ಸೇನಾಪತಿಯೊಬ್ಬನಿದ್ದಾನೆ, ನೋಡು. ಅವನು ಬುದ್ಧಿಶಾಲಿ. ಜಯಾಪೇಕ್ಷೆಯಿಂದ ನಿತ್ಯವೂ ಸೂರ್ಯನ ಉಪಾಸನೆಯನ್ನು ಮಾಡುತ್ತಾನೆ. ಮಹಾಪ್ರಭು, ಆತನ ಹೆಸರು ಶತಬಲಿ. ಬಹಳ ಸಾಹಸಿ, ಶೂರ, ಧೀರ, ತನ್ನ ಸೇನೆಯೊಡನೆ ತಾನೊಬ್ಬನೇ ಲಂಕೆಯನ್ನು ಗೆಲ್ಲಬಲ್ಲೆನೆಂದು ನಂಬಿದ್ದಾನೆ (೪೪–೪೬). ಆ ವಾನರನು ರಾಮನಿಗೆ ಪ್ರಿಯವಾದ ಕಾರ್ಯವನ್ನು ಮಾಡುವ ಪ್ರಸಂಗದಲ್ಲಿ ತನ್ನ ಪ್ರಾಣದಮೇಲೂ ಕನಿಕರವನ್ನು ತೋರಿಸತಕ್ಕವನಲ್ಲ! ಮಹಾರಾಜ,

ಏಕೈಕ ಏವ ಯೂಥಾನಾಂ ಕೋಟಿಭಿರ್ದಶಭಿರ್ವೃತಃ ।
ತಥಾನ್ಯೇ ವಾನರಶ್ರೇಷ್ಠಾ ವಿಂಧ್ಯಪರ್ವತವಾಸಿನಃ ॥ ೪೮

ನ ಶಕ್ಯಂ ತೇ ಬಹುತ್ವಾತ್ತು ಸಂಖ್ಯಾತುಂ ಲಘುವಿಕ್ರಮಾಃ ॥

ಸರ್ವೇ ಮಹಾರಾಜ ಮಹಾಪ್ರಭಾವಾಃ
ಸರ್ವೇ ಮಹಾಶೈಲನಿಕಾಶಕಾಯಾಃ ।
ಸರ್ವೇ ಸಮರ್ಥಾಃ ಪೃಥಿವೀಂ ಕ್ಷಣೇನ
ಕರ್ತುಂ ಪ್ರವಿಧ್ವಸ್ತವಿಕೀರ್ಣಶೈಲಾಮ್ ॥ ೪೯

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತವಿಂಶಃ ಸರ್ಗಃ

---

ಇವರಲ್ಲದೆ ಗಜ ಗವಾಕ್ಷ ಗವಯ ನಳ ನೀಲ ಎಂಬ ಐವರು ಸೇನಾಪತಿಗಳಿದ್ದಾರೆ. ಒಬ್ಬೊಬ್ಬನ ಬಳಿಯಲ್ಲಿ ಹತ್ತುಕೋಟಿ ಸೈನಿಕರಿದ್ದಾರೆ. ಅಲ್ಲದೆ ವಿಂಧ್ಯಪರ್ವತವಾಸಿಗಳಾದ ಬಹುಮಂದಿ ವಾನರಯೋಧರಿದ್ದಾರೆ. ಅವರನ್ನೆಣಿಸುವುದು ಸಾಧ್ಯವೇ ಇಲ್ಲ (೪೭–೪೮). ಮಹಾಸ್ವಾಮಿ, ಎಲ್ಲರೂ ಮಹಾಮಹಿಮರು; ಎಲ್ಲರೂ ಮಹಾಶೈಲಗಳಂತೆ ಬೃಹದಾಕಾರರು. ಎಲ್ಲರೂ ಕ್ಷಣಮಾತ್ರದಲ್ಲಿ ಪೃಥ್ವಿಯಲ್ಲಿರುವ ಪರ್ವತಗಳನ್ನು ಪುಡಿಮಾಡಿ ತೂರಾಡಬಲ್ಲ ಸಾಹಿಸಿಗಳು'' ಎಂದು ಅರಿಕೆ ಮಾಡಿದನು (೪೯).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಇಪ್ಪತ್ತೇಳನೆಯ ಸರ್ಗ

---

## ಅಷ್ಟಾವಿಂಶಃ ಸರ್ಗಃ

### ಮೈಂದಾದಿಪರಾಕ್ರಮಾಖ್ಯಾನಮ್

ಸಾರಣಸ್ಯ ವಚಃ ಶ್ರುತ್ವಾ ರಾವಣಂ ರಾಕ್ಷಸಾಧಿಪಮ್ ।
ಬಲಮಾದಿಶ್ಯ ತತ್ಸರ್ವಂ ಶುಕೋ ವಾಕ್ಯಮಥಾಬ್ರವೀತ್ ॥ ೧

ಸ್ಥಿತಾನ್ ಪಶ್ಯಸಿ ಯಾನೇತಾನ್ ಮತ್ತಾನಿವ ಮಹಾದ್ವಿಪಾನ್ ।
ನ್ಯಗ್ರೋಧಾನಿವ ಗಾಂಗೇಯಾನ್ ಸಾಲಾನ್ ಹೈಮವತಾನಿವ ॥ ೨

ಏತೇ ದುಷ್ಪ್ರಸಹಾ ರಾಜನ್ ಬಲಿನಃ ಕಾಮರೂಪಿಣಃ ।
ದೈತ್ಯದಾನವಸಂಕಾಶಾ ಯುದ್ಧೇ ದೇವಪರಾಕ್ರಮಾಃ ॥ ೩

ಏಷಾಂ ಕೋಟಿಸಹಸ್ರಾಣಿ ನವ ಪಂಚ ಚ ಸಪ್ತ ಚ ।
ತಥಾ ಶಂಖಸಹಸ್ರಾಣಿ ತಥಾ ಬೃಂದಶತಾನಿ ಚ ॥ ೪

ಏತೇ ಸುಗ್ರೀವಸಚಿವಾಃ ಕಿಷ್ಕಿಂಧಾನಿಲಯಾಃ ಸದಾ ।
ಹರಯೋ ದೇವಗಂಧರ್ವೈರುತ್ಪನ್ನಾಃ ಕಾಮರೂಪಿಣಃ ॥ ೫

## ಸರ್ಗ ೨೮

ಶುಕನು ಮೈಂದಾದಿಗಳ ಪರಾಕ್ರಮವನ್ನು ರಾವಣನಿಗೆ ತಿಳಿಸುವುದು.

ಈ ರೀತಿಯಲ್ಲಿ ಸಾರಣನು ಹೇಳಿದುದನ್ನು ಕೇಳಿ, ಶುಕನು ರಾಕ್ಷಸೇಶ್ವರನಾದ ರಾವಣನಿಗೆ ವಾನರಸೇನೆಯನ್ನು ತೋರಿಸುತ್ತ ಹೀಗೆಂದನು: ''ಮಹಾರಾಜ, ಮತ್ತಮಾತಂಗಗಳಂತಿರುವ ಆ ಕಪಿವೀರರನ್ನು ನೋಡು. ಗಂಗಾತೀರದಲ್ಲಿ ಬೆಳೆದ ಆಲದ ಮರಗಳಂತೆಯೂ ಹಿಮವಂತನಲ್ಲಿ ಬೆಳೆದ ಸಾಲವೃಕ್ಷಗಳಂತೆಯೂ ಬೃಹತ್ಕಾಯರಾಗಿದ್ದಾರೆ (೧–೨). ಅವರು ಬಲಾಢ್ಯರು; ಕಾಮರೂಪಿಗಳು. ಯುದ್ಧದಲ್ಲಿ ದೈತ್ಯದಾನವರಿಗೂ ದೇವತೆಗಳಿಗೂ ಸಾಟಿಯಾದವರು. ಅಪಾರವಾದ ಆ ಪಡೆಗಳ ಸಂಖ್ಯೆಯು ಕೋಟಿ, ಶಂಖ, ಬೃಂದಗಳ ಲೆಕ್ಕದಲ್ಲಿದೆ. ಅವರೆಲ್ಲರೂ ಸುಗ್ರೀವನಿಗೆ ಆಪ್ತರಾಗಿ ಕಿಷ್ಕಿಂಧೆಗೆ ಸೇರಿದವರು. ದೇವ ಗಂಧರ್ವರಿಂದ ಉತ್ಪನ್ನರಾದ್ದರಿಂದ ಕಾಮರೂಪಿಗಳಾಗಿದ್ದಾರೆ (೩–೫).

ಯೌ ತೌ ಪಶ್ಯಸಿ ತಿಷ್ಠಂತೌ ಕುಮಾರೌ ದೇವರೂಪಿಣೌ ।
ಮೈಂದಶ್ಚ ದ್ವಿವಿದಶ್ಚೋಭೌ ತಾಭ್ಯಾಂ ನಾಸ್ತಿ ಸಮೋ ಯುಧಿ ॥ ೬

ಬ್ರಹ್ಮಣಾ ಸಮನುಜ್ಞಾತವಮೃತಪ್ರಾಶಿನಾವುಭೌ ।
ಆಶಂಸೇತೇ ಯುಧಾ ಲಂಕಾಮೇತೌ ಮರ್ದಿತುಮೋಜಸಾ ॥ ೭

ಯಂ ತು ಪಶ್ಯಸಿ ತಿಷ್ಠಂತಂ ಪ್ರಭಿನ್ನಮಿವ ಕುಂಜರಮ್ ।
ಯೋ ಬಲಾತ್ಕ್ಷೋಭಯೇತ್ಕ್ರುದ್ಧಃ ಸಮುದ್ರಮಪಿ ವಾನರಃ ॥ ೮

ಏಷೋಽಭಿಗಂತಾ ಲಂಕಾಯಾ ವೈದೇಹ್ಯಾಸ್ತವ ಚ ಪ್ರಭೋ ।
ಏನಂ ಪಶ್ಯ ಪುರಾ ದೃಷ್ಟಂ ವಾನರಂ ಪುನರಾಗತಮ್ ॥ ೯

ಜ್ಯೇಷ್ಠಃ ಕೇಸರಿಣಃ ಪುತ್ರೋ ವಾತಾತ್ಮಜ ಇತಿ ಶ್ರುತಃ ।
ಹನುಮಾನಿತಿ ವಿಖ್ಯಾತೋ ಲಂಘಿತೋ ಯೇನ ಸಾಗರಃ ॥ ೧೦

ಕಾಮರೂಪೀ ಹರಿಶ್ರೇಷ್ಠೋ ಬಲರೂಪಸಮನ್ವಿತಃ ।
ಅನಿವಾರ್ಯಗತಿಶ್ಚೈವ ಯಥಾ ಸತತಗಃ ಪ್ರಭುಃ ॥ ೧೧

ಉದ್ಯಂತಂ ಭಾಸ್ಕರಂ ದೃಷ್ಟ್ವಾ ಬಾಲಃ ಕಿಲ ಪಿಪಾಸಿತಃ ।
ತ್ರಿಯೋಜನಸಹಸ್ರಂ ತು ಅಧ್ವಾನಮವತೀರ್ಯ ಹಿ ॥ ೧೨

---

ಮಹಾಸ್ವಾಮಿ, ದೇವರೂಪಿಗಳಾದ ಇಬ್ಬರು ತರುಣರು ಎದುರಿಗೆ ಕಾಣಿಸುವರಲ್ಲವೇ? ಅವರು ಮೈಂದ ದ್ವಿವಿದರು. ಸಂಗ್ರಾಮದಲ್ಲಿ ಅವರಿಗೆ ಎಣೆಯಾದವರಿಲ್ಲ. ಬ್ರಹ್ಮನ ಅನುಜ್ಞೆಯಿಂದ ಅವರಿಬ್ಬರು ಅಮೃತಪಾನ ಮಾಡಿದ್ದಾರೆ. ತಾವಿಬ್ಬರೇ ಲಂಕೆಯನ್ನು ಜಯಿಸಬೇಕೆಂದು ಬಯಸಿದ್ದಾರೆ (೬–೭). ಮದಿಸಿದ ಗಜದಂತೆ ಅಲ್ಲೊಬ್ಬ ವಾನರನು ಕಾಣಿಸುತ್ತಿರುವ ನಲ್ಲವೇ? ಇವನು ಕ್ರುದ್ಧನಾದರೆ ಕಡಲನ್ನೇ ಕಲಕಬಲ್ಲನು. ಈತನೇ ಲಂಕೆಗೆ ಬಂದು ವೈದೇಹಿಯನ್ನೂ ನಿನ್ನನ್ನೂ ನೋಡಿಹೋದವನು! ಹಿಂದೆ ನೀನು ನೋಡಿದ ವಾನರನೇ ಇವನು, ಮತ್ತೆ ಬಂದಿದ್ದಾನೆ! (೮–೯). ಕೇಸರಿಗೆ ಕ್ಷೇತ್ರಜನಾದ ಜ್ಯೇಷ್ಠಪುತ್ರ. ವಾಯುತನಯನೆಂದು ಪ್ರಖ್ಯಾತನಾಗಿದ್ದಾನೆ. ಮಹಾಪ್ರಭು, ಸಮುದ್ರವನ್ನು ಲಂಘಿಸಿ ಬಂದ ಈತನೇ ಹನುಮಂತ! ಬಲ ರೂಪಮನ್ವಿತನಾದ ಕಾಮರೂಪಿ. ತಂದೆಯಾದ ವಾಯುವಿನಂತೆ ಇವನ ಗತಿಗೆ ತಡೆಯೆಂಬುದಿಲ್ಲ (೧೦–೧೧). ಈ ಹನುಮಂತನು ಬಾಲಕನಾಗಿದ್ದಾಗ

ಆದಿತ್ಯಮಾಹರಿಷ್ಯಾಮಿ ನ ಮೇ ಕ್ಷುತ್ಪ್ರತಿಯಾಸ್ಯತಿ ।
ಇತಿ ಸಂಚಿಂತ್ಯ ಮನಸಾ ಪುರೈಷ ಬಲದರ್ಪಿತಃ ॥ ೧೩

ಅನಾಧೃಷ್ಯ ತಮಂ ದೇವಮಪಿ ದೇವರ್ಷಿದಾನವೈಃ ।
ಅನಾಸಾದ್ಯೈವ ಪತಿತೋ ಭಾಸ್ಕರೋದಯನೇ ಗಿರೌ ॥ ೧೪

ಪತಿತಸ್ಯ ಕಪೇರಸ್ಯ ಹನುರೇಕಾ ಶಿಲಾತಲೇ ।
ಕಿಂಚಿದ್ಭಿನ್ನಾ ದೃಢಹನೋರ್ಹನುಮಾನೇಷ ತೇನ ವೈ ॥ ೧೫

ಸತ್ಯ ಮಾಗಮಯೋಗೇನ ಮಮೈಷ ವಿದಿತೋ ಹರಿಃ ।
ನಾಸ್ಯ ಶಕ್ಯಂ ಬಲಂ ರೂಪಂ ಪ್ರಭಾವೋ ವಾಪಿ ಭಾಷಿತುಮ್ ॥ ೧೬

ಏಷ ಆಶಂಸತೇ ಲಂಕಾಮೇಕೋ ಮರ್ದಿತುಮೋಜಸಾ ।
ಯೇನ ಜಾಜ್ವಲ್ಯತೇ ಸೌಮ್ಯ ಧೂಮಕೇತುಸ್ತವಾದ್ಯ ವೈ ॥ ೧೭

---

''ನನ್ನ ಹಸಿವು ಹಿಂಗುವುದಿಲ್ಲ, (ಆ ಹಣ್ಣನ್ನು ತಿನ್ನುವೆನು)'' ಎಂದು ಉದಿತನಾಗುತ್ತಿದ್ದ ಸೂರ್ಯನನ್ನು ಹಿಡಿಯುವುದಕ್ಕಾಗಿ ಮೂರು ಸಾವಿರ ಯೋಜನಗಳ ದೂರ ಆಕಾಶಕ್ಕೆ ನೆಗೆದನು (೧೨–೧೩). ದೇವರ್ಷಿದಾನವರಿಗೂ ನಿಲುಕದ ಸೂರ್ಯದೇವನನ್ನು ಹಿಡಿಯಲು ಹೋಗಿ, ಅವನ ಬಳಿಗೆ ಹೋಗಲಾರದೆ ಈ ಹನುಮಂತನು ಉದಯಪರ್ವತದಲ್ಲಿ ಬಿದ್ದನು. ಹಾಗೆ ಬೀಳಲಾಗಿ ಈತನ ದವಡೆಯು ಒಂದು ಬಂಡೆಗೆ ತಗುಲಿ ಊದಿಕೊಂಡಿತು. ಗಾಯಗೊಂಡ ಹನುವಿರುವುದರಿಂದ ಹನುಮಂತನೆಂದು ಪ್ರಸಿದ್ಧನಾದನು (೧೪–೧೫). ಮಹಾಪ್ರಭು, ಈತನ ಪೂರ್ವವೃತ್ತಾಂತದೊಡನೆ ಈ ವಾನರನನ್ನು ನಾನು ಚೆನ್ನಾಗಿ ಬಲ್ಲೆನು. ಈತನ ಬಲ ರೂಪ ಸಾಮರ್ಥ್ಯಗಳು ಇಷ್ಟೆಂದು ಹೇಳಲು ನನಗೆ ಸಾಮರ್ಥ್ಯವಿಲ್ಲ! ತಾನೊಬ್ಬನೇ ಲಂಕೆಯನ್ನು ಮರ್ದಿಸಬಲ್ಲೆನೆಂದು ಹನುಮಂತನು ತಿಳಿದಿದ್ದಾನೆ. ಇವನ ದೆಸೆಯಿಂದಲೇ ನಿನ್ನ ಧೂಮಕೇತುವು* ಇಂದು ಪ್ರಕಾಶಿಸತೊಡಗಿದೆ (೧೬–೧೭).

---

* ಧೂಮಕೇತುವು ಅನಿಷ್ಟಸೂಚಕವಾದ ಉತ್ಪಾತಗ್ರಹ. ರಾವಣನಿಗೆ ಬಂದ ವಿಪತ್ತಿಗೆ ಹನುಮಂತನೇ ಮೂಲಕಾರಣನೆಂದು ಅಭಿಪ್ರಾಯ. ಇಲ್ಲಿ ವ್ಯಾಖ್ಯಾನಕಾರರು ಧೂಮಕೇತುವೆಂದರೆ ಅಗ್ನಿಯೆಂದೂ ಹನುಮಂತನ ಬಾಲಕ್ಕೆ ಬೆಂಕಿ ಹತ್ತಿಸಿದ ಸಂದರ್ಭವು ವರ್ಣಿತವಾಗಿದೆಯೆಂದೂ ಅಭಿಪ್ರಾಯಪಡುತ್ತಾರೆ.

ಲಂಕಾಯಾಂ ನಿಹಿತಶ್ಚಾಪಿ ಕಥಂ ನ ಸ್ಮರಸೇ ಕಪಿಮ್ ।
ಯಶ್ಚೈಷೋಽನಂತರಃ ಶೂರಃ ಶ್ಯಾಮಃ ಪದ್ಮನಿಭೇಕ್ಷಣಃ ॥ ೧೮

ಇಕ್ಷ್ವಾಕೂಣಾಮತಿರಥೋ ಲೋಕೇ ವಿಖ್ಯಾತಪೌರುಷಃ ।
ಯಸ್ಮಿನ್ನ ಚಲತೇ ಧರ್ಮೋ ಯೋ ಧರ್ಮನ್ನಾತಿವರ್ತತೇ ॥ ೧೯

ಯೋ ಬ್ರಾಹ್ಮಮಸ್ತ್ರಂ ವೇದಾಂಶ್ಚ ವೇದ ವೇದವಿದಾಂ ವರಃ ।
ಯೋ ಭಿಂದ್ಯಾದ್ಗಗನಂ ಬಾಣೈಃ ಪರ್ವತಾನಪಿ ದಾರಯೇತ್ ॥ ೨೦

ಯಸ್ಯ ಮೃತ್ಯೋರಿವ ಕ್ರೋಧಃ ಶಕ್ರಸ್ಯೇವ ಪರಾಕ್ರಮಃ ।
ಯಸ್ಯ ಭಾರ್ಯಾ ಜನಸ್ಥಾನಾತ್ಸೀತಾ ಚಾಪಹೃತಾ ತ್ವಯಾ ॥ ೨೧

ಸ ಏಷ ರಾಮಸ್ತ್ವಾಂ ಯೋದ್ಧುಂ ರಾಜನ್ ಸಮಭಿವರ್ತತೇ ।
ಯಸ್ಯೈಷ ದಕ್ಷಿಣೇ ಪಾರ್ಶ್ವೇ ಶುದ್ಧಜಾಂಬೂನದಪ್ರಭಃ ॥ ೨೨

ವಿಶಾಲವಕ್ಷಾಸ್ತಾಮ್ರಾಕ್ಷೋ ನೀಲಕುಂಚಿತಮೂರ್ಧಜಃ ।
ಏಷೋಽಸ್ಯ ಲಕ್ಷ್ಮಣೋ ನಾಮ ಭ್ರಾತಾ ಪ್ರಾಣಸಮಃ ಪ್ರಿಯಃ ॥ ೨೩

---

ಲಂಕೆಗೆ ಬಂದಿಳಿದವನು ಈತನೇ. ಇವನ ನೆನಪು ನಿನಗಿರಬೇಕಲ್ಲವೇ ? ಲಂಕೇಶ್ವರ, ಹನುಮಂತನ ಪಕ್ಕದಲ್ಲಿ ಶ್ಯಾಮಲಾಂಗನೂ ಪದ್ಮನೇತ್ರನೂ ಆದ ಒಬ್ಬ ಶೂರನು ನಿಂತಿರುವನು, ನೋಡು! ಇಕ್ಷ್ವಾಕು ವಂಶದಲ್ಲಿ ಅತಿರಥನೆನಿಸಿದವನೀತನು. ಪೌರುಷಕ್ಕೆ ಹೆಸರಾದವನು. ಧರ್ಮವು ಇವನಲ್ಲಿ ಚಲಿಸದು. ಧರ್ಮವನ್ನು ಮೀರಿ ನಡೆಯುವವನಲ್ಲ (೧೮–೧೯). ಈ ವೀರನು ಬ್ರಹ್ಮಾಸ್ತ್ರವನ್ನು ಬಲ್ಲ, ಚತುರ್ವೇದಗಳನ್ನು ಬಲ್ಲ, ವೇದವಿದರಲ್ಲಿ ಅಗ್ರಗಣ್ಯನಿವನು. ತನ್ನ ಬಾಣಗಳಿಂದ ಗಗನವನ್ನು ಕತ್ತರಿಸಿಯಾನು! ಪರ್ವತಗಳನ್ನು ಸೀಳಿ ಎಸೆದಾನು! (೨೦). ಇವನಿಗೆ ಕೋಪ ಬಂದರೆ ಮೃತ್ಯುವಿನ ಕೋಪಕ್ಕೆ ಎಣೆಯಾದೀತು. ಇಂದ್ರನಂತೆ ಇವನ ಪರಾಕ್ರಮ. ಮಹಾರಾಜ, ಈತನ ಪತ್ನಿಯಾದ ಸೀತೆಯನ್ನೇ ನೀನು ಜನಸ್ಥಾನದಿಂದ ಅಪಹರಿಸಿ ತಂದುದು. ರಾಮ ಎಂಬವನು ಈತನೇ! ನಿನ್ನೊಡನೆ ಯುದ್ಧ ಮಾಡಲು ಬಂದಿದ್ದಾನೆ. ರಾಮನ ಬಲಗಡೆಯಲ್ಲಿ ಒಬ್ಬ ತರುಣನು ಕಾಣಿಸುವನಲ್ಲವೇ? ಅಪ್ಪಟ ಚಿನ್ನದ ಬಣ್ಣದವನು (೨೧–೨೨). ವಿಶಾಲವಾದ ಅವನ ವಕ್ಷಸ್ಥಳವನ್ನು ನೋಡು. ರೋಷ ತಾಮ್ರಾಕ್ಷನೂ ಕಪ್ಪನೆಯ ಗುಂಗುರು ಕೂದಲುಳ್ಳವನೂ ಆದ ಅವನೇ

ನಯೇ ಯುದ್ಧೇ ಚ ಕುಶಲಃ ಸರ್ವಶಾಸ್ತ್ರವಿಶಾರದಃ ।
ಅಮರ್ಷೀ ದುರ್ಜಯೋ ಜೇತಾ ವಿಕ್ರಾಂತೋ ಬುದ್ಧಿಮಾನ್ ಬಲೀ

ರಾಮಸ್ಯ ದಕ್ಷಿಣೋ ಬಾಹುರ್ನಿತ್ಯಂ ಪ್ರಾಣೋ ಬಹಿಶ್ಚರಃ ।
ನ ಹ್ಯೇಷ ರಾಘವಸ್ಯಾರ್ಥೇ ಜೀವಿತಂ ಪರಿರಕ್ಷತಿ ॥ ೨೫

ಏಷೈವಾಶಂಸತೇ ಯುದ್ಧೇ ನಿಹಂತುಂ ಸರ್ವರಾಕ್ಷಸಾನ್ ।
ಯಸ್ತು ಸವ್ಯಮಸೌ ಪಕ್ಷಂ ರಾಮಸ್ಯಾಶ್ರಿತ್ಯ ತಿಷ್ಠತಿ ॥ ೨೬

ರಕ್ಷೋಗಣಪರಿಕ್ಷಿಪ್ತೋ ರಾಜಾ ಹ್ಯೇಷ ವಿಭೀಷಣಃ ।
ಶ್ರೀಮತಾ ರಾಜರಾಜೇನ ಲಂಕಾಯಾಮಭಿಷೇಚಿತಃ ॥ ೨೭

ತ್ವಾಮೇವ ಪ್ರತಿಸಂರಬ್ಧೋ ಯುದ್ಧಾಯೈಷೋಽಭಿವರ್ತತೇ ।
ಯಂ ತು ಪಶ್ಯಸಿ ತಿಷ್ಠಂತಂ ಮಧ್ಯೇ ಗಿರಿಮಿವಾಚಲಮ್ ॥ ೨೮

ಸರ್ವಶಾಖಾಮೃಗೇಂದ್ರಾಣಾಂ ಭರ್ತಾರಮಪರಾಜಿತಮ್ ।
ತೇಜಸಾ ಯಶಸಾ ಬುದ್ಧ್ಯಾ ಜ್ಞಾನೇನಾಭಿಜನೇನ ಚ ॥ ೨೯

---

ಲಕ್ಷ್ಮಣ! ರಾಮನಿಗೆ ಪ್ರಾಣಸಮನಾದ ಪ್ರೀತಿಯ ತಮ್ಮ (೨೩). ಲಕ್ಷ್ಮಣನು ರಾಜನೀತಿಯಲ್ಲಿಯೂ ಯುದ್ಧವಿದ್ಯೆಯಲ್ಲಿಯೂ ಪ್ರವೀಣ. ಸರ್ವಶಾಸ್ತ್ರ ವಿಶಾರದ. ಕೋಪಸ್ವಭಾವದವನು. ಬುದ್ಧಿಶಾಲಿ ಬಲಪರಾಕ್ರಮಗಳಲ್ಲಿ ಅಜೇಯನಾದವನು. ಮಹಾರಾಜ, ರಾಮನಿಗೆ ಅವನು ಬಲಗೈಯಿದ್ದಂತೆ; ಹೊರಗೆ ಸುಳಿದಾಡುವ ಪ್ರಾಣವಿದ್ದಂತೆ. ಅಣ್ಣನಿಗಾಗಿ ಅವನು ಪ್ರಾಣವನ್ನಾದರೂ ಕೊಡಲು ಸಿದ್ಧನಾಗಿದ್ದಾನೆ (೨೪–೨೫). ಲಕ್ಷ್ಮಣನು ತಾನೊಬ್ಬನೇ ಸಕಲ ರಾಕ್ಷಸರನ್ನೂ ಕೊಲ್ಲಲು ಹವಣಿಸಿದ್ದಾನೆ. ರಾಮನ ಎಡಭಾಗದಲ್ಲಿ ನಿಂತಿರುವವನೇ ವಿಭೀಷಣ! ರಾಕ್ಷಸರಿಂದ ತಿರಸ್ಕೃತನಾಗಿ ನಮ್ಮನ್ನು ಬಿಟ್ಟು ಹೋಗಿದ್ದಾನೆ. ರಾಜಾಧಿರಾಜನೆನಿಸಿದ ರಾಮನಿಂದ ಲಂಕಾಧಿಪತಿಯೆಂದು ಪಟ್ಟಾಭಿಷಿಕ್ತನಾಗಿದ್ದಾನೆ! (೨೬–೨೭). ಈ ವಿಭೀಷಣನು ನಿನ್ನ ಮೇಲೆ ಬಹಳ ಆಗ್ರಹಗೊಂಡು ಯುದ್ಧಕ್ಕೆ ಬಂದಿದ್ದಾನೆ. ಲಂಕೇಶ್ವರ, ರಾಮನಿಗೂ ವಿಭೀಷಣನಿಗೂ ನಡುವೆ ಒಬ್ಬ ವಾನರೋತ್ತಮನು ಬೆಟ್ಟದಂತೆ ನಿಶ್ಚಲನಾಗಿ ನಿಂತಿರುವನಲ್ಲವೆ? (೨೮). ಅವನು ಸಕಲ ವಾನರೇಂದ್ರರಿಗೂ ಅಧಿಪತಿಯಾದ ಸುಗ್ರೀವ. ಅಪಜಯವನ್ನೇ ಕಾಣದವನು. ತೇಜಸ್ಸು, ಯಶಸ್ಸು,

ಯಃ ಕಪೀನತಿಬಭ್ರಾಜ ಹಿಮವಾನಿವ ಪರ್ವತಾನ್ ।
ಕಿಷ್ಕಿಂಧಾಂ ಯಃ ಸಮಧ್ಯಾಸ್ತೇ ಗುಹಾಂ ಸಗಹನದ್ರುಮಾಮ್ ॥ ೩೦

ದುರ್ಗಾಂ ಪರ್ವತದುರ್ಗಸ್ಥಾಂ ಪ್ರಧಾನೈಃ ಸಹ ಯೂಥಪೈಃ ।
ಯಸ್ಯೈಷಾ ಕಾಂಚನೀ ಮಾಲಾ ಶೋಭತೇ ಶತಪುಷ್ಕರಾ ॥ ೩೧

ಕಾಂತಾ ದೇವಮನುಷ್ಯಾಣಾಂ ಯಸ್ಯಾಂ ಲಕ್ಷ್ಮೀಃ ಪ್ರತಿಷ್ಠಿತಾ ।
ಏತಾಂ ಚ ಮಾಲಾಂ ತಾರಾಂ ಚ ಕಪಿರಾಜ್ಯಂ ಚ ಶಾಶ್ವತಮ್ ॥ ೩೨

ಸುಗ್ರೀವೋ ವಾಲಿನಂ ಹತ್ವಾ ರಾಮೇಣ ಪ್ರತಿಪಾದಿತಃ ।
ಶತಂ ಶತಸಹಸ್ರಾಣಾಂ ಕೋಟಿಮಾಹುರ್ಮನೀಷಿಣಃ ॥ ೩೩

ಶತಂ ಕೋಟಿಸಹಸ್ರಾಣಾಂ ಶಂಖ ಇತ್ಯಭಿಧೀಯತೇ ।
ಶತಂ ಶಂಖಸಹಸ್ರಾಣಾಂ ಮಹಾಶಂಖ ಇತಿ ಸ್ಮೃತಮ್ ॥ ೩೪

ಮಹಾ ಶಂಖಸಹಸ್ರಾಣಾಂ ಶತಂ ಬೃಂದಮಿತಿ ಸ್ಮೃತಮ್ ।
ಶತಂ ಬೃಂದಸಹಸ್ರಾಣಾಂ ಮಹಾಬೃಂದಮಿತಿ ಸ್ಮೃತಮ್ ॥ ೩೫

---

ಬುದ್ಧಿಶಕ್ತಿ, ವಿವೇಕ, ವಂಶೋನ್ನತಿಗಳಲ್ಲಿ ಇವನಿಗೆ ಸಮರಾದ ವಾನರರಿಲ್ಲ. ಪರ್ವತಗಳಲ್ಲಿ ಹಿಮವಂತನಂತೆ ಇವನು ವಾನರರಲ್ಲಿ ಶ್ರೇಷ್ಠನಾದವನು (೩೯). ಈತನು ಅರಣ್ಯಗಳಿಂದಲೂ ಗಿರಿಗಳಿಂದಲೂ ದುರ್ಗಮವಾದ ಕಿಷ್ಕಿಂಧೆಯಲ್ಲಿ ಪ್ರಧಾನರಾದ ಯೂಥಪತಿಗಳೊಡನೆ ವಾಸಿಸುತ್ತಿದ್ದಾನೆ. ಇವನ ವಕ್ಷಸ್ಥಳದಲ್ಲಿ ನೂರು ಕಾಂಚನಕಮಲಗಳಿರುವ ದಿವ್ಯಮಾಲೆಯು ಶೋಭಿಸುತ್ತಿರುವುದು, ನೋಡು, ದೇವ ಮನುಷ್ಯರಿಗೂ ಸಹ ಆಸೆಯನ್ನು ಹುಟ್ಟಿಸುವ ಹಾರವದು. ಅದರಲ್ಲಿ ಸೌಭಾಗ್ಯ ಲಕ್ಷ್ಮಿಯೇ ನೆಲೆಸಿರುವಳು. ರಾಮನು ವಾಲಿಯನ್ನು ಕೊಂದು, ಈ ಮಾಲೆ, ತಾರೆ, ಶಾಶ್ವತವಾದ ಕಪಿರಾಜ್ಯ – ಈ ಮೂರನ್ನು ಸುಗ್ರೀವನಿಗೆ ದೊರಕಿಸಿಕೊಟ್ಟಿದ್ದಾನೆ! (೩೦–೩೨). ಮಹಾರಾಜ, (ಇಲ್ಲಿ ನೆರೆದಿರುವ ವಾನರರ ಒಟ್ಟು ಸಂಖ್ಯೆಯನ್ನು (ಹೇಳುವೆನು.) ನೂರು ಲಕ್ಷಗಳಿಗೆ ಒಂದು ಕೋಟಿಯೆಂದು ಪಂಡಿತರು ಹೇಳುತ್ತಾರೆ. ಒಂದು ಲಕ್ಷ ಕೋಟಿ ಗಳಿಗೆ ಶಂಖವೆಂದೂ ಒಂದು ಲಕ್ಷ ಶಂಖಗಳಿಗೆ ಮಹಾಶಂಖವೆಂದೂ ಹೆಸರು (೩೩–೩೪). ಒಂದು ಲಕ್ಷ ಮಹಾಶಂಖಗಳಿಗೆ ಬೃಂದವೆಂದೂ ಒಂದು ಲಕ್ಷ

ಮಹಾಬೃಂದಸಹಸ್ರಾಣಾಂ ಶತಂ ಪದ್ಮಮಿತಿ ಸ್ಮೃತಮ್ ।
ಶತಂ ಪದ್ಮ ಸಹಸ್ರಾಣಾಂ ಮಹಾಪದ್ಮಮಿತಿ ಸ್ಮೃತಮ್ ॥ ೩೬

ಮಹಾಪದ್ಮಸಹಸ್ರಾಣಾಂ ಶತಂ ಖರ್ವಮಿಹೋಚ್ಯತೇ ।
ಶತಂ ಖರ್ವಸಹಸ್ರಾಣಾಂ ಮಹಾಖರ್ವಮಿತಿ ಸ್ಮೃತಮ್ ॥ ೩೭

ಮಹಾಖರ್ವಸಹಸ್ರಾಣಾಂ ಸಮುದ್ರಮಭಿಧೀಯತೇ ।
ಶತಂ ಸಮುದ್ರಸಾಹಸ್ರಮೋಘ ಇತ್ಯಭಿಧೀಯತೇ ॥ ೩೮

ಶತಮೋಘಸಹಸ್ರಾಣಾಂ ಮಹೌಘ ಇತಿ ವಿಶ್ರುತಃ ।
ಏವಂ ಕೋಟಿಸಹಸ್ರೇಣ ಶಂಖಾನಾಂ ಚ ಶತೇನ ಚ ॥ ೩೯

ಮಹಾಶಂಖಸಹಸ್ರೇಣ ತಥಾ ಬೃಂದಶತೇನ ಚ ।
ಮಹಾಬೃಂದಸಹಸ್ರೇಣ ತಥಾ ಪದ್ಮಶತೇನ ಚ ॥ ೪೦

ಮಹಾಪದ್ಮ ಸಹಸ್ರೇಣ ತಥಾ ಖರ್ವಶತೇನ ಚ ।
ಸಮುದ್ರೇಣ ಶತೇನ್ನೈವ ಮಹೌಘೇನ ತಥೈವ ಚ ॥ ೪೧

---

ಬೃಂದಗಳಿಗೆ ಮಹಾಬೃಂದವೆಂದೂ ಹೆಸರು. ಒಂದು ಲಕ್ಷ ಮಹಾಬೃಂದಗಳಿಗೆ ಪದ್ಮವೆನ್ನುತ್ತಾರೆ. ಒಂದು ಲಕ್ಷ ಪದ್ಮಗಳಿಗೆ ಮಹಾಪದ್ಮವೆನ್ನುತ್ತಾರೆ. ಒಂದು ಲಕ್ಷ ಮಹಾಪದ್ಮಗಳನ್ನು ಖರ್ವವೆಂದೂ ಒಂದು ಲಕ್ಷ ಖರ್ವಗಳನ್ನು ಮಹಾ ಖರ್ವವೆಂದೂ ಕರೆಯುತ್ತಾರೆ (೩೫–೩೭). ಮಹಾಖರ್ವಗಳ ಒಂದು ಲಕ್ಷವು ಸಮುದ್ರವೆಂದೂ ಸಮುದ್ರಗಳ ಒಂದು ಲಕ್ಷವು ಓಘವೆಂದೂ ಹೇಳಲ್ಪಡುತ್ತವೆ. ಒಂದು ಲಕ್ಷ ಓಘಗಳಿಗೆ ಮಹೌಘವೆಂದು ಹೆಸರು*(೩೮). (ಈ ಕಪಿ ಸೇನಾನಿಗಳ ಕೈಕಳಗೆ ವಿವಿಧ ಸಂಖ್ಯೆಯಲ್ಲಿ ಸೈನಿಕರಿದ್ದಾರೆ.) ಸಾವಿರ ಕೋಟಿ, ನೂರು ಶಂಖ, ಸಾವಿರ ಮಹಾಶಂಖ, ನೂರು ಬೃಂದ, ಸಾವಿರ ಮಹಾಬೃಂದ, ನೂರು ಪದ್ಮ ಸಾವಿರ ಮಹಾಪದ್ಮ ನೂರು ಖರ್ವ, ನೂರು ಸಮುದ್ರ, ನೂರು ಮಹೌಘಗಳಿರುವ ಬೇರೆಬೇರೆ ಪಡೆಗಳಿವೆ (೩೯–೪೧).

---

* ಕಿಷ್ಕಿಂಧಾಕಾಂಡದ ಅನುಬಂಧದಲ್ಲಿ ಜ್ಯೋತಿಶ್ಶಾಸ್ತ್ರದ ಪ್ರಕಾರ ಸಂಖ್ಯಾ ಗಣನೆಯ ವಿಧಾನವನ್ನು ತಿಳಿಸಿದೆ. ಇಲ್ಲಿ ಹೇಳಿರುವ ವಿಧಾನವು ಅದಕ್ಕಿಂತ ಭಿನ್ನವಾಗಿದೆ. ಪ್ರಾಚೀನಗ್ರಂಥಗಳಲ್ಲಿ ಗಣನಾಪ್ರಕಾರವು ಬೇರೆಬೇರೆಯಾಗಿ ಕಂಡುಬರುತ್ತದೆ.

ಏಷ ಕೋಟಿಮಹೌಘೇನ ಸಮುದ್ರಸದೃಶೇನ ಚ ।
ವಿಭೀಷಣೇನ ಸಚಿವೈ ರಾಕ್ಷಸೈಃ ಪರಿವಾರಿತಃ ॥ ೪೨

ಸುಗ್ರೀವೋ ವಾನರೇಂದ್ರಸ್ತ್ವಾಂ ಯುದ್ಧಾರ್ಥಮಭಿವರ್ತತೇ ।
ಮಹಾಬಲವೃತೋ ನಿತ್ಯಂ ಮಹಾಬಲಪರಾಕ್ರಮಃ ॥ ೪೩

ಇಮಾಂ ಮಹಾರಾಜ ಸಮೀಕ್ಷ್ಯ ವಾಹಿನೀ-
ಮುಪಸ್ಥಿತಾಂ ಪ್ರಜ್ವಲಿತಗ್ರಹೋಪಮಾಮ್ ।
ತತಃ ಪ್ರಯತ್ನಃ ಪರಮೋ ವಿಧೀಯತಾಂ
ಯಥಾ ಜಯಃ ಸ್ಯಾನ್ನ ಪರೈಃ ಪರಾಜಯಃ ॥ ೪೪

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಷ್ಟಾವಿಂಶಃ ಸರ್ಗಃ

---

ಮಹಾಪ್ರಭು, ಹೀಗೆ ಮಹಾಸಾಗರದಂತೆ ಸುಮಾರು ಒಂದು ಕೋಟಿ ಮಹೌಘದಷ್ಟು ವಾನರಯೋಧರು ಇಲ್ಲಿ ನೇರೆದಿದ್ದಾರೆ. ವಿಭೀಷಣನು ತನ್ನ ನಾಲ್ವರು ಸಚಿವರೊಡನೆ ಹೋಗಿ ಸೇರಿಕೊಂಡಿದ್ದಾನೆ. ಹೀಗೆ ಮಹಾ ಪರಾಕ್ರಮಿಯೂ ವಾನರೇಂದ್ರನೂ ಆದ ಸುಗ್ರೀವನು ದೊಡ್ಡ ಪಡೆಯೊಡನೆ ನಿನ್ನ ಮೇಲೆ ಯುದ್ಧಕ್ಕಾಗಿ ಬಂದಿದ್ದಾನೆ (೪೨-೪೩). ಮಹಾರಾಜ, ಪ್ರಜ್ವಲಿ ಸುವ ಕ್ರೂರಗ್ರಹಗಳಂತೆ ನೆರೆದಿರುವ ಈ ವಾನರವಾಹಿನಿಯನ್ನು ಚೆನ್ನಾಗಿ ಪರಿಶೀಲಿಸಿ ನೋಡು. ಶತ್ರುಗಳಿಂದ ನಮಗೆ ಯಾವ ಪಾಜಯವೂ ಆಗದೆ, ಜಯವೇ ಲಭಿಸುವಂತೆ ಅಮೋಘವಾದ ಪ್ರಯತ್ನವನ್ನು ಮಾಡು'' ಎಂದನು (೪೪).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಇಪ್ಪತ್ತೆಂಟನೆಯ ಸರ್ಗ

---

# ಏಕೋನತ್ರಿಂಶಃ ಸರ್ಗಃ

## ಶಾರ್ದೂಲಾದಿಚಾರಪ್ರೇಷಣಮ್

ಶುಕೇನ ತು ಸಮಾಖ್ಯಾತಾಂಸ್ತಾನ್ ದೃಷ್ಟ್ವಾ ಹರಿಯೂಥಪಾನ್ ।
ಲಕ್ಷ್ಮಣಂ ಚ ಮಹಾವೀರ್ಯಂ ಭುಜಂ ರಾಮಸ್ಯ ದಕ್ಷಿಣಮ್ ॥ ೧

ಸಮೀಪಸ್ಥಂ ಚ ರಾಮಸ್ಯ ಭ್ರಾತರಂ ಸ್ವಂ ವಿಭೀಷಣಮ್ ।
ಸರ್ವವಾನರರಾಜಂ ಚ ಸುಗ್ರೀವಂ ಭೀಮವಿಕ್ರಮಮ್ ॥ ೨

ಗಜಂ ಗವಾಕ್ಷಂ ಗವಯಂ ಮೈಂದಂ ದ್ವಿವಿದಮೇವ ಚ ।
ಅಂಗದಂ ಚೈವ ಬಲಿನಂ ವಜ್ರಹಸ್ತಾತ್ಮಜಾತ್ಮಜಮ್ ॥ ೩

ಹನೂಮಂತಂ ಚ ವಿಕ್ರಾಂತಂ ಜಾಂಬವಂತಂ ಚ ದುರ್ಜಯಮ್ ।
ಸುಷೇಣಂ ಕುಮುದಂ ನೀಲಂ ನಲಂ ಚ ಪ್ಲವಗರ್ಷಭಮ್ ॥ ೪

### ಸರ್ಗ ೨೯

ರಾವಣನು ಶುಕಸಾರಣರನ್ನು ಧಿಕ್ಕರಿಸಿ ಶಾರ್ದೂಲಾದಿ ಚಾರರನ್ನು ಪುನಃ
ಶ್ರೀರಾಮನ ಬಳಿಗೆ ಕಳಿಸುವುದು. ಶ್ರೀರಾಮನ ಕರುಣೆಯಿಂದ
ಅವರು ಬಂಧಮುಕ್ತರಾಗಿ ಲಂಕೆಗೆ ಹಿಂದಿರುಗುವುದು.

ಹೀಗೆ ಶುಕನು ತಿಳಿಸಿಹೇಳಿದ ವಾನರಸೇನಾನಿಗಳನ್ನು ರಾವಣನು ಗಮನಿಸಿ ನೋಡುತ್ತಿದ್ದನು. ಶ್ರೀರಾಮನನ್ನೂ ಅವನ ಬಲಭುಜದಂತಿದ್ದ ಮಹಾವೀರನಾದ ಲಕ್ಷ್ಮಣನನ್ನೂ ವೀಕ್ಷಿಸಿದನು. ಶ್ರೀರಾಮನ ಬಳಿಯಲ್ಲಿ ನಿಂತಿದ್ದ ತನ್ನ ತಮ್ಮನಾದ ವಿಭೀಷಣನನ್ನೂ ವಾನರೇಶ್ವರನೂ ಭೀಮವಿಕ್ರಮನೂ ಆದ ಸುಗ್ರೀವನನ್ನೂ ಅವಲೋಕಿಸಿದನು (೧–೨). ಹಾಗೆಯೇ ಗಜ, ಗವಾಕ್ಷ, ಗವಯ, ಮೈಂದ, ದ್ವಿವಿದ, ಮತ್ತು ಇಂದ್ರನ ಪೌತ್ರನೂ ಬಲಾಢ್ಯನೂ ಆದ ಅಂಗದ – ಇವರನ್ನು ಪರಿಶೀಲಿಸಿದನು. ಆ ರಾವಣನು ಪರಾಕ್ರಮಿಯಾದ ಹನುಮಂತನನ್ನೂ ಅಜೇಯನಾದ ಜಾಂಬವಂತನನ್ನೂ ಕಂಡನು. ಸುಷೇಣ, ಕುಮುದ, ನಳ, ನೀಲರನ್ನು ಆಲೋಕಿಸಿದನು (೩–೪).

**ಕಿಂಚಿದಾವಿಗ್ನಹೃದಯೋ ಜಾತಕ್ರೋಧಶ್ಚ ರಾವಣಃ ।**
**ಭರ್ತ್ಸಯಾಮಾಸ ತೌ ವೀರೌ ಕಥಾಂತೇ ಶುಕಸಾರಣೌ ॥ ೫**

**ಅಧೋಮುಖೌ ತೌ ಪ್ರಣತಾವಬ್ರವೀಚ್ಛುಕಸಾರಣೌ ।**
**ರೋಷಗದ್ಗದಯಾ ವಾಚಾ ಸಂರಬ್ಧಃ ಪರುಷಂ ವಚಃ ॥ ೬**

**ನ ತಾವತ್ಸದೃಶಂ ನಾಮ ಸಚಿವೈರುಪಜೀವಿಭಿಃ ।**
**ವಿಪ್ರಿಯಂ ನೃಪತೇರ್ವಕ್ತುಂ ನಿಗ್ರಹಪ್ರಗ್ರಹೇ ಪ್ರಭೋಃ ॥ ೭**

**ರಿಪೂಣಾಂ ಪ್ರತಿಕೂಲಾನಾಂ ಯುದ್ಧಾರ್ಥಮಭಿವರ್ತತಾಮ್ ।**
**ಉಭಾಭ್ಯಾಂ ಸದೃಶಂ ನಾಮ ವಕ್ತುಮಪ್ರಸ್ತವೇ ಸ್ತವಮ್ ॥ ೮**

**ಆಚಾರ್ಯಾ ಗುರವೋ ವೃದ್ಧಾ ವೃಥಾ ವಾಂ ಪರ್ಯುಪಾಸಿತಾಃ ।**
**ಸಾರಂ ಯದ್ರಾಜಶಾಸ್ತ್ರಾಣಾಮನುಜೀವ್ಯಂ ನ ಗೃಹ್ಯತೇ ॥ ೯**

**ಗೃಹೀತೋ ವಾ ನ ವಿಜ್ಞಾತೋ ಭಾರೋ ಜ್ಞಾನಸ್ಯ ವೋಹ್ಯತೇ ।**
**ಈದೃಶೈಃ ಸಚಿವೈರ್ಯುಕ್ತೋ ಮೂರ್ಖೈರ್ದಿಷ್ಟ್ಯಾ ಧರಾಮ್ಯಹಮ್**

---

ರಾವಣನ ಮನಸ್ಸಿನಲ್ಲಿ ಕೊಂಚ ಕಳವಳವಾಯಿತು. ಹಾಗೆಯ ಕೋಪವೂ ಉಕ್ಕಿತು. ಶುಕಸಾರಣರು ಹೇಳುತ್ತಿದ್ದ ಕಥೆಯನ್ನು ರಾವಣನು ಸುಮ್ಮನೆ ಕೇಳುತ್ತಲಿದ್ದು, ಕಡೆಯಲ್ಲಿ ಅವರನ್ನು ಧಿಕ್ಕರಿಸಿ ಗದರಿಸಿದನು(೫). ಶುಕಸಾರಣರು ಕೈಮುಗಿದು ತಲೆಬಾಗಿಸಿ ನಿಂತರು. ರಾವಣನು ಅವರನ್ನು ನೋಡಿ ರೋಷದಿಂದ ತಡವರಿಸುತ್ತ ಬಯ್ಯತೊಡಗಿದನು: "ಛೀ! ನಿಮಗೆ ಧಿಕ್ಕಾರವಿರಲಿ! ನಮ್ಮ ಆಶ್ರಯದಲ್ಲಿ ಜೀವನ ಸಾಗಿಸುವ ಮಂತ್ರಿಗಳು ನಮ್ಮೆದುರಿಗೇ ಈ ಪರಿಯಲ್ಲಿ ನುಡಿಯುವುದು ಯೋಗ್ಯವೆ? ನಿಗ್ರಹಾನುಗ್ರಹಗಳಲ್ಲಿ ಸಮರ್ಥನಾದ ಪ್ರಭುವಿಗೆ ಕಹಿಯಾದ ಮಾತುಗಳನ್ನಾಡುವಿರಾ? (೬–೭). ನಮಗೆ ವಿರೋಧಿಗಳಾದ ವೈರಿಗಳು ಯುದ್ಧಕ್ಕಾಗಿ ದಂಡೆತ್ತಿಬಂದಿರುವಾಗ ಅಕಾಲದಲ್ಲಿ, ನೀವಿಬ್ಬರೂ ಸೇರಿ ವೈರಿಗಳನ್ನು ಹೊಗಳುವುದು ಯೋಗ್ಯವೇನಿರಯ್ಯಾ? ಆಚಾರ್ಯರನ್ನೂ ಗುರುಹಿರಿಯರನ್ನೂ ನೀವು ಸೇವಿಸಿದ್ದೆಲ್ಲವೂ ವ್ಯರ್ಥವಾಯಿತು! ರಾಜನೀತಿಶಾಸ್ತ್ರಗಳಲ್ಲಿ ಸಾರಭೂತನಾದ ಭೃತ್ಯವರ್ತನ ಪ್ರಕಾರವನ್ನೇ ನೀವು ಅಭ್ಯಾಸ ಮಾಡಿಲ್ಲ! (೮–೯). ಅಭ್ಯಾಸಮಾಡಿದ್ದರೂ ಅದರ ರಹಸ್ಯವನ್ನು ತಿಳಿದುಕೊಂಡಿಲ್ಲ. ನಿಷ್ಫಲವಾಗಿ ವಿದ್ಯೆಯ ಹೊರೆಯನ್ನು

ಕಿಂ ನು ಮೃತ್ಯೋರ್ಭಯಂ ನಾಸ್ತಿ ವಕ್ತುಂ ಮಾಂ ಪರುಷಂ ವಚಃ ।
ಯಸ್ಯ ಮೇ ಶಾಸತೋ ಜಿಹ್ವಾ ಪ್ರಯಚ್ಛತಿ ಶುಭಾಶುಭಮ್ ॥ ೧೧

ಅಪ್ಯೇವ ದಹನಂ ಸ್ಪೃಷ್ಟ್ವಾ ವನೇ ತಿಷ್ಠಂತಿ ಪಾದಪಾಃ ।
ರಾಜದೋಷಪರಾಮೃಷ್ಟಾಸ್ತಿಷ್ಠಂತೇ ನಾಪರಾಧಿನಃ ॥ ೧೨

ಹನ್ಯಾಮಹಂ ತ್ವಿಮೌ ಪಾಪೌ ಶತ್ರು ಪಕ್ಷಪ್ರಶಂಸಕೌ ।
ಯದಿ ಪೂರ್ವೋಪಕಾರೈರ್ಮೇನ ಕ್ರೋಧೋ ಮೃದುತಾಂ ವ್ರಜೇತ್

ಅಪಧ್ವಂಸತ ಗಚ್ಛಧ್ವಂ ಸಂನಿಕರ್ಷಾದಿತೋ ಮಮ ।
ನ ಹಿ ವಾಂ ಹಂತುಮಿಚ್ಛಾಮಿ ಸ್ಮರಾಮ್ಯು ಪಕೃತಾನಿ ವಾಮ್ ॥ ೧೪

ಹತಾವೇವ ಕೃತಘ್ನೌತೌ ಮಯಿ ಸ್ನೇಹಪರಾಙ್ಮುಖೌ ।
ಏವಮುಕ್ತೌ ತು ಸವ್ರೀಡೌ ತಾವುಭೌ ಶುಕಸಾರಣೌ ॥ ೧೫

ರಾವಣಂ ಜಯಶಬ್ದೇನ ಪ್ರತಿನಂದ್ಯಾಭಿನಿಃಸೃತೌ ।
ಅಬ್ರವೀಚ್ಚ ದಶಗ್ರೀವಃ ಸಮೀಪಸ್ಥಂ ಮಹೋದರಮ್ ॥ ೧೬

---

ಹೊತ್ತಿದ್ದೀರಿ ಆಃ! ಇಂಥ ಮೂರ್ಖರಾದ ಸಚಿವರೊಡನೆ ಬಾಳುತ್ತ ನಾನು ಇನ್ನೂ ಬದುಕಿರುವುದೊಂದು ದೈವಯೋಗವೇ ಸರಿ ! (೧೦). ಎಲೈ ಶುಕ ಸಾರಣರೆ, ನನಗೆ ಇಂಥ ಕಹಿಮಾತನ್ನಾಡಿದಿರಲ್ಲ, ನಿನಗೆ ಸಾವಿನ ಅಂಜಿಕೆ ಇಲ್ಲವೋ ಹೇಗೆ? ನನ್ನ ನಾಲಗೆಯೇ ನಡೆಸುವುದು! ಕಾಡಿನಲ್ಲಿ ಕಾಳ್ಗಿಚ್ಚು ಬಂದು ಮುಚ್ಚಿದರೂ ಮರಗಳು ಉಳಿದಾವು, ಆದರೆ ರಾಜದ್ರೋಹಿಗಳು ಮಾತ್ರ ಎಂದಿಗೂ ಕ್ಷೇಮದಿಂದುಳಿಯಲಾರರು (೧೧–೧೨). ಶತ್ರುಪಕ್ಷವನ್ನು ಮೆಚ್ಚಿ ಹೊಗಳುವ ಈ ಪಾಪಿಗಳನ್ನು ಈಗಲೇ ಕೊಂದೆಸೆಯಬೇಕೆನಿಸುವುದು. ಆದರೆ ಹಿಂದೆ ಇವರು ಮಾಡಿದ ಉಪಕಾರಗಳನ್ನು ನೆನೆಸಿಕೊಂಡು ನನ್ನ ಕೋಪವು ಅಲ್ಲಿಯೇ ತಗ್ಗುವುದು! ಥೂ ನೀಚರೆ, ತೊಲಗಿರಿ ಇಲ್ಲಿಂದ! ನನ್ನೆದುರಿಗೆ ನಿಲ್ಲದೆ ದೂರ ಸಾರಿಹೋಗಿರಿ! ನಿಮ್ಮನ್ನು ಕೊಲ್ಲಲು ಮನಸ್ಸು ಬಾರದು. ಹಿಂದಿನ ನಿಮ್ಮ ಉಪಕಾರಗಳು ನೆನಪಿಗೆ ಬರುತ್ತವೆ (೧೩–೧೪). ರಾಜಭಕ್ತಿಯಿಲ್ಲದೆ ಕೃತಘ್ನರಾದ ನೀವು ಸತ್ತಹಾಗೆಯೇ ಸರಿ!'' ಎಂದು ಗದರಿಸಿದನು. ಶುಕಸಾರುಣರು ಲಜ್ಜಿತರಾಗಿ 'ಮಹಾರಾಜನಿಗೆ ಜಯವಾಗಲಿ!' ಎಂದು ರಾವಣನನ್ನು ಅಭಿನಂದಿಸಿ ಹೊರಟುಹೋದರು. ಅನಂತರ ದಶಗ್ರೀವನು ಸಮೀಪದಲ್ಲಿದ್ದ

ಉಪಸ್ಥಾಪಯ ಮೇ ಶೀಘ್ರಂ ಚಾರಾನ್ನೀತಿವಿಶಾರದಾನ್ ।
ಮಹೋದರಸ್ತಥೋಕ್ತಸ್ತು ಶೀಘ್ರಮಾಜ್ಞಾಪಯಚ್ಚರಾನ್ ॥ ೧೭

ತತಶ್ಚಾರಾಃ ಸಂತ್ವರಿತಾಃ ಪ್ರಾಪ್ತಾಃ ಪಾರ್ಥಿವಶಾಸನಾತ್ ।
ಉಪಸ್ಥಿತಾಃ ಪ್ರಾಂಜಲಯೋ ವರ್ಧಯಿತ್ವಾ ಜಯಾಶಿಷಾ ॥ ೧೮

ತಾನಬ್ರವೀತ್ತತೋ ವಾಕ್ಯಂ ರಾವಣೋ ರಾಕ್ಷಸಾಧಿಪಃ ।
ಚಾರಾನ್ ಪ್ರತ್ಯಾಯಿತಾನ್ ಶೂರಾನ್ ಭಕ್ತಾನ್ ವಿಗತಸಾಧ್ವಸಾನ್ ॥

ಇತೋ ಗಚ್ಛತ ರಾಮಸ್ಯ ವ್ಯವಸಾಯಂ ಪರೀಕ್ಷಥ ।
ಮಂತ್ರೇಷ್ವಭ್ಯಂತರಾ ಯೇಽಸ್ಯ ಪ್ರೀತ್ಯಾ ತೇನ ಸಮಾಗತಾಃ ॥ ೨೦

ಕಥಂ ಸ್ವಪಿತಿ ಜಾಗರ್ತಿ ಕಿಮನ್ಯಚ್ಚ ಕರಿಷ್ಯತಿ ।
ವಿಜ್ಞಾಯ ನಿಪುಣಂ ಸರ್ವಮಾಗಂತವ್ಯಮಶೇಷತಃ ॥ ೨೧

ಚಾರೇಣ ವಿದಿತಃ ಶತ್ರುಃ ಪಂಡಿತೈರ್ವಸುಧಾಧಿಪೈಃ ।
ಯುದ್ಧೇ ಸ್ವಲ್ಪೇನ ಯತ್ನೇನ ಸಮಾಸಾದ್ಯ ನಿರಸ್ಯತೇ ॥ ೨೨

---

ಮಹೋದರನನ್ನು ನೋಡಿ ''ಮಹೋದರ, ನೀತಿವಿಶಾರದರಾದ ಗುಪ್ತಚಾರರು ಕೂಡಲೆ ಇಲ್ಲಿಗೆ ಬರುವಂತೆ ತಿಳಿಸು'' ಎಂದು ಆಜ್ಞಾಪಿಸಿದನು (೧೫–೧೭). ಅದರಂತೆ ಮಹೋದರನು ಚಾರರನ್ನು ಬರಮಾಡಿದನು. ರಾಜಾಜ್ಞೆಯಂತೆ ಚಾರರು ಬೇಗಬೇಗನೆ ಬಂದು ರಾವಣನಿಗೆ ಕೈಮುಗಿದು 'ಮಹಾರಾಜನಿಗೆ ಜಯವಾಗಲಿ! ಎಂದು ಜಯಕಾರಮಾಡಿದರು. ವಿಶ್ವಾಸಪಾತ್ರರೂ ಶೂರರೂ ರಾಜಭಕ್ತಿಯುಳ್ಳವರೂ ನಿರ್ಭಯರೂ ಆದ ಆ ಗೂಢಚಾರರನ್ನು ನೋಡಿ ರಾಕ್ಷಸೇಂದ್ರನು ಹೀಗೆಂದನು (೧೭–೧೯) : ಎಲೈ ಚಾರರೆ, ಇಲ್ಲಿಂದ ನೇರ ವಾಗಿ ಹೋಗಿ ರಾಮನು ಯಾವ ಉದ್ಯೋಗದಲ್ಲಿ ತೊಡಗಿದ್ದಾನೆಂಬುದನ್ನು ಪರೀಕ್ಷಿಸಿರಿ, ಅವನಿಗೆ ಮಂತ್ರಾಲೋಚನೆ ಹೇಳುವ ಅಂತರಂಗದವರು ಯಾರು, ಯಾರನ್ನು ಅವನು ಪ್ರೀತಿಯಿಂದ ಸ್ವಾಗತಿಸುವನು ಎಂಬುದನ್ನು ತಿಳಿದು ಕೊಳ್ಳಿರಿ (೨೦). ರಾಮನು ನಿದ್ರಿಸುವುದು, ಎಚ್ಚರವಾಗಿರುವುದು – ಮೊದಲಾ ದ್ದನ್ನು ಹಿಡಿದು ಅವನು ಏನೇನು ಮಾಡುವನೆಂಬುದೆಲ್ಲನ್ನೂ ಪರೀಕ್ಷಿಸಿರಿ. ಸಕಲವನ್ನೂ ನಿಮ್ಮ ಬುದ್ಧಿಕೌಶಲದಿಂದರಿತು ಬರತಕ್ಕದ್ದು. ಎಲೈ ಚಾರರೆ, ಪ್ರಾಜ್ಞರಾದ ಭೂಪಾಲರು ನಿಮ್ಮಂತಹ ಗುಪ್ತಚಾರರಿಂದ ಶತ್ರುವಿನ ಸ್ವರೂಪ

ಚಾರಾಸ್ತು ತೇ ತಥೇತ್ಯುಕ್ತ್ವಾ ಪ್ರಹೃಷ್ಟಾ ರಾಕ್ಷಸೇಶ್ವರಮ್ ।
ಶಾರ್ದೂಲಮಗ್ರತಃ ಕೃತ್ವಾ ತತಶ್ಚಕ್ರುಃ ಪ್ರದಕ್ಷಿಣಮ್ ॥ ೨೩

ತತಸ್ತೇ ತಂ ಮಹಾತ್ಮಾನಂ ಚಾರಾ ರಾಕ್ಷಸಸತ್ತಮಮ್ ।
ಕೃತ್ವಾ ಪ್ರದಕ್ಷಿಣಂ ಜಗ್ಮುರ್ಯತ್ರ ರಾಮಃ ಸಲಕ್ಷ್ಮಣಃ ॥ ೨೪

ತೇ ಸವೇಲಸ್ಯ ಶೈಲಸ್ಯ ಸಮೀಪೇ ರಾಮಲಕ್ಷ್ಮಣೌ ।
ಪ್ರಚ್ಛನ್ನಾ ದದೃಶುರ್ಗತ್ವಾ ಸಸುಗ್ರೀವವಿಭೀಷಣೌ ॥ ೨೫

ಪ್ರೇಕ್ಷಮಾಣಾಶ್ಚಮೂಂ ತಾಂ ಚ ಬಭೂವುರ್ಭಯವಿಕ್ಲವಾಃ ।
ತೇ ತು ಧರ್ಮಾತ್ಮನಾ ದೃಷ್ಟಾ ರಾಕ್ಷಸೇಂದ್ರೇಣ ರಾಕ್ಷಸಾಃ ॥ ೨೬

ವಿಭೀಷಣೇನ ತತ್ರಸ್ಥಾ ನಿಗೃಹೀತಾ ಯದೃಚ್ಛಯಾ ।
ಶಾರ್ದೂಲೋ ಗ್ರಾಹಿತಸ್ತ್ವೇಕಃ ಪಾಪೋಽಯಮಿತಿ ರಾಕ್ಷಸಃ ॥ ೨೭

ಮೋಚಿತಃ ಸೋಽಪಿ ರಾಮೇಣ ವಧ್ಯಮಾನಃ ಪ್ಲವಂಗಮೈಃ ।
ಆನೃಶಂಸ್ಯೇನ ರಾಮಸ್ಯ ಮೋಚಿತಾ ರಾಕ್ಷಸಾಃ ಪರೇ ॥ ೨೮

---

ವನ್ನು ಕೂಲಂಕಷವಾಗಿ ತಿಳಿಯಬೇಕಾಗುತ್ತದೆ. ಆಗ ಶತ್ರುವನ್ನು ಯುದ್ಧದಲ್ಲಿ ಸುಲಭವಾಗಿ ಗೆಲ್ಲಬಹುದು'' ಎಂದನು (೨೧–೨೨). ರಾಕ್ಷಸೇಶ್ವರನು ವಿಶ್ವಾಸ ವಿಟ್ಟು ತಮಗೆ ಆಜ್ಞೆಯನ್ನಿತ್ತನೆಂದು ಚಾರರಿಗೆ ಸಂತೋಷವಾಯಿತು. ಅವರು ಶಾರ್ದೂಲ ಎಂಬವನ ನಾಯಕತ್ವದಲ್ಲಿ ರಾವಣನಿಗೆ ಬಲವಂದು ನಮಸ್ಕರಿಸಿ, ಶ್ರೀರಾಮನು ಲಕ್ಷ್ಮಣಸಮೇತನಾಗಿ ತಂಗಿದ ಸ್ಥಳಕ್ಕೆ ಗುಪ್ತವೇಷದಿಂದ ಬಂದರು (೨೩–೨೪). ಆ ಗೂಢಚಾರರು ಸುವೇಲಶೈಲದ ಬಳಿಯಲ್ಲಿದ್ದ ಶ್ರೀರಾಮಲಕ್ಷ್ಮಣರನ್ನೂ ಸುಗ್ರೀವವಿಭೀಷಣರನ್ನೂ ಕಂಡರು. ಸುತ್ತಲೂ ನೆರೆದಿದ್ದ ವಾನರಸೇನೆಯನ್ನು ನೋಡುತ್ತಿದ್ದಾಗ ಅವರಿಗೆ ಅಂಜಿಕೆ ಹುಟ್ಟಿತು. ಅಷ್ಟರಲ್ಲಿ ಧರ್ಮಾತ್ಮನಾದ ವಿಭೀಷಣನಿಗೆ ಅಕಸ್ಮಾತ್ತಾಗಿ ಆ ಗೂಢಚಾರರು ಗೋಚರಿಸಿದರು. ಮಾಯೆಯಿಂದ ಅವರು ವೇಷಾಂತರಿಸಿಕೊಂಡಿರುವುದು ವಿಭೀಷಣನಿಗೆ ತಿಳಿಯಿತು (೨೫–೨೬). ಕೂಡಲೆ ವಿಭೀಷಣನು ಶಾರ್ದೂಲ ನನ್ನು ಹಿಡಿದು, ಆತನು ಗೂಢಚಾರನಾದ ದುರುಳನೆಂದು ವಾನರರಿಗೆ ಹೇಳ ಲಾಗಿ, ವಾನರರು ಶಾರ್ದೂಲನನ್ನು ಗುದ್ದತೊಡಗಿದರು? ವೇಷಾಂತರದಿಂದ ಬಂದಿದ್ದ ಇತರ ರಾಕ್ಷಸರೂ ಸಿಕ್ಕಿಬಿದ್ದರು. ಈ ವೃತ್ತಾಂತವು ತಿಳಿದೊಡನೆ

ವಾನರೈರರ್ದಿತಾಸ್ತೇ ತು ವಿಕ್ರಾಂತೈರ್ಲಘುವಿಕ್ರಮೈಃ ।
ಪುನರ್ಲಂಕಾಮನುಪ್ರಾಪ್ತಾಃ ಶ್ವಸಂತೋ ನಷ್ಟಚೇತಸಃ ॥ ೨೯

ತತೋ ದಶಗ್ರೀವಮುಪಸ್ಥಿತಾಸ್ತು ತೇ
ಚಾರಾ ಬಹಿರ್ನಿತ್ಯ ಚರಾ ನಿಶಾಚರಾಃ ।
ಗಿರೇಃ ಸುವೇಲಸ್ಯ ಸಮೀಪವಾಸಿನಂ
ನ್ಯವೇದಯನ್ ರಾಮಬಲಂ ಮಹಾಬಲಾಃ ॥ ೩೦

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕೋನತ್ರಿಂಶಃ ಸರ್ಗಃ

---

ಶ್ರೀರಾಮನು ಅನುಕಂಪೆಯಿಂದ ಅವರೆಲ್ಲರನ್ನೂ ಬಿಡಿಸಿದನು (೨೭–೨೮). ಅಷ್ಟರೊಳಗೇ ಚಪಲರಾದ ವಾನರರು ಆ ರಾಕ್ಷಸರನ್ನು ಹೊಡೆದು ಹಣ್ಣುಗಾಯಿ ನೀರುಗಾಯಿ ಮಾಡಿದ್ದರು! ಶ್ರೀರಾಮನು ಬಿಡಿಸಿದೊಡನೆ, ಆ ಗೂಢಚಾರರು ಕಂಗೆಟ್ಟು, ಏದುತ್ತ ಲಂಕೆಗೆ ಓಡಿಹೋದರು (೨೯). ಪರರಾಷ್ಟ್ರಗಳಲ್ಲಿ ಸದಾ ಗೂಢಚರ್ಯೆ ನಡೆಸುತ್ತ ಸಂಚರಿಸುತ್ತಿದ್ದ ಆ ರಾಕ್ಷಸರು ಲಂಕೆಗೆ ಹೋಗಿ ದಶಕಂಠನನ್ನು ಸಂದರ್ಶಿಸಿ, ಸುವೇಲಶೈಲದ ಬಳಿಯಲ್ಲಿ ಶ್ರೀರಾಮನೂ ವಾನರ ಸೈನಿಕರೂ ತಂಗಿರುವರೆಂದು ಅರಿಕೆಮಾಡಿದರು (೩೦).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಇಪ್ಪತ್ತೊಂಬತ್ತನೆಯ ಸರ್ಗ

---

## ತ್ರಿಂಶಃ ಸರ್ಗಃ

### ವಾನರಬಲಸಂಖ್ಯಾನಮ್

ತತಸ್ತಮಕ್ಷೋಭ್ಯಬಲಂ ಲಂಕಾಧಿಪತಯೇ ಚರಾಃ ।
ಸುವೇಲೇ ರಾಘವಂ ಶೈಲೇ ನಿವಿಷ್ಟಂ ಪ್ರತ್ಯವೇದಯನ್ ॥ ೧

ಚಾರಾಣಾಂ ರಾವಣಃ ಶ್ರುತ್ವಾ ಪ್ರಾಪ್ತಂ ರಾಮಂ ಮಹಾಬಲಮ್ ।
ಜಾತೋದ್ವೇಗೋಽಭವತ್ಕಿಂಚಿಚ್ಛಾರ್ದೂಲಂ ವಾಕ್ಯಮಬ್ರವೀತ್ ॥ ೨

ಅಯಥಾವಚ್ಚ ತೇ ವರ್ಣೋ ದೀನಶ್ಚಾಸಿ ನಿಶಾಚರ ।
ನಾಸಿ ಕಚ್ಚಿದಮಿತ್ರಾಣಾಂ ಕ್ರುದ್ಧಾನಾಂ ವಶಮಾಗತಃ ॥ ೩

ಇತಿ ತೇನಾನುಶಿಷ್ಟಸ್ತು ವಾಚಂ ಮಂದಮುದೀರಯತ್ ।
ತದಾ ರಾಕ್ಷಸಶಾರ್ದೂಲಂ ಶಾರ್ದೂಲೋ ಭಯವಿಹ್ವಲಃ ॥ ೪

ನ ತೇ ಚಾರಯಿತುಂ ಶಕ್ಯಾ ರಾಜನ್ ವಾನರಪುಂಗವಾಃ ।
ವಿಕ್ರಾಂತಾ ಬಲವಂತಶ್ಚ ರಾಘವೇಣ ಚ ರಕ್ಷಿತಾಃ ॥ ೫

## ಸರ್ಗ ೩೦

### ಶಾರ್ದೂಲನು ಕಪಿಸೇನಾಬಲವನ್ನು ರಾವಣನಿಗೆ ಹೇಳುವುದು.

ಹೀಗೆ ಶಾರ್ದೂಲನೇ ಮೊದಲಾದ ಚಾರರು ರಾವಣನ ಬಳಿಗೆ ಬಂದು, ಶ್ರೀರಾಮನು ಪ್ರಬಲವಾದ ಸೇನೆಯೊಡನೆ ಆಗಮಿಸಿ ಸುವೇಲಶೈಲದಲ್ಲಿ ಬೀಡು ಬಿಟ್ಟಿರುವನೆಂದು ಅರಿಕೆ ಮಾಡಿದರು. ಶ್ರೀರಾಮನು ಬಲಾಢ್ಯನೆಂಬುದು ಚಾರರ ಮಾತಿನಿಂದ ರಾವಣನಿಗೆ ತಿಳಿಯಿತು. ಮನಸ್ಸಿನಲ್ಲಿ ಕಳವಳವಾಯಿತು (೧–೨). ಅವನು ಶಾರ್ದೂಲನನ್ನು ನೋಡಿ ''ಎಲಾ ರಾಕ್ಷಸ, ನಿನ್ನ ಮುಖದಲ್ಲಿ ಕಳೆಯು ಮೊದಲಿನಂತಿಲ್ಲ, ಕಂಗೆಟ್ಟಿರುವಂತೆ ಕಾಣುವೆ. ಕ್ರುದ್ಧರಾದ ಶತ್ರುಗಳ ಕೈಗೆ ಸಿಕ್ಕಿದೆಯೋ ಹೇಗೆ?''ಎಂದು ಕೇಳಿದನು. ಆಗ ಶಾರ್ದೂಲನು ಅಂಜುತ್ತಂಜುತ್ತ ರಾಕ್ಷಸರಾಜನನ್ನು ಕುರಿತು ಮೆಲ್ಲಗೆ ನಿವೇದಿಸಿದನು (೩–೪): ''ಮಹಾರಾಜ, ಆ ವಾನರವೀರರ ನಡುವೆ ಗೂಢಚರ್ಯೆಯನ್ನು ನಡೆಸುವುದು

ನಾಪಿ ಸಂಭಾಷಿತುಂ ಶಕ್ಯಾಃ ಸಂಪ್ರಶ್ನೋಽತ್ರ ನ ಲಭ್ಯತೇ ।
ಸರ್ವತೋ ರಕ್ಷ್ಯತೇ ಪಲಥಾ ವಾನರೈಃ ಪರ್ವತೋಪಮೈಃ ॥ ೬

ಪ್ರವಿಷ್ಟಮಾತ್ರೇ ಜ್ಞಾತೋಽಹಂ ಬಲೇ ತಸ್ಮಿನ್ನಿಚಾರಿತೇ ।
ಬಲಾದ್ಗೃಹೀತೋ ರಕ್ಷೋಭಿರ್ಬಹುಧಾಸ್ಮಿ ವಿಚಾಲಿತಃ ॥ ೭

ಜಾನುಭಿರ್ಮುಷ್ಟಿಭಿರ್ದಂತೈಸ್ತಲೈಶ್ಚಾಭಿಹತೋ ಭೃಶಮ್ ।
ಪರಿವೃತೋಽಸ್ಮಿ ಹರಿಭಿರ್ಬಲವದ್ಭಿರಮರ್ಷಣೈಃ ॥ ೮

ಪರಿವೃತ್ಯ ಚ ಸರ್ವತ್ರ ನೀತೋಽಹಂ ರಾಮಸಂಸದಮ್ ।
ರುಧಿರಾದಿಗ್ಧಸರ್ವಾಂಗೋ ವಿಹ್ವಲಶ್ಚಲಿತೇಂದ್ರಿಯಃ ॥ ೯

ಹರಿಭಿರ್ವಧ್ಯಮಾನಶ್ಚ ಯಾಚಮಾನಃ ಕೃತಾಂಜಲಿಃ ।
ರಾಘವೇಣ ಪರಿತ್ರಾತೋ ಮಾ ಮೇತಿ ಚ ಯದೃಚ್ಛಯಾ ॥ ೧೦

ಏಷ ಶೈಲೈಃ ಶಿಲಾಭಿಶ್ಚ ಪೂರಯಿತ್ವಾ ಮಹಾರ್ಣವಮ್ ।
ದ್ವಾರಮಾಶ್ರಿತ್ಯ ಲಂಕಾಯಾ ರಾಮಸ್ತಿಷ್ಠತಿ ಸಾಯುಧಃ ॥ ೧೧

---

ಅಶಕ್ಯವೇ ಸರಿ. ಅವರು ಬಹಳ ಪರಾಕ್ರಮಿಗಳು; ಬಲಾಢ್ಯರು. ಇದರಮೇಲೆ ರಾಮನ ರಕ್ಷಣೆಯಲ್ಲಿದ್ದಾರೆ. ಅವರನ್ನು ಮಾತನಾಡಿಸುವುದಕ್ಕೇ ಸಾಧ್ಯವಿಲ್ಲ, ಇನ್ನು ಪ್ರಶ್ನಿಸುವುದೆಲ್ಲಿ ಬಂದಿತು! ಪರ್ವತಾಕಾರದ ವಾನರರು ಸೇನಾನಿವೇಶದ ಸುತ್ತಲೂ ಕಾವಲಿದ್ದಾರೆ (೫–೬). ಹೇಗೋ ಒಳಗೆ ಪ್ರವೇಶಿಸಿದೆನು, ಗೂಢಚರ್ಯೆಯನ್ನಾರಂಭಿಸುವುದರೊಳಗೆ ಸಿಕ್ಕಿಬಿದ್ದೆನು! ನಮ್ಮ ಜಾತಿಯ ರಾಕ್ಷಸರೇ ನನ್ನನ್ನು ಹಿಡಿದುಕೊಟ್ಟು ಚೆನ್ನಾಗಿ ಅಲ್ಲಾಡಿಸಿಬಿಟ್ಟರು! ತಾಳ್ಮೆಯೇ ಇಲ್ಲದ ಬಲಶಾಲಿಗಳಾದ ವಾನರರು ನನ್ನನ್ನು ಮೊಳಕಾಲುಗಳಿಂದ ತಿವಿಯುತ್ತ ಮುಷ್ಟಿಗಳಿಂದ ಗುದ್ದುತ್ತ ಹಲ್ಲುಗಳಿಂದ ಕಚ್ಚುತ್ತ, ಕರತಳಗಳಿಂದ ಚಚ್ಚುತ್ತ ಅಲೆದಾಡಿಸಿ ರಾಮನ ಬಳಿಗೆ ಎಳೆದೊಯ್ದರು (೭–೮). ನನ್ನ ಸರ್ವಾಂಗಗಳೂ ರಕ್ತಮಯವಾದವು. ಬವಳಿಬಂದು ಕಂಗೆಟ್ಟುಹೋದೆನು. ಕಪಿಗಳು ಹೊಡೆಯುತ್ತಿರುವಾಗ ನನ್ನನ್ನು ಉಳಿಸಿರೆಂದು ಬೇಡಿಕೊಂಡೆನು. ಅಷ್ಟರಲ್ಲಿ ರಾಘವನು 'ಬೇಡ, ಬೇಡ' ಎಂದು ಕಪಿಗಳನ್ನು ತಡೆದು ಅದೃಷ್ಟವಶದಿಂದ ನನ್ನನ್ನು ಬಿಡಿಸಿದನು (೯–೧೦). ಮಹಾರಾಜ, ರಾಮನು ಶೈಲಗಳಿಂದಲೂ ಶಿಲೆಗಳಿಂದಲೂ ಸಮುದ್ರವನ್ನು ತುಂಬಿ ಸೇತುವೆಯನ್ನು ಕಟ್ಟಿ ದಾಟಬಂದಿದ್ದಾನೆ. ಆಯುಧ

ಗಾರುಡಂ ವ್ಯೂಹಮಾಸ್ಥಾಯ ಸರ್ವತೋ ಹರಿಭಿರ್ವೃತಃ ।
ಮಾಂ ವಿಸೃಜ್ಯ ಮಹಾತೇಜಾ ಲಂಕಾಮೇವಾಭಿವರ್ತತೇ ॥ ೧೨

ಪುರಾ ಪ್ರಾಕಾರಮಾಯಾತಿ ಕ್ಷಿಪ್ರಮೇಕತರಂ ಕುರು ।
ಸೀತಾಂ ವಾಸ್ಮೈ ಪ್ರಯಚ್ಛಾಶು ಸುಯುದ್ಧಂ ವಾ ಪ್ರದೀಯತಾಮ್ ॥

ಮನಸಾ ತಂ ತದಾ ಪ್ರೇಕ್ಷ್ಯ ತಚ್ಛ್ರುತ್ವಾ ರಾಕ್ಷಸಾಧಿಪಃ ।
ಶಾರ್ದೂಲಂ ಸುಮಹದ್ವಾಕ್ಯಮಥೋವಾಚ ಸ ರಾವಣಃ ॥ ೧೪

ಯದಿ ಮಾಂ ಪ್ರತಿ ಯುಧ್ಯೇರನ್ ದೇವಗಂಧರ್ವದಾನವಾಃ ।
ನೈವ ಸೀತಾಂ ಪ್ರದಾಸ್ಯಾಮಿ ಸರ್ವಲೋಕಭಯಾದಪಿ ॥ ೧೫

ಏವಮುಕ್ತ್ವಾ ಮಹಾತೇಜಾ ರಾವಣಃ ಪುನರಬ್ರವೀತ್ ।
ಚಾರಿತಾ ಭವತಾ ಸೇನಾ ಕೇಽತ್ರ ಶೂರಾಃ ಪ್ಲವಂಗಮಾಃ ॥ ೧೬

ಕೀದೃಶಾಃ ಕಿಂಪ್ರಭಾಃ ಸೌಮ್ಯ ವಾನರಾ ಯೇ ದುರಾಸದಾಃ ।
ಕಸ್ಯ ಪುತ್ರಾಶ್ಚ ಪೌತ್ರಾಶ್ಚ ತತ್ತ್ವಮಾಖ್ಯಾಹಿ ರಾಕ್ಷಸ ॥ ೧೭

---

ಸನ್ನದ್ಧನಾಗಿ ಲಂಕಾದ್ವಾರಕ್ಕೆ ಬಂದು ನಿಂತಿದ್ದಾನೆ. ಗರುಡವ್ಯೂಹವನ್ನು ಕಟ್ಟಿ ವಾನರಸೇನೆಯೊಡನೆ ಸಜ್ಜಾಗಿದ್ದಾನೆ. ಆ ತೇಜಸ್ವಿಯು ನನ್ನನ್ನು ಬಿಡಿಸಿ, ಈಗ ಲಂಕೆಯನ್ನು ಮುತ್ತುವುದರಲ್ಲಿದ್ದಾನೆ. (೧೧–೧೨). ಮಹಾಪ್ರಭು, ಪ್ರಾಕಾರದ ಮೇಲೆ ಲಗ್ಗೆಹತ್ತುವುದರೊಳಗೆ, ಯಾವುದಾದರೊಂದನ್ನು ಬೇಗನೆ ನಡೆಸ ಬೇಕೆಂದು ಬೇಡಿಕೊಳ್ಳುತ್ತೇನೆ. ಏನೆಂದರೆ, ಸೀತೆಯನ್ನಾದರೂ ಅವನಿಗೆ ಒಪ್ಪಿಸಬೇಕು, ಇಲ್ಲವೆ, ಘೋರಯುದ್ಧವನ್ನಾದರೂ ಹೂಡಬೇಕು'' ಎಂದು ಹೇಳಿದನು (೧೩). ರಾಕ್ಷಸೇಶ್ವರನು ಶಾರ್ದೂಲನ ವಚನವನ್ನಾಲಿಸಿ ತನ್ನ ಲ್ಲಿಯೇ ಆಲೋಚಿಸಿ ಕಡೆಯ ನಿರ್ಣಯವನ್ನು ತಿಳಿಸಿದನು: ''ಶಾರ್ದೂಲ, ದೇವದಾನವಾಗಂಧರ್ವರೇ ಒಟ್ಟುಗೂಡಿ ನನ್ನಮೇಲೆ ಯುದ್ಧವನ್ನು ಹೂಡಿ ದರೂ ಮೂರುಲೋಕಗಳೇ ಬೆದರಿಸಿದರೂ, ಸೀತೆಯನ್ನು ಬಿಟ್ಟುಕೊಡು ವುದಿಲ್ಲ!'' ಎಂದು ಹೇಳಿದನು (೧೪–೧೫). ಅಷ್ಟು ಹೇಳಿ ಮಹಾತೇಜಸ್ವಿ ಯಾದ ರಾವಣನು ಮತ್ತೆ ''ಎಲಾ ಶಾರ್ದೂಲ, ನೀನು ಕಪಿಸೇನೆಯಲ್ಲಿ ಸುತ್ತಿ ಬಂದಿರುವೆಯಷ್ಟೆ. 'ಆ ಕಪಿಗಳು ಎಂಥವರು? ಅವರ ಸಾಮರ್ಥ್ಯವೇನು? ಅವರಲ್ಲಿ ವೀರರಾರು? ಆ ವೀರರು ಯಾರ ಪುತ್ರರು? ಯಾರ ಪೌತ್ರರು?'

ತಥಾತ್ರ ಪ್ರತಿಪತ್ಸ್ಯಾಮಿ ಜ್ಞಾತ್ವಾ ತೇಷಾಂ ಬಲಾಬಲಮ್ ।
ಅವಶ್ಯಂ ಬಲಸಂಖ್ಯಾನಂ ಕರ್ತವ್ಯಂ ಯುದ್ಧಮಿಚ್ಛತಾಮ್ ॥ ೧೮

ಅಥೈವಮುಕ್ತಃ ಶಾರ್ದೂಲೋ ರಾವಣೇನೋತ್ತಮಶ್ಚರಃ ।
ಇದಂ ವಚನಮಾರೇಭೇ ವಕ್ತುಂ ರಾವಣಸಂನಿಧೌ ॥ ೧೯

ಅಥರ್ಕ್ಷರಜಸಃ ಪುತ್ರೋ ಯುಧಿ ರಾಜಾ ಸುದುರ್ಜಯಃ ।
ಗದ್ಗದಸ್ಯಾಥ ಪುತ್ರೋಽತ್ರ ಜಾಂಬವಾನಿತಿ ವಿಶ್ರುತಃ ॥ ೨೦

ಗದ್ಗದಸ್ಯೈವ ಪುತ್ರೋಽನ್ಯೋ ಗುರುಪುತ್ರಃ ಶತಕ್ರತೋಃ ।
ಕದನಂ ಯಸ್ಯ ಪುತ್ರೇಣ ಕೃತಮೇಕೇನ ರಕ್ಷಸಾಮ್ ॥ ೨೧

ಸುಷೇಣಶ್ಚಾಪಿ ಧರ್ಮಾತ್ಮಾ ಪುತ್ರೋ ಧರ್ಮಸ್ಯ ವೀರ್ಯವಾನ್ ।
ಸೌಮ್ಯಃ ಸೋಮಾತ್ಮಜಶ್ಚಾತ್ರ ರಾಜನ್ ದಧಿಮುಖಃ ಕಪಿಃ ॥ ೨೨

---

ಎಂಬುದು ನಿನಗೆ ಗೊತ್ತಿದ್ದರೆ ಸತ್ಯವನ್ನು ಮರೆಮಾಚದೆ ಹೇಳು (೧೬–೧೭). ಅವರ ಬಲಾಬಲಗಳನ್ನು ತಿಳಿದು, ನಾನು ಮುಂದಿನ ಏರ್ಪಾಡನ್ನು ಮಾಡು ವೆನು. ಯುದ್ಧವನ್ನು ಹೂಡತಕ್ಕವರು, ಶತ್ರುಗಳ ಬಲಾಬಲಗಳನ್ನು ಅವಶ್ಯ ವಾಗಿ ತಿಳಿದಿರಲೇಬೇಕು'' ಎಂದು ನುಡಿದನು. ಆಗ ಚಾರನಾದ ಶಾರ್ದೂಲನು ರಾವಣನೆದುರಿಗೆ ಹೀಗೆಂದನು (೧೮–೧೯): ''ಮಹಾರಾಜ, ಅಜೇಯನೂ ಕಪಿರಾಜನೂ ಆದ ಸುಗ್ರೀವನು ಋಕ್ಷರಜಸ್ಸಿನ ಪುತ್ರ. ವಿಖ್ಯಾತನಾದ ಜಾಂಬವಂತನು ಗದ್ಗದನ* ಪುತ್ರ. ಗದ್ಗದನಿಗೆ ಧೂಮ್ರನೆಂಬ ಇನ್ನೊಬ್ಬ ಮಗನಿದ್ದಾನೆ. ಕೇಸರಿಯು ಇಂದ್ರನ ಗುರುವಾದ ಬೃಹಸ್ಪತಿಯ ಮಗ. ಹನುಮಂತನೆಂಬ ಒಬ್ಬ ವಾನರನು ಬಂದು ಏಕಾಕಿಯಾಗಿ ನಮ್ಮ ರಾಕ್ಷಸರೊಡನೆ ಹೋರಾಡಿದನಲ್ಲವೆ? ಆತನೇ ಈ ಕೇಸರಿಯ ತನಯ (೨೦–೨೧). ಧರ್ಮಾತ್ಮ ನಾದ ಸುಷೇಣನು ಧರ್ಮದೇವತೆಯ ಮಗ.+ ದಧಿಮುಖನೆಂಬ ವಾನರನು

---

* ಬ್ರಹ್ಮನು ಆಕಳಿಸುವಾಗ ಜಾಂಬವಂತನು ಹುಟ್ಟಿದನೆಂದು ಕಥೆ ಇದೆ. ಆದ್ದರಿಂದ ಗದ್ಗದನು ಜಾಂಬವಂತನ ಸಾಕುತಂದೆಯೆಂದು ತಿಳಿಯಬೇಕು.

+ ಬಾಲಕಾಂಡದ ಹದಿನೇಳನೆಯ ಸರ್ಗದಲ್ಲಿ ಸುಷೇಣನು ವರುಣಪುತ್ರನೆಂದು ಹೇಳಿದೆ. ಆದ್ದರಿಂದ ಇಲ್ಲಿ ಧರ್ಮದೇವತೆಯೆಂದರೆ ವರುಣನೆಂದು ತಿಳಿಯಬೇಕು. ಅಥವಾ ಶಾರ್ದೂಲನು ತಪ್ಪಾಗಿ ಹೇಳಿದ್ದಾನೆಂದೂ ಅವನ ಚಿತ್ತವೈಕಲ್ಯವು ಇದರಿಂದ ಅಭಿವ್ಯಕ್ತವಾಗುವುದೆಂದೂ ತಿಳಿಯಬಹುದು.

ಸುಮುಖೋ ದುರ್ಮುಖಶ್ಚಾತ್ರ ವೇಗದರ್ಶೀ ಚ ವಾನರಃ ।
ಮೃತ್ಯುರ್ವಾನರರೂಪೇಣ ನೂನಂ ಸೃಷ್ಟಃ ಸ್ವಯಂಭುವಾ ॥ ೨೩

ಪುತ್ರೋ ಹುತವಹಸ್ಯಾಥ ನೀಲಃ ಸೇನಾಪತಿಃ ಸ್ವಯಮ್ ।
ಅನಿಲಸ್ಯ ಚ ಪುತ್ರೋಽತ್ರ ಹನುಮಾನಿತಿ ವಿಶ್ರುತಃ ॥ ೨೪

ನಪ್ತಾ ಶಕ್ರಸ್ಯ ದುರ್ಧರ್ಷೋ ಬಲವಾನಂಗದೋ ಯುವಾ ।
ಮೈಂದಶ್ಚ ದ್ವಿವಿದಶ್ಚೋಭೌ ಬಲಿನಾವಶ್ವಿಸಂಭವೌ ॥ ೨೫

ಪುತ್ರಾ ವೈವಸ್ವತಸ್ಯಾತ್ರ ಪಂಚ ಕಾಲಾಂತಕೋಪಮಾಃ ।
ಗಜೋ ಗವಾಕ್ಷೋ ಗವಯಃ ಶರಭೋ ಗಂಧಮಾದನಃ ॥ ೨೬

ದಶ ವಾನರಕೋಟ್ಯಶ್ಚ ಶೂರಾಣಾಂ ಯುದ್ಧಕಾಂಕ್ಷಿಣಾಮ್ ।
ಶ್ರೀಮತಾಂ ದೇವಪುತ್ರಾಣಾಂ ಶೇಷಂ ನಾಖ್ಯಾತುಮುತ್ಸಹೇ ॥ ೨೭

ಪುತ್ರೋ ದಶರಥಸ್ಯೈಷ ಸಿಂಹಸಂಹನನೋ ಯುವಾ ।
ದೂಷಣೋ ನಿಹತೋ ಯೇನ ಖರಶ್ಚ ತ್ರಿಶಿರಾಸ್ತಥಾ ॥ ೨೮

ನಾಸ್ತಿ ರಾಮಸ್ಯ ಸದೃಶೋ ವಿಕ್ರಮೇ ಭುವಿ ಕಶ್ಚನ ।
ವಿರಾಧೋ ನಿಹತೋ ಯೇನ ಕಬಂಧಶ್ಚಾಂತಕೋಪಮಃ ॥ ೨೯

---

ಚಂದ್ರನ ಕುಮಾರ. ಸುಮುಖ, ದುರ್ಮುಖ, ವೇಗದರ್ಶಿ– ಎಂಬ ಮೂವರು ವಾನರರೂಪದಿಂದ ಹುಟ್ಟಿದ ಮೃತ್ಯುಗಳೇ ಸರಿ! ಅವರು ಬ್ರಹ್ಮನ ಪುತ್ರರು (೨೨–೨೩). ಸೇನಾಪತಿಯಾದ ನೀಲನು ಅಗ್ನಿತನಯ. ಪ್ರಖ್ಯಾತನಾದ ಹನುಮಂತನು ವಾಯುಪುತ್ರ. ಬಲಾಢ್ಯನೂ ಯುವಕನೂ ಆದ ಅಂಗದನು ಇಂದ್ರನ ಮೊಮ್ಮಗ. ಬಲಶಾಲಿಗಳಾದ ಮೈಂದ, ದ್ವಿವಿದರಿಬ್ಬರು ಅಶ್ವಿನೀ ದೇವತೆಗಳ ಮಕ್ಕಳು (೨೪–೨೫). ಗಜ, ಗವಾಕ್ಷ, ಗವಯ, ಶರಭ, ಗಂಧಮಾದನ ಎಂಬ ಐವರು ಕಪಿನಾಯಕರು ಯಮಧರ್ಮನ ಮಕ್ಕಳು. ಅವರು ತಂದೆಯಾದ ಯಮನಿಗೆ ಸಮಾನರು. ಮಹಾಸ್ವಾಮಿ, ಹೀಗೆ ದೇವ ಪುತ್ರರೆನಿಸಿ ಯುದ್ಧಾಪೇಕ್ಷಿಗಳಾಗಿ ಬಂದಿರುವ ಶೂರರ ಸಂಖ್ಯೆಯೇ ಹತ್ತು ಕೋಟಿ ಇದೆ! ಇತರ ವಾನರರನ್ನು ವರ್ಣಿಸಿ ಹೇಳಲಾರೆ! (೨೬–೨೭). ಇನ್ನು ದಶರಥಪುತ್ರನಾದರೋ ಸಿಂಹದ ಮೈಕಟ್ಟಿನ ತರುಣ. ಖರ ದೂಷಣ ತ್ರಿಶಿರ ರನ್ನು ಸಂಹರಿಸಿದವನು. ಈ ಲೋಕದಲ್ಲಿ ರಾಮನಿಗೆ ಸರಿದೂಗಬಲ್ಲ ಇನ್ನೊಬ್ಬ

ವಕ್ತುಂ ನ ಶಕ್ತೋ ರಾಮಸ್ಯ ನರಃ ಕಶ್ಚಿದ್ಗುಣಾನ್ ಕ್ಷಿತೌ ।
ಜನಸ್ಥಾನಗತಾ ಯೇನ ಯಾವಂತೋ ರಾಕ್ಷಸಾ ಹತಾಃ ॥ ೩೦
ಲಕ್ಷ್ಮಣಶ್ಚಾತ್ರ ಧರ್ಮಾತ್ಮಾ ಮಾತಂಗಾನಾಮಿವರ್ಷಭಃ ।
ಯಸ್ಯ ಬಾಣಪಥಂ ಪ್ರಾಪ್ಯ ನ ಜೀವೇದಪಿ ವಾಸವಃ ॥ ೩೧
ಶ್ವೇತೋ ಜ್ಯೋತಿರ್ಮುಖಶ್ಚಾತ್ರ ಭಾಸ್ಕರಸ್ಯಾತ್ಮಸಂಭವೌ ।
ವರುಣಸ್ಯ ಚ ಪುತ್ರೋಽನ್ಯೋ ಹೇಮಕೂಟಃ ಪ್ಲವಂಗಮಃ ॥ ೩೨
ವಿಶ್ವಕರ್ಮಸುತೋ ವೀರೋ ನಲಃ ಪ್ಲವಗಸತ್ತಮಃ ।
ವಿಕ್ರಾಂತೋ ಬಲವಾನತ್ರ ವಸುಪುತ್ರಃ ಸುದುರ್ಧರಃ ॥ ೩೩
ರಾಕ್ಷಸಾನಾಂ ವರಿಷ್ಠಶ್ಚ ತವ ಭ್ರಾತಾ ವಿಭೀಷಣಃ ।
ಪರಿಗೃಹ್ಯ ಪುರೀಂ ಲಂಕಾಂ ರಾಘವಸ್ಯ ಹಿತೇ ರತಃ ॥ ೩೪
ಇತಿ ಸರ್ವಂ ಸಮಾಖ್ಯಾತಂ ತವೇದಂ ವಾನರಂ ಬಲಮ್ ।
ಸುವೇಲೇಽಧಿಷ್ಠಿತಂ ಶೈಲೇ ಶೇಷಕಾರ್ಯೇ ಭವಾನ್ ಗತಿಃ ॥ ೩೫

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರಿಂಶಃ ಸರ್ಗಃ

---

ವೀರನಿಲ್ಲ. ವಿರಾಧನನ್ನೂ ಯಮನಂತಿದ್ದ ಕಬಂಧನನ್ನೂ ಕೊಂದಿದ್ದಾನೆ (೨೮–೨೯). ಜನಸ್ಥಾನದಲ್ಲಿದ್ದ ಸಮಸ್ತರಾಕ್ಷಸರನ್ನೂ ವಧಿಸಿ ಧೂಳೆಬ್ಬಿಸಿದ ರಾಮನ ಶೌರ್ಯಾದಿಗುಣಗಳನ್ನು ವರ್ಣಿಸಲು ಈ ಜಗತ್ತಿನಲ್ಲಿ ಯಾರಿಗೂ ಅಳವಲ್ಲ (೩೦). ಧರ್ಮಾತ್ಮನಾದ ಲಕ್ಷ್ಮಣನು ಸಲಗನಂತಿದ್ದಾನೆ. ಅವನ ಶರಪಥದಲ್ಲಿ ಸಿಲುಕಿದವನು ದೇವೇಂದ್ರನಾದರೂ ಬದುಕಲಾರ! ಶ್ವೇತ, ಜ್ಯೋತಿರ್ಮುಖ ಎಂಬ ವಾನರಯೋಧರು ಸೂರ್ಯನ ಮಕ್ಕಳು. ಹೇಮಕೂಟ ಎಂಬವನು ವರುಣಪುತ್ರ (೩೧–೩೨). ನಳನೆಂಬ ಕಪಿವೀರನು ವಿಶ್ವಕರ್ಮನ ತನಯ. ಸುದುರ್ಧರನೆಂಬ ವಿಕ್ರಮಶಾಲಿಯೂ ಬಲಾಢ್ಯನೂ ಆದ ವಾನರಯೋಧನು ವಸುಪುತ್ರ. ಅಲ್ಲದೆ, ಮಹಾರಾಜ, ರಾಕ್ಷಸೋತ್ತಮನೂ ನಿನ್ನ ತಮ್ಮನೂ ಆದ ವಿಭೀಷಣನು ಲಂಕಾಪುರಿಯು ತನ್ನದೆಂದು ನಂಬಿ, ರಾಮನ ಹಿತಕಾರ್ಯದಲ್ಲಿ ನಿರತನಾಗಿದ್ದಾನೆ. ಸುವೇಲಶೈಲದಲ್ಲಿ ಬಂದಿಳಿದಿರುವ ಕಪಿಸೇನೆಯ ವಿವರವನ್ನು ತಿಳಿಸಿದ್ದೇನೆ. ಮುಂದಿನ ವಿಷಯದಲ್ಲಿ ನೀನೇ ನಮಗೆ ಗತಿ'' ಎಂದನು (೩೩–೩೬).*

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಮೂವತ್ತನೆಯ ಸರ್ಗ

---

* ಈ ಮೂವತ್ತನೆಯ ಸರ್ಗವು ಪ್ರಕ್ಷಿಪ್ತವೆಂದು ಹೇಳಲಾಗಿವೆ.

## ಏಕತ್ರಿಂಶಃ ಸರ್ಗಃ

ವಿದ್ಯುಜ್ಜಿಹ್ವಮಾಯಾಪ್ರಯೋಗಃ

ತತಸ್ತಮಕ್ಷೋಭ್ಯಬಲಂ ಲಂಕಾಧಿಪತಯೇ ಚರಾಃ ।
ಸುವೇಲೇ ರಾಘವಂ ಶೈಲೇ ನಿವಿಷ್ಟಂ ಪ್ರತ್ಯವೇದಯನ್ ॥ ೧

ಚಾರಾಣಾಂ ರಾವಣಃ ಶ್ರುತ್ವಾ ಪ್ರಾಪ್ತಂ ರಾಮಂ ಮಹಾಬಲಮ್ ।
ಜಾತೋದ್ವೇಗೋಽಭವತ್ಕಿಂಚಿತ್ಸಚಿವಾನಿದಮಬ್ರವೀತ್ ॥ ೨

ಮಂತ್ರಿಣಃ ಶೀಘ್ರಮಾಯಾಂತು ಸರ್ವೇ ವೈ ಸುಸಮಾಹಿತಾಃ ।
ಅಯಂ ನೋ ಮಂತ್ರ ಕಾಲೋ ಹಿ ಸಂಪ್ರಾಪ್ತ ಇತಿ ರಾಕ್ಷಸಾಃ ॥ ೩

ತಸ್ಯ ತಚ್ಛಾಸನಂ ಶ್ರುತ್ವಾ ಮಂತ್ರಿಣೋಽಭ್ಯಾಗಮನ್ ದ್ರುತಮ್ ।
ತತಃ ಸ ಮಂತ್ರಯಾಮಾಸ ಸಚಿವೈ ರಾಕ್ಷಸೈಃ ಸಹ ॥ ೪

ಮಂತ್ರಯಿತ್ವಾ ಸ ದುರ್ಧರ್ಷಃ ಕ್ಷಮಂ ಯತ್ಸಮನಂತರಮ್।
ವಿಸರ್ಜಯಿತ್ವಾ ಸಚಿವಾನ್ ಪ್ರವಿವೇಶ ಸ್ವಮಾಲಯಮ್॥ ೫

### ಸರ್ಗ ೩೧

ರಾವಣನು ವಿದ್ಯುಜ್ಜಿನಿಂದ ಮಾಹಿಕವಾದ ರಾಮಶಿರಸ್ಸನ್ನು ನಿರ್ಮಿಸಿ
ಸೀತಾದೇವಿಯನ್ನು ವಂಚಿಸಲು ಪ್ರಯತ್ನಿಸುವುದು.

ಹೀಗೆ ಶಾರ್ದೂಲಾದಿ ಚಾರರೆಲ್ಲರೂ ಅಕ್ಷೋಭ್ಯವಾದ ಸೇನೆಯೊಂದಿಗೆ ರಾಘವನು ಸುವೇಲಶೈಲದ ಬಳಿಗೆ ಬಂದು ಇಳಿದಿರುವನೆಂದೂ ಆತನು ಬಲಿಷ್ಠನೆಂದೂ ತಿಳಿಸಲಾಗಿ, ರಾವಣನಿಗೆ ಸ್ವಲ್ಪ ಭಯವುಂಟಾಯಿತು. (೧–೨). ಅವನು ಮಂತ್ರಾಲೋಚನೆಯಲ್ಲಿ ನಿಪುಣರಾದ ಮಂತ್ರಿಗಳೆಲ್ಲರೂ ಕೂಡಲೆ ಬಂದು ಸೇರಬೇಕೆಂದೂ ಈಗ ಮಂತ್ರಾಲೋಚನೆ ಮಾಡಬೇಕಾದ ಕಾಲವು ಸಂಪ್ರಾಪ್ತವಾಗಿದೆಯೆಂದೂ ಆಜ್ಞಾಪಿಸಿದನು. (೩). ಅದರಂತೆ ಶೀಘ್ರದಲ್ಲಿ ಸಚಿವರೆಲ್ಲರೂ ಬಂದು ಸೇರಿದರು. ರಾವಣನು ಅವರೊಡನೆ ಮುಂದಿನ ಕರ್ತವ್ಯವನ್ನು ಸಮಾಲೋಚಿಸಿ, ಅವರನ್ನು ಕಳಿಸಿ ತನ್ನ ಅರಮನೆಯನ್ನು ಪ್ರವೇಶಿಸಿ

ತತೋ ರಾಕ್ಷಸಮಾಹೂಯ ವಿದ್ಯುಜ್ಜಿಹ್ವಂ ಮಹಾಬಲಮ್ ।
ಮಾಯಾವಿನಂ ಮಹಾಮಾಯಃ ಪ್ರಾವಿಶದ್ಯತ್ರ ಮೈಥಿಲೀ ॥ ೬

ವಿದ್ಯುಜ್ಜಿಹ್ವಂ ಚ ಮಾಯಜ್ಞಮಬ್ರವೀದ್ರಾಕ್ಷಸಾಧಿಪಃ ।
ಮೋಹಯಿಷ್ಯಾವಹೇ ಸೀತಾಂ ಮಾಯಯಾ ಜನಕಾತ್ಮಜಾಮ್ ॥ ೭

ಶಿರೋ ಮಾಯಾಮಯಂ ಗೃಹ್ಯ ರಾಘವಸ್ಯ ನಿಶಾಚರ ।
ತ್ವಂ ಮಾಂ ಸಮುಪತಿಷ್ಠಸ್ವ ಮಹಚ್ಚ ಸಶರಂ ಧನುಃ ॥ ೮

ಏವಮುಕ್ತಸ್ತಥೇತ್ಯಾಹ ವಿದ್ಯುಜ್ಜಿಹ್ವೋ ನಿಶಾಚರಃ ।
ದರ್ಶಯಾಮಾಸ ತಾಂ ಮಾಯಾಂ ಸುಪ್ರಯುಕ್ತಾಂ ಸ ರಾವಣೇ ॥ ೯

ತಸ್ಯ ತುಷ್ಟೋಽಭವದ್ರಾಜಾ ಪ್ರದದೌ ಚ ವಿಭೂಷಣಮ್ ।
ಅಶೋಕವನಿಕಾಯಾಂ ತು ಸೀತಾದರ್ಶನಲಾಲಸಃ ॥ ೧೦

ನೈರ್ಋತಾನಾಮಧಿಪತಿಃ ಸಂವಿವೇಶ ಮಹಾಬಲಃ ।
ತತೋ ದೀನಾಮದೈನ್ಯಾರ್ಹಾಂ ದದರ್ಶ ಧನದಾನುಜಃ ॥ ೧೧

---

ದನು. ಅಲ್ಲಿಗೆ ಬಹಳ ಮಾಯಾವಿಯಾದ ವಿದ್ಯುಜ್ಜಿಹ್ವನೆಂಬ ರಾಕ್ಷಸನನ್ನು ಕರೆಸಿಕೊಂಡು ಮಾತಾಡಿ, ಸ್ವತಃ ಮಾಯಾವಿಯಾದ ತಾನು ಆತನನ್ನು ಕರೆದುಕೊಂಡು ಮೈಥಿಲಿಯಿದ್ದ ಅಶೋಕವನಕ್ಕೆ ನಡೆದನು (೪–೬). ಆ ರಾಕ್ಷಸಾಧಿಪನು ವಿದ್ಯುಜ್ಜಿಹ್ವನನ್ನು ಕುರಿತು ''ವಿದ್ಯುಜ್ಜಿಹ್ವ, ಈಗ ನಾವು ಮಾಯೆಯೊಂದನ್ನು ತೋರಿಸಿ, ಸೀತೆಯನ್ನು ವಂಚಿಸಬೇಕು ! ನೀನು ಮಾಯಾಮಯವಾದ ರಾಮನ ಒಂದು ತಲೆಯನ್ನೂ ಅವನ ಬಿಲ್ಲಿನಂತಿರುವ ಒಂದು ದೊಡ್ಡ ಬಿಲ್ಲನ್ನೂ ಬಾಣವನ್ನೂ ನಿರ್ಮಿಸು'' ಎಂದು ತಿಳಿಸಿದನು (೭–೮). ವಿದ್ಯುಜ್ಜಿಹ್ವನು 'ಹಾಗೆಯೇ ಆಗಲಿ, ಪ್ರಭು!' ಎಂದು ನುಡಿದು, ತನ್ನ ಮಾಯಾಬಲದ ಕೈಚಳಕವನ್ನು ರಾವಣನಿಗೆ ತೋರಿಸಿದನು. ರಾಕ್ಷಸರಾಜನು ಸಂತುಷ್ಟನಾಗಿ ಒಂದು ಒಡವೆಯನ್ನು ವಿದ್ಯುಜ್ಜಿಹ್ವನಿಗೆ ಪಾರಿತೋಷಕವಾಗಿ ಕೊಟ್ಟು, ಸೀತೆಯನ್ನು ನೋಡುವ ತವಕದಿಂದ ಅಶೋಕವನದೊಳಗೆ ಹೋದನು (೯–೧೦). ಅಲ್ಲಿ ದುಃಖಾರ್ಹಳಲ್ಲದ ಜಾನಕಿಯು ದೀನವದನೆಯಾಗಿ ತಲೆತಗ್ಗಿಸಿಕೊಂಡು ಕಣ್ಣೀರಿಡುತ್ತ ನೆಲದಮೇಲೆ ಕುಳಿತಿದ್ದನು.

**ಅಧೋಮುಖೀಂ ಶೋಕಪರಾಮುಪವಿಷ್ಟಾಂ ಮಹೀತಲೇ ।**
**ಭರ್ತಾರಮೇವ ಧ್ಯಾಯಂತೀಮಶೋಕವನಿಕಾಂ ಗತಾಮ್ ॥ ೧೨**

**ಉಪಾಸ್ಯಮಾನಾಂ ಘೋರಾಭೀ ರಾಕ್ಷಸೀಭೀರದೂರತಃ ।**
**ಉಪಸೃತ್ಯ ತತಃ ಸೀತಾಂ ಪ್ರಹರ್ಷಂ ನಾಮ ಕೀರ್ತಯನ್ ॥ ೧೩**

**ಇದಂ ಚ ವಚನಂ ಧೃಷ್ಟಮುವಾಚ ಜನಕಾತ್ಮಜಾಮ್ ।**
**ಸಾಂತ್ವ್ಯಮಾನಾ ಮಯಾ ಭದ್ರೇ ಯಮುಪಾಶ್ರಿತ್ಯ ವಲ್ಗಸೇ ॥ ೧೪**

**ಖರಹಂತಾ ಸ ತೇ ಭರ್ತಾ ರಾಘವಃ ಸಮರೇ ಹತಃ ।**
**ಛಿನ್ನಂ ತೇ ಸರ್ವತೋ ಮೂಲಂ ದರ್ಪಸ್ತೇ ವಿಹತೋ ಮಯಾ ॥ ೧೫**

**ವ್ಯಸನೇನಾತ್ಮನಃ ಸೀತೇ ಮಮ ಭಾರ್ಯಾ ಭವಿಷ್ಯಸಿ ।**
**ವಿಸೃಜೇಮಾಂ ಮತಿಂ ಮೂಢೇ ಕಿಂ ಮೃತೇನ ಕರಿಷ್ಯಸಿ ॥ ೧೬**

**ಭವಸ್ವ ಭದ್ರೇ ಭಾರ್ಯಾಣಾಂ ಸರ್ವಾಸಾಮೀಶ್ವರೀ ಮಮ ।**
**ಅಲ್ಪಪುಣ್ಯೇ ನಿವೃತ್ತಾರ್ಥೇ ಮೂಢೇ ಪಂಡಿತಮಾನಿನಿ ॥ ೧೭**

---

ತನ್ನ ಪತಿಯಾದ ಶ್ರೀರಾಮನನ್ನು ಒಂದೇ ಮನಸ್ಸಿನಿಂದ ಧ್ಯಾನಿಸುತ್ತಿದ್ದಳು. ಸುತ್ತಲೂ ಘೋರಾಕಾರದ ರಾಕ್ಷಸಿಯರು ಕಾವಲಾಗಿದ್ದರು (೧೧–೧೨). ರಾವಣನು ಜಾನಕಿಯನ್ನು ನೋಡುತ್ತ ದೊಡ್ಡದೊಂದು ಸಂತೋಷದ ವಾರ್ತೆಯನ್ನು ಹೇಳುವವನಂತೆ ಸಂಭ್ರಮದಿಂದ ಸಮೀಪಿಸಿ, ಉದ್ಧಟತನದ ಈ ಮಾತನ್ನಾಡಿದನು (೧೩): "ಭದ್ರೆ, ನಾನು ಎಷ್ಟು ಸಂತೈಸಿದರೂ ಕೇಳದೆ, ಯಾರನ್ನು ನಂಬಿಕೊಂಡು ನೀನು ದರ್ಪದ ಮಾತನ್ನಾಡುತ್ತಿದ್ದೆಯೋ ಖರಾದಿಗಳನ್ನುಕೊಂದಿರುವನೆಂದು ಯಾರ ವಿಷಯದಲ್ಲಿ ಹೆಮ್ಮೆಪಡುತ್ತಿದ್ದೆಯೋ, ಆ ನಿನ್ನ ಗಂಡನಾದ ರಾಮನನ್ನು ಯುದ್ಧದಲ್ಲಿ ನಾನು ಕೊಂದು ಹಾಕಿರುವೆನು! ನಿನ್ನ ಜಂಭದ ಬೇರನ್ನು ಕತ್ತರಿಸಿದ್ದೇನೆ ! ನಿನ್ನ ದರ್ಪವನ್ನು ಮುರಿದ್ದೇನೆ ! (೧೪–೧೫). ಸೀತೆ, ನಿನಗೊದಗಿರುವ ಈ ವ್ಯಸನದಿಂದಲೇ ಬೇರೆದಾರಿಗಾಣದೆ, ನನ್ನ ಮಡದಿಯಾಗವೆ! ಅಯ್ಯೋ ಬುದ್ಧಿಹೀನಳೆ, ನಿನ್ನ ಛಲವನ್ನು ಬಿಡು; ಸತ್ತವನಿಂದ ನಿನಗಾಗಬೇಕಾದ್ದೇನು? (೧೬). ಸುಂದರಿ, ನನ್ನ ಸಕಲ ಮಡದಿಯರಿಗೂ ನೀನು ಈಶ್ವರಿಯಾಗು. ನೀನು ಮಂದಭಾಗ್ಯಳೇ ಸರಿ. ನೆಚ್ಚಿಕೊಂಡಿದ್ದ ರಾಮನೂ ಕೈ ಬಿಟ್ಟು ತೊಲಗಿದನು. (ಆದರೂ ಹಠ

ಶೃಣು ಭರ್ತುರ್ವಧಂ ಸೀತೇ ಘೋರಂ ವೃತ್ರವಧಂ ಯಥಾ ।
ಸಮಾಯಾತಃ ಸಮುದ್ರಾಂತಂ ಮಾಂ ಹಂತುಂ ಕಿಲ ರಾಘವಃ ॥ ೧೮

ವಾನರೇಂದ್ರಪ್ರಣೀತೇನ ಬಲೇನ ಮಹತಾ ವೃತಃ ।
ಸಂನಿವಿಷ್ಟಃ ಸಮುದ್ರಸ್ಯ ಪೀಡ್ಯ ತೀರಮಥೋತ್ತರಮ್ ॥ ೧೯

ಬಲೇನ ಮಹತಾ ರಾಮೋ ವ್ರಜತ್ಯಸ್ತಂ ದಿವಾಕರೇ ।
ಅಥಾಧ್ವನಿ ಪರಿಶ್ರಾಂತಮರ್ಧರಾತ್ರೇ ಸ್ಥಿತಂ ಬಲಮ್ ॥ ೨೦

ಸುಖಸಂಸುಪ್ತಮಾಸಾದ್ಯ ಚರಿತಂ ಪ್ರಥಮಂ ಚರೈಃ ।
ತತ್ಪ್ರಹಸ್ತ ಪ್ರಣೀತೇನ ಬಲೇನ ಮಹತಾ ಮಮ ॥ ೨೧

ಬಲಮಸ್ಯ ಹತಂ ರಾತ್ರೌ ಯತ್ರ ರಾಮಃ ಸಲಕ್ಷ್ಮಣಃ ।
ಪಟ್ಟಸಾನ್ಪರಿಘಾಂಶ್ಚಕ್ರಾನ್‌ದಂಡಾನ್ ಖಡ್ಗಾನ್ ಮಹಾಯಸಾನ್ ॥

ಬಾಣಜಾಲಾನಿ ಶೂಲಾನಿ ಭಾಸ್ವರಾನ್ಕೂಟಮುದ್ಗರಾನ್ ।
ಯಷ್ಟೀಶ್ಚ ತೋಮರಾನ್ ಶಕ್ತೀಶ್ಚಕ್ರಾಣಿ ಮುಸಲಾನಿ ಚ ॥ ೨೩

---

ಮಾಡುವೆಯಲ್ಲ) ಎಲೌ ಮೂಢೆ, ಬಹಳ ತಿಳಿದವಳೆಂದು ಹೆಮ್ಮೆಪಡುತ್ತಿದ್ದೆ ಯಲ್ಲ! (೧೭). ಸೀತೆ, ನಿನ್ನ ಗಂಡನ ಕೊಲೆ ಹೇಗಾಯಿತೆಂಬುದನ್ನು ಕೇಳು: ವೃತ್ತನ ವಧೆಯಾದಂತೆ ಘೋರವಾದ ಕೊಲೆ ನಡೆಯಿತು. ಸುಗ್ರೀವನು ಕರೆಸಿದ ದೊಡ್ಡ ವಾನರಸೇನೆಯೊಡನೆ, ರಾಮನು ನನ್ನನ್ನು ಸಂಹರಿಸಬೇಕೆಂದು ಸಮುದ್ರದವರೆಗೆ ಬಂದು ಉತ್ತರತೀರದಲ್ಲಿ ಬೀಡುಬಿಟ್ಟನಂತೆ (೧೮–೧೯). ಆ ಮೇಲೆ ಸೂರ್ಯಾಸ್ತವಾಯಿತು. ಮಾರ್ಗಾಯಾಸದಿಂದ ಬಳಲಿದ ಸೇನೆಯು ಗಾಢನಿದ್ರೆಯಲ್ಲಿ ಮುಳುಗಿತು. ನನ್ನ ಗೂಢಚಾರರು ಹೋಗಿ ಎಲ್ಲ ವಿಷಯ ವನ್ನು ತಿಳಿದುಕೊಂಡು ಬಂದರು. ಅನಂತರ ನಮ್ಮ ಪ್ರಹಸ್ತನು ದೊಡ್ಡ ರಾಕ್ಷಸಸೇನೆಯೊಡನೆ ಹೋಗಿ ರಾಮಲಕ್ಷ್ಮಣರಿದ್ದ ಕಪಿಸೇನೆಯಮೇಲೆ ಧಾಳಿ ಮಾಡಿದನು (೨೦–೨೧). ಪಟ್ಟಸ, ಪರಿಘ, ಚಕ್ರ, ದಂಡ, ಖಡ್ಗ, ಕಬ್ಬಿಣದ ದೊಡ್ಡ ಸಲಾಕೆ, ಬಾಣ, ಶೂಲ, ಕೂಟಮುದ್ಗರ, ಯಷ್ಟಿ, ತೋಮರ, ಶಕ್ತಿ ಮಹಾಚಕ್ರ, ಮುಸಲ–ಮುಂತಾದ ಆಯುಧಗಳಿಂದ ನಮ್ಮ ರಾಕ್ಷಸರು ಕಪಿ ಗಳನ್ನು ಹೊಡೆದು ಬಡಿದು ಕಡಿದು ಸಾಯಿಸಿದರು (೨೨–೨೩).

ಉದ್ಯಮ್ಯೋದ್ಯಮ್ಯ ರಕ್ಷೋಭಿರ್ವಾನರೇಷು ನಿಪಾತಿತಾಃ ।
ಅಥ ಸುಪ್ತಸ್ಯ ರಾಮಸ್ಯ ಪ್ರಹಸ್ತೇನ ಪ್ರಮಾಥಿನಾ ॥ ೨೪

ಅಸಕ್ತಂ ಕೃತಹಸ್ತೇನ ಶಿರಶ್ಛಿನ್ನಂ ಮಹಾಸಿನಾ ।
ವಿಭೀಷಣಃ ಸಮುತ್ಪತ್ಯ ನಿಗೃಹೀತೋ ಯದೃಚ್ಛಯಾ ॥ ೨೫

ದಿಶಃ ಪ್ರವ್ರಾಜಿತಃ ಸರ್ವೈರ್ಲಕ್ಷ್ಮಣಃ ಪ್ಲವಗೈಃ ಸಹ ।
ಸುಗ್ರೀವೋ ಗ್ರೀವಯಾ ಶೇತೇ ಭಗ್ನಯಾ ಪ್ಲವಗಾಧಿಪಃ ॥ ೨೬

ನಿರಸ್ತಹನುಕಃ ಶೇತೇ ಹನುಮಾನ್ ರಾಕ್ಷಸೈರ್ಹತಃ ।
ಜಾಂಬವಾನಥ ಜಾನುಭ್ಯಾಮುತ್ಪತನ್ನಿಹತೋ ಯುಧಿ ॥ ೨೭

ಪಟ್ಟಿಸೈರ್ಬಹುಭಿಶ್ಛಿನ್ನೋ ನಿಕೃತ್ತಃ ಪಾದಪೋ ಯಥಾ ।
ಮೈಂದಶ್ಚ ದ್ವಿವಿದಶ್ಚೋಭೌ ನಿಹತೌ ವಾನರರ್ಷಭೌ ॥ ೨೮

ನಿಶ್ವಸಂತೌ ರುದಂತೌ ಚ ರುಧಿರೇಣ ಪರಿಪ್ಲುತೌ ।
ಅಸಿನಾ ವ್ಯಾಯತೌ ಛಿನ್ನೌ ಮಧ್ಯೇ ಹ್ಯರಿನಿಷೂದನೌ ॥ ೨೯

---

ಅಷ್ಟರಲ್ಲಿ ಶತ್ರುಸಂಹಾರನಿಪುಣನೂ ಕೈಚಳಕವುಳ್ಳವನೂ ಆದ ನಮ್ಮ ಪ್ರಹಸ್ತನು, ಮಲಗಿದ್ದ ರಾಮನ ತಲೆಯನ್ನು ಮಹಾಖಡ್ಗದಿಂದ ತುಂಡರಿಸಿದನು! ದಿಕ್ಕುಗೆಟ್ಟು ಓಡುತ್ತಿದ್ದ ವಿಭೀಷಣನನ್ನು ಸೆರೆಹಿಡಿಯಲಾಯಿತು (೨೪–೨೫). ಲಕ್ಷ್ಮಣನೂ ಹತಶೇಷರಾದ ಕಪಿಗಳೂ ದಿಕ್ಕುದಿಕ್ಕಿಗೆ ಓಡಿಹೋದರು. ಕಪಿರಾಜನಾದ ಸುಗ್ರೀವನು ಕತ್ತುಮುರಿಸಿಕೊಂಡು ಸತ್ತುಬಿದ್ದಿರುವನು. ಹನುಮಂತನು ರಾಕ್ಷಸರಿಂದ ದವಡೆಯನ್ನೊಡೆಸಿಕೊಂಡು ಸತ್ತುಮಲಗಿದ್ದಾನೆ. ಆ ಹೊಡೆದಾಟದಲ್ಲಿ ಜಾಂಬವಂತನು ಮೊಳಕಾಲು ಮುರಿಸಿಕೊಂಡು ಹತನಾಗಿ ಒರಗಿದ್ದಾನೆ (೨೬–೨೭). ನಮ್ಮ ರಾಕ್ಷಸರು ಪಟ್ಟಿಸಗಳಿಂದ ಜಾಂಬವಂತನನ್ನು ಕಡಿದು ಮರವನ್ನುರುಳಿಸಿದಂತೆ ಉರುಳಿಸಿದ್ದಾರೆ. ಇನ್ನು ವಾನರೋತ್ತಮರೆನಿಸಿದ ಮೈಂದದ್ವಿವಿದರಿಬ್ಬರೂ ಹತರಾದರು (೨೮). ಅವರು ಸಾಯುವಾಗ ಮೇಲುಸಿರೆಳೆಯುತ್ತ ಕಣ್ಣೀರುಸುರಿಸುತ್ತ ರಕ್ತದಿಂದ ತೊಯ್ದುಹೋಗಿದ್ದರು. ಸೀತೆ, ಶೂರರಾದ ದೀರ್ಘಾಕಾರರಾದ ಆ ಮೈಂದದ್ವಿವಿದರನ್ನು ಕತ್ತಿಯಿಂದ ಸೊಂಟಕ್ಕೆ ಹೊಡೆದು ಇಬ್ಭಾಗವಾಗಿ ಕತ್ತರಿಸಲಾಯಿತು. (೨೯).

ಅನುತಿಷ್ಠತಿ ಮೇದಿನ್ಯಾಂ ಪನಸಃ ಪನಸೋ ಯಥಾ ।
ನಾರಾಚೈರ್ಬಹುಭಿಶ್ಛಿನ್ನಃ ಶೇತೇ ದರ್ಯಾಂ ದರೀಮುಖಃ ॥ ೩೦

ಕುಮುದಸ್ತು ಮಹಾತೇಜಾ ನಿಷ್ಕೂಜಃ ಸಾಯಕೈಃ ಕೃತಃ ।
ಅಂಗದೋ ಬಹುಭಿಶ್ಛಿನ್ನಃ ಶರೈರಾಸಾದ್ಯ ರಾಕ್ಷಸೈಃ ॥ ೩೧

ಪರಿತೋ ರುಧಿರೋದ್ಗಾರೀ ಕ್ಷಿತೌ ನಿಪತಿತಾಂಗದಃ ।
ಹರಯೋ ಮಥಿತಾ ನಾಗೈ ರಥಜಾತೈಸ್ತಥಾಪರೇ ॥ ೩೨

ಶಾಯಿತಾ ಮೃದಿತಾಶ್ಚಾಶ್ವೈ ರ್ವಾಯುವೇಗೈರಿವಾಂಬುದಾಃ ।
ಪ್ರಸೃತಾಶ್ಚಾಪರೇ ತ್ರಸ್ತಾ ಹನ್ಯಮಾನಾ ಜಘನ್ಯತಃ ॥ ೩೩

ಅಭಿದ್ರುತಾಸ್ತು ರಕ್ಷೋಭಿಃ ಸಿಂಹೈರಿವ ಮಹಾದ್ವಿಪಾಃ ।
ಸಾಗರೇ ಪತಿತಾಃ ಕೇಚಿತ್ಕೇಚಿದ್ಗಗನಮಾಶ್ರಿತಾಃ ॥ ೩೪

ಋಕ್ಷಾ ವೃಕ್ಷಾನುಪಾರೂಢಾ ವಾನರೀಂ ವೃತ್ತಿಮಾಶ್ರಿತಾಃ ।
ಸಾಗರಸ್ಯ ಚ ತೀರೇಷು ಶೈಲೇಷು ಚ ವನೇಷು ಚ ॥ ೩೫

ಪನಸನೆಂಬ ವಾನರನು ಹಲಸಿನ ಹಣ್ಣಿನಂತೆ ಕೊಚ್ಚಲ್ಪಟ್ಟು ನೆಲದಮೇಲೆ ಬಿದ್ದಿದ್ದಾನೆ! ಬಾಣಗಳಿಂದ ಮೈತುಂಬ ಗಾಯಗೊಂಡು ದರೀಮುಖನು ದರಿಯಲ್ಲಿ ಹೋಗಿ ಮಲಗಿದ್ದಾನೆ! ಶೂರನಾದ ಕುಮುದನೆಂಬುವನು ಬಾಣಗಳ ಹೊಡೆತದಿಂದ ನೊಂದು ಮಾತಾಡಲೂ ಶಕ್ತಿಯಿಲ್ಲದೆ ಬಿದ್ದಿದ್ದಾನೆ. ನಮ್ಮ ರಾಕ್ಷಸರು ಶರಗಳನ್ನು ತೂರಿ ಅಂಗದನ ಅಂಗಗಳನ್ನು ಕತ್ತರಿಸಿಹಾಕಿದರು (೩೦–೩೧). ಅಂಗದನ ಅಂಗದಗಳು ಕಳಚಿಬಿದ್ದವು. ನೆತ್ತರನ್ನು ಕಾರುತ್ತ ಅವನು ನೆಲದಮೇಲೊರಗಿದನು. ಸೀತೆ, (ಏನು ಹೇಳಲಿ?) ಬಹುಮಂದಿ ವಾನರಯೋಧರನ್ನು ನಮ್ಮ ರಾಕ್ಷಸರು ಆನೆಗಳಿಂದ ಮೆಟ್ಟಿಸಿದರು. ರಥಗಳನ್ನು ಹರಿಸಿ ಅರೆದರು. ಕುದುರೆಗಳಿಂದ ತುಳಿಸಿದರು. ವಾನರರು ನಜ್ಜುಗುಜ್ಜಾಗಿ ಸತ್ತುಹೋದರು. ಕೆಲವು ಕಪಿಗಳು ಹೆದರಿ ಚಲ್ಲಾಪಿಲ್ಲಿಯಾಗಿ ಓಡುವಾಗ ನಮ್ಮ ರಾಕ್ಷಸರು ಹಿಂದಿನಿಂದ ಅಟ್ಟಿಸಿಕೊಂಡುಹೋಗಿ ಬಡಿದರು (೩೨–೩೩). ಆನೆಗಳನ್ನು ಸಿಂಹಗಳು ಆಕ್ರಮಿಸುವಂತೆ ಆಕ್ರಮಿಸಿ, ರಾಕ್ಷಸರು ಅವರನ್ನು ಕೊಂದರು. ಆ ಸೇನೆಯಲ್ಲಿದ್ದ ಕೆಲವು ಮಂಗಗಳು ಸಮುದ್ರಕ್ಕೆ ಹಾರಿದವು. ಕೆಲವು ಆಕಾಶಕ್ಕೆ ನೆಗೆದವು (೩೪). ಕರಡಿಗಳು ಮಂಗಗಳಂತೆ ಮರಗಳನ್ನೇರಿ

ಪಿಂಗಲಾಸ್ತೇ ವಿರೂಪಾಕ್ಷೈರ್ಬಹುಭಿರ್ಬಹವೋ ಹತಾಃ ।
ಏವಂ ತವ ಹತೋ ಭರ್ತಾ ಸಸೈನ್ಯೋ ಮಮ ಸೇನಯಾ ॥ ೩೬

ಕ್ಷತ ಜಾರ್ದ್ರಂ ರಜೋಧ್ವಸ್ತಮಿದಂ ಚಾಸ್ಯಾಹೃತಂ ಶಿರಃ ।
ತತಃ ಪರಮದುರ್ಧರ್ಷೋ ರಾವಣೋ ರಾಕ್ಷಸಾಧಿಪಃ ॥ ೩೭

ಸೀತಾಯಾಮುಪಶೃಣ್ವತ್ಯಾಂ ರಾಕ್ಷಸೀಮಿದಮಬ್ರವೀತ್ ।
ರಾಕ್ಷಸಂ ಕ್ರೂರಕರ್ಮಾಣಂ ವಿದ್ಯುಜ್ಜಿಹ್ವಂ ತ್ವಮಾನಯ ॥ ೩೮

ಯೇನ ತದ್ರಾಘವಶಿರಃ ಸಂಗ್ರಾಮಾತ್ಸ್ವಯಮಾಹೃತಮ್ ।
ವಿದ್ಯುಜ್ಜಿಹ್ವಸ್ತತೋ ಗೃಹ್ಯ ಶಿರಸ್ತತ್ಸಶರಾಸನಮ್ ॥ ೩೯

ಪ್ರಣಾಮಂ ಶಿರಸಾ ಕೃತ್ವಾ ರಾವಣಸ್ಯಾಗ್ರತಃ ಸ್ಥಿತಃ ।
ತಮಬ್ರವೀತ್ತತೋ ರಾಜಾ ರಾವಣೋ ರಾಕ್ಷಸಂ ಸ್ಥಿತಮ್ ॥ ೪೦

ವಿದ್ಯುಜ್ಜಿಹ್ವಂ ಮಹಾಜಿಹ್ವಂ ಸಮೀಪಪರಿವರ್ತಿನಮ್ ।
ಅಗ್ರತಃ ಕುರು ಸೀತಾಯಾಃ ಶೀಘ್ರಂ ದಾಶರಥೇಃ ಶಿರಃ ॥ ೪೧

---

ದವು! ಸಮುದ್ರತೀರದಲ್ಲಿ ಮಾತ್ರವಲ್ಲದೆ ಶೈಲಾರಣ್ಯಗಳಿಗೂ ನುಗ್ಗಿ ನಮ್ಮ ರಾಕ್ಷಸರು ಬಹುಮಂದಿ ವಾನರರನ್ನು ಕೊಂದುಹಾಕಿದ್ದಾರೆ. ಸೀತೆ, ಈ ರೀತಿಯಲ್ಲಿ ನನ್ನ ಸೇನೆಯಿಂದ ನಿನ್ನ ಗಂಡನು ಸೇನಾಸಮೇತನಾಗಿ ನಿರ್ನಾಮವಾದನು (೩೫–೩೬). ನೆತ್ತರಲ್ಲಿ ನೆನೆದು ಧೂಳಿಯಿಂದ ಧೂಸರಿತವಾದ ರಾಮನ ತಲೆಯನ್ನು ನಮ್ಮವರು ತಂದಿದ್ದಾರೆ'' ಎಂದು ಹೇಳಿ ಉದ್ದಂಡನಾದ ರಾವಣನು ರಾಕ್ಷಸಿಯೋರ್ವಳನ್ನು ಕರೆದು ಸೀತೆಗೆ ಕೇಳಿಸುವಂತೆ ''ಎಲೌ ರಾಕ್ಷಸಿ, ಕ್ರೂರಕಾರ್ಯವನ್ನೆಸಗಿರುವ ಆ ವಿದ್ಯುಜ್ಜಿಹ್ವನನ್ನು ಇಲ್ಲಿಗೆ ಕರೆ (೩೭–೩೮). ರಣಭೂಮಿಯಿಂದ ರಾಮನ ಶಿರಸ್ಸನ್ನು ಅವನೇ ತಂದಿದ್ದಾನೆ!'' ಎಂದನು. ಅನಂತರ ವಿದ್ಯುಜ್ಜಿಹ್ವನು ಮಾಯಾಮಯವಾದ ಶಿರಸ್ಸನ್ನೂ ಧನುರ್ಬಾಣಗಳನ್ನೂ ತೆಗೆದುಕೊಂಡು ಬಂದನು. ರಾವಣನಿಗೆ ತಲೆಬಾಗಿ ವಂದಿಸಿ ಎದುರಿಗೆ ನಿಂತನು. ಆಗ ರಾಕ್ಷಸರಾಜನು ಉದ್ದವಾಗಿ ನಾಲಗೆಯನ್ನು ಸುಗಿದು ನಿಂತಿದ್ದ ವಿದ್ಯುಜ್ಜಿಹ್ವನನ್ನು ನೋಡಿ ''ವಿದ್ಯುಜ್ಜಿಹ್ವ, ರಾಮನ ಶಿರಸ್ಸನ್ನು ಸೀತೆಯ ಮುಂದಿಡು (೩೯–೪೧).

ಅವಸ್ಥಾಂ ಪಶ್ಚಿಮಾಂ ಭರ್ತುಃ ಕೃಪಣಾ ಸಾಧು ಪಶ್ಯತು ।
ಏವಮುಕ್ತ್ವಾ ತು ತದ್ರಕ್ಷಃ ಶಿರಸ್ತತ್ಪ್ರಿಯದರ್ಶನಮ್ ॥ ೪೨

ಉಪನಿಕ್ಷಿಪ್ಯ ಸೀತಾಯಾಃ ಕ್ಷಿಪ್ರಮಂತರಧೀಯತ ।
ರಾವಣಶ್ಚಾಪಿ ಚಿಕ್ಷೇಪ ಭಾಸ್ವರಂ ಕಾರ್ಮುಕಂ ಮಹತ್ ॥ ೪೩

ತ್ರಿಷು ಲೋಕೇಷು ವಿಖ್ಯಾತಂ ಸೀತಾಮಿದಮುವಾಚ ಚ ।
ಇದಂ ತತ್ತವ ರಾಮಸ್ಯ ಕಾರ್ಮುಕಂ ಜ್ಯಾಸಮಾಯುತಮ್ ॥ ೪೪

ಇಹ ಪ್ರಹಸ್ತೇನಾನೀತಂ ಹತ್ವಾ ತಂ ನಿಶಿ ಮಾನುಷಮ್ ॥

ಸ ವಿದ್ಯುಜ್ಜಿಹ್ವೇನ ಸಹೈವ ತಚ್ಛಿರೋ
ಧನುಶ್ಚ ಭೂಮೌ ವಿನಿಕೀರ್ಯ ರಾವಣಃ ।
ವಿದೇಹರಾಜಸ್ಯ ಸುತಾಂ ಯಶಸ್ವಿನೀಂ
ತತೋಽಬ್ರವೀತ್ತಾಂ ಭವ ಮೇ ವಶಾನುಗಾ ॥ ೪೫

ಇತಿ ಶ್ರೀ ಮದ್ರಾಮಾಯಣ ಯುದ್ಧಕಾಂಡೇ ಏಕತ್ರಿಂಶಃ ಸರ್ಗಃ

---

ಈ ಬಡಹೆಂಗಸು ತನ್ನ ಗಂಡನಿಗಾದ ಚರಮಾವಸ್ಥೆಯನ್ನು ಚೆನ್ನಾಗಿ ನೋಡಲಿ!'' ಎಂದು ಹೇಳಿದನು. ಆ ರಾಕ್ಷಸನು ಸುಂದರಾಕೃತಿಯ ಮಾಯಾಶಿರಸ್ಸನ್ನು ಜಾನಕಿಯ ಮುಂದಿಟ್ಟು ಕೂಡಲೆ ಕಣ್ಮರೆಯಾದನು! ರಾವಣನೂ ಸಹ ರಾರಾಜಿಸುತ್ತಿದ್ದ ಮಾಯಿಕವಾದ ಮಹಾಧನುಸ್ಸೊಂದನ್ನು ಸೀತಾದೇವಿಯ ಮುಂದೆಸೆದು ''ಸೀತೆ, ನೀನು ಹೇಳುತ್ತಿದ್ದ ತ್ರಿಲೋಕವಿಖ್ಯಾತ ವಾದ ಧನಸ್ಸು ಇದೇ ! ಹೆದೆಯೇರಿಸಿದ ರಾಮನ ಧನುಸ್ಸನ್ನು ನೋಡು! ನಮ್ಮ ಪ್ರಹಸ್ತನು ಆ ಮನುಷ್ಯಮಾತ್ರನನ್ನು ಕತ್ತರಿಸಿ ಕೊಂದು ಇದನ್ನು ತಂದಿದ್ದಾನೆ!'' ಎಂದನು (೪೨–೪೪). ಹೀಗೆ ವಿದ್ಯುಜ್ಜಿಹ್ವನು ಮಾಯೆಯಿಂದ ನಿರ್ಮಿಸಿ ತಂದಿದ್ದ ಶಿರಸ್ಸನ್ನೂ ಧನುಸ್ಸನ್ನೂ ರಾವಣನು ನೆಲದಮೇಲಿಟ್ಟು ಪ್ರದರ್ಶಿಸಿ, ಕೀರ್ತಿಶಾಲಿನಿಯಾದ ವಿದೇಹಾರಾಜಸುತೆಯನ್ನು ನೋಡಿ ''ಸೀತೆ, ಈಗಲಾದರೂ ನನ್ನ ವಶಳಾಗು'' ಎಂದು ನುಡಿದನು (೪೫).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಮೂವತ್ತೊಂದನೆಯ ಸರ್ಗ

---

## ದ್ವಾತ್ರಿಂಶಃ ಸರ್ಗಃ

ಸೀತಾವಿಲಾಪಃ

ಸಾ ಸೀತಾ ತಚ್ಛಿರೋ ದೃಷ್ಟ್ವಾ ತಚ್ಚ ಕಾರ್ಮುಕಮುತ್ತಮಮ್ ।
ಸುಗ್ರೀವಪ್ರತಿಸಂಸರ್ಗಮಾಖ್ಯಾತಂ ಚ ಹನೂಮತಾ ॥ ೧

ನಯನೇ ಮುಖವರ್ಣಂ ಚ ಭರ್ತುಸ್ತತ್ಸದೃಶಂ ಮುಖಮ್ ।
ಕೇಶಾನ್ ಕೇಶಾಂತದೇಶಂ ಚ ತಂ ಚ ಚೂಡಾಮಣಿಂ ಶುಭಮ್॥ ೨

ಏತೈಃ ಸರ್ವೈರಭಿಜ್ಞಾನೈರಭಿಜ್ಞಾಯ ಸುದುಃಖಿತಾ ।
ವಿಜಗರ್ಹೇಽತ್ರ ಕೈಕೇಯೀಂ ಕ್ರೋಶಂತೀಂ ಕುರರೀ ಯಥಾ ॥ ೩

ಸಕಾಮಾ ಭವ ಕೈಕೇಯಿ ಹತೋಽಯಂ ಕುಲನಂದನಃ ।
ಕುಲಮುತ್ಸಾದಿತಂ ಸರ್ವಂ ತ್ವಯಾ ಕಲಹಶೀಲಯಾ ॥ ೪

## ಸರ್ಗ ೩೨

ಮಾಯಿಕಶಿರಸ್ಸನ್ನು ಕಂಡು ಸೀತಾದೇವಿಯ ವಿಲಾಪ

ಆಗ ಜಾನಕಿಯು ತನ್ನ ಮುಂದಿದ್ದ ಕೃತ್ರಿಮವಾದ ರಾಮಶಿರಸ್ಸನ್ನೂ ಉತ್ತಮವಾದ ಮಾಯಿಕಧನುಸ್ಸನ್ನೂ ಕಂಡಳು. ಶ್ರೀ ರಾಮನಿಗೆ ಸುಗ್ರೀವನ ಸ್ನೇಹಸಂಬಂಧವಾದುದನ್ನು ಹನುಮಂತನಿಂದ ಕೇಳಿದ್ದಳು. ಎಲ್ಲ ಬಗೆಯಿಂದಲೂ ತನ್ನ ಪತಿಯ ಮುಖವನ್ನು ಆ ಶಿರಸ್ಸು ಹೋಲುತ್ತಿತ್ತು. ಕಣ್ಣುಗಳೂ ಮುಖದ ಬಣ್ಣವೂ ಹಾಗೆಯೇ ಇದ್ದವು. ತಲೆಕೂದಲೂ ಹಣೆಯೂ ಅದೇ ರೀತಿಯಲ್ಲಿದ್ದವು. ಅಲ್ಲದೆ ಹನುಮಂತನೊಡನೆ ತಾನು ಕಳಿಸಿಕೊಟ್ಟಿದ್ದ ಚೂಡಾಮಣಿಯೂ ಅಲ್ಲಿತ್ತು! (೧–೨). ಇವೆಲ್ಲ ಗುರುತುಗಳನ್ನೂ ಕಂಡು ಆ ಶಿರಸ್ಸು ರಾಮನದೇ ಎಂದು ಭ್ರಮಿಸಿ ಸೀತೆಯು ದುಃಖಾರ್ತಳಾದಳು. ಕುರರಪಕ್ಷಿಯಂತೆ ಗೋಳಿಡುತ್ತ ಸಂಕಟವನ್ನು ತಡೆಯಲಾರದೆ ‘‘ಓ ಕೈಕೇಯಿ, ನಿನ್ನ ಇಷ್ಟವು ನೆರವೇರಿತೆ? ಈ ರಘುಕುಲನಂದನನು ಹತನಾದನು. ಜಗಳಗಂಟಿಯಾದ ನೀನು ನಿಮ್ಮ ಕುಲವನ್ನೇ ನಿರ್ನಾಮ ಮಾಡಿದೆಯಲ್ಲ! (೩–೪).

ಆರ್ಯೇಣ ಕಿಂ ತೇ ಕೈಕೇಯಿ ಕೃತಂ ರಾಮೇಣ ವಿಪ್ರಿಯಮ್ ।
ಯದ್ಗೃಹಾಚ್ಚೀರವಸನಂ ದತ್ತ್ವಾ ಪ್ರವ್ರಾಜಿತೋ ವನಮ್ ॥ ೫

ಏವಮುಕ್ತ್ವಾ ತು ವೈದೇಹೀ ವೇಪಮಾನಾ ತಪಸ್ವಿನೀ ।
ಜಗಾಮ ಜಗತೀಂ ಬಾಲಾ ಛಿನ್ನಾ ತು ಕದಲೀ ಯಥಾ ॥ ೬

ಸಾ ಮುಹೂರ್ತಾತ್ಸಮಾಶ್ವಸ್ಯ ಪ್ರತಿಲಭ್ಯ ಚ ಚೇತನಾಮ್ ।
ತಚ್ಛಿರಃ ಸಮುಪಾಘ್ರಾಯ ವಿಲಲಾಪಾಯತೇಕ್ಷಣಾ ॥ ೭

ಹಾ ಹತಾಸ್ಮಿ ಮಹಾಬಾಹೋ ವೀರವ್ರತಮನುವ್ರತ ।
ಇಮಾಂ ತೇ ಪಶ್ಚಿಮಾವಸ್ಥಾಂ ಗತಾಸ್ಮಿ ವಿಧವಾ ಕೃತಾ ॥ ೮

ಪ್ರಥಮಂ ಮರಣಂ ನಾರ್ಯಾ ಭರ್ತುರ್ವೈಗುಣ್ಯಮುಚ್ಯತೇ ।
ಸುವೃತ್ತ ಸಾಧುವೃತ್ತಾಯಾಃ ಸಂವೃತ್ತಸ್ತ್ವಂ ಮಮಾಗ್ರತಃ ॥ ೯

ದುಃಖಾದ್ದುಃಖಂ ಪ್ರಪನ್ನಾಯಾ ಮಗ್ನಾಯಾಃ ಶೋಕಸಾಗರೇ ।
ಯೋ ಹಿ ಮಾಮುದ್ಯತಸ್ತ್ರಾತುಂ ಸೋಽಪಿ ತ್ವಂ ವಿನಿಪಾತಿತಃ ॥ ೧೦

---

ಆರ್ಯಪುತ್ರನಾದ ನನ್ನ ಶ್ರೀರಾಮನು ನಿನಗೆ ಯಾವ ಕೆಡಕನ್ನು ಮಾಡಿದ್ದನು? ಕೈ ಕೇಯಿ, ಇವನಿಗೆ ನಾರು ಬಟ್ಟೆಯನ್ನು ಕೊಟ್ಟು ಮನೆಯಿಂದ ಹೊರಡಿಸಿ ಕಾಡಿಗೆ ಕಳಿಸಿಬಿಟ್ಟೆಯಲ್ಲ? ಎಂದು ಕೈಕೇಯಿಯನ್ನು ನಿಂದಿಸಿದಳು (೫). ದೀನಳಾದ ಆ ಬಾಲೆಯು ತರತರನೆ ನಡುಗುತ್ತ, ಬುಡಕಡಿದ ಬಾಳೆಯ ಗಿಡದಂತೆ ನೆಲದ ಮೇಲುರುಳಿದಳು. ಸ್ವಲ್ಪ ಹೊತ್ತಿನ ಮೇಲೆ ವೈದೇಹಿಗೆ ಪ್ರಜ್ಞೆ ಬಂದಿತು. ಆ ವಿಶಾಲಾಕ್ಷಿಯು ಮಾಯಿಕವಾದ ರಾಮಶಿರಸ್ಸನ್ನು ಕಣ್ಣರಳಿಸಿ ನೋಡಿ ಆಘ್ರಾಣಿಸುತ್ತ ಗೋಳಾಡತೊಡಗಿದಳು (೬–೭): "ಅಯ್ಯೋ ನಾನು ನಾನು ಕೆಟ್ಟೆನು! ಓ ಮಹಾಬಾಹು, ವೀರವ್ರತವನ್ನು ಹಿಡಿದ ಧೀರನೆ, ನಿನ್ನ ಮರಣದಿಂದ ನನಗೆ ಹೀನಾವಸ್ಥೆಯೊದಗಿತು; ವಿಧವೆಯಾದೆನು. ಪತಿಗೆ ಮೊದಲು ಮರಣವಾಗುವುದೆಂದರೆ, ಪತ್ನಿಗೆ ಅದೊಂದು ಕಳಂಕವೇ ಸರಿ. ಸಾಧ್ವಿಯಾಗಿ ನಡೆದುಕೊಂಡ ನನ್ನೆದುರಿಗೆ ಸಚ್ಚಾರಿತ್ರನಾದ ನೀನು ಹೀಗೆ ಮೃತನಾದೆಯಲ್ಲ! (ಅಥವಾ ನನ್ನ ಯಾವುದೊ ದೋಷವೇ ಇದಕ್ಕೆ ಕಾರಣ ವಾಗಿರಬೇಕು) (೮–೯). ಓ ನನ್ನ ಕಾಂತ, ಕಷ್ಟದಿಂದ ಕಷ್ಟಕ್ಕೆ ನಾನು ಜಾರುತ್ತ ಶೋಕಸಮುದ್ರದಲ್ಲಿ ಬಿದ್ದು ಮುಳುಗಿಹೋದೆನು. ನನ್ನನ್ನು

**ಸಾ ಶ್ವಶ್ರೂರ್ಮಮ ಕೌಸಲ್ಯಾ ತ್ವಯಾ ಪುತ್ರೇಣ ರಾಘವ ।**
**ವತ್ಸೇನೇವ ಯಥಾ ಧೇನುರ್ವಿವತ್ಸಾ ವತ್ಸಲಾ ಕೃತಾ ॥** ೧೧

**ಆದಿಷ್ಟಂ ದೀರ್ಘಮಾಯುಸ್ತೇ ದೈವಜ್ಞೈರಪಿ ರಾಘವ ।**
**ಅನೃತಂ ವಚನಂ ತೇಷಾಮಲ್ಪಾಯುರಸಿ ರಾಘವ ॥** ೧೨

**ಅಥವಾ ನಶ್ಯತಿ ಪ್ರಜ್ಞಾ ಪ್ರಾಜ್ಞಸ್ಯಾಪಿ ಸತಸ್ತವ ।**
**ಪಚತ್ಯೇನಂ ತಥಾ ಕಾಲೋ ಭೂತಾನಾಂ ಪ್ರಭವೋ ಹ್ಯಯಮ್ ॥**

**ಅದೃಷ್ಟಂ ಮೃತ್ಯುಮಾಪನ್ನಃ ಕಸ್ಮಾತ್ತ್ವಂ ನಯಶಾಸ್ತ್ರವಿತ್ ।**
**ವ್ಯಸನಾನಾಮುಪಾಯಜ್ಞಃ ಕುಶಲೋ ಹ್ಯಸಿ ವರ್ಜನೇ ॥** ೧೪

**ತಥಾ ತ್ವಂ ಸಂಪರಿಷ್ವಜ್ಯ ರೌದ್ರಯಾತಿನೃಶಂಸಯಾ ।**
**ಕಾಲರಾತ್ರ್ಯಾ ಮಯಾಚ್ಛಿದ್ಯ ಹೃತಃ ಕಮಲಲೋಚನ ॥** ೧೫

---

ಕೈ ಹಿಡಿದು ಮೇಲೆತ್ತಲು ಬಂದು, ನೀನೂ ಹತನಾಗಿಹೋದೆಯಾ? ರಾಘವ, ನನ್ನ ಅತ್ತೆಯಾದ ಕೌಸಲ್ಯಾದೇವಿಯು ಮುದ್ದುಮಗನನ್ನು ಕಳೆದುಕೊಂಡಳು. ಕರುವಿಲ್ಲದ ಹಸುವಿನಂತಾದಳು. ಪ್ರೇಮಮಯಿಯಾದ ಆ ತಾಯಿ ಇನ್ನೆಷ್ಟು ಶೋಕಿಸುವಳೋ (೧೦–೧೧). ನೀನು ದೀರ್ಘಾಯುವಾಗಿ ಬಾಳುವೆಯೆಂದು ಜ್ಯೌತಿಷ್ಕರು ಹೇಳಿದ್ದರು. ಶ್ರೀರಾಮ, ಅವರ ಮಾತು ಸುಳ್ಳಾಯಿತು. ನೀನು ಅಲ್ಪಾಯುವಾದೆ. **ಮಹಾಪ್ರಾಜ್ಞನಾದ ನಿನ್ನ ಮೇಧಾಶಕ್ತಿಗೂ ಹ್ರಾಸವುಂಟಾಯಿತೆ?*** ಸಕಲಭೂತಗಳ ಆಗುಹೋಗುಗಳಿಗೂ ನಿಮಿತ್ತವಾದ ಕಾಲವೆಂಬುದು ಅಂತಹ ಸ್ಥಿತಿಯನ್ನು ತಂದೊಡ್ಡಿತು (೧೨–೧೩). ಇಲ್ಲದಿದ್ದರೆ ಊಹಾತೀತವಾದ ಈ ಮೃತ್ಯುವಿನ ದವಡೆಗೆ ನೀನು ಸಿಕ್ಕುತ್ತಿದ್ದೆ? ನೀತಿಶಾಸ್ತ್ರಪಾರಂಗತನಾದ ನೀನು ಸಕಲೋಪಾಯಗಳನ್ನೂ ಬಲ್ಲವನು. ಪ್ರಮಾದಗಳಾಗದಂತೆ ಎಚ್ಚರಿಕೆಯಿಂದ ಕಾರ್ಯವನ್ನು ನಡೆಸುವುದರಲ್ಲಿ ನಿಪುಣನಾದವನು. (ನಿದ್ರಿಸುತ್ತ ಶತ್ರುವಶನಾಗುವಂತಹ ಪ್ರಮಾದವು ಹೇಗೆ ಸಂಭವಿಸಿತು ?) (೧೪). ಹಾ ಕಮಲಲೋಚನ, ನೀನು ಸಮುದ್ರತೀರ

---

* 'ಅಥವಾ ನಶ್ಯತಿ ಪ್ರಜ್ಞಾ ಪ್ರಾಜ್ಞಸ್ಯಾಪಿ ಸತಸ್ತವ' ಎಂದು ಮೂಲವಿದೆ. ತವ–ತ್ವಯಿ= ನಿನ್ನ ವಿಷಯದಲ್ಲಿ ಭವಿಷ್ಯ ಹೇಳುವಾಗ ಪ್ರಾಜ್ಞನಾದ ಜ್ಯೌತಿಷ್ಕನ ಬುದ್ಧಿಶಕ್ತಿಯೂ ಕುಂಠಿತವಾಗಿರಬೇಕು ಎಂಬ ತಾತ್ಪರ್ಯವನ್ನೂ ಹೇಳಬಹುದು.

ಉಪಶೇಷೇ ಮಹಾಬಾಹೋ ಮಾಂ ವಿಹಾಯ ತಪಸ್ವಿನೀಮ್ ।
ಪ್ರಿಯಾಮಿವ ಸಮಾಶ್ಲಿಷ್ಯ ಪೃಥಿವೀಂ ಪುರುಷರ್ಷಭ ॥ ೧೬

ಅರ್ಚಿತಂ ಸತತಂ ಯತ್ತದ್ಗಂಧಮಾಲ್ಯೈರ್ಮಯಾ ತವ ।
ಇದಂ ತೇ ಮತ್ಪ್ರಿಯಂ ವೀರ ಧನುಃ ಕಾಂಚನಭೂಷಣಮ್ ॥ ೧೭

ಪಿತ್ರಾ ದಶರಥೇನ ತ್ವಂ ಶ್ವಶುರೇಣ ಮಮಾನಘ ।
ಸರ್ವೈಶ್ಚ ಪಿತೃಭಿಃ ಸಾರ್ಧಂ ನೂನಂ ಸ್ವರ್ಗೇ ಸಮಾಗತಃ ॥ ೧೮

ದಿವಿ ನಕ್ಷತ್ರಭೂತಸ್ತ್ವಂ ಮಹತ್ಕರ್ಮಕೃತಾಂ ಪ್ರಿಯಮ್ ।
ಪುಣ್ಯಂ ರಾಜರ್ಷಿವಂಶಂ ತ್ವಮಾತ್ಮನಃ ಸಮುಪೇಕ್ಷಸೇ ॥ ೧೯

ಕಿಂ ಮಾಂ ನ ಪ್ರೇಕ್ಷಸೇ ರಾಜನ್ ಕಿಂ ಮಾಂ ನ ಪ್ರತಿಭಾಷಸೇ ।
ಬಾಲಾಂ ಬಾಲ್ಯೇನ ಸಂಪ್ರಾಪ್ತಾಂ ಭಾರ್ಯಾಂ ಮಾಂ ಸಹಚಾರಿಣೀಮ್

---

ದಲ್ಲಿದ್ದಾಗ, ಅಲ್ಲಿಗೆ ಬಂದ ಕಾಳರಾತ್ರಿಯು ಎಷ್ಟು ಘೋರಳು! ಎಷ್ಟು ಕ್ರೂರಳು! ನಿನ್ನನ್ನು ನನ್ನಿಂದ ಅಗಲಿಸಿ ಆಲಿಂಗಿಸಿಕೊಂಡು ಕರೆದೊಯ್ದಳು! ಓ ಮಹಾಬಾಹು – ಪುರುಷೋತ್ತಮ, ದಿಕ್ಕಿಲ್ಲದ ನನ್ನನ್ನು ಕೈಬಿಟ್ಟು ಪೃಥಿವಿಯನ್ನಾಲಿಂಗಿಸಿ ಮಲಗಿದೆಯಾ? ಇವಳು ನನಗಿಂತ ಪ್ರಿಯತಮಳಾದಳೆ? (೧೫–೧೬). ವೀರಾಗ್ರಣಿ, ಸತತವೂ ಗಂಧಮಾಲ್ಯಗಳಿಂದ ನಾನು ಅರ್ಚಿಸುತ್ತಿದ್ದ ನಿನ್ನ ಕೋದಂಡವೇ ಇದು. ನನಗೆ ಬಹಳ ಪ್ರಿಯವಾದುದು. ಸುವರ್ಣ ಭೂಷಿತವಾದ ನಿನ್ನ ಧನುಸ್ಸು ಹೀಗಾಯಿತೆ? ಓ ರಾಘವ, ತಂದೆಯಾದ ದಶರಥಮಹಾರಾಜನ ಬಳಿಗೆ ಹೋದೆಯಾ? ನನ್ನ ಮಾವನೊಡನೆ ಸೇರಿಕೊಂಡೆಯಾ? ಸ್ವರ್ಗದಲ್ಲಿರುವ ಪಿತೃಗಳೆಲ್ಲರೊಡನೆ ಕೂಡಿಹೋದೆಯಾ? (೧೭–೧೮). ಅಂತರಿಕ್ಷದಲ್ಲಿ ನಕ್ಷತ್ರವಾಗಿ ನಿಂತುಬಿಟ್ಟೆಯಲ್ಲ, ಪಾವನವಾದ ನಿನ್ನ ರಾಜರ್ಷಿವಂಶವನ್ನು ಉಪೇಕ್ಷಿಸಿ ಬಿಟ್ಟು ಹೋಗಬಹುದೆ? ಮಹತ್ತರವಾದ ಪುಣ್ಯಕರ್ಮಗಳನ್ನು ಆಚರಿಸುವವರ ವಂಶವಲ್ಲವೆ ನಿನ್ನದು? ನಿನ್ನ ವಂಶವು ನಿನಗೆ ಪ್ರಿಯವಾದುದಲ್ಲವೆ? (೧೯). ರಾಜಕುಮಾರ, ನನ್ನನ್ನೇಕೆ ಕಣ್ಣೆತ್ತಿ ನೋಡುವುದಿಲ್ಲ? ನನ್ನೊಡನೇಕೆ ಮಾತನಾಡುವುದಿಲ್ಲ? ಬಾಲ್ಯದಲ್ಲಿಯೇ ನಿನ್ನ ಕೈ ಹಿಡಿದುಬಂದ ಬಾಲೆಯಲ್ಲವೆ ನಾನು? ಸಹಧರ್ಮಚಾರಿಣಿಯಾದ ಪತ್ನಿಯಲ್ಲವೆ? (೨೦).

ಸಂಶ್ರುತಂ ಗೃಹ್ಣತಾ ಪಾಣಿಂ ಚರಿಷ್ಯಾಮೀತಿ ಯತ್ತ್ವಯಾ ।
ಸ್ಮರ ತನ್ಮಮ ಕಾಕುತ್ಸ್ಥ ನಯ ಮಾಮಪಿ ದುಃಖಿತಾಮ್ ॥ ೨೧

ಕಸ್ಮಾನ್ಮಾಮಪಹಾಯ ತ್ವಂ ಗತೋ ಗತಿಮತಾಂ ವರ ।
ಅಸ್ಮಾಲ್ಲೋಕಾದಮುಂ ಲೋಕಂ ತ್ಯಕ್ತ್ವಾ ಮಾಮಪಿ ದುಃಖಿತಾಮ್

ಕಲ್ಯಾಣೈರುಚಿತಂ ಯತ್ತತ್ಪರಿಷ್ವಕ್ತಂ ಮಯೈವ ತು ।
ಕ್ರವ್ಯಾದೈಸ್ತಚ್ಛರೀರಂ ತೇ ನೂನಂ ವಿಪರಿಕೃಷ್ಯತೇ ॥ ೨೩

ಅಗ್ನಿಷ್ಟೋಮಾದಿಭಿರ್ಯಜ್ಞೈರಿಷ್ಟವಾನಾಪ್ತದಕ್ಷಿಣೈಃ ।
ಅಗ್ನಿಹೋತ್ರೇಣ ಸಂಸ್ಕಾರಂ ಕೇನ ತ್ವಂ ತು ನ ಲಪ್ಸ್ಯಸೇ ॥ ೨೪

ಪ್ರವ್ರಜ್ಯಾಮುಪಪನ್ನಾನಾಂ ತ್ರಯಾಣಾಮೇಕಮಾಗತಮ್ ।
ಪರಿಪ್ರಕ್ಷ್ಯತಿ ಕೌಸಲ್ಯಾ ಲಕ್ಷ್ಮಣಂ ಶೋಕಲಾಲಸಾ ॥ ೨೫

ಸ ತಸ್ಯಾಃ ಪರಿಪೃಚ್ಛಂತ್ಯಾ ವಧಂ ಮಿತ್ರಬಲಸ್ಯ ತೇ ।
ತವ ಚಾಖ್ಯಾಸ್ಯತೇ ನೂನಂ ನಿಶಾಯಾಂ ರಾಕ್ಷಸೈರ್ವಧಮ್ ॥ ೨೬

---

ನನ್ನ ಕೈಹಿಡಿಯುವಾಗ 'ನಿನ್ನನ್ನು ಬಿಟ್ಟು ಯಾವುದನ್ನೂ ಆಚರಿಸುವುದಿಲ್ಲ' ಎಂದು ನೀನು ಹೇಳಿದ್ದನ್ನು ನೆನಪಿಗೆ ತಂದುಕೊ. ಕಾಕುತ್ಸ್ಥ ದುಃಖಿತಳಾದ ನನ್ನನ್ನು ನಿನ್ನ ಜೊತೆಗೆ ಕರೆದುಕೊಂಡುಹೋಗು (೨೧). ಅನಾಥರೆಲ್ಲರಿಗೂ ಗತಿಯಾಗಿರುವ ನೀನು ನನ್ನನ್ನು ಪರಿತ್ಯಜಿಸಿಹೋಗಲು ಕಾರಣವೇನು? ದುಃಖಿತಳಾದ ನನ್ನನ್ನು ಬಿಟ್ಟು ಈ ಲೋಕದಿಂದ ಪರಲೋಕಕ್ಕೆ ಹೋಗಬಹುದೆ? (೨೨). ಸಕಲ ಮಂಗಳದ್ರವ್ಯಗಳಿಗೂ ಭಾಜನವಾದ ನಿನ್ನ ದೇಹವನ್ನು – ನನ್ನಿಂದಲೇ ಆಲಿಂಗಿಸಲ್ಪಡುತ್ತಿದ್ದ ದೇಹವನ್ನು–ಅಯ್ಯೊ, ಈಗ ಮಾಂಸಾಹಾರಿಗಳಾದ ಪ್ರಾಣಿಗಳು ಎಳದಾಡುತ್ತಿರಬಹುದು! (೨೩). ಮುಂದೆ ಭೂರಿದಕ್ಷಿಣೆಗಳನ್ನಿತ್ತು ಅಗ್ನಿಷ್ಟೋಮಾದಿ ಯಾಗಗಳನ್ನು ನಡೆಸಿದಮೇಲೆ, ವೈತಾನಾಗ್ನಿಯಿಂದ ಸಂಸ್ಕಾರವನ್ನು ಪಡೆಯಬೇಕಾದ ನಿನಗೆ, ಅಂತಹ ಸಂಸ್ಕಾರವು ಏಕೆ ದೊರೆಯದೆ ಹೋಯಿತು? ಕಾಡಿಗೆ ನಾವು ಮೂವರು ಹೊರಟುಬಂದೆವು. ಈಗ ಲಕ್ಷ್ಮಣನೊಬ್ಬನೇ ಹಿಂದಿರುಗಿಬಂದುದನ್ನು ಕಂಡು ಕೌಸಲ್ಯೆಯು ಶೋಕಸಂತಪ್ತಳಾಗಿ, ನಮ್ಮಿಬ್ಬರ ಗತಿ ಏನಾಯಿತೆಂದು ಕೇಳುವಳು (೨೪–೨೫). ಆಗ ಲಕ್ಷ್ಮಣನು, ಶ್ರೀರಾಮ,

ಸಾ ತ್ವಾಂ ಸುಪ್ತಂ ಹತಂ ಶ್ರುತ್ವಾ ಮಾಂ ಚ ರಕ್ಷೋಗೃಹಂ ಗತಾಮ್
ಹೃದಯೇನಾವದೀರ್ಣೇನ ಭವಿಷ್ಯತಿ ಚ ರಾಘವ ॥ ೨೭

ಮಮ ಹೇತೋರನಾರ್ಯಾಯಾ ಅನಘಃ ಪಾರ್ಥಿವಾತ್ಮಜಃ ।
ರಾಮಃ ಸಾಗರಮುತ್ತೀರ್ಯ ಸತ್ತ್ವವಾನ್ ಗೋಷ್ಪದೇ ಹತಃ ॥ ೨೮

ಅಹಂ ದಾಶರಥೇನೋಢಾ ಮೋಹಾತ್ಸ್ವಕುಲಪಾಂಸನೀ ।
ಆರ್ಯಪುತ್ರಸ್ಯ ರಾಮಸ್ಯ ಭಾರ್ಯಾ ಮೃತ್ಯುರಜಾಯತ ॥ ೨೯

ನೂನಮನ್ಯಾಂ ಮಯಾ ಜಾತಿಂ ವಾರಿತಂ ದಾನಮುತ್ತಮಮ್ ।
ಯಾಹಮದ್ಯೇಹ ಶೋಚಾಮಿ ಭಾರ್ಯಾ ಸರ್ವಾತಿಥೇರಪಿ ॥ ೩೦

ಸಾಧು ಪಾತಯ ಮಾಂ ಕ್ಷಿಪ್ರಂ ರಾಮಸ್ಯೋಪರಿ ರಾವಣ ।
ಸಮಾನಯ ಪತಿಂ ಪತ್ನ್ಯಾ ಕುರು ಕಲ್ಯಾಣಮುತ್ತಮಮ್ ॥ ೩೧

---

ರಾತ್ರಿಯಲ್ಲಿ ರಾಕ್ಷಸರು ಬಂದು ನಿನ್ನನ್ನೂ ನಿನ್ನ ಮಿತ್ರಬಲವನ್ನೂ ಸಂಹರಿಸಿದ ರೆಂದು ಸಕಲವೃತ್ತಾಂತವನ್ನೂ ಹೇಳಲೇಬೇಕಾಗುವುದು. ನಿದ್ರಿಸುವಾಗ ನೀನು ಹತನಾದೆಯೆಂದೂ ರಾಕ್ಷಸಾವಾಸದಲ್ಲಿ ನಾನಿರುವೆನೆಂದೂ ಅತ್ತೆಯು ಕೇಳಿದರೆ, ರಾಘವ, ಎದೆಯೊಡೆದು ಅವಳು ಸತ್ತುಹೋಗುವಳು! (೨೬–೨೭). (ಅಯ್ಯೋ ಕಷ್ಟವೆ!) ದೋಷಲೇಶವೂ ಇಲ್ಲದ ಪುಣ್ಯಾತ್ಮನಾದ ಈ ರಾಜ ಕುಮಾರನು ನೀಚಳಾದ ನನಗೋಸ್ಕರ ಪ್ರಾಣವನ್ನು ತ್ಯಜಿಸಿದನು. ಮಹಾ ಸಾಗರವನ್ನು ದಾಟದ ಧೀರನು ಹಸುವಿನ ಹೆಜ್ಜೆಯಷ್ಟಿರುವ ಹಳ್ಳದಲ್ಲಿ ಹರಣ ವನ್ನೊಪ್ಪಿಸಿದಂತಾಯಿತು! (೨೮). ನಾನು ಕಲಘಾತಕಿಯೆಂಬುದು ಗೊತ್ತಿಲ್ಲದೆ ರಾಘವನು ನನ್ನನ್ನು ಮದುವೆಯಾದನು! ಆರ್ಯಪುತ್ರನಾದ ಶ್ರೀರಾಮನಿಗೆ ಅವನ ಮಡದಿಯೇ ಮೃತ್ಯುವಾದಳು! ಹಿಂದಿನ ಜನ್ಮದಲ್ಲಿ ನಾನು ಕನ್ಯಾದಾನವೇ ಮೊದಲಾದ ಯಾವುದೋ ಉತ್ತಮದಾನವನ್ನು ತಡೆದು ನಿಲ್ಲಿಸಿರಬೇಕು. ಆದ್ದರಿಂದಲೇ ಸಕಲರಿಗೂ ಅಭಯದಾನ ಮಾಡಬಲ್ಲ ಮಹಾಪುರುಷನ ಕೈಹಿಡಿದರೂ ನಾನು, ಹೀಗೆ ಶೋಕಕ್ಕೆ ಗುರಿಯಾಗಿದ್ದೇನೆ (೨೯–೩೦). ರಾವಣ, ಈಗಲಾದರೂ ನನ್ನನ್ನು ಕಡಿದು ಶ್ರೀರಾಮನ ದೇಹದ ಮೇಲೆ ಉರುಳಿಸಿಬಿಡು! ಪತಿಪತ್ನಿಯರನ್ನು ಒಟ್ಟುಗೂಡಿಸಿ

ಶಿರಸಾ ಮೇ ಶಿರಶ್ಚಾಸ್ಯ ಕಾಯಂ ಕಾಯೇನ ಯೋಜಯ ।
ರಾವಣಾನುಗಮಿಷ್ಯಾಮಿ ಗತಿಂ ಭರ್ತುರ್ಮಹಾತ್ಮನಃ ॥ ೩೨

ಇತಿ ಸಾ ದುಃಖಸಂತಪ್ತಾ ವಿಲಲಾಪಾಯತೇಕ್ಷಣಾ ।
ಭರ್ತುಃ ಶಿರೋ ಧನುಸ್ತತ್ರ ಸಮೀಕ್ಷ್ಯ ಚ ಪುನಃ ಪುನಃ ॥ ೩೩

ಏವಂ ಲಾಲಪ್ಯಮಾನಾಯಾಂ ಸೀತಾಯಾಂ ತತ್ರ ರಾಕ್ಷಸಃ ।
ಅಭಿಚಕ್ರಾಮ ಭರ್ತಾರಮನೀಕಸ್ಥಃ ಕೃತಾಂಜಲಿಃ ॥ ೩೪

ವಿಜಯಸ್ವಾರ್ಯಪುತ್ರೇತಿ ಸೋಽಭಿವಾದ್ಯ ಪ್ರಸಾದ್ಯ ಚ ।
ನ್ಯವೇದಯದನುಪ್ರಾಪ್ತಂ ಪ್ರಹಸ್ತಂ ವಾಹಿನೀಪತಿಮ್ ॥ ೩೫

ಅಮಾತ್ಯೈಃ ಸಹಿತೈಃ ಸರ್ವೈಃ ಪ್ರಹಸ್ತಃ ಸಮುಪಸ್ಥಿತಃ ।
ತೇನ ದರ್ಶನಕಾಮೇನ ವಯಂ ಪ್ರಸ್ಥಾಪಿತಾಃ ಪ್ರಭೋ ॥ ೩೬

ನೂನಮಸ್ತಿ ಮಹಾರಾಜ ರಾಜಭಾವಾತ್ಕ್ಷಮಾನ್ವಿತಮ್ ।
ಕಿಂಚಿದಾತ್ಯಯಿಕಂ ಕಾರ್ಯಂ ತೇಷಾಂ ತ್ವಂ ದರ್ಶನಂ ಕುರು ॥ ೩೭

---

ಒಂದು ಪುಣ್ಯಕಾರ್ಯವನ್ನು ಮಾಡು! ನನ್ನ ಶಿರಸ್ಸನ್ನು ಶ್ರೀರಾಮನ ಶಿರಸ್ಸಿನೊಡನೆಯೂ ದೇಹವನ್ನು ದೇಹದೊಡನೆಯೂ ಸೇರಿಸಿಬಿಡು! ರಾವಣ, ಮಹಾತ್ಮನಾದ ನನ್ನ ಪತಿಯನ್ನು ಹಿಂಬಾಲಿಸುವೆನು'' ಎಂಬುದಾಗಿ ದುಃಖಾತಿರೇಕದಿಂದ ಕಂಗೆಟ್ಟು ಸೀತೆಯು ಗೋಳಾಡಿದಳು. ಪತಿಯ ಶಿರಸ್ಸನ್ನೂ ಧನುಸ್ಸನ್ನೂ ಮತ್ತೆ ಮತ್ತೆ ನೋಡಿ ನೋಡಿ, ಹಲುಬಿದಳು (೩೧–೩೩). ಹೀಗೆ ಜಾನಕಿಯು ರೋದಿಸುತ್ತಿರುವಾಗ ರಕ್ಷಣಾಪಡೆಗೆ ಸೇರಿದ ಒಬ್ಬ ರಾಕ್ಷಸನು ತನ್ನ ಒಡೆಯನಾದ ರಾವಣನೆದುರಿಗೆ ಬಂದು ಕೈಮುಗಿದು ''ಮಹಾರಾಜ, ಜಯವಾಗಲಿ!'' ಎಂದು ಘೋಷಿಸಿದನು. ಅವನು ಮತ್ತೆ ರಾವಣನಿಗೆ ವಂದಿಸಿ ''ಮಹಾಪ್ರಭು, ಸೇನಾಪತಿಯಾದ ಪ್ರಹಸ್ತನು ಸಕಲ ಮಂತ್ರಿಗಳೊಡನೆ ಸೇರಿ ಕಾದಿರುವನು (೩೪–೩೫). ನಿನ್ನನ್ನು ನೋಡುವ ಉದ್ದೇಶದಿಂದ ಈ ವಿಷಯವನ್ನು ಅರಿಕೆಮಾಡುವುದಕ್ಕಾಗಿ ನನ್ನನ್ನು ಕಳಿಸಿದ್ದಾನೆ. ಮಹಾರಾಜ, ಯಾವುದೊ ಒಂದು ದೊಡ್ಡ ರಾಜಕಾರ್ಯವು ಉಪಸ್ಥಿತವಾಗಿರಬೇಕು. ನೀನು ಮಹಾಪ್ರಭುವಾದ್ದರಿಂದ ನಿನ್ನ ಆಜ್ಞೆಗಾಗಿ ಕಾದಿದ್ದಾನೆ. ಮೇಲ್ಮಟ್ಟದಲ್ಲಿ ನಿರ್ಣಯಿಸಬೇಕಾದ ಅತಿಮುಖ್ಯಕಾರ್ಯ

ಏತಚ್ಛ್ರುತ್ವಾ ದಶಗ್ರೀವೋ ರಾಕ್ಷಸಪ್ರತಿವೇದಿತಮ್ ।
ಅಶೋಕವನಿಕಾಂ ತ್ಯಕ್ತ್ವಾ ಮಂತ್ರಿಣಾಂ ದರ್ಶನಂ ಯಯೌ ॥ ೩೮

ಸ ತು ಸರ್ವಂ ಸಮರ್ಥ್ಯೈವ ಮಂತ್ರಿಭಿಃ ಕೃತ್ಯಮಾತ್ಮನಃ ।
ಸಭಾಂ ಪ್ರವಿಶ್ಯ ವಿದಧೇ ವಿದಿತ್ವಾ ರಾಮವಿಕ್ರಮಮ್ ॥ ೩೯

ಅಂತರ್ಧಾನಂ ತು ತಚ್ಛೀರ್ಷಂ ತಚ್ಚ ಕಾರ್ಮುಕಮುತ್ತಮಮ್ ।
ಜಗಾಮ ರಾವಣಸ್ಯೈವ ನಿರ್ಯಾಣಸಮನಂತರಮ್ ॥ ೪೦

ರಾಕ್ಷಸೇಂದ್ರಸ್ತು ತೈಃ ಸಾರ್ಧಂ ಮಂತ್ರಿಭಿರ್ಭೀಮವಿಕ್ರಮೈಃ ।
ಸಮರ್ಥಯಾಮಾಸ ತದಾ ರಾಮಕಾರ್ಯವಿನಿಶ್ಚಯಮ್ ॥ ೪೧

ಅವಿದೂರಸ್ಥಿತಾನ್ ಸರ್ವಾನ್ ಬಲಾಧ್ಯಕ್ಷಾನ್ ಹಿತೈಷಿಣಃ ।
ಅಬ್ರವೀತ್ಕಾಲಸದೃಶಂ ರಾವಣೋ ರಾಕ್ಷಸಾಧಿಪಃ ॥ ೪೨

ಶೀಘ್ರಂ ಭೇರೀನಿನಾದೇನ ಸ್ಫುಟಕೋಣಾಹತೇನ ಮೇ ।
ಸಮಾನಯಧ್ವಂ ಸೈನ್ಯಾನಿ ವಕ್ತವ್ಯಂ ಚ ನ ಕಾರಣಮ್ ॥ ೪೩

---

ವಾದ್ದರಿಂದ, ಕೂಡಲೇ ಅವರಿಗೆ ದರ್ಶನವನ್ನು ಕೊಡು'' ಎಂದು ನಿವೇದಿಸಿದನು (೩೬–೩೭). ಆ ರಾಕ್ಷಸನ ಮಾತನ್ನು ಕೇಳಿದೊಡನೆ ದಶಗ್ರೀವನು ಮಂತ್ರಿಗಳನ್ನು ಸಂದರ್ಶಿಸುವುದಕ್ಕಾಗಿ ಅಶೋಕವನದಿಂದ ಹೊರಟುಹೋದನು! ಶ್ರೀರಾಮನ ಆಕ್ರಮಣೋದ್ಯೋಗವನ್ನು ತಿಳಿದಿದ್ದ ರಾವಣನು ಮಂತ್ರಿಗಳಿಗೆ ಒದಗಿದ ಸಮಸ್ಯೆಯೆಲ್ಲವೂ ಯಾವುದೆಂದು ಮನಸ್ಸಿನಲ್ಲಿಯೇ ಗುಣಿಸುತ್ತ ರಾಜಸಭೆಗೆ ಹೋಗಿ, ಮುಂದಿನ ಯುದ್ಧವ್ಯವಸ್ಥೆಯನ್ನು ತೀರ್ಮಾನಿಸಿದನು (೩೮–೩೯). ರಾವಣನು ಅತ್ತ ಹೋದೊಡನೆಯೇ ಇತ್ತ ಮಾಯಿಕವಾದ ರಾಮಶಿರಸ್ಸೂ ಧನುಸ್ಸು ಮಾಯವಾದವು! ರಾಕ್ಷಸೇಂದ್ರನು ಬಲಾಢ್ಯರಾದ ಮಂತ್ರಿಗಳೊಡನೆ ಕಲೆತು ಸಮಾಲೋಚಿಸಿ, ಶ್ರೀರಾಮನ ವಿಷಯದಲ್ಲಿ ಮಾಡಬೇಕಾದ ಯುದ್ಧಸನ್ನಾಹಕಾರ್ಯವನ್ನು ನಿಶ್ಚಯಿಸಿದನು (೪೦–೪೧). ಅವನು ಸಮೀಪದಲ್ಲಿದ್ದ ತನ್ನ ಹಿತೈಷಿಗಳಾದ ಸೇನಾಧ್ಯಕ್ಷರನ್ನು ನೋಡಿ ಯಮರಾಜನಂತೆ ದರ್ಪದಿಂದ ''ಎಲೈ ಸೇನಾಧ್ಯಕ್ಷರೆ, ಕೋಲುಗಳಿಂದ ಬಡಿದು ಸ್ಪಷ್ಟವಾಗಿ ರಣದುಂದುಭಿಯನ್ನು ಮೊಳಗಿಸಿರಿ! ನನ್ನ ಸಕಲಸೈನ್ಯವೂ ಸಜ್ಜಾಗಿ ಬರುವಂತೆ ಕರೆಯನ್ನೀಯಿರಿ. ಇದಕ್ಕೆ ಪ್ರತಿಯಾಗಿ ಯಾರೂ

ತತಸ್ತಥೇತಿ ಪ್ರತಿಗೃಹ್ಯ ತದ್ವಚೋ
ಬಲಾಧಿಪಾಸ್ತೇ ಮಹದಾತ್ಮನೋ ಬಲಮ್ ।
ಸಮಾನಯಂಶ್ಚೈವ ಸಮಾಗಮಂ ಚ ತೇ
ನ್ಯವೇದಯನ್ ಭರ್ತರಿ ಯುದ್ಧಕಾಂಕ್ಷಿಣಿ ॥ ೪೪

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವಾತ್ರಿಂಶಃ ಸರ್ಗಃ

---

ಏನನ್ನೂ ಹೇಳತಕ್ಕದ್ದಲ್ಲ*!'' ಎಂದು ಆಜ್ಞಾಪಿಸಿದನು (೪೨–೪೩). ಆಗ ಸೇನಾಧ್ಯಕ್ಷರೆಲ್ಲರೂ ''ಮಹಾಪ್ರಭು, ಅಪ್ಪಣೆ!'' ಎಂದು ನಿವೇದಿಸಿ ರಾಜಾಜ್ಞೆಯಂತೆ ತಮ್ಮ ತಮ್ಮ ಸೇನೆಗಳನ್ನು ಕರೆಸಿದರು. ಆಮೇಲೆ, ತಮ್ಮ ಸೇನೆಗಳು ಸಜ್ಜಾಗಿ ಬಂದಿರುವುದನ್ನು ಸಮರೋತ್ಸಾಹಿಯಾದ ರಾವಣನಿಗೆ ಅರಿಕೆಮಾಡಿದರು (೪೪).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಮೂವತ್ತೆರಡನೆಯ ಸರ್ಗ

---

* 'ವಕ್ತವ್ಯಂ ಚ ನ ಕಾರಣಮ್' ಎಂದು ಮೂಲವಿದೆ. 'ಯುದ್ಧ ಕಾರಣವನ್ನು ಸೈನಿಕರಿಗೆ ಹೇಳಬಾರದು' ಎಂದು ವ್ಯಾಖ್ಯಾನಕಾರರು ಅರ್ಥಮಾಡುತ್ತಾರೆ. ಸೀತೆಗೆ ಹೇಳಿಬಂದ ರಾಮವೃತ್ತಾಂತವು ಸುಳ್ಳೆಂದು ಅವಳಿಗೆ ಗೊತ್ತಾಗಿಹೋದೀತು ಎಂಬುದು ರಾವಣನ ಆಶಯವೆನ್ನುತ್ತಾರೆ.

## ತ್ರಯಸ್ತ್ರಿಂಶಃ ಸರ್ಗಃ

ಸರಮಾಸಮಾಶ್ವಾಸನಮ್

**ಸೀತಾಂ ತು ಮೋಹಿತಾಂ ದೃಷ್ಟ್ವಾ ಸರಮಾ ನಾಮ ರಾಕ್ಷಸೀ ।**
**ಆಸಸಾದಾಥ ವೈದೇಹೀಂ ಪ್ರಿಯಾಂ ಪ್ರಣಯಿನೀಂ ಸಖೀಮ್ ॥** ೧

**ಮೋಹಿತಾಂ ರಾಕ್ಷಸೇಂದ್ರೇಣ ಸೀತಾಂ ಪರಮದುಃಖಿತಾಮ್ ।**
**ಆಶ್ವಾಸಯಾಮಾಸ ತದಾ ಸರಮಾ ಮೃದುಭಾಷಿಣೀ ॥** ೨

**ಸಾ ಹಿ ತತ್ರ ಕೃತಾ ಮಿತ್ರಂ ಸೀತಯಾ ರಕ್ಷ್ಯಮಾಣಯಾ ।**
**ರಕ್ಷಂತೀ ರಾವಣಾದಿಷ್ಟಾ ಸಾನುಕ್ರೋಶಾ ದೃಢವ್ರತಾ ॥** ೩

**ಸಾ ದದರ್ಶ ತತಃ ಸೀತಾಂ ಸರಮಾ ನಷ್ಟಚೇತನಾಮ್ ।**
**ಉಪಾವೃತ್ಯೋತ್ಥಿತಾಂ ಧ್ವಸ್ತಾಂ ವಡವಾಮಿವ ಪಾಂಸುಲಾಮ್ ॥** ೪

### ಸರ್ಗ ೩೩

ಸರಮೆಯು ಸೀತೆಯನ್ನು ಸಂತೈಸುವುದು.

ಹೀಗೆ ಮಾಯಿಕವಾದ ರಾಮಶಿರಸ್ಸನ್ನು ಕಂಡು ಭ್ರಾಂತಿಯಿಂದ ದುಃಖಿಸುತ್ತಿದ್ದ ವೈದೇಹಿಯ ಬಳಿಗೆ ಸರಮೆಯೆಂಬ* ರಾಕ್ಷಸಿಯೊಬ್ಬಳು ಬಂದಳು. ಅವಳಿಗೆ ವೈದೇಹಿಯು ಪ್ರೇಮಪಾತ್ರಳಾದ ಪ್ರಿಯಸಖಿಯಾಗಿದ್ದಳು (೧). ರಾವಣನ ಠಕ್ಕುತನದಿಂದ ಮೋಸಹೋಗಿ ಸೀತೆಯು ಪರಮದುಃಖಿತಳಾಗಿರುವುದನ್ನು ಕಂಡು, ಸರಮೆಯು ಮೃದುವಚನಗಳಿಂದ ಅವಳನ್ನು ಸಂತೈಸಿದಳು. ರಾವಣಾಜ್ಞೆಯಂತೆ ಸರಮೆಯು ಸೀತೆಗೆ ಕಾವಲಾಗಿದ್ದರೂ, ಅವಳು ದಯಾಶೀಲೆಯೂ ಸ್ಥಿರಬುದ್ಧಿಯವಳೂ ಆಗಿದ್ದಳು. ಆದ್ದರಿಂದ ರಕ್ಷಣೆಗೊಳಗಾದ ಸೀತೆಯು ಸರಮೆಯನ್ನು ಗೆಳತಿಯೆಂದು ತಿಳಿದಿದ್ದಳು (೨-೩). ಸೀತೆಯು ಶೋಕಾರ್ತಳಾಗಿ ಎಚ್ಚರದಪ್ಪಿ, ಹೆಣ್ಣುಕುದುರೆಯಂತೆ ಧೂಳಿಯಲ್ಲಿ ಹೊರಳಾಡಿ

---

* ಇವಳು ವಿಭೀಷಣನ ಹೆಂಡತಿ. ಸೀತೆಯು ದುಃಖದಿಂದ ಪ್ರಾಣತ್ಯಾಗ ಮಾಡಿಕೊಳ್ಳದಂತೆ ನೋಡಿಕೊಂಡು ಅವಳನ್ನು ಸಂತೈಸುತ್ತಿರಬೇಕೆಂದು, ಮೇಲ್ವಿಚಾರಣೆಗಾಗಿ ರಾವಣನು ಸರಮೆಯನ್ನು ನೇಮಿಸಿದ್ದನು. ರಾವಣ ವಿಭೀಷಣರಿಗೆ ವಿರೋಧವುಂಟಾದ ಮೇಲೆ, ಸರಮೆಯು ರಾವಣನಿಗೆ ಅಂಜುತ್ತಲೇ ತನ್ನ ಕೆಲಸವನ್ನು ನಿರ್ವಹಿಸುತ್ತಿದ್ದಳು.

ತಾಂ ಸಮಾಶ್ವಾಸಯಾಮಾಸ ಸಖೀ ಸ್ನೇಹೇನ ಸುವ್ರತಾ ।
ಸಮಾಶ್ವಸಿಹಿ ವೈದೇಹಿ ಮಾ ಭೂತ್ತೇ ಮನಸೋ ವ್ಯಥಾ ॥ ೫

ಉಕ್ತಾ ಯದ್ರಾವಣೇನ ತ್ವಂ ಪ್ರತ್ಯುಕ್ತಂ ಚ ಸ್ವಯಂ ತ್ವಯಾ ।
ಸಖೀಸ್ನೇಹೇನ ತದ್ಭೀರು ಮಯಾ ಸರ್ವಂ ಪ್ರತಿಶ್ರುತಮ್ ॥ ೬

ಲೀನಯಾ ಗಹನೇ ಶೂನ್ಯೇ ಭಯಮುತ್ಸೃಜ್ಯ ರಾವಣಾತ್ ।
ತವ ಹೇತೋರ್ವಿಶಾಲಾಕ್ಷಿ ನ ಹಿ ಮೇ ಜೀವಿತಂ ಪ್ರಿಯಮ್ ॥ ೭

ಸ ಸಂಭ್ರಾಂತಶ್ಚ ನಿಷ್ಕ್ರಾಂತೋ ಯತ್ಕೃತೇ ರಾಕ್ಷಸಾಧಿಪಃ ।
ತಚ್ಚ ಮೇ ವಿದಿತಂ ಸರ್ವಮಭಿನಿಷ್ಕ್ರಮ್ಯ ಮೈಥಿಲಿ ॥ ೮

ನ ಶಕ್ಯಂ ಸೌಪ್ತಿಕಂ ಕರ್ತುಂ ರಾಮಸ್ಯ ವಿದಿತಾತ್ಮನಃ ।
ವಧಶ್ಚ ಪುರುಷವ್ಯಾಘ್ರೇ ತಸ್ಮಿನ್ನೈವೋಪಪದ್ಯತೇ ॥ ೯

ನ ತ್ವೇವ ವಾನರಾ ಹಂತುಂ ಶಕ್ಯಾಃ ಪಾದಪಯೋಧಿನಃ ।
ಸುರಾ ದೇವರ್ಷಭೇಣೇವ ರಾಮೇಣ ಹಿ ಸುರಕ್ಷಿತಾಃ ॥ ೧೦

---

ಧೂಸರಿತಳಾಗಿ ರೋದಿಸುವುದನ್ನು ಸರಮೆಯು ನೋಡಿದಳು. ಆ ಸಾಧ್ವಿಯು ಸಖೀಸ್ನೇಹದಿಂದ ಹತ್ತಿರಬಂದು ಸೀತೆಯನ್ನು ಸಂತೈಸತೊಡಗಿದಳು: ''ವೈದೇಹಿ, ಅಳಬೇಡ, ಹೆದರಬೇಡ (೪–೫). ಈಗ ರಾವಣನು ನಿನಗೆ ಹೇಳಿದುದನ್ನೂ ನೀನು ಪ್ರತಿಯಾಗಿ ಅವನಿಗೆ ಹೇಳಿದುದನ್ನೂ ನಾನು ಕೇಳಿಸಿ ಕೊಂಡಿದ್ದೇನೆ! ನೀನು ಬಹಳ ಅಂಜುಬುರುಕಿ! ನಿನ್ನ ಮೇಲಣ ಸ್ನೇಹ ದಿಂದಲೇ ಎಲ್ಲವನ್ನೂ ನಾನು ಕೇಳಿದೆ! (೬). ಈ ಅಶೋಕವನದಲ್ಲಿಯೇ ಗುಪ್ತವಾಗಿ ನಾನು ಅಡಗಿಕೊಂಡಿದ್ದೆ. ರಾವಣನಿಗೂ ಅಂಜದೇ ಅವನಾಡಿದು ದನ್ನು ಕೇಳಿದೆನು. ವಿಶಾಲಾಕ್ಷಿ – ಸೀತೆ, ನಿನಗೋಸ್ಕರವೇ ಈ ಸಹಾಯವನ್ನು ಮಾಡಿದೆನು. ನಿನಗೋಸ್ಕರ ನನ್ನ ಪ್ರಾಣದಲ್ಲಿಯೂ ಆಸೆಯನ್ನಿಡುವವಳಲ್ಲ ನಾನು (೭). ರಾಕ್ಷಸರಾಜನು ಥಕ್ಕನೆ ಇಲ್ಲಿಂದ ಹೊರಟುಹೋದನಲ್ಲವೆ? ಅವನು ಏಕೆ ಹೋದನೆಂಬುದು ನನಗೆ ಗೊತ್ತಿದೆ! ನಾನು ಹೋಗಿ ಅದನ್ನೂ ತಿಳಿದುಕೊಂಡು ಬಂದಿದ್ದೇನೆ! ಮೈಥಿಲಿ, ಮಹಾ ಪ್ರಾಜ್ಞನಾದ ಶ್ರೀರಾಮನನ್ನು ಮಲಗಿದಾಗ ಕೊಲ್ಲುವುದೆಂದರೆ ಸಾಧ್ಯವಾದುದೇ ಅಲ್ಲ. ಆ ಪುರುಷಸಿಂಹನನ್ನು ಸಂಹರಿಸುವುದು ಆಗದ ಮಾತು (೮–೯). ಮರಗಳನ್ನೇ ಮುರಿದು ಹೋರಾಡುವ

**ದೀರ್ಘವೃತ್ತಭುಜಃ ಶ್ರೀಮಾನ್ ಮಹೋರಸ್ಕಃ ಪ್ರತಾಪವಾನ್ ।**
**ಧನ್ವೀ ಸಂಹನನೋಪೇತೋ ಧರ್ಮಾತ್ಮಾಭುವಿ ವಿಶ್ರುತಃ ॥ ೧೧**

**ವಿಕ್ರಾಂತೋ ರಕ್ಷಿತಾ ನಿತ್ಯಮಾತ್ಮನಶ್ಚ ಪರಸ್ಯ ಚ ।**
**ಲಕ್ಷ್ಮಣೇನ ಸಹ ಭ್ರಾತ್ರಾ ಕುಶಲೀ ನಯಶಾಸ್ತ್ರವಿತ್ ॥ ೧೨**

**ಹಂತಾ ಪರಬಲೌಘಾನಾಮಚಿಂತ್ಯಬಲಪೌರುಷಃ ।**
**ನ ಹತೋ ರಾಘವಃ ಶ್ರೀಮಾನ್ ಸೀತೇ ಶತ್ರುನಿಬರ್ಹಣಃ ॥ ೧೩**

**ಅಯುಕ್ತಬುದ್ಧಿ ಕೃತ್ಯೇನ ಸರ್ವಭೂತವಿರೋಧಿನಾ ।**
**ಇಯಂ ಪ್ರಯುಕ್ತಾ ರೌದ್ರೇಣ ಮಾಯಾ ಮಾಯಾವಿದಾ ತ್ವಯಿ ॥**

---

ವಾನರಭಟರನ್ನು ಕೊಲ್ಲುವುದೂ ಶಕ್ಯವಲ್ಲ. ದೇವೇಂದ್ರನು ದೇವತೆಗಳನ್ನು ರಕ್ಷಿಸಿಕೊಳ್ಳುವಂತೆ, ಶ್ರೀರಾಮನೇ ಅವರಿಗೆ ರಕ್ಷಕನಾಗಿ ನಿಂತಿದ್ದಾನೆ. ಸೀತೆ, (ಶ್ರೀರಾಮನು ಸರ್ವಥಾ ಹತನಾಗಿಲ್ಲವೆಂದು ಚೆನ್ನಾಗಿ ಮನದಟ್ಟುಮಾಡಿಕೊ) (೧೦). ಆ ಪ್ರತಾಪಶಾಲಿಯು ಆಜಾನುಲಂಬಿಯಾದ ಸಂಪುಷ್ಟಭುಜಗಳುಳ್ಳವನು; ವಿಶಾಲವಕ್ಷ; ಕೋದಂಡಧಾರಿ; ದೃಢವಾದ ಮೈಕಟ್ಟುಳ್ಳವನು. ಧರ್ಮಾತ್ಮನೆಂದು ಲೋಕವಿಖ್ಯಾತನಾದವನು. ಆ ವಿಕ್ರಮಶಾಲಿಯು ತನ್ನನ್ನು ಮಾತ್ರವಲ್ಲ, ಪರರನ್ನೂ ರಕ್ಷಿಸಿಕೊಳ್ಳಬಲ್ಲ ಮಹಾಶೂರ ರಾಜನೀತಿವಿಶಾರದ. ತಮ್ಮನಾದ ಲಕ್ಷ್ಮಣನೊಡನೆ ಶ್ರೀರಾಮನು ಕುಶಲದಲ್ಲಿದ್ದಾನೆಂದು ತಿಳಿ (೧೧-೧೨). ಅವನ ಬಲಪೌರುಷಗಳು ಊಹಾತೀತವಾದವುಗಳಲ್ಲವೆ? ಪರಬಲವು ಅಲೆಯಲೆಯಾಗಿ ಬಂದರೂ ಅದನ್ನು ಕೊಂದು ಮುಕ್ಕುವ ರಾಘವನು, ಸೀತೆ, ಎಂದಿಗಾದರೂ ಹತನಾಗುವನೆ? ಅವನೇ ಈ ಶತ್ರುಗಳನ್ನು ಕೊಂದುಹಾಕುವನು. ಶ್ರೀರಾಮನು ಕ್ಷೇಮವಾಗಿದ್ದಾನೆ; ಮೃತನಾಗಿಲ್ಲ (೧೩). ನೀನು ನೋಡಿದುದೆಲ್ಲವೂ ಮಾಯೆ. ಈ ರಾವಣನು ನಿಷ್ಠುರ ಹೃದಯನಾದ ಮಾಯಾವಿ. ಇವನ ಬುದ್ಧಿ, ಇವನ ವರ್ತನೆ – ಎಲ್ಲವೂ ತುಚ್ಛವಾದದ್ದು. ಸಕ್ಕಲ ಪ್ರಾಣಿಗಳಿಗೂ ಇವನು ದ್ರೋಹವನ್ನೇ ಬಗೆಯುತ್ತಾನೆ. ರಾಮನ ಶಿರಸ್ಸು, ಧನಸ್ಸು–ಎಲ್ಲವೂ ಈತನು ಪ್ರಯೋಗಿಸಿದ ಮಾಯೆ (೧೪).

ಶೋಕಸ್ತೇ ವಿಗತಃ ಸರ್ವಃ ಕಲ್ಯಾಣಂ ತ್ವಾಮುಪಸ್ಥಿತಮ್ ।
ಧ್ರುವಂ ತ್ವಾಂ ಭಜತೇ ಲಕ್ಷ್ಮೀಃ ಪ್ರಿಯಂ ಪ್ರೀತಿಕರಂ ಶೃಣು ॥ ೧೫

ಉತ್ತೀರ್ಯ ಸಾಗರಂ ರಾಮಃ ಸಹ ವಾನರಸೇನಯಾ ।
ಸಂನಿವಿಷ್ಟಃ ಸಮುದ್ರಸ್ಯ ತೀರಮಾಸಾದ್ಯ ದಕ್ಷಿಣಮ್ ॥ ೧೬

ದೃಷ್ಟೋ ಮೇ ಪರಿಪೂರ್ಣಾರ್ಥಃ ಕಾಕುತ್ಸ್ಥಃ ಸಹಲಕ್ಷ್ಮಣಃ ।
ಸ ಹಿ ತೈಃ ಸಾಗರಾಂತಸ್ಥೈರ್ಬಲೈಸ್ತಿಷ್ಠತಿ ರಕ್ಷಿತಃ ॥ ೧೭

ಅನೇನ ಪ್ರೇಷಿತಾ ಯೇ ಚ ರಾಕ್ಷಸಾ ಲಘುವಿಕ್ರಮಾಃ ।
ರಾಘವಸ್ತೀರ್ಣ ಇತ್ಯೇವ ಪ್ರವೃತ್ತಿಸ್ತೈರಿಹಾಹೃತಾ ॥ ೧೮

ಸತಾಂ ಶ್ರುತ್ವಾ ವಿಶಾಲಾಕ್ಷಿ ಪ್ರವೃತ್ತಿಂ ರಾಕ್ಷಸಾಧಿಪಃ ।
ಏಷ ಮಂತ್ರಯತೇ ಸರ್ವೈಃ ಸಚಿವೈಃ ಸಹ ರಾವಣಃ ॥ ೧೯

ಇತಿ ಬ್ರುವಾಣಾ ಸರಮಾ ರಾಕ್ಷಸೀ ಸೀತಯಾ ಸಹ ।
ಸರ್ವೋದ್ಯೋಗೇನ ಸೈನ್ಯಾನಾಂ ಶಬ್ದಂ ಶುಶ್ರಾವ ಭೈರವಮ್ ॥ ೨೦

---

ವೈದೇಹಿ, ನಿನ್ನ ಕಷ್ಟವೆಲ್ಲವೂ ಕಳೆಯುತ್ತ ಬಂದಿತು. ಶುಭಕಾಲವು ಸಮೀಪಿಸಿದೆ. ನಿಶ್ಚಯವಾಗಿಯೂ ಸರ್ವಮಂಗಳೆಯಾದ ಲಕ್ಷ್ಮಿಯು ನಿನಗೆ ಒಲಿದಿದ್ದಾಳೆ. ಸೀತೆ, ಪ್ರಿಯವಾದ ಒಂದು ಸುದ್ದಿಯನ್ನು ಕೇಳು! (೧೫). ಶ್ರೀರಾಮನು ವಾನರಸೇನೆಯೊಡನೆ ಸಮುದ್ರವನ್ನು ದಾಟಿಬಂದಿದ್ದಾನೆ! ಸಮುದ್ರದ ದಕ್ಷಿಣತೀರಕ್ಕೆ ಬಂದು ತಂಗಿದ್ದಾನೆ! ತನ್ನ ಉದ್ದೇಶವನ್ನು ಸಾಧಿಸಿ ಕೃತಕೃತ್ಯನಾದ ಶ್ರೀರಾಮನು ಲಕ್ಷ್ಮಣನೊಡನೆ ಇರುವುದನ್ನು ನಾನೇ ನೋಡಿ ಬಂದಿದ್ದೇನೆ! ಸಾಗರತೀರದಲ್ಲಿ ನೆರೆದಿರುವ ವಾನರವೀರರೊಡನೆ ರಾಘವನು ಸುರಕ್ಷಿತನಾಗಿದ್ದಾನೆ (೧೬-೧೭). ಈ ರಾವಣನು ಶ್ರೀ ರಾಮನ ವೃತ್ತಾಂತ ವನ್ನರಿಯುವುದಕ್ಕಾಗಿ ವೇಗಶಾಲಿಗಳಾದ ಕೆಲವು ಮಂದಿ ರಾಕ್ಷಸರನ್ನು ಕಳಿಸಿ ದ್ದನು. ಆ ರಾಕ್ಷಸರು ಹೋಗಿ ಶ್ರೀರಾಮನು ಸಮುದ್ರವನ್ನು ದಾಟಿದನೆಂಬ ಸುದ್ದಿಯನ್ನು ಇಲ್ಲಿಗೆ ತಂದರು ವಿಶಾಲಾಕ್ಷಿ-ಸೀತೆ, ಆ ಸುದ್ದಿಯನ್ನು ಕೇಳಿ ರಾಕ್ಷಸರಾಜನು ಸಕಲಮಂತ್ರಿಗಳನ್ನೂ ಕರೆಸಿ ಮುಂದೇನು ಮಾಡಬೇಕೆಂದು ಆಲೋಚಿಸುತ್ತಿದ್ದಾನೆ'' ಎಂದು ಹೇಳಿದಳು (೧೮-೧೯). ಸರಮೆಯು ಸೀತೆಯೊಡನೆ ಹೀಗೆ ಹೇಳುತ್ತಿರುವಾಗ, ಅತ್ತ ರಾಕ್ಷಸಯೋಧರು ಸರ್ವ

ದಂಡನಿರ್ಘಾತವಾದಿನ್ಯಾಃ ಶ್ರುತ್ವಾ ಭೇರ್ಯಾ ಮಹಾಸ್ವನಮ್ ।
ಉವಾಚ ಸರಮಾ ಸೀತಾಮಿದಂ ಮಧುರಭಾಷಿಣೀ ॥ ೨೧

ಸಂನಾಹಜನನೀ ಹ್ಯೇಷಾ ಭೈರವಾ ಭೀರು ಭೇರಿಕಾ ।
ಭೇರೀನಾದಂ ಚ ಗಂಭೀರಂ ಶೃಣು ತೋಯದನಿಃಸ್ವನಮ್ ॥ ೨೨

ಕಲ್ಪ್ಯಂತೇ ಮತ್ತಮಾತಂಗಾ ಯುಜ್ಯಂತೇ ರಥವಾಜಿನಃ ।
ಹೃಷ್ಯಂತೇ ತುರಗಾರೂಢಾಃ ಪ್ರಾಸಹಸ್ತಾಃ ಸಹಸ್ರಶಃ ॥ ೨೩

ತತ್ರ ತತ್ರ ಚ ಸಂನದ್ಧಾಃ ಸಂಪತಂತಿ ಪದಾತಯಃ ।
ಆಪೂರ್ಯಂತೇ ರಾಜಮಾರ್ಗಾಃ ಸೈನ್ಯೈರದ್ಭುತದರ್ಶನೈಃ ॥ ೨೪

ವೇಗವದ್ಭಿರ್ನದದ್ಭಿಶ್ಚ ತೋಯೌಘೈರಿವ ಸಾಗರಃ ।
ಶಸ್ತ್ರಾಣಾಂ ಚ ಪ್ರಸನ್ನಾನಾಂ ಚರ್ಮಣಾಂ ವರ್ಮಣಾಂ ತಥಾ ॥ ೨೫

ರಥವಾಜಿಗಜಾನಾಂ ಚ ಭೂಷಿತಾನಾಂ ಚ ರಕ್ಷಸಾಮ್ ।
ಸಂಭ್ರಮೋ ರಕ್ಷಸಾಮೇಷ ಹೃಷಿತಾನಾಂ ತರಸ್ವಿನಾಮ್ ॥ ೨೬

---

ಸನ್ನಾಹದಿಂದ ಮಾಡುತ್ತಿದ್ದ ಭೀಕರವಾದ ಗದ್ದಲವು ಕೇಳಿಸಿತು. ಕೋಲುಗಳ ಬಡಿತದಿಂದ ಮೊಳಗುತ್ತಿದ್ದ ರಣಭೇರಿಯ ತುಮುಲಧ್ವನಿಯನ್ನು ಕೇಳಿ, ಸರಮೆಯು ಸೀತೆಗೆ ಹೀಗೆಂದಳು (೨೦–೨೧): “ಅಂಜುಬುರುಕಿ! ಅಲ್ಲಿ ಕೇಳು! ಯುದ್ಧಸನ್ನಾಹವನ್ನು ಸೂಚಿಸುವ ಭೀಕರಭೇರಿಯು ಮೊಳಗುತ್ತಿದೆ; ಮೋಡದಂತೆ ಗುಡುಗುತ್ತಿದೆ. ಮತ್ತಮಾತಂಗಗಳನ್ನು ಯೋಧರು ಸಜ್ಜು ಮಾಡುತ್ತಿದ್ದಾರೆ. ಅಶ್ವಗಳನ್ನು ರಥಗಳಿಗೆ ಹೂಡುತ್ತಿದ್ದಾರೆ. ಸಾವಿರಾರು ರಾವುತರು ಕುದುರೆಗಳನ್ನೇರಿ ಪ್ರಾಸಾಯುಧಗಳನ್ನು ಹಿಡಿದು ಸಮರೋತ್ಸಾಹ ದಿಂದ ಸಂಚರಿಸುತ್ತಿದ್ದಾರೆ (೨೨–೨೩). ಕಾಲಾಳುಗಳು ಕವಚಗಳನ್ನು ತೊಟ್ಟು ಬಂದು ಕವಿಯುತ್ತಿದ್ದಾರೆ. ಸಮುದ್ರದಲ್ಲಿ ಗರ್ಜಿಸುತ್ತ ನುಗ್ಗುವ ಅಲೆಗಳಂತೆ, ಅದ್ಭುತವೇಷವನ್ನು ಧರಿಸಿದ ಸೈನಿಕರು ಜಯಘೋಷಗಳನ್ನು ಮೊಳಗಿಸುತ್ತ ಬಂದು ರಾಜಬೀದಿಗಳಲ್ಲಿ ಕಿಕ್ಕಿರಿದು ತುಂಬುತ್ತಿದ್ದಾರೆ. ಥಳಥಳಿ ಸುವ ಶಸ್ತ್ರಗಳ, ಗುರಾಣಿಗಳ, ಕವಚಗಳ, ರಥಾವಾಜಿಗಳ, ಸಮರೋತ್ಸಾಹ ದಿಂದ ನುಗ್ಗುವ ಭೂಷಿತರಾಕ್ಷಸರ ಸಂಭ್ರಮವಿದು! (೨೪–೨೬).

ಪ್ರಭಾಂ ವಿಸೃಜತಾಂ ಪಶ್ಯ ನಾನಾವರ್ಣಾಂ ಸಮುತ್ಥಿತಾಮ್ ।
ವನಂ ನಿರ್ದಹತೋ ಘರ್ಮೇ ಯಥಾ ರೂಪಂ ವಿಭಾವಸೋಃ ॥ ೨೭

ಘಂಟಾನಾಂ ಶೃಣು ನಿರ್ಘೋಷಂ ರಥಾನಾಂ ಶೃಣು ನಿಃಸ್ವನಮ್ ।
ಹಯಾನಾಂ ಹೇಷಮಾಣಾನಾಂ ಶೃಣು ತೂರ್ಯಧ್ವನಿಂ ಯಥಾ ॥

ಉದ್ಯತಾಯುಧಹಸ್ತಾನಾಂ ರಾಕ್ಷಸೇಂದ್ರಾನುಯಾಯಿನಾಮ್ ।
ಸಂಭ್ರಮೋ ರಕ್ಷಸಾಮೇಷ ತುಮುಲೋ ರೋಮಹರ್ಷಣಃ ॥ ೨೯

ಶ್ರೀಸ್ತ್ವಾಂ ಭಜತಿ ಶೋಕಘ್ನೀ ರಕ್ಷಸಾಂ ಭಯಮಾಗತಮ್ ।
ರಾಮಃ ಕಮಲಪತ್ರಾಕ್ಷೋ ದೈತ್ಯಾನಾಮಿವ ವಾಸವಃ ॥ ೩೦

ವಿನಿರ್ಜಿತ್ಯ ಜಿತಕ್ರೋಧಸ್ತ್ವಾಮಚಿಂತ್ಯಪರಾಕ್ರಮಃ ।
ರಾವಣಂ ಸಮರೇ ಹತ್ವಾ ಭರ್ತಾ ತ್ವಾಧಿಗಮಿಷ್ಯತಿ ॥ ೩೧

ವಿಕ್ರಮಿಷ್ಯತಿ ರಕ್ಷಃಸು ಭರ್ತಾ ತೇ ಸಹಲಕ್ಷ್ಮಣಃ ।
ಯಥಾ ಶತ್ರುಷು ಶತ್ರುಘ್ನೋ ವಿಷ್ಣುನಾ ಸಹ ವಾಸವಃ ॥ ೩೨

---

ಸೀತೆ, ಅಲ್ಲಿ ನೋಡು! ಕಾಡನ್ನು ಸುಡುತ್ತಿರುವ ಕಾಳ್ಗಿಚ್ಚಿನಂತೆ, ಶಸ್ತ್ರಾದಿಗಳ ವಿವಿಧ ವರ್ಣದ ಕಾಂತಿಯು ಆಕಾಶದಲ್ಲಿ ಹರಡಿರುವುದನ್ನು ನೋಡು! ಆನೆಗಳ ಘಂಟೆಯ ಶಬ್ದವನ್ನು ಕೇಳು. ರಥಗಳ ಚೀತ್ಕಾರವನ್ನು ಕೇಳು. ಕುದುರೆಗಳು ಕೆನೆಯುವುದನ್ನೂ ವಾದ್ಯ ಘೋಷವನ್ನೂ ಕೇಳು! (೨೭–೨೮). ಮೈನವಿರೇಳಿಸುವ ಈ ಘೋಷಣೆಯು ಆಯುಧಗಳನ್ನೆತ್ತಿ ಹಿಡಿದು ಹೊರಟಿರುವ ರಾವಣಭಟರಾದ ರಾಕ್ಷಸರದು. ಸೀತೆ, ನಿನ್ನ ಕಷ್ಟವು ನೀಗಿತು. ವಿಜಯಲಕ್ಷ್ಮಿಯು ನಿನಗೊಲಿಯುವಳು. ರಾಕ್ಷಸರಿಗೆ ಮಹಾಭಯವು ಬಂದಿತು. ರಾಜೀವಾಕ್ಷನಾದ ರಾಘವನು ದೇವೇಂದ್ರನಂತೆ ದೈತ್ಯರನ್ನು ದಂಡಿಸುವನು (೨೯–೩೦). ಇದುವರಗೆ ರೋಷವನ್ನು ತಡೆದುಕೊಂಡಿದ್ದ ಅಚಿಂತ್ಯಪರಾಕ್ರಮಿಯಾದ ನಿನ್ನ ಗಂಡನು, ರಣದಲ್ಲಿ ರಾವಣನನ್ನು ವಧಿಸಿ ನಿನ್ನನ್ನು ಪಡೆಯುವನು. ಶತ್ರುಧ್ವಂಸಿಯಾದ ಶಕ್ರನು ವಿಷ್ಣುವಿನ ನೆರವಿನಿಂದ ಶತ್ರುಗಳಲ್ಲಿ ವಿಕ್ರಮವನ್ನು ಮೆರೆಸಿದಂತೆ, ಜಾನಕಿ, ನಿನ್ನ ಪತಿಯು ಲಕ್ಷ್ಮಣ ಸಹಿತನಾಗಿ ರಾಕ್ಷಸರಲ್ಲಿ ತನ್ನ ಪರಾಕ್ರಮವನ್ನು ಪ್ರದರ್ಶಿಸುವನು (೩೧–೩೨).

ಆಗತಸ್ಯ ಹಿ ರಾಮಸ್ಯ ಕ್ಷಿಪ್ರಮಂಕಗತಾಂ ಸತೀಮ್ ।
ಅಹಂ ದ್ರಕ್ಷ್ಯಾಮಿ ಸಿದ್ಧಾರ್ಥಾಂ ತ್ವಾಂ ಶತ್ರೌ ವಿನಿಪಾತಿತೇ ॥ ೩೩

ಅಶ್ರೂಣ್ಯಾನಂದಜಾನಿ ತ್ವಂ ವರ್ತಯಿಷ್ಯಸಿ ಶೋಭನೇ ।
ಸಮಾಗಮ್ಯ ಪರಿಷ್ವಜ್ಯ ತಸ್ಯೋರಸಿ ಮಹೋರಸಃ ॥ ೩೪

ಅಚಿರಾನ್ಮೋಕ್ಷ್ಯತೇ ಸೀತೇ ದೇವಿ ತೇ ಜಘನಂ ಗತಾಮ್ ।
ಧೃತಾಮೇತಾಂ ಬಹೂನ್ ಮಾಸಾನ್ ವೇಣೀಂ ರಾಮೋ ಮಹಾಬಲಃ

ತಸ್ಯ ದೃಷ್ಟ್ವಾ ಮುಖಂ ದೇವಿ ಪೂರ್ಣಚಂದ್ರಮಿವೋದಿತಮ್ ।
ಮೋಕ್ಷ್ಯಸೇ ಶೋಕಜಂ ವಾರಿ ನಿರ್ಮೋಕಮಿವ ಪನ್ನಗೀ ॥ ೩೬

ರಾವಣಂ ಸಮರೇ ಹತ್ವಾ ನಚಿರಾದೇವ ಮೈಥಿಲಿ ।
ತ್ವಯಾ ಸಮಗ್ರಃ ಪ್ರಿಯಯಾ ಸುಖಾರ್ಹೋ ಲಪ್ಸ್ಯತೇ ಸುಖಮ್ ॥

ಸಮಾಗತಾ ತ್ವಂ ವೀರೇಣ ಮೋದಿಷ್ಯಸಿ ಮಹಾತ್ಮನಾ ।
ಸುವರ್ಷೇಣ ಸಮಾಯುಕ್ತಾ ಯಥಾ ಸಸ್ಯೇನ ಮೇದಿನೀ ॥ ೩೮

---

ಓ ನನ್ನ ಗೆಳತಿ, ಶೀಘ್ರದಲ್ಲಿ ಶ್ರೀರಾಮನು ನಿನ್ನ ಬಳಿಗೆ ಬರುವನು. ರಾವಣನು ಹತನಾಗಿ ಒರಗಿದಮೇಲೆ, ಕೃತಕೃತ್ಯಳಾದ ನೀನು ಶ್ರೀರಾಮನ ತೊಡೆಯಮೇಲೆ ಕುಳಿತಿರುವುದನ್ನು ನಾನು ನೋಡುವೆನು! (೩೩). ಮಂಗಳಾಂಗಿ, ವಿಶಾಲವಕ್ಷನಾದ ನಿನ್ನ ಕಾಂತನನ್ನು ಅಪ್ಪಿಕೊಂಡು ಶೀಘ್ರದಲ್ಲಿಯೇ ನೀನು ಆನಂದಬಾಷ್ಪಗಳನ್ನು ಸುರಿಸುವೆ! ಅನೇಕಮಾಸಗಳಿಂದ ಸಂಸ್ಕಾರವಿಲ್ಲದೆ, ಜಘನದವರೆಗೆ ತೂಗಾಡುವ ಜಡೆಗಟ್ಟಿದ ನಿನ್ನ ವೇಣಿಯನ್ನು, ದೇವಿ, ಬಲಾಢ್ಯನಾದ ಶ್ರೀರಾಮನು ಬೇಗನೆ ಬಂದು ಬಿಡಿಸಿ ಭೂಷಿಸುವನು! (೩೪–೩೫). ಉದಯವಾಗುವ ಪೂರ್ಣಚಂದ್ರನಂತಿರುವ ಆತನ ಮುಖವನ್ನು ನೋಡಿ, ದೇವಿ, ನೀನು ದುಃಖದ ಕಣ್ಣೀರನ್ನು ತೊರೆಯುವೆ. ಸರ್ಪಿಣಿಯು ಪರೆಯನ್ನು ಬಿಸುಡುವಂತೆ ಬಿಸುಡುವೆ. ಮೈಥಿಲಿ, ರಾವಣನನ್ನು ರಾಘವನು ಸ್ವಲ್ಪಕಾಲದಲ್ಲಿಯೇ ಸಮರದಲ್ಲಿ ಸಂಹರಿಸುವನು. ಸುಖಾರ್ಹನಾದ ಶ್ರೀರಾಮನು ಪ್ರಿಯಳಾದ ನಿನ್ನನ್ನು ಪಡೆದು ಸುಖಿಸುವನು (೩೬–೩೭). ಆ ಮಹಾತ್ಮನು ಮಹಾಶೌರ್ಯವನ್ನು ಮೆರೆಸಿ ನಿನ್ನ ಬಳಿಗೆ ಬಂದಾಗ, ಮಳೆಯಿಂದ ಮೊಳೆತ ಮೇದಿನಿಯಂತೆ ಮೋದಿಸುವೆ! (೩೮).

ಗಿರಿವರಮಭಿತೋಽನುವರ್ತಮಾನೋ
ಹಯ ಇವ ಮಂಡಲಮಾಶು ಯಃ ಕರೋತಿ ।
ತಮಿಹ ಶರಣಮಭ್ಯುಪೇಹಿ ದೇವಂ
ದಿವಸಕರಂ ಪ್ರಭವೋ ಹ್ಯಯಂ ಪ್ರಜಾನಾಮ್ ॥ ೩೯

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರಯಸ್ತ್ರಿಂಶಃ ಸರ್ಗಃ

---

ಸೀತೆ, ನಿನ್ನ ಇಷ್ಟಸಿದ್ಧಿಯಾಗಲೆಂದು (ನಿನ್ನ ಕುಲದೇವತೆಯಾದ) ಸೂರ್ಯದೇವನನ್ನು ಮರೆಹೊಕ್ಕು ಪ್ರಾರ್ಥಿಸು. ಯಾವ ದೇವನು ಮಹಾ ಮೇರುವನ್ನು, ಅಶ್ವವು ಮಂಡಲಗತಿಯಿಂದ ಸುತ್ತುವಂತೆ ಪ್ರದಕ್ಷಿಣೆಯಾಗಿಸುತ್ತಿ ಬಹುಬೇಗನೆ ಬರುವನೋ ಆ ದಿನಕರನನ್ನು ಭಜಿಸು. ಆತನೇ ಸಮಸ್ತಪ್ರಜೆಗಳ ಸುಖದುಃಖಗಳಿಗೆ ಕಾರಣನಾಗಿದ್ದಾನೆ'' ಎಂದು ಹೇಳಿದಳು (೩೯).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಮೂವತ್ತುಮೂರನೆಯ ಸರ್ಗ

---

## ಚತುಸ್ತ್ರಿಂಶಃ ಸರ್ಗಃ

### ರಾವಣನಿಶ್ಚಯಕಥನಮ್

ಅಥ ತಾಂ ಜಾತಸಂತಾಪಾಂ ತೇನ ವಾಕ್ಯೇನ ಮೋಹಿತಾಮ್ ।
ಸರಮಾ ಹ್ಲಾದಯಾಮಾಸ ಪೃಥಿವೀಂ ದ್ಯೌರಿವಾಂಭಸಾ ॥ ೧

ತತಸ್ತಸ್ಯಾ ಹಿತಂ ಸಖ್ಯಾಶ್ಚಿಕೀರ್ಷಂತೀ ಸಖೀ ವಚಃ ।
ಉವಾಚ ಕಾಲೇ ಕಾಲಜ್ಞಾ ಸ್ಮಿತಪೂರ್ವಾಭಿಭಾಷಿಣೀ ॥ ೨

ಉತ್ಸಹೇಯಮಹಂ ಗತ್ವಾ ತ್ವದ್ವಾಕ್ಯಮಸಿತೇಕ್ಷಣೇ ।
ನಿವೇದ್ಯ ಕುಶಲಂ ರಾಮೇ ಪ್ರತಿಚ್ಛನ್ನಾ ನಿವರ್ತಿತುಮ್ ॥ ೩

ನ ಹಿ ಮೇ ಕ್ರಮಮಾಣಾಯಾ ನಿರಾಲಂಬೇ ವಿಹಾಯಸಿ ।
ಸಮರ್ಥೋ ಗತಿಮನ್ವೇತುಂ ಪವನೋ ಗರುಡೋಽಪಿ ವಾ ॥ ೪

### ಸರ್ಗ ೩೪

ಸರಮೆಯು ಸೀತೆಯ ಕೋರಿಕೆಯಂತೆ ಹೋಗಿ, ರಾವಣನ
ಅಭಿಪ್ರಾಯವನ್ನು ತಿಳಿದು ಬರುವುದು.

ರಾವಣನ ಮಾತಿನಿಂದ ಭ್ರಾಂತಳಾಗಿ ದುಃಖಾರ್ತಳಾದ ಜಾನಕಿಯನ್ನು, ಸರಮೆಯು ಈ ಪ್ರಕಾರವಾಗಿ ತನ್ನ ಮೃದುವಚನದಿಂದ ಸಂತೈಸಿದಳು. ಅಂತರಿಕ್ಷವು ಕಾಯ್ದು ಭೂಮಿಗೆ ಮಳೆಸುರಿಸಿ ತಂಪೇರಿಸುವಂತೆ ಸೀತೆಗೆ ಶಾಂತಿಯನ್ನುಂಟುಮಾಡಿದಳು (೧). ಸರಮೆಯು ಕಾಲೋಚಿತವಾಗಿ ನಡೆಯುವುದರಲ್ಲಿ ಜಾಣೆಯಾಗಿದ್ದಳು. ಅವಳು ತನ್ನ ಗೆಳತಿಯಾದ ಸೀತೆಗೆ ಸಾಧ್ಯವಾದಷ್ಟು ಒಳ್ಳೆಯದನ್ನು ಮಾಡಬೇಕೆಂದೆಣಿಸಿ, ಕಿರುನಗೆಯಿಂದ ''ನೀಲನಯನೆ- ಸೀತೆ, ನೀನು ಸಂದೇಶವನ್ನಿತ್ತರೆ ನಾನು ಯಾರಿಗೂ ಕಾಣದಂತೆ ಶ್ರೀರಾಮನ ಬಳಿಗೆ ಹೋಗಿ ನಿನ್ನ ಕುಶಲವಾರ್ತೆಯನ್ನು ಮುಟ್ಟಿಸಿ ಬರಬಲ್ಲೆನು! (೨–೩). ನಿರಾಲಂಬವಾದ ಅಂಬರದಲ್ಲಿ ಸಂಚರಿಸುವಾಗ ನನ್ನನ್ನು ಹಿಂಬಾಲಿಸಿ ಬರಲು ವಾಯುವಿಗೂ ಸಾಧ್ಯವಿಲ್ಲ, ವೈನತೇಯನಿಗೂ ಸಾಧ್ಯವಿಲ್ಲ!'' ಎಂದಳು.

ಏವಂ ಬ್ರುವಾಣಾಂ ತಾಂ ಸೀತಾ ಸರಮಾಂ ಪುನರಬ್ರವೀತ್ ।
ಮಧುರಂ ಶ್ಲಕ್ಷ್ಣಯಾ ವಾಚಾ ಪೂರ್ವಶೋಕಾಭಿಪನ್ನಯಾ ॥ ೫

ಸಮರ್ಥಾ ಗಗನಂ ಗಂತುಮಪಿ ವಾ ತ್ವಂ ರಸಾತಲಮ್ ।
ಅವಗಚ್ಛಾದ್ಯ ಕರ್ತವ್ಯಂ ಕರ್ತವ್ಯಂ ತೇ ಮದಂತರೇ ॥ ೬

ಮತ್ಪ್ರಿಯಂ ಯದಿ ಕರ್ತವ್ಯಂ ಯದಿ ಬುದ್ಧಿಃ ಸ್ಥಿರಾ ತವ ।
ಜ್ಞಾತುಮಿಚ್ಛಾಮಿ ತಂ ಗತ್ವಾ ಕಿಂ ಕರೋತೀತಿ ರಾವಣಃ ॥ ೭

ಸ ಹಿ ಮಾಯಾಬಲಃ ಕ್ರೂರೋ ರಾವಣಃ ಶತ್ರುರಾವಣಃ ।
ಮಾಂ ಮೋಹಯತಿ ದುಷ್ಟಾತ್ಮಾ ಪೀತಮಾತ್ರೇವ ವಾರುಣೀ ॥ ೮

ತರ್ಜಾಪಯತಿ ಮಾಂ ನಿತ್ಯಂ ಭರ್ತ್ಸಾಪಯತಿ ಚಾಸಕೃತ್ ।
ರಾಕ್ಷಸೀಭಿಃ ಸುಗೋರಾಭಿರ್ಯಾ ಮಾಂ ರಕ್ಷಂತಿ ನಿತ್ಯಶಃ ॥ ೯

ಉದ್ವಿಗ್ನಾ ಶಂಕಿತಾ ಚಾಸ್ಮಿ ನ ಸ್ವಸ್ಥಂ ಚ ಮನೋ ಮಮ ।
ತದ್ಭಯಾಚ್ಚಾಹಮುದ್ವಿಗ್ನಾ ಅಶೋಕವನಿಕಾಂ ಗತಾ ॥ ೧೦

---

ಹೀಗೆ ಹೇಳಿದ ಸರಮೇಯನ್ನು ನೋಡಿ ಸೀತೆಯು ಮೃದುಮಧುರವಾದ ಮಾತನ್ನಾಡಿದಳು. ಅದುವರೆಗೆ ಅತ್ತು ಅತ್ತು ಕಂಠವು ಕುಗ್ಗಿತ್ತು (೪–೫). ಅವಳು ಮೆಲ್ಲಗೆ ''ಸರಮೆ, ನೀನು ಗಗನವನ್ನಾದರೂ ಅಡರಬಲ್ಲೆ, ಪಾತಾಳವನ್ನಾದರೂ ಹೊಗಬಲ್ಲೆ. ಆದರೆ ನನಗೋಸ್ಕರ ಈಗ ನೀನು ಮಾಡಬೇಕಾದ ಕೃತ್ಯವು ಇದು: ನನಗೆ ಪ್ರಿಯವಾದುದನ್ನು ಮಾಡಬೇಕೆಂದಿದ್ದರೆ, ಈ ವಿಷಯದಲ್ಲಿ ನಿನ್ನ ಬುದ್ಧಿಯು ದೃಢವಾಗಿದ್ದರೆ, ರಾವಣನು ಏನುಮಾಡುತ್ತಿರುವನೆಂಬುದನ್ನು ತಿಳಿದುಬರಬೇಕಾಗಿ ನನ್ನ ಅಪೇಕ್ಷೆ (೬–೭). ರಾವಣನು ತನ್ನ ಶತ್ರುಗಳಿಗೆ ಚಿತ್ರಹಿಂಸೆಯಿತ್ತು ಗೋಳಾಡಿಸುವ ಕ್ರೂರ; ದುರುಳ; ಮೋಸಗಾರ. ಹೆಂಡದಂತೆ ನನ್ನ ಬುದ್ಧಿಗೆ ಮಂಕುಹಿಡಿಸುತ್ತಿದ್ದಾನೆ. ಪ್ರತಿದಿನವೂ ಈ ಘೋರ ರಾಕ್ಷಸಿಯರಿಂದ ನನ್ನನ್ನು ಹೆದರಿಸಿ ಬೆದರಿಸಿ ಕಾಡುತ್ತಿದ್ದಾನೆ. ಈ ರಾಕ್ಷಸಿಯರು ಅಹರ್ನಿಶವೂ ಎಡಬಿಡದೆ ನನ್ನನ್ನು ಕಾಯುತ್ತಿದ್ದಾರೆ (೮–೯). ನನಗೆ ಸಾಕಾಗಿಹೋಗಿದೆ. ಇನ್ನೇನು ಮಾಡುವನೋ ಎಂದು ಸಂದೇಹವಾಗಿದೆ. ನನ್ನ ಮನಸ್ಸಿಗೆ ಸ್ವಲ್ಪವೂ ನೆಮ್ಮದಿ ಇಲ್ಲ. ಈ ಅಶೋಕವನವನ್ನು ಸೇರಿ ಅವನ ಭಯದಿಂದ ತತ್ತರಿಸಿಹೋಗಿದ್ದೇನೆ (೧೦).

ಯಾ ಹಿ ನಾಮ ಕಥಾ ತಸ್ಯ ನಿಶ್ಚಿತಂ ವಾಪಿ ಯದ್ಭವೇತ್ ।
ನಿವೇದಯೇಥಾಃ ಸರ್ವಂ ತತ್ಪರೋ ಮೇ ಸ್ಯಾದನುಗ್ರಹಃ ॥ ೧೧

ಸಾ ತ್ವೇವಂ ಬ್ರುವತೀಂ ಸೀತಾಂ ಸರಮಾ ವಲ್ಗುಭಾಷಿಣೀ ।
ಉವಾಚ ವದನಂ ತಸ್ಯಾಃ ಸ್ಪೃಶಂತೀ ಬಾಷ್ಪವಿಕ್ಲವಮ್ ॥ ೧೨

ಏಷ ತೇ ಯದ್ಯಭಿಪ್ರಾಯಸ್ತದಾ ಗಚ್ಛಾಮಿ ಜಾನಕಿ ।
ಗೃಹ್ಯ ಶತ್ರೋರಭಿಪ್ರಾಯಮುಪಾವೃತ್ತಾಂ ಚ ಪಶ್ಯ ಮಾಮ್ ॥ ೧೩

ಏವಮುಕ್ತ್ವಾ ತತೋ ಗತ್ವಾ ಸಮೀಪಂ ತಸ್ಯ ರಕ್ಷಸಃ ।
ಶುಶ್ರಾವ ಕಥಿತಂ ತಸ್ಯ ರಾವಣಸ್ಯ ಸಮಂತ್ರಿಣಃ ॥ ೧೪

ಸಾ ಶ್ರುತ್ವಾ ನಿಶ್ಚಯಂ ತಸ್ಯ ನಿಶ್ಚಯಜ್ಞಾ ದುರಾತ್ಮನಃ ।
ಪುನರೇವಾಗಮತ್ಕ್ಷಿಪ್ರಮಶೋಕವನಿಕಾಂ ತದಾ ॥ ೧೫

ಸಾ ಪ್ರವಿಷ್ಟಾ ಪುನಸ್ತತ್ರ ದದರ್ಶ ಜನಕಾತ್ಮಜಾಮ್ ।
ಪ್ರತೀಕ್ಷಮಾಣಾಂ ಸ್ವಾಮೇವ ಭ್ರಷ್ಟಪದ್ಮಾಮಿವ ಶ್ರಿಯಮ್ ॥ ೧೬

---

ಸರಮೆ, ಈಗ ರಾವಣನು ಹೇಳಿಕೊಳ್ಳುವುದಾದರೂ ಏನು, ಅವನ ಮುಂದಿನ ನಿಶ್ಚಯವಾದರೂ ಏನು– ಎಂಬುದನ್ನು ತಿಳಿದು ಹೇಳಿದರೆ, ಸಖಿ, ಅದೇ ನನಗೆ ದೊಡ್ಡ ಅನುಗ್ರಹ'' ಎಂದಳು*(೧೧). ಆಗ ಸರಮೆಯು ಕಣ್ಣೀರಿಂದ ಒದ್ದೆಯಾದ ಸೀತಾದೇವಿಯ ಮುಖವನ್ನು ಒರೆಸುತ್ತ ಮೃದುವಾಗಿ ''ಗೆಳತಿ–ಜಾನಕಿ, ನಿನ್ನ ಅಭಿಪ್ರಾಯವು ಹೀಗಿರುವುದಾದರೆ, ಇದೋ ಈಗಲೇ ಹೋಗಿ ರಾವಣನ ಉದ್ದೇಶವನ್ನು ತಿಳಿದುಬರುವೆನು, ನೋಡು!'' ಎಂದು ನುಡಿದು ರಾಕ್ಷಸರಾಜನ ಬಳಿಗೆ ಹೊರಟಳು (೧೨–೧೩). ಅವಳು ಹೋಗಿ ರಾವಣನಿಗೂ ಅವನ ಮಂತ್ರಿಗಳಿಗೂ ನಡೆಯುತ್ತಿದ್ದ ಸಂಭಾಷಣೆಯೆಲ್ಲವನ್ನೂ ಕೇಳಿ, ಆ ದುರಾತ್ಮನ ನಿಶ್ಚಯವನ್ನು ತಿಳಿದುಕೊಂಡಳು. ಆ ಸರಮೆಯು ನೇರವಾಗಿ ಮತ್ತೆ ಅಶೋಕವನಕ್ಕೆ ಬಂದು ಜಾನಕಿಯನ್ನು ಸಂದರ್ಶಿಸಿದಳು. ಜಾನಕಿಯಾದರೋ ಕೈಯಲ್ಲಿ ಕಮಲವಿಲ್ಲದ ಸಾಕ್ಷಾತ್‌ಲಕ್ಷ್ಮಿಯೋ ಎಂಬಂತೆ

---

* ಶ್ರೀ ರಾಮನಿಗೆ ಕುಶಲಸಂದೇಶವನ್ನು ಕಳಿಸಲು ಸೀತೆಯು ಇಷ್ಟಪಡಲಿಲ್ಲ. ಹನುಮಂತನು ಸಂದೇಶವನ್ನೊಯ್ದಿರುವುದರಿಂದಲೂ ಯುದ್ಧದ ಆರಂಭವೇ ಆಗಿರುವುದ ರಿಂದಲೂ ಮತ್ತ ಸಂದೇಶವು ಅಯುಕ್ತವೆಂದು ಅವಳು ತಿಳಿದಳು. ಅಲ್ಲದೆ ಸರಮೆಯು ಯಾವುದಾದರೂ ತೊಂದರೆಗೆ ಸಿಕ್ಕಿಕೊಂಡಾಳು ಎಂದೂ ಸೀತೆಯು ಭಾವಿಸಿರಬಹುದು.

ತಾಂ ತು ಸೀತಾ ಪುನಃ ಸರಮಾಂ ವಲ್ಗುಭಾಷಿಣೀಮ್ ।
ಪರಿಷ್ವಜ್ಯ ಚ ಸುಸ್ನಿಗ್ಧಂ ದದೌ ಚ ಸ್ವಯಮಾಸನಮ್ ॥ ೧೭

ಇಹಾಸೀನಾ ಸುಖಂ ಸರ್ವಮಾಖ್ಯಾಹಿ ಮಮ ತತ್ತ್ವತಃ ।
ಕ್ರೂರಸ್ಯ ನಿಶ್ಚಯಂ ತಸ್ಯ ರಾವಣಸ್ಯ ದುರಾತ್ಮನಃ ॥ ೧೮

ಏವಮುಕ್ತಾ ತು ಸರಮಾ ಸೀತಯಾ ವೇಪಮಾನಯಾ ।
ಕಥಿತಂ ಸರ್ವಮಾಚಷ್ಟ ರಾವಣಸ್ಯ ಸಮಂತ್ರಿಣಃ ॥ ೧೯

ಜನನ್ಯಾ ರಾಕ್ಷಸೇಂದ್ರೋ ವೈ ತನ್ಮೋಕ್ಷಾರ್ಥಂ ಬೃಹದ್ವಚಃ ।
ಅವಿದ್ಧೇನ ಚ ವೈದೇಹಿ ಮಂತ್ರಿವೃದ್ಧೇನ ಬೋಧಿತಃ ॥ ೨೦

ದೀಯತಾಮಭಿಸತ್ಕೃತ್ಯ ಮನುಜೇಂದ್ರಾಯ ಮೈಥಿಲೀ ।
ನಿದರ್ಶನಂ ತೇ ಪರ್ಯಾಪ್ತಂ ಜನಸ್ಥಾನೇ ಯದದ್ಭುತಮ್ ॥ ೨೧

ಲಂಘನಂ ಚ ಸಮುದ್ರಸ್ಯ ದರ್ಶನಂ ಚ ಹನೂಮತಃ ।
ವಧಂ ಚ ರಕ್ಷಸಾಂ ಯುದ್ಧೇ ಕಃ ಕುರ್ಯಾನ್ಮಾನುಷೋ ಭುವಿ ॥ ೨೨

---

ಕಂಗೊಳಿಸುತ್ತ ಸರಮೆಯ ಆಗಮನವನ್ನೇ ಕಾಯುತ್ತಿದ್ದಳು. (೧೪–೧೬). ಮಂಜುಬಾಷಿಣಿಯಾದ ಸರಮೆಯು ಬಂದುದನ್ನು ಕಂಡೊಡನೆ, ಸೀತೆಯು ಪ್ರೇಮದಿಂದ ಅವಳನ್ನಪ್ಪಿಕೊಂಡು, ಕುಳಿತುಕೊಳ್ಳಲು ತಾನೇ ಆಸನವನ್ನು ಕೊಟ್ಟಳು. (೧೭). ''ಸಖಿ–ಸರಮೆ, ಇಲ್ಲಿ ಸುಖವಾಗಿ ಕುಳಿತುಕೊಂಡು ನಡೆದುದೆಲ್ಲವನ್ನು ಯಥಾರ್ಥವಾಗಿ ತಿಳಿಸು. ದುರಾತ್ಮನಾದ ರಾವಣನು ಮುಂದೆ ಏನುಮಾಡಲು ನಿಶ್ಚಯಿಸಿದ್ದಾನೆ?'' ಎಂದು ಕೇಳಿದಳು. ಹೆದರಿಕೆಯಿಂದ ನಡುನಡುಗುತ್ತಲೇ ಸೀತೆಯು ಹೀಗೆನ್ನಲು, ರಾವಣನಿಗೂ ಅವನ ಮಂತ್ರಿಗಳಿಗೂ ನಡೆದ ಸಂಭಾಷಣೆಯೆಲ್ಲವನ್ನೂ ಸರಮೆಯು ಹೇಳಿದಳು (೧೮–೧೯): ''ಮೈಥಿಲಿ , ರಾವಣನ ತಾಯಿಯಾದ ಕೈಕಸಿಯೂ ಮಂತ್ರಿವೃದ್ಧನಾದ ಅವಿದ್ಧನೆಂಬುವನೂ ನಿನ್ನನ್ನು ಬಿಟ್ಟುಬಿಡಬೇಕೆಂದು ರಾವಣನಿಗೆ ಬಹುವಿಧದಲ್ಲಿ ಬೋಧಿಸಿದರು. ಅವರಿಬ್ಬರೂ ರಾವಣನಿಗೆ 'ವತ್ಸ–ರಾವಣ, ಶ್ರೀರಾಮನನ್ನು ಸತ್ಕರಿಸಿ ಸೀತೆಯನ್ನು ಅವನಿಗೆ ಒಪ್ಪಿಸಿಬಿಡು. ರಾಘವನ ಪೌರುಷಕ್ಕೆ ನಿದರ್ಶನವಾಗಿ, ಜನಸ್ಥಾನದಲ್ಲಿ ನಡೆದ ಅದ್ಭುತವೊಂದೇ ನಿನಗೆ ಸಾಕು! (೨೦–೨೧). ಅವನ ಭೃತ್ಯನಾದ ಹನುಮಂತನು ಸಮುದ್ರವನ್ನೇ

ಏವಂ ಸ ಮಂತ್ರಿವೃದ್ಧೇನ ಮಾತ್ರಾ ಚ ಬಹು ಭಾಷಿತಃ ।
ನ ತ್ವಾಮುತ್ಸಹತೇ ಮೋಕ್ತುಮರ್ಥಮರ್ಥಪರೋ ಯಥಾ ॥ ೨೩

ನೋತ್ಸಹತ್ಯಮೃತೋ ಮೋಕ್ತುಂ ಯುದ್ಧೇ ತ್ವಾಮಿತಿ ಮೈಥಿಲಿ ।
ಸಾಮಾತ್ಯಸ್ಯ ನೃಸಂಸಸ್ಯ ನಿಶ್ಚಯೋ ಹ್ಯೇಷ ವರ್ತತೇ ॥ ೨೪

ತದೇಷಾ ನಿಶ್ಚಿತಾ ಬುದ್ಧಿರ್ಮೃತ್ಯು ಲೋಭಾದುಪಸ್ಥಿತಾ ।
ಭಯಾನ್ನ ಶಕ್ತಸ್ತ್ವಾಂ ಮೋಕ್ತು ಮನಿರಸ್ತಸ್ತು ಸಂಯುಗೇ ॥ ೨೫

ರಾಕ್ಷಸಾನಾಂ ಚ ಸರ್ವೇಷಾ ಮಾತ್ಮನಶ್ಚ ವಧೇನ ಹಿ ।
ನಿಹತ್ಯ ರಾವಣಂ ಸಂಖ್ಯೇ ಸರ್ವಥಾ ನಿಶಿತೈಃ ಶರೈಃ ॥ ೨೬

ಪ್ರತಿನೇಷ್ಯತಿ ರಾಮಸ್ತ್ವಾಮಯೋಧ್ಯಾಮಸಿತೇಕ್ಷಣೇ ।
ಏತಸ್ಮಿನ್ನಂತರೇ ಶಬ್ದೋ ಭೇರಿಶಂಖಸಮಾಕುಲಃ ॥ ೨೭

---

ಲಂಘಿಸಿಬಂದು ಸೀತೆಯನ್ನು ನೋಡಿದನು. ಒಬ್ಬನೇ ಯುದ್ಧದಲ್ಲಿ ಅಷ್ಟು ಮಂದಿ ರಾಕ್ಷಸರನ್ನು ಸಂಹರಿಸಿದನು. ಇವೆಲ್ಲವೂ ಮನುಷ್ಯನಿಂದಲೋ ಕಪಿಯಿಂದಲೋ ಆಗುವ ಕಾರ್ಯಗಳೆ?' (೨೨). ಈ ರೀತಿಯಲ್ಲಿ ಕೈಕಸಿಯೂ ಆ ಮಂತ್ರಿವೃದ್ಧನೂ ಪರಿಪರಿಯಾಗಿ ಸಾರಿ ಹೇಳಿದರು. ಆದರೆ, ಸೀತೆ, ಜಿಪುಣನು ಹೇಗೆ ಹಣವನ್ನು ಕೈಬಿಡಲಾರನೋ ಹಾಗೆ ರಾವಣನು ನಿನ್ನನ್ನು ಬಿಟ್ಟುಕೊಡಲು ಸರ್ವಥಾ ಒಪ್ಪುವುದಿಲ್ಲ (೨೩). ಆ ಘಾತುಕನು ತನ್ನ ಮಂತ್ರಿಗಳೊಡನೆ ಮಾತನಾಡಿ 'ನಾನು ಬದುಕಿರುವವರೆಗೆ ಸೀತೆಯನ್ನು ಬಿಟ್ಟು ಕೊಡುವುದಿಲ್ಲ!' ಎಂದು ನಿಶ್ಚಯಿಸಿಕೊಂಡಿದ್ದಾನೆ. ಅವನಿಗೆ ಸಾಯುವ ಆಸೆ ಬಂದಿರಬೇಕು! ಆದ್ದರಿಂದಲೇ ಈ ದುರ್ಬುದ್ಧಿಯುಂಟಾಗಿದೆ. ಯುದ್ಧದಲ್ಲಿ ಅವನನ್ನು ನಿರ್ಮೂಲಗೊಳಿಸಬೇಕೇ ಹೊರತು, ಅಂಜಿಕೆಯಿಂದ ಅವನು ನಿನ್ನನ್ನು ಬಿಡತಕ್ಕವನಲ್ಲ! (೨೪–೨೫). ಸಮಸ್ತರಾಕ್ಷಸರನ್ನೂ ತನ್ನನ್ನೂ ವಧಿಸಿದಮೇಲೆಯೇ ಸೀತೆಯ ಬಿಡುಗಡೆ ಎಂಬ ಛಲದಲ್ಲಿದ್ದಾನೆ! ಸುಂದರಿ– ಸೀತೆ, (ಚಿಂತಿಸಬೇಡ) ಶ್ರೀ ರಾಮನು ರಣಮಧ್ಯದಲ್ಲಿ ನಿಶಿತಾಸ್ತ್ರಗಳಿಂದ ರಾವಣನನ್ನು ವಧಿಸಿ, ನಿನ್ನನ್ನು ಅಯೋಧ್ಯೆಗೆ ಕರೆದೊಯ್ಯುವನು'' ಎಂದಳು. ಅಷ್ಟರಲ್ಲಿ ರಣಭೇರೀಶಂಖಧ್ವನಿಗಳಿಂದ ಸಮ್ಮಿಶ್ರವಾದ ವಾನರಯೋಧರ

ಶ್ರುತೋ ವಾನರಸೈನ್ಯಾನಾಂ ಕಂಪಯನ್ ಧರಣೀತಲಮ್ ॥

ಶ್ರುತ್ವಾ ತು ತದ್ವಾನರಸೈನ್ಯ ಶಬ್ದಂ
ಲಂಕಾಗತಾ ರಾಕ್ಷಸರಾಜಭೃತ್ಯಾಃ ।
ನಷ್ಟೌಜಸೋ ದೈನ್ಯ ಪರೀತಚೇಷ್ಟಾಃ
ಶ್ರೇಯೋ ನ ಪಶ್ಯಂತಿ ನೃಪಸ್ಯ ದೋಷೈಃ ॥ ೨೮

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುಸ್ತ್ರಿಂಶಃ ಸರ್ಗಃ

---

ರಣಗರ್ಜನೆಯು ಕೇಳಿಸತೊಡಗಿತು. ಭೂತಳವೇ ಕಂಪಿಸುವಂತೆ ಶಬ್ದವಾಯಿತು (೨೬–೨೭). ವಾನರವೀರರ ಸಿಂಹನಾದವನ್ನು ಕೇಳಿ ಲಂಕೆಯಲ್ಲಿದ್ದ ರಾಕ್ಷಸ ರಾಜನ ಸೈನಿಕರು ಕಳೆಗುಂದಿದರು. ದೈನ್ಯವು ಆವರಿಸಿತು. ರಾಜನ ತಪ್ಪುಗಳಿಂದ ತಮಗೆ ಉಳಿಗಾಲವಿಲ್ಲವಾಗಿದೆ ಎಂದು ಅವರಿಗೆ ತೋರಿತು (೨೮).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಮೂವತ್ತುನಾಲ್ಕನೆಯ ಸರ್ಗ

---

## ಪಂಚತ್ರಿಂಶಃ ಸರ್ಗಃ

### ಮಾಲ್ಯವದುಪದೇಶಃ

ತೇನ ಶಂಖವಿಮಿಶ್ರೇಣ ಭೇರೀಶಬ್ದೇನ ನಾದಿನಾ ।
ಉಪಯಾತಿ ಮಹಾಬಾಹೂ ರಾಮಃ ದರಪುರಂಜಯಃ ॥ ೧

ತಂ ನಿನಾದಂ ನಿಶಮ್ಯಾಥ ರಾವಣೋ ರಾಕ್ಷಸೇಶ್ವರಃ ।
ಮುಹೂರ್ತಂ ಧ್ಯಾನಮಾಸ್ಥಾಯ ಸಚಿವಾನಭ್ಯು ದೈಕ್ಷತ ॥ ೨

ಅಥ ತಾನ್ ಸಚಿವಾಂಸ್ತತ್ರ ಸರ್ವಾನಾಭಾಷ್ಯ ರಾವಣಃ ।
ಸಭಾಂ ಸಂನಾದಯನ್ ಸರ್ವಾಮಿತ್ಯುವಾಚ ಮಹಾಬಲಃ ॥ ೩

ಜಗತ್ಸಂತಾಪನಃ ಕ್ರೂರೋ ಗರ್ಹಯನ್ ರಾಕ್ಷಸೇಶ್ವರಃ ।
ತರಣಂ ಸಾಗರಸ್ಯಾಪಿ ವಿಕ್ರಮಂ ಬಲಸಂಚಯಮ್ ॥ ೪

ಯದುಕ್ತವಂತೋ ರಾಮಸ್ಯ ಭವಂತಸ್ತನ್ಮಯಾ ಶ್ರುತಮ್ ।
ಭವತಶ್ಚಾಪ್ಯಹಂ ವೇದ್ಮಿ ಯುದ್ಧೇ ಸತ್ಯಪರಾಕ್ರಮಾನ್ ॥ ೫

## ಸರ್ಗ ೩೫

### ಮಾಲ್ಯವಂತನಿಂದ ರಾವಣನಿಗೆ ಹಿತೋಪದೇಶ

ಹೀಗೆ ಮೊಳಗುತ್ತಿದ್ದ ಶಂಖಧ್ವನಿ ಸಮ್ಮಿಶ್ರವಾದ ರಣಭೇರೀನಿನಾದದೊಡನೆ ಮಹಾಬಾಹುವೂ ಮಹಾಪರಾಕ್ರಮಿಯೂ ಆದ ಶ್ರೀರಾಮನು ಲಂಕೆಯನ್ನು ಮುತ್ತುವುದಕ್ಕಾಗಿ ಸಾಗಿಬರುತ್ತಿದ್ದನು. ಇತ್ತ ಸಭೆಯಲ್ಲಿದ್ದ ರಾಕ್ಷಸೇಶ್ವರನಿಗೆ ಆ ನಿನಾದವು ಕೇಳಿಸಿತು. ಒಂದು ಕ್ಷಣಕಾಲ ಅವನು ಧ್ಯಾನಸ್ಥನಾಗಿದ್ದು, ಆಮೇಲೆ ಸಚಿವರ ಮುಖವನ್ನು ನೋಡಿದನು (೧–೨). ಜಗತ್ತಿನ್ನೇ ಹುರಿದು ಮುಕ್ಕುತ್ತಿದ್ದ ಕ್ರೂರನೂ ಬಲಾಢ್ಯನೂ ಆದ ಆ ರಾವಣನು ಮಂತ್ರಿಗಳಿಗೆ ಚುಚ್ಚುಮಾತನ್ನಾಡಿದನು. ಆ ಮಂತ್ರಿಗಳೆಲ್ಲರನ್ನೂ ಸಂಬೋಧಿಸಿ ಸಭೆಯು ಮೊಳಗುವಂತೆ ''ಎಲೈ ಸಚಿವರೆ, ರಾಮನು ವಾನರಸೇನೆಯನ್ನು ಸಂಘಟಿಸಿರುವನೆಂದೂ ಸಮುದ್ರವನ್ನು ದಾಟಿ ಬಂದಿರುವನೆಂದೂ ಅವನು ವಿಕ್ರಮಶಾಲಿಯೆಂದೂ ನೀವು ಹೇಳಿದಿರಲ್ಲ, ಅದೆಲ್ಲವನ್ನೂ ಕೇಳಿದೆನು! (೩–೪). ನೀವೆಲ್ಲರೂ ಯುದ್ಧದಲ್ಲಿ ಮಹಾಪರಾಕ್ರಮಿಗಳೆಂಬುದು ನನಗೆ ಗೊತ್ತಿದೆ. ಆದರೆ ರಾಮನ

ತೂಷ್ಣೀಕಾನೀಕ್ಷತೋಽನ್ಯೋನ್ಯಂ ವಿದಿತ್ವಾ ರಾಮವಿಕ್ರಮಮ್ ।
ತತಸ್ತು ಸುಮಹಾಪ್ರಾಜ್ಞೋ ಮಾಲ್ಯವಾನ್ನಾಮ ರಾಕ್ಷಸಃ ॥ ೬

ರಾವಣಸ್ಯ ವಚಃ ಶ್ರುತ್ವಾ ಇತಿ ಮಾತಾಮಹೋಽಬ್ರವೀತ್ ।
ವಿದ್ಯಾಸ್ವಭಿವಿನೀತೋ ಯೋ ರಾಜಾ ರಾಜನ್ನಯಾನುಗಃ ॥ ೭

ಸ ಶಾಸ್ತಿ ಚಿರಮೈಶ್ವರ್ಯಮರೀಂಶ್ಚ ಕುರುತೇ ವಶೇ ।
ಸಂದಧಾನೋ ಹಿ ಕಾಲೇನ ವಿಗೃಹ್ಣಂಶ್ಚಾರಿಭಿಃ ಸಹ ॥ ೮

ಸ್ವಪಕ್ಷವರ್ಧನಂ ಕುರ್ವನ್ ಮಹದೈಶ್ವರ್ಯಮಶ್ನುತೇ ।
ಹೀಯಮಾನೇನ ಕರ್ತವ್ಯೋ ರಾಜ್ಞಾ ಸಂಧಿಃ ಸಮೇನ ಚ ॥ ೯

ನ ಶತ್ರುಮವಮನ್ಯೇತ ಜ್ಯಾಯಾನ್ ಕುರ್ವೀತ ವಿಗ್ರಹಮ್ ।
ತನ್ಮಹ್ಯಂ ರೋಚತೇ ಸಂಧಿಃ ಸಹರಾಮೇಣ ರಾವಣ ॥ ೧೦

---

ಶೌರ್ಯವನ್ನು ಗುಣಿಸುತ್ತ ಸುಮ್ಮನೆ ಒಬ್ಬರ ಮುಖವನ್ನೊಬ್ಬರು ನೋಡುತ್ತಿರುವಿರಲ್ಲ, ಇದೇಕೆ?'' ಎಂದು ಕೇಳಿದನು. ಆ ಸಭೆಯಲ್ಲಿ ಮಾಲ್ಯವಂತನೆಂಬ ವಿವೇಕಿಯಾದ ರಾಕ್ಷಸನೊಬ್ಬನಿದ್ದನು (೫–೬). ಅವನು ರಾವಣನ ಮಾತಾಮಹ.*ಮಾಲ್ಯವಂತನು ರಾವಣನನ್ನು ಕುರಿತು ಇಂತೆಂದನು: ''ವತ್ಸ–ರಾವಣ, ಯಾವ ರಾಜನು ವಿದ್ಯಾವಂತನಾಗಿ ನೀತಿಶಾಸ್ತ್ರವನ್ನನುಸರಿಸಿ ರಾಜ್ಯಭಾರಮಾಡುವನೋ ಅವನು ಬಹುಕಾಲ ರಾಜ್ಯವನ್ನಾಳಿ ಐಶ್ವರ್ಯವನ್ನನುಭವಿಸುತ್ತಾನೆ. ಶತ್ರುಗಳನ್ನು ವಶಪಡಿಸಿಕೊಳ್ಳುತ್ತಾನೆ. ಕಾಲಾನುಗುಣವಾಗಿ ಸಂಧಿಯನ್ನೂ ಯುದ್ಧವನ್ನೂ ನಡೆಸಬೇಕಾಗುತ್ತದೆ (೭–೮). ಹೀಗೆ ಸಮಯೋಚಿತವಾಗಿ ತನ್ನ ಬಲವನ್ನು ಬೆಳೆಸಿಕೊಳ್ಳುತ್ತಿದ್ದರೆ ಸಂಪತ್ತನ್ನು ಗಳಿಸಬಹುದು. ಶತ್ರುವಿಗಿಂತ ತಾನು ದುರ್ಬಲನಾಗಿದ್ದರೂ ಶತ್ರುವಿಗೆ ಸಮನಾಗಿದ್ದರೂ ರಾಜನು ಸಂಧಿಯನ್ನು ಮಾಡಿಕೊಳ್ಳುವುದೇ ಲೇಸು (೯). ಯಾವ ಸಂದರ್ಭದಲ್ಲಿಯೂ ಶತ್ರುವನ್ನು ಉಪೇಕ್ಷಿಸಿ ಸುಮ್ಮನಿರಬಾರದು. ತಾನು ಅಧಿಕ ಬಲಶಾಲಿಯಾಗಿದ್ದರೆ ಯುದ್ಧಮಾಡಬೇಕು. ಆದ್ದರಿಂದ, ರಾವಣ, ಈಗ ರಾಮನೊಡನೆ ಸಂಧಿಮಾಡಿಕೊಳ್ಳುವುದೇ ಲೇಸೆಂದು ನನಗೆ ತೋರುತ್ತದೆ (೧೦).

---

* ರಾವಣನ ತಾಯಿಯಾದ ಕೈಕಸಿಯ ತಂದೆ ಸುಮಾಲಿ. ಸುಮಾಲಿಯ ತಮ್ಮ ಮಾಲ್ಯವಂತ. ತಾಯಿಯ ಚಿಕ್ಕಪ್ಪನನ್ನು ಇಲ್ಲಿ ಮಾತಾಮಹನೆಂದು ಕರೆಯಲಾಗಿದೆ.

ಯದರ್ಥಮಭಿಯುಕ್ತಾಃ ಸ್ಮ ಸೀತಾ ತಸ್ಮೈ ಪ್ರದೀಯತಾಮ್ ।
ಯಸ್ಯ ದೇವರ್ಷಯಃ ಸರ್ವೇ ಗಂಧರ್ವಾಶ್ಚ ಜಯೈಷಿಣಃ ॥ ೧೧

ವಿರೋಧಂ ಮಾ ಗಮಸ್ತೇನ ಸಂಧಿಸ್ತೇ ತೇನ ರೋಚತಾಮ್ ।
ಅಸೃಜದ್ಭಗವಾನ್ ಪಕ್ಷೌ ದ್ವಾವೇವ ಹಿ ಪಿತಾಮಹಃ ॥ ೧೨

ಸುರಾಣಾಮಸುರಾಣಾಂ ಚ ಧರ್ಮಾಧರ್ಮೌ ತದಾಶ್ರಯೌ ।
ಧರ್ಮೋ ಹಿ ಶ್ರೂಯತೇ ಪಕ್ಷೋ ಹ್ಯಮರಾಣಾಂ ಮಹಾತ್ಮನಾಮ್

ಅಧರ್ಮೋ ರಕ್ಷಸಾಂ ಪಕ್ಷೋಽಹ್ಯಸುರಾಣಾಂ ಚ ರಾವಣ ।
ಧರ್ಮೋ ವೈ ಗ್ರಸತೇಽಧರ್ಮಂ ತತಃ ಕೃತಮಭೂದ್ಯುಗಮ್ ॥ ೧೪

ಅಧರ್ಮೋ ಗ್ರಸತೇ ಧರ್ಮಂ ತತಸ್ತಿಷ್ಯಃ ಪ್ರವರ್ತತೇ ।
ತತ್ತ್ವಯಾ ಚರತಾ ಲೋಕಾನ್ ಧರ್ಮೋ ವಿನಿಹತೋ ಮಹಾನ್ ॥

ಅಧರ್ಮಃ ಪ್ರಗೃಹೀತಶ್ಚ ತೇನಾಸ್ಮದ್ಬಲಿನಃ ಪರೇ ।
ಸ ಪ್ರಮಾದಾದ್ವಿವೃದ್ಧಸ್ತೇಽಧರ್ಮೋಽಹಿರ್ಗ್ರಸತೇ ಹಿ ನಃ ॥ ೧೬

---

ಸೀತೆಗಾಗಿ ರಾಮನು ನಮ್ಮ ಮೇಲೆ ದಂಡೆತ್ತಿ ಬಂದಿದ್ದಾನೆ. ಸೀತೆಯನ್ನು ಅವನಿಗೆ ಒಪ್ಪಿಸಿಬಿಡು. ಏಕೆಂದರೆ, ದೇವರ್ಷಿಗಳೂ ಗಂಧರ್ವರೂ ರಾಮನಿಗೇ ಜಯವಾಗಲೆಂದು ಹಾರೈಸುತ್ತಿದ್ದಾರೆ. ಹೀಗೆ ಬಹುಜನರ ಬೆಂಬಲವುಳ್ಳ ರಾಮನೊಡನೆ ನಿನಗೆ ವೈರವು ಬೇಡ. ಸಂಧಿಯೇ ಹಿತಕರವೆಂದು ತಿಳಿ. ಬ್ರಹ್ಮನ ಸೃಷ್ಟಿಯಲ್ಲಿ ಜನರು ಅವಲಂಬಿಸುವ ಎರಡು ಪಕ್ಷಗಳುಂಟು (೧೦–೧೨). ಒಂದು ಧರ್ಮ, ಇನ್ನೊಂದು ಅಧರ್ಮ. ಮಹಾತ್ಮರಾದ ದೇವತೆಗಳ ಪಕ್ಷ ಧರ್ಮ. ರಾಕ್ಷಸರ ಮತ್ತು ಅಸುರರ ಪಕ್ಷ ಅಧರ್ಮ! ಯಾವಾಗ ಧರ್ಮವು ಅಧರ್ಮವನ್ನು ನುಂಗಿ ತಾನೊಂದೇ ವಿರಾಜಿಸುವುದೋ ಆಗ ಕೃತಯುಗ (೧೩–೧೪). ಅಧರ್ಮವು ಧರ್ಮವನ್ನು ನುಂಗಿದಾಗ ಕಲಿಯುಗ! ರಾವಣ, ನೀನು ಜಗತ್ತನ್ನು ಸುತ್ತಿ ಸುತ್ತಿ ಧರ್ಮದ ಕೊಲೆ ಮಾಡುತ್ತ ಹೋಗಿದ್ದೀಯೆ! ಅಧರ್ಮಕ್ಕೆ ಬಲವಾಗಿ ಅಂಟಿಕೊಂಡಿದ್ದೀಯೆ! ಆದ್ದರಿಂದ ಶತ್ರುಗಳು ನಮಗಿಂತ ಬಲಶಾಲಿಗಳೆಂದು ತಿಳಿ. ನೀನು ಅವಿವೇಕದಿಂದ ಸಾಕಿ ಪೋಷಿಸಿದ ಅಧರ್ಮವು, ಇಂದು ಹೆಬ್ಬಾವಾಗಿ ಬೆಳೆದು ನಮ್ಮನ್ನು ನುಂಗಲು ಬಂದಿದೆ (೧೫–೧೬).

ವಿವರ್ಧಯತಿ ಪಕ್ಷಂ ಚ ಸುರಾಣಾಂ ಸುರಭಾವನಃ ।
ವಿಷಯೇಷು ಪ್ರಸಕ್ತೇನ ಯತ್ಕಿಂಚಿತ್ಕಾರಿಣಾ ತ್ವಯಾ ॥ ೧೭

ಋಷೀಣಾಮಗ್ನಿ ಕಲ್ಪಾನಾಮುದ್ವೇಗೋ ಜನಿತೋ ಮಹಾನ್ ।
ತೇಷಾಂ ಪ್ರಭಾವೋ ದುರ್ಧರ್ಷಃ ಪ್ರದೀಪ್ತ ಇವ ಪಾವಕಃ ॥ ೧೮

ತಪಸಾ ಭಾವಿತಾತ್ಮಾನೋ ಧರ್ಮಸ್ಯಾನುಗ್ರಹೇ ರತಾಃ ।
ಮುಖ್ಯೈರ್ಯಜ್ಞೈರ್ಯಜಂತ್ಯೇತೇ ನಿತ್ಯಂ ತೈಸ್ತೈರ್ದ್ವಿಜಾತಯಃ ॥

ಜುಹ್ವತ್ಯಗ್ನೀಂಶ್ಚ ವಿಧಿವದ್ವೇದಾಂಶ್ಚೋಚ್ಚೈರಧೀಯತೇ ।
ಅಭಿಭೂಯ ಚ ರಕ್ಷಾಂಸಿ ಬ್ರಹ್ಮಘೋಷಾನುದೈರಯನ್ ॥ ೨೦

ದಿಶೋಽಪಿ ವಿದ್ರುತಾಃ ಸರ್ವಾ ಸ್ತನಯಿತ್ನುರಿವೋಷ್ಣಗೇ ।
ಋಷೀಣಾಮಗ್ನಿ ಕಲ್ಪಾನಾಮಗ್ನಿ ಹೋತ್ರಸಮುತ್ಥಿತಃ ॥ ೨೧

ಆದತ್ತೇ ರಕ್ಷಸಾಂ ತೇಜೋ ಧೂಮೋ ವ್ಯಾಪ್ಯ ದಿಶೋ ದಶ ।
ತೇಷು ತೇಷು ಚ ದೇಶೇಷು ಪುಣ್ಯೇಷ್ವೇವ ದೃಢವ್ರತೈಃ ॥ ೨೨

---

ನಿನ್ನ ಅಧರ್ಮವೇ ದೇವತೆಗಳಿಗೆ ಅನುಕೂಲವಾಗಿ ಅವನ ಪಕ್ಷವನ್ನು ವರ್ಧಿಸುತ್ತಿದೆ. ವಿಷಯಸುಖಗಳಲ್ಲಿ ಆಸಕ್ತನಾಗಿ ಮನಸ್ಸಿಗೆ ಬಂದಂತೆ ಮಾಡುವ ನೀನು, ಅಗ್ನಿಯಂತೆ, ತೇಜಸ್ವಿಗಳಾದ ಋಷಿಗಳಿಗೆ ಬಹಳ ಅಸಮಾಧಾನ ವನ್ನುಂಟುಮಾಡಿದ್ದೀಯೆ. ಅವರ ತಪೋಮಹಿಮೆಯು ಪ್ರಜ್ವಲಿಸುವ ಅಗ್ನಿ ಯಂತೆ ತೀಕ್ಷ್ಣವಾದದ್ದು (೧೭–೧೮). ರಾವಣ, ಋಷಿಗಳು ತಪಸ್ಸುಮಾಡಿ ಪರಿಶುದ್ಧಚಿತ್ತರಾದವರು. ಧರ್ಮಪ್ರಸಾರದಲ್ಲಿ ನಿರತರಾದವರು. ಮುಖ್ಯವಾದ ಧ್ಯಾನಯಜ್ಞದಲ್ಲಿ ಸದಾ ಪ್ರಸಕ್ತರು. ಅಲ್ಲದೆ ಶಾಸ್ತ್ರೋಕ್ತವಾಗಿ ಅಗ್ನಿಯಲ್ಲಿ ಹೋಮಮಾಡುತ್ತಾರೆ. ವೇದಗಳನ್ನು ಅಧ್ಯಯನಮಾಡುತ್ತಾರೆ. ಬ್ರಹ್ಮ ಘೋಷಗಳಿಂದಲೇ ರಾಕ್ಷಸರನ್ನು ಪರಾಭವಗೊಳಿಸುತ್ತಾರೆ (೧೯–೨೦). ಬೇಸಿಗೆಯ ಮೋಡಗಳಂತೆ ರಾಕ್ಷಸರು ದಿಕ್ಕುದಿಕ್ಕಿಗೆ ಚದರಿಹೋಗುತ್ತಾರೆ. ಅಗ್ನಿಯಂತಿರುವ ಋಷಿಗಳ ಅಗ್ನಿ ಹೋತ್ರದಿಂದ ಜನಿಸುವ ಹೊಗೆಯು ದಶದಿಕ್ಕುಗಳನ್ನೂ ವ್ಯಾಪಿಸಿ, ರಾಕ್ಷಸರ ತೇಜಸ್ಸನ್ನು ಹೀರುತ್ತಿದೆ. ದೃಢವ್ರತರಾದ ಮುನಿಗಳು ಬೇರೆ ಬೇರೆ ದೇಶಗಳಲ್ಲಿ ಆಚರಿಸುವ ತೀವ್ರವಾದ ತಪಸ್ಸು ರಾಕ್ಷಸ ರನ್ನು ಸುಡುತ್ತಲಿದೆ (೨೧–೨೨).

ಚರ್ಯಮಾಣಂ ತಪಸ್ತೀವ್ರಂ ಸಂತಾಪಯತಿ ರಾಕ್ಷಸಾನ್ ।
ದೇವದಾನವಯಕ್ಷೇಭ್ಯೋ ಗೃಹೀತಶ್ಚ ವರಸ್ತ್ವಯಾ ॥ ೨೩

ಮಾನುಷಾ ವಾನರಾ ಋಕ್ಷಾ ಗೋಲಾಂಗೂಲಾ ಮಹಾಬಲಾಃ ।
ಬಲವಂತ ಇಹಾಗಮ್ಯ ಗರ್ಜಂತಿ ದೃಢವಿಕ್ರಮಾಃ ॥ ೨೪

ಉತ್ಪಾತಾನ್ ವಿವಿಧಾನ್ ದೃಷ್ಟ್ವಾ ಘೋರಾನ್ ಬಹುವಿಧಾಂಸ್ತಥಾ
ವಿನಾಶಮನುಪಶ್ಯಾಮಿ ಸರ್ವೇಷಾಂ ರಕ್ಷಸಾಮಹಮ್ ॥ ೨೫

ಖರಾಭಿಸ್ತನಿತಾ ಘೋರಾ ಮೇಘಾಃ ಪ್ರತಿಭಯಂಕರಾಃ ।
ಶೋಣಿತೇನಾಭಿವರ್ಷಂತಿ ಲಂಕಾಮುಷ್ಣೇನ ಸರ್ವತಃ ॥ ೨೬

ರುದತಾಂ ವಾಹನಾನಾಂ ಚ ಪ್ರಪತಂತ್ಯಸ್ರಬಿಂದವಃ ।
ಧ್ವಜಾ ಧ್ವಸ್ತಾ ವಿವರ್ಣಾಶ್ಚ ನ ಪ್ರಭಾಂತಿ ಯಥಾ ಪುರಾ ॥ ೨೭

ವ್ಯಾಲಾ ಗೋಮಾಯವೋ ಗೃಧ್ರಾ ವಾಶ್ಯಂತಿ ಚ ಸುಭೈರವಮ್ ।
ಪ್ರವಿಶ್ಯ ಲಂಕಾಮನಿಶಂ ಸಮವಾಯಾಂಶ್ಚ ಕುರ್ವತೇ ॥ ೨೮

ಕಾಲಿಕಾಃ ಪಾಂಡುರೈರ್ದಂತೈಃ ಪ್ರಹಸಂತ್ಯಗ್ರತಃ ಸ್ಥಿತಾಃ ।
ಸ್ತ್ರಿಯಃ ಸ್ವಪ್ನೇಷು ಮುಷ್ಣಂತ್ಯೋ ಗೃಹಾಣಿ ಪ್ರತಿಭಾಷ್ಯ ಚ ॥ ೨೯

---

ವತ್ಸ–ರಾವಣ, ದೇವದಾನವಯಕ್ಷಾದಿಗಳಿಂದ ಮರಣವಿಲ್ಲದಹಾಗೆ ನೀನು ವರವನ್ನು ಪಡೆದಿರುವುದೇನೋ ಸರಿ. ಆದರೆ ಈಗ ಬಂದಿರತಕ್ಕವರು ಮನುಷ್ಯರು, ವಾನರರು, ಸಿಂಗಳೀಕಗಳು, ಭಲ್ಲೂಕಗಳು ! ಎಲ್ಲರೂ ಬಲಶಾಲಿಗಳು ಸಾಹಸಿಗಳು. ಮನೆಯ ಬಾಗಿಲಿಗೆ ಬಂದು ಗರ್ಜಿಸುತ್ತಿದ್ದಾರೆ! (೨೩–೨೪). ಈಗ ಸಂಭವಿಸುತ್ತಿರುವ ಬಗೆಬಗೆಯಾದ ಭೀಕರ ಉತ್ಪಾತಗಳನ್ನು ಕಂಡಾಗ, ನಮ್ಮ ರಾಕ್ಷಸರೆಲ್ಲರಿಗೂ ವಿನಾಶಕಾಲ ಬಂದಿತೆಂದು ನನಗನ್ನಿಸುತ್ತದೆ. ಘೋರಾಕಾರದ ಮೋಡಗಳು ಭೀಕರವಾಗಿ ಗುಡುಗುತ್ತ ಲಂಕೆಯ ಸುತ್ತಲೂ ರಕ್ತದ ಬಿಸಿಮಳೆಯನ್ನು ಸುರಿಸುತ್ತಿವೆ (೧೫–೧೬). ಅಶ್ವಾದಿವಾಹನಗಳು ಕೆಟ್ಟದನಿಯಿಂದ ಕೂಗುತ್ತ ಕಣ್ಣೀರು ಸುರಿಸುತ್ತಿವೆ. ಧ್ವಜಪತಾಕೆಗಳು ಬಣ್ಣಗೆಟ್ಟಿವೆ. ನರಿ, ಹದ್ದು ಮೊದಲಾದ ಕ್ರೂರಜಂತುಗಳು ಭಯಂಕರವಾಗಿ ಅರಚುತ್ತಿವೆ. ನಗರದೊಳಗೆ ಬಂದು ಬಂದು ಗುಂಪುಗುಂಪಾಗಿ ಸಂಚರಿಸುತ್ತಿವೆ (೨೭–೨೮). ನಮಗೆ ಸ್ವಪ್ನಗಳಲ್ಲಿ ಕರಿಮೋರೆಯ ಕರಾಳಿಯರಾದ ಹೆಂಗಸರು

ಗೃಹಾಣಾಂ ಬಲಿಕರ್ಮಾಣಿ ಶ್ವಾನಃ ಪರ್ಯುಪಭುಂಜತೇ ।
ಖರಾ ಗೋಷು ಪ್ರಜಾಯಂತೇ ಮೂಷಕಾ ನಕುಲೇಷು ಚ ॥ ೩೦

ಮಾರ್ಜಾರಾ ದ್ವೀಪಿಭಿಃ ಸಾರ್ಧಂ ಸೂಕರಾಃ ಶುನಕೈಃ ಸಹ ।
ಕಿಂನರಾ ರಾಕ್ಷಸೈಶ್ಚಾಪಿ ಸಮೀಯುರ್ಮಾನುಷೈಃ ಸಹ ॥ ೩೧

ಪಾಂಡುರಾ ರಕ್ತಪಾದಾಶ್ಚ ವಿಹಂಗಾಃ ಕಾಲಚೋದಿತಾಃ ।
ರಾಕ್ಷಸಾನಾಂ ವಿನಾಶಾಯ ಕಪೋತಾ ವಿಚರಂತಿ ಚ ॥ ೩೨

ಚೀಚೀಕೂಚೀತಿ ವಾಶ್ಯಂತ್ಯಃ ಶಾರಿಕಾ ವೇಶ್ಮಸು ಸ್ಥಿತಾಃ ।
ಪತಂತಿ ಗ್ರಥಿತಾಶ್ಚಾಪಿ ನಿರ್ಜಿತಾಃ ಕಲಹೈಷಿಭಿಃ ॥ ೩೩

ಪಕ್ಷಿಣಶ್ಚ ಮೃಗಾಃ ಸರ್ವೇ ಪ್ರತ್ಯಾದಿತ್ಯಂ ರುದಂತಿ ಚ ।
ಕರಾಲೋ ವಿಕಟೋ ಮುಂಡಃ ಪುರುಷಃ ಕೃಷ್ಣಪಿಂಗಲಃ ॥ ೩೪

ಕಾಲೋ ಗೃಹಾಣಿ ಸರ್ವೇಷಾಂ ಕಾಲೇ ಕಾಲೇಽನ್ವವೇಕ್ಷತೇ ।
ಏತಾನ್ಯನ್ಯಾನಿ ದುಷ್ಟಾನಿ ನಿಮಿತ್ತಾನ್ಯುತ್ಪತಂತಿ ಚ ॥ ೩೫

---

ಕಾಣಿಸಿಕೊಳ್ಳುತ್ತಿದ್ದಾರೆ. ಅವರು ನಮ್ಮೆದುರಿಗೆ ನಿಂತು ಬಿಳಿಯ ಹಲ್ಲುಗಳನ್ನು ಕಿರಿದು ಪಕಪಕನೆ ನಗುವಂತೆಯೂ ನಮ್ಮನ್ನು ಅಣಕಿಸಿ ಮನೆಯಲ್ಲಿರುವ ವಸ್ತುಗಳನ್ನು ಕದ್ದೊಯ್ಯುವಂತೆಯೂ ಸ್ವಪ್ನಗಳು ಬೀಳುತ್ತಿವೆ (೨೯). ಮನೆಮನೆಗಳಲ್ಲಿ ಬಲಿಹರಣಕ್ಕಾಗಿ ನೀಡಿದ ಅನ್ನವನ್ನು ನಾಯಿಗಳು ತಿಂದುಹೋಗುತ್ತಿವೆ. ಹಸುಗಳ ಗರ್ಭದಿಂದ ಕತ್ತೆಗಳು ಹುಟ್ಟುತ್ತಿವೆ! ಮುಂಗಸಿಗಳಿಂದ ಇಲಿಗಳು ಹುಟ್ಟುತಿವೆ! (೩೦). ಬೆಕ್ಕುಗಳು ಹುಲಿಗಳೊಡನೆಯೂ ಹಂದಿಗಳು ನಾಯಿಗಳೊಡನೆಯೂ ಕಿನ್ನರರು ರಾಕ್ಷಸರೊಡನೆಯೂ ಮನುಷ್ಯರೊಡನೆಯೂ ಸ್ನೇಹದಿಂದ ಓಲಾಡುತ್ತಿದ್ದಾರೆ. ಕೆಂಪುಕಾಲಿನ ಬಿಳಿಯ ಪಾರಿವಾಳಗಳು ವಿಶೇಷವಾಗಿ ಹಾರಾಡುತ್ತಿವೆ. ಇವು ಕಾಲಪ್ರೇರಿತಗಳಾಗಿ ರಾಕ್ಷಸರ ವಿನಾಶವನ್ನು ಸೂಚಿಸುತ್ತವೆ (೩೧–೩೨). ಮನೆಗಳಲ್ಲಿ ಸಾಕಿರುವ ಸಾರಿಕಾಪಕ್ಷಿಗಳು ಚೀ–ಚೀ–ಕೂ–ಚೀ ಎಂದು ಒಂದೇಸಮನಾಗಿ ಕೂಗಿಕೊಳ್ಳುತ್ತಿವೆ. ಜಗಳವಾಡಲು ಬಂದ ಹಕ್ಕಿಗಳೊಡನೆ ಕಚ್ಚಾಡಿ ಸೋತುಬೀಳುತ್ತಿವೆ (೩೩). ಸಕಲ ಪಕ್ಷಿಗಳೂ ಮೃಗಗಳೂ ಸೂರ್ಯನ ಕಡೆಗೆ ತಿರುಗಿ ಅರಚಿಕೊಳ್ಳುತ್ತವೆ. ರಾವಣ, ಈಚೆಗೆ ಕರಾಳನೂ ವಿಕಟಾಂಗನೂ ಬೋಳುದಲೆಯವನೂ ಕೃಷ್ಣಪಿಂಗಳನೂ ಆದ ಒಬ್ಬ ಪುರುಷನು ಮನೆಮನೆಗಳಿಗೆ ಭೇಟಿಕೊಡುತ್ತಿದ್ದಾನೆ! (೩೪). ಅವನು

ವಿಷ್ಣುಂ ಮನ್ಯಾಮಹೇ ರಾಮಂ ಮಾನುಷಂ ದೇಹಮಾಸ್ಥಿತಮ್ ।
ನ ಹಿ ಮಾನುಷಮಾತ್ರೋಽಸೌ ರಾಘವೋ ದೃಢವಿಕ್ರಮಃ ॥ ೩೬

ಯೇನ ಬದ್ಧಃ ಸಮುದ್ರಸ್ಯ ಸ ಸೇತುಃ ಪರಮಾದ್ಭುತಃ ।
ಕುರುಷ್ವ ನರರಾಜೇನ ಸಂಧಿಂ ರಾಮೇಣ ರಾವಣ ॥ ೩೭.

ಜ್ಞಾತ್ವಾ ಪ್ರಧಾರ್ಯ ಕಾರ್ಯಾಣಿ ಕ್ರಿಯತಾಮಾಯತಿಕ್ಷಮಮ್ ॥

ಇದಂ ವಚಸ್ತತ್ರ ನಿಗದ್ಯ ಮಾಲ್ಯವಾನ್
ಪರೀಕ್ಷ್ಯ ರಕ್ಷೋಽಧಿಪತೇರ್ಮನಃ ಪುನಃ ।
ಅನುತ್ತಮೇಷೂತ್ತಮಪೌರುಷೋ ಬಲೀ
ಬಭೂವ ತೂಷ್ಣೀಂ ಸಮವೇಕ್ಷ್ಯ ರಾವಣಮ್ ॥ ೩೮

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚತ್ರಿಂಶಃ ಸರ್ಗಃ

---

ಕಾಲಪುರುಷನಾದಮೃತ್ಯುವೆಂದು ನನ್ನ ಎಣಿಕೆ. ಪ್ರತಿದಿನ ಸಾಯಂಕಾಲ ಎಲ್ಲರ ಮನೆಗಳನ್ನೂ ಇಣಿಕಿ ನೋಡುತ್ತಿದ್ದಾನೆ! ಈ ರೀತಿಯಲ್ಲಿ ಇನ್ನೂ ನಾನಾವಿಧವಾದ ಉತ್ಪಾತಗಳು ಸಂಭವಿಸುತ್ತಿವೆ (೩೫). 'ರಾವಣ, ರಾಮನು ಮನುಷ್ಯ ದೇಹದಲ್ಲಿ ಬಂದಿರುವ ಮಹಾವಿಷ್ಣುವೆಂದೇ ನಾವು ಭಾವಿಸುತ್ತೇವೆ. ಮಹಾ ಪರಾಕ್ರಮಿಯಾದ ಈತನು ಎಂದಿಗೂ ಮನುಷ್ಯಮಾತ್ರನಲ್ಲ. ಪರಮಾದ್ಭುತ ವಾದ ಸೇತುವೆಯನ್ನು ಸಮುದ್ರಕ್ಕೆ ಕಟ್ಟಿರುವನಲ್ಲ, ಇವನು ಕೇವಲ ಒಬ್ಬ ಮನುಷ್ಯನಾದಾನೆ? ಆದ್ದರಿಂದ, ರಾವಣ, ನರೇಂದ್ರನಾದ ರಾಮನೊಡನೆ ಸಂಧಿ ಯನ್ನು ಮಾಡಿಕೊ'* (೩೬-೩೭). ಈಗ ನಿನ್ನ ಕರ್ತವ್ಯವು ಯಾವುದೆಂಬುದನ್ನು ಸರಿಯಾಗಿ ವಿವೇಚಿಸಿ ಭವಿಷ್ಯದಲ್ಲಿ ಶ್ರೇಯಸ್ಸಾಗುವಂತಹುದನ್ನು ಮಾಡು'' ಎಂದು ಹೇಳಿದನು. ಸಚಿವೋತ್ತಮರು ನೆರೆದಿದ್ದ ಆ ಸಭೆಯಲ್ಲಿ, ಧೀರನೂ ವೀರನೂ ಆದ ಮಾಲ್ಯವಂತನು ರಾವಣನಿಗೆ ಮೇಲ್ಕಂಡಂತೆ ಬುದ್ಧಿವಾದವನ್ನು ಹೇಳಿದನು. ಅನಂತರ ರಾವಣನ ಮುಖಚಿಹ್ನೆಗಳಿಂದ ಅವನ ಇಂಗಿತವನ್ನರಿತು, ಇವನು ದಾರಿಗೆ ಬರತಕ್ಕವನಲ್ಲವೆಂದು ತಿಳಿದು ಮಾಲ್ಯವಂತನು ಸುಮ್ಮನಾದನು (೩೮).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಮೂವತ್ತೈದನೆಯ ಸರ್ಗ

---

* ೩೬-೩೭ನೆಯ ಶ್ಲೋಕಗಳು ಪ್ರಕ್ಷಿಪ್ತವಾಗಿವೆಯೆಂದು ಕತಕವ್ಯಾಖ್ಯಾನದಲ್ಲಿ ಹೇಳಿದೆ.

## ಷಟ್ತ್ರಿಂಶಃ ಸರ್ಗಃ

### ಪುರದ್ವಾರರಕ್ಷಾ

ತತ್ತು ಮಾಲ್ಯವತೋ ವಾಕ್ಯಂ ಹಿತಮುಕ್ತಂ ದಶಾನನಃ ।
ನ ಮರ್ಷಯತಿ ದುಷ್ಟಾತ್ಮಾ ಕಾಲಸ್ಯ ವಶಮಾಗತಃ ॥ ೧

ಸ ಬದ್ಧ್ವಾ ಭ್ರುಕುಟಿಂ ವಕ್ತ್ರೇ ಕ್ರೋಧಸ್ಯ ವಶಮಾಗತಃ ।
ಅಮರ್ಷಾತ್ಪರಿವೃತ್ತಾಕ್ಷೋ ಮಾಲ್ಯವಂತಮಥಾಬ್ರವೀತ್ ॥ ೨

ಹಿತಬುದ್ಧ್ಯಾ ಯದಹಿತಂ ವಚಃ ಪರುಷಮುಚ್ಯತೇ ।
ಪರಪಕ್ಷಂ ಪ್ರವಿಶ್ಯೈವ ನೈತಚ್ಛ್ರೋತ್ರ ಗತಂ ಮಮ ॥ ೩

ಮಾನುಷಂ ಕೃಪಣಂ ರಾಮಮೇಕಂ ಶಾಖಾಮೃಗಾಶ್ರಯಮ್ ।
ಸಮರ್ಥಂ ಮನ್ಯಸೇ ಕೇನ ತ್ಯಕ್ತಂ ಪಿತ್ರಾ ವನಾಲಯಮ್ ॥ ೪

### ಸರ್ಗ ೩೬

ರಾವಣನು ಮಾಲ್ಯವಂತನನ್ನು ಧಿಕ್ಕರಿಸಿ, ನಗರದ್ವಾರಗಳಿಗೆ
ರಕ್ಷಣಾವ್ಯವಸ್ಥೆಯನ್ನೇರ್ಪಡಿಸುವುದು.

ದುಷ್ಟಾತ್ಮನಾದ ದಶಕಂಠನು ಕಾಲವಶನಾದ್ದರಿಂದ ಮಾಲ್ಯವಂತನ ಹಿತೋಪದೇಶವು ಅವನಿಗೆ ಹಿಡಿಸಲಿಲ್ಲ. ಅವನು ಕೋಪಾವಿಷ್ಟನಾದನು. ಹುಬ್ಬುಗಳು ಗಂಟಿಕ್ಕಿದವು. ಆ ರಾವಣನು ಸಿಟ್ಟಿನಿಂದ ಕಣ್ಣಾಲಿಗಳನ್ನು ತಿರುಗಿಸುತ್ತ ಮಾಲ್ಯವಂತನನ್ನು ಕುರಿತು ಹೀಗೆಂದನು (೧–೨): ''ಮಾತಾಮಹ, ಹಿತವನ್ನು ಹೇಳುವೆನೆಂದಾಡಿದ ಅಹಿತವಾದ ನುಡಿ ಇದು! ಶತ್ರುಪಕ್ಷವನ್ನು ಸೇರಿದವನೇ ಆಡುವ ಕಠೋರವಾದ ಮಾತಿದು! ಇಂತಹ ಉಪದೇಶವು ನನ್ನ ಕಿವಿಯನ್ನೇರದು! ಮತಾಮಹ, ರಾಮನೆಂಬುವನು ಅತ್ಯಲ್ಪನಾದ ಒಬ್ಬ ಮನುಷ್ಯಮಾತ್ರನು. ತಂದೆಯಿಂದ ಧಿಕ್ಕೃತನಾಗಿ ಕಾಡಿಗೆ ಓಡಿ ಬಂದವನು ಮಂಗಗಳನ್ನು ಕಟ್ಟಿಕೊಂಡು ಬಂದಿರುವ ಆತನು ಸಮರ್ಥನೆಂದು ತಿಳಿಯಲು ನಿನಗೆ ಕಾರಣವಾದರೂ ಯಾವುದು? (೩–೪).

ರಕ್ಷಸಾಮೀಶ್ವರಂ ಮಾಂ ಚ ದೇವತಾನಾಂ ಭಯಂಕರಮ್ ।
ಹೀನಂ ಮಾಂ ಮನ್ಯಸೇ ಕೇನ ಹ್ಯಹೀನಂ ಸರ್ವವಿಕ್ರಮೈಃ ॥ ೫

ವೀರದ್ವೇಷೇಣ ವಾ ಶಂಕೇ ಪಕ್ಷಪಾತೇನ ವಾ ರಿಪೋಃ ।
ತ್ವಯಾಹಂ ಪರುಷಾಣ್ಯುಕ್ತಃ ಪರಪ್ರೋತ್ಸಾಹನೇನ ವಾ ॥ ೬

ಪ್ರಭವಂತಂ ಪದಸ್ಥಂ ಹಿ ಪರುಷಂ ಕೋಽಭಿಧಾಸ್ಯತಿ ।
ಪಂಡಿತಃ ಶಾಸ್ತ್ರ ತತ್ತ್ವಜ್ಞೋ ವಿನಾ ಪ್ರೋತ್ಸಾಹನಾದ್ರಿಪೋಃ ॥ ೭

ಆನೀಯ ಚ ವನಾತ್ಸೀತಾಂ ಪದ್ಮಹೀನಾಮಿವ ಶ್ರಿಯಮ್ ।
ಕಿಮರ್ಥಂ ಪ್ರತಿದಾಸ್ಯಾಮಿ ರಾಘವಸ್ಯ ಭಯಾದಹಮ್ ॥ ೮

ವೃತಂ ವಾನರಕೋಟೀಭಿಃ ಸಸುಗ್ರೀವಂ ಸಲಕ್ಷ್ಮಣಮ್ ।
ಪಶ್ಯ ಕೈಶ್ಚಿದಹೋಭಿಸ್ತ್ವಂ ರಾಘವಂ ನಿಹತಂ ಮಯಾ ॥ ೯

---

ಸಮಸ್ತ ರಾಕ್ಷಸರಿಗೂ ಒಡೆಯ ನಾನು! ದೇವತೆಗಳು ತತ್ತರಿಸುವಂತೆ ಹೆದರಿಸಿ ನಡುಗಿಸಿದವನು ನಾನು ! ಸಕಲ ಸಾಹಸಪರಾಕ್ರಮಗಳೂ ನನ್ನಲ್ಲಿ ನೆಲಸಿವೆ! ಇಂಥ ನನ್ನನ್ನು ರಾಮನಿಗಿಂತ ಕಡೆಗಣಿಸಲು ಕಾರಣವಾದರೂ ಯಾವುದೂ? (೫). ನಮ್ಮವರಲ್ಲಿ ಇಂಥ ವೀರನೊಬ್ಬನಿರುವನೆಂಬ ಅಸೂಯೆ ಕಾರಣವೊ? ಅಥವಾ ಶತ್ರುವಿನ ವಿಷಯದಲ್ಲಿ ಪಕ್ಷಪಾತವೊ? ನನಗೆ ಈ ಕಠೋರವಾದ ನುಡಿಗಳನ್ನಾಡಿದೆಯಲ್ಲ, ವೈರಿಗಳು ನಿನ್ನನ್ನು ಎತ್ತಿಗಟ್ಟಿ ಪುಸಲಾಯಿಸಿದರೋ ಹೇಗೆ? (೬). ವೈರಿಗಳ ಪ್ರೋತ್ಸಾಹವಿಲ್ಲದಿದ್ದ ಪಕ್ಷದಲ್ಲಿ ಉನ್ನತಪದಾರೂಢನಾದ ಪ್ರಭುವಿನೆದುರಿಗೆ ಈ ರೀತಿಯಲ್ಲಿ ಪರುಷವಾಕ್ಯವನ್ನಾಡಲು ಯಾವನಿಗೆ ಎದೆಗಾರಿಕೆ ಇದ್ದೀತು? ಶಾಸ್ತ್ರತತ್ವಗಳನ್ನು ಬಲ್ಲ ಯಾವ ಪಂಡಿತನು ಹೀಗೆ ಹೇಳಿಯಾನು? (೭). ಕೈಯಲ್ಲಿ ಕಮಲವೊಂದಿಲ್ಲದ ಸಾಕ್ಷಾಲ್ಲಲಕ್ಷ್ಮಿಯಂತೆ ಪರಮಸುಂದರಿಯಾದ ಸೀತೆಯನ್ನು ಕಾಡಿನಿಂದ (ಕಷ್ಟಪಟ್ಟು) ತಂದು, ಈಗ ಏಕೆ ಹಿಂದಕ್ಕೆ ಕೊಟ್ಟೇನು! ರಾಮನಿಗೆ ಹೆದರಿ ಕೊಡಲೆ? ಮಾತಾಮಹ, ನೋಡುತ್ತಿರು, ಕೋಟಿಗಟ್ಟಲೆ ಕಪಿಗಳನ್ನು ಕಟ್ಟಿಕೊಂಡು ಬಂದಿರುವ ರಾಮನನ್ನೂ ಸುಗ್ರೀವಲಕ್ಷ್ಮಣರನ್ನೂ ಕೆಲವೇ ದಿನಗಳಲ್ಲಿ ಕತ್ತರಿಸಿ ಕೊಂದುಹಾಕುವೆನು! (೮–೯).

ದ್ವಂದ್ವೇ ಯಸ್ಯ ನ ತಿಷ್ಠಂತಿ ದೈವತಾನ್ಯಪಿ ಸಂಯುಗೇ ।
ಸ ಕಸ್ಮಾದ್ರಾವಣೋ ಯುದ್ಧೇ ಭಯಮಾಹಾರಯಿಷ್ಯತಿ ॥ ೧೦

ದ್ವಿಧಾ ಭಜ್ಯೇಯಮಪ್ಯೇವಂ ನ ನಮೇಯಂ ತು ಕಸ್ಯಚಿತ್ ।
ಏಷ ಮೇ ಸಹಜೋ ದೋಷಃ ಸ್ವಭಾವೋ ದುರತಿಕ್ರಮಃ ॥ ೧೧

ಯದಿ ತಾವತ್ಸಮುದ್ರೇ ತು ಸೇತುರ್ಬದ್ಧೋ ಯದೃಚ್ಛಯಾ ।
ರಾಮೇಣ ವಿಸ್ಮಯಃ ಕೋಽತ್ರ ಯೇನ ತೇ ಭಯಮಾಗತಮ್ ॥ ೧೨

ಸ ತು ತೀರ್ತ್ವಾರ್ಣವಂ ರಾಮಃ ಸಹ ವಾನರಸೇನಯಾ ।
ಪ್ರತಿಜಾನಾಮಿ ತೇ ಸತ್ಯಂ ನ ಜೀವನ್ ಪ್ರತಿಯಾಸ್ಯತಿ ॥ ೧೩

ಏವಂ ಬ್ರುವಾಣಂ ಸಂರಬ್ಧಂ ರುಷ್ಟಂ ವಿಜ್ಞಾಯ ರಾವಣಮ್ ।
ವ್ರೀಡಿತೋ ಮಾಲ್ಯವಾನ್ ವಾಕ್ಯಂ ನೋತ್ತರಂ ಪ್ರತ್ಯಪದ್ಯತ ॥ ೧೪

ಚಿಂತಯನ್ ಮನಸಾ ತಸ್ಯ ದುಷ್ಕರ್ಮಪರಿಪಾಕಜಮ್ ।
ಪಾಪಂ ನಾಶಯತಿ ಹ್ಯೇನಂ ಸ್ವಸ್ಯ ರಾಷ್ಟ್ರಸ್ಯ ರಾಕ್ಷಸೈಃ ॥ ೧೫

---

ಯಾವನು ದ್ವಂದ್ವಯುದ್ಧಕ್ಕಿಳಿದರೆ ದೇವತೆಗಳೂ ಎದುರಿಗೆ ನಿಲ್ಲಲಾರರೋ ಅಂಥ ಈ ರಾವಣನು ರಾಮನೊಡನೆ ಯುದ್ಧಕ್ಕಂಜುವನೆ? ಸೆಟೆದು ನಿಂತು ಎರಡು ಸೀಳಾಗಿ ಹೋದೇನೇ ಹೊರತು, ಎಂದಿಗೂ ಇನ್ನೊಬ್ಬನಿಗೆ ನಾನು ತಲೆ ಬಾಗಿಸುವವನಲ್ಲ! ಇದು ನನ್ನ ಹುಟ್ಟು ಗುಣ! ಹುಟ್ಟುಗುಣವನ್ನು ಮೀರಲು ಯಾರಿಗೂ ಸಾಧ್ಯವಿಲ್ಲ! (೧೦–೧೧). ಹೇಗೋ ಸಮುದ್ರದಲ್ಲಿ ಸೇತುವೆಯೊಂದನ್ನು ರಾಮನು ಕಟ್ಟಿದ ಮಾತ್ರಕ್ಕೆ, ಅಚ್ಚರಿಗೊಳ್ಳುವುದಾದರೂ ಏನಿದೆ? ಅಷ್ಟರಿಂದಲೇ ನೀನು ಹೆದರಿಬಿಟ್ಟಯಲ್ಲ! ರಾಮನು ವಾನರಸೇನೆಯೊಡನೆ ಕಡಲನ್ನು ದಾಟಿಬಂದರೆ ಬರಲಿ, ಶಪಥಮಾಡಿ ಹೇಳುವೆನು, ಕೇಳು: ಅವನು ಜೀವಸಹಿತ ಹಿಂದಿರುಗಿ ಹೋಗುವುದಿಲ್ಲ; ಇದು ಸತ್ಯ'' ಎಂದು ಅರ್ಭಟಿಸಿದನು (೧೨–೧೩). ಹೀಗೆ ರಾವಣನು ರೋಷಾವಿಷ್ಟನಾಗಿ ಉದ್ವೇಗದಿಂದ ಮಾತಾಡುತ್ತಿರಲು, ಮಾಲ್ಯವಂತನು ತನ್ನ ಮಾತಿಗೆ ಬೆಲೆಯಿಲ್ಲವೆಂದು ನಾಚಿ ಪ್ರತಿಯಾಗಿ ಹೇಳದೆ ಸುಮ್ಮನಾದನು (೧೪). ''ಇದೆಲ್ಲವೂ ಈತನ ದುಷ್ಕೃತ್ಯದ ಪರಿಪಾಕ. ಇವನ ಪಾಪವು ಇವನನ್ನೂ ರಾಷ್ಟ್ರದ ಪ್ರಜೆಗಳಾದ ರಾಕ್ಷಸರನ್ನೂ

ಜಯಾ ಶಿಷಾ ಚ ರಾಜಾನಂ ವರ್ಧಯಿತ್ವಾ ಯಥೋಚಿತಮ್ ।
ಮಾಲ್ಯವಾನಭ್ಯನುಜ್ಞಾತೋ ಜಗಾಮ ಸ್ವಂ ನಿವೇಶನಮ್ ॥ ೧೬

ರಾವಣಸ್ತು ಸಹಾಮಾತ್ಯೋ ಮಂತ್ರಯಿತ್ವಾ ವಿಮೃಶ್ಯ ಚ ।
ಲಂಕಾಯಾಮತುಲಾಂ ಗುಪ್ತಿಂ ಕಾರಯಾಮಾಸ ರಾಕ್ಷಸಃ ॥ ೧೭

ಸ ವ್ಯಾದಿದೇಶ ಪೂರ್ವಸ್ಯಾಂ ಪ್ರಹಸ್ತಂ ದ್ವಾರಿ ರಾಕ್ಷಸಮ್ ।
ದಕ್ಷಿಣಸ್ಯಾಂ ಮಹಾವೀರ್ಯೌ ಮಹಾಪಾರ್ಶ್ವಮಹೋದರೌ ॥ ೧೮

ವ್ಯಾದಿದೇಶ ಮಹಾಕಾಯೌ ರಾಕ್ಷಸೈರ್ಬಹುಭಿರ್ವೃತೌ ।
ಪಶ್ಚಿಮಾಯಾಮಥೋ ದ್ವಾರಿ ಪುತ್ರಮಿಂದ್ರಜಿತಂ ತಥಾ ॥ ೧೯

ವ್ಯಾದಿದೇಶ ಮಹಾಮಾಯಂ ಬಹುಭೀ ರಾಕ್ಷಸೈರ್ವೃತಮ್ ।
ಉತ್ತರಸ್ಯಾಂ ಪುರದ್ವಾರಿ ವ್ಯಾದಿಶ್ಯ ಶುಕಸಾರಣೌ ॥ ೨೦

ಸ್ವಯಂ ಚಾತ್ರ ಭವಿಷ್ಯಾಮಿ ಮಂತ್ರಿಣಸ್ತಾನುವಾಚ ಹ ।
ರಾಕ್ಷಸಂ ತು ವಿರೂಪಾಕ್ಷಂ ಮಹಾವೀರ್ಯಪರಾಕ್ರಮಮ್ ॥ ೨೧

---

ನಾಶಗೊಳಿಸುವುದು'' ಎಂದು ಮನಸ್ಸಿನಲ್ಲಿಯೇ ಚಿಂತಿಸುತ್ತ ಮಾಲ್ಯವಂತನು ಹೊರಡಲನುವಾದನು. ಅವನು ಯಥೋಚಿತವಾಗಿ 'ಮಹಾರಾಜ, ಜಯವಾಗಲಿ!' ಎಂದು ರಾವಣನನ್ನು ಅಭಿನಂದಿಸಿ ಅನುಮತಿಯನ್ನು ಪಡೆದು ತನ್ನ ಮನೆಗೆ ಹೊರಟುಹೋದನು (೧೫–೧೬). ಇತ್ತ ರಾವಣನು ಅಮಾತ್ಯರೊಡನೆ ಸಮಾಲೋಚಿಸಿ, ಲಂಕಾನಗರಕ್ಕೆ ಪ್ರಬಲವಾದ ರಕ್ಷಣಾವ್ಯವಸ್ಥೆಯನ್ನೇರ್ಪಡಿಸಿದನು. ನಗರದ ಪೂರ್ವದ್ವಾರದಲ್ಲಿ ಪ್ರಹಸ್ತನೂ ದಕ್ಷಿಣದ್ವಾರದಲ್ಲಿ ಮಹಾವೀರರಾದ ಮಹಾಪಾರ್ಶ್ವ ಮಹೋದರರೂ ಬಹುಮಂದಿ ರಾಕ್ಷಸಯೋಧರೊಡನೆ ಕಾವಲಾಗಿರಬೇಕೆಂದು ಆಜ್ಞಾಪಿಸಿದನು (೧೭–೧೮). ತನ್ನ ಪುತ್ರನೂ ಮಹಾಮಾಯಾವಿಯೂ ಆದ ಇಂದ್ರಜೀತುವು ಪಶ್ಚಿಮದ್ವಾರವನ್ನು ನೋಡಿಕೊಳ್ಳಬೇಕೆಂದು ಗೊತ್ತುಮಾಡಿದನು. ಉತ್ತರದ್ವಾರದಲ್ಲಿ ಶುಕಸಾರಣರು ಇರಬೇಕೆಂದು ಕಟ್ಟುಮಾಡಿ, ಅಲ್ಲಿಯೇ ತಾನೂ ಇರುವುದಾಗಿ ತಿಳಿಸಿದನು (೧೯–೨೦). ನಗರದ ನಡುವೆ ಸೇನಾನಿವೇಶದಲ್ಲಿ ಪರಾಕ್ರಮಿಯಾದ ವಿರೂಪಾಕ್ಷನು ರಾಕ್ಷಸಯೋಧರೊಡನೆ ಸಜ್ಜಾಗಿ ನಿಂತಿರಬೇಕೆಂದು ವಿಧಿಸಿದನು.

ಮಧ್ಯಮೇಽಸ್ಥಾಪಯದ್ಗುಲ್ಮೇ ಬಹುಭಿಃ ಸಹ ರಾಕ್ಷಸೈಃ ।
ಏವಂ ವಿಧಾನಂ ಲಂಕಾಯಾಃ ಕೃತ್ವಾ ರಾಕ್ಷಸಪುಂಗವಃ ॥ ೨೨

ಕೃತಕೃತ್ಯಮಿವಾತ್ಮಾನಂ ಮನ್ಯತೇ ಕಾಲಚೋದಿತಃ ॥

ವಿಸರ್ಜಯಾಮಾಸ ತತಃ ಸ ಮಂತ್ರಿಣೋ
ವಿಧಾನಮಾಜ್ಞಾಪ್ಯ ಪುರಸ್ಯ ಪುಷ್ಕಲಮ್ ।
ಜಯಾಶಿಷಾ ಮಂತ್ರಿಗಣೇನ ಪೂಜಿತೋ
ವಿವೇಶ ಚಾಂತಃಪುರಮೃದ್ಧಿಮನ್ಮಹತ್ ॥ ೨೩

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಟ್ತ್ರಿಂಶಃ ಸರ್ಗಃ

---

ಹೀಗೆ ರಾಕ್ಷಸರಾಜನು ಲಂಕೆಯ ರಕ್ಷಣಾವ್ಯವಸ್ಥೆಯನ್ನೇರ್ಪಡಿಸಿ, ಕಾಲ ಚೋದಿತನಾದ್ದರಿಂದ ತನ್ನ ಕಾರ್ಯವು ಸಿದ್ಧಿಸಿತೆಂದು ತಿಳಿದುಕೊಂಡನು (೨೧–೨೨). ರಾವಣನು ಮಂತ್ರಿಗಳಿಗೆ ಇನ್ನೂ ಕೆಲವು ಸೂಚನೆಗಳನ್ನಿತ್ತು ಕಾರ್ಯನಿರತರಾಗಿರುವಂತೆ ವಿಧಿಸಿ, ಅಲ್ಲಿಂದ ಹೋಗಲು ಅನುಜ್ಞೆಯನ್ನಿತ್ತನು. ಅವರೆಲ್ಲರೂ "ಮಹಾರಾಜನಿಗೆ ಜಯವಾಗಲಿ!" ಎಂದು ಅಭಿನಂದಿಸಿದರು. ಆಮೇಲೆ ರಾವಣನು ವೈಭವೋಪೇತವಾದ ತನ್ನ ಅಂತಃಪುರವನ್ನು ಪ್ರವೇಶಿಸಿದನು (೨೩).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಮೂವತ್ತಾರನೆಯ ಸರ್ಗ

---

## ಸಪ್ತತ್ರಿಂಶಃ ಸರ್ಗಃ

### ರಾಮಗುಲ್ಮವಿಭಾಗಃ

ನರವಾನರರಾಜೌ ತೌ ಸ ಚ ವಾಯುಸುತಃ ಕಪಿಃ ।
ಜಾಂಬವಾನೃಕ್ಷರಾಜಶ್ಚ ರಾಕ್ಷಸಶ್ಚ ವಿಭೀಷಣಃ ॥ ೧

ಅಂಗದೋ ವಾಲಿಪುತ್ರಶ್ಚ ಸೌಮಿತ್ರಿಃ ಶರಭಃ ಕಪಿಃ ।
ಸುಷೇಣಃ ಸಹದಾಯಾದೋ ಮೈಂದೋ ದ್ವಿವಿದ ಏವ ಚ ॥ ೨

ಗಜೋ ಗವಾಕ್ಷೋ ಗವಯೋ ನಲೋಽಥ ಪನಸಸ್ತಥಾ ।
ಅಮಿತ್ರವಿಷಯಂ ಪ್ರಾಪ್ತಾಃ ಸಮವೇತಾಃ ಸಮರ್ಥಯನ್ ॥ ೩

ಇಯಂ ಸಾ ಲಕ್ಷ್ಯತೇ ಲಂಕಾ ಪುರೀ ರಾವಣಪಾಲಿತಾ ।
ಸಾಸುರೋರಗಗಂಧರ್ವೈರಮರೈರಪಿ ದುರ್ಜಯಾ ॥ ೪

ಕಾರ್ಯಸಿದ್ಧಿಂ ಪುರಸ್ಕೃತ್ಯ ಮಂತ್ರಯಧ್ವಂ ವಿನಿರ್ಣಯೇ ।
ನಿತ್ಯಂ ಸಂನಿಹಿತೋ ಹ್ಯತ್ರ ರಾವಣೋ ರಾಕ್ಷಸಾಧಿಪಃ ॥ ೫

### ಸರ್ಗ ೩೭

ರಾವಣನು ಏರ್ಪಡಿಸಿದ ನಗರರಕ್ಷಣಾವಿಧಾನವನ್ನು ವಿಭೀಷಣನು ಶ್ರೀರಾಮನಿಗೆ ತಿಳಿಸುವುದು, ಲಂಕಾದ್ವಾರಗಳನ್ನು ಆಕ್ರಮಿಸಲು ಶ್ರೀರಾಮನೂ ಬೇರೆ ಬೇರೆ ವಾನರಯೋಧರನ್ನು ನಿಯಮಿಸುವುದು.

ಇತ್ತಲಾಗಿ ಶ್ರೀರಾಮ, ಸುಗ್ರೀವ, ಹನುಮಂತ, ಜಾಂಬವಂತ, ವಿಭೀಷಣ, ಅಂಗದ, ಲಕ್ಷ್ಮಣ, ಶರಭ, ಸುಷೇಣ, ಸುಷೇಣನ ಮಗ, ಮೈಂದ, ದ್ವಿವಿದ, ಗಜ, ಗವಾಕ್ಷ, ಗವಯ, ನಳ, ಪನಸ – ಮೊದಲಾದ ನಾಯಕರು ಶತ್ರುರಾಜ್ಯವಾದ ಲಂಕೆಯ ಬಳಿಯಲ್ಲಿ ಮುಂದಿನ ಕರ್ತವ್ಯವನ್ನು ಕುರಿತು ಸಮಾಲೋಚಿಸುತ್ತಿದ್ದರು (೧–೩). ''ರಾವಣಪಾಲಿತವಾದ ಲಂಕಾನಗರಿಯು ಎದುರಿಗೆ ಕಾಣುತ್ತಿದೆ! ಅಸುರೋರಗಗಂಧರ್ವರಿಗೂ ದೇವತೆಗಳಿಗೂ ದುರ್ಜಯವೆನಿಸಿಕೊಂಡಿದೆ. ಈಗ ನಮ್ಮ ಕಾರ್ಯಸಿದ್ಧಿಯಾಗಲು ಏನೇನು ಮಾಡಬೇಕೆಂಬುದನ್ನು ಆಲೋಚಿಸಿ ನಿರ್ಣಯಿಸಿರಿ. ರಾಕ್ಷಸೇಂದ್ರನಾದ ರಾವಣನು ಇಲ್ಲಿಯೇ ಅಲ್ಲವೇ ನೆಲೆಸಿರುವುದು!'' ಎಂದು ಮಾತಾಡಿಕೊಳ್ಳುತ್ತಿದ್ದರು (೪–೫).

ತಥಾ ತೇಷು ಬ್ರುವಾಣೇಷು ರಾವಣಾವರಜೋಽಬ್ರವೀತ್ ।
ವಾಕ್ಯಮಗ್ರಾಮ್ಯ ಪದವತ್ಪುಷ್ಕಲಾರ್ಥಂ ವಿಭೀಷಣಃ ॥ ೬

ಅನಲಃ ಶರಭಶ್ಚೈವ ಸಂಪಾತಿಃ ಪ್ರಘಸಸ್ತಥಾ ।
ಗತ್ವಾ ಲಂಕಾಂ ಮಮಾಮಾತ್ಯಾಃ ಪುರೀಂ ಪುನರಿಹಾಗತಾಃ ॥ ೭

ಭೂತ್ವಾ ಶಕುನಯಃ ಸರ್ವೇ ಪ್ರವಿಷ್ಟಾಶ್ಚ ರಿಪೋರ್ಬಲಮ್ ।
ವಿಧಾನಂ ವಿಹಿತಂ ಯಚ್ಚ ತದ್ದೃಷ್ಟ್ವಾ ಸಮುಪಸ್ಥಿತಾಃ ॥ ೮

ಸಂವಿಧಾನಂ ಯದಾಹುಸ್ತೇ ರಾವಣಸ್ಯ ದುರಾತ್ಮನಃ ।
ರಾಮ ತದ್ಬ್ರುವತಃ ಸರ್ವಂ ಯಥಾತಥ್ಯೇನ ಮೇ ಶೃಣು ॥ ೯

ಪೂರ್ವಂ ಪ್ರಹಸ್ತಃ ಸಬಲೋ ದ್ವಾರಮಾಸಾದ್ಯ ತಿಷ್ಠತಿ ।
ದಕ್ಷಿಣಂ ಚ ಮಹಾವೀರ್ಯೌ ಮಹಾಪಾರ್ಶ್ವಮಹೋದರೌ ॥ ೧೦

ಇಂದ್ರಜಿತ್ಪಶ್ಚಿಮದ್ವಾರಂ ರಾಕ್ಷಸೈರ್ಬಹುಭಿರ್ವೃತಃ ।
ಪಟ್ಟಸಾಸಿಧನುಷ್ಮದ್ಭಿಃ ಶೂಲಮುದ್ಗರಪಾಣಿಭಿಃ ॥ ೧೧

ನಾನಾಪ್ರಹರಣೈಃ ಶೂರೈರಾವೃತೋ ರಾವಣಾತ್ಮಜಃ ।
ರಾಕ್ಷಸಾನಾಂ ಸಹಸ್ರೈಸ್ತು ಬಹುಭಿಃ ಶಸ್ತ್ರಪಾಣಿಭಿಃ ॥ ೧೨

---

ಆಗ ವಿಭೀಷಣನು (ಎಲ್ಲರಿಗೂ ಸರಿಯಾಗಿ ತಿಳಿಯಲೆಂದು) ಗ್ರಾಮೀಣ ಪದಗಳಿಲ್ಲದೆ ಸ್ಪಷ್ಟವಾಗಿಯೂ ಅರ್ಥವತ್ತಾಗಿಯೂ ಇರುವ ಭಾಷೆಯಿಂದ ಹೀಗೆಂದನು: ''ಶ್ರೀರಾಮ, ನನ್ನ ಸಚಿವರು ಈಗ ಲಂಕಾನಗರದೊಳಗೆ ಹೋಗಿ ಬಂದಿದ್ದಾರೆ. ಅನಲ, ಶರಭ, ಸಂಪಾತಿ, ಪ್ರಘಸ–ಈ ನಾಲ್ವರು ಪಕ್ಷಿಗಳ ರೂಪ ವನ್ನು ಧರಿಸಿ ವೈರಿಬಲವನ್ನು ಪ್ರವೇಶಿಸಿದ್ದರು. ಲಂಕೆಯಲ್ಲಿ ನಡೆದಿರುವ ರಕ್ಷಣಾ ವಿಧಾನವನ್ನು ನೋಡಿಬಂದಿದ್ದಾರೆ (೬–೮). ದುರಾತ್ಮನಾದ ರಾವಣನು ಯಾವ ಬಗೆಯಲ್ಲಿ ರಕ್ಷಣಾವ್ಯವಸ್ಥೆಯನ್ನು ಏರ್ಪಡಿಸಿರುವನೆಂಬುದನ್ನು ಇವರು ನನಗೆ ಹೇಳಿದ್ದಾರೆ. ಅದನ್ನು ಯಥಾರ್ಥವಾಗಿ ಹೇಳುವೆನು, ಕೇಳು: ಪ್ರಹಸ್ತನು ಸೇನಾಸಮೇತನಾಗಿ ಪೂರ್ವದ್ವಾರದಲ್ಲಿ ನಿಂತಿದ್ದಾನೆ. ಮಹಾಪಾರ್ಶ್ವ, ಮಹೋದರ ಎಂಬ ಇಬ್ಬರು ಶೂರರು ತಮ್ಮ ಪಡೆಗಳೊಡನೆ ದಕ್ಷಿಣದ ಬಾಗಿಲ ಲ್ಲಿದ್ದಾರೆ. (೯–೧೦). ರಾವಣನ ಮಗನಾದ ಇಂದ್ರಜಿತುವು ಪಶ್ಚಿಮದ ಬಾಗಿಲ ಲ್ಲಿದ್ದಾನೆ. ಪಟ್ಟಸ, ಖಡ್ಗ, ಧನುಸ್ಸು, ಶೂಲ, ಮುದ್ಗರಾದ್ಯಾಯುಧಗಳನ್ನು

ಯುಕ್ತಃ ಪರಮಸಂವಿಗ್ನೋ ರಾಕ್ಷಸೈರ್ಬಹುಭಿರ್ವೃತಃ ।
ಉತ್ತರಂ ನಗರದ್ವಾರಂ ರಾವಣಃ ಸ್ವಯಮಾಸ್ಥಿತಃ ॥ ೧೩

ವಿರೂಪಾಕ್ಷಸ್ತು ಮಹತಾ ಶೂಲಖಡ್ಗ ಧನುಷ್ಮತಾ ।
ಬಲೇನ ರಾಕ್ಷಸೈಃ ಸಾರ್ಧಂ ಮಧ್ಯಮಂ ಗುಲ್ಮಮಾಸ್ಥಿತಃ ॥ ೧೪

ಏತಾನೇವಂವಿಧಾನ್ ಗುಲ್ಮಾನ್ ಲಂಕಾಯಾಂ ಸಮುದೀಕ್ಷ್ಯ ತೇ ।
ಮಾಮಕಾಃ ಸಚಿವಾಃ ಸರ್ವೇ ಪುನಃ ಶೀಘ್ರಮಿಹಾಗತಾಃ ॥ ೧೫

ಗಜಾನಾಂ ಚ ಸಹಸ್ರಂ ಚ ರಥಾನಾಮಯುತಂ ಪುರೇ ।
ಹಯಾನಾಮಯುತೇ ದ್ವೇ ಚ ಸಾಗ್ರಕೋಟಿಶ್ಚ ರಕ್ಷಸಾಮ್ ॥ ೧೬

ವಿಕ್ರಾಂತಾ ಬಲವಂತಶ್ಚ ಸಂಯುಗೇಷ್ವಾತತಾಯಿನಃ ।
ಇಷ್ಟಾ ರಾಕ್ಷಸರಾಜಸ್ಯ ನಿತ್ಯಮೇತೇ ನಿಶಾಚರಾಃ ॥ ೧೭

ಏಕೈಕಸ್ಯಾತ್ರ ಯುದ್ಧಾರ್ಥೇ ರಾಕ್ಷಸಸ್ಯ ವಿಶಾಂಪತೇ ।
ಪರಿವಾರಃ ಸಹಸ್ರಾಣಾಂ ಸಹಸ್ರ ಮುಪತಿಷ್ಠತೇ ॥ ೧೮

---

ಧರಿಸಿದ ಶೂರರಾದ ಬಹುಮಂದಿ ರಾಕ್ಷಸರು ಅವನಿಗೆ ಬೆಂಬಲವಾಗಿದ್ದಾರೆ (೧೧–೧೨). ನಗರದ ಉತ್ತರದ್ವಾರವನ್ನು ಸ್ವಯಂ ರಾವಣನೇ ನೋಡಿಕೊಳ್ಳುತ್ತಿದ್ದಾನೆ! ಶಸ್ತ್ರಪಾಣಿಗಳಾದ ಶುಕಸಾರಣಾದಿ ಬಹುಮಂದಿ ರಾಕ್ಷಸರೊಡನೆ ಅವನು ರೋಷಾವಿಷ್ಟನಾಗಿ ನಿಂತಿದ್ದಾನೆ. ವಿರೂಪಾಕ್ಷನೆಂಬವನು ಶೂಲಖಡ್ಗ ಧನುರ್ಧಾರಿಗಳಾದ ರಾಕ್ಷಸರ ಪಡೆಯೊಡನೆ ನಗರಮಧ್ಯದಲ್ಲಿರುವ ಸೇನಾ ನಿವೇಶನದಲ್ಲಿ ಸನ್ನದ್ಧನಾಗಿದ್ದಾನೆ (೧೩–೧೪). ಹೀಗೆ ನಾನಾಬಗೆಯ ಪಡೆಗಳು ಲಂಕಯಲ್ಲಿ ಸಜ್ಜಾಗಿರುವುದನ್ನು ನನ್ನ ಸಚಿವರು ಕಣ್ಣಾರೆ ನೋಡಿ ಇಲ್ಲಿಗೆ ಬಂದಿದ್ದಾರೆ. ಒಂದು ಸಾವಿರ ಗಜಾರೂಢರಾದ ಯೋಧರೂ ಹತ್ತುಸಾವಿರ ರಥಿಕರೂ ಇಪ್ಪತ್ತುಸಾವಿರ ರಾವುತರೂ ಒಂದು ಕೋಟಿಗಿಂತ ಹೆಚ್ಚು ಕಾಲಾಳುಗಳು ಸಜ್ಜಾಗಿ ನಿಂತಿದ್ದಾರೆ (೧೫–೧೬). ಶಸ್ತ್ರಪಾಣಿಗಳಾದ ಆ ರಾಕ್ಷಸರೆಲ್ಲರೂ ರಾವಣನಿಗೆ ಬಹಳ ಆಪ್ತರಾದವರು. ಯುದ್ಧದಲ್ಲಿ ಬಲಾಢ್ಯರು; ಸಾಹಸಿಗಳು. ಶ್ರೀರಾಮ, ಇಷ್ಟೇ ಅಲ್ಲ, ಈಗ ನಾನು ಹೇಳಿದ ಒಬ್ಬೊಬ್ಬ ರಾಕ್ಷಸನ ವಶದಲ್ಲಿ ಹತ್ತು ಲಕ್ಷ ರಾಕ್ಷಸರ ಒಂದೊಂದು ಪಡೆ ಇದೆ!'' ಎಂದನು (೧೭–೧೮).

ಏತಾಂ ಪ್ರವೃತ್ತಿಂ ಲಂಕಾಯಾಂ ಮಂತ್ರಿಪ್ರೋಕ್ತಾಂ ವಿಭೀಷಣಃ ।
ಏವಮುಕ್ತ್ವಾ ಮಹಾಬಾಹೂ ರಾಕ್ಷಸಾಂಸ್ತಾನದರ್ಶಯತ್ ॥ ೧೯

ಲಂಕಾಯಾಂ ಸಚಿವೈಃ ಸರ್ವಂ ರಾಮಾಯ ಪ್ರತ್ಯವೇದಯತ್ ।
ರಾಮಂ ಕಮಲಪತ್ರಾಕ್ಷಮಿದಮುತ್ತರಮಬ್ರವೀತ್ ॥ ೨೦

ರಾವಣಾವರಜಃ ಶ್ರೀಮಾನ್ ರಾಮಪ್ರಿಯಚಿಕೀರ್ಷಯಾ ।
ಕುಬೇರಂ ತು ಯದಾ ರಾಮ ರಾವಣಃ ಪ್ರತ್ಯಯುಧ್ಯತ ॥ ೨೧

ಷಷ್ಟಿಃ ಶತಸಹಸ್ರಾಣಿ ತದಾ ನಿರ್ಯಾಂತಿ ರಾಕ್ಷಸಾಃ ।
ಪರಾಕ್ರಮೇಣ ವೀರ್ಯೇಣ ತೇಜಸಾ ಸತ್ತ್ವಗೌರವಾತ್ ॥ ೨೨

ಸದೃಶಾ ಯೇಽತ್ರ ದರ್ಪೇಣ ರಾವಣಸ್ಯ ದುರಾತ್ಮನಃ ।
ಅತ್ರ ಮನ್ಯುರ್ನ ಕರ್ತವ್ಯೋ ರೋಷಯೇ ತ್ವಾಂ ನ ಭೀಷಯೇ ॥ ೨೩

ಸಮರ್ಥೋ ಹ್ಯಸಿ ವೀರ್ಯೇಣ ಸುರಾಣಾಮಪಿ ನಿಗ್ರಹೇ ।
ತದ್ಭವಾಂಶ್ಚತುರಂಗೇಣ ಬಲೇನ ಮಹತಾ ವೃತಃ ॥ ೨೪

---

ವಿಭೀಷಣನು ಹೀಗೆ ನುಡಿದು ಅನಲನೇ ಮೊದಲಾದ ತನ್ನ ಸಚಿವರನ್ನು ಶ್ರೀರಾಮನೆದುರಿಗೆ ಕರೆಸಿ, ಲಂಕೆಯಲ್ಲಿ ಅವರು ನೋಡಿ ಬಂದ ವಿವರಗಳನ್ನು ಅವರಿಂದ ಹೇಳಿಸಿದನು (೧೯). ಅನಂತರ ಕಮಲನೇತ್ರನಾದ ಶ್ರೀರಾಮನನ್ನು ನೋಡಿ ವಿಭೀಷಣನು ''ರಾಘವ, ರಾವಣನು ಕುಬೇರನನ್ನು ಜಯಿಸಲು ಹೋದಾಗ ಕೇವಲ ಅರವತ್ತು ಲಕ್ಷ ಸೈನಿಕರನ್ನು ಕರೆದೊಯ್ದನು! ಈಗ ಇಲ್ಲಿ ಕೋಟಿ ಕೋಟಿ ಸಂಖ್ಯೆಯಲ್ಲಿರುವ ರಾಕ್ಷಸರು ಪರಾಕ್ರಮ, ಸಾಮರ್ಥ್ಯ, ತೇಜಸ್ಸು, ಪ್ರತಾಪ, ದರ್ಪಗಳಲ್ಲಿ ಅವರೆಲ್ಲರಿಗೂ ಸಾಟಿಯಾದವರು! (೨೦–೨೨). ದುರುಳನಾದ ರಾವಣನ ಪರಿವಾರ ಇಂತಹದು! ಶ್ರೀ ರಾಮ, ನಾನು ಹೀಗೆ ಹೇಳಿದೆನೆಂದು ಬೇಸರಪಡಬೇಡ. ಆ ರಾಕ್ಷಸರನ್ನಡಿಗಿಸಲು ಬೇಕಾದ ರೋಷವನ್ನು ನಿನ್ನಲ್ಲಿ ಉದ್ದೀಪನಗೊಳಿಸಲು ಈ ಮಾತನ್ನು ಹೇಳುವನೇ ಹೊರತು, ನಿನ್ನನ್ನು ಹೆದರಿಸುವದಕ್ಕಲ್ಲ! (೨೩). ದೇವತೆಗಳನ್ನೂ ದಂಡಿಸಲು ಬೇಕಾದ ವೀರ್ಯಪರಾಕ್ರಮಗಳು ನಿನ್ನಲ್ಲುಂಟು. ಆದ್ದರಿಂದ ನೀನೂ ಸಹ ಪ್ರಬಲವಾದ ಈ ವಾನರಸೇನೆಯನ್ನು ಚತುರಂಗವಾಗಿ ವಿಭಾಗಿಸಿ ಲಂಕೆಯನ್ನಾಕ್ರಮಿಸಿ ರಾವಣನನ್ನು ಧ್ವಂಸಮಾಡಬೇಕು'' ಎಂದು ಹೇಳಿದನು

ವ್ಯೂಹ್ಯೇದಂ ವಾನರಾನೀಕಂ ನಿರ್ಮಥಿಷ್ಯಸಿ ರಾವಣಮ್ ।
ರಾವಣಾವರಜೇ ವಾಕ್ಯಮೇವಂ ಬ್ರುವತಿ ರಾಘವಃ ॥ ೨೫

ಶತ್ರೂಣಾಂ ಪ್ರತಿಘಾತಾರ್ಥಮಿದಂ ವಚನಮಬ್ರವೀತ್ ।
ಪೂರ್ವದ್ವಾರೇ ತು ಲಂಕಾಯಾ ನೀಲೋ ವಾನರಪುಂಗವಃ ॥ ೨೬

ಪ್ರಹಸ್ತಪ್ರತಿಯೋದ್ಧಾ ಸ್ಯಾದ್ವಾನರೈರ್ಬಹುಭಿರ್ವೃತಃ ।
ಅಂಗದೋ ವಾಲಿಪುತ್ರಸ್ತು ಬಲೇನ ಮಹತಾ ವೃತಃ ॥ ೨೭

ದಕ್ಷಿಣೇ ಬಾಧತಾಂ ದ್ವಾರೇ ಮಹಾಪಾರ್ಶ್ವಮಹೋದರೌ ।
ಹನುಮಾನ್ ಪಶ್ಚಿಮದ್ವಾರಂ ನಿಪೀಡ್ಯ ಪವನಾತ್ಮಜಃ ॥ ೨೮

ಪ್ರವಿಶತ್ವಪ್ರಮೇಯಾತ್ಮಾ ಬಹುಭಿಃ ಕಪಿಭಿರ್ವೃತಃ ।
ದೈತ್ಯದಾನವಸಂಘಾನಾಮೃಷೀಣಾಂ ಚ ಮಹಾತ್ಮನಾಮ್ ॥ ೨೯

ವಿಪ್ರಕಾರಪ್ರಿಯಃ ಕ್ಷುದ್ರೋ ವರದಾನಬಲಾನ್ವಿತಃ ।
ಪರಿಕ್ರಾಮತಿ ಯಃ ಸರ್ವಾನ್ ಲೋಕಾನ್ ಸಂತಾಪಯನ್ ಪ್ರಜಾಃ ॥

ತಸ್ಯಾಹಂ ರಾಕ್ಷಸೇಂದ್ರಸ್ಯ ಸ್ವಯಮೇವ ವಧೇ ಧೃತಃ ।
ಉತ್ತರಂ ನಗರದ್ವಾರಮಹಂ ಸೌಮಿತ್ರಿಣಾ ಸಹ ॥ ೩೦

---

(೨೪). ಆಗ ಶ್ರೀರಾಮನು ವಿಭೀಷನ ಅಭಿಪ್ರಾಯವನ್ನು ಅನುಮೋದಿಸಿ ಶತ್ರುಗಳನ್ನು ಮುತ್ತುವ ಉದ್ದೇಶದಿಂದ ಈ ರೀತಿಯಲ್ಲಿ ಆಜ್ಞೆಯಿತ್ತನು: ''ವಾನರೊತ್ತಮನಾದ ನೀಲನು ವಾನರಾನೀಕದೊಡನೆ ಲಂಕೆಯ ಪೂರ್ವ ದ್ವಾರದಲ್ಲಿ ಪ್ರಹಸ್ತನನ್ನು ಎದುರಿಸಲಿ (೨೫–೨೬). ವಾಲಿಪುತ್ರನಾದ ಅಂಗದನು ಕಪಿಸೇನೆಯೊಡನೆ ದಕ್ಷಿಣದ್ವಾರದಲ್ಲಿ ಮಹೋದರ ಮಹಾಪಾರ್ಶ್ವ ರನ್ನು ಅಡ್ಡಗಟ್ಟಲಿ. ವಾಯುಪುತ್ರನಾದ ಹನುಮಂತನು ಪಶ್ಚಿಮದ ಬಾಗಿಲಿಗೆ ಹೋಗಲಿ. ಅಸಾಧಾರಣಪರಾಕ್ರಮಿಯಾದ ಆ ವೀರನು (ಇಂದ್ರಜಿತು ವನ್ನೆದುರಿಸುವುದಕ್ಕಾಗಿ) ಕಪಿಯೋಧರೊಡನೆ ನುಗ್ಗಲಿ (೨೭–೨೮). ಇನ್ನು ರಾವಣನ ವಧೆಗೆ ನಾನೇ ಹಠವನ್ನು ತೊಟ್ಟಿರುವೆನು! ದೈತ್ಯದಾನವರನ್ನೂ ಮಹಾತ್ಮರಾದ ಋಷಿಗಳನ್ನೂ ಗೋಳಾಡಿಸಿ ಸಂತೋಷಪಡತಕ್ಕ ಕ್ಷುದ್ರನಲ್ಲವೇ ಅವನು ? ವರಬಲದಿಂದ ಕೊಬ್ಬಿರುವನಲ್ಲವೇ? ಜನರನ್ನು ಪೀಡಿಸುತ್ತ ಜಗತ್ತಿ ನಲ್ಲಿ ಅಲೆದಾಡುವನಲ್ಲವೇ? ಆದ್ದರಿಂದ ಉತ್ತರದ್ವಾರದಲ್ಲಿ ನಾನೇ ನಿಲ್ಲುವೆನು.

ನಿಪೀಡ್ಯಾಭಿಪ್ರವೇಕ್ಷ್ಯಾಮಿ ಸಬಲೋ ಯತ್ರ ರಾವಣಃ ।
ವಾನರೇಂದ್ರಶ್ಚ ಬಲವಾನೃಕ್ಷರಾಜಶ್ಚ ವೀರ್ಯವಾನ್ ॥ ೩೨

ರಾಕ್ಷಸೇಂದ್ರಾನುಜಶ್ಚೈವ ಗುಲ್ಮೇ ಭವತು ಮಧ್ಯಮೇ ।
ನ ಚೈವ ಮಾನುಷಂ ರೂಪಂ ಕಾರ್ಯಂ ಹರಿಭಿರಾಹವೇ ॥ ೩೩

ಏಷಾ ಭವತು ಸಂಜ್ಞಾ ನೋ ಯುದ್ಧೇಽಸ್ಮಿನ್ ವಾನರೇ ಬಲೇ ।
ವಾನರಾ ಏವ ನಶ್ಚಿಹ್ನಂ ಸ್ವಜನೇಽಸ್ಮಿನ್ ಭವಿಷ್ಯತಿ ॥ ೩೪

ವಯಂ ತು ಮಾನುಷೇಣೈವ ಸಪ್ತ ಯೋತ್ಸ್ಯಾಮಹೇ ಪರಾನ್ ।
ಅಹಮೇಷ ಸಹ ಭ್ರಾತ್ರಾ ಲಕ್ಷ್ಮಣೇನ ಮಹೌಜಸಾ ॥ ೩೫

ಲಕ್ಷ್ಮಣನು ನನ್ನ ಬಳಿಯಲ್ಲಿರಲಿ (೨೯–೩೧). ಬಲಾಢ್ಯನಾದ ರಾವಣನು ಉತ್ತರದ ಬಾಗಿಲಲ್ಲಿದ್ದಾನೆ. ಆ ಪ್ರದೇಶವನ್ನಾಕ್ರಮಿಸಿ ನಾನೇ ನುಗ್ಗುವೆನು! ಪರಾಕ್ರಮಿಯಾದ ವಾನರೇಂದ್ರನೂ ಭಲ್ಲೂಕರಾಜನಾದ ಜಾಂಬವಂತನೂ ವಿಭೀಷಣನೂ ನಮ್ಮ ಸೇನೆಯ ಮಧ್ಯಭಾಗದಲ್ಲಿರಲಿ. (ಇನ್ನೊಂದು ಮುಖ್ಯ ವಾದ ವಿಷಯವುಂಟು.) ಸಂಗ್ರಾಮಸಮಯದಲ್ಲಿ ವಾನರಯೋಧರು ಮನುಷ್ಯ ರೂಪವನ್ನು ಧರಿಸಬಾರದು (೩೨–೩೩). ಇದು ನಮ್ಮ ವಾನರಸೇನೆಯಲ್ಲಿ ಯುದ್ಧಕಾಲದ ಸಂಕೇತವಾಗಿರತಕ್ಕದ್ದು. ವಾನರವೇಷವೇ ನಮ್ಮವರೆಂದು ಗುರುತಿಸಲು ಚಿಹ್ನೆಯಾಗಿರಬೇಕು. ನಾವು ಏಳು ಜನರು ಮಾತ್ರ ಮನುಷ್ಯರೂಪ ದಲ್ಲಿದ್ದು ಯುದ್ಧಮಾಡುತ್ತೇವೆ. ಯಾರು ಯಾರೆಂದರೆ: ನಾನು, ಲಕ್ಷ್ಮಣ, ವಿಭೀಷಣ ಮತ್ತು ಅವನ ನಾಲ್ವರು ಸಚಿವರು''* ಎಂದು ತಿಳಿಸಿದನು (೩೪–೩೫).

---

* ವಾನರರು ಕಾಮರೂಪಿಗಳಾದ್ದರಿಂದ ರಾಕ್ಷಸರ ರೂಪವನ್ನು ಧರಿಸಿಬಿಟ್ಟಾರು ಎಂಬ ಶಂಕೆಯಿಂದ ಶ್ರೀರಾಮನು ಹೀಗೆ ಹೇಳಿದ್ದಾನೆ. ರಾಕ್ಷಸರು ಕಪಿವೇಷವನ್ನು ಹೀನವೆಂದು ತಿಳಿದಿರುವುದರಿಂದ, ಅವರು ಕಪಿವೇಷವನ್ನು ಧರಿಸಲಾರರು ಎಂದು ಆಶಯ. ಅಥವಾ ಕಪಿಗಳನ್ನು ರಾಕ್ಷಸರೆಂದು ಭ್ರಮಿಸಿ ನಾವೇ ಕೊಲ್ಲುವಂತಾಗದಿರಲಿ, ರಾಕ್ಷಸರು ಕಪಿವೇಷದಿಂದ ಪ್ರಾಣವನ್ನುಳಿಸಿಕೊಂಡರೆ ಉಳಿಸಿಕೊಳ್ಳಲಿ ಎಂದು ಆಶಯ. ವಿಭೀಷಣಾದಿಗಳು ಮನುಷ್ಯರಂತೆ ಅವಯವಸಂಸ್ಥಾನವುಳ್ಳವರಾದ್ದರಿಂದ ಮನುಷ್ಯ ವರ್ಗದಲ್ಲಿ ಗಣಿಸಲ್ಪಟ್ಟಿದ್ದಾರೆ.

ಆತ್ಮನಾ ಪಂಚಮಶ್ಚಾಯಂ ಸಖಾ ಮಮ ವಿಭೀಷಣಃ ।
ಸ ರಾಮಃ ಕೃತ್ಯಸಿದ್ಧ್ಯರ್ಥಮೇವಮುಕ್ತ್ವಾ ವಿಭೀಷಣಮ್ ॥ ೩೬

ಸುವೇಲಾರೋಹಣೇ ಬುದ್ಧಿಂ ಚಕಾರ ಮತಿಮಾನ್ ಮತಿಮ್ ।
ರಮಣೀಯತರಂ ದೃಷ್ಟ್ವಾ ಸುವೇಲಸ್ಯ ಗಿರೇಸ್ತಟಮ್ ॥ ೩೭

ತತಸ್ತು ರಾಮೋ ಮಹತಾ ಬಲೇನ
ಪ್ರಚ್ಛಾದ್ಯ ಸರ್ವಾಂ ಪೃಥಿವೀಂ ಮಹಾತ್ಮಾ ।
ಪ್ರಹೃಷ್ಟರೂಪೋಽಭಿಜಗಾಮ ಲಂಕಾಂ
ಕೃತ್ವಾ ಮತಿಂ ಸೋಽರಿವಧೇ ಮಹಾತ್ಮಾ ॥ ೩೮

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತತ್ರಿಂಶಃ ಸರ್ಗಃ

---

ಗುರಿಯನ್ನು ಸಾಧಿಸುವ ಉದ್ದೇಶದಿಂದ ಈ ರೀತಿಯಲ್ಲಿ ವಿಭೀಷಣಾದಿಗಳಿಗೆ ಶ್ರೀರಾಮನು ತಿಳಿಸಿ, ಸಮೀಪದಲ್ಲಿದ್ದ ಸುವೇಲಪರ್ವತವನ್ನು ಹತ್ತಬೇಕೆಂದು ಸಂಕಲ್ಪಿಸಿದನು. ರಮಣೀಯವಾಗಿದ್ದ ಶೈಲತಟವನ್ನು ಕಂಡು, ಆದನ್ನೇರಿ ಲಂಕೆಯನ್ನು ಅವಲೋಕಿಸಬೇಕೆಂಬುದು ಅವನ ಅಪೇಕ್ಷೆಯಾಗಿತ್ತು (೩೬–೩೭). ಅನಂತರ ಮಹಾಶೂರನಾದ ರಘುನಾಥನು ಮಹತ್ತರವಾದ ವಾನರಸೇನೆಯಿಂದ ಭೂಮಿಯನ್ನೇ ಆಚ್ಛಾದಿಸುತ್ತ ಹೊರಟನು. ವೈರಿಯನ್ನು ವಧಿಸಬೇಕೆಂಬ ಉತ್ಸಾಹದಿಂದ ಮುಂದೆ ಸಾಗಿದನು (೩೮).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಮೂವತ್ತೇಳನೆಯ ಸರ್ಗ

---

## ಅಷ್ಟಾತ್ರಿಂಶಃ ಸರ್ಗಃ

### ಸುವೇಲಾರೋಹಣಮ್

ಸ ತು ಕೃತ್ವಾ ಸುವೇಲಸ್ಯ ಮತಿಮಾರೋಹಣಂ ಪ್ರತಿ ।
ಲಕ್ಷ್ಮಣಾನುಗತೋ ರಾಮಃ ಸುಗ್ರೀವಮಿದಮಬ್ರವೀತ್ ॥ ೧

ವಿಭೀಷಣಂ ಚ ಧರ್ಮಜ್ಞಮನುರಕ್ತಂ ನಿಶಾಚರಮ್ ।
ಮಂತ್ರಜ್ಞಂ ಚ ವಿಧಿಜ್ಞಂ ಚ ಶ್ಲಕ್ಷ್ಣಯಾ ಪರಯಾ ಗಿರಾ ॥ ೨

ಸುವೇಲಂ ಸಾಧು ಶೈಲೇಂದ್ರಮಿಮಂ ಧಾತುಶತೈಶ್ಚಿತಮ್ ।
ಅಧ್ಯಾರೋಹಾಮಹೇ ಸರ್ವೇ ವತ್ಸ್ಯಾಮೋಽತ್ರ ನಿಶಾಮಿಮಾಮ್॥

ಲಂಕಾಂ ಚಾಲೋಕಯಿಷ್ಯಾಮೋ ನಿಲಯಂ ತಸ್ಯ ರಕ್ಷಸಃ ।
ಯೇನ ಮೇ ಮರಣಾಂತಾಯ ಹೃತಾ ಭಾರ್ಯಾ ದುರಾತ್ಮನಾ ॥ ೪

## ಸರ್ಗ ೩೮

### ಶ್ರೀ ರಾಮನು ಕಪಿನಾಯಕರೊಡನೆ ಸುವೇಲಾದ್ರಿಯನ್ನೇರುವುದು

ಹೀಗೆ ಸುವೇಲಾದ್ರಿಯನ್ನೇರಬೇಕೆಂಬ ಉದ್ದೇಶವನ್ನು ಹೊಂದಿದ ಶ್ರೀರಾಮನು ಲಕ್ಷ್ಮಣಸಮೇತನಾಗಿ ಹೋಗುತ್ತ ಬಳಿಯಲ್ಲಿದ್ದ ಧರ್ಮಜ್ಞರೂ ಅನುರಕ್ತರೂ ಮಂತ್ರಾಲೋಚನಕಾರ್ಯಸಾಧನಗಳಲ್ಲಿ ನಿಪುಣರೂ ಆದ ಸುಗ್ರೀವವಿಭೀಷಣರನ್ನು ನೋಡಿ ಹೀಗೆಂದನು (೧–೨): "ಮಿತ್ರರೆ, ಈ ಸುವೇಲಶೈಲವು ವಿವಿಧಧಾತುಗಳಿಂದ ಮನೋಹರವಾಗಿ ಕಾಣುತ್ತಿದೆ. ನಾವೆಲ್ಲರೂ ಈ ಬೆಟ್ಟವನ್ನೇರಿ ಈ ರಾತ್ರಿಯನ್ನು* ಇಲ್ಲಿಯೇ ಕಳೆಯೋಣ! ಈ ಪರ್ವತದ ಮೇಲಿನಿಂದ ಆ ರಾಕ್ಷಸನ ವಾಸಸ್ಥಾನವಾದ ಲಂಕಾನಗರವನ್ನೂ ನೋಡೋಣ! ಆ ದುರಾತ್ಮನು ತನ್ನ ಸಾವನ್ನು ಕರೆಯುವುದಕ್ಕಾಗಿ ನನ್ನ ಪತ್ನಿಯನ್ನು ಅಪಹರಿಸಿದ್ದಾನೆ! (೩–೪).

* ಇಪ್ಪತ್ತು ಮೂರನೆಯ ಸರ್ಗದಿಂದ ಇದುವರೆಗೆ ವರ್ಣಿಸಿದ ವೃತ್ತಾಂತವೆಲ್ಲವೂ ಸಮುದ್ರವನ್ನು ದಾಟಿದ ದಿನವೇ ನಡೆಯಿತೆಂದು ತೋರುತ್ತದೆ.

ಯೇನ ಧರ್ಮೋ ನ ವಿಜ್ಞಾತೋ ನ ತದ್ವೃತ್ತಂ ಕುಲಂ ತಥಾ ।
ರಾಕ್ಷಸ್ಯಾ ನೀಚಯಾ ಬುದ್ಧ್ಯಾ ಯೇನ ತದ್ಗರ್ಹಿತಂ ಕೃತಮ್ ॥ ೫

ತಸ್ಮಿನ್ ಮೇ ವರ್ತತೇ ರೋಷಃ ಕೀರ್ತಿತೇ ರಾಕ್ಷಸಾಧಮೇ ।
ಯಸ್ಯಾ ಪರಾಧಾನ್ನೀಚಸ್ಯ ವಧಂ ದ್ರಕ್ಷ್ಯಾಮಿ ರಕ್ಷಸಾಮ್ ॥ ೬

ಏಕೋ ಹಿ ಕುರುತೇ ಪಾಪಂ ಕಾಲಪಾಶವಶಂ ಗತಃ ।
ನೀಚೇನಾತ್ಮಾಪಚಾರೇಣ ಕುಲಂ ತೇನ ವಿನಶ್ಯತಿ ॥ ೭

ಏವಂ ಸುಮಂತ್ರಯನ್ನೇವ ಸಕ್ರೋಧೋ ರಾವಣಂ ಪ್ರತಿ ।
ರಾಮಃ ಸುವೇಲಂ ವಾಸಾಯ ಚಿತ್ರಸಾನುಮುಪಾರುಹತ್ ॥ ೮

ಪೃಷ್ಠತೋ ಲಕ್ಷ್ಮಣಶ್ಚೈನಮನ್ವಗಚ್ಛತ್ಸಮಾಹಿತಃ ।
ಸಶರಂ ಚಾಪಮುದ್ಯಮ್ಯ ಸುಮಹದ್ವಿಕ್ರಮೇ ರತಃ ॥ ೯

ತಮನ್ವರೋಹತ್ಸುಗ್ರೀವಃ ಸಾಮಾತ್ಯಃ ಸವಿಭೀಷಣಃ ।
ಹನುಮಾನಂಗದೋ ನೀಲೋ ಮೈಂದೋ ದ್ವಿವಿದ ಏವ ಚ ॥ ೧೦

ಗಜೋ ಗವಾಕ್ಷೋ ಗವಯಃ ಶರಭೋ ಗಂಧಮಾದನಃ ।
ಪನಸಃ ಕುಮುದಶ್ಚೈವ ಹರೋ ರಂಭಶ್ಚ ಯೂಥಪಃ ॥ ೧೧

---

ಆ ನೀಚನು ಧರ್ಮವನ್ನು ಲೆಕ್ಕಿಸದೆ ಕುಲಶೀಲಗಳನ್ನು ಗಮನಿಸದೆ, ಕ್ಷುದ್ರವಾದ ರಾಕ್ಷಸಬುದ್ಧಿಯಿಂದ ಕೊಳೆಗೆಲಸವನ್ನು ನಡೆಸಿದ್ದಾನೆ. ಆ ರಾಕ್ಷಸಾಧಮನ ಹೆಸರನ್ನು ಹೇಳಿದೊಡನೆ ನನ್ನ ರೋಷವು ಉಕ್ಕುತ್ತದೆ! ಆ ಒಬ್ಬ ನೀಚನ ಅಪಚಾರಕ್ಕಾಗಿ ಈ ರಾಕ್ಷಸರೆಲ್ಲರನ್ನೂ ವಧಿಸಬೇಕಾಗಿ ಬಂದಿರುವುದನ್ನು ಕಾಣುತ್ತಿರುವೆನು (೫–೬). ಕಾಲಪಾಶಕ್ಕೆ ಸಿಕ್ಕಿದ ಒಬ್ಬನು ಪಾಪಕಾರ್ಯವನ್ನೆಸಗಿದರೆ, ಅವನ ನೀಚತನದಿಂದ ಕುಲವೆಲ್ಲವೂ ನಷ್ಟವಾಗುವುದಲ್ಲವೆ!'' ಹೀಗೆ ರಾವಣನ ಮೇಲಿನ ಸಿಟ್ಟಿನಿಂದ ಸಂಭಾಷಿಸುತ್ತಲೇ ಶ್ರೀರಾಮನು ವಾಸಕ್ಕಾಗಿ ಧಾತುಮಂಡಿತವಾದ ಸುವೇಲಶೈಲವನ್ನಾರೋಹಿಸಿದನು (೭–೮). ಲಕ್ಷ್ಮಣನು ತನ್ನ ವಿಕ್ರಮವನ್ನು ಮೆರೆಸಲು ಉತ್ಸುಕನಾಗಿ ಮಹತ್ತರವಾದ ಧನುಸ್ಸನ್ನೆತ್ತಿ ಹಿಡಿದು ಶರಗಳಿಂದ ಸಜ್ಜಾಗಿ ಶ್ರೀರಾಮನ ಹಿಂದೆ ಎಚ್ಚರಿಕೆಯಿಂದ ಹೋಗುತ್ತಿದ್ದನು (೯). ಹಾಗೆಯೇ ಸುಗ್ರೀವ, ವಿಭೀಷಣ, ಅವನ ನಾಲ್ವರು ಸಚಿವರು, ಹನುಮಂತ, ಅಂಗದ, ನೀಲ, ಮೈಂದ, ದ್ವಿವಿದ, ಗಜ, ಗವಾಕ್ಷ, ಗವಯ, ಶರಭ, ಗಂಧಮಾದನ,

ಜಾಂಬವಾಂಶ್ಚ ಸುಷೇಣಶ್ಚ ಋಷಭಶ್ಚ ಮಹಾಮತಿಃ ।
ದುರ್ಮುಖಶ್ಚ ಮಹಾತೇಜಾಸ್ತಥಾ ಶತವಲಿಃ ಕಪಿಃ ॥ ೧೨

ಏತೇ ಚಾನ್ಯೇ ಚ ಬಹವೋ ವಾನರಾಃ ಶೀಘ್ರಗಾಮಿನಃ ।
ತೇ ವಾಯುವೇಗಪ್ರವಣಾಸ್ತಂ ಗಿರಿಂ ಗಿರಿಚಾರಿಣಃ ॥ ೧೩

ಅಧ್ಯಾರೋಹಂತ ಶತಶಃ ಸುವೇಲಂ ಯತ್ರ ರಾಘವಃ ।
ತೇ ತ್ವದೀರ್ಘೇಣ ಕಾಲೇನ ಗಿರಿಮಾರುಹ್ಯ ಸರ್ವತಃ ॥ ೧೪

ದದೃಶುಃ ಶಿಖರೇ ತಸ್ಯ ವಿಷಕ್ತಾಮಿವ ಖೇ ಪುರೀಮ್ ।
ತಾಂ ಶುಭಾಂ ಪ್ರವರದ್ವಾರಾಂ ಪ್ರಾಕಾರಪರಿಶೋಭಿತಾಮ್ ॥ ೧೫

ಲಂಕಾಂ ರಾಕ್ಷಸಸಂಪೂರ್ಣಾಂ ದದೃಶುರ್ಹರಿಯೂಥಪಾಃ ।
ಪ್ರಾಕಾರಚಯಸಂಸ್ಥೈಶ್ಚ ತದಾ ನೀಲೈರ್ನಿಶಾಚರೈಃ ॥ ೧೬

ದದೃಶುಸ್ತೇ ಹರಿಶ್ರೇಷ್ಠಾಃ ಪ್ರಾಕಾರಮಪರಂ ಕೃತಮ್ ।
ತೇ ದೃಷ್ಟ್ವಾ ವಾನರಾಃ ಸರ್ವೇ ರಾಕ್ಷಸಾನ್ ಯುದ್ಧಕಾಂಕ್ಷಿಣಃ ॥ ೧೭

---

ಪನಸ, ಕುಮುದ, ಹರ, ರಂಭ, ಜಾಂಬವಂತ, ಸುಷೇಣ, ಋಷಭ, ದುರ್ಮುಖ, ಶತಬಲಿ– ಮೊದಲಾದ ವೀರರೂ ಸುವೇಲಾದರಿಯನ್ನೇರಿದರು (೧೦–೧೨). ವಾಯುವೇಗದಿಂದ ಹೋಗಬಲ್ಲ ಶೀಘ್ರಗಾಮಿಗಳೂ ಗಿರಿಚಾರಿಗಳೂ ಆದ ಬಹು ಮಂದಿ ವಾನರಯೋಧರು ಶ್ರೀರಾಮನೇರಿದ ಸುವೇಲವನ್ನು ಹತ್ತಿಹೋದರು (೧೩). ಅವರೆಲ್ಲರೂ ಬಹುಬೇಗನೆ ಸುವೇಲಶಿಖರವನ್ನೇರಿ, ಆಕಾಶದಲ್ಲಿ ನಿರ್ಮಿತ ವಾಗಿದೆಯೋ ಎಂಬಂತೆ ತ್ರಿಕೂಟಾಗ್ರದಲ್ಲಿದ್ದ ಲಂಕಾನಗರವನ್ನು ಕಂಡರು! ರಮಣೀಯವಾದ ಪುರದ್ವಾರಗಳಿಂದಲೂ ಪ್ರಾಕಾರಗಳಿಂದಲೂ ಲಂಕೆಯು ಶೋಭಿಸುತ್ತಿತ್ತು (೧೪–೧೫). ಎಲ್ಲೆಲ್ಲಿಯೂ ರಾಕ್ಷಸರು ತುಂಬಿದ್ದರು. ನಗರದ ಪ್ರಾಕಾರದ ಬಳಿ ಕಾವಲಿದ್ದ ಕಪ್ಪು ಬಣ್ಣದ ನಿಶಾಚರರನ್ನು ನೋಡಿದಾಗ, ಲಂಕೆಗೆ ಇನ್ನೊಂದು (ಕಬ್ಬಿಣದ) ಕೋಟೆಯನ್ನು ಕಟ್ಟಿರುವರೋ ಎಂಬಂತೆ ಕಾಣು ತ್ತಿತ್ತು! (೧೬). ಆ ರಾಕ್ಷಸರನ್ನು ಕಂಡೊಡನೆ ಕಪಿವೀರರು ಯುದ್ಧೋತ್ಸಾಹ ದಿಂದ, ಶ್ರೀರಾಮನೆದುರಿಗೇ ಬಗೆಬಗೆಯಲ್ಲಿ ಗರ್ಜಿಸತೊಡಗಿದರು! ಅಷ್ಟರಲ್ಲಿ ಸಂಜೆಯಾಯಿತು. (ಕಾಮಿನಿಯಾದ) ಸಂಧ್ಯೆಯು ಸೂರ್ಯನಿಗೆ ರಕ್ತಚಂದನ

ಮುಮುಚುರ್ವಿವಿಧಾನ್ನಾದಾಂಸ್ತತ್ರ ರಾಮಸ್ಯ ಪಶ್ಯತಃ ।
ತತೋಽಸ್ತಮಗಮತ್ಸೂರ್ಯಃ ಸಂಧ್ಯಯಾ ಪ್ರತಿರಂಜಿತಃ ॥ ೧೮

ಪೂರ್ಣಚಂದ್ರ ಪ್ರದೀಪ್ತಾ ಚ ಕ್ಷಪಾ ಸಮಭಿವರ್ತತೇ ॥

ತತಃ ಸ ರಾಮೋ ಹರಿವಾಹಿನೀಪತಿ-
ರ್ವಿಭೀಷಣೇನ ಪ್ರತಿನಂದ್ಯ ಸತ್ಕೃತಃ ।
ಸಲಕ್ಷ್ಮಣೋ ಯೂಥಪಯೂಥಸಂವೃತಃ
ಸುವೇಲಪೃಷ್ಠೇ ನ್ಯವಸದ್ಯಥಾಸುಖಮ್ ೧೯

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಷ್ಟಾತ್ರಿಂಶಃ ಸರ್ಗಃ

---

ವನ್ನು ತೊಡೆದಳು. ಸೂರ್ಯನು ಅವಳೊಡನೆ ಹೊರಟುಹೋದನು! ಇತ್ತ ಯಾಮಿನಿಯು ಪೂರ್ಣಚಂದ್ರನೊಡನೆ ವಿರಾಜಿಸುತ್ತ ವಿಹರಿಸುವುದಕ್ಕೆ ಬಂದಳು!* (೧೭–೧೮). ಅನಂತರ ಶ್ರೀರಾಮನೂ ವಾನರವಾಹಿನೀಪತಿ ಯಾದ ಸುಗ್ರೀವನೂ ಲಕ್ಷ್ಮಣನೂ ವಿಭೀಷಣನಿಂದ ಸತ್ಕೃತರಾಗಿ, ವಾನರ ಯೋಧರೊಡನೆ ಸುವೇಲಶೈಲಾಗ್ರದಲ್ಲಿ ಸುಖವಾಗಿದ್ದರು (೧೯).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಮೂವತ್ತೆಂಟನೆಯ ಸರ್ಗ

---

* ಇಲ್ಲಿ ಪೂರ್ಣಚಂದ್ರನನ್ನು ವರ್ಣಿಸುವುದರಿಂದ ಹುಣ್ಣಿಮೆಯ ದಿನ ಸುವೇಲಾ ರೋಹಣವೆಂದೂ ಮಾರನೆಯ ದಿನ ಯುದ್ಧಾರಂಭವೆಂದೂ ಕೆಲವರು ಹೇಳುತ್ತಾರೆ.

# ಏಕೋನಚತ್ವಾರಿಂಶಃ ಸರ್ಗಃ

## ಲಂಕಾದರ್ಶನಮ್

ತಾಂ ರಾತ್ರಿಮುಷಿತಾಸ್ತತ್ರ ಸುವೇಲೇ ಹರಿಪುಂಗವಾಃ ।
ಲಂಕಾಯಾಂ ದದೃಶುರ್ವೀರಾ ವನಾನ್ಯುಪವನಾನಿ ಚ ॥ ೧

ಸಮಸೌಮ್ಯಾನಿ ರಮ್ಯಾಣಿ ವಿಶಾಲಾನ್ಯಾಯತಾನಿ ಚ ।
ದೃಷ್ಟಿರಮ್ಯಾಣಿ ತೇ ದೃಷ್ಟ್ವಾ ಬಭೂವುರ್ಜಾತವಿಸ್ಮಯಾಃ ॥ ೨

ಚಂಪಕಾಶೋಕ ಪುನ್ನಾಗ ಸಾಲ ತಾಲ ಸಮಾಕುಲಾ ।
ತಮಾಲವನಸಂಛನ್ನಾ ನಾಗಮಾಲಾಸಮಾವೃತಾ ॥ ೩

ಹಿಂತಾಲೈರರ್ಜುನೈರ್ನೀಪೈಃ ಸಪ್ತ ಪರ್ಣೈಶ್ಚ ಪುಷ್ಪಿತೈಃ ।
ತಿಲಕೈಃ ಕರ್ಣಿಕಾರೈಶ್ಚ ಪಾಟಲೈಶ್ಚ ಸಮಂತತಃ ॥ ೪

ಶುಶುಭೇ ಪುಷ್ಪಿತಾಗ್ರೈಶ್ಚ ಲತಾಪರಿಗತೈರ್ದ್ರುಮೈಃ ।
ಲಂಕಾ ಬಹುವಿಧೈರ್ದಿವ್ಯೈರ್ಯಥೇಂದ್ರಸ್ಯಾಮರಾವತೀ ॥ ೫

### ಸರ್ಗ ೩೯

ಶ್ರೀರಾಮನೂ ವಾನರಸೈನಿಕರೂ ಲಂಕಾಪುರಿಯನ್ನು ನೋಡಿ ವಿಸ್ಮಿತರಾಗುವುದು.

ಆ ವಾನರೋತ್ತಮರು ಸುವೇಲಪರ್ವತದಲ್ಲಿ ಆ ರಾತ್ರಿ ತಂಗಿದ್ದು ಮಾರನೆಯ ದಿನ ಪ್ರಾತಃಕಾಲದಲ್ಲಿ ಲಂಕಾಪುರಿಯ ಪರಿಸರದಲ್ಲಿದ್ದ ವನೋಪವನಗಳನ್ನು ಸುವೇಲಶಿಖರದಿಂದಲೇ ನೋಡಿದರು. ಹಳ್ಳತಿಟ್ಟುಗಳಿಲ್ಲದೆ ಸಮವಾಗಿಯೂ ರಮಣೀಯವಾಗಿಯೂ ವಿಶಾಲವಾಗಿಯೂ ಉದ್ದವಾಗಿಯೂ ನೋಡುವುದಕ್ಕೆ ಅಂದವಾಗಿಯೂ ಇದ್ದ ಉದ್ಯಾನವನಗಳನ್ನು ಕಂಡು ವಾನರರು ವಿಸ್ಮಿತರಾದರು (೧–೨). ಎಲ್ಲೆಲ್ಲಿಯೂ ಸಂಪಗೆ, ಅಸುಗೆ, ಪುನ್ನಾಗ, ಸಾಲ, ತಾಲವೃಕ್ಷಗಳಿಂದ ತುಂಬಿದ ವನಗಳು; ಹೊಂಗೆಮರಗಳ ಕಾಡುಗಳು; ನಾಗಕೇಸರಗಿಡಗಳ ಸಾಲುಗಳು ! ಹಿಂತಾಳ, ಮತ್ತಿ ಈಚಲು, ಸಪ್ತಪರ್ಣಗಳು ಅರಳಿ ನಿಂತಿದ್ದವು. ತಿಲಕ, ಕಣಗಿಲೆ, ಪಾದರಿಗಳು ಹೂ ಬಿಟ್ಟದ್ದವು (೩–೪). ಬಗೆಬಗೆಯ ದಿವ್ಯವೃಕ್ಷಗಳಿಗೆ ಅರಳಿದ ಬಳ್ಳಿಗಳು ಹಬ್ಬಿದ್ದವು. ಆ ಲಂಕೆಯು ಇಂದ್ರನ ಅಮರಾವತಿಯಂತೆ

ವಿಚಿತ್ರಕುಸುಮೋಪೇತೈ ರಕ್ತ ಕೋಮಲಪಲ್ಲವೈಃ ।
ಶಾದ್ವಲೈಶ್ಚ ತಥಾ ನೀಲೈಶ್ಚಿತ್ರಾಭಿರ್ವನರಾಜಿಭಿಃ ॥ ೬

ಗಂಧಾಢ್ಯಾನ್ಯಭಿರಮ್ಯಾಣಿ ಪುಷ್ಪಾಣಿ ಚ ಫಲಾನಿ ಚ ।
ಧಾರಯಂತ್ಯಗಮಾಸ್ತತ್ರ ಭೂಷಣಾನೀವ ಮಾನವಾಃ ॥ ೭

ತಚ್ಚೈತ್ರರಥಸಂಕಾಶಂ ಮನೋಜ್ಞಂ ನಂದನೋಪಮಮ್ ।
ವನಂ ಸರ್ವರ್ತುಕಂ ರಮ್ಯಂ ಶುಶುಭೇ ಷಟ್ಪದಾಯುತಮ್ ॥ ೮

ನತ್ಯೂಹಕೋಯಷ್ಟಿ ಬಕೈರ್ನೃತ್ಯಮಾನೈಶ್ಚ ಬರ್ಹಿಭಿಃ ।
ರುತಂ ಪರಭೃತಾನಾಂ ಚ ಶುಶ್ರುವುರ್ವನನಿರ್ಝರೇ ॥ ೯

ನಿತ್ಯಮತ್ತವಿಹಂಗಾನಿ ಭ್ರಮರಾಚರಿತಾನಿ ಚ ।
ಕೋಕಿಲಾಕುಲಷಂಡಾನಿ ವಿಹಂಗಾಭಿರುತಾನಿ ಚ ॥ ೧೦

ಭೃಂಗರಾಜಾಭಿಗೀತಾನಿ ಕುರರಸ್ವನಿತಾನಿ ಚ ।
ಕೋಣಾಲಕವಿಘುಷ್ಟಾನಿ ಸಾರಸಾಭಿರುತಾನಿ ಚ ॥ ೧೧

ವಿವಿಶುಸ್ತೇ ತತಸ್ತಾನಿ ವನಾನ್ಯುಪವನಾನಿ ಚ ।
ಹೃಷ್ಟಾಃ ಪ್ರಮುದಿತಾ ವೀರಾ ಹರಯಃ ಕಾಮರೂಪಿಣಃ ॥ ೧೨

---

ಚೆಂದವಾಗಿದ್ದಿತು. ಬಣ್ಣ ಬಣ್ಣದ ಹೂಗಳಿಂದಲೂ ಕೆಂದಳಿರುಗಳಿಂದಲೂ ಹಸಿರು ಹುಲ್ಲುಬೆಳೆದ ನೆಲಗಳಿಂದಲೂ ಅಲಂಕೃತವಾದ ವನರಾಜಿಗಳಿಂದ ಶೋಭಿಸುತ್ತಿದ್ದಿತು (೫–೬). ಇಂಪಾಗಿ ಕಂಪುಬೀರುವ ಚೆಲುವಿನ ಹೂಹಣ್ಣುಗಳನ್ನು ಹೊತ್ತ ಮರಗಳು, ಒಡವೆಗಳನ್ನು ತೊಟ್ಟಮನುಜರಂತೆ ಕಂಗೊಳಿಸುತ್ತಿದ್ದವು! ಚೈತ್ರರಥದಂತೆಯೂ ನಂದನವನದಂತೆಯೂ ಸಕಲ ಋತುಗಳ ಹೂಗಳನ್ನು ಹೊಂದಿ, ದುಂಬಿಗಳ ಗುಂಜಾರವದಿಂದ ಸೊಂಪಾದ ಲಂಕೆಯ ಹೂದೋಟವು ನಯನಮನೋಹರವಾಗಿ ರಂಜಿಸುತ್ತಿತ್ತು (೭–೮). ವನಗಳ ನಡುವೆ ಹರಿಯುವ ಹಳ್ಳಗಳ ಬಳಿಯಲ್ಲಿ ನತ್ಯೂಹ, ನೀರುಕಾಗೆಗಳು ನಲಿಯುತ್ತಿದ್ದವು. ನವಿಲುಗಳು ಕುಣಿಯುತ್ತಿದ್ದವು. ಕೋಗಿಲೆಗಳು ಹಾಡುತ್ತಿದ್ದವು. ಕೋಗಿಲೆಗಳ ಹಾಡು ಕಪಿಗಳಿಗೂ ಕೇಳಿಸುತ್ತಿತ್ತು! (೯). ಸೊಕ್ಕಿದ ಹಕ್ಕಿಗಳು, ಹಾರಾಡುವ ದುಂಬಿಗಳು ಮತ್ತು ಕಿಕ್ಕಿರಿದ ಕೊಗಿಲೆಗಳಿಂದ ವನಗಳು ರಮ್ಯವಾಗಿದ್ದವು. ಪಕ್ಷಿಗಳ ಕೂಗು ಭೃಂಗಗಳ ಹಾಡು, ಕುರರಗಳ ಇಂಚರ, ಖಂಜನಪಕ್ಷಿಗಳ ಘೋಷ, ಸಾರಸಗಳ ಕಲಕಲರವಗಳಿಂದ ಮನೋಹರವಾಗಿದ್ದವು (೧೦–೧೧). ಅವುಗಳನ್ನು ನೋಡಿ

ತೇಷಾಂ ಪ್ರವಿಶತಾಂ ತತ್ರ ವಾನರಾಣಾಂ ಮಹೌಜಸಾಮ್।
ಪುಷ್ಪ ಸಂಸರ್ಗಸುರಭಿರ್ವವೌ ಘ್ರಾಣಸುಖೋಽನಿಲಃ ॥ ೧೩

ಅನ್ಯೇ ತು ಹರಿವೀರಾಣಾಂ ಯೂಥಾನ್ನಿಷ್ಕ್ರಮ್ಯ ಯೂಥಪಾಃ ।
ಸುಗ್ರೀವೇಣಾಭ್ಯನುಜ್ಞಾತಾ ಲಂಕಾಂ ಜಗ್ಮುಃ ಪತಾಕಿನೀಮ್। ೧೪

ವಿತ್ರಾಸಯಂತೋ ವಿಹಗಾಂಸ್ತ್ರಾಸಯುಂತೋ ಮೃಗದ್ವಿಪಾನ್ ।
ಕಂಪಯಂತಶ್ಚ ತಾಂ ಲಂಕಾಂ ನಾದೈಸ್ತೇ ನದತಾಂ ವರಾಃ । ೧೫

ಕುರ್ವಂತಸ್ತೇ ಮಹಾವೇಗಾ ಮಹೀಂ ಚರಣಪೀಡಿತಾಮ್।
ರಜಶ್ಚ ಸಹಸೈವೋರ್ಧ್ವಂ ಜಗಾಮ ಚರಣೋತ್ಥಿತಮ್॥ ೧೬

ಋಕ್ಷಾಃ ಸಿಂಹಾ ವರಾಹಾಶ್ಚ ಮಹಿಷಾ ವಾರಣಾ ಮೃಗಾಃ ।
ತೇನ ಶಬ್ದೇನ ವಿತ್ರಸ್ತಾ ಜಗ್ಮುರ್ಭೀತಾ ದಿಶೋ ದಶ ॥ ೧೭

ಶಿಖರಂ ತತ್ತ್ರಿಕೂಟಸ್ಯ ಪ್ರಾಂಶು ಚೈಕಂ ದಿವಿಸ್ಪೃಶಮ್।
ಸಮಂತಾತ್ಪುಷ್ಪಸಂಛನ್ನಂ ಮಹಾರಾಜತಸಂನಿಭಮ್॥ ೧೮

ಶತಯೋಜನವಿಸ್ತೀರ್ಣಂ ವಿಮಲಂ ಚಾರುದರ್ಶನಮ್।
ಶ್ಲಕ್ಷ್ಣಂ ಶ್ರೀಮನ್ಮಹಚ್ಚೈವ ದುಷ್ಪ್ರಾಪಂ ಶಕುನೈರಪಿ ॥ ೧೯

---

ಆನಂದದಿಂದ ಪುಳಕಿತರಾದ ವಾನರವೀರರು (ಸುವೇಲದ ತಪ್ಪಲಲ್ಲಿದ್ದ) ಆ ವನೋಪವನಗಳನ್ನು ಪ್ರವೇಶಿಸಿದರು. ಹೂಗಳನ್ನು ಹಾರಿಸುತ್ತ ಸುಗಂಧಿಯಾಗಿದ್ದ ಗಾಳಿಯು ವಾನರರ ಮೂಗಿಗೆ ಹಿತಕರವಾಗಿ ಬೀಸಿತು! (೧೨–೧೩). ಇನ್ನು ಕೆಲವು ಕಪಿಯೂಥಪರು ಸುಗ್ರೀವನ ಅನುಜ್ಞೆಯನ್ನು ಪಡೆದು ತಮ್ಮ ಗುಂಪಿನಿಂದ ಹೊರಟು, ಪತಾಕೆಗಳಿಂದ ಶೋಭಿತವಾದ ಲಂಕೆಯ (ಹೊರವಲಯದಲ್ಲಿದ್ದ) ಉಪವನಗಳಿಗೆ ಹೋದರು (೧೪). ಹಕ್ಕಿಗಳನ್ನು ಹೆದರಿಸುತ್ತ ಮೃಗಗಳನ್ನೂ ಆನೆಗಳನ್ನೂ ಬೆದರಿಸುತ್ತ, ಗರ್ಜನೆಗಳಿಂದ ಲಂಕೆಯನ್ನು ನಡುಗಿಸುತ್ತ, ನಡೆಯುವ ರಭಸಕ್ಕೆ ನೆಲವನ್ನದುರಿಸುತ್ತ ಹೋದರು. ಅವರು ಕಾಲ್ತುಳಿತದಿಂದ ಧೂಳಿಯೂ ನಭವನ್ನಡರಿತು (೧೫–೧೬). ಆಗ ಲಂಕಾಪರಿಸರದ ವನಗಳಲ್ಲಿದ್ದ ಕರಡಿ, ಸಿಂಹ, ಹಂದಿ, ಕಾಡುಕೋಣ, ಆನೆ, ಜಂಕೆ–ಮೊದಲಾದ ಮೃಗಗಳು ಈ ಕಪಿವೀರರ ಚೀತ್ಕಾರಕ್ಕೆ ಹದರಿ ದಿಕ್ಕುದಿಕ್ಕಿಗೆ ಓಡಿಹೋದವು (೧೭). ಆ ತ್ರಿಕೂಟಶಿಖರವಾದರೋ ಉನ್ನತವಾಗಿ ಆಕಾಶವನ್ನು ಮುಟ್ಟುತ್ತಿತ್ತು. ಸುತ್ತಲೂ ಹೂಗಳಿಂದ ಆಚ್ಛಾದಿತವಾಗಿ ಬಂಗಾರಂದಂತೆ ಬೆಳೆಗುತ್ತಿತ್ತು, ನೂರು

ಮನಸಾಪಿ ದುರಾರೋಹಂ ಕಿಂ ಪುನಃ ಕರ್ಮಣಾ ಜನೈಃ ।
ನಿವಿಷ್ಟಾ ತತ್ರ ಶಿಖರೇ ಲಂಕಾ ರಾವಣಪಾಲಿತಾ ॥ ೨೦
ಶತಯೋಜನವಿಸ್ತೀರ್ಣಾ ತ್ರಿಂಶದ್ಯೋಜನಮಾಯತಾ।
ಸಾ ಪುರೀ ಗೋಪುರೈರುಚ್ಚೈಃ ಪಾಂಡರಾಂಬುದಸಂನಿಭೈಃ ॥ ೨೧
ಕಾಂಚನೇನ ಚ ಸಾಲೇನ ರಾಜತೇನ ಚ ಶೋಭಿತಾ ।
ಪ್ರಾಸಾದೈಶ್ಚ ವಿಮಾನೈಶ್ಚ ಲಂಕಾ ಪರಮಭೂಷಿತಾ ॥ ೨೨
ಘನೈರಿವಾತ ಪಾಪಾಯೇ ಮಧ್ಯಮಂ ವೈಷ್ಣವಂ ಪದಮ್।
ಯಸ್ಯಾಂ ಸ್ತಂಭಸಹಸ್ರೇಣ ಪ್ರಾಸಾದಃ ಸಮಲಂಕೃತಃ ॥ ೨೩
ಕೈಲಾಸಶಿಖರಾಕಾರೋ ದೃಶ್ಯತೇ ಖಮಿವೋಲ್ಲಿಖನ್ ।
ಚೈತ್ಯಃ ಸ ರಾಕ್ಷಸೇಂದ್ರಸ್ಯ ಬಭೂವ ಪುರಭೂಷಣಮ್ । ೨೪
ಶತೇನ ರಕ್ಷಸಾಂ ನಿತ್ಯಂ ಯಃ ಸಮಗ್ರೇಣ ರಕ್ಷ್ಯತೇ ।
ಮನೋಜ್ಞಾಂ ಕಾನನವತೀಂ ಪರ್ವತೈರುಪಶೋಭಿತಾಮ್ ॥ ೨೫

---

ಯೋಜನದಷ್ಟು ವಿಶಾಲವಾಗಿದ್ದ ತ್ರಿಕೂಟಗಿರಿಯು ನಿರ್ಮಲಾಗಿ ನಯನಾನಂದಕರವಾಗಿತ್ತು. ಗಿಡಮರಗಳಿಂದ ದಟ್ಟವಾಗಿ ಶೋಭಾಕರವಾಗಿ ದೊಡ್ಡದಾಗಿತ್ತು. ಹಕ್ಕಿಗಳಿಗೂ ನಿಲುಕದಷ್ಟು ಎತ್ತರವಾಗಿತ್ತು (೧೮-೧೯). ಮನಸ್ಸಿನಿಂದಲೂ ಏರಲಾರದಷ್ಟು ಎತ್ತರವಾದ ಆ ಶಿಖರವನ್ನು ಜನರು ಕಾಲ್ನಡಿಗೆಯಿಂದ ಹತ್ತಬಲ್ಲರೆ? ಅಂಥ ತ್ರಿಕೂಟಪರ್ವತದ ಶಿಖರವನ್ನು ರಾವಣಪಾಲಿತವಾದ ಲಂಕೆಯು ವಿರಾಜಮಾನವಾಗಿತ್ತು! ಆ ನಗರಿ ನೂರುಯೋಜನ ಉದ್ದವಾಗಿ ಮೂವತ್ತು ಯೋಜನ ಅಗಲವಾಗಿತ್ತು! ಬಿಳಿಯ ಮೋಡಗಳಂತಿರುವ ಉನ್ನತ ಗೋಪುರಗಳಿಂದ ಶೋಭಿಸುತ್ತಿತ್ತು (೨೦-೨೧). ಆ ನಗರದ ಸುತ್ತಲೂ ಚಿನ್ನದಿಂದಲೂ ಬೆಳ್ಳಿಯಿಂದಲೂ ಅಲಂಕೃತವಾದ ಪ್ರಾಕಾರವು ಕಂಗೊಳಿಸುತ್ತಿದ್ದಿತು. ಬೇಸಿಗೆಯು ಕಳೆದಮೇಲೆ ಮೇಘಖಂಡಗಳು ಗಗನವನ್ನ ಲಂಕರಿಸುವಂತೆ, ಉಪ್ಪರಿಗೆಗಳೂ ರಾಜಗೃಹಗಳೂ ಲಂಕೆಯನ್ನಲಂಕರಿಸಿದ್ದವು. ಆ ನಗರದ ಮಧ್ಯದಲ್ಲಿ ಸಾವಿರಕಂಬಗಳಿರುವ ಒಂದು ಪ್ರಸಾದವಿತ್ತು (೨೨-೨೩). ಆಕಾಶವನ್ನು ಭೇದಿಸಿಕೊಂಡುಹೋಗಿರುವ ಆ ಪ್ರಸಾದವು ಕೈಲಾಸಶಿಖರದಂತೆ ಶೋಭಿಸುತ್ತಿತ್ತು. ಲಂಕಾನಗರಕ್ಕೆ ಭೂಷಣವಾದ ಆ ಪ್ರಾಸಾದವು ರಾವಣನ ಅರಮನೆ. ಬಹುಮಂದಿ ರಾಕ್ಷಸರು ಸತತವೂ ಅದಕ್ಕೆ ಕಾವಲಾಗಿದ್ದರು. ಆ ನಗರವು ಉದ್ಯಾನ

ನಾನಾಧಾತುವಿಚಿತ್ರೈಶ್ಚ ಉದ್ಯಾನೈರುಪಶೋಭಿತಾಮ್ ।
ನಾನಾವಿಹಗಸಂಘುಷ್ಟಾಂ ನಾನಾಮೃಗನಿಷೇವಿತಾಮ್ ॥ ೨೬

ನಾನಾ ಕುಸುಮಸಂಛನ್ನಾಂ ನಾನಾರಾಕ್ಷಸಸೇವಿತಾಮ್ ।
ತಾಂ ಸಮೃದ್ಧಾಂ ಸಮೃದ್ಧಾರ್ಥಾಂ ಲಕ್ಷ್ಮೀವಾನ್ ಲಕ್ಷ್ಮಣಾಗ್ರಜಃ ॥

ರಾವಣಸ್ಯ ಪುರೀಂ ರಾಮೋ ದದರ್ಶ ಸಹ ವಾನರೈಃ ।
ತಾಂ ಮಹಾಗೃಹಸಂಬಾಧಾಂ ದೃಷ್ಟ್ವಾ ಲಕ್ಷ್ಮಣಪೂರ್ವಜಃ ॥ ೨೮

ನಗರೀಮಮರಪ್ರಖ್ಯೋ ವಿಸ್ಮಯಂ ಪ್ರಾಪ ವೀರ್ಯವಾನ್ ॥

ತಾಂ ರತ್ನಪೂರ್ಣಾಂ ಬಹುಸಂವಿಧಾನಾಂ
ಪ್ರಸಾದಮಾಲಾಭಿರಲಂಕೃತಾಂ ಚ ।
ಪುರೀಂ ಮಹಾಯಂತ್ರ ಕವಾಟಮುಖ್ಯಾಂ
ದದರ್ಶ ರಾಮೋ ಮಹತಾ ಬಲೇನ ॥ ೨೯

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕೋನಚತ್ವಾರಿಂಶಃ ಸರ್ಗಃ

---

ವನಗಳಿಂದಲೂ ಧಾತುಚಿತ್ರಿತಗಳಾದ ಕ್ರೀಡಾಪರ್ವತಗಳಿಂದಲೂ ಮನೋಹರವಾಗಿದ್ದಿತು (೨೪–೨೫). ಉದ್ಯಾನವನಗಳಲ್ಲಿ ಬಗೆಬಗೆಯ ಹಕ್ಕಿಗಳೂ ಮೃಗಗಳೂ ಸಂಚರಿಸುತ್ತಿದ್ದವು. ಬಗೆಬಗೆಯ ಹೂಗಳು ಅರಳಿದ್ದವು. ರಾಕ್ಷಸರು ತಿರುಗಾಡುತ್ತಿದ್ದರು. ಹೀಗೆ ಸಕಲ ಸಂಪತ್ತುಗಳಿಂದ ಸಮೃದ್ಧವಾದ ರಾವಣ ನಗರಿಯನ್ನು ಶ್ರೀರಾಮನೂ ವಾನರರೂ ಸವೇಲಶೈಲಾಗ್ರದಿಂದ ನೋಡಿದರು. ಮಹಾಸೌಧಗಳಿಂದ ತುಂಬಿದ್ದ ಲಂಕೆಯ ವೈಭವನ್ನು ಕಂಡು, ಅಮರೋಪಮನಾದ ಆ ಲಕ್ಷ್ಮಣಾಗ್ರಜನು ಬೆರಗಾದನು (೨೬–೨೮). ಆ ನಗರವು ಸಾಲು ಸಾಲಾದ ಪ್ರಸಾದಗಳಿಂದ ಭೂಷಿತವಾಗಿ ಉತ್ತಮವಸ್ತುಗಳಿಂದ ತುಂಬಿತ್ತು. ನಾನಾವಿಧವಾದ ರಕ್ಷಣಾಕಾರ್ಯದಲ್ಲಿ ನಿರತವಾಗಿತ್ತು. ದೊಡ್ಡ ದೊಡ್ಡ ಯಂತ್ರಗಳಿಂದಲೂ ದೃಢಕವಾಟಗಳಿಂದಲೂ ರಕ್ಷಿತವಾಗಿತ್ತು. ಶ್ರೀರಾಮನು ಬಹು ದೊಡ್ಡದಾದ ವಾನರಬಲದೊಡನೆ ಸುವೇಲಶಿಖರದಲ್ಲಿ ನಿಂತು, ಆ ಲಂಕಾನಗರವನ್ನು ನೋಡುತ್ತಿದ್ದನು (೨೯).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಮೂವತ್ತೊಂಬತ್ತನೆಯ ಸರ್ಗ

## ಚತ್ವಾರಿಂಶಃ ಸರ್ಗಃ

ರಾವಣಸುಗ್ರೀವನಿಯುದ್ಧಮ್

ತತೋ ರಾಮಃ ಸುವೇಲಾಗ್ರಂ ಯೋಜನದ್ವಯಮಂಡಲಮ್ ।
ಆರುರೋಹ ಸಸುಗ್ರೀವೋ ಹರಿಯೂಥಪಸಂವೃತಃ ॥ ೧

ಸ್ಥಿತ್ವಾ ಮುಹೂರ್ತಂ ತತ್ರೈವ ದಿಶೋ ದಶ ವಿಲೋಕಯನ್ ।
ತ್ರಿಕೂಟಶಿಖರೇ ರಮ್ಯೇ ನಿರ್ಮಿತಾಂ ವಿಶ್ವಕರ್ಮಣಾ ॥ ೨

ದದರ್ಶ ಲಂಕಾಂ ಸುನ್ಯಸ್ತಾಂ ರಮ್ಯಕಾನನಶೋಭಿತಾಮ್ ।
ತಸ್ಯಾಂ ಗೋಪುರಶೃಂಗಸ್ಥಂ ರಾಕ್ಷಸೇಂದ್ರಂ ದುರಾಸದಮ್ ॥ ೩

ಶ್ವೇತಚಾಮರಪರ್ಯಂತಂ ವಿಜಯಚ್ಛತ್ರಶೋಭಿತಮ್ ।
ರಕ್ತಚಂದನಸಂಲಿಪ್ತಂ ರತ್ನಾಭರಣಭೂಷಿತಮ್ ॥ ೪

### ಸರ್ಗ ೪೦

ಲಂಕೆಯ ಒಂದು ಗೋಪುರವನ್ನೇರಿ ಕುಳಿತಿದ್ದ ರಾವಣನನ್ನು ಕಂಡು ಸುಗ್ರೀವನು ಅಲ್ಲಿಗೆ ನೆಗೆಯುವುದು. ರಾವಣ ಸುಗ್ರೀವನ ಯುದ್ಧ

ಆಮೇಲೆ ಶ್ರೀರಾಮನು ಕುತೂಹಲದಿಂದ ಸುವೇಲಶಿಖರದ ತುದಿಯನ್ನೇರಿದನು. ಅವನೊಡನೆ ಸುಗ್ರೀವನೂ ಇತರ ಕಪಿಯೂಥಪರೂ ಹೋದರು. ಶಿಖರದ ಆ ತುದಿಯು ಎರಡು ಯೋಜನದಷ್ಟು ವಿಸ್ತಾರವಾಗಿತ್ತು (೧). ಅಲ್ಲಿ ಸ್ವಲ್ಪಕಾಲ ವಿಶ್ರಮಿಸಿಕೊಂಡು ಸುತ್ತಲೂ ನೋಡುತ್ತಿರಲು, ರಮ್ಯವಾದ ತ್ರಿಕೂಟಶಿಖರದಲ್ಲಿ ವಿಶ್ವಕರ್ಮನಿಂದ ನಿರ್ಮಿತವಾದ ಲಂಕಾನಗರವು ಸ್ಪಷ್ಟವಾಗಿ ಗೋಚರಿಸಿತು. ರಮಣೀಯಕಾನನಶೋಭಿತವಾಗಿ ವಿಶಾಲವಾಗಿದ್ದ ಆ ನಗರವನ್ನು ಶ್ರೀರಾಮನು ವೀಕ್ಷಿಸುತ್ತಿದ್ದನು. ಆಗ ಲಂಕೆಯ ಒಂದಾನೊಂದು ಗೋಪುರಾಗ್ರದಲ್ಲಿ ರಾಕ್ಷಸೇಂದ್ರನಾದ ರಾವಣನು ವೈಭವದಿಂದ ಕುಳಿತಿರುವುದು ಕಂಡಿತು! (೨–೩). ರಾವಣನ ಎರಡು ಪಾರ್ಶ್ವಗಳಲ್ಲಿಯೂ ಬಿಳಿಯ ಚಾಮರಗಳು ಬೀಸುತ್ತಿದ್ದವು. ಶಿರೋಭಾಗದಮೇಲೆ ವಿಜಯಸೂಚಕವಾದ ಶ್ವೇತಚ್ಛತ್ರವು ಶೋಭಿಸುತ್ತಿತ್ತು. ಆತನು ರಕ್ತಚಂದನವನ್ನು ಮೈಗೆ ತೊಡೆದುಕೊಂಡು ರತ್ನಾಭರಣಗಳನ್ನು ಧರಿಸಿದ್ದನು (೪).

ನೀಲಜೀಮೂತಸಂಕಾಶಂ ಹೇಮಸಂಛಾದಿತಾಂಬರಮ್ ।
ಐರಾವತವಿಷಾಣಾಗ್ರೈರುತ್ಕೃಷ್ಟ ಕಿಣವಕ್ಷಸಮ್ ॥ ೫

ಶಶಲೋಹಿತರಾಗೇಣ ಸಂವೀತಂ ರಕ್ತವಾಸಸಾ ।
ಸಂಧ್ಯಾತಪೇನ ಸಂವೀತಂ ಮೇಘರಾಶಿಮಿವಾಂಬರೇ ॥ ೬

ಪಶ್ಯತಾಂ ವಾನರೇಂದ್ರಾಣಾಂ ರಾಘವಸ್ಯಾಪಿ ಪಶ್ಯತಃ ।
ದರ್ಶನಾದ್ರಾಕ್ಷಸೇಂದ್ರಸ್ಯ ಸುಗ್ರೀವಃ ಸಹಸೋತ್ಥಿತಃ ॥ ೭

ಕ್ರೋಧವೇಗೇನ ಸಂಯುಕ್ತಃ ಸತ್ತ್ವೇನ ಚ ಬಲೇನ ಚ ।
ಅಚಲಾಗ್ರಾದಥೋತ್ಥಾಯ ಪುಪ್ಲುವೇ ಗೋಪುರಸ್ಥಲೇ ॥ ೮

ಸ್ಥಿತ್ವಾ ಮುಹೂರ್ತಂ ಸಂಪ್ರೇಕ್ಷ್ಯ ನಿರ್ಭಯೇನಾಂತರಾತ್ಮನಾ ।
ತೃಣೀಕೃತ್ಯ ಚ ತದ್ರಕ್ಷಃ ಸೋಽಬ್ರವೀತ್ಪರುಷಂ ವಚಃ ॥ ೯

ಲೋಕನಾಥಸ್ಯ ರಾಮಸ್ಯ ಸಖಾ ದಾಸೋಽಸ್ಮಿ ರಾಕ್ಷಸ ।
ನ ಮಯಾ ಮೋಕ್ಷ್ಯಸೇಽದ್ಯ ತ್ವಂ ಪಾರ್ಥಿವೇಂದ್ರಸ್ಯ ತೇಜಸಾ ॥ ೧೦

---

ಕರಿಯಮೋಡದಂತೆ ರಾಜಿಸುತ್ತಿದ್ದ ರಾವಣನು ಚಿನ್ನದ ಜರತಾರಿಯ ವಸ್ತ್ರವನ್ನುಟ್ಟಿದ್ದನು. ಅವನ ಎದೆಯಲ್ಲಿ ಐರಾವತದ ಕೊಂಬಿನ ತಿವಿತದಿಂದಾದ ಗಾಯದ ಕಲೆಯಿತ್ತು! (೫). ಮೊಲದ ರಕ್ತದಂತೆ ಕೆಂಪಾದ ಶಲ್ಯವನ್ನು ಹೊದೆದಿದ್ದ ಕರಿಯಬಣ್ಣದ ಆ ರಾಕ್ಷಸೇಂದ್ರನು, ಗಗನತಳದಲ್ಲಿ ಸಂಜೆಗೆಂಪಿನ ಬಿಸಿಲಿನಿಂದ ಅಮೃತವಾದ ಮೇಘದಂತೆ ಕಂಗೊಳಿಸಿದನು! (೬). ರಾವಣನನ್ನು ನೋಡಿದೊಡನೆಯೇ ಇತ್ತ ಸುಗ್ರೀವನು ಛಂಗನೆ ಎದ್ದುನಿಂತನು! ಬಲಪರಾಕ್ರಮಸಂವೀತನಾದ ಆ ವಾನರೇಂದ್ರನು ಕ್ರೋಧೋದ್ದೀಪಿತನಾಗಿ, ಇದೇನೆಂದು ಶ್ರೀರಾಮನೂ ವಾನರಸೇನಾನಿಗಳೂ ನೋಡುತ್ತಿರುವಷ್ಟರಲ್ಲಿ, ಸುವೇಲಶಿಖರದಿಂದ ರಾವಣನಿದ್ದ ಗೋಪುರಕ್ಕೆ ಒಂದೇ ನೆಗೆತದಿಂದ ಹಾರಿಬಿಟ್ಟನು! (೭–೮). ಸುಗ್ರೀವನು ಆ ಗೋಪುರಾಗ್ರವನ್ನು ಸೇರಿ, ಅಲ್ಲಿ ನಿರ್ಭೀತನಾಗಿ ರಾವಣನನ್ನು ಒಂದು ಕ್ಷಣಕಾಲ ನೋಡುತ್ತ ನಿಂತು, ಅವನನ್ನು ಹುಲ್ಲಿನಂತೆ ಕಡೆಗಣಿಸಿ, ''ಎಲಾ ರಾಕ್ಷಸ, ನಾನು ಲೋಕನಾಥನಾದ ಶ್ರೀರಾಮನಿಗೆ ಮಿತ್ರನೂ ಭೃತ್ಯನೂ ಆಗಿರುವ ಸುಗ್ರೀವ! ಆ ರಾಜಾಧಿರಾಜನ ತೇಜೋಬಲದಿಂದ ನಿನ್ನನ್ನು ನಿಗ್ರಹಿಸುವೆನು. ಇನ್ನು ನಿನಗೆ ಉಳಿಗಾಲವಿಲ್ಲ'' ಎಂದು ಕಠೋರವಾಗಿ ನುಡಿದನು (೯–೧೦).

ಇತ್ಯುಕ್ತ್ವಾ ಸಹಸೋತ್ಪತ್ಯ ಪುಪ್ಲುವೇ ತಸ್ಯ ಚೋಪರಿ ।
ಆಕೃಷ್ಯ ಮಕುಟಂ ಚಿತ್ರಂ ಪಾತಯಾಮಾಸ ತದ್ಭುವಿ ॥ ೧೧

ಸಮೀಕ್ಷ್ಯ ತೂರ್ಣಮಾಯಾಂತಮಾಬಭಾಷೇ ನಿಶಾಚರಃ ।
ಸುಗ್ರೀವಸ್ತ್ವಂ ಪರೋಕ್ಷಂ ಮೇ ಹೀನಗ್ರೀವೋ ಭವಿಷ್ಯಸಿ ॥ ೧೨

ಇತ್ಯುಕ್ತ್ವೋತ್ಥಾಯ ತಂ ಕ್ಷಿಪ್ರಂ ಬಾಹುಭ್ಯಾಮಾಕ್ಷಿಪತ್ತಲೇ ।
ಕಂದುವತ್ತಂ ಸಮುತ್ಥಾಯ ಬಾಹುಭ್ಯಾಮಾಕ್ಷಿಪದ್ಧರಿಃ ॥ ೧೩

ಪರಸ್ಪರಂ ಸ್ವೇದವಿದಿಗ್ಧಗಾತ್ರೌ
ಪರಸ್ಪರಂ ಶೋಣಿತರಕ್ತದೇಹೌ ।
ಪರಸ್ಪರಂ ಶ್ಲಿಷ್ಟನಿರುದ್ಧಚೇಷ್ಟೌ
ಪರಸ್ಪರಂ ಶಾಲ್ಮಲಿಕಿಂಶುಕೌ ಯಥಾ ॥ ೧४

ಮುಷ್ಟಿಪ್ರಹಾರೈಶ್ಚ ತಲಪ್ರಹಾರೈ-
ರರತ್ನಿಘಾತೈಶ್ಚ ಕರಾಗ್ರಘಾತೈಃ ।

---

ಮರುಕ್ಷಣದಲ್ಲಿಯೇ ರಾವಣನಮೇಲೆ ಎರಗಿ, ರತ್ನ ಖಚಿತವಾದ ಅವನ ಕಿರೀಟವನ್ನು ಕಿತ್ತೆಸೆದನು! ಆಗ ರಾವಣನು "ಎಲಾ ವಾನರ, ನನ್ನ ಪರೋಕ್ಷದಲ್ಲಿ ನೀನು ಸುಗ್ರೀವನಾಗಿರಬಹುದು! ಈಗ ನನಗೆ ಗೋಚರಿಸಿದಮೇಲೆ ಹೀನಗ್ರೀವನಾಗುವೆ *ನಿನ್ನ ಕೊರಳನ್ನು ಮುರಿಯುವೆನು!" ಎಂದು ಹೇಳಿ ಧಿಗ್ಗನೆ ಎದ್ದು ನಿಂತನು (೧೧–೧೨). ಎದ್ದು ನಿಂತವನೇ ಎರಡು ಕೈಗಳಿಂದ ಸುಗ್ರೀವನನ್ನು ಮೇಲೆತ್ತಿ ನೆಲದಮೇಲೊಗೆದನು. ಸುಗ್ರೀವನು ಚೆಂಡಿನಂತೆ ಪುಟಿದೆದ್ದು ರಾವಣನನ್ನು ಉರುಳಿಸಿದನು. ಇಬ್ಬರಿಗೂ ಹೊಡೆದಾಟ ಸಮನಿಸಿತು (೧೩). ಖಾಡಾಖಾಡಿಯಾದ ಆ ಹೊಡೆದಾಟದಲ್ಲಿ ಇಬ್ಬರೂ ಬೆವರಿ ಒದ್ದೆಯಾದರು. ಇಬ್ಬರ ಮೈಯಿಂದಲೂ ರಕ್ತ ಚಿಮ್ಮಿತು. ಇಬ್ಬರೂ ಅಲ್ಲಾಡದಂತೆ ಒಬ್ಬರನ್ನೊಬ್ಬರು ಹಿಡಿದು ಅಮುಕಿದರು. ಗಾಯಗೊಂಡ ಅವರಿಬ್ಬರೂ ಅರಳಿದ ಬೂರಗ ಮತ್ತು ಮುತ್ತುಗಮರಗಳಂತೆ ಕಂಗೊಳಿಸಿದರು ! (೧४). ಮಹಾಬಲರಾದ ಆ ವಾನರರಾಕ್ಷಸೇಂದ್ರರು ಒಬ್ಬರನ್ನೊಬ್ಬರು ಗುದ್ದುತ್ತ ಚಚ್ಚುತ್ತ

---

* ಸುಗ್ರೀವ = ಸುಂದರವಾದ ಕೊರಳುಳ್ಳವನು. ಹೀನಗ್ರೀವ = ಕೊರಳು ಮುರಿಯಲ್ಪಟ್ಟವನು.

ತೌ ಚಕ್ರತುರ್ಯುದ್ಧಮಸಹ್ಯರೂಪಂ
ಮಹಾಬಲೌ ವಾನರರಾಕ್ಷಸೇಂದ್ರೌ ॥ ೧೫

ಕೃತ್ವಾ ನಿಯುದ್ಧಂ ಭೃಶಮುಗ್ರವೇಗೌ
ಕಾಲಂ ಚಿರಂ ಗೋಪುರವೇದಿಮಧ್ಯೇ ।
ಉತ್ಕ್ಷಿಪ್ಯ ಚಾಕ್ಷಿಪ್ಯ ವಿನಮ್ಯ ದೇಹೌ
ಪಾದಕ್ರಮಾದ್ಗೋಪುರವೇದಿಲಗ್ನೌ ॥ ೧೬

ಅನ್ಯೋನ್ಯಮಾವಿಧ್ಯ ವಿಲಗ್ನದೇಹೌ
ತೌ ಪೇತತುಃ ಸಾಲನಿಖಾತಮಧ್ಯೇ ।
ಉತ್ಪೇತತುರ್ಭೂತಲಮಸ್ಪೃಶಂತೌ
ಸ್ಥಿತ್ವಾ ಮುಹೂರ್ತಂ ತ್ವಭಿನಿಶ್ವಸಂತೌ ॥ ೧೭

ಆಲಿಂಗ್ಯ ಚಾವಲ್ಗ್ಯ ಚ ಬಾಹುಯೋಕ್ತ್ರೈಃ
ಸಂಯೋಜಯಾಮಾಸತುರಾಹವೇ ತೌ ।
ಸಂರಂಭಶಿಕ್ಷಾಬಲಸಂಪ್ರಯುಕ್ತೌ
ಸಂಚೇರತುಃ ಸಂಪ್ರತಿ ಯುದ್ಧಮಾರ್ಗೈಃ ॥ ೧೮

---

ಮೊಳಕೈಗಳಿಂದ ತಿವಿಯುತ್ತ ಉಗುರುಗಳಿಂದ ಪರಚುತ್ತ ಭೀಕರವಾದ ದ್ವಂದ್ವಯುದ್ಧವನ್ನಾರಂಭಿಸಿದರು (೧೫). ಉಗ್ರವೇಗದಿಂದ ಬಹಳ ಹೊತ್ತಿನ ವರೆಗೆ ಕುಸ್ತಿಯಾಡಿದರು. ಒಬ್ಬರನ್ನೊಬ್ಬರು ಎತ್ತಿ ಎಸೆಯುತ್ತ ತಳ್ಳುತ್ತ ಮೈಬಗ್ಗಿಸಿ ವರಸೆಯಿಂದ ಹೆಜ್ಜೆಯಿಡುತ್ತ ಮೇಲೆ ಬೀಳಲು ಸಮಯವನ್ನು ಕಾಯುತ್ತ ಗೋಪುರವೇದಿಕೆಯಮೇಲೆ (ಅಲ್ಲಾಡದೆ) ನಿಂತರು! (೧೬). ಆಮೇಲೆ ಥಟ್ಟನೆ ಒಬ್ಬರಮೇಲೊಬ್ಬರು ಏರಿಹೋಗಿ ತೆಕ್ಕೆಹಿಡಿದು ಹೋರಾಡುತ್ತ ಗೋಪುರದ ಬಳಿ ಇದ್ದ ಕಂದಕದ ನಡುವೆ ಉರುಳಿಬಿದ್ದರು! ಆದರೆ ನೆಲವನ್ನು ಮುಟ್ಟುವುದರೊಳಗೆ ಛಂಗನೆ ಮೇಲೆಹಾರಿ ಗೋಪುರದ ಮೇಲೆ ಬಂದು ಏದುತ್ತ ನಿಂತರು (೧೭). ಛಲ, ಯುದ್ಧಾಭ್ಯಾಸ, ದೇಹಬಲಗಳಲ್ಲಿ ಸಾಟಿಯಾದ ರಾವಣ ಸುಗ್ರೀವರು ಮತ್ತೆ ಒಬ್ಬರಮೇಲೊಬ್ಬರು ಎರಗಿ ಬಾಹುಪಾಶಗಳಿಂದ ಬಿಗಿಹಿಡಿದು, ಬಗೆಬಗೆಯ ಪಟ್ಟುಗಳನ್ನು ಮೆರೆಸುತ್ತ ಹೊಡೆದಾಡಿದರು.

ಶಾರ್ದೂಲಸಿಂಹಾವಿವ ಜಾತದರ್ಪೌ
ಗಜೇಂದ್ರಪೋತಾವಿವ ಸಂಪ್ರಯುಕ್ತೌ ।
ಸಂಹತ್ಯ ಚಾಪೀಡ್ಯ ಚ ತಾವುರೋಭ್ಯಾಂ
ನಿಪೇತತುರ್ವೈ ಯುಗಪದ್ಧರಣ್ಯಾಮ್ ॥ ೧೯

ಉದ್ಯಮ್ಯ ಚಾನ್ಯೋನ್ಯಮಧಿಕ್ಷಿಪಂತೌ
ಸಂಚಕ್ರಮಾತೇ ಬಹುಯುದ್ಧಮಾರ್ಗೈಃ ।
ವ್ಯಾಯಾಮ ಶಿಕ್ಷಾಬಲಸಂಪ್ರಯುಕ್ತೌ
ಕ್ಲಮಂ ನ ತೌ ಜಗ್ಮತುರಾಶು ವೀರೌ ॥ ೨೦

ಬಾಹೂತ್ತಮೈರ್ವಾರಣವಾರಣಾಭೈ-
ರ್ನಿವಾರಯಂತೌ ವರವಾರಣಾಭೌ ।
ಚಿರೇಣ ಕಾಲೇನ ತು ಸಂಪ್ರಯುಕ್ತೌ
ಸಂಚೇರತುರ್ಮಂಡಲಮಾರ್ಗಮಾಶು ॥ ೨೧

ತೌ ಪರಸ್ಪರಮಾಸಾದ್ಯ ಯತ್ತಾವನ್ಯೋನ್ಯಸೂದನೇ ।
ಮಾರ್ಜಾರಾವಿವ ಭಕ್ಷಾರ್ಥೇ ವಿತಸ್ಥಾತೇ ಮುಹುರ್ಮುಹುಃ ॥ ೨೨

---

ಕೊಬ್ಬಿದ ಹೆಬ್ಬುಲಿಗಳಂತೆಯೂ ಆನೆಯ ಮರಿಗಳಂತೆಯೂ* ದರ್ಪೋದ್ಧತರಾದ ಅವರೀರ್ವರು ಅನ್ಯೋನ್ಯವಾಗಿ ಎದೆಯಿಂದ ತಬ್ಬಿಹಿಡಿದು ಹೆಣಗಿ ಹೋರಾಡುತ್ತ ದೊಪ್ಪನೆ ನೆಲದಮೇಲೆ ಉರುಳಿಬಿದ್ದರು! (೧೮–೧೯). ಮತ್ತೆ ಮೇಲೆದ್ದು ಒಬ್ಬರನ್ನೊಬ್ಬರು ತೆಗಳುತ್ತ ಮಲ್ಲಯುದ್ಧದ ನಾನಾವರಸೆಗಳನ್ನು ಪ್ರದರ್ಶಿಸುತ್ತ ಹೊಯ್ದಾಡಿದರು. ವ್ಯಾಯಾಮ, ಅಭ್ಯಾಸಗಳಲ್ಲಿ ಪಳಗಿ ದೇಹಬಲಸಂಪನ್ನರಾದ ಆ ವೀರರಿಗೆ ಬಹಳ ಹೊತ್ತು ಹೊಯ್ದಾಡಿದರೂ ಬಳಲಿಕೆ ತೋರಲಿಲ್ಲ (೨೦). ಸಲಗಗಳಂತಿದ್ದ ಆ ಸಾಹಸಿಗಳು ಸೊಂಡಿಲುಗಳಂತೆ ಪುಷ್ಟವಾದ ತಮ್ಮ ಬಾಹುಗಳಿಂದ ಪರಸ್ಪರವಾಗಿ ತಳ್ಳುತ್ತ, ತಿವಿಯುತ್ತ, ಮಂಡಲಗತಿಯಿಂದ ಸುತ್ತುತ್ತ ಹೊಡೆದಾಡಿದರು (೨೧). ಪರಸ್ಪರವಾಗಿ ಮಟ್ಟಹಾಕಬೇಕೆಂಬ ದಿಟ್ಟತನದಲ್ಲಿ

---

* ಶಾರ್ದೂಲಸಿಂಹೌ - ಶಾರ್ದೂಲಗಳಲ್ಲಿ ಶ್ರೇಷ್ಠರು, ಹೆಬ್ಬುಲಿಗಳು. ಶಾರ್ದೂಲ ಮತ್ತು ಸಿಂಹಗಳಂತೆ ಎಂದೂ ಅರ್ಥ ಹೇಳಬಹುದು. ದೇಹಲಾಘವವನ್ನು ಸೂಚಿಸುವುದಕ್ಕಾಗಿ ಆನೆಯ ಮರಿಗಳಿಗೆ ಹೋಲಿಕೆಯನ್ನು ಕೊಡಲಾಗಿದೆ.

ಮಂಡಲಾನಿ ವಿಚಿತ್ರಾಣಿ ಸ್ಥಾನಾನಿ ವಿವಿಧಾನಿ ಚ ।
ಗೋಮೂತ್ರಿಕಾಣಿ ಚಿತ್ರಾಣಿ ಗತಪ್ರತ್ಯಾಗತಾನಿ ಚ ॥ ೨೩

ತಿರಶ್ಚೀನಗತಾನ್ಯೇವ ತಥಾ ವಕ್ರಗತಾನಿ ಚ ।
ಪರಿಮೋಕ್ಷಂ ಪ್ರಹಾರಾಣಾಂ ವರ್ಜನಂ ಪರಿಧಾವನಮ್ ॥ ೨४

ಅಭಿದ್ರವಣಮಾಪ್ಲಾವಮಾಸ್ಥಾನಂ ಚ ಸವಿಗ್ರಹಮ್ ।
ಪರಾವೃತ್ತಮಪಾವೃತ್ತಮವದ್ರುತಮವಪ್ಲುತಮ್ ॥ ೨೫

ಉಪನ್ಯಸ್ತಮಪನ್ಯಸ್ತಂ ಯುದ್ಧಮಾರ್ಗವಿಶಾರದೌ ॥
ತೌ ಸಂಚೇರತುರನ್ಯೋನ್ಯಂ ವಾನರೇಂದ್ರಶ್ಚ ರಾವಣಃ ॥ ೨೬

ಏತಸ್ಮಿನ್ನಂತರೇ ರಕ್ಷೋ ಮಾಯಾಬಲಮಥಾತ್ಮನಃ ।
ಆರಬ್ಧುಮುಪಸಂಪೇದೇ ಜ್ಞಾತ್ವಾ ತಂ ವಾನರಾಧಿಪಃ ॥ ೨೭

ಉತ್ಪಪಾತ ತದಾಕಾಶಂ ಜಿತಕಾಶೀ ಜಿತಕ್ಲಮಃ ।
ರಾವಣಃ ಸ್ಥಿತ ಏವಾತ್ರ ಹರಿರಾಜೇನ ವಂಚಿತಃ ॥ ೨೮

---

ಉದ್ಯುಕ್ತರಾದ ರಾವಣಸುಗ್ರೀವರು, ತಿಂಡಿಗಾಗಿ ಕಚ್ಚಾಡುವ ಎರಡು ಬೆಕ್ಕುಗಳಂತೆ ಕಿತ್ತಾಡಿದರು! (೨೨). ಮಲ್ಲಯುದ್ಧದಲ್ಲಿ ವಿಶಾರದರಾದ ಆ ವೀರರು ವಿಚಿತ್ರಮಂಡಲಗತಿಯಿಂದ ಸುತ್ತುತ್ತ ವಿವಿಧ ಸ್ಥಾನಗಳಲ್ಲಿ ನಿಲ್ಲುತ್ತ ಗೋಮೂತ್ರಿಕಾದಿಗತಿಗಳಿಂದ ಚಲಿಸುತ್ತ ಗತಪ್ರತ್ಯಾಗತಗಳಿಂದ ಸರಿಯುತ್ತ ತಿರಶ್ಚೀನಗತಿಯನ್ನೂ ವಕ್ರಗತಿಯನ್ನೂ ಬಳಸುತ್ತ ಎದುರಾಳಿಯ ಹೊಡೆತಗಳನ್ನು ಪರಿಮೋಕ್ಷ ವರ್ಜನ ಪರಿಧಾವನಗಳಿಂದ ತಪ್ಪಿಸಿಕೊಳ್ಳುತ್ತ ಅಭಿದ್ರವಣ- ಆಪ್ಲಾವ-ಆಸ್ಥಾನ-ವಿಗ್ರಹ-ಪರಾವೃತ್ತ-ಅಪಾವೃತ್ತ-ಅವದ್ರುತ-ಅವಪ್ಲುತ-ಉಪನ್ಯಸ್ತ-ಅಪನ್ಯಸ್ತ ಮುಂತಾದ ಗತ್ತುಗಳಿಂದ* ಹೋರಾಡಿದರು (೨೩-೨೬). ಹೀಗೆ ಸರಿಜೋಡಿಯಿಂದ ಹೋರಾಡುತ್ತಿರುವಾಗ ರಾವಣನು ತನ್ನ ಮಾಯಾಬಲವನ್ನು ತೋರಿಸಲಾರಂಭಿಸಿದನು. (ಸುತ್ತಲೂ ಅನೇಕ ರಾವಣರು ಕಾಣಿಸತೊಡಗಿದರು.) ರಾವಣನ ಈ ಸಂಚನ್ನರಿತೊಡನೆ, ಜಯಶಾಲಿಯೂ ಅಯಾಸವನ್ನರಿಯದವನೂ ಆದ ಆ ವಾನರೇಂದ್ರನು ಥಟ್ಟನೆ

---

* ವಿವರಗಳಿಗೆ ಅನುಬಂಧವನ್ನು ನೋಡಿ.

ಅಥ ಹರಿವರನಾಥಃ ಪ್ರಾಪ್ಯ ಸಂಗ್ರಾಮಕೀರ್ತಿಂ
ನಿಶಿಚರಪತಿಮಾಜೌ ಯೋಜಯಿತ್ವಾ ಶ್ರಮೇಣ ।
ಗಗನಮತಿವಿಶಾಲಂ ಲಂಘಯಿತ್ವಾರ್ಕಸೂನು-
ರ್ಹರಿವರಗಣಮಧ್ಯೇ ರಾಮಪಾರ್ಶ್ವಂ ಜಗಾಮ ॥ ೨೯

ಇತಿ ಸ ಸವಿತೃ ಸೂನುಸ್ತತ್ರ ತತ್ಕರ್ಮ ಕೃತ್ವಾ
ಪವನಗತಿರನೀಕಂ ಪ್ರಾವಿಶತ್ಸಂಪ್ರಹೃಷ್ಟಃ ।
ರಘುವರನೃಪಸೂನೋರ್ವರ್ಧಯನ್ ಯುದ್ಧಹರ್ಷಂ
ತರುಮೃಗಗಣಮುಖ್ಯೈಃ ಪೂಜ್ಯಮಾನೋ ಹರೀಂದ್ರಃ ॥

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತ್ವಾರಿಂಶಃ ಸರ್ಗಃ

---

ಆಕಾಶಕ್ಕೆ ನೆಗೆದುಬಿಟ್ಟನು! ಸುಗ್ರೀವನ ತಂತ್ರವನ್ನರಿಯದೇ ವಂಚಿತನಾದ ರಾವಣನು ಸುಮ್ಮನೆ ಆಕಾಶವನ್ನು ನೋಡುತ್ತ ನಿಂತನು! (೨೭-೨೮). ಇತ್ತ ಸೂರ್ಯಪುತ್ರನಾದ ಸುಗ್ರೀವನಾದರೋ, ರಾವಣನೊಡನೆ ಸಮಬಲದಿಂದ ಹೋರಾಡಿದನೆಂಬ ಕೀರ್ತಿಯನ್ನು ಗಳಿಸಿ, ರಾವಣನನ್ನು ಚೆನ್ನಾಗಿ ದಣಿಸಿ, ವಿಶಾಲವಾದ ಆಕಾಶಮಾರ್ಗವನ್ನು ಲಂಘಿಸಿ, ವಾನರಸೇನಾಮಧ್ಯದಲ್ಲಿದ್ದ ಶ್ರೀರಾಮನ ಬಳಿಗೆ ಬಂದುಬಿಟ್ಟನು! (೨೯). ಈ ರೀತಿಯಲ್ಲಿ ಸೂರ್ಯ-ಸುತನಾದ ಸುಗ್ರೀವನು ಅದ್ಭುತಕೃತ್ಯವೊಂದನ್ನು ನಡೆಸಿ ವಾಯುವೇಗದಿಂದ ಬಂದು ತನ್ನ ಸೇನೆಯನ್ನು ಹರ್ಷದಿಂದ ಪ್ರವೇಶಿಸಿದನು. ಆ ಕಪೀಂದ್ರನು ರಾಘವನ ಸಮರೋತ್ಸಾಹವನ್ನು ವರ್ಧಿಸಿ ಕಪಿವೀರರ ಪ್ರಶಂಸೆಗೆ ಪಾತ್ರನಾದನು (೩೦).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ನಲವತ್ತನೆಯ ಸರ್ಗ

---

## ಏಕಚತ್ವಾರಿಂಶಃ ಸರ್ಗಃ

### ಅಂಗದದೂತ್ಯಮ್

ಅಥ ತಸ್ಮಿನ್ನಿಮಿತ್ತಾನಿ ದೃಷ್ಟ್ವಾ ಲಕ್ಷ್ಮಣಪೂರ್ವಜಃ ।
ಸುಗ್ರೀವಂ ಸಂಪರಿಷ್ವಜ್ಯ ತದಾ ವಚನಮಬ್ರವೀತ್ ॥ ೧

ಅಸಂಮಂತ್ರ್ಯ ಮಯಾ ಸಾರ್ಧಂ ತದಿದಂ ಸಾಹಸಂ ಕೃತಮ್ ।
ಏವಂ ಸಾಹಸಕರ್ಮಾಣಿ ನ ಕುರ್ವಂತಿ ಜನೇಶ್ವರಾಃ ॥ ೨

ಸಂಶಯೇ ಸ್ಥಾಪ್ಯ ಮಾಂ ಚೇದಂ ಬಲಂ ಚ ಸವಿಭೀಷಣಮ್ ।
ಕಷ್ಟಂ ಕೃತಮಿದಂ ವೀರ ಸಾಹಸಂ ಸಾಹಸಪ್ರಿಯ ॥ ೩

ಇದಾನೀಂ ಮಾ ಕೃಥಾ ವೀರ ಏವಂವಿಧಮಚಿಂತಿತಮ್ ।
ತ್ವಯಿ ಕಿಂಚಿತ್ಸಮಾಪನ್ನೇ ಕಿಂ ಕಾರ್ಯಂ ಸೀತಯಾ ಮಮ ॥ ೪

ಭರತೇನ ಮಹಾಬಾಹೋ ಲಕ್ಷ್ಮಣೇನ ಯವೀಯಸಾ ।
ಶತ್ರುಘ್ನೇನ ಚ ಶತ್ರುಘ್ನ ಸ್ವಶರೀರೇಣ ವಾ ಪುನಃ ॥ ೫

### ಸರ್ಗ ೪೧

ಸುಗ್ರೀವನ ಸಾಹಸವನ್ನು ಕಂಡು ಶ್ರೀರಾಮನ ಸಂತಾಪ.
ಉತ್ಪಾತದರ್ಶನ. ಅಂಗದನ ರಾಯಭಾರ.

ಅನಂತರ ಶ್ರೀರಾಮನು ಸುಗ್ರೀವನ ಮೈಯಲ್ಲಾದ ಯುದ್ಧದ ಗುರುತುಗಳನ್ನು ಕಂಡು, ಅವನನ್ನಪ್ಪಿಕೊಂಡು ಹೀಗೆಂದನು : ''ಮಿತ್ರ–ಸುಗ್ರೀವ, ನನ್ನೊಡನೆ ಸಮಾಲೋಚಿಸದೆ ಎಂತಹ ಸಾಹಸಕೃತ್ಯವನ್ನು ಮಾಡಿಬಿಟ್ಟೆ! ಪ್ರಭುಗಳಾದವರು ಹೀಗೆ ದುಡುಕಿನ ಕೆಲಸವನ್ನು ಮಾಡಬಾರದು (೧–೨). ವೀರಾಗ್ರಣಿ, ನೀನು ಸಾಹಸಪ್ರಿಯನೇ ಹೌದು. ಆದರೆ ನನ್ನನ್ನೂ ವಿಭೀಷಣನನ್ನೂ ಈ ಸೇನೆಯನ್ನೂ ಸಂಶಯಕ್ಕೆ ಗುರಿಮಾಡಿ, ಈ ಅಪಾಯಕರವಾದ ಕಾರ್ಯಕ್ಕೆ ಕೈ ಹಾಕಬಹುದೆ? ಸುಗ್ರೀವ, ಇನ್ನೊಮ್ಮೆ ನನಗೆ ಹೇಳದೆ ಇಂತಹ ಕೆಲಸದಲ್ಲಿ ತೊಡಗಬೇಡ. ಗೆಳೆಯ, ಒಂದು ವೇಳೆ ಏನಾದರೂ ನಿನಗೆ ಹೆಚ್ಚು ಕಡಿಮೆಯಾಗಿಬಿಟ್ಟಿದ್ದರೆ ಗತಿಯೇನು? ಆಗ ನನಗೆ ಸೀತೆಯಿಂದ ಆಗಬೇಕಾದ್ದೇನು? (೩–೪). ಭರತಲಕ್ಷ್ಮಣಶತ್ರುಘ್ನರಿಂದಾಗಲಿ ಆಗತಕ್ಕದ್ದೇನು?

ತ್ವಯಿ ಚಾನಾಗತೇ ಪೂರ್ವಮಿತಿ ಮೇ ನಿಶ್ಚಿತಾ ಮತಿಃ ।
ಜಾನತಶ್ಚಾಪಿ ತೇ ವೀರ್ಯಂ ಮಹೇಂದ್ರವರುಣೋಪಮ ॥ ೬

ಹತ್ವಾಹಂ ರಾವಣಂ ಯುದ್ಧೇ ಸಪುತ್ರಬಲವಾಹನಮ್ ।
ಅಭಿಷಿಚ್ಯ ಚ ಲಂಕಾಯಾಂ ವಿಭೀಷಣಮಥಾಪಿ ಚ ॥ ೭

ಭರತೇ ರಾಜ್ಯಮಾವೇಶ್ಯ ತ್ಯಕ್ಷ್ಯೇ ದೇಹಂ ಮಹಾಬಲ ।
ತಮೇವಂವಾದಿನಂ ರಾಮಂ ಸುಗ್ರೀವಃ ಪ್ರತ್ಯಭಾಷತ ॥ ೮

ತವ ಭಾರ್ಯಾಪಹರ್ತಾರಂ ದೃಷ್ಟ್ವಾ ರಾಘವ ರಾವಣಮ್ ।
ಮರ್ಷಯಾಮಿ ಕಥಂ ವೀರ ಜಾನನ್ ಪೌರುಷಮಾತ್ಮನಃ ॥ ೯

ಇತ್ಯೇವಂವಾದಿನಂ ವೀರಮಭಿನಂದ್ಯ ಸ ರಾಘವಃ ।
ಲಕ್ಷ್ಮಣಂ ಲಕ್ಷ್ಮಿಸಂಪನ್ನಮಿದಂ ವಚನಮಬ್ರವೀತ್ ॥ ೧೦

ಪರಿಗೃಹ್ಯೋದಕಂ ಶೀತಂ ವನಾನಿ ಫಲವಂತಿ ಚ ।
ಬಲೌಘಂ ಸಂವಿಭಜ್ಯೇಮಂ ವ್ಯೂಹ್ಯ ತಿಷ್ಠೇಮ ಲಕ್ಷ್ಮಣ ॥ ೧೧

---

ಕೊನೆಗೆ ನನ್ನ ಈ ದೇಹದಿಂದಾದರೂ ಏನು ಪ್ರಯೋಜನ? ಮಹಾಬಾಹು – ಸುಗ್ರೀವ, ಶೌರ್ಯದಲ್ಲಿ ನೀನು ದೇವೇಂದ್ರ ವರುಣರಿಗೆ ಸಮನೆಂಬುದು ಗೊತ್ತಿದ್ದರೂ ನಾನು ಚಿಂತಾಗ್ರಸ್ತನಾದೆ. ಸುಖವಾಗಿ ನೀನು ಬರದಿದ್ದರೆ, ಏನುಮಾಡಬೇಕೆಂದು ನಾನು ನಿಶ್ಚಯಸಿಕೊಂಡಿದ್ದೆ (೫–೬). ಆ ರಾವಣನನ್ನು ಅವನ ಪುತ್ರ ಸೇನಾವಹನಗಳೊಡನೆ ಕೊಂದು ಅರೆದು, ವಿಭೀಷಣನಿಗೆ ಲಂಕೆಯಲ್ಲಿ ಪಟ್ಟಗಟ್ಟಿ, ಭರತನಿಗೆ ಕೋಸಲರಾಜ್ಯವನ್ನು ವಹಿಸಿಕೊಟ್ಟು, ಸುಗ್ರೀವ, ಈ ದೇಹವನ್ನು ತ್ಯಜಿಸಬೇಕೆಂದು ನಿಶ್ಚಯಿಸಿಕೊಂಡಿದ್ದೆ!'' (೭–೮). ಶ್ರೀರಾಮನು ಹೀಗೆ ನುಡಿಯುತ್ತಿರಲು, ಸುಗ್ರೀವನು ''ರಘುಕುಲತಿಲಕ, ನಿನ್ನ ಪತ್ನಿಯನ್ನು ಕದ್ದೊಯ್ದ ರಾವಣನನ್ನು ಕಣ್ಣಲ್ಲಿ ಕಂಡಮೇಲೆ, ಹೇಗೆ ತಾನೆ ನಾನು ಸುಮ್ಮನಿರಲಿ! ನನ್ನ ಪೌರುಷವೆಷ್ಟೆಂಬ ಅರಿವಿರುವಾಗ ಹೇಗೆ ಸಹಿಸಿಕೊಂಡಿರಲಿ!'' ಎಂದು ಹೇಳಿದನು (೯). ಶ್ರೀರಾಮನು ಸುಗ್ರೀವನ ಸಾಮರ್ಥ್ಯವನ್ನಭಿನಂದಿಸಿ ಲಕ್ಷ್ಮಣನಕಡೆಗೆ ತಿರುಗಿ ''ಲಕ್ಷ್ಮಣ, ಸುತ್ತಲೂ ಕಾಣುವ ಈ ವನಗಳಲ್ಲಿ ಬೇಕಾದಷ್ಟು ಶೀತಲೋದಕವೂ ಹಣ್ಣುಗಳೂ ಇವೆ. ನಮ್ಮ ಸೇನೆಯನ್ನು ಸೇನಾಧ್ಯಕ್ಷರಿಗೆ ವಿಭಾಗಿಸಿಕೊಟ್ಟು ವ್ಯೂಹಾಕಾರಾವಾಗಿ ನಿಲ್ಲೋಣ (೧೦–೧೧).

ಲೋಕಕ್ಷಯಕರಂ ಭೀಮಂ ಭಯಂ ಪಶ್ಯಾಮ್ಯುಪಸ್ಥಿತಮ್ ।
ನಿಬರ್ಹಣಂ ಪ್ರವೀರಾಣಾಮೃಕ್ಷವಾನರರಕ್ಷಸಾಮ್ ॥ ೧೨

ವಾತಾಶ್ಚ ಪರುಷಾ ವಾಂತಿ ಕಂಪತೇ ಚ ವಸುಂಧರಾ ।
ಪರ್ವತಾಗ್ರಾಣಿ ವೇಪಂತೇ ಪತಂತಿ ಧರಣೀರುಹಾಃ ॥ ೧೩

ಮೇಘಾಃ ಕ್ರವ್ಯಾದಸಂಕಾಶಾಃ ಪರುಷಾಃ ಪರುಷಸ್ವನಾಃ ।
ಕ್ರೂರಾಃ ಕ್ರೂರಂ ಪ್ರವರ್ಷಂತಿ ಮಿಶ್ರಂ ಶೋಣಿತಬಿಂದುಭಿಃ ॥ ೧೪

ರಕ್ತಚಂದನಸಂಕಾಶಾ ಸಂಧ್ಯಾ ಪರಮದಾರುಣಾ ।
ಜ್ವಲಚ್ಚ ನಿಪತತ್ಯೇತದಾದಿತ್ಯಾದಗ್ನಿಮಂಡಲಮ್ ॥ ೧೫

ಆದಿತ್ಯಮಭಿವಾಶ್ಯಂತಿ ಜನಯಂತೋ ಮಹದ್ಭಯಮ್ ।
ದೀನಾ ದೀನಸ್ವರಾ ಘೋರಾ ಅಪ್ರಶಸ್ತಾ ಮೃಗದ್ವಿಜಾಃ ॥ ೧೬

ರಜನ್ಯಾಮಪ್ರಕಾಶಶ್ಚ ಸಂತಾಪಯತಿ ಚಂದ್ರಮಾಃ ।
ಕೃಷ್ಣರಕ್ತಾಂಶುಪರ್ಯಂತೋ ಯಥಾ ಲೋಕಸ್ಯ ಸಂಕ್ಷಯೇ ॥ ೧೭

ಹ್ರಸ್ವೋ ರೂಕ್ಷೋಽಪ್ರಶಸ್ತಶ್ಚ ಪರಿವೇಷಃ ಸುಲೋಹಿತಃ ।
ಆದಿತ್ಯಮಂಡಲೇ ನೀಲಂ ಲಕ್ಷ್ಮ ಲಕ್ಷ್ಮಣ ದೃಶ್ಯತೇ ॥ ೧೮

---

ಲೋಕಕ್ಷಯಕರವಾದ ದಾರುಣಪರಿಸ್ಥಿತಿಯು ಉದ್ಭವಿಸಿತೆಂದು ಕಾಣುತ್ತಿದೆ. ನಮ್ಮ ಭಲ್ಲೂಕವಾನರರಿಗೂ ಅತ್ತಕಡೆ ರಾಕ್ಷಸರಿಗೂ ವಿನಾಶಕಾಲವು ಪ್ರಾಪ್ತವಾಗಿದೆ. ಗಾಳಿ ಬಿರುಸಾಗಿ ಬೀಸುತ್ತಿದೆ. ಭೂಕಂಪವಾಗುತ್ತಿದೆ. ಶೈಲಶಿಖರಗಳು ಅಲ್ಲಾಡುತ್ತಿವೆ. ಮರಗಳು ಉರುಳುತ್ತಿವೆ (೧೨–೧೩). ಲಕ್ಷ್ಮಣ, ಮೇಲೆ ನೋಡು. ಮೋಡಗಳು ರಾಕ್ಷಸರಂತೆ ಮೇಲೇರಿ ಕಠೋರವಾಗಿ ಗುಡುಗುತ್ತಿವೆ. ರಕ್ತದ ಮಳೆಯನ್ನು ಸುರಿಸುತ್ತಿವೆ. ಸಂಧ್ಯಾಕಾಲವು ರಕ್ತಚಂದನದಂತೆ ಕೆಂಪಗೆ ಭೀಕರವಾಗಿದೆ. ಸೂರ್ಯಮಂಡಲದಿಂದ ಅಗ್ನಿಖಂಡಗಳು ಸಿಡಿಯುತ್ತಿವೆ (೧೪–೧೫). ಅಮಂಗಳಕರವಾದ ಮೃಗಪಕ್ಷಿಗಳು ಸೂರ್ಯಾಭಿಮುಖವಾಗಿ ದೈನ್ಯಸ್ವರದಿಂದ ಕೂಗುತ್ತ ಅಂಜಿಕೆಯನ್ನುಂಟುಮಾಡುತ್ತಿವೆ. ಚಂದ್ರಮಂಡಲವನ್ನು ಕಪ್ಪುಮತ್ತು ಕೆಂಪಾಗಿರುವ ಪರಿವೇಷವು ಸುತ್ತುಗಟ್ಟಿದೆ. ಪ್ರಳಯಕಾಲದಲ್ಲಿರುವಂತೆ ಮಾಸಿದ ಚಂದ್ರನೂ ಸಹ ರಾತ್ರಿಯ ಹೊತ್ತು ಉರಿಯನ್ನುಂಟುಮಾಡುತ್ತಿದ್ದಾನೆ! (೧೬–೧೭). ಸೂರ್ಯಮಂಡಲದ ಸುತ್ತಲೂ ಕೆಂಪಾಗಿ

ದೃಶ್ಯಂತೇ ನ ಯಥಾವಚ್ಚ ನಕ್ಷತ್ರಾಣ್ಯಭಿವರ್ತತೇ ।
ಯುಗಾಂತಮಿವ ಲೋಕಸ್ಯ ಪಶ್ಯ ಲಕ್ಷ್ಮಣ ಶಂಸತಿ ॥ ೧೯

ಕಾಕಾಃ ಶ್ಯೇನಾಸ್ತಥಾ ಗೃಧ್ರಾ ನೀಚೈಃ ಪರಿಪತಂತಿ ಚ ।
ಶಿವಾಶ್ಚಾಪ್ಯಶಿವಾ ವಾಚಃ ಪ್ರವದಂತಿ ಮಹಾಸ್ವನಾಃ ॥ ೨೦

ಶೈಲೈಃ ಶೂಲೈಶ್ಚ ಖಡ್ಗೈಶ್ಚ ವಿಮುಕ್ತೈಃ ಕಪಿರಾಕ್ಷಸೈಃ ।
ಭವಿಷ್ಯತ್ಯಾವೃತಾ ಭೂಮಿರ್ಮಾಂಸಶೋಣಿತಕರ್ದಮಾ ॥ ೨೧

ಕ್ಷಿಪ್ರಮದ್ಯ ದುರಾಧರ್ಷಾಂ ಲಂಕಾಂ ರಾವಣಪಾಲಿತಾಮ್ ।
ಅಭಿಯಾಮ ಜವೇನೈವ ಸರ್ವತೋ ಹರಿಭಿರ್ವೃತಾಃ ॥ ೨೨

ಇತ್ಯೇವಂ ಸಂವದನ್ ವೀರೋ ಲಕ್ಷ್ಮಣಂ ಲಕ್ಷ್ಮಣಾಗ್ರಜಃ ।
ತಸ್ಮಾದವಾತರಚ್ಛೀಘ್ರಂ ಪರ್ವತಾಗ್ರಾನ್ಮಹಾಬಲಃ ॥ ೨೩

ಅವತೀರ್ಯ ಚ ಧರ್ಮಾತ್ಮಾ ತಸ್ಮಾಚ್ಛೈಲಾತ್ಸ ರಾಘವಃ ।
ಪರೈಃ ಪರಮದುರ್ಧರ್ಷಂ ದದರ್ಶ ಬಲಮಾತ್ಮನಃ ॥ ೨೪

---

ಕಾಣಿಸುವ ಪರಿವೇಷವು ಚಿಕ್ಕದೂ ಭೀಕರವೂ ಆಗಿದೆ. ಲಕ್ಷ್ಮಣ, ಅದು ಅಶುಭ ಸೂಚಕವಾದದ್ದು ಅಲ್ಲದೆ, (ಚಂದ್ರಬಿಂಬದಲ್ಲಿರುವಂತೆ) ಸೂರ್ಯಬಿಂಬ ದಲ್ಲಿಯೂ ಕರ್ರನೆಯ ಕಳಂಕವು ಕಾಣಿಸುತ್ತಿದೆ (೧೮). ನಕ್ಷತ್ರಗಳು ಮೊದಲಿ ನಂತೆ ಹೊಳೆಯುತ್ತಿಲ್ಲ, ಲಕ್ಷ್ಮಣ, ಇದೆಲ್ಲವೂ ಜಗತ್ತಿಗೆ ಪ್ರಳಯವೇ ಬರು ತ್ತಿದೆಯೋ ಎಂದು ಸೂಚಿಸುತ್ತಿದೆ. ಕಾಗೆ ಗಿಡಗ ಹದ್ದುಗಳು ಭೂಮಿಗೆ ಸಮೀಪ ದಲ್ಲಿ ಹಾರಾಡುತ್ತಿವೆ. ನರಿಗಳು ಕೆಟ್ಟದನಿಯಿಂದ ಅರಚುತ್ತಿವೆ. ಲಕ್ಷ್ಮಣ, ಸದ್ಯದಲ್ಲಿಯೇ ಕಪಿಗಳಿಗೂ ರಾಕ್ಷಸರಿಗೂ ಶೈಲಶೂಲಖಡ್ಗಾದಿಗಳಿಂದ ಭೀಕರ ವಾದ ಯುದ್ಧವಾಗಿ ರಕ್ತಮಾಂಸಗಳಿಂದ ಭೂಮಿಯು ಕೊಚ್ಚೆಯಾಗುವುದೆಂಬ ಸೂಚನೆ ಕಂಡುಬರುತ್ತಿದೆ (೧೯–೨೧). ಏನಾದರೂ ಆಗಲಿ, ಲಕ್ಷ್ಮಣ ರಾವಣ ಪಾಲಿತವಾಗಿ ದುರ್ಧರ್ಷವೆನಿಸಿದ ಲಂಕೆಯನ್ನು ಈ ದಿನವೇ ಆಕ್ರಮಿಸೋಣ! ವಾನರವೀರರೊಡನೆ ನುಗ್ಗಿ ಹೋಗಿ ಕೂಡಲೇ ಮುತ್ತಿಗೆ ಹಾಕೋಣ'' ಎಂದು ಹೇಳಿದನು (೨೨). ಹೀಗೆ ಲಕ್ಷ್ಮಣನಿಗೆ ಹೇಳುತ್ತ ಮಹಾ ಬಲನಾದ ಶ್ರೀರಾಮನು ಸುವೇಲಶಿಖರದಿಂದ ಕೆಳಗಿಳಿದನು. ಆ ವೀರನು ಪರ್ವತದಿಂದ ಕೆಳಗಿಳಿದು ಬಂದು ಶತ್ರುದುರ್ಜಯವಾದ ತನ್ನ ವಾನರಸೇನೆಯನ್ನೊಮ್ಮೆ ವೀಕ್ಷಿಸಿದನು (೨೩). ಅನಂತರ ಕಾಲೋಚಿತಕಾರ್ಯಜ್ಞನಾದ ರಾಘವನು

ಸಂನಹ್ಯ ತು ಸಸುಗ್ರೀವಃ ಕಪಿರಾಜಬಲಂ ಮಹತ್ ।
ಕಾಲಜ್ಞೋ ರಾಘವಃ ಕಾಲೇ ಸಂಯುಗಾಯಾಭ್ಯಚೋದಯತ್ ॥

ತತಃ ಕಾಲೇ ಮಹಾಬಾಹುರ್ಬಲೇನ ಮಹತಾ ವೃತಃ ।
ಪ್ರಸ್ಥಿತಃ ಪುರತೋ ಧನ್ವೀ ಲಂಕಾಮಭಿಮುಖಃ ಪುರೀಮ್ ॥ ೨೬

ತಂ ವಿಭೀಷಣಸುಗ್ರೀವೌ ಹನುಮಾನ್ ಜಾಂಬವಾನ್ನಲಃ ।
ಋಕ್ಷರಾಜಸ್ತಥಾ ನೀಲೋ ಲಕ್ಷ್ಮಣಶ್ಚಾನ್ವಯುಸ್ತದಾ ॥ ೨೭

ತತಃ ಪಶ್ಚಾತ್ಸುಮಹತೀ ಪೃತನರ್ಕ್ಷವನೌಕಸಾಮ್ ।
ಪಚ್ಛಾದ್ಯ ಮಹತೀಂ ಭೂಮಿಮನುಯಾತಿ ಸ್ಮ ರಾಘವಮ್ ॥ ೨೮

ಶೈಲಶೃಂಗಾಣಿ ಶತಶಃ ಪ್ರವೃದ್ಧಾಂಶ್ಚ ಮಹೀರುಹಾನ್ ।
ಜಗೃಹುಃ ಕುಂಜರಪ್ರಖ್ಯಾ ವಾನರಾಃ ಪರವಾರಣಾಃ ॥ ೨೯

ತೌ ತ್ವದೀರ್ಘೇಣ ಕಾಲೇನ ಭ್ರಾತರೌ ರಾಮಲಕ್ಷ್ಮಣೌ ।
ರಾವಣಸ್ಯ ಪುರೀಂ ಲಂಕಾಮಾಸೇದತುರರಿಂದಮೌ ॥ ೩೦

ಪತಾಕಾಮಾಲಿನೀಂ ರಮ್ಯಾಮುದ್ಯಾನವನಶೋಭಿತಾಮ್ ।
ಚಿತ್ರವಪ್ರಾಂ ಸುದುಷ್ಪ್ರಾಪಾಮುಚ್ಚೈಃಪ್ರಾಕಾರತೋರಣಾಮ್ ॥ ೩೧

---

ಸುಗ್ರೀವಸಮೇತನಾಗಿ, ಸಂಗ್ರಾಮಕ್ಕೆ ಸಿದ್ಧರಾಗಬೇಕೆಂದು ವಾನರಯೋಧರಿಗೆ ಆದೇಶವನ್ನಿತ್ತು ಸುಮಹೂರ್ತದಲ್ಲಿ ಮುಂದೆ ಹೊರಟನು (೨೪–೨೫). ಆ ಮಹಾಬಾಹುವು ಕೋದಂಡವನ್ನೆತ್ತಿಹಿಡಿದು ಸಕಲವಾನರಪಡೆಯೊಡನೆ ಲಂಕಾಭಿಮುಖನಾಗಿ ನಡೆದನು. ಅವನ ಹಿಂದೆ ವಿಭೀಷಣ, ಸುಗ್ರೀವ, ಹನುಮಂತ, ನಳ, ಸೇನಾಪತಿಯಾದ ನೀಲ, ಲಕ್ಷ್ಮಣ– ಮೊದಲಾದವರು ಹೋದರು (೨೬–೨೭). ಅವರ ಹಿಂದೆ ವಾನರಭಲ್ಲೂಕರ ಮಹಾಸೇನೆಯು ಭೂಮಿಯನ್ನು ವ್ಯಾಪಿಸುತ್ತ ರಾಘವನನ್ನು ಹಿಂಬಾಲಿಸಿ ಪ್ರಯಾಣಮಾಡಿತು. ವಾನರವೀರರು ವೈರಿಗಳೊಡನೆ ಹೊಡೆದಾಡುವುದಕ್ಕಾಗಿ ಗಿರಿಶೃಂಗಗಳನ್ನೂ ದೊಡ್ಡ ದೊಡ್ಡ ಮರಗಳನ್ನೂ ಹೊತ್ತು ಹೊರಟರು (೨೮–೨೯). ಶೂರಾಗ್ರೇಸರರಾದ ಶ್ರೀರಾಮಲಕ್ಷ್ಮಣರು ತುಸುಹೊತ್ತಿನಲ್ಲಿಯೇ ಲಂಕಾನಗರದ ಸಮೀಪವನ್ನು ಸೇರಿದರು. ಸಾಲುಸಾಲಾದ ಬಾವುಟಗಳಿಂದಲೂ ಉದ್ಯಾನವನಗಳಿಂದಲೂ ರಮ್ಯವಾಗಿ, ವಿಚಿತ್ರವಾದ ಕೋಟೆಯಿಂದ ದುರ್ಧರ್ಷವಾಗಿ,

ತಾಂ ಸುರೈರಪಿ ದುರ್ಧರ್ಷಾಂ ರಾಮವಾಕ್ಯಪ್ರಚೋದಿತಾಃ ।
ಯಥಾನಿವೇಶಂ ಸಂಪೀಡ್ಯ ನ್ಯವಿಶಂತ ವನೌಕಸಃ ॥ ೩೨

ಲಂಕಾಯಾಸ್ತೂತ್ತರದ್ವಾರಂ ಶೈಲಶೃಂಗಮಿವೋನ್ನತಮ್ ।
ರಾಮಃ ಸಹಾನುಜೋ ಧನ್ವೀ ಜುಗೋಪ ಚ ರುರೋಧ ಚ ॥ ೩೩

ಲಂಕಾಮುಪನಿವಿಷ್ಟಶ್ಚ ರಾಮೋ ದಶರಥಾತ್ಮಜಃ ।
ಲಕ್ಷ್ಮಣಾನುಚರೋ ವೀರಃ ಪುರೀಂ ರಾವಣಪಾಲಿತಾಮ್ ॥ ೩೪

ಉತ್ತರದ್ವಾರಮಾಸಾದ್ಯ ಯತ್ರ ತಿಷ್ಠತಿ ರಾವಣಃ ।
ನಾನ್ಯೋ ರಾಮಾದ್ಧಿ ತದ್ದ್ವಾರಂ ಸಮರ್ಥಃ ಪರಿರಕ್ಷಿತುಮ್ ॥ ೩೫

ರಾವಣಾಧಿಷ್ಠಿತಂ ಭೀಮಂ ವರುಣೇನೇವ ಸಾಗರಮ್ ।
ಸಾಯುಧೈ ರಾಕ್ಷಸೈರ್ಭೀಮೈರಭಿಗುಪ್ತಂ ಸಮಂತತಃ ॥ ೩೬

ಲಘೂನಾಂ ತ್ರಾಸಜನನಂ ಪಾತಾಲಮಿವ ದಾನವೈಃ ।
ವಿನ್ಯಸ್ತಾನಿ ಚ ಯೋಧಾನಾಂ ಬಹೂನಿ ವಿವಿಧಾನಿ ಚ ॥ ೩೭

ದದರ್ಶಾಯುಧಜಾಲಾನಿ ತತ್ರೈವ ಕವಚಾನಿ ಚ ।
ಪೂರ್ವಂ ತು ದ್ವಾರಮಾಸಾದ್ಯ ನೀಲೋ ಹರಿಚಮೂಪತಿಃ ॥ ೩೮

---

ಉನ್ನತವಾದ ಪ್ರಾಕಾರಪುರದ್ವಾರಗಳಿಂದ ಶೋಭಿತವಾದ ಲಂಕೆಯನ್ನು ಸಮೀಪಿಸಿದರು (೩೦–೩೧). ಆಮೇಲೆ ವಾನರವೀರರು ಶ್ರೀರಾಮನ ಆಜ್ಞೆಯಂತೆ ತಮಗೆ ಗೊತ್ತಾದ ಸ್ಥಳಗಳಿಗೆ ಹೋಗಿ, ದೇವತೆಗಳಿಗೂ ಅಲ್ಲಾಡಿಸಲು ಅಶಕ್ಯವಾದ ಲಂಕೆಯನ್ನು ಸುತ್ತುಗಟ್ಟಿದರು. ಲಕ್ಷ್ಮಣಸಮೇತನಾದ ಶ್ರೀರಾಮನು, ಶೈಲಶೃಂಗದಂತೆ ಅತ್ಯುನ್ನತವಾದ ಉತ್ತರದ್ವಾರವನ್ನು ಧನುರ್ಧರನಾಗಿ ರಕ್ಷಿಸುತ್ತ ಅಡ್ಡಗಟ್ಟಿ ನಿಂತನು (೩೨–೩೩). ಹೀಗೆ ದಶರಥಾತ್ಮಜನಾದ ಶ್ರೀರಾಮನು ಲಕ್ಷ್ಮಣಾನುಚರನಾಗಿ, ರಾವಣರಕ್ಷಿತವಾದ ಉತ್ತರದ್ವಾರವನ್ನು ಆಕ್ರಮಿಸಿದನು. ಆ ಭಾಗದಲ್ಲಿ ಸ್ವಯಂ ರಾವಣನೇ ಯುದ್ಧಸನ್ನದ್ಧನಾಗಿ ನಿಂತಿರುವನಲ್ಲವೆ? ಶ್ರೀರಾಮನ ಹೊರತಾಗಿ ಅದನ್ನು ಆಕ್ರಮಿಸಲು ಇನ್ನು ಯಾರಿಗೂ ಶಕ್ಯವಲ್ಲ(೩४–೩೫). ವರುಣನಿಂದ ರಕ್ಷಿತವಾದ ಮಹಾಸಾಗರದಂತೆ ಉತ್ತರದ್ವಾರವು, ಆಯುಧಧಾರಿಗಳಾದ ಭೀಕರರಾಕ್ಷಸರೊಡನೆ ರಾವಣನಿಂದ ರಕ್ಷಿತವಾಗಿತ್ತು, ದಾನವಸಂರಕ್ಷಿತವಾದ ಪಾತಾಳದಂತೆ, ಆ ದ್ವಾರವು ಸಾಮಾನ್ಯರಿಗೆ ಭೀತಿದಾಯಕವಾಗಿತ್ತು (೩೬–೩೭). ಆ ಬಾಗಿಲಿನ ಬಳಿಯಲ್ಲಿ ರಾಕ್ಷಸ

ಅತಿಷ್ಠತ್ಸಹ ಮೈಂದೇನ ದ್ವಿವಿದೇನ ಚ ವೀರ್ಯವಾನ್ ।
ಅಂಗದೋ ದಕ್ಷಿಣದ್ವಾರಂ ಜಗ್ರಾಹ ಸುಮಹಾಬಲಃ ॥ ೩೯

ಋಷಭೇಣ ಗವಾಕ್ಷೇಣ ಗಜೇನ ಗವಯೇನ ಚ ।
ಹನುಮಾನ್ ಪಶ್ಚಿಮದ್ವಾರಂ ರರಕ್ಷ ಬಲವಾನ್ ಕಪಿಃ ॥ ೪೦

ಪ್ರಮಾಥಿಪ್ರಘಸಾಭ್ಯಾಂ ಚ ವೀರೈರನ್ಯೈಶ್ಚ ಸಂಗತಃ ।
ಮಧ್ಯಮೇ ಚ ಸ್ವಯಂ ಗುಲ್ಮೇ ಸುಗ್ರೀವಃ ಸಮತಿಷ್ಠತ ॥ ೪೧

ಸಹ ಸರ್ವೈರ್ಹರಿಶ್ರೇಷ್ಠೈಃ ಸುಪರ್ಣಶ್ವಸನೋಪಮೈಃ ।
ವಾನರಾಣಾಂ ತು ಷಟ್ತ್ರಿಂಶತ್ಕೋಟ್ಯಃ ಪ್ರಖ್ಯಾತಯೂಥಪಾಃ ॥ ೪೨

ನಿಪೀಡ್ಯೋಪನಿವಿಷ್ಟಾಶ್ಚ ಸುಗ್ರೀವೋ ಯತ್ರ ವಾನರಃ ।
ಶಾಸನೇನ ತು ರಾಮಸ್ಯ ಲಕ್ಷ್ಮಣಃ ಸವಿಭೀಷಣಃ ॥ ೪೩

ದ್ವಾರೇ ದ್ವಾರೇ ಹರೀಣಾಂ ತು ಕೋಟಿಂ ಕೋಟಿಂ ನ್ಯವೇಶಯತ್ ।
ಪಶ್ಚಿಮೇನ ತು ರಾಮಸ್ಯ ಸುಗ್ರೀವಃ ಸಹಜಾಂಬವಾನ್ ॥ ೪೪

---

ಯೋಧರು ಇರಿಸಿಕೊಂಡಿದ್ದ ಅಸಂಖ್ಯಾತವಾದ ಬಗೆಬಗೆಯ ಆಯುಧಜಾಲಗಳೂ ಕವಚಗಳೂ ಶ್ರೀರಾಮನಿಗೆ ಗೋಚರಿಸಿದವು. ಸೇನಾಪತಿಯಾದ ನೀಲನು ಮೈಂದದ್ವಿವಿದರೊಡನೆ ಪೂರ್ವದ ಬಾಗಿಲಿಗೆ ಹೋಗಿ ನಿಂತನು. ಬಲಾಢ್ಯನಾದ ಅಂಗದನು ದಕ್ಷಿಣದ ಬಾಗಿಲನ್ನು ಮುತ್ತಿದನು (೩೮–೩೯). ಪರಾಕ್ರಮಿಯಾದ ಹನುಮಂತನು ಋಷಭ, ಗವಾಕ್ಷ, ಗಜ, ಗವಯರೊಡನೆ ಪಶ್ಚಿಮದ್ವಾರವನ್ನು ರಕ್ಷಿಸುತ್ತ ನಿಂತನು. ಸುಗ್ರೀವನು ಪ್ರಮಾಥಿ, ಪ್ರಘಸ ಮುಂತಾದ ವೀರರಾದ ಕಪಿಯೋಧರೊಡನೆ ಮಧ್ಯದ ಸೇನಾನಿವೇಶದಲ್ಲಿ (ವಾಯುವ್ಯ ದಿಕ್ಕಿನಲ್ಲಿ) ನಿಂತನು (೪೦–೪೧). ಅವನೊಡನಿದ್ದ ಕಪಿಯೋಧರು ವೈನತೇಯನಂತೆಯೂ ವಾಯುವಿನಂತೆಯೂ ವೇಗಶಾಲಿಗಳು. ಆಗ ಸುಗ್ರೀವನ ಸುತ್ತಲೂ ಮೂವತ್ತಾರು ಕೋಟಿ ವಾನರನಾಯಕರಿದ್ದರು! ಆಮೇಲೆ ಶ್ರೀರಾಮನ ಆಜ್ಞೆಯಂತೆ ಲಕ್ಷ್ಮಣನು ವಿಭೀಷಣನೊಡನೆ ಹೋಗಿ ಒಂದೊಂದು ಬಾಗಿಲಲ್ಲಿಯೂ ಒಂದೊಂದು ಕೋಟಿ ಸೈನಿಕರು ಬೆಂಬಲವಾಗಿ ನಿಲ್ಲಬೇಕೆಂದು ಗೊತ್ತುಮಾಡಿದನು (೪೨–೪೩). ಶ್ರೀರಾಮನ ಸಮೀಪದಲ್ಲಿಯೇ ಹಿಂದಿರುವ ಸೇನಾನಿವೇಶ

ಅದೂರಾನ್ಮಧ್ಯಮೇ ಗುಲ್ಮೇ ತಸ್ಥೌ ಬಹುಬಲಾನುಗಃ ।
ತೇ ತು ವಾನರಶಾರ್ದೂಲಾಃ ಶಾರ್ದೂಲಾ ಇವ ದಂಷ್ಟ್ರಿಣಃ ॥ ೪೫

ಗೃಹೀತ್ವಾ ದ್ರುಮಶೈಲಾಗ್ರಾನ್ ಹೃಷ್ಟಾ ಯುದ್ಧಾಯ ತಸ್ಥಿರೇ ।
ಸರ್ವೇ ವಿಕೃತಲಾಂಗೂಲಾಃ ಸರ್ವೇ ದಂಷ್ಟ್ರಾನಖಾಯುಧಾಃ ॥ ೪೬

ಸರ್ವೇ ವಿಕೃತಚಿತ್ರಾಂಗಾಃ ಸರ್ವೇ ಚ ವಿಕೃತಾನನಾಃ ।
ದಶನಾಗಬಲಾಃ ಕೇಚಿತ್ಕೇಚಿದ್ದಶಗುಣೋತ್ತರಾಃ ॥ ೪೭

ಕೇಚಿನ್ನಾಗಸಹಸ್ರಸ್ಯ ಬಭೂವುಸ್ತುಲ್ಯವಿಕ್ರಮಾಃ ।
ಸಂತಿ ಚೌಘಬಲಾಃ ಕೇಚಿತ್ಕೇಚಿಚ್ಛತಗುಣೋತ್ತರಾಃ ॥ ೪೮

ಅಪ್ರಮೇಯಬಲಾಶ್ಚಾನ್ಯೇ ತತ್ರಾಸನ್ ಹರಿಯೂಥಪಾಃ ।
ಅದ್ಭುತಶ್ಚ ವಿಚಿತ್ರಶ್ಚ ತೇಷಾಮಾಸೀತ್ಸಮಾಗಮಃ ॥ ೪೯

ತತ್ರ ವಾನರಸೈನ್ಯಾನಾಂ ಶಲಭಾನಾಮಿವೋದ್ಯಮಃ ।
ಪರಿಪೂರ್ಣಮಿವಾಕಾಶಂ ಸಂಛನ್ನೇವ ಚ ಮೇದಿನೀ ॥ ೫೦

---

ದಲ್ಲಿ* ಸುಗ್ರೀವನು ಜಾಂಬವಂತನೊಡನೆ ಬಹುಮಂದಿ ಕಪಿಯೋಧರೊಡಗೂಡಿ ನಿಂತಿದ್ದನು. ಕೋರೆಹಲ್ಲಿನ ಹೆಬ್ಬುಲಿಗಳಂತಿದ್ದ ಆ ವಾನರವೀರರು ವೃಕ್ಷಗಳನ್ನೂ ಗಿರಿಶೃಂಗಗಳನ್ನೂ ಹಿಡಿದು ಯುದ್ಧೋತ್ಸಾಹದಿಂದ ನಿಂತಿದ್ದರು. ಎಲ್ಲರೂ ಬಾಲಗಳನ್ನು ಸೊಟ್ಟಗೆ ನಿಮಿರಿಸಿಕೊಂಡಿದ್ದವರೇ! ಎಲ್ಲರೂ ಕೋರೆಹಲ್ಲುಗಳಿಂದಲೂ ಉಗುರುಗಳಿಂದಲೂ ಹೋರಾಡಲು ಸಿದ್ಧರೇ! (೪೪–೪೬). ಕೋಪವಡರಿದ್ದರಿಂದ ಎಲ್ಲರೂ ವಿಚಿತ್ರವರ್ಣದ ವಿಕೃತಾಂಗರೇ! ಎಲ್ಲರೂ ವಿಕಾರವಾದ ಮೋರೆಯವರೇ! ಆ ವಾನರರಲ್ಲಿ ಕೆಲವರಿಗೆ ಹತ್ತು ಆನೆಗಳ ಬಲವಿದ್ದರೆ ಕೆಲವರಿಗೆ ನೂರಾನೆಗಳ ಬಲವಿತ್ತು. ಕೆಲವರಿಗೆ ಸಾವಿರ ಆನೆಗಳ ಬಲವಿತ್ತು. ಕೆಲವರಿಗೆ ಓಘಸಂಖ್ಯೆಯ ಆನೆಗಳ ಬಲವಿತ್ತು. ಅವರಿಗಿಂತ ನೂರರಷ್ಟು ಬಲ ಇನ್ನು ಕೆಲವು ವಾನರವೀರರಿಗಿತ್ತು (೪೭–೪೮). ಇನ್ನು ಕೆಲವು ವಾನರನಾಯಕರ ಬಲವನ್ನು ಇಷ್ಟೆಂದು ಹೇಳಲು ಶಕ್ಯವಿಲ್ಲ! ಹೀಗೆ ಬೆಕ್ಕಸಬೆರಗಾಗುವಂತೆ ವಾನರಯೋಧ

---

* ರಾವಣನು ಉತ್ತರದ್ವಾರದಲ್ಲಿಯೂ ಇಂದ್ರಜಿತು ಪಶ್ಚಿಮದ್ವಾರದಲ್ಲಿಯೂ ಇದ್ದರು. ಅವರಿಬ್ಬರೂ ಬಲಾಢ್ಯರಾದ್ದರಿಂದ, ಸಮಯವೊದಗಿದಾಗ ಶ್ರೀರಾಮನಿಗೂ ಹನುಮಂತನಿಗೂ ನೆರವಾಗಲು ಸುಗ್ರೀವನು ವಾಯವ್ಯದಿಕ್ಕಿನಲ್ಲಿ ನಿಂತಿದ್ದನೆಂದು ತಿಳಿಯಬೇಕು.

ಲಂಕಾಮುಪನಿವಿಷ್ಟೈಶ್ಚ ಸಂಪತದ್ಭಿಶ್ಚ ವಾನರೈಃ ।
ಶತಂ ಶತಸಹಸ್ರಾಣಾಂ ಪೃಥಗೃಕ್ಷವನೌಕಸಾಮ್ ॥ ೫೧

ಲಂಕಾದ್ವಾರಾಣ್ಯುಪಾಜಗ್ಮುರನ್ಯೇ ಯೋದ್ಧುಂ ಸಮಂತತಃ ।
ಆವೃತಃ ಸ ಗಿರಿಃ ಸರ್ವೈಸ್ತೈಃ ಸಮಂತಾತ್ಪ್ಲವಂಗಮೈಃ ॥ ೫೨

ಅಯುತಾನಾಂ ಸಹಸ್ರಂ ಚ ಪುರೀಂ ತಾಮಭ್ಯವರ್ತತ ।
ವಾನರೈರ್ಬಲವದ್ಭಿಶ್ಚ ಬಭೂವ ದ್ರುಮಪಾಣಿಭಿಃ ॥ ೫೩

ಸಂವೃತಾ ಸರ್ವತೋ ಲಂಕಾ ದುಷ್ಪ್ರವೇಶಾಪಿ ವಾಯುನಾ ।
ರಾಕ್ಷಸಾ ವಿಸ್ಮಯಂ ಜಗ್ಮುಃ ಸಹಸಾಭಿನಿಪೀಡಿತಾಃ ॥ ೫೪

ವಾನರೈರ್ಮೇಘಸಂಕಾಶೈಃ ಶಕ್ರತುಲ್ಯಪರಾಕ್ರಮೈಃ ।
ಮಹಾನ್ ಶಬ್ದೋಽಭವತ್ತತ್ರ ಬಲೌಘಸ್ಯಾಭಿವರ್ತತಃ ॥ ೫೫

ಸಾಗರಸ್ಯೇವ ಭಿನ್ನಸ್ಯ ಯಥಾ ಸ್ಯಾತ್ಸಲಿಲಸ್ವನಃ ।
ತೇನ ಶಬ್ದೇನಮಹತಾ ಸಪ್ರಾಕಾರಾ ಸತೋರಣಾ ॥ ೫೬

ಲಂಕಾ ಪ್ರಚಲಿತಾ ಸರ್ವಾ ಸಶೈಲವನಕಾನನಾ ।
ರಾಮಲಕ್ಷ್ಮಣಗುಪ್ತಾ ಸಾ ಸುಗ್ರೀವೇಣ ಚ ವಾಹಿನೀ ॥ ೫೭

---

ರೆಲ್ಲರೂ ನೆರೆದುಬಿಟ್ಟಿದ್ದರು. ಮಿಡಿತೆಗಳ ಹಿಂಡಿನಂತೆ ಅಸಂಖ್ಯಾತವಾಗಿ ಸೇರಿಬಿಟ್ಟಿದ್ದರು. ದ್ಯಾವಾಪೃಥಿವಿಗಳು ಮುಚ್ಚಿಹೋಗುವಂತೆ ಮುತ್ತಿದ್ದರು (೪೯–೫೦). ಲಂಕಾದ್ವಾರಗಳನ್ನಾಕ್ರಮಿಸಿ ನಿಂತವರಲ್ಲದೆ, ಕೋಟಿಕೋಟಿ ವಾನರಭಲ್ಲೂಕ ಸೇನೆಗಳು ಹೋರಾಡುವುದಕ್ಕಾಗಿ ಅವರ ನೆರವಿಗೆ ಬಂದು ಸೇರಿಕೊಳ್ಳುತ್ತಲೇ ಇದ್ದವು. ಹೀಗೆ ಲಂಕೆಯಿದ್ದ ತ್ರಿಕೂಟಪರ್ವತವು ವಾನರಸೇನೆಯಿಂದ ಆವೃತವಾಯಿತು (೫೧–೫೨). ಮತ್ತೆ ಒಂದು ಕೋಟಿ ಕಪಿಗಳು ಸುತ್ತಲೂ ಆವರಿಸಿ ನಿಂತವು. ಹೀಗೆ ಬಲಾಢ್ಯರಾದ ವಾನರಯೋಧರು ವೃಕ್ಷಪಾಣಿಗಳಾಗಿ, ಗಾಳಿಯೂ ಒಳಗೆ ಹೋಗದಂತೆ ಕಿಕ್ಕಿರಿದು ಲಂಕೆಯನ್ನು ಮುತ್ತಿದರು! ಮೋಡದ ಸಾಲುಗಳಂತೆ ನುಗ್ಗುತ್ತ ಬಂದು ಲಂಕೆಯನ್ನು ಸುತ್ತುಗಟ್ಟಿರುವುದನ್ನು ನೋಡಿ ರಾಕ್ಷಸರು ಬೆರಗಾದರು! (೫೩–೫೪). ಮೇರೆದಪ್ಪಿದ ಕಡಲಿನ ಘೋಷದಂತೆ, ನುಗ್ಗಿಬರುತ್ತಿದ್ದ ಕಪಿಸೇನೆಯ ಕೋಲಾಹಲವು ಭೀಷಣವಾಗಿತ್ತು. ಪ್ರಾಕಾರ ತೋರಣ ಗಿರಿ ಕಾನನ ಸಹಿತವಾಗಿ ಲಂಕೆಯು ನಡುಗಿಹೋಯಿತು. ಶ್ರೀರಾಮನಿಂದಲೂ ಲಕ್ಷ್ಮಣ ಸುಗ್ರೀವರಿಂದಲೂ

ಬಭೂವ ದುರ್ಧರ್ಷತರಾ ಸರ್ವೈರಪಿ ಸುರಾಸುರೈಃ ।
ರಾಘವಃ ಸಂನಿವೇಶ್ಯೈವ ಸೈನ್ಯಂ ಸ್ವಂ ರಕ್ಷಸಾಂ ವಧೇ ॥ ೫೮

ಸಂಮಂತ್ರ್ಯ ಮಂತ್ರಿಭಿಃ ಸಾರ್ಧಂ ನಿಶ್ಚಿತ್ಯ ಚ ಪುನಃ ಪುನಃ ।
ಆನಂತರ್ಯಮಭಿಪ್ರೇಪ್ಸುಃ ಕ್ರಮಯೋಗಾರ್ಥತತ್ತ್ವವಿತ್ ॥ ೫೯

ವಿಭೀಷಣಸ್ಯಾನುಮತೇ ರಾಜಧರ್ಮಮನುಸ್ಮರನ್ ।
ಅಂಗದಂ ವಾಲಿತನಯಂ ಸಮಾಹೂಯೇದಮಬ್ರವೀತ್ ॥ ೬೦

ಗತ್ವಾ ಸೌಮ್ಯ ದಶಗ್ರೀವಂ ಬ್ರೂಹಿಂ ಮದ್ವಚನಾತ್ಕಪೇ ।
ಲಂಘಯಿತ್ವಾ ಪುರೀಂ ಲಂಕಾಂ ಭಯಂ ತ್ಯಕ್ತ್ವಾ ಗತವ್ಯಥಃ ॥ ೬೧

ಭ್ರಷ್ಟಶ್ರೀಕ ಗತೈಶ್ವರ್ಯ ಮುಮೂರ್ಷೋ ನಷ್ಟ ಚೇತನ ।
ಋಷೀಣಾಂ ದೇವತಾನಾಂ ಚ ಗಂಧರ್ವಾಪ್ಸರಸಾಂ ತಥಾ ॥ ೬೨

ನಾಗಾನಾಮಥ ಯಕ್ಷಾಣಾಂ ರಾಜ್ಞಾಂ ಚ ರಜನೀಚರ ।
ಯಚ್ಚ ಪಾಪಂ ಕೃತಂ ಮೋಹಾದವಲಿಪ್ತೇನ ರಾಕ್ಷಸ ॥ ೬೩

---

ಸಂರಕ್ಷಿತವಾಗಿದ್ದ ಆ ಸೇನೆಯು ಸಕಲ ಸುರಾಸುರರಿಗೂ ದುರ್ಜಯವಾಗಿತ್ತು (೫೫–೫೭). ಈ ರೀತಿಯಲ್ಲಿ ಶ್ರೀರಾಮನು ರಾಕ್ಷಸರನ್ನು ವಧಿಸುವುದಕ್ಕಾಗಿ ಸೈನ್ಯವನ್ನು ವ್ಯವಸ್ಥೆಗೊಳಿಸಿ ಮುಂದಿನ ಕರ್ತವ್ಯವನ್ನು ಕುರಿತು ಸುಗ್ರೀವಾದಿ ಸಚಿವರೊಡನೆ ಸಮಾಲೋಚಿಸಿದನು. ಸಾಮಾದ್ಯುಪಾಯಗಳನ್ನು ಯಾವಾಗ ಹೇಗೆ ಪ್ರಯೋಗಿಸಬೇಕೆಂಬುದನ್ನು ಬಲ್ಲ ರಾಘವನು ರಾಜಧರ್ಮವನ್ನು ಸ್ಮರಿಸಿಕೊಂಡು, ವಿಭೀಷಣನ ಒಪ್ಪಿಗೆಯನ್ನು ಪಡೆದು, ವಾಲಿತನಯವಾದ ಅಂಗದನನ್ನುದ್ದೇಶಿಸಿ ''ಸೌಮ್ಯ–ಅಂಗದ, ನೀನು ಲಂಕೆಗೆ ಹೋಗಿ ದಶಗ್ರೀವನಿಗೆ ಒಂದು ಮಾತನ್ನು ತಿಳಿಸಬೇಕಾಗಿದೆ. ನೀನು ಶ್ರಮವಿಲ್ಲದೆ ಪ್ರಾಕಾರವನ್ನು ದಾಟಿ ನಿರ್ಭಯನಾಗಿ ಲಂಕೆಯೊಳಗೆ ಹೋಗಬಲ್ಲೆ (೬೧). ವತ್ಸ, ರಾವಣನನ್ನು ಕಂಡು 'ಎಲಾ ರಾವಣ, ನಿನ್ನ ಸಂಪತ್ತು ಗತಿಸುತ್ತ ಬಂದಿದೆ. ನಿನ್ನ ಪ್ರಭುತ್ವವು ಮುಗಿಯುತ್ತ ಬಂದಿದೆ. ನಿನಗೆ ಸಾಯುವ ಕಾಲ ಸಮೀಪಿಸಿದೆ. ಆದ್ದರಿಂದಲೇ ವಿವೇಕಭ್ರಷ್ಟನಾಗಿದ್ದೀಯೆ! ಇದುವರೆಗೆ ದೇವರ್ಷಿಗಂಧರ್ವರಿಗೂ ಅಪ್ಸರೆಯರಿಗೂ ನಾಗಯಕ್ಷರಿಗೂ ಇತರ ಭೂಪಾಲರಿಗೂ ಮದೋನ್ಮತ್ತನಾಗಿ

ತಸ್ಯ ಪಾಪಸ್ಯ ಸಂಪ್ರಾಪ್ತಾ ವ್ಯುಷ್ಟಿರದ್ಯ ದುರಾಸದಾ ।
ನೂನಮದ್ಯ ಗತೋ ದರ್ಪಃ ಸ್ವಯಂಭೂವರದಾನಜಃ ॥ ೬೪

ಯಸ್ಯ ದಂಡಧರಸ್ತೇಽಹಂ ದಾರಾಹರಣಕರ್ಶಿತಃ ।
ದಂಡಂ ಧಾರಯಮಾಣಸ್ತು ಲಂಕಾದ್ವಾರೇ ವ್ಯವಸ್ಥಿತಃ ॥ ೬೫

ಪದವೀಂ ದೇವತಾನಾಂ ಚ ಮಹರ್ಷೀಣಾಂ ಚ ರಾಕ್ಷಸ ।
ರಾಜರ್ಷೀಣಾಂ ಚ ಸರ್ವೇಷಾಂ ಗಮಿಷ್ಯಸಿ ಮಯಾ ಹತಃ ॥ ೬೬

ಬಲೇನ ಯೇನ ವೈ ಸೀತಾಂ ಮಾಯಯಾ ರಾಕ್ಷಸಾಧಮ ।
ಮಾಮತಿಕ್ರಾಮಯಿತ್ವಾ ತ್ವಂ ಹೃತವಾಂಸ್ತದ್ವಿದರ್ಶಯ ॥ ೬೭

ಅರಾಕ್ಷಸಮಿಮಂ ಲೋಕಂ ಕರ್ತಾಸ್ಮಿ ನಿಶಿತೈಃ ಶರೈಃ ।
ನ ಚೇಚ್ಛರಣಮಭ್ಯೇಷಿ ಮಾಮುಪಾದಾಯ ಮೈಥಿಲೀಮ್ ॥ ೬೮

ಧರ್ಮಾತ್ಮಾ ರಕ್ಷಸಾಂ ಶ್ರೇಷ್ಠಃ ಸಂಪ್ರಾಪ್ತೋಽಯಂ ವಿಭೀಷಣಃ ।
ಲಂಕೈಶ್ವರ್ಯಂ ಧ್ರುವಂ ಶ್ರೀಮಾನಯಂ ಪ್ರಾಪ್ನೋತ್ಯಕಂಟಕಮ್ ॥

---

ವಿವೇಚನೆಯಿಲ್ಲದೆ ಬಗೆಬಗೆಯಲ್ಲಿ ದ್ರೋಹಮಾಡಿರುವೆಯಲ್ಲವೆ? (೬೨-೬೩). ಆ ಪಾಪಕೃತ್ಯದ ಘೋರಫಲವನ್ನು ಅನುಭವಿಸಬೇಕಾದ ಕಾಲವೀಗ ಬಂದಿದೆ! ಬ್ರಹ್ಮನ ವರಬಲದಿಂದ ಬಂದ ಸೊಕ್ಕು, ಇಳಿಯುವ ಸಮಯ ಒದಗಿದೆ! ನಿನ್ನನ್ನು ದಂಡಿಸುವುದಕ್ಕಾಗಿ ನಾನು ಯಮದಂಡವನ್ನು ಹಿಡಿದು ಬಂದಿದ್ದೇನೆ! ನನ್ನ ಭಾರ್ಯಾಪಹರಣವು ನನ್ನನ್ನಿಲ್ಲಿಗೆ ಕರೆತಂದಿದೆ. ಲಂಕಾದ್ವಾರದಲ್ಲಿ ದಂಡ ಧಾರಿಯಾಗಿ ಬಂದು ನಿಂತಿದ್ದೇನೆ (೬೪-೬೫). ಎಲಾ ರಾಕ್ಷಸ, ನನ್ನಿಂದ ಹತ ನಾಗಿ ದೇವತೆಗಳಿಗೂ ಮಹರ್ಷಿಗಳಿಗೂ ರಾಜರ್ಷಿಗಳಿಗೂ ಸಲ್ಲುವ ಸ್ವರ್ಗವನ್ನು ನೀನೂ ಅಡರಬಹುದು! ಎಲಾ ಅಧಮ, ಮಾಯೆಯಿಂದ ನನ್ನನ್ನು ಆಶ್ರಮ ದಿಂದ ದೂರಹೋಗುವಂತೆ ಮಾಡಿ, ಯಾವ ಬಲದ ಕೊಬ್ಬಿನಿಂದ ಸೀತೆಯನ್ನಪ ಹರಿಸಿದೆಯೋ ಅದನ್ನೀಗ ತೋರಿಸು ಬಾ ! (೬೬-೬೭). ಮೈಥಿಲಿಯನ್ನು ಒಪ್ಪಿಸಿ ಶರಣಾಗತನಾಗದಿದ್ದಲ್ಲಿ, ಇದೋ, ಈ ಲೋಕದಲ್ಲಿ ರಾಕ್ಷಸಜಾತಿಯೇ ಇಲ್ಲದಂತೆ ನಿಶಿತಾಸ್ತ್ರಗಳಿಂದ ತೊಡೆದುಹಾಕುವೆನು! (೬೮). ಧರ್ಮಾತ್ಮನೂ ರಾಕ್ಷಸೋತ್ತಮನೂ ಆದ ವಿಭೀಷಣನು ಶರಣಾರ್ಥಿಯಾಗಿ ನನ್ನ ಬಳಿಗೆ ಬಂದಿದ್ದಾನೆ. ಈತನು ಲಂಕಾಧಿಪತ್ಯವನ್ನು ನಿಷ್ಕಂಟಕವಾಗಿ ಪಡೆಯುವನು. ಅಧರ್ಮ

ನ ಹಿ ರಾಜ್ಯಮಧರ್ಮೇಣ ಭೋಕ್ತುಂ ಕ್ಷಣಮಪಿ ತ್ವಯಾ ।
ಶಕ್ಯಂ ಮೂರ್ಖಸಹಾಯೇನ ಪಾಪೇನಾವಿದಿತಾತ್ಮನಾ ॥ ೭೦

ಯುಧ್ಯಸ್ವ ವಾ ಧೃತಿಂ ಕೃತ್ವಾ ಶೌರ್ಯಮಾಲಂಬ್ಯ ರಾಕ್ಷಸ ।
ಮಚ್ಛರೈಸ್ತ್ವಂ ರಣೇ ಶಾಂತಸ್ತತಃ ಪೂತೋ ಭವಿಷ್ಯಸಿ ॥ ೭೧

ಯದ್ವಾ ವಿಶಸಿ ಲೋಕಾಂಸ್ತ್ರೀನ್ ಪಕ್ಷೀ ಭೂತ್ವಾ ಮನೋಜವಃ ।
ಮಮ ಚಕ್ಷುಷ್ಪಥಂ ಪ್ರಾಪ್ಯ ನ ಜೀವನ್ ಪ್ರತಿಯಾಸ್ಯಸಿ ॥ ೭೨

ಬ್ರವೀಮಿ ತ್ವಾಂ ಹಿತಂ ವಾಕ್ಯಂ ಕ್ರಿಯತಾಮೌರ್ಧ್ವದೈಹಿಕಮ್ ।
ಸದುಷ್ಟಾ ಕ್ರಿಯತಾಂ ಲಂಕಾ ಜೀವಿತಂ ತೇ ಮಯಿ ಸ್ಥಿತಮ್ ॥ ೭೩

ಇತ್ಯುಕ್ತಃ ಸ ತು ತಾರೇಯೋ ರಾಮೇಣಾಕ್ಲಿಷ್ಟ ಕರ್ಮಣಾ ।
ಜಗಾಮಾಕಾಶಮಾವಿಶ್ಯ ಮೂರ್ತಿಮಾನಿವ ಹವ್ಯವಾಟ್ ॥ ೭४

ಸೋऽತಿಪತ್ಯ ಮುಹೂರ್ತೇನ ಶ್ರೀಮಾನ್ ರಾವಣಮಂದಿರಮ್ ।
ದದರ್ಶಾಸೀನಮವ್ಯಗ್ರಂ ರಾವಣಂ ಸಚಿವೈಃ ಸಹ ॥ ೭೫

---

ದಿಂದಲೇ ರಾಜ್ಯಭೋಗವನ್ನು ಅನುಭವಿಸುತ್ತಿರಬಹುದೆಂದು ತಿಳಿದೆಯಾ? ಇನ್ನು ಮುಂದೆ ನೀನು ಒಂದು ಕ್ಷಣವೂ ಹೀಗೆ ರಾಜ್ಯವನ್ನನುಭವಿಸಲಾರೆ. ಚಪಲ ಚಿತ್ತನೂ ಪಾಪಿಯೂ ಆದ ನಿನು ಮೂರ್ಖಮಂತ್ರಿಗಳ ನೆರವಿನಿಂದ ರಾಜ್ಯ ವನ್ನಾಳಲಾರೆ (೬೯–೭೦). ಶರಣಾಗತನಾಗಲು ಇಷ್ಟವಿಲ್ಲದಿದ್ದರೆ ಯುದ್ಧ ಮಾಡು! ಧೈರ್ಯಶೌರ್ಯಗಳನ್ನೇ ಅವಲಂಬಿಸಿ ಯುದ್ಧಕ್ಕೆ ಬಾ. ರಣರಂಗ ದಲ್ಲಿ ನನ್ನ ಶರಗಳಿಂದ ಹತನಾಗಿ ಶಾಂತನಾಗಬಹುದು! ಆಗ ಪ್ರಾಯಶ್ಚಿತ್ತ ವನ್ನನುಭವಿಸಿ ಪೂತನಾಗಬಹುದು! (೭೧). ಎಲಾ ರಾಕ್ಷಸ, ನನ್ನ ಕಣ್ಣಿಗೆ ಬಿದ್ದಮೇಲೆ ನೀನು ಬದುಕಿ ಹೋಗುವ ಮಾತು ಸುಳ್ಳು! ಹೆದರಿ ಹಕ್ಕಿಯಾಗಿ ಮನೋವೇಗದಿಂದ ಹಾರುತ್ತ ಮೂರುಲೋಕಗಳಲ್ಲಡಗಿದರೂ ನಿನ್ನನ್ನು ಉಳಿಸುವುದಿಲ್ಲ ! ರಾವಣ, ನಿನಗೊಂದು ಹಿತವಾದ ಮಾತನ್ನು ಹೇಳುವೆನು. ನಿನ್ನ ಅಪರಕ್ರಿಯೆಯನ್ನು ನೀನೇ ಮಾಡಿಕೊಂಡುಬಿಡು! ತೃಪ್ತಿಯಾಗುವಂತೆ ಲಂಕೆಯನ್ನೊಮ್ಮೆ ನೋಡಿ ಬಾ! ನಿನ್ನ ಪ್ರಾಣನನ್ನ ಮುಷ್ಟಿಯೊಳಗಿದೆ !' ಎಂದು ಹೇಳು'' ಎಂಬುದಾಗಿ ತಿಳಿಸಿದನು (೭೨–೭೩). ಧರ್ಮಾತ್ಮನಾದ ಶ್ರೀರಾಮನು ಈ ಪ್ರಕಾರವಾಗಿ ತಿಳಿಸಿದೊಡನೆ ತಾರಾಪುತ್ರನಾದ ಅಂಗದನು ಆಕಾಶಕ್ಕೆ ನೆಗೆದನು. ಪ್ರತ್ಯಕ್ಷನಾದ ಅಗ್ನಿದೇವನೋ ಎಂಬಂತೆ ತೇಜೋನಿಧಿ

ತತಸ್ತಸ್ಯಾವಿದೂರೇ ಸ ನಿಪತ್ಯ ಹರಿಪುಂಗವಃ ।
ದೀಪಾಗ್ನಿಸದೃಶಸ್ತಸ್ಥಾವಂಗದಃ ಕನಕಾಂಗದಃ ॥ ೭೬

ತದ್ರಾಮವಚನಂ ಸರ್ವಮನ್ಯೂನಾಧಿಕಮುತ್ತಮಮ್ ।
ಸಾಮಾತ್ಯಂ ಶ್ರಾವಯಾಮಾಸ ನಿವೇದ್ಯಾತ್ಮಾನಮಾತ್ಮನಾ ॥ ೭೭

ದೂತೋಽಹಂ ಕೋಸಲೇಂದ್ರಸ್ಯರಾಮಸ್ಯಾಕ್ಲಿಷ್ಟ ಕರ್ಮಣಃ ।
ವಾಲಿಪುತ್ರೋಽಂಗದೋ ನಾಮ ಯದಿ ತೇ ಶ್ರೋತ್ರಮಾಗತಃ ॥ ೭೮

ಆಹ ತ್ವಾಂ ರಾಘವೋ ರಾಮಃ ಕೌಸಲ್ಯಾನಂದವರ್ಧನಃ ।
ನಿಷ್ಪತ್ಯ ಪ್ರತಿಯುಧ್ಯಸ್ವ ನೃಶಂಸ ಪುರುಷೋ ಭವ ॥ ೭೯

ಹಂತಾಸ್ಮಿ ತ್ವಾಂ ಸಹಾಮಾತ್ಯಂ ಸಪುತ್ರಜ್ಞಾತಿಬಾಂಧವಮ್ ।
ನಿರುದ್ವಿಗ್ನಾಸ್ತ್ರಯೋ ಲೋಕಾ ಭವಿಷ್ಯಂತಿ ಹತೇ ತ್ವಯಿ ॥ ೮೦

---

ಯಾದ ಅಂಗದನು ಲಂಕಾಪ್ರಾಕಾರವನ್ನು ಲಂಘಿಸಿ ನೆಟ್ಟಗೆ ರಾವಣನ ಅರಮನೆಗೆ ಬಂದನು. ರಾವಣನು ಸಚಿವರೊಡನೆ ನಿಶ್ಚಿಂತೆಯಿಂದ ಕುಳಿತಿದ್ದನು! (೭೪–೭೫). ಆ ವಾನರೋತ್ತಮನು ರಾವಣನ ಸಮೀಪದಲ್ಲಿ ಇಳಿದು ನಿಂತನು. ಸುವರ್ಣಾಂಗದಭೂಷಿತನಾಗಿ ಪ್ರಜ್ವಲಿಸುವ ಅಗ್ನಿಯಂತಿದ್ದ ಅಂಗದನು, ರಾವಣ ನಿಗೆ ಶ್ರೀರಾಮನು ಹೇಳಿಕಳಿಸಿದ ಸಂದೇಶವನ್ನು ಹೆಚ್ಚು ಕಡಿಮೆಯಿಲ್ಲದಂತೆ ಕ್ರಮವಾಗಿ ತಿಳಿಸಿದನು. ಅಮಾತ್ಯಸಹಿತನಾಗಿದ್ದ ರಾಕ್ಷಸರಾಜನಿಗೆ ತಾನು ಯಾರೆಂಬುದನ್ನು ಮೊದಲು ಹೇಳಿದನು (೭೬–೭೭). ಆತನು ರಾವಣನನ್ನು ಕುರಿತು "ರಾವಣ, ಕೋಸಲೇಂದ್ರನೂ ಧರ್ಮಾತ್ಮನೂ ಆದ ಶ್ರೀರಾಮನ ದೂತ ನಾನು! ವಾಲಿಯ ತನಯ; ಅಂಗದನೆಂದು ನನ್ನ ಹೆಸರು. ನನ್ನ ವಿಷಯ ವನ್ನು ನೀನು ಕೇಳಿದ್ದರೂ ಇರಬಹದು! (೭೮). ರಘುನಾಥನೂ ಕೌಸಲ್ಯಾ ನಂದವರ್ಧನನೂ ಆದ ಶ್ರೀರಾಮನು ನಿನಗೊಂದು ಸಂದೇಶವನ್ನು ಕಳಿಸಿದ್ದಾನೆ. ಏನೆಂದರೆ, 'ಎಲಾ ಘಾತಕ, (ಗೂಡಿನಿಂದ) ಹೊರಗೆ ಬಂದು ಎದುರಾಗಿ ಯುದ್ಧಮಾಡು! ಗಂಡಸಿನಂತೆ ನಡೆದುಕೊ! ನಿನ್ನ ಅಮಾತ್ಯರನ್ನೂ ಪುತ್ರರನ್ನೂ ಬಂಧುಬಾಂಧವರನ್ನೂ ಬಿಡದೆ ನಿನ್ನನ್ನು ಕೊಲ್ಲುವೆನು. ನೀನು ಸತ್ತರೆ ಮೂರು ಲೋಕಗಳೂ ಕ್ಷೇಮದಿಂದ ಬಾಳುತ್ತವೆ (೭೯–೮೦)

ದೇವದಾನವಯಕ್ಷಾಣಾಂ ಗಂಧರ್ವೋರಗರಕ್ಷಸಾಮ್ ।
ಶತ್ರುಮದ್ಯೋದ್ಧರಿಷ್ಯಾಮಿ ತ್ವಾಮೃಷೀಣಾಂ ಚ ಕಂಟಕಮ್ ॥ ೮೧

ವಿಭೀಷಣಸ್ಯ ಚೈಶ್ವರ್ಯಂ ಭವಿಷ್ಯತಿ ಹತೇ ತ್ವಯಿ।
ನ ಚೇತ್ಸತ್ಕೃತ್ಯ ವೈದೇಹೀಂ ಪ್ರಣಿಪತ್ಯ ಪ್ರದಾಸ್ಯಸಿ ॥ ೮೨

ಇತ್ಯೇವಂ ಪರುಷಂ ವಾಕ್ಯಂ ಬ್ರುವಾಣೇ ಹರಿಪುಂಗವೇ ।
ಅಮರ್ಷವಶಮಾಪನ್ನೋ ನಿಶಾಚರಗಣೇಶ್ವರಃ ॥ ೮೩

ತತಃ ಸ ರೋಷತಾಮ್ರಾಕ್ಷಃ ಶಶಾಸ ಸಚಿವಾಂಸ್ತದಾ।
ಗೃಹ್ಯತಾಮೇಷ ದುರ್ಮೇಧಾ ವಧ್ಯತಾಮಿತಿ ಚಾಸಕೃತ್ ॥ ೮೪

ರಾವಣಸ್ಯ ವಚಃ ಶ್ರುತ್ವಾದೀಪ್ತಾಗ್ನಿಸಮತೇಜಸಃ ।
ಜಗೃಹುಸ್ತಂ ತತೋ ಘೋರಾಶ್ಚತ್ವಾರೋ ರಜನೀಚರಾಃ ॥ ೮೫

ಗ್ರಾಹಯಾಮಾಸ ತಾರೇಯಃ ಸ್ವಯಮಾತ್ಮಾನಮಾತ್ಮವಾನ್ ।
ಬಲಂ ದರ್ಶಯಿತುಂ ವೀರೋ ಯಾತುಧಾನಗಣೇ ತದಾ ॥ ೮೬

---

ದೇವದಾನವಯಕ್ಷರಿಗೂ ಗಂಧರ್ವೋರಗರಾಕ್ಷಸರಿಗೂ ಋಷಿಗಳಿಗೂ ಕಂಟಕನಾದ ನಿನ್ನನ್ನು ಇಂದು ನಿರ್ಮೂಲಗೊಳಿಸುವೆನು. ನೀನು ಹತನಾದ ಮೇಲೆ ವಿಭೀಷಣನಿಗೆ ಲಂಕಾಧಿಪತ್ಯವು ದೊರೆಯುತ್ತದೆ. ಆದರೆ ಸತ್ಕಾರ ಪೂರ್ವಕವಾಗಿ ವೈದೇಹಿಯನ್ನು ತಂದೊಪ್ಪಿಸಿ ಶರಣಾಗತನಾದ ಪಕ್ಷದಲ್ಲಿ ನಿನ್ನನ್ನುಳಿಸುವೆನು' ಎಂಬುದೇ ಶ್ರೀರಾಮನ ಸಂದೇಶ'' ಎಂದು ಹೇಳಿದನು (೮೧–೮೨). ಹೀಗೆ ಕಠೋರವಾದ ನುಡಿಯನ್ನು ಅಂಗದನು ಆಡುವುದೇ ತಡ, ರಾಕ್ಷಸೇಶ್ವರನು ಕೋಪದಿಂದ ಸಿಡಿದುಬಿದ್ದನು. ಕಣ್ಣುಗಳು ಕೆಂಪಡರಿದವು. ಅವನು ಬಳಿಯಲ್ಲಿದ್ದ ಸಚಿವರನ್ನು ನೋಡಿ ''ಹಿಡಿಯಿರಿ ಹಿಡಿಯಿರಿ ಈ ದುಷ್ಟನನ್ನು ! ಕೊಲ್ಲಿರಿ ಕೊಲ್ಲಿರಿ ಈ ಕಪಿಯನ್ನು !'' ಎಂದು ಅಬ್ಬರಿಸಿದನು (೮೩–೮೪). ಉರಿಯದ ಬೆಂಕಿಯಂತೆ ಕಿಡಿಯುಗುಳುತ್ತಿದ್ದ ರಾವಣನ ಅಬ್ಬರವನ್ನು ಕೇಳಿದೊಡನೆ , ಘೋರಾಕಾರದ ನಾಲ್ವರು ರಾಕ್ಷಸರು ಓಡಿಬಂದು ಅಂಗದನನ್ನು ಹಿಡಿದರು. ಧೀರನಾದ ತಾರಾತನಯನು, ತನ್ನನ್ನು ರಾಕ್ಷಸರು ಹಿಡಿದುಕೊಳ್ಳಲು ಅಡ್ಡಿಪಡಿಸಲಿಲ್ಲ. ರಾಕ್ಷಸರಿಗೆ ತನ್ನ ಬಲವೆಷ್ಟೆಂಬುದನ್ನು ತೋರಿಸಬೇಕೆಂದು ಆ ವೀರನು ಎಣಿಸಿದನು (೮೫–೮೬)

ಸ ತಾನ್ ಬಾಹುದ್ವಯೇ ಸಕ್ತಾನಾದಾಯ ಪತಗಾನಿವ।
ಪ್ರಾಸಾದಂ ಶೈಲಸಂಕಾಶಮುತ್ಪ ಪಾತಾಂಗದಸ್ತದಾ॥ ೮೭

ತೇಽಂತರಿಕ್ಷಾದ್ವಿನಿರ್ಧೂತಾಸ್ತಸ್ಯ ವೇಗೇನ ರಾಕ್ಷಸಾಃ ।
ಭೂಮೌ ನಿಪತಿತಾಃ ಸರ್ವೇ ರಾಕ್ಷಸೇಂದ್ರಸ್ಯ ಪ್ರಶ್ಯತಃ ॥ ೮೮

ತತಃ ಪ್ರಾಸಾದಶಿಖರಂ ಶೈಲಶೃಂಗಮಿವೋನ್ನತಮ್ ।
ದದರ್ಶ ರಾಕ್ಷಸೇಂದ್ರಸ್ಯ ವಾಲಿಪುತ್ರಃ ಪ್ರತಾಪವಾನ್ ॥ ೮೯

ತತ್ಪಫಾಲ ಪದಾಕ್ರಾಂತಂ ದಶಗ್ರೀವಸ್ಯ ಪಶ್ಯತಃ ।
ಪುರಾ ಹಿಮವತಃ ಶೃಂಗಂ ವಜ್ರಿಣೇವ ವಿದಾರಿತಮ್ ॥ ೯೦

ಭಂಕ್ತ್ವಾ ಪ್ರಾಸಾದಶಿಖರಂ ನಾಮ ವಿಶ್ರಾವ್ಯ ಚಾತ್ಮನಃ ।
ವಿನದ್ಯ ಸುಮಹಾನಾದಮುತ್ಪಪಾತ ವಿಹಾಯಸಮ್॥ ೯೧

ವ್ಯಥಯನ್ ರಾಕ್ಷಸಾನ್ ಸರ್ವಾನ್ ಹರ್ಷಯಂಶ್ಚಾಪಿ ವಾನರಾನ್।
ಸ ವಾನರಾಣಾಂ ಮಧ್ಯೇ ತು ರಾಮಪಾರ್ಶ್ವಮುಪಾಗತಃ ॥ ೯೨

---

ಆ ನಾಲ್ವರು ಇವನ ಎರಡು ತೋಳುಗಳನ್ನೂ ಬಲವಾಗಿ ಹಿಡಿದುಕೊಳ್ಳಲು, ಅಂಗದನು ನಾಲ್ಕು ಹಕ್ಕಿಗಳನ್ನು ಹಿಡಿದುಕೊಂಡಂತೆ ಅವರೊಡನೆ ಉನ್ನತವಾದ ಪ್ರಸಾದಶಿಖರಕ್ಕೆ ನೆಗೆದುಬಿಟ್ಟನು! ರಾವಣನು ಮಿಕಮಿಕನೆ ನೋಡುತ್ತಿರುವಾಗಲೇ ಅಂಗದನು ಅಂತರಿಕ್ಷದಲ್ಲಿ ವೇಗದಿಂದ ಕೈಗಳನ್ನು ಕೊಡವಲಾಗಿ, ಆ ನಾಲ್ವರು ರಾಕ್ಷಸರೂ ದೊಪ್ಪನೆ ನೆಲದಲ್ಲಿ ಬಿದ್ದರು! (೮೭–೮೮). ಪ್ರತಾಪಶಾಲಿಯಾದ ಆ ವಾಲಿಪುತ್ರನು ಪ್ರಾಸಾದದಮೇಲೆ ನಿಂತು, ರಾವಣನ ಅರಮನೆಯ ಮೇಲುಗಡೆ ಶೈಲಶೃಂಗದಂತೆ ಉನ್ನತವಾಗಿ ರಾಜಿಸುತ್ತಿದ್ದ ಕಳಶವನ್ನು ಕಂಡು ಕಾಲಿನಿಂದೊದೆದನು. ಇಂದ್ರನ ವಜ್ರಾಯುಧದ ಪೆಟ್ಟಿಗೆ ಹಿಮವಂತನ ಶಿಖರವು ಉರುಳಿಬಿದ್ದಂತೆ, ಆ ಕಳಶವು ಚೂರುಚೂರಾಗಿ ಉರುಳಿಬಿದ್ದಿತು! (೮೯–೯೦). ಹೀಗೆ ಅಂಗದನು ಪ್ರಾಸಾದಶಿಖರವನ್ನು ಪುಡಿಪುಡಿ ಮಾಡಿ, 'ನಾನು ವಾಲಿಪುತ್ರ! ನನ್ನ ಹೆಸರು ಅಂಗದ!' ಎಂದು ಘೋಷಿಸಿ, ಮಹಾಧ್ವನಿಯಿಂದ ಸಿಂಹನಾದಮಾಡಿ ಆಕಾಶಕ್ಕೆ ನೆಗೆದನು(೯೧). ಈ ರೀತಿಯಲ್ಲಿ ಸಮಸ್ತ ರಾಕ್ಷಸರನ್ನೂ ವ್ಯಥೆಪಡಿಸಿ, ವಾನರರನ್ನು ಸಂತೋಷಪಡಿಸಿ, ಆಕಾಶಮಾರ್ಗವಾಗಿ ಹಾರಿ ಶ್ರೀರಾಮನ ಪಾರ್ಶ್ವದಲ್ಲಿ ಬಂದು ನಿಂತನು (೯೨).

ರಾವಣಸ್ತು ಪರಂ ಚಕ್ರೇ ಕ್ರೋಧಂ ಪ್ರಾಸಾದಧರ್ಷಣಾತ್ ।
ವಿನಾಶಂ ಚಾತ್ಮನಃ ಪಶ್ಯನ್ನಿಶ್ವಾಸಪರಮೋಽಭವತ್ ॥ ೯೩

ರಾಮಸ್ತು ಬಹುಭಿರ್ಹೃಷ್ಟೈರ್ನಿನದದ್ಭಿಃ ಪ್ಲವಂಗಮೈಃ ।
ವೃತೋ ರಿಪುವಧಾಕಾಂಕ್ಷೀ ಯುದ್ಧಾಯೈವಾಭ್ಯವರ್ತತ ॥ ೯೪

ಸುಷೇಣಸ್ತು ಮಹಾವೀರ್ಯೋ ಗಿರಿಕೂಟೋಪಮೋ ಹರಿಃ ।
ಬಹುಭಿಃ ಸಂವೃತಸ್ತತ್ರ ವಾನರೈಃ ಕಾಮರೂಪಿಭಿಃ ॥ ೯೫

ಚತುರ್ದ್ವಾರಾಣಿ ಸರ್ವಾಣಿ ಸುಗ್ರೀವವಚನಾತ್ಕಪಿಃ ।
ಪರ್ಯಕ್ರಾಮತ ದುರ್ಧರ್ಷೋ ನಕ್ಷತ್ರಾಣೀವ ಚಂದ್ರಮಾಃ ॥ ೯೬

ತೇಷಾಮಕ್ಷೌಹಿಣಿಶತಂ ಸಮವೇಕ್ಷ್ಯ ವನೌಕಸಾಮ್ ।
ಲಂಕಾಮುಪನಿವಿಷ್ಟಾನಾಂ ಸಾಗರಂ ಚಾಭಿವರ್ತತಾಮ್ ॥ ೯೭

ರಾಕ್ಷಸಾ ವಿಸ್ಮಯಂ ಜಗ್ಮುಸ್ತ್ರಾಸಂ ಜಗ್ಮುಸ್ತಥಾಪರೇ ।
ಅಪರೇ ಸಮರೋದ್ಧರ್ಷಾ ದ್ಧರ್ಷಮೇವ ಪ್ರಪೇದಿರೇ ॥ ೯೮

ಕೃತ್ಸ್ನಂ ಹಿ ಕಪಿಭಿರ್ವ್ಯಾಪ್ತಂ ಪ್ರಾಕಾರಪರಿಖಾಂತರಮ್ ।
ದದೃಶೂ ರಾಕ್ಷಸಾ ದೀನಾಂ ಪ್ರಾಕಾರಂ ವಾನರೀಕೃತಮ್ ॥ ೯೯

---

ಅತ್ತ ರಾವಣನಿಗೆ ತನ್ನ ಅರಮನೆಯ ಶಿಖರವನ್ನುರುಳಿಸಿದ್ದರಿಂದ ಕೋಪ ವಿಮ್ಮಡಿಸಿತು. ತನ್ನ ಕಾರ್ಯವು ಕೆಡುತ್ತಿರುವುದನ್ನು ಕಂಡು ನಿಟ್ಟುಸಿರು ಬಿಡತೊಡಗಿದನು! ಇತ್ತ ಶ್ರೀರಾಮನು, ಯುದ್ಧವು ಅನಿವಾರ್ಯವೆಂದೂ ರಿಪುವನ್ನು ವಧಿಸಬೇಕೆಂದೂ ನಿಶ್ಚಯಿಸಿ, ಹರ್ಷದಿಂದುಬ್ಬಿ ಅಬ್ಬರಿಸುತ್ತ ವಾನರ ಯೋಧರೊಡನೆ ಸಜ್ಜಾದನು (೯೩–೯೪). ಮಹಾವೀರನೂ ಗಿರಿಶೃಂಗಾಕಾರನೂ ಆದ ಸುಷೇಣನು ಸುಗ್ರೀವನ ಆಜ್ಞೆಯಂತೆ ಕಾಮರೂಪಿಗಳಾದ ವಾನರರಿಂದ ಪರಿವೃತನಾಗಿ, ಚಂದ್ರನು ನಕ್ಷತ್ರಗಳನ್ನು ಸುತ್ತಿಬರುವಂತೆ, ಲಂಕೆಯ ನಾಲ್ಕು ದ್ವಾರಗಳನ್ನೂ ಸುತ್ತುತ್ತ ಅಲ್ಲಿಯ ಏರ್ಪಾಡನ್ನು ಪರಿಶೀಲಿಸುತ್ತಿದ್ದನು (೯೫–೯೬). ನೂರಾರು ಅಕ್ಷೌಹಿಣೀಸಂಖ್ಯೆಯಲ್ಲಿ ವಾನರಸೈನಿಕರು ಕಡಲನ್ನು ದಾಟಿ ಬಂದು ಲಂಕಾನಗರವನ್ನು ಸುತ್ತುಗಟ್ಟಿರುವುದನ್ನು ಕಂಡು, ರಾಕ್ಷಸರು ಬೆರಗಾದರು. ಕೆಲವು ರಾಕ್ಷಸರು ಹೆದರಿದರು! ಒಳ್ಳೆಯ ಸಂಗ್ರಾಮವು ಪ್ರಾಪ್ತವಾಯಿತೆಂದು ಗರ್ವದಿಂದ ಕೆಲವರು ಹಿಗ್ಗಿದರು ! (೯೭–೯೮). ಲಂಕೆಯ ಕೋಟೆಗೂ ಕಂದಕ್ಕೂ ನಡುವೆ ಇರುವ ತಾಣವೂ ವಾನರರಿಂದ

ಹಾಹಾಕಾರಂ ಪ್ರಕುರ್ವಂತಿ ರಾಕ್ಷಸಾ ಭಯಮೋಹಿತಾಃ ||

ತಸ್ಮಿನ್ ಮಹಾಭೀಷಣಕೇ ಪ್ರವೃತ್ತೇ

ಕೋಲಾಹಲೇ ರಾಕ್ಷಸರಾಜಧಾನ್ಯಾಮ್ ।

ಪ್ರಗೃಹ್ಯ ರಕ್ಷಾಂಸಿ ಮಹಾಯುಧಾನಿ

ಯುಗಾಂತವಾತಾ ಇವ ಸಂವಿಚೇರುಃ || ೧೦೦

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕಚತ್ವಾರಿಂಶಃ ಸರ್ಗಃ

---

ವ್ಯಾಪ್ತವಾಯಿತು! ವಾನರಮಯವಾದ ಇನ್ನೊಂದು ಕೋಟೆಯೇ ನಿರ್ಮಿತವಾಯಿತೋ ಎಂಬಂತೆ ನೆರೆದಿದ್ದ ಕಪಿಸೇನೆಯನ್ನು ಕಂಡು ರಾಕ್ಷಸರು ಅಂಜಿ, ದೈನ್ಯದಿಂದ ಹಾಹಾಕಾರಮಾಡತೊಡಗಿದರು (೯೯). ಹೀಗೆ ರಾಕ್ಷಸರು ರಾಜಧಾನಿಯಲ್ಲಿ ಭೀಷಣವಾದ ಕೋಲಾಹಲ ಉಂಟಾಯಿತು. ರಾಕ್ಷಸರು ದೊಡ್ಡ ದೊಡ್ಡ ಆಯುಧಗಳನ್ನು ಹಿಡಿದು ಬಿರುಗಾಳಿಯಂತೆ ಲಂಕೆಯಲ್ಲಿ ಸಂಚರಿಸತೊಡಗಿದರು (೧೦೦).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ನಲವತ್ತೊಂದನೆಯ ಸರ್ಗ.

# ದ್ವಿಚತ್ವಾರಿಂಶಃ ಸರ್ಗಃ

ಯುದ್ಧಾರಂಭಃ

ತತಸ್ತೇ ರಾಕ್ಷಸಾಸ್ತತ್ರ ಗತ್ವಾ ರಾವಣಮಂದಿರಮ್ ।
ನ್ಯವೇದಯನ್ ಪುರೀಂ ರುದ್ಧಾಂ ರಾಮೇಣ ಸಹ ವಾನರೈಃ ॥ ೧

ರುದ್ಧಾಂ ತು ನಗರೀಂ ಶ್ರುತ್ವಾ ಜಾತಕ್ರೋಧೋ ನಿಶಾಚರಃ ।
ವಿಧಾನಂ ದ್ವಿಗುಣಂ ಕೃತ್ವಾ ಪ್ರಾಸಾದಂ ಸೋಽಧ್ಯರೋಹತ ॥ ೨

ಸ ದದರ್ಶಾವೃತಾಂ ಲಂಕಾಂ ಸಶೈಲವನಕಾನನಾಮ್ ।
ಅಸಂಖ್ಯೇಯೈರ್ಹರಿಗಣೈಃ ಸರ್ವತೋ ಯುದ್ಧಕಾಂಕ್ಷಿಭಿಃ ॥ ೩

ಸ ದೃಷ್ಟ್ವಾ ವಾನರೈಃ ಸರ್ವಾಂ ವಸುಧಾಂ ಕಪಿಲೀಕೃತಾಮ್ ।
ಕಥಂ ಕ್ಷಪಯಿತವ್ಯಾಃ ಸ್ಯುರಿತಿ ಚಿಂತಾಪರೋಽಭವತ್ ॥ ೪

ಸ ಚಿಂತಯಿತ್ವಾ ಸುಚಿರಂ ಧೈರ್ಯಮಾಲಂಬ್ಯ ರಾವಣಃ ।
ರಾಘವಂ ಹರಿಯೂಥಾಂಶ್ಚ ದದರ್ಶಾಯತಲೋಚನಃ ॥ ೫

## ಸರ್ಗ ೪೨

ವಾನರರಿಂದ ಲಂಕೆಯ ಆಕ್ರಮಣ ಯುದ್ಧವನ್ನಾರಂಭಿಸುವಂತೆ ರಾವಣನು ರಾಕ್ಷಸರಿಗೆ ಆದೇಶವನ್ನೀಯುವುದು. ಯುದ್ಧಾರಂಭ.

ಆಮೇಲೆ ರಾಕ್ಷಸರು ಅರಮನೆಗೆ ಹೋಗಿ, ರಾಮನು ವಾನರಬಲದೊಡನೆ ರಾಜಧಾನಿಯನ್ನು ಸುತ್ತುಗಟ್ಟಿರುವನೆಂದು ರಾವಣನಿಗೆ ನಿವೇದಿಸಿದರು. ಕ್ರುದ್ಧನಾದ ರಾವಣನು ರಕ್ಷಣಾವಿಧಾನವನ್ನು ದ್ವಿಗುಣಗೊಳಿಸಿ ಪ್ರಾಸಾದವನ್ನೇರಿದನು (೧–೨). ಅಲ್ಲಿ ನಿಂತು ಸುತ್ತಲೂ ನೋಡಲಾಗಿ ಅಸಂಖ್ಯಾತರಾದ ವಾನರರು ಯುದ್ಧಾಪೇಕ್ಷೆಯಿಂದ ಲಂಕೆಯನ್ನು ಸುತ್ತು ಗಟ್ಟಿರುವುದು ಗೋಚರಿಸಿತು. ನೋಡಿದಷ್ಟು ದೂರವೆಲ್ಲವೂ ವಾನರಮಯವಾಗಿ ಕಪಿಲವರ್ಣ ಒಂದೇ ಕಾಣಿಸುತ್ತಿತ್ತು! 'ಎಲಾ! ಎಷ್ಟು ಮಂದಿ ಬಂದು ಸೇರಿದ್ದಾರೆ! ಇವರನ್ನು ಕೊಲ್ಲುವುದು ಹೇಗೆ?' ಎಂದು ರಾವಣನಿಗೆ ಚಿಂತೆಯಂಕುರಿಸಿತು! (೩–೪). ಬಹಳ ಹೊತ್ತು ಚಿಂತಾಕುಲನಾಗಿ ಕಡೆಗೆ ಧೈರ್ಯವನ್ನು ತಂದುಕೊಂಡನು. ಶ್ರೀರಾಮನೂ ಸುಗ್ರೀವಾದಿ ಕಪಿನಾಯಕರೂ ದೂರದಲ್ಲಿ ನಿಂತಿರುವುದನ್ನು

ರಾಘವಃ ಸಹ ಸೈನ್ಯೇನ ಮುದಿತೋ ನಾಮ ಪುಪ್ಲುವೇ ।
ಲಂಕಾಂ ದದರ್ಶ ಗುಪ್ತಾಂ ವೈ ಸರ್ವತೋ ರಾಕ್ಷಸೈರ್ವೃತಾಮ್ ॥ ೬

ದೃಷ್ಟ್ವಾ ದಾಶರಥಿರ್ಲಂಕಾಂ ಚಿತ್ರಧ್ವಜಪತಾಕಿನೀಮ್ ।
ಜಗಾಮ ಸಹಸಾ ಸೀತಾಂ ದೂಯಮಾನೇನ ಚೇತಸಾ ॥ ೭

ಅತ್ರ ಸಾ ಮೃಗಶಾವಾಕ್ಷೀ ಮತ್ಕೃತೇ ಜನಕಾತ್ಮಜಾ ।
ಪೀಡ್ಯತೇ ಶೋಕಸಂತಪ್ತಾ ಕೃಶಾ ಸ್ಥಂಡಿಲಶಾಯಿನೀ ॥ ೮

ಪೀಡ್ಯಮಾನಾಂ ಸ ಧರ್ಮಾತ್ಮಾ ವೈದೇಹೀಮನುಚಿಂತಯನ್ ।
ಕ್ಷಿಪ್ರಮಾಜ್ಞಾಪಯಾಮಾಸ ವಾನರಾನ್ ದ್ವಿಷತಾಂ ವಧೇ ॥ ೯

ಏವಮುಕ್ತೇ ತು ವಚನೇ ರಾಮೇಣಾಕ್ಲಿಷ್ಟ ಕರ್ಮಣಾ ।
ಸಂಘರ್ಷಮಾಣಾಃ ಪ್ಲವಗಾಃ ಸಿಂಹನಾದೈರನಾದಯನ್ ॥ ೧೦

ಶಿಖರೈರ್ವಿಕಿರಾಮೈನಾಂ ಲಂಕಾಂ ಮುಷ್ಟಿಭಿರೇವ ವಾ ।
ಇತಿ ಸ್ಮ ದಧಿರೇ ಸರ್ವೇ ಮನಾಂಸಿ ಹರಿಯೂಥಪಾಃ ॥ ೧೧

ಉದ್ಯಮ್ಯ ಗಿರಿಶೃಂಗಾಣಿ ಶಿಖರಾಣಿ ಮಹಾಂತಿ ಚ ।
ತರೂಂಶ್ಚೋತ್ಪಾಟ್ಯ ವಿವಿಧಾಂಸ್ತಿಷ್ಠಂತಿ ಹರಿಯೂಥಪಾಃ ॥ ೧೨

---

ರಾವಣನು ಕಣ್ಣರಳಿಸಿ ನೋಡಿದನು! (೫). ಇತ್ತ ಶ್ರೀರಾಮನು ಉತ್ಸಾಹದಿಂದ ಸೇನೆಯೊಡನೆ ಮುಂದೆ ನುಗ್ಗುತ್ತ ಬಂದು, ರಾಕ್ಷಸರಕ್ಷಿತವಾದ ಲಂಕೆಯನ್ನು ನೋಡುತ್ತಿದ್ದನು. ಲಂಕೆಯನ್ನು ನೋಡಿದೊಡನೆ ರಾಘವನಿಗೆ ಸೀತೆಯ ಸ್ಮರಣೆಯಾಯಿತು ಮನಸ್ಸು ವ್ಯಾಕುಲವಾಯಿತು (೬–೭). 'ಆಹಾ, ಇಲ್ಲಿಯೇ ಅಲ್ಲವೆ ಹರಿಣಾಕ್ಷಿಯಾದ ನನ್ನ ಜಾನಕಿ ಇರುವುದು! ನನಗಾಗಿ ಕಾಡಿಗೆ ಬಂದು ಕಷ್ಟಕ್ಕೆ ಗುರಿಯಾದಳು. ಶೋಕದಿಂದ ಬೆಂದು ಕೃಶಳಾಗಿ ನೆಲದಮೇಲೆ ಮಲಗಿ ರೋದಿಸುತ್ತಿದ್ದಾಳೆ' ಎಂಬ ದುಃಖ ಆವರಿಸಿತು. ವೈದೇಹಿಯ ಕಷ್ಟವು ಮನಸ್ಸಿಗೆ ಹೊಳೆದೊಡನೆ ಶ್ರೀರಾಮನು "ವಾನರಯೋಧರೆ, ಇನ್ನು ಶತ್ರುಮರ್ದನವನ್ನಾರಂಭಿಸಿರಿ! ಲಗ್ಗೆ ಹತ್ತಿರಿ!" ಎಂದು ಆಜ್ಞೆಯನ್ನಿತ್ತನು (೮–೯). ಶ್ರೀರಾಮನ ಆಜ್ಞೆಯಾದುದೇ ತಡ, ವಾನರರು ಉತ್ಸಾಹದಿಂದ ಸಿಂಹನಾದ ಮಾಡಿದರು! 'ಗಿರಿಶೃಂಗಗಳಿಂದ ಬಡಿದು ಮುಷ್ಟಿಗಳಿಂದ ಅಪ್ಪಳಿಸಿ ಲಂಕೆಯ ಕೋಟೆಯನ್ನು ನುಚ್ಚುನೂರು ಮಾಡಬೇಕು' ಎಂದು ನಿಶ್ಚಯಿಸಿ ಅವರೆಲ್ಲರೂ

ಪ್ರೇಕ್ಷತೋ ರಾಕ್ಷಸೇಂದ್ರಸ್ಯ ತಾನ್ಯನೀಕಾನಿ ಭಾಗಶಃ ।
ರಾಘವಪ್ರಿಯಕಾಮಾರ್ಥಂ ಲಂಕಾಮಾರುರುಹುಸ್ತದಾ ॥ ೧೩

ತೇ ತಾಮ್ರವಕ್ತ್ರಾ ಹೇಮಾಭಾ ರಾಮಾರ್ಥೇ ತ್ಯಕ್ತಜೀವಿತಾಃ ।
ಲಂಕಾಮೇವಾಭ್ಯವರ್ತಂತ ಸಾಲತಾಲಶಿಲಾಯುಧಾಃ ॥ ೧೪

ತೇ ದ್ರುಮೈಃ ಪರ್ವತಾಗ್ರೈಶ್ಚ ಮುಷ್ಟಿಭಿಶ್ಚ ಪ್ಲವಂಗಮಾಃ ।
ಪ್ರಾಕಾರಾಗ್ರಾಣ್ಯರಣ್ಯಾನಿ ಮಮಂಥುಸ್ತೋರಣಾನಿ ಚ ॥ ೧೫

ಪರಿಖಾಃ ಪೂರಯಂತಿ ಸ್ಮ ಪ್ರಸನ್ನ ಸಲಿಲಾಯುತಾಃ ।
ಪಾಂಸುಭಿಃ ಪರ್ವತಾಗ್ರೈಶ್ಚ ತೃಣೈಃ ಕಾಷ್ಠೈಶ್ಚ ವಾನರಾಃ ॥ ೧೬

ತತಃ ಸಹಸ್ರಯೂಥಾಶ್ಚ ಕೋಟಿಯೂಥಾಶ್ಚ ವಾನರಾಃ ।
ಕೋಟೀಶತಯುತಾಶ್ಚಾನ್ಯೇ ಲಂಕಾಮಾರುರುಹುಸ್ತದಾ ॥ ೧೭

ಕಾಂಚನಾನಿ ಪ್ರಮರ್ದಂತಸ್ತೋರಣಾನಿ ಪ್ಲವಂಗಮಾಃ ।
ಕೈಲಾಸಶಿಖರಾಭಾನಿ ಗೋಪುರಾಣಿ ಪ್ರಮಥ್ಯ ಚ ॥ ೧೮

ಆಪ್ಲವಂತಃ ಪ್ಲವಂತಶ್ಚ ಗರ್ಜಂತಶ್ಚ ಪ್ಲವಂಗಮಾಃ ।
ಲಂಕಾಂ ತಾಮಭಿಧಾವಂತಿ ಮಹಾವಾರಣಸಂನಿಭಾಃ ॥ ೧೯

---

ಗಿರಿಶಿಖರಗಳನ್ನೂ ದೊಡ್ಡದೊಡ್ಡ ವೃಕ್ಷಗಳನ್ನೂ ಕಿತ್ತು ಹೊತ್ತು ನುಗ್ಗಿದರು (೧೦–೧೨). ಅತ್ತ ರಾವಣನು ನೋಡುತ್ತಿರುವಾಗಲೇ ವಾನರರು ಪ್ರಾಕಾರವನ್ನೇರಿದರು. ಕೆಂಪುಮೋರೆಯ ಪಿಂಗಳವರ್ಣದ ಆ ಕಪಿಯೋಧರು ಶ್ರೀರಾಮನಿಗಾಗಿ ಪ್ರಾಣವನ್ನೊಪ್ಪಿಸಲು ಸಿದ್ಧರಾಗಿ, ಸಾಲ ತಾಲ ಶಿಲೆಗಳನ್ನು ಹೊತ್ತು ಮುನ್ನುಗ್ಗಿದರು (೧೩–೧೪). ಆ ವಾನರವೀರರು ವೃಕ್ಷ, ಗಿರಿಶಿಖರ, ಮುಷ್ಟಿಗಳಿಂದ ಬಡಿದು ಬಡಿದು ಅಪ್ಪಳಿಸಿ ಪ್ರಾಕಾರದ ಮೇಲ್ಭಾಗವನ್ನೂ ಹೊರವಲಯದ ಉದ್ಯಾನಗಳನ್ನೂ ಪುರದ್ವಾರಗಳನ್ನೂ ಧ್ವಂಸಮಾಡಿದರು. ತಿಳಿನೀರಿನಿಂದ ತುಂಬಿದ್ದ ಕಂದಕಗಳಿಗೆ ಮಣ್ಣನ್ನು ತುಂಬಿ ಗಿರಿಶಿಖರಗಳನ್ನು ತಳ್ಳಿ ಹುಲ್ಲು ಕಟ್ಟಿಗೆಗಳನ್ನು ಹಾಕಿ ಮುಚ್ಚಿದರು (೧೫–೧೬). ಆ ವಾನರರು ಸಾವಿರ ಸಾವಿರವಾಗಿ, ಕೋಟಿಕೋಟಿಯಾಗಿ, ಕಡೆಗೆ ನೂರುಕೋಟಿಯಾಗಿ ಲಂಕೆಗೆ ಲಗ್ಗೆಹತ್ತಿದರು. ಸುವರ್ಣಮಯವಾದ ಪುರದ್ವಾರಗಳನ್ನು ಒಡೆದರು. ಕೈಲಾಸ ಶಿಖರದಂತೆ ಉನ್ನತವಾದ ಗೋಪುರಗಳನ್ನು ಪುಡಿಮಾಡಿದರು (೧೭–೧೮). ಸಲಗಗಳಂತಿದ್ದ ಆ ಕಪಿಗಳು ಹಾರುತ್ತ ಕುಪ್ಪಳಿಸುತ್ತ ಗರ್ಜಿಸುತ್ತ ಲಂಕೆಯನ್ನಾ

ಜಯತ್ಯತಿಬಲೋ ರಾಮೋ ಲಕ್ಷ್ಮಣಶ್ಚ ಮಹಾಬಲಃ ।
ರಾಜಾ ಜಯತಿ ಸುಗ್ರೀವೋ ರಾಘವೇಣಾಭಿಪಾಲಿತಃ ॥ ೨೦

ಇತ್ಯೇವಂ ಘೋಷಯಂತಶ್ಚ ಗರ್ಜಂತಶ್ಚ ಪ್ಲವಂಗಮಾಃ ।
ಅಭ್ಯಧಾವಂತ ಲಂಕಾಯಾಃ ಪ್ರಾಕಾರಂ ಕಾಮರೂಪಿಣಃ ॥ ೨೧

ವೀರಬಾಹುಃ ಸುಬಾಹುಶ್ಚ ನಲಶ್ಚ ವನಗೋಚರಃ ।
ನಿಪೀಡ್ಯೋಪನಿವಿಷ್ಟಾಸ್ತೇ ಪ್ರಾಕಾರಂ ಹರಿಯೂಥಪಾಃ ॥ ೨೨

ಏತಸ್ಮಿನ್ನಂತರೇ ಚಕ್ರುಃ ಸ್ಕಂಧಾವಾರನಿವೇಶನಮ್ ।
ಪೂರ್ವದ್ವಾರಂ ತು ಕುಮುದಃ ಕೋಟೀಭಿರ್ದಶಭಿರ್ವೃತಃ ॥ ೨೩

ಆವೃತ್ಯ ಬಲವಾಂಸಸ್ತಸ್ಥೌ ಹರಿಭಿರ್ಜಿತಕಾಶಿಭಿಃ ।
ಸಾಹಾಯ್ಯಾರ್ಥಂ ತು ತಸ್ಯೈವ ನಿವಿಷ್ಟಃ ಪ್ರಘಸೋ ಹರಿಃ ॥ ೨೪

ಪನಸಶ್ಚ ಮಹಾಬಾಹುರ್ವಾನರೈರ್ಬಹುಭಿರ್ವೃತಃ ।
ದಕ್ಷಿಣಂ ದ್ವಾರಮಾಗಮ್ಯ ವೀರಃ ಶತವಲಿಃ ಕಪಿಃ ॥ ೨೫

ಆವೃತ್ಯ ಬಲವಾಂಸ್ತಸ್ಥೌ ವಿಂಶತ್ಯಾ ಕೋಟಿಭಿರ್ವೃತಃ ।
ಸುಷೇಣಃ ಪಶ್ಚಿಮದ್ವಾರಂ ಗತಸ್ತಾರಾಪಿತಾ ಹರಿಃ ॥ ೨೬

---

ಕ್ರಮಿಸಿದರು. ''ವೀರನಾದ ಶ್ರೀರಾಮನಿಗೆ ಜಯವಾಗಲಿ! ಶೂರನಾದ ಲಕ್ಷ್ಮಣನಿಗೆ ಜಯವಾಗಲಿ! ರಾಘವನಿಂದ ಪಾಲಿತನಾದ ಸುಗ್ರೀವಮಹಾರಾಜನಿಗೆ ಜಯವಾಗಲಿ!'' ಎಂದು ಉದ್ಘೋಷಿಸುತ್ತ ಗರ್ಜಿಸುತ್ತ ನುಗ್ಗಿದರು (೧೯–೨೦). ಕಾಮರೂಪಿಗಳಾದ ಆ ವಾನರರು ಲಂಕೆಯತ್ತ ಧಾವಿಸಿದರು. ಆಗ ವೀರಬಾಹು, ಸುಬಾಹು, ನಳ ಎಂಬ ಕಪಿಸೇನಾನಿಗಳು ಲಂಕೆಯ ಹೊರಪ್ರಾಕಾರವನ್ನು ಭಗ್ನಗೊಳಿಸಿ. ಸೇನೆಯ ವ್ಯೂಹರಚನೆಯನ್ನು ಪುನರ್ವ್ಯವಸ್ಥೆಗೊಳಿಸಿದರು. ಅದರ ಪ್ರಕಾರ ಕುಮುದನು ಹತ್ತು ಕೋಟಿ ಸೈನಿಕರೊಡನೆ ಈಶಾನ್ಯದಿಕ್ಕಿನಲ್ಲಿದ್ದು ಪೂರ್ವದ್ವಾರದ ರಕ್ಷಣೆಗೆ ನೇರವಾಗಿ ನಿಂತನು (೨೧–೨೩). ಅವನ ಸಹಾಯಕ್ಕಾಗಿ ಪ್ರಘಸ, ಪನಸರೆಂಬ ಯೂಥಪರು ತಮ್ಮ ಸೇನೆಯೊಡನೆ ಹೋದರು. ಶತಬಲಿಯೆಂಬ ವೀರನು ಇಪ್ಪತ್ತುಕೋಟಿ ವಾನರರೊಡನೆ ಆಗ್ನೇಯದಿಕ್ಕಿನಲ್ಲಿದ್ದು ದಕ್ಷಿಣದ್ವಾರದ ಹೋರಾಟಕ್ಕೆ ಸಹಾಯಕನಾದನು (೨೪–೨೫). ತಾರೆಯ ತಂದೆಯಾದ ಸುಷೇಣನು ಅರವತ್ತುಕೋಟಿ ವಾನರಸಮೇತನಾಗಿ

ಆವೃತ್ಯ ಬಲವಾಂಸ್ತಸ್ಥೌ ಷಷ್ಟಿಕೋಟಿಭಿರಾವೃತಃ ।
ಉತ್ತರಂ ದ್ವಾರಮಾಸಾದ್ಯ ರಾಮಃ ಸೌಮಿತ್ರಿಣಾ ಸಹ ॥ ೨೭

ಆವೃತ್ಯ ಬಲವಾಂಸ್ತಸ್ಥೌ ಸುಗ್ರೀವಶ್ಚ ಹರೀಶ್ವರಃ ।
ಗೋಲಾಂಗೂಲೋ ಮಹಾಕಾಯೋ ಗವಾಕ್ಷೋ ಭೀಮದರ್ಶನಃ ॥

ವೃತಃ ಕೋಟ್ಯಾ ಮಹಾವೀರ್ಯಸ್ತಸ್ಥೌ ರಾಮಸ್ಯ ಪಾರ್ಶ್ವತಃ ।
ಋಕ್ಷಾಣಾಂ ಭೀಮವೇಗಾನಾಂ ಧೂಮ್ರಃ ಶತ್ರುನಿಬರ್ಹಣಃ ॥ ೨೯

ವೃತಃ ಕೋಟ್ಯಾ ಮಹಾವೀರ್ಯಸ್ತಸ್ಥೌ ರಾಮಸ್ಯ ಪಾರ್ಶ್ವತಃ ।
ಸಂನದ್ಧಸ್ತು ಮಹಾವೀರ್ಯೋ ಗದಾಪಾಣಿರ್ವಿಭೀಷಣಃ ॥ ೩೦

ವೃತೋ ಯತ್ತೈಸ್ತು ಸಚಿವೈಸ್ತಸ್ಥೌ ತತ್ರ ಮಹಾಬಲಃ ।
ಗಜೋ ಗವಾಕ್ಷೋ ಗವಯಃ ಶರಭೋ ಗಂಧಮಾದನಃ ॥ ೩೧

ಸಮಂತಾತ್ಪರಿಧಾವಂತೋ ರರಕ್ಷುರ್ಹರಿವಾಹಿನೀಮ್ ।
ತತಃ ಕೋಪಪರೀತಾತ್ಮಾ ರಾವಣೋ ರಾಕ್ಷಸೇಶ್ವರಃ ॥ ೩೨

---

ನೈಋತ್ಯದಿಕ್ಕಿನಲ್ಲಿದ್ದು ಪಶ್ಚಿಮದ್ವಾರದ ಯುದ್ಧಕ್ಕೆ ಬೆಂಬಲವಾದನು (೨೬). ಶ್ರೀರಾಮನು ಸೌಮಿತ್ರಿ ಸಮೇತನಾಗಿ ಉತ್ತರದ್ವಾರದಲ್ಲಿ ನಿಂತಿದ್ದನು. ಕಪೀಶ್ವರನಾದ ಸುಗ್ರೀವನು ವಾಯವ್ಯದಿಕ್ಕಿನಲ್ಲಿದ್ದು ಶ್ರೀರಾಮನಿಗೆ ಸಹಾಯಕನಾದನು. ಸಿಂಗಳೀಕಗಳಿಗೆ ಅಧಿಪತಿಯೂ ಬೃಹತ್ಕಾಯನೂ ಭೀಷಣಾಕಾರನೂ ಆದ ಗವಾಕ್ಷನು ಒಂದುಕೋಟಿ ಸೈನಿಕರೊಡನೆ ಶ್ರೀರಾಮನ ಪಾರ್ಶ್ವದಲ್ಲಿ ಉಪಸ್ಥಿತನಾದನು (೨೭–೨೮). ಮಹಾವೀರನೆನಿಸಿದ ಧೂಮ್ರನು ಭೀಮಬಲರಾದ ಒಂದು ಕೋಟಿ ಭಲ್ಲೂಕಗಳಿಂದ ಸಹಿತನಾಗಿ ಶ್ರೀರಾಮನ ಇನ್ನೊಂದು ಪಾರ್ಶ್ವಕ್ಕೆ ಬಂದು ನಿಂತನು (೨೯). ಮಹಾಪರಾಕ್ರಮಿಯಾದ ವಿಭೀಷಣನು ಉತ್ಸಾಹಿಗಳಾದ ತನ್ನ ಸಚಿವರೊಡನೆ ಗದಾಪಾಣಿಯಾಗಿ ಶ್ರೀರಾಮನ ಬಳಿಯಲ್ಲಿದ್ದನು. ಗಜ, ಗವಾಕ್ಷ * ಗವಯ, ಶರಭ, ಗಂಧಮಾದನ ಎಂಬ ಯೂಥಪರು ಸೇನೆಯ ಸುತ್ತಲೂ ಧಾವಿಸುತ್ತ ಎಲ್ಲರಿಗೂ ಸಮಯೋಚಿತವಾದ ಸಹಾಯಮಾಡುವಂತೆ ಏರ್ಪಡಿಸಲಾಯಿತು (೩೦–೩೧). ಇವೆಲ್ಲವನ್ನೂ ನೋಡುತ್ತಿದ್ದ ರಾವಣನು

---

* ಇವನು ಶ್ರೀರಾಮನ ಪಾರ್ಶ್ವದಲ್ಲಿದ್ದ ಗವಾಕ್ಷನಲ್ಲ, ಅದೇ ಹೆಸರಿನ ಮತ್ತೊಬ್ಬನು.

ನಿರ್ಯಾಣಂ ಸರ್ವಸೈನ್ಯಾನಾಂ ದ್ರುತಮಾಜ್ಞಾಪಯತ್ತದಾ ।
ಏತಚ್ಛ್ರುತ್ವಾ ತತೋ ವಾಕ್ಯಂ ರಾವಣಸ್ಯ ಮುಖೋದ್ಗತಮ್ ॥ ೩೩

ಸಹಸಾ ಭೀಮನಿರ್ಘೋಷಮುದ್ಘುಷ್ಟಂ ರಜನೀಚರೈಃ ।
ತತಃ ಪ್ರಚೋದಿತಾ ಭೇರ್ಯಶ್ಚಂದ್ರಪಾಂಡುರಪುಷ್ಕರಾಃ ॥ ೩೪

ಹೇಮ ಕೋಣಾಹತಾ ಭೀಮಾ ರಾಕ್ಷಸಾನಾಂ ಸಮಂತತಃ ।
ವಿನೇದುಶ್ಚ ಮಹಾಘೋಷಾಃ ಶಂಖಾಃ ಶತಸಹಸ್ರಶಃ ॥ ೩೫

ರಾಕ್ಷಸಾನಾಂ ಸುಘೋರಾಣಾಂ ಮುಖಮಾರುತಪೂರಿತಾಃ ।
ತೇ ಬಭುಃ ಶುಭನೀಲಾಂಗಾಃ ಸಶಂಖಾ ರಜನೀಚರಾಃ ॥ ೩೬

ವಿದ್ಯುನ್ಮಂಡಲಸಂನದ್ಧಾಃ ಸಬಲಾಕಾ ಇವಾಂಬುದಾಃ ।
ನಿಷ್ಪತಂತಿ ತತಃ ಸೈನ್ಯಾ ಹೃಷ್ಟಾ ರಾವಣಚೋದಿತಾಃ ॥ ೩೭

ಸಮಯೇ ಪೂರ್ಯಮಾಣಸ್ಯ ವೇಗಾ ಇವ ಮಹೋದಧೇಃ ।
ತತೋ ವಾನರಸೈನ್ಯೇನ ಮುಕ್ತೋ ನಾದಃ ಸಮಂತತಃ ॥ ೩೮

ಮಲಯಃ ಪೂರಿತೋ ಯೇನ ಸಸಾನು ಪ್ರಸ್ಥಕಂದರಃ ।
ಶಂಖದುಂದುಭಿಸಂಘುಷ್ಟಃ ಸಿಂಹನಾದಸ್ತರಸ್ವಿನಾಮ್ ॥ ೩೯

---

ರೋಷಾವಿಷ್ಟನಾಗಿ, ರಾಕ್ಷಸರು ಕೂಡಲೇ ಲಂಕೆಯಿಂದ ಹೊರಟು ಯುದ್ಧವನ್ನಾರಂಭಿಸಬೇಕೆಂದು ಆಜ್ಞಾಪಿಸಿದನು. ರಾವಣನ ಬಾಯಿಂದ ಆಜ್ಞೆ ಬಂದೊಡನೆ, ರಾಕ್ಷಸರು ಭಯಂಕರವಾಗಿ ಸಿಂಹನಾದಮಾಡಿದರು (೩೨–೩೩). ಚಂದ್ರಮಂಡಲದಂತೆ ಶುಭ್ರವಾದ ಪಾರ್ಶ್ವಗಳುಳ್ಳ ರಣಭೇರಿಗಳನ್ನು ಚಿನ್ನದ ಕೋಲುಗಳಿಂದ ಬಡಿದು ಮೊಳಗಿಸಿದರು. ಘೋರಾಕಾರದ ರಾಕ್ಷಸರು ಲಕ್ಷಗಟ್ಟಲೆ ಶಂಖಗಳನ್ನೂದಿ ಭೋಂಕಾರಗೈದರು (೩೪–೩೫). ಸುವರ್ಣಭೂಷಣಭೂಷಿತರೂ ಕಪ್ಪುಬಣ್ಣದವರೂ ಆದ ನಿಶಾಚರರು ಶಂಖಗಳನ್ನೂದುತ್ತಿರುವಾಗ, ಮಿಂಚುಗಳಿಂದಲೂ ಕೊಕ್ಕರೆಗಳಿಂದಲೂ ಒಪ್ಪುವ ಮೇಘ ಖಂಡಗಳಂತೆ ಗೋಚರಿಸಿದರು! (೩೬–೩೭). ರಾವಣನಿಂದ ಆಜ್ಞಪ್ತರಾದ ರಾಕ್ಷಸಸೈನಿಕರು ಉತ್ಸಾಹಪೂರ್ಣರಾಗಿ, ಪ್ರಳಯಕಾಲದಲ್ಲುಕ್ಕುವ ಮಹಾಸಾಗರದ ಅಲೆಗಳಂತೆ, ತಂಡತಂಡವಾಗಿ ನಗರದಿಂದ ಹೊರಬಂದರು. ಅವರನ್ನು ಕಂಡೊಡನೆ ವಾನರ ಸೇನೆಯು ಎಲ್ಲೆಡೆಯೂ ಸಿಂಹನಾದಮಾಡಿತು (೩೮). ಆ ನಾದವು ಮಲಯ

ಪೃಥಿವೀಂ ಚಾಂತರಿಕ್ಷಂ ಚ ಸಾಗರಂ ಚೈವ ನಾದಯನ್ ।
ಗಜಾನಾಂ ಬೃಂಹಿತೈಃ ಸಾರ್ಧಂ ಹಯಾನಾಂ ಹೇಷಿತೈರಪಿ ॥ ೪೦

ರಥಾನಾಂ ನೇಮಿಘೋಷೈಶ್ಚ ರಕ್ಷಸಾಂ ಪಾದನಿಸ್ವನೈಃ ।
ಏತಸ್ಮಿನ್ನಂತರೇ ಘೋರಃ ಸಂಗ್ರಾಮಃ ಸಮವರ್ತತ ॥ ೪೧

ರಕ್ಷಸಾಂ ವಾನರಾಣಾಂ ಚ ಯಥಾ ದೇವಾಸುರೇ ಪುರಾ ।
ತೇ ಗದಾಭಿಃ ಪ್ರದೀಪ್ತಾಭಿಃ ಶಕ್ತಿಶೂಲಪರಶ್ವಧೈಃ ॥ ೪೨

ನಿಜಘ್ನುರ್ವಾನರಾನ್ ಘೋರಾಃ ಕಥಯಂತಃ ಸ್ವವಿಕ್ರಮಾನ್ ।
ವಾನರಾಶ್ಚ ಮಹಾವೀರ್ಯಾ ರಾಕ್ಷಸಾನ್ ಜಘ್ನುರಾಹವೇ ॥ ೪೩

ಜಯತ್ಯತಿಬಲೋ ರಾಮೋ ಲಕ್ಷ್ಮಣಶ್ಚ ಮಹಾಬಲಃ ।
ರಾಜಾ ಜಯತಿ ಸುಗ್ರೀವ ಇತಿ ಶಬ್ದೋ ಮಹಾನಭೂತ್ ॥ ೪೪

ರಾಜನ್ ಜಯ ಜಯೇತ್ಯುಕ್ತ್ವಾ ಸ್ವಸ್ವನಾಮಕಥಾಂತತಃ ।
ನಿಜಘ್ನುಸ್ತಾನಿ ರಕ್ಷಾಂಸಿ ನಖೈರ್ದಂತೈಶ್ಚ ವೇಗಿನಃ ॥ ೪೫

---

ಪರ್ವತದ ತಪ್ಪಲು, ಪ್ರಸ್ಥಭೂಮಿ, ಕಂದರಗಳನ್ನು ವ್ಯಾಪಿಸಿತು. ರಾಕ್ಷಸರ ಶಂಖ ದುಂದುಭಿಗಳ ಘೋಷದಿಂದ ಸಮ್ಮಿಶ್ರವಾದ ಯೋಧರ ರಣಗರ್ಜನೆಯು ದ್ಯಾವಾಪೃಥಿವಿಗಳಲ್ಲಿಯೂ ಸಮುದ್ರದಲ್ಲಿಯೂ ಹರಡಿ ಪ್ರತಿಧ್ವನಿಸಿತು (೩೬–೪೦). ಗಜಗಳ ಘೀಂಕಾರ, ಹಯಗಳ ಹೇಷಾರವ, ರಥನೇಮಿಗಳ ಚೀತ್ಕಾರ, ರಾಕ್ಷಸರ ಪಾದಾಘಾತಗಳ ಘರ್ಘರಶಬ್ದ–ಇವುಗಳಿಂದ ಕೋಲಾಹಲ ವೆದ್ದಿತು. ಈ ಗದ್ದಲದ ನಡುವೆ ರಾಕ್ಷಸರಿಗೂ ವಾನರರಿಗೂ ದೇವಾಸುರರಿಗೆ ನಡೆದಂತೆ ಘೋರಸಂಗ್ರಾಮವು ತೊಡಗಿತು (೪೧–೪೨). ರಾಕ್ಷಸರು ಗದೆ ಗಳಿಂದಲೂ ಜಗಜಗಿಸುವ ಶಕ್ತಿ, ಶೂಲ, ಗಂಡುಗೊಡಲಿ – ಮುಂತಾದ ಆಯುಧ ಗಳಿಂದಲೂ ಕಪಿಗಳನ್ನು ಕೊಲ್ಲುತ್ತ ತಮ್ಮ ವಿಕ್ರಮವನ್ನು ಹೇಳಿಕೊಳ್ಳುತ್ತ ಹೊಡೆದಾಡಿದರು. ಪರಾಕ್ರಮಿಗಳಾದ ಕಪಿಯೋಧರು ಬಹುಮಂದಿ ರಾಕ್ಷಸ ರನ್ನು ಕೊಂದರು (೪೪). ''ವೀರನಾದ ಶ್ರೀರಾಮನಿಗೆ ಜಯವಾಗಲಿ! ಶೂರ ನಾದ ಲಕ್ಷ್ಮಣನಿಗೆ ಜಯವಾಗಲಿ! ವಾನರೇಶ್ವರನಾದ ಸುಗ್ರೀವನಿಗೆ ಜಯ ವಾಗಲಿ!'' ಎಂಬ ಘೋಷವು ಮೊಳಗಿತು (೪೪). ''ಮಹಾರಾಜ, ಜಯ ಜಯ'' ಎಂದು ಉದ್ಘೋಷಿಸುತ್ತ ತಮ್ಮ ಹೆಸರನ್ನೂ ಸಾಹಸಕೃತ್ಯವನ್ನೂ

ರಾಕ್ಷಸಾಸ್ತ್ವಪರೇ ಭೀಮಾಃ ಪ್ರಾಕಾರಸ್ಥಾ ಮಹೀಗತಾನ್ ।
ಭಿಂಡಿಪಾಲೈಶ್ಚ ಖಡ್ಗೈಶ್ಚ ಶೂಲೈಶ್ಚೈವ ವ್ಯದಾರಯನ್ ॥ ೪೬

ವಾನರಾಶ್ಚಾಪಿ ಸಂಕ್ರುದ್ಧಾಃ ಪ್ರಾಕಾರಸ್ಥಾನ್ ಮಹೀಗತಾಃ ।
ರಾಕ್ಷಸಾನ್ ಪಾತಯಾಮಾಸುಃ ಸಮಾಪ್ಲುತ್ಯ ಪ್ಲವಂಗಮಾಃ ॥ ೪೭

ಸ ಸಂಪ್ರಹಾರಸ್ತುಮುಲೋ ಮಾಂಸಶೋಣಿತಕರ್ದಮಃ ।
ರಕ್ಷಸಾಂ ವಾನರಾಣಾಂ ಚ ಸಂಬಭೂವಾದ್ಭುತೋಪಮಃ ॥ ೪೮

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವಿಚತ್ವಾರಿಂಶಃ ಸರ್ಗಃ

---

ಕೂಗಿ ಹೇಳುತ್ತ ವಾನರವೀರರು ನಖಗಳಿಂದ ಪರಚಿ ದಂತಗಳಿಂದ ಕಚ್ಚಿ ರಾಕ್ಷಸರನ್ನು ಕೊಲ್ಲತೊಡಗಿದರು (೪೫). ಭೈರವಾಕಾರದ ಕೆಲವು ರಾಕ್ಷಸರು ಪ್ರಾಕಾರದ ಮೇಲೆ ನಿಂತು, ಭಿಂಡಿಪಾಲ ಖಡ್ಗ ಶೂಲಗಳನ್ನು ಬೀಸಿ ಹೊಡೆದು ಕಪಿಗಳನ್ನು ಸೀಳುತ್ತಿದ್ದರು. ಆಗ ರೋಷಾವಿಷ್ಟರಾದ ಕಪಿಯೋಧರು ಪ್ರಾಕಾರದ ಮೇಲೆ ಹಾರಿ ಹೊಡೆದು ರಾಕ್ಷಸರನ್ನು ಉರುಳಿಸುತ್ತಿದ್ದರು (೪೬–೪೭). ಹೀಗೆ ರಾಕ್ಷಸರಿಗೂ ವಾನರರಿಗೂ ನಡೆದ ಅದ್ಭುತವಾದ ತುಮುಲಯುದ್ಧದಲ್ಲಿ ರಕ್ತಮಾಂಸಗಳು ಚೆಲ್ಲಾಡಿ ರಣಭೂಮಿಯು ಕೊಚ್ಚೆಯಾಯಿತು (೪೮).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ನಲವತ್ತೆರಡನೆಯ ಸರ್ಗ

## ತ್ರಿಚತ್ವಾರಿಂಶಃ ಸರ್ಗಃ

### ದ್ವಂದ್ವಯುದ್ಧಮ್

ಯುಧ್ಯತಾಂ ತು ತತಸ್ತೇಷಾಂ ವಾನರಾಣಾಂ ಮಹಾತ್ಮನಾಮ್ ।
ರಕ್ಷಸಾಂ ಸಂಬಭೂವಾಥ ಬಲಕೋಪಃ ಸುದಾರುಣಃ ॥ ೧

ತೇ ಹಯೈಃ ಕಾಂಚನಾಪೀಡೈರ್ಧ್ವಜೈಶ್ಚಾಗ್ನಿಶಿಖೋಪಮೈಃ ।
ರಥೈಶ್ಚಾದಿತ್ಯಸಂಕಾಶೈಃ ಕವಚೈಶ್ಚ ಮನೋರಮೈಃ ॥ ೨

ನಿರ್ಯಯೂ ರಾಕ್ಷಸವ್ಯಾಘ್ರಾ ನಾದಯಂತೋ ದಿಶೋ ದಶ ।
ರಾಕ್ಷಸಾ ಭೀಮಕರ್ಮಾಣೋ ರಾವಣಸ್ಯ ಜಯೈಷಿಣಃ ॥ ೩

ವಾನರಾಣಾಮಪಿ ಚಮೂರ್ಬೃಹತೀ ಜಯಮಿಚ್ಛತಾಮ್ ।
ಅಭ್ಯಧಾವತ ತಾಂ ಸೇನಾಂ ರಕ್ಷಸಾಂ ಕಾಮರೂಪಿಣಾಮ್ ॥ ೪

ಏತಸ್ಮಿನ್ನಂತರೇ ತೇಷಾಮನ್ಯೋನ್ಯಮಭಿಧಾವತಾಮ್ ।
ರಕ್ಷಸಾಂ ವಾನರಾಣಾಂ ಚ ದ್ವಂದ್ವಯುದ್ಧಮವರ್ತತ ॥ ೫

### ಸರ್ಗ ೪೩

ವಾನರರಾಕ್ಷಸರ ದ್ವಂದ್ವಯುದ್ಧ. ಶ್ರೀರಾಮನಿಂದ ದುರ್ಧರ್ಷ
ಮೊದಲಾದವರ ಶಿರಚ್ಛೇದ. ನೀಲನಿಂದ ನಿಕುಂಭನ ವಧೆ.
ಸುಷೇಣನಿಂದ ವಿದ್ಯುನ್ಮಾಲಿಯ ಸಂಹಾರ.

ಧೀರರಾದ ವಾನರರಿಗೂ ರಾಕ್ಷಸರಿಗೂ ಯುದ್ಧವು ನಡೆಯುತ್ತಿರಲು, ಪರಸ್ಪರ ಬಲಪ್ರದರ್ಶನದಿಂದ ಉಭಯಪಕ್ಷದವರಿಗೂ ಕೋಪದ ಕಾವೇರಿತು. ರಾವಣನಿಗೆ ಜಯವಾಗಲೆಂದು ಬಯಸುತ್ತಿದ್ದ ಭೀಮಕರ್ಮರಾದ ರಾಕ್ಷಸರು ಸುವರ್ಣ ಭೂಷಿತಗಳಾದ ಅಶ್ವಗಳನ್ನೇರಿ, ಅಗ್ನಿಜ್ವಾಲೆಯಂತೆ ಬೆಳಗುವ ಧ್ವಜಗಳನ್ನು ಹಿಡಿದು, ಸೂರ್ಯನಂತೆ ಪ್ರಜ್ವಲಿಸುವ ರಥಗಳನ್ನು ಹತ್ತಿ ಸುಂದರ ಕವಚಗಳನ್ನು ತೊಟ್ಟು ಗರ್ಜನೆಗಳಿಂದ ದಶದಿಕ್ಕುಗಳನ್ನೂ ಮೊಳಗಿಸುತ್ತ ನುಗ್ಗಿದರು (೧–೩). ಶ್ರೀರಾಮನಿಗೆ ಜಯವಾಗಲೆಂದು ಬಯಸುತ್ತಿದ್ದ ಕಪಿಗಳ ಬೃಹತ್ ಸೇನೆಯೂ ಕಾಮರೂಪಿಗಳಾದ ರಾಕ್ಷಸರನ್ನೆದುರಿಸಿತು. ಹೀಗೆ ಎದುರೆದುರಾಗಿ

ಅಂಗದೇನೇಂದ್ರಜಿತ್ಸಾರ್ಧಂ ವಾಲಿಪುತ್ರೇಣ ರಾಕ್ಷಸಃ ।
ಅಯುಧ್ಯತ ಮಹಾತೇಜಾಸ್ತ್ರ್ಯಂಬಕೇಣ ಯಥಾಂಧಕಃ ॥ ೬

ಪ್ರಜಂಘೇನ ಚ ಸಂಪಾತಿರ್ನಿತ್ಯಂ ದುರ್ಮರ್ಷಣೋ ರಣೇ ।
ಜಂಬುಮಾಲಿನಮಾರಬ್ಧೋ ಹನುಮಾನಪಿ ವಾನರಃ ॥ ೭

ಸಂಗತಃ ಸುಮಹಾಕ್ರೋಧೋ ರಾಕ್ಷಸೋ ರಾವಣಾನುಜಃ ।
ಸಮರೇ ತೀಕ್ಷ್ಣವೇಗೇನ ಮಿತ್ರಘ್ನೇನ ವಿಭೀಷಣಃ ॥ ೮

ತಪನೇನ ಗಜಃ ಸಾರ್ಧಂ ರಾಕ್ಷಸೇನ ಮಹಾಬಲಃ ।
ನಿಕುಂಭೇನ ಮಹಾತೇಜಾ ನೀಲೋಽಪಿ ಸಮಯುಧ್ಯತ ॥ ೯

ವಾನರೇಂದ್ರಸ್ತು ಸುಗ್ರೀವಃ ಪ್ರಘಸೇನ ಸಮಾಗತಃ ।
ಸಂಗತಃ ಸಮರೇ ಶ್ರೀಮಾನ್ ವಿರೂಪಾಕ್ಷೇಣ ಲಕ್ಷ್ಮಣಃ ॥ ೧೦

ಅಗ್ನಿಕೇತುಶ್ಚ ದುರ್ಧರ್ಷೋ ರಶ್ಮಿಕೇತುಶ್ಚ ರಾಕ್ಷಸಃ ।
ಸುಪ್ತಘ್ನೋ ಯಜ್ಞಕೋಪಶ್ಚ ರಾಮೇಣ ಸಹ ಸಂಗತಾಃ ॥ ೧೧

ವಜ್ರಮುಷ್ಟಿಸ್ತು ಮೈಂದೇನ ದ್ವಿವಿದೇನಾಶನಿಪ್ರಭಃ ।
ರಾಕ್ಷಸಾಭ್ಯಾಂ ಸುಘೋರಾಭ್ಯಾಂ ಕಪಿಮುಖ್ಯೌ ಸಮಾಗತೌ ॥ ೧೨

---

ನುಗ್ಗಿದ ವಾನರರಿಗೂ ರಾಕ್ಷಸರಿಗೂ ಘೋರವಾದ ದ್ವಂದ್ವಯುದ್ಧವು ನಡೆಯಿತು (೪–೫). ತೇಜಸ್ವಿಯಾದ ಇಂದ್ರಜಿತುವು ವಾಲಿಪುತ್ರನಾದ ಅಂಗದನೊಡನೆ ಕಾಳಗವನ್ನಾರಂಭಿಸಿದನು. ಅಂಧಕಾಸುರನು ತ್ರಿಯಂಬಕನೊಡನೆ ಹೋರಾಡಿದಂತೆ, ಆ ಕಾಳಗವು ಭೀಕರವಾಯಿತು (೬). ಸಂಪಾತಿಯೆಂಬ ವಾನರ ಯೂಥಪನು ದುಸ್ಸಹನಾದ ಪ್ರಜಂಘನೊಡನೆ ಯುದ್ಧದಲ್ಲಿ ನಿರತನಾದನು. ಹನುಮಂತನು ಜಂಬುಮಾಲಿಯಮೇಲೆ ಕೈ ಮಾಡಿದನು. ಅತ್ಯಂತ ಕ್ರುದ್ಧನಾದ ವಿಭೀಷಣನು ಸಮರದಲ್ಲಿ ಶೂರನಾದ ಮಿತ್ರಘ್ನನೊಡನೆ ಹೊಡೆದಾಡಿದನು (೭–೮). ಗಜನು ತಪನನೆಂಬ ದೈತ್ಯನನ್ನೂ ನೀಲನು ನಿಕುಂಭನನ್ನೂ ಎದುರಿಸಿದರು. ಸುಗ್ರೀವನು ಪ್ರಘಸನೊಡನೆಯೂ ಲಕ್ಷ್ಮಣನು ವಿರೂಪಾಕ್ಷನೊಡನೆಯೂ ಕಾದಾಡಿದರು. ಅಗ್ನಿಕೇತು, ರಶ್ಮಿಕೇತು, ಸುಪ್ತಘ್ನ, ಯಜ್ಞಕೋಪ – ಎಂಬ ನಾಲ್ವರು ದೈತ್ಯರು ಶ್ರೀರಾಮನನ್ನೆದುರಿಸಿದರು (೯–೧೧). ಮೈಂದ ದ್ವಿವಿದರು ಕ್ರಮವಾಗಿ ವಜ್ರಮುಷ್ಟಿ ಅಸನಿಪ್ರಭ ಎಂಬ ಘೋರರಾಕ್ಷಸ

ವೀರಃ ಪ್ರತಪನೋ ಘೋರೋ ರಾಕ್ಷಸೋ ರಣದುರ್ಧರಃ ।
ಸಮರೇ ತೀಕ್ಷ್ಣವೇಗೇನ ನಲೇನ ಸಮಯುಧ್ಯತ ॥ ೧೩

ಧರ್ಮಸ್ಯ ಪುತ್ರೋ ಬಲವಾನ್ ಸುಷೇಣ ಇತಿ ವಿಶ್ರುತಃ ।
ಸ ವಿದ್ಯುನ್ಮಾಲಿನಾ ಸಾರ್ಧಮಯುಧ್ಯತ ಮಹಾಕಪಿಃ ॥ ೧೪

ವಾನರಾಶ್ಚಾಪರೇ ಭೀಮಾ ರಾಕ್ಷಸೈರಪರೈಃ ಸಹ ।
ದ್ವಂದ್ವಂ ಸಮೀಯುರ್ಬಹುಧಾ ಯುದ್ಧಾಯ ಬಹುಭಿಃ ಸಹ ॥ ೧೫

ತತ್ರಾಸೀತ್ಸುಮಹದ್ಯುದ್ಧಂ ತುಮುಲಂ ರೋಮಹರ್ಷಣಮ್ ।
ರಕ್ಷಸಾಂ ವಾನರಾಣಾಂ ಚ ವೀರಾಣಾಂ ಜಯಮಿಚ್ಛತಾಮ್ ॥ ೧೬

ಹರಿರಾಕ್ಷಸದೇಹೇಭ್ಯಃ ಪ್ರಭೂತಾಃ ಕೇಶಶಾದ್ವಲಾಃ ।
ಶರೀರಸಂಘಾಟವಹಾಃ ಪ್ರಸುಸ್ರುಃ ಶೋಣಿತಾಪಗಾಃ ॥ ೧೭

ಆಜಘಾನೇಂದ್ರಜಿತ್ಕ್ರುದ್ಧೋ ವಜ್ರೇಣೇವ ಶತಕ್ರತುಃ ।
ಅಂಗದಂ ಗದಯಾ ವೀರಂ ಶತ್ರುಸೈನ್ಯವಿದಾರಣಮ್ ॥ ೧೮

ತಸ್ಯ ಕಾಂಚನಚಿತ್ರಾಂಗಂ ರಥಂ ಸಾಶ್ವಂ ಸಸಾರಥಿಮ್ ।
ಜಘಾನ ಸಮರೇ ಶ್ರೀಮಾನಂಗದೋ ವೇಗವಾನ್ ಕಪಿಃ ॥ ೧೯

---

ರೊಡನೆ ಕಾದಾಡಿದರು. ಯುದ್ಧದುರ್ಧರನಾದ ಪ್ರತಪನನೆಂಬ ರಾಕ್ಷಸನು ಪರಾಕ್ರಮಿಯಾದ ನೀಲನಿಗೆ ಎದುರಾದನು (೧೨–೧೩). ಧರ್ಮಪುತ್ರನಾದ ಸುಷೇಣನೆಂಬ ವಾನರವೀರನು ವಿದ್ಯುನ್ಮಾಲಿಯೊಡನೆ ಹೊಡೆದಾಡಿದನು. ಈ ಪ್ರಕಾರವಾಗಿ ಭೀಷಣಪರಾಕ್ರಮಿಗಳಾದ ಇತರ ಕಪಿಯೋಧರೂ ರಾಕ್ಷಸವೀರರೂ ಒಬ್ಬರನ್ನೊಬ್ಬರು ಎದುರಿಸಿ ಕೈ ಕೈ ಮಿಲಾಯಿಸಿದರು (೧೪–೧೫). ಮೈನವಿರೇಳಿಸುವ ಭೀಕರ ತುಮುಲಯುದ್ಧವು ತೊಡಗಿತು. ರಾಕ್ಷಸರೂ ವಾನರರೂ ಪರಸ್ಪರ ಜಯಾಪೇಕ್ಷೆಯಿಂದ ಹೋರಾಡಿದರು. ಕಪಿರಾಕ್ಷಸರದೇಹಗಳಿಂದ ನೆತ್ತರಿನ ಹೊನಲು ಕೋಡಿಕೋಡಿಯಾಗಿ ಹರಿಯಿತು. ಆ ಹೊನಲಿನಲ್ಲಿ ಕೂದಲುಗಳು ಪಾಚಿಯಾದವು. ಕಟ್ಟಿಗೆಯ ಹೊರೆಯಂತೆ ದೇಹಗಳು ತೇಲಿದವು! (೧೬–೧೭). ಶತ್ರುಗಳನ್ನು ಸೀಳಿ ಸೀಳಿ ಎಸೆಯುತ್ತಿದ್ದ ಅಂಗದನನ್ನು ನೋಡಿ ಸಂಕ್ರುದ್ಧನಾದ ಇಂದ್ರಜಿತುವು, ಇಂದ್ರನು ವಜ್ರಾಯುಧದಿಂದ ಅಪ್ಪಳಿಸುವಂತೆ, ತನ್ನ ಗದೆಯಿಂದ ಅಂಗದನನ್ನು ಬಡಿದನು. ಅದಕ್ಕೆ ಪ್ರತಿಯಾಗಿ ಅಂಗದನು ಇಂದ್ರಜಿತುವಿನ ಕನಕಾಲಂಕೃತ ರಥವನ್ನು ಮುರಿದು,

ಸಂಪಾತಿಸ್ತು ತ್ರಿಭಿರ್ಬಾಣೈಃ ಪ್ರಜಂಘೇನ ಸಮಾಹತಃ ।
ನಿಜಘಾನಾಶ್ವಕರ್ಣೇನ ಪ್ರಜಂಘಂ ರಣಮೂರ್ಧನಿ ॥ ೨೦

ಜಂಬುಮಾಲೀ ರಥಸ್ಥಸ್ತು ರಥಶಕ್ತ್ಯಾ ಮಹಾಬಲಃ ।
ಬಿಭೇದ ಸಮರೇ ಕ್ರುದ್ಧೋ ಹನೂಮಂತಂ ಸ್ತನಾಂತರೇ ॥ ೨೧

ತಸ್ಯ ತಂ ರಥಮಾಸ್ಥಾಯ ಹನೂಮಾನ್ ಮಾರುತಾತ್ಮಜಃ ।
ಪ್ರಮಮಾಥ ತಲೇನಾಶು ಸಹ ತೇನೈವ ರಕ್ಷಸಾ ॥ ೨೨

ನದನ್ ಪ್ರತಪನೋ ಘೋರೋ ನಲಂ ಸೋಽಭ್ಯನ್ವಧಾವತ ।
ನಲಃ ಪ್ರತಪನಸ್ಯಾಶು ಪಾತಯಾಮಾಸ ಚಕ್ಷುಷೀ ॥ ೨೩

ಭಿನ್ನಗಾತ್ರಃ ಶರೈಸ್ತೀಕ್ಷ್ಣೈಃ ಕ್ಷಿಪ್ರಹಸ್ತೇನ ರಕ್ಷಸಾ ।
ಪ್ರಜಘಾನಾದ್ರಿಶೃಂಗೇಣ ತಪನಂ ಮುಷ್ಟಿನಾ ಗಜಃ ॥ ೨೪

ಭಿನ್ನಗಾತ್ರಃ ಶರೈಸ್ತೀಕ್ಷ್ಣೈರ್ಮಿತ್ರಘ್ನೇನ ವಿಭೀಷಣಃ ।
ಮಿತ್ರಘ್ನಂ ಗದಯಾ ಕ್ರುದ್ಧೋ ನಿಜಘಾನ ವಿಭೀಷಣಃ ॥ ೨೫

---

ಕುದುರೆಗಳನ್ನು ಕೊಂದು, ಸಾರಥಿಯನ್ನು ಸಂಹರಿಸಿದನು (೧೮–೧೯). ಪ್ರಜಂಗನು ಮೂರು ಬಾಣಗಳಿಂದ ಸಂಪಾತಿಯನ್ನು ಹೊಡೆಯಲು, ಆ ವಾನರನು ಅಶ್ವಕರ್ಣವೆಂಬ ಮರದಿಂದ ಪ್ರಜಂಘನನ್ನು ಬಡಿದು ಕೊಂದನು. ರಥವನ್ನೇರಿಬಂದ ಜಂಬುಮಾಲಿಯು ರಥದಲ್ಲಿದ್ದ ಶಕ್ತಿಯೆಂಬ ಆಯುಧದಿಂದ ಹನುಮಂತನ ಎದೆಯನ್ನು ಗಾಯಗೊಳಿಸಿದನು (೨೦–೨೧). ಆಗ ಹನುಮಂತನು ಅವನ ರಥಕ್ಕೆ ಛಂಗನೆ ಹಾರಿ, ಅಂಗೈಯಿಂದ ಅಪ್ಪಳಿಸಿ, ಜಂಬುಮಾಲಿಯನ್ನೂ ಅವನ ರಥವನ್ನೂ ಧ್ವಂಸಮಾಡಿದನು (೨೨). ಪ್ರತಪನನೆಂಬ ಘೋರರಾಕ್ಷಸನು ಗರ್ಜಿಸುತ್ತ ನಳನನ್ನು ಆಕ್ರಮಿಸಲು, ನಳನು ಉಗುರುಗಳಿಂದ ಆ ರಾಕ್ಷಸನ ಕಣ್ಣುಗಳನ್ನು ಕಿತ್ತುಹಾಕಿದನು! ತಪನನೆಂಬ ಲಘುಹಸ್ತನಾದ ರಾಕ್ಷಸನು. ತೀಕ್ಷ್ಣಾಸ್ತ್ರಗಳಿಂದ ಗಜನನ್ನು ಗಾಯಗೊಳಿಸಲು. ಗಜನು ಪರ್ವತಶಿಖರದಂತಿದ್ದ ತನ್ನ ಮುಷ್ಟಿಯಿಂದ ಗುದ್ದಿ ತಪನನನ್ನು ವಧಿಸಿದನು (೨೩–೨೪). ಮಿತ್ರಘ್ನನು ಕೂರಂಬುಗಳಿಂದ ವಿಭೀಷಣನನ್ನು ಗಾಯಗೊಳಿಸಲು, ಕುಪಿತನಾದ ವಿಭೀಷಣನು ಗದೆಯಿಂದ ಬಡಿದು ಅವನನ್ನು ಕೊಂದನು.

ಗ್ರಸಂತಮಿವ ಸೈನ್ಯಾನಿ ಪ್ರಘಸಂ ವಾನರಾಧಿಪಃ ।
ಸುಗ್ರೀವಃ ಸಪ್ತಪರ್ಣೇನ ನಿರ್ಬಿಭೇದ ಜಘಾನ ಚ ॥ ೨೬

ಪ್ರಪೀಡ್ಯ ಶರವರ್ಷೇಣ ರಾಕ್ಷಸಂ ಭೀಮದರ್ಶನಮ್ ।
ನಿಜಘಾನ ವಿರೂಪಾಕ್ಷಂ ಶರೇಣೈಕೇನ ಲಕ್ಷ್ಮಣಃ ॥ ೨೭

ಅಗ್ನಿಕೇತುಶ್ಚ ದುರ್ಧರ್ಷೋ ರಶ್ಮಿಕೇತುಶ್ಚ ರಾಕ್ಷಸಃ ।
ಸುಪ್ತಘ್ನೋ ಯಜ್ಞಕೋಪಶ್ಚ ರಾಮಂ ನಿರ್ಬಿಭಿದುಃ ಶರೈಃ ॥ ೨೮

ತೇಷಾಂ ಚತುರ್ಣಾಂ ರಾಮಸ್ತು ಶಿರಾಂಸಿ ನಿಶಿತೈಃ ಶರೈಃ ।
ಕ್ರುದ್ಧಶ್ಚತುರ್ಭಿಶ್ಚಿಚ್ಛೇದ ಘೋರೈರಗ್ನಿಶಿಖೋಪಮೈಃ ॥ ೨೯

ವಜ್ರಮುಷ್ಟಿಸ್ತು ಮೈಂದೇನ ಮುಷ್ಟಿನಾ ನಿಹತೋ ರಣೇ ।
ಪಪಾತ ಸರಥಃ ಸಾಶ್ವಃ ಪುರಾಟ್ಟ ಇವ ಭೂತಲೇ ॥ ೩೦

ನಿಕುಂಭಸ್ತು ರಣೇ ನೀಲಂ ನೀಲಾಂಜನಚಯಪ್ರಭಮ್ ।
ನಿರ್ಬಿಭೇದ ಶರೈಸ್ತೀಕ್ಷ್ಣೈಃ ಕರೈರ್ಮೇಘಮಿವಾಂಶುಮಾನ್ ॥ ೩೧

---

ವಾನರಸೇನೆಯನ್ನು ನುಂಗಿಬಿಡುವನೋ ಎಂಬಂತೆ ಆರ್ಭಟದಿಂದ ಬಂದ ಪ್ರಘಸನನ್ನು ವಾನರೇಂದ್ರನಾದ ಸುಗ್ರೀವನು ಸಪ್ತಪರ್ಣವೃಕ್ಷದಿಂದ ಬಡಿದು ಸಾಯಿಸಿದನು (೨೫–೨೬). ವಿರೂಪಾಕ್ಷನೆಂಬ ದೈತ್ಯನು ಬಾಣಗಳ ಮಳೆಗರೆಯುತ್ತ ಲಕ್ಷ್ಮಣನನ್ನೆದುರಿಸಲು, ಒಂದೇ ಕೂರಂಬಿನಿಂದ ಲಕ್ಷ್ಮಣನು ಅವನನ್ನು ಸಂಹರಿಸಿದನು (೨೭). ಇತ್ತಲಾಗಿ ಅಗ್ನಿಕೇತು, ರಶ್ಮಿಕೇತು, ಸುಪ್ತಘ್ನ, ಯಜ್ಞಕೋಪರೆಂಬ ರಾಕ್ಷಸರು ಒಂದಾಗಿ ಶ್ರೀರಾಮನನ್ನೆದುರಿಸಿ ಬಾಣವರ್ಷಗಳನ್ನು ಸುರಿಸಲು, ಶ್ರೀರಾಮನು ಕ್ರುದ್ಧನಾಗಿ ಅಗ್ನಿಜ್ವಾಲೆಗಳಂತಿದ್ದ ಘೋರ ಶರಗಳನ್ನು ಪ್ರಯೋಗಿಸಿ ಒಂದೊಂದು ಶರದಿಂದ ಒಬ್ಬೊಬ್ಬರ ಶಿರಸ್ಸಿನಂತೆ ಆ ನಾಲ್ವರ ಶಿರಸ್ಸುಗಳನ್ನೂ ತರಿದನು (೨೮–೨೯). ಆ ರಣರಂಗದಲ್ಲಿ ಮೈಂದನು ಮುಷ್ಟಿಯಿಂದ ಗುದ್ದಲಾಗಿ, ವಜ್ರ ಮುಷ್ಟಿಯೆಂಬ ದೈತ್ಯನು, ನಗರದಲ್ಲಿರುವ ಮಹಡಿಯ ಮನೆಯ ಕುಸಿದುಬೀಳುವಂತೆ, ರಥಾಶ್ವಸಹಿತನಾಗಿ ಹತನಾಗಿ ಕುಸಿದನು (೩೦). ನೀಲಾಂಜನಗಿರಿಯಂತೆ, ನೀಲವರ್ಣನಾದ ನೀಲನನ್ನು ನಿಕುಂಭನು ನಿಶಿತಾಸ್ತ್ರಗಳಿಂದ ನಿರ್ಭೇದಿಸಿದನು. ಉಷ್ಣಕರನು ತನ್ನ

ಪುನಃ ಶರಶತೇನಾಥ ಕ್ಷಿಪ್ರಹಸ್ತೋ ನಿಶಾಚರಃ ।
ಬಿಭೇದ ಸಮರೇ ನೀಲಂ ನಿಕುಂಭಃ ಪ್ರಜಹಾಸ ಚ ॥ ೩೨

ತಸ್ಯೈವ ರಥಚಕ್ರಣ ನೀಲೋ ವಿಷ್ಣುರಿವಾಹವೇ ।
ಶಿರಶ್ಚಿಚ್ಛೇದ ಸಮರೇ ನಿ ಕುಂಭಸ್ಯ ಚ ಸಾರಥೇಃ ॥ ೩೪

ವಜ್ರಾಶನಿಸಮಸ್ಪರ್ಶೋ ದ್ವಿವಿದೋಽಪ್ಯಶನಿಪ್ರಭಮ್ ।
ಜಘಾನ ಗಿರಿಶೃಂಗೇಣ ಮಿಷತಾಂ ಸರ್ವರಕ್ಷಸಾಮ್ ॥ ೩೫

ದ್ವಿವಿದಂ ವಾನರೇಂದ್ರಂ ತು ನಗಯೋಧಿನಮಾಹವೇ ।
ಶರೈರಶನಿಸಂಕಾಶೈಃ ಸ ವಿವ್ಯಾಧಾಶನಿಪ್ರಭಃ ॥ ೩೬

ಸ ಶರೈರತಿವಿದ್ಧಾಂಗೋ ದ್ವಿವಿದಃ ಕೋಧಮೂರ್ಛಿತಃ ।
ಸಾಲೇನ ಸರಥಂ ಸಾಶ್ವಂ ನಿಜಘಾನಾಶನಿಪ್ರಭಮ್ ॥ ೩೭

ವಿದ್ಯುನ್ಮಾಲೀ ರಥಸ್ಥಸ್ತು ಶರೈಃ ಕಾಂಚನಭೂಷಣೈಃ ।
ಸುಷೇಣಂ ತಾಡಯಾಮಾಸ ನನಾದ ಚ ಮುಹುರ್ಮುಹುಃ ॥ ೩೮

---

ಖರಕಿರಣಗಳಿಂದ ಮೇಘನನ್ನು ಭೇದಿಸುವಂತೆ ನೀಲನನ್ನು ಕೆತ್ತಿದನು. ಮತ್ತೆ ಆ ನಿಶಾಚರನು ಕೈಚಳಕದಿಂದ ನೂರಾರು ಶರಗಳನ್ನು ನೀಲನ ಮೇಲೆ ಪ್ರಯೋಗಿಸಿ ಅಟ್ಟಹಾಸಮಾಡಿದನು (೩೧–೩೨). ಆಗ ನೀಲನು ನಿಕುಂಭನ ರಥವನ್ನು ಮುರಿದು, ಚಕ್ರಪಾಣಿಯಾದ ವಿಷ್ಣುವಿನಂತೆ, ರಥದ ಚಕ್ರದಿಂದಲೇ ಪ್ರಹರಿಸಿ ನಿಕುಂಭನ ತಲೆಯನ್ನೂ ಅವನ ಸಾರಥಿಯ ತಲೆಯನ್ನೂ ತುಂಡರಿಸಿದನು (೩೩). ದ್ವಿವಿದನು ಅಶನಿಪ್ರಭನಮೇಲೆ ಸಿಡಿಲಿನಂತೆರಗಿ, ಸಕಲ ರಾಕ್ಷಸರೂ ಮಿಕಮಿಕನೆ ನೋಡುತ್ತಿರುವಾಗಲೇ ಗಿರಿಶೃಂಗದಿಂದ ಬಡಿದನು. ಆಗ ಸಂಕ್ರುದ್ಧನಾದ ಅಶನಿಪ್ರಭನು ಸಿಡಿಲಿನಂತಿರುವ ಶರಗಳಿಂದ ದ್ವಿವಿದನನ್ನು ಪ್ರಹರಿಸಿದನು (೩೪–೩೫). ದ್ವಿವಿದನ ಸರ್ವಾಂಗಗಳೂ ವ್ರಣಿತವಾದವು. ಅವನು ಕ್ರೋಧಾವಿಷ್ಟನಾಗಿ ಸಾಲವೃಕ್ಷವನ್ನೆತ್ತಿ ಬಡಿದು ರಥಾಶ್ವಗಳನ್ನು ನಿರ್ನಾಮಗೊಳಿಸಿ ಅಶನಿಪ್ರಭನನ್ನು ಕೊಂದುಹಾಕಿದನು (೩೬). ವಿದ್ಯುನ್ಮಾಲಿಯು ರಥಾರೂಢನಾಗಿ ಸುವರ್ಣಪುಂಖಿತ ಬಾಣಗಳನ್ನು ಸುಷೇಣನಿಗೆ ಗುರಿಯಿಟ್ಟು ಹೊಡೆದು ಮತ್ತೆ ಮತ್ತೆ ಸಿಂಹನಾದ ಮಾಡುತ್ತಿದ್ದನು.

ತಂ ರಥಸ್ಥಮಥೋ ದೃಷ್ಟ್ವಾ ಸುಷೇಣೋ ವಾನರೋತ್ತಮಃ ।
ಗಿರಿಶೃಂಗೇಣ ಮಹತಾ ರಥಮಾಶು ನ್ಯಪಾತಯತ್ । ೩೮

ಲಾಘವೇನ ತು ಸಂಯುಕ್ತೋ ವಿದ್ಯುನ್ಮಾಲೀ ನಿಶಾಚರಃ ।
ಅಪಕ್ರಮ್ಯ ರಥಾತ್ತೂರ್ಣಂ ಗದಾಪಾಣಿಃ ಕ್ಷಿತೌ ಸ್ಥಿತಃ ॥ ೩೯

ತತಃ ಕ್ರೋಧಸಮಾವಿಷ್ಟಃ ಸುಷೇಣೋ ಹರಿಪುಂಗವಃ ।
ಶಿಲಾಂ ಸುಮಹತೀಂ ಗೃಹ್ಯ ನಿಶಾಚರಮಭಿದ್ರವತ್ ॥ ೪೦

ತಮಾಪತಂತಂ ಗದಯಾ ವಿದ್ಯುನ್ಮಾಲೀ ನಿಶಾಚರಃ ।
ವಕ್ಷಸ್ಯಭಿಜಘಾನಾಶು ಸುಷೇಣಂ ಹರಿಸತ್ತಮಮ್ ॥ ೪೧

ಗದಾಪ್ರಹಾರಂ ತಂ ಘೋರಮಚಿಂತ್ಯ ಪ್ಲವಗೊತ್ತಮಃ ।
ತಾಂ ಶಿಲಾಂ ಪಾತಯಾಮಾಸ ತಸ್ಯೋರಸಿ ಮಹಾಮೃಧೇ । ೪೨

ಶಿಲಾಪ್ರಹಾರಾಭಿಹತೋ ವಿದ್ಯುನ್ಮಾಲೀ ನಿಶಾಚರಃ ।
ನಿಷ್ಪಿಷ್ಟಹೃದಯೋ ಭೂಮೌ ಗತಾಸುರ್ನಿಪಪಾತ ಹ ॥ ೪೩

ಏವಂ ತೈರ್ವಾನರೈಃ ಶೂರೈಃ ಶೂರಾಸ್ತೇ ರಜನೀಚರಾಃ ।
ದ್ವಂದ್ವೇವಿಮೃದಿತಾಸ್ತತ್ರ ದೈತ್ಯಾ ಇವ ದಿವೌಕಸೈಃ ॥ ೪೪

---

ವಾನರೋತ್ತಮನಾದ ಸುಷೇಣನು ದೊಡ್ಡದಾದ ಒಂದು ಗಿರಿಶೃಂಗದಿಂದ ಅಪ್ಪಳಿಸಿ ಅವನ ರಥವನ್ನು ಪುಡಿಮಾಡಿದನು (೩೭–೩೮). ವಿದ್ಯುನ್ಮಾಲಿಯು ದೇಹಲಾಘವವುಳ್ಳವನಾದ್ದರಿಂದ, ಥಕ್ಕನೆ ರಥದಿಂದ ಧುಮುಕಿ ಗದಾಪಾಣಿಯಾಗಿ ನಿಂತನು. ಕ್ರೋಧೋದ್ರಿಕ್ತನಾದ ಸುಷೇಣನು ಬೃಹದಾಕಾರದ ಬಂಡೆಯನ್ನೆತ್ತಿಕೊಂಡು ವಿದ್ಯುನ್ಮಾಲಿಯನ್ನು ಅಟ್ಟಿಸಿಕೊಂಡು ಬಂದನು (೩೯–೪೦). ಆ ರಾಕ್ಷಸನು ಗದೆಯನ್ನು ಬೀಸಿ ಸುಷೇಣನ ಎದೆಗೆ ಹೊಡೆದನು. ಭೀಕರವಾದ ಆ ಗದಾಪ್ರಹಾರವನ್ನು ಲೆಕ್ಕಿಸದೆ ಆ ವಾನರೋತ್ತಮನು ವಿದ್ಯುನ್ಮಾಲಿಯ ಎದೆಗೆ ಬಂಡೆಯಿಂದ ಬಡಿದನು (೪೧–೪೨). ಆ ಹೊಡೆತಕ್ಕೆ ವಿದ್ಯುನ್ಮಾಲಿಯ ಎದೆಯು ಜಜ್ಜಿಹೋಯಿತು. ಆ ನಿಶಾಚರನು ಗತಪ್ರಾಣನಾಗಿ ಉರುಳಿದನು. ಈ ರೀತಿಯಲ್ಲಿ ಶೂರರಾದ ವಾನರರು ಶೂರರಾದ ರಜನೀಚರರನ್ನು, ದೇವತೆಗಳು ದೈತ್ಯರನ್ನು ಮರ್ದಿಸುವಂತೆ ಮರ್ದಿಸಿದರು (೪೩–೪೪).

ಭಗ್ನೈಃ ಖಡ್ಗೈರ್ಗದಾಭಿಶ್ಚ ಶಕ್ತಿತೋಮರಪಟ್ಟಿಸೈಃ ।
ಅಪವಿದ್ಧೈಶ್ಚ ಭಿನ್ನೈಶ್ಚ ರಥೈಃ ಸಾಂಗ್ರಾಮಿಕೈರ್ಹಯೈಃ ॥ ೪೫
ನಿಹತೈಃ ಕುಂಜರೈರ್ಮತ್ತೈಸ್ತಥಾ ವಾನರರಾಕ್ಷಸೈಃ ।
ಚಕ್ರಾಕ್ಷಯುಗದಂಡೈಶ್ಚ ಭಗ್ನೈರ್ಧರಣಿಸಂಶ್ರಿತೈಃ ॥ ೪೬
ಬಭೂವಾಯೋಧನಂ ಘೋರಂ ಗೋಮಾಯುಗಣಸಂಕುಲಮ್ ।
ಕಬಂಧಾನಿ ಸಮುತ್ಪೇತುರ್ದಿಕ್ಷು ವಾನರರಕ್ಷಸಾಮ್ ॥ ೪೭
ವಿಮರ್ದೇ ತುಮುಲೇ ತಸ್ಮಿನ್ ದೇವಾಸುರರಣೋಪಮೇ ॥

ವಿದಾರ್ಯಮಾಣಾ ಹರಿಪುಂಗವೈಸ್ತದಾ
ನಿಶಾಚರಾಃ ಶೋಣಿತದಿಗ್ಧಗಾತ್ರಾಃ ।
ಪುನಃ ಸುಯುದ್ಧಂ ತರಸಾ ಸಮಾಸ್ಥಿತಾ
ದಿವಾಕರಸ್ಯಾಸ್ತಮಯಾಭಿಕಾಂಕ್ಷಿಣಃ ॥ ೪೮

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರಿಚತ್ವಾರಿಂಶಃ ಸರ್ಗಃ

---

ರಣರಂಗದಲ್ಲಿ ಎಲ್ಲಿನೋಡಿದರೂ ಮುರಿದ ಕತ್ತಿಗಳು, ಒಡೆದ ಗದೆಗಳು, ಪುಡಿಪುಡಿಯಾದ ಶಕ್ತಿ ತೋಮರ ಪಟ್ಟಸಗಳು ! ಎಲ್ಲಿ ನೋಡಿದರೂ ಕಳಚಿಬಿದ್ದ ಭಗ್ನರಥಗಳು, ಸತ್ತುಬಿದ್ದ ಸಮರಾಶ್ವಗಳು! (೪೫). ಎಲ್ಲಿ ನೋಡಿದರೂ ಹತವಾದ ಮದ್ದಾನೆಗಳು, ಮೃತರಾದ ವಾನರ ರಾಕ್ಷಸರು ! ಎಲ್ಲಿ ನೋಡಿದರೂ ಕಳಚಿದ ರಥಚಕ್ರಗಳು, ಚಚ್ಚಿಹೋದ ಅಚ್ಚುಗಳು, ನುಚ್ಚಾದ ನೊಗಗಳು, ಕುಕ್ಕಿಹೋದ ಮೂಕಿಗಳು ! (೪೬). ಘೋರವಾದ ಆ ರಣಭೂಮಿಯಲ್ಲಿ ನರಿಗಳು ಸುಳಿದಾಡಿದವು. ವಾನರ ರಾಕ್ಷಸರ ತಲೆಯಿಲ್ಲದ ರುಂಡಗಳು* ಎದ್ದೆದ್ದು ಬಿದ್ದವು. ದೇವಾಸುರರಿಗೆ ನಡೆದಂತೆ ಘೋರವಾದ ಕದನವು ನಡೆಯಿತು (೪೭). ಕಪಿಯೋಧರಿಂದ ಸೀಳಲ್ಪಡುತ್ತಿದ್ದ ರಾಕ್ಷಸರ ಮೈಯಿಂದ ನೆತ್ತರು ಹರಿದು ಗಾತ್ರಗಳು ಒದ್ದೆಯಾದವು. ಆದರೂ ಆ ನಿಶಾಚರರು, ಸೂರ್ಯನು ಮುಳುಗಲೆಂದೂ ಆಗ ತಮ್ಮ ಪರಾಕ್ರಮವು ವರ್ಧಿಸುವುದೆಂದೂ ನಂಬಿ, ಸಾಹಸದಿಂದ ಹೋರಾಡುತ್ತಿದ್ದರು (೪೮).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ನಲವತ್ತುಮೂರನೆಯ ಸರ್ಗ

---

* ಶಿರಸ್ಸಿಲ್ಲದ ಶರೀರಕ್ಕೆ ರುಂಡವೆಂದು ಹೆಸರು. ಬರಿಯ ಶಿರಸ್ಸಿಗೆ ಮುಂಡವೆಂದು ಹೆಸರು. ಕನ್ನಡ ಸಾಹಿತ್ಯದಲ್ಲಿ ಈ ಶಬ್ದಗಳನ್ನು ತಿರುವುಮುರುವಾಗಿ ಪ್ರಯೋಗಿಸುತ್ತಿದ್ದಾರೆಂಬುದನ್ನು ಗಮನದಲ್ಲಿಡಬೇಕು.

## ಚತುಶ್ಚತ್ವಾರಿಂಶಃ ಸರ್ಗಃ

### ನಿಶಾಯುದ್ಧಮ್

ಯುಧ್ಯತಾಮೇವ ತೇಷಾಂ ತು ತದಾ ವಾನರರಕ್ಷಸಾಮ್ ।
ರವಿರಸ್ತಂ ಗತೋ ರಾತ್ರಿಃ ಪ್ರವೃತ್ತಾ ಪ್ರಾಣಹಾರಿಣೀ ॥ ೧

ಅನ್ಯೋನ್ಯಂ ಬದ್ಧವೈರಾಣಾಂ ಘೋರಾಣಾಂ ಜಯಮಿಚ್ಛತಾಮ್ ।
ಸಂಪ್ರವೃತ್ತಂ ನಿಶಾಯುದ್ಧಂ ತದಾ ವಾನರರಕ್ಷಸಾಮ್ ॥ ೨

ರಾಕ್ಷಸೋಽಸೀತಿ ಹರಯೋ ಹರಿಶ್ಚಾಸೀತಿ ರಾಕ್ಷಸಾಃ ।
ಅನ್ಯೋನ್ಯಂ ಸಮರೇ ಜಘ್ನುಸ್ತಸ್ಮಿಂಸ್ತಮಸಿ ದಾರುಣೇ ॥ ೩

ಜಹಿ ದಾರಯ ಚೈಹೀತಿ ಕಥಂ ವಿದ್ರವಸೀತಿ ಚ ।
ಏವಂ ಸುತುಮುಲಃ ಶಬ್ದಸ್ತಸ್ಮಿಂಸ್ತಮಸಿ ಶುಶ್ರುವೇ ॥ ೪

ಕಾಲಾಃ ಕಾಂಚನಸನ್ನಾಹಾಸ್ತಸ್ಮಿಂಸ್ತಮಸಿ ರಾಕ್ಷಸಾಃ ।
ಸಂಪ್ರಾದೃಶ್ಯಂತ ಶೈಲೇಂದ್ರಾ ದೀಪ್ತೌಷಧಿವನಾ ಇವ॥ ೫

### ಸರ್ಗ ೪೪

ರಾತ್ರಿಯುದ್ಧ. ಅಂಗದನಿಂದ ಪರಾಜಿತನಾದ ಇಂದ್ರಜಿತುವು ಅಂತರ್ಧಾನವನ್ನು ಹೊಂದಿ ಮಾಯಾಯುದ್ಧವನ್ನು ಆರಂಭಿಸುವುದು.

ಹೀಗೆ ವಾನರರೂ ರಾಕ್ಷಸರೂ ಹೋರಾಡುತ್ತಿರುವಾಗ ಸೂರ್ಯನು ಮುಳುಗಿದನು. ಪ್ರಾಣಹಾರಿಯಾದ ಭೀಕರರಾತ್ರಿಯು ಪ್ರಾಪ್ತವಾಯಿತು. ಅನ್ಯೋನ್ಯವಾಗಿ ಬದ್ಧವೈರರೂ ಭಯಂಕರರೂ ಜಯಾಪೇಕ್ಷಿಗಳೂ ಆದ ವಾನರರಿಗೂ ರಾಕ್ಷಸರಿಗೂ ರಾತ್ರಿಯುದ್ಧವು ತೊಡಗಿತು (೧–೨). ಆ ಗಾಢಾಂಧಕಾರದಲ್ಲಿ 'ಎಲಾ! ನೀನು ರಾಕ್ಷಸ!' ಎನ್ನುತ್ತ ಕಪಿಯೋಧರೂ 'ಭಲಾ! ನೀನು ವಾನರನೇ ಹೌದು!' ಎನ್ನುತ್ತ ರಾಕ್ಷಸರೂ ಹೊಯ್ಯುತ್ತಿದ್ದರು. ಆ ಕತ್ತಲೆಯಲ್ಲಿ 'ಕೊಲ್ಲು ! ಸೀಳು ! ಇತ್ತ ಬಾ! ಏಕೆ ಓಡಿಹೋಗುತ್ತೀಯೆ !' ಎಂಬ ಕೋಲಾಹಲವೇ ಎಲ್ಲೆಲ್ಲಿಯೂ ಕೇಳಿಸುತ್ತಿತ್ತು (೩–೪). ಕಾಂಚನಕವಚಗಳನ್ನು ತೊಟ್ಟಿದ್ದ ಕಪ್ಪನೆಯ ಆ ರಾಕ್ಷಸರು ಜ್ಯೋತಿರ್ಲತೆಗಳಿಂದ ಮಿರುಗುವ

ತಸ್ಮಿಂಸ್ತಮಸಿ ದುಷ್ಪಾರೇ ರಾಕ್ಷಸಾಃ ಕ್ರೋಧಮೂರ್ಛಿತಾಃ ।
ಪರಿಪೇತುರ್ಮಹಾವೇಗಾ ಭಕ್ಷಯಂತಃ ಪ್ಲವಂಗಮಾನ್ ॥ ೬

ತೇ ಹಯಾನ್ ಕಾಂಚನಾಪೀಡಾನ್ ಧ್ವಜಾಂಶ್ಚಾಗ್ನಿಶಿಖೋಪಮಾನ್
ಆಪ್ಲುತ್ಯ ದಶನೈಸ್ತೀಕ್ಷ್ಣೈರ್ಭೀಮಕೋಪಾ ವ್ಯದಾರಯನ್ ॥ ೭

ವಾನರಾ ಬಲಿನೋ ಯುದ್ಧೇಽಕ್ಷೋಭಯನ್ ರಾಕ್ಷಸೀಂಚಮೂಮ್
ಕುಂಜರಾನ್ ಕುಂಜರಾರೋಹಾನ್ಪತಾಕಾಧ್ವಜಿನೋ ರಥಾನ್ ॥ ೮

ಚಕರ್ಷುಶ್ಚ ದದಂಶುಶ್ಚ ದಶನೈಃ ಕ್ರೋಧಮೂರ್ಛಿತಾ ।
ಲಕ್ಷ್ಮಣಶ್ಚಾಪಿ ರಾಮಶ್ಚ ಶರೈರಾಶೀವಿಶೋಪಮೈಃ ॥ ೯

ದೃಶ್ಯಾದೃಶ್ಯಾನಿ ರಕ್ಷಾಂಸಿ ಪ್ರವರಾಣಿ ನಿಜಘ್ನತುಃ ।
ತುರಂಗಖುರವಿಧ್ವಸ್ತಂ ರಥನೇಮಿಸಮುತ್ಥಿತಮ್ ॥ ೧೦

ರುರೋಧ ಕರ್ಣನೇತ್ರಾಣಿ ಯುಧ್ಯತಾಂ ಧರಣೀರಜಃ ।
ವರ್ತಮಾನೇ ಮಹಾಘೋರೇ ಸಂಗ್ರಾಮೇ ರೋಮಹರ್ಷಣೇ॥ ೧೧

---

ಬೆಟ್ಟಗಳಂತೆ ಕತ್ತಲೆಯಲ್ಲಿ ಕಂಗೊಳಿಸುತ್ತಿದ್ದರು ! ಕಗ್ಗತ್ತಲು ಕವಿದ ಆ ರಣಭೂಮಿಯಲ್ಲಿ ಕ್ರೋಧಾವಿಷ್ಟರಾದ ರಾಕ್ಷಸರು ಕಪಿಗಳನ್ನು ನುಂಗುತ್ತ ರಭಸದಿಂದ ನುಗ್ಗಿದರು (೫-೬). ಭೀಮಕೋಪರಾದ ಕಪಿಯೋಧರೂ ಸಹ ಕುಪ್ಪಳಿಸುತ್ತ ಬಂಗಾರ ಶಿರೋಭೂಷಣವುಳ್ಳ ಕುದುರೆಗಳನ್ನೂ ಅಗ್ನಿಜ್ವಾಲೆಯಂತೆ ಜಗಜಗಿಸುವ ಧ್ವಜಗಳನ್ನೂ ಹರಿತವಾದ ಹಲ್ಲುಗಳಿಂದ ಸಿಗಿಯುತ್ತ ಹೋರಾಡಿದರು (೭). ಬಲಾಢ್ಯರಾದ ವಾನರರು ರಾಕ್ಷಸಸೇನೆಯನ್ನು ತಲ್ಲಣಗೊಳಿಸಿದರು. ಕ್ರೋಧಮೂರ್ಛಿತರಾದ ಆ ಕಪಿಯೋಧರು ಆನೆಗಳನ್ನೂ ಮಾವುತರನ್ನೂ ಪತಾಕಾಭೂಷಿತವಾದ ರಥಗಳನ್ನೂ ಎಳೆದು ಸೆಳೆದು ಹಲ್ಲುಗಳಿಂದ ಕಚ್ಚಿ ಕೊಂದು ನಾಶಮಾಡಿದರು (೮). ಶ್ರೀರಾಮನೂ ಲಕ್ಷ್ಮಣನೂ ಮಾಸಲುಮಾಸಲಾಗಿ ಕಾಣುತ್ತಿದ್ದ ರಾಕ್ಷಸಭಟರನ್ನು ಸರ್ಪಸಮಾನಗಳಾದ ತಮ್ಮ ಕೂರ್ಗಣೆಗಳಿಂದ ಕೊಂದು ಕೊಂದು ಚೆಲ್ಲಿದರು. ಕುದುರೆಗಳ ಖರಾಗ್ರಗಳಿಂದ ಪುಡಿಯಾಗಿ ರಥಚಕ್ರಹತಿಯಿಂದ ಮೇಲೆದ್ದಧೂಳಿಯು ಯೋಧರ ಕಿವಿಗಳನ್ನೂ ಕಣ್ಣುಗಳನ್ನೂ ಮುಚ್ಚಿಬಿಟ್ಟಿತು (೯-೧೦). ಹೀಗೆ ರೋಮಾಂಚಕರವಾದ ಘೋರಸಂಗ್ರಾಮವು ನಡೆಯಲಾಗಿ ರಕ್ತದ ಕೋಡಿಗಳು ಹರಿದವು.

ರುಧಿರೋದಾ ಮಹಾಘೋರಾ ನದ್ಯಸ್ತತ್ರ ಪ್ರಸುಸ್ರುವುಃ ।
ತತೋ ಭೇರೀಮೃದಂಗಾನಾಂ ಪಣವಾನಾಂ ಚ ನಿಃಸ್ವನಃ ॥ ೧೨

ಶಂಖವೇಣುಸ್ವನೋನ್ಮಿಶ್ರಃ ಸಂಬಭೂವಾದ್ಭುತೋಪಮಃ ।
ಹತಾನಾಂ ಸ್ತನಮಾನಾನಾಂ ರಾಕ್ಷಸಾನಾಂ ಚ ನಿಃಸ್ವನಃ ॥ ೧೩

ಶಸ್ತಾನಾಂ ವಾನರಾಣಾಂ ಚ ಸಂಬಭೂವಾತಿದಾರುಣಃ ।
ಹತೈರ್ವಾನರವೀರೈಶ್ಚ ಶಕ್ತಿಶೂಲಪರಶ್ವಧೈಃ ॥ ೧೪

ನಿಹತೈಃ ಪರ್ವತಾಗ್ರೈಶ್ಚ ರಾಕ್ಷಸೈಃ ಕಾಮರೂಪಿಭಿಃ ।
ಶಸ್ತ್ರಪುಷ್ಪೋಪಹಾರಾ ಚ ತತ್ರಾಸೀದ್ಯುದ್ಧಮೇದಿನೀ ॥ ೧೫

ದುರ್ಜ್ಞೇಯಾ ದುರ್ನಿವೇಶಾ ಚ ಶೋಣಿತಾಸ್ರಾವಕರ್ದಮಾ ।
ಸಾ ಬಭೂವ ನಿಶಾ ಘೋರಾ ಹರಿರಾಕ್ಷಸಹಾರಿಣೀ ॥ ೧೬

ಕಾಲರಾತ್ರೀವ ಭೂತಾನಾಂ ಸರ್ವೇಷಾಂ ದುರತಿಕ್ರಮಾ ।
ತತಸ್ತೇ ರಾಕ್ಷಸಾಸ್ತತ್ರ ತಸ್ಮಿಂಸ್ತಮಸಿ ದಾರುಣೇ ॥ ೧೭

ರಾಮಮೇವಾಭ್ಯವರ್ತಂತ ಸಂಸ್ಪೃಷ್ಟಾಃ ಶರವೃಷ್ಟಿಭಿಃ ।
ತೇಷಾಮಾಪತತಾಂ ಶಬ್ದಃ ಕ್ರುದ್ಧಾನಾಮಪಿ ಗರ್ಜತಾಮ್ ॥ ೧೮

---

ಈ ಕೋಲಾಹಲದೊಡನೆ ಭೇರೀಮೃದಂಗಗಳ ನಿರ್ಘೋಷ, ಮದ್ದಳೆಗಳ ಗದ್ದಲ, ಶಂಖಗಳ ಬಂಭಾರವ, ಕಹಳೆಗಳ ಕೀಂಕಾರಗಳೂ ಸೇರಲಾಗಿ ರಣ ರಂಗವು ಅದ್ಭುತವಾಯಿತು. ಹೊಡೆತಗಳನ್ನು ತಿಂದು ಹುಯ್ಲೆಬ್ಬಿಸುವ ರಾಕ್ಷಸರ ಅರೆಚಾಟಗಳೂ ಬಡಿತಗಳನ್ನು ತಿಂದು ಬಾಯ್ಬಿಡುವ ಕಪಿಗಳ ಕಿರಿಚಾಟಗಳೂ ದಾರುಣವಾದವು! (೧೧–೧೩). ಶಕ್ತಿ ಶೂಲ, ಪರಶು ಮುಂತಾದ ಆಯುಧ ಗಳಿಂದ ಹತರಾದ ವಾನರರಿಂದಲೂ ಪರ್ವತಶಿಖರ, ವೃಕ್ಷ ಮುಂತಾದವುಗಳಿಂದ ಹತರಾದ ರಾಕ್ಷಸರಿಂದಲೂ ಈಡಾಡಿದ ಶಸ್ತ್ರಗಳೆಂಬ ಪುಷ್ಪಗಳಿಂದಲೂ ಯುಕ್ತ ವಾದ ಆ ರಣಭೂಮಿಯು, ಬಲಿಗಳನ್ನರ್ಪಿಸಿ ಹೂಗಳಿಂದ ಪೂಜಿಸಲ್ಪಟ್ಟಂತೆ ಕಂಡಿತು! (೧೪–೧೫). ರಕ್ತದ ಹೊನಲುಗಳಿಂದ ಕೊಚ್ಚೆಯಾದ ಆ ರಣ ಭೂಮಿಯಲ್ಲಿ, ಎಲ್ಲಿ ಏನಿದೆ – ಎಲ್ಲಿ ಕಾಲಿಡಬೇಕು ಎಂದು ತಿಳಿಯದಾಯಿತು. ವಾನರರಾಕ್ಷಸರಿಗೆ ಮೃತ್ಯುರೂಪವಾದ ಈ ಘೋರರಾತ್ರಿಯು, ಸಕಲಭೂತ ಗಳಿಗೂ ಅನಿವಾರ್ಯವಾಗಿ ಒದಗುವ ಕಾಳರಾತ್ರಿಯೋ ಎಂಬಂತೆ ಭೀಷಣ ವಾಯಿತು (೧೬–೧೭). ಆ ಗಾಢಾಂಧಕಾರವೇ ತಕ್ಕ ಸಮಯವೆಂದರಿತು,

ಉದ್ವರ್ತ ಇವ ಸಪ್ತಾನಾಂ ಸಮುದ್ರಾಣಾಂ ಪ್ರಶುಶ್ರುವೇ ।
ತೇಷಾಂ ರಾಮಃ ಶರೈಃ ಷಡ್ಭಿಃ ಷಡ್ಜಘಾನ ನಿಶಾಚರಾನ್ ॥ ೧೯

ನಿಮೇಷಾಂತರಮಾತ್ರೇಣ ಶಿತೈರಗ್ನಿಶಿಖೋಪಮೈಃ ।
ಯಜ್ಞಶತ್ರುಶ್ಚ ದುರ್ಧರ್ಷೋ ಮಹಾಪಾರ್ಶ್ವಮಹೋದರೌ ॥ ೨೦

ವಜ್ರದಂಷ್ಟ್ರೋ ಮಹಾಕಾಯಸ್ತೌ ಚೋಭೌ ಶುಕಸಾರಣೌ ।
ತೇ ತು ರಾಮೇಣ ಬಾಣೌಘೈಃ ಸರ್ವೇ ಮರ್ಮಸು ತಾಡಿತಾಃ ॥ ೨೧

ಯುದ್ಧಾದಪಸೃತಾಸ್ತತ್ರ ಸಾವಶೇಷಾಯುಷೋಽಭವನ್ ।
ತತ್ರ ಕಾಂಚನಚಿತ್ರಾಂಗೈಃ ಶರೈರಗ್ನಿಶಿಖೋಪಮೈಃ ॥ ೨೨

ದಿಶಶ್ಚಕಾರ ವಿಮಲಾಃ ಪ್ರದಿಶಶ್ಚ ಮಹಾಬಲಃ ।
ರಾಮನಾಮಾಂಕಿತೈರ್ಬಾಣೈರ್ವ್ಯಾಪ್ತಂ ತದ್ರಣಮಂಡಲಮ್ ॥ ೨೩

ಯೇ ತ್ವನ್ಯೇ ರಾಕ್ಷಸಾ ಭೀಮಾ ರಾಮಸ್ಯಾಭಿಮುಖೇ ಸ್ಥಿತಾಃ ।
ತೇಽಪಿ ನಷ್ಟಾಃ ಸಮಾಸಾದ್ಯ ಪತಂಗಾ ಇವ ಪಾವಕಮ್ ॥ ೨೪

---

ರಾಕ್ಷಸರು ಶರವೃಷ್ಟಿಯನ್ನು ಸುರಿಸುತ್ತ ಶ್ರೀರಾಮನನ್ನು ಆಕ್ರಮಿಸಿದರು. ರೋಷಾವಿಷ್ಟರಾದ ರಾಕ್ಷಸರು ಬೊಬ್ಬಿರಿಯುತ್ತ ನುಗ್ಗಿ ಬರುತ್ತಿರಲು ಅವರ ಬೊಬ್ಬೆಯು, ಪ್ರಳಯಕಾಲದಲ್ಲಿ ಸಪ್ತಸಮುದ್ರಗಳೂ ಉಕ್ಕಿಬರುವಾಗ ಜನಿಸುವ ಘೋರಗರ್ಜನೆಯಂತೆ ಕೇಳಿಸಿತು! (೧೮–೧೯). ಆಗ ಶ್ರೀರಾಮನು ವಹ್ನಿ ಜ್ವಾಲೆಯಂತೆ ಪ್ರಜ್ವಲಿಸುತ್ತಿದ್ದ ಆರು ತೀಕ್ಷ್ಣಾಸ್ತ್ರಗಳನ್ನು ಎವೆಯಿಕ್ಕುವಷ್ಟ-ರೊಳಗೆ ಆರುಮಂದಿ ರಾಕ್ಷಸನಾಯಕರಮೇಲೆ ಪ್ರಯೋಗಿಸಿದನು (೨೦). ಯಜ್ಞಶತ್ರು, ಮಹಾಪಾರ್ಶ್ವ, ಮಹೋದರ, ವಜ್ರದಂಷ್ಟ್ರ, ಶುಕ, ಸಾರಣ – ಎಂಬ ಆ ರಾಕ್ಷಸರು ಮರ್ಮಸ್ಥಳಗಳಲ್ಲಿ ತಾಡಿತರಾಗಿ ಪ್ರಾಣವುಳಿದರೆ ಸಾಕೆಂದು ಹೆದರಿ ಓಡಿಹೋದರು! (೨೧). ಮಹಾಬಲಾಢ್ಯನಾದ ಶ್ರೀರಾಮನು ಸುವರ್ಣಪುಂಖಾಂಕಿತಗಳಾಗಿ ಬೆಂಕಿಯಂತೆ ಬೆಳಗುತ್ತಿದ್ದ ಶರಗಳನ್ನು ರಣರಂಗ ದಲ್ಲಿ ಎಲ್ಲೆಲ್ಲಿಯೂ ಪ್ರಯೋಗಿಸಿ ದಿಗ್ದಿಗಂತಗಳನ್ನು ಬೆಳ್ಳಂಬೆಳಗಾಗಿಸಿದನು! ಶ್ರೀ ರಾಮನಾಮಾಂಕಿತವಾದ ಶರರಾಶಿಯು ರಣಮಂಡಲದಲ್ಲಿ ವ್ಯಾಪಿಸಿಬಿಟ್ಟಿತು (೨೨–೨೩). ಶ್ರೀರಾಮನನ್ನೆದುರಿಸಿದ ರಾಕ್ಷಸರಲ್ಲರೂ ಬೆಂಕಿಗೆ ಬಿದ್ದ ಪತಂಗದ ಹುಳುಗಳಂತೆ ಸುಟ್ಟು ಭಸ್ಮವಾದರು. ಕಗ್ಗತ್ತಲಿಂದ ಕೂಡಿದ್ದ ಆ ರಾತ್ರಿಯು,

ಸುವರ್ಣಪುಂಖೈರ್ವಿಶಿಖೈ: ಸಂಪತದ್ಭಿ: ಸಹಸ್ರಶ: ।
ಬಭೂವ ರಜನೀ ಚಿತ್ರಾ ಖದ್ಯೋತೈರಿವ ಶಾರದೀ ॥ ೨೫

ರಾಕ್ಷಸಾನಾಂ ಚ ನಿನದೈರ್ಹರೀಣಾಂ ಚಾಪಿ ನಿ:ಸ್ವನೈ: ।
ಸಾ ಬಭೂವ ನಿಶಾ ಘೋರಾ ಭೂಯೋ ಘೋರತರಾ ತದಾ ॥ ೨೬

ತೇನ ಶಬ್ದೇನ ಮಹತಾ ಪ್ರವೃದ್ಧೇನ ಸಮಂತತ: ।
ತ್ರಿಕೂಟ: ಕಂದರಾಕೀರ್ಣ: ಪ್ರವ್ಯಾಹರದಿವಾಚಲ: ॥ ೨೭

ಗೋಲಾಂಗೂಲಾ ಮಹಾಕಾಯಾಸ್ತಮಸಾ ತುಲ್ಯವರ್ಚಸ: ।
ಸಂಪರಿಷ್ವಜ್ಯ ಬಾಹುಭ್ಯಾಂ ಭಕ್ಷಯನ್ ರಜನೀಚರಾನ್ ॥ ೨೮

ಅಂಗದಸ್ತು ರಣೇ ಶತ್ರುಂ ನಿಹಂತುಂ ಸಮುಪಸ್ಥಿತ: ।
ರಾವಣಿಂ ನಿಜಘಾನಾಶು ಸಾರಥಿಂ ಚ ಹಯಾನಪಿ ॥ ೨೯

ವರ್ತಮಾನೇ ತದಾ ಘೋರೇ ಸಂಗ್ರಾಮೇ ಭೃಶದಾರುಣೇ ।
ಇಂದ್ರಜಿತ್ತು ರಥಂ ತ್ಯಕ್ತ್ವಾ ಹತಾಶ್ವೋ ಹತಸಾರಥಿ: ॥ ೩೦

---

ಶ್ರೀರಾಮಶರಗಳ ತೇಜಸ್ಸಿನಿಂದ ಶರತ್ಕಾಲದ ಬೆಳದಿಂಗಳ ರಾತ್ರಿಯಂತೆ ಕಾಣಿಸಿತು! ಸಾವಿರಾರು ಸುವರ್ಣಪುಂಖಾಂಕಿತಶರಗಳು ಮಿಂಚುಹುಳುಗಳಂತೆ ಮಿಣುಗಿದವು! (೨೪–೨೫). ಘೋರವಾದ ಆ ರಾತ್ರಿಯು ವಾನರರಾಕ್ಷಸರ ವೀರಗರ್ಜನೆಗಳಿಂದಲೂ ಸಂಕಟದ ಕಿರಿಚಾಟಗಳಿಂದಲೂ ಘೋರತರ ವಾಯಿತು. ಅದ್ಭುತವಾದ ಆ ಗದ್ದಲವು ತ್ರಿಕೂಟಪರ್ವತದ ಕಂದರಗಳಲ್ಲಿ ಪ್ರತಿಧ್ವನಿಸಲು, ಆ ಪರ್ವತವೇ ಕೂಗುವಂತೆ ಕೇಳಿಸುತ್ತಿತ್ತು (೨೬--೨೭). ಕತ್ತಲೆಯಂತೆ ಕಪ್ಪಾದ ಬೃಹದಾಕಾರದ ಸಿಂಗಳೀಕರು ನಿಶಾಚರರನ್ನು ಎರಡು ತೋಳುಗಳಿಂದಲೂ ಹಿಡಿದೆತ್ತಿ ನುಂಗಿಬಿಡುತ್ತಿದ್ದರು! ಇತ್ತ ಅಂಗದನಿಗೂ ಇಂದ್ರಜಿತುವಿಗೂ ಅತಿಭೀಷಣವಾದ ಕಠೋರಸಂಗ್ರಾಮವು ನಡೆಯುತ್ತಿತ್ತು. ಅಂಗದನು ತನ್ನ ಪ್ರತಿಭಟನಾದ ಇಂದ್ರಜಿತುವನ್ನು ಮುಗಿಸಿಬಿಡಬೇಕೆಂದು ಅವನನ್ನು ಅಪ್ಪಳಿಸಿ, ಅವನ ಸಾರಥಿಯನ್ನೂ ಕುದುರೆಗಳನ್ನೂ ಒಂದೇ ಪ್ರಹಾರ ದಿಂದ ಕೆಡಹಿದನು (೨೮–೨೯). ಆ ಘೋರಯುದ್ಧದಲ್ಲಿ ಮಹಾಕಾಯನಾದ ಇಂದ್ರಜಿತುವು ಕೂಡಲೇ ರಥದಿಂದ ನೆಗೆದು ಅಂತರ್ಧಾನಹೊಂದಿದನು!

ಅಂಗದೇನ ಮಹಾಕಾಯಸ್ತತ್ರೈವಾಂತರಧೀಯತ ।
ತತ್ಕರ್ಮ ವಾಲಿಪುತ್ರಸ್ಯ ಸರ್ವೇ ದೇವಾಃ ಸಹರ್ಷಿಭಿಃ ॥ ೩೧

ತುಷ್ಟುವುಃ ಪೂಜನಾರ್ಹಸ್ಯ ತೌ ಚೋಭೌ ರಾಮಲಕ್ಷ್ಮಣೌ ।
ಪ್ರಭಾವಂ ಸರ್ವಭೂತಾನಿ ವಿದುರಿಂದ್ರಜಿತೋ ಯುಧಿ ॥ ೩೨

ಅದೃಶ್ಯಃ ಸರ್ವಭೂತಾನಾಂ ಯೋಽಭವದ್ಯುಧಿ ದುರ್ಜಯಃ ।
ತೇನ ತೇ ತಂ ಮಹಾತ್ಮಾನಂ ತುಷ್ಟಾ ದೃಷ್ಟ್ವಾ ಪ್ರಧರ್ಷಿತಮ್ ॥ ೩೩

ತತಃ ಪ್ರಹೃಷ್ಟಾಃ ಕಪಯಃ ಸಸುಗ್ರೀವ ವಿಭೀಷಣಾಃ ।
ಸಾಧು ಸಾಧ್ವಿತಿ ನೇದುಶ್ಚ ದೃಷ್ಟ್ವಾ ಶತ್ರುಂ ಪ್ರಧರ್ಷಿತಮ್ ೩೪

ಇಂದ್ರಜಿತ್ತು ತದಾ ತೇನ ನಿರ್ಜಿತೋ ಭೀಮಕರ್ಮಣಾ ।
ಸಂಯುಗೇ ವಾಲಿಪುತ್ರೇಣ ಕ್ರೋಧಂ ಚಕ್ರೇ ಸುದಾರುಣಮ್ ॥ ೩೫

ಸೋಽಂತರ್ಧಾನಗತಃ ಪಾಪೋ ರಾವಣೀ ರಣಕರ್ಶಿತಃ ।
ಬ್ರಹ್ಮದತ್ತವರೋ ವೀರೋ ರಾವಣಿಃ ಕ್ರೋಧಮೂರ್ಛಿತಃ ॥ ೩೬

ಅದೃಶ್ಯೋ ನಿಶಿತಾನ್ ಬಾಣಾನ್ ಮುಮೋಚಾಶನಿವರ್ಚಸಃ ।
ಸ ರಾಮಂ ಲಕ್ಷ್ಮಣಂ ಚೈವ ಘೋರೈರ್ನಾಗಮಯೈಃ ಶರೈಃ ॥ ೩೭

---

ಪ್ರಶಂಸಾರ್ಹನಾದ ವಾಲಿಪುತ್ರನ ಆ ಸಾಹಸಕೃತ್ಯವನ್ನು ಕಂಡು ದೇವತೆಗಳೂ ಋಷಿಗಳೂ ಶ್ರೀರಾಮಲಕ್ಷ್ಮಣರೂ ಅಂಗದನನ್ನು ಕೊಂಡಾಡಿದರು. ಯುದ್ಧ ಭೂಮಿಯಲ್ಲಿ ಇಂದ್ರಜಿತುವು ಎಂತಹ ಪರಾಕ್ರಮಿಯೆಂಬುದು ಸಕಲರಿಗೂ ಗೊತ್ತಿದ್ದ ವಿಷಯವೇ ಆಗಿತ್ತು (೩೦–೩೨). ಸರ್ವಭೂತಗಳಿಗೂ ದುರ್ಜಯನಾದ ಆ ಇಂದ್ರಜಿತು ಅಂಗದನ ಆಕ್ರಮಣವನ್ನೆದುರಿಸಲಾರದೆ ಅಂತರ್ಹಿತನಾದುದನ್ನು ಕಂಡು, 'ಅಬ್ಬ! ಈ ಅಂಗದನು ಮಹಾಧೀರ' ಎಂದು ಅವರೆಲ್ಲರೂ ಹೊಗಳಿದರು (೩೩). ಶತ್ರುವು ಪರಾಜಿತನಾದನೆಂದರಿತು ವಾನರರೂ ಸುಗ್ರೀವ ವಿಭೀಷಣರೂ ಹರ್ಷದಿಂದ 'ಭಲಾ ಭಲಾ!' ಎಂದು ಘೋಷಿಸುತ್ತ ಸಿಂಹನಾದ ಮಾಡಿದರು. ಅದ್ಭುತಪರಾಕ್ರಮಿಯಾದ ವಾಲಿಪುತ್ರನಿಂದ ಸೋಲಾದುದನ್ನು ಸಹಿಸಲಾರದ ಇಂದ್ರಜಿತುವಿಗೆ ದಾರುಣವಾದ ರೋಷವಾವರಿಸಿತು (೩೪–೩೫). ದುರುಳನಾದ ಆ ರಾವಣಿಗೆ ಬ್ರಹ್ಮದತ್ತವಾದ ವರಸಿದ್ಧಿಯಿದ್ದಿತು. ಅದರ ಬಲದಿಂದ ಆತನು ಕಣ್ಮರೆಯಾಗಿ ನಿಂತು, ನಿಶಿತಾಸ್ತ್ರಗಳನ್ನು ಸಿಡಿಲುಗಳಂತೆ ಸಿಡಿಸಲಾರಂಭಿಸಿದನು. ಕ್ರುದ್ಧನಾದ ಆ ರಾಕ್ಷಸನು ಸಕಲರಿಗೂ ಅದೃಶ್ಯನಾಗಿದ್ದು

ಬಭೇದ ಸಮರೇ ಕ್ರುದ್ಧಃ ಸರ್ವಗಾತ್ರೇಷು ರಾಕ್ಷಸಃ ।
ಮಾಯಯಾ ಸಂವೃತಸ್ತತ್ರ ಮೋಹಯನ್ ರಾಘವೌ ಯುಧಿ ॥ ೩೮

ಅದೃಶ್ಯಃ ಸರ್ವಭೂತಾನಾಂ ಕೂಟಯೋಧೀ ನಿಶಾಚರಃ ।
ಬಬಂಧ ಶರಬಂಧೇನ ಭ್ರಾತರೌ ರಾಮಲಕ್ಷ್ಮಣೌ ॥ ೩೯

ತೌ ತೇನ ಪುರುಷವ್ಯಾಘ್ರೌ ಕ್ರುದ್ಧೇನಾಶೀವಿಷೈಃ ಶರೈಃ ।
ಸಹಸಾ ನಿಹತೌ ವೀರೌ ತದಾ ಪ್ರೈಕ್ಷಂತ ವಾನರಾಃ ॥ ೪೦

ಪ್ರಕಾಶರೂಪಸ್ತು ಯದಾ ನ ಶಕ್ತ –
ಸ್ತೌ ಬಾಧಿತುಂ ರಾಕ್ಷಸರಾಜಪುತ್ರಃ ।
ಮಾಯಾಂ ಪ್ರಯೋಕ್ತುಂ ಸಮುಪಾಜಗಾಮ
ಬಬಂಧ ತೌ ರಾಜಸುತೌ ದುರಾತ್ಮಾ ॥ ೪೧

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುಶ್ಚತ್ವಾರಿಂಶಃ ಸರ್ಗಃ

---

ಘೋರವಾದ ಸರ್ಪಾಸ್ತ್ರಗಳಿಂದ ಶ್ರೀರಾಮನನ್ನೂ ಲಕ್ಷ್ಮಣನನ್ನೂ ಗುರಿಯಿಟ್ಟು ಹೊಡೆದು ಅವರ ಸರ್ವಾಂಗಗಳನ್ನೂ ಭೇದಿಸತೊಡಗಿದನು (೩೬–೩೭). ಮಾಯಾಬಲದಿಂದ ಅದೃಶ್ಯನಾದ ಇಂದ್ರಜಿತುವು ಶ್ರೀರಾಮಲಕ್ಷ್ಮಣರಿಗೆ ದಿಗ್ಭ್ರಮೆಯಾಗುವಂತೆ ಕೂಟಯುದ್ಧವನ್ನಾರಂಭಿಸಿ, ಆ ಸಹೋದರರರನ್ನು ಶರ ಪಂಜರದಿಂದ ಬಂಧಿಸಿದನು. ಪುರುಷಸಿಂಹರಾದ ಆ ವೀರರಿಬ್ಬರೂ ಸರ್ಪಾಸ್ತ್ರ ಬಂಧನದಿಂದ ಪರವಶರಾಗಿ ದೊಪ್ಪನೆ ಕೆಳಗೆ ಬಿದ್ದರು. ವಾನರಯೋಧರು ಆ ದೃಶ್ಯವನ್ನು ಕಂಡರು! (೩೮–೪೦). ತಾನು ಪ್ರತ್ಯಕ್ಷನಾಗಿ ಎದುರಿಗೆ ನಿಂತು ಯುದ್ಧಮಾಡಲಾರೆನೆಂದು ತೋರಿದೊಡನೆ, ದುರುಳನಾದ ಆ ರಾಕ್ಷಸೇಂದ್ರ ಪುತ್ರನು ಮಾಯಾಬಲವನ್ನಾಶ್ರಯಿಸಿದನು. ಹೀಗೆ ಕೂಟಯುದ್ಧದಿಂದ ಶ್ರೀರಾಮಲಕ್ಷ್ಮಣರನ್ನು ಬಂಧಿಸಿದನು (೪೧).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧ ಕಾಂಡದಲ್ಲಿ ನಲವತ್ತು ನಾಲ್ಕನೆಯ ಸರ್ಗ

---

## ಪಂಚಚತ್ವಾರಿಂಶಃ ಸರ್ಗಃ

ನಾಗಪಾಶಬಂಧಃ

**ಸ ತಸ್ಯ ಗತಿಮನ್ವಿಚ್ಛನ್ ರಾಜಪುತ್ರಃ ಪ್ರತಾಪವಾನ್ ।**
**ದಿದೇಶಾತಿಬಲೋ ರಾಮೋ ದಶ ವಾನರಯೂಥಪಾನ್ ॥** ೧

**ದ್ವೌ ಸುಷೇಣಸ್ಯ ದಾಯಾದೌ ನೀಲಂ ಚ ಪ್ಲವಗರ್ಷಭಮ್ ।**
**ಅಂಗದಂ ವಾಲಿಪುತ್ರಂ ಚ ಶರಭಂ ಚ ತರಸ್ವಿನಮ್ ॥** ೨

**ವಿನತಂ ಜಾಂಬವಂತಂ ಚ ಸಾನುಪ್ರಸ್ಥಂ ಮಹಾಬಲಮ್ ।**
**ಋಷಭಂ ಚರ್ಷಭಸ್ಕಂಧಮಾದಿದೇಶ ಪರಂತಪಃ ॥** ೩

**ತೇ ಸಂಪ್ರಹೃಷ್ಟಾ ಹರಯೋ ಭೀಮಾನುದ್ಯಮ್ಯ ಪಾದಪಾನ್ ।**
**ಆಕಾಶಂ ವಿವಿಶುಃ ಸರ್ವೇ ಮಾರ್ಗಮಾಣಾ ದಿಶೋದಶ ॥** ೪

**ತೇಷಾಂ ವೇಗವತಾಂ ವೇಗಮಿಷುಭಿರ್ವೇಗವತ್ತರೈಃ ।**
**ಅಸ್ತ್ರವಿತ್ಪರಮಾಸ್ತ್ರೈಸ್ತು ವಾರಯಾಮಾಸ ರಾವಣಿಃ ॥** ೫

### ಸರ್ಗ ೪೫

ಶ್ರೀರಾಮಲಕ್ಷ್ಮಣರು ನಾಗಪಾಶದಿಂದ ಬದ್ಧರಾಗುವುದು. *

ಪ್ರತಾಪಶಾಲಿಯಾದ ದಶರಥರಾಜತನಯನು ಮೇಘನಾದನೆಲ್ಲಿರುವನೆಂಬುದನ್ನು ಕಂಡುಹಿಡಿಯುವುದಕ್ಕಾಗಿ ಹತ್ತುಮಂದಿ ವಾನರವೀರರಿಗೆ ಆಜ್ಞೆಯನ್ನಿತ್ತನು. ಸುಷೇಣನ ಮಕ್ಕಳಿಬ್ಬರು, ನೀಲ, ಅಂಗದ, ಶರಭ, ವಿನತ, ಜಾಂಬವಂತ, ಸಾನುಪ್ರಸ್ಥ, ಋಷಭ, ಋಷಭಸ್ಕಂದ – ಈ ಹತ್ತು ಜನರಿಗೆ ಮೇಘನಾದನಿರುವ ಸ್ಥಳವನ್ನು ಗೊತ್ತುಮಾಡಬೇಕೆಂದು ಸೂಚಿಸಿದನು (೧–೩). ಆ ವೀರರು ಭೀಮಾಕಾರವಾದ ವೃಕ್ಷಗಳನ್ನೆತ್ತಿಹಿಡಿದು ಉತ್ಸಾಹದಿಂದ ಗಗನವನ್ನಡರಿ ದಶದಿಕ್ಕುಗಳನ್ನೂ ಶೋಧಿಸತೊಡಗಿದರು. ಅಸ್ತ್ರವಿದ್ಯಾವಿಶಾರದನಾದ ರಾವಣಿಯಾದರೋ ವೇಗಶಾಲಿಗಳಾದ ಆ ವಾನರರ ವೇಗವನ್ನು ವೇಗವತ್ತರಗಳಾದ ಶರಗಳಿಂದ ತರಿದು ಕುಂಠಿತಗೊಳಿಸಿದನು (೪–೫).

* ಹಿಂದಿನ ಸರ್ಗದ ಕಡೆಯಲ್ಲಿ ಹೇಳಿದ ಅಂಶವನ್ನೇ ಈ ಸರ್ಗದಲ್ಲಿ ವಿಸ್ತೃತವಾಗಿ ವರ್ಣಿಸಿದೆ.

ತೇ ಭೀಮವೇಗಾ ಹರಯೋ ನಾರಾಚೈಃ ಕ್ಷತಿವಿಗ್ರಹಾಃ ।
ಅಂಧಕಾರೇ ನ ದದೃಶುರ್ಮೇಘೈಃ ಸೂರ್ಯಮಿವಾವೃತಮ್ ॥ ೬

ರಾಮಲಕ್ಷ್ಮಣಯೋರೇವ ಸರ್ವದೇಹಭಿದಃ ಶರಾನ್ ।
ಭೃಶಮಾವೇಶಯಾಮಾಸ ರಾವಣಿಃ ಸಮಿತಿಂಜಯಃ ॥ ೭

ನಿರಂತರಶರೀರೌ ತೌ ಭ್ರಾತರೌ ರಾಮಲಕ್ಷ್ಮಣೌ ।
ಕ್ರುದ್ಧೇನೇಂದ್ರಜಿತಾ ವೀರೌ ಪನ್ನಗೈಃ ಶರತಾಂ ಗತೈಃ ॥ ೮

ತಯೋಃ ಕ್ಷತಜಮಾರ್ಗೇಣ ಸುಸ್ರಾವ ರುಧಿರಂ ಬಹು ।
ತಾವುಭೌ ಚ ಪ್ರಕಾಶೇತೇ ಪುಷ್ಪಿತಾವಿವ ಕಿಂಶುಕೌ ॥ ೯

ತತಃ ಪರ್ಯಂತರಕ್ತಾಕ್ಷೋ ಭಿನ್ನಾಂಜನಚಯೋಪಮಃ ।
ರಾವಣಿರ್ಭ್ರಾತರೌ ವಾಕ್ಯಮಂತರ್ಧಾನಗತೋಽಬ್ರವೀತ್ ॥ ೧೦

ಯುಧ್ಯಮಾನಮನಾಲಕ್ಷ್ಯಂ ಶಕ್ರೋಽಪಿ ತ್ರಿದಶೇಶ್ವರಃ ।
ದ್ರಷ್ಟುಮಾಸಾದಿತುಂ ವಾಪಿ ನ ಶಕ್ತಃ ಕಿಂ ಪುನರ್ಯುವಾಮ್ ॥ ೧೧

ಭೀಮಬಲರಾದ ಆ ವಾನರಯೋಧರ ದೇಹಗಳು ಸರಳುಗಳ ಇರಿತದಿಂದ ಗಾಯಗೊಂಡವೇ ಹೊರತು, ಆ ರಾಕ್ಷಸನು ಗೋಚರಿಸಲಿಲ್ಲ. ಮೋಡಗಳಲ್ಲಿ ಮರೆಯಾದ ರವಿಯಂತೆ ಮೇಘನಾದನು ಕತ್ತಲಲ್ಲಿ ಕಣ್ಮರೆಯಾಗಿದ್ದನು (೬). ಸಮರೋನ್ಮತ್ತನಾದ ಆ ಇಂದ್ರಜಿತುವು ದೇಹಗಳನ್ನು ಕತ್ತಿಕೊರೆಯುವ ಹರಿತ ವಾದ ಶರಗಳನ್ನು ರಾಮಲಕ್ಷ್ಮಣರಿಗೆ ಗುರಿಯಿಟ್ಟು ಹೊಡೆಯುತ್ತಲೇ ಇದ್ದನು. ಕ್ರೋಧಾವೇಶದಿಂದ ಅವನು ತೂರುತ್ತಿದ್ದ ಸರ್ಪಾಸ್ತ್ರಗಳು, ಸೋದರರಾದ ರಾಮಲಕ್ಷ್ಮಣರ ಶರೀರಗಳನ್ನು ತೆರಪಿಲ್ಲದಂತೆ ತಾಗಿದವು (೭–೮). ದೇಹ ದಲ್ಲಾದ ಗಾಯಗಳಿಂದ ನೆತ್ತರ ಹೊನಲು ಹರಿಯಿತು. ಅಣ್ಣ ತಮ್ಮಂದಿರಿಬ್ಬರೂ ಅರಳಿದ ಮುತ್ತುಗದ ಮರಗಳಂತೆ ಕಂಡರು (೯). ಕೆದರಿದ ಕಾಡಿಗೆಯ ರಾಶಿ ಯಂತೆ ಕಪ್ಪುಬಣ್ಣದ ಆ ಮೇಘನಾದನು ರೋಷತಾಮ್ರಾಕ್ಷನಾಗಿ ಕಣ್ಮರೆ ಯಾಗಿಯೇ ನಿಂತು, ಆ ಸೋದರರನ್ನು ಕುರಿತು "ಎಲೈ ರಘುವಂಶಸಂಜಾತರೆ, ನಾನು ಅದೃಶ್ಯನಾಗಿ ಯುದ್ಧವನ್ನಾರಂಭಿಸಿದರೆ ಸುರೇಶ್ವರನಾದ ಶಕ್ರನೂ ಸಹ ನನ್ನನ್ನು ನೋಡಲಾರ, ಬಳಿ ಸಾರಲಾರ! ಹೀಗಿರುವಾಗ ನಿಮ್ಮಿಂದ ಏನಾದೀತು? (೧೦–೧೧).

ಪ್ರಾವೃತಾವಿಷುಜಾಲೇನ ರಾಘವೌ ಕಂಕಪತ್ರಿಣಾ ।
ಏಷ ರೋಷಪರೀತಾತ್ಮಾ ನಯಾಮಿ ಯಮಸಾದನಮ್ ॥ ೧೨

ಏವಮುಕ್ತ್ವಾ ತು ಧರ್ಮಜ್ಞೌ ಭ್ರಾತರೌ ರಾಮಲಕ್ಷ್ಮಣೌ ।
ನಿರ್ಬಿಭೇದ ಶಿತೈರ್ಬಾಣೈಃ ಪ್ರಜಹರ್ಷ ನನಾದ ಚ ॥ ೧೩

ಭಿನ್ನಾಂಜನಚಯಶ್ಯಾಮೋ ವಿಸ್ಫಾರ್ಯ ವಿಪುಲಂ ಧನುಃ ।
ಭೂಯೋಭೂಯಃ ಶರಾನ್ ಘೋರಾನ್ ವಿಸಸರ್ಜ ಮಹಾಮೃಧೇ ॥

ತತೋ ಮರ್ಮಸು ಮರ್ಮಜ್ಞೋ ಮಜ್ಜಯನ್ನಿಶಿತಾನ್ ಶರಾನ್ ।
ರಾಮಲಕ್ಷ್ಮಣಯೋರ್ವೀರೋ ನನಾದ ಚ ಮುಹುರ್ಮುಹುಃ ॥ ೧೫

ಬದ್ಧೌ ತು ಶರಬಂಧೇನ ತಾವುಭೌ ರಣಮೂರ್ಧನಿ ।
ನಿಮೇಷಾಂತರಮಾತ್ರೇಣ ನ ಶೇಕತುರುದೀಕ್ಷಿತುಮ್ ॥ ೧೬

ತತೋ ವಿಭಿನ್ನಸರ್ವಾಂಗೌ ಶಂಶಲ್ಯಾಚಿತಾವುಭೌ ।
ಧ್ವಜಾವಿವ ಮಹೇಂದ್ರಸ್ಯ ರಜ್ಜುಮುಕ್ತೌ ಪ್ರಕಂಪಿತೌ ॥ ೧೭

ತೌ ಸಂಪ್ರಚಲಿತೌ ವೀರೌ ಮರ್ಮಭೇದೇನ ಕರ್ಶಿತೌ ।
ನಿಪೇತತುರ್ಮಹೇಷ್ವಾಸೌ ಜಗತ್ಯಾಂ ಜಗತೀಪತೀ ॥ ೧೮

---

ನಾನು ರೋಷಾವಿಷ್ಟನಾಗಿದ್ದೇನೆ. ಗರಿಗೆದರಿದ ನನ್ನ ಶರಜಾಲದಿಂದ ನಿಮ್ಮನ್ನು ತರಿದು, ಯಮಪುರಿಗೆ ಸಾಗಿಸುವೆನು!'' ಎಂದು ಕೂಗಿ ಹೇಳಿ, ನಿಶಿತಾಸ್ತ್ರಗಳಿಂದ ರಾಮಲಕ್ಷ್ಮಣರ ಮೈಯನ್ನು ಕೊರೆದು ಬೊಬ್ಬಿರಿದನು (೧೨–೧೩). ಕಾಡಿಗೆಯ ರಾಶಿಯಂತೆ ಕರಿಯನಾದ ಆ ಮೇಘನಾದನು ತನ್ನ ಮಹಾಧನುಸ್ಸನ್ನು ಎಳೆದೆಳೆದು ಕೂರ್ಗಣೆಗಳನ್ನು ಸುರಿಸಿದನು. ಆ ವೀರನು ಮರ್ಮಸ್ಥಾನಗಳಿಗೆ ಗುರಿಯಿಟ್ಟು ರಾಮಲಕ್ಷ್ಮಣರ ಮೇಲೆ ಶರಗಳನ್ನು ತೂರಿ ತೂರಿ ಮತ್ತೆ ಮತ್ತೆ ಸಿಂಹನಾದಮಾಡಿದನು (೧೪–೧೫). ಹೀಗೆ ಶರಪಂಜರದಿಂದ ಬಂಧಿತರಾದ ಆ ಸೋದರರಿಗೆ ಕ್ಷಣಮಾತ್ರದಲ್ಲಿ ಕಣ್ಣು ಕಾಣದಂತಾಗಿ ಪ್ರಜ್ಞೆತಪ್ಪಿತು. ಶರಗಳ ಮೊನೆಗಳಿಂದ ಅವರ ಸರ್ವಾಂಗಗಳೂ ಭೇದಿಸಲ್ಪಟ್ಟಿದ್ದವು. ಹಗ್ಗದ ಕಟ್ಟಿನಿಂದ ಸಡಿಲಿಸಿದ ಇಂದ್ರಧ್ವಜಗಳಂತೆ ಅವರೀರ್ವರೂ ಒಲೆದರು (೧೬–೧೭). ಮಹಾಧನುರ್ಧಾರಿಗಳಾಗಿ ಜಗತ್ಪತಿಗಳೆನಿಸಿದ ರಾಮಲಕ್ಷ್ಮಣರು ಮರ್ಮಸ್ಥಳಗಳಲ್ಲಾದ ಗಾಯಗಳಿಂದ ನೊಂದು ತತ್ತರಿಸಿ ತೇಲುತ್ತ

ತೌ ವೀರಶಯನೇ ವೀರೌ ಶಯಾನೌ ರುಧಿರೋಕ್ಷಿತೌ ।
ಶರವೇಷ್ಟಿತಸರ್ವಾಂಗಾವಾರ್ತೌ ಪರಮಪೀಡಿತೌ ॥ ೧೯

ನ ಹ್ಯವಿದ್ಧಂ ತಯೋರ್ಗಾತ್ರೇ ಬಭೂವಾಂಗುಲಮಂತರಮ್ ।
ನಾನಿರ್ಭಿನ್ನಂ ನ ಚಾಸ್ತಬ್ಧಮಾಕರಾಗ್ರಾದಜಿಹ್ಮಗೈಃ ॥ ೨೦

ತೌ ತು ಕ್ರೂರೇಣ ನಿಹತೌ ರಕ್ಷಸಾ ಕಾಮರೂಪಿಣಾ ।
ಅಸೃಕ್ ಸುಸ್ರುವತುಸ್ತೀವ್ರಂ ಜಲಂ ಪ್ರಸ್ರವಣಾವಿವ ॥ ೨೧

ಪಪಾತ ಪ್ರಥಮಂ ರಾಮೋ ವಿದ್ಧೋ ಮರ್ಮಸು ಮಾರ್ಗಣೈಃ ।
ಕ್ರೋಧಾದಿಂದ್ರಜಿತಾ ಯೇನ ಪುರಾ ಶಕ್ರೋ ವಿನಿರ್ಜಿತಃ ॥ ೨೨

ರುಕ್ಮಪುಂಖೈಃ ಪ್ರಸನ್ನಾಗ್ರೈರಧೋಗತಿಭಿರಾಶುಗೈಃ ।
ನಾರಾಚೈರರ್ಧನಾರಾಚೈರ್ಭಲ್ಲೈರಂಜಲಿಕೈರಪಿ ॥ ೨೩

ವಿವ್ಯಾಧ ವತ್ಸದಂತೈಶ್ಚ ಸಿಂಹದಂಷ್ಟ್ರೈಃ ಕ್ಷುರೈಸ್ತಥಾ ।
ಸ ವೀರಶಯನೇ ಶಿಶ್ಯೇಽವಿಜ್ಯಮಾದಾಯ ಕಾರ್ಮುಕಮ್ ॥ ೨೪

---

ನೆಲದಲ್ಲಿ ಬಿದ್ದರು. ನೆತ್ತರಲ್ಲಿ ನೆನೆದ ಆ ವೀರರು ರಣಭೂಮಿಯೆನಿಸಿದ ರಣರಂಗದಲ್ಲಿ ಮಲಗಿದರು. ಸರ್ವಾಂಗಗಳೂ ಶರಹತಿಯಿಂದ ಜರ್ಝರಿತವಾಗಿದ್ದವು (೧೮–೧೯). ಅವರ ಮೈಯಲ್ಲಿ ಕರಾಗ್ರದಿಂದ ಹಿಡಿದು, ನಾಗಾಸ್ತ್ರಗಳಿಂದ ಕೊರೆಯಲ್ಪಡದ – ತರಿಯಲ್ಪಡದ ಗಾಯವಿಲ್ಲದ ಕಿರುಬೆರಳಿನಷ್ಟು ಜಾಗವೂ ಇರಲಿಲ್ಲ! ಕ್ರೂರನೂ ಕಾಮರೂಪಿಯೂ ಆದ ಆ ರಾಕ್ಷಸನಿಂದ ಭಿನ್ನಗಾತ್ರರಾದ ರಾಮಲಕ್ಷ್ಮಣರ ದೇಹಗಳಿಂದ, ಪ್ರಸ್ರವಣಪರ್ವತದಿಂದ ಹರಿಯುವ ತೊರೆಗಳಂತೆ ರಕ್ತಪ್ರವಾಹಗಳು ಸುರಿದವು (೨೦–೨೧). ಹಿಂದೆ ದೇವೇಂದ್ರನನ್ನೇ ಸೋಲಿಸಿದ್ದ ಮೇಘನಾದನು ರೋಷಾವೇಶದಿಂದ ಹೊಡೆದ ಸರ್ಪಾಸ್ತ್ರಗಳಿಂದ ಶ್ರೀರಾಮನು ಭಿನ್ನಾಂಗನಾಗಿ ಮೊದಲು ಬಿದ್ದನು. ಸುವರ್ಣಪುಂಖಿತಗಳೂ ಸಾಣೆಯಿಟ್ಟು ಹದಮಾಡಿದ ಅಲಗುಳ್ಳವೂ ಆದ ನಾರಾಚ, ಅರ್ಧನಾರಾಚ, ಭಲ್ಲ, ಅಂಜಲಿಕ, ವತ್ಸದಂತ, ಸಿಂಹದಂಷ್ಟ್ರ, ಕ್ಷುರ – ಮುಂತಾದ ನಿಶಿತಾಸ್ತ್ರಗಳನ್ನು ಇಂದ್ರಜಿತುವು ಕೆಳಮುಖವಾಗಿ ರಭಸದಿಂದ ಹೊಡೆಯುತ್ತಿದ್ದನು (೨೨–೨೩). ಶ್ರೀರಾಮನು ವೀರಶಯನದಲ್ಲಿ ಮಲಗಿದಾಗ ಹೆದೆಯೇರಿಸಿದ ಕೋದಂಡವು ಕೈಯಲ್ಲಿತ್ತು. ಉಭಯಪಾರ್ಶ್ವಗಳಲ್ಲಿಯೂ ಮಧ್ಯದಲ್ಲಿಯೂ–

ಭಿನ್ನಮುಷ್ಟಿಪರೀಣಾಹಂ ತ್ರಿನತಂ ರತ್ನಭೂಷಿತಮ್ ।
ಬಾಣಪಾತಾಂತರೇ ರಾಮಂ ಪತಿತಂ ಪುರುಷರ್ಷಭಮ್ ॥ ೨೫

ಸ ತತ್ರ ಲಕ್ಷ್ಮಣೋ ದೃಷ್ಟ್ವಾ ನಿರಾಶೋ ಜೀವಿತೇಽಭವತ್ ।
ರಾಮಂ ಕಮಲಪತ್ರಾಕ್ಷಂ ಶರಬಂಧಪರಿಕ್ಷತಮ್ ॥ ೨೬

ಶುಶೋಚ ಭ್ರಾತರಂ ದೃಷ್ಟ್ವಾ ಪತಿತಂ ಧರಣೀತಲೇ ।
ಹರಯಶ್ಚಾಪಿ ತಂ ದೃಷ್ಟ್ವಾ ಸಂತಾಪಂ ಪರಮಂ ಗತಾಃ ॥ ೨೭

ಶೋಕಾರ್ತಾಶ್ಚು ಕ್ರುಶುರ್ಘೋರಮಶ್ರುಪೂರಿತಲೋಚನಾಃ ॥

ಬದ್ಧೌ ತು ವೀರೌ ಪತಿತೌ ಶಯಾನೌ
ತೌ ವಾನರಾಃ ಸಂಪರಿವಾರ್ಯ ತಸ್ಥುಃ ।
ಸಮಾಗತಾ ವಾಯುಸುತಪ್ರಮುಖ್ಯಾ
ವಿಷಾದಮಾರ್ತಾಃ ಪರಮಂ ಚ ಜಗ್ಮುಃ ॥ ೨೮

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚಚತ್ವಾರಿಂಶಃ ಸರ್ಗಃ

---

ಹೀಗೆ ಮೂರು ಕಡೆ ಬಾಗಿದ್ದ ರತ್ನ ಭೂಷಿತವಾದ ಆ ಧನುಸ್ಸು ಮೆಲ್ಲಮೆಲ್ಲಗೆ ಶ್ರೀರಾಮನ ಮುಷ್ಟಿಯಿಂದ ಸಡಿಲಿತು (೨೪). ಹೀಗೆ ಶರತಲ್ಪದಲ್ಲಿ ಮಲಗಿದ ಪುರುಷೋತ್ತಮನನ್ನು ಕಂಡು ಲಕ್ಷ್ಮಣನು ತನ್ನ ಪ್ರಾಣದಲ್ಲಿ ಆಸೆಯನ್ನು ತೊರೆದನು. ಕಮಲದಳಾಯತಾಕ್ಷನಾದ ಅಣ್ಣನು ನಾಗಪಾಶದಿಂದ ಬಂಧಿತನಾಗಿ ನೆಲದಮೇಲೊರಗಿದುದನ್ನು ಕಂಡು ಲಕ್ಷ್ಮಣನು ದುಃಖಾಕ್ರಾಂತನಾದನು. ವಾನರರಿಗೆ ಶೋಕವು ಒತ್ತರಿಸಿತು. ಅವರು ಕಣ್ಣೀರಿಡುತ್ತ ಗೋಳಾಡಲಾರಂಭಿಸಿದರು (೨೫–೨೭). (ಕಡೆಗೆ ಲಕ್ಷ್ಮಣನೂ ಮೂರ್ಛಿತನಾಗಿ ಬೀಳಲು) ವಾನರರು ಆ ವೀರರಿಬ್ಬರನ್ನೂ ಸುತ್ತುಗಟ್ಟಿ ನಿಂತರು. ಹನುಮಂತನೇ ಮೊದಲಾದ ಕಪಿವೀರರು ಆಗಮಿಸಿದರು. ನಾಗಪಾಶಬದ್ಧರಾದ ರಾಮಲಕ್ಷ್ಮಣರನ್ನು ನೋಡಿ ಅವರೆಲ್ಲರೂ ವಿಷಣ್ಣರಾಗಿ ಮಹಾವ್ಯಸನದಲ್ಲಿ ಮುಳುಗಿದರು (೨೮).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ನಲವತ್ತೈದನೆಯ ಸರ್ಗ

---

## ಷಟ್‌ಚತ್ವಾರಿಂಶಃ ಸರ್ಗಃ

ಸುಗ್ರೀವಾದ್ಯನುಶೋಕಃ

ತತೋ ದ್ಯಾಂ ಪೃಥಿವೀಂ ಚೈವ ವೀಕ್ಷಮಾಣಾ ವನೌಕಸಃ ।
ದದೃಶುಃ ಸಂತತೌ ಬಾಣೈರ್ಭ್ರಾತರೌ ರಾಮಲಕ್ಷ್ಮಣೌ ॥ ೧

ವೃಷ್ಟ್ವೇವೋಪರತೇ ದೇವೇ ಕೃತಕರ್ಮಣಿ ರಾಕ್ಷಸೇ ।
ಆಜಗಾಮಾಥ ತಂ ದೇಶಂ ಸಸುಗ್ರೀವೋ ವಿಭೀಷಣಃ ॥ ೨

ನೀಲದ್ವಿವಿದಮೈಂದಾಶ್ಚ ಸುಷೇಣಕುಮುದಾಂಗದಾಃ ।
ತೂರ್ಣಂ ಹನುಮತಾ ಸಾರ್ಧಮನ್ವಶೋಚಂತ ರಾಘವೌ ॥ ೩

ಅಚೇಷ್ಟೌ ಮಂದನಿಃಶ್ವಾಸೌ ಶೋಣಿತೌಘಪರಿಪ್ಲುತೌ ।
ಶರಜಾಲಾಚಿತೌ ಸ್ತಬ್ಧೌ ಶಯಾನೌ ಶರತಲ್ಪಯೋಃ ॥ ೪

ನಿಃಶ್ವಸಂತೌ ಯಥಾ ಸರ್ಪೌ ನಿಶ್ಚೇಷ್ಟೌ ಮಂದವಿಕ್ರಮೌ ।
ರುಧಿರಸ್ರಾವದಿಗ್ಧಾಂಗೌ ತಾಪನೀಯಾವಿವ ಧ್ವಜೌ ॥ ೫

### ಸರ್ಗ ೪೬

ಸುಗ್ರೀವಾದಿಗಳ ಶೋಕ. ವಿಭೀಷಣನ ಸಮಾಧಾನ. ಹರ್ಷೋನ್ಮತ್ತನಾದ
ಇಂದ್ರಜಿತುವಿನ ಲಂಕಾಪ್ರವೇಶ.

ಆಮೇಲೆ ವಾನರರು (ಭಯದಿಂದ) ಭೂಮ್ಯಾಕಾಶಗಳನ್ನು ವೀಕ್ಷಿಸುತ್ತ ಇತ್ತಲಾಗಿ ಬಾಣವಿಭಿನ್ನಗಾತ್ರರಾಗಿ ಮಲಗಿದ್ದ ಸೋದರರಾದ ರಾಮಲಕ್ಷ್ಮಣರನ್ನು ನೋಡುತ್ತ ನಿಂತರು. ಮಳೆಗರೆದು ವಿರಮಿಸುವ ಮೇಘದಂತೆ ಮೇಘನಾದನು ಶರವೃಷ್ಟಿಯನ್ನು ಸುರಿಸಿ ಸುಮ್ಮನಾಗಲು, ವಿಭೀಷಣನು ಸುಗ್ರೀವ ಸಹಿತನಾಗಿ ಆ ಸ್ಥಳಕ್ಕೆ ಬಂದನು (೧–೨). ನೀಲ ದ್ವಿವಿದ ಮೈಂದರೂ ಸುಷೇಣ ಕುಮುದಾಂಗದರೂ ಹನುಮಂತನೂ ತ್ವರೆಯಿಂದ ಧಾವಿಸುತ್ತ ಬಂದು ರಾಮಲಕ್ಷ್ಮಣರನ್ನು ನೋಡಿ ಶೋಕಾವಿಷ್ಟರಾದರು. ಆ ಅಣ್ಣತಮ್ಮಂದಿರು ಮೆಲ್ಲಗೆ ಉಸಿರಾಡಿಸುತ್ತ ಅಲುಗಾಡದೆ ಮಲಗಿದ್ದರು, ನೆತ್ತರಲ್ಲಿ ನೆನೆದಿದ್ದರು. ಶರಜಾಲಗಳು ನಾಟಿ ಸರಿದಾಡದಂತೆ ಶರತಲ್ಪದಲ್ಲಿ ಶಯಿಸಿದ್ದರು (೩–೪). ಸರ್ಪಗಳಂತೆ ನಡುನಡುವೆ ನಿಡಿದಾಗಿ ಉಸಿರೆಳೆಯುತ್ತ ಉಡುಗಿದ ಚೈತನ್ಯವುಳ್ಳವರಾಗಿ

ತೌ ವೀರಶಯನೇ ವೀರೌ ಶಯಾನೌ ಮಂದಚೇಷ್ಟಿತೌ ।
ಯೂಥಪೈಸ್ಸೈಃ ಪರಿವೃತೌ ಬಾಷ್ಪವ್ಯಾಕುಲಲೋಚನೈಃ ॥ ೬

ರಾಘವೌ ಪತಿತೌ ದೃಷ್ಟ್ವಾ ಶರಜಾಲಸಮಾವೃತೌ ।
ಬಭೂವುರ್ವ್ಯಥಿತಾಃ ಸರ್ವೇ ವಾನರಾಃ ಸವಿಭೀಷಣಾಃ ॥ ೭

ಅಂತರಿಕ್ಷಂ ನಿರೀಕ್ಷಂತೋ ದಿಶಃ ಸರ್ವಾಶ್ಚ ವಾನರಾಃ ।
ನ ಚೈನಂ ಮಾಯಯಾ ಛನ್ನಂ ದದೃಶೂ ರಾವಣಿಂ ರಣೇ ॥ ೮

ತಂ ತು ಮಾಯಾಪ್ರತಿಚ್ಛನ್ನಂ ಮಾಯಯೈವ ವಿಭೀಷಣಃ ।
ವೀಕ್ಷಮಾಣೋ ದದರ್ಶಾಥ ಭ್ರಾತುಃ ಪುತ್ರಮವಸ್ಥಿತಮ್ ॥ ೯

ತಮಪ್ರತಿಮಕರ್ಮಾಣಮಪ್ರತಿದ್ವಂದ್ವಮಾಹವೇ ।
ದದರ್ಶಾಂತರ್ಹಿತಂ ವೀರಂ ವರದಾನಾದ್ವಿಭೀಷಣಃ ॥ ೧೦

ತೇಜಸಾ ಯಶಸಾ ಚೈವ ವಿಕ್ರಮೇಣ ಚ ಸಂಯುತಮ್ ।
ಇಂದ್ರಜಿತ್ತ್ವಾತ್ಮನಃ ಕರ್ಮ ತೌ ಶಯಾನೌ ಸಮೀಕ್ಷ್ಯ ಚ ॥ ೧೧

---

ನಿಶ್ಚೇಷ್ಟರಾಗಿದ್ದರು. ರುಧಿರದಿಗ್ಧಾಂಗರಾದ್ದರಿಂದ ಮಲಗಿಸಿದ ಬಂಗಾರದ ಧ್ವಜ ಸ್ತಂಭಗಳಂತೆ ಕಾಣುತ್ತಿದ್ದರು (೫). ವೀರಶಯನದಲ್ಲಿ ಕದಲದೆ ಮಲಗಿದ್ದ ಆ ವೀರರೀರ್ವರ ಸುತ್ತಲೂ ಕಣ್ಣೀರು ಮಿಡಿಯುತ್ತ ವಾನರನಾಯಕರು ನೆರೆದರು. ಶರೀರದ ಎಲ್ಲೆಡೆಯೂ ಸರಳುಗಳು ತೂರಿದ್ದರಿಂದ ಉರುಳಿದ ರಾಮ ಲಕ್ಷ್ಮಣರನ್ನು ನೋಡಿ ಸಮಸ್ತ ವಾನರರೂ ವಿಭೀಷಣನೂ ವ್ಯಥೆಯಿಂದ ಖಿನ್ನ ರಾದರು (೬–೭). ಆ ಕಪಿವೀರರು ಒಮ್ಮೆ ಅಂತರಿಕ್ಷದ ಕಡೆಗೆ ನೋಡುವರು; ಒಮ್ಮೆ ಸುತ್ತಲೂ ಸಕಲ ದಿಕ್ಕುಗಳನ್ನೂ ಅವಲೋಕಿಸುವರು. ಆದರೆ ಮಾಯೆ ಯಿಂದ ಮರೆಯಾಗಿದ್ದ ಮೇಘನಾದನು ಮಾತ್ರ ಕಾಣಿಸಲಿಲ್ಲ! ಆಗ ವಿಭೀಷಣನು ತನ್ನ ಮಾಯಾಶಕ್ತಿಯ ನೆರವಿನಿಂದ ನೋಡಲು, ಅವನ ಅಣ್ಣನ ಮಗನಾದ ರಾವಣಿಯು ಮಾಯಾಬಲದಿಂದ ಅಡಗಿ ಒಂದೆಡೆ ನಿಂತಿರುವುದು ಗೋಚರಿಸಿತು! (೮–೯). ಅಸಾಧಾರಣವಾದ ಘೋರಕೃತ್ಯವನ್ನೆಸಗಬಲ್ಲವನೂ ರಣದಲ್ಲಿ ಎದು ರಿಲ್ಲದ ವೀರನೂ ವರಬಲದಿಂದ ಅಂತರ್ಹಿತನೂ ತೇಜಸ್ವಿಯೂ ಯಶಸ್ವಿಯೂ ವಿಕ್ರಾಂತನೂ ಆದ ಇಂದ್ರಜಿತುವು ವಿಭೀಷಣನಿಗೆ ಸ್ಪಷ್ಟವಾಗಿ ಗೋಚರಿಸಿದನು (೧೦). ಅಷ್ಟರಲ್ಲಿ ಇಂದ್ರಜಿತುವು ಸರ್ಪಾಸ್ತ್ರಗಳ ಬಲದಿಂದ ತಾನೆಸಗಿದ ಅದ್ಭುತ

ಉವಾಚ ಪರಮಪ್ರೀತೋ ಹರ್ಷಯನ್ ಸರ್ವನೈರ್ಋತಾನ್ ।
ದೂಷಣಸ್ಯ ಚ ಹಂತಾರೌ ಖರಸ್ಯ ಚ ಮಹಾಬಲೌ ॥ ೧೨

ಸಾದಿತೌ ಮಾಮಕೈರ್ಬಾಣೈರ್ಭ್ರಾತರೌ ರಾಮಲಕ್ಷ್ಮಣೌ ।
ನೇಮೌ ಮೋಕ್ಷಯಿತುಂ ಶಕ್ಯವೇತಸ್ಮಾದಿಷುಬಂಧನಾತ್ ॥ ೧೩

ಸರ್ವೈರಪಿ ಸಮಾಗಮ್ಯ ಸರ್ಷಿಸಂಘೈಃ ಸುರಾಸುರೈಃ ।
ಯತ್ಕೃತೇ ಚಿಂತಯಾನಸ್ಯ ಶೋಕಾರ್ತಸ್ಯ ಪಿತುರ್ಮಮ ॥ ೧೪

ಅಸ್ಪೃಷ್ಟ್ವಾ ಶಯನಂ ಗಾತ್ರೈಸ್ತ್ರಿಯಾಮಾ ಯಾತಿ ಶರ್ವರೀ ।
ಕೃತ್ಸ್ನೇಯಂ ಯತ್ಕೃತೇ ಲಂಕಾ ನದೀ ವರ್ಷಾಸ್ವಿವಾಕುಲಾ॥ ೧೫

ಸೋಽಯಂ ಮೂಲಹರೋಽನರ್ಥಃ ಸರ್ವೇಷಾಂ ನಿಹತೋ ಮಯಾ
ರಾಮಸ್ಯ ಲಕ್ಷ್ಮಣಸ್ಯಾಪಿ ಸರ್ವೇಷಾಂ ಚ ವನೌಕಸಾಮ್ ॥ ೧೬

---

ಕೃತ್ಯವನ್ನು ನೆನೆದು, ಎಚ್ಚರದಪ್ಪಿ ಮಲಗಿದ್ದ ರಾಮಲಕ್ಷ್ಮಣಕನ್ನು ನೋಡಿ ಆನಂದದಿಂದ ಉಬ್ಬಿದನು. ಸಮಸ್ತ ರಾಕ್ಷಸರೂ ಸಂತೋಷಪಡುವಂತೆ ಆತನು "ಎಲೈ ರಾಕ್ಷಭಟರೆ, ನೋಡಿರಿ! ಖರದೂಷಣಾದಿಗಳನ್ನು ಕೊಂದು ತಾವೇ ಬಲಶಾಲಿಗಳೆಂದು ಮೆರೆಯುತ್ತಿದ್ದ ರಾಮಲಕ್ಷ್ಮಣರನ್ನು ನನ್ನ ಬಾಣಗಳಿಂದ ಹೊಡೆದುರುಳಿಸಿದ್ದೇನೆ ! (೧೧–೧೨). ಈ ನಾಗಪಾಶಬಂಧನದಿಂದ ಇವರನ್ನು ಬಿಡಿಸಲು ಯಾರಿಗೂ ಸಾಧ್ಯವಿಲ್ಲ. ಋಷಿಸಂಘಗಳೇ ಸಂಘಟಿಸಿದರೂ ಸುರಾಸುರರೇ ಒಟ್ಟುಗೂಡಿದರೂ ಇವರನ್ನು ಉಳಿಸಲಾರರು! ಇವರಿಬ್ಬರಿ ಗೋಸುಗವೇ ನನ್ನ ತಂದೆಯು ಚಿಂತೆಯಿಂದ ಪರಿತಪಿಸುತ್ತ ನಿದ್ರಿಸುತ್ತಿರಲಿಲ್ಲ ! ಹಾಸಿಗೆಗೆ ಮೈಯನ್ನು ಸೋಕಿಸದೆ ರಾತ್ರಿಯೆಲ್ಲವನ್ನೂ ಜಾಗರಣೆಯಿಂದ ಕಳೆಯುತ್ತಿದ್ದನು ! (೧೩–೧೪). ಯಾರ ನಿಮಿತ್ತವಾಗಿ ಲಂಕಾನಗರಿಯೆಲ್ಲವೂ ಮಳೆಗಾಲದ ಹೊಳೆಯಂತೆ ಕಲಕಿಹೋಯಿತೋ, ಅಂಥ ಅನರ್ಥಕಾರಿಯಾದ ರಾಮನನ್ನು ತೊಡೆದುಹಾಕಿದ್ದೇನೆ ! ನಮ್ಮೆಲ್ಲರಿಗೂ ಮೂಲಘಾತುಕವಾದ ವಿಪತ್ತನ್ನು ಅಳಿಸಿಹಾಕಿದ್ದೇನೆ! ರಾಮಲಕ್ಷ್ಮಣರೂ ಸಮಸ್ತ ವಾನರರೂ ಸೇರಿ ತೋರಿದ ಸೇತುಬಂಧನಾದಿ ಸಕಲ ವಿಕ್ರಮಗಳೂ ಇನ್ನು ನಿಷ್ಫಲವಾದವು. ಶರತ್ಕಾಲದ ಮೋಡಗಳಂತೆ ಕರಗಿಹೋದವು!" ಎಂದು ಹೇಳಿದನು (೧೫–೧೬).

ವಿಕ್ರಮಾನಿಷ್ಫಲಾಃ ಸರ್ವೇ ಯಥಾ ಶರದಿ ತೋಯದಾಃ ।
ಏವಮುಕ್ತ್ವಾತು ತಾನ್ ಸರ್ವಾನ್ ರಾಕ್ಷಸಾನ್ ಪರಿಪಾರ್ಶ್ವತಃ ॥ ೧೭

ಯೂಥಪಾನಪಿ ತಾನ್ ಸರ್ವಾಂಸ್ತಾಡಯಾಮಾಸ ರಾವಣಿಃ ।
ನೀಲಂ ನವಭಿರಾಹತ್ಯ ಮೈಂದಂ ಚ ದ್ವಿವಿದಂ ತಥಾ ॥ ೧೮

ತ್ರಿಭಿಸ್ತ್ರಿಭಿರಮಿತ್ರಘ್ನಸ್ತತಾಪ ಪ್ರವರೇಷುಭಿಃ ।
ಜಾಂಬವಂತಂ ಮಹೇಶಷ್ವಾಸೋ ವಿದ್ಧ್ವಾಬಾಣೇನ ವಕ್ಷಸಿ ॥ ೧೯

ಹನೂಮತೋ ವೇಗವತೋ ವಿಸಸರ್ಜ ಶರಾನ್ ದಶ ।
ಗವಾಕ್ಷಂ ಶರಭಂ ಚೈವ ದ್ವಾವಪ್ಯಮಿತತೇಜಸೌ ॥ ೨೦

ದ್ವಾಭ್ಯಾಂ ದ್ವಾಭ್ಯಾಂ ಮಹಾವೇಗೋ ವಿವ್ಯಾಧ ಯುಧಿ ರಾವಣಿಃ ।
ಗೋಲಾಂಗೂಲೇಶ್ವರಂ ಚೈವ ವಾಲಿಪುತ್ರಥಾಂಗದಮ್ ॥ ೨೧

ವಿವ್ಯಾಧ ಬಹುಭಿರ್ಬಾಣೈಸ್ತ್ವರಮಾಣೋಽಥ ರಾವಣಿಃ ।
ತಾನ್ ವಾನರವರಾನ್ ಭಿತ್ತ್ವಾಶರೈರಗ್ನಿಶಿಖೋಪಮೈಃ ॥ ೨೨

ನನಾದ ಬಲವಾಂಸ್ತತ್ರ ಮಹಾಸತ್ತ್ವಃ ಸ ರಾವಣಿಃ ।
ತಾನರ್ದಯಿತ್ವಾ ಬಾಣೌಘೈಸ್ತ್ರಾಸಯಿತ್ವಾ ಚ ವಾನರಾನ್ ॥ ೨೩

---

ಸುತ್ತಲೂ ಇದ್ದ ರಾಕ್ಷಸರಿಗೆ ಹೀಗೆ ಕೂಗಿಹೇಳಿ ಆ ರಾವಣಿಯು ವಾನರನಾಯಕರನ್ನು ಥಳಿಸಲಾರಂಭಿಸಿದನು! ಶತ್ರುವಿಧ್ವಂಸಿಯಾದ ಆ ಶೂರನು ಒಂಬತ್ತು ಬಾಣಗಳಿಂದ ನೀಲನನ್ನು ಹೊಡೆದು, ಮೂರು ಮೂರು ಬಾಣಗಳಿಂದ ಮೈಂದದ್ವಿವಿದರನ್ನು ಕಂಗೆಡಿಸಿ, ಜಾಂಬವಂತನ ಎದೆಯಲ್ಲಿ ಒಂದು ಬಾಣವನ್ನು ನೆಟ್ಟನು (೧೭–೧೯). ಆ ಮೇಘನಾದನು ಹನುಮಂತನ ಮೇಲೆ ಹತ್ತು ಕೂರಂಬುಗಳನ್ನು ಪ್ರಯೋಗಿಸಿ ಎರಡೆರಡು ಅಂಬುಗಳನ್ನು ಗವಾಕ್ಷಶರಭರಮೇಲೆ ಹೊಡೆದನು. ಹಸ್ತಲಾಘವದಿಂದ ಆ ರಾವಣಿಯು ಶರರಾಶಿಗಳನ್ನು ಪ್ರಯೋಗಿಸಿ ಕಪೀಶ್ವರನಾದ ಸುಗ್ರೀವನನ್ನೂ ವಾಲಿಪುತ್ರನಾದ ಅಂಗದನನ್ನೂ ಕಂಗೆಡಿಸಿದನು (೨೦–೨೧). ಬಲಾಢ್ಯನೂ ಧೀರನೂ ಆದ ಇಂದ್ರಜಿತುವು ಶರಜಾಲಗಳಿಂದ ಆ ಕಪಿಯೋಧರನ್ನು ಕಂಗೆಡಿಸಿ ಬೊಬ್ಬಿರಿದು ಅಟ್ಟಹಾಸದಿಂದ ಮೂದಲಿಸಿದನು. ಆತನು ತನ್ನ ಪಕ್ಷದ

ಪ್ರಜಹಾಸ ಮಹಾಬಾಹುರ್ವಚನಂ ಚೇದಮಬ್ರವೀತ್ ।
ಶರಬಂಧೇನ ಘೋರೇಣ ಮಯಾ ಬದ್ಧೌ ಚಮೂಮುಖೇ ॥ ೨೪

ಸಹಿತೌ ಭ್ರಾತರಾವೇತೌ ನಿಶಾಮಯತ ರಾಕ್ಷಸಾಃ ।
ಏವಮುಕ್ತಾಸ್ತು ತೇ ಸರ್ವೇ ರಾಕ್ಷಸಾಃ ಕೂಟಯೋಧಿನಃ ॥ ೨೫

ಪರಂ ವಿಸ್ಮಯಮಾಜಗ್ಮುಃ ಕರ್ಮಣಾ ತೇನ ಹರ್ಷಿತಾಃ ।
ವಿನೇದುಶ್ಚ ಮಹಾನಾದಾನ್ ಸರ್ವತೋ ಜಲದೋಪಮಾಃ ॥ ೨೬

ಹತೋ ರಾಮ ಇತಿ ಜ್ಞಾತ್ವಾ ರಾವಣಂ ಸಮಪೂಜಯನ್ ।
ನಿಷ್ಪಂದೌ ತು ತದಾ ದೃಷ್ಟ್ವಾ ತಾವುಭೌ ರಾಮಲಕ್ಷ್ಮಣೌ ॥ ೨೭

ವಸುಧಾಯಾಂ ನಿರುಚ್ಛ್ವಾಸೌ ಹತಾವಿತ್ಯನ್ವಮನ್ಯತ ।
ಹರ್ಷೇಣ ತು ಸಮಾವಿಷ್ಟ ಇಂದ್ರಜಿತ್ಸಮಿತಿಂಜಯಃ ॥ ೨೮

ಪ್ರವಿವೇಶ ಪುರೀಂ ಲಂಕಾಂ ಹರ್ಷಯನ್ ಸರ್ವರಾಕ್ಷಸಾನ್ ।
ರಾಮಲಕ್ಷ್ಮಣಯೋರ್ದೃಷ್ಟ್ವಾ ಶರೀರೇ ಸಾಯಕೈಶ್ಚಿತೇ ॥ ೨೯

ಸರ್ವಾಣಿ ಚಾಂಗೋಪಾಂಗಾನಿ ಸುಗ್ರೀವಂ ಭಯಮಾವಿಶತ್ ।
ತಮುವಾಚ ಪರಿತ್ರಸ್ತಂ ವಾನರೇಂದ್ರಂ ವಿಭೀಷಣಃ ॥ ೩೦

---

ರಾಕ್ಷಸರನ್ನು ಕುರಿತು "ಎಲೈ ಭಟರೆ, ರಣರಂಗದಲ್ಲಿ ಈ ರಾಮಲಕ್ಷ್ಮಣರನ್ನು ಘೋರವಾದ ಶರಬಂಧನದಿಂದ ಬಿಗಿದುಹಾಕಿದ್ದೇನೆ (೨೨–೨೪). ಈ ಸಹೋದರರನ್ನು ನೀವೆಲ್ಲರೂ ಒಮ್ಮೆ ನೋಡಿರಿ !" ಎಂದು ನುಡಿದನು. ಕೂಟಯೋಧಿಗಳಾದ ಈ ರಾಕ್ಷಸರು ಮೇಘನಾದನ ಸಾಹಸವನ್ನು ಕಂಡು ಬೆರಗಾದರು. ಮೋಡಗಳು ಗುಡುಗುವಂತೆ ಹರ್ಷದಿಂದ ಸಿಂಹನಾದಮಾಡಿದರು (೨೫–೨೬). ಶ್ರೀರಾಮನು ಹತನಾದನೆಂಬ ನಂಬಿಕೆಯಿಂದ ರಾವಣನೆಯನ್ನು ಹೊಗಳಿದರು. ರಾಮಲಕ್ಷ್ಮಣರಿಬ್ಬರೂ ನಿಶ್ಚಲರಾಗಿ ಉಸಿರಾಡದೆ ನೆಲದಲ್ಲಿ ಮಲಗಿರುವುದನ್ನು ಕಂಡು, ಇಂದ್ರಜಿತುವೂ ಸಹ ಅವರು ಮೃತರಾದರೆಂದೇ ತಿಳಿದುಕೊಂಡನು. ಜಯಶಾಲಿಯಾದ ಆತನ ಆನಂದಕ್ಕೆ ಪಾರವಿಲ್ಲವಾಯಿತು (೨೭–೨೮). ರಾಕ್ಷಸರೊಡನೆ ಸಂತೋಷದ ಸಂಭ್ರಮದಿಂದ ಲಂಕೆಯನ್ನಾತನು ಪ್ರವೇಶಿಸಿದನು. ಇತ್ತ ರಾಮಲಕ್ಷ್ಮಣರ ಸರ್ವಾಂಗಗಳೂ ಗಾಯಗೊಂಡು ಸಾಯಕಗಳಿಂದ ವ್ಯಾಪ್ತವಾಗಿರುವುದನ್ನು ಕಂಡು ಸುಗ್ರೀವನಿಗೆ ಹೆದರಿಕೆ ಹುಟ್ಟಿತು (೨೯). ಮುಖದಮೇಲೆ ಕಣ್ಣೀರು ಹರಿಯಿತು. ಶೋಕದಿಂದ ವ್ಯಾಕುಲನೇತ್ರನಾಗಿ

ಸಬಾಷ್ಪವದನಂ ದೀನಂ ಶೋಕವ್ಯಾಕುಲಲೋಚನಮ್ ।
ಅಲಂ ತ್ರಾಸೇನ ಸುಗ್ರೀವ ಬಾಷ್ಪವೇಗೋ ನಿಗೃಹ್ಯತಾಮ್ ॥ ೩೧

ಏವಂಪ್ರಾಯಾಣಿ ಯುದ್ಧಾನಿ ವಿಜಯೋ ನಾಸ್ತಿ ನೈಷ್ಠಿಕಃ ।
ಸಶೇಷಭಾಗ್ಯತಾಸ್ಮಾಕಂ ಯದಿ ವೀರ ಭವಿಷ್ಯತಿ ॥ ೩೨

ಮೋಹಮೇತೌ ಪ್ರಹಾಸ್ಯೇತೇ ಮಹಾತ್ಮಾನೌ ಮಹಾಬಲೌ ।
ಪರ್ಯವಸ್ಥಾ ಪಯಾತ್ಮಾನಮನಾಥಂ ಮಾಂ ಚ ವಾನರ ॥ ೩೩

ಸತ್ಯಧರ್ಮಾಭಿರಕ್ತಾನಾಂ ನಾಸ್ತಿ ಮೃತ್ಯುಕೃತಂ ಭಯಮ್ ।
ಏವಮುಕ್ತ್ವಾ ತತಸ್ತಸ್ಯ ಜಲಕ್ಲಿನ್ನೇನ ಪಾಣಿನಾ ॥ ೩೪

ಸುಗ್ರೀವಸ್ಯ ಶುಭೇ ನೇತ್ರೇ ಪ್ರಮಮಾರ್ಜ ವಿಭೀಷಣಃ ।
ತತಃ ಸಲಿಲಮಾದಾಯ ವಿದ್ಯಯಾ ಪರಿಜಪ್ಯ ಚ ॥ ೩೫

---

ದೈನ್ಯದಿಂದ ಕಳವಳಿಸುತ್ತಿದ್ದ ಆ ವಾನರೇಂದ್ರನನ್ನು ನೋಡಿ ವಿಭೀಷಣನು ''ಮಿತ್ರ–ಸುಗ್ರೀವ, ಹೆದರಬೇಡ. ಕಣ್ಣೀರು ಸುರಿಸಬೇಡ (೩೦–೩೧). ಯುದ್ಧಗಳಲ್ಲಿ ಹೀಗಾಗುವುದು ಸಾಮಾನ್ಯವಾದುದು. ಒಂದೇ ಸಮನಾಗಿ ಜಯವು ಲಭಿಸದು. ನಮಗೆ ಭಾಗ್ಯಶೇಷವಿದ್ದ ಪಕ್ಷದಲ್ಲಿ, ಕಪಿವೀರ, ಮಹಾತ್ಮರಾದ ಈ ಅಣ್ಣ ತಮ್ಮಂದಿರು ಚೇತರಿಸಿಕೊಳ್ಳುವರು. ಇವರು ಮಹಾಶಕ್ತಿಸಂಪನ್ನರಲ್ಲವೆ ? ಈ ಸಮಯದಲ್ಲಿ ಮನಸ್ಸನ್ನು ಧೈರ್ಯದಿಂದ ಬಿಗಿಹಿಡಿದುಕೊ. ಅನಾಥನಾಗಿರುವ ನನಗೆ ಅದರಿಂದ ಸಮಾಧಾನವಾದೀತು (೩೨–೩೩). ಸುಗ್ರೀವ, ಸತ್ಯಧರ್ಮಗಳಲ್ಲಿ ದೃಢನಿಷ್ಠೆಯುಳ್ಳವರಿಗೆ ಎಂದಿಗೂ ಅಪಮೃತ್ಯುವಿನ ಭಯವಿಲ್ಲ'' ಎಂದು ಹೇಳಿದನು. ಹೀಗೆ ಸಂತೈಸುತ್ತ ವಿಭೀಷಣನೂ ನೀರನ್ನು ತೆಗೆದುಕೊಂಡು ಒದ್ದೆಯಾದ ಕೈಯಿಂದ ಸುಗ್ರೀವನ ಕಣ್ಣುಗಳನ್ನೊರಸಿದನು (೩೪). ಮತ್ತೆ ಆ ಧರ್ಮಾತ್ಮನು ಸ್ವಲ್ಪ ನೀರನ್ನು ಕೈಯಲ್ಲಿ ತೆಗೆದುಕೊಂಡು ಅಮಂಗಳನಿವಾರಕವಾದ ಮಂತ್ರದಿಂದ* ಅಭಿಮಂತ್ರಿಸಿ ಸುಗ್ರೀವವ ಕಣ್ಣುಗಳನ್ನು ಆ ನೀರಿನಿಂದ ಒರೆಸಿದನು (೨೫).

---

* ಮೂಲದಲ್ಲಿ 'ವಿದ್ಯಯಾ' ಎಂದಿದೆ. ರಾಕ್ಷಸಮಾಯಾಪರಿಜ್ಞಾನವನ್ನುಂಟುಮಾಡುವ ಮಂತ್ರದಿಂದ ಎಂದು ಕೆಲವರು ಅರ್ಥಮಾಡುತ್ತಾರೆ. ಈ ಶ್ಲೋಕವು ಪ್ರಕ್ಷಿಪ್ತವೆಂದು ತಿಲಕವ್ಯಾಖ್ಯಾನದಲ್ಲಿ ಬರೆದಿದೆ.

ಸುಗ್ರೀವನೇತ್ರೇ ಧರ್ಮಾತ್ಮಾ ಸ ಮಮಾರ್ಜ ವಿಭೀಷಣಃ ।
ಪ್ರಮೃಜ್ಯ ವದನಂ ತಸ್ಯ ಕಪಿರಾಜಸ್ಯ ಧೀಮತಃ ॥ ೩೬

ಅಬ್ರವೀತ್ಕಾಲಸಂಪ್ರಾಪ್ತಮಸಂಭ್ರಮಮಿದಂ ವಚಃ ।
ನ ಕಾಲಃ ಕಪಿರಾಜೇಂದ್ರ ವೈಕ್ಲವ್ಯಮವಲಂಬಿತುಮ್ । ೩೭

ಅತಿಸ್ನೇಹೋಽಪ್ಯಕಾಲೇಽಸ್ಮಿನ್ ಮರಣಾಯೋಪಕಲ್ಪತೇ ।
ತಸ್ಮಾದುತ್ಸೃಜ್ಯ ವೈಕ್ಲವ್ಯಂ ಸರ್ವಕಾರ್ಯವಿನಾಶನಮ್ ॥ ೩೮

ಹಿತಂ ರಾಮಪುರೋಗಾಣಾಂ ಸೈನ್ಯಾನಾಮನುಚಿಂತ್ಯತಾಮ್ ।
ಅಥವಾ ರಕ್ಷ್ಯತಾಂ ರಾಮೋ ಯಾವತ್ಸಂಜ್ಞಾವಿಪರ್ಯಯಃ ॥ ೩೯

ಲಬ್ಧಸಂಜ್ಞೌ ಹಿ ಕಾಕುತ್ಸ್ಥೌ ಭಯಂ ನೋ ವ್ಯಪನೇಷ್ಯತಃ ।
ನೈತತ್ಕಿಂಚನ ರಾಮಸ್ಯ ನ ಚ ರಾಮೋ ಮುಮೂರ್ಷತಿ ॥ ೪೦

ನ ಹ್ಯೇನಂ ಹಾಸ್ಯತೇ ಲಕ್ಷ್ಮೀರ್ದುರ್ಲಭಾ ಯಾ ಗತಾಯುಷಾಮ್ ।
ತಸ್ಮಾದಾಶ್ವಾಸಯಾತ್ಮಾನಂ ಬಲಂ ಚಾಶ್ವಾಸಯ ಸ್ವಕಮ್ ॥ ೪೧

---

ಹೀಗೆ ವಿಭೀಷಣನು ಸುಗ್ರೀವನು ಮುಖವನ್ನೊರಸಿ ಕಾಲಾನುಗುಣವಾಗಿ ಧೈರ್ಯದ ಮಾತನಾಡುತ್ತ "ವಾನರೇಂದ್ರ, ಇದು ಕಳವಳಿಸುತ್ತ ಹಿಂಜರಿಯುವ ಕಾಲವಲ್ಲ. ಅಕಾಲದಲ್ಲಿ ತೋರಿಸುವ ಅತಿಸ್ನೇಹವು ಸರ್ವನಾಶಕ್ಕೆ ಕಾರಣವಾಗುವುದು. ಈ ವೈಕ್ಲವ್ಯವನ್ನು ಬಿಟ್ಟು ಬಿಡು (೩೬–೩೮). ಶ್ರೀರಾಮನನ್ನು ಹಿಂಬಾಲಿಸಿ ಬಂದಿರುವ ಈ ಸೈನಿಕರಿಗೆ ಹಿತವಾವುದೆಂಬುದನ್ನು ಆಲೋಚಿಸು. ಅಥವಾ ಶ್ರೀರಾಮನು ಮೂರ್ಛೆಯಿಂದೇಳುವವರೆಗೆ ಈತನನ್ನು ರಕ್ಷಿಸುತ್ತ ಇಲ್ಲಿಯೇ ಇರು (೩೯). ಈ ಕಾಕುತ್ಸ್ಥನು ಚೇತರಿಸಿಕೊಂಡಿದ್ದು ನಮ್ಮೆಲ್ಲರ ಭಯವನ್ನೂ ನೀಗಿಸುವನು. ಈ ಶರಬಂಧನವು ಶ್ರೀರಾಮನಿಗೆ ಅತ್ಯಲ್ಪವಾದ ವಿಷಯ! ಅವನೆಂದಿಗೂ ಪ್ರಾಣವನ್ನು ನೀಗುವುದಿಲ್ಲ (೪೦). ಅವನ ಮುಖಶ್ರೀಯನ್ನು ನೋಡು ! ಆಯುಸ್ಸು ತೀರಿದವರ ಮುಖದಲ್ಲಿ ಅಂತಹ ಕಾಂತಿ ಇರುವುದೇ ? ಆದ್ದರಿಂದ, ಸುಗ್ರೀವ, ಸಮಾಧಾನವನ್ನು ತಂದುಕೊಂಡು ನಿನ್ನ ಸೇನೆಗೆ ಧೈರ್ಯವನ್ನುಂಟುಮಾಡು (೪೧). ಆಗ ನಾನು ಕಂಗೆಟ್ಟಿರುವ ಸಕಲ ಸೈನ್ಯವನ್ನೂ ಹುರಿದುಂಬಿಸಿ ವ್ಯವಸ್ಥೆಗೊಳಿಸಿ ಬರುವೆನು.

ಯಾವತ್ ಸೈನ್ಯಾನಿ ಸರ್ವಾಣಿ ಪುನಃ ಸಂಸ್ಥಾಪಯಾಮ್ಯಹಮ್ ।
ಏತೇ ಹಿ ಫುಲ್ಲನಯನಾಸ್ತ್ರಾಸಾದಾಗತಸಾಧ್ವಸಾಃ ॥ ೪೨

ಕರ್ಣೇ ಕರ್ಣೇ ಪ್ರಕಥಿತಾ ಹರಯೋ ಹರಿಸತ್ತಮ ।
ಮಾಂ ತು ದೃಷ್ಟ್ವಾ ಪ್ರಧಾವಂತಮನೀಕಂ ಸಂಪ್ರಹರ್ಷಿತುಮ್ ॥ ೪೩

ತ್ಯಜಂತು ಹರಯಸ್ತ್ರಾಸಂ ಭುಕ್ತಪೂರ್ವಾಮಿವ ಸ್ರಜಮ್ ।
ಸಮಾಶ್ವಾಸ್ಯ ತು ಸುಗ್ರೀವಂ ರಾಕ್ಷಸೇಂದ್ರೋ ವಿಭೀಷಣಃ ॥ ೪೪

ವಿದ್ರುತಂ ವಾನರಾನೀಕಂ ತತ್ಸಮಾಶ್ವಾಸಯತ್ಪುನಃ ।
ಇಂದ್ರಜಿತ್ತು ಮಹಾಮಾಯಃ ಸರ್ವಸೈನ್ಯಸಮಾವೃತಃ ॥ ೪೫

ವಿವೇಶ ನಗರೀಂ ಲಂಕಾಂ ಪಿತರಂ ಚಾಭ್ಯುಪಾಗಮತ್ ।
ತತ್ರ ರಾವಣಮಾಸೀನಮಭಿವಾದ್ಯ ಕೃತಾಂಜಲಿಃ ॥ ೪೬

ಆಚಚಕ್ಷೇ ಪ್ರಿಯಂ ಪಿತ್ರೇ ನಿಹತೌ ರಾಮಲಕ್ಷ್ಮಣೌ ।
ಉತ್ಪಪಾತ ತತೋ ಹೃಷ್ಟಃ ಪುತ್ರಂ ಚ ಪರಿಷಸ್ವಜೇ ॥ ೪೭

---

ಇದೋ, ಆ ಕಪಿಯೋಧರು ಕಣ್ಣರಳಿಸಿ ಇತ್ತ ನೋಡುತ್ತ ಹೆದರಿ ನಡುಗುತ್ತಿದ್ದಾರೆ. ಶ್ರೀರಾಮನಿಗಾದ ವಿಪತ್ತನ್ನು ಒಬ್ಬರೊಬ್ಬರ ಕಿವಿಗಳಲ್ಲಿಯೂ ಗುಸುಗುಸನೆ ಹೇಳಿಕೊಳ್ಳುತ್ತಿದ್ದಾರೆ. ಆಹಾ! ನನ್ನನ್ನು ನೋಡಿ ಇಂದ್ರಜಿತುವೆಂದು ಭ್ರಮಿಸಿ ಓಡುತ್ತಿದ್ದಾರೆ ! (೪೨–೪೩). ವಾನರೇಂದ್ರ, ಇವರನ್ನು ಸಂತೈಸುವೆನು. ಎಲೈ ವಾನರವೀರರೆ, ಹದರಬೇಡಿರಿ. ಹೆದರಿಕೆಯೆಂಬುದನ್ನು ಹಳೆಯ ಹೂಮಾಲೆಯಂತೆ ಕಿತ್ತೆಸೆಯಿರಿ'' ಎಂದು ಹೇಳಿದನು. ಹೀಗೆ ನುಡಿದು ಸುಗ್ರೀವನನ್ನು ಸಂತೈಸಿ ವಿಭೀಷಣನು ಅಸ್ತವ್ಯಸ್ತವಾಗಿದ್ದ ಕಪಿಸೇನೆಗೆ ಧೈರ್ಯವನ್ನು ಹೇಳಿ ವ್ಯವಸ್ಥಾಪಿಸುವುದಕ್ಕಾಗಿ ಹೊರಟನು (೪೪–೪೫). ಅತ್ತ ಮಾಯಾವಿಯಾದ ಮೇಘನಾದನು ಸಕಲ ರಾಕ್ಷಸಸೇನೆಯೊಡನೆ ಲಂಕೆಯನ್ನು ಪ್ರವೇಶಿಸಿ ತಂದೆಯಿದ್ದಲ್ಲಿಗೆ ಹೋದನು. ಸಿಂಹಾಸನದಲ್ಲಿ ಮಂಡಿಸಿದ್ದ ರಾವಣನಿಗೆ ಅಭಿವಾದನೆ ಮಾಡಿ ಕೈಜೋಡಿಸಿಕೊಂಡು, ರಾಮಲಕ್ಷ್ಮಣರು ಹತರಾದರೆಂಬ ಸಂತೋಷದ ಸುದ್ದಿಯನ್ನು ತಂದೆಗೆ ಅರಿಕೆಮಾಡಿದನು ! ರಾವಣನು ಜಗ್ಗನೆ ಎದ್ದುಬಂದು ಆನಂದದಿಂದ ಮಗನನ್ನಪ್ಪಿಕೊಂಡನು ! (೪೬–೪೭).

ರಾವಣೋ ರಕ್ಷಸಾಂ ಮಧ್ಯೇ ಶ್ರುತ್ವಾ ಶತ್ರೂ ನಿಪಾತಿತೌ ।
ಉಪಾಘ್ರಾಯ ಸ ಮೂರ್ಧ್ನ್ಯೇನಂ ಪಪ್ರಚ್ಛ ಪ್ರೀತಮಾನಸಃ ॥ ೪೮

ಪೃಚ್ಛತೇ ಚ ಯಥಾವೃತ್ತಂ ಪಿತ್ರೇ ಸರ್ವಂ ನ್ಯವೇದಯತ್ ।
ಯಥಾ ತೌ ಶರಬಂಧೇನ ನಿಶ್ಚೇಷ್ಟೌ ನಿಷ್ಪ್ರಭೌ ಕೃತೌ ॥ ೪೯

ಸ ಹರ್ಷವೇಗಾನುಗತಾಂತರಾತ್ಮಾ
ಶ್ರುತ್ವಾ ವಚಸ್ತಸ್ಯ ಮಹಾರಥಸ್ಯ ।
ಜಹೌ ಜ್ವರಂ ದಾಶರಥೇಃ ಸಮುತ್ಥಿತಂ
ಪ್ರಹೃಷ್ಯ ವಾಚಾಭಿನನಂದ ಪುತ್ರಮ್ ॥ ೫೦

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಟ್ ಚತ್ವಾರಿಂಶಃ ಸರ್ಗಃ

---

ರಾಕ್ಷಸ ಸಭಾಮಧ್ಯದಲ್ಲಿದ್ದ ರಾವಣನು, ಶತ್ರುಗಳೀರ್ವರೂ ಹತರಾದರೆಂಬುದನ್ನು ಕೇಳಿದೊಡನೆ ಸಂತುಷ್ಟ ಚಿತ್ತನಾಗಿ ಇಂದ್ರಜಿತುವಿನ ಶಿರಸ್ಸನ್ನಾಘ್ರಾಣಿಸಿ, ನಡೆದ ವೃತ್ತಾಂತವೆಲ್ಲವನ್ನೂ ಕೇಳಿದನು. ಇಂದ್ರಜಿತುವು ವಿವರವಾಗಿ ಎಲ್ಲವನ್ನೂ ತಂದೆಗೆ ನಿವೇದಿಸಿದನು. ಸರ್ಪಾಸ್ತ್ರಬಂಧನದಿಂದ ರಾಮಲಕ್ಷ್ಮಣರು ಹೇಗೆ ನಿಶ್ಚೇಷ್ಟರೂ ನಿಸ್ತೇಜಸ್ಕರೂ ಆಗಿ ಬಿದ್ದರೆಂಬುದನ್ನು ತಿಳಿಸಿದನು (೪೮–೪೯). ಮಹಾರಥನಾದ ಮೇಘನಾದನ ಮಾತನ್ನಾಲಿಸುತ್ತಿದ್ದ ರಾವಣನ ಹೃದಯವು ಆನಂದಾತಿರೇಕದಿಂದ ಉಕ್ಕಿ ನಲಿಯಿತು. ಶ್ರೀರಾಮನ ದೆಸೆಯಿಂದ ಉಲ್ಬಣಿಸಿದ್ದ ಜ್ವರವು ಇಳಿಯಿತು! ರಾವಣನು ಹರ್ಷದಿಂದ ಮಗನನ್ನು ಕೊಂಡಾಡಿದನು (೫೦).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧ ಕಾಂಡದಲ್ಲಿ ನಲವತ್ತಾರನೆಯ ಸರ್ಗ

---

## ಸಪ್ತಚತ್ವಾರಿಂಶಃ ಸರ್ಗಃ

### ನಾಗಬದ್ಧರಾಮಲಕ್ಷ್ಮಣಪ್ರದರ್ಶನಮ್

ಪ್ರತಿಪ್ರವಿಷ್ಟೇ ಲಂಕಾಂ ತು ಕೃತಾರ್ಥೇ ರಾವಣಾತ್ಮಜೇ ।
ರಾಘವಂ ಪರಿವಾರ್ಯಾರ್ತಾ ರರಕ್ಷುರ್ವಾನರರ್ಷಭಾಃ ॥ ೧

ಹನೂಮಾನಂಗದೋ ನೀಲಃ ಸುಷೇಣಃ ಕುಮುದೋ ನಲಃ ।
ಗಜೋ ಗವಾಕ್ಷೋ ಗವಯಃ ಶರಭೋಗಂಧಮಾದನಃ ॥ ೨

ಜಾಂಬವಾನೃಷಭಃ ಸ್ಕಂದೋ ರಂಭಃ ಶತವಲಿಃ ಪೃಥುಃ ।
ವ್ಯೂಥಾನೀಕಾಶ್ಚ ಯತ್ತಾಶ್ಚ ದ್ರುಮಾನಾದಾಯ ಸರ್ವಶಃ ॥ ೩

ವೀಕ್ಷಮಾಣಾ ದಿಶಃ ಸರ್ವಾಸ್ತಿರ್ಯಗೂರ್ಧ್ವಂ ಚ ವಾನರಾಃ ।
ತೃಣೇಷ್ವಪಿ ಚ ಚೇಷ್ಟತ್ಸು ರಾಕ್ಷಸಾ ತಿ ಮೇನಿರೇ ॥ ೪

ರಾವಣಶ್ಚಾಪಿ ಸಂಹೃಷ್ಟೋ ವಿಸೃಜ್ಯೇಂದ್ರಜಿತಂ ಸುತಮ್ ।
ಆಜುಹಾವ ತತಃ ಸೀತಾರಕ್ಷಿಣೀ ರಾಕ್ಷಸೀಸ್ತದಾ ॥ ೫

## ಸರ್ಗ ೪೭

ರಾವಣನ ಆಜ್ಞೆಯಂತೆ ರಾಕ್ಷಸಿಯರು ಸೀತಾಗೇವಿಯನ್ನು ಪುಷ್ಪಕ
ವಿಮಾನದಲ್ಲಿ ರಣರಂಗಕ್ಕೆ ಕರೆತಂದು, ನಾಗಾಪಾಶಬದ್ಧರಾದ
ಶ್ರೀರಾಮಲಕ್ಷ್ಮಣರನ್ನು ತೋರಿಸುವುದು.

ಈ ರೀತಿಯಲ್ಲಿ ರಾವಣಾತ್ಮಜನಾದ ಮೇಘನಾದನು ಕೃತಾರ್ಥನಾದೆನೆಂದು ಭಾವಿಸಿ ಲಂಕೆಗೆ ಹೋಗಲಾಗಿ, ಇತ್ತ ವಾನರೋತ್ತಮರು ಶೋಕಾರ್ತರಾಗಿ ರಾಘವನ ಸುತ್ತಲೂ ಕಾಯುತ್ತ ನಿಂತರು (೧). ಹನುಮಂತ, ಅಂಗದ, ನೀಲ, ಸುಷೇಣ, ಕುಮುದ, ನಳ , ಗಜ ಗವಕ್ಷ, ಗವಯ, ಶರಭ, ಗಂಧಮಾದನ, ಜಾಂಬವಂತ, ಋಷುಭ, ಸ್ಕಂಧ, ರಂಭ, ಶತಬಲಿ, ಪೃಥು–ಮೊದಲಾದ ಕಪಿ ಯೂಥಪರು ಸೇನೆಯನ್ನು ವ್ಯವಸ್ಥೆಗೊಳಿಸಿ ವೃಕ್ಷಗಳನ್ನು ಹೆಗಲಿಗೇರಿಸಿ ಎಚ್ಚರಿಕೆ ಯಿಂದ ಎಲ್ಲೆಡೆಯೂ ರಕ್ಷಿಸುತ್ತ ನಿಂತರು (೨–೩) ವಾನರಸೈನಿಕರು ಸರ್ವದಿಕ್ಕು ಗಳಲ್ಲಿಯೂ ಎಡಕ್ಕೆ ಬಲಕ್ಕೆ ಮೇಲಕ್ಕೆ ನೋಡುತ್ತ, ಹುಲ್ಲು ಅಲ್ಲಾಡಿದರೂ ರಾಕ್ಷಸರೂ ಬಂದರೆಂದು ಶಂಕಿಸುತ್ತಿದ್ದರು ! ಅತ್ತ ರಾವಣನು ಸಂಪ್ರೀತನಾಗಿ

ರಾಕ್ಷಸ್ಯಸ್ತ್ರಿಜಟಾ ಚೈವ ಶಾಸನಾತ್ಸಮುಪಸ್ಥಿತಾಃ ।
ತಾ ಉವಾಚ ತತೋ ಹೃಷ್ಟೋ ರಾಕ್ಷಸೀ ರಾಕ್ಷಸಾಧಿಪಃ ॥ ೬

ಹತಾವಿಂದ್ರಜಿತಾಖ್ಯಾತ ವೈದೇಹ್ಯಾ ರಾಮಲಕ್ಷ್ಮಣೌ ।
ಪುಷ್ಪಕಂ ಚ ಸಮಾರೋಪ್ಯ ದರ್ಶಯಧ್ವಂ ಹತೌ ರಣೇ ॥ ೭

ಯದಾಶ್ರಯಾದವಷ್ಟಬ್ಧಾ ನೇಯಂ ಮಾಮುಪತಿಷ್ಠತಿ ।
ಸೋಽಸ್ಯಾ ಭರ್ತಾ ಸಹ ಭ್ರಾತ್ರಾ ನಿರಸ್ತೋ ರಣಮೂರ್ಧನಿ ॥ ೮

ನಿರ್ವಿಶಂಕಾ ನಿರುದ್ವಿಗ್ನಾ ನಿರಪೇಕ್ಷಾ ಚ ಮೈಥಿಲೀ ।
ಮಾಮುಪಸ್ಥಾಸ್ಯತೇ ಸೀತಾ ಸರ್ವಾಭರಣಭೂಷಿತಾ ॥ ೯

ಅದ್ಯ ಕಾಲವಶಂ ಪ್ರಾಪ್ತಂ ರಣೇ ರಾಮಂ ಸಲಕ್ಷ್ಮಣಮ್ ।
ಸ್ವವೇಕ್ಷ್ಯ ವಿನಿವೃತ್ತಾಶಾ ಚಾನ್ಯಾಂ ಗತಿಮಪಶ್ಯತೀ ॥ ೧೦

ನಿರಪೇಕ್ಷಾ ವಿಶಾಲಾಕ್ಷೀ ಮಾಮುಪಸ್ಥಾಸ್ಯತೇ ಸ್ವಯಮ್ ।
ತಸ್ಯ ತದ್ವಚನಂ ಶ್ರುತ್ವಾ ರಾವಣಸ್ಯ ದುರಾತ್ಮನಃ ॥ ೧೧

---

ಪುತ್ರನಾದ ಇಂದ್ರಿಜಿತುವನ್ನು ಮನ್ನಿಸಿ ಕಳಿಸಿಕೊಟ್ಟ, ಸೀತೆಯ ಕಾವಲುಗಾರ್ತಿಯರಾಗಿದ್ದ ರಾಕ್ಷಸಿಯರು ಬರುವಂತೆ ಆದೇಶವನ್ನಿತ್ತನು (೪–೫). ರಾಜಾಜ್ಞೆಯಂತೆ ತ್ರಿಜಟೆಯೂ ಇತರ ರಾಕ್ಷಸಿಯರೂ ಬಂದರು. ರಾಕ್ಷಸೇಂದ್ರನು ಹರ್ಷದಿಂದ ಅವರನ್ನು ಕುರಿತು ''ರಾಕ್ಷಸಿಯರೆ, ರಾಮಲಕ್ಷ್ಮಣರನ್ನು ಇಂದ್ರಜಿತುವು ಕೊಂದುಹಾಕಿರುವನೆಂದು ವೈದೇಹಿಗೆ ತಿಳಿಸಿರಿ! ಆಕೆಯನ್ನು ಪುಷ್ಪಕವಿಮಾನದಲ್ಲಿ ಕರೆದೊಯ್ದು, ರಣರಂಗದಲ್ಲಿ ಸತ್ತುಬಿದ್ದಿರುವ ಅವರಿಬ್ಬರನ್ನು ತೋರಿಸಿರಿ! (೬–೭). ಯಾವನನ್ನು ನಂಬಿ ಆ ಸೀತೆಯು ಸೆಟೆದಿದ್ದಳೋ, ನನ್ನ ಬಳಿಗೆ ಬರಲು ನಿರಾಕರಿಸುತ್ತಿದ್ದಳೋ, ಅವಳ ಆ ಗಂಡನು ಅವನ ತಮ್ಮನೊಂದಿಗೆ ಯುದ್ಧಭೂಮಿಯಲ್ಲಿ ಹತನಾಗಿ ಉರುಳಿದ್ದಾನೆ (೮). ಇನ್ನು ಮೈಥಿಲಿಯ, ಪತಿಯು ಬಂದಾನೆಂಬ ಆಶೋತ್ತರವನ್ನು ತೊರೆದು ನಿಶ್ಶಂಕೆಯಿಂದ ನಿರ್ಭಯದಿಂದ ಸರ್ವಾಭರಣಭೂಷಿತಳಾಗಿ ನನ್ನ ಬಳಿಗೆ ಬರುವಳು! (೯). ಇಂದು ರಾಮಲಕ್ಷ್ಮಣರು ಸಂಗ್ರಾಮದಲ್ಲಿ ಮೃತ್ಯುವಶರಾಗಿರುವುದನ್ನು ಅವಳು ಚೆನ್ನಾಗಿ ನೋಡಲಿ! ನೋಡಿದ ಮೇಲೆ ಅವಳು ಇಟ್ಟು ಕೊಂಡಿದ್ದ ಆಸೆಯು ಮಣ್ಣುಪಾಲಾಗುವುದು. ಆಶೋತ್ತರವನ್ನು ತೊರೆದು ಆ ವಿಶಾಲಾಕ್ಷಿಯು

ರಾಕ್ಷಸ್ಯಸ್ತಾಸ್ತಥೇತ್ಯುಕ್ತ್ವಾ ಜಗ್ಮುರ್ಯತ್ರ ಪುಷ್ಪಕಮ್ ।
ತತಃ ಪುಷ್ಪಕಮಾದಾಯ ರಾಕ್ಷಸ್ಯೋ ರಾವಣಾಜ್ಞಯಾ ॥ ೧೨

ಅಶೋಕವನಿಕಾಸ್ಥಾಂ ತಾಂ ಮೈಥಿಲೀಂ ಸಮುಪಾನಯನ್ ।
ತಾಮಾದಾಯ ತು ರಾಕ್ಷಸ್ಯೋ ಭರ್ತೃಶೋಕಪರಾಜಿತಾಮ್ ॥ ೧೩

ಸೀತಾಮಾರೋಪಯಾಮಾಸುರ್ವಿಮಾನಂ ಪುಷ್ಪಕಂ ತದಾ ।
ತತಃ ಪುಷ್ಪಕಮಾರೋಪ್ಯ ಸೀತಾಂ ತ್ರಿಜಟಯಾ ಸಹ ॥ ೧೪

ಜಗ್ಮುರ್ದರ್ಶಯಿತುಂ ತಸ್ಯೈ ರಾಕ್ಷಸ್ಯೋ ರಾಮಲಕ್ಷ್ಮಣೌ ।
ರಾವಣೋಽಕಾರಯಲ್ಲಂಕಾಂ ಪತಾಕಾಧ್ವಜಮಾಲಿನೀಮ್ ॥ ೧೫

ಪ್ರಾಘೋಷಯತ ಹೃಷ್ಟಶ್ಚ ಲಂಕಾಯಾಂ ರಾಕ್ಷಸೇಶ್ವರಃ ।
ರಾಘವೋ ಲಕ್ಷ್ಮಣಶ್ಚೈವ ಹತಾವಿಂದ್ರಜಿತಾ ರಣೇ ॥ ೧೬

ವಿಮಾನೇನಾಪಿ ಸೀತಾ ತು ಗತ್ವಾ ತ್ರಿಜಟಯಾ ಸಹ।
ದದರ್ಶ ವಾನರಾಣಾಂ ತು ಸರ್ವಂ ಸೈನ್ಯಂ ನಿಪಾತಿತಮ್ । ೧೭

ಪ್ರಹೃಷ್ಟಮನಸಶ್ಚಾಪಿ ದದರ್ಶ ಪಿಶಿತಾಶನಾನ್ ।
ವಾನರಾಂಶ್ಚಾಪಿ ದುಃಖಾರ್ತಾನ್ ರಾಮಲಕ್ಷ್ಮಣಪಾರ್ಶ್ವತಃ ॥ ೧೮

---

ಬೇರೊಂದು ಗತಿಯನ್ನೂ ಕಾಣದೆ ತಾನಾಗಿಯೇ ನನ್ನ ಬಳಿಗೆ ಬರುವಳು'' ಎಂದು ಹೇಳಿದನು (೧೦–೧೧). ಆ ದುರಾತ್ಮನ ಮಾತನ್ನು ಕೇಳಿ ಆ ರಾಕ್ಷಸಿಯರು ''ಹಾಗೆಯೇ ಮಾಡುತ್ತೇವೆ, ಪ್ರಭು'' ಎಂದು ನುಡಿದು ಪುಷ್ಪಕವಿಮಾನವಿದ್ದಲ್ಲಿಗೆ ಹೋಗಿ, ರಾವಣಾಜ್ಞೆಯಂತೆ ಅದನ್ನು ಅಶೋಕವನದಲ್ಲಿದ್ದ ಮೈಥಿಲಿಯ ಬಳಿಗೆ ತೆಗೆದುಕೊಂಡುಹೋದರು (೧೨–೧೩). ಅನಂತರ, ಮೊದಲೇ ಪತಿವಿರಹಶೋಕದಿಂದ ಬೆಂದು ಬೆಂಡಾಗಿದ್ದ ಜಾನಕಿಯನ್ನು ಒತ್ತಾಯದಿಂದ ಪುಷ್ಪಕವಿಮಾನದಲ್ಲಿ ಹತ್ತಿಸಿ, ಆ ರಾಕ್ಷಸಿಯರು ರಾಮಲಕ್ಷ್ಮಣರನ್ನು ತೋರಿಸುವುದಕ್ಕಾಗಿ ಕರೆದೊಯ್ದರು. ಜೊತೆಯಲ್ಲಿ ತ್ರಿಜಟೆಯೂ ಹೋದಳು. ರಾವಣನು ಲಂಕೆಯನ್ನು ಸಿಂಗರಿಸಬೇಕೆಂದು ಆಜ್ಞಾಪಿಸಿ ಧ್ವಜಪತಾಕೆಗಳನ್ನೇರಿಸಿದನು! 'ಯುದ್ಧದಲ್ಲಿ ರಾಮಲಕ್ಷ್ಮಣರು ಇಂದ್ರಜಿತುವಿನಿಂದ ಹತರಾದರು' ಎಂದು ಲಂಕೆಯಲ್ಲಿ ಡಂಗುರವನ್ನು ಹೊಡೆಸಿದನು ! (೧೪–೧೬). ಇತ್ತ ಜಾನಕಿಯು ವಿಮಾನದಲ್ಲಿ ತ್ರಿಜಟೆಯೊಡನೆ ಹೋಗುತ್ತ ವಾನರಸೇನೆಯು ಚೆಲ್ಲಾಪಿಲ್ಲಿಯಾಗಿ ವಿಧ್ವಸ್ತವಾಗಿರುವುದನ್ನು ಕಂಡಳು. ರಾಕ್ಷಸರು ಸಂತೋಷದಿಂದ ಉಬ್ಬಿರು

ತತಃ ಸೀತಾ ದದರ್ಶೋಭೌ ಶಯಾನೌ ಶರತಲ್ಪಯೋಃ ।
ಲಕ್ಷ್ಮಣಂ ಚಾಪಿ ರಾಮಂ ಚ ವಿಸಂಜ್ಞೌ ಶರಪೀಡಿತೌ ॥ ೧೯

ವಿಧ್ವಸ್ತಕವಚೌ ವೀರೌ ವಿಪ್ರವಿದ್ಧಶರಾಸನೌ ।
ಸಾಯಕೈಶ್ಛಿನ್ನ ಸರ್ವಾಂಗೌ ಶರಸ್ತಂಬಮಯೌ ಕ್ಷಿತೌ ॥ ೨೦

ತೌ ದೃಷ್ಟ್ವಾ ಭ್ರಾತರೌ ತತ್ರ ವೀರೌ ಸಾ ಪುರುಷರ್ಷಭೌ ।
ಶಯಾನೌ ಪುಂಡರೀಕಾಕ್ಷೌ ಕುಮಾರಾವಿವ ಪಾವಕೀ ॥ ೨೧

ಶರತಲ್ಪಗತೌ ವೀರೌ ತಥಾಭೂತೌ ನರರ್ಷಭೌ ।
ದುಃಖಾರ್ತಾ ಸುಭೃಶಂ ಸೀತಾ ಸುಚಿರಂ ವಿಲಲಾಪ ಹ ॥ ೨೨

ಭರ್ತಾರಮನವದ್ಯಾಂಗೀ ಲಕ್ಷ್ಮಣಂ ಚಾಸಿತೇಕ್ಷಣಾ ।
ಪ್ರೇಕ್ಷ್ಯ ಪಾಂಸುಷು ವೇಷ್ಟಂತೌ ರುರೋದ ಜನಕಾತ್ಮಜಾ ॥ ೨೩

ಸಾ ಬಾಷ್ಪಶೋಕಾಭಿಹತಾ ಸಮೀಕ್ಷ್ಯ
ತೌ ಭ್ರಾತರೌ ದೇವಸಮಪ್ರಭಾವೌ।

---

ವುದನ್ನೂ ವಾನರರು ದುಃಖಾರ್ತರಾಗಿ ಶ್ರೀರಾಮಲಕ್ಷ್ಮಣರ ಬಳಿಯಲ್ಲಿ ಪರಿತಪಿಸುವುದನ್ನೂ ಕಂಡಳು (೧೭–೧೮). ಹಾಗೆಯೇ ಶ್ರೀರಾಮನೂ ಲಕ್ಷ್ಮಣನೂ ಶರಪೀಡಿತನಾಗಿ ಶರತಲ್ಪದಲ್ಲಿ ಎಚ್ಚರದಪ್ಪಿ ಮಲಗಿರವುದು ಸೀತಗೆ ಗೋಚರಿಸಿತು. ಈ ವೀರರೀರ್ವರ ಕವಚಗಳು ಛಿನ್ನಭಿನ್ನವಾಗಿದ್ದವು. ಧನುಸ್ಸುಗಳು ಕೈಯಿಂದ ಜಾರಿ ಬಿದ್ದಿದ್ದವು. ಸರ್ವಾಂಗಗಳೂ ವಿಚ್ಛಿದ್ರವಾಗಿದ್ದವು. ಸಕಲಾವಯಗಳಲ್ಲಿಯೂ ಬಾಣಗಳು ನಾಟಿ, ಬಾಣಗಳ ಎರಡು ಪೊದೆಗಳಂತಿದ್ದ ಶ್ರೀರಾಮಲಕ್ಷ್ಮಣರನ್ನು ಸೀತೆಯು ಕಂಡಳು (೧೯–೨೦). ಪುರುಷಸಿಂಹರೂ ಪುಂಡರೀಕಾಕ್ಷರೂ ಆದ ಅಣ್ಣ ತಮ್ಮಂದಿರು ಅಗ್ನಿಪುತ್ರರಾದ ಸ್ಕಂದವಿಶಾಖರಂತೆ ಶರತಲ್ಪದಲ್ಲಿ ಮಲಗಿರುವುದನ್ನು ಕಂಡೊಡನೆ, ಸೀತೆಯ ದುಃಖವು ಉಮ್ಮಳಿಸಿತು. 'ಹೋ' ಯೆಂದು ಅಳತೊಡಗಿದಳು (೨೧–೨೨). ಶುಭಾಂಗಿಯೂ ನೀಲನಯನೆಯೂ ಆದಜನಕರಾಜ ಕುಮಾರಿಯು, ಮಣ್ಣಲ್ಲಿ ಮಲಗಿದ್ದ ತನ್ನ ಪತಿಯನ್ನೂ ಮೈದುನನಾದ ಲಕ್ಷ್ಮಣನನ್ನೂ ನೋಡಿ ಗಳಗಳನೆ ಕಣ್ಣೀರು ಹರಿಸಿದಳು (೨೩). ದೇವತೆಗಳಂತೆ ಪ್ರಭಾವಸಂಪನ್ನರಾದ ಅಸೋದರರು ನೆಲದಮೇಲುರುಳಿರುವುದನ್ನು ನೋಡಿ, ಜಾನಕಿಯು

ವಿತರ್ಕಯಂತೀ ನಿಧನಂ ತಯೋಃ ಸಾ
ದುಃಖಾನ್ವಿತಾ ವಾಕ್ಯಮಿದಂ ಜಗಾದ ॥ ೨४

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತಚತ್ವಾರಿಂಶಃ ಸರ್ಗಃ

---

## ಅಷ್ಟಚತ್ವಾರಿಂಶಃ ಸರ್ಗಃ

ಸೀತಾಶ್ವಾಸನಮ್

ಭರ್ತಾರಂ ನಿಹತಂ ದೃಷ್ಟ್ವಾ ಲಕ್ಷ್ಮಣಂ ಚ ಮಹಾಬಲಮ್ ।
ವಿಲಲಾಪ ಭೃಶಂ ಸೀತಾ ಕರುಣಂ ಶೋಕಕರ್ಶಿತಾ ॥ ೧

ಊಚುರ್ಲಕ್ಷಣಿನೋ ಯೇ ಮಾಂ ಪುತ್ರಿಣ್ಯವಿಧವೇತಿ ಚ ।
ತೇಽದ್ಯ ಸರ್ವೇ ಹತೇ ರಾಮೇ ಜ್ಞಾನಿನೋಽನೃತವಾದಿನಃ ॥ ೨

ಯಜ್ವನೋ ಮಹಿಷೀಂ ಯೇ ಮಾಮೂಚುಃ ಪತ್ನೀಂ ಚ ಸತ್ರಿಣಃ ।
ತೇಽದ್ಯ ಸರ್ವೇ ಹತೇ ರಾಮೇ ಜ್ಞಾನಿನೋಽನೃತವಾದಿನಃ ॥ ೩

ಶೋಕಾರ್ತಳಾಗಿ ಕಣ್ಣೀರಿಂದ ನೆನೆದುಹೋದಳು. ಅವರೀರ್ವರೂ ನಿಧನ ಹೊಂದಿರುವರೆಂದು ಊಹಿಸಿ ಸಂಕಟದಿಂದ ಹಲುಬ ತೊಡಗಿದಳು (೨४).

---

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ನಲವತ್ತೇಳನೆಯ ಸರ್ಗ.

---

## ಸರ್ಗ ४೮

ಸೀತೆಯ ವಿಲಾಪ. ತ್ರಿಜಟೆಯ ಸಾಂತ್ವನ. ಪುನಃ ಅಶೋಕವನಕ್ಕೆ ಮರುಳುವುದು.

ತನ್ನ ಪತಿಯಾದ ಶ್ರೀರಾಮನೂ ಬಲಾಢ್ಯನಾದ ಲಕ್ಷ್ಮಣನೂ ಹತರಾದರೆಂದೂಹಿಸಿ, ಜಾನಕೀಯು ಶೋಕದಿಂದ ಮೈಮರೆತು ಹೃದಯವಿದ್ರಾವಕವಾಗಿ ಹಲುಬತೊಡಗಿದಳು : ''ಹಾ ನನ್ನ ದೌರ್ಭಾಗ್ಯವೇ ! ಶ್ರೀರಾಮನು ಮೃತನಾದನೇ ! ಲಕ್ಷಣಶಾಸ್ತ್ರಜ್ಞರು ನನ್ನನ್ನು ನೋಡಿ 'ಇವಳು ಪುತ್ರವತಿಯಾಗುವಳು. ಇವಳಿಗೆ ವೈಧವ್ಯಯೋಗವಿಲ್ಲ' ಎಂದು ನುಡಿದಿದ್ದರು. ಅಂತಹ ಜ್ಞಾನಿಗಳ ವಚನವೆಲ್ಲವೂ ಸುಳ್ಳಾಯಿತು! (೧–೨). ಅಶ್ವಮೇಧಾದಿಯಾಗಗಳನ್ನೂ

ಊಚುಃ ಸಂಶ್ರವಣೇ ಯೇ ಮಾಂ ದ್ವಿಜಾಃ ಕಾರ್ತಾಂತಿಕಾಃ ಶುಭಾಮ್
ತೇಽದ್ಯ ಸರ್ವೇ ಹತೇ ರಾಮೇ ಜ್ಞಾನಿನೋಽನೃವಾದಿನಃ ॥ ೪

ವೀರಪಾರ್ಥಿವಪತ್ನೀ ತ್ವಂ ಯೇ ಧನ್ಯೇತಿ ಚ ಮಾಂ ವಿದುಃ ।
ತೇಽದ್ಯ ಸರ್ವೇ ಹತೇ ರಾಮೇ ಜ್ಞಾನಿನೋಽನೃತವಾದಿನಃ ॥ ೫

ಇಮಾನಿ ಖಲು ಪದ್ಮಾನಿ ಪಾದಯೋರ್ಯೈಃ ಕಿಲ ಸ್ತ್ರಿಯಃ ।
ಅಧಿರಾಜ್ಯೇಽಭಿಷಿಚ್ಯಂತೇ ನರೇಂದ್ರೈಃ ಪತಿಭಿಃ ಸಹ ॥ ೬

ವೈಧವ್ಯಂ ಯಾಂತಿ ಯೈರ್ನಾರ್ಯೋಽಲಕ್ಷಣೈರ್ಭಾಗ್ಯದುರ್ಲಭಾಃ ।
ನಾತ್ಮನಸ್ತಾನಿ ಪಶ್ಯಾಮಿ ಪಶ್ಯಂತೀ ಹತಲಕ್ಷಣಾ ॥ ೭

ಸತ್ಯನಾಮಾನಿ ಪದ್ಮಾನಿ ಸ್ತ್ರೀಣಾಮುಕ್ತಾನಿ ಲಕ್ಷಣೈಃ ।
ತಾನ್ಯದ್ಯ ನಿಹತೇ ರಾಮೇ ವಿತಥಾನಿ ಭವಂತಿ ಮೇ ॥ ೮

---

ಸತ್ರಗಳನ್ನೂ* ನಡೆಸತಕ್ಕವನಿಗೆ ನಾನು ಪತ್ನಿಯಾಗಿ ಶೋಭಿಸುವೆನೆಂದು ಹೇಳಿದ ಜ್ಞಾನಿಗಳ ವಚನವೆಲ್ಲವೂ ಸುಳ್ಳಾಯಿತು (೩). ಜ್ಯೋತಿಶಾಸ್ತ್ರ ವಿಶಾರದರಾದ ವಿಪ್ರರು ನನ್ನೆದುರಿಗೇ 'ನೀನು ಸುಮಂಗಳೆಯಾಗಿಯೇ ಬಾಳುವೆ' ಎಂದು ನನಗೆ ಹೇಳಿದ್ದರು. ಅವರೆಲ್ಲರೂ ಈಗ ಅಸತ್ಯವಾದಿಗಳಾದರು (೪). 'ಸೀತೆ, ನೀನು ಮಹಾವೀರನಾದ ಪೃಥ್ವೀಶ್ವರನ ಪತ್ನಿಯಾಗುವೆ. ಮಹಾ ಭಾಗ್ಯಶಾಲಿನಿ ನೀನು ' ಎಂದು ನುಡಿದ ವಿದ್ವಾಂಸರ ಮಾತೆಲ್ಲವೂ ಈಗ ಸಟೆ ಯಾಯಿತು (೫). ನನ್ನ ಪಾದಗಳಲ್ಲಿರುವಂತೆ ಪದ್ಮರೇಖೆಗಳಿದ್ದರೆ ಈ ಸ್ತ್ರೀಯರು ನರೇಂದ್ರರಾದ ಪತಿಗಳೊಡನೆ ಸಾಮ್ರಾಜ್ಯದಲ್ಲಿ ಅಭಿಷಿಕ್ತರಾಗುವರಂತೆ. (ಇದು ಸುಳ್ಳಾಯಿತೆ!) (೬). ಯಾವ ದುರ್ಲಕ್ಷಣಗಳಿದ್ದರೆ ಮಂದಭಾಗ್ಯೆಯರಾದ ಸ್ತ್ರೀಯರು ವೈಧವ್ಯವನ್ನ ನುಭವಿಸುವರೋ ಅಂತಹ ಒಂದು ದುರ್ಲಕ್ಷಣವೂ ನನ್ನಲ್ಲಿ ಕಾಣಿಸುವುದಿಲ್ಲ, ನನ್ನ ವಿಷಯದಲ್ಲಿ ಶುಭಲಕ್ಷಣಗಳೂ ನಿಷ್ಫಲವಾದವು (೭). ಸಾಮುದ್ರಿಕಶಾಸ್ತ್ರವನ್ನು ಬಲ್ಲವರು ಪದ್ಮಾದಿಲಕ್ಷಣಗಳು ಸತ್ಯವಾಗಿಯೂ ಫಲವನ್ನು ಕೊಡುತ್ತವೆಯೆಂದು ಹೇಳುತ್ತಾರೆ. ಅಯ್ಯೊ, ಶ್ರೀರಾಮನು ಹತ ನಾದ ಮೇಲೆ ನನ್ನ ವಿಷಯದಲ್ಲಿ ಎಲ್ಲವೂ ಸುಳ್ಳಾದವು (೮).

---

* ಬಹುದಿನಸಾಧ್ಯವೂ ಅನೇಕ ಯಜಮಾನರೂ ಇರುವ ಗವಾಮಯನ ಮುಂತಾದ ಯಾಗಕ್ಕೆ ಸತ್ರವೆಂದು ಹೆಸರು.

ಕೇಶಾಃ ಸೂಕ್ಷ್ಮಾಃ ಸಮಾ ನೀಲಾ ಭ್ರುವೌ ಚಾಸಂಗತೇ ಮಮ ।
ವೃತ್ತೇ ಚಾರೋಮಶೇ ಜಂಘೇ ದಂತಾಶ್ಚಾವಿರಲಾ ಮಮ ॥ ೯

ಶಂಖೇ ನೇತ್ರೇ ಕರೌ ಪಾದೌ ಗುಲ್ಫಾವೂರೂ ಚ ಮೇ ಚಿತೌ ।
ಅನುವೃತ್ತನಖಾಃ ಸ್ನಿಗ್ಧಾಃ ಸಮಾಶ್ಚಾಂಗುಲಯೋ ಮಮ ॥ ೧೦

ಸ್ತನೌ ಚಾವಿರಲೌ ಪೀನೌ ಮಮೇಮೌ ಮಗ್ನಚೂಚುಕೌ ।
ಮಗ್ನಾ ಚೋತ್ಸಂಗಿನೀ ನಾಭಿಃ ಪಾರ್ಶ್ವೋರಸ್ಕಾಶ್ಚ ಮೇ ಚಿತಾಃ ॥ ೧೧

ಮಮ ವರ್ಣೋ ಮಣಿನಿಭೋ ಮೃದೂನ್ಯಂಗರುಹಾಣಿ ಚ ।
ಪ್ರತಿಷ್ಠಿ ತಾಂ ದ್ವಾದಶಭಿರ್ಮಾಮೂಚುಃ ಶುಭಲಕ್ಷಣಾಮ್ ॥ ೧೨

ಸಮಗ್ರಯವಮಚ್ಛಿದ್ರಂ ಪಾಣಿಪಾದಂ ಚ ವರ್ಣವತ್ ।
ಮಂದಸ್ಮಿತೇತ್ಯೇವ ಚ ಮಾಂ ಕನ್ಯಾಲಕ್ಷಣಿನೋ ವಿದುಃ ॥ ೧೩

---

ನನ್ನ ತಲೆಗೂದಲು ಒಂದೇ ಅಳತೆಯಲ್ಲಿ ತೆಳುವಾಗಿ ಕಪ್ಪಾಗಿದೆ. ಹುಬ್ಬುಗಳು ಒಂದಕ್ಕೊಂದು ಕೂಡದೆ ಪ್ರತ್ಯೇಕವಾಗಿವೆ. ನನ್ನ ಮೊಳಕಾಲುಗಳು ರೋಮಗಳಿಲ್ಲದೆ ದುಂಡಾಗಿವೆ. ಸಂದುಬಿಡದಂತೆ ಹಲ್ಲುಗಳು ಕೂಡಿಕೊಂಡಿವೆ (೯). ಕಣ್ಣುಗಳ ಕೊನೆಯಂಚಿನ ಎರಡು ಭಾಗಗಳೂ, ನೇತ್ರಗಳೂ, ಪಾಣಿಪಾದಗಳೂ ಹರಟುಗಳೂ* ತೊಡೆಗಳೂ ಲಕ್ಷಣಾನುಸಾರವಾಗಿ ಉಬ್ಬಿರುತ್ತವೆ. ನನ್ನ ಬೆರಳುಗಳೆಲ್ಲವೂ ದುಂಡನೆಯ ಉಗುರುಗಳಿಂದ ಕೂಡಿ ನುಣುಪಾಗಿ ಸಮವಾಗಿವೆ (೧೦). ಸ್ತನಗಳು ಒತ್ತಾಗಿ ಬೆಳೆದು ಪೀನವಾಗಿವೆ. ತೊಟ್ಟುಗಳು ತುದಿಯಲ್ಲಿ ಹಳ್ಳವಾಗಿವೆ. ಸುತ್ತಲೂ ಉಬ್ಬಿದ ನಾಭಿಯು ನಡುವೆ ಹಳ್ಳವಾಗಿದೆ. ನನ್ನ ಪಕ್ಕೆಗಳೂ ಎದೆಯೂ ಪುಷ್ಟವಾಗಿವೆ (೧೧) ಸಾಣೆಹಿಡಿದ ಮಣಿಯಂತೆ ನನ್ನ ಮೈಬಣ್ಣವು ಹೊಳೆಯುತ್ತದೆ. ಕೂದಲುಗಳೆಲ್ಲವೂ ಮೃದುವಾಗಿವೆ. ಎರಡು ಪಾದತಳಗಳೂ ಹತ್ತು ಕಾಲ್ಬೆರಳುಗಳೂ–ಈ ಹನ್ನೆರಡು ನೆಲದಲ್ಲಿ ಸಂದುಬಿಡದಂತ ಊರಿ ನಿಲ್ಲುವುದರಿಂದ ನಾನು ಶುಭಲಕ್ಷಣಯುಕ್ತಳೆಂದು ಸಾಮುದ್ರಿಕಶಾಸ್ತ್ರಜ್ಞರು ಹೇಳುತ್ತಿದ್ದರು (೧೨) ನನ್ನ ಪಾಣಿಪಾದಗಳಲ್ಲಿ ಯವರೇಖೆಗಳು ಸಮಗ್ರವಾಗಿವೆಯೆಂದೂ ಸಂದು ಬಿಡದಂತೆ ಬೆರಳುಗಳು ಕೂಡಿವೆಯೆಂದೂ ಇದೆಲ್ಲವೂ

---

* ಹರಟು =Ankle.

ಅಧಿರಾಜ್ಯೇಽಭಿಷೇಕೋ ಮೇ ಬ್ರಾಹ್ಮಣೈಃ ಪತಿನಾ ಸಹ ।
ಕೃತಾಂತಕುಶಲೈರುಕ್ತಂ ತತ್ಸರ್ವಂ ವಿತಥೀಕೃತಮ್ ॥ ೧೪

ಶೋಧಯಿತ್ವಾ ಜನಸ್ಥಾನಂ ಪ್ರವೃತ್ತಿಮುಪಲಭ್ಯ ಚ ।
ತೀರ್ತ್ವಾ ಸಾಗರಮಕ್ಷೋಭ್ಯಂ ಭ್ರಾತರೌ ಗೋಷ್ಪದೇ ಹತೌ ॥ ೧೫

ನನು ವಾರಣಮಾಗ್ನೇಯಮೈಂದ್ರಂ ವಾಯುವ್ಯಮೇವ ಚ ।
ಅಸ್ತ್ರಂ ಬ್ರಹ್ಮಶಿರಶ್ಚೈವ ರಾಘವೌ ಪ್ರತ್ಯಪದ್ಯತಾಮ್ ॥ ೧೬

ಅದೃಶ್ಯಮಾನೇನ ರಣೇ ಮಾಯಯಾ ವಾಸವೋಪಮೌ ।
ಮಮ ನಾಥಾವನಾಥಾಯಾ ನಿಹತೌ ರಾಮಲಕ್ಷ್ಮಣೌ ॥ ೧೭

ನ ಹಿ ದೃಷ್ಟಿಪಥಂ ಪ್ರಾಪ್ಯ ರಾಘವಸ್ಯ ರಣೇ ರಿಪುಃ ।
ಜೀವನ್ ಪ್ರತಿನಿವರ್ತೇತ ಯದ್ಯಪಿ ಸ್ಯಾನ್ಮನೋಜವಃ ॥ ೧೮

ನ ಕಾಲಸ್ಯಾತಿಭಾರೋಽಸ್ತಿ ಕೃತಾಂತಶ್ಚ ಸುದುರ್ಜಯಃ ।
ಯತ್ರ ರಾಮಃ ಸಹ ಭ್ರಾತ್ರಾ ಶೇತೇ ಯುಧಿ ನಿಪಾತಿತಃ ॥ ೧೯

---

ಶುಭಲಕ್ಷಣವೆಂದು ಕನ್ಯಾಲಕ್ಷಣವನ್ನು ತಿಳಿದ ಶಾಸ್ತ್ರಜ್ಞರು ಹೇಳಿದ್ದರು. ಸದಾ ಕಿರುನಗೆಯಿಂದ ಕೂಡಿರುವೆನೆಂದೂ ಹೇಳಿದ್ದರು (ಎಲ್ಲವೂ ಸುಳ್ಳಾಯಿತು) (೧೩). ಸಾಮ್ರಾಜ್ಯದಲ್ಲಿ ನಾನು ಪತಿಯೊಡನೆ ಅಭಿಷಿಕ್ತಳಾಗುವೆನೆಂದು ಜ್ಯೋತಿಶ್ಶಾಸ್ತ್ರನಿಪುಣರು ಹೇಳಿದ್ದರು. ನನ್ನ ಭಾಗಕ್ಕೆ ಸಕಲವೂ ಸಟೆಯಾಯಿತು! ಈ ಸಹೋದರರು ನನಗಾಗಿ ಜನಸ್ಥಾನವನ್ನೆಲ್ಲಾ ಶೋಧಿಸಿ ಕಷ್ಟಪಟ್ಟು, ನನ್ನ ವೃತ್ತಾಂತವನ್ನು ಗೊತ್ತುಮಾಡಿ, ಅಕ್ಷೋಭ್ಯವಾದ ಮಹಾಸಾಗರವನ್ನು ದಾಟಿಬಂದು, ಗೋಷ್ಪದದಂತಿರುವ ಅಲ್ಪಕಾರಣದಿಂದ ಹತರಾಗಿ ಬಿಟ್ಟರೇ! (೧೪–೧೫) ಈ ರಘುವಂಶತಿಲಕರು ವರುಣಾಸ್ತ್ರ, ಆಗ್ನೇಯಾಸ್ತ್ರ, ಐಂದ್ರಾಸ್ತ್ರ, ವಾಯುವ್ಯಾಸ್ತ್ರಗಳನ್ನು ಬಲ್ಲವರಲ್ಲವೆ? ಬ್ರಹ್ಮಶಿರೋಸ್ತ್ರವೂ ಇವರಿಗೆ ತಿಳಿದಿದ್ದಿತಲ್ಲವೆ ? (೧೬) ಇಂದ್ರಸಮಾನರಾದ ಈ ವೀರರನ್ನು ಮಾಯೆಯಿಂದ ಅದೃಶ್ಯನಾಗಿ ಇಂದ್ರಜಿತುವು ಸಂಹರಿಸಿದನು. ಅನಾಥೆಯಾದ ನನಗೆ ದಿಕ್ಕಾಗಿದ್ದ ಶ್ರೀರಾಮನನ್ನೂ ಲಕ್ಷ್ಮಣನನ್ನೂ ಕೊಂದನಲ್ಲವೆ? (೧೭). ರಾಘವನ ಕಣ್ಣಿಗೇನಾದರೂ ಗೋಚರಿಸಿದರೆ, ಆ ವೈರಿಯು ಜೀವಸಹಿತ ಹಿಂದಿರುಗುತ್ತಿದ್ದನೆ? ಮನೋವೇಗದಿಂದ ಓಡಿದರೂ ಬದುಕುತ್ತಿದ್ದನೆ? ಹಾ ಕಷ್ಟವೇ! ದೈವವನ್ನು ಮೀರುವುದು ಅಸಾಧ್ಯವೇ ಸರಿ. ಶ್ರೀರಾಮನೂ.

ನ ಶೋಚಾಮಿ ತಥಾ ರಾಮಂ ಲಕ್ಷ್ಮಣಂ ಚ ಮಹಾಬಲಮ್ ।
ನಾತ್ಮಾನಂ ಜನನೀಂ ವಾಪಿ ಯಥಾ ಶ್ವಶ್ರೂಂ ತಪಸ್ವಿನೀಮ್ ॥ ೨೦

ಸಾನುಚಿಂತಯತೇ ನಿತ್ಯಂ ಸಮಾಪ್ತವ್ರತಮಾಗತಮ್ ।
ಕದಾ ದ್ರಕ್ಷ್ಯಾಮಿ ಸೀತಾಂ ಚ ಲಕ್ಷ್ಮಣಂ ಚ ಸರಾಘವಮ್ ॥ ೨೧

ಪರಿದೇವಯಮಾನಾಂ ತಾಂ ರಾಕ್ಷಸೀ ತ್ರಿಜಟಾಬ್ರವೀತ್ ।
ಮಾ ವಿಷಾದಂ ಕೃಥಾ ದೇವಿ ಭರ್ತಾಯಂ ತವ ಜೀವತಿ ॥ ೨೨

ಕಾರಣಾನಿ ಚ ವಕ್ಷ್ಯಾಮಿ ಮಹಾಂತಿ ಸದೃಶಾನಿ ಚ ।
ಯಥೇಮೌ ಜೀವತೋ ದೇವಿ ಭ್ರಾತರೌ ರಾಮಲಕ್ಷ್ಮಣೌ ॥ ೨೪

ನ ಹಿ ಕೋಪಪರತಾನಿ ಹರ್ಷಪರ್ಯುತ್ಸುಕಾನಿ ಚ ।
ಭವಂತಿ ಯುಧಿ ಯೋಧಾನಾಂ ಮುಖಾನಿ ನಿಹತೇ ಪತೌ ॥ ೨೫

---

ಸಹ ಯುದ್ಧದಲ್ಲಿ ಹತನಾಗಿ ತಮ್ಮನೊಡನೆ ಮಲಗಿಬಿಡುವುದಾದರೆ, ಕಾಲವು ನಡೆಸಲಾರದ ಕೆಲಸ ಯಾವುದೂ ಉಳಿಯಲಿಲ್ಲ (೧೮–೧೯). ಶ್ರೀರಾಮ ಲಕ್ಷ್ಮಣರಿಗಾಗಲಿ ನನ್ನ ದುಃಸ್ಥಿತಿಗಾಗಲಿ ತಾಯಿಯನ್ನು ನೆನೆಸಿಕೊಂಡಾಗಲಿ, ನನಗೆ ಅಷ್ಟು ಸಂಕಟವಾಗದು. ತಪಸ್ವಿನಿಯಾದ ನನ್ನ ಅತ್ತೆಯನ್ನು ನೆನೆಸಿಕೊಂಡರೆ, ನನ್ನ ಸಂಕಟವು ಉಕ್ಕಿ ಉಮ್ಮಳಿಸುವುದು (೨೦) ಆ ಕೌಸಲ್ಯಾದೇವಿಯು ಸರ್ವದಾ ಒಂದೇ ಚಿಂತೆಯಲ್ಲಿ ಇದ್ದಾಳೆ 'ಯಾವಾಗ ನನ್ನ ಮಗನು ವನವಾಸವ್ರತವನ್ನು ಮುಗಿಸಿಕೊಂಡು ಬಂದಾನು? ಯಾವಾಗ ಲಕ್ಷ್ಮಣನನ್ನು ಕಂಡೇನು? ಸೀತೆಯನ್ನು ನೋಡಿಯೇನು' ಎಂದು ನಿತ್ಯವೂ ತಪಸ್ಸುಮಾಡುತ್ತಿರುವಳಲ್ಲ!'' ಎಂದು ಗೋಳಾಡಿದಳು (೨೧). ಹೀಗೆ ರೋದಿಸುತ್ತಿದ್ದ ಸೀತೆಯನ್ನು ನೋಡಿ ತ್ರಿಜಟೆಯು ಸಂತೈಸತೊಡಗಿದಳು : ''ಅಮ್ಮ –ಸೀತೆ, ಅಳಬೇಡ. ನಿನ್ನ ಪತಿಯು ಬದುಕಿದ್ದಾನೆ! ಇದಕ್ಕೆ ಪ್ರಬಲವಾದ ಯೋಗ್ಯ ಕಾರಣಗಳಿವೆ. ಹೇಳುವೆನು ಕೇಳು : ದೇವಿ, ಸೋದರರಾದ ರಾಮಲಕ್ಷ್ಮಣರಿಬ್ಬರೂ ಬದುಕಿದ್ದಾರೆ (೨೨–೨೩). ಯುದ್ಧರಂಗದಲ್ಲಿ ಮುಖ್ಯನಾಯಕನಾದ ರಾಘವನು ಹತನಾಗಿದ್ದರೆ, ಈ ವಾನರಯೋಧರ ಮುಖಗಳಲ್ಲಿ ಈ ಬಗೆಯ ಕೋಪಾವೇಶವು ಕಾಣಿಸುತ್ತಿರಲಿಲ್ಲ; ಉತ್ಸಾಹವು ತುಳುಕುತ್ತಿರಲಿಲ್ಲ.

ಇದಂ ವಿಮಾನಂ ವೈದೇಹಿ ಪುಷ್ಪಕಂ ನಾಮ ನಾಮತಃ ।
ದಿವ್ಯಂ ತ್ವಾಂ ಧಾರಯೇನ್ನೈವಂ ಯದ್ಯೇತೌ ಗತಜೀವಿತೌ ॥ ೨೫

ಹತವೀರಪ್ರಧಾನಾ ಹಿ ಹತೋತ್ಸಾಹಾ ನಿರುದ್ಯಮಾ ।
ಸೇನಾ ಭ್ರಮತಿ ಸಂಖ್ಯೇಷು ಹತಕರ್ಣೇವ ನೌರ್ಜಲೇ ॥ ೨೬

ಇಯಂ ಪುನರಸಂಭ್ರಾಂತಾ ನಿರುದ್ವಿಗ್ನಾ ತರಸ್ವಿನೀ ।
ಸೇನಾ ರಕ್ಷತಿ ಕಾಕುತ್ಸ್ಥೌ ಮಯಾ ಪ್ರೀತ್ಯಾ ನಿವೇದಿತೌ ॥ ೨೭

ಸಾ ತ್ವಂ ಭವ ಸುವಿಸ್ರಬ್ಧಾ ಅನುಮಾನೈಃ ಸುಖೋದಯೈಃ ।
ಅಹತೌ ಪಶ್ಯ ಕಾಕುತ್ಸ್ಥೌ ಸ್ನೇಹಾದೇತದ್ಬ್ರವೀಮಿ ತೇ ॥ ೨೮

ಅನೃತಂ ನೋಕ್ತಪೂರ್ವಂ ಮೇ ನಚ ವಕ್ಷ್ಯೇ ಕದಾಚನ ।
ಚಾರಿತ್ರಸುಖಶೀಲತ್ವಾತ್ಪ್ರವಿಷ್ಟಾಸಿ ಮನೋ ಮಮ ॥ ೨೯

ನೇಮೌ ಶಕ್ಯೌ ರಣೇ ಜೇತುಂ ಸೇಂದ್ರೈರಪಿ ಸುರಾಸುರೈಃ ।
ತಾದೃಶಂ ದರ್ಶನಂ ದೃಷ್ಟ್ವಾ ಮಯಾ ಚಾವೇದಿತಂ ತವ ॥ ೩೦

---

ಅವರಿಬ್ಬರೂ ಮೃತರಾಗಿದ್ದ ಪಕ್ಷದಲ್ಲಿ, ವೈದೇಹಿ, ಈ ಪುಷ್ಪಕವೆಂಬ ದಿವ್ಯ ವಿಮಾನವು ಪತಿಹೀನೆಯಾದ ನಿನ್ನನ್ನು ಹೊರುತ್ತಿರಲಿಲ್ಲ! (೨೪–೨೫). ಯುದ್ಧದಲ್ಲಿ ಪ್ರಧಾನವೀರನು ಹತನಾದರೆ, ಸೇನೆಯು ಉತ್ಸಾಹಗುಂದಿ ಮುಂದಿನ ಯುದ್ಧ ಪ್ರಯತ್ನವನ್ನು ಕೈಬಿಡುತ್ತದೆ. ಕರ್ಣಧಾರನಿಲ್ಲದ ನೌಕೆಯು ನೀರಿನಲ್ಲಿ ದಿಕ್ಕುಗೆಟ್ಟು ಚಲಿಸುವಂತೆ ಅಲೆಯುತ್ತದೆ (೨೬). ಆದರೆ ಈ ವಾನರ ಸೇನೆಯು ದಿಕ್ಕುಗೆಟ್ಟಿಲ್ಲ ; ನಿರುತ್ಸಾಹವಾಗಿಲ್ಲ ಈ ಸೇನೆಯು ಉದ್ಯೋಗ ನಿರತವಾಗಿ ರಾಮಲಕ್ಷ್ಮಣರನ್ನು ಎಚ್ಚರಿಕೆಯಿಂದ ರಕ್ಷಿಸುತ್ತಿದೆ. ಇವರಿಬ್ಬರೂ ಬದುಕಿರುವರೆಂದು ನಾನು ಸಂತೋಷದಿಂದ ಹೇಳುತ್ತೇನೆ (೨೭). ಆದ್ದರಿಂದ, ಸೀತೆ, ಇವರು ಜೀವಿಸಿದ್ದಾರೆಂದು ದೃಢವಾಗಿ ನಂಬು. ಸ್ಪಷ್ಟವಾಗಿ ಕಾಣುವ ಈ ಚಿಹ್ನೆಗಳಿಂದ ರಾಘವರಿಬ್ಬರ ಹತರಾಗಿಲ್ಲವೆಂದು ತಿಳಿ ಸ್ನೇಹದಿಂದ ಈ ಮಾತನ್ನು ಹೇಳುತ್ತಿದ್ದೇನೆ (೨೮). ದೇವಿ, ನಾನು ಹಿಂದೆಂದೂ ಸಟೆಯಾಡಿದವಳಲ್ಲ; ಮುಂದೆ ಆಡುವವಳೂ ಅಲ್ಲ. ನಿರ್ಮಲವಾದ ನಿನ್ನ ಚಾರಿತ್ರ, ಆನಂದಕರವಾದ ಗುಣಶೀಲಗಳು ನನ್ನ ಹೃದಯವನ್ನು ಸೂರೆಗೊಂಡಿವೆ. ನನ್ನ ಹೃದಯದಲ್ಲಿ ನೆಲೆಸಿದ್ದೀಯೆ (೨೯) ಸುರಾಸುರರೊಡನೆ ದೇವೇಂದ್ರನೇ

ಇದಂ ಚ ಸಮುಹಚ್ಚಿಹ್ನಂ ಶನೈಃ ಪಶ್ಯಸ್ವ ಮೈಥಿಲಿ ।
ನಿಃಸಂಜ್ಞಾವಪ್ಯುಭಾವೇತೌ ನೈವ ಲಕ್ಷ್ಮೀರ್ವಿಮುಂಚತಿ ॥ ೩೧

ಪ್ರಾಯೇಣ ಗತಸತ್ತ್ವಾನಾಂ ಪುರುಷಾಣಾಂ ಗತಾಯುಷಾಮ್ ।
ದೃಶ್ಯಮಾನೇಷು ವಕ್ತ್ರೇಷು ಪರಂ ಭವತಿ ವೈಕೃತಮ್ ॥ ೩೨

ತ್ಯಜ ಶೋಕಂ ಚ ಮೋಹಂ ಚ ದುಃಖಂ ಚ ಜನಕಾತ್ಮಜೇ ।
ರಾಮಲಕ್ಷ್ಮಣಯೋರರ್ಥೇ ನಾದ್ಯ ಶಕ್ಯ ಮಜೀವಿತುಮ್ ॥ ೩೩

ಶ್ರುತ್ವಾ ತು ವಚನಂ ತಸ್ಯಾಃ ಸೀತಾ ಸುರಸುತೋಪಮಾ ।
ಕೃತಾಂಜಲಿರುವಾಚೇದಮೇವಮಸ್ತ್ವಿತಿ ಮೈಥಿಲೀ ॥ ೩೪

ವಿಮಾನಂ ಪುಷ್ಪಕಂ ತತ್ತು ಸಂನಿವರ್ತ್ಯ ಮನೋಜವಮ್।
ದೀನಾಂ ತ್ರಿಜಟಯಾ ಸೀತಾ ಲಂಕಾಮೇವ ಪ್ರವೇಶಿತಾ ॥ ೩೫

ತತಸ್ತ್ರಿಜಟಯಾ ಸಾರ್ಧಂ ಪುಷ್ಪ ಕಾದವರುಹ್ಯ ಸಾ ।
ಅಶೋಕವನಿಕಾಮೇವ ರಾಕ್ಷಸೀಭಿಃ ಪ್ರೇವಶಿತಾ ॥ ೩೬

---

ಬಂದು ಎದುರಿಸಿದರೂ ಈ ಶೂರರನ್ನು ಗೆಲ್ಲಲು ಸಾಧ್ಯವಿಲ್ಲ. ಇವರು ಬದುಕಿರುವ ಕುರುಹನ್ನು ಗಮನಿಸಿಯೇ ನಾನು ಹೀಗೆ ತಿಳಿಸಿದ್ದೇನೆ ಮೈಥಿಲಿ, ಇನ್ನೊಂದು ದೊಡ್ಡ ಕುರುಹನ್ನು ಸರಿಯಾಗಿ ಪರಿಶೀಲಿಸು. ಇವರು ಮೂರ್ಛಿತರಾಗಿದ್ದರೂ ಮುಖಕಾಂತಿಯು ಸ್ವಲ್ಪವೂ ಕಂದಿರುವುದಿಲ್ಲ (೩೦–೩೧). ಪ್ರಾಣಹೋದಮೇಲಾಗಲಿ ಆಯುಸ್ಸು ಮುಗಿಯುತ್ತ ಬಂದರಾಗಲಿ, ಜನರ ಮುಖವು ಕಳೆಗುಂದಿ ಬಹಳ ವಿಕಾರವು ಕಂಡುಬರುವುದು. ಜಾನಕಿ, ಈ ಶೋಕವನ್ನೂ ಈ ಭ್ರಾಂತಿಯನ್ನೂ ಪರಿತ್ಯಜಿಸು ; ಅಳಬೇಡ. ರಾಮಲಕ್ಷ್ಮಣರು ಮೃತರಾಗಿರುವುದು ಸಂಭವವೇ ಅಲ್ಲ '' ಎಂದು ಹೇಳಿದಳು (೩೨–೩೩). ತ್ರಿಜಟೆಯ ಮಾತನ್ನು ಕೇಳಿ ದೇವಕನ್ಯೆಯಂತಿದ್ದ ಮೈಥಿಲಿಯು ಕೈಮುಗಿದುಕೊಂಡು ''ಅಮ್ಮಾ –ತ್ರಿಜಟೆ, ನೀನು ಹೇಳಿದಂತೆ ಇವರು ಕ್ಷೇಮದಿಂದ ಬದುಕಲಿ '' ಎಂದು ನುಡಿದಳು (೩೪). ಆಮೇಲೆ ರಾಕ್ಷಸಿಯರು ಪುಷ್ಪಕ ವಿಮಾನವನ್ನು ಮನೋವೇಗದಿಂದ ಹಿಂದಿರುಗಿಸಿದರು. ದೀನಳಾದ ಸೀತೆಯು ತ್ರಿಜಟೆಯೊಡನ ಲಂಕೆಗೆ ಹಿಂದಿರುಗಬೇಕಾಯಿತು. ಅನಂತರ ರಾಕ್ಷಸಿಯರು ಸೀತೆಯನ್ನು ಪುಷ್ಪಕದಿಂದಳಿಸಿ ಅಶೋಕವನಕ್ಕೆ ಕರೆದೊಯ್ದರು. ಅವಳೊಂದಿಗೆ

ಪ್ರವಿಶ್ಯ ಸೀತಾ ಬಹುವೃಕ್ಷಷಂಡಾಂ
　　ತಾಂ ರಾಕ್ಷಸೇಂದರಸ್ಯ ವಿಹಾರಭೂಮಿಮ್ ।
ಸಂಪ್ರೇಕ್ಷ್ಯ ಸಂಚಿಂತ್ಯ ಚ ರಾಜಪುತ್ರೀ
　　ಪರಂ ವಿಷಾದಂ ಸಮುಪಾಜಗಾಮ ॥　　೩೭

ಇತಿ ಶ್ರೀ ಮದ್ರಾಮಾಯಣೇ ಯುದ್ಧಕಾಂಡೇ ಅಷ್ಟಚತ್ವಾರಿಂಶಃ ಸರ್ಗಃ

---

ತ್ರಿಜಟೆಯೂ ಹೋದಳು (೩೫–೩೬) ವೃಕ್ಷಸಂಪತ್ತಿನಿಂದ ವಿರಾಜಿಸುತ್ತಿದ್ದ ಅಶೋಕವನವು ರಾಕ್ಷಸೇಂದ್ರನ ವಿಹಾರಭೂಮಿ. ಅಲ್ಲಿಗೆ ಹೋದಮೇಲೂ ಜಾನಕಿಗೆ ಶ್ರೀರಾಮಲಕ್ಷ್ಮಣರನ್ನು ಕಂಡ ದೃಶ್ಯವೇ ಕಣ್ಣ ಮುಂದಿತ್ತು. ಅದನ್ನು ನೆನೆನೆನೆದು ದುಃಖದಿಂದ ಬಸವಳಿದಳು (೩೭).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದ ನಲವತ್ತೆಂಟನೆಯ ಸರ್ಗ

---

## ಏಕೋನಪಂಚಾಶಃ ಸರ್ಗಃ

### ರಾಮನಿರ್ವೇದಃ

**ಘೋರೇಣ ಶರಬಂಧೇನ ಬದ್ಧೌ ದಶರಥಾತ್ಮಜೌ ।**
**ನಿಃಶ್ವಸಂತೌ ಯಥಾ ನಾಗೌ ಶಯಾನೌ ರುಧಿರೋಕ್ಷಿತೌ ॥** ೧

**ಸರ್ವೇ ತೇ ವಾನರಶ್ರೇಷ್ಠಾಃ ಸಸುಗ್ರೀವಾ ಮಹಾಬಲಾಃ ।**
**ಪರಿವಾರ್ಯ ಮಹಾತ್ಮಾನೌ ತಸ್ಥುಃ ಶೋಕಪರಿಪ್ಲುತಾಃ ॥** ೨

**ಏತಸ್ಮಿನ್ನಂತರೇ ರಾಮಃ ಪ್ರತ್ಯಬುಧ್ಯತ ವೀರ್ಯವಾನ್ ।**
**ಸ್ಥಿರತ್ವಾತ್ಸಯೋಗಾಚ್ಚ ಶರೈಃ ಸಂದಾನಿತೋಽಪಿ ಸನ್ ॥** ೩

**ತತೋ ದೃಷ್ಟ್ವಾ ಸುರುಧಿರಂ ವಿಷಣ್ಣಂ ಗಾಢಮರ್ಪಿತಮ್ ।**
**ಭ್ರಾತರಂ ದೀನವದನಂ ಪರ್ಯದೇವಯದಾತುರಃ ॥** ೪

**ಕಿಂ ನು ಮೇ ಸೀತಯಾ ಕಾರ್ಯಂ ಕಿಂ ಕಾರ್ಯಂ ಜೀವಿತೇನ ವಾ ।**
**ಶಯಾನಂ ಯೋಽದ್ಯ ಪಶ್ಯಾಮಿ ಭ್ರಾತರಂ ಯುಧಿ ನಿರ್ಜಿತಮ್ ॥** ೫

## ಸರ್ಗ ೪೯

### ಶ್ರೀರಾಮನು ಮೂರ್ಛೆಯಿಂದೆದ್ದು ಲಕ್ಷ್ಮಣನಿಗಾಗಿ ಶೋಕಿಸುವುದು. ವಿಭೀಷಣನ ಆಗಮನ

ಘೋರವಾದ ಸರ್ಪಾಸ್ತ್ರಬಂಧನಕ್ಕೆ ಸಿಕ್ಕಿದ ಶ್ರೀರಾಮಲಕ್ಷ್ಮಣರು, ಸರ್ಪಗಳಂತೆ ಆಗಾಗ ನಿಟ್ಟುಸಿರುಬಿಡುತ್ತ ರಕ್ತದಲ್ಲಿ ತೊಯ್ದು ಮಲಗಿದ್ದರು. ಸುಗ್ರೀವನೇ ಮೊದಲಾದ ಬಲಶಾಲಿಗಳೂ ಧೀರರೂ ಆದ ವಾನರೋತ್ತಮರು ಅವರಿಬ್ಬರ ಸುತ್ತಲೂ ಶೋಕಾರ್ತರಾಗಿ ನಿಂತಿದ್ದರು (೧–೨). ಸ್ವಲ್ಪ ಹೊತ್ತನಲ್ಲಿ ವೀರ್ಯಶಾಲಿಯಾದ ಶ್ರೀರಾಮನು ಎಚ್ಚೆತ್ತನು. ನಾಗಪಾಶಗಳಿಂದ ಬದ್ಧ ಗಾತ್ರನಾಗಿದ್ದರೂ ಶ್ರೀರಾಮನು ತನ್ನ ಅಸಾಧಾರಣವಾದ ಸ್ಥೈರ್ಯದಿಂದಲೂ ಸತ್ತ್ವಬಲದಿಂದಲೂ ಚೇತರಿಸಿಕೊಂಡನು. ಬಳಿಯಲ್ಲಿ ತಮ್ಮನಾದ ಲಕ್ಷ್ಮಣನು ರಕ್ತದಲ್ಲಿ ನೆನೆದು ಅಸ್ತ್ರಕೀಲಿತನಾಗಿ ಕುಸಿದುಬಿದ್ದಿರುವುದನ್ನು ಕಂಡನು. ಕಳೆಗುಂದಿದ ತಮ್ಮನ ಮುಖವನ್ನು ವೀಕ್ಷಿಸಿ ರಾಘವನು ಶೋಕಾರ್ತನಾಗಿ ವಿಲಪಿಸತೊಡಗಿದನು (೨–೩): ''ಅಯ್ಯೋ! ಇನ್ನು ನನಗೆ ಸೀತೆಯಿಂದೇನಾಗ

**ಶಕ್ಯಾ ಸೀತಾಸಮಾ ನಾರೀ ಮರ್ತ್ಯಲೋಕೇ ವಿಚಿನ್ವತಾ ।**
**ನ ಲಕ್ಷ್ಮಣಸಮೋ ಭ್ರಾತಾ ಸಚಿವಃ ಸಾಂಪರಾಯಿಕಃ ॥** ೬

**ಪರಿತ್ಯಕ್ಷ್ಯಾಮ್ಯಹಂ ಪ್ರಾಣಾನ್ ವಾನರಾಣಾಂ ತು ಪಶ್ಯತಾಮ್ ।**
**ಯದಿ ಪಂಚತ್ವಮಾಪನ್ನಃ ಸುಮಿತ್ರಾನಂದವರ್ಧನಃ ॥** ೭

**ಕಿಂ ನು ವಕ್ಷ್ಯಾಮಿ ಕೌಸಲ್ಯಾಂ ಮಾತರಂ ಕಿಂ ನು ಕೈಕಯೀಮ್ ।**
**ಕಥಮಂಬಾಂ ಸುಮಿತ್ರಾಂ ಚ ಪುತ್ರದರ್ಶನಲಾಲಸಾಮ್ ॥** ೮

**ವಿವತ್ಸಾಂ ವೇಪಮಾನಾಂ ಚ ಕ್ರೋಶಂತೀಂ ಕುರರೀಮಿವ ।**
**ಕಥಮಾಶ್ವಾಸಯಿಷ್ಯಾಮಿ ಯದಿ ಯಾಸ್ಯಾಮಿ ತಂ ವಿನಾ ॥**

**ಕಥಂ ವಕ್ಷ್ಯಾಮಿ ಶತ್ರುಘ್ನಂ ಭರತಂ ಚ ಯಶಸ್ವಿನಮ್ ।**
**ಮಯಾ ಸಹ ವನಂ ಯತೋ ವಿನಾ ತೇನ ಗತಃ ಪುನಃ ॥** ೧೦

**ಉಪಾಲಂಭಂ ನ ಶಕ್ಷ್ಯಾಮಿ ಸೋಢುಂ ಬತ ಸುಮಿತ್ರಯಾ ।**
**ಇಹೈವ ದೇಹಂ ತ್ಯಕ್ಷ್ಯಾಮಿ ನ ಹಿ ಜೀವಿತುಮುತ್ಸಹೇ ॥** ೧೧

---

ಬೇಕು? ನಾನಾದರೂ ಏಕೆ ಬದುಕಿರಬೇಕು? ಯುದ್ಧದಲ್ಲಿ ಶತ್ರು ನಿರ್ಜಿತನಾಗಿ ಮಲಗಿರುವ ತಮ್ಮನನ್ನು ನೋಡಿದೆನಲ್ಲ! ಈ ಭೂಲೋಕದಲ್ಲಿ ಹುಡುಕುತ್ತ ಹೋದರೆ ಸೀತೆಯಂತಹ ಇನ್ನೊಬ್ಬನಾರಿ ದೊರೆತಾಳು! ಲಕ್ಷ್ಮಣನಂತಹ ತಮ್ಮನು ದೊರಕುವನೆ? ರಣದಕ್ಷನಾದ ಇಂತಹ ಆಪ್ತನಾದ ತಮ್ಮನು ಸಿಗುವನೆ? (೫–೬). ಸುಮಿತ್ರಾದೇವಿಯ ಈ ಮುದ್ದುಗುವರನು ಮರಣಹೊಂದಿರುವುದೇ ದಿಟವಾದರೆ, ವಾನರರೆ, ನಿಮ್ಮ ಕಣ್ಣೆದುರಿಗೇ ನಾನು ಪ್ರಾಣವನ್ನು ಬಿಡುವೆನು ! ನನ್ನ ತಾಯಿಯಾದ ಕೌಸಲ್ಯೆಗೆ ಏನು ಹೇಳಲಿ ? ಕೈಕೇಯಿಗೆ ಏನು ಹೇಳಲಿ? ಮಗನನ್ನು ನೋಡಲು ಹಾತೊರೆಯುವ ಅಮ್ಮನಾದ ಸುಮಿತ್ರೆಗೆ ಏನು ಹೇಳಲಿ? (೭–೮). ಲಕ್ಷ್ಮಣನನ್ನು ಬಿಟ್ಟು ನಾನು ಅಯೋಧ್ಯೆಗೆ ಹೋದರೆ, ಚಿಕ್ಕಮ್ಮ ನನ್ನು ಹೇಗೆ ಸಂತೈಸಲಿ ? ತನ್ನ ಪುತ್ರನು ಬರಲಿಲ್ಲವೆಂದು ತರತರನೆ ನಡುಗುತ್ತ ಕುರರಿಯಂತೆ ಚೀತ್ಕರಿಸಿ ಅಳತೊಡಗುವ ಆ ಸುಮಿತ್ರೆಗೆ ಏನು ಹೇಳಿ ಸಮಾಧಾನಪಡಿಸಲಿ ? (೯). ಶತ್ರುಘ್ನನಿಗೂ ಕೀರ್ತಿಶಾಲಿಯಾದ ಭರತನಿಗೂ ಹೇಗೆ ಉತ್ತರವನ್ನು ಹೇಳಲಿ? ಹಾ! ಅಯ್ಯೋ! 'ರಾಮ, ನಿನ್ನೊಡನೆ ನನ್ನ ಮಗನು ಕಾಡಿಗೆ ಬಂದನು. ಅವನನ್ನು ತ್ಯಜಿಸಿ ನೀನೊಬ್ಬನೇ ಬಂದೆಯಾ?' ಎಂದು ಸುಮಿತ್ರೆಯು ಕೇಳಿದರೆ, ಆ ಚುಚ್ಚುಮಾತನ್ನು ಹೇಗೆ ತಾಳಿಕೊಳ್ಳಲಿ?

ಧಿಙ್ಮಾಂ ದುಷ್ಕೃತಕರ್ಮಾಣಮನಾರ್ಯಂ ಯತ್ಕೃತೇ ಹ್ಯಸೌ ।
ಲಕ್ಷ್ಮಣಃ ಪತಿತಃ ಶೇತೇ ಶರತಲ್ಪೇ ಗತಾಸುವತ್ ॥ ೧೨

ತ್ವಂ ನಿತ್ಯಂ ಸವಿಷಣ್ಣಂ ಮಾಮಾಶ್ವಾಸಯಸಿ ಲಕ್ಷ್ಮಣ ।
ಗತಾಸುರ್ನಾದ್ಯ ಶಕ್ನೋಷಿ ಮಾಮಾರ್ತಮಭಿಭಾಷಿತುಮ್ ॥ ೧೩

ಯೇನಾದ್ಯ ನಿಹತಾ ಯುದ್ಧೇ ರಾಕ್ಷಸಾ ವಿನಿಪಾತಿತಾಃ ।
ತಸ್ಯಾಮೇವ ಕ್ಷಿತೌ ವೀರಃ ಸ ಶೇತೇ ನಿಹತಃ ಪರೈಃ ॥ ೧೪

ಶಯಾನಃ ಶರತಲ್ಪೇಽಸ್ಮಿನ್ ಸ್ವಶೋಣಿತಪರಿಪ್ಲುತಃ ।
ಶರಜಾಲೈಶ್ಚಿತೋ ಭಾತಿ ಭಾಸ್ಕರೋಽಸ್ತಮಿವ ವ್ರಜನ್ ॥ ೧೫

ಬಾಣಾಭಿಹತಮರ್ಮತ್ವಾನ್ನ ಶಕ್ನೋತ್ಯಭಿಭಾಷಿತುಮ್ ।
ರುಜಾ ಚಾಬ್ರುವತೋಽಪ್ಯಸ್ಯ ದೃಷ್ಟಿರಾಗೇಣ ಸೂಚ್ಯತೇ ॥ ೧೬

ಯಥೈವ ಮಾಂ ವನಂ ಯಾಂತಮನುಯಾತೋ ಮಹಾದ್ಯುತಿಃ ।
ಅಹಮಪ್ಯನುಯಾಸ್ಯಾಮಿ ತಥೈವೈನಂ ಯಮಕ್ಷಯಮ್ ॥ ೧೭

---

ಇಲ್ಲಿಯೇ ದೇಹವನ್ನು ತೊರೆದುಬಿಡುವೆನು. ನನಗೆ ಬದುಕುವ ಇಚ್ಛೆಯಿಲ್ಲ (೧೦-೧೧). ದುಷ್ಟನಾದ ನನಗೆ ಧಿಕ್ಕಾರ ! ಅನಾರ್ಯನಾದ ನನಗೆ ಧಿಕ್ಕಾರ ! ನನಗೋಸ್ಕರ ಲಕ್ಷ್ಮಣನು ಶರತಲ್ಪದಲ್ಲಿ ನಿರ್ಜೀವನಂತೆ ಮಲಗಬೇಕಾಯಿತೆ ! ಓ ಲಕ್ಷ್ಮಣ, ದುಃಖಾರ್ತನಾದ ನನಗೆ ಸದಾ ಸಮಾಧಾನ ಹೇಳಿ ಸಂತೈಸುತ್ತಿದ್ದೆಯಲ್ಲ, ನನಗಾಗಿ ಪ್ರಾಣವನ್ನು ಬಿಟ್ಟೆಯಾ ? ಈಗ ದುಃಖಾರ್ತನಾದ ನನ್ನೊಡನೆ ಮಾತನಾಡಲಾರೆಯಾ ? (೧೨-೧೩). ಇಂದಿನ ಯುದ್ಧದಲ್ಲಿ ಯಾವ ವೀರನು ರಾಕ್ಷಸರನ್ನು ಕೊಂದು ಸದೆಬಡಿದನೋ, ಆ ಧೀರನೇ ಶತ್ರುಹತನಾಗಿ ರಣಭೂಮಿಯಲ್ಲಿ ಮಲಗಿಬಿಟ್ಟನೇ! ಬಾಣರಾಶಿಗಳಿಂದ ಭಿನ್ನಗಾತ್ರನಾಗಿ ತನ್ನ ರಕ್ತದಲ್ಲಿಯೇ ತೊಯ್ದು ಈ ಲಕ್ಷ್ಮಣನು ಶರತಲ್ಪದಲ್ಲಿ ಪವಡಿಸಿರುವನು. ಅಸ್ತಂಗತನಾಗುವ ಆದಿತ್ಯನಂತೆ ತೋರುವನು (೧೪-೧೫). ಮರ್ಮಸ್ಥಳಗಳಲ್ಲಿ ಅಭಿಹತನಾದ್ದರಿಂದ ಇವನಿಗೆ ಮಾತನಾಡಲು ಶಕ್ತಿಯಿಲ್ಲ. ಮಾತನಾಡದಿದ್ದರೂ ಇವನ ಕಣ್ಣಿನ ಸ್ಥಿತಿಯಿಂದಲೇ ಆಗುವ ಯಾತನೆಯ ಸೂಚಿತವಾಗುತ್ತದೆ ! (೧೬). ನಾನು ಅರಣ್ಯಕ್ಕೆ ಹೊರಟಾಗ ಈ ತೇಜಸ್ವಿಯು ನನ್ನನ್ನು ಬಿಡಲಾರದೆ ಹಿಂಬಾಲಿಸಿ ಬಂದನು. ಹಾಗೆಯೇ ನಾನೂ ಇವನನ್ನು

ಇಷ್ಟಬಂಧುಜನೋ ನಿತ್ಯಂ ಮಾಂ ಚ ನಿತ್ಯಮನುವ್ರತಃ ।
ಇಮಾಮದ್ಯ ಗತೋಽವಸ್ಥಾಂ ಮಮಾನಾರ್ಯಸ್ಯ ದುರ್ನಯೈಃ ॥ ೧೮

ಸುರುಷ್ಟೇನಾಪಿ ವೀರೇಣ ಲಕ್ಷ್ಮಣೇನ ನ ಸಂಸ್ಮರೇ ।
ಪರುಷಂ ವಿಪ್ರಿಯಂ ವಾಪಿ ಶ್ರಾವಿತಂ ತು ಕದಾಚನ ॥ ೧೯

ವಿಸಸರ್ಜೈಕವೇಗೇನ ಪಂಚ ಬಾಣಶತಾನಿ ಯಃ ।
ಇಷ್ವಸ್ತ್ರೇಷ್ವಧಿಕಸ್ತಸ್ಮಾತ್ಕಾರ್ತವೀರ್ಯಾಚ್ಚ ಲಕ್ಷ್ಮಣಃ ॥ ೨೦

ಅಸ್ತ್ರೈರಸ್ತ್ರಾಣಿ ಯೋ ಹನ್ಯಾಚ್ಛಕ್ರಸ್ಯಾಪಿ ಮಹಾತ್ಮನಃ ।
ಸೋಽಯಮುರ್ವ್ಯಾಂ ಹತಃ ಶೇತೇ ಮಹಾರ್ಹಶಯನೋಚಿತಃ ॥ ೨೧

ತಚ್ಚ ಮಿಥ್ಯಾಪ್ರಲಪ್ತಂ ಮಾಂ ಪ್ರಧಕ್ಷ್ಯತಿನ ಸಂಶಯಃ ।
ಯನ್ಮಯಾ ನ ಕೃತೋ ರಾಜಾ ರಾಕ್ಷಸಾನಾಂ ವಿಭೀಷಣಃ ॥ ೨೨

ಅಸ್ಮಿನ್ ಮುಹೂರ್ತೇ ಸುಗ್ರೀವ ಪ್ರತಿಯಾತುಮಿತೋಽರ್ಹಸಿ ।
ಮತ್ವಾ ಹೀನಂ ಮಯಾ ರಾಜನ್ ರಾವಣೋಽಭಿದ್ರವೇದ್ಬಲೀ ॥ ೨೩

---

ಹಿಂಬಾಲಿಸಿ ಯಮಲೋಕಕ್ಕೆ ಹೋಗಿಬಿಡುವೆನು ! ಹಾ ! ಈ ಲಕ್ಷ್ಮಣನಿಗೆ ಬಂಧುಜನಗಳಲ್ಲಿ ಎಷ್ಟು ಪ್ರೀತಿ ! ನನ್ನನ್ನು ಅರಗಳಿಗೆಯೂ ಬಿಡದೆ ಪ್ರೀತಿಯಿಂದ ಅನುಸರಿಸಿಕೊಂಡು ಬಂದನು. ಇಂಥವನಿಗೆ ಅನಾರ್ಯನಾದ ನನ್ನ ದುರ್ನೀತಿಗಳಿಂದ ಈ ಅವಸ್ಥೆಯುಂಟಾಯಿತಲ್ಲ! (೧೭–೧೮). ಎಷ್ಟು ಕೋಪದ ಸಂದರ್ಭ ಒದಗಿದರೂ ಲಕ್ಷ್ಮಣನು ನನಗೆ ಒಂದು ಬಿರುನುಡಿಯನ್ನಾಡಿದವನಲ್ಲ; ಒಂದು ಅಪ್ರಿಯನಾದ ಮಾತನ್ನು ಹೇಳಿದುದು ನೆನಪಿಲ್ಲ. ಏಕಕಾಲದಲ್ಲಿ ಐನೂರು ಬಾಣಗಳನ್ನು ಹೊಡೆಯುವ ಸಾಮರ್ಥ್ಯವು ಲಕ್ಷ್ಮಣನಿಗಿತ್ತು ! ಧನುರ್ವಿದ್ಯೆಯಲ್ಲಿ ಕಾರ್ತವೀರ್ಯನಿಗಿಂತಲೂ ಇವನು ಮಿಗಿಲು ! (೧೯–೨೦). ದೇವೇಂದ್ರನು ಪ್ರಯೋಗಿಸುವ ಅಸ್ತ್ರಗಳನ್ನು ತನ್ನ ಅಸ್ತ್ರಗಳಿಂದ ಕತ್ತರಿಸಿ ಚೆಲ್ಲಬಲ್ಲ ಈ ವೀರನು, ಅಯ್ಯೋ, ಹತನಾದನೆ ! ಸರ್ವೋತ್ತಮವಾದ ಶಯ್ಯೆಯಲ್ಲಿ ಮಲಗಬೇಕಾದ ಈ ರಾಜಪುತ್ರನು ನೆಲದಲ್ಲಿ ಹೀಗೆ ಹತನಾಗಿ ಮಲಗಬೇಕಾಯತೆ ! (೨೧). ವಿಭೀಷಣನನ್ನು ರಾಕ್ಷಸರಾಜನನ್ನಾಗಿ ನಾನು ಮಾಡಲಿಲ್ಲ ! ನನ್ನ ಮಾತು ಸುಳ್ಳಾಯಿತು. ನಿಸ್ಸಂದೇಹವಾಗಿ ಆ ಸುಳ್ಳು ನನ್ನನ್ನು ದಹಿಸದೆ ಬಿಡದು. ವಾನರೇಶ್ವರ –ಸುಗ್ರೀವ, ಈ ಕ್ಷಣದಲ್ಲಿಯೇ ನೀನು

ಅಂಗದಂ ತು ಪುರಸ್ಕೃತ್ಯ ಸಸೈನ್ಯಃ ಸಸುಹೃಜ್ಜನಃ ।
ಸಾಗರಂ ತರ ಸುಗ್ರೀವ ನೀಲೇನ ಚ ನಲೇನ ಚ ॥ ೨೪

ಕೃತಂ ಹನುಮತಾ ಕಾರ್ಯಂ ಯದನ್ಯೈ ದುರ್ಷ್ಕರಂ ರಣೇ ।
ಋಕ್ಷರಾಜೇನ ತುಷ್ಯಾಮಿ ಗೋಲಾಂಗೂಲಾಧಿಪೇನ ಚ ॥ ೨೫

ಅಂಗದೇನ ಕೃತಂ ಕರ್ಮ ಮೈಂದೇನ ದ್ವಿವಿದೇನ ಚ ।
ಯುದ್ಧಂ ಕೇಸರಿಣಾ ಸಂಖ್ಯೇ ಘೋರಂ ಸಂಪಾತಿನಾ ಕೃತಮ್ ॥ ೨೬

ಗವಯೇನ ಗವಾಕ್ಷೇಣ ಶರಭೇಣ ಗಜೇನ ಚ ।
ಅನ್ಯೈಶ್ಚ ಹರಿಭಿರ್ಯುದ್ಧಂ ಮದರ್ಥೇ ತ್ಯಕ್ತಜೀವಿತೈಃ ॥ ೨೭

ನ ಚಾತಿಕ್ರಮಿತುಂ ಶಕ್ಯಂ ದೈವಂ ಸುಗ್ರೀವ ಮಾನುಷೈಃ ।
ಯತ್ತು ಶಕ್ಯಂ ವಯಸ್ಯೇನ ಸುಹೃದಾ ಚ ಪರಂತಪ ॥ ೨೮

ಕೃತಂ ಸುಗ್ರೀವ ತತ್ಸರ್ವಂ ಭವತಾ ಧರ್ಮಭೀರುಣಾ ।
ಮಿತ್ರಕಾರ್ಯಂ ಕೃತಮಿದಂ ಭವದ್ಭಿರ್ವಾನರರ್ಷಭಾಃ ॥ ೨೯

---

ಕಿಷ್ಕಿಂಧೆಗೆ ಹೊರಡು ! ನಾನಿಲ್ಲವೆಂಬುದನ್ನರಿತು ಬಲಶಾಲಿಯಾದ ರಾವಣನು ಅಟ್ಟಿಸಿಕೊಂಡು ಬಂದಾನು (೨೨–೨೩). ಅಂಗದನನ್ನು ಮುಂದಿಟ್ಟುಕೊಂಡು ಸೇನಾಸಮೇತನಾಗಿ ಮಿತ್ರರೊಡನೆ ಹೊರಟುಹೋಗು. ನಳನೀಲಾದಿಗಳೊಡನೆ ಸಮುದ್ರವನ್ನು ದಾಟಿಬಿಡು. ಅನ್ಯರಿಗೆ ದುಷ್ಕರವಾದ ಸಾಹಸಕಾರ್ಯಗಳನ್ನು ಹನುಮಂತನು ನನಗಾಗಿ ಮಾಡಿದ್ದಾನೆ. ಋಕ್ಷರಾಜನಾದ ಜಾಂಬವಂತನೂ ಗೋಲಾಂಗೂಲಪತಿಯಾದ ಗವಾಕ್ಷನೂ ರಣರಂಗದಲ್ಲಿ ಮಹಾಕಾರ್ಯಗಳನ್ನು ನಡೆಸಿದರು. ಸಂತೃಪ್ತನಾಗಿದ್ದೇನೆ ! (೨೪–೨೫). ಅಂಗದ, ಮೈಂದ, ದ್ವಿವಿದ, ಕೇಸರಿ, ಸಂಪಾತಿ, ಗವಯ, ಗವಾಕ್ಷ, ಶರಭ, ಗಜ–ಮುಂತಾದ ಬಹು ಮಂದಿ ವಾನರವೀರರು ಪ್ರಾಣದ ಹಂಗುದೊರೆದು ನನಗಾಗಿ ಕಾದಾಡಿದ್ದಾರೆ (೨೬–೨೭). ಒಟ್ಟಿನಲ್ಲಿ ಸುಗ್ರೀವ, ದೈವವನ್ನು ಮನುಷ್ಯರು ಗೆಲ್ಲಲಾರದು ! ಮಿತ್ರ –ವೀರಾಗ್ರೇಸರ–ಸುಗ್ರೀವ, ಆಪ್ತನಾದ ಗೆಳೆಯನು ಏನೇನು ಮಾಡಲು ಸಾಧ್ಯವೋ ಅದೆಲ್ಲವನ್ನೂ ಧರ್ಮಭೀರುವಾದ ನೀನು ಮಾಡಿದ್ದೀಯೆ. ವಾನರೋತ್ತಮರೆ, ನಿಮ್ಮ ಮಿತ್ರನ ಕಾರ್ಯವೆಂದು ಬಗೆದು ಧೀರಕೃತ್ಯವನ್ನು

ಅನುಜ್ಞಾತಾ ಮಯಾ ಸರ್ವೇ ಯಥೇಷ್ಟಂ ಗಂತುಮರ್ಹಥ ।
ಶುಶ್ರುವುಸ್ತಸ್ಯ ತೇ ಸರ್ವೇ ವಾನರಾಃ ಪರಿದೇವನಮ್ ॥ ೩೦

ವರ್ತಯಾಂಚಕ್ರುರಶ್ರೂಣಿ ನೇತ್ರೈಃ ಕೃಷ್ಣೇತರೇ ಕ್ಷಣಾಃ ।
ತತಃ ಸರ್ವಾಣ್ಯನೀಕಾನಿ ಸ್ಥಾಪಯಿತ್ವಾ ವಿಭೀಷಣಃ ॥ ೩೧

ಆಜಗಾಮ ಗದಾಪಾಣಿಸ್ತ್ವರಿತೋ ಯತ್ರ ರಾಘವಃ ।
ತಂ ದೃಷ್ಟ್ವಾ ತ್ವರಿತಂ ಯಾಂತಂ ನೀಲಾಂಜನಚಯೋಪಮಮ್ ॥

ವಾನರಾ ದುದ್ರುವುಃ ಸರ್ವೇ ಮನ್ಯಮಾನಾಸ್ತು ರಾವಣಿಮ್ ।
ನಿಷ್ಟೇಷ್ಟೌ ವಿಗತಜ್ಞಾನೌ ರಣರೇಣುಸಮುಕ್ಷಿತೌ ॥ ೩೩

ಶಯಾನೌ ಶರತಲ್ಪಸ್ಥೌ ದೃಷ್ಟುಮಾಯಾದ್ವಿಭೀಷಣಃ ॥

ತಂ ರಾಕ್ಷಸೇಂದ್ರಾತ್ಮಜಶಂಕಯಾ ತೇ
ನಿಪಾತಿತೌ ರಾಜಸುತೌ ಚ ದೃಷ್ಟ್ವಾ ।

---

ನನಗಾಗಿ ಮಾಡಿದಿರಿ (ನಿಮಗೆ ಕೃತಜ್ಞನಾಗಿದ್ದೇನೆ) (೨೮–೨೯). ಇದೋ, ನಿಮಗೆ ಅನುಜ್ಞೆಯನ್ನು ನೀಡಿದ್ದೇನೆ. ಇಷ್ಟಬಂದಂತೆ ನೀವು ಹೊರಟುಹೋಗಬಹುದು!'' ಎಂದು ನುಡಿದನು. ವಾನರರೆಲ್ಲರೂ ಶ್ರೀರಾಮನ ವಿಲಾಪದ ನುಡಿಯನ್ನು ಕೇಳುತ್ತ ನಿಂತಿದ್ದರು. ಅವರ ನೇತ್ರಗಳಿಂದ ಕಣ್ಣೀರು ಬಳಬಳನೆ ಹರಿಯಿತು. (೩೦). ಅಷ್ಟರಲ್ಲಿ ವಿಭೀಷಣನು ಕಪಿಸೇನೆಗೆ ಧೈರ್ಯ ಹೇಳಿ ವ್ಯವಸ್ಥೆಗೊಳಿಸಿ, ಶ್ರೀರಾಮನಿದ್ದಲ್ಲಿಗೆ ಗದಾಪಾಣಿಯಾಗಿ ತ್ವರೆಯಿಂದ ಬಂದನು. ಅಂಜನಪರ್ವತದಂತೆ ನೀಲೋನ್ನತಕಾಯನಾದ ವಿಭೀಷಣನು ತ್ವರೆಯಿಂದ ನುಗ್ಗಿಬರುತ್ತಿರಲು,ಅಲ್ಲಿದ್ದ ವಾನರಸೈನಿಕರು ಇಂದ್ರಜಿತುವೇ ಬಂದನೆಂದು ಭ್ರಮಿಸಿ ಓಡಲಾರಂಭಿಸಿದರು! (೩೧–೩೨). ಮೂರ್ಛಿತರಾದ ಶ್ರೀರಾಮಲಕ್ಷ್ಮಣರು ರಣಧೂಳಿಯಿಂದ ಮಲಿನಾಂಗರಾಗಿ ಶರತಲ್ಪದಲ್ಲಿ ಕದಲದೆ ಮಲಗಿದ್ದರಷ್ಟೆ, ಅವನ ಪರಿಸ್ಥಿತಿಯನ್ನರಿಯಲು ವಿಭೀಷಣನು ಧಾವಿಸುತ್ತ ಬಂದನು (೩೩). ಆ ರಾಜಪುತ್ರರು ಅಸ್ತ್ರಾಭಿಹತರಾಗಿ ಬಿದ್ದಿರುವರೆಂಬುದನ್ನು ತಿಳಿದಿದ್ದ ವಾನರಸೈನಿಕರಿಗೆ ವಿಭೀಷಣನನ್ನು ಕಂಡೊಡನೆ, ರಾವಣಪುತ್ರನಾದ

**ವಿಭೀಷಣಂ ವಿವ್ಯಥಿರೇ ಚ ದೃಷ್ಟ್ವಾ**
**ಮೇಘಾ ಯಥಾ ವಾಯುಹತಾಃ ಪ್ಲವಂಗಾಃ ॥**

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕೋನಪಂಚಾಷಃ ಸರ್ಗಃ

---

## ಪಂಚಾಶಃ ಸರ್ಗಃ

ನಾಗಪಾಶವಿಮೋಕ್ಷಣಮ್

**ಅಥೋವಾಚ ಮಹಾತೇಜಾ ಹರಿರಾಜೋ ಮಹಾಬಲಃ ।**
**ಕಿಮಿಯಂ ವ್ಯಥಿತಾ ಸೇನಾ ಮೂಢವಾತೇವ ನೌರ್ಜಲೇ ॥ ೧**

**ಸುಗ್ರೀವಸ್ಯ ವಚಃ ಶ್ರುತ್ವಾ ವಾಲೀಪುತ್ರೋಽಂಗದೋಽಬ್ರವೀತ್ ।**
**ನ ತ್ವಂ ಪಶ್ಯಸಿ ರಾಮಂ ಚ ಲಕ್ಷಣಂ ಚ ಮಹಾಬಲಮ್ ॥ ೨**

---

ಇಂದ್ರಜಿತುವೇ ಮತ್ತೆ ಬಂದನೆಂದು ಭಯವಾಯಿತು ! ಬಿರುಗಾಳಿಯಿಂದ ಚದರುವ ಮೋಡಗಳಂತೆ, ಆ ಕಪಿಗಳು ದಿಕ್ಕಿದಿಕ್ಕಿಗೆ ಓಡತೊಡಗಿದರು (೨೪).

ಇಲ್ಲಿಗೆ ಶ್ರೀಮದ್ರಾಮಾಯಾಣದ ಯುದ್ಧಕಾಂಡದಲ್ಲಿ ನಲವತ್ತೊಂಬತ್ತನೆಯ ಸರ್ಗ

---

## ಸರ್ಗ ೫೦

ಶ್ರೀರಾಮಲಕ್ಷ್ಮಣರ ದುಃಸ್ಥಿತಿಯನ್ನು ನೋಡಿ ವಿಭೀಷಣನ ದುಃಖ.
ಸುಗ್ರೀವನ ಸಮಾಧಾನ, ಗರುಡನ ರಾಘವರಿಬ್ಬರನ್ನೂ
ನಾಗಪಾಶದಿಂದ ವಿಮೋಚನಗೊಳಿಸುವುದು.

ಆಗ ಮಾಹಾತೇಜಸ್ವಿಯೂ ಪರಾಕ್ರಮಿಯೂ ಆದ ಕಪೀಂದ್ರನು ''ಆಃ ! ಏನಿದು? ನಮ್ಮ ಸೇನೆ ಏಕೆ ವ್ಯಾಕುಲವಾಗಿದೆ? ಬಿರುಗಾಳಿಗೆ ಸಿಕ್ಕಿದ ನೌಕೆಯಂತೆ ದಿಙ್ಮೂಢವಾಗಿ ಪಲಾಯನಮಾಡುವುದೇಕೆ ?''ಎಂದನು (೧). ಸುಗ್ರೀವನ ಈ ಪ್ರಶ್ನೆಯನ್ನು ಕೇಳಿ ಅಂಗದನು ''ಮಹಾರಾಜ, ಇನ್ನೇನು ಕಾರಣವಿದ್ದೀತು ?ಮಹಾತ್ಮರಾದ ರಾಮಲಕ್ಷ್ಮಣರು ಶರಜಾಲವಿದೀರ್ಣದೇಹರಾಗಿ ರಕ್ತದಲ್ಲಿ ನೆನೆದು ಶರತಲ್ಪದಲ್ಲಿ ಮಲಗಿರುವುದು ಕಾಣುವುದಿಲ್ಲವೆ?'' ಎಂದು ಉತ್ತರಿಸಿದನು (೨)

ಶರಜಾಲಾಚಿತೌ ವೀರಾವುಭೌ ದಶರಥಾತ್ಮಜೌ ।
ಶರತಲ್ಪೇ ಮಹಾತ್ಮಾನೌ ಶಯಾನೌ ರುಧಿರೋಕ್ಷಿತೌ ॥ ೩

ಅಥಾಬ್ರವೀದ್ವಾನರೇಂದ್ರಃ ಸುಗ್ರೀವಃ ಪುತ್ರಮಂಗದಮ್ ।
ನಾನಿಮಿತ್ತಮಿದಂ ಮನ್ಯೇ ಭವಿತವ್ಯಂ ಭಯೇನ ತು ॥ ೪

ವಿಷಣ್ಣವದನಾ ಹ್ಯೇತೇ ತ್ಯಕ್ತಪ್ರಹರಣಾ ದಿಶಃ ।
ಪ್ರಪಲಾಯಂತಿ ಹರಯಸ್ತ್ರಾಸಾದುತ್ಫುಲ್ಲಲೋಚನಾಃ ॥ ೫

ಅನ್ಯೋನ್ಯಸ್ಯ ನಸಜ್ಜಂತೇ ನ ನಿರೀಕ್ಷಂತಿ ಪೃಷ್ಠತಃ ।
ವಿಪ್ರಕರ್ಷಂತಿ ಚಾನ್ಯೋನ್ಯಂ ಪತಿತಂ ಲಂಘಯಂತಿ ಚ ॥ ೬

ಏತಸ್ಮಿನ್ನಂತರೇ ವೀರೋ ಗದಾಪಾಣಿರ್ವಿಭೀಷಣಃ ।
ಸುಗ್ರೀವಂ ವರ್ಧಯಾಮಾಸ ರಾಘವಂ ಚ ಜಯಾಶಿಷಾ ॥ ೭

ವಿಭೀಷಣಂ ತಂ ಸುಗ್ರೀವೋ ದೃಷ್ಟ್ವಾ ವಾನರಭೀಷಣಮ್ ।
ಋಕ್ಷರಾಜಂ ಸಮೀಪಸ್ಥಂ ಜಾಂಬವಂತಮುವಾಚ ಹ ॥ ೮

ವಿಭೀಷಣೋಽಯಂ ಸಂಪ್ರಾಪ್ತೋ ಯಂ ದೃಷ್ಟ್ವಾ ವಾನರರ್ಷಭಾಃ ।
ವಿದ್ರವಂತಿ ಪರಿತ್ರಸ್ತಾ ರಾವಣಾತ್ಮಜಶಂಕಯಾ ॥ ೯

---

ಆಗ ಸುಗ್ರೀವನು ಪುತ್ರನಾದ ಅಂಗದನನ್ನು ಕುರಿತು ''ವತ್ಸ, ಬೇರೊಂದು ಅಪೂರ್ವಕಾರಣವಿಲ್ಲ. ಸೇನೆಯು ಅಂಜುವುದಕ್ಕೆ ನಿಮಿತ್ತವೇನೋ ಇದೆಯೆಂದು ತಿಳಿಯುತ್ತೇನೆ! (೨-೪). ಈ ವಾನರರು ವಿಷಣ್ಣವದನರಾಗಿ ಆಯುಧಗಳನ್ನೊಗೆದು ದಿಕ್ಕುದಿಕ್ಕಿಗೆ ಓಡುತ್ತಿದ್ದಾರೆ. ಭಯದಿಂದ ಕಣ್ಣರಳಿಸಿ ನೋಡುತ್ತಿದ್ದಾರೆ. ಹಿಂದಕ್ಕೆ ಸಹ ನೋಡದೆ ಲಜ್ಜೆಗೆಟ್ಟು ಪಲಾಯನಮಾಡು ತ್ತಿದ್ದಾರೆ. ಒಬ್ಬನ್ನೊಬ್ಬರು ಹಿಡಿದೆಳೆಯುತ್ತ ದಾರಿಗಡ್ಡಲಾದುದನ್ನು ನೆಗೆದು ಲಂಘಿಸುತ್ತ ಓಡುತ್ತಿದ್ದಾರೆ !'' ಎಂದು ಹೇಳಿದನು (೫-೬). ಅಷ್ಟರಲ್ಲಿ ವೀರನಾದ ವಿಭೀಷಣನು ಗದಾಪಾಣಿಯಾಗಿ ಬಂದನು. ಅವನು ಸುಗ್ರೀವನನ್ನು ಅಭಿನಂದಿಸಿ ಶ್ರೀರಾಮನನ್ನು ಕಂಡು ಜಯಕಾರಮಾಡಿದನು. ಸುಗ್ರೀವನು ವಿಭೀಷಣನನ್ನು ನೋಡಿ 'ಓಹೊ! ಇವನು ಇಂದ್ರಜಿತುವೆಂದು ಭ್ರಮಿಸಿ ಕಪಿಸೈನಿಕರು ಹೆದರಿದ್ದಾರೆ !' ಎಂದುಕೊಂಡು, ಸಮೀಪದಲ್ಲಿದ್ದಜಾಂಬವಂತನಿಗೆ ಹೀಗೆ ಹೇಳಿದನು (೭-೮): ''ಆರ್ಯ-ಜಾಬವಂತ, ಈ ವಿಭೀಷಣನು

ಶೀಘ್ರಮೇತಾನ್ ಸುಸಂತ್ರಸ್ತಾನ್ ಬಹುಧಾ ವಿಪ್ರಧಾವಿತಾನ್ ।
ಪರ್ಯವಸ್ಥಾಪಯಾಖ್ಯಾಹಿ ವಿಭೀಷಣಮುಪಸ್ಥಿತಮ್ ॥ ೧೦

ಸುಗ್ರೀವೇಣೈವಮುಕ್ತಸ್ತು ಜಾಂಬವಾನೃಕ್ಷಪಾರ್ಥಿವಃ ।
ವಾನರಾನ್ ಸಾಂತ್ವಯಾಮಾಸ ಸಂನಿರುಧ್ಯ ಪ್ರಧಾವತಃ ॥ ೧೧

ತೇ ನಿವೃತ್ತಾಃ ಪುನಃ ಸರ್ವೇ ವಾನರಾಸ್ತ್ಯಕ್ತಸಂಭ್ರಮಾಃ ।
ಋಕ್ಷರಾಜವಚಃ ಶ್ರುತ್ವಾ ತಂ ಚ ದೃಷ್ಟ್ವಾ ವಿಭೀಷಣಮ್ ॥ ೧೨

ವಿಭೀಷಣಸ್ತು ರಾಮಸ್ಯ ದೃಷ್ಟ್ವಾ ಗಾತ್ರಂ ಶರೈಶ್ಚಿತಮ್ ।
ಲಕ್ಷ್ಮಣಸ್ಯ ಚ ಧರ್ಮಾತ್ಮಾ ಬಭೂವ ವ್ಯಥಿತೇಂದ್ರಿಯಃ ॥ ೧೩

ಜಲಕ್ಲಿನ್ನೇನ ಹಸ್ತೇನ ತಯೋರ್ನೇತ್ರೇ ಪ್ರಮೃಜ್ಯ ಚ ।
ಶೋಕಸಂಪೀಡಿತಮನಾ ರುರೋದ ವಿಲಲಾಪ ಚ ॥ ೧೪

ಇಮೌ ತೌ ಸತ್ತ್ವ ಸಂಪನ್ನೌ ವಿಕ್ರಾಂತೌ ಪ್ರಿಯಸಂಯುಗೌ ।
ಇಮಾಮವಸ್ಥಾಂ ಗಮಿತೌ ರಾಕ್ಷಸೈಃ ಕೂಟಯೋಧಿಭಿಃ ॥ ೧೫

---

ಬಂದುದನ್ನು ಕಂಡು ವಾನರರು ಹೆದರಿ ಓಡುತ್ತಿದ್ದಾರೆ ! ಇವನು ಇಂದ್ರಜಿತುವೆಂಬ ಭ್ರಾಂತಿಯಿಂದ ಅಂಜಿದ್ದಾರೆ. ದಿಕ್ಕುದಿಕ್ಕಿಗೆ ಚದರಿ ಓಡುತ್ತಿರುವ ಸೈನಿಕರಿಗೆ ಧೈರ್ಯವನ್ನು ಹೇಳು. ಬಂದವನು ವಿಭೀಷಣನೆಂದು ತಿಳಿಸಿ ಅವರನ್ನು ತಡೆದು ನಿಲ್ಲಿಸು'' ಎಂದನು (೯–೧೦). ಆಗ ಋಕ್ಷರಾಜನಾದ ಜಾಂಬವಂತನು ಬೇಗಬೇಗನೆ ಎಲ್ಲೆಡೆಯೂ ಹೋಗಿ, ಬಂದವನು ವಿಭೀಷಣನೆಂದು ತಿಳಿಸಿ, ಪಲಾಯನಮಾಡುತ್ತಿದ್ದ ಸೈನಿಕರನ್ನು ಸಂತೈಸಿ ವ್ಯವಸ್ಥೆಗೊಳಿಸಿದನು. ಆಗ ಕಪಿಗಳು ಜಾಂಬವಂತನ ಮಾತಿನಿಂದ ಧೈರ್ಯವನ್ನವಲಂಬಿಸಿ ಹಿಂದಕ್ಕೆ ಬಂದರು. ಹತ್ತಿರ ಬಂದು ವಿಭೀಷಣನನ್ನು ಕಣ್ಣಾರೆ ನೋಡಿ ಭಯವನ್ನು ತೊರೆದರು ! (೧೧–೧೨). ಇತ್ತ ವಿಭೀಷಣನು ಶ್ರೀರಾಮಲಕ್ಷ್ಮಣರ ಸರ್ವಾಂಗಗಳೂ ಶರಗಳಿಂದ ಜರ್ಝರಿತವಾಗಿರುವುದನ್ನು ವೀಕ್ಷಿಸಿದನು. ಆ ಧರ್ಮಾತ್ಮನ ಅಂತಃಕಾರಣಕ್ಕೆ ಸಂಕಟವಾಯಿತು. ಕೈಯಲ್ಲಿ ನೀರನ್ನು ತೆಗೆದುಕೊಂಡು ಅವರಿಬ್ಬರ ಕಣ್ಣುಗಳನ್ನೊರಸಿದನು. ಶೋಕಾರ್ತನಾಗಿ ತಾನೂ ಕಣ್ಣೀರು ಮಿಡಿಯುತ್ತ ಅಳತೊಡಗಿದನು (೧೩–೧೪): ''ಆಹಾ! ಏನು ದುರದೃಷ್ಟವಿದು! ಸಮರೋತ್ಸಾಹಿಗಳಾದ ಈ ರಾಜಪುತ್ರರು ಸತ್ತ್ವ ಸಂಪನ್ನರು; ಪರಾಕ್ರಮಿಗಳು.

ಭ್ರಾತುಃ ಪುತ್ರೇಣ ಮೇ ತೇನ ದುಷ್ಪುತ್ರೇಣ ದುರಾತ್ಮನಾ ।
ರಾಕ್ಷಸ್ಯಾ ಜಿಹ್ಮಯಾ ಬುದ್ಧ್ಯಾಚಾಲಿತಾವೃಜುವಿಕ್ರಮೌ ॥ ೧೬

ಶರೈರಿಮಾವಲಂ ವಿದ್ಧೌ ರುಧಿರೇಣ ಸಮುಕ್ಷಿತೌ ।
ವಸುಧಾಯಮಿಮೌ ಸುಪ್ತೌ ದೃಶ್ಯೇತೇ ಶಲ್ಯಕಾವಿವ ॥ ೧೭

ಯಯೋರ್ವೀರ್ಯಮುಪಾಶ್ರಿತ್ಯ ಪ್ರತಿಷ್ಠಾ ಕಾಂಕ್ಷಿತಾ ಮಯಾ ।
ತಾವುಭೌ ದೇಹನಾಶಾಯ ಪ್ರಸುಪ್ತೌ ಪುರುಷರ್ಷಭೌ ॥ ೧೮

ಜೀವನ್ನದ್ಯ ವಿಪನ್ನೋಽಸ್ಮಿ ನಷ್ಟರಾಜ್ಯಮನೋರಥಃ ।
ಪ್ರಾಪ್ತಪ್ರತಿಜ್ಞಶ್ಚ ರಿಪುಃ ಸಕಾಮೋ ರಾವಣಃ ಕೃತಃ ॥ ೧೯

ಏವಂ ವಿಲಪಮಾನಂ ತಂ ಪರಿಷ್ವಜ್ಯ ವಿಭೀಷಣಮ್ ।
ಸುಗ್ರೀವಃ ಸತ್ತ್ವ ಸಂಪನ್ನೋ ಹರಿರಾಜೋಽಬ್ರವೀದಿದಮ್ ॥ ೨೦

ರಾಜ್ಯಂ ಪ್ರಾಪ್ಸ್ಯಸಿ ಧರ್ಮಜ್ಞ ಲಂಕಾಯಾಂ ನಾತ್ರ ಸಂಶಯಃ ।
ರಾವಣಃ ಸಹ ಪುತ್ರೇಣ ಸ್ವಕಾಮಂ ನೇಹ ಲಪ್ಸ್ಯತೇ ॥ ೨೧

---

ರಾಕ್ಷಸರು ಮಾಯಾಯುದ್ಧವನ್ನು ಮಾಡಿ ವಂಚನೆಯಿಂದ ಈ ದುಃಸ್ಥಿತಿಯನ್ನು ತಂದರಲ್ಲ (೧೫). ನನ್ನ ಅಣ್ಣನ ದುಷ್ಪುತ್ರನು ಧರ್ಮಮಾರ್ಗದಲ್ಲಿ ಹೋರಾಡು ತ್ತಿದ್ದ ಇವರನ್ನು ವಂಚಿಸಿದನು. ಆ ದುರಾತ್ಮನು ರಾಕ್ಷಸ ಸಹಜವಾದ ಕುಟಿಲ ಬುದ್ಧಿಯಿಂದ ಮೋಸಮಾಡಿದನು. ಈ ರಾಜಪುತ್ರರು ಶರಗಳಿಂದ ವಿಚ್ಛಿದ್ರ ರಾಗಿರುವರಲ್ಲ! ರಕ್ತದಲ್ಲಿ ತೊಯ್ದು ಹೋಗಿ ನೆಲದಲ್ಲಿ ಮಲಗಿರುವರಲ್ಲ! ಮುಳ್ಳು ಹಂದಿಗಳ ದೇಹದಂತೆ ಸರ್ವಾಂಗದಲ್ಲಿಯೂ ಶರಗಳು ಚುಚ್ಚಿಕೊಂಡಿರುವುವಲ್ಲ! (೧೬–೧೭). ಯಾರಿಬ್ಬರ ಪರಾಕ್ರಮವನ್ನು ನಂಬಿಕೊಂಡು ನಾನು ಪ್ರತಿಷ್ಠೆ ಯನ್ನು ಬಯಸಿದೆನೋ, ಆ ಪುರುಷೋತ್ತಮರಿಬ್ಬರೂ ದೇಹವನ್ನು ಬಿಡುವ ಸ್ಥಿತಿ ಯಲ್ಲಿ ಮಲಗಿಬಿಟ್ಟರು! ನನ್ನ ರಾಜ್ಯದಾಸೆಯು ಭಗ್ನವಾಯಿತು ! ಬದುಕಿದ್ದರೂ ನಾನು ಸತ್ತಂತೆಯೇ ಸರಿ ! ರಿಪುವಿನ ಪ್ರತಿಜ್ಞೆ ನೆರವೇರಿತು. ರಾವಣನ ಇಷ್ಟಾರ್ಥವು ಲಭಿಸಿತು'' ಎಂದು ಹಲುಬಿದನು (೧೮–೧೯). ಹೀಗೆ ವಿಲಪಿಸುತ್ತಿದ್ದ ವಿಭೀಷಣನನ್ನು ಕಪೀಂದ್ರನೂ ಧೀರನೂ ಆದ ಸುಗ್ರೀವನು ಆಲಿಂಗಿಸಿಕೊಂಡು ''ಧರ್ಮಜ್ಞ–ವಿಭೀಷಣ, ನಿಸ್ಸಂದೇಹವಾಗಿ ನಿನಗೆ ಲಂಕಾರಾಜ್ಯವು ದೊರೆಯು ವುದು ! ಇಷ್ಟು ಮಾತ್ರದಿಂದ ರಾವಣನಿಗೂ ಅವನ ಮಗನಿಗೂ ಇಷ್ಟಾರ್ಥವು

ನ ರುಜಾ ಪೀಡಿತಾವೇತಾವುಭೌ ರಾಘವಲಕ್ಷ್ಮಣೌ ।
ತ್ಯಕ್ತ್ವಾ ಮೋಹಂ ವಧಿಷ್ಯೇತೇ ಸಗಣಂ ರಾವಣಂ ರಣೇ ॥ ೨೨

ತಮೇನಂ ಸಾಂತ್ವಯಿತ್ವಾ ತು ಸಮಾಶ್ವಾಸ್ಯ ಚ ರಾಕ್ಷಸಮ್ ।
ಸುಷೇಣಂ ಶ್ವಶುರಂ ಪಾರ್ಶ್ವೇ ಸುಗ್ರೀವಸ್ತಮುವಾಚ ಹ ॥ ೨೩

ಸಹ ಶೂರೈರ್ಹರಿಗಣೈರ್ಲಬ್ಧ ಸಂಜ್ಞಾವರಿಂದಮೌ ।
ಗಚ್ಛ ತ್ವಂ ಭ್ರಾತರೌ ಗೃಹ್ಯ ಕಿಷ್ಕಿಂದಾಂ ರಾಮಲಕ್ಷ್ಮಣೌ ॥ ೨೪

ಅಹಂ ತು ರಾವಣಂ ಹತ್ವಾ ಸಪುತ್ರಂ ಸಹಬಾಂಧವಮ್ ।
ಮೈಥಿಲೀಮಾನಯಿಷ್ಯಾಮಿ ಶಕ್ರೋ ನಷ್ಟಾಮಿವ ಶ್ರಿಯಮ್ ॥ ೨೫

ಶ್ರುತ್ವೈತದ್ವಾನರೇಂದ್ರಸ್ಯ ಸುಷೇಣೋ ವಾಕ್ಯಮಬ್ರವೀತ್ ।
ದೈವಾಸುರಂ ಮಹದ್ಯುದ್ಧಮನುಭೂತಂ ಸುದಾರುಣಮ್ ॥ ೨೬

ತದಾ ಸ್ಮ ದಾನವಾ ದೇವಾನ್ ಶರಸಂಸ್ಪರ್ಶಕೋವಿದಾಃ ।
ನಿಜಘ್ನುಃ ಶಸ್ತ್ರವಿದುಷಶ್ಛಾದಯಂತೋ ಮುಹುರ್ಮುಹುಃ ॥ ೨೭

---

ಕೈಗೂಡದು! (೨೦–೨೧). ಶ್ರೀರಾಮಲಕ್ಷ್ಮಣರಿಗೆ ಮರಣಾಂತಕಾರಿಯಾದ ಬೇಧೆಯೊದಗಿಲ್ಲ. ಸ್ವಲ್ಪ ಕಾದಲ್ಲಿ ಇವರು ಎಚ್ಚೆತ್ತು ರಾವಣನನ್ನೂ ಅವನ ರಾಕ್ಷಸಗಣವನ್ನೂ ರಣದಲ್ಲಿ ಧ್ವಂಸಮಾಡುವರು'' ಎಂದು ಸಂತೈಸಿದನು (೨೨). ಅನಂತರ ತನ್ನ ಮಾವನಾದ ಸುಷೇಣನ ಕಡೆಗೆ ತಿರುಗಿ ಸುಗ್ರೀವನು ''ಆರ್ಯ–ಸುಷೇಣ, ಶ್ರೀರಾಮಲಕ್ಷ್ಮಣರಿಬ್ಬರೂ ಮೂರ್ಛೆಯಿಂದೆದ್ದಮೇಲೆ ಈ ಸೋದರರನ್ನು ನೀನು ಕಿಷ್ಕಿಂಧೆಗೆ ಕರೆದೊಯ್ದುಬಿಡು! ಶೂರನಾದ ಕೆಲವು ವಾನರಯೋಧರೂ ಬೆಂಗಾವಲಾಗಿ ಜೊತೆಯಲ್ಲಿ ಹೋಗಲಿ (೨೩–೨೪). ನಾನು ರಾವಣನನ್ನೂ ಅವನ ಮಗನನ್ನೂ ಅವನ ಬಂಧುಗಳನ್ನೂ ಕುಟ್ಟಿ ಅರೆದು ಬರುತ್ತೇನೆ! ಮೈಥಿಲಿಯನ್ನು ಬಿಡಿಸಿಕೊಂಡೇ ಬರುತ್ತೇನೆ! ದೇವೇಂದ್ರನು ನಷ್ಟವಾದ ರಾಜ್ಯಲಕ್ಷ್ಮಿಯನ್ನು ಕರೆತರುವಂತೆ ಈ ದೇವಿಯನ್ನು ಕರೆತರುತ್ತೇನೆ!'' ಎಂದು ತಿಳಿಸಿದನು (೨೫). ವಾನರೇಂದ್ರನ ಈ ವಚನವನ್ನಾಕರ್ಣಿಸಿ ಸುಷೇಣನು ''ಸುಗ್ರೀವ, ಹಿಂದೆ ಭೀಕರವಾದ ದೇವಾಸುರಯುದ್ಧವು ನಡೆದುದನ್ನು ನಾನು ಬಲ್ಲೆ. ಆಗ ಅಸ್ತ್ರಪ್ರಯೋಗಕೋವಿದರಾದ ದಾನವರು ದೇವತೆಗಳನ್ನು ಸಂಹರಿಸುತ್ತಿದ್ದರು. ದೇವತೆಗಳು ಅಸ್ತ್ರ ವಿದ್ಯೆಯನ್ನು ಬಲ್ಲವರಾದರೂ.

ತಾನಾರ್ತಾನ್ನಷ್ಟಸಂಜ್ಞಾಂಶ್ಚ: ಪರಾಸೂಂಶ್ಚ ಬೃಹಸ್ಪತಿ ।
ವಿದ್ಯಾಭಿರ್ಮಂತ್ರಯುಕ್ತಾಭಿರೋಷಧೀಭಿಶ್ಚಿ ಕಿತ್ಸತಿ ॥ ೨೮

ತಾನ್ಯೌಷಧಾನ್ಯಾನಯಿತುಂ ಕ್ಷೀರೋದಂ ಯಾಂತು ಸಾಗರಮ್ ।
ಜವೇನ ವಾನರಾಃ ಶೀಘ್ರಂ ಸಂಪಾತಿಪನಸಾದಯಃ ॥ ೨೯

ಹರಯಸ್ತು ವಿಜಾನಂತಿ ಪಾರ್ವತೀಸ್ತಾ ಮಹೌಷಧೀಃ ।
ಸಂಜೀವಕರಣೀಂ ದಿವ್ಯಾಂ ವಿಶಲ್ಯಾಂ ದೇವನಿರ್ಮಿತಾಮ್ ॥ ೩೦

ಚಂದ್ರಶ್ಚ ನಾಮ ದ್ರೋಣಶ್ಚ ಕ್ಷೀರೋದೇ ಸಾಗರೋತ್ತಮೇ ।
ಅಮೃತಂ ಯತ್ರ ಮಥಿತಂ ತತ್ರ ತೇ ಪರಮೌಷಧೀ ॥ ೩೧

ತೇ ತತ್ರ ನಿಹಿತೇ ದೇವೈಃ ಪರ್ವತೇ ಪರಮೌಷಧೀ ।
ಅಯಂ ವಾಯುಸುತೋ ರಾಜನ್ ಹನುಮಾಂಸ್ತತ್ರ ಗಚ್ಛತು ॥ ೩೨

ಏತಸ್ಮಿನ್ನಂತರೇ ವಾಯುರ್ಮೇಘಾಂಶ್ಚಾಪಿ ಸವಿದ್ಯುತಃ ।
ಪರ್ಯಸ್ಯನ್ ಸಾಗರೇ ತೋಯಂ ಕಂಪಯನ್ನಿವ ಮೇದಿನೀಮ್ ॥ ೩೩

---

ಅಸುರರು ಮಾಯಾಬಲದಿಂದ ಅದೃಶ್ಯರಾಗಿ ಅವರನ್ನು ಕೊಲ್ಲುತ್ತಿದ್ದರು (೨೬–೨೭). ದೇವತೆಗಳು ಬಾಣಪೀಡಿತರಾಗಿಯೂ ಮೂರ್ಛಿತರಾಗಿಯೂ ಮೃತರಾಗಿಯೂ ಬಿದ್ದಿರುವುದನ್ನು ನೋಡಿ ಬೃಹಸ್ಪತಿಯು ಮಂತ್ರಪ್ರಚುರವಾದ ಮೃತ್ಯು ಸಂಜೀವಿನೀವಿದ್ಯೆಯಿಂದಲೂ ಹಲವು ಬಗೆಯ ಮೂಲಿಕೆಗಳಿಂದಲೂ ಅವರಿಗೆ ಚಿಕಿತ್ಸೆ ನೀಡಿ ಬದುಕಿಸುತ್ತಿದ್ದನು (೨೮). ಆ ದಿವ್ಯಮೂಲಿಕೆಗಳು ಕ್ಷೀರಸಮುದ್ರದ ಬಳಿಯಿಲ್ಲವೆ ಕೂಡವೆ ಸಂಪಾತಿ, ಪನಸ ಮೊದಲಾದ ವಾನರರು ಆ ಮೂಲಿಕೆಗಳನ್ನು ತರುವುದಕ್ಕಾಗಿ ಬೇಗನೆ ಹೋಗಲಿ. ಪರ್ವತದಲ್ಲಿ ದೊರೆಯುವ ಆ ಮಹೌಷಧಿಗಳನ್ನು ಈ ವಾನರರು ಬಲ್ಲರು. ಬ್ರಹ್ಮನಿರ್ಮಿತವಾದ ಸಂಜೀವಕರಣಿ, ವಿಶಲ್ಯಕರಣಿಯೆಂಬ ಎರಡು ದಿವ್ಯೌಷಧಿಗಳನ್ನು ಇವರು ತರಬೇಕು (೨೯–೩೦). ಅಮೃತಮಂಥನವು ನಡೆದ ಶ್ರೇಷ್ಠವಾದ ಆ ಕ್ಷೀರಸಮುದ್ರದಲ್ಲಿ ಚಂದ್ರ, ದ್ರೋಣ ಎಂಬ ಎರಡು ಪರ್ವತಗಳಿವೆ. ಅವುಗಳಲ್ಲಿ ಈ ಮೂಲಿಕೆಗಳು ದೊರೆಯುತ್ತವೆ. ಮಹಾರಾಜ, ವಾಯುಪುತ್ರನಾದ ಆ ಹನುಮಂತನು ಅಲ್ಲಿಗೆ ಹೋಗಿಬರಲಿ!'' ಎಂದು ನುಡಿದನು (೩೧–೩೨). ಅಷ್ಟು ಹೊತ್ತಿಗೆ ಸರಿಯಾಗಿ ಪ್ರಚಂಡವಾದ ಬಿರುಗಾಳಿ ಬೀಸಿತು. ವಿದ್ಯುತ್

ಮಹತಾ ಪಕ್ಷವಾತೇನ ಸರ್ವದ್ವೀಪಮಹಾದ್ರುಮಾಃ ।
ನಿಪೇತುರ್ಭಗ್ನವಿಟಪಾಃ ಸಮೂಲಾ ಲವಣಾಂಭಸಿ ॥ ೩೪

ಅಭವನ್ ಪನ್ನಗಾಸ್ತ್ರಸ್ತಾ ಭೋಗಿನಸ್ತತ್ರವಾಸಿನಃ ।
ಶೀಘ್ರಂ ಸರ್ವಾಣಿ ಯಾದಾಂಸಿ ಜಗ್ಮುಶ್ಚ ಲವಣಾರ್ಣವಮ್ ॥ ೩೫

ತತೋ ಮುಹೂರ್ತಾದ್ಗರುಡಂ ವೈನತೇಯಂ ಮಹಾಬಲಮ್ ।
ವಾನರಾ ದದೃಶುಃ ಸರ್ವೇ ಜ್ವಲಂತಮಿವ ಪಾವಕಮ್ ॥ ೩೬

ತಮಾಗತಮಭಿಪ್ರೇಕ್ಷ್ಯ ನಾಗಾಸ್ತೇ ವಿಪ್ರದುದ್ರುವುಃ ।
ಯೈಸ್ತೌ ಸತ್ಪುರುಷೌ ಬದ್ಧೌ ಶರಭೂತೈರ್ಮಹಾಬಲೌ ॥ ೩೭

ತತಃ ಸುಪರ್ಣಃ ಕಾಕುತ್ಸ್ಥೌ ದೃಷ್ಟ್ವಾ ಪ್ರತ್ಯಭಿನಂದಿತಃ ।
ವಿಮಮರ್ಶ ಚ ಪಾಣಿಭ್ಯಾಂ ಮುಖೇ ಚಂದ್ರಸಮಪ್ರಭೇ ॥ ೩೮

ವೈನತೇಯೇನ ಸಂಸ್ಪೃಷ್ಟಾಸ್ತಯೋಃ ಸಂರುರುಹುರ್ವ್ರಣಾಃ ।
ಸುವರ್ಣೇ ಚ ತನೂ ಸ್ನಿಗ್ಧೇ ತಯೋರಾಶು ಬಭೂವತುಃ ॥ ೩೯

---

ಸಹಿತವಾದ ಮೇಘಗಳು ಹೊಯ್ದಾಡಿದವು. ಸಮುದ್ರಜಲವು ಅಲ್ಲೋಲ ಕಲ್ಲೋಲವಾಯಿತು. ಭೂಮಂಡಲವು ಅಲ್ಲಾಡಿತು! (೩೩). ಗಾಳಿಯ ರಭಸಕ್ಕೆ ಲಂಕಾದ್ವೀಪದಲ್ಲಿದ್ದ ಮಹಾವೃಕ್ಷಗಳ ಕೊಂಬೆಗಳು ಮುರಿದುಬಿದ್ದವು. ಕೆಲವು ವೃಕ್ಷಗಳು ಬೇರಸಹಿತ ಸಮುದ್ರಜಲ್ಲಿ ಹಾರಿಬಿದ್ದವು! ಮಹಾಕಾಯವುಳ್ಳ ಸರ್ಪಗಳು ಹೆದರಿ ತತ್ತರಿಸಿದವು ! ಸಕಲ ಜಲಜಂತುಗಳೂ ಸಮುದ್ರಮುಧ್ಯಕ್ಕೆ ಓಡಿಹೋಗಿ ಮುಳುಗಿಕೊಂಡವು! (೩೪–೩೫). ಸಮಸ್ತವಾನರರೂ ಇದೇ ನೆಂದು ಬೆಕ್ಕಸಬೆರಗಾಗಿ ನೋಡುತ್ತಿರುವಾಗ, ತೊಳತೊಳಗುವ ಅಗ್ನಿದೇವ ನಂತಿದ್ದ ವಿನತಾಪುತ್ರನಾದ ಗುರುತ್ಮಂತನು ಮರುಕ್ಷಣದಲ್ಲಿ ಕಾಣಿಸಿಕೊಂಡನು ! (೩೬). ವೈನತೇಯನನ್ನು ಕೊಂಡೊಡನೆ, ಧರ್ಮಾತ್ಮರಾದ ಶ್ರೀರಾಮಲಕ್ಷ್ಮಣ ರನ್ನು ಶರರೂಪದಿಂದ ಬಂಧಿಸಿದ್ದ ಮಹಾಸರ್ಪಗಳು ಅವರನ್ನು ಬಿಟ್ಟು ಸರ್ರನೆ ಓಡಿಹೋದವು! (೩೭). ಗರುಡನು ಸಮೀಪಕ್ಕೆ ಬಂದು ಕಾಕುತ್ಸ್ಥರನ್ನು ನೋಡಿದನು. ಅವರೀರ್ವರೂ ಚೇತರಿಸಿಕೊಂಡು ಗರುಡನನ್ನು ಸ್ವಾಗತಿಸಿ ದರು. ಚಂದ್ರಬಿಂಬಗಳಿಂತಿದ್ದ ರಾಮಲಕ್ಷ್ಮಣರ ಮುಖಗಳನ್ನು ಶುರುತ್ಮಂತನು ತನ್ನ ಎರಡು ಕೈಗಳಿಂದಲೂ ಸವರಿ ನೇವರಿಸಿದನು (೩೮). ವೈನತೇಯನು ಅವರ ಮೈಯನ್ನು ಸವರಿ ನೇವರಿದೊಡನೆ, ಗಾಯಗಳೆಲ್ಲವೂ ಮಾಯ

ತೇಜೋ ವೀರ್ಯಂ ಬಲಂ ಚೌಜ ಉತ್ಸಾಹಶ್ಚ ಮಹಾಗುಣಃ ।
ಪ್ರದರ್ಶನಂ ಚ ಬುದ್ಧಿಶ್ಚ ಸ್ಮೃತಿಶ್ಚ ದ್ವಿಗುಣಾ ತಯೋಃ ॥ ೪೦

ತಾವುತ್ಥಾಪ್ಯ ಮಹಾವೀರ್ಯೌ ಗರುಡೋ ವಾಸವೋಪಮೌ ।
ಉಭೌ ತೌ ಸಸ್ವಜೇ ಹೃಷ್ಟೋ ರಾಮಶ್ಚೈನಮುವಾಚ ಹ ॥ ೪೧

ಭವತ್ಪ್ರಸಾದಾದ್ವ್ಯಸನಂ ರಾವಣಿಪ್ರಭವಂ ಮಹತ್ ।
ಆವಾಮಿಹ ವ್ಯತಿಕ್ರಾಂತೌ ಪೂರ್ವವದ್ಬಲಿನೌ ಕೃತೌ ॥ ೪೨

ಯಥಾ ತಾತಂ ದಶರಥಂ ಯಥಾಜಂ ಚ ಪಿತಾಮಹಮ್ ।
ತಥಾ ಭವಂತಮಾಸಾದ್ಯ ಹೃದಯಂ ಮೇ ಪ್ರಸೀದತಿ ॥ ೪೩

ಕೋಭವಾನ್ ರೂಪಸಂಪನ್ನೋ ದಿವ್ಯಸ್ರಗನುಲೇಪನಃ ।
ವಸಾನೋ ವಿರಜೇ ವಸ್ತ್ರೇ ದಿವ್ಯಾಭರಣಭೂಷಿತಃ ॥ ೪೪

ತಮುವಾಚ ಮಹಾತೇಜಾ ವೈನತೇಯೋ ಮಹಾಬಲಃ ।
ಪತತ್ರಿರಾಜಃ ಪ್ರೀತಾತ್ಮಾ ಹರ್ಷಪರ್ಯಾಕುಲೇಕ್ಷಣಃ ॥ ೪೫

---

ವಾದವು. ಅವರ ದೇಹಗಳು ಚಿನ್ನದಂತೆ ಹೊಳಪೇರಿ ಮೊದಲಿನಂತೆ ರಂಜಿಸಿದವು. ಶ್ರೀರಾಮಲಕ್ಷ್ಮಣರ ತೇಜಸ್ಸು, ವೀರ್ಯ,ಬಲ ಓಜಸ್ಸು, ಉತ್ಸಾಹ ವಿವೇಚನಾಶಕ್ತಿ, ಬುದ್ಧಿ, ಸ್ಮರಣಶಕ್ತಿ ಮುಂತಾದ ಮಹಾಗುಣಗಳು ಇಮ್ಮಡಿಸಿದವು (೩೯–೪೦). ಸಂಪ್ರೀತರಾಗಿ ದೇವೇಂದ್ರರಂತೆ ಕಂಗೊಳಿಸುತ್ತಿದ್ದ ಆ ವೀರಾಗ್ರೇಸರರಿಬ್ಬರನ್ನೂ ವೈನತೇಯನು ಮೇಲಕ್ಕೆತ್ತಿ ಆಲಿಂಗಿಕೊಂಡನು. ಆಗ ಶ್ರೀರಾಮನು ''ಮಹಾತ್ಮ'', ನಿನ್ನ ಅನುಗ್ರಹದಿಂದ ನಮಗೆ ಇಂದ್ರಜಿತುವಿನಿಂದೊದಗಿದ ವಿಪತ್ತು ಕಳೆಯಿತು. ಮೊದಲಿನಂತೆ ನಾವಿಬ್ಬರೂ ಬಲಶಾಲಿಗಳಾದೆವು (೪೧–೪೨). ನಿನ್ನನ್ನು ನೋಡಿದರೆ ನನ್ನ ತಂದೆಯಾದ ದಶರಥ ಮಹಾರಾಜನನ್ನೂ ಪಿತಾಮಹನಾದ ಅಜಚಕ್ರವರ್ತಿಯನ್ನೂ ಕಂಡಂತಾಗುತ್ತದೆ. ಹೃದಯವು ಸುಪ್ರಸನ್ನವಾಗುತ್ತದೆ (೪೩). ಓ ಮಹಾತ್ಮ ನೀನು ಯಾರು? ದಿವ್ಯರೂಪಸಂಪನ್ನನಾಗಿ ದಿವ್ಯಮಾಲೆಗಳನ್ನು ಧರಿಸಿದ್ದೀಯೆ. ದಿವ್ಯ ಗಂಧವನ್ನು ಲೇಪಿಸಿಕೊಂಡಿದ್ದೀಯೆ. ಶುಭ್ರವಸ್ತ್ರಗಳನ್ನುಟ್ಟು ದಿವ್ಯಾಭರಣ ಭೂಷಿತನಾಗಿದ್ದೀಯೆ'' ಎಂದು ಕೇಳಿದನು (೪೪). ಆಗ ಪತಗರಾಜನೂ ತೇಜೋರಾಶಿಯೂ ಆದ ವೈನತೇಯನಿಗೆ ಆನಂದವಾಯಿತು. ಅವನ ನೇತ್ರ

ಅಹಂ ಸಖಾ ತೇ ಕಾಕುತ್ಸ್ಥ ಪ್ರಿಯಃ ಪ್ರಾಣೋ ಬಹಿಶ್ಚರಃ ।
ಗರುತ್ಮಾನಿಹ ಸಂಪ್ರಾಪ್ತೋ ಯುವಯೋಃ ಸಾಹ್ಯಕಾರಣಾತ್ ॥ ೪೬

ಅಸುರಾ ವಾ ಮಹಾವೀರ್ಯಾ ದಾನವಾ ವಾ ಮಹಾಬಲಾಃ ।
ಸುರಾಶ್ಚಾಪಿ ಸಗಂಧರ್ವಾಃ ಪುರಸ್ಕೃತ್ಯ ಶತಕ್ರತುಮ್ ॥ ೪೭

ನೇಮಂ ಮೋಕ್ಷಯಿತುಂ ಶಕ್ತಾಃ ಶರಬಂಧಂ ಸುದಾರುಣಮ್ ।
ಮಾಯಾಬಲಾದಿಂದ್ರಜಿತಾ ನಿರ್ಮಿತಂ ಕ್ರೂರಕರ್ಮಣಾ ॥ ೪೮

ಏತೇ ನಾಗಾಃ ಕಾದ್ರವಾಯಾಸ್ತೀಕ್ಷ್ಣದಂಷ್ಟ್ರಾ ವಿಷೋಲ್ಬಣಾಃ ।
ರಕ್ಷೋಮಾಯಾಪ್ರಭಾವೇನ ಶರಾ ಭೂತ್ವಾ ತ್ವದಾಶ್ರಿತಾಃ ॥ ೪೯

ಸಭಾಗ್ಯಶ್ಚಾಸಿ ಧರ್ಮಜ್ಞ ರಾಮ ಸತ್ಯಪರಾಕ್ರಮ ।
ಲಕ್ಷ್ಮಣೇನ ಸಹ ಭ್ರಾತ್ರಾ ಸಮರೇ ರಿಪುಘಾತಿನಾ ॥ ೫೦

---

ಗಳಲ್ಲಿ ಆನಂದಬಾಷ್ಪಗಳು ಮಿಡಿದವು. "ಓ ಕಾಕುತ್ಸ್ಥ, ನಾನು ನಿನ್ನ ಪ್ರೀತಿಯ ಗೆಳೆಯ ! ಹೊರಗೆ ಸುಳಿದಾಡುವ ಪ್ರಾಣದಂತೆ ನಿನಗೆ ಪ್ರಿಯನಾದವನು! ನಾನು ಗರುತ್ಮಂತ ! ನಿಮಗೆ ನೆರವಾಗಬೇಕೆಂದು ಬಂದೆನು (೪೫–೪೬). ಶ್ರೀರಾಮ, ನಿಮ್ಮಿಬ್ಬರಿಗೆ ಒದಗಿದ ಈ ನಾಗಪಾಶಬಂಧವು ಅತಿಭೀಕರವಾದುದು. ಮಹಾಬಲಸಂಪನ್ನರಾದ ಅಸುರರಾಗಲಿ, ದಾನವರಾಗಲಿ, ದೇವಗಂಧರ್ವ ರಾಗಲಿ ದೇವೇಂದ್ರನೇ ಆಗಲಿ– ಈ ನಾಗಪಾಶವನ್ನು ಬಿಡಿಸಲು ಶಕ್ತರಲ್ಲ. ಕ್ರೂರಕರ್ಮಿಯಾದ ಇಂದ್ರಜಿತುವು ಮಾಯಾಬಲದಿಂದ ಈ ಪಾಶವನ್ನು ನಿರ್ಮಿಸಿದ್ದನು (೪೭–೪೮). ಈ ಸರ್ಪಗಳು ಉಗ್ರದಂಷ್ಟ್ರರೂ ವಿಷೋಲ್ಬಣರೂ ಆದ ಕದ್ರೂತನಯರು. ರಾಕ್ಷಸನ ಮಾಯಾಪ್ರಭಾವದಿಂದ ಶರರೂಪದಲ್ಲಿ ಬಂದು ನಿಮ್ಮನ್ನು ಕಚ್ಚಿಹಿಡಿದಿದ್ದವು ಧರ್ಮಜ್ಞನೂ ಸತ್ಯಪರಾಕ್ರಮನೂ ಆದ ನೀನು ಭಾಗ್ಯಶಾಲಿ, ಶ್ರೀರಾಮ! ಸಮರದಲ್ಲಿ ರಿಪುಘಾತಿಯಾದ ತಮ್ಮನಾದ ಲಕ್ಷ್ಮಣನು ನಿನ್ನ ನೆರವಿಗಿದ್ದಾನೆ! * (೪೯–೫೦)

---

* ಶ್ರೀರಾಮನು ತನ್ನನ್ನು ದುಷ್ಟನೆಂದೂ ಅಸತ್ಯವಾದಿಯಾದನೆಂದು ನಿಂದಿಸಿಕೊಂಡು, ಲಕ್ಷ್ಮಣನು ಮೃತನಾದನೆಂದು ಶಂಕಿಸಿದ್ದನಷ್ಟೆ. ಅಂತಹ ಸಂದರ್ಭವೇನೂ ಇಲ್ಲವೆಂದು ಹೇಳುವ ಪರಿಹಾರವಾಕ್ಯವಿದು.

ಇಮಂ ಶ್ರುತ್ವಾ ತು ವೃತ್ತಾಂತಂ ತ್ವರಮಾಣೋಽಹಮಾಗತಃ ।
ಸಹಸಾ ಯುವಯೋಃ ಸ್ನೇಹಾತ್ಸಖಿತ್ವಮನುಪಾಲಯನ್ ॥ ೫೧

ಮೋಕ್ಷಿತೌ ಚ ಮಹಾಘೋರಾದಸ್ಮಾತ್ಸಾಯಕಬಂಧನಾತ್ ।
ಅಪ್ರಮಾದಶ್ಚ ಕರ್ತವ್ಯೋ ಯುವಾಭ್ಯಾಂ ನಿತ್ಯಮೇವ ಹಿ ॥ ೫೨

ಪ್ರಕೃತ್ಯಾ ರಾಕ್ಷಸಾಃ ಸರ್ವೇ ಸಂಗ್ರಾಮೇ ಕೂಟಯೋಧಿನಃ ।
ಶೂರಾಣಾಂ ಶುದ್ಧಭಾವಾನಾಂ ಭವತಾಮಾರ್ಜವಂ ಬಲಮ್ ॥ ೫೩

ತನ್ನ ವಿಶ್ವಸಿತವ್ಯಂ ವೋ ರಾಕ್ಷಸಾನಾಂ ರಣಾಜಿರೇ ।
ಏತೇನೈವೋಪಮಾನೇನ ನಿತ್ಯಂ ಜಿಹ್ಮಾ ಹಿ ರಾಕ್ಷಸಾಃ ॥ ೫೪

ಏವಮುಕ್ತ್ವಾ ತತೋ ರಾಮಂ ಸುಪರ್ಣಃ ಸುಮಹಾಬಲಃ ।
ಪರಿಷ್ವಜ್ಯ ಸುಹೃತ್ಸ್ನಿಗ್ಧಮಾಪ್ರಷ್ಟುಮುಪಚಕ್ರಮೇ ॥ ೫೫

ಸಖೇ ರಾಘವ ಧರ್ಮಜ್ಞ ರಿಪೂಣಾಮಪಿ ವತ್ಸಲ ।
ಅಭ್ಯನುಜ್ಞಾತುಮಿಚ್ಛಾಮಿ ಗಮಿಷ್ಯಾಮಿ ಯಥಾಗತಮ್ ॥ ೫೬

---

ಈ ನಾಗಪಾಶದ ವೃತ್ತಾಂತವನ್ನು ಕೇಳಿ ನಾನು ತ್ವರಿತವಾಗಿ ಧಾವಿಸುತ್ತ ಬಂದೆ. ನಿಮ್ಮಿಬ್ಬರಲ್ಲಿರುವ ಸ್ನೇಹದಿಂದ ಮಿತ್ರಧರ್ಮವನ್ನು ಪಾಲಿಸುವುದಕ್ಕಾಗಿ ಬಂದೆ. ಅತಿಘೋರವಾದ ಈ ನಾಗಾಸ್ತ್ರಬಂಧನದಿಂದ ಬಿಡಿಸಿದ್ದೇನೆ. ನೀವು ಈ ಯುದ್ಧಕಾಲದಲ್ಲಿ ಯಾವಾಗಲೂ ಬಹಳ ಎಚ್ಚರಿಕೆಯಿಂದರಿಬೇಕು. ಪ್ರಮಾದಕ್ಕೆ ಅವಕಾಶವನ್ನಿಯಬಾರದು (೫೧–೫೨). ಈ ರಾಕ್ಷಸರೆಲ್ಲರೂ ಮೋಸದಿಂದ ಯುದ್ಧಮಾಡುತ್ತಾರೆ. ಅದು ಅವರ ಸ್ವಭಾವವೇ ಆಗಿದೆ. ಪರಿಶುದ್ಧಚಿತ್ತರಾದ ನೀವಾದರೋ ಋಜುಮಾರ್ಗದಲ್ಲಿ ಬಲವನ್ನು ಪ್ರದರ್ಶಿಸುತ್ತೀರಿ. ಆದ್ದರಿಂದ ರಣರಂಗದಲ್ಲಿ ರಾಕ್ಷಸರನ್ನೆಂದಿಗೂ ನಂಬಬೇಡಿರಿ. ಈಗ ನಡೆದಿರುವುದೇ ಅದಕ್ಕೆ ನಿದರ್ಶನ! ರಾಕ್ಷಸರು ಸದಾ ಕುಟಿಲಚಿತ್ತರು'' ಎಂದು ಗರುತ್ಮಂತನು ಹೇಳಿದನು (೫೩–೫೪). ಅನಂತರ ಬಲಾಢ್ಯನಾದ ಆ ಗರುಡನು ಹೊರಡಲು ಸಿದ್ಧನಾಗಿ. ಪ್ರೀತಿಯಿಂದ ಶ್ರೀರಾಮನನ್ನು ಗಾಢವಾಗಿ ಅಪ್ಪಿಕೊಂಡು ''ಮಿತ್ರ–ರಾಘವ, ಧರ್ಮಜ್ಞನಾದ ನೀನು ಶತ್ರುಗಳನ್ನೂ ವಾತ್ಸಲ್ಯದಿಂದ ನೋಡತಕ್ಕವನು! ನನಗೆ ಅನುಜ್ಞೆಯನ್ನು ಕೊಡು. ಇನ್ನು ಹೊರಡುತ್ತೇನೆ (೫೫–೫೬).

ನ ಚ ಕೌತೂಹಲಂ ಕಾರ್ಯಂ ಸಖಿತ್ವಂ ಪ್ರತಿ ರಾಘವ ।
ಕೃತಕರ್ಮಾ ರಣೇ ವೀರಃ ಸಖಿತ್ವಮನುವೇತ್ಸ್ಯಸಿ ॥ ೫೭

ಬಾಲವೃದ್ಧಾವಶೇಷಾಂ ತು ಲಂಕಾಂ ಕೃತ್ವಾ ಶರೋರ್ಮಿಭಿಃ ।
ರಾವಣಂ ಚ ರಿಪುಂ ಹತ್ವಾ ಸೀತಾಂ ಸಮುಪಲಪ್ಸ್ಯಸೇ ॥ ೫೮

ಇತ್ಯೇವಮುಕ್ತ್ವಾ ವಚನಂ ಸುಪರ್ಣಃ ಶೀಘ್ರವಿಕ್ರಮಃ ।
ರಾಮಂ ಚ ವಿರುಜಂ ಕೃತ್ವಾ ಮಧ್ಯೇ ತೇಷಾಂ ವನೌಕಸಾಮ್ ॥ ೫೯

ಪ್ರದಕ್ಷಿಣಂ ತತಃ ಕೃತ್ವಾ ಪರಿಷ್ವಜ್ಯ ಚ ವೀರ್ಯವಾನ್ ।
ಜಗಾಮಾಕಾಶಮಾವಿಶ್ಯ ಸುಪರ್ಣಃ ಪವನೋ ಯಥಾ ॥ ೬೦

ವಿರುಜೌ ರಾಘವೌ ದೃಷ್ಟ್ವಾ ತತೋ ವಾನರಯೂಥಪಾಃ ।
ಸಿಂಹನಾದಾಂಸ್ತದಾ ನೇದುರ್ಲಾಂಗೂಲಾನ್ ದುಧುವುಸ್ತದಾ ॥ ೬೧

ತತೋ ಭೇರೀಃ ಸಮಾಜಘ್ನುರ್ಮೃದಂಗಾಶ್ಚಾಪ್ಯನಾದಯನ್ ।
ದಧ್ಮುಃ ಶಂಖಾನ್ ಸಂಪ್ರಹೃಷ್ಟಾಃಕ್ಷ್ವೇಲಂತ್ಯಪಿ ಯಥಾಪುರಮ್ ॥ ೬೨

---

ರಾಘವ, ನಾನು ನಿನಗೆ ಹೇಗೆ ಮಿತ್ರನಾದೆನೆಂದು ವಿಸ್ಮಯವನ್ನು ಮಾತ್ರ ವ್ಯಕ್ತಪಡಿಸಬೇಡ ! (ಅದರ ವಿಷಯವಾಗಿ ಏನನ್ನೂ ಕೇಳಬೇಡ). ಮುಂದೆ ನಿನ್ನ ಕರ್ತವ್ಯವೆಲ್ಲವನ್ನೂ ನಡೆಸಿದಮೇಲೆ ನಾನು ಮಿತ್ರನು ಹೇಗೆಂಬುದು ವೀರನಾದ ನಿನಗೇ ಗೊತ್ತಾಗುವುದು! (೫೭). ನಿನ್ನ ಬಾಣಪರಂಪರೆಗಳಿಂದ ಈ ಲಂಕೆಯಲ್ಲಿರುವ ಬಾಲವೃದ್ಧರನ್ನು ಬಿಟ್ಟು ಸಕಲರಾಕ್ಷಸರೂ ಹತರಾಗುವರು. ನಿನ್ನ ಶತ್ರುವಾದ ರಾವಣನನ್ನು ಕೊಂದು ನೀನು ಸೀತೆಯನ್ನು ಪಡೆಯುವೆ!'' ಎಂದು ಹೇಳಿದನು. (೫೮). ಹೀಗೆ ಹೇಳಿ ಶೀಘ್ರಗಾಮಿಯಾದ ಆ ವೈನತೇಯನು ಶ್ರೀರಾಮನಿಗೊದಗಿದ ವಿಪತ್ತನ್ನು ಪರಿಹರಿಸಿ, ಪ್ರದಕ್ಷಿಣೆಮಾಡಿ, ಮತ್ತೆ ಮತ್ತೆ ಅವರಿಬ್ಬರನ್ನೂ ಆಲಿಂಗಿಸಿ, ಸಕಲವಾನರರೂ ಬೆಕ್ಕುಸಬೆರಗಾಗಿ ನೋಡುತ್ತಿರುವಾಗಲೇ ಬಿರುಗಾಳಿಯಂತೆ ಆಕಾಶವನ್ನಡರಿ ಹಾರಿಹೋದನು! (೫೭–೬೦). ಅತ್ತ ಕಪಿನಾಯಕರು ರಾಮಲಕ್ಷ್ಮಣರಿಗೊದಗಿದ ಆಪತ್ತು ಪರಿಹೃತವಾದುದನ್ನು ಕಂಡು, ಸಂತೋಷದಿಂದ ಸಿಂಹನಾದಮಾಡಿದರು! ಬಾಲಗಳನ್ನು ಕೊಡವಿದರು! ಭೇರಿಗಳನ್ನು ಬಡಿದರು. ಮೃದಂಗಗಳನ್ನು ಹೊಡೆದರು. ಶಂಖಗಳನ್ನೂದಿದರು. ಹರ್ಷಾತಿರೇಕದಿಂದ ಕುಣಿದರು! (೬೧–೬೨).

ಆಸ್ಫೋಟ್ಯಾಸ್ಫೋಟ್ಯ ವಿಕ್ರಾಂತಾ ವಾನರಾ ನಗಯೋಧಿನಃ ।
ದ್ರುಮಾನುತ್ಪಾಟ್ಯ ವಿವಿಧಾಂಸ್ತಸ್ಥುಃ ಶತಸಹಸ್ರಶಃ ॥ ೬೩

ಸಸೃಜಂತೋ ಮಹಾನಾದಾಂಸ್ತ್ರಾಸಯಂತೋ ನಿಶಾಚರಾನ್ ।
ಲಂಕಾದ್ವಾರಾಣ್ಯು ಪಾಜಗ್ಮುರ್ಯೋದ್ಧು ಕಾಮಾಃ ಪ್ಲವಂಗಮಾಃ ॥

ತತಸ್ತು ಭೀಮಸ್ತುಮುಲೋ ನಿನಾದೋ
ಬಭೂವ ಶಾಖಾಮೃಗಯೂಥಪಾನಾಮ್ ।
ಕ್ಷಯೇ ನಿದಾಘಸ್ಯ ಯಥಾ ಘನಾನಾಂ
ನಾದಃ ಸುಭೀಮೋ ನಗತಾಂ ನಿಶೀಥೇ ॥ ೬೫

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚಾಶಃ ಸರ್ಗ

---

ಪರಾಕ್ರಮಿಗಳಾದ ಆ ವಾನರರು ಭುಜಗಳನ್ನಪ್ಪಳಿಸುತ್ತಹೋಗಿ ಸಾವಿರಾರು ವಿವಿಧ ವೃಕ್ಷಗಳನ್ನು ಕಿತ್ತು ಹೊತ್ತು, ರಾಕ್ಷಸರು ನಡುಗುವಂತೆ ಅಬ್ಬರಿಸುತ್ತ ಯುದ್ಧಸನ್ನದ್ಧರಾಗಿ ಲಂಕಾದ್ವಾರಗಳತ್ತ ನಡೆದರು ! (೬೩–೬೪). ಬೇಸಿಗೆಯು ಕಳೆದಮೇಲೆ ಮೇಘಗಳ ಭೀಕರಗರ್ಜನೆಯು ರಾತ್ರಿಯ ಹೊತ್ತು ಹೇಗೆ ಮೊಳಗುವುದೋ, ಹಾಗೆ ವಾನರಯೂಥಪರ ಭೀಷಣವಾದ ತುಮುಲ ಕೋಲಾಹಲ ಎಲ್ಲೆಲ್ಲಿಯೂ ಮೊಳಗಿತು (೬೫).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಐವತ್ತನೆಯ ಸರ್ಗ.

---

## ಏಕಪಂಚಾಶಃ ಸರ್ಗಃ

### ಧೂಮ್ರಾಕ್ಷಾಭಿಷೇಣನಮ್

**ತೇಷಾಂ ಸುತುಮುಲಂ ಶಬ್ದಂ ವಾನರಾಣಾಂ ತರಸ್ವಿನಾಮ್ ।**
**ನರ್ದತಾಂ ರಾಕ್ಷಸೈಃ ಸಾರ್ಧಂ ತದಾ ಶುಶ್ರಾವ ರಾವಣಃ ॥** ೧

**ಸ್ನಿಗ್ಧಗಂಭೀರನಿರ್ಘೋಷಂ ಶ್ರುತ್ವಾ ಸ ನಿನದಂ ಭೃಶಮ್ ।**
**ಸಚಿವಾನಾಂ ತತಸ್ತೇಷಾಂ ಮಧ್ಯೇ ವಚನಮಬ್ರವೀತ್ ॥** ೨

**ಯಥಾಸೌ ಸಂಪ್ರಹೃಷ್ಟಾನಾಂ ವಾನರಾಣಾಂ ಸಮುತ್ಥಿತಃ ।**
**ಬಹೂನಾಂ ಸುಮಹಾನ್ನಾದೋ ಮೇಘಾನಾಮಿವ ಗರ್ಜತಾಮ್ ॥** ೩

**ವ್ಯಕ್ತಂ ಸುಮಹತೀ ಪ್ರೀತಿರೇತೇಷಾಂ ನಾತ್ರ ಸಂಶಯಃ ।**
**ತಥಾ ಹಿ ವಿಪುಲೈರ್ನಾದೈಶ್ಚುಕ್ಷುಭೇ ವರುಣಾಲಯಃ ॥** ೪

**ತೌ ತು ಬದ್ಧೌ ಶರೈಸ್ತೀಕ್ಷ್ಣೈರ್ಭ್ರಾತರೌ ರಾಮಲಕ್ಷ್ಮಣೌ ।**
**ಅಯಂ ಚ ಸುಮಹಾನ್ನಾದಃ ಶಂಕಾಂ ಜನಯತೀವ ಮೇ ॥** ೫

### ಸರ್ಗ ೫೧

ಶ್ರೀರಾಮಲಕ್ಷ್ಮಣರು ನಾಗಪಾಶವಿಮುಕ್ತರಾದರೆಂಬುದನ್ನು ಕೇಳಿ ರಾವಣನು ವಿಷಣ್ಣನಾಗಿ, ಧೂಮ್ರಾಕ್ಷನನ್ನು ಯುದ್ಧಕ್ಕೆ ಕಳಿಸುವುದು.

ಹೀಗೆ ಗರ್ಜಿಸುತ್ತಿದ್ದ ಬಲಶಾಲಿಗಳಾದ ವಾನರರ ತುಮುಲ ಕೋಲಾಹಲವು ಲಂಕೆಯಲ್ಲಿ ರಾಕ್ಷಸರೊಡನೆ ಕುಳಿತಿದ್ದ ರಾವಣನಿಗೆ ಕೇಳಿಸಿತು. ಉತ್ಸಾಹಪೂರ್ಣವಾದ ಆ ಗಂಭೀರಘೋಷವು ಕೇಳಿದೊಡನೆ, ರಾವಣನು ಬಳಿಯಲ್ಲಿದ್ದ ಸಚಿವರನ್ನು ನೋಡಿ'' ಆಃ ! ಅದೇನು? ವಾನರರು ಸಂತೋಷದಿಂದ ಗರ್ಜಿಸುತ್ತಿದ್ದಾರೆ! ಮೇಘಗಳು ಗುಡುಗುವಂತೆ ಸಿಂಹನಾದಮಾಡುತ್ತಿರುವರಲ್ಲ! (೧–೨). ಅವರಿಗೆ ಅತ್ಯಂತ ಹರ್ಷವಾಗಿದೆಯಂಬುದು ಸ್ಪಷ್ಟವಾಗಿದೆ. ಸಂಶಯವೇ ಇಲ್ಲ! ಅವರ ಕೋಲಾಹಲದಿಂದ ಸಮುದ್ರವೇ ಕ್ಷೋಭೆಗೊಂಡಂತಾಗಿದೆ. ಸೋದರರಾದ ರಾಮಲಕ್ಷ್ಮಣರನ್ನು ತೀಕ್ಷ್ಣವಾದ ಶರಬಂಧದಿಂದ ಬಿಗಿದು ಬೀಳಿಸಲಾಗಿದೆ. ಆದರೂ ಹರ್ಷೋದ್ರೇಕದ ಈ ಗರ್ಜನೆಯೇ? ನನಗೆ ಸಂದೇಹವಾಗುತ್ತಿದೆ!'' ಎಂದು ಉದ್ಗರಿಸಿದನು (೪–೫).

ಏತತ್ತು ವಚನಂ ಚೋಕ್ತ್ವಾ ಮಂತ್ರಿಣೋ ರಾಕ್ಷಸೇಶ್ವರಃ ।
ಉವಾಚ ನೈರ್ಋತಾಂಸ್ತತ್ರ ಸಮೀಪಪರಿವರ್ತಿನಃ ॥ ೬

ಜ್ಞಾಯತಾಂ ತೂರ್ಣಮೇತೇಷಾಂ ಸರ್ವೇಷಾಂ ವನಚಾರಿಣಾಮ್ ।
ಶೋಕಕಾಲೇ ಸಮುತ್ಪನ್ನೇ ಹರ್ಷಕಾರಣಮುತ್ಥಿತಮ್ ॥ ೭

ತಥೋಕ್ತಾಸ್ತೇನ ಸಂಭ್ರಾಂತಾಃ ಪ್ರಾಕಾರಮಧಿರುಹ್ಯ ತೇ ।
ದದೃಶುಃ ಪಾಲಿತಾಂ ಸೇನಾಂ ಸುಗ್ರೀವೇಣ ಮಹಾತ್ಮನಾ ॥ ೮

ತೌ ಚ ಮುಕ್ತೌ ಸುಘೋರೇಣ ಶರಬಂಧೇನ ರಾಘವೌ ।
ಸಮುತ್ಥಿತೌ ಮಹಾವೇಗೌ ವಿಷೇದುಃ ಪ್ರೇಕ್ಷ್ಯ ರಾಕ್ಷಸಾಃ ॥ ೯

ಸಂತ್ರಸ್ತಹೃದಯಾಃ ಸರ್ವೇ ಪ್ರಾಕಾರಾದವರುಹ್ಯ ತೇ ।
ವಿಷಣ್ಣವದನಾ ಘೋರಾ ರಾಕ್ಷಸೇಂದ್ರಮುಪಸ್ಥಿತಾಃ ॥ ೧೦

ತದಪ್ರಿಯಂ ದೀನಮುಖಾ ರಾವಣಸ್ಯ ನಿಶಾಚರಾಃ ।
ಕೃತ್ಸ್ನಂ ನಿವೇದಯಾಮಾಸುರ್ಯಥಾವದ್ವಾಕ್ಯ ಕೋವಿದಾಃ ॥ ೧೧

ಯೌ ತಾವಿಂದ್ರಜಿತಾ ಯುದ್ಧೇ ಭ್ರಾತರೌ ರಾಮಲಕ್ಷ್ಮಣೌ ।
ನಿಬದ್ಧೌ ಶರಬಂಧೇನ ನಿಷ್ಪ್ರಕಂಪಭುಜೌ ಕೃತೌ ॥ ೧೨

---

ಆ ರಾಕ್ಷಸೇಶ್ವರನು ಸಚಿವರೊಡನೆ ಈ ರೀತಿಯಲ್ಲಿ ನುಡಿದು, ಸಮೀಪದಲ್ಲಿದ್ದ ರಾಕ್ಷಸರನ್ನು ಕರೆದು "ಎಲೈ ಭಟರೆ, ಆ ಕಪಿಗಳೆಲ್ಲರಿಗೂ ಮಹಾವ್ಯಸನವು ಬಂದಿರುವಾಗ, ಈ ಹರ್ಷೋದ್ರೇಕಕ್ಕೆ ಕಾರಣವೇನೆಂಬುದನ್ನು ಕೂಡಲೇ ತಿಳಿದು ಬನ್ನಿರಿ" ಎಂದು ಅಜ್ಞಾಪಿಸಿದನು (೬–೭). ರಾವಣಾಜ್ಞೆಯಂತೆ ಆ ರಾಕ್ಷಸ ಭಟರು ಸಂಭ್ರಮದಿಂದ ಧಾವಿಸಿ ನಗರಪ್ರಾಕಾರವನ್ನೇರಿ ನಿಂತು, ಧೀರನಾದ ಸುಗ್ರೀವನಿಂದ ರಕ್ಷಿತವಾದ ವಾನರಸೇನೆಯನ್ನು ಕಂಡರು. ಹಾಗೆಯೇ ಘೋರ ವಾದ ಸರ್ಪಾಸ್ತ್ರಬಂಧದಿಂದ ವಿಮುಕ್ತರಾಗಿ ಉತ್ಸಾಹದಿಂದ ನಿಂತಿರುವ ಶ್ರೀರಾಮಲಕ್ಷ್ಮಣರನ್ನೂ ಕಂಡು ಖಿನ್ನರಾದರು!(೮–೯). ಆ ರಾಕ್ಷಸರಿಗೆ ಭಯ ವಾಯಿತು. ಕೂಡಲೆ ಎಲ್ಲರೂ ಪ್ರಾಕಾರದಿಂದ ಧುಮುಕಿ ಪೆಚ್ಚು ಮೋರೆಯಿಂದ ರಾವಣನ ಬಳಿಗೆ ಬಂದರು. ನುಡಿಜಾಣರಾದ ಆ ನಿಶಾಚರರು ಖಿನ್ನವದನ ರಾಗಿ ಅಪ್ರಿಯವಾರ್ತೆಯೆಲ್ಲವನ್ನೂ ರಾವಣನಿಗೆ ನೀವೇದಿಸಿದರು (೧೦–೧೧): "ಮಹಾಪ್ರಭು, ರಾಮಲಕ್ಷ್ಮಣರನ್ನು ಇಂದ್ರಜಿತುವು ಶರಬಂಧದಿಂದ ಬಂಧಿಸಿದ್ದು

ವಿಮುಕ್ತೌ ಶರಬಂಧೇನ ತೌ ದೃಶ್ಯೇತೇ ರಣಾಜಿರೇ ।
ಪಾಶಾನಿವ ಗಜೌ ಛಿತ್ವಾ ಗಜೇಂದ್ರಸಮವಿಕ್ರಮೌ ॥ ೧೩

ತಚ್ಛ್ರುತ್ವಾ ವಚನಂ ತೇಷಾಂ ರಾಕ್ಷಸೇಂದ್ರೋ ಮಹಾಬಲಃ ।
ಚಿಂತಾಶೋಕಸಮಾಕ್ರಾಂತೋ ವಿಷಣ್ಣವದನೋಽಬ್ರವೀತ್ ॥ ೧೪

ಘೋರೈರ್ದತ್ತವರೈರ್ಬದ್ಧೌ ಶರೈರಾಶೀವಿಷೋಪಮೈಃ ।
ಅಮೋಘೈಃ ಸೂರ್ಯಸಂಕಾಶೈಃ ಪ್ರಮಥ್ಯೇಂದ್ರಜಿತಾ ಯುಧಿ ॥ ೧೫

ತದಸ್ತ್ರಬಂಧಮಾಸಾದ್ಯಯದಿ ಮುಕ್ತೌ ರಿಪೂ ಮಮ ।
ಸಂಶಯಸ್ಥಮಿದಂ ಸರ್ವಮನುಪಶ್ಯಾಮ್ಯಹಂ ಬಲಮ್ ॥ ೧೬

ನಿಷ್ಫಲಾಃ ಖಲು ಸಂವೃತ್ತಾಃ ಶರಾ ವಾಸುಕಿತೇಜಸಃ ।
ಆದತ್ತಂ ಯೈಸ್ತು ಸಂಗ್ರಾಮೇ ರಿಪೂಣಾಂ ಮಮ ಜೀವಿತಮ್ ॥ ೧೭

---

–ನಷ್ಟೆ. ಕೈಗಳನ್ನು ಅಲ್ಲಾಡಿಸಿದೆ. ಅವರು ಬಿದ್ದಿದ್ದರು ಈಗ ಶರಬಂಧದಿಂದ ಬಿಡುಗಡೆಹೊಂದಿ ರಣರಂಗದಲ್ಲಿ ನಿಂತಿದ್ದಾರೆ! ಕಟ್ಟಿದ ಹಗ್ಗವನ್ನು ಆನೆಗಳು ಕಿತ್ತೆಸೆಯುವಂತೆ ಶರಪಾಶವನ್ನು ಹರಿದೂಗೆದು, ಅವರಿಬ್ಬರೂ ಸಲಗಗಳಂತೆ ನಿಂತಿರುವುದು ಕಾಣಿಸುತ್ತದೆ!'' ಎಂದು ಅರಿಕೆಮಾಡಿದರು (೧೨–೧೩). ಭಟರ ಆ ನುಡಿಯನ್ನಾಲಿಸಿ ರಾಕ್ಷಸೇಂದ್ರನು ಚಿಂತ್ರಾಗ್ರಸ್ತನಾದನು. ವ್ಯಥೆಯು ಆವರಿಸಿತು ಮುಖವು ಕಳೆಗುಂದಿತು. ಅವನು ''ಎಲಾ ಇದೇನು? ಇಂದ್ರನನ್ನೇ ಗೆದ್ದಿರುವ ನನ್ನ ಮಗನು ಯುದ್ಧದಲ್ಲಿ ಅವರಿಬ್ಬರನ್ನೂ ವಿಧ್ವಂಸಗೊಳಿಸಿ ಘೋರಾಸ್ತ್ರಗಳಿಂದ ಬಂಧಿಸಿದ್ದಾನೆ. ವರಬಲದಿಂದ ಸಂಪಾದಿಸಿದ ಸೂರ್ಯ ಸಂಕಾಶವಾದ ಅಮೋಘಾಸ್ತ್ರಗಳವು. ವಿಷಸರ್ಪಗಳಂತೆ ಕ್ರೂರವಾದ ಅಸ್ತ್ರಗಳು (೧೪–೧೫). ಅಂತಹ ಅಸ್ತ್ರಬಂಧನಕ್ಕೆ ಸಿಕ್ಕಿದ ನನ್ನ ಶತ್ರುಗಳು ವಿಮುಕ್ತ ರಾದರೆಂದರೆ, (ತಪೋಲಬ್ಧವಾದ) ಬಲವೆಲ್ಲವೂ* ಸಂಶಯಗ್ರಸ್ತವೆಂದೇ ತಿಳಿಯಬೇಕಾಗುತ್ತದೆ! (೧೬). ವಾಸುಕಿಯಂತೆ ದೇದೀಪ್ಯಮಾನಗಳಾದ ಶರಗಳು ನಿಷ್ಫವಾದುವಲ್ಲವೇ? ನನ್ನ ವೈರಿಗಳ ಪ್ರಾಣವನ್ನು ಹೀರಿದ ಅಸ್ತ್ರಗಳು ಈಗ ವ್ಯರ್ಥವಾದುದಲ್ಲವೇ?'' ಎಂದನು (೧೭).

---

* 'ನನ್ನ ಸೇನೆಯೆಲ್ಲವೂ ಪ್ರಾಣಸಂಶಯಕ್ಕೆ ಈಡಾಯಿತೆಂದು ನನಗೆ ತೋರುತ್ತದೆ' ಎಂದು ವ್ಯಾಖ್ಯಾನಕಾರರು ಅರ್ಥಮಾಡಿದ್ದಾರೆ.

ಏವಮುಕ್ತ್ವಾ ತು ಸಂಕ್ರುದ್ಧೋ ನಿಃಶ್ವಸನ್ನುರಗೋ ಯಥಾ ।
ಅಬ್ರವೀದ್ರಕ್ಷಸಾಂ ಮಧ್ಯೇ ಧೂಮ್ರಾಕ್ಷಂ ನಾಮ ರಾಕ್ಷಸಮ್ ॥ ೧೮

ಬಲೇನ ಮಹತಾ ಯುಕ್ತೋ ರಕ್ಷಸಾಂ ಭೀಮವಿಕ್ರಮ ।
ತ್ವಂ ವಧಾಯಾಭಿನಿರ್ಯಾಹಿ ರಾಮಸ್ಯ ಸಹ ವಾನರೈಃ ॥ ೧೯

ಏವಮುಕ್ತಸ್ತು ಧೂಮ್ರಾಕ್ಷೋ ರಾಕ್ಷಸೇಂದ್ರೇಣ ಧೀಮತಾ ।
ಕೃತ್ವಾ ಪ್ರಣಾಮಂ ಸಂಹೃಷ್ಟೋ ನಿರ್ಜಗಾಮ ನೃಪಾಲಯಾತ್ ॥ ೨೦

ಅಭಿನಿಷ್ಕ್ರಮ್ಯ ತದ್ದ್ವಾರಂ ಬಲಾಧ್ಯಕ್ಷಮುವಾಚ ಹ ।
ತ್ವರಯಸ್ವ ಬಲಂ ತೂರ್ಣಂ ಕಿಂ ಚಿರೇಣ ಯುಯುತ್ಸತಃ ॥ ೨೧

ಧೂಮ್ರಾಕ್ಷವಚನಂ ಶ್ರುತ್ವಾ ಬಲಾಧ್ಯಕ್ಷೋ ಬಲಾನುಗಃ ।
ಬಲಮುದ್ಯೋಜಯಾಮಾಸ ರಾವಣಸ್ಯಾಜ್ಞಯಾ ದ್ರುತಮ್ ॥ ೨೨

ತೇ ಬದ್ಧಘಂಟಾ ಬಲಿನೋ ಘೋರರೂಪಾ ನಿಶಾಚರಾಃ ।
ವಿಗರ್ಜಮಾನಾಃ ಸಂಹೃಷ್ಟಾ ಧೂಮ್ರಾಕ್ಷಂ ಪರ್ಯವಾರಯನ್ ॥ ೨೩

ವಿವಿಧಾಯುಧಹಸ್ತಾಶ್ಚ ಶೂಲಮುದ್ಗರಪಾಣಯಃ ।
ಗದಾಭಿಃ ಪಟ್ಟಿಸೈರ್ದಂಡೈರಾಯಸೈರ್ಮುಸಲೈರ್ಭೃಶಮ್ ॥ ೨೪

---

ರಾವಣನ ಕ್ರೋಧವು ಉಲ್ಬಣಿಸಿತು. ಅವನು ಸರ್ಪದಂತೆ ಬುಗಿಲೆದ್ದು ಧೂಮ್ರಾಕ್ಷನೆಂಬ ಸೇನಾಪತಿಯನ್ನು ನೋಡಿ, "ಭೀಮವಿಕ್ರಮ-ಧೂಮ್ರಾಕ್ಷ, ಪ್ರಬಲವಾದ ರಾಕ್ಷಸಸೇನೆಯೊಡನೆ ಹೊರಡು ರಾಮನನ್ನೂ ಈ ಕಪಿಗಳನ್ನೂ ಸಂಹರಿಸು" ಎಂದು ಆಜ್ಞಯಿತ್ತನು (೧೮-೧೯). ಧೀರನಾದ ರಾಕ್ಷಸೇಂದ್ರನ ಆಜ್ಞೆಯನ್ನು ಕೇಳಿ ಧೂಮ್ರಾಕ್ಷನು ಅವನಿಗೆ ನಮಸ್ಕರಿಸಿ ಉತ್ಸಾಹಗೊಂಡು ಅರಮನೆಯಿಂದ ಹೊರಟನು. ಅವನು ಹೊರಗಿನ ದ್ವಾರದೆಡೆಗೆ ಬಂದು ತನ್ನ ಬಲಾಧ್ಯಕ್ಷನನ್ನು ನೋಡಿ "ತಡವೇಕೆ? ಶೀಘ್ರವಾಗಿ ನಮ್ಮ ಸೇನೆಯನ್ನು ಹೊರಡಿಸು. ಯುದ್ಧಕ್ಕೆ ಹೊರಟಿದ್ದೇನೆ" ಎಂದು ತಿಳಿಸಿದನು (೨೦-೨೧). ಧೂಮ್ರಾಕ್ಷನ ಮಾತನ್ನು ಕೇಳಿ ಆ ಬಲಾಧ್ಯಕ್ಷನು ರಾವಣಾಜ್ಞೆಯಂತೆ ಸೇನೆಯನ್ನು ಬೇಗಬೇಗನೆ ಸಜ್ಜುಪಡಿಸಿದನು. ಭೀಕರಾಕಾರರೂ ಬಲಾಢ್ಯರೂ ಆದ ರಾಕ್ಷಸಭಟರು ಸೊಂಟಗಳಿಗೆ ಗಂಟೆಗಳನ್ನು ಬಿಗಿದುಕಟ್ಟಿ, ಬೊಬ್ಬಿರಿಯುತ್ತ ಧೂಮ್ರಾಕ್ಷನ ಸುತ್ತಲೂ ಬಂದು ನೆರೆದರು (೨೨-೨೩). ಶೂಲ, ಮುದ್ಗರ,

ಪರಿಘೈರ್ಭಿಂಡಿಪಾಲೈಶ್ಚ ಭಲ್ಲೈಃ ಪ್ರಾಸೈಃ ಪರಶ್ವಧೈಃ ।
ನಿರ್ಯಯೂ ರಾಕ್ಷಸಾ ದಿಗ್ಭ್ಯೋ ನರ್ದಂತೋ ಜಲದಾ ಯಥಾ ॥

ರಥೈಃ ಕವಚಿನಸ್ತ್ವನ್ಯೇ ಧ್ವಜೈಶ್ಚ ಸಮಲಂಕೃತೈಃ ।
ಸುವರ್ಣಜಾಲವಿಹಿತೈಃ ಖರೈಶ್ಚ ವಿವಿಧಾನನೈಃ ॥ ೨೬

ಹಯೈಃ ಪರಮಶೀಘ್ರೈಶ್ಚ ಗಜೇಂದ್ರೈಶ್ಚ ಮದೋತ್ಕಟೈಃ ।
ನಿರ್ಯಯೂ ರಾಕ್ಷಸವ್ಯಾಘ್ರಾ ವ್ಯಾಘ್ರಾ ಇವ ದುರಾಸದಾಃ ॥ ೨೭

ವೃಕಸಿಂಹಮುಖೈರ್ಯುಕ್ತಂ ಖರೈಃ ಕನಕಭೂಷಣೈಃ ।
ಆರುರೋಹ ರಥಂ ದಿವ್ಯಂ ಧೂಮ್ರಾಕ್ಷಃ ಖರನಿಃಸ್ವನಃ ॥ ೨೮

ಸ ನಿರ್ಯಾತೋ ಮಹಾವೀರ್ಯೋ ಧೂಮ್ರಾಕ್ಷೋ ರಾಕ್ಷಸೈರ್ವೃತಃ
ಪ್ರಹಸನ್ ಪಶ್ಚಿಮದ್ವಾರಂ ಹನೂಮಾನ್ ಯತ್ರ ಯೂಥಪಃ ॥ ೨೯

ರಥಪ್ರವರಮಾಸ್ಥಾಯ ಖರಯುಕ್ತಂ ಖರಸ್ವನಮ್ ।
ಪ್ರಯಾಂತಂ ತು ಮಹಾಘೋರಂ ರಾಕ್ಷಸಂ ಭೀಮವಿಕ್ರಮಮ್ ॥ ೩೦

---

ಗದೆ, ಪಟ್ಟಸ, ಲೋಹಮಯ ದಂಡ, ಮುಸಲ, ಪರಿಘ, ಭಿಂಡಿಪಾಲ, ಭಲ್ಲ ಪ್ರಾಸ, ಪರಶ್ವಧ – ಮುಂತಾದ ವಿವಿಧಾಯುಧಗಳನ್ನು ಧರಿಸಿ ಮೋಡಗಳಂತೆ ಗುಡುಗುತ್ತ ನಾಲ್ಕು ಕಡೆಗಳಿಂದಲೂ ಹೊರಟುಬಂದರು (೨೪–೨೫). ಕೆಲವರು ಕವಚಗಳನ್ನು ತೊಟ್ಟು, ಸುವರ್ಣಗವಾಕ್ಷಗಳುಳ್ಳ ಧ್ವಜಾಲಂಕೃತಗಳಾದ ರಥಗಳಿಗೆ ವಿಚಿತ್ರಮುಖವುಳ್ಳ ಕತ್ತೆಗಳನ್ನು ಹೂಡಿ ರಥಾರೂಢರಾಗಿ ಹೊರಟರು. ಕೆಲವರು ಶೀಘ್ರಗಾಮಿಗಳಾದ ಕುದುರೆಗಳನ್ನೇರಿದರು. ಕೆಲವರು ಮದಿಸಿದ ಆನೆಗಳನ್ನೇರಿದರು. ಹೀಗೆ ಪರಾಕ್ರಮಿಗಳೂ ದುರ್ಧರ್ಷರೂ ಆದ ರಾಕ್ಷಸರು ಹೆಬ್ಬುಲಿಗಳಂತೆ ಯುದ್ಧಕ್ಕೆ ಹೊರಟರು (೨೬–೨೭). ಧೂಮ್ರಾಕ್ಷನು ತೋಳಗಳಂತೆಯೂ ಸಿಂಹಗಳಂತೆಯೂ ಮುಖಗಳುಳ್ಳ ಖರಗಳನ್ನು ಹೂಡಿದ ದಿವ್ಯ ರಥವನ್ನು, ಕರ್ಕಶವಾಗಿ ಗರ್ಜಿಸುತ್ತ ಆರೋಹಿಸಿದನು (೨೮). ಅನಂತರ ಮಹಾವೀರನಾದ ಆ ಧೂಮ್ರಾಕ್ಷನು ವಿಕಟವಾಗಿ ಅಟ್ಟಹಾಸಮಾಡುತ್ತ ರಾಕ್ಷಸರಿಂದ ಪರಿವೃತನಾಗಿ, ಹನುಮಂತನು ರಕ್ಷಿಸುತ್ತಿದ್ದ ಪಶ್ಚಿಮದ್ವಾರದ ಕಡೆಗೆ ಬಂದನು (೨೯). ಮಹಾಘೋರನೂ ಭೀಮವಿಕ್ರಮನೂ ಆದ ಆ ರಾಕ್ಷಸನು

ಅಂತರಿಕ್ಷಗತಾ ಘೋರಾಃ ಶಕುನಾಃ ಪ್ರತ್ಯವಾರಯನ್ ।
ರಥಶೀರ್ಷೇ ಮಹಾನ್ ಭೀಮೋ ಗೃಧ್ರಶ್ಚ ನಿಪಪಾತ ಹ ॥ ೩೧

ಧ್ವಜಾಗ್ರೇ ಗ್ರಥಿತಾಶ್ಚೈವ ನಿಪೇತುಃ ಕುಣಪಾಶನಾಃ ।
ರುಧಿರಾರ್ದ್ರೋ ಮಹಾನ್ ಶ್ವೇತಃ ಕಬಂಧಃ ಪತಿತೋ ಭುವಿ ॥ ೩೨

ವಿಸ್ವರಂ ಚೋತ್ಸೃಜನ್ನಾದಂ ಧೂಮ್ರಾಕ್ಷಸ್ಯ ಸಮೀಪತಃ ।
ವವರ್ಷ ರುಧಿರಂ ದೇವಃ ಸಂಚಚಾಲ ಚ ಮೇದಿನೀ ॥ ೩೩

ಪ್ರತಿಲೋಮಂ ವವೌ ವಾಯುರ್ನಿರ್ಘಾತಸಮನಿಃಸ್ವನಃ ।
ತಿಮಿರೌಘಾವೃತಾಸ್ತತ್ರ ದಿಶಶ್ಚ ನ ಚಕಾಶಿರೇ ॥ ೩೪

ಸ ತೂತ್ಪಾತಾಂಸ್ತದಾ ದೃಷ್ಟ್ವಾ ರಾಕ್ಷಸಾನಾಂ ಭಯಾವಹಾನ್ ।
ಪ್ರಾದುರ್ಭೂತಾನ್ ಸುಘೋರಾಂಶ್ಚ ಧೂಮ್ರಾಕ್ಷೋ
ವ್ಯಥಿತೋಽಭವತ್ ॥ ೩೫

ಮುಮುಹೂ ರಾಕ್ಷಸಾಃ ಸರ್ವೇ ಧೂಮ್ರಾಕ್ಷಸ್ಯ ಪುರಃಸರಾಃ ॥

---

ಕರ್ಕಶವಾಗಿ ಚೀತ್ಕರಿಸುತ್ತಿದ್ದ ಖರಯುಕ್ತವಾದ ಮಹಾರಥವನ್ನೇರಿ ಬರುತ್ತಿರುವಾಗ' ಅಪಶಕುನಸೂಚಕವಾದ ಪಕ್ಷಿಗಳು ಅಡ್ಡ ಬಂದವು. ಒಂದು ದೊಡ್ಡ ರಣಹದ್ದು ರಥದ ತುದಿಗೆ ಬಂದೆರಗಿತು (೩೦–೩೧). ಧ್ವಜಾಗ್ರದ ಸುತ್ತಲೂ ಶವಭಕ್ಷಕಗಳಾದ ಹದ್ದುಗಳು ಸಾಲುಗಟ್ಟಿ ಹಾರಾಡಿದವು. ರಕ್ತಸಿಕ್ತವಾದ ಒಂದು ಬಿಳಿಯ ರುಂಡವು* ಭರ್ರೆಂದು ಶಬ್ದಮಾಡುತ್ತ ಧೂಮ್ರಾಕ್ಷನ ಸಮೀಪದಲ್ಲಿಯೇ ಬಿದ್ದಿತು. ಆಕಾಶದಿಂದ ರಕ್ತದ ಮಳೆ ಸುರಿಯಿತು. ಭೂಮಿ ನಡುಗಿತು (೩೨–೩೩). ಸಿಡಿಲು ಹೊಡೆದಂತೆ ಸದ್ದುಮಾಡುತ್ತ ಎದುರುಗಾಳಿ ಬೀಸಿತು. ದಿಕ್ಕುಗಳು ಕತ್ತಲುಗಟ್ಟಿ ಮಬ್ಬಾದವು. ರಾಕ್ಷಸರಿಗೆ ಭಯಸೂಚಕವಾದ ಆ ಘೋರ ಅಪಶಕುನಗಳನ್ನು ಕಂಡು, ಧೂಮ್ರಾಕ್ಷನು ಚಿಂತಾಕುಲನಾಗಿ ವ್ಯಥೆಗೊಂಡನು. ಅವನೆದುರಿಗೆ ಸಾಗುತ್ತಿದ್ದ ರಾಕ್ಷಸರೆಲ್ಲರೂ ಏನುಮಾಡಬೇಕೆಂದು ತೋರದೆ ಸ್ತಬ್ಧರಾದರು (೩೪–೩೫).

---

* ರುಂಡ= ತಲೆಯಿಲ್ಲದ ಶರೀರ

ತತಃ ಸುಭೀಮೋ ಬಹುಭಿರ್ನಿಶಾಚರೈ-
ರ್ವೃತೋಽಭಿನಿಷ್ಕ್ರಮ್ಯ ರಣೋತ್ಸುಕೋ ಬಲೀ ।
ದದರ್ಶ ತಾಂ ರಾಘವಬಾಹುಪಾಲಿತಾಂ
ಮಹೌಘಕಲ್ಪಾಂ ಬಹು ವಾನರೀಂ ಚಮೂಮ್ ॥ ೩೬

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕಪಂಚಾಶಃ ಸರ್ಗಃ

---

ಆದರೂ ಬಲಿಶಾಲಿಯಾದ ಧೂಮ್ರಾಕ್ಷನು ಬಹುಮಂದಿ ರಾಕ್ಷಸರಿಂದ ಪರಿವೃತನಾಗಿ ರಣೋತ್ಸಾಹದಿಂದ ಮುಂದೆ ಸಾಗಿದನು. ಪುರದ್ವಾರದಿಂದ ಹೊರಗೆ ಬಂದು ಧೂಮ್ರಾಕ್ಷನು, ಶ್ರೀರಾಮನ ಭುಜಬಲದಿಂದ ಪಾಲಿತವಾಗಿ ಅಲೆಯಲೆಗಳಂತೆ ನೆರೆದು ಮಹಾಸಾಗರದಂತಿದ್ದ ವಾನರಸೇನೆಯನ್ನು ಕಂಡನು (೨೬).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಐವತ್ತೊಂದನೆಯ ಸರ್ಗ

---

# ದ್ವಿಪಂಚಾಶಃ ಸ್ವರ್ಗಃ

## ಧೂಮ್ರಾಕ್ಷವಧಃ

ಧೂಮ್ರಾಕ್ಷಂ ಪ್ರೇಕ್ಷ್ಯ ನಿರ್ಯಾತಂ ರಾಕ್ಷಸಂ ಭೀಮವಿಕ್ರಮಮ್ ।
ವಿನೇದುರ್ವಾನರಾಃ ಸರ್ವೇ ಪ್ರಹೃಷ್ಟಾ ಯುದ್ಧಕಾಂಕ್ಷಿಣಃ ॥ ೧

ತೇಷಾಂ ಸುತುಮುಲಂ ಯುದ್ಧಂ ಸಂಜಜ್ಞೇ ಹರಿರಕ್ಷಸಾಮ್ ।
ಅನ್ಯೋನ್ಯಂ ಪಾದಪೈರ್ಘೋರೈರಂ ನಿಘ್ನತಾಂ ಶೂಲಮುದ್ಗರೈಃ ॥ ೨

ಘೋರೈಶ್ಚ ಪರಿಘೈಶ್ಚಿತ್ರೈಸ್ತ್ರಿಶೂಲೈಶ್ಚಾಪಿ ಸಂಹತೈಃ ।
ರಾಕ್ಷಸೈರ್ವಾನರಾ ಘೋರೈರ್ವಿನಿಕೃತ್ತಾಃ ಸಮಂತತಃ ॥ ೩

ವಾನರೈ ರಾಕ್ಷಸಾಶ್ಚಾಪಿ ದ್ರುಮೈರ್ಭೂಮೌ ಸಮೀಕೃತಾಃ ।
ರಾಕ್ಷಸಾಶ್ಚಾಪಿ ಸಂಕ್ರುದ್ಧಾ ವಾನರಾನ್ನಿಶಿತೈಃ ಶರೈ : ॥ ೪

ವಿವ್ಯ ಧುರ್ಘೋರಸಂಕಾಶೈಃ ಕಂಕಪತ್ರೈರಜಿಹ್ಮಗೈಃ ।
ತೇ ಗದಾಭಿಶ್ಚ ಭೀಮಾಭಿಃ ಪಟ್ಟಸೈಃ ಕೂಟಮುದ್ಗರೈಃ ॥ ೫

## ಸರ್ಗ ೫೨

### ಹನುಮಂತನಿಂದ ಧೂಮ್ರಾಕ್ಷನ ವಧೆ.

ಪರಾಕ್ರಮಿಯಾದ ಧೂಮ್ರಾಕ್ಷನು ಲಂಕೆಯಿಂದ ಹೊರಬರುವುದನ್ನು ಕಂಡು, ಸಮಸ್ತ ವಾನರರೂ ಯುದ್ಧೋತ್ಸುಕರಾಗಿ ಹರ್ಷದಿಂದ ಸಿಂಹನಾದ ಗೈದರು. ಅನತಂರ ಕಪಿಯೋಧರಿಗೂ ರಾಕ್ಷಸಭಟರಿಗೂ ಕೈ ಕೈ ಮಿಲಾಯಿಸಿತು (೧). ಕಪಿಯೋಧರು ವೃಕ್ಷಗಳಿಂದ ರಾಕ್ಷಸರನ್ನು ಬಡಿಯಲಾರಂಭಿಸಿದರು. ರಾಕ್ಷಸರು ಶೂಲ, ಮುದ್ಗರ, ಪರಿಘ, ತ್ರಿಶೂಲ–ಮುಂತಾದ ಆಯುಧಗಳಿಂದ ಕಪಿಗಳನ್ನು ಹೊಡೆದು ತಿವಿದು ಸೀಳಲಾರಂಭಿಸಿದರು (೨–೩). ಕಪಿಗಳು ರಾಕ್ಷಸರನ್ನು ಮರಗಳಿಂದಪ್ಪಳಿಸಿ ನೆಲದಮೇಲುರುಳಿಸಿದರು. ಕ್ರುದ್ಧರಾದ ರಾಕ್ಷಸರು ಗರಿಗಟ್ಟಿದ ಶರಗಳನ್ನು ಗುರಿಯಿಟ್ಟು ತೂರಿ ವಾನರರನ್ನು ತರಿದರು.

ಘೋರೈಶ್ಚ ಪರಿಘೈಶ್ಚಿತ್ರೈಸ್ತ್ರಿಶೂಲೈಶ್ಚಾಪಿ ಸಂಶಿತೈಃ ।
ವಿದಾರ್ಯಮಾಣಾ ರಕ್ಷೋಭಿರ್ವಾನರಾಸ್ತೇ ಮಹಾಬಲಾಃ ॥ ೬

ಅಮರ್ಷಾಜ್ಜನಿತೋದ್ಧರ್ಷಾಶ್ಚಕ್ರುಃ ಕರ್ಮಾಣ್ಯಭೀತವತ್ ।
ಶರನಿರ್ಭಿನ್ನಗಾತ್ರಾಸ್ತೇ ಶೂಲನಿರ್ಭಿನ್ನ ದೇಹಿನಃ ॥ ೭

ಜಗೃಹುಸ್ತೇ ದ್ರುಮಾಂಸ್ತತ್ರ ಶಿಲಾಶ್ಚ ಹರಿಯೂಥಪಾಃ ।
ತೇ ಭೀಮವೇಗಾ ಹರಯೋ ನರ್ದಮಾನಾಸ್ತತಸ್ತತಃ ॥ ೮

ಮಮಂಥೂ ರಾಕ್ಷಸಾನ್ ಭೀಮಾನ್ನಾಮಾನಿ ಚ ಬಭಾಷಿರೇ ।
ತದ್ಬಭೂವಾದ್ಭುತಂ ಘೋರಂ ಯುದ್ಧಂ ವಾನರರಕ್ಷಸಾಮ್ ॥ ೯

ಶಿಲಾಭಿರ್ವಿವಿಧಾಭಿಶ್ಚ ಬಹುಭಿಶ್ಚೈವ ಪಾದಪೈಃ ।
ರಾಕ್ಷಸಾ ಮಥಿತಾಃ ಕೇಚಿದ್ವಾನರೈರ್ಜಿತಕಾಶಿಭಿಃ ॥ ೧೦

ವವಮೂ ರುಧಿರಂ ಕೇಚಿನ್ಮುಖೈ ರುಧಿರಭೋಜನಾಃ ।
ಪಾರ್ಶ್ವೇಷು ದಾರಿತಾ ಕೇಚಿತ್ಕೇಚಿದ್ರಾಶೀಕೃತಾ ದ್ರುಮೈಃ ॥ ೧೧

---

ಭೀಕರವಾದ ಗದೆಗಳು, ಪಟ್ಟಸಗಳು, ಕೂಟಮುದ್ಗರಗಳು, ಪರಿಘಗಳು, ತ್ರಿಶೂಲಗಳು—ಮೊದಲಾದವುಗಳಿಂದ ವಾನರರನ್ನು ಸೀಳಿ ಸಂಹರಿಸಿದರು (೪–೬). ಬಲಾಢ್ಯರಾದ ವಾನರನಾಯಕರು ಶರನಿರ್ಭಿನ್ನಗಾತ್ರರಾದರೂ ಶೂಲವಿಚ್ಛಿನ್ನದೇಹರಾದರೂ ಕೋಪದಿಂದ ನಿರ್ಭೀತರಾಗಿ ನುಗ್ಗಿ ಸಾಹಸ ಕಾರ್ಯಗಳಲ್ಲಿ ತೊಡಗಿದರು. ಭೀಮವೇಗರಾದ ಆ ಕಪಿಯೋಧರು ಮರ ಗಳನ್ನು ಕಿತ್ತು ಶಿಲೆಗಳನ್ನು ಹೊತ್ತು ಆರ್ಭಟಿಸುತ್ತ, ತಮ್ಮ ತಮ್ಮ ಹೆಸರು ಗಳನ್ನು ವೀರವಾಣಿಯಿಂದ ಘೋಷಿಸುತ್ತ, ರಾಕ್ಷಸರನ್ನು ತರುಬಿ ಬಡಿದು ಕಡೆದರು (೭–೮). ಆ ಘೋರಸಂಗ್ರಾಮವು ಅದ್ಭುತವಾಯಿತು. ಶೂರರಾದ ವಾನರಭಟರು ಬಗೆಬಗೆಯ ಬಂಡಿಗಳಿಂದಲೂ ವಿಧವಿಧದ ವೃಕ್ಷಗಳಿಂದಲೂ ರಾಕ್ಷಸರನ್ನು ಕಡೆದುಬಿಟ್ಟರು. ರಕ್ತಪಾಯಿಗಳಾದ ರಾಕ್ಷಸರು ಬಾಯಿಂದ ರಕ್ತವನ್ನು ಕಾರಿದರು. ಆ ಕಪಿಗಳು ಕೆಲವು ರಾಕ್ಷಸರನ್ನು ಸೀಳಿ ಬಿಸುಟರು. ಕೆಲವರನ್ನು ಮರಗಳಿಂದ ಬಡಿದು ರಾಶಿ ಹಾಕಿದರು (೯–೧೧).

ಶಿಲಾಭಿಶ್ಚೂರ್ಣಿತಾಃ ಕೇಚಿತ್ಕೇಚಿದ್ದಂತ್ತೈರ್ವಿದಾರಿತಾಃ ।
ಧ್ವಜೈರ್ವಿಮಥಿತೈರ್ಭಗ್ನೈಃ ಖರೈಶ್ಚ ವಿನಿಪಾತಿತೈಃ ॥ ೧೨

ರಥೈರ್ವಿಧ್ವಂಸಿತೈಶ್ಚಾಪಿ ಪತಿತೈಃ ರಜನೀಚರೈಃ ।
ಗಜೇಂದ್ರೈಃ ಪರ್ವತಾಕಾರೈಃ ಪರ್ವತಾಗ್ರೈರ್ವನೌಕಸಾಮ್ ॥ ೧೩

ಮಥಿತೈರ್ವಾಜಿಭಿಃ ಕೀರ್ಣಂ ಸಾರೋಹೈರ್ವಸುಧಾತಲಮ್ ।
ವಾನರೈರ್ಭೀಮವಿಕ್ರಾಂತೈರಾಪ್ಲುತ್ಯಾಪ್ಲುತ್ಯ ವೇಗಿತೈಃ ॥ ೧೪

ರಾಕ್ಷಸಾಃ ಕರಜೈಸ್ತೀಕ್ಷ್ಣೈರ್ಮುಖೇಷು ವಿನಿಕರ್ತಿತಾಃ ।
ವಿವರ್ಣವದನಾ ಭೂಯೋ ವಿಪ್ರಕೀರ್ಣಶಿರೋರುಹಾಃ ॥ ೧೫

ಮೂಢಾಃ ಶೋಣಿತಗಂಧೇನ ನಿಪೇತುರ್ಧರಣೀತಲೇ ।
ಅನ್ಯೇ ಪರಮಸಂಕ್ರುದ್ಧಾ ರಾಕ್ಷಸಾ ಭೀಮನಿಃಸ್ವನಾಃ ॥ ೧೬

ತಲೈರೇವಾಭಿಧಾವಂತಿ ವಜ್ರಸ್ಪರ್ಶಸಮೈರ್ಹರೀನ್ ।
ವಾನರೈರಾಪತಂತಸ್ತೇ ವೇಗಿತಾ ವೇಗವತ್ತರೈಃ ॥ ೧೭

---

ಕೆಲವರನ್ನು ಬಂಡೆಗಳಿಂದ ಜಜ್ಜಿದರು. ಕೆಲವರನ್ನು ಹಲ್ಲುಗಳಿಂದ ಸಿಗಿದರು. ಕಪಿಯೋಧರು ಗಿರಿಶೃಂಗಗಳನ್ನು ಬೀಸಿ ಬಡಿಯಲು, ಮುರಿದು ಚೂರುಚೂರಾದ ಧ್ವಜಗಳಿಂದಲೂ ಸತ್ತುಬಿದ್ದ ಖರಗಳಿಂದಲೂ ಪುಡಿಪುಡಿಯಾದ ರಥಗಳಿಂದಲೂ ಸತ್ತೊರಗಿದ ನಿಶಾಚರರಿಂದಲೂ ಅಡ್ಡಬಿದ್ದ ಆನೆಗಳಿಂದಲೂ ಜಜ್ಜಿಹೋದ ಕುದುರೆಗಳಿಂದಲೂ ಹತರಾದ ರಾಹುತರಿಂದಲೂ ರಣಭೂಮಿಯು ತುಂಬಿ ಹೋಯಿತು (೧೨-೧೩). ಅದ್ಭುತಪರಾಕ್ರಮಿಗಳಾದ ವಾನರಭಟರು ರಭಸದಿಂದ ಹಾರಿಹಾರಿ ಹರಿತವಾದ ಉಗುರುಗಳಿಂದ ರಾಕ್ಷಸರ ಮುಖಗಳನ್ನು ಪರಿಚಿದರು. ರಾಕ್ಷಸರ ಮುಖಗಳು ಕಳೆಗುಂದಿದವು. ಕೂದಲುಗಳು ಕೆದರಿದವು. ನೆತ್ತರು ಸುರಿದು ಎಚ್ಚರದಪ್ಪಿ ರಾಕ್ಷಸರು ನೆಲದಲ್ಲುರುಳಿದರು (೧೪-೧೫). ಇನ್ನು ಕೆಲವು ರಾಕ್ಷಸರು ಅತ್ಯಂತ ಕ್ರೋಧದಿಂದ ಭೀಕರವಾಗಿ ಬೊಬ್ಬಿರಿಯುತ್ತ ವಜ್ರದಂತೆ ಕಠೋರವಾದ ಅಂಗೈಗಳನ್ನೆತ್ತಿ ಅಪ್ಪಳಿಸುವುದಕ್ಕಾಗಿ ವಾನರರನ್ನು ಅಟ್ಟಿಸಿಕೊಂಡು ಹೋದರು. ವಾನರರು ಅವರಿಗಿಂತಲೂ ವೇಗದಿಂದ ಓಡುತ್ತ ಬಂದು ಎದುರಿಸಿ, ರಾಕ್ಷಸರನ್ನು ಮುಷ್ಟಿಗಳಿಂದ ಗುದ್ದಿ, ಕಾಲುಗಳಿಂದ ಒಡೆದು,

ಮುಷ್ಟಿಭಿಶ್ಚರಣೈರ್ದಂತೈಃ ಪಾದಪೈಶ್ಚಾವಪೋಥಿತಾಃ ।
ವಾನರೈರ್ಹನ್ಯಮಾನಾಸ್ತೇ ರಾಕ್ಷಸಾ ವಿಪ್ರದುದ್ರುವುಃ ॥ ೧೮

ಸೈನ್ಯಂ ತು ವಿದ್ರುತಂ ದೃಷ್ಟ್ವಾ ಧೂಮ್ರಾಕ್ಷೋ ರಾಕ್ಷಸರ್ಷಭಃ ।
ಕ್ರೋಧೇನ ಕದನಂ ಚಕ್ರೇ ವಾನರಾಣಾಂ ಯುಯುತ್ಸತಾಮ್ ॥ ೧೯

ಪ್ರಾಸೈಃ ಪ್ರಮಥಿತಾಃ ಕೇಚಿದ್ವಾನರಾಃ ಶೋಣಿತಸ್ರವಾಃ ।
ಮುದ್ಗರೈರಾಹತಾಃ ಕೇಚಿತ್ಪತಿತಾ ಧರಣೀತಲೇ ॥ ೨೦

ಪರಿಘೈರ್ಮಥಿತಾಃ ಕೇಚಿದ್ಭಿಂಡಿಪಾಲೈರ್ವಿದಾರಿತಾಃ ।
ಪಟ್ಟಿಸೈರಾಹತಾಃ ಕೇಚಿದ್ವಿಹ್ವಲಂತೋ ಗತಾಸವಃ ॥ ೨೧

ಕೇಚಿದ್ವಿನಿಹತಾಃ ಶೂಲೈ ರುಧಿರಾರ್ದ್ರಾ ವನೌಕಸಃ ।
ಕೇಚಿದ್ವಿದ್ರಾವಿತಾ ನಷ್ಟಾಃ ಸಬಲೈ ರಾಕ್ಷಸೈರ್ಯುಧಿ ॥ ೨೨

ವಿಭಿನ್ನಹೃದಯಾಃ ಕೇಚಿದೇಕಪಾರ್ಶ್ವೇನ ದಾರಿತಾಃ
ವಿದಾರಿತಾಸ್ತ್ರಿಶೂಲೈಶ್ಚ ಕೇಚಿದಾಂತ್ರೈರ್ವಿನಿಃಸೃತಾಃ ॥ ೨೩

---

ಪಲ್ಲುಗಳಿಂದ ಸೀಳಿ, ವೃಕ್ಷಗಳಿಂದ ಅಪ್ಪಳಿಸಿದರು. ವಾನರರ ಹೊಡೆತವನ್ನು ತಡೆಯಲಾರದ ರಾಕ್ಷಸರು ಪಲಾಯನಮಾಡಿದರು (೧೬–೧೮). ರಾಕ್ಷಸ ಸೇನಾಪತಿಯಾದ ಧೂಮ್ರಾಕ್ಷನು ತನ್ನ ಸೇನೆಯು ಹೆದರಿ ಓಡುತ್ತಿರುವುದನ್ನು ಕಂಡು ಕೋಪಗೊಂಡ ಆ ವಾನರರನ್ನು ಎದುರಿಸಿ ಯುದ್ಧವನ್ನಾರಂಭಿಸಿದನು (೧೯). (ಆಗ ರಾಕ್ಷಸಸೈನಿಕರೂ ಮತ್ತೆ ಕಾಳಗಕ್ಕಿಳಿದರು.) ಪ್ರಾಸಗಳಿಂದ ವಾನರರನ್ನು ಹೊಡೆದು ಅವರ ಸರ್ವಾಂಗಗಳಿಂದಲೂ ರಕ್ತವು ಸೋರುವಂತೆ ಮಾಡಿದರು. ಮುದ್ಗರಗಳಿಂದ ಅಪ್ಪಳಿಸಿ ಕಪಿಗಳನ್ನು ನೆಲದಲ್ಲುರುಳಿಸದರು. ಪರಿಘಗಳಿಂದ ಬಡಿದರು. ಭಿಂಡಿಪಾಲಗಳಿಂದ ಸೀಳಿದರು. ಪಟ್ಟಸಗಳಿಂದ ಹೊಡೆದು ಕೊಂದರು (೨೦–೨೧). ಕೆಲವು ವಾನರರನ್ನು ಶೂಲಗಳಿಂದ ತಿವಿದು ರಕ್ತದಲ್ಲಿ ನೆನೆಯಿಸಿದರು. ಬಲಾಢ್ಯರಾದ ರಾಕ್ಷಸರ ಪೆಟ್ಟುಗಳನ್ನು ತಾಳಲಾರದೆ ಕೆಲವು ವಾನರರು ಕಣ್ಣಿಗೆ ಕಾಣದಂತೆ ಓಡಿಹೋದರು (೨೨). ಆ ರಾಕ್ಷಸರು ಕೆಲವು ಕಪಿಗಳ ಎದೆಯನ್ನೊಡೆದರು. ಕೆಲವರ ದೇಹದ ಒಂದು ಪಾರ್ಶ್ವವನ್ನು ಸಿಗಿದರು. ಕೆಲವರನ್ನು ತ್ರಿಶೂಲಗಳಿಂದ ತಿವಿದರು. ಕಪಿಗಳ ಕರುಳನ್ನು ಕತ್ತರಿಸಿದರು (೨೩).

ತತ್ಸುಭೀಮಂ ಮಹಾಯುದ್ಧಂ ಹರಿರಾಕ್ಷಸಸಂಕುಲಮ್ ।
ಪ್ರಬಭೌ ಶಬ್ದಬಹುಲಂ ಶಿಲಾಪಾದಪಸಂಕುಲಮ್ ॥ ೧೪

ಧನುರ್ಜ್ಯಾತಂತ್ರಿಮಧುರಂ ಹಿಕ್ಕಾತಾಲಸಮನ್ವಿತಮ್ ।
ಮಂದಸ್ತನಿತಸಂಗೀತಂ ಯುದ್ಧಗಾಂಧರ್ವಮಾಬಭೌ ॥ ೧೫

ಧೂಮ್ರಾಕ್ಷಸ್ತು ಧನುಷ್ಪಾಣಿರ್ವಾನರಾನ್ ರಣಮೂರ್ಧನಿ ।
ಹಸನ್ ವಿದ್ರಾವಯಾಮಾಸ ದಿಶಸ್ತಾನ್ ಶರವೃಷ್ಟಿಭಿಃ ॥ ೧೬

ಧೂಮ್ರಾಕ್ಷೇಣಾರ್ದಿತಂ ಸೈನ್ಯಂ ವ್ಯಥಿತಂ ವೀಕ್ಷ್ಯ ಮಾರುತಿಃ ।
ಅಭ್ಯವರ್ತತ ಸಂಕ್ರುದ್ಧಃ ಪ್ರಗೃಹ್ಯ ವಿಪುಲಾಂ ಶಿಲಾಮ್ ॥ ೧೭

ಕ್ರೋಧಾದ್ದ್ವಿಗುಣತಾಮ್ರಾಕ್ಷಃ ಪಿತೃತುಲ್ಯಪರಾಕ್ರಮಃ ।
ಶಿಲಾಂ ತಾಂ ಪಾತಯಾಮಾಸ ಧೂಮ್ರಾಕ್ಷಸ್ಯ ರಥಂ ಪ್ರತಿ ॥ ೧೮

---

ಈ ರೀತಿಯಲ್ಲಿ ಕಪಿರಾಕ್ಷಸರ ಯುದ್ಧವು ಮಹಾಭೀಷಣವಾಯಿತು. ಎಲ್ಲೆಲ್ಲಿಯೂ ರಣಕೋಲಾಹಲವೇ ಕೇಳಿಸುತ್ತಿತ್ತು. ಎಲ್ಲೆಲ್ಲಿಯೂ ಶಿಲೆಗಳೂ ವೃಕ್ಷಗಳೂ ದಟ್ಟವಾಗಿ ತುಂಬಿದ್ದವು (೧೪). ರಣರಂಗವೇ ಒಂದು ಸಂಗೀತಶಾಲೆಯಾಯಿತು! ಅಲ್ಲಿ ಧನುಷ್ಟಂಕಾರವೇ ತಂತಿಯ ಮಧುರವಾದ್ಯ! ಪೆಟ್ಟು ತಿಂದುರುಳಿದ ಕಪಿರಾಕ್ಷಸರ ಬಿಕ್ಕಳಿಕೆಯೇ ತಾಳ! ಕುಗ್ಗಿದ ದೀನಧ್ವನಿಯೇ ಹಾಡುಗಾರಿಕೆ!* (೧೫). ಧೂಮ್ರಾಕ್ಷನು ಧನುಷ್ಪಾಣಿಯಾಗಿ ನುಗ್ಗಿಬಂದು ವಾನರಸೇನೆಯಮೇಲೆ ಶರವೃಷ್ಟಿಯನ್ನು ಸುರಿಸಿ ಅವರನ್ನು ದಿಕ್ಕುಟಕ್ಕಿಗೆ ಚದರಿಸಿದನು. ವಾನರರು ಓಡಿಹೋಗುವುದನ್ನು ಕಂಡು ವಿಕಟವಾಗಿ ನಗುತ್ತಿದ್ದನು (೧೬). ಹೀಗೆ ಧೂಮ್ರಾಕ್ಷನಿಂದ ವಾನರಸೇನೆಯು ಕಂಗೆಟ್ಟು ಓಡುತ್ತಿರುವುದನ್ನು ನೋಡಿ ಹನುಮಂತನು ಕ್ರುದ್ಧನಾದನು. ಒಂದು ದೊಡ್ಡ ಬಂಡೆಯನ್ನು ಎತ್ತಿಕೊಂಡು ಧೂಮ್ರಾಕ್ಷನಿಗೆದುರಾಗಿ ನುಗ್ಗಿದನು (೧೭). ಪಿಂಗಾಕ್ಷನಾದ ಹನುಮಂತನ ಕಣ್ಣುಗಳು ಕೋಪದಿಂದ ಮತ್ತಷ್ಟು ಕೆಂಪಡರಿದವು.

---

* ಮೂಲದಲ್ಲಿರುವ ಹಿಕ್ಕಾ ಶಬ್ದಕ್ಕೆ ಕುದುರೆಯ ಹೇಷಾರವವೆಂದೂ ಮಂದ ಶಬ್ದಕ್ಕೆ ಗಜವಿಶೇಷವೆಂದೂ ತಿಲಕವ್ಯಾಖ್ಯಾನದಲ್ಲಿ ಅರ್ಥವನ್ನು ಹೇಳಿದ್ದಾರೆ.

ಆಪತಂತೀಂ ಶಿಲಾಂ ದೃಷ್ಟ್ವಾ ಗದಾಮುದ್ಯಮ್ಯ ಸಂಭ್ರಮಾತ್ ।
ರಥಾದಾಪ್ಲುತ್ಯ ವೇಗೇನ ವಸುಧಾಯಾಂ ವ್ಯತಿಷ್ಠತ ॥ ೨೯

ಸಾ ಪ್ರಮಥ್ಯ ರಥಂ ತಸ್ಯ ನಿಪಪಾತ ಶಿಲಾ ಭುವಿ ।
ಸಚಕ್ರಕೂಬರಂ ಸಾಶ್ವಂ ಸಧ್ವಜಂ ಸಶರಾಸನಮ್ ॥ ೩೦

ಸ ಭಂಕ್ತ್ವಾ ತು ರಥಂ ತಸ್ಯ ಹನೂಮಾನ್ ಮಾರುತಾತ್ಮಜಃ ।
ರಕ್ಷಸಾಂ ಕದನಂ ಚಕ್ರೇ ಸಸ್ಕಂಧವಿಟಪೈರ್ದ್ರುಮೈಃ ॥ ೩೧

ವಿಭಿನ್ನಶಿರಸೋ ಭೂತ್ವಾ ರಾಕ್ಷಸಾಃ ಶೋಣಿತೋಕ್ಷಿತಾಃ ।
ದ್ರುಮೈಃ ಪ್ರವ್ಯಥಿತಾಶ್ಚಾನ್ಯೇ ನಿಪೇತುರ್ಧರಣೀತಲೇ ॥ ೩೨

ವಿದ್ರಾವ್ಯ ರಾಕ್ಷಸಂ ಸೈನ್ಯಂ ಹನೂಮಾನ್ ಮಾರುತಾತ್ಮಜಃ ।
ಗಿರೇಃ ಶಿಖರಮಾದಾಯ ಧೂಮ್ರಾಕ್ಷಮಭಿದುದ್ರುವೇ ॥ ೩೩

ತಮಾಪತಂತಂ ಧೂಮ್ರಾಕ್ಷೋ ಗದಾಮುದ್ಯಮ್ಯ ವೀರ್ಯವಾನ್ ।
ವಿನರ್ದಮಾನಃ ಸಹಸಾ ಹನೂಮಂತಮಭಿದ್ರವತ್ ॥ ೩೪

---

ಅವನ ಪರಾಕ್ರಮವಾದರೋ ತಂದೆಯಾದ ವಾಯುದೇವನಿಗೆ ಸಮಾನವಾದುದು. ಆ ಪರಾಕ್ರಮಿಯು ಆ ಬಂಡೆಯನ್ನು ಧೂಮ್ರಾಕ್ಷನ ರಥಕ್ಕೆ ಗುರಿಯಿಟ್ಟು ಬೀಸಿದನು (೨೮). ಧೂಮ್ರಾಕ್ಷನು ರಭಸದಿಂದ ಬರುತ್ತಿದ್ದ ಆ ಬಂಡೆಯನ್ನು ಕಂಡು, ಛಂಗನೆ ರಥದಿಂದ ಧುಮುಕಿ ಗದಾಪಾಣಿಯಾಗಿ ನೆಲದಲ್ಲಿ ನಿಂತನು (೨೯). ಹನುಮಂತನು ಎಸೆದ ಬಂಡೆಯು ರಥದ ಚಕ್ರಗಳನ್ನೂ ಮೂಕಿಯನ್ನೂ ಪುಡಿಪುಡಿಮಾಡಿ, ಅಶ್ವಗಳನ್ನು ಕೊಂದು, ಧ್ವಜವನ್ನು ಮುರಿದು, ಧನುಸ್ಸನ್ನು ಜಜ್ಜಿ ನೆಲದಮೇಲುರುಳಿತು. ಆಮೇಲೆ ಮಾರುತಪುತ್ರನಾದ ಹನುಮಂತನು ಸ್ಕಂಧಗಳಿಂದಲೂ ಕೊಂಬೆಗಳಿಂದಲೂ ಯುಕ್ತವಾದ ವೃಕ್ಷಗಳಿಂದ ಹೋರಾಡತೊಡಗಿದನು (೩೦–೩೧). ರಾಕ್ಷಸರ ಗೋಣುಗಳು ಮುರಿದವು. ರಕ್ತಸಿಕ್ತರಾಗಿ ಅವರು ಭೂಮಿಯಲ್ಲೊರಗಿದರು. ಈ ಪ್ರಕಾರವಾಗಿ ಆಂಜನೇಯನು ರಾಕ್ಷಸಭಟರನ್ನು ಹೊಡೆದೋಡಿಸಿ, ಒಂದು ಪರ್ವತಶಿಖರವನ್ನು ಹಿಡಿದು ಧೂಮ್ರಾಕ್ಷನನ್ನು ತರುಬಿದನು (೩೨–೩೩). ವೀರನಾದ ಆ ಧೂಮ್ರಾಕ್ಷನು ಗದೆಯನ್ನು ಹಿಡಿದು ಗರ್ಜಿಸುತ್ತ ಹನುಮಂತನಮೇಲೆ

ತಸ್ಯ ಕ್ರುದ್ಧಸ್ಯ ರೋಷೇಣ ಗದಾಂ ತಾಂ ಬಹುಕಂಟಕಾಮ್ ।
ಪಾತಯಾಮಾಸ ಧೂಮ್ರಾಕ್ಷೋ ಮಸ್ತಕೇ ತು ಹನೂಮತಃ ॥ ೩೫

ತಾಡಿತಃ ಸ ತಯಾ ತತ್ರ ಗದಯಾ ಭೀಮರೂಪಯಾ ।
ಸ ಕಪಿರ್ಮಾರುತಬಲಸ್ತಂ ಪ್ರಹಾರಮಚಿಂತಯನ್ ॥ ೩೬

ಧೂಮ್ರಾಕ್ಷಸ್ಯ ಶಿರೋಮಧ್ಯೇ ಗಿರಿಶೃಂಗಮಪಾತಯತ್ ।
ಸ ವಿಹ್ವಲಿತಸರ್ವಾಂಗೋ ಗಿರಿಶೃಂಗೇಣ ತಾಡಿತಃ ॥ ೩೭

ಪಪಾತ ಸಹಸಾ ಭೂಮೌ ವಿಕೀರ್ಣ ಇವ ಪರ್ವತಃ ।
ಧೂಮ್ರಾಕ್ಷಂ ನಿಹತಂ ದೃಷ್ಟ್ವಾ ಹತಶೇಷಾ ನಿಶಾಚರಾಃ ॥ ೩೮

ತ್ರಸ್ತಾಃ ಪ್ರವಿವಿಶುರ್ಲಂಕಾಂ ವಧ್ಯಮಾನಾಃ ಪ್ಲವಂಗಮೈಃ ॥

ಸ ತು ಪವನಸುತೋ ನಿಹತ್ಯ ಶತ್ರುಂ
ಕ್ಷತಜವಹಾಃ ಸರಿತಶ್ಚ ಸಂನಿಕೀರ್ಯ ।
ರಿಪುವಧಜನಿತಶ್ರಮೋ ಮಹಾತ್ಮಾ
ಮುದಮಗಮತ್ಕಪಿಭಿಶ್ಚ ಪೂಜ್ಯಮಾನಃ ॥ ೩೯

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವಿಪಂಚಾಶಃ ಸರ್ಗಃ

---

ಏರಿಹೋದನು. ಮುಳ್ಳುಗಳಿಂದ ಭೀಕರವಾದ ತನ್ನ ಗದೆಯಿಂದ ಧೂಮ್ರಾಕ್ಷನು ಹನುಮಂತನ ತಲೆಯಮೇಲೆ ಪ್ರಹರಿಸಿದನು (೩೪–೩೫). ವಾಯುದೇವನಂತೆ ಬಲಾಢ್ಯನಾದ ಹನುಮಂತನು ಭೀಷಣವಾದ ಆ ಗದಾಪ್ರಹಾರವನ್ನು ಲೆಕ್ಕಿಸದೆ, ತಾನು ತಂದಿದ್ದ ಪರ್ವತಶಿಖರವನ್ನು ಧೂಮ್ರಾಕ್ಷನ ತಲೆಯಮೇಲೆ ದೊಪ್ಪನೆ ಹೇರಿದನು (೩೬–೩೭). ಧೂಮ್ರಾಕ್ಷನ ಸರ್ವಾಂಗಗಳೂ ಛಿನ್ನಭಿನ್ನವಾಗಲು, ಪುಡಿಯಾದ ಪರ್ವತದಂತೆ ಆ ರಾಕ್ಷಸನು ಸತ್ತುಬಿದ್ದನು. ಧೂಮ್ರಾಕ್ಷನು ಹತನಾದುದನ್ನು ಕಂಡು ಹತಶೇಷರಾದ ರಾಕ್ಷಸರು, ವಾನರರ ಹೊಡೆತವನ್ನು ಸೈರಿಸಲಾರದೆ ಅಂಜಿ ಲಂಕೆಗೆ ಓಡಿಹೋದರು (೩೮). ಈ ರೀತಿಯಲ್ಲಿ ಹನುಮಂತನು ಧೂಮ್ರಾಕ್ಷನನ್ನು ವಧಿಸಿ ನೆತ್ತರಹೊನಲನ್ನು ಹರಿಸಿದನು. ರಿಪುವಧೆಯಿಂದ ಆಯಾಸಗೊಂಡ ಆ ಮಹಾತ್ಮನಿಗೆ, ಕಪಿಗಳ ಆದರಪೂರ್ವಕವಾದ ಉಪಚಾರದಿಂದ ನೆಮ್ಮದಿಯೆನಿಸಿತು (೩೯).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಐವತ್ತೆರಡನೆಯ ಸರ್ಗ

## ತ್ರಿಪಂಚಾಶಃ ಸರ್ಗಃ

### ವಜ್ರದಂಷ್ಟ್ರಯುದ್ಧಮ್

ಧೂಮ್ರಾಕ್ಷಂ ನಿಹತಂ ಶ್ರುತ್ವಾ ರಾವಣೋ ರಾಕ್ಷಸೇಶ್ವರಃ ।
ಕ್ರೋಧೇನ ಮಹತಾವಿಷ್ಟೋ ನಿಃಶ್ವಸನ್ನುರಗೋ ಯಥಾ ॥ ೧

ದೀರ್ಘಮುಷ್ಣಂ ವಿನಿಃಶ್ವಸ್ಯ ಕ್ರೋಧೇನ ಕಲುಷೀಕೃತಃ ।
ಅಬ್ರವೀದ್ರಾಕ್ಷಸಂ ಶೂರಂ ವಜ್ರದಂಷ್ಟ್ರಂ ಮಹಾಬಲಮ್ ॥ ೨

ಗಚ್ಛ ತ್ವಂ ವೀರ ನಿರ್ಯಾಹಿ ರಾಕ್ಷಸೈಃ ಪರಿವಾರಿತಃ ।
ಜಹಿ ದಾಶರಥಿಂ ರಾಮಂ ಸುಗ್ರೀವಂ ವಾನರೈಃ ಸಹ ॥ ೩

ತಥೇತ್ಯುಕ್ತ್ವಾ ದ್ರುತತರಂ ಮಾಯಾವೀ ರಾಕ್ಷಸೇಶ್ವರಃ ।
ನಿರ್ಜಗಾಮ ಬಲೈಃ ಸಾರ್ಧಂ ಬಹುಭಿಃ ಪರಿವಾರಿತಃ ॥ ೪

ನಾಗೈರಶ್ವೈಃ ಖರೈರುಷ್ಟ್ರೈಃ ಸಂಯುಕ್ತಃ ಸುಸಮಾಹಿತಃ ।
ಪತಾಕಾಧ್ವಜಚಿತ್ರೈಶ್ಚ ರಥೈಶ್ಚ ಸಮಲಂಕೃತಃ ॥ ೫

### ಸರ್ಗ ೫೩

ರಾವಣನು ವಜ್ರದಂಷ್ಟ್ರನನ್ನು ಯುದ್ಧಕ್ಕೆ ಕಳಿಸುವುದು. ವಜ್ರದಂಷ್ಟ್ರನ ಘೋರವಾದ ಯುದ್ಧ. ಅಂಗದನ ಪರಾಕ್ರಮ.

ಧೂಮ್ರಾಕ್ಷನು ಹತನಾದ ಸುದ್ದಿಯನ್ನು ಕೇಳಿ ರಾಕ್ಷಸೇಶ್ವರನಾದ ರಾವಣನು ಸಿಟ್ಟಿನಿಂದ ಕಿಡಿಯಾದನು. ಅವನು ರೋಷಾವಿಷ್ಟನಾಗಿ ಸರ್ಪದಂತೆ ನಿಟ್ಟುಸಿರುಬಿಡುತ್ತ ವಜ್ರದಂಷ್ಟ್ರನೆಂಬ ಮಹಾಶೂರನಾದ ರಾಕ್ಷಸನನ್ನು ನೋಡಿ, ''ವೀರಾಗ್ರೇಸರ – ವಜ್ರದಂಷ್ಟ್ರ, ನೀನು ಹೋಗು! ರಾಕ್ಷಸಭಟರೊಡನೆ ಹೋಗಿ ರಾಮನನ್ನೂ ಸುಗ್ರೀವನನ್ನೂ ಇತರ ವಾನರರನ್ನೂ ಸಂಹರಿಸು'' ಎಂದು ಆಜ್ಞಾಪಿಸಿದನು (೧–೩). ಆಗ ಮಾಯಾವಿಯಾದ ಆ ವಜ್ರದಂಷ್ಟ್ರನು ''ಮಹಾಪ್ರಭು, ಹಾಗೆಯೇ ಮಾಡುವೆನು'' ಎಂದು ನಿವೇದಿಸಿ, ದೊಡ್ಡ ರಾಕ್ಷಸಪಡೆಯೊಡನೆ ತ್ವರೆಯಿಂದ ಹೊರಟನು. ಆನೆ, ಕುದುರೆ, ಕತ್ತೆ, ಒಂಟೆ ಮೊದಲಾದ ಬಲಗಳಿಂದಲೂ ವಿವಿಧವರ್ಣದ ಬಾವುಟಗಳಿಂದ ಅಲಂಕೃತವಾದ ರಥಗಳಿಂದಲೂ ಯುಕ್ತನಾಗಿ ಎಚ್ಚರಿಕೆಯಿಂದ

ತತೋ ವಿಚಿತ್ರ ಕೇಯೂರಮುಕುಟೈಶ್ಚ ವಿಭೂಷಿತಃ ।
ತನುತ್ರಾಣಿ ಚ ಸುಂರುಧ್ಯ ಸಧನುರ್ನಿರ್ಯಯೌ ದ್ರುತಮ್ ॥ ೬

ಪತಾಕಾಲಂಕೃತಂ ದೀಪ್ತಂ ತಪ್ತಕಾಂಚನಭೂಷಣಮ್ ।
ರಥಂ ಪ್ರದಕ್ಷಿಣಂ ಕೃತ್ವಾ ಸಮಾರೋಹಚ್ಚಮೂಪತಿಃ ॥ ೭

ಯಷ್ಟಿಭಿಸ್ತೋಮರೈಶ್ಚಿತ್ರೈಃ ಶೂಲೈಶ್ಚ ಮುಸಲೈರಪಿ ।
ಭಿಂಡಿಪಾಲೈಶ್ಚ ಪಾಶೈಶ್ಚ ಶಕ್ತಿಭಿಃ ಪಟ್ಟಸೈರಪಿ ॥ ೮

ಖಡ್ಗೈಶ್ಚಕ್ರೈರ್ಗದಾಭಿಶ್ಚ ನಿಶಿತೈಶ್ಚ ಪರಶ್ವಧೈಃ ।
ಪದಾತಯಶ್ಚ ನಿರ್ಯಾಂತಿ ವಿವಿಧಾಃ ಶಸ್ತ್ರಪಾಣಯಃ ॥ ೯

ವಿಚಿತ್ರವಾಸಸಃ ಸರ್ವೇ ದೀಪ್ತಾ ರಾಕ್ಷಸಪುಂಗವಾಃ ।
ಗಜಾ ಮದೋತ್ಕಟಾಃ ಶೂರಾಶ್ಚಲಂತ ಇವ ಪರ್ವತಾಃ ॥ ೧೦

ತೇ ಯುದ್ಧ ಕುಶರಾರೂಢಾಸ್ತೋಮರಾಂಕುಶಪಾಣಿಭಿಃ ।
ಅನ್ಯೇ ಲಕ್ಷಣಸಂಯುಕ್ತಾಃ ಶೂರಾ ರೂಢಾ ಮಹಾಬಲಾಃ ॥ ೧೧

---

ನಿರ್ಗಮಿಸಿದನು (೪–೫), ಆ ವಜ್ರದಂಷ್ಟ್ರನು ವಿಚಿತ್ರವಾದ ಕೇಯೂರ ಕಿರೀಟಗಳಿಂದ ಭೂಷಿತನಾಗಿ, ಕವಚ ಶಿರಸ್ತ್ರಾಣಾದಿಗಳಿಂದ ಸನ್ನದ್ಧನಾಗಿ, ಧನುಸ್ಸನ್ನು ಹಿಡಿದು ತ್ವರೆಯಿಂದ ರಣಭೂಮಿಗೆ ಧಾವಿಸಿದನು (೬). ಆ ಸೇನಾನಿಯು ಪತಾಕಾಲಂಕೃತವೂ ಸುವರ್ಣಭೂಷಿತವೂ ಆದ ತನ್ನ ರಥಕ್ಕೆ ಪ್ರದಕ್ಷಿಣೆಮಾಡಿ, ಅದನ್ನೇರಿ ಕುಳಿತು ಪ್ರಯಾಣಮಾಡಿದನು. ಯಷ್ಟಿ, ತೋಮರ, ಶೂಲ, ಮುಸಲ, ಭಿಂಡಿಪಾಲ, ಪಾಶ, ಶಕ್ತಿ ಪಟ್ಟಸ, ಖಡ್ಗ ಚಕ್ರ, ಗದೆ, ಪರಶು–ಮೊದಲಾದ ವಿವಿಧಾಯುಧಗಳನ್ನು ಹಿಡಿದು ಕಾಲಾಳು ಗಳು ವಜ್ರದಂಷ್ಟ್ರನೊಡನೆ ಹೊರಟರು (೭–೯). ಆ ರಾಕ್ಷಸಭಟರೆಲ್ಲರೂ ಬಣ್ಣಬಣ್ಣದ ಉಡುಗೆಗಳನ್ನುಟ್ಟಿದ್ದರು. ಯುದ್ಧದಲ್ಲಿ ಪಳಗಿದ ಮದಿಸಿದ ಆನೆ ಗಳು ಚಲಿಸುವ ಬೆಟ್ಟಗಳಂತೆ ಕಾಣುತ್ತಿದ್ದವು. ತೋಮರಗಳನ್ನೂ ಅಂಕುಶ ಗಳನ್ನೂ ಹಿಡಿದ ಯುದ್ಧಕುಶಲರಾದ ಭಟರು ಅವುಗಳನ್ನೇರಿಬಂದರು. ಯುದ್ಧ ದಲ್ಲಿ ಪಳಗಿ ಬಲಶಾಲಿಗಳೂ ಲಕ್ಷಣಸಂಪನ್ನಗಳೂ ಆದ ಅಶ್ವಗಳು ರಾವುತ ರನ್ನೇರಿಸಿಕೊಂಡು ಹೊರಟವು (೧೦–೧೧).

ತದ್ರಾಕ್ಷಸಬಲಂ ಘೋರಂ ವಿಪ್ರಸ್ಥಿ ತಮಶೋಭತ ।
ಪ್ರಾವೃಟ್ಕಾಲೇ ಯಥಾ ಮೇಘಾ ನರ್ದಮಾನಾಃ ಸವಿದ್ಯುತಃ ॥ ೧೨

ನಿಃಸೃತಾ ದಕ್ಷಿಣಾದ್ವಾರಾದಂಗದೋ ಯತ್ರ ಯೂಥಪಃ ।
ತೇಷಾಂ ನಿಷ್ಕ್ರಮಮಾಣಾನಾಮಶುಭಂ ಸಮಜಾಯತ ॥ ೧೩

ಆಕಾಶಾದ್ವಿಘನಾತ್ತೀವ್ರಾ ಉಲ್ಕಾಶ್ಚಾಭ್ಯಪತಂಸ್ತದಾ ।
ವಮಂತ್ಯಃ ಪಾವಕಜ್ವಾಲಾಃ ಶಿವಾ ಘೋರಂ ವವಾಶಿರೇ ॥ ೧೪

ವ್ಯಾಹರಂತಿ ಮೃಗಾ ಘೋರಾ ರಕ್ಷಸಾಂ ನಿಧನಂ ತದಾ ।
ಸಮಾಪತಂತೋ ಯೋಧಾಸ್ತು ಪ್ರಾಸ್ಖಲನ್ ಭಯಮೋಹಿತಾಃ ॥ ೧೫

ಏತಾನೌತ್ಪಾತಿಕಾನ್ ದೃಷ್ಟ್ವಾ ವಜ್ರದಂಷ್ಟ್ರೋ ಮಹಾಬಲಃ ।
ಧೈರ್ಯಮಾಲಂಬ್ಯ ತೇಜಸ್ವೀ ನಿರ್ಜಗಾಮ ರಣೋತ್ಸುಕಃ ॥ ೧೬

ತಾಂಸ್ತು ವಿದ್ರವತೋ ದೃಷ್ಟ್ವಾ ವಾನರಾ ಜಿತಕಾಶಿನಃ ।
ಪ್ರಣೇದುಃ ಸುಮಹಾನಾದಾನ್ ಪೂರಯಂಶ್ಚ ದಿಶೋ ದಶ ॥ ೧೭

ತತಃ ಪ್ರವೃತ್ತಂ ತುಮುಲಂ ಹರೀಣಾಂ ರಾಕ್ಷಸೈಃ ಸಹ ।
ಘೋರಾಣಾಂ ಭೀಮರೂಪಾಣಾಮನ್ಯೋನ್ಯವಧಕಾಂಕ್ಷಿಣಾಮ್ ॥ ೧೮

---

ಸುವರ್ಣಾಲಂಕಾರಗಳನ್ನು ಧರಿಸಿ ಗರ್ಜಿಸುತ್ತ ಸಾಗುತ್ತಿದ್ದ ಕರಿಯಬಣ್ಣದ ರಾಕ್ಷಸಭಟರು, ವರ್ಷಾಕಾಲದಲ್ಲಿ ಮಿಂಚುತ್ತ ಗುಡುಗುವ ಮೇಘಪಂಕ್ತಿಗಳಂತೆ ಗೋಚರಿಸುತ್ತಿದ್ದರು (೧೨). ಅಂಗದನು ಯೂಥಾಪಾಲನಾಗಿ ರಕ್ಷಿಸುತ್ತಿದ್ದ ಸ್ಥಳಕ್ಕೆ ಅವರೆಲ್ಲರೂ ದಕ್ಷಿಣದ್ವಾರದಿಂದ ಹೊರಟುಬಂದರು. ಆ ರಾಕ್ಷಸರು ಬರುವಾಗ ಅಪಶಕುನಗಳಾದವು. ಮೋಡವಿಲ್ಲದೆ ನಿರ್ಮಲವಾದ ಆಕಾಶದಿಂದ ಉಲ್ಕೆಗಳು ಸಿಡಿದುಬಿದ್ದವು. ನರಿಗಳು ಅಗ್ನಿಜ್ವಾಲೆಗಳನ್ನು ಕಕ್ಕುತ್ತ ವಿಕಾರ ಧ್ವನಿಯಿಂದ ಊಳಿದವು (೧೩–೧೪). ಕ್ರೂರಮೃಗಗಳು ರಾಕ್ಷಸರ ನಿಧನ ವನ್ನು ಸೂಚಿಸುತ್ತ ಕೂಗಿದವು. ರಾಕ್ಷಸಯೋಧರು ನಿಷ್ಕಾರಣವಾಗಿ ಅಂಜುತ್ತ ದಾರಿಯಲ್ಲಿ ಎಡವಿದರು. ಈ ಬಗೆಯ ಉತ್ಪಾತಗಳನ್ನು ಕಂಡರೂ ವೀರಾಗ್ರೇಸರ ನಾದ ವಜ್ರದಂಷ್ಟ್ರನು ಧೈರ್ಯವನ್ನಲಂಬಿಸಿ ರಣೋತ್ಸಾಹದಿಂದ ಮುಂದೆ ನುಗ್ಗಿದನು (೧೫–೧೬). ನುಗ್ಗಿಬರುವ ರಾಕ್ಷಸಭಟರನ್ನು ಕಂಡೊಡನೆ ಜಯಶೀಲರಾದ ವಾನರಭಟರು ದಶದಿಕ್ಕುಗಳೂ ಮೊಳಗುವಂತೆ ಬೊಬ್ಬಿರಿದರು. ಒಡನೆಯೇ ಘೋರಾಕಾರದ ವಾನರರಿಗೂ ರಾಕ್ಷಸರಿಗೂ ಒಬ್ಬರನ್ನೊಬ್ಬರು

ನಿಷ್ಪತಂತೋ ಮಹೋತ್ಸಾಹಾ ಭಿನ್ನದೇಹಶಿರೋಧರಾಃ ।
ರುಧಿರೋಕ್ಷಿತಸರ್ವಾಂಗಾ ನ್ಯಪತನ್ ಜಗತೀತಲೇ ॥ ೧೯

ಕೇಚಿದನ್ಯೋನ್ಯಮಾಸಾದ್ಯ ಶೂರಾಃ ಪರಿಘಪಾಣಯಃ ।
ಚಿಕ್ಷಿಪುರ್ವಿವಿಧಂ ಶಸ್ತ್ರಂ ಸಮರೇಷ್ವನಿವರ್ತಿನಃ ॥ ೨೦

ದ್ರುಮಾಣಾಂ ಚ ಶಿಲಾನಾಂ ಚ ಶಸ್ತ್ರಾಣಾಂ ಚಾಪಿ ನಿಃಸ್ವನಃ ।
ಶ್ರೂಯತೇ ಸುಮಹಾಂಸ್ತತ್ರ ಘೋರೋ ಹೃದಯಭೇದನಃ ॥ ೨೧

ರಥನೇಮಿಸ್ವನಸ್ತತ್ರ ಧನುಷಶ್ಚಾಪಿ ನಿಃಸ್ವನಃ ।
ಶಂಖಭೇರೀಮೃದಂಗಾನಾಂ ಬಭೂವ ತುಮುಲಃ ಸ್ವನಃ ॥ ೨೨

ಕೇಚಿದಸ್ತ್ರಾಣಿ ಸಂತ್ಯಜ್ಯ ಬಾಹುಯುದ್ಧಮಕುರ್ವತ ।
ತಲೈಶ್ಚ ಚರಣೈಶ್ಚಾಪಿ ಮುಷ್ಟಿಭಿಶ್ಚ ದ್ರುಮೈರಪಿ ॥ ೨೩

ಜಾನುಭಿಶ್ಚ ಹತಾಃ ಕೇಚಿದ್ಭಿನ್ನದೇಹಾಶ್ಚ ರಾಕ್ಷಸಾಃ ।
ಶಿಲಾಭಿಶ್ಚೂರ್ಣಿತಾಃ ಕೇಚಿದ್ವಾನರೈರ್ಯುದ್ಧದುರ್ಮದೈಃ ॥ ೨೪

---

ಕೊಲ್ಲಬೇಕೆಂಬ ಛಲದಿಂದ ತುಮುಲಯುದ್ಧವು ತೊಡಗಿತು (೧೭–೧೮). ಉತ್ಸಾಹದಿಂದ ಉಬ್ಬುತಿದ್ದ ಪಟುಭಟರು ಹೊಡೆದಾಟದಲ್ಲಿ ತೊಡಗಲು ಕೆಲವರ ದೇಹಗಳು ಸೀಳಿದವು; ತಲೆಗಳು ಉರುಳಿದವು. ಉಭಯಪಕ್ಷದವರೂ ನೆತ್ತರಲ್ಲಿ ನೆನೆದು ನೆಲವನ್ನಪ್ಪಿದರು (೧೯). ಸಮರದಲ್ಲಿ ಎಂದಿಗೂ ಹಿಂಜರಿಯದ ರಾಕ್ಷಸಯೋಧರು ಪರಿಘಪಾಣಿಗಳಾಗಿ ನುಗ್ಗಿ ಬಡಿದು, ವಿವಿಧಾಯುಧಗಳನ್ನು ಪ್ರಯೋಗಿಸುತ್ತ ಹೊಡೆದಾಡಿದರು. ಮರಗಳ, ಶಿಲೆಗಳ, ಶಸ್ತ್ರಗಳ ಘರ್ಷಣೆಗಳಿಂದ ಧಡಧಡಿಲ್, ಛಟಛಟಿಲ್, ಖಣಖಣಿಲ್ ಎಂದು ಎದೆಯೊಡೆಯಿಸುವ ಭೀಕರವಾದ ಸಪ್ಪಳವು ಎಲ್ಲೆಲ್ಲಿಯೂ ಕೇಳಿಸುತ್ತಿತ್ತು (೨೦–೨೧). ರಥನೇಮಿಗಳ ಚೀತ್ಕಾರ, ಧನಸ್ಸುಗಳ ಝುಂಕಾರ, ಶಂಖಗಳ ಭೋಂಕಾರ, ಭೇರೀಮೃದಂಗಗಳ ಭಂಭಾಕಾರಗಳು ಮೊಳಗಿದವು. ಕೆಲವರು ಶಸ್ತ್ರಗಳ ಯುದ್ಧವನ್ನು ಮುಗಿಸಿ ಬಾಹುಯುದ್ಧವನ್ನಾರಂಭಿಸಿದರು. ವಾನರರು ರಾಕ್ಷಸರನ್ನು ಅಂಗೈಗಳಿಂದಪ್ಪಳಿಸಿ, ಕಾಲುಗಳಿಂದ ತುಳಿದು, ಮುಷ್ಟಿಗಳಿಂದ ಗುದ್ದಿ ಮರಗಳಿಂದ ಬಡಿದು, ಮೊಣಕಾಲುಗಳಿಂದ ತಿವಿದು ಕೊಂದುಹಾಕುತ್ತಿದ್ದರು. ಯುದ್ಧಮದದಿಂದುಬ್ಬಿದ ಕಪಿಯೋಧರು ರಾಕ್ಷಸರನ್ನು ಬಂಡೆಗಳಿಂದ

ವಜ್ರದಂಷ್ಟ್ರೋ ಭೃಶಂ ಬಾಣೈ ರಣೇ ವಿತ್ರಾಸಯನ್ ಹರೀನ್ ।
ಚಚಾರ ಲೋಕಸಂಹಾರೇ ಪಾಶಹಸ್ತ ಇವಾಂತಕಃ ॥ ೨೫

ಬಲವಂತೋಽಸ್ತ್ರವಿದುಷೋ ನಾನಾಪ್ರಹರಣಾ ರಣೇ ।
ಜಘ್ನುರ್ವಾನರಸೈನ್ಯಾನಿ ರಾಕ್ಷಸಾಃ ಕ್ರೋಧಮೂರ್ಛಿತಾಃ ॥ ೨೬

ನಿಘ್ನತೋ ರಾಕ್ಷಸಾನ್ ದೃಷ್ಟ್ವಾ ಸರ್ವಾನ್ ವಾಲಿಸುತೋ ರಣೇ ।
ಕ್ರೋಧೇನ ದ್ವಿಗುಣಾವಿಷ್ಟಃ ಸಂವರ್ತಕ ಇವಾನಲಃ ॥ ೨೭

ತಾನ್ ರಾಕ್ಷಸಗಣಾನ್ ಸರ್ವಾನ್ ವೃಕ್ಷಮುದ್ಯಮ್ಯ ವೀರ್ಯವಾನ್ ।
ಅಂಗದಃ ಕ್ರೋಧತಾಮ್ರಾಕ್ಷಃ ಸಿಂಹಃ ಕ್ಷುದ್ರಮೃಗಾನಿವ ॥ ೨೮

ಚಕಾರ ಕದನಂ ಘೋರಂ ಶಕ್ರತುಲ್ಯಪರಾಕ್ರಮಃ ।
ಅಂಗದಾಭಿಹತಾಸ್ತತ್ರ ರಾಕ್ಷಸಾ ಭೀಮವಿಕ್ರಮಾಃ ॥ ೨೯

ವಿಭಿನ್ನಶಿರಸಃ ಪೇತುರ್ವಿಕೃತ್ತಾ ಇವ ಪಾದಪಾಃ ।
ರಥೈರಶ್ವೈರ್ಧ್ವಜೈಶ್ಚಿತ್ರೈಃ ಶರೀರೈರ್ಹರಿರಕ್ಷಸಾಮ್ ॥ ೩೦

---

ಕುಟ್ಟಿದರು (೨೨–೨೪). ಇತ್ತ ವಜ್ರದಂಷ್ಟ್ರನಾದರೋ ಬಿಲ್ಲನ್ನು ಹಿಡಿದು, ಪ್ರಳಯಕಾಲದಲ್ಲಿ ಪಾಶಹಸ್ತನಾಗಿ ಬಂದ ಅಂತಕನೋ ಎಂಬಂತೆ ಬಾಣಗಳಿಂದ ಹೊಡೆದು ವಾನರರನ್ನು ಹೆದರಿಸಿ ದಂಗುಬಡಿಸಿದನು. ಬಲಶಾಲಿಗಳೂ ಅಸ್ತ್ರ ವಿದ್ಯಾಪಾರಂಗತರೂ ಆದ ರಾಕ್ಷಸರು ಕೋಧ್ರೋದ್ದೀಪಿತರಾಗಿ ವಿವಿಧಾಯುಧ ಗಳಿಂದ ಕಪಿಗಳನ್ನು ಸದೆಬಡಿದರು (೨೫–೨೬). ಹೀಗೆ ರಾಕ್ಷಸರು ಕಪಿಬಲ ವನ್ನು ಸದೆಬಡಿಯುತ್ತಿರುವುದು ವಾಲಿಪುತ್ರನಾದ ಅಂಗದನಿಗೆ ಗೋಚರಿಸಿತು. ಅವನ ಕೋಪವು ಇಮ್ಮಡಿಸಿತು. ಕಾಲಾಗ್ನಿಯಂತೆ ಅಂಗದನು ಕಂಗೊಳಿಸಿ ದನು. ರೋಷದಿಂದ ಕಣ್ಣುಗಳು ಕೆಂಪಡರಿದವು. ಆ ವೀರನು ಒಂದು ಮಹಾ ವೃಕ್ಷವನ್ನೆತ್ತಿಹಿಡಿದು, ಸಿಂಹವು ಕ್ಷುದ್ರಮೃಗಗಳನ್ನು ಬೆನ್ನಟ್ಟಹೋಗುವಂತೆ ರಾಕ್ಷಸರನ್ನು ಬೆನ್ನಟ್ಟಿ ಸದೆಯತೊಡಗಿದನು (೨೭–೨೮). ಪರಾಕ್ರಮದಲ್ಲಿ ದೇವೇಂದ್ರಸದೃಶನಾದ ಅಂಗದನು ಘೋರಕದನವನ್ನಾರಂಭಿಸಿ ಭೀಮವಿಕ್ರಮ ರಾದ ರಾಕ್ಷಸರನ್ನು ವಧಿಸಿದನು. ಕಡಿದುರುಳಿಸಿದ ಮರಗಳಂತೆ ರಾಕ್ಷಸರು ತಲೆಯೊಡೆದು ನೆಲದಮೇಲುರುಳಿದರು (೨೯). ಮುರಿದುಬಿದ್ದ ರಥಗಳೂ ಸತ್ತುಹೋದ ಕುದುರೆಗಳೂ ಕತ್ತರಿಸಲ್ಪಟ್ಟ ವಿಚಿತ್ರಧ್ವಜಗಳೂ ಛಿನ್ನಭಿನ್ನ

ರುಧಿರೇಣ ಚ ಸಂಛನ್ನಾ ಭೂಮಿರ್ಭಯಕರೀ ತದಾ ।
ಹಾರಕೇಯೂರವಸ್ತ್ರೈಶ್ಚ ಶಸ್ತ್ರೈಶ್ಚ ಸಮಲಂಕೃತಾ ॥ ೩೧

ಭೂಮಿರ್ಭಾತಿ ರಣೇ ತತ್ರ ಶಾರದೀವ ಯಥಾ ನಿಶಾ ।
ಅಂಗದಸ್ಯ ಚ ವೇಗೇನ ತದ್ರಾಕ್ಷಸಬಲಂ ಮಹತ್ ॥ ೩೨

ಪ್ರಾಕಂಪತ ತದಾ ತತ್ರ ಪವನೇನಾಂಬುದೋ ಯಥಾ ॥

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರಿಪಂಚಾಶಃ ಸರ್ಗಃ

---

ವಾದ ಕಪಿರಾಕ್ಷಸರ ದೇಹಗಳೂ ರಣಭೂಮಿಯಲ್ಲಿ ರಾಶಿಯಾದವು (೩೦). ರಕ್ತದಿಂದ ರಣರಂಗವು ಭಯಂಕರವಾಯಿತು. ಹಾರಕೇಯೂರಗಳಿಂದಲೂ ವಸ್ತ್ರಶಸ್ತ್ರಗಳಿಂದಲೂ ವ್ಯಾಪ್ತವಾದ ಯುದ್ಧಭೂಮಿಯು (ನಕ್ಷತ್ರಗಳಿಂದಲೂ ಚಿಕ್ಕಚಿಕ್ಕ ಮೇಘಖಂಡಗಳಿಂದಲೂ ಶೋಭಿಸುವ ಶರತ್ಕಾಲದ) ರಾತ್ರಿಯಂತೆ ಗೋಚರಿಸಿತು. ಅಂಗದನ ಯುದ್ಧವೇಗವನ್ನು ತಡೆಯಲಾರದೆ ಆ ರಾಕ್ಷಸ ಪಡೆಯು, ಬಿರುಗಾಳಿಗೆ ಸಿಕ್ಕಿದ ಮೇಘರಾಶಿಯಂತೆ ತತ್ತರಿಸಿ ಚದುರಿತು (೩೧–೩೨).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಐವತ್ತು ಮೂರನೆಯ ಸರ್ಗ

---

* ಕಡೆಯಲ್ಲಿ ವೃತ್ತ ಭೇದವೂ ವಿಷಯಭೇದವೂ ಇಲ್ಲದ್ದರಿಂದ ಇಲ್ಲಿಗೆ ಸ್ವರ್ಗವನ್ನು ಮುಗಿಸುವುದು ಅಯುಕ್ತವೆಂದು ಕತಕವ್ಯಾಖ್ಯಾನದಲ್ಲಿ ಹೇಳಿದೆ.

## ಚತುಃಪಂಚಾಶಃ ಸರ್ಗಃ

ವಜ್ರದಂಷ್ಟ್ರವಧಃ

ಬಲಸ್ಯ ಚ ನಿಘಾತೇನ ಅಂಗದಸ್ಯ ಜಯೇನ ಚ ।
ರಾಕ್ಷಸಃ ಕ್ರೋಧಮಾವಿಷ್ಟೋ ವಜ್ರದಂಷ್ಟ್ರೋ ಮಹಾಬಲಃ ॥ ೧

ಸ ವಿಸ್ಫಾರ್ಯ ಧನುರ್ಘೋರಂ ಶಕ್ರಾಶನಿಸಮಸ್ವನಮ್ ।
ವಾನರಾಣಾಮನೀಕಾನಿ ಪ್ರಾಕಿರಚ್ಛರವೃಷ್ಟಿಭಿಃ ॥ ೨

ರಾಕ್ಷಸಾಶ್ಚಾಪಿ ಮುಖ್ಯಾಸ್ತೇ ರಥೇಷು ಸಮವಸ್ಥಿತಾಃ ।
ನಾನಾಪ್ರಹರಣಾಃ ಶೂರಾಃ ಪ್ರಾಯುಧ್ಯಂತ ತದಾ ರಣೇ ॥ ೩

ವಾನರಾಣಾಂ ತು ಶೂರಾ ಯೇ ಸರ್ವೇ ತೇ ಪ್ಲವಗರ್ಷಭಾಃ ।
ಅಯುಧ್ಯಂತ ಶಿಲಾಹಸ್ತಾಃ ಸಮವೇತಾಃ ಸಮಂತತಃ ॥ ೪

ತತ್ರಾಯುಧಸಹಸ್ರಾಣಿ ತಸ್ಮಿನ್ನಾಯೋಧನೇ ಭೃಶಮ್ ।
ರಾಕ್ಷಸಾಃ ಕಪಿಮುಖ್ಯೇಷು ಪಾತಯಾಂಚಕ್ರಿರೇ ತದಾ ॥ ೫

## ಸರ್ಗ ೫೪

ಅಂಗದನು ವಜ್ರದಂಷ್ಟ್ರನ ಶಿರಸ್ಸನ್ನು ಕತ್ತರಿಸುವುದು.

ರಾಕ್ಷಸಬಲವು ಹತವಾಗುತ್ತಿರುವುದನ್ನೂ ಅಂಗದನು ಜಯಶಾಲಿಯಾಗಿ ಮೆರೆಯುತ್ತಿರುವುದನ್ನೂ ವೀಕ್ಷಿಸಿ, ಬಲಾಢ್ಯನಾದ ವಜ್ರದಂಷ್ಟ್ರನು ರೋಷಾ-ವಿಷ್ಟನಾದನು. ಇಂದ್ರನ ವಜ್ರಾಯುಧವು ದನಿಗಯ್ಯುವಂತೆ, ತನ್ನ ಘೋರವಾದ ಧನುಸ್ಸನ್ನು ಮಿಡಿದು ಝಂಕಾರಗೈಸುತ್ತ ವಜ್ರದಂಷ್ಟ್ರನು ವಾನರಸೇನೆಗಳ ಮೇಲೆ ಸರಳುಗಳ ಮಳೆಗರೆದನು (೧–೨). ಶೂರರಾದ ರಾಕ್ಷಸನಾಯಕರೂ ಸಹ ರಥಾರೂಢರಾಗಿ ವಿವಿಧಾಯುಧಗಳಿಂದ ಹೊಡೆದಾಡತೊಡಗಿದರು. ಹಾಗೆಯೇ ಶೂರರಾದ ವಾನರನಾಯಕರೂ ಶಿಲೆಗಳನ್ನೆತ್ತಿ ಬಡಿಯುತ್ತ ಕಾದಾಡಲಾರಂಭಿಸಿದರು (೩–೪). ಆ ಕಾಳಗದಲ್ಲಿ ರಾಕ್ಷಸರು ಸಾವಿರಾರು ಆಯುಧಗಳನ್ನು ಕಪಿಮುಖ್ಯರಮೇಲೆ ಪ್ರಯೋಗಿಸಿದರು. ಮತ್ತಮಾತಂಗಗಳಂತಿದ್ದ

ವಾನರಾಶ್ಚಾಪಿ ರಕ್ಷಃಸು ಗಿರೀನ್ ವೃಕ್ಷಾನ್ ಮಹಾಶಿಲಾಃ ।
ಪ್ರವೀರಾಃ ಪಾತಯಾಮಾಸುರ್ಮತ್ತವಾರಣಸಂನಿಭಾಃ ॥ ೬

ಶೂರಾಣಾಂ ಯುಧ್ಯಮಾನಾನಾಂ ಸಮರೇಷ್ವನಿವರ್ತಿನಾಮ್ ।
ತದ್ರಾಕ್ಷಸಗಣಾನಾಂ ಚ ಸುಯುದ್ಧಂ ಸಮವರ್ತತ ॥ ೭

ಪ್ರಭಿನ್ನಶಿರಸಃ ಕೇಚಿದ್ಭಿನ್ನೈಃ ಪಾದೈಶ್ಚ ಬಾಹುಭಿಃ ।
ಶಸ್ತ್ರೈರರ್ಪಿತದೇಹಾಸ್ತು ರುಧಿರೇಣ ಸಮುಕ್ಷಿತಾಃ ॥ ೮

ಹರಯೋ ರಾಕ್ಷಸಾಶ್ಚೈವ ಶೇರತೇ ಗಾಂ ಸಮಾಶ್ರಿತಾಃ ।
ಕಂಕಗೃಧ್ರಬಲಾಢ್ಯಾಶ್ಚ ಗೋಮಾಯುಗಣಸಂಕುಲಾಃ ॥ ೯

ಕಬಂಧಾನಿ ಸಮುತ್ಪೇತುರ್ಭೀರೂಣಾಂ ಭೀಷಣಾನಿ ವೈ ।
ಭುಜಪಾಣಿಶಿರಶ್ಛಿನ್ನಾಶ್ಛಿನ್ನಕಾಯಾಶ್ಚ ಭೂತಲೇ ॥ ೧೦

ವಾನಾರಾ ರಾಕ್ಷಸಾಶ್ಚಾಪಿ ನಿಪೇತುಸ್ತತ್ರ ವೈ ರಣೇ ।
ತತೋ ವಾನರಸೈನ್ಯೇನ ಹನ್ಯಮಾನಂ ನಿಶಾಚರಮ್ ॥ ೧೧

ಪ್ರಾಭಜ್ಯತ ಬಲಂ ಸರ್ವಂ ವಜ್ರದಂಷ್ಟ್ರಸ್ಯ ಪಶ್ಯತಃ ।
ರಾಕ್ಷಸಾನ್ ಭಯವಿತ್ರಸ್ತಾನ್ ಹನ್ಯಮಾನಾನ್ ಪ್ಲವಂಗಮೈಃ ॥ ೧೨

---

ಕಪಿವೀರರೂ ಸಹ ಬೆಟ್ಟಗಳನ್ನೂ ಮರಗಳನ್ನೂ ದೊಡ್ಡದೊಡ್ಡ ಬಂಡೆಗಳನ್ನೂ ರಾಕ್ಷಸರಮೇಲೆ ಬೀಸಿದರು (೫–೬). ಸಮರದಲ್ಲಿ ಹಿಮ್ಮೆಟ್ಟದೆ ಹೋರಾಡುತ್ತಿದ್ದ ಕಪಿರಾಕ್ಷಸರ ಕಾಳಗವು ಭೀಕರವಾಯಿತು. ಕೆಲವರ ತಲೆಗಳು ಒಡೆದವು. ಕೆಲವರ ಕೈಕಾಲುಗಳು ಕತ್ತರಿಸಿದವು. ಕೆಲವರ ದೇಹಗಳು ಶಸ್ತ್ರಗಳಿಂದ ಕೆತ್ತಲ್ಪಟ್ಟು ರಕ್ತದಲ್ಲಿ ನೆನೆದವು (೭–೮). ವಾನರರೂ ರಾಕ್ಷಸರೂ ನೆಲದಲ್ಲೊರಗಿದರು. ಗಿಡಗ ಹದ್ದು ಕಾಗೆ ನರಿಗಳು ಹೆಣಗಳನ್ನೆಳೆದಾಡಿದವು. ಹೇಡಿಗಳಿಗೆ ಅಂಜಿಕೆಯನ್ನೀಯುವಂತೆ ತಲೆಯಿಲ್ಲದ ರುಂಡಗಳು* ಕುಣಿದಾಡಿದವು (೯–೧೦). ಉಭಯಬಲದಲ್ಲಿಯೂ ಯೋಧರ ತೋಳುಗಳು ಉಡಿದವು. ಕೈಗಳು ಮುರಿದವು. ತಲೆಗಳು ಉದುರಿದವು ದೇಹಗಳು ಸೀಳಿಬಿದ್ದವು. ವಜ್ರದಂಷ್ಟ್ರನೆದುರಿಗೆ ಅವನು ನೋಡುತ್ತಿರುವಾಗಲೇ ರಾಕ್ಷಸ ಸೇನೆಯು

---

* ರುಂಡ =ತಲೆಯಿಲ್ಲದ ದೇಹ; ಕಬಂಧ.

ದೃಷ್ಟ್ವಾ ಸ ರೋಷತಾಮ್ರಾಕ್ಷೋ ವಜ್ರದಂಷ್ಟ್ರಃ ಪ್ರತಾಪವಾನ್ ।
ಪ್ರವಿವೇಶ ಧನುಷ್ಪಾಣಿಸ್ತ್ರಾಸಯನ್ ಹರಿವಾಹಿನೀಮ್ ॥ ೧೩

ಶರೈರ್ವಿದಾರಯಾಮಾಸ ಕಂಕಪತ್ರೈರಜಿಹ್ಮಗೈಃ ।
ಬಿಭೇದ ವಾನರಾಂಸ್ತತ್ರ ಸಪ್ತಾಷ್ಟೌ ನವ ಪಂಚ ಚ ॥ ೧೪

ವಿವ್ಯಾಧ ಪರಮಕ್ರುದ್ಧೋ ವಜ್ರದಂಷ್ಟ್ರಃ ಪ್ರತಾಪವಾನ್ ।
ತ್ರಸ್ತಾಃ ಸರ್ವೇ ಹರಿಗಣಾಃ ಶರೈಃ ಸಂಕೃತ್ತ ಕಂಧರಾಃ ॥ ೧೫

ಅಂಗದಂ ಸಂಪ್ರಧಾವಂತಿ ಪ್ರಜಾಪತಿಮಿವ ಪ್ರಜಾಃ ।
ತತೋ ಹರಿಗಣಾನ್ ಭಗ್ನಾನ್ ದೃಷ್ಟ್ವಾ ವಾಲಿಸುತಸ್ತದಾ ॥ ೧೬

ಕ್ರೋಧೇನ ವಜ್ರದಂಷ್ಟ್ರಂ ತಮುದೀಕ್ಷಂತಮುದೈಕ್ಷತ ।
ವಜ್ರದಂಷ್ಟ್ರೋಽಂಗದಶ್ಚೋಭೌ ಸಂಗತೌ ಹರಿರಾಕ್ಷಸೌ ॥ ೧೭

ಚೇರತುಃ ಪರಮಕ್ರುದ್ಧೌ ಹರಿಮತ್ತಗಜಾವಿವ ।
ತತಃ ಶರಸಹಸ್ರೇಣ ವಾಲಿಪುತ್ರಂ ಮಹಾಬಲಃ ॥ ೧೮

---

ವಾನರಸೈನಿಕರಿಂದ ಹತವಾಗಿ ವಿಧ್ವಸ್ತವಾಗತೊಡಗಿತು. ರಾಕ್ಷಸರು ಹೆದರಿ ಕಂಗಾಲಾದರು (೧೧–೧೨). ಅದನ್ನು ನೋಡಿ ಪ್ರತಾಪಶಾಲಿಯಾದ ವಜ್ರದಂಷ್ಟ್ರನ ಕಣ್ಣುಗಳು ಕೋಪದಿಂದ ಕೆಂಡವಾದವು. ಅವನು ಧನುಷ್ಪಾಣಿಯಾಗಿ ವಾನರವಾಹಿನಿಯಲ್ಲಿ ನುಗ್ಗಿ, ಕೊಂಕಾದ ಕಂಕಪತ್ರಗಳಿಂದ ಕಪಿಸೇನೆಯನ್ನು ಭೇದಿಸಿ, ಒಂದೊಂದು ಸಲಕ್ಕೆ ಏಳು, ಎಂಟು, ಒಂಭತ್ತು ಐದು ಮಂದಿಗಳಂತೆ ವಾನರರನ್ನು ಗುಂಪುಗುಂಪಾಗಿ ಸದೆಯುತ್ತ ನಡೆದನು (೧೨–೧೪). ಪ್ರತಾಪಿಯಾದ ವಜ್ರದಂಷ್ಟ್ರನು ಅತ್ಯಂತ ಕೋಪಾವೇಶದಿಂದ ಸರಳುಗಳನ್ನೆರಚುತ್ತಿರಲು, ಕಪಿಗಣಗಳು ಬೆದರಿದವು. ಕಪಿಗಳ ಕತ್ತುಗಳು ಕತ್ತರಿಸಿಬಿದ್ದವು. ಪ್ರಜೆಗಳು ಬ್ರಹ್ಮನನ್ನು ಮೊರೆಹೋಗುವಂತೆ, ಅಳಿದುಳಿದ ವಾನರರು ಅಂಗದನನ್ನು ಮರೆಹೋಗಲು ಓಡಿದರು (೧೫–೧೬). ಭಗ್ನವಾದ ಕಪಿಬಲವನ್ನು ಕಂಡು ವಾಲಿಪುತ್ರನು ಕೋಪದಿಂದ ವಜ್ರದಂಷ್ಟ್ರನನ್ನು ದುರದುರನೆ ನೋಡಿದನು! ವಜ್ರದಂಷ್ಟ್ರನೂ ಅಂಗದನನ್ನು ದಿಟ್ಟಿಸಿ ನೋಡಿದನು! ಒಡನೆಯೇ ವಜ್ರದಂಷ್ಟ್ರನಿಗೂ ಅಂಗದನಿಗೂ ಕೈಕೈ ಮಿಲಾಯಿಸಿತು (೧೭). ಅವರೀರ್ವರೂ ಪರಮಕ್ರುದ್ಧರಾಗಿ ಸಿಂಹವೂ ಆನೆಯು ಹೋರಾಡು

ಜಘಾನ ಮರ್ಮದೇಶೇಷು ಮಾತಂಗಮಿವ ತೋಮರೈಃ ।
ರುಧಿರೋಕ್ಷಿತಸರ್ವಾಂಗೋ ವಾಲಿಸೂನುರ್ಮಹಾಬಲಃ ॥ ೧೯

ಚಿಕ್ಷೇಪ ವಜ್ರದಂಷ್ಟ್ರಾಯ ವೃಕ್ಷಂ ಭೀಮಪರಾಕ್ರಮಃ ।
ದೃಷ್ಟ್ವಾಪತಂತಂ ತಂ ವೃಕ್ಷಮಸಂಭ್ರಾಂತಶ್ಚ ರಾಕ್ಷಸಃ ॥ ೨೦

ಚಿಚ್ಛೇದ ಬಹುಧಾ ಸೋಽಪಿ ನಿಕೃತ್ತಃ ಪತಿತೋ ಭುವಿ ।
ತಂ ದೃಷ್ಟ್ವಾ ವಜ್ರದಂಷ್ಟ್ರಸ್ಯ ವಿಕ್ರಮಂ ಪ್ಲವಗರ್ಷಭಃ ॥ ೨೧

ಪ್ರಗೃಹ್ಯ ವಿಪುಲಂ ಶೈಲಂ ಚಿಕ್ಷೇಪ ಚ ನನಾದ ಚ ।
ಸಮಾಪತಂತಂ ತಂ ದೃಷ್ಟ್ವಾ ರಥಾದುತ್ಪ್ಲುತ್ಯ ವೀರ್ಯವಾನ್ ॥ ೨೨

ಗದಾಪಾಣಿರಸಂಭ್ರಾಂತಃ ಪೃಥಿವ್ಯಾಂ ಸಮತಿಷ್ಠತ ।
ಅಂಗದೇನ ಶಿಲಾ ಕ್ಷಿಪ್ತಾ ಗತ್ವಾ ತು ರಣಮೂರ್ಧನಿ ॥ ೨೩

ಸಚಕ್ರಕೂಬರಂ ಸಾಶ್ವಂ ಪ್ರಮಮಾಥ ರಥಂ ತದಾ ।
ತತೋಽನ್ಯಂ ಗಿರಿಮಾಕ್ಷಿಪ್ಯ ವಿಪುಲಂ ದ್ರುಮಭೂಷಿತಮ್ ॥ ೨೪

---

ವಂತೆ ಹೋರಾಡತೊಡಗಿದರು. ಬಲಾಢ್ಯನಾದ ವಜ್ರದಂಷ್ಟ್ರನು ಸಾವಿರಬಾಣಗಳನ್ನು ಅಂಗದನ ಮರ್ಮಸ್ಥಳಗಳಿಗೆ ಗುರಿಯಿಟ್ಟು ಹೊಡೆದನು. ಮದಿಸಿದ ಮಾತಂಗವನ್ನು ತೋಮರಗಳಿಂದ ತಿವಿಯುವಂತೆ ತಿವಿದನು. ಅಂಗದನ ಸರ್ವಾಂಗಗಳೂ ರಕ್ತದಲ್ಲಿ ತೊಯ್ದವು (೧೮–೧೯). ಆಗ ಭೀಮಪರಾಕ್ರಮಿಯಾದ ಅಂಗದನು ಒಂದು ವೃಕ್ಷವನ್ನು ವಜ್ರದಂಷ್ಟ್ರನ ಮೇಲೆ ಬೀಸಿದನು. ಆ ನಿಶಾಚರನು ತನಗೆದುರಾಗಿ ಬರುತ್ತಿದ್ದ ಆ ವೃಕ್ಷವನ್ನು ನೋಡಿ ಸ್ವಲ್ಪವೂ ಅಂಜದೆ, ಶರಗಳಿಂದ ಅದನ್ನು ತುಂಡುತುಂಡಾಗಿ ಕತ್ತರಿಸಿ ಕೆಡಹಿದನು (೨೦–೨೧). ವಜ್ರದಂಷ್ಟ್ರನ ಆ ಸಾಹಸವನ್ನು ವೀಕ್ಷಿಸಿ ವಾನರೋತ್ತಮನಾದ ಅಂಗದನು ಒಂದು ದೊಡ್ಡ ಬಂಡೆಯನ್ನು ಆ ರಾಕ್ಷಸನ ಕಡೆಗೆ ಬೀಸಿ ಹೊಡೆದು ಬೊಬ್ಬಿರಿದನು. ತನ್ನೆಡೆಗೆ ರಭಸದಿಂದ ಬರುತ್ತಿದ್ದ ಆ ಬಂಡೆಯನ್ನು ಕಂಡು ವೀರನಾದ ವಜ್ರದಂಷ್ಟ್ರನು ಸ್ವಲ್ಪವೂ ಕಂಗೆಡದೆ ಗದಾಪಾಣಿಯಾಗಿ ನೆಲಕ್ಕೆ ಧುಮುಕಿ ನಿಂತನು (೨೨–೨೩). ಅಂಗದನೆಸೆದ ಬಂಡೆಯು ವಜ್ರದಂಷ್ಟ್ರನ ರಥಕ್ಕೆ ಬಡಿದು ಗಾಲಿಗಳನ್ನು ಪುಡಿಗೈದು ಮೂಕಿಯನ್ನು ಮುರಿದು ಕುದುರೆ

ವಜ್ರದಂಷ್ಟ್ರಸ್ಯ ಶಿರಸಿ ಪಾತಯಾಮಾಸ ಸೋಽಂಗದಃ ।
ಅಭವಚ್ಛೋಣಿತೋದ್ಗಾರೀ ವಜ್ರದಂಷ್ಟ್ರಃ ಸ ಮೂರ್ಛಿತಃ ॥ ೨೫

ಮುಹೂರ್ತಮಭವನ್ಮೂರ್ಛೋ ಗದಾಮಾಲಿಂಗ್ಯ ನಿಃಶ್ವಸನ್ ।
ಸ ಲಬ್ಧ ಸಂಜ್ಞೋ ಗದಯಾ ವಾಲಿಪುತ್ರಮವಸ್ಥಿತಮ್ ॥ ೨೬

ಜಘಾನ ಪರಮಕ್ರುದ್ಧೋ ವಕ್ಷೋದೇಶೇ ನಿಶಾಚರಃ ।
ಗದಾಂ ತ್ಯಕ್ತ್ವಾ ತತಸ್ತತ್ರ ಮುಷ್ಟಿಯುದ್ಧಮವರ್ತತ ॥ ೨೭

ಅನ್ಯೋನ್ಯಂ ಜಘ್ನತುಸ್ತತ್ರ ತಾವುಭೌ ಹರಿರಾಕ್ಷಸೌ ।
ರುಧಿರೋದ್ಗಾರಿಣೌ ತೌ ತು ಪ್ರಹಾರೈರ್ಜನಿತಶ್ರಮೌ ॥ ೨೮

ಬಭೂವತುಃ ಸುವಿಕ್ರಾಂತವಂಗಾರಕಬುಧಾವಿವ ।
ತತಃ ಪರಮತೇಜಸ್ವೀ ಅಂಗದಃ ಕಪಿಕುಂಜರಃ ॥ ೨೯

ಉತ್ಪಾಟ್ಯ ವೃಕ್ಷಂ ಸ್ಥಿತವಾನ್ ಬಹುಪುಷ್ಪಫಲಾನ್ವಿತಮ್ ।
ಜಗ್ರಾಹ ಚಾರ್ಷಭಂ ಚರ್ಮ ಖಡ್ಗಂ ಚ ವಿಪುಲಂ ಶುಭಮ್ ॥ ೩೦

---

ಗಳನ್ನು ಕೊಂದಿತು. ಅನಂತರ ವಾಲಿಪುತ್ರನು ವೃಕ್ಷಶೋಭಿತವಾದ ಒಂದು ಬೆಟ್ಟವನ್ನೆತ್ತಿ ವಜ್ರದಂಷ್ಟ್ರನ ತಲೆಯಮೇಲೆ ಕುಕ್ಕಿದನು. ಆ ರಾಕ್ಷಸನು ರಕ್ತವನ್ನು ಕಕ್ಕುತ್ತ ಮೂರ್ಛಿತನಾದನು (೨೪–೨೫). ಗದೆಯನ್ನಪ್ಪಿಕೊಂಡು ಒಂದು ಕ್ಷಣಕಾಲ ಸ್ತಬ್ಧನಾಗಿ ಏದುತ್ತನಿಂತನು. ಅನಂತರ ಆ ವಜ್ರದಂಷ್ಟ್ರನು ಚೇತರಿಸಿಕೊಂಡು ಕೋಪದಿಂದ ತನ್ನ ಗದೆಯನ್ನೆತ್ತಿ ಎದುರಿಗೆ ನಿಂತಿದ್ದ ವಾಲಿಪುತ್ರನ ಎದೆಗೆ ಬಡಿದನು. ಆಮೇಲೆ ವಜ್ರದಂಷ್ಟ್ರನು ಗದೆಯನ್ನು ಬಿಸುಟು ಮುಷ್ಟಿಯುದ್ಧವನ್ನಾರಂಭಿಸಿದನು (೨೬–೨೭). ಅವರೀರ್ವರೂ ಒಬ್ಬರನ್ನೊಬ್ಬರು ಪ್ರಹರಿಸಿದರು. ಇಬ್ಬರ ಮೈಯಿಂದಲೂ ರಕ್ತವು ಚಿಮ್ಮಿತು. ಇಬ್ಬರೂ ಗುದ್ದಾಟದಿಂದ ಬಳಲಿದರು (೨೮). ಆ ಪರಾಕ್ರಮಿಗಳು ಅಂಗಾರಕ ಬುಧಗ್ರಹಗಳಂತೆ ಹೋರಾಡಿದರು. ಆಮೇಲೆ ಪರಮತೇಜಸ್ವಿಯೂ ಕಪಿಕುಂಜರನೂ ಆದ ಅಂಗದನು ಹೂಹಣ್ಣುಗಳಿಂದ ರಂಜಿಸುತ್ತಿದ್ದ ಒಂದು ಮಹಾವೃಕ್ಷವನ್ನು ಕಿತ್ತು ಹೋರಾಟಕ್ಕೆ ನಿಂತನು (೨೯). ಅಂತೆಯೇ ವಜ್ರದಂಷ್ಟ್ರನೂ ಒಂದು ದೊಡ್ಡ ವೃಕ್ಷವನ್ನು ಹಿಡಿದು ನಿಂತನು! ವೃಕ್ಷಗಳಿಂದ ಹೋರಾಡಿದಮೇಲೆ ಅಂಗದನು ವೃಷಭಚರ್ಮದಿಂದ ನಿರ್ಮಿತವಾದ

**ಕಿಂಕಣೀಜಾಲಸಂಛನ್ನಂ ಚರ್ಮಣಾ ಚ ಪರಿಷ್ಕೃತಮ್ ।**
**ವಿಚಿತ್ರಾಂಶ್ಚೇರತುರ್ಮಾರ್ಗಾನ್ ರುಷಿತೌ ಕಪಿರಾಕ್ಷಸೌ ॥** ೩೧

**ಜಘ್ನತುಶ್ಚ ತದಾನ್ಯೋನ್ಯಂ ನಿರ್ದಯಂ ಜಯಕಾಂಕ್ಷಿಣೌ ।**
**ವ್ರಣೈಃ ಸಾಸ್ರೈರಶೋಭೇತಾಂ ಪುಷ್ಪಿತಾವಿವ ಕಿಂಶುಕೌ ॥** ೩೨

**ಯುಧ್ಯಮಾನೌ ಪರಿಶ್ರಾಂತೌ ಜಾನುಭ್ಯಾಮವನೀಂ ಗತೌ ।**
**ನಿಮೇಷಾಂತರಮಾತ್ರೇಣ ಅಂಗದಃ ಕಪಿಕುಂಜರಃ ॥** ೩೩

**ಉದತಿಷ್ಠತ ದೀಪ್ತಾಕ್ಷೋ ದಂಡಾಹತ ಇವೋರಗಃ ।**
**ನಿರ್ಮಲೇನ ಸುಧೌತೇನ ಖಡ್ಗೇನಾಸ್ಯ ಮಹಚ್ಛಿರಃ ॥** ೩೪

**ಜಘಾನ ವಜ್ರದಂಷ್ಟ್ರಸ್ಯ ವಾಲಿಸೂನುರ್ಮಹಾಬಲಃ ।**
**ರುಧಿರೋಕ್ಷಿತಗಾತ್ರಸ್ಯ ಬಭೂವ ಪತಿತಂ ದ್ವಿಧಾ ॥** ೩೫

---

ಒಂದು ಗುರಾಣಿಯನ್ನು ಹಿಡಿದು, ಕಿರುಗೆಜ್ಜೆಗಳಿಂದ ಅಲಂಕೃತವಾದ ಚರ್ಮದ ಒರೆಯಿಂದ ದೀರ್ಘವಾದ ಖಡ್ಗವೊಂದನ್ನು ಸೆಳೆದು ಯುದ್ಧಸನ್ನದ್ಧನಾದನು. ಹಾಗೆಯೇ ವಜ್ರದಂಷ್ಟ್ರನೂ ಖಡ್ಗ ಗುರಾಣಿಗಳನ್ನು ಹಿಡಿದು ಸಜ್ಜಾದನು. ಅವರಿಬ್ಬರೂ ನಾನಾವಿಧವಾದ ಪಟ್ಟುಗಳನ್ನು ತೋರಿಸುತ್ತ ಹೊಡೆದಾಡಿದರು* (೩೦–೩೧). ಜಯಕಾಂಕ್ಷಿಗಳಾದ ಅವರಿಬ್ಬರೂ ಒಬ್ಬರನ್ನೊಬ್ಬರು ನಿರ್ದಯವಾಗಿ ಮರ್ದಿಸಿದರು. ಗಾಯಗಳಿಂದ ರಕ್ತವು ಸೋರುತ್ತಿರಲು, ಅಂಗದ ವಜ್ರದಂಷ್ಟ್ರರು ಅರಳಿದ ಮುತ್ತುಗದ ಮರಗಳಂತೆ ಕಂಗೊಳಿಸಿದರು (೩೨). ಹೊಡೆದಾಡಿ ಬಳಲಿ ಬೆಂಡಾಗಿ ಅವರೀರ್ವರೂ ಮಂಡಿಯೂರಿ ಕುಳಿತರು ! ಕುಳಿತುಕೊಂಡೇ ಹೋರಾಡುತ್ತಿರುವಾಗ, ಕಪಿಕುಂಜರನಾದ ಅಂಗದನು ಒಂದು ನಿಮಿಷದಲ್ಲಿ ಛಂಗನೆ ಎದ್ದು ನಿಂತನು! ಕಣ್ಣಿನಿಂದ ಕಿಡಿಯುಗುಳುತ್ತ, ಕೋಲಿನಿಂದ ಕೆಣಕಿದ ಮಹಾಸರ್ಪದಂತೆ ಎದ್ದುನಿಂತು, ಆ ವಾಲಿಪುತ್ರನು ಹರಿತನಾದ ಖಡ್ಗದಿಂದ ವಜ್ರದಂಷ್ಟ್ರನ ಮಸ್ತಕವನ್ನು ಕತ್ತರಿಸಿದನು (೩೩–೩೪). ವಜ್ರದಂಷ್ಟ್ರನ ಶರೀರವು ರಕ್ತದಿಂದ ನೆನೆದುಹೋಗಲು,

---

* ಈ ಶ್ಲೋಕಗಳ ಅರ್ಥವು ಸರಳವಾಗಿಲ್ಲ, ಅನ್ವಯವು ಕ್ಲಿಷ್ಟವಾಗಿದೆ. ವ್ಯಾಖ್ಯಾನಾನುರೋಧವಾಗಿ ಅಧ್ಯಾಹಾರಗಳನ್ನು ಮಾಡಿಕೊಂಡು ತಾತ್ಪರ್ಯವನ್ನು ಇಲ್ಲಿ ಬರೆಯಲಾಗಿದೆ.

ಸರೋಷಪರಿವೃತ್ತಾಕ್ಷಂ ಶುಭಂ ಖಡ್ಗಹತಂ ಶಿರಃ ।
ವಜ್ರದಂಷ್ಟ್ರಂ ಹತಂ ದೃಷ್ಟ್ವಾ ರಾಕ್ಷಸಾ ಭಯಮೋಹಿತಾಃ ॥ ೩೬

ತ್ರಸ್ತಾಃ ಪ್ರತ್ಯಪತನ್ ಲಂಕಾಂ ವಧ್ಯಮಾನಃ ಪ್ಲವಂಗಮೈಃ ।
ವಿಷಣ್ಣವದನಾ ದೀನಾ ಹ್ರಿಯಾ ಕಿಂಚಿದವಾಙ್ಮುಖಾಃ ॥ ೩೭

ನಿಹತ್ಯ ತಂ ವಜ್ರಧರಪ್ರಭಾವಃ
ಸ ವಾಲಿಸೂನುಃ ಕಪಿಸೈನ್ಯಮಧ್ಯೇ ।
ಜಗಾಮ ಹರ್ಷಂ ಮಹಿತೋ ಮಹಾಬಲಃ
ಸಹಸ್ರನೇತ್ರಸ್ತ್ರಿದಶೈರಿವಾವೃತಃ ॥ ೩೮

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುಃಪಂಚಾಶಃ ಸರ್ಗಃ

---

ರೋಷದಿಂದ ತಿರುಗುವ ಕಣ್ಣಾಲಿಗಳೊಡನೆ ಅವನ ಮಸ್ತಕವು ಶರೀರದಿಂದ ಬೇರೆಯಾಗಿ ಬಿದ್ದಿತು. ರಾಕ್ಷಸರು ಭಯದಿಂದ ದಿಙ್ಮೂಢರಾಗಿ ಲಂಕೆಗೆ ಪಲಾಯನಮಾಡಿದರು. ವಾನರರು ಅವರ ಬೆನ್ನಟ್ಟಿ ಬಡಿಯತೊಡಗಿದರು. ದೀನರಾದ ಆ ರಾಕ್ಷಸರು ಖಿನ್ನವದನರಾಗಿ ಲಜ್ಜೆಯಿಂದ ತಲೆತಗ್ಗಿಸಿಕೊಂಡು ಓಡಿಹೋದರು (೨೫–೨೬). ವಜ್ರಧಾರಿಯಾದ ದೇವೇಂದ್ರನಂತೆ ಪ್ರಭಾವ ಶಾಲಿಯಾದ ವಾಲಿತನಯನು ಕಪಿಗಳಿಂದ ಸತ್ಕೃತನಾಗಿ, ದೇವತೆಗಳಿಂದ ಪರಿವೃತನಾದ ಇಂದ್ರನಂತೆ ಕಪಿಸೇನಾಮಧ್ಯದಲ್ಲಿ ಹರ್ಷದಿಂದ ಮೆರೆದನು (೩೮).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಐವತ್ತನಾಲ್ಕನೆಯ ಸರ್ಗ

---

# ಪಂಚಪಂಚಾಶಃ ಸರ್ಗಃ

## ಅಕಂಪನಯುದ್ಧಮ್

ವಜ್ರದಂಷ್ಟ್ರಂ ಹತಂ ಶ್ರುತ್ವಾ ವಾಲಿಪುತ್ರೇಣ ರಾವಣಃ ।
ಬಲಾಧ್ಯಕ್ಷಮುವಾಚೇದಂ ಕೃತಾಂಜಲಿಮವಸ್ಥಿತಮ್ ॥ ೧

ಶೀಘ್ರಂ ನಿರ್ಯಾಂತು ದುರ್ಧರ್ಷಾ ರಾಕ್ಷಸಾ ಭೀಮವಿಕ್ರಮಾಃ ।
ಅಕಂಪನಂ ಪುರಸ್ಕೃತ್ಯ ಸರ್ವಶಸ್ತ್ರಾಸ್ತ್ರಕೋವಿದಮ್ ॥ ೨

ಏಷ ಶಾಸ್ತಾ ಚ ಗೋಪ್ತಾ ಚ ನೇತಾ ಚ ಯುಧಿ ಸಂಮತಃ ।
ಭೂತಿಕಾಮಶ್ಚ ಮೇ ನಿತ್ಯಂ ನಿತ್ಯಂ ಚ ಸಮರಪ್ರಿಯಃ ॥ ೩

ಏಷ ಜೇಷ್ಯತಿ ಕಾಕುತ್ಸ್ಥೌ ಸುಗ್ರೀವಂ ಚ ಮಹಾಬಲಮ್ ।
ವಾನರಾಂಶ್ಚಾಪರಾನ್ ಘೋರಾನ್ ಹನಿಷ್ಯತಿ ಪರಂತಪಃ ॥ ೪

### ಸರ್ಗ ೫೫

ರಾವಣನ ಆಜ್ಞೆಯಂತೆ ಹೊರಟುಬಂದ ಅಕಂಪನನು ವಾನರಸೇನೆಯೊಂದಿಗೆ ಭೀಕರವಾಗಿ ಹೋರಾಡುವುದು.

ವಜ್ರದಂಷ್ಟ್ರನು ಅಂಗದನಿಂದ ಹತನಾದನೆಂಬ ವಾರ್ತೆ ರಾವಣನಿಗೆ ಮುಟ್ಟಿತು. ಅವನು ತನ್ನೆದುರಿಗೆ ಕೈ ಮುಗಿದು ನಿಂತಿದ್ದ ಸೇನಾನಿಯಾದ ಪ್ರಹಸ್ತನನ್ನು ನೋಡಿ ''ಪ್ರಹಸ್ತ, ಸರ್ವಶಸ್ತ್ರಾಸ್ತ್ರಕೋವಿದನಾದ ಅಕಂಪನನು ಯುದ್ಧಕ್ಕೆ ಹೊರಡಲಿ. ಭೀಮವಿಕ್ರಮರೂ ದುರ್ಜಯರೂ ಆದ ರಾಕ್ಷಸಭಟರು ಅವನನ್ನು ಹಿಂಬಾಲಿಸಿ ಹೋಗತಕ್ಕದ್ದು (೧–೨). ಈತನು ಶತ್ರುಗಳನ್ನು ಮರ್ದಿಸಿ ತನ್ನ ಸೇನೆಯನ್ನು ಚೆನ್ನಾಗಿ ರಕ್ಷಿಸಿಕೊಳ್ಳಬಲ್ಲನು. ಸೇನೆಯನ್ನು ನಡೆಸುವುದರಲ್ಲಿ ಈತನು ಸಮರ್ಥ. ಈ ಅಕಂಪನನಲ್ಲಿ ನನಗೆ ಸಂಪೂರ್ಣ ವಾದ ವಿಶ್ವಾಸವುಂಟು. ಯಾವಾಗಲೂ ನನ್ನ ಹಿತವನ್ನು ಕೋರುವನಲ್ಲದೆ ಸಮರೋತ್ಸಾಹಿಯಾಗಿರುತ್ತಾನೆ (೩). ಈ ಶತ್ರುಸೂದನನು ರಾಮಲಕ್ಷ್ಮಣ ರನ್ನು ಗೆದ್ದು ಬಲಾಢ್ಯನಾದ ಸುಗ್ರೀವನನ್ನು ನಿಗ್ರಹಿಸಬಲ್ಲನು. ಭಯಂಕರ ರಾದ ಇತರ ವಾನರರನ್ನೂ ಸಂಹರಿಸುವನು'' ಎಂದನು (೪).

ಪರಿಗೃಹ್ಯ ಸ ತಾಮಾಜ್ಞಾಂ ರಾವಣಸ್ಯ ಮಹಾಬಲಃ ।
ಬಲಂ ಸಂತ್ವರಯಾಮಾಸ ತದಾ ಲಘುಪರಾಕ್ರಮಃ ॥ ೫

ತತೋ ನಾನಾಪ್ರಹರಣಾ ಭೀಮಾಕ್ಷಾ ಭೀಮದರ್ಶನಾಃ ।
ನಿಷ್ಪೇತುರ್ ರಕ್ಷಸಾಂ ಮುಖ್ಯಾ ಬಲಾಧ್ಯಕ್ಷಪ್ರಚೋದಿತಾಃ ॥ ೬

ರಥಮಾಸ್ಥಾಯ ವಿಪುಲಂ ತಪ್ತ ಕಾಂಚನಕುಂಡಲಃ ।
ಮೇಘಾಭೋ ಮೇಘವರ್ಣಶ್ಚ ಮೇಘಸ್ವನಮಹಾಸ್ವನಃ ॥ ೭

ರಾಕ್ಷಸೈಃ ಸಂವೃತೋ ಭೀಮೈಸ್ತದಾ ನಿರ್ಯಾತ್ಯ ಕಂಪನಃ ।
ನ ಹಿ ಕಂಪಯಿತುಂ ಶಕ್ಯಃ ಸುರೈರಪಿ ಮಹಾಮೃಧೇ ॥ ೮

ಅಕಂಪನಸ್ತ ತಸ್ತೇಷಾಮಾದಿತ್ಯ ಇವ ತೇಜಸಾ ।
ತಸ್ಯ ನಿರ್ಧಾವಮಾನಸ್ಯ ಸಂರಬ್ಧಸ್ಯ ಯುಯುತ್ಸಯಾ ॥ ೯

ಅಕಸ್ಮಾದ್ದೈನ್ಯಮಾಗಚ್ಛದ್ಧಯಾನಾಂ ರಥವಾಹಿನಾಮ್ ।
ವ್ಯಸ್ಫುರನ್ನಯನಂ ಚಾಸ್ಯ ಸವ್ಯಂ ಯುದ್ಧಾಭಿನಂದಿನಃ ॥ ೧೦

---

ರಾವಣನ ಆಜ್ಞೆಯನ್ನು ಮನ್ನಿಸಿ ಪ್ರಹಸ್ತನು ತ್ವರೆಯಿಂದ ಸೈನ್ಯವನ್ನು ಸಜ್ಜುಗೊಳಿಸಿದನು. ಸೇನಾನಿಯಾದ ಪ್ರಹಸ್ತನ ಆದೇಶದಂತೆ ರಾಕ್ಷಸ ಯೋಧರು ಯುದ್ಧಕ್ಕೆ ಹೊರಟರು. ಅವರೆಲ್ಲರೂ ಭಯಂಕರವಾದ ಕಣ್ಣುಗಳಿದ್ದ ಭೀಕರಾಕೃತಿಯ ರಾಕ್ಷಸರು (೫–೬). ಆಗ ಮೇಘದಂತೆ ಕಪ್ಪು ಬಣ್ಣದ ಬೃಹದಾಕಾರನೂ ಗುಡುಗಿನಂತೆ ಮಹಾಧ್ವನಿಯುಳ್ಳವನೂ ಆದ ಅಕಂಪನನು ಚಿನ್ನದ ದೊಡ್ಡ ಕುಂಡಲಗಳನ್ನು ಕಿವಿಗಳಲ್ಲಿ ಧರಿಸಿ, ಭೀಮಕಾಯರಾದ ರಾಕ್ಷಸರಿಂದ ಪರಿವೃತನಾಗಿ ಯುದ್ಧಕ್ಕೆ ಹೊರಟನು. ಅವನೇನು ಸಾಮಾನ್ಯನೆ? ದೇವತೆಗಳೂ ಸಹ ಕದನದಲ್ಲಿ ಅವನನ್ನು ಅಲ್ಲಾಡಿಸಲಾರರು! (೭–೮). ರಾಕ್ಷಸರ ಮಧ್ಯದಲ್ಲವನು ಆದಿತ್ಯನಂತೆ ತೇಜಸ್ಸಿನಿಂದ ತೊಳಗುತ್ತಿದ್ದನು. ಹೋರಾಡುವ ತವಕದಿಂದ ಉದ್ವಿಗ್ನನಾಗಿ ಅಕಂಪನನು ಧಾವಿಸಿ ಬರುತ್ತಿರುವಾಗ, ಅವನ ರಥಕ್ಕೆ ಹೂಡಿದ್ದ ಅಶ್ವಗಳು ಥಕ್ಕನೆ ದೈನ್ಯವನ್ನವಲಂಬಿಸಿದವು. ಯುದ್ಧಕ್ಕಾಗಿ ಹಾತೊರೆಯುತ್ತಿದ್ದ ಅವನ ಎಡಗಣ್ಣು ಹಾರಿತು (೯–೧೦).

ವಿವರ್ಣೋ ಮುಖವರ್ಣಶ್ಚ ಗದ್ಗದಶ್ಚಾಭವತ್ಸ್ವನಃ ।
ಅಭವತ್ಸುದಿನೇ ಚಾಪಿ ದುರ್ದಿನಂ ರೂಕ್ಷಮಾರುತಮ್ ॥ ೧೧

ಊಚುಃ ಖಗಾ ಮೃಗಾಃ ಸರ್ವೇ ವಾಚಃ ಕ್ರೂರಾ ಭಯಾವಹಾಃ ।
ಸಸಿಂಹೋಪಚಿತಸ್ಕಂಧಃ ಶಾರ್ದೂಲಸಮವಿಕ್ರಮಃ ॥ ೧೨

ತಾನುತ್ಪಾತಾನಚಿಂತ್ಯೈವ ನಿರ್ಜಗಾಮ ರಣಾಜಿರಮ್ ।
ತದಾ ನಿರ್ಗಚ್ಛತಸ್ತಸ್ಯ ರಕ್ಷಸಃ ಸಹ ರಾಕ್ಷಸೈಃ ॥ ೧೩

ಬಭೂವ ಸುಮಹಾನ್ನಾದಃ ಕ್ಷೋಭಯನ್ನಿವ ಸಾಗರಮ್ ।
ತೇನ ಶಬ್ದೇನ ವಿತ್ರಸ್ತಾ ವಾನರಾಣಾಂ ಮಹಾಚಮೂಃ ॥ ೧೪

ದ್ರುಮಶೈಲಪ್ರಹರಣಾ ಯೋದ್ಧುಂ ಸಮವತಿಷ್ಠತ ।
ತೇಷಾಂ ಯುದ್ಧಂ ಮಹಾರೌದ್ರಂ ಸಂಜಜ್ಞೇ ಹರಿರಕ್ಷಸಾಮ್ ॥ ೧೫

ರಾಮರಾವಣಯೋರರ್ಥೇ ಸಮಭಿತ್ಯಕ್ತಜೀವಿನಾಮ್ ।
ಸರ್ವೇ ಹ್ಯತಿಬಲಾಃ ಶೂರಾಃ ಸರ್ವೇ ಪರ್ವತಸಂನಿಭಾಃ ॥ ೧೬

---

ಮುಖವರ್ಣವು ಮ್ಲಾನವಾಯಿತು. ಧ್ವನಿಯು ಗದ್ಗದಿಸಿತು. ಅವನು ಹೊರಡುವುದಕ್ಕೆ ಮೊದಲು ಪ್ರಕಾಶವಾಗಿದ್ದ ಹಗಲು, ಇದ್ದಕ್ಕಿದ್ದಂತೆ ಮೋಡ ತುಂಬಿ ಮಾಸಿತು ಬಿರುಗಾಳಿ ಬೀಸಿತು (೧೧). ಮೃಗಪಕ್ಷಿಗಳು ಕರ್ಕಶಧ್ವನಿಯಿಂದ ಹೆದರಿಕೆಯಾಗುವಂತೆ ಕೂಗಿದವು. ಅಕಂಪನನಾದರೋ ಸಿಂಹದಂತೆ ಉಬ್ಬಿದ ಹೆಗಲುಳ್ಳವನು. ಹೆಬ್ಬುಲಿಯಂತೆ ಹೋರಾಡುವ ಪರಾಕ್ರಮಿ. ಅವನು ಆ ದುಶ್ಶಕುನಗಳನ್ನು ಲೆಕ್ಕಿಸದೆ ರಣರಂಗಕ್ಕೆ ನಡೆದನು (೧೨–೧೩). ಆ ರಾಕ್ಷಸನು ರಾಕ್ಷಸಭಟರೊಡನೆ ಸಮರಭೂಮಿಗೆ ಧಾವಿಸುತ್ತಿರುವಾಗ, ರಾಕ್ಷಸರ ಗರ್ಜನೆಯು ಸಮುದ್ರವನ್ನೇ ಉದ್ವೇಲ*ಗೊಳಿಸುವಂತೆ ಕೇಳಿಸುತ್ತಿತ್ತು. ಆ ಗರ್ಜನೆಯನ್ನು ಕೇಳಿ ವಾನರಸೇನೆಗೆ ದಿಗಿಲಾಯಿತು. ವಾನರಯೋಧರು ವೃಕ್ಷಗಳನ್ನೂ ಬೆಟ್ಟಗಳನ್ನೂ ಹಿಡಿದು ಹೋರಾಡಲು ಸಜ್ಜಾದರು. ಅನಂತರ ಕಪಿಗಳಿಗೂ ರಾಕ್ಷಸರಿಗೂ ಮಹಾಭೀಕರವಾದ ಕಾಳಗವು ಪ್ರಾರಂಭಿಸಿತು (೧೪–೧೫). ಕಪಿಗಳು ಶ್ರೀರಾಮನಿಗೋಸ್ಕರ, ರಾಕ್ಷಸರು ರಾವಣ

---

* ಮೇರೆದಪ್ಪಿಸುವಂತೆ.

ಹರಯೋ ರಾಕ್ಷಸಾಶ್ಚೈವ ಪರಸ್ಪರಜಿಘಾಂಸವಃ ।
ತೇಷಾಂ ವಿನರ್ದತಾಂ ಶಬ್ದಃ ಸಂಯುಗೇऽತಿತರಸ್ವಿನಾಮ್ ॥ ೧೭

ಶುಶ್ರುವೇ ಸುಮಹಾನ್ ಕ್ರೋಧಾದನ್ಯೋನ್ಯಮಭಿಗರ್ಜತಾಮ್ ।
ರಜಶ್ಚಾರುಣವರ್ಣಾಭಂ ಸುಭೀಮಮಭವದ್ಭೃಶಮ್ ॥ ೧೮

ಉದ್ಧೂತಂ ಹರಿರಕ್ಷೋಭಿಃ ಸಂರುರೋಧ ದಿಶೋ ದಶ ।
ಅನ್ಯೋನ್ಯಂ ರಜಸಾ ತೇನ ಕೌಶೇಯೋದ್ಧೂತಪಾಂಡುನಾ ॥ ೧೯

ಸಂವೃತಾನಿ ಚ ಭೂತಾನಿ ದದೃಶುರ್ನ ರಣಾಜಿರೇ ।
ನ ಧ್ವಜಾ ನ ಪತಾಕಾ ವಾ ವರ್ಮ ವಾ ತುರಗೋऽಪಿ ವಾ ॥ ೨೦

ಆಯುಧಂ ಸ್ಯಂದನಂ ವಾಪಿ ದದೃಶೇ ತೇನ ರೇಣುನಾ ।
ಶಬ್ದಶ್ಚ ಸುಮಹಾಂಸ್ತೇಷಾಂ ನರ್ದತಾಮಭಿಧಾವತಾಮ್ ॥ ೨೧

ಶ್ರೂಯತೇ ತುಮುಲೇ ಯುದ್ಧೇ ನ ರೂಪಾಣಿ ಚಕಾಶಿರೇ ।
ಹರೀನೇವ ಸುಸಂಕ್ರುದ್ಧಾ ಹರಯೋ ಜಘ್ನುರಾಹವೇ ॥ ೨೨

—ನಿಗೋಸ್ಕರ, ತಮ್ಮ ಪ್ರಾಣವನ್ನು ಪಣವಾಗಿಟ್ಟು ಹೋರಾಡಿದರು. ಅವರೆಲ್ಲರೂ ಅತ್ಯಂತ ಬಲಾಢ್ಯರು, ಶೂರರು. ಎಲ್ಲರೂ ಪರ್ವತಗಳಂತೆ ಮಹಾಕಾಯರು. ಒಬ್ಬರನ್ನೊಬ್ಬರು ಕೊಲ್ಲಬೇಕೆಂಬ ಛಲದಿಂದ ಹೋರಾಡಿದರು (೧೭). ಒಬ್ಬರನ್ನೊಬ್ಬರು ಎದುರಿಸಿ ಕ್ರೋಧದಿಂದ ಸಿಂಹನಾದಗೈಯುತ್ತಿದ್ದ ಆ ಶೂರರ ಗರ್ಜನೆಯು ರಣರಂಗದಲ್ಲಿ ಮೊಳಗುತ್ತಿದ್ದಿತು. ಕೆದರಿದ ಕೆಂಧೂಳಿಯು ಅದ್ಭುತಾಕಾರವಾಗಿ ಪಸರಿಸಿ ದಶದಿಕ್ಕುಗಳನ್ನೂ ಮುಚ್ಚಿತು. ಮೇಲಕ್ಕೆ ಬೀಸಿದ ರೇಶ್ಮೆ ಬಟ್ಟೆಯಂತೆ ಬಿಳುಪಾದ ಧೂಳಿಯು ಎಲ್ಲೆಲ್ಲಿಯೂ ಹರಡಲಾಗಿ, ಆ ಯೋಧರಿಗೆ ಎದುರಿಗಿರುವ ಜನರೇ ಕಾಣದಾದರು (೧೭-೧೯). ಹೀಗೆ ಧೂಳಿಯಿಂದ ಮುಚ್ಚಿದಾಗ ಧ್ವಜಪತಾಕೆಗಳಾಗಲಿ, ಕವಚಕುದುರೆಗಳಾಗಲಿ, ಆಯುಧರಥಗಳಾಗಲಿ ಸ್ವಲ್ಪವೂ ಕಾಣಿಸುತ್ತಿರಲಿಲ್ಲ. ತುಮುಲವಾದ ಆ ಘೋರ ಯುದ್ಧದಲ್ಲಿ ಒಬ್ಬರ ಮೇಲೊಬ್ಬರು ನುಗ್ಗುತ್ತ ಸಿಂಹನಾದಗೈಯುವಾಗ, ಅವರ ಗರ್ಜನೆಯೊಂದೇ ಕೇಳಿಸುತ್ತಿದ್ದಿತೇ ಹೊರತು ಯಾವ ವಸ್ತುವೂ ಗೋಚರಿಸುತ್ತಿರಲಿಲ್ಲ. ಆ ಗೊಂದಲದಲ್ಲಿ ಕಪಿಗಳೇ ಕೋಪಾವೇಶದಿಂದ ತಮ್ಮವರೆಂದು ತಿಳಿಯದೆ ಕಪಿಗಳನ್ನೇ ಕೊಂದರು! (೨೦–೨೨).

ರಾಕ್ಷಸಾಶ್ಚಾಪಿ ರಕ್ಷಾಂಸಿ ನಿಜಘ್ನುಸ್ತಿಮಿರೇ ತದಾ ।
ಪರಾಂಶ್ಚೈವ ವಿನಿಘ್ನಂತಃ ಸ್ವಾಂಶ್ಚ ವಾನರರಾಕ್ಷಸಾಃ ॥ ೨೩

ರುಧಿರಾರ್ದ್ರಾಂ ತದಾ ಚಕ್ರುರ್ಮಹೀಂ ಪಂಕಾನುಲೇಪನಾಮ್ ।
ತತಸ್ತು ರುಧಿರೌಘೇಣ ಸಿಕ್ತಂ ವ್ಯಪಗತಂ ರಜಃ ॥ ೨೪

ಶರೀರಶವಸಂಕೀರ್ಣಾ ಬಭೂವ ಚ ವಸುಂಧರಾ ।
ದ್ರುಮಶಕ್ತಿ ಶಿಲಾಪ್ರಾಸೈರ್ಗದಾಪರಿಘತೋಮರೈಃ ॥ ೨೫

ಹರಯೋ ರಾಕ್ಷಸಾಶ್ಚೈವ ಜಘ್ನುರನ್ಯೋನ್ಯಮೋಜಸಾ ।
ಬಾಹುಭಿಃ ಪರಿಘಾಕಾರೈರ್ಯುಧ್ಯಂತಃ ಪರ್ವತೋಪಮಾಃ ॥ ೨೬

ಹರಯೋ ಭೀಮಕರ್ಮಾಣೋ ರಾಕ್ಷಸಾನ್ ಜಘ್ನುರಾಹವೇ ।
ರಾಕ್ಷಸಾಸ್ತ್ವಪಿ ಸಂಕ್ರುದ್ಧಾಃ ಪ್ರಾಸತೋಮರಪಾಣಯಃ ॥ ೨೭

ಕಪೀನ್ನಿ ಜಘ್ನಿರೇ ತತ್ರ ಶಸ್ತ್ರೈಃ ಪರಮದಾರುಣೈಃ ।
ಅಕಂಪನಃ ಸುಸಂಕ್ರುದ್ಧೋ ರಾಕ್ಷಸಾನಾಂ ಚಮೂಪತಿಃ ॥ ೨೮

---

ಧೂಳಿನಿಂದಾದ ಆ ಕತ್ತಲೆಯಲ್ಲಿ ರಾಕ್ಷಸರೇ ರಾಕ್ಷಸರನ್ನು ಕೊಂದರು! ಹೀಗೆ ವಾನರರಾಕ್ಷಸರು ಕಣ್ಣು ಕಾಣದೆ ಕೈಗೆಸಿಕ್ಕಿದ ಹಾಗೆಲ್ಲಾ ತಮ್ಮವರನ್ನೂ ಶತ್ರುಗಳನ್ನೂ ಬಡಿದು ಕೊಂದರು. ರಕ್ತದ ಕೋಡಿಯು ಹರಿಯಿತು. ಯೋಧರ ತುಳಿತದಿಂದ ರಣಭೂಮಿಯಲ್ಲಿ ಕೆಸರು ತುಂಬಿತು. ರಕ್ತಪ್ರವಾಹದಿಂದ ಧೂಳಿಯು ತಗ್ಗಿತು (೨೩–೨೪). ಎಲ್ಲೆಲ್ಲಿಯೂ ಶವಗಳು ಉರುಳಾಡಿದವು. ವಾನರರಾಕ್ಷಸರಿಬ್ಬರೂ ವೃಕ್ಷ, ಶಕ್ತಿ, ಶಿಲೆ, ಪ್ರಾಸ, ಗದೆ, ಪರಿಘ, ತೋಮರ ಮುಂತಾದ ಆಯುಧಗಳಿಂದ ಹೊಡೆದಾಡಿದರು. ಪರ್ವತಾಕಾರದ ಭೀಮ ಪರಾಕ್ರಮಿಗಳಾದ ಕೆಲವು ವಾನರರು ಪರಿಘಗಳಂತಿದ್ದ ತಮ್ಮ ಬಾಹುಗಳಿಂದ ರಾಕ್ಷಸರನ್ನು ಬಡಿದು ಕೊಲ್ಲುತ್ತಿದ್ದರು (೨೫–೨೬). ಕ್ರುದ್ಧರಾದ ರಾಕ್ಷಸರೂ ಸಹ ಪ್ರಾಸ ತೋಮರಗಳೆಂಬ ಭೀಕರಾಯುಧಗಳಿಂದ ವಾನರರನ್ನು ಅಪ್ಪಳಿಸಿ ಕೊಲ್ಲುತ್ತಿದ್ದರು. ಆ ಸಮಯದಲ್ಲಿ ರಾಕ್ಷಸಸೇನಾಪತಿಯಾದ ಅಕಂಪನನು ರೋಷಾವಿಷ್ಟನಾಗಿ ಸಾಹಸಿಗಳಾದ ಆ ರಾಕ್ಷಸರನ್ನು ಹುರಿದುಂಬಿಸುತ್ತಿದ್ದನು (೨೭–೨೮).

ಸಂಹರ್ಷಯತಿ ತಾನ್ ಸರ್ವಾನ್ ರಾಕ್ಷಸಾನ್ ಭೀಮವಿಕ್ರಮಾನ್ ।
ಹರಯಸ್ತ್ವಪಿ ರಕ್ಷಾಂಸಿ ಮಹಾದ್ರುಮಮಹಾಶ್ಮಭಿಃ ॥ ೨೯

ವಿದಾರಯಂತ್ಯಭಿಕ್ರಮ್ಯ ಶಸ್ತ್ರಾಣ್ಯಾಚ್ಛಿದ್ಯ ವೀರ್ಯತಃ ।
ಏತಸ್ಮಿನ್ನಂತರೇ ವೀರಾ ಹರಯಃ ಕುಮುದೋ ನಲಃ ॥ ೩೦

ಮೈಂದಶ್ಚ ದ್ವಿವಿದಃ ಕ್ರುದ್ಧಾಶ್ಚಕ್ರುರ್ವೇಗಮನುತ್ತಮಮ್ ।
ತೇ ತು ವೃಕ್ಷೈರ್ಮಹಾವೇಗಾ ರಾಕ್ಷಸಾನಾಂ ಚಮೂಮುಖೇ ॥ ೩೧

ಕದನಂ ಸುಮಹಚ್ಚಕ್ರುರ್ಲೀಲಯಾ ಹರಿಯೂಥಪಾಃ ।
ಮಮಂಥೂ ರಾಕ್ಷಸಾನ್ ಸರ್ವೇ ವಾನರಾ ಗಣಶೋ ಭೃಶಮ್ ॥ ೩೨

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚಪಂಚಾಶಃ ಸರ್ಗಃ

---

ಇತ್ತ ವಾನರಯೋಧರು ರಭಸದಿಂದ ನುಗ್ಗಿ ರಾಕ್ಷಸರ ಆಯುಧಗಳನ್ನು ಕಿತ್ತು ಸೆಳೆದುಕೊಂಡು, ದೊಡ್ಡ ದೊಡ್ಡ ಮರಗಳನ್ನೂ ಬಂಡೆಗಳನ್ನೂ ಬೀಸಿ ಬಡಿಯುತ್ತಿದ್ದರು. ಅಷ್ಟರಲ್ಲಿ ಕುಮುದ, ನಳ, ಮೈಂದ, ದ್ವಿವಿದ–ಎಂಬ ವೀರ ವಾನರನಾಯಕರು ಸಂಕ್ರುದ್ಧರಾಗಿ ಚಂಡವೇಗದಿಂದ ನುಗ್ಗಿ ತಮ್ಮ ಸಾಹಸವನ್ನು ಮೆರೆಸತೊಡಗಿದರು (೨೯–೩೦). ಆ ವಾನರಭಟರು ವೃಕ್ಷಗಳನ್ನು ಹಿಡಿದು ರಾಕ್ಷಸರ ಸೇನೆಯಲ್ಲಿ ನುಗ್ಗಿ ಭೀಕರ ಕದನವನ್ನಾರಂಭಿಸಿದರು. ಆ ವೀರಾಗ್ರೇಸರರಿಗೆ ಅದೊಂದು ಲೀಲೆಯಾಯಿತು. ಗುಂಪುಗುಂಪಾಗಿ ರಾಕ್ಷಸರನ್ನು ಬಡಿದು ಕಡೆದುಬಿಟ್ಟರು (೩೧–೩೨).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಐವತ್ತೈದನೆಯ ಸರ್ಗ

---

## ಷಟ್‌ಪಂಚಾಶಃ ಸರ್ಗಃ

### ಅಕಂಪನವಧಃ

ತದ್ದೃಷ್ಟ್ವಾ ಸುಮಹತ್ಕರ್ಮ ಕೃತಂ ವಾನರಸತ್ತಮೈಃ ।
ಕ್ರೋಧಮಾಹಾರಯಾಮಾಸ ಯುಧಿ ತೀವ್ರಮಕಂಪನಃ ॥ ೧

ಕ್ರೋಧಮೂರ್ಛಿತರೂಪಸ್ತು ಧೂನ್ವನ್ ಪರಮಕಾರ್ಮುಕಮ್ ।
ದೃಷ್ಟ್ವಾ ತು ಕರ್ಮ ಶತ್ರೂಣಾಂ ಸಾರಥಿಂ ವಾಕ್ಯಮಬ್ರವೀತ್ ॥ ೨

ತತ್ರೈವ ತಾವತ್ತ್ವರಿತಂ ರಥಂ ಪ್ರಾಪಯ ಸಾರಥೇ ।
ಯತ್ರೈತೇ ಬಹವೋ ಘ್ನಂತಿ ಸುಬಹೂನ್ ರಾಕ್ಷಸಾನ್ ರಣೇ ॥ ೩

ಏತೇಽತ್ರ ಬಲವಂತೋ ಹಿ ಭೀಮಕಾಯಾಶ್ಚ ವಾನರಾಃ ।
ದ್ರುಮಶೈಲಪ್ರಹರಣಾಸ್ತಿಷ್ಠಂತಿ ಪ್ರಮುಖೇ ಮಮ ॥ ೪

ಏತಾನ್ನಿಹಂತುಮಿಚ್ಛಾಮಿ ಸಮರಶ್ಲಾಘಿನೋ ಹ್ಯಹಮ್ ।
ಏತೈಃ ಪ್ರಮಥಿತಂ ಸರ್ವಂ ದೃಶ್ಯತೇ ರಾಕ್ಷಸಂ ಬಲಮ್ ॥ ೫

## ಸರ್ಗ ೫೬

### ಹನುಮಂತನಿಂದ ಅಕಂಪನನ ವಧೆ

ಆ ವಾನರವೀರರ ಸಾಹಸಕೃತ್ಯವನ್ನು ಕಂಡು ಅಕಂಪನನಿಗೆ ತೀವ್ರವಾದ ಕೋಪವುಂಟಾಯಿತು. ಅವನು ಕೋಪಾವಿಷ್ಟನಾಗಿ ಧನುಸ್ಸನ್ನು ಮಿಡಿಯುತ್ತ ಸಾರಥಿಯನ್ನು ಕುರಿತು "ಸಾರಥಿ, ಆ ಕಪಿಯೋಧರು ನಮ್ಮ ಬಹುಮಂದಿ ರಾಕ್ಷಸರನ್ನು ಅತ್ತ ಕಡೆ ಕೊಲ್ಲುತ್ತಿದ್ದಾರೆ ನನ್ನ ರಥವನ್ನು ಬೇಗನೆ ಅಲ್ಲಿಗೆ ನಡೆಸು! (೧–೩). ಭೀಮಕಾಯರಾದ ಈ ವಾನರರು ಬಲಾಢ್ಯರು. ವೃಕ್ಷಗಳನ್ನೂ ಬೆಟ್ಟಗಳನ್ನೂ ಹಿಡಿದು ನನ್ನೆದುರಿಗೆ ನಿಂತಿದ್ದಾರೆ. ಯುದ್ಧವಿಶಾರದರಾದ ಇವರೆಲ್ಲರನ್ನೂ ನಾನು ಸಂಹರಿಸಬೇಕೆಂದಿದ್ದೇನೆ. ನಮ್ಮ ರಾಕ್ಷಸಪಡೆಯೆಲ್ಲವನ್ನೂ ಇವರು ನಾಶಪಡಿಸುವಂತೆ ಕಾಣುತ್ತದೆ!" ಎಂದನು (೪–೫).

ತತಃ ಪ್ರಜವನಾಶ್ವೇನ ರಥೇನ ರಥಿನಾಂ ವರಃ ।
ಹರೀನಭ್ಯಹನತ್ಕ್ರೋಧಾಚ್ಛರಜಾಲೈರಕಂಪನಃ ॥ ೬

ನ ಸ್ಥಾತುಂ ವಾನರಾಃ ಶೇಕುಃ ಕಿಂ ಪುನರ್ಯೋದ್ಧುಮಾಹವೇ ।
ಅಕಂಪನಶರೈರ್ಭಗ್ನಾಃ ಸರ್ವ ಏವ ವಿದುದ್ರುವುಃ ॥ ೭

ತಾನ್ ಮೃತ್ಯು ವಶಮಾಪನ್ನಾನಕಂಪನವಶಂ ಗತಾನ್ ।
ಸಮೀಕ್ಷ್ಯ ಹನುಮಾನ್ ಜ್ಞಾತೀನುಪತಸ್ಥೇ ಮಹಾಬಲಃ ॥ ೮

ತಂ ಮಹಾಪ್ಲವಗಂ ದೃಷ್ಟ್ವಾ ಸರ್ವೇ ಪ್ಲವಗಯೂಥಪಾಃ ।
ಸಮೇತ್ಯ ಸಮರೇ ವೀರಾಃ ಸಂಹೃಷ್ಟಾಃ ಪರ್ಯವಾರಯನ್ ॥ ೯

ಅವಸ್ಥಿತಂ ಹನೂಮಂತಂ ತೇ ದೃಷ್ಟ್ವಾ ಹರಿಯೂಥಪಾಃ ।
ಬಭೂವುರ್ಬಲವಂತೋ ಹಿ ಬಲವಂತಂ ಸಮಾಶ್ರಿತಾಃ ॥ ೧೦

ಅಕಂಪನಸ್ತು ಶೈಲಾಭಂ ಹನೂಮಂತಮವಸ್ಥಿ ತಮ್ ।
ಮಹೇಂದ್ರ ಇವ ಧಾರಾಭಿಃ ಶರೈರಭಿವವರ್ಷ ಹ ॥ ೧೧

---

ಅನಂತರ ರಥಿಕೋತ್ತಮನಾದ ಅಕಂಪನನು ವೇಗಶಾಲಿಗಳಾದ ಕುದುರೆಗಳನ್ನು ಹೂಡಿದ ತನ್ನ ರಥದಲ್ಲಿ ಧಾವಿಸಿ ಬಂದು ಶರಜಾಲಗಳಿಂದ ವಾನರಯೋಧರನ್ನು ಮರ್ದಿಸಲಾರಂಭಿಸಿದನು. ವಾನರರಿಗೆ ಅವನ ಮುಂದೆ ನಿಲ್ಲಲು ಕೂಡ ಸಾಧ್ಯವಾಗಲಿಲ್ಲ, ಇನ್ನು ಯುದ್ಧಮಾಡಬಲ್ಲರೆ? ಆ ರಾಕ್ಷಸನ ಶರಗಳಿಂದ ಪೆಟ್ಟು ತಿಂದ ಎಲ್ಲರೂ ಚಲ್ಲಾಪಿಲ್ಲಿಯಾಗಿ ಓಡತೊಡಗಿದರು (೬–೭). ಹೀಗೆ ತನ್ನ ಕಡೆಯ ವಾನರರು ಅಕಂಪನನ ಕೈಗೆ ಸಿಕ್ಕಿ ಮೃತ್ಯುವಶರಾಗುತ್ತಿರುವುದನ್ನು ನೋಡಿ, ಬಲಾಢ್ಯನಾದ ಹನುಮಂತನು ಎದುರಿಗೆ ಬಂದು ನಿಂತನು! (೮). ಆ ಮಹಾಕಪಿಯನ್ನು ನೋಡಿದೊಡನೆ ವಾನರನಾಯಕರಿಗೆ ಸಂತೋಷವಾಯಿತು! ಅವರೆಲ್ಲರೂ ಹನುಮಂತನ ಸುತ್ತಲೂ ಬಂದು ನೆರೆದರು. ಬಲಶಾಲಿಯಾದ ಹನುಮಂತನು ತಮ್ಮ ನೆರವಿಗೆ ಬಂದನೆಂದು ತಿಳಿದು, ಆ ವಾನರಯೋಧರ ಬಲವು ಮರುಕಳಿಸಿತು (೯–೧೦). ಪರ್ವತದಂತೆ ಎದುರಿಗೆ ಬಂದು ನಿಂತ ಹನುಮಂತನನ್ನು ವೀಕ್ಷಿಸಿ, ಅಕಂಪನನು ಅವನ ಮೇಲೆ ಬಾಣಗಳ ಮಳೆಗರೆದನು. ಇಂದ್ರನು ಬೆಟ್ಟದಮೇಲೆ ಧಾರಾಕಾರವಾಗಿ ಮಳೆಯನ್ನು ಸುರಿಸುವಂತೆ ಬಾಣಗಳನ್ನು ತೂರಿದನು (೧೧).

ಅಚಿಂತಯಿತ್ವಾ ಬಾಣೌಘಾನ್ ಶರೀರೇ ಪತಿತಾನ್ ಶಿತಾನ್ ।
ಅಕಂಪನವಧಾರ್ಥಾಯ ಮನೋ ದಧ್ರೇ ಮಹಾಬಲಃ ॥ ೧೨

ಸ ಪ್ರಸಹ್ಯ ಮಹಾತೇಜಾ ಹನೂಮಾನ್ ಮಾರುತಾತ್ಮಜಃ ।
ಅಭಿದುದ್ರಾವ ತದ್ರಕ್ಷಃ ಕಂಪಯನ್ನಿವ ಮೇದಿನೀಮ್ ॥ ೧೩

ತಸ್ಯಾಭಿನರ್ದಮಾನಸ್ಯ ದೀಪ್ಯಮಾನಸ್ಯ ತೇಜಸಾ ।
ಬಭೂವ ರೂಪಂ ದುರ್ಧರ್ಷಂ ದೀಪ್ತಸ್ಯೇವ ವಿಭಾವಸೋಃ ॥ ೧೪

ಆತ್ಮಾನಮಪ್ರಹರಣಂ ಜ್ಞಾತ್ವಾ ಕ್ರೋಧಸಮನ್ವಿತಃ ।
ಶೈಲಮುತ್ಪಾಟಯಾಮಾಸ ವೇಗೇನ ಹರಿಪುಂಗವಃ ॥ ೧೫

ತಂ ಗೃಹೀತ್ವಾ ಮಹಾಶೈಲಂ ಪಾಣಿನೈಕೇನ ಮಾರುತಿಃ ।
ಸ ವಿನದ್ಯ ಮಹಾನಾದಂ ಭ್ರಾಮಯಾಮಾಸ ವೀರ್ಯವಾನ್ ॥ ೧೬

ತತಸ್ತಮಭಿದುದ್ರಾವ ರಾಕ್ಷಸೇಂದ್ರಮಕಂಪನಮ್ ।
ಪುರಾ ಹಿ ನಮುಚಿಂ ಸಂಖ್ಯೇ ವಜ್ರೇಣೇವ ಪುರಂದರಃ ॥ ೧೭

ಅಕಂಪನಸ್ತು ತದ್ದೃಷ್ಟ್ವಾ ಗಿರಿಶೃಂಗಂ ಸಮುದ್ಯತಮ್ ।
ದೂರಾದೇವ ಮಹಾಬಾಣೈರರ್ಧಚಂದ್ರೈರ್ವ್ಯದಾರಯತ್॥ ೧೮

---

ಅತ್ಯಂತ ಬಲಶಾಲಿಯಾದ ಆಂಜನೇಯನು ಅಕಂಪನನ ತೀಕ್ಷ್ಣ ಶರವೃಷ್ಟಿಯನ್ನು ಲೆಕ್ಕಿಸದೆ, ಆ ರಾಕ್ಷಸನನ್ನು ಸಂಹರಿಸಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡನು. ತೇಜೋನಿಧಿಯಾದ ಆ ವಾಯುಪುತ್ರನು, ನೆರವು ನಡುಗಿತೋ ಎಂಬಂತೆ ರಭಸದಿಂದ ಹೆಜ್ಜೆಯಿಡುತ್ತ ಮುಂದೆ ನುಗ್ಗಿದನು (೧೨-೧೩). ಸಿಂಹನಾದಗೈಯುತ್ತ ತೇಜೋವಿಶೇಷದಿಂದ ತೊಳತೊಳಗುತ್ತಿದ್ದ ಹನುಮಂತನ ರೂಪವು ಪ್ರಜ್ವಲಿಸುವ ಸೂರ್ಯಮಂಡಲದಂತೆ ಬೆಳಗಿತು. ಕ್ರೋಧಾವಿಷ್ಟನಾದ ಆ ವಾನರೋತ್ತಮನು ತನ್ನ ಬಳಿ ಯಾವ ಆಯುಧವೂ ಇಲ್ಲದುದನ್ನು ಕಂಡು, ಸಮೀಪದಲ್ಲಿದ್ದ ಒಂದು ಶೈಲವನ್ನು ಕಿತ್ತನು (೧೪-೧೫). ವೀರನಾದ ಮಾರುತಾತ್ಮಜನು ಆ ಶೈಲವನ್ನೆತ್ತಿ ಒಂದು ಕೈಯಿಂದಲೇ ತಿರುಗಿಸುತ್ತ ಸಿಂಹನಾದಗೈದು ಅಕಂಪನನ ಕಡೆಗೆ ನುಗ್ಗಿದನು. ಹಿಂದೆ ನಮುಚಿಯನ್ನು ಕೊಲ್ಲುವಾಗ ವಜ್ರಾಯುಧವನ್ನು ಹಿಡಿದ ಇಂದ್ರನಂತೆ, ಆ ಹನುಮಂತನು ಶೈಲವನ್ನು ಹಿಡಿದು ನುಗ್ಗಿ ಅಕಂಪನನಮೇಲೆ ಬೀಸಲು, ಆ ರಾಕ್ಷಸನು

ತತ್ಪರ್ವತಾಗ್ರಮಾಕಾಶೇ ರಕ್ಷೋಬಾಣವಿದಾರಿತಮ್ ।
ವಿಶೀರ್ಣಂ ಪತಿತಂ ದೃಷ್ಟ್ವಾ ಹನುಮಾನ್ ಕ್ರೋಧಮೂರ್ಛಿತಃ ॥

ಸೋಽಶ್ವಕರ್ಣಂ ಸಮಾಸಾದ್ಯ ರೋಷದರ್ಪಾನ್ವಿತೋ ಹರಿಃ ।
ತೋರ್ಣಮುತ್ಪಾಟಯಾಮಾಸ ಮಹಾಗಿರಿಮಿವೋಚ್ಛ್ರಿತಮ್ ॥ ೨೦

ತಂ ಗೃಹೀತ್ವಾ ಮಹಾಸ್ಕಂಧಂ ಸೋಽಶ್ವಕರ್ಣಂ ಮಹಾದ್ಯುತಿಃ ।
ಪ್ರಹಸ್ಯ ಪರಯಾ ಪ್ರೀತ್ಯಾ ಭ್ರಾಮಯಾಮಾಸ ಸಂಯುಗೇ ॥ ೨೧

ಪ್ರಧಾವನ್ನೂರುವೇಗೇನ ಪ್ರಭಂಜಂಸ್ತರಸಾ ದ್ರುಮಾನ್ ।
ಹನುಮಾನ್ ಪರಮಕ್ರುದ್ಧಶ್ಚರಣೈರ್ದಾರಯನ್ ಕ್ಷಿತಿಮ್ ॥ ೨೨

ಗಜಾಂಶ್ಚ ಸಗಜಾರೋಹಾನ್ ಸರಥಾನ್ ರಥಿನಸ್ತಥಾ ।
ಜಘಾನ ಹನುಮಾನ್ ಧೀಮಾನ್ ರಾಕ್ಷಸಾಂಶ್ಚ ಪದಾತಿಗಾನ್ ॥ ೨೩

ತಮಂತಕಮಿವ ಕ್ರುದ್ಧಂ ಸಮರೇ ಪ್ರಾಣಹಾರಿಣಮ್ ।
ಹನುಮಂತಮಭಿಪ್ರೇಕ್ಷ್ಯ ರಾಕ್ಷಸಾ ವಿಪ್ರದುದ್ರುವುಃ ॥ ೨೪

---

ಅರ್ಧಚಂದ್ರಾಕಾರದ ಬಾಣವನ್ನು ಪ್ರಯೋಗಿಸಿ ಶೈಲವನ್ನು ದೂರದಿಂದಲೇ ತುಂಡರಿಸಿದನು (೧೬–೧೭). ಆಕಾಶಮಾರ್ಗದಲ್ಲಿ ಪರ್ವತವು ಅಕಂಪನನಿಂದ ತುಂಡರಿಸಲ್ಪಟ್ಟು ಬಿದ್ದುದನ್ನು ನೋಡಿ ಹನುಮಂತನು ರೋಷಾವಿಷ್ಟನಾದನು, ಅವನು ಪರ್ವತಾಕಾರದ ಒಂದು ಅಶ್ವಕರ್ಣವೃಕ್ಷದ ಬಳಿಗೆ ಹೋಗಿ ದರ್ಪದಿಂದ ಅದನ್ನು ಕಿತ್ತನು. ತೇಜೋರಾಶಿಯಾದ ಆ ವೀರನು ವೃಕ್ಷವನ್ನು ಕಿತ್ತು ಅಟ್ಟಹಾಸದಿಂದ ನಕ್ಕು, ವೃಕ್ಷವನ್ನು ಬೀಸಿಹೊಡೆಯುತ್ತ ರಾಕ್ಷಸರನ್ನು ಮರ್ದಿಸತೊಡಗಿದನು (೧೯–೨೧). ಆ ಧೀರನು ತೊಡೆಗಳ ವೇಗದಿಂದಲೇ ಮರಗಳನ್ನುರುಳಿಸುತ್ತ, ಪಾದಾಘಾತದಿಂದ ಭೂಮಿಯನ್ನು ನಡುಗಿಸುತ್ತ, ವೃಕ್ಷದಿಂದಪ್ಪಳಿಸಿ ಆನೆಗಳನ್ನು ಕೊಂದು, ಮಾವುತರನ್ನು ಮರ್ದಿಸಿ, ರಥಗಳನ್ನು ಪುಡಿಗೈದು, ರಥಿಕರನ್ನು ಸಂಹರಿಸಿ, ಕಾಲಾಳ್ಗಳಾದ ರಾಕ್ಷಸರನ್ನು ವಧಿಸುತ್ತ ನಡೆದನು (೨೨–೨೩). ರುಷ್ಟನಾದ ಯಮನಂತೆ, ಸಮರದಲ್ಲೆದುರಿಸಿದ ಭಟರನ್ನು ಕೊಲ್ಲುತ್ತ ನಡೆದ ಹನುಮಂತನನ್ನು ಕಂಡು, ರಾಕ್ಷಸರು ತೋರಿದ ಕಡೆಗೆ ಪಲಾಯನಮಾಡಿದರು. (೨೪).

ತಮಾಪತಂತಂ ಸಂಕ್ರುದ್ಧಂ ರಾಕ್ಷಸಾನಾಂ ಭಯಾವಹಮ್ ।
ದದರ್ಶಾಕಂಪನೋ ವೀರಶ್ಚುಕ್ರೋಧ ಚ ನನಾದ ಚ ॥ ೨೫

ಸ ಚತುರ್ದಶಭಿರ್ಬಾಣೈಃ ಶಿತೈರ್ದೇಹವಿದಾರಣೈಃ ।
ನಿರ್ಬಿಭೇದ ಹನೂಮಂತಂ ಮಹಾವೀರ್ಯಮಕಂಪನಃ ॥ ೨೬

ಸ ತದಾ ಪ್ರತಿವಿದ್ಧಸ್ತು ಬಹ್ವೀಭಿಃ ಶರವೃಷ್ಟಿಭಿಃ ।
ಹನುಮಾನ್ ದದೃಶೇ ವೀರಃ ಪ್ರರೂಢ ಇವ ಸಾನುಮಾನ್ ॥ ೨೭

ವಿರರಾಜ ಮಹಾಕಾಯೋ ಮಹಾವೀರ್ಯೋ ಮಹಾಮನಾಃ ।
ಪುಷ್ಪಿತಾಶೋಕಸಂಕಾಶೋ ವಿಧೂಮ ಇವ ಪಾವಕಃ ॥ ೨೮

ತತೋಽನ್ಯಂ ವೃಕ್ಷಮುತ್ಪಾಟ್ಯ ಕೃತ್ವಾ ವೇಗಮನುತ್ತಮಮ್ ।
ಶಿರಸ್ಯಭಿಜಘಾನಾಶು ರಾಕ್ಷಸೇಂದ್ರಮಕಂಪನಮ್ ॥ ೨೯

ಸ ವೃಕ್ಷೇಣ ಹತಸ್ತೇನ ಸಕ್ರೋಧೇನ ಮಹಾತ್ಮನಾ ।
ರಾಕ್ಷಸೋ ವಾನರೇಂದ್ರೇಣ ಪಪಾತ ಚ ಮಮಾರ ಚ ॥ ೩೦

ತಂ ದೃಷ್ಟ್ವಾ ನಿಹತಂ ಭೂಮೌ ರಾಕ್ಷಸೇಂದ್ರಮಕಂಪನಮ್ ।
ವ್ಯಥಿತಾ ರಾಕ್ಷಸಾಃ ಸರ್ವೇ ಕ್ಷಿತಿಕಂಪ ಇವ ದ್ರುಮಾಃ ॥ ೩೧

---

ಹೀಗೆ ರಾಕ್ಷಸಭಯಂಕರನಾದ ಹನುಮಂತನು ಕ್ರುದ್ಧನಾಗಿ ನುಗ್ಗಿ ಬರುವುದನ್ನು ನೋಡಿ ಅಕಂಪನನು ಕೋಪದಿಂದ ಸಿಂಹನಾದಮಾಡಿದನು. ದೇಹವನ್ನು ಸೀಳಬಲ್ಲ ಹರಿತವಾದ ಹದಿನಾಲ್ಕು ಸರಳುಗಳನ್ನು ಪ್ರಯೋಗಿಸಿ ಹನುಮಂತನ ದೇಹವನ್ನು ಕೆತ್ತಿದನು (೨೫–೨೬). ಮಹಾವೀರನಾದ ಹನುಮಂತನ ದೇಹದಲ್ಲಿ ಶರಪರಂಪರೆಗಳು ನಾಟಿಕೊಳ್ಳಲು, ವೃಕ್ಷಗಳಿಂದ ತುಂಬಿದ ಮಹಾಪರ್ವತದಂತೆ ಆತನು ಗೋಚರಿಸಿದನು. ಬೃಹಚ್ಛರೀರನೂ ವೀರಾಗ್ರೇಸರನೂ ಅಪ್ರತಿಮಧೀರನೂ ಆದ ಹನುಮಂತನು ಅರಳಿದ ಅಶೋಕ ವೃಕ್ಷದಂತೆಯೂ ಹೊಗೆಯಿಲ್ಲದ ಅಗ್ನಿಯಂತೆಯೂ ವಿರಾಜಿಸಿದನು (೨೭–೨೮). ಅನಂತರ ಆಂಜನೇಯನು ಅಪ್ರತಿಮವೇಗವನ್ನಲಂಬಿಸಿ ಇನ್ನೊಂದು ವೃಕ್ಷವನ್ನು ಕಿತ್ತುತಂದು, ರಾಕ್ಷಸಸೇನಾಪತಿಯಾದ ಅಕಂಪನನ ಶಿರಸ್ಸಿನಮೇಲೆ ಅಪ್ಪಳಿಸಿಹೊಡೆದನು (೨೯). ಕ್ರುದ್ಧನಾದ ಆ ವಾನರವೀರನು ವೃಕ್ಷದಿಂದ ಅಪ್ಪಳಿಸಿದೊಡನೆ, ರಾಕ್ಷಸನು ಹತನಾಗಿ ನೆಲದಮೇಲೊರಗಿದನು. ಸೇನಾಪತಿಯಾದ ಅಕಂಪನನು ನೆಲದಮೇಲೆ ಹತನಾಗಿ ಬಿದ್ದೊಡನೆ, ಭೂಕಂಪವಾಗಿ

ತ್ಯಕ್ತಪ್ರಹರಣಾಃ ಸರ್ವೇ ರಾಕ್ಷಸಾಸ್ತೇ ಪರಾಜಿತಾಃ ।
ಲಂಕಾಮಭಿಯಯುಸ್ತ್ರಸ್ತಾ ವಾನರೈಸ್ತೈರಭಿದ್ರುತಾಃ ॥ ೩೨

ತೇ ಮುಕ್ತಕೇಶಾಃ ಸಂಭ್ರಾಂತಾ ಭಗ್ನಮಾನಾಃ ಪರಾಜಿತಾಃ ।
ಸ್ರವಚ್ಛ್ರಮಜಲೈರಂಗೈಃ ಶ್ವಸಂತೋ ವಿಪ್ರದುದ್ರುವುಃ ॥ ೩೩

ಅನ್ಯೋನ್ಯಂ ಪ್ರಮಮಂಥುಸ್ತೇ ವಿವಿಶುರ್ನಗರಂ ಭಯಾತ್ ।
ಪೃಷ್ಠತಸ್ತೇ ಹನೂಮಂತಂ ಪ್ರೇಕ್ಷಮಾಣಾ ಮುಹುರ್ಮುಹುಃ ॥ ೩೪

ತೇಷು ಲಂಕಾಂ ಪ್ರವಿಷ್ಟೇಷು ರಾಕ್ಷಸೇಷು ಮಹಾಬಲಾಃ ।
ಸಮೇತ್ಯ ಹರಯಃ ಸರ್ವೇ ಹನುಮಂತಮಪೂಜಯನ್ ॥ ೩೫

ಸೋಽಪಿ ಪ್ರಹೃಷ್ಟಸ್ತಾನಥ ಸರ್ವಾನ್ ಹರೀನ್ ಪ್ರತ್ಯಭ್ಯಪೂಜಯತ್।
ಹನುಮಾನ್ ಸತ್ತ್ವಸಂಪನ್ನೋ ಯಥಾರ್ಹಮನುಕೂಲತಃ ॥ ೩೬

ವಿನೇದುಶ್ಚ ಯಥಾಪ್ರಾಣಂ ಹರಯೋ ಜಿತಕಾಶಿನಃ ।
ಚಕೃಷುಶ್ಚ ಪುನಸ್ತತ್ರ ಸಪ್ರಾಣಾನಪಿ ರಾಕ್ಷಸಾನ್ ॥ ೩೭

---

ಮರಗಳೆಲ್ಲವೂ ನಡುಗುವಂತೆ ರಾಕ್ಷಸರು ತರತರನೆ ಭಯದಿಂದ ನಡುಗಿದರು (೩೦–೩೧). ಪರಾಜಿತರಾದ ಆ ರಾಕ್ಷಸರ ಆಯುಧಗಳನ್ನು ಅಲ್ಲಲ್ಲಿಯೇ ಬಿಸುಟು ಲಂಕಾಭಿಮುಖವಾಗಿ ಪಲಾಯನಮಾಡಿದರು. ವಾನರರು ಅವರನ್ನು ಬೆನ್ನಟ್ಟಿಹೋದರು. ಪರಾಜಿತರಾದ ರಾಕ್ಷಸರು ದರ್ಪವಡಗಿತು. ಭಯದಿಂದ ತಲ್ಲಣಿಸುತ್ತ ಬಿಚ್ಚು ಕೂದಲೊಡನೆ ಓಡಿ ಓಡಿ ಹೋದರು. ಅಂಗಗಳಿಂದ ಬೆವರು ಹರಿಯಿತು. ಏದು ಏದುತ್ತ ಧಾವಿಸಿದರು (೩೨–೩೩). ಒಬ್ಬರನ್ನೊಬ್ಬರು ನೂಕುತ್ತ ಹನುಮಂತನು ಬಂದನೋ ಎಂದು ಆಗಾಗ ಹಿಂದಿರುಗಿ ನೋಡುತ್ತ ಓಡುತ್ತ ಲಂಕೆಯೊಳಗೆ ಸೇರಿಕೊಂಡರು ಹೀಗೆ ಆ ರಾಕ್ಷಸಭಟರೆಲ್ಲರೂ ಲಂಕೆಯೊಳಗೆ ಓಡಿಹೋಗಲು, ಇತ್ತ ಸಮಸ್ತ ಕಪಿಗಳೂ ಹನುಮಂತನನ್ನು ಕೊಂಡಾಡಿದರು (೩೪–೩೫). ಬಲಶಾಲಿಯಾದ ಹನುಮಂತನು ಸಂಪ್ರೀತನಾಗಿ ಅವರೆಲ್ಲರನ್ನೂ ಯಥಾರ್ಹವಾಗಿ ಮನ್ನಿಸಿ ಆದರದಿಂದ ಮಾತಾಡಿ ಗೌರವಿಸಿದನು, ಜಯಶಾಲಿಗಳಾದ ವಾನರರು ಶಕ್ತಿಮೀರಿ ಉಚ್ಚಧ್ವನಿಯಿಂದ ಸಿಂಹನಾದಮಾಡಿದರು. ಆ ರಣಭೂಮಿಯಲ್ಲಿ ರಾಕ್ಷಸರು ಎಲ್ಲಾದರೂ

ಸ ವೀರಶೋಭಾಮಭಜನ್ಮಹಾ ಕಪಿಃ
　　ಸಮೇತ್ಯ ರಕ್ಷಾಂಸಿ ನಿಹತ್ಯ ಮಾರುತಿಃ ।
ಮಹಾಸುರಂ ಭೀಮಮಮಿತ್ರನಾಶನಂ
　　ಯಥೈವ ವಿಷ್ಣುರ್ಬಲಿನಂ ಚಮೂಮುಖೇ ॥ ೩೮

ಅಪೂಜಯನ್ ದೇವಗಣಾಸ್ತದಾ ಕಪಿಂ
　　ಸ್ವಯಂ ಚ ರಾಮೋಽತಿಬಲಶ್ಚ ಲಕ್ಷ್ಮಣಃ ।
ತಥೈವ ಸುಗ್ರೀವಮುಖಾಃ ಪ್ಲವಂಗಮಾ
　　ವಿಭೀಷಣಶ್ಚೈವ ಮಹಾಬಲಸ್ತಥಾ ॥ ೩೯

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಟ್‌ಪಂಚಾಶಃ ಸರ್ಗಃ

---

ಜೀವದಿಂದ ಉಳಿದಿದ್ದರೆ, ಕಪಿಗಳು ಅವರನ್ನು ಹಿಡಿದೆಳೆದು ಹಿಂಸಿಸುತ್ತಿದ್ದರು (೩೬–೩೭). ಹೀಗೆ ಮಾರುತಪುತ್ರನಾದ ಆ ಮಹಾಕಪಿಯು ರಾಕ್ಷಸರನ್ನೂ ಭೀಮಬಲನಾದ ಅಕಂಪನಾಸುರನನ್ನೂ ಸಂಹರಿಸಿ, ಹಿಂದೆ ಬಲಶಾಲಿಯಾದ ಕೈಟಭಾಸುರನನ್ನು ಸಂಹರಿಸಿದ ಮಹಾವಿಷ್ಣುವಿನಂತೆ, ರಣರಂಗದಲ್ಲಿ ವೀರ ಲಕ್ಷ್ಮೀಸಮೇತನಾಗಿ ವಿರಾಜಿಸಿದನು (೩೮). ಆಗ ದೇವತೆಗಳೂ ಶ್ರೀರಾಮ ಲಕ್ಷ್ಮಣರೂ ಸುಗ್ರೀವನ್ನೇ ಮೊದಲಾದ ಕಪಿನಾಯಕರೂ ವಿಭೀಷಣನೂ ಹನುಮಂತನ ಪರಾಕ್ರಮಕ್ಕೆ ಮೆಚ್ಚಿ ಅವನನ್ನು ಕೊಂಡಾಡಿದರು (೩೯).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಐವತ್ತಾರನೆಯ ಸರ್ಗ

---

## ಸಪ್ತಪಂಚಾಶಃ ಸರ್ಗಃ

### ಪ್ರಹಸ್ತಯುದ್ಧಮ್

ಅಕಂಪನವಧಂ ಶ್ರುತ್ವಾ ಕ್ರುದ್ಧೋ ವೈ ರಾಕ್ಷಸೇಶ್ವರಃ ।
ಕಿಂಚಿದ್ದೀನಮುಖಶ್ಚಾಪಿ ಸಚಿವಾಂಸ್ತಾನುದೈಕ್ಷತ ॥ ೧

ಸ ತು ಧ್ಯಾತ್ವಾ ಮುಹೂರ್ತಂ ತು ಮಂತ್ರಿಭಿಃ ಸಂವಿಚಾರ್ಯ ಚ ।
ತತಸ್ತು ರಾವಣಃ ಪೂರ್ವದಿವಸೇ ರಾಕ್ಷಸಾಧಿಪಃ ॥ ೨

ಪುರೀಂ ಪರಿಯಯೌ ಲಂಕಾಂ ಸರ್ವಾನ್ ಗುಲ್ಮಾನವೇಕ್ಷಿತುಮ್ ।
ತಾಂ ರಾಕ್ಷಸಗಣೈರ್ಗುಪ್ತಾಂ ಗುಲ್ಮೈರ್ಬಹುಭಿರಾವೃತಾಮ್ ॥ ೩

ದದರ್ಶ ನಗರೀಂ ಲಂಕಾಂ ಪತಾಕಾಧ್ವಜಮಾಲಿನೀಮ್।
ರುದ್ಧಾಂ ತು ನಗರೀಂ ದೃಷ್ಟ್ವಾ ರಾವಣೋ ರಾಕ್ಷಸೇಶ್ವರಃ ॥ ೪

ಉವಾಚಾಮರ್ಷತಃ ಕಾಲೇ ಪ್ರಹಸ್ತಂ ಯುದ್ಧ ಕೋವಿದಮ್
ಪುರಸ್ಯೋಪನಿವಿಷ್ಟಸ್ಯ ಸಹಸಾ ಪೀಡಿತಸ್ಯ ಚ ॥ ೫

### ಸರ್ಗ ೫೭

ಪ್ರಹಸ್ತನು ಯುದ್ಧ ಮಾಡುವುದಕ್ಕಾಗಿ ತನ್ನ ಸೇನೆಯೊಡನೆ ಹೊರಡುವುದು.

ಅಕಂಪನನ ವಧೆಯನ್ನು ಕೇಳಿ ರಾಕ್ಷಸೇಶ್ವರನು ಕ್ರುದ್ಧನಾದನು. ಅವನ ಮುಖದ ಕಳೆ ಕೊಂಚ ಇಳಿಯಿತು. ಸಚಿವರನ್ನೊಮ್ಮೆ ದಿಟ್ಟಿಸಿ ನೋಡಿದನು. ಅನಂತರ ತನ್ನಲ್ಲಿ ತಾನೇ ಸ್ವಲ್ಪಕಾಲ ಆಲೋಚಿಸಿ, ಮಂತ್ರಿಗಳೊಡನೆ ವಿಚಾರ ಮಾಡಿ, ಮರುದಿನ ಪ್ರಾತಃಕಾಲದಲ್ಲಿ ತನ್ನ ಸೇನಾವಿಭಾಗವನ್ನೊಮ್ಮೆ ನೋಡಲು ಹೊರಟನು (೧–೨). ವಿವಿಧರೀತಿಯ ರಾಕ್ಷಸರ ಪಡೆಗಳಿಂದ ರಕ್ಷಿತವಾಗಿ ಧ್ವಜ ಪತಾಕೆಗಳಿಂದ ಶೋಭಿಸುತ್ತಿದ್ದ ಲಂಕಾನಗರವನ್ನು ಸುತ್ತಾಡಿ ಪರಿಶೀಲಿಸಿದನು. ತನ್ನ ನಗರವನ್ನು ವಾನರರು ಲಗ್ಗೆ ಹತ್ತಿದರಲ್ಲ ಎಂಬ ಅಮರ್ಷದಿಂದ ಉರಿದೆದ್ದ ರಾವಣನು ಯುದ್ಧಕೋವಿದನಾದ ಪ್ರಹಸ್ತವನ್ನು ನೋಡಿ ಹೀಗೆಂದನು (೩–೪): ''ಪ್ರಹಸ್ತ ಶತ್ರುಸೇನೆಯು ರಾಜಧಾನಿಯ ಸಮೀಪದಲ್ಲಿ ಬಂದಿಳಿದು ಮುತ್ತಿಗೆ ಹಾಕಿದಾಗ, ಯುದ್ಧವಲ್ಲದೆ ಬೇರೆ ಯಾವ ಮಾರ್ಗದಿಂದಲೂ ಬಿಡುಗಡೆಯಿಲ್ಲವೆಂದು ನನಗೆ ತೋರುತ್ತದೆ. ರಣಕೋವಿದನಾದ ನಿನಗೆ ಇದು

ನಾನ್ಯಂ ಯುದ್ಧಾತ್ಪ್ರಪಶ್ಯಾಮಿ ಮೋಕ್ಷಂ ಯುದ್ಧವಿಶಾರದ ।
ಅಹಂ ವಾ ಕುಂಭಕರ್ಣೋ ವಾ ತ್ವಂ ವಾ ಸೇನಾಪತಿರ್ಮಮ ॥ ೬

ಇಂದ್ರಜಿದ್ವಾ ನಿಕುಂಭೋ ವಾ ವಹೇಯುರ್ಭಾರಮೀದೃಶಮ್ ।
ಸ ತ್ವಂ ಬಲಮತಃ ಶೀಘ್ರಮಾದಾಯ ಪರಿಗೃಹ್ಯ ಚ ॥ ೭

ವಿಜಯಾಯಾಭಿನಿರ್ಯಾಹಿ ಯತ್ರ ಸರ್ವೇ ವನೌಕಸಃ ।
ನಿರ್ಯಾಣಾದೇವ ತೇ ನೂನಂ ಚಪಲಾ ಹರಿವಾಹಿನೀ ॥ ೮

ನರ್ದತಾಂ ರಾಕ್ಷಸೇಂದ್ರಾಣಾಂ ಶ್ರುತ್ವಾ ನಾದಂ ದ್ರವಿಷ್ಯತಿ ।
ಚಪಲಾ ಹ್ಯವಿನೀತಾಶ್ಚ ಚಲಚಿತ್ತಾಶ್ಚ ವಾನರಾಃ ॥ ೯

ನ ಸಹಿಷ್ಯಂತಿ ತೇ ನಾದಂ ಸಿಂಹನಾದಮಿವ ದ್ವಿಪಾಃ ।
ವಿದ್ರುತೇ ಚ ಬಲೇ ತಸ್ಮಿನ್ ರಾಮಃ ಸೌಮಿತ್ರಿಣಾ ಸಹ ॥ ೧೦

ಅವಶಸ್ತೇ ನಿರಾಲಂಬಃ ಪ್ರಹಸ್ತವಶಮೇಷ್ಯತಿ ।
ಆಪತ್ಸಂಶಯಿತಾ ಶ್ರೇಯೋ ನ ತು ನಿಃಸಂಶಯೀಕೃತಾ ॥ ೧೧

---

ತಿಳಿಯದ ವಿಷಯವಲ್ಲ (೫). ಈ ಕಾರ್ಯಭಾರವನ್ನು ನಾನೇ ವಹಿಸಿಕೊಳ್ಳಬೇಕು. ಇಲ್ಲವೆ, ಕುಂಭಕರ್ಣನೋ ಸೇನಾನಿಯಾದ ನೀನೋ ವಹಿಸಿಕೊಳ್ಳಬೇಕು. ಅಥವಾ ಇಂದ್ರಜಿತುವೋ ನಿಕುಂಭನೋ ಈ ಬಗೆಯ ಹೊಣೆಯನ್ನು ನಿರ್ವಹಿಸಬಲ್ಲರು. ಆದ್ದರಿಂದ, ಬಲಶಾಲಿಯಾದ ನೀನು ಸೇನೆಯೊಡನೆ ಯುದ್ಧಸನ್ನದ್ಧನಾಗಿ ಹೊರಡು (೬–೭). ವಾನರಸೇನೆಯಲ್ಲಿ ನುಗ್ಗಿ ವಿಜಯಶಾಲಿಯಾಗಿ ಬಾ. ನೀನು ಯುದ್ಧೋನ್ಮುಖನಾಗಿ ಹೊರಟೆಯೆಂದರೆ, ಚಪಲಸ್ವಭಾವದ ಕಪಿಸೇನೆಯು ರಾಕ್ಷಸಭಟರ ಗರ್ಜನೆಯನ್ನು ಕೇಳಿಯೇ ಹೆದರಿ ಪಲಾಯನಮಾಡುವುದು! ಚಂಚಲಚಿತ್ತರಾದ ಆ ಮಂಗಗಳು ಎದೆಗಾರಿಕೆಯವರೂ ಅಲ್ಲ, ಯುದ್ಧದಲ್ಲಿ ಪಳಗಿದವರೂ ಅಲ್ಲ! (೮–೯). ಸಿಂಹಗರ್ಜನೆಯನ್ನು ಕೇಳಿದ ಆನೆಗಳಂತೆ, ನಿನ್ನ ಸಿಂಹನಾದವನ್ನು ಕೇಳಿದೊಡನೆ ಹೆದರಿ ಓಡಿಹೋಗುವರು ! ಪ್ರಹಸ್ತ, ಕಪಿಸೇನೆಯು ಓಡಿಹೋಯಿತೆಂದರೆ, ರಾಮಲಕ್ಷ್ಮಣರು ನಿರಾಲಂಬರಾಗಿ ನಿನ್ನ ಕೈಗೆ ಸಿಕ್ಕಿಬೀಳುವರು. ಅವರಿಗೆ ಬೇರೆ ದಾರಿಯೇ ಉಳಿಯುವುದಿಲ್ಲ (೧೦). ಜಯವಾಗುವುದೋ ಅಪಜಯವಾಗುವುದೋ ಎಂದು ಸಂಶಯವಾದಾಗ, ಆಪತ್ತನ್ನೆದುರಿಸಿ ಹೋರಾಡುವುದೇ

ಪ್ರತಿಲೋಮಾನುಲೋಮಂ ವಾ ಯದ್ವಾ ನೋ ಮನ್ಯಸೇ ಹಿತಮ್ ।
ರಾವಣೇನೈವಮುಕ್ತಸ್ತು ಪ್ರಹಸ್ತೋ ವಾಹಿನೀಪತಿಃ ॥ ೧೨

ರಾಕ್ಷಸೇಂದ್ರಮುವಾಚೇದಮಸುರೇಂದ್ರಮಿವೋಶನಾ ।
ರಾಜನ್ ಮಂತ್ರಿತಪೂರ್ವಂ ನಃ ಕುಶಲೈಃ ಸಹ ಮಂತ್ರಿಭಿಃ ॥ ೧೩

ವಿವಾದಶ್ಚಾಪಿ ನೋ ವೃತ್ತಃ ಸಮವೇಕ್ಷ್ಯ ಪರಸ್ಪರಮ್ ।
ಪ್ರದಾನೇನ ತು ಸೀತಾಯಾಃ ಶ್ರೇಯೋ ವ್ಯವಸಿತಂ ಮಯಾ ॥ ೧೪

ಅಪ್ರದಾನೇ ಪುನರ್ಯುದ್ಧಂ ದೃಷ್ಟಮೇತತ್ತಥೈವ ನಃ ।
ಸೋಽಹಂ ದಾನೈಶ್ಚ ಮಾನೈಶ್ಚ ಸತತಂ ಪೂಜಿತಸ್ತ್ವಯಾ ॥ ೧೫

ಸಾಂತ್ವೈಶ್ಚ ವಿವಿಧೈಃ ಕಾಲೇ ಕಿಂ ನ ಕುರ್ಯಾಂ ಪ್ರಿಯಂ ತವ ।
ನ ಹಿ ಮೇ ಜೀವಿತಂ ರಕ್ಷ್ಯಂ ಪುತ್ರದಾರಧನಾನಿ ವಾ ॥ ೧೬

---

ಶ್ರೇಯಸ್ಕರವೆಂದು ನನ್ನ ಅಭಿಪ್ರಾಯ. ಆ ಸಮಯದಲ್ಲಿ ಸುಮ್ಮನಿದ್ದು ಆಪತ್ತನ್ನು ನಿಶ್ಚಯವಾಗಿ ಬರಮಾಡಿಕೊಳ್ಳುವುದು ಯುಕ್ತವಲ್ಲ. (೧೧). ಪ್ರಹಸ್ತ, ನಿನ್ನ ಅಭಿಪ್ರಾಯವು ಇದಕ್ಕೆ ವಿರುದ್ಧವಾಗಿರಲಿ–ಅನುಗುಣವಾಗಿರಲಿ, ಈಗ ನಮಗೆ ಹಿತಕರವಾವುದೆಂಬುದನ್ನು ಹೇಳು'' ಎಂದನು. ರಾವಣನು ಹೀಗೆನ್ನಲು ಸೇನಾನಿಯಾದ ಪ್ರಹಸ್ತನು, ದೈತ್ಯೇಂದ್ರನಿಗೆ ಶುಕ್ರಾಚಾರ್ಯನು ವಿವೇಕದಿಂದ ಮಂತ್ರಾಲೋಚನೆಯನ್ನು ಹೇಳುವಂತೆ, ''ಮಹಾರಾಜ, ಈ ಯುದ್ಧದ ವಿಷಯದಲ್ಲಿ ಕುಶಲರಾದ ಮಂತ್ರಿಗಳೊಡನೆ ಹಿಂದೆ ವಿಚಾರ ಮಾಡಿದ್ದಾಗಿದೆ (೧೨–೧೩). ಒಬ್ಬೊಬ್ಬರು ಒಂದೊಂದು ಅಭಿಪ್ರಾಯವನ್ನು ಕೊಟ್ಟಾಗ ನಮ್ಮಲ್ಲಿಯೇ ವಿವಾದ ಉಂಟಾಯಿತು. ಸೀತೆಯನ್ನು ರಾಮನಿಗೆ ಒಪ್ಪಿಸುವುದೇ ಶ್ರೇಯಸ್ಕರವೆಂದು ನನ್ನ ಆಶಯವಾಗಿತ್ತು. ಅವಳನ್ನು ಒಪ್ಪಿಸದಿದ್ದರೆ ಯುದ್ಧವೇ ಗತಿಯೆಂದು ನಿಶ್ಚಿತವಾಗಿತ್ತು. ಅದು ಹಾಗೆಯೇ ಆಯಿತು. ಮುಖ್ಯವಾಗಿ, ಮಹಾರಾಜ. ನನ್ನನ್ನು ದಾನಮಾನಗಳಿಂದ ಸತತವಾಗಿ ಆದರಿಸಿ ಗೌರವಿಸಿದ್ದೀಯೆ (೧೪–೧೫). ನನ್ನ ಕಷ್ಟಕಾಲದಲ್ಲಿ ಬಗೆಬಗೆಯಾಗಿ ಸಂತೈಸಿ ಉಪಕಾರಮಾಡಿದ್ದೀಯೆ ಹೀಗಿರುವಾಗ ನಿನ್ನ ಮನಃಪ್ರೀತಿಗಾಗಿ ಯಾವ ಕಾರ್ಯವನ್ನು ನಾನು ಮಾಡದೆ ಇದ್ದೇನು? ಈ ಕರ್ತವ್ಯವನ್ನು ಬಿಟ್ಟು ನನ್ನ

ತ್ವಂ ಪಶ್ಯ ಮಾಂ ಜುಹೂಷಂತಂ ತ್ವದರ್ಥಂ ಜೀವಿತಂ ಯುಧಿ ।
ಏವಮುಕ್ತ್ವಾ ತು ಭರ್ತಾರಂ ರಾವಣಂ ವಾಹಿನೀಪತಿಃ ॥ ೧೭

ಉವಾಚೇದಂ ಬಲಾಧ್ಯಕ್ಷಾನ್ ಪ್ರಹಸ್ತಃ ಪುರತಃ ಸ್ಥಿತಾನ್ ।
ಸಮಾನಯತ ಮೇ ಶೀಘ್ರಂ ರಾಕ್ಷಸಾನಾಂ ಮಹದ್ಬಲಮ್ ॥ ೧೮

ಮದ್ಬಾಣಾಶನಿವೇಗೇನ ಹತಾನಾಂ ಚ ರಣಾಜಿರೇ ।
ಅದ್ಯ ತೃಪ್ಯಂತು ಮಾಂಸಾದಾಃ ಪಕ್ಷಿಣಃ ಕಾನನೌಕಸಾಮ್ ॥ ೧೯

ಇತ್ಯುಕ್ತಾಸ್ತೇ ಪ್ರಹಸ್ತೇನ ಬಲಾಧ್ಯಕ್ಷಾಃ ಕೃತತ್ವರಾಃ ।
ಬಲಮುದ್ಯೋಜಯಾಮಾಸುಸ್ತಸ್ಮಿನ್ ರಾಕ್ಷಸಮಂದಿರೇ ॥ ೨೦

ಸಾ ಬಭೂವ ಮುಹೂರ್ತೇನ ತಿಗ್ಮನಾನಾವಿಧಾಯುಧೈಃ ।
ಲಂಕಾ ರಾಕ್ಷಸವೀರೈಸ್ತೈರ್ಗಜೈರಿವ ಸಮಾಕುಲಾ ॥ ೨೧

ಹುತಾಶನಂ ತರ್ಪಯತಾಂ ಬ್ರಾಹ್ಮಣಾಂಶ್ಚ ನಮಸ್ಯತಾಮ್ ।
ಆಜ್ಯಗಂಧಪ್ರತಿವಹಃ ಸುರಭಿರ್ಮಾರುತೋ ವವೌ ॥ ೨೨

---

ಪ್ರಾಣವನ್ನೋ ಹೆಂಡತಿ ಮಕ್ಕಳು ಐಶ್ವರ್ಯಗಳನ್ನೋ ನಾನು ರಕ್ಷಿಸಿಕೊಳ್ಳಬೇಕಾಗಿಲ್ಲ (೧೬). ಮಹಾಪ್ರಭು, ನಿನಗೋಸ್ಕರ ಯುದ್ಧ ಕುಂಡದಲ್ಲಿ ನನ್ನ ಪ್ರಾಣವನ್ನು ಹೋಮಮಾಡುವೆನು, ನೋಡುತ್ತಿರು!'' ಎಂದು ನುಡಿದನು. ಈ ರೀತಿಯಲ್ಲಿ ನುಡಿದು ಪ್ರಹಸ್ತನು ತನ್ನೆದುರಿಗಿದ್ದ ಬಲಾಧ್ಯಕ್ಷರನ್ನು ನೋಡಿ ''ಎಲೈ ಬಲಾಧ್ಯಕ್ಷರೆ, ಮಹತ್ತರವಾದ ನನ್ನ ರಾಕ್ಷಸಸೇನೆಯನ್ನು ಬರಮಾಡಿರಿ (೧೭–೧೮). ವಜ್ರಸಮಾನಗಳಾದ ನನ್ನ ಶರಗಳ ಹೊಡೆತದಿಂದ ಹತರಾದ ಕಪಿಗಳನ್ನು, ಮಾಂಸಭಕ್ಷಿಗಳಾದ ಪಕ್ಷಿಗಳು ರಣರಂಗದಲ್ಲಿ ಇಂದು ತಿಂದು ತೇಗಲಿ!'' ಎಂದನು. ಕೂಡಲೆ ಬಲಾಧ್ಯಕ್ಷರು ತ್ವರೆಯಿಂದ ಯೋಧರ ಪಡೆಗಳನ್ನು ಸಜ್ಜುಗೊಳಿಸಿದರು (೧೯–೨೦). ತುಸುಹೊತ್ತಿನಲ್ಲಿಯೇ ಲಂಕಾ ನಗರವು ನಾನಾವಿಧ ತೀಕ್ಷ್ಣಾಯುಧಗಳನ್ನು ಹಿಡಿದು ಆನೆಗಳಂತೆ ನುಗ್ಗುತ್ತಿದ್ದ ರಾಕ್ಷಸವೀರರಿಂದ ತುಂಬಿಹೋಯಿತು. ಯೋಧರು ಅಗ್ನಿಯಲ್ಲಿ ಆಜ್ಯಾಹುತಿಗಳನ್ನಿತ್ತು ಬ್ರಾಹ್ಮಣರನ್ನು ಗಂಧಪುಷ್ಪಾದಿಗಳಿಂದ ಸತ್ಕರಿಸಿದರು. ಆಜ್ಯಾಹುತಿಗಳ ಸುಗಂಧವನ್ನು ಹೊತ್ತಗಾಳಿಯು ಬೀಸಿತು (೨೧–೨೨).

ಸ್ರಜಶ್ಚ ವಿವಿಧಾಕಾರಾ ಜಗೃಹುಸ್ತ್ವಭಿಮಂತ್ರಿತಾಃ ।
ಸಂಗ್ರಾಮಸಜ್ಜಾಃ ಸಂಹೃಷ್ಟಾ ಧಾರಯನ್ ರಾಕ್ಷಸಾಸ್ತದಾ ॥ ೨೩

ಸಧನುಷ್ಕಾಃ ಕವಚಿನೋ ವೇಗಾದಾಪ್ಲುತ್ಯ ರಾಕ್ಷಸಾಃ ।
ರಾವಣಂ ಪ್ರೇಕ್ಷ್ಯ ರಾಜಾನಂ ಪ್ರಹಸ್ತಂ ಪರ್ಯವಾರಯನ್ ॥ ೨೪

ಅಥಾಮಂತ್ರ್ಯ ಚ ರಾಜಾನಂ ಭೇರೀಮಾಹತ್ಯ ಭೈರವಾಮ್ ।
ಆರುರೋಹ ರಥಂ ದಿವ್ಯಂ ಪ್ರಹಸ್ತಃ ಸಜ್ಜಕಲ್ಪಿತಮ್ ॥ ೨೫

ಹಯೈರ್ಮಹಾಜವೈರ್ಯುಕ್ತಂ ಸಮ್ಯಕ್ ಸೂತಸುಸಂಯತಮ್ ।
ಮಹಾಜಲದನಿರ್ಘೋಷಂ ಸಾಕ್ಷಾಚ್ಚಂದ್ರಾರ್ಕಭಾಸ್ವರಮ್ ॥ ೨೬

ಉರಗಧ್ವಜದುರ್ಧರ್ಷಂ ಸುವರೂಥಂ ಸ್ವಪಸ್ಕರಮ್ ।
ಸುವರ್ಣಜಾಲಸಂಯುಕ್ತಂ ಪ್ರಹಸಂತಮಿವ ಶ್ರಿಯಾ ॥ ೨೭

ತತಸ್ತಂ ರಥಮಾಸ್ಥಾಯ ರಾವಣಾರ್ಪಿತಶಾಸನಃ ।
ಲಂಕಾಯಾ ನಿರ್ಯಯೌ ತೂರ್ಣಂ ಬಲೇನ ಮಹತಾ ವೃತಃ ॥ ೨೮

---

ಸಂಗ್ರಾಮಕ್ಕೆ ಸಿದ್ಧರಾದ ರಾಕ್ಷಸಭಟರು ವಿಜಯಮಂತ್ರದಿಂದ ಮಂತ್ರಿಸಲ್ಪಟ್ಟ ವಿವಿಧಪುಷ್ಪಗಳ ಮಾಲೆಗಳನ್ನು ಸಂತೋಷದಿಂದ ಸ್ವೀಕರಿಸಿದರು. ಕವಚಗಳನ್ನು ತೊಟ್ಟು, ಧನಸ್ಸುಗಳನ್ನು ಧರಿಸಿ, ರಾಕ್ಷಸೇಂದ್ರನಾದ ರಾವಣನನ್ನು ಕಂಡು ನಮಸ್ಕರಿಸಿ, ಆ ಭಟರು ಪ್ರಹಸ್ತನ ಸುತ್ತಲೂ ಬಂದು ನೆರೆದರು (೨೩–೨೪). ಅನಂತರ ಪ್ರಹಸ್ತನು ರಾವಣನನ್ನು ಬೀಳ್ಕೊಂಡು ಭೈರವ ರಣಭೇರಿಗಳನ್ನು ಹೊಯಿಸುತ್ತ, ಸರ್ವಾಸ್ತ್ರಗಳಿಂದ ಸಜ್ಜಾದ ತನ್ನ ದಿವ್ಯರಥವನ್ನೇರಿಸಿದನು (೨೫). ಆ ರಥವನ್ನು ಸಾರಥಿಯು ಸರಿಯಾಗಿ ಪರೀಕ್ಷಿಸಿ ಮಹಾವೇಗಶಾಲಿಗಳಾದ ಕುದುರೆಗಳನ್ನು ಅದಕ್ಕೆ ಹೂಡಿದ್ದನು. ರಥವು ಮೇಘಧ್ವನಿಯಂತೆ ಗಂಭೀರಧ್ವನಿಯುಳ್ಳದ್ದಾಗಿ, ಚಂದ್ರನಂತೆ ಶುಭ್ರವಾಗಿ, ಸೂರ್ಯನಂತೆ ತೇಜೋವಿಶಿಷ್ಟವಾಗಿತ್ತು (೨೬). ಆ ರಥಕ್ಕೆ ದೃಢವಾದ ಸರ್ಪಧ್ವಜವನ್ನು ಏರಿಸಲಾಗಿತ್ತು. ಅದರ ರಕ್ಷಣಾಕವಚವೂ ಅಚ್ಚೂ ಪ್ರಬಲವಾಗಿದ್ದವು. ಚಿನ್ನದ ಕಿಟಕಿಗಳಿಂದ ಸಂಯುಕ್ತವಾದ ಆ ರಥವು ತನ್ನ ಕಾಂತಿಯಿಂದ ಇತರ ರಥಗಳನ್ನು ಹಾಸ್ಯಮಾಡುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು (೨೭). ಪ್ರಹಸ್ತನು ರಾವಣಾಜ್ಞೆಯಂತೆ ರಥವನ್ನೇರಿ ದೊಡ್ಡ ಸೇನೆ

ತತೋ ದುಂದುಭಿನಿರ್ಘೋಷಃ ಪರ್ಜನ್ಯನಿನದೋಪಮಃ ।
ವಾದಿತ್ರಾಣಾಂ ಚ ನಿನದಃ ಪೂರಯನ್ನಿವ ಸಾಗರಮ್ ॥ ೨೯

ಶುಶ್ರುವೇ ಶಂಖಶಬ್ದ ಶ್ಚ ಪ್ರಯಾತೇ ವಾಹಿನೀಪತೌ ।
ನಿನದಂತಃ ಸ್ವರಾನ್ ಘೋರಾನ್ ರಾಕ್ಷಸಾ ಜಗ್ಮುರಗ್ರತಃ ॥ ೩೦

ಭೀಮರೂಪಾ ಮಹಾಕಾಯಾಃ ಪ್ರಹಸ್ತಸ್ಯ ಪುರಃಸರಾಃ ।
ನರಾಂತಕಃ ಕುಂಭಹನುರ್ಮಹಾನಾದಃ ಸಮುನ್ನತಃ ॥ ೩೧

ಪ್ರಹಸ್ತಸಚಿವಾ ಹ್ಯೇತೇ ನಿರ್ಯಯುಃ ಪರಿವಾರ್ಯ ತಮ್ ।
ವ್ಯೂಢೇನೈವ ಸುಘೋರೇಣ ಪೂರ್ವದ್ವಾರಾತ್ ಸ ನಿರ್ಯಯೌ ॥ ೩೨

ಗಜಯೂಥನಿಕಾಶೇನ ಬಲೇನ ಮಹತಾ ವೃತಃ ।
ಸಾಗರಪ್ರತಿಮೌಘೇನ ವೃತಸ್ತೇನ ಬಲೇನ ಸಃ ॥ ೩೩

ಪ್ರಹಸ್ತೋ ನಿರ್ಯಯೌ ತೂರ್ಣಂ ಕಾಲಾಂತಕಯಮೋಪಮಃ ।
ತಸ್ಯ ನಿರ್ಯಾಣಘೋಷೇಣ ರಾಕ್ಷಸಾನಾಂ ಚ ನರ್ದತಾಮ್ ॥ ೩೪

---

ಯೊಡನೆ ಹೊರಟನು. ರಣಭೇರಿಗಳು ಗುಡುಗಿನಂತೆ ಮೊಳಗಿದವು. ತಮಟೆ ಮೊದಲಾದ ರಣವಾದ್ಯಗಳು ಸಮುದ್ರವನ್ನು ಉಕ್ಕಿಸುವಂತೆ ಮೊರೆದವು. ಆ ಸೇನಾಪತಿಯ ಪ್ರಯಾಣಮಾಡುವಾಗ ಶಂಖಗಳು ಭಂಕಾರಮಾಡಿದವು. ರಾಕ್ಷಸಭಟರು ಭೀಕರವಾಗಿ ಬೊಬ್ಬಿರಿಯುತ್ತ ಮುಂದೆ ಸಾಗಿದರು (೨೮–೩೦). ಭಯಂಕರವಾದ ಮಹಾಶರೀರವುಳ್ಳ ನರಾಂತಕ, ಕುಂಭಹನು, ಮಹಾನಾದ, ಸಮುನ್ನತ–ಎಂಬ ಪ್ರಹಸ್ತನ ನಾಲ್ವರು ಸಚಿವರು ಅವನ ರಥದ ಸುತ್ತಲೂ ಪ್ರಯಾಣಮಾಡಿದರು (೩೧). ಘೋರವಾದ ಆ ರಾಕ್ಷಸಸೇನೆಯನ್ನು ವ್ಯೂಹಾಕಾರವಾಗಿ ಶಿಸ್ತಿನಿಂದ ನಡೆಸುತ್ತ ಪ್ರಹಸ್ತನು ಲಂಕೆಯ ಪೂರ್ವದ್ವಾರದಿಂದ ಹೊರಟನು. ಸಮುದ್ರದ ಅಲೆಗಳಂತೆ ನುಗ್ಗುತ್ತಿದ್ದ ಅಪಾರವಾದ ಆ ಸೇನೆಯು ಆನೆಗಳ ಹಿಂಡಿನಂತೆ ಕಾಣಿಸುತ್ತಿತ್ತು (೩೨–೩೩). ಪ್ರಳಯಕಾಲದಲ್ಲಿ ಲೋಕನಾಶಕ್ಕಾಗಿ ಹೊರಟ ಕಾಲಾಂತಕನಂತಿದ್ದ ಪ್ರಹಸ್ತನು ಕರೆದೊಯ್ಯುತ್ತಿದ್ದ ರಾಕ್ಷಸಸೇನೆಯ ಗರ್ಜನೆಯನ್ನು ಕೇಳಿ, ಲಂಕೆಯಲ್ಲಿದ್ದ ಪ್ರಾಣಿಗಳೆಲ್ಲವೂ ಕೆಟ್ಟ ದನಿಯಿಂದ ಒರಲಿದವು (೩೪).

ಲಂಕಾಯಾಂ ಸರ್ವಭೂತಾನಿ ವಿನೇದುರ್ವಿಕೃತೈಃ ಸ್ವರೈಃ ।
ವ್ಯಭ್ರಮಾಕಾಶಮಾವಿಶ್ಯ ಮಾಂಸಶೋಣಿತಭೋಜನಾಃ ॥ ೩೫

ಮಂಡಲಾನ್ಯಪಸವ್ಯಾನಿ ಖಗಾಶ್ಚಕ್ರು ರಥಂ ಪ್ರತಿ ।
ವಮಂತ್ಯಃ ಪಾವಕಜ್ವಾಲಾಃ ಶಿವಾ ಘೋರಾ ವವಾಶಿರೇ ॥ ೩೬

ಅಂತರಿಕ್ಷಾತ್ಪಪಾತೋಲ್ಕಾ ವಾಯುಶ್ಚ ಪರುಷೋ ವವೌ ।
ಅನ್ಯೋನ್ಯಮಭಿಸಂರಬ್ಧಾ ಗ್ರಹಾಶ್ಚ ನ ಚಕಾಶಿರೇ ॥ ೩೭

ಮೇಘಾಶ್ಚ ಖರನಿರ್ಘೋಷಾ ರಥಸ್ಯೋಪರಿ ರಕ್ಷಸಃ ।
ವವೃಷೂ ರುಧಿರಂ ಚಾಸ್ಯ ಸಿಷಿಚುಶ್ಚ ಪುರಃಸರಾನ್ ॥ ೩೮

ಕೇತುಮೂರ್ಧನಿ ಗೃಧ್ರೋಽಸ್ಯ ನಿಲೀನೋ ದಕ್ಷಿಣಾಮುಖಃ ।
ತುದನ್ನುಭಯತಃ ಪಾರ್ಶ್ವಂ ಸಮಗ್ರಾಮಹರತ್ಪ್ರಭಾಮ್ ॥ ೩೯

ಸಾರಥೇರ್ಬಹುಶಶ್ಚಾಸ್ಯ ಸಂಗ್ರಾಮಮವಗಾಹತಃ ।
ಪ್ರತೋದೋ ನ್ಯಪತದ್ಧಸ್ತಾತ್ಸೂತಸ್ಯ ಹಯಸಾದಿನಃ ॥ ೪೦

ನಿರ್ಯಾಣಶ್ರೀಶ್ಚ ಯಾಸ್ಯಾಸೀದ್ಭಾಸ್ವರಾ ವಸುದುರ್ಲಭಾ ।
ಸಾ ನನಾಶ ಮುಹೂರ್ತೇನ ಸಮೇ ಚ ಸ್ಖಲಿತಾ ಹಯಾಃ ॥ ೪೧

---

ಅಷ್ಟರಲ್ಲಿ ಮಾಂಸಾಹಾರಿಗಳಾದ ಪಕ್ಷಿಗಳು ಮೇಘರಹಿತವಾದ ಆಕಾಶದಲ್ಲಿ ಹಾರುತ್ತ ಬಂದು ಪ್ರಹಸ್ತನ ರಥವನ್ನು ಅಪಸವ್ಯವಾಗಿ ಸುತ್ತಿದವು. ಅಮಂಗಳಕಾರಿಗಳಾದ ನರಿಗಳು ಬಾಯಿಂದ ಬೆಂಕಿಯ ಜ್ವಾಲೆಯನ್ನು ಕಕ್ಕುತ್ತ ಕೂಗಿದವು (೩೫–೩೬). ಅಂತರಿಕ್ಷದಿಂದ ಉಲ್ಕೆಯು ಬಿದ್ದಿತು. ಗಾಳಿಯು ಬಿರುಸಾಗಿ ಬೀಸಿತು. ಸೂರ್ಯಚಂದ್ರಾದಿಗ್ರಹಗಳು ಅನ್ಯೋನ್ಯ ಘರ್ಷಣೆಗಾಗಿ ನಿಂತು ಕಳೆಗುಂದಿದವು. ಮೋಡಗಳು ಕ್ರೂರವಾಗಿ ಗರ್ಜಿಸುತ್ತ ಪ್ರಹಸ್ತನ ರಥದ ಮೇಲೆ ರಕ್ತದ ಮಳೆಯನ್ನು ಸುರಿದುವಲ್ಲದೆ, ಮುಂದಿದ್ದ ಸೈನಿಕರಮೇಲೆ ರಕ್ತಾಭಿಷೇಕಮಾಡಿದವು (೩೭–೩೮). ಪ್ರಹಸ್ತನ ಧ್ವಜಾಗ್ರದಲ್ಲಿ ಒಂದು ಹದ್ದು ದಕ್ಷಿಣಾಮುಖವಾಗಿ ಕುಳಿತುಕೊಂಡು ತನ್ನ ಎರಡು ಪಕ್ಕಗಳನ್ನೂ ಕುಕ್ಕುತ್ತಿರಲು, ಪ್ರಹಸ್ತನ ಮುಖವು ಕಳೆಗುಂದಿತು. ಅವನ ಸಾರಥಿಯೂ ಈ ಅವಲಕ್ಷಣಗಳನ್ನು ಗಮನಿಸಿ ಖಿನ್ನನಾದನು. ಕುದುರೆಗಳನ್ನೋಡಿಸುತ್ತಿದ್ದ ಆ ಸಾರಥಿಯ ಕೈಯಿಂದ ಚಾಟಿಯು ಜಾರಿಬಿದ್ದಿತು (೩೯–೪೦). ಅಷ್ಟವಸುಗಳಿಗೂ ದುರ್ಲಭವಾದ ಯಾವ ವೈಭದೊಡನೆ ಪ್ರಹಸ್ತನು ಹೊರಟಿದ್ದನೋ,

ಪ್ರಹಸ್ತಂ ತ್ವಭಿನಿರ್ಯಾಂತಂ ಪ್ರಖ್ಯಾತಬಲಪೌರುಷಮ್ ।
ಯುಧಿ ನಾನಾಪ್ರಹರಣಾ ಕಪಿಸೇನಾಭ್ಯವರ್ತತ ॥ ೪೨
ಅಥ ಘೋಷಃ ಸುತುಮಲೋ ಹರೀಣಾಂ ಸಮಜಾಯತ ।
ವೃಕ್ಷಾನುರುಜತಾಂ ಚೈವ ಗುರ್ವೀರಾಗೃಹ್ಣತಾಂ ಶಿಲಾಃ ॥ ೪೩
ನದತಾಂ ರಾಕ್ಷಸಾನಾಂ ಚ ವಾನರಾಣಾಂ ಚ ಗರ್ಜತಾಮ್ ।
ಉಭೇ ಪ್ರಮುದಿತೇ ಸೈನ್ಯೇ ರಕ್ಷೋಗಣವನೌಕಸಾಮ್ ॥ ೪೪
ವೇಗಿತಾನಾಂ ಸಮರ್ಥಾನಾಮನ್ಯೋನ್ಯವಧಕಾಂಕ್ಷಿಣಾಮ್ ।
ಪರಸ್ಪರಂ ಚಾಹ್ವಯತಾಂ ನಿನಾದಃ ಶ್ರೂಯತೇ ಮಹಾನ್ ॥ ೪೫

ತತಃ ಪ್ರಹಸ್ತಃ ಕಪಿರಾಜವಾಹಿನೀ-
ಮಭಿಪ್ರತಸ್ಥೇ ವಿಜಯಾಯ ದುರ್ಮತಿಃ ।
ವಿವೃದ್ಧವೇಗಾಂ ಚ ವಿವೇಶ ತಾಂ ಚಮೂಂ
ಯಥಾ ಮುಮೂರ್ಷುಃ ಶಲಭೋ ವಿಭಾವಸುಮ್ ॥ ೪೬

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತಪಂಚಾಶಃ ಸರ್ಗಃ

---

ಆ ವೈಭವವು ಸ್ವಲ್ಪ ಕಾಲದಲ್ಲಿಯೇ ಕುಗ್ಗಿಹೋಯಿತು. ಸಮಪ್ರದೇಶದಲ್ಲಿಯೇ ಕುದುರೆಗಳು ಎಡವಿದವು (೪೧). ಬಲಪೌರುಷಗಳಿಗೆ ವಿಖ್ಯಾತನಾದ ಪ್ರಹಸ್ತನು ರಣೋತ್ಸಾಹದಿಂದ ಹೊರಟು ಬರುತ್ತಿರಲು, ಅವನಿಗೆದುರಾಗಿ ವಿವಿಧಾ ಯುಧಗಳನ್ನು ಧರಿಸಿದ್ದ ಕಪಿಸೈನಿಕರು ನುಗ್ಗಿದರು (೪೨). ಮರಗಳನ್ನು ಮುರಿದು ಹೊರುವ, ಶಿಲೆಗಳನ್ನುರುಳಿಸಿ ತರುವ ಕಪಿಯೋಧರ ಗದ್ದಲವು ಅದ್ಭುತವಾಯಿತು. ರಾಕ್ಷಸರ ಬೊಬ್ಬಿರಿತಗಳೂ ಕಪಿಗಳ ಅಬ್ಬರಗಳೂ ಉಲ್ಬಣಿಸಿದವು. ವಾನರರೂ ರಾಕ್ಷಸರೂ ಉತ್ಸಾಹದಿಂದ ಉಬ್ಬಿದರು (೪೩–೪೪). ವೇಗಶಾಲಿಗಳೂ ಸಮರ್ಥರೂ ಒಬ್ಬರನ್ನೊಬ್ಬರು ವಧಿಸಬೇಕೆಂಬ ಆಕಾಂಕ್ಷೆಯುಳ್ಳವರೂ ಆದ ವೀರಯೋಧರು, ಹೊಡೆದಾಟಕ್ಕೆ ಬರುವಂತೆ ಎದುರಾಳುಗಳನ್ನು ಕರೆಯುತ್ತಿರುವಾಗ, ಅವರ ಗರ್ಜನೆಯು ಎಲ್ಲೆಡೆಯೂ ಕೇಳಿಸುತ್ತಿತ್ತು (೪೫). ದುರ್ಬುದ್ಧಿಯಾದ ಪ್ರಹಸ್ತನು ವಿಜಯವನ್ನು ಗಳಿಸಬೇಕೆಂಬ ದುರಾಸೆಯಿಂದ ಸುಗ್ರೀವಸೇನೆಯಮೇಲೆ ಏರಿಹೋದನು. ವೇಗಾತಿಶಯದಿಂದ ಉಬ್ಬುತ್ತಿದ್ದ ವಾನರಸೇನೆಯನ್ನು ಬೆಂಕಿಯಲ್ಲಿ ಬೀಳುವ ದೀಪದ ಹುಳುವಿನಂತೆ ಪ್ರಹಸ್ತನು ಪ್ರವೇಶಿಸಿದನು (೪೬).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಐವತ್ತೇಳನೆಯ ಸರ್ಗ

## ಅಷ್ಟ ಪಂಚಾಶಃ ಸರ್ಗಃ
### ಪ್ರಹಸ್ತವಧಃ

ತತಃ ಪ್ರಹಸ್ತಂ ನಿರ್ಯಾಂತಂ ದೃಷ್ಟ್ವಾ ಭೀಮಪರಾಕ್ರಮಮ್ ।
ಉವಾಚ ಸಸ್ಮಿತಂ ರಾಮೋ ವಿಭೀಷಣಮರಿಂದಮಃ ॥ ೧

ಕ ಏಷ ಸುಮಹಾಕಾಯೋ ಬಲೇನ ಮಹತಾ ವೃತಃ ।
ಆಚಕ್ಷ್ವ ಮೇ ಮಹಾಬಾಹೋ ವೀರ್ಯವಂತಂ ನಿಶಾಚರಮ್ ॥ ೨

ರಾಘವಸ್ಯ ವಚಃ ಶ್ರುತ್ವಾ ಪ್ರತ್ಯುವಾಚ ವಿಭೀಷಣಃ ।
ಏಷ ಸೇನಾಪತಿಸ್ತಸ್ಯ ಪ್ರಹಸ್ತೋ ನಾಮ ರಾಕ್ಷಸಃ ॥ ೩

ಲಂಕಾಯಾಂ ರಾಕ್ಷಸೇಂದ್ರಸ್ಯ ತ್ರಿಭಾಗಬಲಸಂವೃತಃ ।
ವೀರ್ಯವಾನಸ್ತ್ರವಿಚ್ಛೂರಃ ಪ್ರಖ್ಯಾತಶ್ಚ ಪರಾಕ್ರಮೇ ॥ ೪

## ಸರ್ಗ ೫೮

### ನೀಲನಿಂದ ಪ್ರಹಸ್ತನ ವಧೆ.

ಭೀಮಪರಾಕ್ರಮನಾದ ಪ್ರಹಸ್ತನು ಲಂಕೆಯಿಂದ ಹೊರಟುಬರುತ್ತಿರುವುದನ್ನು ಕಂಡು, ಶ್ರೀರಾಮನು ವಿಭೀಷಣನನ್ನು ಕುರಿತು ಮುಗುಳ್ನಗೆಯಿಂದ* "ವಿಭೀಷಣ, ಮಹಾಶರೀರನಾದ ಆ ರಾಕ್ಷಸನು ಯಾರು? ಬಹುದೊಡ್ಡ ಸೇನೆಯೊಡನೆ ಬರುತ್ತಿದ್ದಾನೆ. ಅವನು ಮಹಾಶೂರನಾಗಿರಬೇಕು. ಅವನ ಹೆಸರೇನು?" ಎಂದು ಕೇಳಿದನು (೧–೨). ಆಗ ವಿಭೀಷಣನು "ಶ್ರೀರಾಮ, ಈತನೇ ರಾಕ್ಷಸರ ಪ್ರಧಾನ ಸೇನಾನಿ. ಇವನ ಹೆಸರು ಪ್ರಹಸ್ತ. ಲಂಕೆಯಲ್ಲಿರುವ ರಾಕ್ಷಸೇಂದ್ರನ ಸೇನೆಯಲ್ಲಿ ಮೂರನೆಯ ಒಂದು ಭಾಗವು ಈತನೊಡನೆ ಬಂದಿದೆ. ಇವನು ಅಸ್ತ್ರವಿದ್ಯಾವಿಶಾರದ. ವೀರ್ಯಶೌರ್ಯಪರಾಕ್ರಮಗಳಲ್ಲಿ

---

* ಶ್ರೀರಾಮನು ಉತ್ತರದ್ವಾರದಲ್ಲಿದ್ದರೂ ಪೂರ್ವದ್ವಾರದಿಂದ ಹೊರಟ ಪ್ರಹಸ್ತನನ್ನು ಕಾಣುವುದು ಅಸಂಭವವಲ್ಲ. ಆಯಾ ದಿಕ್ಕಿನಲ್ಲಿ ನಿಯಕ್ತರಾದ ನಾಯಕರು ಕಾರ್ಯದ ಒತ್ತಡದಿಂದ ಬೇರೆಬೇರೆ ಕಡೆ ಹೋಗುತ್ತಿದ್ದರೆಂಬುದು ಯುದ್ಧ ಕಾಂಡದ ವಿವಿಧ ಪ್ರಸಂಗಗಳಿಂದ ಗೊತ್ತಾಗುತ್ತದೆ. ಪ್ರಹಸ್ತನ ಮಹಾಶರೀರವನ್ನು ನೋಡಿ ಶ್ರೀರಾಮನಿಗೆ ಮುಗುಳ್ನಗೆ ಬಂದಿತು.

ತತಃ ಪ್ರಹಸ್ತಂ ನಿರ್ಯಾಂತಂ ಭೀಮಂ ಭೀಮಪರಾಕ್ರಮಮ್।
ಗರ್ಜಂತಂ ಸುಮಹಾಕಾಯಂ ರಾಕ್ಷಸೈರಭಿಸಂವೃತಮ್ ॥ ೫

ದದರ್ಶ ಮಹತೀ ಸೇನಾ ವಾನರಾಣಾಂ ಬಲೀಯಸಾಮ್ ।
ಅತಿಸಂಜಾತರೋಷಾಣಾಂ ಪ್ರಹಸ್ತಮಭಿಗರ್ಜತಾಮ್ ॥ ೬

ಖಡ್ಗಶಕ್ತ್ಯೃಷ್ಟಿಬಾಣಾಶ್ಚ ಶೂಲಾನಿ ಮುಸಲಾನಿ ಚ ।
ಗದಾಶ್ಚ ಪರಿಘಾಃ ಪ್ರಾಸಾ ವಿವಿಧಾಶ್ಚ ಪರಶ್ವಧಾಃ ॥ ೭

ಧನೂಂಷಿ ಚ ವಿಚಿತ್ರಾಣಿ ರಾಕ್ಷಸಾನಾಂ ಜಯೈಷಿಣಾಮ್ ।
ಪ್ರಗೃಹೀತಾನ್ಯಶೋಭಂತ ವಾನರಾನಭಿಧಾವತಾಮ್ ॥ ೮

ಜಗೃಹುಃ ಪಾದಪಾಂಶ್ಚಾಪಿ ಪುಷ್ಪಿತಾನ್ ವಾನರರ್ಷಭಾಃ ।
ಶಿಲಾಶ್ಚ ವಿಪುಲಾ ದೀರ್ಘಾ ಯೋದ್ಧುಕಾಮಾಃ ಪ್ಲವಂಗಮಾಃ ॥ ೯

ತೇಷಾಮನ್ಯೋಽನ್ಯಮಾಸಾದ್ಯ ಸಂಗ್ರಾಮಃ ಸುಮಹಾನಭೂತ್ ।
ಬಹೂನಾಮಶ್ಮವೃಷ್ಟಿಂ ಚ ಶರವೃಷ್ಟಿಂ ಚ ವರ್ಷತಾಮ್ ॥ ೧೦

ಬಹವೋ ರಾಕ್ಷಸಾ ಯುದ್ಧೇ ಬಹೂನ್ ವಾನರಯೂಥಪಾನ್ ।
ವಾನರಾ ರಾಕ್ಷಸಾಂಶ್ಚಾಪಿ ನಿಜಘ್ನುರ್ಬಹವೋ ಬಹೂನ್ ॥ ೧೧

---

ವಿಖ್ಯಾತನಾದವನು'' ಎಂದು ತಿಳಿಸಿದನು (೩–೪), ಅಷ್ಟರಲ್ಲಿ ಮಹಾಕಾಯನಾದ ಪ್ರಹಸ್ತನು ರಾಕ್ಷಸಸೇನಾಪರಿವೃತನಾಗಿ ಗರ್ಜಿಸುತ್ತ ನುಗ್ಗಿ ಬರುತ್ತಿರುವುದನ್ನು ಪ್ರಬಲವಾದ ವಾನರಸೇನೆಯು ದಿಟ್ಟಿಸಿ ನೋಡಿತು. ವಾನರಸೈನಿಕರು ಸಂಕ್ರುದ್ಧರಾಗಿ ಗರ್ಜಿಸುತ್ತ ಪ್ರಹಸ್ತನಮೇಲೆ ಏರಿಹೋದರು (೫–೬). ರಾಕ್ಷಸರು ಕಪಿಸೇನೆಯನ್ನು ಸದೆಬಡಿಯಬೇಕೆಂದು ವಿವಿಧಾಯಧಗಳನ್ನು ಝುಳಪಿಸುತ್ತ ನುಗ್ಗಿದರು. ಅವರು ಹಿಡಿದಿದ್ದ ಖಡ್ಗ, ಶಕ್ತಿ, ಎರಡಲಗುಗಳಿರುವ ಕತ್ತಿ, ಬಾಣ, ಶೂಲ, ಮುಸಲ, ಗದೆ, ಪರಿಘ, ಪ್ರಾಸ, ಪರಶು, ಬಗೆಬಗೆಯ ಧನಸ್ಸು ಮೊದಲಾದ ಆಯುಧಗಳು ಹೊಳೆಯುತ್ತಿದ್ದವು (೭–೮). ಕಪಿನಾಯಕರು ಅರಳಿದ ಮರಗಳನ್ನೂ ಬಿಡದೆ ನಾನಾಬಗೆಯ ಮರಗಳನ್ನೂ ಶಿಲೆಗಳ ರಾಶಿಗಳನ್ನೂ ಹೊತ್ತು ಹೊಡೆದಾಟಕ್ಕೆ ಸಿದ್ಧರಾದರು. ಉಭಯಪಕ್ಷದವರೂ ಒಬ್ಬರನ್ನೊಬ್ಬರು ಆಕ್ರಮಿಸಿ ಶಿಲಾವೃಷ್ಟಿಗಳನ್ನೂ ಶರವೃಷ್ಟಿಗಳನ್ನೂ ಸುರಿಸುತ್ತ ಭೀಕರವಾಗಿ ಯುದ್ಧಮಾಡಿದರು (೯–೧೦). ಆ ಕದನದಲ್ಲಿ ರಾಕ್ಷಸರು ಬಹುಮಂದಿ ವಾನರನ್ನೂ ವಾನರರು ಬಹುಮಂದಿ ರಾಕ್ಷಸಯೋಧ

ಶೂಲೈಃ ಪ್ರಮಥಿತಾಃ ಕೇಚಿತ್ಕೇಚಿಚ್ಚ ಪರಮಾಯುಧೈಃ ।
ಪರಿಘೈರಾಹತಾಃ ಕೇಚಿತ್ಕೇಚಿಚ್ಛಿನ್ನಾಃ ಪರಶ್ವಧೈಃ ॥ ೧೨

ನಿರುಚ್ಛ್ವಾಸಾಃ ಕೃತಾಃ ಕೇಚಿತ್ಪತಿತಾ ಧರಣೀತಲೇ ।
ವಿಭಿನ್ನಹೃದಯಾಃ ಕೇಚಿದಿಷುಸಂಧಾನಸಂಧಿತಾಃ ॥ ೧೩

ಕೇಚಿದ್ದ್ವಿಧಾ ಕೃತಾಃ ಖಡ್ಗೈಃ ಸ್ಫುರಂತಃ ಪತಿತಾ ಭುವಿ ।
ವಾನರಾ ರಾಕ್ಷಸೈಃ ಶೂಲೈಃ ಪಾರ್ಶ್ವತಶ್ಚ ವಿದಾರಿತಾಃ ॥ ೧೪

ವಾನರೈಶ್ಚಾಪಿ ಸಂಕ್ರುದ್ಧೈಃ ರಾಕ್ಷಸೌಘಾಃ ಸಮಂತತಃ ।
ಪಾದಪೈರ್ಗಿರಿಶೃಂಗೈಶ್ಚ ಸಂಪಿಷ್ಟಾ ವಸುಧಾತಲೇ ॥ ೧೫

ವಜ್ರಸ್ಪರ್ಶತಲೈರ್ಹಸ್ತೈರ್ಮುಷ್ಟಿಭಿಶ್ಚ ಹತಾ ಭೃಶಮ್।
ವೇಮುಃ ಶೋಣಿತಮಾಸ್ಯೇಭ್ಯೋ ವಿಶೀರ್ಣದಶನೇಕ್ಷಣಾಃ ॥ ೧೬

ಆರ್ತಸ್ವನಂ ಚ ಸ್ವನತಾಂ ಸಿಂಹನಾದಂ ಚ ನರ್ದತಾಮ್ ।
ಬಭೂವ ತುಮುಲಃ ಶಬ್ದೋ ಹರೀಣಾಂ ರಕ್ಷಸಾಂ ಯುಧಿ ॥ ೧೭

---

ರನ್ನೂ ಸಂಹರಿಸಿದರು. ರಾಕ್ಷಸರು ಶೂಲಗಳಿಂದ ಕೆಲವು ವಾನರರನ್ನು ತಿವಿದು, ಕೆಲವರನ್ನು ಚಕ್ರಗಳಿಂದ ಕತ್ತರಿಸಿ, ಕೆಲವರನ್ನು ಪರಿಘಗಳಿಂದ ಬಡಿದು, ಕೆಲವರನ್ನು ಕೊಡಲಿಗಳಿಂದ ಕಡಿದು ಕೊಂದುಹಾಕಿದರು (೧೧–೧೨). ಕೆಲವರನ್ನು ಉಸಿರಾಡದಂತೆ ಕತ್ತುಹಿಸುಕಿ ನೆಲದಮೇಲೊರಗಿಸಿದರು. ಕೆಲವು ವಾನರರ ಎದೆಯನ್ನೊಡೆದು ಸಾಯಿಸಿದರು. ಕೆಲವರನ್ನು ಧನುಸ್ಸಿನ ಹೆದೆಯಿಂದ ಹಿಡಿದೆಳೆದು ಖಡ್ಗಗಳಿಂದ ಅವರನ್ನು ಕತ್ತರಿಸಿ ಬೀಳಿಸಿದರು. ಶೂರರಾದ ಆ ರಾಕ್ಷಸರು ಕೆಲವು ವಾನರರ ಪಕ್ಕೆಗಳ್ನು ಶೂಲಗಳಿಂದ ತಿವಿದು ಕೊಂದರು (೧೩–೧೪). ಸಂಕ್ರುದ್ಧರಾದ ವಾನರರೂ ಕೂಡ ಗಿರಿಶೃಂಗಗಳಿಂದಲೂ ವೃಕ್ಷ ಗಳಿಂದಲೂ ರಾಕ್ಷಸರನ್ನು ಗುಂಪುಗುಂಪಾಗಿ ಸದೆದು ಭೂಮಿಯಮೇಲುರುಳಿಸಿ ದರು. ವಜ್ರಾಯುಧದಂತೆ ಕಠೋರವಾದ ತಮ್ಮ ಅಂಗೈಗಳಿಂದ ರಾಕ್ಷಸರನ್ನು ಅಪ್ಪಳಿಸಿ ಮುಷ್ಟಿಗಳಿಂದ ಗುದ್ದಲು, ರಾಕ್ಷಸರ ಬಾಯಿಂದ ರಕ್ತವು ಹರಿಯಿತು. ಹಲ್ಲುಗಳುದುರಿದವು. ಕಣ್ಣಾಲಿಗಳು ಕಳಚಿದ್ದವು! (೧೫–೧೬). ಪೆಟ್ಟು ತಿಂದು ಒರಲುವ ಕಪಿರಾಕ್ಷಸರ ಆರ್ತನಾದಗಳಿಂದಲೂ ಪೆಟ್ಟುಕೊಡುವವರ ಸಿಂಹನಾದ

ವಾನರಾ ರಾಕ್ಷಸಾಃ ಕ್ರುದ್ಧಾ ವೀರಮಾರ್ಗಮನುವ್ರತಾಃ ।
ವಿವೃತ್ತನಯನಾಃ ಕ್ರೂರಾಶ್ಚಕ್ರುಃ ಕರ್ಮಾಣ್ಯಭೀತವತ್ ॥ ೧೮

ನರಾಂತಕಃ ಕುಂಭಹನುರ್ಮಹನಾದಃ ಸಮುನ್ನತಃ ।
ಏತೇ ಪ್ರಹಸ್ತಸಚಿವಾಃ ಸರ್ವೇ ಜಘ್ನುರ್ವನೌಕಸಃ ॥ ೧೯

ತೇಷಾಮಾಪತತಾಂ ಶೀಘ್ರಂ ನಿಘ್ನತಾಂ ಚಾಪಿ ವಾನಾರಾನ್ ।
ದ್ವಿವಿದೋ ಗಿರಿಶೃಂಗೇಣ ಜಘಾನೈಕಂ ನರಾಂತಕಮ್ ॥ ೨೦

ದುರ್ಮುಖಃ ಪುನರುತ್ಪಾಟ್ಯ ಕಪಿಃ ಸ ವಿಪುಲದ್ರುಮಮ್ ।
ರಾಕ್ಷಸಂ ಕ್ಷಿಪ್ರಹಸ್ತಸ್ತು ಸಮುನ್ನತಮಪೋಥಯತ್ ॥ ೨೧

ಜಾಂಬವಾಂಸ್ತು ಸುಸಂಕ್ರುದ್ಧಃ ಪ್ರಗೃಹ್ಯ ಮಹತೀಂ ಶಿಲಾಮ್ ।
ಪಾತಯಾಮಾಸ ತೇಜಸ್ವೀ ಮಹಾನಾದಸ್ಯ ವಕ್ಷಸಿ ॥ ೨೨

ಅಥ ಕುಂಭಹನುಸ್ತತ್ರ ತಾರೇಣಾಸಾದ್ಯ ವೀರ್ಯವಾನ್।
ವೃಕ್ಷೇಣಾಭಿಹತೋ ಮೂರ್ಧ್ನಿ ಪ್ರಾಣಾನ್ ಸಂತ್ಯಾಜಯದ್ರಣೇ ॥

---

ಗಳಿಂದಲೂ ರಣಭೂಮಿಯು ತುಂಬಿಹೋಯಿತು. ಕ್ರುದ್ಧರಾಗಿ ವೀರಮಾರ್ಗವನ್ನು ಹಿಡಿದು ಹೋರಾಡುತ್ತಿದ್ದ ಕ್ರೂರರಾದ ವಾನರರೂ ರಾಕ್ಷಸರೂ ಕಣ್ಣಾಲಿಗಳನ್ನು ತಿರುಗಿಸುತ್ತ ನಿರ್ಭೀತಿಯಿಂದ ಹೊಯ್ದಾಡಿದರು (೧೭–೧೮). ನರಾಂತಕ, ಕುಂಭಹನು, ಮಹಾನಾದ, ಸಮುನ್ನತ–ಎಂಬ ಪ್ರಹಸ್ತನ ನಾಲ್ವರು ಸಚಿವರು ಬಹುಮಂದಿ ವಾನರರನ್ನು ವಧಿಸಿದರು.ಅವರು ಕಪಿಯೋಧರನ್ನು ಸಂಹರಿಸುತ್ತ ಶೀಘ್ರವಾಗಿ ಮುಂದೆ ನುಗ್ಗುತ್ತಿರಲು, ದ್ವಿವಿದನು ಒಂದು ಗಿರಿಶೃಂಗವನ್ನೆತ್ತಿ ಹೊಡೆದು ನರಾಂತಕನನ್ನು ಸಂಹರಿಸಿದನು (೧೯–೨೦). ದುರ್ಮುಖನೆಂದು ಕಪಿವೀರನು ಒಂದು ದೊಡ್ಡ ಮರವನ್ನು ಕಿತ್ತು ಹಸ್ತವಾಘವದಿಂದ ಪ್ರಯೋಗಿಸಿ, ಸಮುನ್ನತನನ್ನು ವಿಧ್ವಂಸಗೊಳಿಸಿದನು. ತೇಜಸ್ವಿಯಾದ ಜಾಂಬವಂತನು ಅತ್ಯಂತಕೋಪದಿಂದ ದೊಡ್ಡ ಶಿಲೆಯೊಂದನ್ನೆತ್ತಿ ಮಹಾನಾದನ ವಕ್ಷಸ್ಥಳಕ್ಕೆ ಗುರಿಯಿಟ್ಟು ಹೊಡೆದು ಅವನನ್ನು ಕೊಂದುರುಳಿಸಿದನು (೨೧–೨೨). ವೀರನಾದ ಕುಂಭಹನುನೆಂಬ ಸಚಿವನು ಕಾಳಗದಲ್ಲಿ ತಾರನ ಆಕ್ರಮಣಕ್ಕೊಳಗಾಗಿ ವೃಕ್ಷದಿಂದ ತಲೆಯಮೇಲೆ ಪ್ರಹರಿಸಲ್ಪಟ್ಟು

ಅಮೃಷ್ಯಮಾಣಸ್ತತ್ಕರ್ಮ ಪ್ರಹಸ್ತೋ ರಥಮಾಸ್ಥಿತಃ ।
ಚಕಾರ ಕದನಂ ಘೋರಂ ಧನುಷ್ಪಾಣಿರ್ವನೌಕಸಾಮ್ ॥ ೨೪

ಆವರ್ತ ಇವ ಸಂಜಜ್ಞೇ ಉಭಯೋಃ ಸೇನಯೋಸ್ತದಾ ।
ಕ್ಷುಭಿತಸ್ಯಾಪ್ರಮೇಯಸ್ಯ ಸಾಗರಸ್ಯೇವ ನಿಃಸ್ವನಃ ॥ ೨೫

ಮಹತಾ ಹಿ ಶರೌಘೇಣ ಪ್ರಹಸ್ತೋ ಯುದ್ಧಕೋವಿದಃ ।
ಅರ್ದಯಾಮಾಸ ಸಂಕ್ರುದ್ಧೋ ವಾನರಾನ್ ಪರಮಾಹವೇ ॥ ೨೬

ವಾನರಾಣಾಂ ಶರೀರೈಶ್ಚ ರಾಕ್ಷಸಾನಾಂ ಚ ಮೇದಿನೀ ।
ಬಭೂವ ನಿಚಿತಾ ಘೋರಾ ಪತಿತೈರಿವ ಪರ್ವತೈಃ ॥ ೨೭

ಸಾ ಮಹೀ ರುಧಿರೌಘೇಣ ಪ್ರಚ್ಛನ್ನಾ ಸಂಪ್ರಕಾಶತೇ ।
ಸಂಛನ್ನಾ ಮಾಧವೇ ಮಾಸಿ ಪಲಾಶೈರಿವ ಪುಷ್ಪಿತೈಃ ॥ ೨೮

ಹತವೀರೌಘವಪ್ರಾಂ ತು ಭಗ್ನಾಯುಧಮಹಾದ್ರುಮಾಮ್ ।
ಶೋಣಿತೌಘಮಹಾತೋಯಾಂ ಯಮಸಾಗರಗಾಮಿನೀಮ್ ॥ ೨೯

---

ಹತನಾದನು. ಹೀಗೆ ತನ್ನ ಸಚಿವರೆಲ್ಲರೂ ಹತರಾದುದನ್ನು ಕಂಡು ಪ್ರಹಸ್ತನು ಸಂಕ್ರುದ್ಧನಾದನು. ರಥದಲ್ಲಿ ಕುಳಿತು ಧನುಷ್ಪಾಣಿಯಾಗಿ ಕಪಿಯೋಧರೊಡನೆ ಘೋರ ಕದನವನ್ನಾರಂಭಿಸಿದನು (೨೩–೨೪). ಉಭಯಸೇನೆಗಳಲ್ಲಿದ್ದ ಕಪಿಯೋಧರೂ ರಾಕ್ಷಸಭಟರೂ ವಿವಿಧ ಭಂಗಿಗಳಿಂದ ಗಿರ್ರೆಂದು ಸುತ್ತುತ್ತ ಹೋರಾಡುವಾಗ, ಆ ದೃಶ್ಯವು ಮಹಾಸಾಗರದಲ್ಲಿದ್ದ ಸುಳಿಯಂತೆಯೂ ಯೋಧರ ಕೋಲಾಹಲವು ಸಂಕ್ಷುಬ್ಧ ಸಮುದ್ರಘೋಷದಂತೆಯೂ ಭೀಕರವಾಗಿ ಗೋಚರಸುತ್ತಿತ್ತು (೨೫). ರಣಕೋವಿದನಾದ ಪ್ರಹಸ್ತನು ಕುಪಿತನಾಗಿ ಶರಜಾಲಗಳಿಂದ ವಾನರರನ್ನು ತರಿದು ಮುಕ್ಕಿದನು. ಎಲ್ಲೆಲ್ಲಿಯೂ ವಾನರರ ಹೆಣಗಳೂ ರಾಕ್ಷಸರ ಹೆಣಗಳೂ ರಾಶಿರಾಶಿಯಾಗಿ ಬಿದ್ದವು. ಪರ್ವತಗಳೇ ಉರುಳಿಬಿದ್ದಿವೆಯೋ ಎಂಬಂತಾಗಿ ಕಾಳಗದ ಕಣವು ಬಹುಘೋರವಾಗಿ ಕಾಣಿಸಿತು (೨೬–೨೭). ಎಲ್ಲೆಲ್ಲಿಯೂ ರಕ್ತರಾಶಿಯು ಚೆಲ್ಲಿ ಸೂರೆಯಾಗಲು, ಆ ರಣಭೂಮಿಯು ವೈಶಾಖಮಾಸದಲ್ಲಿ ಅರಳಿದ ಮುತ್ತುಗದ ಮರಗಳಿಂದ ವ್ಯಾಪ್ತವಾದ ಭೂಪ್ರದೇಶದಂತೆ ಕಾಣಿಸಿತು (೨೮). ಆ ಸಂಗ್ರಾಮಭೂಮಿಯಲ್ಲಿ ರಕ್ತದ ರಣನದಿಯೇ ಹರಿಯಿತು. ಸತ್ತುಬಿದ್ದ ಭಟರ ರಾಶಿಗಳೇ

ಯಕೃತ್ಪ್ಲೀಹಮಹಾಪಂಕಾಂ ವಿನಿಕೀರ್ಣಾಂತ್ರಶೈವಲಾಮ್ ।
ಭಿನ್ನಕಾಯಶಿರೋಮೀನಾಮಂಗಾವಯವಶಾದ್ವಲಾಮ್ ॥ ೩೦

ಗೃಧ್ರಹಂಸಗಣಾಕೀರ್ಣಾಂ ಕಂಕಸಾರಸಸೇವಿತಾಮ್।
ಮೇದಃಫೇನಸಮಾಕೀರ್ಣಾಮಾರ್ತಸ್ತನಿತನಿಃಸ್ವನಾಮ್ ॥ ೩೧

ತಾಂ ಕಾಪುರುಷದುಸ್ತಾರಾಂ ಯುದ್ಧ ಭೂಮಿಮಯೀಂ ನದೀಮ್ ।
ನದೀಮಿವ ಘನಾಪಾಯೇ ಹಂಸಸಾರಸಸೇವಿತಾಮ್॥ ೩೨

ರಾಕ್ಷಸಾಃ ಕಪಿಮುಖ್ಯಾಶ್ಚ ತೇರುಸ್ತಾಂ ದುಸ್ತರಾಂ ನದೀಮ್ ।
ಯಥಾ ಪದ್ಮರಜೋಧ್ವಸ್ತಾಂ ನಲಿನೀಂ ಗಜಯೂಥಪಾಃ ॥ ೩೩

---

ಆ ನದಿಯ ತೀರಗಳು. ಮುರಿದುಬಿದ್ದ ಆಯುಧಜಾಲಗಳೇ ತೀರವೃಕ್ಷಗಳು. ರಕ್ತದ ಕೋಡಿಯೇ ಹರಿಯುವ ಜಲಪ್ರವಾಹ. ಯಮಲೋಕವೆಂಬ ಸಮುದ್ರಕ್ಕೆ ಆ ನದಿಯು ಹರಿದುಹೋದುತ್ತಿತ್ತು !(೨೯). ಯಕೃತ್ತು, ಪ್ಲೀಹಗಳೆಂಬ ಮಾಂಸಖಂಡಗಳೇ ಕೆಸರಿನ ರಾಶಿ. ಅಸ್ತವ್ಯಸ್ತವಾಗಿ ಹರಡಿದ ಕರುಳುಗಳೇ ನೀರಿನ ಪಾಚಿ, ತರಿದುರುಳಿದ ದೇಹದ ಖಂಡಗಳೂ ತಲೆಗಳೂ ರಕ್ತದಲ್ಲಿ ಹರಿದಾಡುವ ಮೀನುಗಳು. ಕರಚರಣಾದ್ಯಂಗಗಳ ಬೆರಳು ಮುಂತಾದ ಅಂಗಶಕಲಗಳೇ ನದಿಯಲ್ಲಿರುವ ಗರಿಕೆ (೩೦). ಹದ್ದುಗಳೇ ರಣನದಿಯಲ್ಲಿ ಹಾರಾಡುವ ಹಂಸಗಳು. ಕಂಕಗಳೇ* ಸಾರಸಪಕ್ಷಿಗಳು. ತೇಲಾಡುವ ಮೇದಸ್ಸೇ ರಣನದಿಯ ನೊರೆ. ಪೆಟ್ಟುತಿಂದವರ ಆರ್ತನಾದವೇ ನದಿಯ ಭೋರ್ಗರೆತ! (೩೧). ಹೇಡಿಗಳಿಗೆ ಆ ನದಿಯನ್ನು ದಾಟಿಹೋಗಲು ಶಕ್ಯವೇ ಅಲ್ಲ! ಮಳೆಗಾಲವು ಕಳೆದಮೇಲೆ ಹಂಸಸಾರಸಾದಿ ಜಲಪಕ್ಷಿಗಳು ಬಂದು ಮುತ್ತುವಂತೆ ಆ ನದಿಯನ್ನು ಗೃಧ್ರಾದಿಪಕ್ಷಿಗಳು ಮುತ್ತಿದ್ದವು. ವಾನರ ಯೋಧರೂ ರಾಕ್ಷಸಭಟರೂ ಆ ಮಹಾನದಿಯನ್ನು ದಾಟಿದರು ! ಕಮಲಕೇಸರ ಗಳಿಂದ ಆವಿಲವಾದ ತಾವರೆಯ ಕೊಳದಲ್ಲಿ ಮತ್ತಗಜಗಳು ಇಳಿದು ಕಲಕಿ ಮೇಲೇರುವಂತೆ, ಆ ಯೋಧರು ರಣನದಿಯಲ್ಲಿಳಿದು ಹೊರಬರುತ್ತಿದ್ದರು (೩೨–೩೩).

---

*ಕಂಕ=ಕಬ್ಬಾರೆ ಹದ್ದು (heron). 'ಲೋಹಪೃಷ್ಠಸ್ತು ಕಂಕಃ ಸ್ಯಾತ್'– ಅಮರ.

ತತಃ ಸೃಜಂತಂ ಬಾಣೌಘಾನ್ ಪ್ರಹಸ್ತಂ ಸ್ಯಂದನೇ ಸ್ಥಿತಮ್ ।
ದದರ್ಶ ತರಸಾ ನೀಲೋ ವಿನಿಘ್ನಂತಂ ಪ್ಲವಂಗಮಾನ್ ॥ ೩೪

ಉದ್ಧೂತ ಇವ ವಾಯುಃ ಖೇ ಮಹದಭ್ರಬಲಂ ಬಲಾತ್ ।
ಸಮೀಕ್ಷ್ಯಾಭಿದ್ರುತಂ ಯುದ್ಧೇ ಪ್ರಹಸ್ತೋ ವಾಹಿನೀಪತಿಃ ॥ ೩೫

ರಥೇನಾದಿತ್ಯವರ್ಣೇನ ನೀಲಮೇವಾಭಿದುದ್ರುವೇ ।
ಸ ಧನುರ್ಧನ್ವಿನಾಂ ಶ್ರೇಷ್ಠೋ ವಿಕೃಷ್ಯ ಪರಮಾಹವೇ ॥ ೩೬

ನೀಲಾಯ ವ್ಯಸೃಜದ್ಬಾಣಾನ್ ಪ್ರಹಸ್ತೋ ವಾಹಿನೀಪತಿಃ ।
ತೇ ಪ್ರಾಪ್ಯ ವಿಶಿಖಾ ನೀಲಂ ವಿನಿರ್ಭಿದ್ಯ ಸಮಾಹಿತಾಃ ॥ ೩೭

ಮಹೀಂ ಜಗ್ಮುರ್ಮಹಾವೇಗಾ ರುಷಿತಾ ಇವ ಪನ್ನಗಾಃ ।
ನೀಲಃ ಶರೈರಭಿಹತೋ ನಿಶಿತೈರ್ಜ್ವಲನೋಪಮೈಃ ॥ ೩೮

ಸ ತಂ ಪರಮದುರ್ಧರ್ಷಮಾಪತಂತಂ ಮಹಾಕಪಿಃ ।
ಪ್ರಹಸ್ತಂ ತಾಡಯಾಮಾಸ ವೃಕ್ಷಮುತ್ಪಾಟ್ಯ ವೀರ್ಯವಾನ್ ॥ ೩೯

---

ಆಗ ಪ್ರಹಸ್ತನು ರಥವನ್ನೇರಿ ಬಾಣಜಾಲಗಳಿಂದ ಹೊಡೆದು ವಾನರರನ್ನು ಸದೆಬಡಿಯುತ್ತಿರುವುದನ್ನು ನೀಲನು ನೋಡಿದನು. ನೋಡಿದೊಡನೆ ಪ್ರಹಸ್ತನ ಎದುರಿಗೆ ಧಾವಿಸುತ್ತ ಬಂದನು. ಒಡನೆಯೇ ಸೇನಾಪತಿಯಾದ ಪ್ರಹಸ್ತನು ಆಕಾಶಮಾರ್ಗದಲ್ಲಿ ಉಲ್ಬಣವಾದ ಬಿರುಗಾಳಿಯು ನೀಲಮೇಘದ ಕಡೆಗೆ ರಭಸದಿಂದ ಬೀಸುವಂತೆ, ನೀಲನ ಕಡೆಗೆ ನುಗ್ಗಿದನು (೩೪–೩೫). ಹೆಸರಾಂತ ಬಿಲ್ಲಾಳೆನಿಸಿದ ಪ್ರಹಸ್ತನು ಬಿಲ್ಲಿನ ಹೆದೆಯನ್ನು ಮೀಟಿ ಹಿಡಿದು, ಸೂರ್ಯೋಜ್ವಲವಾದ ತನ್ನ ರಥವನ್ನು ಓಡಿಸುತ್ತ ನೀಲನನ್ನೇ ಎದುರಿಸಬೇಕೆಂದು ಧಾವಿಸಿದನು. ಅವನು ನೀಲನನ್ನೆದುರಿಸಿ ನಿಶಿಶಾಸ್ತ್ರಗಳನ್ನು ಗುರಿಯಿಟ್ಟು ಹೊಡೆಯಲು ಅವು ನೀಲನ ದೇಹವನ್ನು ಭೇದಿಸಿದವು. ಕೆರಳಿದ ಸರ್ಪಗಳಂತೆ ಆ ಶರಗಳು ಮಹಾವೇಗದಿಂದ ನೀಲನ ದೇಹವನ್ನು ತೂರಿ ನೆಲವನ್ನು ಹೊಕ್ಕವು (೩೬–೩೭). ಬೆಂಕಿಯಂತೆ ಬಿರುಸಾದ ಬಾಣಗಳಿಂದ ಅಭಿಹತನಾದ ಆ ಮಹಾವಾನರನು, ಒಂದು ವೃಕ್ಷವನ್ನು ಕಿತ್ತು ಪರಾಕ್ರಮಿಯಾದ ಪ್ರಹಸ್ತನನ್ನಪ್ಪಳಿಸಿ ಹೊಡೆದನು. ಆದರಿಂದ ಕ್ರುದ್ಧನಾದ ಆ ರಾಕ್ಷಸಪುಂಗವನು ಹೂಂಕರಿಸುತ್ತ ನೀಲನ ಮೇಲೆ ಸರಳುಗಳ ಮಳೆಗರೆದನು (೩೮–೩೯).

ಸ ತೇನಾಭಿಹತಃ ಕ್ರುದ್ಧೋ ನದನ್ ರಾಕ್ಷಸಪುಂಗವಃ ।
ವವರ್ಷ ಶರವರ್ಷಾಣಿ ಪ್ಲವಂಗಾನಾಂ ಚಮೂಪತೌ ॥ ೪೦

ತಸ್ಯ ಬಾಣಗಣಾನ್ ಘೋರಾನ್ ರಾಕ್ಷಸಸ್ಯ ಮಹಾಬಲಃ ।
ಅಪಾರಯನ್ ವಾರಯಿತುಂ ಪ್ರತ್ಯಗೃಹ್ಣನ್ನಿಮೀಲಿತಃ ॥ ೪೧

ಯಥೈವ ಗೋವೃಷೋ ವರ್ಷಂ ಶಾರದಂ ಶೀಘ್ರಮಾಗತಮ್ ।
ಏವಮೇವ ಪ್ರಹಸ್ತಸ್ಯ ಶರವರ್ಷಂ ದುರಾಸದಮ್ ॥ ೪೨

ನಿಮೀಲಿತಾಕ್ಷಃ ಸಹಸಾ ನೀಲಃ ಸೇಹೇ ಸುದಾರುಣಮ್ ।
ರೋಷಿತಃ ಶರವರ್ಷೇಣ ಸಾಲೇನ ಮಹತಾ ಮಹಾನ್ ॥ ೪೩

ಪ್ರಜಘಾನ ಹಯಾನ್ನೀಲಃ ಪ್ರಹಸ್ತಸ್ಯ ಮನೋಜವಾನ್ ।
ತತಃ ಸ ಚಾಪಮುದ್ಗೃಹ್ಯ ಪ್ರಹಸ್ತಸ್ಯ ಮಹಾಬಲಃ ॥ ೪೪

ಬಭಂಜ ತರಸಾ ನೀಲೋ ನನಾದ ಚ ಪುನಃ ಪುನಃ ।
ವಿಧನುಸ್ತು ಕೃತಸ್ತೇನ ಪ್ರಹಸ್ತೋ ವಾಹಿನೀಪತಿಃ ॥ ೪೫

ಪ್ರಗೃಹ್ಯ ಮುಸಲಂ ಘೋರಂ ಸ್ಯಂದನಾದವಪುಪ್ಲುವೇ ।
ತಾವುಭೌ ವಾಹಿನೀಮುಖ್ಯೌ ಜಾತವೈರೌ ತರಸ್ವಿನೌ ॥ ೪೬

---

ಬಲಾಢ್ಯನಾದ ನೀಲನು ಆ ಘೋರ ಶರರಾಶಿಗಳ ಹೊಡೆತವನ್ನು ತಡೆಯಲಾರದೆ ಕೆಲಹೊತ್ತು ಕಣ್ಮುಚ್ಚಿ ಸಹಿಸಿಕೊಳ್ಳಬೇಕಾಯಿತು. ಪ್ರಹಸ್ತನು ಸುರಿಸುತ್ತಿದ್ದ ದುರಾಸದವಾದ ಭೀಕರ ಶರವೃಷ್ಟಿಯನ್ನು, ಶರತ್ಕಾಲದಲ್ಲಿ ಥಟ್ಟನೆ ಸುರಿವ ಮಳೆಯನ್ನು ಗೂಳಿಯು ಕಣ್ಣುಚ್ಚಿ ತಾಳಿಕೊಳ್ಳುವಂತೆ, ನೀಲನು ಕೆಲಕಾಲ ತಾಳಿಕೊಂಡಿದ್ದನು (೪೦–೪೨). ಅನಂತರ ಆ ಶರವರ್ಷದಿಂದ ಕೆರಳಿದ ಶೂರಾಗ್ರಗಣ್ಯನಾದ ನೀಲನು ದೊಡ್ಡ ಸಾಲವೃಕ್ಷವನ್ನೆತ್ತಿ ಪ್ರಹಸ್ತನ ಶೀಘ್ರಗಾಮಿಗಳಾದ ಅಶ್ವಗಳನ್ನು ಬಡಿದು ಕೊಂದನು. ದುರ್ಧರ್ಷನಾದ ಆ ವೀರನು ಪ್ರಹಸ್ತನ ಧನುಸ್ಸನ್ನು ಛಲದಿಂದ ಕಿತ್ತೆಳೆದು ಮುರಿದೆಸೆದು ಮತ್ತೆ ಮತ್ತೆ ಸಿಂಹನಾದಮಾಡಿದನು (೪೩–೪೪). ಹೀಗೆ ನೀಲನಿಂದ ಧನುಸ್ಸನ್ನು ಕಳೆದುಕೊಂಡ ಪ್ರಹಸ್ತನು ಘೋರವಾದ ಮುಸಲವನ್ನು ಕೈಗೆತ್ತಿಕೊಂಡು ರಥದಿಂದ ಧುಮುಕಿದನು. ಬಲಶಾಲಿಗಳೂ ಬದ್ಧವೈರರೂ ಆದ ಆ ಇಬ್ಬರು ಸೇನಾಪತಿಗಳು ರಕ್ತದಿಗ್ಧಾಂಗರಾಗಿ ತೀಕ್ಷ್ಣದಂಷ್ಟ್ರಗಳಿಂದ

ಸ್ಥಿತೌ ಕ್ಷತಜದಿಗ್ಧಾಂಗೌ ಪ್ರಭಿನ್ನಾವಿವ ಕುಂಜರೌ ।
ಉಲ್ಲಿಖಂತೌ ಸುತೀಕ್ಷ್ಣಾಭಿರ್ದಂಷ್ಟ್ರಾಭಿರಿತರೇತರಮ್ ॥ ೪೭

ಸಿಂಹಶಾರ್ದೂಲಸದೃಶೌ ಸಿಂಹಶಾರ್ದೂಲಚೇಷ್ಟಿತೌ ।
ವಿಕ್ರಾಂತವಿಜಯೌ ವೀರೌ ಸಮರೇಷ್ವನಿವರ್ತಿನೌ ॥ ೪೮

ಕಾಂಕ್ಷಮಾಣೌ ಯಶಃ ಪ್ರಾಪ್ತುಂ ವೃತ್ರವಾಸವಯೋಃ ಸಮೌ ।
ಆಜಘಾನ ತದಾ ನೀಲಂ ಲಲಾಟೇ ಮುಸಲೇನ ಸಃ ॥ ೪೯

ಪ್ರಹಸ್ತಃ ಪರಮಾಯತ್ತಸ್ತಸ್ಯ ಸುಸ್ರಾವ ಶೋಣಿತಮ್ ।
ತತಃ ಶೋಣಿತದಿಗ್ಧಾಂಗಃ ಪ್ರಗೃಹ್ಯ ಸುಮಹಾತರುಮ್ ॥ ೫೦

ಪ್ರಹಸ್ತಸ್ಯೋರಸಿ ಕ್ರುದ್ಧೋ ವಿಸಸರ್ಜ ಮಹಾಕಪಿಃ ।
ತಮಚಿಂತ್ಯಪ್ರಹಾರಂ ಸ ಪ್ರಗೃಹ್ಯ ಮುಸಲಂ ಮಹತ್ ॥ ೫೧

ಅಭಿದುದ್ರಾವ ಬಲಿನಂ ಬಲಾನ್ನೀಲಂ ಪ್ಲವಂಗಮಮ್ ।
ತಮುಗ್ರವೇಗಂ ಸಂರಬ್ಧಮಾಪತಂತಂ ಮಹಾಕಪಿಃ ॥ ೫೨

---

ಒಂದನ್ನೊಂದು ತಿವಿಯುವ ಮದಗಜಗಳಂತೆ, ಒಬ್ಬರನ್ನೊಬ್ಬರು ಎದುರಿಸಿ ಹೋರಾಡುತ್ತ ನಿಂತರು (೪೫–೪೭). ಬಲಾಢ್ಯರಾದ ಆ ವೀರನು ಸಿಂಹ ಶಾರ್ದೂಲಗಳಂತೆ ಕ್ರೂರವಾಗಿ ಹೋರಾಡಿದರು. ಆ ಹೋರಾಟದಲ್ಲಿ ಒಮ್ಮೊಮ್ಮೆ ಒಬ್ಬೊಬ್ಬರಿಗೆ ವಿಜಯವು ಪ್ರಾಪ್ತವಾದಂತೆ ಕಾಣುತ್ತಿತ್ತು. ಇಬ್ಬರೂ ಯುದ್ಧದಿಂದ ಹಿಂದೆಗೆಯಲಿಲ್ಲ (೪೮). ಯುದ್ಧದಲ್ಲಿ ಕೀರ್ತಿಯನ್ನು ಗಳಿಸಬೇಕೆಂಬುದೊಂದೇ ಅವರ ಧ್ಯೇಯವಾಗಿತ್ತು. ಪ್ರಹಸ್ತನೂ ನೀಲನೂ ವೃತ್ರವಾಸರಂತೆ ಭೀಷಣವಾಗಿ ಕಾದಾಡಿದರು. ಆ ಸಮಯದಲ್ಲಿ ಪ್ರಹಸ್ತನು ಮುಸಲಾಯುಧದಿಂದ ತನ್ನ ಶಕ್ತಿಯನ್ನೆಲ್ಲ ಉಪಯೋಗಿಸಿ ನೀಲನ ಹಣೆಗೆ ಬಡಿದನು. ನೀಲನ ಹಣೆಯಿಂದ ರಕ್ತವು ಝುಲ್ಲೆಂದು ಚಿಮ್ಮಿತು. ನೀಲನ ದೇಹ ವೆಲ್ಲವೂ ರಕ್ತದಿಂದ ನೆನೆಯಿತು. (೪೯–೫೦). ಅವನು ರೋಷಾವೇಶದಿಂದ ಒಂದು ದೊಡ್ಡ ವೃಕ್ಷವನ್ನು ಪ್ರಹಸ್ತನ ಎದೆಗೆ ಅಪ್ಪಳಿಸಿ ಹೊಡೆದನು. ಆಗ ಪ್ರಹಸ್ತನು ಊಹಾತೀತ ಪ್ರಹಾರಬಲವುಳ್ಳ ಮುಸಲಾಯುಧವನ್ನೆತ್ತಿ ಕಂಡು, ನೀಲನ್ನನು ಬಡಿಯಬೇಕೆಂದು ರಭಸದಿಂದ ಮುನ್ನುಗ್ಗಿದನು (೫೧–೫೨).

ತತಃ ಸಂಪ್ರೇಕ್ಷ್ಯ ಜಗ್ರಾಹ ಮಹಾವೇಗೋ ಮಹಾಶಿಲಾಮ್ ।
ತಸ್ಯ ಯುದ್ಧಾಭಿಕಾಮಸ್ಯ ಮೃಧೇ ಮುಸಲಯೋಧಿನಃ ॥ ೫೩

ಪ್ರಹಸ್ತಸ್ಯ ಶಿಲಾಂ ನೀಲೋ ಮೂರ್ಧ್ನಿ ತೂರ್ಣಮಪಾತಯತ್ ।
ಸಾ ತೇನ ಕಪಿಮುಖ್ಯೇನ ವಿಮುಕ್ತಾ ಮಹತೀ ಶಿಲಾ ॥ ೫೪

ಬಿಭೇದ ಬಹುಧಾ ಘೋರಾ ಪ್ರಹಸ್ತಸ್ಯ ಶಿರಸ್ತದಾ ।
ಸ ಗತಾಸುರ್ಗತಶ್ರೀಕೋ ಗತಸತ್ತ್ವೋ ಗತೇಂದ್ರಿಯಃ ॥ ೫೫

ಪಪಾತ ಸಹಸಾ ಭೂಮೌ ಛಿನ್ನಮೂಲ ಇವ ದ್ರುಮಃ ।
ಪ್ರಭಿನ್ನಶಿರಸಸ್ತಸ್ಯ ಬಹು ಸುಸ್ರಾವ ಶೋಣಿತಮ್ ॥ ೫೬

ಶರೀರಾದಪಿ ಸುಸ್ರಾವ ಗಿರೇಃ ಪ್ರಸ್ರವಣಂ ಯಥಾ ।
ಹತೇ ಪ್ರಹಸ್ತೇ ನೀಲೇನ ತದಕಂಪ್ಯಂ ಮಹದ್ಬಲಮ್ ॥ ೫೭

ರಕ್ಷಸಾಮಪ್ರಹೃಷ್ಟಾನಾಂ ಲಂಕಾಮಭಿಜಗಾಮ ಹ ।
ನ ಶೇಕುಃ ಸಮರೇ ಸ್ಥಾತುಂ ನಿಹತೇ ವಾಹಿನೀಪತೌ ॥ ೫೮

ಸೇತುಬಂಧಂ ಸಮಾಸಾದ್ಯ ವಿಶೀರ್ಣಂ ಸಲಿಲಂ ಯಥಾ ।
ಹತೇ ತಸ್ಮಿಂಶ್ಚಮೂಮುಖ್ಯೇ ರಾಕ್ಷಸಾಸ್ತೇ ನಿರುದ್ಯಮಾಃ ॥ ೫೯

---

ಕೂಡಲೆ ಬಲಾಢ್ಯನಾದ ನೀಲನು ವೇಗದಿಂದ ಒಂದು ದೊಡ್ಡ ಬಂಡೆಯನ್ನೆತ್ತಿ ಪ್ರಹಸ್ತನ ತಲೆಯ ಮೇಲೆ ಕುಕ್ಕಿದನು ಭೀಷಣಾಕೃತಿಯ ಆ ಬಂಡೆಯು ಬಹು ದೊಡ್ಡದಾದ್ದರಿಂದ ಪ್ರಹಸ್ತನ ತಲೆಯು ಚೂರುಚೂರಾಗಿ ಒಡೆದುಹೋಯಿತು. ಅವನ ತೇಜಸ್ಸು ಮಾಸಿತು; ಸತ್ತ್ವವಡಿಗಿತು; ಇಂದ್ರಿಯಗಳು ವಿಚಲಿತವಾದವು ಪ್ರಹಸ್ತನು ಗತಪ್ರಾಣನಾಗಿ, ಬುಡಕಡಿದ ಮರದಂತೆ ನೆಲದಮೇಲುರುಳಿದನು. ಅವನ ತಲೆಯಿಂದ ರಕ್ತವು ಹೊನಲಾಗಿ ಹರಿಯಿತು (೫೩–೫೬) ಪ್ರಹಸ್ತನ ದೇಹದಿಂದಲೂ ರಕ್ತವು ಸೂರೆಯಾಯಿತು. ಹೀಗೆ ಪ್ರಹಸ್ತನು ನೀಲನಿಂದ ಹತನಾಗಲು, ಅದುವರೆಗೆ ಅಚಲಧೈರ್ಯದಿಂದ ಹೊಡೆದಾಡುತ್ತಿದ್ದ ರಾಕ್ಷಸಸೇನೆಯು ವಿಷಾದಿಸುತ್ತ ಲಂಕೆಗೆ ಹಿಂದಿರುಗಿತು. ಸೇನಾನಿಯು ನಿಹತನಾದಮೇಲೆ ಆ ಸೇನೆಗೆ ಯುದ್ಧಮಾಡಲು ಧೈರ್ಯವಾಗಲಿಲ್ಲ (೫೭–೫೮) ತಮ್ಮೆಲ್ಲರಿಗೂ ಆಶ್ರಯನಾದ ಪ್ರಹಸ್ತನು ಸತ್ತು ಹೋಗಲು, ಅಡ್ಡಲಾದ ಅಣೆಕಟ್ಟೆ ಒಡೆದುಹೋದಾಗ ಜಲರಾಶಿಯು ನಿಲ್ಲದೆ ಹರಿದುಹೋಗು

ರಕ್ಷಃಪತಿಗೃಹಂ ಗತ್ವಾ ಧ್ಯಾನಮೂಕತ್ವಮಾಸ್ಥಿತಾಃ ।
ಪ್ರಾಪ್ತಾಃ ಶೋಕಾರ್ಣವಂ ತೀವ್ರಂ ನಿಃಸಂಜ್ಞಾ ಇವ ತೇಽಭವನ್ ॥

ತತಸ್ತು ನೀಲೋ ವಿಜಯೀ ಮಹಾಬಲಃ
ಪ್ರಶಸ್ಯಮಾನಃ ಸ್ವಕೃತೇನ ಕರ್ಮಣಾ ।
ಸಮೇತ್ಯ ರಾಮೇಣ ಸಲಕ್ಷ್ಮಣೇನ ಚ
ಪ್ರಹೃಷ್ಟರೂಪಸ್ತು ಬಭೂವ ಯೂಥಪಃ ॥ ೬೧

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಷ್ಟಪಂಚಾಶಃ ಸರ್ಗಃ

---

ವಂತೆ, ರಾಕ್ಷಸಯೋಧರು ನಿಲ್ಲದೆ ಓಡಿಹೋದರು (೫೯). ರಾಕ್ಷಸಾಧಿಪತಿಯಾದ ರಾವಣನ ಅರಮನೆಯ ಬಳಿಗೆ ಹೋಗಿ ಚಿಂತಾಕುಲರಾದರು. ಮಾತನಾಡಲಾರದೆ ಮೂಕರಾದರು. ತೀವ್ರವಾದ ಶೋಕಸಮುದ್ರದಲ್ಲಿ ಮುಳುಗಿ ಎಚ್ಚರದಪ್ಪಿದಂತಾದರು (೬೦). ಇತ್ತ ವಾನರಸೇನಾಪತಿಯಾದ ನೀಲನು ವಿಜಯಶಾಲಿಯಾದನೆಂದು, ಅವನ ಶೌರ್ಯಕ್ಕಾಗಿ ವಾನರರು ಕೊಂಡಾಡಿದರು. ನೀಲನು ಶ್ರೀರಾಮಲಕ್ಷ್ಮಣರ ಬಳಿಗೆ ಹೋಗಿ ನಡೆದ ವಿಷಯವನ್ನು ವಿವರಿಸಿ ಸಂತೋಷದಲ್ಲಿದ್ದನು (೬೧).

ಇಲ್ಲಿಗೆ ಶ್ರೀಮದ್ರಾಮಾಯಮದ ಯುದ್ಧಕಾಂಡದಲ್ಲಿ ಐವತ್ತೆಂಟನೆಯ ಸರ್ಗ.

---

## ಏಕೋನಷಷ್ಟಿತಮಃ ಸರ್ಗಃ

ರಾವಣಾಭಿಷೇಣನಮ್

ತಸ್ಮಿನ್ ಹತೇ ರಾಕ್ಷಸಸೈನ್ಯಪಾಲೇ
ಪ್ಲವಂಗಮಾನಾಮೃಷಭೇಣ ಯುದ್ಧೇ ।
ಭೀಮಾಯುಧಂ ಸಾಗರತುಲ್ಯವೇಗಂ
ವಿದುದ್ರುವೇ ರಾಕ್ಷಸರಾಜಸೈನ್ಯಮ್ ॥ ೧

ಗತ್ವಾಥ ರಕ್ಷೋಽಧಿಪತೇಃ ಶಶಂಸುಃ
ಸೇನಾಪತಿಂ ಪಾವಕಸೂನುಶಸ್ತಮ್ ।
ತಚ್ಚಾಪಿ ತೇಷಾಂ ವಚನಂ ನಿಶಮ್ಯ
ರಕ್ಷೋಽಧಿಪಃ ಕ್ರೋಧವಶಂ ಜಗಾಮ ॥ ೨

ಸಂಖ್ಯೇ ಪ್ರಹಸ್ತಂ ನಿಹತಂ ನಿಶಮ್ಯ
ಶೋಕಾರ್ದಿತಃ ಕ್ರೋಧಪರೀತಚೇತಾಃ ।

### ಸರ್ಗ ೫೯

ಯುದ್ಧರಂಗಕ್ಕೆ ರಾವಣನ ಪ್ರವೇಶ. ಹನುಮಂತ ಮತ್ತು ನೀಲರೊಡನೆ ಯುದ್ಧ.
ಲಕ್ಷ್ಮಣನು ರಾವಣನ ಶಕ್ತ್ಯಾಯುಧದಿಂದ ಮೂರ್ಛಿತನಾಗುವುದು.
ಶ್ರೀರಾಮನೊಡನೆ ಯುದ್ಧ ರಾವಣನ ಪರಾಜಯ.

ರಾಕ್ಷಸಸೇನಾನಿಯಾದ ಪ್ರಹಸ್ತನು ವಾನರೋತ್ತಮನಾದ ನೀಲನಿಂದ ಈ ಪ್ರಕಾರದಲ್ಲಿ ಹತನಾದನು. ಅದುವರೆಗೆ ಸಮುದ್ರದಂತೆ ಅಲೆಯಲೆಯಾಗಿ ವೇಗದಿಂದ ನುಗ್ಗಿ ಅಬ್ಬರಿಸುತ್ತಿದ್ದ ಭೀಷಣಾಯುಧಧಾರಿಗಳಾದ ರಾಕ್ಷಸ ಯೋಧರು ಪಲಾಯನಮಾಡಿದರು (೧). ಅವರು ಲಂಕೆಗೆ ಹೋಗಿ ರಾವಣನನ್ನು ಕಂಡು, ಅಗ್ನಿಪುತ್ರನಾದ ನೀಲನಿಂದ ಸೇನಾಪತಿಯಾದ ಪ್ರಹಸ್ತನು ಹತನಾದನೆಂಬ ಸುದ್ದಿಯನ್ನು ಮುಟ್ಟಿಸಿದರು. ಅದನ್ನು ಕೇಳಿ ರಾಕ್ಷಸೇಂದ್ರನು ಕ್ರುದ್ಧನಾದನು (೨). ಪ್ರಹಸ್ತನ ಮರಣದಿಂದ ಅವನಿಗೆ ಬಹಳ ದುಃಖವಾಯಿತು; ಕೋಪವೂ ಅಡರಿತು, ಇಂದ್ರನು ದೇವತೆಗಳಿಗೆ ಹೇಳುವಂತೆ,

ಉವಾಚ ತಾನ್ಸ್ವಯುತಯೋಧಮುಖ್ಯಾ-
ನಿಂದ್ರೋ ಯಥಾ ಚಾಮರಯೋಧಮುಖ್ಯಾನ್ ॥ ೩

ನಾವಜ್ಞಾ ರಿಪವೇ ಕಾರ್ಯಾ ಯೈರಿಂದ್ರಬಲಸೂದನಃ ।
ಸೂದಿತಃ ಸೈನ್ಯಪಾಲೋ ಮೇ ಸಾನುಯಾತ್ರಃ ಸಕುಂಜರಃ ॥ ೪

ಸೋಽಹಂ ರಿಪುವಿನಾಶಾಯ ವಿಜಯಾಯಾವಿಚಾರಯನ್ ।
ಸ್ವಯಮೇವ ಗಮಿಷ್ಯಾಮಿ ರಣಶೀರ್ಷಂ ತದದ್ಭುತಮ್ ॥ ೫

ಅದ್ಯ ತದ್ವಾನರಾನೀಕಂ ರಾಮಂ ಚ ಸಹಲಕ್ಷ್ಮಣಮ್ ।
ನಿರ್ದಹಿಷ್ಯಾಮಿ ಬಾಣೌಘೈರ್ವನಂ ದೀಪ್ತೈ ರಿವಾಗ್ನಿಭಿಃ ॥ ೬

ಅದ್ಯ ಸಂತರ್ಪಯಿಷ್ಯಾಮಿ ಪೃಥಿವೀಂ ಕಪಿಶೋಣಿತೈಃ ॥

ಸ ಏವಮುಕ್ತ್ವಾ ಜ್ವಲನಪ್ರಕಾಶಂ
ರಥಂ ತುರಂಗೋತ್ತಮರಾಜಯುಕ್ತಮ್ ।
ಪ್ರಕಾಶಮಾನಂ ವಪುಷಾ ಜ್ವಲಂತಂ
ಸಮಾರುರೋಹಾಮರರಾಜಶತ್ರುಃ ॥ ೭

---

ಠೀವಿಯಿಂದ ಆ ರಾಕ್ಷಸಾಧಿಪನು ಭಟರನ್ನು ಕುರಿತು “ಎಲೈ ಯೋಧರೆ, ಈ ಶತ್ರುವನ್ನು ಸಾಮಾನ್ಯನೆಂದು ಅಲಕ್ಷಿಸಬಾರದು! ಇಂದ್ರನ ಬಲವನ್ನೇ ಸೂರೆಮಾಡಿದ ನನ್ನ ಸೇನಾನಿಯನ್ನು ಈತನು ಸಂಹರಿಸಿದ್ದಾನೆ. ನಮ್ಮ ರಾಕ್ಷಸಪಡೆಯನ್ನೂ ಗಜಸೇನೆಯನ್ನೂ ಈ ರಾಮನು ನಾಶಮಾಡಿದ್ದಾನೆ (೩–೪). ಇನ್ನು ವಿಚಾರಕ್ಕೆ ಅವಕಾಶವಿಲ್ಲ, ಶತ್ರುವನ್ನು ಧ್ವಂಸಮಾಡುವುದಕ್ಕಾಗಿ ನಾನೇ ರಣರಂಗಕ್ಕೆ ಧುಮುಕುವೆನು. ಅದ್ಭುತವಾದ ಯುದ್ಧಭೂಮಿಯನ್ನು ಪ್ರವೇಶಿಸುವೆನು. ಕಾಳ್ಗಿಚ್ಚಿನಿಂದ ಅರಣ್ಯವನ್ನು ಸುಡುವಂತೆ, ಪ್ರಜ್ವಲಿಸುವ ನನ್ನ ಬಾಣರಾಶಿಗಳಿಂದ ಕಪಿಸೇನೆಯನ್ನೂ ರಾಮಲಕ್ಷ್ಮಣರನ್ನೂ ಸುಟ್ಟು ಉರುಬುವೆನು! ಕಪಿಗಳ ಕೆನ್ನೆತ್ತರನ್ನು ಹರಿಸಿ ಪೃಥಿವಿಯನ್ನು ತೃಪ್ತಿಪಡಿಸುವೆನು” ಎಂದನು (೫–೬). ಹೀಗೆಂದು ನುಡಿದು ಅಮರೇಂದ್ರ ಶತ್ರುವಾದ ರಾವಣನು ಉತ್ತಮಾಶ್ವಗಳನ್ನು ಹೂಡಿದ್ದ ಅಗ್ನಿಸಂಕಾಶವಾದ ದಿವ್ಯರಥವನ್ನೇರಿದನು. ಶಂಖ, ಭೇರಿ, ಮದ್ದಲೆ ಮುಂತಾದ ವಾದ್ಯಗಳು

ಸ ಶಂಖಭೇರೀಪಣವಪ್ರಣಾದೈ-
ರಾಸ್ಫೋಟಿತಕ್ಷ್ವೇಲಿತಸಿಂಹನಾದೈಃ ।
ಪುಣ್ಯೈಃ ಸ್ತವೈಶ್ಚಾಪ್ಯಭಿಪೂಜ್ಯಮಾನ-
ಸ್ತದಾ ಯಯೌ ರಾಕ್ಷಸರಾಜಮುಖ್ಯಃ ॥ ೮

ಸ ಶೈಲಜೀಮೂತನಿಕಾಶರೂಪೈ-
ರ್ಮಾಂಸಾದನೈಃ ಪಾವಕದೀಪ್ತನೇತ್ರೈಃ ।
ಬಭೌ ವೃತೋ ರಾಕ್ಷಸರಾಜಮುಖ್ಯೋ
ಭೂತೈರ್ವೃತೋ ರುದ್ರ ಇವಾಮರೇಶಃ ॥ ೯

ತತೋ ನಗರ್ಯಾಃ ಸಹಸಾ ಮಹೌಜಾ
ನಿಷ್ಕ್ರಮ್ಯ ತದ್ವಾನರಸೈನ್ಯಮುಗ್ರಮ್ ।
ಮಹಾರ್ಣವಾಭ್ರಸ್ತನಿತಂ ದದರ್ಶ
ಸಮುದ್ಯತಂ ಪಾದಪಶೈಲಹಸ್ತಮ್ ॥ ೧೦

ತದ್ರಾಕ್ಷಸಾನೀಕಮತಿಪ್ರಚಂಡ-
ಮಾಲೋಕ್ಯ ರಾಮೋ ಭುಜಗೇಂದ್ರಬಾಹುಃ ।

---

ಭೋರ್ಗರೆದವು ರಾಕ್ಷಸಭಟರು ಭುಜಗಳನ್ನು ಚಪ್ಪರಿಸಿಕೊಳ್ಳುತ್ತ ಸೆಡ್ಡು ಹೊಡೆಯುತ್ತ ಸಿಂಹನಾದಗೈಯುತ್ತ ಹಿಂಬಾಲಿಸಿದರು. ಹೊಗಳುಭಟರು ಮಂಗಳಸ್ತೋತ್ರಗಳಿಂದ ಹೊಗಳುತ್ತಿರಲು, ರಾಕ್ಷಸೇಂದ್ರನು ಯುದ್ಧಾಭಿಮುಖನಾಗಿ ಪ್ರಯಾಣಮಾಡಿದನು (೭-೮). ಅವನ ಸುತ್ತಲೂ ಶೈಲೋನ್ನತ ಶರೀರರೂ ಮೇಘಶ್ಯಾಮಲಕಾಯರೂ ಅಗ್ನಿ ಸಂಕಾಶದೀಪ್ತನೇತ್ರರೂ ಮಾಂಸ ಭಕ್ಷಕರೂ ಆದ ರಾಕ್ಷಸರು ಗುಂಪಾಗಿ ಹೋಗುತ್ತಿರುವಾಗ, ರಾವಣನು ಪ್ರಮಥಗಣಗಳಿಂದ ಪರಿವೃತನೂ ದೇವೇಶ್ವರನೂ ಆದ ರುದ್ರನಂತೆ ಕಂಗೊಳಿಸುತ್ತಿದ್ದನು (೯). ಈ ರೀತಿಯಲ್ಲಿ ರಾವಣನು ವೈಭವದಿಂದ ಲಂಕಾನಗರದ ಹೊರಗೆ ಬಂದು, ಮುಂದೆ ನೆರೆದಿದ್ದ ವಾನರಸೇನೆಯನ್ನು ವೀಕ್ಷಿಸಿದನು. ಉಗ್ರವಾದ ಆ ಕಪಿಸೇನೆಯು ವೃಕ್ಷಗಳನ್ನೂ ಶೈಲಗಳನ್ನೂ ಹೊತ್ತು ಯುದ್ಧಸನ್ನದ್ಧವಾಗಿತ್ತು, ಮಹಾಸಮುದ್ರದಂತೆ ಭೋರ್ಗರೆಯುತ್ತ ಮೇಘಮಂಡಲದಂತೆ ಗರ್ಜಿಸುತ್ತ ನಿಂತಿತ್ತು (೧೦). ಪ್ರಚಂಡವಾದ ರಾಕ್ಷಸಸೇನೆಯು ಹೊರಬರು

ವಿಭೀಷಣಂ ಶಸ್ತ್ರಭೃತಾಂ ವರಿಷ್ಠ-
ಮುವಾಚ ಸೇನಾನುಗತಃ ಪೃಥುಶ್ರೀಃ ॥ ೧೧

ನಾನಾಪತಾಕಾಧ್ವಜಶಸ್ತ್ರಜುಷ್ಟಂ ।
ಪ್ರಾಸಾಸಿಶೂಲಾಯುಧಶಸ್ತ್ರಜುಷ್ಟಮ್ ॥
ಸೈನ್ಯಂ ಮಹೇಂದ್ರೋಪಮನಾಗಜುಷ್ಟಮ್ ।
ಕಸ್ಯೇದಮಕ್ಷೋಭ್ಯ ಮಭೀರುಜುಷ್ಟಮ್ ॥ ೧೨

ತತಸ್ತು ರಾಮಸ್ಯ ನಿಶಮ್ಯ ವಾಕ್ಯಂ
ವಿಭೀಷಣಃ ಶಕ್ರಸಮಾನವೀರ್ಯಃ ।
ಶಶಂಸ ರಾಮಸ್ಯ ಬಲಪ್ರವೇಕಂ
ಮಹಾತ್ಮನಾಂ ರಾಕ್ಷಸಪುಂಗವಾನಾಮ್ ॥ ೧೩

ಯೋಽಸೌ ಗಜಸ್ಕಂಧಗತೋ ಮಹಾತ್ಮಾ
ನವೋದಿತಾರ್ಕೋಪಮತಾಮ್ರವಕ್ತ್ರಃ ।
ಪ್ರಕಂಪಯನ್ನಾಗಶಿರೋಽಭ್ಯುಪೈತಿ
ಹ್ಯಕಂಪನಂ ತ್ವೇನಮವೇಹಿ ರಾಜನ್ ॥ ೧೪

---

ತ್ತಿರುವುದನ್ನು ಕಪಿಸೇನಾಗ್ರದಲ್ಲಿ ನಿಂತಿದ್ದ ಶ್ರೀರಾಮನು ಆಲೋಕಿಸಿದನು, ಸರ್ಪ ರಾಜನಂತೆ ದೀರ್ಘವರ್ತುಲವಾದ ಬಾಹುಗಳುಳ್ಳ ಆ ತೇಜಸ್ವಿಯು ಬಳಿಯಲ್ಲಿದ್ದ ಶೂರನಾದ ವಿಭೀಷಣನನ್ನು ಹೀಗೆಂದು ಕೇಳಿದನು (೧೧): ''ವಿಭೀಷಣ, ಅಕ್ಷೋಭ್ಯವಾಗಿ ತೋರುವ ಈ ಸೇನೆ ಯಾರದು? ವಿವಿಧಾಕೃತಿಯ ಧ್ವಜ ಪತಾಕೆಗಳಿಂದಲೂ ಪ್ರಾಸ, ಖಡ್ಗ, ಶೂಲ ಮುಂತಾದ ಆಯುಧಗಳಿಂದಲೂ ವಿರಾಜಿಸುತ್ತಿದೆ. ಆನೆಗಳು ಮಹೇಂದ್ರಪರ್ವತದಂತೆ ಕಾಣುತ್ತಿವೆ. ಧೀರರಾದ ಯೋಧರಿಂದ ತುಂಬಿದೆ'' ಎಂದನು (೧೨). ಶ್ರೀರಾಮನು ಹೀಗೆ ಪ್ರಶ್ನೆ ಮಾಡಲು ಇಂದ್ರಸಮಾನಪರಾಕ್ರಮಿಯಾದ ವಿಭೀಷಣನು ಆ ಸೇನೆಯಲ್ಲಿದ್ದ ರಾಕ್ಷಸಶ್ರೇಷ್ಠರಲ್ಲಿ ಕೆಲವು ಮುಖ್ಯ ನಾಯಕರನ್ನು ಶ್ರೀರಾಮನಿಗೆ ತಿಳಿಸಿದನು (೧೩): ''ರಾಜಪುತ್ರ –ಶ್ರೀರಾಮ, ಮಹಾಶರೀರದ ಒಬ್ಬ ರಾಕ್ಷಸನು ಆನೆಯ ಹೆಗಲೇರಿ ಬರುತ್ತಿದ್ದಾನೆ, ನೋಡು. ಬಾಲಸೂರ್ಯನಂತೆ ಅವನ ಮುಖವು ಎಷ್ಟು ಕೆಂಪಾಗಿದೆ ! ಅವನ ಭಾರಕ್ಕೆ ಆನೆಯ ಕತ್ತು ಬಳುಕುತ್ತಿದೆ ! ಆ ರಾಕ್ಷಸನ

ಯೋಽಸೌ ರಥಸ್ಥೋ ಮೃಗರಾಜಕೇತು-
ರ್ಧೂನ್ವನ್ ಧನುಃ ಶಕ್ರಧನುಃ ಪ್ರಕಾಶಮ್ ।
ಕರೀವ ಭಾತ್ಯುಗ್ರವಿವೃತ್ತ ದಂಷ್ಟ್ರಃ
ಸ ಇಂದ್ರಜಿನ್ನಾಮ ವರಪ್ರಧಾನಃ ॥ ೧೫

ಯಶ್ಚೈಷ ವಿಂಧ್ಯಾಸ್ತಮಹೇಂದ್ರ ಕಲ್ಪೋ
ಧನ್ವೀ ರಥಸ್ಥೋಽತಿರಥೋಽತಿವೀರಃ ।
ವಿಸ್ಫಾರಯಂಶ್ಚಾಪಮತುಲ್ಯಮಾನಂ
ನಾಮ್ನಾತಿಕಾಯೋಽತಿವಿವೃದ್ಧ ಕಾಯಃ ॥ ೧೬

ಯೋಽಸೌ ನವಾರ್ಕೋದಿತತಾಮ್ರಚಕ್ಷು-
ರಾರುಹ್ಯ ಘಂಟಾನಿನದಪ್ರಣಾದಮ್ ।
ಗಜಂ ಖರಂ ಗರ್ಜತಿ ವೈ ಮಹಾತ್ಮಾ
ಮಹೋದರೋ ನಾಮ ಸ ಏಷ ವೀರಃ ॥ ೧೭

---

ಹೆಸರು ಅಕಂಪನ* (೧೪). ಸಿಂಹಧ್ವಜವಿರುವ ರಥವೊಂದು ಕಾಣಿಸುತ್ತದೆ ಯಲ್ಲವೆ? ಅದರಲ್ಲೊಬ್ಬನು ಇಂದ್ರಧನುಸ್ಸಿನಂತಿರುವ ತನ್ನ ಧನುಸ್ಸನ್ನು ಮಿಡಿಯುತ್ತಿದ್ದಾನೆ. ಉಗ್ರವಾದ ಕೋರೆಯ ಹಲ್ಲುಗಳನ್ನು ಚಾಚಿರುವ ಮತ್ತಗಜದಂತೆ ತೋರುತ್ತಾನೆ. ಆತನೇ ಇಂದ್ರಜಿತು. ಬ್ರಹ್ಮದತ್ತವರಬಲ ದಿಂದ ವಿಖ್ಯಾತನಾಗಿದ್ದಾನೆ (೧೫). ರಾಘವ, ಅತ್ತ ನೋಡು. ಅತ್ಯಂತ ದೊಡ್ಡ ಶರೀರವುಳ್ಳ ಒಬ್ಬ ವೀರನು ವಿಂಧ್ಯಾಸ್ತಗಿರಿಗಳಂತೆಯೂ ಮಹೇಂದ್ರ ಪರ್ವತದಂತೆಯೂ ಕಾಣುತ್ತಿದ್ದಾನೆ. ಅತಿರಥನೆನಿಸಿದ ಆತನು ರಥದಲ್ಲಿ ಕುಳಿತು ಧನುಸ್ಸನ್ನು ಹಿಡಿದಿದ್ದಾನೆ. ಬಹುದೊಡ್ಡದಾದ ಆ ಧನುಸ್ಸನ್ನು ಝೇಂಕರಿಸುತ್ತಿದ್ದಾನೆ. ಆತನೇ ಅತಿಕಾಯ (೧೬). ಅತ್ತ ಕಡೆಯಲ್ಲಿ ಬಾಲಾರ್ಕನಂತೆ ತಾಮ್ರಾಕ್ಷನಾದ ಒಬ್ಬ ರಾಕ್ಷಸನು ಆನೆಯನ್ನೇರಿ ಬರುತ್ತಿದ್ದಾನೆ. ಆನೆಯ ಕೊರಳಿಗೆ ಕಟ್ಟಿದ ಗಂಟೆಗಳು ಶಬ್ದಮಾಡುತ್ತಿವೆ. ಕ್ರೂರವಾಗಿ ಗರ್ಜಿಸುತ್ತಿರುವ ಆ ಧೀರನೇ ಮಹೋದರ (೧೭).

---

* ಇವನು ಹನುಮಂತನಿಂದ ಹತನಾದ ಅಕಂಪನನಲ್ಲ.

ಯೋಽಸೌ ಹಯಂ ಕಾಂಚನಚಿತ್ರಭಾಂಡ-
ಮಾರುಹ್ಯ ಸಂಧ್ಯಾಭ್ರಗಿರಿಪ್ರಕಾಶಮ್।
ಪ್ರಾಸಂ ಸಮುದ್ಯಮ್ಯ ಮರೀಚಿನದ್ಧಂ
ಪಿಶಾಚ ಏಷೋಽಶನಿತುಲ್ಯವೇಗಃ ॥ ೧೮

ಯಶ್ಚೈಷ ಶೂಲಂ ನಿಶಿತಂ ಪ್ರಗೃಹ್ಯ
ವಿದ್ಯುತ್ಪ್ರಭಂ ಕಿಂಕರವಜ್ರವೇಗಮ್।
ವೃಷೇಂದ್ರಮಾಸ್ಥಾಯ ಗಿರಿಪ್ರಕಾಶ-
ಮಾಯಾತಿ ಯೋಽಸೌ ತ್ರಿಶಿರಾ ಯಶಸ್ವೀ ॥ ೧೯

ಅಸೌ ಚ ಜೀಮೂತನಿಕಾಶರೂಪಃ
ಕುಂಭಃ ಪೃಥುವ್ಯೂಢಸುಜಾತವಕ್ಷಾಃ ।
ಸಮಾಹಿತಃ ಪನ್ನಗರಾಜಕೇತು-
ರ್ವಿಸ್ಫಾರಯನ್ ಭಾತಿ ಧನುರ್ವಿಧೂನ್ವನ್ ॥ ೨೦

ಯಶ್ಚೈಷ ಜಾಂಬೂನದವಜ್ರಜುಷ್ಟಂ
ದೀಪ್ತಂ ಸಧೂಮಂ ಪರಿಘಂ ಪ್ರಗೃಹ್ಯ ।

---

ಶ್ರೀರಾಮ, ಅಲ್ಲಿ ನೋಡು. ಕಾಂಚನಭೂಷಣಾಲಂಕೃತವಾದ ಒಂದು ಕುದುರೆಯು ಸಂಜೆಗೆಂಪಿನ ಮೋಡದಿಂದ ಭೂಷಿತವಾದ ಬೆಟ್ಟದಂತೆ ಕಾಣುತ್ತಿದೆ. ಕಿಡಿಸೂಸುವ ಪ್ರಾಸಾಯುಧವನ್ನು ಹಿಡಿದು ಆ ಕುದುರೆಯ ಮೇಲೊಬ್ಬ ಸವಾರನು ಬರುತ್ತಿದ್ದಾನೆ. ಅವನ ಹೆಸರು ಪಿಶಾಚ ! ಸಿಡಿಲಿನಂತೆ ಸಿಡಿದೆರಗುವ ಶೂರನಿವನು (೧೮). ಅಲ್ಲಿ ಮಿಂಚನಂತೆ ಮಿಂಚುವ ನಿಶಿತವಾದ ಶೂಲವನ್ನೊಬ್ಬನು ಹಿಡಿರುವನಲ್ಲವೆ? ವಜ್ರಾಯುಧದ ವೇಗವನ್ನೂ ಮೀರಿಸುವ ಶೂಲವದು. ಪರ್ವತಾಕಾರದ ವೃಷಭವನ್ನೇರಿ ಬರುತ್ತಿರುವ ಆತನ ಹೆಸರು ತ್ರಿಶಿರ. ಶೂರನೆಂದು ಕೀರ್ತಿಯನ್ನು ಗಳಿಸಿದ್ದಾರೆ. (೧೯). ಅಲ್ಲಿ ನೋಡು. ಮೇಘದಂತೆ ನೀಲಕಾಯನಾದ ಆತನು ಕುಂಭ. ಅವನ ಎದೆ ಎಷ್ಟು ವಿಶಾಲವಾಗಿದೆ ! ಸರ್ಪಧ್ವಜವನ್ನೇರಿಸಿ ಕವಚಸನ್ನದ್ಧನಾಗಿ ಬಿಲ್ಲನ್ನು ಮಿಡಿಯುತ್ತ ಬರತ್ತಿದ್ದಾನೆ (೨೦). ಶ್ರೀರಾಮ, ಅಲ್ಲೊಬ್ಬ ರಾಕ್ಷಸನು ಸುವರ್ಣವಜ್ರಗಳಿಂದ ಭೂಷಿತವಾಗಿ ಹೊಗೆಯುಗುಳುತ್ತ ಕಿಡೆಗೆದರುವ ಪರಿಘಾಯುಧವನ್ನು

ಆಯಾತಿ ರಕ್ಷೋಬಲಕೇತುಭೂತ-
ಸ್ತ್ವಸೌ ನಿಕುಂಭೋಽದ್ಭುತಘೋರಕರ್ಮಾ ॥ ೨೧

ಯಶ್ಚೈಷ ಚಾಪಾಸಿಶರೌಘಜುಷ್ಟಂ
ಪತಾಕಿನಂ ಪಾವಕದೀಪ್ತರೂಪಮ್ ।
ರಥಂ ಸಮಾಸ್ಥಾಯ ವಿಭಾತ್ಯುದಗ್ರೋ
ನರಾಂತಕೋಽಸೌ ನಗಶೃಂಗಯೋಧೀ ॥ ೨೨

ಯಶ್ಚೈಷ ನಾನಾವಿಧಘೋರರೂಪೈ-
ರ್ವ್ಯಾಘ್ರೋಷ್ಟ್ರನಾಗೇಂದ್ರಮೃಗಾಶ್ವವಕ್ತ್ರೈಃ ।
ಭೂತೈರ್ವೃತೋ ಭಾತಿ ವಿವೃತ್ತನೇತ್ರೈಃ
ಸೋಽಸೌ ಸುರಾಣಾಮಪಿ ದರ್ಪಹಂತಾ ॥ ೨೩

ಯತ್ರೈತದಿಂದುಪ್ರತಿಮಂ ವಿಭಾತಿ
ಛತ್ರಂ ಸಿತಂ ಸೂಕ್ಷ್ಮಶಲಾಕಮಗ್ರ್ಯಮ್ ।

---

ಹಿಡಿದು ಬರುತ್ತಿದ್ದಾನಲ್ಲವೆ? ಆತನು ನಿಕುಂಭ. ರಾಕ್ಷಸಸೈನ್ಯಕ್ಕೆ ಧ್ವಜದಂತೆ ಮುಖ್ಯನಾಗಿದ್ದಾನೆ. ವಿಸ್ಮಯಕಾರಿಯಾದ ಘೋರಕೃತ್ಯವನ್ನು ಮಾಡಬಲ್ಲ ಸಮರ್ಥ (೨೧). ಅತ್ತ ಕಡೆ ಪತಾಕಾಯುಕ್ತವಾದ ಒಂದು ರಥವು ಅಗ್ನಿ ಸಂಕಾಶವಾಗಿ ಬೆಳಗುತ್ತಿದೆಯಷ್ಟೆ. ಚಾಪ, ಖಡ್ಗ, ಶರರಾಶಿಗಳ್ನು ಅದರಲ್ಲಿ ಹೇರಿಕೊಂಡು ಒಬ್ಬನು ಬರುತ್ತಿದ್ದಾನೆ. ಅವನು ನರಾಂತಕನೆಂಬ ಉದಗ್ರ ವೀರ್ಯಶಾಲಿ. (ಹೋರಾಟಕ್ಕೆ ಎದುರಾಳಿಗಳು ದೊರಕದಿದ್ದಾಗ) ಅವನು ಪರ್ವತಶಿಖರಗಳೊಡನೆ ಮಲ್ಲಯುದ್ಧ ಮಾಡುತ್ತಾನೆ! (೨೨). ಶ್ರೀರಾಮ, ಅಲ್ಲೊಂದು ಘೋರಾಕಾರದ ರಾಕ್ಷಸರ ಹಿಂಡು ಬರುತ್ತಿದೆಯಲ್ಲವೇ ? ಹುಲಿ, ಒಂಟೆ, ಆನೆ, ಜಿಂಕೆ, ಕುದುರೆ ಮುಂತಾದ ಪ್ರಾಣಿಗಳ ಮುಖಗಳಂತೆ ಅವರ ಮುಖಗಳಿವೆ! ಕಣ್ಣುಗಳನ್ನು ವಿಕಾರವಾಗಿ ತಿರುಗಿಸುತ್ತ ಭೂತಗಳಂತಿರುವ ಆ ರಾಕ್ಷಸರ ಮಧ್ಯದಲ್ಲಿ ದರ್ಪದಿಂದ ಸಾಗಿಬರುತ್ತಿರುವವನನ್ನು ನೋಡಿದೆಯಾ? ಅವನೇ ದೇವತೆಗಳ ಗರ್ವವನ್ನು ಮುರಿದವನು ಶ್ರೀರಾಮ, ಅವನೇ ರಾವಣ ! (೨೩). ಚಂದ್ರಸಂಕಾಶವಾದ ಶ್ವೇತಛತ್ರವು ವಿರಾಜಿಸುತ್ತಿರುವುದನ್ನು ವೀಕ್ಷಿಸು, ಸಣ್ಣ ಸಲಾಕಿಗಳಿಂದ ನಿರ್ಮಿಸಿದ ಪರಮೋತ್ತಮವಾದ ಛತ್ರವದು.

ಅತ್ರೈಷ ರಕ್ಷೋಽಧಿಪತಿರ್ಮಹಾತ್ಮಾ
ಭೂತೈರ್ವೃತೋ ರುದ್ರ ಇವಾವಭಾತಿ ॥ ೨೪

ಅಸೌ ಕಿರೀಟೀ ಚಲಕುಂಡಲಾಸ್ಯೋ
ನಗೇಂದ್ರವಿಂಧ್ಯೋಪಮಭೀಮಕಾಯಃ ।
ಮಹೇಂದ್ರವೈವಸ್ವತದರ್ಪಹಂತಾ
ರಕ್ಷೋಽಧಿಪಃ ಸೂರ್ಯ ಇವಾವಭಾತಿ ॥ ೨೫

ಪ್ರತ್ಯುವಾಚ ತತೋ ರಾಮೋ ವಿಭೀಷಣಮರಿಂದಮಮ್ ।
ಅಹೋ ದೀಪ್ತೋ ಮಹಾತೇಜಾ ರಾವಣೋ ರಾಕ್ಷಸೇಶ್ವರಃ ॥ ೨೬

ಆದಿತ್ಯ ಇವ ದುಷ್ಪ್ರೇಕ್ಷ್ಯೋ ರಶ್ಮಿಭಿರ್ಭಾತಿ ರಾವಣಃ ।
ಸುವ್ಯಕ್ತಂ ಲಕ್ಷಯೇ ಹ್ಯಸ್ಯ ರೂಪಂ ತೇಜಃ ಸಮಾವೃತಮ್ ॥ ೨೭

ದೇವದಾನವವೀರಾಣಾಂ ವಪುರ್ನೈವಂವಿಧಂ ಭವೇತ್ ।
ಯಾದೃಶಂ ರಾಕ್ಷಸೇಂದ್ರಸ್ಯ ವಪುರೇತತ್ಪ್ರಕಾಶತೇ । ೨೮

ಸರ್ವೇ ಪರ್ವತಸಂಕಾಶಾಃ ಸರ್ವೇ ಪರ್ವತಯೋಧಿನಃ
ಸರ್ವೇ ದೀಪ್ತಾಯುಧಧರಾ ಯೋಧಾಶ್ಚಾಸ್ಯ ಮಹೌಜಸಃ ॥ ೨೯

---

ಅದರ ನೆರಳಲ್ಲಿ ಧೀರನಾದ ರಾಕ್ಷಸೇಂದ್ರನು ಪ್ರಮಥಗಣಗಳಿಂದೊಡಗೂಡಿದ ರುದ್ರನಂತೆ ರಾಜಿಸುತ್ತಿದ್ದಾನೆ! (೨೪). ಆತನು ಕಿರೀಟವನ್ನು ಧರಿಸಿದ್ದಾನೆ. ಕಿವಿಯ ಕುಂಡಲಗಳು ಅಲ್ಲಾಡುತ್ತಿವೆ. ಪರ್ವತರಾಜನಾದ ವಿಂಧ್ಯದಂತೆ ಭೀಮಕಾಯನಾಗಿದ್ದಾನೆ. ಅವನು ಇಂದ್ರನ ದರ್ಪವನ್ನು ಮಾತ್ರವೇ ಅಲ್ಲ, ಯಮನ ದರ್ಪವನ್ನೂ ಅಡಗಿಸಿದ್ದಾನೆ ! ಆದಿತ್ಯನಂತೆ ತೊಳತೊಳಗುತ್ತಿದ್ದಾನೆ, ನೋಡು. ಅವನೇ ರಾವಣ'' ಎಂದನು (೨೫). ಆಗ ಶ್ರೀರಾಮನು ಉದ್ಗರಿಸಿದನು : ''ಅಬ್ಬ ! ರಾವಣನು ಎಂತಹ ತೇಜಸ್ವಿ! ಎಂತಹ ಪ್ರತಾಪ ಶಾಲಿ! ಈತನು ರಾಕ್ಷಸಚಕ್ರವರ್ತಿಯೇ ಹೌದು! ವಿಭೀಷಣ, ಇವನನ್ನು ನೋಡಿದರೆ ಸೂರ್ಯವನ್ನು ನೋಡಿದಂತಾಗುವುದು. ತೇಜೋಮಹಿಮೆ ಯಿಂದ ಕಣ್ಣು ಕೋರೈಸುವುದು. ಇವನ ರೂಪವು ತೇಜೋವಿಶೇಷದಿಂದ ಆವೃತವಾಗಿರುವುದನ್ನು ಸ್ಪಷ್ಟವಾಗಿ ನೋಡುತ್ತಿದ್ದೇನೆ (೨೬–೨೭). ಈ ರಾಕ್ಷಸೇಂದ್ರನ ಆಕೃತಿ ದೇದೀಪ್ಯಮಾನವಾಗಿದೆ. ದೇವದಾನವವೀರದಲ್ಲಿ ಯಾರಿಗೂ ಇಂತಹ ಆಕೃತಿ ಇರಲಾರದು ! ಈತನ ಪರಿವಾರದಲ್ಲಿರುವ ಯೋಧ

ಭಾತಿ ರಾಕ್ಷಸರಾಜೋಽಸೌ ಪ್ರದೀಪ್ತೈರ್ಭೀಮವಿಕ್ರಮೈಃ ।
ಭೂತೈಃ ಪರಿವೃತಸ್ತೀಕ್ಷ್ಣೈರ್ದೇಹವದ್ಭಿರಿವಾಂತಕಃ ॥ ೩೦

ದಿಷ್ಟ್ಯಾಯಮದ್ಯ ಪಾಪಾತ್ಮಾ ಮಮ ದೃಷ್ಟಿ ಪಥಂ ಗತಃ ।
ಅದ್ಯ ಕ್ರೋಧಂ ವಿಮೋಕ್ಷ್ಯಾಮಿ ಸೀತಾಹರಣಸಂಭವಮ್ ॥ ೩೧

ಏವಮುಕ್ತ್ವಾ ತತೋ ರಾಮೋ ಧನುರಾದಾಯ ವೀರ್ಯವಾನ್ ।
ಲಕ್ಷ್ಮಣಾನುಚರಸ್ತಸ್ಥೌ ಸಮುದ್ಧೃತ್ಯ ಶರೋತ್ತಮಮ್ ॥ ೩೨

ತತಃ ಸ ರಕ್ಷೋಽಧಿಪತಿರ್ಮಹಾತ್ಮಾ
ರಕ್ಷಾಂಸಿ ತಾನ್ಯಾಹ ಮಹಾಬಲಾನಿ ।
ದ್ವಾರೇಷು ಚರ್ಯಾಗೃಹಗೋಪುರೇಷು
ಸುನಿರ್ವೃತಾಸ್ತಿಷ್ಠತ ನಿರ್ವಿಶಂಕಾಃ ॥ ೩೩

ಇಹಾಗತಂ ಮಾಂ ಸಹಿತಂ ಭವದ್ಭಿ-
ರ್ವನೌಕಸಶ್ಛಿದ್ರಮಿದಂ ವಿದಿತ್ವಾ ।

---

ರೆಲ್ಲರೂ ಪರ್ವತಗಳೆನ್ನೆತ್ತಿ ಹೋರಾಡಬಲ್ಲ ಪರ್ವತಾಕಾರರು. ನಿಶಿತಾಯುಧಗಳನ್ನು ಹಿಡಿದ ಇವರೆಲ್ಲರೂ ಮಹಾಪರಾಕ್ರಮಿಗಳು (೨೮–೨೯). ಭೀಮವಿಕ್ರಮರೂ ತೇಜೋವಂತರೂ ಆದ ರಾಕ್ಷಸಯೋಧರಿಂದ ಪರಿವೃತನಾದ ಈ ರಾಕ್ಷಸರಾಜನು, ಮಹಾಕಾಯರೂ ಕ್ರೂರರೂ ಆದ ಭೂತಗಳಿಂದ ಪರಿವೇಷ್ಟಿತನಾದ ಕಾಲಾಂತಕನಂತೆ ಕಾಣುತ್ತಿದ್ದಾನೆ! (೩೦). ಇರಲಿ ವಿಭೀಷಣ, ಈ ದುರುಳನು ನನ್ನ ಭಾಗ್ಯದಿಂದ ಇಂದು ಕಣ್ಣಿಗೆ ಬಿದ್ದನು ! ಸೀತಾಪಹಾರದಿಂದ ಜನಿಸಿದ ಕ್ರೋಧವನ್ನು ಈ ದಿನ ಹೊರಸೂಸುವೆನು !'' ಎಂದು ಹೇಳಿ ವೀರಾಗ್ರಣಿಯಾದ ಶ್ರೀರಾಮನು ಕೋದಂಡವನ್ನೆತ್ತಿ ಹಿಡಿದು ತೀಕ್ಷ್ಣಾಸ್ತ್ರವನ್ನು ಬತ್ತಳಿಕೆಯಿಂದ ಸೆಳೆದನು. ಲಕ್ಷ್ಮಣನು ಯುದ್ಧಸನ್ನದ್ಧನಾಗಿ ಬಳಿಯಲ್ಲಿ ನಿಂತನು (೩೧–೩೨). ಅತ್ತಲಾಗಿ ರಾಕ್ಷಸರಾಜನು ರಾಕ್ಷಸಭಟರನ್ನು ಕುರಿತು ''ಎಲೈ ಭಟರೆ, ಲಂಕೆಯ ನಾಲ್ಕು ಅಗಸೆ ಬಾಗಿಲುಗಳನ್ನೂ ಭದ್ರವಾಗಿ ಕಾಯುತ್ತ ಕೆಲವರು ನಿಂತಿರತಕ್ಕದ್ದು. ಕಾವಲಿಗೋಸ್ಕರ ಏರ್ಪಟ್ಟಿರುವ ಪ್ರಾಕಾರಗೋಪುರ ಚರ್ಯಾಗೃಹಗಳಲ್ಲಿಯೂ ಎಚ್ಚರಿಕೆಯಿಂದ ಕೆಲವರು ಕಾವಲಿರತಕ್ಕದ್ದು. ಹೇದರಬೇಡಿರಿ (೩೩). ನಿಮ್ಮೆಲ್ಲರೊಡನೆ ನಾನು ಇತ್ತ

ಶೂನ್ಯಾಂ ಪುರೀಂ ದುಷ್ಟಸಹಾಂ ಪ್ರಮಥ್ಯ
ಪ್ರಧರ್ಷಯೇಯುಃ ಸಹಸಾ ಸಮೇತಾಃ ॥ ೩೪

ವಿಸರ್ಜಯಿತ್ವಾ ಸಹಿತಾಂಸ್ತತಸ್ತಾನ್
ಗತೇಷು ರಕ್ಷಃಸು ಯಥಾನಿಯೋಗಮ್ ।
ವ್ಯದಾರಯದ್ವಾನರಸಾಗರೌಘಂ
ಮಹಾಝಷಃ ಪೂರ್ಣಮಿವಾರ್ಣವೌಘಮ್ ॥ ೩೫

ತಮಾಪತಂತಂ ಸಹಸಾ ಸಮೀಕ್ಷ್ಯ
ದೀಪ್ತೇಷು ಚಾಪಂ ಯುಧಿ ರಾಕ್ಷಸೇಂದ್ರಮ್ ।
ಮಹತ್ಸಮುತ್ಪಾಟ್ಯ ಮಹೀಧರಾಗ್ರಂ
ದುದ್ರಾವ ರಕ್ಷೋಽಧಿಪತಿಂ ಹರೀಶಃ ॥ ೩೬

ತಚ್ಛೈಲಶೃಂಗಂ ಬಹುವೃಕ್ಷಸಾನುಂ
ಪ್ರಗೃಹ್ಯ ಚಿಕ್ಷೇಪ ನಿಶಾಚರಾಯ ।
ತಮಾಪತಂತಂ ಸಹಸಾ ಸಮೀಕ್ಷ್ಯ
ಬಿಭೇದ ಬಾಣೈಸ್ತಪನೀಯಪುಂಖೈಃ ॥ ೩೭

---

ಬಂದರೆ, ಈ ಸಂದರ್ಭವನ್ನು ತಿಳಿದು ಥಟ್ಟನೆ ಈ ಕಪಿಗಳು ಒಟ್ಟಾಗಿ ಯೋಧರಿಲ್ಲದ ಲಂಕೆಯೊಳಗೆ ನುಗ್ಗಿ ಕೊಳ್ಳೆಹೊಡೆಯಬಹುದು'' ಎಂದು ಹೇಳಿ ಕೆಲವು ಸೈನಿಕರನ್ನು ನಿರ್ದಿಷ್ಟ ಸ್ಥಳಗಳಿಗೆ ಕಳಿಸಿದನು (೩೪). ರಾವಣಾಜ್ಞೆಯಂತೆ ಆ ಭಟರು ತಮಗೆ ಗೊತ್ತಾದ ಸ್ಥಾನಗಳಿಗೆ ನಿರ್ಗಮಿಸಲು, ಇತ್ತ ರಾವಣನು ಮಹಾತಿಮಿಂಗಿಲದಂತೆ ವಾನರಸೇನಾಸಮುದ್ರದಲ್ಲಿ ನುಗ್ಗಿ ಅದನ್ನು ಕಲಕತೊಡಗಿದನು! (೩೫). ದೇದೀಪ್ಯಮಾನಗಳಾದ ಧನುರ್ಬಾಣಗಳನ್ನು ಹಿಡಿದು ರಾವಣನು ನುಗ್ಗಿ ಬರುತ್ತಿರುವುದನ್ನು ಸಮೀಕ್ಷಿಸಿ, ವಾನರೇಂದ್ರನಾದ ಸುಗ್ರೀವನು ದೊಡ್ಡ ಗಿರಿಶಿಖರವೊಂದನ್ನು ಕಿತ್ತೆತ್ತಿ ರಾವಣನಿಗೆ ಎದುರಾದನು. ಬಹುವೃಕ್ಷಗಳಿಂದ ತುಂಬಿದ್ದ ಆ ಶಿಖರವನ್ನು ರಾವಣನಿಗೆ ಗುರಿಯಿಟ್ಟು ಬೀಸಿದನು. ರಾವಣನು ಸುವರ್ಣಪುಂಖಾಂಕಿತ ಶರಗಳಿಂದ ಅದನ್ನು ಕತ್ತರಿಸಿದನು (೩೬–೩೭).

ತಸ್ಮಿನ್ ಪ್ರವೃದ್ಧೋತ್ತಮಸಾನುವೃಕ್ಷೇ
ಶೃಂಗೇ ವಿಕೀರ್ಣೇ ಪತಿತೇ ಪೃಥಿವ್ಯಾಮ್ ।
ಮಹಾಹಿಕಲ್ಪಂ ಶರಮಂತಕಾಭಂ
ಸಮಾದದೇ ರಾಕ್ಷಸಲೋಕನಾಥಃ ॥ ೩೮

ಸ ತಂ ಗೃಹೀತ್ವಾನಿಲತುಲ್ಯವೇಗಂ
ಸವಿಸ್ಫುಲಿಂಗಜ್ವಲನಪ್ರಕಾಶಮ್ ।
ಬಾಣಂ ಮಹೇಂದ್ರಾಲನಿತುಲ್ಯವೇಗಂ
ಚಿಕ್ಷೇಪ ಸುಗ್ರೀವವಧಾಯ ರುಷ್ಟಃ ॥ ೩೯

ಸ ಸಾಯಕೋ ರಾವಣಬಾಹುಮುಕ್ತಃ
ಶಕ್ರಾಶನಿಪ್ರಖ್ಯವಪುಃ ಶಿತಾಗ್ರಃ ।
ಸುಗ್ರೀವಮಾಸಾದ್ಯ ಬಿಭೇದ ವೇಗಾ-
ದ್ಗು ಹೇರಿತಾ ಕ್ರೌಂಚಮಿವೋಗ್ರಶಕ್ತಿಃ ॥ ೪೦

ಸ ಸಾಯಕಾರ್ತೋ ವಿಪರೀತಚೇತಾಃ
ಕೂಜನ್ ಪೃಥಿವ್ಯಾಂ ನಿಪಪಾತ ವೀರಃ ।
ತಂ ಪ್ರೇಕ್ಷ್ಯ ಭೂಮೌ ಪತಿತಂ ವಿಸಂಜ್ಞಂ
ನೇದುಃ ಪ್ರಹೃಷ್ಟಾ ಯುಧಿ ಯಾತುಧಾನಾಃ ॥ ೪೧

---

ಆ ಶಿಖರವು ಚೂರುಚೂರಾಗಿ ನೆಲದಮೇಲೆ ಬೀಳಲಾಗಿ, ಮಹಾಸರ್ಪದಂತೆ ವೇಗಶಾಲಿಯೂ ಮೃತ್ಯುಸಮಾನವೂ ಆದ ಸರಳೊಂದನ್ನು ರಾಕ್ಷಸೇಶ್ವರನು ಬತ್ತಳಿಕೆಯಿಂದ ಸಳೆದುಕೊಂಡು (೩೮). ಕಿಡಿಯುಗುಳುತ್ತ ಬೆಂಕಿಯಂತೆ ಬೆಳಗುತ್ತ ಸಿಡಿಲಿನಂತೆ ಮೊರೆಯುತ್ತಿದ್ದ ಆ ಸರಳನ್ನು, ಸುದ್ರೀವನನ್ನು ವಧಿಸಬೇಕೆಂಬ ಉದ್ದೇಶದಿಂದ ರುಷ್ಟನಾದ ರಾವಣನು ವಾಯುವೇಗದಿಂದ ಎರಗುವಂತೆ ಸುಗ್ರೀವನಿಗೆ ಗುರಿಯಿಟ್ಟು ಹೊಡೆದನು (೩೯). ಇಂದ್ರನ ವಜ್ರಾಯುಧದಂತೆ ಪ್ರಜ್ವಲಿಸುತ್ತಿದ್ದ ಆ ನಿಶಿತಾಸ್ತ್ರವು, ಷಣ್ಮುಖನ ಉಗ್ರವಾದ ಶಕ್ತ್ಯಾಯುಧವು ಕ್ರೌಂಚಪರ್ವತವನ್ನು ಭೇದಿಸಿದಂತೆ, ರಭಸದಿಂದ ಬಂದು ಸುಗ್ರೀವನನ್ನು ಬಡಿಯಿತು (೪೦). ಸುಗ್ರೀವನು ಕೂಗಿಕೊಳುತ್ತ ಎಚ್ಚರದಪ್ಪಿ ದೊಪ್ಪನೆ ನೆಲದಮೇಲೆ ಬಿದ್ದನು. ಸುಗ್ರೀವನು ಬಿದ್ದುದನ್ನು ಕಂಡು ರಾಕ್ಷಸ

ತತೋ ಗವಾಕ್ಷೋ ಗವಯಃ ಸುದಂಷ್ಟ್ರ-
ಸ್ತಥರ್ಷಭೋ ಜ್ಯೋತಿಮುಖೋ ನಭಶ್ಚ ।
ಶೈಲಾನ್ ಸಮುದ್ಯಮ್ಯ ವಿವೃದ್ಧಕಾಯಾಃ
ಪ್ರದುದ್ರುವುಸ್ತಂ ಪ್ರತಿ ರಾಕ್ಷಸೇಂದ್ರಮ್ ॥ ೪೨

ತೇಷಾಂ ಪ್ರಹಾರಾನ್ ಸ ಚಕಾರ ಮೋಘಾನ್
ರಕ್ಷೋಽಧಿಪೋ ಬಾಣಗಣೈಃ ಶಿತಾಗ್ರೈಃ ।
ತಾನ್ ವಾನರೇಂದ್ರಾನಪಿ ಬಾಣಜಾಲೈ-
ರ್ಬಿಭೇದ ಜಾಂಬೂನದಚಿತ್ರಪುಂಖೈಃ ॥ ೪೩

ತೇ ವಾನರೇಂದ್ರಾಸ್ತ್ರಿದಶಾರಿಬಾಣೈ-
ರ್ಭಿನ್ನಾ ನಿಪೇತುರ್ಭುವಿ ಭೀಮಕಾಯಾಃ ।
ತತಸ್ತು ತದ್ವಾನರಸೈನ್ಯ ಮುಗ್ರಂ
ಪ್ರಚ್ಛಾದಯಾಮಾಸ ಸ ಬಾಣಜಾಲೈಃ ॥ ೪೪

ತೇ ವಧ್ಯಮಾನಾಃ ಪತಿತಾಃ ಪ್ರವೀರಾ
ನಾನದ್ಯಮಾನಾ ಭಯಶಲ್ಯವಿದ್ಧಾಃ ।
ಶಾಖಾಮೃಗಾ ರಾವಣಸಾಯಕಾರ್ತಾ
ಜಗ್ಮುಃ ಶರಣ್ಯಂ ಶರಣಂ ಸ್ಮ ರಾಮಮ್ ॥ ೪೫

---

ಯೋಧರು ಹರ್ಷೋದ್ಗಾರಮಾಡಿದರು (೪೧). ಅನಂತರ ಮಹಾಕಾಯರಾದ ಗವಾಕ್ಷ, ಗವಯ, ಋಷಭ, ಜ್ಯೋತಿರ್ಮುಖ, ನಭ-ಎಂಬ ವಾನರನಾಯಕರು ಶೈಲಗಳನ್ನು ಹೊತ್ತುಕೊಂಡು ರಾವಣನನ್ನಟ್ಟಿಸಿಕೊಂಡು ಬಂದರು. ಅವರೆಲ್ಲರೂ ತನ್ನ ಮೇಲೆ ಎಸೆಯುತ್ತಿದ್ದ ಆ ಶೈಲಗಳನ್ನು ರಾಕ್ಷಸೇಶ್ವರನು ಕೂರಂಬುಗಳಿಂದ ಕತ್ತರಿಸಿ ಚೆಲ್ಲಿದನಲ್ಲದೆ; ಚಿನ್ನದ ಕಟ್ಟುಗಳಿಂದ ಮಿರುಗುವ ಬಾಣಜಾಲಗಳನ್ನು ಹೊಡೆದು ಆ ವಾನರನಾಯಕರನ್ನು ಕೆತ್ತಿದನು (೪೨-೪೩) ಭೀಮಕಾಯರಾದ ಆ ವಾನರವೀರರು ರಾವಣನ ಹೊಡೆತಗಳನ್ನು ತಾಳಲಾರದೆ ಭಿನ್ನಗಾತ್ರರಾಗಿ ಕೆಳಗೆ ಬಿದ್ದರು. ಆಮೇಲೆ ರಾವಣನು ಶರರಾಶಿಗಳನ್ನು ಸುರಿಸಿ ಕಪಿಸೇನೆಯನ್ನು ಮುಚ್ಚಿಬಿಟ್ಟನು (೪೪). ವೀರರಾದ ವಾನರರಿಗೂ ರಾವಣನ ಹೊಡೆತವನ್ನು ತಡೆದುಕೊಳ್ಳಲಾಗಲಿಲ್ಲ. ಕೆಲವರು ಸತ್ತರು.

ತತೋ ಮಹಾತ್ಮಾ ಸ ಧನುರ್ಧನುಷ್ಮಾ-
ನಾದಾಯ ರಾಮಃ ಸಹಸಾ ಜಗಾಮ ।
ತಂ ಲಕ್ಷ್ಮಣಃ ಪ್ರಾಂಜಲಿರಭ್ಯುಪೇತ್ಯ
ಉವಾಚ ವಾಕ್ಯಂ ಪರಮಾರ್ಥಯುಕ್ತಮ್ ॥ ೪೬

ಕಾಮಮಾರ್ಯಃ ಸುಪರ್ಯಾಪ್ತೋ ವಧಾಯಾಸ್ಯ ದುರಾತ್ಮನಃ ।
ವಿಧಮಿಷ್ಯಾಮ್ಯಹಂ ನೀಚಮನುಜಾನೀಹಿ ಮಾಂ ಪ್ರಭೋ ॥ ೪೭

ತಮಬ್ರವೀನ್ಮಹಾತೇಜಾ ರಾಮಃ ಸತ್ಯಪರಾಕ್ರಮಃ ।
ಗಚ್ಛ ಯತ್ನಪರಶ್ಚಾಪಿ ಭವ ಲಕ್ಷ್ಮಣ ಸಂಯುಗೇ ॥ ೪೮

ರಾವಣೋ ಹಿ ಮಹಾವೀರ್ಯೋ ರಣೇಽದ್ಭುತಪರಾಕ್ರಮಃ ।
ತ್ರೈಲೋಕ್ಯೇನಾಪಿ ಸಂಕ್ರುದ್ಧೋ ದುಷ್ಪ್ರಸಹ್ಯೋ ನ ಸಂಶಯಃ ॥ ೪೯

ತಸ್ಯ ಛಿದ್ರಾಣಿ ಮಾರ್ಗಸ್ವ ಸ್ವಚ್ಛಿದ್ರಾಣಿ ಚ ಲಕ್ಷಯ ।
ಚಕ್ಷುಷಾ ಧನುಷಾ ಯತ್ನಾದ್ರಕ್ಷಾತ್ಮಾನಂ ಸಮಾಹಿತಃ ॥ ೫೦

---

ಕೆಲವರು ಉರುಳಿದರು. ಕೆಲವರು ಕಿರಿಚಿಕೊಂಡರು. ಎಲ್ಲರೂ ಭಯದಿಂದ ತತ್ತರಿಸಿದರು. ರಾವಣಸಾಯಕಗಳ ರಭಸಕ್ಕೆ ದಿಕ್ಕುಗೆಟ್ಟ ವಾನರರು ಶ್ರೀರಾಮನೇ ಶರಣೆಂದು ಲೋಕಶರಣ್ಯನಾದ ಅವನ ಬಳಿಗೆ ಓಡಿದರು (೪೫). ಆಗ ಧನುರ್ಧಾರಿಗಳಲ್ಲಿ ಅಗ್ರಗಣ್ಯನಾದ ಆ ಮಹಾತ್ಮನು ಆ ಕಪಿಯೋಧರನ್ನು ರಕ್ಷಿಸುವುದಕ್ಕಾಗಿ ಕೋದಂಡವನ್ನು ಧರಿಸಿ ಹೊರಟನು. ಅಷ್ಟರಲ್ಲಿ ಲಕ್ಷ್ಮಣನು ಮುಂದೆ ಬಂದು ಕೈಜೋಡಿಸಿ "ಅಣ್ಣಾ, ಆ ದುರಾತ್ಮನನ್ನು ನಾನೇ ವಧಿಸಬಲ್ಲೆ. ಆ ನೀಚನನ್ನು ಧ್ವಂಸಗೊಳಿಸುವೆನು. ಅನುಮತಿಯನ್ನು ಕೊಡು" ಎಂದು ಯುಕ್ತರೀತಿಯಲ್ಲಿ ಪ್ರಾರ್ಥಿಸಿದನು (೪೬-೪೭). ಲಕ್ಷ್ಮಣನ ನುಡಿಯನ್ನಾಲಿಸಿ ತೇಜಸ್ವಿಯೂ ಸತ್ಯಪರಾಕ್ರಮನೂ ಆದ ಶ್ರೀರಾಮನು "ವತ್ಸ-ಲಕ್ಷ್ಮಣ, ಒಳ್ಳೆಯದು, ಹೋಗು. ಆದರೆ ಯುದ್ಧಕಾಲದಲ್ಲಿ ಬಹಳ ಎಚ್ಚರಿಕೆಯಿಂದಿರು. ರಾವಣನು ಸಾಮಾನ್ಯನಲ್ಲ. ಅವನು ಅತ್ಯಂತ ಬಲಶಾಲಿ; ಅದ್ಭುತಪರಾಕ್ರಮಿ. ರಾವಣನು ಕ್ರುದ್ಧನಾದರೆ ಮೂರುಲೋಕವೂ ಅವನನ್ನೆದುರಿಸಲಾರದು. ಇದರಲ್ಲಿ ಸಂದೇಹವೇ ಬೇಡ (೪೮-೪೯). ಯುದ್ಧದಲ್ಲಿ ಅವನ ನ್ಯೂನತೆಗಳೇನೆಂಬುದನ್ನು ಗಮನಿಸುತ್ತಿರು. ನಿನ್ನಲ್ಲಿ ನ್ಯೂನತೆಗಳು ಸಂಭವಿಸದಂತೆ

ರಾಘವಸ್ಯ ವಚಃ ಶ್ರುತ್ವಾ ಪರಿಷ್ವಜ್ಯಾಭಿಪೂಜ್ಯ ಚ ।
ಅಭಿವಾದ್ಯ ತತೋ ರಾಮಂ ಯಯೌ ಸೌಮಿತ್ರಿರಾಹವಮ್ ॥ ೫೧

ಸ ರಾವಣಂ ವಾರಣಹಸ್ತಬಾಹು-
ರ್ದದರ್ಶ ದೀಪ್ತೋದ್ಯತಭೀಮಚಾಪಮ್ ।
ಪ್ರಚ್ಛಾದಯಂತಂ ಶರವೃಷ್ಟಿ ಜಾಲೈ-
ಸ್ತಾನ್ ವಾನರಾನ್ ಭಿನ್ನವಿಕೀರ್ಣದೇಹಾನ್ ॥ ೫೨

ತಮಾಲೋಕ್ಯ ಮಹಾತೇಜಾ ಹನುಮಾನ್ ಮಾರುತಾತ್ಮಜಃ ।
ನಿವಾರ್ಯ ಶರಜಾಲಾನಿ ಪ್ರದುದ್ರಾವ ಸ ರಾವಣಮ್ ॥ ೫೩

ರಥಂ ತಸ್ಯ ಸಮಾಸಾದ್ಯ ಭುಜಮುದ್ಯಮ್ಯ ದಕ್ಷಿಣಮ್ ।
ತ್ರಾಸಯನ್ ರಾವಣಂ ಧೀಮಾನ್ ಹನುಮಾನ್ ವಾಕ್ಯಮಬ್ರವೀತ್ ॥

ದೇವದಾನವಗಂಧರ್ವೈರ್ಯಕ್ಷೈಶ್ಚ ಸಹ ರಾಕ್ಷಸೈಃ ।
ಅವಧ್ಯತ್ವಂ ತ್ವಯಾ ಪ್ರಾಪ್ತಂ ವಾನರೇಭ್ಯಸ್ತು ತೇ ಭಯಮ್ ॥ ೫೫

---

ಬಹಳ ಎಚ್ಚರಿಕೆಯಿಂದಿರು. ಕಣ್ಣು ಚುರುಕಾಗಿರಲಿ, ನಿನ್ನ ಕಣ್ಣಿನಿಂದ, ನಿನ್ನ ಧನುಸ್ಸಿನಿಂದ, ಜಾಗರೂಕನಾಗಿ ನಿನ್ನನ್ನು ರಕ್ಷಿಸಿಕೊ'' ಎಂದು ಹೇಳಿದನು (೫೦). ಶ್ರೀರಾಮನ ಬುದ್ಧಿವಾದವನ್ನು ಸೌಮಿತ್ರಿಯು ಆದರದಿಂದ ಆಲಿಸಿ, ಅಣ್ಣನನ್ನು ಆಲಿಂಗಿಸಿಕೊಂಡು ಅಭಿವಾದನೆಮಾಡಿ ಯುದ್ಧಕ್ಕೆ ತೆರಳಿದನು (೫೧). ಆನೆಯ ಸೊಂಡಿಲಿನಂತೆ ದೀರ್ಘಪುಷ್ಟಬಾಹುವಾದ ಸೌಮಿತ್ರಿಯು ಮುಂದೆ ಹೋಗಿ ರಾವಣನನ್ನು ದೂರದಲ್ಲಿ ಕಂಡನು. ರಾವಣನಾದರೋ ದೇದೀಪ್ಯಮಾನವಾದ ಉಗ್ರಚಾಪವನ್ನು ಮಿಡಿದು ಶರಜಾಲಗಳಿಂದ ವಾನರ ಸೇನೆಯನ್ನು ಆಚ್ಛಾದಿಸುತ್ತಿದ್ದನು. ವಾನರರು ಶರನಿರ್ಭಿನ್ನಗಾತ್ರರಾಗಿ ತರಿಯಲ್ಪಟ್ಟು ಉರುಳುತ್ತಿದ್ದರು (೫೨). ಅಷ್ಟು ಹೊತ್ತಿಗೆ ಮಾರುತಾತ್ಮಜನೂ ಮಹಾಧೀರನೂ ಆದ ಆಂಜನೇಯನು ರಾವಣನ ಶರಜಾಲಗಳನ್ನು ತಡೆದು ಅವನಿಗೆದುರಾಗಿ ಧಾವಿಸಿದನು (೫೩). ಅವನು ನೇರವಾಗಿ ರಾವಣನ ರಥದೆದುರಿಗೆ ಹೋಗಿ ನಿಂತು, ರಾವಣನಿಗೆ ದಿಗ್ಭ್ರಮೆಯಾಗುವಂತೆ ತನ್ನ ಬಲಗೈಯನ್ನು ಮೇಲೆತ್ತಿ ''ಎಲೈ ರಾವಣ, ದೇವದಾನಗಂಧರ್ವರಿಂದಲೂ ಯಕ್ಷರಾಕ್ಷಸರಿಂದಲೂ ನಿನಗೆ ಸಾವು ಬರದಂತೆ ವರವನ್ನು ಪಡೆದಿದ್ದೀಯೇ.

ಏಷ ಮೇ ದಕ್ಷಿಣೋ ಬಾಹುಃ ಪಂಚಶಾಖಃ ಸಮುದ್ಯತಃ ।
ವಿಧಮಿಷ್ಯತಿ ತೇ ದೇಹಾದ್ಭೂತಾತ್ಮಾನಂ ಚಿರೋಷಿತಮ್ ॥ ೫೬

ಶ್ರುತ್ವಾ ಹನುಮತೋ ವಾಕ್ಯಂ ರಾವಣೋ ಭೀಮವಿಕ್ರಮಃ ।
ಸಂರಕ್ತನಯನಃ ಕ್ರೋಧಾದಿದಂ ವಚನಮಬ್ರವೀತ್॥ ೫೭

ಕ್ಷಿಪ್ರಂ ಪ್ರಹರ ನಿಃಶಂಕಂ ಸ್ಥಿರಾಂ ಕೀರ್ತಿಮವಾಪ್ನುಹಿ ।
ತತಸ್ತ್ವಾಂ ಜ್ಞಾತವಿಕ್ರಾಂತಂ ನಾಶಯಿಷ್ಯಾಮಿ ವಾನರ ॥ ೫೮

ರಾವಣಸ್ಯ ವಚಃ ಶ್ರುತ್ವಾ ವಾಯುಸೂನುರ್ವಚೋಽಬ್ರವೀತ್ ।
ಪ್ರಹೃತಂ ಹಿ ಮಯಾ ಪೂರ್ವಮಕ್ಷಂ ಸ್ಮರ ಸುತಂ ತವ ॥ ೫೯

ಏವಮುಕ್ತೋ ಮಹಾತೇಜಾ ರಾವಣೋ ರಾಕ್ಷಸೇಶ್ವರಃ ।
ಆಜಘಾನಾನಿಲಸುತಂ ತಲೇನೋರಸಿ ವೀರ್ಯವಾನ್ ॥ ೬೦

ಸ ತಲಾಭಿಹತಸ್ತೇನ ಚಚಾಲ ಚ ಮುಹುರ್ಮುಹುಃ ।
ಸ್ಥಿತ್ವಾ ಮುಹೂರ್ತಂ ತೇಜಸ್ವೀ ಸ್ಥೈರ್ಯಂ ಕೃತ್ವಾ ಮಹಾಮತಿಃ ॥

---

ಆದರೆ ವಾನರಿಂದ ನಿನಗೆ ಮರಣಭಯವುಂಟು ! (೫೪–೫೫). ಇಗೋ, ಐದು ಕವಲುಗಳಿರುವ ಬಲದೋಳನ್ನು ಎತ್ತಿದ್ದೇನೆ ! ಬಹುಕಾಲದಿಂದ ನಿನ್ನ ದೇಹದಲ್ಲಿ ನೆಲೆಸಿರುವ ಜೀವಾತ್ಮನನ್ನು ಇದು ಹೊರಗೆ ದಬ್ಬುವುದು!'' ಎಂದು ಘೋಷಿಸಿದನು (೫೬). ಹನುಮಂತನ ಮಾತನ್ನು ಕೇಳಿ ಭೀಮವಿಕ್ರಮ ನಾದ ರಾವಣನು ರೋಷಾವಿಷ್ಟನಾದನು. ಕಣ್ಣುಗಳು ಮತ್ತಷ್ಟು ಕೆಂಪಡರಿ ದವು. ಅವನು ಹನಮಂತನನ್ನು ನೋಡುತ್ತ ''ಎಲೈ ಕೋಡಗವೆ, ಹೊಡಿ ನೋಡೋಣ! ನಿರ್ಭಯದಿಂದ ಮೊದಲು ಪ್ರಹರಿಸು ರಾವಣನನ್ನು ಗುದ್ದಿದೆ ನೆಂಬ ಸ್ಥಿರವಾದ ಕೀರ್ತಿಯನ್ನು ಗಳಿಸಿಕೋ! ನಿನ್ನ ಪರಾಕ್ರಮವೇನೆಂಬುದ ನ್ನರಿತು, ಅನಂತರ ನಿನ್ನನ್ನು ಧ್ವಂಸಗೊಳಿಸುವೆನು !'' ಎಂದು ಉತ್ತರಿಸಿದನು (೫೭–೫೮). ಆಗ ಹನುಮಂತನು ''ಎಲೈ ರಾವಣ, ನನ್ನ ಹೊಡೆತದ ಸವಿ ಯನ್ನು ಕಾಣೆಯಾ! ನಿನ್ನ ಮಗನಾದ ಅಕ್ಷಕುಮಾರನನ್ನು ಸ್ಮರಿಸಿಕೋ!'' ಎಂದು ಹೇಳಿದನು. ಆ ಮಾತನ್ನು ಕೇಳಿದೊಡನೆ ವೀರಾಗ್ರೇಸರನಾದ ರಾಕ್ಷಸೇಶ್ವರನು ಸಿಡಿದೆದ್ದು ಅಂಗೈಯಿಂದ ವಾಯುಪುತ್ರನ ಎದೆಯಮೇಲೆ ಅಪ್ಪಳಿಸಿದನು (೫೯–೬೦). ಆ ಹೊಡೆತದ ರಭಸಕ್ಕೆ ಹನುಮಂತನು ತತ್ತರಿಸಿ

ಆಜಘಾನಾಭಿಸಂಕ್ರುದ್ಧಸ್ತಲೇನೈವಾಮರದ್ವಿಷಮ್ ।
ತತಸ್ತಲೇನಾಭಿಹತೋ ವಾನರೇಣ ಮಹಾತ್ಮನಾ ॥ ೬೨

ದಶಗ್ರೀವಃ ಸಮಾಧೂತೋ ಯಥಾ ಭೂಮಿಚಲೇಽಚಲಃ ।
ಸಂಗ್ರಾಮೇ ತಂ ತಥಾ ದೃಷ್ಟ್ವಾ ರಾವಣಂ ತಲತಾಡಿತಮ್ ॥ ೬೩

ಋಷಯೋ ವಾನರಾಃ ಸಿದ್ಧಾ ನೇದುರ್ದೇವಾಃ ಸಹಾಸುರೈಃ ।
ಅಥಾಶ್ವಾಸ್ಯ ಮಹಾತೇಜಾ ರಾವಣೋ ವಾಕ್ಯಮಬ್ರವೀತ್ ॥ ೬೪

ಸಾಧು ವಾನರ ವೀರ್ಯೇಣ ಶ್ಲಾಘನೀಯೋಽಸಿ ಮೇ ರಿಪುಃ ।
ರಾವಣೇನೈವಮುಕ್ತಸ್ತು ಮಾರುತಿರ್ವಾಕ್ಯಮಬ್ರವೀತ್ ॥ ೬೫

ಧಿಗಸ್ತು ಮಮ ವೀರ್ಯೇಣ ಯಸ್ತ್ವಂ ಜೀವಸಿ ರಾವಣ ।
ಸಕೃತ್ತು ಪ್ರಹರೇದಾನೀಂ ದುರ್ಬುದ್ಧೇ ಕಿಂ ವಿಕತ್ಥಸೇ ॥ ೬೬

ತತಸ್ತ್ವಾಂ ಮಾಮಿಕಾ ಮುಷ್ಟಿರ್ನಯಿಷ್ಯತಿ ಯಮಕ್ಷಯಮ್ ।
ತತೋ ಮಾರುತಿವಾಕ್ಯೇನ ಕ್ರೋಧಸ್ತಸ್ಯ ತದಾಽಜ್ವಲತ್ ॥ ೬೭

---

ಒಲೆದಾಡಿದನು. ಧೀರನಾದ ಆ ತೇಜಸ್ವಿಯು ಒಂದು ಕ್ಷಣದಲ್ಲಿ ಚೇತರಿಸಿಕೊಂಡು ಕ್ರುದ್ಧನಾಗಿ ಅಂಗೈಯಿಂದ ರಾವಣನನ್ನು ಅಪ್ಪಳಿಸಿಹೊಡೆದನು. ಆ ಹೊಡೆತದ ಬಿರುಸನ್ನು ತಡೆದುಕೊಳ್ಳಲಾರದೆ ದಶಕಂಠನು ಭೂಕಂಪವಾದಾಗ ಬೆಟ್ಟವು ಅಲ್ಲಾಡುವಂತೆ, ಅತ್ತಿಂದಿತ್ತ ತೂಗಾಡಿದನು (೬೧–೬೨). ಸಂಗ್ರಾಮಭೂಮಿಯಲ್ಲಿ ರಾವಣನು ಆ ಬಗೆಯ ಪೆಟ್ಟನ್ನು ತಿಂದು ಹೊಯ್ದಾಡುವುದನ್ನು ಕಂಡು, ಋಷಿಗಳೂ ವಾನರರೂ ಸಿದ್ಧರೂ ದೇವತೆಗಳೂ ಅಸುರರೂ ಹರ್ಷದಿಂದ ಕೋಲಾಹಲಮಾಡಿದರು (೬೩–೬೪). ತುಸುಹೊತ್ತಿನಲ್ಲಿಯೇ ಮಹಾತೇಜಸ್ವಿಯಾದ ರಾವಣನು ಚೇತರಿಸಿಕೊಂಡು. ''ಭಪ್ಪರೇ! ವಾನರ, ನಿನ್ನ ಶೌರ್ಯಕ್ಕೆ ಮೆಚ್ಚಿದೆನು! ಕೊಂಡಾಡಬಹುದಾದ ಶತ್ರು ನೀನು!'' ಎಂದು ಉದ್ಗರಿಸಿದನು. ಅದಕ್ಕೆ ಹನುಮಂತನು ''ಛೀ ! ನನ್ನ ಶೌರ್ಯವನ್ನು ಸುಡಬೇಕು! ಇನ್ನೂ ನೀನು ಬದುಕಿರುವೆಯಲ್ಲ ! ರಾವಣ, ಇನ್ನೊಂದುಸಲ ನನ್ನನ್ನು ಪ್ರಹರಿಸು. ಗರ್ವದ ಮಾತನ್ನೇಕೆ ಆಡುವೆ ? (೬೫–೬೬). ಅನಂತರ ನನ್ನ ಈ ಮುಷ್ಟಿಯು ನಿನ್ನನ್ನು ಯಮಸದನಕ್ಕೆ ಕಳಿಸುವುದು !'' ಎಂದು

ಸಂರಕ್ತನಯನೋ ಯತ್ನಾನ್ಮುಷ್ಟಿಮುದ್ಯಮ್ಯ ದಕ್ಷಿಣಮ್ ।
ಪಾತಯಾಮಾಸ ವೇಗೇನ ವಾನರೋರಸಿ ವೀರ್ಯವಾನ್ ॥ ೬೮

ಹನುಮಾನ್ ವಕ್ಷಸಿ ವ್ಯೂಢೇ ಸಂಚಚಾಲ ಹತಃ ಪುನಃ ।
ವಿಹ್ವಲಂ ತು ತದಾ ದೃಷ್ಟ್ವಾ ಹನುಮಂತಂ ಮಹಾಬಲಮ್ ॥ ೬೯

ರಥೇನಾತಿರಥಃ ಶೀಘ್ರಂ ನೀಲಂ ಪ್ರತಿ ಸಮಭ್ಯಗಾತ್ ।
ರಾಕ್ಷಸಾನಾಮಧಿಪತಿರ್ದಶಗ್ರೀವಃ ಪ್ರತಾಪವಾನ್ ॥ ೭೦

ಪನ್ನಗಪ್ರತಿಮೈರ್ಭೀಮೈಃ ಪರಮರ್ಮಾತಿಭೇದಿಭಿಃ ।
ಶರೈರಾದೀಪಯಾಮಾಸ ನೀಲಂ ಹರಿಚಮೂಪತಿಮ್ ॥ ೭೧

ಸ ಶರೌಘಸಮಾಯಸ್ತೋ ನೀಲಃ ಕಪಿಚಮೂಪತಿಃ ।
ಕರೇಣೈಕೇನ ಶೈಲಾಗ್ರಂ ರಕ್ಷೋಽಧಿಪತಯೇಽಸೃಜತ್ ॥ ೭೨

ಹನುಮಾನಪಿ ತೇಜಸ್ವೀ ಸಮಾಶ್ವಸ್ತೋ ಮಹಾಮನಾಃ ।
ವಿಪ್ರೇಕ್ಷಮಾಣೋ ಯುದ್ಧೇಪ್ಸುಃ ಸರೋಷಮಿದಮಬ್ರವೀತ್ ॥ ೭೩

---

ಹೇಳಿದನು. ಮಾರುತಿಯ ಮಾತನ್ನು ಕೇಳಿ ರಾವಣನು ರಕ್ತನೇತ್ರನಾಗಿ ಸಿಟ್ಟಿನಿಂದ ಭುಗಿಲೆದ್ದು, ಬಲವಾಗಿ ಬಲಮುಷ್ಟಿಯನ್ನು ಬಿಗಿದು ಬಿರುಸಿನಿಂದ ಹನುಮಂತನ ಎದೆಯಮೇಲೆ ಗುದ್ದಿದನು (೬೭–೬೮). ವಿಶಾಲವಾದ ವಕ್ಷಸ್ಥಳ ದಲ್ಲಿ ರಾವಣನ ಗುದ್ದು ಬಿದ್ದೊಡನೆ, ಹನುಮಂತನು ತತ್ತರಿಸಿ ತೂಗಾಡಿದನು. ಬಲಾಢ್ಯನಾದ ಹನುಮಂತನಿಗೆ ಬವಳಿ ಬಂದಿತು. ಅವನು ವಿಹ್ವಲನಾಗಿ ನಿಂತಿರುವುದನ್ನು ನೋಡಿ, ಅತಿರಥನಾದ ರಾವಣನು ನೀಲನ ಕಡೆಗೆ ತನ್ನ ರಥವನ್ನು ಓಡಿಸಿದನು (೬೯–೭೦). ಪ್ರತಾಪಶಾಲಿಯಾದ ಆ ದಶಗ್ರೀವನು ಸರ್ಪಸಂಕಾಶಗಳೂ ಶತ್ರುಮರ್ಮಚ್ಛೇದಿಗಳೂ ಆದ ಭೀಕರಾಸ್ತ್ರಗಳಿಂದ ವಾನರಸೇನಾಪತಿಯಾದ ನೀಲನನ್ನು ತರುಬಿದನು. ಶರಗಳಿಂದ ಪೀಡಿತನಾದ ನೀಲನು ಒಂದೇ ಕೈಯಿಂದ ಶೈಲ ಶಿಖರವನ್ನು ಎತ್ತಿ ರಾವಣನಮೇಲೆ ಬೀಸಿ ಹೊಡೆದನು (೭೧–೭೨). ಅಷ್ಟರಲ್ಲಿ ತೇಜಸ್ವಿಯೂ ಧೀರನೂ ಆದ ಆಂಜನೇಯನು ಮೆಲ್ಲಗೆ ಚೇತರಿಕೊಂಡು ಯದ್ಧಾಪೇಕ್ಷೆಯಿಂದ ರಾವಣ ನೆಲ್ಲಿರುವನೆಂದು ಸುತ್ತಲೂ ನೋಡಿದನು. ಆಗ ನೀಲನೊಡನೆ ಕಾಳಗದಲ್ಲಿ

ನೀಲೇನ ಸಹ ಸಂಯುಕ್ತಂ ರಾವಣಂ ರಾಕ್ಷಸೇಶ್ವರಮ್ ।
ಅನ್ಯೇನ ಯುಧ್ಯಮಾನಸ್ಯ ನ ಯುಕ್ತಮಭಿಧಾವನಮ್ ॥ ೭೪

ರಾವಣೋಽಪಿ ಮಹಾತೇಜಾಸ್ತಚ್ಛೃಂಗಂ ಸಪ್ತಭಿಃ ಶರೈಃ ।
ಆಜಘಾನ ಸುತೀಕ್ಷ್ಣಾಗ್ರೈಸ್ತದ್ವಿಕೀರ್ಣಂ ಪಪಾತ ಹ ॥ ೭೫

ತದ್ವಿಕೀರ್ಣಂ ಗಿರೇಃ ಶೃಂಗಂ ದೃಷ್ಟ್ವಾ ಹರಿಚಮೂಪತಿಃ ।
ಕಾಲಾಗ್ನಿರಿವ ಜಜ್ವಾಲ ಕ್ರೋಧೇನ ಪರವೀರಹಾ ॥ ೭೬

ಸೋಽಶ್ವಕರ್ಣಾನ್ ಧವಾನ್ ಸಾಲಾಂಶ್ಚೂತಾಂಶ್ಚಾಪಿ ಸುಪುಷ್ಪಿತಾನ್
ಅನ್ಯಾಂಶ್ಚ ವಿವಿಧಾನ್ ವೃಕ್ಷಾನ್ನೀಲಶ್ಚಿಕ್ಷೇಪ ಸಂಯುಗೇ ॥ ೭೭

ಸ ತಾನ್ ವೃಕ್ಷಾನ್ ಸಮಾಸಾದ್ಯ ಪ್ರತಿಚಿಚ್ಛೇದ ರಾವಣಃ ।
ಅಭ್ಯವರ್ಷಚ್ಚ ಸುಘೋರೇಣ ಶರವರ್ಷೇಣ ಪಾವಕಿಮ್ ॥ ೭೮

ಅಭಿವೃಷ್ಟಃ ಶರೌಘೇಣ ಮೇಘೇನೇವ ಮಹಾಚಲಃ ।
ಹ್ರಸ್ವಂ ಕೃತ್ವಾ ತದಾ ರೂಪಂ ಧ್ವಜಾಗ್ರೇ ನಿಪಪಾತ ಹ ॥ ೭೯

ಪಾವಕಾತ್ಮಜಮಾಲೋಕ್ಯ ಧ್ವಜಾಗ್ರೇ ಸಮುಪಸ್ಥಿತಮ್ ।
ಜಜ್ವಾಲ ರಾವಣಃ ಕ್ರೋಧಾತ್ತತೋ ನೀಲೋ ನನಾದ ಚ ॥ ೮೦

---

ತೊಡಗಿದ್ದ ರಾವಣನ್ನು ನೋಡಿ ರೋಷದಿಂದ "ರಾವಣ, ಇನ್ನೊಬ್ಬನೊಡನೆ ಕಾಳಗದಲ್ಲಿ ತೊಡಗಿದ್ದೀಯೆ. ಈ ಸಮಯದಲ್ಲಿ ನಿನ್ನ ಮೇಲೆ ಆಕ್ರಮಣ ವನ್ನೆಸಗುವುದು ಯುಕ್ತವಲ್ಲ" ಎಂದನು (೭೩–೭೪). ಅತ್ತಕಡೆಯಲ್ಲಿ ಪರಾಕ್ರಮಿಯಾದ ರಾವಣನು, ನೀಲನು ಬೀಸಿದ ಪರ್ವತ ಶಿಖರವನ್ನು ಹರಿತ ವಾದ ಏಳು ಬಾಣಗಳಿಂದ ಕತ್ತರಿಸಲು, ಅದು ಪುಡಿಪುಡಿಯಾಗಿ ಬಿದ್ದಿತು. ಪರ್ವತಶೃಂಗವು ಪುಡಿಯಾಗಿ ಬಿದ್ದುದನ್ನು ವೀಕ್ಷಿಸಿ, ಸೇನಾಪತಿಯಾದ ನೀಲನು ಕಾಲಾಗ್ನಿಯಂತೆ ಸಿಟ್ಟಿನಿಂದ ಕೆಂಡವಾದನು (೭೫–೭೬). ಅವನು ಅಶ್ವಕರ್ಣ, ಧವ, ಸಾಲ, ಚೂತ ಮುಂತಾದ ವಿವಿಧವೃಕ್ಷಗಳನ್ನು ರಾವಣನ ಮೇಲೆ ಎಸೆಯಲು, ರಾವಣನು ಅವುಗಳೆಲ್ಲವನ್ನೂ ಶರಗಳಿಂದ ಕೊಚ್ಚಿಹಾಕಿ ಘೋರವಾದ ಶರಜಾಲವನ್ನು ಅಗ್ನಿಪುತ್ರನಾದ ನೀಲನಮೇಲೆ ಸುರಿದನು (೭೭–೭೮). ಪರ್ವತದಮೇಲೆ ಮೇಘವು ಮಳೆ ಸುರಿಸಿದಂತಾಯಿತು. ಅಷ್ಟರಲ್ಲಿ ನೀಲನು ತನ್ನ ರೂಪವನ್ನು ಚಿಕ್ಕದಾಗಿ ಮಾಡಿಕೊಂಡು ರಾವಣನ ಧ್ವಜಾಗ್ರಕ್ಕೆ ನೆಗೆದನು. ಅವನು ತನ್ನ ರಥದ ಧ್ವಜವನ್ನಡರಿದುದನ್ನು ಕಂಡು

ಧ್ವಜಾಗ್ರೇ ಧನುಷಶ್ಚಾಗ್ರೇ ಕಿರೀಟಾಗ್ರೇ ಚ ತಂ ಹರಿಮ್ ।
ಲಕ್ಷ್ಮಣೋಽಥ ಹನೂಮಾಂಶ್ಚ ದೃಷ್ಟ್ವಾ ರಾಮಶ್ಚ ವಿಸ್ಮಿತಾಃ ॥ ೮೧

ರಾವಣೋಽಪಿ ಮಹಾತೇಜಾಃ ಕಪಿಲಾಘವವಿಸ್ಮಿತಃ ।
ಅಸ್ತ್ರಮಾಹಾರಯಾಮಾಸ ದೀಪ್ತಮಾಗ್ನೇಯಮದ್ಭುತಮ್ ॥ ೮೨

ತತಸ್ತೇ ಚುಕ್ರುಶುರ್ಹೃಷ್ಟಾ ಲಬ್ಧಲಕ್ಷಾಃ ಪ್ಲವಂಗಮಾಃ ।
ನೀಲಲಾಘವಸಂಭ್ರಾಂತಂ ದೃಷ್ಟ್ವಾ ರಾವಣಮಾಹವೇ ॥ ೮೩

ವಾನರಾಣಾಂ ಚ ನಾದೇನ ಸಂರಬ್ಧೋ ರಾವಣಸ್ತದಾ ।
ಸಂಭ್ರಮಾವಿಷ್ಟ ಹೃದಯೋ ನ ಕಿಂಚಿತ್ ಪ್ರತ್ಯಪದ್ಯತ ॥ ೮೪

ಆಗ್ನೇಯೇನಾಥ ಸಂಯುಕ್ತಂ ಗೃಹೀತ್ವಾ ರಾವಣಃ ಶರಮ್ ।
ಧ್ವಜಶೀರ್ಷಸ್ಥಿತಂ ನೀಲಮುದೈಕ್ಷತ ನಿಶಾಚರಃ ॥ ೮೫

ತತೋಽಬ್ರವೀನ್ಮಹಾತೇಜಾ ರಾವಣೋ ರಾಕ್ಷಸೇಶ್ವರಃ ।
ಕಪೇ ಲಾಘವಯುಕ್ತೋಽಸಿ ಮಾಯಯಾ ಪರಯಾನಯಾ ॥ ೮೬

---

ರಾವಣನು ಸಿಟ್ಟಿನಿಂದ ಬೆಂಕಿಯಾಗಲು, ನೀಲನು ಧ್ವಜದಲ್ಲಿ ಕುಳಿತು ಸಿಂಹನಾದಗೈದನು (೭೯–೮೦). ನೋಡುನೋಡುತ್ತಿರುವಲ್ಲಿ ಧ್ವಜಾಗ್ರದಿಂದ ರಾವಣನ ಧನುಸ್ಸಿನ ತುದಿಗೆ ಹಾರಿ, ಮರುಕ್ಷಣದಲ್ಲಿ ಅವನ ಕಿರೀಟವನ್ನಡರಿದನು. ಹೀಗೆ ಧ್ವಜಾಗ್ರದಿಂದ ಧನುರಗ್ರಭಾಗಕ್ಕೂ ಅಲ್ಲಿಂದ ಕಿರೀಟಾಗ್ರಕ್ಕೂ ಒಂದೇಸಮನೆ ಬಹುವೇಗದಿಂದ ನೆಗೆದಾಡುವುದನ್ನು ಕಂಡು ರಾಮಲಕ್ಷ್ಮಣರೂ ಹನುಮಂತನೂ ವಿಸ್ಮಿತರಾದರು (೮೧). ಗುರಿಗೆ ಸಿಗದಂತೆ ಬಹು ಶೀಘ್ರಗತಿಯಿಂದ ನೆಗೆದಾಡುವ ನೀಲನ ದೇಹಲಾಘವವನ್ನು ನೋಡಿ ರಾವಣನೂ ಅಚ್ಚರಿಗೊಂಡು, ಕಡೆಗೆ ಪ್ರಜ್ವಲಿಸುವ ಆಗ್ನೇಯಾಸ್ತ್ರವನ್ನು ಹೂಡಬೇಕೆಂದು ಆಲೋಚಿಸುತ್ತಿದ್ದನು (೮೨). ಇತ್ತ ವಾನರರು ನೀಲನ ಲಘುವಿಕ್ರಮವನ್ನೂ ಅದರಿಂದ ಚಡಪಡಿಸುತ್ತಿರುವ ರಾವಣನನ್ನೂ ವೀಕ್ಷಿಸುತ್ತ ಹರ್ಷದಿಂದ ಕೋಲಾಹಲಮಾಡುತ್ತಿದ್ದರು. ಅವರ ಕೋಲಾಹಲವನ್ನು ಕೇಳಿ ರಾವಣನು ರೇಗಿದನು. ಆದರೆ ಏನುಮಾಡಬೇಕೆಂದು ಅವನಿಗೆ ತೋಚದಾಯಿತು (೮೩–೮೪). ಕೊನೆಗೆ ಆಗ್ನೇಯಮಂತ್ರದಿಂದ ಅಭಿಮಂತ್ರಿತವಾದ ಶರವನ್ನು ಕೈಯಲ್ಲಿ ಹಿಡಿದು, ಆ ರಾಕ್ಷಸೇಶ್ವರನು ತನ್ನ ಧ್ವಜಾಗ್ರಹದಲ್ಲಿ ಕುಳಿತಿದ್ದ ನೀಲನನ್ನು ನೋಡಿ

ಜೀವಿತಂ ಖಲು ರಕ್ಷಸ್ವ ಯದಿ ಶಕ್ತೋಽಸಿ ವಾನರ ।
ತಾನಿ ತಾನ್ಯಾನ್ಯಾತ್ಮರೂಪಾಣಿ ಸೃಜಸಿ ತ್ವಮನೇಕಶಃ ॥ ೮೭

ತಥಾಪಿ ತ್ವಾಂ ಮಯಾ ಮುಕ್ತಃ ಸಾಯಕೋಽಸ್ತ್ರಪ್ರಯೋಜಿತಃ ।
ಜೀವಿತಂ ಪರಿರಕ್ಷಂತಂ ಜೀವಿತಾದ್ಭ್ರಂಶಯಿಷ್ಯತಿ ॥ ೮೮

ಏವಮುಕ್ತ್ವಾ ಮಹಾಬಾಹೂ ರಾವಣೋ ರಾಕ್ಷಸೇಶ್ವರಃ ।
ಸಂಧಾಯ ಬಾಣಮಸ್ತ್ರೇಣ ಚಮೂಪತಿಮತಾಡಯತ್ ॥ ೮೯

ಸೋಽಸ್ತ್ರಯುಕ್ತೇನ ಬಾಣೇನ ನೀಲೋ ವಕ್ಷಸಿ ತಾಡಿತಃ ।
ನಿರ್ದಹ್ಯಮಾನಃ ಸಹಸಾ ನಿಪಪಾತ ಮಹೀತಲೇ ॥ ೯೦

ಪಿತೃಮಾಹಾತ್ಮ್ಯ ಸಂಯೋಗಾದಾತ್ಮನಶ್ಚಾಪಿ ತೇಜಸಾ ।
ಜಾನುಭ್ಯಾಮಪತದ್ಭೂಮೌ ನ ಚ ಪ್ರಾಣೈರ್ವ್ಯಯುಜ್ಯತ ॥ ೯೧

ವಿಸಂಜ್ಞಂ ವಾನರಂ ದೃಷ್ಟ್ವಾ ದಶಗ್ರೀವೋ ರಣೋತ್ಸುಕಃ ।
ರಥೇನಾಂಬುದನಾದೇನ ಸೌಮಿತ್ರಿಮಭಿದುದ್ರುವೇ ॥ ೯೨

---

"ಎಲೈ ಕಪಿಯೆ, ವಂಚನಾಪ್ರಕಾರವನ್ನವಲಂಬಿಸಿ ಅದ್ಭುತವಾದ ಈ ಲಾಘವವನ್ನು ತೋರಿಸುತ್ತಿದ್ದೀಯೆ (೮೫–೮೬). ಸಾಮರ್ಥ್ಯವಿದ್ದರೆ ಈಗ ನಿನ್ನ ಪ್ರಾಣವನ್ನುಳಿಸಿಕೊ! ನಿನ್ನ ಮಂಗತನದ ವಿವಿಧ ಚೇಷ್ಟೆಗಳನ್ನು ತೋರಿಸುತ್ತಿರುವೆಯಾ ? ಮಂತ್ರಯುಕ್ತವಾದ ಅಸ್ತ್ರವನ್ನೀಗ ಬಿಡುವೆನು. ಪ್ರಾಣವನ್ನುಳಿಸಿಕೊಳ್ಳಲು ಈ ತಂತ್ರವನ್ನು ಬಳಸುವ ನಿನ್ನನ್ನು ಈ ಮಂತ್ರಾಸ್ತ್ರವು ಕೊಂದುಹಾಕುವುದು" (೮೭–೮೮) ಎಂದು ನುಡಿದು, ಮಹಾಬಾಹುವಾದ ರಾವಣನು ಆ ಮಂತ್ರಾಸ್ತ್ರವನ್ನು ನೀಲನಮೇಲೆ ಪ್ರಯೋಗಿಸಿದನು. ಆಗ್ನೇಯಮಂತ್ರದಿಂದ ಅಭಿಮಂತ್ರಿತವಾದ ಆ ಬಾಣವು ನೀಲನ ಎದೆಗೆ ಅಪ್ಪಳಿಸಿತು ನೀಲನು ಅಸ್ತ್ರಜ್ವಾಲೆಯಿಂದ ಪರಾಹತನಾಗಿ ಧ್ವಜಾಗ್ರದಿಂದ ದೊಪ್ಪನೆ ನೆಲದಲ್ಲಿ ಬಿದ್ದನು (೮೯–೯೦). ತನ್ನ ತಂದೆಯಾದ ಅಗ್ನಿದೇವನ ಮಹಿಮೆಯೇ ಅಸ್ತ್ರದಲ್ಲಿ ಆವಾಹಿತವಾದ್ದರಿಂದಲೂ ಸ್ವತಃ ತಾನು ತೇಜಸ್ವಿಯಾದ್ದರಿಂದಲೂ ನೀಲನು ಮೊಳಕಾಲೂರಿ ಬಿದ್ದನೇ ಹೊರತು ಮೃತನಾಗಲಿಲ್ಲ. ನೀಲನು ಮೂರ್ಛಿತನಾದುದನ್ನು ಕಂಡು ರಣಕುತೂಹಲಿಯಾದ ದಶಗ್ರೀವನು, ಮೋಡವು ಗುಡುಗುವಂತೆ ರಥವನ್ನು ಭೋರ್ಗರೆಸುತ್ತ ಲಕ್ಷ್ಮಣನ ಕಡೆಗೆ ಧಾವಿಸಿದನು (೯೧–೯೨).

ಆಸಾದ್ಯ ರಣಮಧ್ಯೇ ತು ವಾರಯಿತ್ವಾ ಸ್ಥಿತೋ ಜ್ವಲನ್ ।
ಧನುರ್ವಿಸ್ಫಾರಯಾಮಾಸ ಕಂಪಯನ್ನಿವ ಮೇದಿನೀಮ್ ॥ ೯೩

ತಮಾಹ ಸೌಮಿತ್ರಿರದೀನಸತ್ತ್ವೋ
ವಿಸ್ಫಾರಯಂತಂ ಧನುರಪ್ರಮೇಯಮ್ ।
ಅಭ್ಯೇಹಿ ಮಾಮೇವ ನಿಶಾಚರೇಂದ್ರ
ನ ವಾನರಾಂಸ್ತ್ವಂ ಪ್ರತಿಯೋದ್ಧುಮರ್ಹಃ ॥ ೯೪

ಸ ತಸ್ಯ ವಾಕ್ಯಂ ಪ್ರತಿಪೂರ್ಣಘೋಷಂ
ಜ್ಯಾಶಬ್ದಮುಗ್ರಂ ಚ ನಿಶಮ್ಯ ರಾಜಾ ।
ಆಸಾದ್ಯ ಸೌಮಿತ್ರಿಮವಸ್ಥಿತಂ ತಂ
ಕೋಪಾನ್ವಿತೋ ವಾಕ್ಯಮುವಾಚ ರಕ್ಷಃ ॥ ೯೫

ದಿಷ್ಟ್ಯಾಽಸಿ ಮೇ ರಾಘವ ದೃಷ್ಟಿಮಾರ್ಗಂ
ಪ್ರಾಪ್ತೋಽಂತಗಾಮೀ ವಿಪರೀತಬುದ್ಧಿಃ ।
ಅಸ್ಮಿನ್ ಕ್ಷಣೇ ಯಾಸ್ಯಸಿ ಮೃತ್ಯುದೇಶಂ
ಸಂಸಾದ್ಯಮಾನೋ ಮಮ ಬಾಣಜಾಲೈಃ ॥ ೯೬

---

ರಣಮಧ್ಯದಲ್ಲಿ ತನ್ನನ್ನು ತಡೆಯಲು ಅಡ್ಡಬಂದ ಕಪಿಬಲವನ್ನು ಹೊಡೆದೋಡಿಸಿ ಕೋಪದಿಂದ ಉರಿಯುತ್ತಿದ್ದ ರಾವಣನು, ಜಗತ್ತು ತಲ್ಲಣಿಸುವಂತೆ ಧನುಸ್ಸನ್ನು ಜೇಗೈದನು (೯೩). ಘೋರವಾದ ಧನುಸ್ಸನ್ನು ಮತ್ತೆ ಮತ್ತೆ ಜೇಗೈಯುತ್ತಿದ್ದ ರಾವಣನನ್ನು ನೋಡಿ, ಧೀರಚಿತ್ತನಾದ ಲಕ್ಷ್ಮಣನು "ರಾಕ್ಷಸೇಂದ್ರ, ಈ ವಾನರರೊಡನೆ ನಿನಗೇಕೆ ಯುದ್ಧ ? ನನ್ನನ್ನೆದುರಿಸು" ಎಂದು ಹೇಳಿದನು (೯೪). ಗಂಭೀರಧ್ವನಿಯ ಲಕ್ಷ್ಮಣನ ಆಹ್ವಾನವನ್ನೂ ಕಠೋರವಾದ ಧನುಷ್ಟಂಕಾರವನ್ನೂ ಕೇಳಿ ಕೆರಳಿದ ರಾವಣನು ಲಕ್ಷ್ಮಣನತ್ತ ಧಾವಿಸುತ್ತ ಬಂದು "ಎಲಾ ಲಕ್ಷ್ಮಣ, ನನ್ನ ಭಾಗ್ಯದಿಂದಲೇ ನೀನೀಗ ಗೋಚರಿಸಿದೆ. ನಿನಗೆ ವಿನಾಶಕಾಲವು ಬಂದುದರಿಂದ ವಿಪರೀತಬುದ್ಧಿಯುಂಟಾಗಿದೆ! ನನ್ನ ಬಾಣಜಾಲಗಳು ನಿನ್ನನ್ನು ತುರುಬಿ ಯಮಲೋಕಕ್ಕೆ ಎಳೆದುಕೊಂಡು ಹೋಗುತ್ತವೆ" ಎಂದನು (೯೫–೯೬).

ತಮಾಹ ಸೌಮಿತ್ರಿರವಿಸ್ಮಯಾನೋ
ಗರ್ಜಂತಮುದ್ವೃತ್ತಶಿತಾಗ್ರದಂಷ್ಟ್ರಮ್ ।
ರಾಜನ್ನ ಗರ್ಜಂತಿ ಮಹಾಪ್ರಭಾವಾ
ವಿಕತ್ಥಸೇ ಪಾಪಕೃತಾಂ ವರಿಷ್ಠ ॥ ೯೭

ಜಾನಾಮಿ ವೀರ್ಯಂ ತವ ರಾಕ್ಷಸೇಂದ್ರ
ಬಲಂ ಪ್ರತಾಪಂ ಚ ಪರಾಕ್ರಮಂ ಚ ।
ಅವಸ್ಥಿತೋಽಹಂ ಶರಚಾಪಪಾಣಿ–
ರಾಗಚ್ಛ ಕಿಂ ಮೋಘವಿಕತ್ಥನೇನ ॥ ೯೮

ಸ ಏವಮುಕ್ತಃ ಕುಪಿತಃ ಸಸರ್ಜ
ರಕ್ಷೋಽಧಿಪಃ ಸಪ್ತ ಶರಾನ್ ಸುಪುಂಖಾನ್ ।
ತಾನ್ ಲಕ್ಷ್ಮಣಃ ಕಾಂಚನಚಿತ್ರಪುಂಖೈ–
ಶ್ಚಿಚ್ಛೇದ ಬಾಣೈರ್ನಿಶಿತಾಗ್ರಧಾರೈಃ ॥ ೯೯

---

ಹರಿತವಾದ ಬಿಳಿಯ ಹಲ್ಲುಗಳನ್ನು ಕಿರಿದು ಆರ್ಭಟಿಸುತ್ತಿದ್ದ ರಾವಣನನ್ನು ಕಂಡು ಲಕ್ಷ್ಮಣನು ಆಚ್ಚರಿಗೊಳ್ಳಲೂ ಇಲ್ಲ, ಅವನನ್ನು ಲೆಕ್ಕಿಸಲೂ ಇಲ್ಲ. "ಎಲೈ ರಾಕ್ಷಸರಾಜ, ಪರಾಕ್ರಮಿಗಳು ನಿನ್ನಂತೆ ಆರ್ಭಟಿಸುವುದಿಲ್ಲ. ನಿನ್ನನ್ನು ನೀನೇ ಹೊಗಳಿಕೊಳ್ಳುವೆಯಾ? ಮಹಾಪಾಪಿ ನೀನು (೯೭) ನಿನ್ನ ವೀರ್ಯ ಪ್ರತಾಪಗಳನ್ನೂ ನಿನ್ನ ಬಲಪರಾಕ್ರಮಗಳನ್ನೂ* ನಾನು ಬಲ್ಲೆ. ಇಗೋ, ಧನುರ್ಬಾಣಗಳನ್ನು ಹಿಡಿದು ಸಿದ್ಧನಾಗಿದ್ದೇನೆ. ವ್ಯರ್ಥವಾದ ಆತ್ಮಸ್ತುತಿಯಿಂದೇನು? ಮುಂದೆ ಬಾ!" ಎಂದು ಹೇಳಿದನು (೯೮). ಲಕ್ಷ್ಮಣನಾಡಿದ ಉಪಹಾಸದ ನುಡಿಯನ್ನು ಕೇಳಿ ರಾಕ್ಷಸೇಂದ್ರನು ಕುಪಿತನಾಗಿ, ಗರಿಗಟ್ಟಿದ ಏಳು ಬಾಣಗಳನ್ನು ಲಕ್ಷ್ಮಣನಿಗೆ ಗುರಿಯಿಟ್ಟು ಹೊಡೆದನು. ಲಕ್ಷ್ಮಣನು ಸುವರ್ಣಪುಂಖಾಂಕಿತ ಶರಗಳಿಂದ ಅವುಗಳನ್ನು ಕತ್ತರಿಸಿದನು (೯೯).

---

* ವೀರ್ಯ = ಧನುರ್ವಿದ್ಯೆಯಿಂದ ಬಂದ ಶಕ್ತಿ. ಪ್ರತಾಪ = ಶತ್ರುಕುಭಯಂಕರತೆ. ಬಲ = ದೇಹಬಲ. ಪರಾಕ್ರಮ = ಶತ್ರುವನ್ನಾಕ್ರಮಿಸುವ ಸಾಮರ್ಥ್ಯ.

ತಾನ್ ಪ್ರೇಕ್ಷಮಾಣಃ ಸಹಸಾ ನಿಕೃತ್ತಾ-
ನ್ನಿಕೃತ್ತಭೋಗಾನಿವ ಪನ್ನಗೇಂದ್ರಾನ್ ।
ಲಂಕೇಶ್ವರಃ ಕ್ರೋಧವಶಂ ಜಗಾಮ
ಸಸರ್ಜ ಚಾನ್ಯಾನ್ನಿಶಿತಾನ್ ಪೃಷತ್ಕಾನ್ ॥ ೧೦೦

ಸ ಬಾಣವರ್ಷಂ ತು ವವರ್ಷ ತೀವ್ರಂ
ರಾಮಾನುಜಃ ಕಾರ್ಮುಕಸಂಪ್ರಯುಕ್ತಮ್ ।
ಕ್ಷುರಾರ್ಧಚಂದ್ರೋತ್ತಮ ಕರ್ಣಿಭಲ್ಲೈಃ
ಶರಾಂಶ್ಚ ಚಿಚ್ಛೇದ ನ ಚುಕ್ಷುಭೇ ಚ ॥ ೧೦೧

ಸ ಬಾಣಜಾಲಾನ್ಯಥ ತಾನಿ ತಾನಿ
ಮೋಘಾನಿ ಪಶ್ಯಂಸ್ತ್ರಿದಶಾರಿರಾಜಃ ।
ವಿಸಿಷ್ಮಿಯೇ ಲಕ್ಷ್ಮಣಲಾಘವೇನ
ಪುನಶ್ಚ ಬಾಣಾನ್ನಿಶಿತಾನ್ ಮುಮೋಚ ॥ ೧೦೨

ಸ ಲಕ್ಷ್ಮಣಶ್ಚಾಶು ಶರಾನ್ ಶಿತಾಗ್ರಾನ್
ಮಹೇಂದ್ರವಜ್ರಾಶನಿತುಲ್ಯವೇಗಾನ್ ।

---

ಮಹಾಸರ್ಪಗಳಂತಿದ್ದ ತನ್ನ ಬಾಣಗಳು ಮರುಕ್ಷಣದಲ್ಲಿ ಕತ್ತರಿಸಿಬಿದ್ದುದನ್ನು ಕಂಡು ಲಂಕೇಶ್ವರನು ಕ್ರೋಧಾವಿಷ್ಟನಾಗಿ ಮತ್ತೆ ಕೆಲವು ತೀಕ್ಷ್ಣಾಸ್ತ್ರಗಳನ್ನು ಪ್ರಯೋಗಿಸಿದನು (೧೦೦). ಆಗ ರಾಮಾನುಜನಾದ ಸೌಮಿತ್ರಿಯು ಕಾರ್ಮುಕದಿಂದ ಶರವೃಷ್ಟಿಯನ್ನು ಸುರಿಸುತ್ತ ಕ್ಷುರ ಅರ್ಧಚಂದ್ರ ಕರ್ಣಿ ಭಲ್ಲ ಮುಂತಾದ ಅಸ್ತ್ರಗಳನ್ನು ಪ್ರಯೋಗಿಸಿ ರಾವಣನ ಬಾಣಗಳನ್ನು ತುಂಡರಿಸುತ್ತಿದ್ದನು. ಆದರೂ ಲಕ್ಷ್ಮಣನು ಆಯಾಸಗೊಳ್ಳಲಿಲ್ಲ, ಉದ್ವಿಗ್ನನಾಗಲಿಲ್ಲ (೧೦೧).ತಾನು ಪ್ರಯೋಗಿಸಿದ ವಿವಿಧ ಶರಜಾಲಗಳನ್ನು ಲಕ್ಷ್ಮಣನು ಬಹು ಸುಲಭಲವಾಗಿ ಕತ್ತರಿಸಿ ಚೆಲ್ಲುವುದನ್ನು ಕಂಡು ರಾಕ್ಷಸೇಂದ್ರನು ಬೆರಗಾದನು. ಲಕ್ಷ್ಮಣನ ಹಸ್ತಲಾಘವಕ್ಕೆ ಮೆಚ್ಚಿ, ರಾವಣನು ಮತ್ತೂ ತೀವ್ರವಾದ ಕೂರಂಬುಗಳ್ನು ಬಿಡತೊಡಗಿದನು (೧೦೨). ಆಮೇಲೆ ಲಕ್ಷ್ಮಣನು ಇಂದ್ರನ ವಜ್ರಾಯುಧದಂತೆಯೂ ಸಿಡಿಲಿನಂತೆಯೂ ರಭಸದಿಂದೆರಗುವ ವಹ್ನಿ ಸಂಕಾಶಗಳಾದ ತೀಕ್ಷ್ಣಾಸ್ತ್ರಗಳನ್ನು ಹೂಡಿ ರಾಕ್ಷಸರಾಜನನ್ನು ವಧಿಸಬೇಕೆಂದು

ಸಂಧಾಯ ಚಾಪೇ ಜ್ವಲನಪ್ರಕಾಶಾನ್
ಸಸರ್ಜ ರಕ್ಷೋಽಧಿಪತೇರ್ವಧಾಯ ॥ ೧೦೩

ಸ ತಾನ್ ಪ್ರಚಿಚ್ಛೇದ ಹಿ ರಾಕ್ಷಸೇಂದ್ರ-
ಶ್ಛಿತ್ತ್ವಾ ಚ ತಾನ್ ಲಕ್ಷ್ಮಣಮಾಜಘಾನ ।
ಶರೇಣ ಕಾಲಾಗ್ನಿ ಸಮಪ್ರಭೇಣ
ಸ್ವಯಂಭುದತ್ತೇನ ಲಲಾಟದೇಶೇ ॥ ೧೦೪

ಸ ಲಕ್ಷ್ಮಣೋ ರಾವಣಸಾಯಕಾರ್ತ-
ಶ್ಚಚಾಲ ಚಾಪಂ ಶಿಥಿಲಂ ಪ್ರಗೃಹ್ಯ ।
ಪುನಶ್ಚ ಸಂಜ್ಞಾಂ ಪ್ರತಿಲಭ್ಯ ಕೃಚ್ಛ್ರಾ-
ಚ್ಚಿಚ್ಛೇದ ಚಾಪಂ ತ್ರಿದಶೇಂದ್ರಶತ್ರೋಃ ॥ ೧೦೫

ನಿಕೃತ್ತಚಾಪಂ ತ್ರಿಭಿರಾಜಘಾನ
ಬಾಣೈಸ್ತದಾ ದಾಶರಥಿಃ ಶಿತಾಗ್ರೈಃ ।
ಸ ಸಾಯಕಾರ್ತೋ ವಿಚಚಾಲ ರಾಜಾ
ಕೃಚ್ಛ್ರಾಚ್ಚ ಸಂಜ್ಞಾಂ ಪುನರಾಸಸಾದ ॥ ೧೦೬

ಸ ಕೃತ್ತಚಾಪಃ ಶರತಾಡಿತಶ್ಚ
ಮೇದಾರ್ದ್ರಗಾತ್ರೋ ರುಧಿರಾವಸಿಕ್ತಃ ।

---

ಬಿರುಸಿನಿಂದ ಪ್ರಯೋಗಿಸಿದನು (೧೦೩). ರಾವಣನು ಅವೆಲ್ಲವನ್ನೂ ಕತ್ತರಿಸಿ ಒಗೆದು ಕಾಲಾಗ್ನಿಯಂತೆ ಪ್ರಜ್ವಲಿಸುವ ಬ್ರಹ್ಮದತ್ತವಾದ ಶರದಿಂದ ಲಕ್ಷ್ಮಣನ ಹಣೆಗೆ ಗುರಿಯಿಟ್ಟು ಹೊಡೆದನು. ಆ ಶರದ ಹೊಡೆತಕ್ಕೆ ಲಕ್ಷ್ಮಣನು ತತ್ತರಿಸಿದನು. ಕೈಯಲ್ಲಿದ್ದ ಬಿಲ್ಲು ಸಡಿಲಿತು. ಆದರೂ ಹೇಗೋ ಮತ್ತೆ ಚೇತರಿಸಿಕೊಂಡು ರಾವಣನ ಬಿಲ್ಲನ್ನು ತುಂಡರಿಸಿದನು. (೧೦೪–೧೦೫). ಬಿಲ್ಲನ್ನು ತುಂಡರಿಸಿ ಆ ದಶರಥಪುತ್ರನು ಹರಿತವಾದ ಮೂರು ಮಾರ್ಗಣಗಳಿಂದ ರಾವಣನನ್ನು ಹೊಡೆಯಲು, ರಾಕ್ಷಸರಾಜನು ಮೂರ್ಛಿತನಾದನು. ತುಸುಹೊತ್ತಿನಲ್ಲಿ ಕಷ್ಟದಿಂದ ಮತ್ತೆ ಎಚ್ಚೆತ್ತನು. (೧೦೬). ರಾವಣನ ಬಿಲ್ಲು ತುಂಡಾಗಿತ್ತು, ಲಕ್ಷ್ಮಣಾಸ್ತ್ರಗಳಿಂದ ಅವನು ಗಾಯಗೊಂಡಿದ್ದನು. ಮೇದಸ್ಸು ಸುರಿದು ಗಾತ್ರವು ಒದ್ದೆಯಾಗಿತ್ತು, ರಕ್ತವು ಮೈಮೇಲೆ ಹರಿಯುತ್ತಿತ್ತು, ಆಗ ವಿಪುಲ

ಜಗ್ರಾಹ ಶಕ್ತಿಂ ಸಮುದಗ್ರಶಕ್ತಿ:
ಸ್ವಯಂಭುದತ್ತಾಂ ಯುಧಿ ದೇವಶತ್ರುಃ ॥ ೧೦೭

ಸ ತಾಂ ವಿಧೂಮಾನಲಸಂನಿಕಾಶಾಂ
ವಿತ್ರಾಸಿನೀಂ ವಾನರವಾಹಿನೀನಾಮ್ ।
ಚಿಕ್ಷೇಪ ಶಕ್ತಿಂ ತರಸಾ ಜ್ವಲಂತೀಂ
ಸೌಮಿತ್ರಯೇ ರಾಕ್ಷಸರಾಷ್ಟ್ರನಾಥಃ ॥ ೧೦೮

ತಾಮಾಪತಂತೀಂ ಭರತಾನುಜೋಽಸ್ತ್ರೈ-
ರ್ಜಘಾನ ಬಾಣೈಶ್ಚ ಹುತಾಗ್ನಿ ಕಲ್ಪೈಃ ।
ತಥಾಪಿ ಸಾ ತಸ್ಯ ವಿವೇಶ ಶಕ್ತಿ-
ರ್ಬಾಹ್ವಂತರಂ ದಾಶರಥೇರ್ವಿಶಾಲಮ್ ॥ ೧೦೯

ಸ ಶಕ್ತಿಮಾನ್ ಶಕ್ತಿಸಮಾಹತಃ ಸನ್
ಭೂಮೌ ಪ್ರಜಜ್ವಾಲ ರಘುಪ್ರವೀರಃ ।
ತಂ ವಿಹ್ವಲಂತಂ ಸಹಸಾಭ್ಯುಪೇತ್ಯ
ಜಗ್ರಾಹ ರಾಜಾ ತರಸಾ ಭುಜಾಭ್ಯಾಮ್ ॥ ೧೧೦

---

ಸಾಮರ್ಥ್ಯಶಾಲಿಯಾದ ರಾವಣನು ಬ್ರಹ್ಮದತ್ತವಾದ ಶಕ್ತಿಯೆಂಬ ಆಯುಧವನ್ನು ಕೈಗೆ ತೆಗೆದುಕೊಂಡನು (೧೦೭). ಆ ಶಕ್ತಿಯು ಹೊಗೆಯಿಲ್ಲದ ಬೆಂಕಿಯಂತೆ ದೇದಿಪ್ಯಮಾನವಾಗಿತ್ತು. ಅದನ್ನು ಕಂಡು ಕಪಿಸೇನೆಯು ಭಯದಿಂದ ತಲ್ಲಣಿಸಿತು. ರಾಕ್ಷಸೇಂದ್ರನು ಆ ಶಕ್ತ್ಯಾಯುಧವನ್ನು ಸೌಮಿತ್ರಿಯಮೇಲೆ ರಭಸದಿಂದ ಬೀಸಿಹೊಡೆದನು (೧೦೮). ಅದು ಚಂಡವೇಗದಿಂದ ಸಿಡಿದು ಬರುತ್ತಿರಲು, ಲಕ್ಷ್ಮಣನು ಅಗ್ನಿ ಕುಂಡದಲ್ಲಿ ಉರಿಯುವ ಅಗ್ನಿಯಂತೆ ಥಳಥಳಿಸುವ ಅಸ್ತ್ರಗಳನ್ನು ಆ ಶಕ್ತಿಯಮೇಲೆ ಎಡಬಿಡದೆ ಹೊಡೆದನು. ಆದರೂ ಆ ಶಕ್ತಿಯು ಲಕ್ಷ್ಮಣನ ವಿಶಾಲವಕ್ಷಸ್ಥಳದಲ್ಲಿ ಬಂದು ನಾಟಿತು (೧೦೯). ಅತ್ಯಂತ ಶಕ್ತನಾದ ಆ ರಘುಕುಲವೀರನು ಶಕ್ತ್ಯಾಯುಧದಿಂದ ಆಹತನಾಗಿ ನೆಲದಲ್ಲಿ ಬಿದ್ದರೂ ತೇಜೋವಿಶೇಷದಿಂದ ಬೆಳಗುತ್ತಿದ್ದನು. ಎಚ್ಚರದಪ್ಪಿ ನಿಶ್ಚೇಷ್ಟನಾಗುತ್ತಿದ್ದ ಲಕ್ಷ್ಮಣನನ್ನು ನೋಡಿ ರಾವಣನು ಥಟ್ಟನೆ ಮುಂದೆ ಬಂದು, (ಅವನನ್ನು ಹೊತ್ತು ಕೊಂಡು ಹೋಗಬೇಕೆಂಬ ಉದ್ದೇಶದಿಂದ)

ಹಿಮವಾನ್ ಮಂದರೋ ಮೇರುಸ್ತ್ರೈಲೋಕ್ಯಂ ವಾ ಸಹಾಮರೈಃ ।
ಶಕ್ಯಂ ಭುಜಾಭ್ಯಾಮುದ್ಧರ್ತುಂ ನ ಸಂಖ್ಯೇ ಭರತಾನುಜಃ ॥ ೧೧೧

ಶಕ್ತ್ಯಾ ಬ್ರಾಹ್ಮ್ಯಾಪಿ ಸೌಮಿತ್ರಿಸ್ತಾಡಿತಸ್ತು ಸ್ತನಾಂತರೇ ।
ವಿಷ್ಣೋರಚಿಂತ್ಯಂ ಸ್ವಂ ಭಾಗಮಾತ್ಮಾನಂ ಪ್ರತ್ಯನುಸ್ಮರನ್ ॥ ೧೧೨

ತತೋ ದಾನವದರ್ಪಘ್ನಂ ಸೌಮಿತ್ರಿಂ ದೇವಕಂಟಕಃ ।
ತಂ ಪೀಡಯಿತ್ವಾ ಬಾಹುಭ್ಯಾಮಪ್ರಭುರ್ಲಂಘನೇಽಭವತ್ ॥ ೧೧೩

ಅಥ ವಾಯುಸುತಃ ಕ್ರುದ್ಧೋ ರಾವಣಂ ಸಮಭಿದ್ರವತ್ ।
ಆಜಘಾನೋರಸಿ ಕ್ರುದ್ಧೋ ವಜ್ರ ಕಲ್ಪೇನ ಮುಷ್ಟಿನಾ ॥ ೧೧೪

ತೇನ ಮುಷ್ಟಿಪ್ರಹಾರೇಣ ರಾವಣೋ ರಾಕ್ಷಸೇಶ್ವರಃ ।
ಜಾನುಭ್ಯಾಮಪತದ್ಭೂಮೌ ಚಚಾಲ ಚ ಪಪಾತ ಚ ॥ ೧೧೫

ಆಸ್ಯೈಃ ಸನೇತ್ರಶ್ರವಣೈರ್ವವಾಮ ರುಧಿರಂ ಬಹು ।
ವಿಘೂರ್ಣಮಾನೋ ನಿಶ್ಚೇಷ್ಟೋ ರಥೋಪಸ್ಥ ಉಪಾವಿಶತ್ ॥ ೧೧೬

---

ಎರಡು ತೋಳುಗಳಿಂದಲೂ ಹಿಡಿದುಕೊಂಡನು (೧೧೦). ಆದರೇನು ? ರಾವಣನು ತೋಳುಗಳಿಂದ ಹಿಮವತ್ಪರ್ವತವನ್ನಾದರೂ ಎತ್ತಿಯಾನು, ಮೇರುಮಂದರಗಳನ್ನೇ ಹೊತ್ತಾನು, ದೇವತೆಗಳಿಂದ ಸಹಿತವಾದ ತ್ರೈಲೋಕ್ಯ ವನ್ನಾದರೂ ಒಂದು ವೇಳೆ ನೆಗಹಿಯಾನು, ರಣಭೂಮಿಯಲ್ಲಿ ಬಿದ್ದು ಲಕ್ಷ್ಮಣನನ್ನು ಮಾತ್ರ ಎತ್ತಲಾರದೆ ಹೋದನು! (೧೧೧). ಏಕೆಂದರೆ, ಬ್ರಹ್ಮನ ಶಕ್ತ್ಯಾಯುಧದಿಂದ ಲಕ್ಷ್ಮಣನು ಎದೆಯಲ್ಲಿ ತಾಡಿತನಾದರೂ ತಾನು ಶ್ರೀಮನ್ನಾರಾಯಣನ ಊಹಾತೀತಮಹಿಮೆಯುಳ್ಳ ಅಂಶವೆಂಬುದನ್ನು ಅವನು ಸ್ಮರಿಸಿಕೊಂಡನು (೧೧೨). ಆದ್ದರಿಂದ ದಾನವದರ್ಪವನ್ನು ಭಗ್ನಮಾಡುವ ವೈಷ್ಣವಾಂಶವುಳ್ಳ ಸೌಮಿತ್ರಿಯನ್ನು ದೇವಶತ್ರುವಾದ ರಾವಣನು ತನ್ನ ತೋಳುಗಳಿಂದ ಬಲವಾಗಿ ಹಿಡಿದು ಎತ್ತಲು ಪ್ರಯತ್ನಿದರೂ ಸಾಧ್ಯವಾಗ ಲಿಲ್ಲ. ರಾವಣನ ಹೆಣಗಾಟವನ್ನು ನೋಡಿದ ಹನುಮಂತನು ಕ್ರುದ್ಧನಾಗಿ ಓಡುತ್ತ ಬಂದು, ರಾವಣನ ಎದೆಯನ್ನು ವಜ್ರಕಲ್ಪವಾದ ಮುಷ್ಟಿಯಿಂದ ಗುದ್ದಿದನು ! (೧೧೩–೧೧೪) ಆ ಹೊಡೆತದ ಬಿರುಸನ್ನು ತಾಳಲಾರದೆ ರಾವಣನು ತತ್ತರಿಸುತ್ತ ಮೊಳಕಾಲೂರಿ ಹಾಗೆಯೇ ಬಿದ್ದು ಹೋದನು. ಬಾಯಿಂದ ನೆತ್ತರನ್ನು ಕಕ್ಕಿದನು. ಕಣ್ಣು ಕಿವಿಗಳಿಂದಲೂ ರಕ್ತವು ಸುರಿಯಿತು.

ವಿಸಂಜ್ಞೋ ಮೂರ್ಛಿತಶ್ಚಾಸೀನ್ನ ಚ ಸ್ಥಾನಂ ಸಮಾಲಭತ್ ।
ವಿಸಂಜ್ಞಂ ರಾವಣಂ ದೃಷ್ಟ್ವಾ ಸಮರೇ ಭೀಮವಿಕ್ರಮಮ್ ॥ ೧೧೭

ಋಷಯೋ ವಾನರಾಃ ಸರ್ವೇ ನೇದುರ್ದೇವಾಃ ಸವಾಸವಾಃ ।
ಹನುಮಾನಪಿ ತೇಜಸ್ವೀ ಲಕ್ಷ್ಮಣಂ ರಾವಣಾರ್ದಿತಮ್ ॥ ೧೧೮

ಅನಯದ್ರಾಘವಾಭ್ಯಾಶಂ ಬಾಹುಭ್ಯಾಂ ಪರಿಗೃಹ್ಯ ತಮ್ ।
ವಾಯುಸೂನೋಃ ಸುಹೃತ್ತ್ವೇನ ಭಕ್ತ್ಯಾ ಪರಮಯಾ ಚ ಸಃ ॥ ೧೧೯

ಶತ್ರೂಣಾಮಪ್ರಕಂಪ್ಯೋಽಪಿ ಲಘುತ್ವಮಗಮತ್ಕಪೇಃ ।
ತಂ ಸಮುತ್ಸೃಜ್ಯ ಸಾ ಶಕ್ತಿಃ ಸೌಮಿತ್ರಿಂ ಯುಧಿ ದುರ್ಜಯಮ್ ॥

ರಾವಣಸ್ಯ ರಥೇ ತಸ್ಮಿನ್ ಸ್ಥಾನಂ ಪುನರುಪಾಗತಾ ।
ಆಶ್ವಸ್ತಶ್ಚ ವಿಶಲ್ಯಶ್ಚ ಲಕ್ಷ್ಮಣಃ ಶತ್ರುಸೂದನಃ ॥ ೧೨೧

---

ತಲೆಯು ಗಿರ್ರೆಂದಿತು. ಮೆಲ್ಲನೆ ಹೋಗಿ ರಥದಲ್ಲಿ ಸುಮ್ಮನೆ ಕುಳಿತನು (೧೧೫–೧೧೬). ಹಾಗೆಯೇ ಬವಳಿ ಬಂದು ರಾವಣನು ಮೂರ್ಛಿತನಾದನು. ಮತ್ತೆ ಎಚ್ಚರವಾದರೂ ಚೇತರಿಸಿಕೊಂಡು ತನ್ನ ಸ್ಥಾನದಲ್ಲಿ ಕುಳಿತುಕೊಳ್ಳಲಾರದೆ ಹಾಗೆಯೇ ರಥದಲ್ಲಿ ಮಲಗಿದ್ದನು. ಭೀಮವಿಕ್ರಮನಾದ ರಾವಣನಿಗೊದಗಿದ ದುರವಸ್ಥೆಯನ್ನು ಕಂಡು ಋಷಿಗಳೂ ವಾನರರೂ ದೇವತೆಗಳೂ ಇಂದ್ರನೂ ಹರ್ಷೋದ್ಗಾರಮಾಡಿದರು (೧೧೭–೧೧೮). ಇತ್ತ ಧೀರನಾದ ಹನುಮಂತನು ರಾವಣಪೀಡಿತನಾದ ಲಕ್ಷ್ಮಣನನ್ನು ಭುಜಗಳಿಂದ ಹಿಡಿದೆತ್ತಿಕೊಂಡು ಶ್ರೀರಾಮ ಬಳಿಗೆ ಕರೆದೊಯ್ದನು. ಶತ್ರುಗಳಿಂದ ಅಲ್ಲಾಡಿಸುವುದಕ್ಕೂ ಅಶಕ್ಯನಾಗಿದ್ದ ಲಕ್ಷ್ಮಣನು, ಹನುಮಂತನ ಸೌಹಾರ್ದದಿಂದಲೂ ಪರಮಭಕ್ತಿಯಿಂದಲೂ ಅವನಿಗೆ ಹಗುರವಾದನು! (೧೧೯). ರಾವಣನು ಪ್ರಯೋಗಿಸಿದ ಆ ಶಕ್ತಿಯು, ಸಮರಾಂಗಣದಲ್ಲಿ ಸೌಮಿತ್ರಿಯು ದುರ್ಜಯನಾದ್ದರಿಂದ ಅವನನ್ನು ತ್ಯಜಿಸಿ, ಪುನಃ ಹಿಂದಿರುಗಿ ರಾವಣನ ರಥವನ್ನು ಸೇರಿತು. ಶ್ರೀಮನ್ನಾರಾಯಣನ ಅಚಿಂತ್ಯವಾದ ಅಂಶವೇ ತಾನೆಂಬುದನ್ನು ಸ್ಮರಿಸಿಕೊಳ್ಳುತ್ತಿರಲು, ಶಕ್ತ್ಯಾಯುಧದಿಂದ ವಿಮುಕ್ತನಾಗಿ ಅವನು ಚೇತರಿಸಿಕೊಂಡನು (೧೨೦–೧೨೧).

ವಿಷ್ಣೋರ್ಭಾಗಮಮೀಮಾಂಸ್ಯಮಾತ್ಮಾನಂ ಪ್ರತ್ಯನುಸ್ಮರನ್ ।
ರಾವಣೋಽಪಿ ಮಹಾತೇಜಾಃ ಪ್ರಾಪ್ಯ ಸಂಜ್ಞಾಂ ಮಹಾಹವೇ ॥ ೧೨೨

ಆದದೇ ನಿಶಿತಾನ್ ಬಾಣಾನ್ ಜಗ್ರಾಹ ಚ ಮಹದ್ಧನುಃ ।
ನಿಪಾತಿತಮಹಾವೀರಾಂ ದ್ರವಂತೀಂ ವಾನರೀಂ ಚಮೂಮ್ ॥ ೧೨೩

ರಾಘುವಸ್ತು ರಣೇ ದೃಷ್ಟ್ವಾ ರಾವಣಂ ಸಮಭಿದ್ರವತ್ ।
ಅಥೈನಮುಪಸಂಗಮ್ಯ ಹನುಮಾನ್ ವಾಕ್ಯಮಬ್ರವೀತ್ ॥ ೧೨೪

ಮಮ ಪೃಷ್ಠಂ ಸಮಾರುಹ್ಯ ರಾಕ್ಷಸಂ ಶಾಸ್ತು ಮರ್ಹಸಿ ।
ವಿಷ್ಣುರ್ಯಥಾ ಗರುತ್ಮಂತಂ ಬಲವಂತಂ ಸಮಾಹಿತಃ ॥ ೧೨೫

ತಚ್ಛ್ರುತ್ವಾ ರಾಘವೋ ವಾಕ್ಯಂ ವಾಯುಪುತ್ರೇಣ ಭಾಷಿತಮ್ ।
ಆರುರೋಹ ಮಹಾಶೂರೋ ಬಲವಂತಂ ಮಹಾಕಪಿಮ್ ॥ ೧೨೬

ರಥಸ್ಥಂ ರಾವಣಂ ಸಂಖ್ಯೇ ದದರ್ಶ ಮನುಜಾಧಿಪಃ ।
ತಮಾಲೋಕ್ಯ ಮಹಾತೇಜಾಃ ಪ್ರದುದ್ರಾವ ಸ ರಾಘವಃ ॥ ೧೨೭

ವೈರೋಚನಿಮಿವ ಕ್ರುದ್ಧೋ ವಿಷ್ಣುರಭ್ಯುದ್ಯತಾಯುಧಃ ।
ಜ್ಯಾಶಬ್ದಮಕರೋತ್ತೀವ್ರಂ ವಜ್ರನಿಷ್ಪೇಷನಿಃಸ್ವನಮ್ ॥ ೧೨೮

---

ಮಹಾತೇಜಸ್ವಿಯಾದ ರಾವಣನೂ ಇತ್ತ ಚೇತರಿಸಿಕೊಂಡೆದ್ದು ಮತ್ತೊಂದು ಮಹಾಧನುಸ್ಸನ್ನು ಹಿಡಿದು ನಿಶಿತಾಸ್ತ್ರಗಳನ್ನು ಹಿರಿದನು. ಮತ್ತೆ ಅವನು ಆಕ್ರಮಣವನ್ನಾರಂಭಿಸಲು ಬಹುಮಂದಿ ಕಪಿವೀರನು ಸತ್ತು ಉರುಳಿದರು. ವಾನರಸೇನೆಯು ದಿಕ್ಕುಗೆಟ್ಟು ಓಡತೊಡಗಿತು. (೧೨೨-೧೨೩). ಆಗ ಶ್ರೀರಾಮನು ತಾನೇ ರಾವಣನನ್ನೆದುರಿಸಬೇಕೆಂದು ಹೊರಟನು. ಅಷ್ಟರಲ್ಲಿ ಹನುಮಂತನು ಸಮೀಪಕ್ಕೆ ಬಂದು ''ಶ್ರೀರಾಮ, ನನ್ನ ಹೆಗಲನ್ನೇರು. ಗರುಡನಮೇಲೆ ವಿಷ್ಣುವು ಕುಳಿತಂತೆ ನನ್ನ ಹೆಗಲನ್ನೇರಿ ಕುಳಿತು ಆ ರಾಕ್ಷಸನನ್ನ ದಂಡಿಸು'' ಎಂದು ಕೇಳಿಕೊಂಡನು (೧೨೪-೧೨೫). ವೀರಾಗ್ರಣಿಯಾದ ರಾಘವನು ಹನುಮಂತನ ಮಾತನ್ನು ಮನ್ನಿಸಿ ಬಲಾಢ್ಯನಾದ ಆ ಮಹಾಕಪಿಯ ಹೆಗಲನ್ನೇರಿದನು. ಅನಂತರ ಆ ತೇಜಸ್ವಿಯು ಕೋದಂಡವನ್ನು ಹಿಡಿದು, ರಣರಂಗದಲ್ಲಿ ರಥವನ್ನೇರಿ ಬಂದಿದ್ದ ರಾವಣನ ಕಡೆಗೆ, ವಿಷ್ಣುವು ಬಲಿಚಕ್ರವರ್ತಿಯ ಬಳಿಗೆ ಧಾವಿಸಿದಂತೆ, ಆಕ್ರೋಶದಿಂದ ನುಗ್ಗಿದನು.

ಗಿರಾ ಗಂಭೀರಯಾ ರಾಮೋ ರಾಕ್ಷಸೇಂದ್ರಮುವಾಚ ಹ ।
ತಿಷ್ಠ ತಿಷ್ಠ ಮಮ ತ್ವಂ ಹಿ ಕೃತ್ವಾ ವಿಪ್ರಿಯಮೀದೃಶಮ್ ॥ ೧೨೯
ಕ್ವ ನು ರಾಕ್ಷಸಶಾರ್ದೂಲ ಗತೋ ಮೋಕ್ಷಮವಾಪ್ಸ್ಯಸಿ ॥

ಯದೀಂದ ವೈವಸ್ವತಭಾಸ್ಕರಾನ್ ವಾ
ಸ್ವಯಂಭುವೈಶ್ವಾನರಶಂಕರಾನ್ ವಾ ।
ಗಮಿಷ್ಯಸಿ ತ್ವಂ ದಶ ವಾ ದಿಶೋಽಥವಾ
ತಥಾಪಿ ಮೇ ನಾದ್ಯ ಗತೋ ವಿಮೋಕ್ಷ್ಯಸೇ ॥ ೧೩೦

ಯಶ್ಚೈಷ ಶಕ್ತ್ಯಾಭಿಹತಸ್ತ್ವಯಾದ್ಯ
ಇಚ್ಛನ್ ವಿಷಾದಂ ಸಹಸಾಭ್ಯುಪೇತಃ ।
ಸ ಏಷ ರಕ್ಷೋಗಣರಾಜ ಮೃತ್ಯುಃ
ಸಪುತ್ರದಾರಸ್ಯ ತವಾದ್ಯ ಯುದ್ಧೇ ॥ ೧೩೧

ಏತೇನ ಚಾಪ್ಯದ್ಭುತದರ್ಶನಾನಿ
ಶರೈರ್ಜನಸ್ಥಾನಕೃತಾಲಯಾನಿ ।

---

ಸಿಡಿಲಿನಂತೆ ಕೋದಂಡವನ್ನು ಜೇಗೈದನು (೧೨೬–೧೨೮). ರಾವಣನನ್ನು ನೋಡಿ ಗಂಭೀರವಾದ ಧ್ವನಿಯಿಂದ "ಎಲಾ ರಾಕ್ಷಸ, ನಿಲ್ಲು ನಿಲ್ಲು! ಇಂಥ ಹಗೆತನವನ್ನು ನನ್ನೊಡನೆ ಬೆಳಸಿ ಎಲ್ಲಿಗೆ ಹೋಗುವೆ? ಎಲ್ಲಿಗೆ ಹೋದರೆ ತಾನೇ ತಪ್ಪಿಸಿಕೊಂಡೀಯೆ ! (೧೨೯) ದೇವೇಂದ್ರ ಯಮ ಭಾಸ್ಕರರನ್ನೇ ಮರೆಹೊಗು, ಬ್ರಹ್ಮಾಗ್ನಿರುದ್ರರಿಗೆ ಶರಣಾಗು ಅಥವಾ ದಶದಿಗಂತಗಳಿಗೇ ಓಡಿಹೋಗು– ಎಲ್ಲಿ ಹೋದರೂ ನನ್ನಿಂದ ತಪ್ಪಿಸಿಕೊಳ್ಳಲಾರೆ (೧೩೦). ಯಾರನ್ನು ನೀನು ಶಕ್ತ್ಯಾಯುಧದಿಂದ ಘಾತಿಸಿದೆಯೋ ಅವನೇ* ಈಗ ನಿನ್ನೊಡನೆ ಯುದ್ಧಮಾಡಲು ಬಂದಿದ್ದಾನೆಂದು ತಿಳಿ. ಎಲೈ ರಾಕ್ಷಸರಾಜ, ನಿನಗೂ ನಿನ್ನ ಮಡದಿಮಕ್ಕಳಿಗೂ ಅವನೇ ಮೃತ್ಯುನಾಗಿ ಬಂದಿದ್ದಾನೆಂದು ತಿಳಿ ! (೧೩೧) ಜನಸ್ಥಾನದಲ್ಲಿ ಅದ್ಭುತಾಕೃತಿಗಳಾದ ಹದಿನಾಲ್ಕು ಸಾವಿರ

---

* ಲಕ್ಷ್ಮಣನಿಗೂ ತನಗೂ ಭೇದವಿಲ್ಲವೆಂದು ಅಭಿಪ್ರಾಯದಿಂದ ಶ್ರೀರಾಮನು ಈ ಮಾತನ್ನಾಡಿದ್ದಾನೆ. ಲಕ್ಷ್ಮಣನು ಅಭಿಹುತನಾದ್ದರಿಂದ ನಾನು ಬಂದಿದ್ದೇನೆ ಎಂದೂ ಅರ್ಥವನ್ನು ಹೇಳಬಹುದು.

ಚತುರ್ದಶಾನ್ಯಾತ್ತವರಾಯುಧಾನಿ
ರಕ್ಷಃಸಹಸ್ರಾಣಿ ನಿಷೂದಿತಾನಿ ॥ ೧೩೨

ರಾಘವಸ್ಯ ವಚಃ ಶ್ರುತ್ವಾ ರಾಕ್ಷಸೇಂದ್ರೋ ಮಹಾಕಪಿಮ್ ।
ವಾಯುಪುತ್ರಂ ಮಹಾವೀರ್ಯಂ ವಹಂತಂ ರಾಘವಂ ರಣೇ ॥ ೧೩೩

ರೋಷೇಣ ಮಹತಾವಿಷ್ಟಃ ಪೂರ್ವವೈರಮನುಸ್ಮರನ್।
ಆಜಘಾನ ಶರೈಸ್ತೀಕ್ಷ್ಣೈಃ ಕಾಲಾನಲಶಿಖೋಪಮೈಃ ॥ ೧೩೪

ರಾಕ್ಷಸೇನಾಹವೇ ತಸ್ಯ ತಾಡಿತಸ್ಯಾಪಿ ಸಾಯಕೈಃ ।
ಸ್ವಭಾವತೇಜೋಯುಕ್ತಸ್ಯ ಭೂಯಸ್ತೇಜೋಽಭ್ಯವರ್ಧತ ॥ ೧೩೫

ತತೋ ರಾಮೋ ಮಹಾತೇಜಾ ರಾವಣೇನ ಕೃತವ್ರಣಮ್ ।
ದೃಷ್ಟ್ವಾ ಪ್ಲವಗಶಾರ್ದೂಲಂ ಕ್ರೋಧಸ್ಯ ವಶಮೇಯಿವಾನ್ ॥ ೧೩೬

ತಸ್ಯಾಭಿಚಂಕ್ರಮ್ಯ ರಥಂ ಸಚಕ್ರಂ
ಸಾಶ್ವಧ್ವಜಚ್ಛತ್ರಮಹಾಪತಾಕಮ್ ।

---

ರಾಕ್ಷಸರು ನೆಲೆಸಿದ್ದರಷ್ಟೆ. ದಿವ್ಯಾಯುಧಗಳನ್ನು ಹಿಡಿದು ಹೊಡೆದಾಡಲು ಬಂದ ಅವರೆಲ್ಲರನ್ನೂ ತುಂಡರಿಸಿ ಚೆಲ್ಲಿ ಧ್ವಂಸಮಾಡಿದವನು ಈತನೇ ಎಂದು ತಿಳಿ!'' ಎಂದನು (೧೩೨). ಶ್ರೀರಾಮನ ವಚನವನ್ನಾಲಿಸಿದ ರಾಕ್ಷಸೇಂದ್ರನಿಗೆ ಮಹಾವೀರನಾದ ಹನುಮಂತನು ಶ್ರೀರಾಮನನ್ನು ಹೆಗಲಮೇಲೆ ಕುಳ್ಳಿರಿಸಿ ಕೊಂಡು ಧಾವಿಸುತ್ತ ಬರುವುದು ಗೋಚರಿಸಿತು. ಹನುಮಂತನೊಡನೆ ತನಗೊದಗಿದ ಹಿಂದಿನ ಹಗೆತನವು ನೆನಪಾಗಲು, ರಾವಣನು ರೋಷಾವಿಷ್ಟ ನಾಗಿ ಕಾಲಾಗ್ನಿಜ್ವಾಲೆಯಂತೆ ದೇದಿಪ್ಯಮಾನಗಳಾದ ಶರಗಳಿಂದ ಹನುಮಂತ ನನ್ನು ಹೊಡೆದನು (೧೩೩–೧೩೪) ಸ್ವಾಭಾವಿಕವಾಗಿಯೇ ತೇಜೋರಾಶಿ ಯಾದ ಹನುಮಂತನು ಆ ಹೊಡೆತವನ್ನು ಗಣಿಸಲೇ ಇಲ್ಲ, ಅವನ ತೇಜಸ್ಸು ಇನ್ನಷ್ಟು ವರ್ಧಿಸಿತು. ಆ ಕಪಿಶಾರ್ದೂಲನ ದೇಹದಲ್ಲಿ ರಾವಣನು ಗಾಯಗೊಳಿಸಿದುದನ್ನು ಕಂಡು ಶ್ರೀರಾಮನು ಕ್ರೋಧಾವಿಷ್ಟನಾದನು (೧೩೫–೧೩೬). ಅವನ ಮತ್ತೂ ಮುಂದಕ್ಕೆ ಹೋಗಿ ರಾವಣನ ರಥ. ಚಕ್ರ, ಕುದುರೆ, ಧ್ವಜಸ್ತಂಭ, ಶ್ವೇತಚ್ಛತ್ರ, ಪತಾಕೆ, ಸಾರಥಿಗಳನ್ನೂ ರಾವಣನು ಪ್ರಯೋಗಿಸಿದ ಅಶನಿ, ಶೂಲ, ಖಡ್ಗ ಮುಂತಾದ ಆಯುಧಗಳನ್ನೂ

ಸಸಾರಥಿಂ ಸಾಶನಿಶೂಲಖಡ್ಗಂ
ರಾಮಃ ಪ್ರಚಿಚ್ಛೇದ ಶರೈಃ ಸುಪುಂಖೈ ಃ ॥ ೧೩೭

ಅಥೇಂದ್ರಶತ್ರುಂ ತರಸಾ ಜಘಾನ
ಬಾಣೇನ ವಜ್ರಾ ಶನಿಸಂನಿಭೇನ ।
ಭುಜಾಂತರೇ ವ್ಯೂಢಸುಜಾತರೂಪೇ
ವಜ್ರೇಣ ಮೇರುಂ ಭಗವಾನಿವೇಂದ್ರಃ ॥ ೧೩೮

ಯೋ ವಜ್ರಪಾತಾಶನಿಸಂನಿಪಾತಾ-
ನ್ನ ಚುಕ್ಷುಭೇ ನಾಪಿ ಚಚಾಲ ರಾಜಾ ।
ಸ ರಾಮಬಾಣಾಭಿಹತೋ ಭೃಶಾರ್ತ-
ಶ್ಚ ಚಾಲ ಚಾಪಂ ಚ ಮುಮೋಚ ವೀರಃ ॥ ೧೩೯

ತಂ ವಿಹ್ವಲಂತಂ ಪ್ರಸಮೀಕ್ಷ್ಯ ರಾಮಃ
ಸಮಾದದೇ ದೀಪ್ತಮಥಾರ್ಧಚಂದ್ರಮ್ ।
ತೇನಾರ್ಕವರ್ಣಂ ಸಹಸಾ ಕಿರೀಟಂ
ಚಿಚ್ಛೇದ ರಕ್ಷೋಽಧಿಪತೇರ್ಮಹಾತ್ಮಾ ॥ ೧೪೦

---

ಗರಿಗಟ್ಟಿದ ಶರಗಳಿಂದ ತರಿತರಿದು ಕಡಿದೊಗೆದನು (೧೩೭) ಮತ್ತೆ ವಜ್ರಾಯುಧಸಮಾನವಾದ ಕ್ರೂರಾಸ್ತ್ರದಿಂದ, ಭಗವಾನ್ ಮಹೇಂದ್ರನು ವಜ್ರಾಯುಧದಿಂದ ಮೇರು ಪರ್ವತವನ್ನಪ್ಪಳಿಸುವಂತೆ, ವಿಶಾಲವೂ ದಿವ್ಯಾಭರಣಭೂಷಿತವೂ ಆದ ರಾವಣನ ಎದೆಗೆ ಗುರಿಯಿಟ್ಟು ಹೊಡೆದನು (೧೩೮). ಯಾವ ರಾವಣನು ವಜ್ರಾಯುಧದ ಹೊಡೆತಕ್ಕೂ ಸಿಡಿಲಿನ ಬಡಿತಕ್ಕೂ ಜಗ್ಗಲಿಲ್ಲವೋ ಜಳುಕಲಿಲ್ಲವೊ, ಅಂಥ ವೀರನು ಶ್ರೀರಾಮನ ಬಾಣದ ಬಿರುಸಿಗೆ ಅತಿಯಾಗಿ ನೊಂದು ತತ್ತರಿಸಿ ಅಲ್ಲಾಡಿಹೋದನು. ಹಿಡಿದಿದ್ದ ಬಿಲ್ಲು ಸಡಲಿಬಿದ್ದಿತು (೧೩೯). ಮಹಾಧೀರನಾದ ಶ್ರೀರಾಮನು ಮತ್ತೆ ಅರ್ಧಚಂದ್ರಾಕೃತಿಯ ಶರವನ್ನು ಹಿರಿದನು. ಆದರೆ ರಾವಣನು ನಿಶ್ಚೇಷ್ಟನಾಗಿ ಕಂಗೆಟ್ಟಿರುವುದನ್ನು ಕಂಡು, ಸೂರ್ಯನಂತೆ ಬೆಳಗುತ್ತಿದ್ದ ಅವನ ಕಿರೀಟವನ್ನು ಆ ಮಹಾತ್ಮನು ಕತ್ತರಿಸಿದನು (೧೪೦).

ತಂ ನಿರ್ವಿಷಾಶೀವಿಷಸಂನಿಕಾಶಂ
ಶಾಂತಾರ್ಚಿಷಂ ಸೂರ್ಯಮಿವಾಪ್ರಕಾಶಮ್ ।
ಗತಶ್ರಿಯಂ ಕೃತ್ತ ಕಿರೀಟಕೂಟ–
ಮುವಾಚ ರಾಮೋ ಯುಧಿ ರಾಕ್ಷಸೇಂದ್ರಮ್ ॥ ೧೪೧

ಕೃತಂ ತ್ವಯಾ ಕರ್ಮ ಮಹತ್ ಸುಭೀಮಂ
ಹತಪ್ರವೀರಶ್ಚ ಕೃತಸ್ತ್ವ ಯಾಹಮ್ ।
ತಸ್ಮಾತ್ ಪರಿಶ್ರಾಂತ ಇತಿ ವ್ಯವಸ್ಯನ್
ನ ತ್ವಾಂ ಶರೈರ್ಮೃತ್ಯುವಶಂ ನಯಾಮಿ ॥ ೧೪೨

ಗಚ್ಛಾನುಜಾನಾಮಿ ರಣಾರ್ದಿತಸ್ತ್ವಂ
ಪ್ರವಿಶ್ಯ ರಾತ್ರಿಂಚರರಾಜ ಲಂಕಾಮ್ ।
ಆಶ್ವಾಸ್ಯ ನಿರ್ಯಾಹಿ ರಥೀ ಚ ಧನ್ವೀ
ತದಾ ಬಲಂ ದ್ರಕ್ಷ್ಯಸಿ ಮೇ ರಥಸ್ಥಃ ॥ ೧೪೩

ಸ ಏವಮುಕ್ತೋ ಹತದರ್ಪಹರ್ಷೋ
ನಿಕೃತ್ತ ಚಾಪಾಸಿಹತಾಶ್ವಸೂತಃ ।

---

ರಾಕ್ಷಸೇಂದ್ರನು ವಿಷದ ಹಲ್ಲನ್ನು ಕಿತ್ತ ಹಾವಿನಂತಾಗಿದ್ದನು. ತೇಜೋಹೀನನಾಗಿ ಮಾಸಿದ ಸೂರ್ಯನಂತಾಗಿದ್ದನು. ಕಿರೀಟವನ್ನು ಕಳೆದುಕೊಂಡು ವೈಭವಶೂನ್ಯನಾಗಿದ್ದನು (೧೪೧). ಶ್ರೀರಾಮನು ಆತನನ್ನು ಕುರಿತು ''ರಾಕ್ಷಸೇಶ್ವರ, ಈ ದಿವಸ ನೀನು ಭೀಕರವಾದ ಸಾಹಸಕಾರ್ಯವನ್ನೆಸಗಿ ನನ್ನ ಪಕ್ಷದಲ್ಲಿರವ ಅನೇಕ ವೀರರನ್ನು ಸಂಹರಿಸಿದ್ದೀಯೆ. ನೀನು ಬಹಳ ದಣಿದಿರುವಂತೆ ಕಾಣುತ್ತದೆ! ಆದ್ದರಿಂದ ಈಗ ನಿನ್ನನ್ನು ಕೊಲ್ಲದೆ ಉಳಿಸುವೆನು ! (೧೪೨). ನಿನಗೆ ಅನುಮತಿಯನ್ನು ಕೊಟ್ಟದ್ದೇನೆ ಲಂಕೆಗೆ ಹಿಂದಿರುಗಬಹುದು ! ಯುದ್ಧದಲ್ಲಿ ಬಹಳ ನೊಂದಿದ್ದೀಯೆ. ಲಂಕೆಗೆ ಹೋಗಿ ವಿಶ್ರಮಿಸಿಕೊಂಡುಬಾ ಹೊಸ ರಥವನ್ನೇರಿ ಹೊಸ ಧನುಸ್ಸನ್ನು ಹಿಡಿದು ಬಾ ಆಗ ನನ್ನ ಪರಾಕ್ರಮವನ್ನು ನೋಡಬಹುದು!'' ಎಂದು ಹೇಳಿದನು (೧೪೩). ಶ್ರೀರಾಮನು ಹೀಗೆ ನುಡಿಯಲು, ರಾವಣನು ಎದುರು ಮಾತಾಡದೆ ಸುಮ್ಮನೆ ಲಂಕೆಗೆ ಹಿಂದಿರುಗಿದನು ! ಅವನ ದರ್ಪೋತ್ಸಾಹಗಳು ಭಗ್ನವಾಗಿದ್ದವು ಬಿಲ್ಲು ಕತ್ತಿ

ಶರಾರ್ದಿತಃ ಕೃತ್ತ ಮಹಾ ಕಿರೀಟೋ
ವಿವೇಶ ಲಂಕಾಂ ಸಹಸಾ ಸ ರಾಜಾ ॥ ೧೪೪

ತಸ್ಮಿನ್ ಪ್ರವಿಷ್ಟೇ ರಜನೀಚರೇಂದ್ರೇ
ಮಹಾಬಲೇ ದಾನವದೇವಶತ್ರೌ ।
ಹರೀನ್ ವಿಶಲ್ಯಾನ್ ಸಹ ಲಕ್ಷ್ಮಣೇನ
ಚಕಾರ ರಾಮಃ ಪರಮಾಹವಾಗ್ರೇ ॥ ೧೪೫

ತಸ್ಮಿನ್ ಪ್ರಭಿನ್ನೇ ತ್ರಿದಶೇಂದ್ರಶತ್ರೌ
ಸುರಾಸುರಾ ಭೂಗಣಾ ದಿಶಶ್ಚ ।
ಸಸಾಗರಾಃ ಸರ್ಷಿಮಹೋರಗಾಶ್ಚ
ತಥೈವ ಭೂಮ್ಯಂಬುಚಲಾಶ್ಚ ಹೃಷ್ಟಾಃ ॥ ೧೪೬

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕೋನಷಷ್ಟಿತಮಃ ಸರ್ಗಃ

---

ಗಳು ಮುರಿದಿದ್ದವು ರಥಾಶ್ವಗಳು ಹತವಾಗಿದ್ದವು ಸಾರಥಿಯು ಸತ್ತಿದ್ದನು. ಶರಪ್ರಹಾರದಿಂದ ಮೈತುಂಬ ಗಾಯಗಳಾಗಿದ್ದವು ದಿವ್ಯಕಿರೀಟವು ಚೂರು ಚೂರಾಗಿ ಬಿದ್ದಿತ್ತು (೧೪೪). ಬಲಾಢ್ಯನೂ ದೇವದಾನವಶತ್ರುವೂ ಆದ ರಾಕ್ಷಸೇಂದ್ರನು ಈ ಪ್ರಕಾರದಲ್ಲಿ ಪರಾಜಿತನಾಗಿ ಲಂಕೆಗೆ ಹೊರಟುಹೋಗಲು, ಇತ್ತ ಶ್ರೀರಾಮನೂ ಲಕ್ಷ್ಮಣನೂ ಯುದ್ಧದಲ್ಲಿ ನೊಂದ ವಾನರರನ್ನು ಉಪಚರಿಸಿ ಆರೈಕೆಮಾಡಿದರು (೧೪೫). ರಾವಣನು ಪರಾಜಿತನಾಗಿ ಹೊರಟು ಹೋದುದನ್ನು ಕಂಡು, ಸುರಾಸುರರೂ ಭೂತಗಣಗಳೂ ದಿಗ್ದೇವತೆಗಳೂ ಸಮುದ್ರವಾಸಿಗಳೂ ಋಷಿಗಳೂ ನಾಗರೂ ಭೂಲೋಕವಾಸಿಗಳೂ ಜಲಚರ ಗಳೂ ಸಂತೋಷಿಸಿದರು (೧೪೬).

ಇಲ್ಲಿ ಶ್ರೀಮದ್ರಾಮಾಯಣದ ಯುದ್ಧ ಕಾಂಡದಲ್ಲಿ ಐವತ್ತೊಂಬತ್ತನೆಯ ಸರ್ಗ.

---

## ಷಷ್ಟಿತಮಃ ಸರ್ಗಃ

### ಕುಂಭಕರ್ಣಪ್ರಬೋಧಃ

**ಸ ಪ್ರವಿಶ್ಯ ಪುರೀಂ ಲಂಕಾಂ ರಾಮಬಾಣಭಯಾರ್ದಿತಃ ।**
**ಭಗ್ನದರ್ಪಸ್ತದಾ ರಾಜಾ ಬಭೂವ ವ್ಯಥಿತೇಂದ್ರಿಯಃ ॥** ೧

**ಮಾತಂಗ ಇವ ಸಿಂಹೇನ ಗರುಡೇನೇವ ಪನ್ನಗಃ ।**
**ಅಭಿಭೂತೋಽಭವದ್ರಾಜಾ ರಾಘವೇಣ ಮಹಾತ್ಮನಾ ॥** ೨

**ಬ್ರಹ್ಮದಂಡಪ್ರಕಾಶಾನಾಂ ವಿದ್ಯುತ್ಸದೃಶವರ್ಚಸಾಮ್ ।**
**ಸ್ಮರನ್ ರಾಘವಬಾಣಾನಾಂ ವಿವ್ಯಥೇ ರಾಕ್ಷಸೇಶ್ವರಃ ॥** ೩

**ಸ ಕಾಂಚನಮಯಂ ದಿವ್ಯಮಾಶ್ರಿತ್ಯ ಪರಮಾಸನಮ್ ।**
**ವಿಪ್ರೇಕ್ಷಮಾಣೋ ರಕ್ಷಾಂಸಿ ರಾವಣೋ ವಾಕ್ಯಮಬ್ರವೀತ್ ॥** ೪

### ಸರ್ಗ ೬೦

ರಾವಣನ ಆದೇಶದಂತೆ ರಾಕ್ಷಸರು ಕುಂಭಕರ್ಣನನ್ನು ನಿದ್ರೆಯಿಂದ ಎಬ್ಬಿಸುವುದು.
ಕುಂಭಕರ್ಣನು ರಾವಣನ ಅರಮನೆಗೆ ಹೋಗುವುದು.

ರಾವಣನು ಶ್ರೀರಾಮಬಾಣಗಳ ತೀಕ್ಷ್ಣತೆಗೆ ಹೆದರಿ ಲಂಕೆಗೆ ಹಿಂದಿರುಗಿ ಹೋದನು. ಅವನ ದರ್ಪವಳಿಯಿತು. ಆ ರಾಕ್ಷಸರಾಜನ ಮನಸ್ಸಿಗೆ ಚಿಂತೆ ಯಾವರಿಸಿತು ಬಲಶಾಲಿಯಾದ ಶ್ರೀರಾಮನಿಂದ ಪರಾಜಿತನಾದ ರಾವಣನು ಸಿಂಹದಿಂದ ಅಭಿಭೂತವಾದ ಮತ್ತಮಾತಂಗಡಂತೆಯೂ ಗರುಡನಿಂದ ಆಕ್ರಾಂತವಾದ ಸರ್ಪದಂತೆಯೂ ಮುಂದುಗಾಣದಾದನು (೧–೨). ಬ್ರಹ್ಮಾಸ್ತ್ರಗಳಂತೆ* ದುರ್ಧರ್ಷಗಳಾಗಿ, ಮಿಂಚುಗಳಂತೆ ಮಿಂಚುತ್ತ ಸಿಡಿದು ಬರುವ ರಾಘವೇಂದ್ರನ ಶರಗಳ ರಭಸವನ್ನು ನೆನಸಿಕೊಂಡು ರಾಕ್ಷಸೇಶ್ವರನು ಚಿತಾಂಕುಲನಾದನು! (೩). ಅವನು ಸುವರ್ಣಮಯವಾದ ತನ್ನ ದಿವ್ಯ ಸಿಂಹಾಸನದಲ್ಲಿ ಕುಳಿತು, ಸುತ್ತಲೂ ನೆರದಿದ್ದ ರಾಕ್ಷಭಟರನ್ನು ನೋಡುತ್ತ

---

* ಮೂಲದಲ್ಲಿ ಬ್ರಹ್ಮದಂಡ ಎಂದಿದೆ. ಅದಕ್ಕೆ ಬ್ರಹ್ಮಾಸ್ತ್ರ, ವಸಿಷ್ಠರ ಬ್ರಹ್ಮದಂಡ, ಪ್ರಳಯಕಾಲದಲ್ಲಿ ಉದಿಸುವ ಅಗ್ನಿವರ್ಣದ ಧೂಮಕೇತು–ಎಂಬ ಅರ್ಥಗಳುಂಟು.

ಸರ್ವಂ ತತ್ಖಲು ಮೇ ಮೋಘಂ ಯತ್ತಪ್ತಂ ಪರಮಂ ತಪಃ ।
ಯತ್ಸಮಾನೋ ಮಹೇಂದ್ರೇಣ ಮಾನುಷೇಣಾಸ್ಮಿ ನಿರ್ಜಿತಃ ॥ ೫

ಇದಂ ತದ್ಬ್ರಹ್ಮಣೋ ಘೋರಂ ವಾಕ್ಯಂ ಮಾಮಭ್ಯುಪಸ್ಥಿತಮ್ ।
ಮಾನುಷೇಭ್ಯೋ ವಿಜಾನೀಹಿ ಭಯಂ ತ್ವಮಿತಿ ತತ್ತಥಾ ॥ ೬

ದೇವದಾನವಗಂಧರ್ವೈರ್ಯಕ್ಷರಾಕ್ಷಸಪನ್ನಗೈಃ ।
ಅವಧ್ಯತ್ವಂ ಮಯಾ ಪ್ರಾಪ್ತಂ ಮಾನುಷೇಭ್ಯೋ ನ ಯಾಚಿತಮ್ ॥

ವಿದಿತಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಮ್ ।
ಇಕ್ಷ್ವಾಕುಕುಲನಾಥೇನ ಅನರಣ್ಯೇನ ಯತ್ಪುರಾ ॥ ೮

ಉತ್ಪತ್ಸ್ಯತೇ ಹಿ ಮದ್ವಂಶೇ ಪುರುಷೋ ರಾಕ್ಷಸಾಧಮ ।
ಯಸ್ತ್ವಾಂ ಸಪುತ್ರಂ ಸಾಮಾತ್ಯಂ ಸಬಲಂ ಸಾಶ್ವಸಾರಥಿಮ್ ॥ ೯

ನಿಹನಿಷ್ಯತಿ ಸಂಗ್ರಾಮೇ ತ್ವಾಂ ಕುಲಾಧಮ ದುರ್ಮತೇ ।
ಶಪ್ತೋಽಹಂ ವೇದವತ್ಯಾ ಚ ಯದಾ ಸಾ ಧರ್ಷಿತಾ ಪುರಾ ॥ ೧೦

---

ಹೀಗೆಂದನು : ''ಮಿತ್ರರೆ, ನಾನು ಆಚರಿಸಿದ ಘೋರವಾದ ತಪಸ್ಸೆಲ್ಲವೂ ವ್ಯರ್ಥವಾಯಿತು. ದೇವೇಂದ್ರನಿಗೆ ಸಾಟಿಯಾಗಿ ಮೆರೆಯುತ್ತಿದ್ದ ನಾನು ಈ ದಿನ ಒಬ್ಬ ಯಃಕಶ್ಚಿತ್ ಮಾನವನಿಂದ ಪರಾಜಿತನಾದೆನಲ್ಲ! (೪–೫). ಬ್ರಹ್ಮದೇವನಾಡಿನ ಘೋರವಾದ ಆ ಮಾತು ಇಂದು ನನಗೆ ದಿಟವಾಗಿ ಪರಿಣಮಿಸಿತು. 'ರಾವಣ, ಮನುಷ್ಯರಿಂದಲೇ ನಿನಗೆ ಭಯ ಒದಗುವುದೆಂದು ತಿಳಿ!' ಎಂದು ಅವನು ಹೇಳಿದ್ದನು. ಹಾಗೆಯೇ ಆಯಿತು! ದೇವದಾನದ ಗಂಧರ್ವರಿಂದಲೂ ಯಕ್ಷ ರಾಕ್ಷಸ ಪನ್ನಗರಿಂದಲೂ ನನ್ನನ್ನು ಸಂಹರಿಸಲು ಸಾಧ್ಯವಾಗಬಾರದೆಂದು ನಾನು ವರವನ್ನು ಪಡೆದಿದ್ದೆನು. ಮನುಷ್ಯರಿಂದ ನನ್ನ ವಧೆಯಾಗಬಾರದೆಂದು ಮಾತ್ರ ನಾನು ಕೇಳಿಕೊಳ್ಳಲಿಲ್ಲ! (೬–೭). ಹಿಂದೆ ಇಕ್ಷ್ವಾಕುವಂಶದಲ್ಲಿ ರಾಜನಾಗಿದ್ದ ಅನರಣ್ಯನೆಂಬವನು ಸೂಚಿಸಿದ ಮನುಷ್ಯನೇ ಈ ರಾಮನೆಂದೂ ದಶರಥನ ಪುತ್ರನಾಗಿ ಜನಿಸಿ ಬಂದಿರುವನೆಂದೂ ನನಗೆ ತೋರುತ್ತದೆ (೮). ಅನರಣ್ಯನು ನನ್ನನ್ನು ಕುರಿತು 'ಎಲಾ ರಾಕ್ಷಸಾಧಮ–ದುರುಳ, ನನ್ನ ವಂಶದಲ್ಲಿ ಜನಿಸುವ ಒಬ್ಬ ಪುರುಷನು ನಿನ್ನನ್ನು ನಿನ್ನ ಮಕ್ಕಳು ಮಂತ್ರಿಗಳೊಡನೆ ರಣಭೂಮಿಯಲ್ಲಿ ಸಂಹರಿಸುವನು. ನಿನ್ನ ಸೇನೆಯನ್ನು ತರಿದು ಅಶ್ವಸಾರಥಿಗಳನ್ನು ಧ್ವಂಸಮಾಡುವನು' ಎಂದು ಶಪಿಸಿದ್ದನು. ನಾನು ವೇದವತಿಯನ್ನು

ಸೇಯಂ ಸೀತಾ ಮಹಾಭಾಗಾ ಜಾತಾ ಜನಕನಂದಿನೀ ।
ಉಮಾ ನಂದೀಶ್ವರಶ್ಚಾಪಿ ರಂಭಾ ವರುಣಕನ್ಯಕಾ ॥ ೧೧

ಯಥೋಕ್ತಾಸ್ತನ್ಮಯಾ ಪ್ರಾಪ್ತಂ ನ ಮಿಥ್ಯಾ ಋಷಿಭಾಷಿತಮ್ ।
ಏತದೇವಾಭ್ಯುಪಾಗಮ್ಯ ಯತ್ನಂ ಕರ್ತುಮಿಹಾರ್ಹಥ ॥ ೧೨

ರಾಕ್ಷಸಾಶ್ಚಾಪಿ ತಿಷ್ಠಂತು ಚರ್ಯಾಗೋಪುರಮೂರ್ಧಸು ।
ಸ ಚಾಪ್ರತಿಮಗಂಭೀರೋ ದೇವದಾನವದರ್ಪಹಾ ॥ ೧೩

ಬ್ರಹ್ಮಶಾಪಾಭಿಭೂತಸ್ತು ಕುಂಭಕರ್ಣೋ ವಿಭೋಧ್ಯತಾಮ್ ।
ಸ ಪರಾಜಿತಮಾತ್ಮಾನಂ ಪ್ರಹಸ್ತಂ ಚ ನಿಷೂದಿತಮ್ ॥ ೧೪

---

ಬಲಾತ್ಕರಿಸಿದಾಗ ಅವಳು 'ನಾನೇ ಇನ್ನೊಂದು ಜನ್ಮದಲ್ಲಿ ಬಂದು ನಿನ್ನನ್ನು ಸಂಹರಿಸುವೆನು' ಎಂದು ಆ ಕ್ರೋಶದಿದ ನುಡಿದಿದ್ದಳು (೯–೧೦). ಆ ಮಹಾತ್ಮಳೇ ಈಗ ಜನಕಸುತೆಯಾಗಿ ಸೀತೆಯೆಂಬ ಹೆಸರಿನಿಂದ ಬಂದಿರ ಬಹುದೆಂದು ನನಗೆ ತೋರಿತ್ತದೆ! ಪಾರ್ವತಿ, ನಂದೀಶ್ವರ, ರಂಭೆ ಮತ್ತು ವರುಣಕನ್ಯೆಯಾದ ಪುಂಜಿಕಸ್ಥಲೆ– ಇವರೆಲ್ಲರೂ * ಏನು ಹೇಳಿದ್ದರೋ ಅದೆಲ್ಲವೂ ನನಗೆ ಪ್ರಾಪ್ತವಾಯಿತು. ತಪೋಬಲಯುಕ್ತರಾದವರ ಮಾತು ಎಂದಿಗೂ ಹುಸಿಯಾಗದು. ಈ ಶಾಪಸ್ವರೂಪವು ಹೀಗಿದೆಯೆಂಬುದನ್ನರಿತು ನೀವೆಲ್ಲರೂ ಲಂಕೆಯನ್ನೂ ರಕ್ಷಿಸಲು ತೀವ್ರವಾದ ಯತ್ನವನ್ನು ಮಾಡಬೇಕಾಗಿದೆ (೧೦–೧೧). ರಾಕ್ಷಸಭಟರೆಲ್ಲರೂ ನಗರಪ್ರಾಕಾರದ ಗೋಪುರಪಾರ್ಶ್ವ ಗಳಲ್ಲಿಯೂ ಗೋಪುರಶಿಖರಗಳಲ್ಲಿಯೂ ಎಚ್ಚರಿಕೆಯಿಂದ ಕಾವಲಾಗಿ ನಿಲ್ಲ ತಕ್ಕದ್ದು. ಮತ್ತು ದೇವದಾನವರ ದರ್ಪವನ್ನು ಮುರಿದವನೂ ಅಸದೃಶ ಪರಾಕ್ರಮಿಯೂ ಆದ ಕುಂಭಕರ್ಣನನ್ನು ನಿದ್ರೆಯಿಂದೆಬ್ಬಿಸಿರಿ ! ಬ್ರಹ್ಮಶಾಪ ದಿಂದ ಅವನು ಈಗಲೂ ನಿದ್ರಾಪರವಶನಾಗಿ ಮಲಗಿದ್ದಾನೆ '' ಎಂದು ಹೇಳಿದನು (೧೩). ಬಲಾಢ್ಯನಾದ ರಾವಣನು, ತಾನು ಪರಾಜಿತನಾದೆನೆಂಬುದನ್ನೂ ಪ್ರಹಸ್ತನು ಹತನಾದನೆಂಬುದನ್ನೂ ಚಿಂತಿಸುತ್ತ ವ್ಯಥಿತನಾಗಿ, ಭೀಕರಾಕೃತಿಯ

---

*ಅನುಬಂಧವನ್ನು ನೋಡಿ,

ಜ್ಞಾತ್ವಾ ರಕ್ಷೋಬಲಂ ಭೀಮಮಾದಿದೇಶ ಮಹಾಬಲಃ ।
ದ್ವಾರೇಷು ಯತ್ನಃ ಕ್ರಿಯತಾಂ ಪ್ರಾಕಾರಶ್ಚಾಧಿರುಹ್ಯತಾಮ್ ॥ ೧೫

ನಿದ್ರಾವಶಸಮಾವಿಷ್ಟಃ ಕುಂಭಕರ್ಣೋ ವಿಬೋಧ್ಯತಾಮ್ ।
ಸುಖಂ ಸ್ವಪಿತಿ ನಿಶ್ಚಿಂತಃ ಕಾಲೋಪಹತಚೇತನಃ ॥ ೧೬

ನವ ಷಟ್ ಸಪ್ತ ಚಾಷ್ಟೌ ಚ ಮಾಸಾನ್ ಸ್ವಪಿತಿ ರಾಕ್ಷಸಃ ।
ಮಂತ್ರಯಿತ್ವಾ ಪ್ರಸುಪ್ತೋಽಯಮಿತಸ್ತು ನವಮೇಽಹನಿ ॥ ೧೭

ತಂ ತು ಬೋಧಯತ ಕ್ಷಿಪ್ರಂ ಕುಂಭಕರ್ಣಂ ಮಹಾಬಲಮ್ ।
ಸ ತು ಸಂಖ್ಯೇ ಮಹಾಬಾಹುಃ ಕಕುದಃ ಸರ್ವರಕ್ಷಸಾಮ್ ॥ ೧೮

ವಾನರಾನ್ ರಾಜಪುತ್ರೌ ಚ ಕ್ಷಿಪ್ರಮೇವ ವಧಿಷ್ಯತಿ ।
ಏಷ ಕೇತುಃ ಪರಃ ಸಂಖ್ಯೇ ಮುಖ್ಯೋ ವೈ ಸರ್ವರಕ್ಷಸಾಮ್ ॥ ೧೯

ಕುಂಭಕರ್ಣಃ ಸದಾ ಶೇತೇ ಮೂಢೋ ಗ್ರಾಮ್ಯಸುಖೇ ರತಃ ।
ರಾಮೇಣ ಹಿ ನಿರಸ್ತಸ್ಯ ಸಂಗ್ರಾಮೇಽಸ್ಮಿನ್ ಸುದಾರುಣೇ ॥ ೨೦

---

ರಾಕ್ಷಸಯೋಧರನ್ನು ಕುರಿತು "ಎಲೈ ಯೋಧರೆ, ನಗರದ್ವಾರಗಳನ್ನು ರಕ್ಷಿಸಲು ಪ್ರಯತ್ನಿಸಿರಿ. ಪ್ರಾಕಾರಗಳನ್ನೇರಿ ಎಚ್ಚರಿಕೆಯಿಂದರಿ (೧೪–೧೫). ಗಾಢ ನಿದ್ರೆಯಲ್ಲಿ ಮಲಗಿರುವ ಕುಂಭಕರ್ಣನನ್ನು ಕೂಡಲೆ ಎಬ್ಬಿಸಿರಿ ಅವನು ದುರ್ಭಾಗ್ಯದಿಂದ ಬುದ್ಧಿಯಿಲ್ಲದೆ ನಿಶ್ಚಿಂತನಾಗಿ ಸುಖದಿಂದ ಪವಡಿಸಿಬಿಟ್ಟಿದ್ದಾನೆ ! ಆ ರಾಕ್ಷಸನು ಆರು, ಏಳು, ಎಂಟು ಒಂಬತ್ತು ತಿಂಗಳವರೆಗೂ ಒಂದೇ ಸಮನಾಗಿ ನಿದ್ರಿಸುತ್ತಲೇ ಇರುತ್ತಾನೆ ! ಅವನು ನನ್ನೊಡನೆ ಮಂತ್ರಲೋಚನೆ ಮಾಡಿ ಇಂದಿಗೆ ಒಂಬತ್ತನೆಯ ದಿವಸದ* ಹಿಂದೆ ಮಲಗಿದ್ದಾನೆ (೧೬–೧೭). ಮಹಾಬಲಶಾಲಿಯಾದ ಆ ಕುಂಭಕರ್ಣನನ್ನು ಬೇಗನೆ ಏಳಿಸಿರಿ. ಸಕಲ ರಾಕ್ಷಸರಿಗೂ ಮೂರ್ಧನ್ಯನಾದ ಆ ಮಹಾಬಾಹುವು ಯುದ್ಧದಲ್ಲಿ ವಾನರನ್ನೂ ಆ ಇಬ್ಬರೂ ರಾಜಪುತ್ರರನ್ನೂ ಅಲ್ಪಕಾಲದಲ್ಲಿಯೇ ಕೊಂದು ಹಾಕುವನು. ಕುಂಭಕರ್ಣನು ಸಾಮಾನ್ಯನಲ್ಲ, ಸಂಗ್ರಾಮಭೂಮಿಯಲ್ಲಿ ಧ್ವಜಸ್ತಂಭದಂತೆ ಸಮಸ್ತ ರಾಕ್ಷಸರಲ್ಲಿಯೂ ಸರ್ವೋನ್ನತನಾದ ವೀರಾಗ್ರೇಸರ (೧೮–೧೯). ಆದರೆ, ರಾಕ್ಷಸರೆ, ಕುಂಭಕರ್ಣನು ಗ್ರಾಮ್ಯದಲ್ಲಿ ನಿರತನಾಗಿ ಬುದ್ಧಿಯಿಲ್ಲದೆ

---

* ಅನುಬಂಧವನ್ನು ನೋಡಿ.

ಭವಿಷ್ಯತಿ ನ ಮೇ ಶೋಕಃ ಕುಂಭಕರ್ಣೇ ವಿಬೋಧಿತೇ ।
ಕಿಂ ಕರಿಷ್ಯಾಮ್ಯಹಂ ತೇನ ಶಕ್ರತುಲ್ಯಬಲೇನ ಹಿ ॥ ೨೧

ಈದೃಶೇ ವ್ಯಸನೇ ಪ್ರಾಪ್ತೇ ಯೋ ನ ಸಾಹ್ಯಾಯ ಕಲ್ಪತೇ ।
ತೇ ತು ತದ್ವಚನಂ ಶ್ರುತ್ವಾ ರಾಕ್ಷಸೇಂದ್ರಸ್ಯ ರಾಕ್ಷಸಾಃ ॥ ೨೨

ಜಗ್ಮುಃ ಪರಮಸಂಭ್ರಾಂತಾಃ ಕುಂಭಕರ್ಣನಿವೇಶನಮ್ ।
ತೇ ರಾವಣಸಮಾದಿಷ್ಟಾ ಮಾಂಸಶೋಣಿತಭೋಜನಾಃ ॥ ೨೩

ಗಂಧಮಾಲ್ಯಾಂಸ್ತಥಾ ಭಕ್ಷ್ಯಾನಾದಾಯ ಸಹಸಾ ಯಯುಃ ।
ತಾಂ ಪ್ರವಿಶ್ಯ ಮಹಾದ್ವಾರಾಂ ಸರ್ವತೋ ಯೋಜನಾಯತಾಮ್ ॥

ಕುಂಭಕರ್ಣಗುಹಾಂ ರಮ್ಯಾಂ ಸರ್ವಗಂಧಪ್ರವಾಹಿನೀಮ್ ।
ಕುಂಭಕರ್ಣಸ್ಯ ನಿಃಶ್ವಾಸಾದವಧೂತಾ ಮಹಾಬಲಾಃ ॥ ೨೫

ಪ್ರತಿಷ್ಠಮಾನಾಃ ಕೃಚ್ಛ್ರೇಣ ಯತ್ನಾತ್ಪ್ರವಿವಿಶುರ್ಗುಹಾಮ್ ।
ತಾಂ ಪ್ರವಿಶ್ಯ ಗುಹಾಂ ರಮ್ಯಾಂ ಶುಭಾಂ ಕಾಂಚನಕುಟ್ಟಿಮಾಮ್ ॥

---

ಸದಾ ನಿದ್ದೆಮಾಡುತ್ತಿರುವನು ! ಭೀಕರವಾದ ಈ ಯುದ್ಧದಲ್ಲಿ ರಾಮನಿಂದ ನಾನು ನಿರ್ಜಿತನಾದರೂ, ಕುಂಭಕರ್ಣನು ಎದ್ದುಬಿಟ್ಟರೆ ನಾನು ಶೋಕಿಸ ಬೇಕಾಗಿಯೇ ಇರುವುದಿಲ್ಲ! ಅವನು ಇಂದ್ರಸದೃಶಪರಾಕ್ರಮಿಯಾಗಿದ್ದರೂ ಅವನನ್ನು ಕಟ್ಟಿಕೊಂಡು ನಾನೇನು ಮಾಡಲು ಸಾಧ್ಯ? (೨೦–೨೧). ಇಂಥ ವಿಪತ್ತು ಬಂದೊದಗಿದರೂ ನಿದ್ರೆ ಮಾಡುತ್ತ ನನ್ನ ನೆರವಿಗೆ ಬರದಿರುವನಲ್ಲ'' ಎಂದು ಹೇಳಿದನು. ರಾಕ್ಷಸೇಂದ್ರನ ಆಜ್ಞೆಯನ್ನು ಕೇಳಿ ಆ ರಾಕ್ಷಸರು ದಿಕ್ಕುಗಾಣದೆ ಭೀತರಾಗಿ ಕುಂಭಕರ್ಣನ ಮನೆಗೆ ಹೋದರು. ರಕ್ತಮಾಂಸ ಗಳನ್ನು ಭುಂಜಿಸುವ ಆ ನಿಶಾಚರರು ರಾವಣಾಜ್ಞೆಯಂತೆ ಕುಂಭಕರ್ಣನಿಗಾಗಿ ಗಂಧಮಾಲ್ಯಗಳನ್ನೂ ಭೋಜನಸಾಮಗ್ರಿಗಳನ್ನೂ ತೆಗೆದುಕೊಂಡು ತ್ವರೆಯಿಂದ ಹೋದರು (೨೨–೨೩). ಆ ರಾಕ್ಷಸರು ನಾಲ್ಕುದಿಕ್ಕುಗಳಲ್ಲಿಯೂ ನಾಲ್ಕು ಯೋಜನಗಳಷ್ಟು ವಿಶಾಲವಾಗಿದ್ದ ಕುಂಭಕರ್ಣನ ಗೃಹವನ್ನು ಪ್ರವೇಶಿಸಿದರು. ಗೃಹದ ದ್ವಾರವು ಬಹಳ ದೊಡ್ಡದಾಗಿತ್ತು. ರಮ್ಯವಾದ ಆ ಗೃಹದಲ್ಲಿ ಸಕಲ ಗಂಧಗಳೂ ಹರಡಿದ್ದವು ! ನೆಲವು ಸುವರ್ಣಭೂಷಿತವಾಗಿತ್ತು. ರಮಣೀಯ ವಾದ ಆ ಭವನವನ್ನು ಅವರು ಪ್ರವೇಶಿಸಿ ಆ ರಾಕ್ಷಸವ್ಯಾಘ್ರನನ್ನು ಕಂಡರು !

ದದೃಶುರ್ನೈರ್ಋತವ್ಯಾಘ್ರಂ ಶಯಾನಂ ಭೀಮದರ್ಶನಮ್ ।
ತೇ ತು ತಂ ವಿಕೃತಂ ಸುಪ್ತಂ ವಿಕೀರ್ಣಮಿವ ಪರ್ವತಮ್ । ೨೭

ಕುಂಭಕರ್ಣಂ ಮಹಾನಿದ್ರಂ ಸಹಿತಾಃ ಪ್ರತ್ಯಬೋಧಯನ್ ।
ಊರ್ಧ್ವರೋಮಾಂಚಿತತನುಂ ಶ್ವಸಂತಮಿವ ಪನ್ನಗಮ್ ॥ ೨೮

ತ್ರಾಸಯಂತಂ ಮಹಾಶ್ವಾಸೈಃ ಶಯಾನಂ ಭೀಮದರ್ಶನಮ್ ।
ಭೀಮನಾಸಾಪುಟಂ ತಂ ತು ಪಾತಾಲವಿಪುಲಾನನಮ್ ॥ ೨೯

ಶಯ್ಯಾಯಾಂ ನ್ಯಸ್ತಸರ್ವಾಂಗಂ ಮೇದೋರುಧಿರಗಂಧಿನಮ್ ।
ಕಾಂಚನಾಂಗದನದ್ಧಾಂಗಂ ಕಿರೀಟನಮರಿಂದಮಮ್ ॥ ೩೦

ದದೃಶುರ್ನೈರ್ಋತವ್ಯಾಘ್ರಂ ಕುಂಭಕರ್ಣಂ ಮಹಾಬಲಮ್ ।
ತತಶ್ಚಕ್ರುರ್ಮಹಾತ್ಮಾನಃ ಕುಂಭಕರ್ಣಾಗ್ರತಸ್ತದಾ ॥ ೩೧

ಮಾಂಸಾನಾಂ ಮೇರುಸಂಕಾಶಂ ರಾಶಿಂ ಪರಮತರ್ಪಣಮ್ ।
ಮೃಗಾಣಾಂ ಮಹಿಷಾಣಾಂ ಚ ವರಾಹಾಣಾಂ ಚ ಸಂಚಯಾನ್ ॥ ೩೨

---

(೨೪–೨೬). ವಿಕೃತಾಕಾರವಾಗಿ ಮೈಚಾಚಿಕೊಂಡು ಮಲಗಿದ್ದ ಭೀಮಾಕೃತಿಯ ಕುಂಭಕರ್ಣನು ಅಡ್ಡಬಿದ್ದಿರುವ ಪರ್ವತದಂತೆ ಗೋಚರಿಸಿದನು. ರಾಕ್ಷಸರೆಲ್ಲರೂ ಸೇರಿ ಗಾಢನಿದ್ರೆಯಲ್ಲಿದ್ದ ಆತನನ್ನು ಎಚ್ಚರಗೊಳಿಸಲು ಪ್ರಯತ್ನಿಸಿದರು. ಕುಂಭಕರ್ಣನ ರೋಮಗಳು ಮೇಲ್ಮುಖವಾಗಿ ನಿಮಿರಿಕೊಂಡಿದ್ದವು. ಹೆಬ್ಬಾವಿನಂತೆ ಅವನು ಉಸಿರಾಡುತ್ತ ಮಲಗಿದ್ದನು (೨೭–೨೮). ಅವನ ಶ್ವಾಸೋಚ್ಛ್ವಾಸಗಳ ರಭಸವನ್ನು ಕೇಳಿದರೆ ಜನರಿಗೆ ಅಂಜಿಕೆಯಾಗುತ್ತಿತ್ತು. ಭೀಮಾಕಾರನಾಗಿ ಮಲಗಿದ್ದ ಅವನ ನಾಸಾಪುಟವನ್ನು ಕಂಡರೆ ಹೆದರಿಕೆಯಾಗುತ್ತಿತ್ತು. ಪಾತಾಳಗುಹೆಯಂತೆ ಅವನ ಬಾಯಿ ಬಹುದೊಡ್ಡದಾಗಿ ಆಳವಾಗಿತ್ತು (೨೯). ವಿಶಾಲವಾದ ಹಾಸಿಗೆಯ ತುಂಬ ಆ ಕುಂಭಕರ್ಣನ ಕೈಕಾಲುಗಳು ಹರಡಿಕೊಂಡಿದ್ದವು. (ಅವನು ಕುಡಿದು ಚೆಲ್ಲಿದ) ರಕ್ತ ಮೇದಸ್ಸುಗಳ ವಾಸನೆ ಹರಡಿತ್ತು. (ಮಲಗಿದಾಗಲೂ) ಆ ವೀರನು ಚಿನ್ನದ ಭುಜಕೀರ್ತಿಗಳನ್ನೂ ಕಿರೀಟವನ್ನೂ ಧರಿಸಿದ್ದನು ! (೩೦). ಈ ರೀತಿಯಲ್ಲಿ ನಿದ್ದೆ ಹೋಗುತ್ತಿದ್ದ ರಾಕ್ಷಸವ್ಯಾಘ್ರನಾದ ಕುಂಭಕರ್ಣನನ್ನು ರಾಕ್ಷಸಭಟರು ವೀಕ್ಷಿಸಿ, ಅವನ ತೃಪ್ತಿಗಾಗಿ ಎದುರಿಗೆ ಮಾಂಸದ ರಾಶಿಯನ್ನು ಪೇರಿಸಿದರು. ಆ ಮಾಂಸ

ಚಕ್ರುರ್ನೈರ್ಋತಶಾರ್ದೂಲಾ ರಾಶಿಮನ್ನಸ್ಯ ಚಾದ್ಭುತಮ್ ।
ತತಃ ಶೋಣಿತಕುಂಭಾಂಶ್ಚ ಮದ್ಯಾನಿ ವಿವಿಧಾನಿ ಚ ॥ ೩೩

ಪುರಸ್ತಾತ್ ಕುಂಭಕರ್ಣಸ್ಯ ಚಕ್ರುಸ್ತ್ರಿದಶಶತ್ರವಃ ।
ಲಿಲಿಪುಶ್ಚ ಪರಾರ್ಧ್ಯೇನ ಚಂದನೇನ ಪರಂತಪಮ್ ॥ ೩೪

ದಿವ್ಯೈರಾಚ್ಛಾದಯಾಮಾಸುರ್ಮಾಲ್ಯೈರ್ಗಂಧ್ಯೈಃ ಸುಗಂಧಿಭಿಃ ।
ಧೂಪಂ ಸುಗಂಧಂ ಸಸೃಜುಸ್ತುಷ್ಟುವುಶ್ಚ ಪರಂತಪಮ್ ॥ ೩೫

ಜಲದಾ ಇವ ಚೋನ್ನೇದುರ್ಯಾತುಧಾನಾಸ್ತತಸ್ತತಃ ।
ಶಂಖಾನಾಪೂರಯಾಮಾಸುಃ ಶಶಾಂಕಸದೃಶಪ್ರಭಾನ್ ॥ ೩೬

ತುಮುಲಂ ಯುಗಪಚ್ಚಾಪಿ ವಿನೇದುಶ್ಚಾಪ್ಯಮರ್ಷಿತಾಃ ।
ನೇದುರಾಸ್ಫೋಟಯಾಮಾಸುಶ್ಚಿಕ್ಷಿಪುಸ್ತೇ ನಿಶಾಚರಾಃ ॥ ೩೭

ಕುಂಭಕರ್ಣನಿಬೋಧಾರ್ಥಂ ಚಕ್ರುಸ್ತೇ ವಿಪುಲಂ ಸ್ವನಮ್ ॥

---

ರಾಶಿಯೇ ಮೇರುಪರ್ವತದಷ್ಟು ದೊಡ್ಡದಾಗಿತ್ತು ! ಜಿಂಕೆ, ಕೋಣ ಮತ್ತು ಹಂದಿಗಳ ಮಾಂಸವನ್ನು ರಾಶಿರಾಶಿಯಾಗಿ ಜೋಡಿಸಿದರು (೩೧–೩೨). ಅದರೊಡನೆ ವಿಸ್ಮಯವಾಗುವಂತಹ ಅನ್ನದ ರಾಶಿಯನ್ನು ಪೇರಿಸಿ, ಕುಡಿಯುವುದಕ್ಕಾಗಿ ರಕ್ತವನ್ನು ತುಂಬಿದ ಕೊಡಗಳನ್ನೂ ಬಗೆಬಗೆಯ ಮದ್ಯಗಳನ್ನೂ ತಂದಿಟ್ಟರು ! ಹೀಗೆ ರಾಕ್ಷಸರು ಕುಂಭಕರ್ಣನೆದುರಿಗೆ ಖಾದ್ಯಗಳನ್ನೂ ಪೇಯಗಳನ್ನೂ ತಂದಿಟ್ಟು, ಅವನ ಮೈಗೆ ಉತ್ತಮವಾದ ಚಂದನವನ್ನು ಬಳಿದರು ! ದಿವ್ಯಪುಷ್ಪಮಾಲೆಗಳಿಂದ ಅವನನ್ನು ಅಲಂಕರಿಸಿ, ಸುಗಂಧದ್ರವ್ಯಗಳನ್ನು ಪೂಸಿದರು ! ಸುತ್ತಲೂ ಸುವಾಸನೆಯನ್ನು ಬೀರುವ ಧೂಪವನ್ನು ಹಾಕಿ, 'ಸ್ವಾಮಿ, ಬಹು ಪರಾಕು, ಬಹು ಪರಾಕು !' ಎಂದು ಹೇಳುತ್ತ ಕುಂಭಕರ್ಣನನ್ನು ಸ್ತೋತ್ರಮಾಡಿದರು ! (೩೩–೩೪). (ಕುಂಭಕರ್ಣನಿಗೆ ಎಚ್ಚರವಾಗಲಿಲ್ಲ) ಆಗ ರಾಕ್ಷಸರು, ಮೋಡಗಳು ಗುಡುಗುವಂತೆ ಗಟ್ಟಿಯಾಗಿ ಕೂಗಿದರು. ಚಂದ್ರನಂತೆ ಬೆಳ್ಳಗಿರುವ ಶಂಖಗಳನ್ನು ಕೆಲವರು ಊದಿದರು. (ಕುಂಭಕರ್ಣನಿಗೆ ಎಚ್ಚರವಾಗಲಿಲ್ಲ) (೩೫–೩೬). ಆಗ ರಾಕ್ಷಸರ ಸಹನೆ ಮೀರಿತು. ಅವರೆಲ್ಲರೂ ಸೇರಿ ಗಟ್ಟಿಯಾಗಿ ಅರಚಿದರು. ಒಬ್ಬೊಬ್ಬರೂ ಬೇರೆಬೇರೆಯಾಗಿ ಕಿರಿಚಿದರು! (ಕುಂಭಕಣನಿಗೆ ಎಚ್ಚರವಾಗಲಿಲ್ಲ) ಅನಂತರ ಆ ರಾಕ್ಷಸ

ಸಶಂಖಭೇರೀಪಣವಪ್ರಣಾದ-
　　ಮಾಸ್ಫೋಟಿತಕ್ಷ್ವೇಲಿತಸಿಂಹನಾದಮ್ ।
ದಿಶೋ ದ್ರವಂತಸ್ತ್ರಿದಿವಂ ಕಿರಂತಃ
　　ಶ್ರುತ್ವಾ ವಿಹಂಗಾಃ ಸಹಸಾ ನಿಪೇತುಃ ॥ ೩೮

ಯದಾ ಭೃಶಂ ತೈರ್ನಿನದೈರ್ಮಹಾತ್ಮಾ
　　ನ ಕುಂಭಕರ್ಣೋ ಬುಬುಧೇ ಪ್ರಸುಪ್ತಃ ।
ತತೋ ಭುಸುಂಡೀರ್ಮುಸಲಾನಿ ಸರ್ವೇ
　　ರಕ್ಷೋಗಣಾಸ್ತೇ ಜಗೃಹುರ್ಗದಾಶ್ಚ ॥ ೩೯

ತಂ ಶೈಲಶೃಂಗೈರ್ಮುಸಲೈರ್ಗದಾಭಿ-
　　ರ್ವಕ್ಷಃಸ್ಥಲೇ ಮುದ್ಗರಮುಷ್ಟಿಭಿಶ್ಚ ।
ಸುಖಪ್ರಸುಪ್ತಂ ಭುವಿ ಕುಂಭಕರ್ಣಂ
　　ರಕ್ಷಾಂಸ್ಯುದಗ್ರಾಣಿ ತದಾ ನಿಜಘ್ನುಃ ॥ ೪೦

---

ಭಟರು ಕುಂಭಕರ್ಣನನ್ನು ಗುದ್ದಿದರು! ಕೈಕಾಲುಗಳನ್ನು ಅತ್ತಿತ್ತ ಹೊರಳಾಡಿಸಿದರು. ಅವನನ್ನು ಎಬ್ಬಿಸುವುದಕ್ಕಾಗಿ ದೊಡ್ಡ ಗದ್ದಲವನ್ನೇ ಮಾಡಿದರು (೩೭). ಆಮೇಲೆ ರಾಕ್ಷಸಭಟರೆಲ್ಲರೂ ಸೇರಿ ಶಂಖಗಳನ್ನೂದುತ್ತ ಭೇರಿಗಳನ್ನು ಮೊಳಗಿಸುತ್ತ ಮೃದಂಗಗಳನ್ನು ಹೊಯ್ದರು! ಕೈಬಡಿದರು, ಕೂಗಿದರು, ಸಿಂಹನಾದಮಾಡಿದರು. ಆ ಕೋಲಾಹಲವನ್ನು ಕೇಳಿ ಹಕ್ಕಿಗಳು ಭಯದಿಂದ ದಿಕ್ಕುದಿಕ್ಕಿಗೆ ಚದರಿ, ಆಕಾಶವನ್ನಡರಿ, ತತ್ತರಿಸುತ್ತ ನೆಲಕ್ಕೆ ಉದುರಿದವು! (ಕುಂಭಕರ್ಣನು ಮಾತ್ರ ಏಳಲಿಲ್ಲ ) (೩೮). ಈ ಪ್ರಕಾರವಾಗಿ ಭೀಕರವಾದ ಗದ್ದಲವನ್ನು ಮಾಡಿದರೂ ದಾಂಡಿಗನಾದ ಕುಂಭಕರ್ಣನು ಯಾವಾಗ ನಿದ್ರೆಯಿಂದೇಳಲಿಲ್ಲವೋ ಆಗ ರಾಕ್ಷಸಭಟರು ಭುಸುಂಡಿ, ಮುಸಲ, ಗದೆ ಮೊದಲಾದವುಗಳನ್ನು ಕೈಗೆ ತೆಗೆದುಕೊಂಡರು ! (೩೯). ಒರಟರಾದ ಆ ರಾಕ್ಷಸರು ಸುಖನಿದ್ರೆಯಲ್ಲಿದ್ದ ಕುಂಭಕರ್ಣನನ್ನು ಗಿರಿಶೃಂಗಗಳಿಂದ ಇಡಿದರು. ಮುಸಲಗಳಿಂದ ತಿವಿದರು. ಗದೆಗಳಿಂದ ಹೊಡೆದರು. ಮರಗಳಿಂದ ಬಡಿದರು. ಅಂಗೈಗಳಿಂದ ಅಪ್ಪಳಿಸಿದರು. ಮುದ್ಗರಗಳಿಂದ ಜಡಿದರು. ಮುಷ್ಟಿಗಳಿಂದ ಗುದ್ದಿದರು ! (೪೦).

ತಸ್ಯ ನಿಃಶ್ವಾಸವಾತೇನ ಕುಂಭಕರ್ಣಸ್ಯ ರಕ್ಷಸಃ ।
ರಾಕ್ಷಸಾ ಬಲವಂತೋಽಪಿ ಸ್ಥಾತುಂ ನಾಶಕ್ನುವನ್ ಪುರಃ ॥ ೪೧
ತತಃ ಪರಿಹಿತಾ ಗಾಢಂ ರಾಕ್ಷಸಾ ಭೀಮವಿಕ್ರಮಾಃ ।
ಮೃದಂಗಪಣವಾನ್ ಭೇರೀಃ ಶಂಖಕುಂಭಗಣಾಂಸ್ತದಾ ॥ ೪೨
ದಶರಾಕ್ಷಸಸಾಹಸ್ರಾ ಯುಗಪತ್ ಪರ್ಯವಾದಯನ್ ।
ನೀಲಾಂಜನಚಯಾಕಾರಾಸ್ತೇ ತು ತಂ ಪ್ರತ್ಯಬೋಧಯನ್ ॥ ೪೩
ಅಭಿಘ್ನಂತೋ ನದಂತಶ್ಚ ನೈವ ಸಂವಿವಿದೇ ತು ಸಃ ।
ಯದಾ ಚೈನಂ ನ ಶೇಕುಸ್ತೇ ಪ್ರತಿಬೋಧಯಿತುಂ ತದಾ ॥ ೪೪
ತತೋ ಗುರುತರಂ ಯತ್ನಂ ದಾರುಣಂ ಸಮುಪಾಕ್ರಮನ್ ।
ಅಶ್ವಾನುಷ್ಟ್ರಾನ್ ಖರಾನ್ನಾಗಾನ್ ಜಘ್ನುರ್ದಂಡಕಶಾಂಕುಶೈಃ ॥ ೪೫
ಭೇರೀಶಂಖಮೃದಂಗಾಂಶ್ಚ ಸರ್ವಪ್ರಾಣೈರವಾದಯನ್ ।
ನಿಜಘ್ನುಶ್ಚಾಸ್ಯ ಗಾತ್ರಾಣಿ ಮಹಾಕಾಷ್ಠಕಟಂಕರೈಃ ॥ ೪೬

---

ಆದರೇನು ? ಕುಂಭಕರ್ಣನ ಉಸಿರಾಟದ ರಭಸಕ್ಕೆ, ಬಲಶಾಲಿಗಳಾದ ಆ ರಾಕ್ಷಸರಿಗೂ ಸಹ ಅವನೆದುರಿಗೆ ದೃಢವಾಗಿ ಕಾಲೂರಿ ನಿಂತುಕೊಳ್ಳಲೂ ಸಾಧ್ಯವಾಗಲಿಲ್ಲ ! ಅನಂತರ ಭೀಮವಿಕ್ರಮರಾದ ಆ ದೈತ್ಯರು ಸೊಂಟವನ್ನು ಬಿಗಿದು ಕಟ್ಟಿ ಗಾಢವಾದ ಪ್ರಯತ್ನಕ್ಕೆ ಸನ್ನದ್ಧರಾದರು. ಮೃದಂಗ, ತಮಟೆ, ಬೇರಿ, ಶಂಖ, ಘಟವಾದ್ಯಗಳನ್ನು ಬಾರಿಸತೊಡಗಿದರು ! (೪೧–೪೨). ಕಪ್ಪು ಕಾಡಿಗೆಯ ರಾಶಿಯಂತಿದ್ದ ಹತ್ತುಸಾವಿರ ನಿಶಾಚರರು ಒಟ್ಟಿಗೆ ಆ ವಾದ್ಯಗಳನ್ನು ನುಡಿಸಿ ಗದ್ದಲಮಾಡಿ ಕುಂಭಕರ್ಣನನ್ನೆಬ್ಬಿಸಲು ಪ್ರಯತ್ನಿಸಿದರು. ಭೇರಿಗಳನ್ನು ಹೊಡೆಯುತ್ತ ಗಜಿಸುತ್ತ ಕೋಲಾಹಲಮಾಡಿದರೂ ಕುಂಭಕರ್ಣನಿಗೆ ಎಚ್ಚರವಾಗಲಿಲ್ಲ ! ಏನು ಮಾಡಿದರೂ ಅವನನ್ನು ಎಬ್ಬಿಸಲಾಗಲಿಲ್ಲ (೪೩–೪೪). ಆಗ ಘೋರವಾದ ಇನ್ನೊಂದು ಮಹಾಪ್ರಯತ್ನಕ್ಕೆ ಕೈ ಹಾಕಿದರು. ಕುದುರೆ, ಒಂಟೆ, ಕತ್ತೆ ಆನೆ–ಮೊದಲಾದ ಪ್ರಾಣಿಗಳನ್ನು ಅಲ್ಲಿಗೆ ತಂದು, ಅವುಗಳನ್ನು ದೊಣ್ಣೆಗಳಿಂದ ಹೊಡೆದು ಚಾಟಿಗಳಿಂದ ಬಿಗಿದು ಅಂಕುಶಗಳಿಂದ ತಿವಿದು ಕೂಗಿಸಿದರು. (ಕುದುರೆಗಳು ಕೆನೆದವು. ಒಂಟೆಗಳು ಅರಚಿದವು. ಕತ್ತೆಗಳು ಕಿರಿಚಿದವು. ಆನೆಗಳು ಘೀಂಕರಿಸಿದವು) (೪೫). ಆ ಗದ್ದಲದೊಡನೆ ಭೇರಿ ಶಂಖ ಮೃದಂಗಗಳ ಘೋಷವನ್ನು ಸರ್ವಶಕ್ತಿಯಿಂದ

ಮುದ್ಗರೈರ್ಮುಸಲೈಶ್ಚೈವ ಸರ್ವಪ್ರಾಣಸಮುದ್ಯತೈಃ ।
ತೇನ ಶಬ್ದೇನ ಮಹತಾ ಲಂಕಾ ಸಮಭಿಪೂರಿತಾ ॥ ೪೭

ಸಪರ್ವತವನಾ ಸರ್ವಾ ಸೋಽಪಿ ನೈವ ಪ್ರಬುಧ್ಯತೇ ।
ತತಃ ಸಹಸ್ರಂ ಭೇರೀಣಾಂ ಯುಗಪತ್ ಸಮಹನ್ಯತ ॥ ೪೮

ಮೃಷ್ಟಕಾಂಚನಕೋಣಾನಾಮಾಸಕ್ತಾನಾಂ ಸಮಂತತಃ ।
ಏವಮಪ್ಯತಿನಿದ್ರಸ್ತು ಯದಾ ನೈವ ಪ್ರಬುಧ್ಯತೇ ॥ ೪೯

ಶಾಪಸ್ಯ ವಶಮಾಪನ್ನಸ್ತತಃ ಕ್ರುದ್ಧಾ ನಿಶಾಚರಾಃ ।
ಮಹಾಕ್ರೋಧಸಮಾವಿಷ್ಟಾಃ ಸರ್ವೇ ಭೀಮಪರಾಕ್ರಮಾಃ ॥ ೫೦

ತದ್ರಕ್ಷೋ ಬೋಧಯಿಷ್ಯಂತಶ್ಚಕ್ರುರನ್ಯೇ ಪರಾಕ್ರಮಮ್ ।
ಅನ್ಯೇ ಭೇರೀಃ ಸಮಾಜಘ್ನುರನ್ಯೇ ಚಕ್ರುರ್ಮಹಾಸ್ವನಮ್ ॥ ೫೧

ಕೇಶಾನನ್ಯೇ ಪ್ರಲುಲುಪುಃ ಕರ್ಣಾವನ್ಯೇ ದಶಂತಿ ಚ ।
ಉದಕುಂಭಶತಾನ್ಯನ್ಯೇ ಸಮಸಿಂಚಂತ ಕರ್ಣಯೋಃ ॥ ೫೨

---

ಮೇಳೈಸಿ ಕೋಲಾಹಲಮಾಡಿದರು. ಕುಂಭಕರ್ಣನ ಗಾತ್ರದಮೇಲೆ ಮರದ ಕುಂಟೆಗಳನ್ನು ಹೇರಿ ತೊಲೆಗಳಿಂದ ಇಡಿದರು (೪೬). ತಮ್ಮ ಶಕ್ತಿಯೆಲ್ಲವನ್ನೂ ಉಪಯೋಗಿಸಿ ಮುಸಲಮುದ್ಗರಗಳಿಂದ ಜಡಿದರು. ಅದ್ಭುತವಾದ ಆ ಕೋಲಾಹಲದಿಂದ ಲಂಕೆಯೆಲ್ಲವೂ ಮೊಳಗಿಹೋಯಿತು. ಪರ್ವತಾರಣ್ಯಗಳು ಪ್ರತಿಧ್ವನಿಸಿದವು. ಕುಂಭಕರ್ಣನಂತೂ ಏಳಲೇ ಇಲ್ಲ! ಒಂದು ಸಾವಿರ ಭೇರಿಗಳು ಒಟ್ಟಿಗೆ ಮೊಳಗಿದವು (೪೭–೪೮). ಚಿನ್ನದ ವಾದನದಂಡಗಳನ್ನು ಹಿಡಿದು ಅವನ ಸುತ್ತಲೂ ರಾಕ್ಷಸರು ವಾದ್ಯಗಳನ್ನು ಬಾರಿಸಿದರು. ಗಾಢನಿದ್ರೆಯಲ್ಲಿದ್ದ ಕುಂಭಕರ್ಣನಿಗೆ ಎಚ್ಚರವಾಗಲೇ ಇಲ್ಲ! (೪೯). ಅವನು ಬ್ರಹ್ಮಶಾಪಕ್ಕೆ ಒಳಗಾಗಿ ಆ ರೀತಿಯಲ್ಲಿ ನಿದ್ರಿಸುತ್ತಿದ್ದನು. ಆಮೇಲೆ ರಾಕ್ಷಸರಿಗೆ ಮಹಾಕ್ರೋಧ ಉಂಟಾಯಿತು. ಹೇಗಾದರೂ ಅವನನ್ನು ಎಬ್ಬಿಸಲೇಬೇಕೆಂದು ನಿರ್ಧರಿಸಿ, ಮತ್ತೊಂದು ಪರಾಕ್ರಮಕಾರ್ಯವನ್ನು ಕೈಗೊಳ್ಳಲು ನಿಶ್ಚಯಿಸಿದರು. ಕೆಲವರು ಭೇರಿಗಳನ್ನು ಬಡಿಯುತ್ತಲೇ ಇದ್ದರು. ಕೆಲವರು ಗಟ್ಟಿಯಾಗಿ 'ಹೋ' ಎಂದು ಕೂಗುತ್ತಲೇ ಇದ್ದರು (೫೦–೫೧). ಆಗ ಕೆಲವು ರಾಕ್ಷಸರು ಮುಂದೆ ಬಂದು ಕುಂಭಕರ್ಣನ ತಲೆಕೂದಲುಗಳನ್ನು ಕೀಳತೊಡಗಿದರು! ಕೆಲವರು ಅವನ

ನ ಕುಂಭಕರ್ಣಃ ಪಸ್ಪಂದೇ ಮಹಾನಿದ್ರಾವಶಂ ಗತಃ ।
ಅನ್ಯೇ ಚ ಬಲಿನಸ್ತಸ್ಯ ಕೂಟಮುದ್ಗರಪಾಣಯಃ ॥ ೫೩

ಮೂರ್ಧ್ನಿ ವಕ್ಷಸಿ ಗಾತ್ರೇಷು ಪಾತಯನ್ ಕೂಟಮುದ್ಗರಾನ್ ।
ರಜ್ಜು ಬಂಧನಬದ್ಧಾಭಿಃ ಶತಘ್ನೀಭಿಶ್ಚ ಸರ್ವತಃ ॥ ೫೪

ವಧ್ಯಮಾನೋ ಮಹಾಕಾಯೋ ನ ಪ್ರಾಬುಧ್ಯತ ರಾಕ್ಷಸಃ ।
ವಾರಣಾನಾಂ ಸಹಸ್ರಂ ತು ಶರೀರೇಽಸ್ಯ ಪ್ರಧಾವಿತಮ್ ॥ ೫೫

ಕುಂಭಕರ್ಣಸ್ತತೋ ಬುದ್ಧಃ ಸ್ಪರ್ಶಂ ಪರಮಬುಧ್ಯತ ॥

ಸ ಪಾತ್ಯಮಾನೈರ್ಗಿರಿಶೃಂಗವೃಕ್ಷೈ-
ರಚಿಂತಯಂಸ್ತಾನ್ ವಿಪುಲಾನ್ ಪ್ರಹಾರಾನ್ ।
ನಿದ್ರಾಕ್ಷಯಾತ್ ಕ್ಷುದ್ಭಯಪೀಡಿತಶ್ಚ
ವಿಜೃಂಭಮಾಣಃ ಸಹಸೋತ್ಪಪಾತ ॥ ೫೬

ಸ ನಾಗಭೋಗಾಚಲಶೃಂಗಕಲ್ಪೌ
ವಿಕ್ಷಿಪ್ಯ ಬಾಹೂ ಗಿರಿಶೃಂಗಸಾರೌ ।

---

ಕಿವಿಗಳನ್ನು ಕಚ್ಚಿದರು ! ಕೆಲವರು ನೂರಾರು ಕೊಡಗಳಲ್ಲಿ ನೀರನ್ನು ತಂದು ಅವನ ಕಿವಿಗಳಲ್ಲಿ ಸುರಿದರು ! (೫೨). ಮಹಾನಿದ್ರೆಯಲ್ಲಿದ್ದ ಕುಂಭಕರ್ಣನು ಜಪ್ಪೆಂದು ಅಲ್ಲಾಡಲಿಲ್ಲ ! ಬಲಾಢ್ಯರಾದ ಕೆಲವು ರಾಕ್ಷಸರು ಕಬ್ಬಿಣದ ದೊಡ್ಡ ಸುತ್ತಿಗೆಗಳನ್ನು ತಂದು ಅವನ ತಲೆಯನ್ನೂ ಎದೆಯನ್ನೂ ಕುಟ್ಟಿದರು. ಸರ್ವಾಂಗಗಳನ್ನೂ ತಟ್ಟಿದರು. ಅನೇಕ ಶತಘ್ನಿಗಳನ್ನು ಸೇರಿಸಿ ಹಗ್ಗಗಳಿಂದ ಬಿಗಿದು ಕಟ್ಟಿ, ಅವುಗಳಿಂದ ಚಚ್ಚಿದರು (೫೩–೫೪). ಆ ಮಹಾರಾಕ್ಷಸನು ಏಳಲಿಲ್ಲ! ಅನಂತರ ಒಂದು ಸಾವಿರ ಆನೆಗಳನ್ನು ತಂದು ಅವನ ಮೈಮೇಲೆ ಓಡಾಡಿಸಿ ತುಳಿಸಿದರು! ಆಗ ಕುಂಭಕರ್ಣನಿಗೆ ಯಾರೋ ಮೈಯನ್ನು ಮುಟ್ಟಿದಂತಾಗಿ ಎಚ್ಚರವಾಯಿತು ! (೫೫). ಗರಿಶೃಂಗಗಳಿಂದಲೂ ವೃಕ್ಷ ಗಳಿಂದಲೂ ರಾಕ್ಷಸರೂ ತನ್ನನ್ನು ಅಪ್ಪಳಿಸುತ್ತಿದ್ದರೂ ಕುಂಭಕರ್ಣನಿಗೆ ಆ ಪ್ರಹಾರಗಳ ಕಡೆಗೆ ಗಮನವೇ ಇರಲಿಲ್ಲ. ಎಚ್ಚರವಾದೊಡನೆ ತನಗೆ ಹಸಿವಾಗುತ್ತಿರುವುದು ಮಾತ್ರ ಅವನಿಗೆ ತಿಳಿಯಿತು ! ಆಕಳಿಸುತ್ತ ಅವನು ಎದ್ದು ಕುಳಿತನು (೫೬). ಗಿರಿಶೃಂಗಗಳಂತೆ ಪ್ರಬಲವಾಗಿಯೂ ಸರ್ಪದೇಹ ಗಳಂತೆ ನೀಳವಾಗಿಯೂ ಪರ್ವತಶಿಖರಗಳಂತೆ ತೋರವಾಗಿಯೂ ಇದ್ದ ತನ್ನ

ವಿವೃತ್ಯ ವಕ್ತ್ರಂ ಬಡಬಾಮುಖಾಭಂ
ನಿಶಾಚರೋಽಸೌ ವಿಕೃತಂ ಜಜೃಂಭೇ ॥ ೫೭

ತಸ್ಯ ಜಾಜೃಂಭಮಾಣಸ್ಯ ವಕ್ತ್ರಂ ಪಾತಾಲಸಂನಿಭಮ್ ।
ದದೃಶೇ ಮೇರುಶೃಂಗಾಗ್ರೇ ದಿವಾಕರ ಇವೋದಿತಃ ॥ ೫೮

ಸ ಜೃಂಭಮಾಣೋಽತಿಬಲಃ ಪ್ರತಿಬುದ್ಧೋ ನಿಶಾಚರಃ ।
ನಿಃಶ್ವಾಸಶ್ಚಾಸ್ಯ ಸಂಜಜ್ಞೇ ಪರ್ವತಾದಿವ ಮಾರುತಃ ॥ ೫೯

ರೂಪಮುತ್ತಿಷ್ಠ ತಸ್ತಸ್ಯ ಕುಂಭಕರ್ಣಸ್ಯ ತದ್ಬಭೌ ।
ತಪಾಂತೇ ಸಬಲಾಕಸ್ಯ ಮೇಘಸ್ಯೇವ ವಿವರ್ಷತಃ ॥ ೬೦

ತಸ್ಯ ದೀಪಾಗ್ನಿಸದೃಶೇ ವಿದ್ಯುತ್ಸದೃಶವರ್ಚಸೀ ।
ದದೃಶಾತೇ ಮಹಾನೇತ್ರೇ ದೀಪ್ತಾವಿವ ಮಹಾಗ್ರಹೌ ॥ ೬೧

ತತಸ್ತ್ವದರ್ಶಯನ್ ಸರ್ವಾನ್ ಭಕ್ಷ್ಯಾಂಶ್ಚ ವಿವಿಧಾನ್ ಬಹೂನ್ ।
ವರಾಹಾನ್ ಮಹಿಷಾಂಶ್ಚೈವ ಸ ಬಭಕ್ಷ ಮಹಾಬಲಂ ॥ ೬೨

---

ಬಾಹುಗಳನ್ನೊಮ್ಮೆ ಕೊಡವಿ, ಬಡಬಾಗ್ನಿಯ ಮುಖದಂತಿದ್ದ ಬಾಯನ್ನು ತೆರೆದು, ಆ ನಿಶಾಚರನು ವಿಕಾರವಾಗಿ ಮತ್ತೊಂದುಸಲ ಆಕಳಿಸಿದನು (೫೭). ಮತ್ತೆ ಮತ್ತೆ ಆಕಳಿಸುತ್ತಿದ್ದ ಕುಂಭಕರ್ಣನ ಪಾತಾಳಗುಹೆಯಂತಿದ್ದ ಕೆಂಪಾದ ಬಾಯಿ, ಮೇರುಪರ್ವತಶಿಖರದಲ್ಲಿ ಉದಿಸಿದ ಬಾಲಸೂರ್ಯನಂತೆ ಕಾಣಿಸುತ್ತಿತ್ತು ! ಮಹಾಬಲಾಢ್ಯನಾದ ಆ ರಾಕ್ಷಸನು ಆಕಳಿಸುವಾಗ ಅವನ ಬಾಯಿಂದ ಹೊರಡುವ ಗಾಳಿಯು, ಪರ್ವತಾಗ್ರದಿಂದ ಬಿರ್ರನೆ ಬೀಸುವ ಗಾಳಿಯಂತೆ ಬಿರುಸಿನಿಂದ ಸುಯ್ಯುತ್ತಿತ್ತು. ಹೀಗೆ ಕೆಲವು ಸಲ ಆಕಳಿಸಿದಮೇಲೆ ಕುಂಭಕರ್ಣನಿಗೆ ಸರಿಯಾಗಿ ಎಚ್ಚರವಾಯಿತು ! (೫೮–೫೯). (ವಿವಿಧಾಭರಣಗಳನ್ನೂ ಹೂಮಾಲೆಗಳನ್ನೂ ಧರಿಸಿದ್ದ ) ಕಪ್ಪುಬಣ್ಣದ ಆ ರಾಕ್ಷಸನು ಏಳುತ್ತಿರುವಾಗ, ಬೇಸಿಗೆ ಕಳೆದಮೇಲೆ ಮಳೆ ಸುರಿಸುತ್ತ ಬಲಾಕಾಪಂಕ್ತಿಗಳೊಡನೆ ಕೂಡಿದ ಕಾರ್ಮೋಡದಂತೆ ಕಂಗೊಳಿಸಿದನು (೬೦). ಪ್ರಜ್ವಲಿಸುವ ಅಗ್ನಿಯಂತೆಯೂ ಮಿಂಚಿನಂತೆಯೂ ಹೊಳೆಯುತ್ತಿದ್ದ ಆತನ ದೊಡ್ಡ ಕಣ್ಣುಗಳು, ಉಜ್ಜ್ವಲವಾಗಿ ಬೆಳಗುವ ಶನಿ ಮತ್ತು ಅಂಗಾರಕಗ್ರಹಗಳಂತೆ ತೋರಿದವು. ಅನಂತರ ರಾಕ್ಷಸಭಟರು ಅಲ್ಲಿ ತಂದು ಪೇರಿಸಿದ್ದ ವಿವಿಧಭೋಜ್ಯಸಾಮಗ್ರಿಗಳ ರಾಶಿಗಳನ್ನು

ಅದನ್ ಬುಭುಕ್ಷಿತೋ ಮಾಂಸಂ ಶೋಣಿತಂ ತೃಷಿತಂ ಪಿಬನ್ ।
ಮೇದಃಕುಂಭಾಂಶ್ಚ ಮದ್ಯಂ ಚ ಪಪೌ ಶಕ್ರರಿಪುಸ್ತದಾ ॥ ೬೩

ತತಸ್ತೃಪ್ತ ಇತಿ ಜ್ಞಾತ್ವಾ ಸಮುತ್ಪೇತುರ್ನಿಶಾಚರಾಃ ।
ಶಿರೋಭಿಶ್ಚ ಪ್ರಣಮ್ಯೈನಂ ಸರ್ವತಃ ಪರ್ಯವಾರಯನ್ ॥ ೬೪

ನಿದ್ರಾವಿಶದನೇತ್ರಸ್ತು ಕಲುಷೀಕೃತಲೋಚನಃ ।
ಚಾರಯನ್ ಸರ್ವತೋ ದೃಷ್ಟಿಂ ತಾನ್ ದದರ್ಶ ನಿಶಾಚರಾನ್ ॥ ೬೫

ಸ ಸರ್ವಾನ್ ಸಾಂತ್ವಯಾಮಾಸ ನೈರ್ಋತಾನ್ನೈರ್ಋತರ್ಷಭಃ ।
ಬೋಧನಾದ್ವಿಸ್ಮಿತಶ್ಚಾಪಿ ರಾಕ್ಷಸಾನಿದಮಬ್ರವೀತ್ ॥ ೬೬

ಕಿಮರ್ಥಮಹಮಾದೃತ್ಯ ಭವದ್ಭಿಃ ಪ್ರತಿಬೋಧಿತಃ ।
ಕಚ್ಚಿತ್ ಸುಕುಶಲಂ ರಾಜ್ಞೋ ಭಯಂ ವಾ ನೇಹ ಕಿಂಚನ ॥ ೬೭

ಅಥವಾ ಧ್ರುವಮನ್ಯೇಭ್ಯೋ ಭಯಂ ಪರಮುಪಸ್ಥಿತಮ್ ।
ಯದರ್ಥಮೇವಂ ತ್ವರಿತೈರ್ಭವದ್ಭಿಃ ಪ್ರತಿಬೋಧಿತಃ ॥ ೬೮

---

ಕುಂಭಕರ್ಣನಿಗೆ ತೋರಿಸಿದರು. ಹಂದಿಯ ಮಾಂಸ, ಕೋಣನ ಮಾಂಸ ಮೊದಲಾದ ಬಗೆಬಗೆಯ ಭೋಜ್ಯಗಳನ್ನು ಬಲಾಢ್ಯನಾದ ಕುಂಭಕರ್ಣನು ಕಬಳಿಸಿದನು (೬೧–೬೨). ಆ ನಿಶಾಚರನು 'ಹಸಿವು ಹಸಿವು' ಎನ್ನುತ್ತ ಮಾಂಸರಾಶಿಗಳನ್ನು ಕಬಳಿಸಿ, 'ಬಾಯಾರಿಕೆ ಬಾಯಾರಿಕೆ' ಎನ್ನುತ್ತ ಕೊಡಗಟ್ಟಲೆ ರಕ್ತವನ್ನು ಕುಡಿದು, ಹರವಿಗಳಲ್ಲಿದ್ದ ಕೊಬ್ಬನ್ನೂ ಹೆಂಡವನ್ನೂ ಬಾಯಿಗೆ ಸುರುವಿಕೊಂಡನು (೬೩). ಅದುವರೆಗೆ ಅಲ್ಲಿಯೇ ಅಡಗಿಕೊಂಡಿದ್ದ ರಾಕ್ಷಸಭಟರು, ಕುಂಭಕರ್ಣನು ತೃಪ್ತನಾದನೆಂದು ತಿಳಿದ ಮೇಲೆ ಹೊರಬಂದು ಕಾಣಿಸಿಕೊಂಡರು ! ತಲೆಬಾಗಿ ಅವನಿಗೆ ನಮಸ್ಕಾರಮಾಡಿ, ಅವರೆಲ್ಲರೂ ಸುತ್ತಲೂ ನಿಂತುಕೊಂಡರು (೬೪). ಆಗ ಕುಂಭಕರ್ಣನು ನಿದ್ರೆಯ ಜೋಮಿನಿಂದ ಮುಬ್ಬಾದ ಅರೆಗಣ್ಣಿನಿಂದ ಸುತ್ತಲೂ ನೋಡಲು, ಆ ರಾಕ್ಷಸರು ಅಲ್ಲಿ ನೆರೆದಿರುವುದು ಕಾಣಿಸಿತು. ಅವರು ತನ್ನನ್ನು ಎಬ್ಬಿಸಿದರೆಂಬ ಅರಿವಾಗಿ, ಅವನಿಗೆ ಅಚ್ಚರಿಯೆನಿಸಿತು. ಆ ಭಟರನ್ನು ಸಂತೈಸುತ್ತ ಆ ರಾಕ್ಷಸೇಂದ್ರನು ''ಎಲೈ ಭಟರೆ, ಇಷ್ಟು ಆಸಕ್ತಿಯಿಂದ ನನ್ನನ್ನೇಕೆ ಎಬ್ಬಿಸಿದಿರಿ ! ಮಹಾರಾಜನಿಗೆ ಕುಶಲವಷ್ಟೆ ? ಯಾವ ತೊಂದರೆಯೂ ಇಲ್ಲವಷ್ಟೆ ? (೬೫–೬೭). ಆದರೆ ಶತ್ರುಗಳಿಂದ ಯಾವುದೋ ಘೋರವಾದ ವಿಪತ್ತು ಬಂದೇ ಇರಬೇಕು.

ಅದ್ಯ ರಾಕ್ಷಸರಾಜಸ್ಯ ಭಯಮುತ್ಪಾಟಯಾಮ್ಯಹಮ್ ।
ಪಾತಯಿಷ್ಯೇ ಮಹೇಂದ್ರಂ ವಾ ಶಾತಯಿಷ್ಯೇ ತಥಾನಲಮ್ ॥ ೬೯

ನ ಹ್ಯಲ್ಪಕಾರಣೇ ಸುಪ್ತಂ ಬೋಧಯಿಷ್ಯತಿ ಮಾಂ ಗುರುಃ ।
ತದಾಖ್ಯಾತಾರ್ಥತತ್ತ್ವೇನ ಮತ್ಪ್ರಬೋಧನಕಾರಣಮ್ ॥ ೭೦

ಏವಂ ಬ್ರುವಾಣಂ ಸಂರಬ್ಧಂ ಕುಂಭಕರ್ಣಂ ಮಹಾಬಲಮ್ ।
ಯೂಪಾಕ್ಷಃ ಸಚಿವೋ ರಾಜ್ಞಃ ಕೃತಾಂಜಲಿರುವಾಚ ಹ ॥ ೭೧

ನ ನೋ ದೈವಕೃತಂ ಕಿಂಚಿದ್ಭಯಮಸ್ತಿ ಕದಾಚನ ।
ಮಾನುಷಾನ್ನೋ ಭಯಂ ರಾಜಂಸ್ತುಮುಲಂ ಸಂಪ್ರಭಾಧತೇ ॥ ೭೨

ನ ದೈತ್ಯದಾನವೇಭ್ಯೋ ವಾ ಭಯಮಸ್ತಿ ಹಿ ತಾದೃಶಮ್ ।
ಯಾದೃಶಂ ಮಾನುಷಂ ರಾಜನ್ ಭಯಮಸ್ಮಾನುಪಸ್ಥಿತಮ್ ॥ ೭೩

ವಾನರೈಃ ಪರ್ವತಾಕಾರೈರ್ಲಂಕೇಯಂ ಪರಿವಾರಿತಾ ।
ಸೀತಾಹರಣಸಂತಪ್ತಾದ್ರಾಮಾನ್ನಸ್ತುಮುಲಂ ಭಯಮ್ ॥ ೭೪

---

ಅದಕ್ಕಾಗಿಯೇ ನೀವು ಇಷ್ಟು ತ್ವರೆಯಿಂದ ನನ್ನನ್ನು ಎಬ್ಬಿಸಿದ್ದೀರಿ! ಇರಲಿ; ನಮ್ಮ ರಾಜನಿಗೆ ಯಾವ ಭಯವುಂಟಾಗಿದ್ದರೂ ನಾನು ಅದನ್ನು ನಿರ್ಮೂಲಗೊಳಿಸುವೆನು. ಇಂದ್ರನನ್ನಾದರೂ ಹೊಡೆದುರುಳಿಸುವೆನು. ಅಗ್ನಿಯನ್ನಾದರೂ ಭಗ್ನಗೊಳಿಸುವೆನು (೬೮–೬೯). ಸುಖನಿದ್ರೆಯಲ್ಲಿರುವ ನನ್ನನ್ನು ಅಲ್ಪಕಾರಣಕ್ಕಾಗಿ ಅಣ್ಣನು ಎಂದಿಗೂ ಎಬ್ಬಿಸಲಾರ. ಎಲೈ ರಾಕ್ಷಸರೆ, ನನ್ನನ್ನು ಎಚ್ಚರಗೊಳಿಸಿದ ಕಾರಣವೇನೆಂಬುದನ್ನು ದಿಟವಾಗಿ ತಿಳಿಸಿರಿ'' ಎಂದು ಹೇಳಿದನು (೭೦). ಹೀಗೆ ಉದ್ವಿಗ್ನನಾಗಿ ಕೇಳಿದ ಕುಂಭಕರ್ಣನೆದುರಿಗೆ ಯೂಪಾಕ್ಷನೆಂಬ ರಾಜಸಚಿವನು ಬಂದು ನಿಂತು ಕೈ ಮುಗಿದುಕೊಂಡು. ''ಮಹಾಸ್ವಾಮಿ, ನಮಗೆ ದೇವತೆಗಳಿಂದ ಎಂದಿಗೂ ವಿಪತ್ತು ಬರುವ ಸಂಭವವೇ ಇಲ್ಲ. ಮನುಷ್ಯನೊಬ್ಬನಿಂದ ವಿಪತ್ತು ಸಂಭವಿಸಿ ನಮ್ಮನ್ನು ಸಂಕಟಕ್ಕೆ ಈಡುಮಾಡಿದೆ (೭೧–೭೨). ಮಹಾಪ್ರಭು, ದೈತ್ಯದಾನವರಿಗೂ ಸಹ ನಾವು ಅಂಜಬೇಕಾದ ಪ್ರಸಂಗವಿಲ್ಲ. ಆದರೆ ಮನುಷ್ಯನಿಗೆ ಅಂಜಬೇಕಾದ ಪ್ರಸಂಗವು ಪ್ರಾಪ್ತವಾಗಿದೆ. ಪರ್ವತಾಕಾರದ ವಾನರರು ನಮ್ಮ ಲಂಕೆಯನ್ನು ಸುತ್ತುಗಟ್ಟಿ ಮುತ್ತಿಗೆ ಹಾಕಿದ್ದಾರೆ. ಸೀತೆಯನ್ನು ಅಪಹರಿಸಿದ್ದರಿಂದ ರಾಮನು ಕ್ರುದ್ಧನಾಗಿ ಯುದ್ಧಕ್ಕೆ ಬಂದಿದ್ದಾನೆ.

ಏಕೇನ ವಾನರೇಣೇಯಂ ಪೂರ್ವಂ ದಗ್ಧಾ ಮಹಾಪುರೀ ।
ಕುಮಾರೋ ನಿಹತಶ್ಚಾಕ್ಷಃ ಸಾನುಯಾತ್ರಃ ಸಕುಂಜರಃ ॥ ೭೫

ಸ್ವಯಂ ರಕ್ಷೋಽಧಿಪಶ್ಚಾಪಿ ಪೌಲಸ್ತ್ಯೋ ದೇವಕಂಟಕಃ ।
ವ್ರಜೇತಿ ಸಂಯುಗೇ ಮುಕ್ತೋ ರಾಮೇಣಾದಿತ್ಯತೇಜಸಾ ॥ ೭೬

ಯನ್ನ ದೇವೈಃ ಕೃತೋ ರಾಜಾ ನಾಪಿ ದೈತ್ಯೈರ್ನ ದಾನವೈಃ ।
ಕೃತಃ ಸ ಇಹ ರಾಮೇಣ ವಿಮುಕ್ತಃ ಪ್ರಾಣಸಂಶಯಾತ್ ॥ ೭೭

ಸ ಯೂಪಾಕ್ಷವಚಃ ಶ್ರುತ್ವಾ ಭ್ರಾತುರ್ಯುಧಿ ಪರಾಜಯಮ್ ।
ಕುಂಭಕರ್ಣೋ ವಿವೃತ್ತಾಕ್ಷೋ ಯೂಪಾಕ್ಷಮಿದಮಬ್ರವೀತ್ ॥ ೭೮

ಸರ್ವಮದ್ಯೈವ ಯೂಪಾಕ್ಷ ಹರಿಸೈನ್ಯಂ ಸಲಕ್ಷ್ಮಣಮ್ ।
ರಾಘವಂ ಚ ರಣೇ ಹತ್ವಾ ಪಶ್ಚಾದ್ದ್ರಕ್ಷ್ಯಾಮಿ ರಾವಣಮ್ ॥ ೭೯

---

ಅವನಿಂದ ನಮಗೆ ತೀವ್ರವಾದ ಭಯ ಉಂಟಾಗಿದೆ (೭೩–೭೪). ಹಿಂದೆ ಏಕಾಕಿಯಾಗಿ ಒಬ್ಬ ವಾನರನೇ ಬಂದು ಈ ಮಹಾನಗರವನ್ನು ಸುಟ್ಟುಹಾಕಿ ಅಕ್ಷಕುಮಾರನನ್ನು ಸಂಹರಿಸಿದನಲ್ಲವೆ ?ಅವನ ಪರಿವಾರವನ್ನೂ ಗಜಸೇನೆಯನ್ನೂ ಧ್ವಂಸಮಾಡಿದನಲ್ಲವೆ ? (೭೫). ಈಗ ರಾಕ್ಷಸೇಂದ್ರನೂ ದೇವಶತ್ರುವೂ ಆದ ನಮ್ಮ ರಾವಣೇಶ್ವರನೇ ಸ್ವಯಂ ಯುದ್ಧಕ್ಕೆ ಹೋಗಿದ್ದನು. ಅಲ್ಲಿ ಸೂರ್ಯನಂತೆ ಪ್ರಖರತೇಜೋಶಾಲಿಯಾದ ರಾಮನಿಂದ ಪರಾಜಿತನಾದನು. 'ರಾವಣ, ಲಂಕೆಗೆ ಹೋಗು. ವಿಶ್ರಮಿಸಿಕೊಂಡು ಬಾ !' ಎಂದು ಹೇಳಿ ರಾಮನೇ ನಮ್ಮ ಮಹಾರಾಜನನ್ನು ಉಳಿಸಿದನು ! (೭೬). ದೇವತೆಗಳಿಂದಾಗಲಿ ದೈತ್ಯದಾನವರಿಂದಾಗಲಿ ಇದುವರೆಗೆ ಸಾಧ್ಯವಾಗದ ದುರವಸ್ಥೆಯು, ಈಗ ರಾಮನಿಂದ ನಮ್ಮ ಮಹಾರಾಜನಿಗೆ ಪ್ರಾಪ್ತವಾಯಿತು. ಮಹಾರಾಜನು ಪ್ರಾಣಸಂಶಯಕ್ಕೊಳಗಾಗಿ ಬಿಡುಗಡೆ ಹೊಂದಿದನು'' ಎಂದು ನಿವೇದಿಸಿದನು (೭೭). ತನ್ನ ಅಣ್ಣನಿಗೆ ಯುದ್ಧದಲ್ಲಿ ಪರಾಜಯವಾಯಿತೆಂಬ ಮಾತನ್ನು ಕೇಳಿದೊಡನೆ ಕುಂಭಕರ್ಣನ ಕಣ್ಣಾಲೆಗಳು ಗರಗರನೆ ತಿರುಗಿದವು. ''ಎಲೈ ಯೂಪಾಕ್ಷ, ಈಗಲೇ ವಾನರಸೇವೆಯೆಲ್ಲವನ್ನೂ ಕೊಂದು, ರಾಮಲಕ್ಷ್ಮಣರನ್ನು ಸಂಹರಿಸಿ, ಅನಂತರ ಹೋಗಿ ರಾವಣನ್ನು ಸಂದರ್ಶಿಸುವೆನು ! (೭೮–೭೯).

ರಾಕ್ಷಸಾಂಸ್ತರ್ಪಯಿಷ್ಯಾಮಿ ಹರೀಣಾಂ ಮಾಂಸಶೋಣಿತೈಃ ।
ರಾಮಲಕ್ಷ್ಮಣಯೋಶ್ಚಾಪಿ ಸ್ವಯಂ ಪಾಸ್ಯಾಮಿ ಶೋಣಿತಮ್ ॥ ೮೦

ತತ್ತಸ್ಯ ವಾಕ್ಯಂ ಬ್ರುವತೋ ನಿಶಮ್ಯ
ಸಗರ್ವಿತಂ ರೋಷವಿವೃದ್ಧದೋಷಮ್ ।
ಮಹೋದರೋ ನೈರ್ಋತಯೋಧಮುಖ್ಯಃ ।
ಕೃತಾಂಜಲಿರ್ವಾಕ್ಯಮಿದಂ ಬಭಾಷೇ ॥ ೮೧

ರಾವಣಸ್ಯ ವಚಃ ಶ್ರುತ್ವಾ ಗುಣದೋಷೌ ವಿಮೃಶ್ಯ ಚ ।
ಪಶ್ಚಾದಪಿ ಮಹಾಬಾಹೋ ಶತ್ರೂನ್ ಯುಧಿ ವಿಜೇಷ್ಯಸಿ ॥ ೮೨

ಮಹೋದರವಚಃ ಶ್ರುತ್ವಾ ರಾಕ್ಷಸೈಃ ಪರಿವಾರಿತಃ ।
ಕುಂಭಕರ್ಣೋ ಮಹಾತೇಜಾಃ ಸಂಪ್ರತಸ್ಥೇ ಮಹಾಬಲಃ ॥ ೮೩

ತಂ ಸಮುತ್ಥಾಪ್ಯ ಭೀಮಾಕ್ಷಂ ಭೀಮರೂಪಪರಾಕ್ರಮಮ್ ।
ರಾಕ್ಷಸಾಸ್ತ್ವರಿತಾ ಜಗ್ಮುರ್ದಶಗ್ರೀವನಿವೇಶನಮ್ ॥ ೮೪

---

ಕಪಿಗಳ ರಕ್ತಮಾಂಸಗಳನ್ನು ಈಡಾಡಿ ರಾಕ್ಷಸರಿಗೆ ಸಂತೃಪ್ತಿಯನ್ನುಂಟು ಮಾಡುವೆನು. ರಾಮಲಕ್ಷ್ಮಣರ ರಕ್ತವನ್ನು ನಾನೇ ಕುಡಿಯುವೆನು !'' ಎಂದು ಕುಂಭಕರ್ಣನು ಗರ್ಜಿಸಿದನು (೮೦). ಹೀಗೆ ದರ್ಪೋದ್ಧನಾದ ಕುಂಭಕರ್ಣನ ಗರ್ಜನೆಯು ರೋಷಾವೇಶದಿಂದ ಬಂದುದೆಂದೂ ಅದು ದುಡುಕಿನ ಮಾತೆಂದೂ ತಿಳಿದು, ರಾಕ್ಷಸಯೋಧಮುಖ್ಯನಾದ ಮಹೋದರ ನೆಂಬವನು ಕೃತಾಂಜಲಿಯಾಗಿ ''ಮಹಾಬಾಹು–ಮಹಾಪ್ರಭು, ನಮ್ಮ ಮಹಾರಾಜನು ಏನು ಹೇಳುವನೆಂಬುದನ್ನು ಕೇಳಿ ಅದರ ಗುಣದೋಷಗಳನ್ನು ಮೊದಲು ವಿಮರ್ಶಿಸೋಣವಾಗಲಿ. ಅನಂತರ ಯುದ್ಧದಲ್ಲಿ ಶತ್ರುಗಳನ್ನು ಜಯಿಸಬಹುದು'' ಎಂದು ಅರಿಕೆಮಾಡಿದನು (೮೧–೮೨). ಆಗ ಮಹೋದರನ ಅಭಿಪ್ರಾಯವನ್ನಂಗೀಕರಿಸಿ, ಬಲಾಢ್ಯನಾದ ಕುಂಭಕರ್ಣನು ಆ ರಾಕ್ಷಸ ಪರಿವಾರದೊಡನೆ ರಾವಣನ ಅರಮನೆಗೆ ಹೋಗಲು ಸಿದ್ಧನಾಗತೊಡಗಿದನು (೮೩). ಹೀಗೆ ರಾಕ್ಷಸಭಟರು ಭೀಮಪರಾಕ್ರಮಿಯಾದ ಕುಂಭಕರ್ಣನನ್ನು ನಿದ್ರೆಯಿಂದೆಬ್ಬಿಸಿ, ತ್ವರೆಯಿಂದ ದಶಗ್ರೀವನ ಅರಮನೆಗೆ ಧಾವಿಸಿದರು. ಅಲ್ಲಿಗೆ

ತತೋ ಗತ್ವಾ ದಶಗ್ರೀವಮಾಸೀನಂ ಪರಮಾಸನೇ ।
ಊಚುರ್ಬದ್ಧಾಂಜಲಿಪುಟಾಃ ಸರ್ವ ಏವ ನಿಶಾಚರಾಃ ॥ ೮೫

ಪ್ರಬುದ್ಧಃ ಕುಂಭಕರ್ಣೋಽಯಂ ಭ್ರಾತಾ ತೇ ರಾಕ್ಷಸರ್ಷಭ ।
ಕಥಂ ತತ್ರೈವ ನಿರ್ಯಾತು ದ್ರಕ್ಷ್ಯಸ್ಯೇನಮಿಹಾಗತಮ್ ॥ ೮೬

ರಾವಣಸ್ತ್ವಬ್ರವೀದ್ಧೃಷ್ಟೋ ರಾಕ್ಷಸಾಂಸ್ತಾಮುಪಸ್ಥಿತಾನ್ ।
ದ್ರಷ್ಟುಮೇನಮಿಹೇಚ್ಛಾಮಿ ಯಥಾನ್ಯಾಯಂ ಚ ಪೂಜ್ಯತಾಮ್ ॥ ೮೭

ತಥೇತ್ಯುಕ್ತ್ವಾತು ತೇ ಸರ್ವೇ ಪುನರಾಗಮ್ಯ ರಾಕ್ಷಸಾಃ ।
ಕುಂಭಕರ್ಣಮಿದಂ ವಾಕ್ಯಮೂಚೂ ರಾವಣಚೋದಿತಾಃ ॥ ೮೮

ದ್ರಷ್ಟುಂ ತ್ವಾಂ ಕಾಂಕ್ಷತೇ ರಾಜಾ ಸರ್ವರಾಕ್ಷಸಪುಂಗವಃ ।
ಗಮನೇ ಕ್ರಿಯತಾಂ ಬುದ್ಧಿರ್ಭ್ರಾತರಂ ಸಂಪ್ರಹರ್ಷಯ ॥ ೮೯

ಕುಂಭಕರ್ಣಸ್ತು ದುರ್ಧರ್ಷೋ ಭ್ರಾತುರಾಜ್ಞಾಯ ಶಾಸನಮ್ ।
ತಥೇತ್ಯುಕ್ತ್ವಾ ಮಹಾಬಾಹುಃ ಶಯನಾದುತ್ಪಪಾತ ಹ ॥ ೯೦

---

ಹೋಗಿ ಸಿಂಹಾಸನದಲ್ಲಿ ಮಂಡಿಸಿದ್ದ ದಶಗ್ರೀವನನ್ನು ನೋಡಿ, ಈ ನಿಶಾಚರರು ಬದ್ಧಾಂಜಲಿಗಳಾಗಿ ''ಮಹಾಸ್ವಾಮಿ–ರಾಕ್ಷಸೇಂದ್ರ, ನಿನ್ನ ಸಹೋದರನಾದ ಕುಂಭಕರ್ಣನು ಎದ್ದಿರುವನು. ಆತನು ಹಾಗೆಯೇ ರಣರಂಗಕ್ಕೆ ಹೋಗ ಬೇಕೊ? ಅಥವಾ ಮೊದಲು ಇಲ್ಲಿಗೆ ಬಂದು ನಿನ್ನ ಸಂದರ್ಶನವನ್ನು ಪಡೆಯ ಬೇಕೊ?'' ಎಂದು ಕೇಳಿದರು (೮೪–೮೬). ಕುಂಭಕರ್ಣನು ನಿದ್ರೆಯಿಂದೆದ್ದ ನೆಂಬುದನ್ನು ಕೇಳಿ ರಾವಣನು ಸಂತುಷ್ಟನಾಗಿ, ಆ ರಾಕ್ಷಸಭಟರನ್ನು ಕುರಿತು ''ಕುಂಭಕರ್ಣನು ಇಲ್ಲಿಗೆ ಬರಲಿ. ಮೊದಲು ಅವನನ್ನು ನೋಡಬೇಕೆಂದಿರು ವೆನು. ಅವನನ್ನು ಸರಿಯಾಗಿ ಆದರಿಸಿರಿ'' ಎಂದು ತಿಳಿಸಿದನು (೮೭). ಆಗ ಭಟರು ''ಅಪ್ಪಣೆ, ಮಹಾಪ್ರಭು'' ಎಂದು ನುಡಿದು ಪುನಃ ಕುಂಭಕರ್ಣನಿದ್ದಲ್ಲಿಗೆ ಬಂದು ''ಮಹಾಸ್ವಾಮಿ, ರಾಕ್ಷಸೇಂದ್ರನಾದ ನಮ್ಮ ಮಹಾರಾಜನು ನಿನ್ನನ್ನು ನೋಡಬೇಕೆಂದಿದ್ದಾನೆ. ಅಲ್ಲಿಗೆ ದಯಮಾಡಿಸಿ ನಿನ್ನ ಅಣ್ಣನನ್ನು ಸಂತೋಷ ಪಡಿಸೋಣವಾಗಲಿ'' ಎಂದು ಅರಿಕೆಮಾಡಿದರು (೮೮–೮೯). ಮಹಾಶೂರ ನಾದ ಕುಂಭಕರ್ಣನು ಅಣ್ಣನ ಆಜ್ಞೆಯನ್ನು ಮನ್ನಿಸಿ 'ಹಾಗೆಯೇ ಆಗಲಿ'

ಪ್ರಕ್ಷಾಲ್ಯ ವದನಂ ಹೃಷ್ಟಃ ಸ್ನಾತಃ ಪರಮಭೂಷಿತಃ ।
ಪಿಪಾಸುಸ್ತ್ವರಯಾಮಾಸ ಪಾನಂ ಬಲಸಮೀರಣಮ್ ॥ ೬೧

ತತಸ್ತೇ ತ್ವರಿತಾಸ್ತಸ್ಯ ರಾಕ್ಷಸಾ ರಾವಣಾಜ್ಞಯಾ ।
ಮದ್ಯಕುಂಭಾಂಶ್ಚ ವಿವಿಧಾನ್ ಕ್ಷಿಪ್ರಮೇವೋಪಹಾರಯನ್ ॥ ೬೨

ಪೀತ್ವಾ ಘಟಸಹಸ್ರೇ ದ್ವೇ ಗಮನಾಯೋಪಚಕ್ರಮೇ ।
ಈಷತ್ಸಮುತ್ಕಟೋ ಮತ್ತಸ್ತೇಜೋಬಲಸಮನ್ವಿತಃ ॥ ೬೩

ಕುಂಭಕರ್ಣೋ ಬಭೌ ಹೃಷ್ಟಃ ಕಾಲಾಂತಕಯಮೋಪಮಃ ।
ಭ್ರಾತುಃ ಸ ಭವನಂ ಗಚ್ಛನ್ ರಕ್ಷೋಗಣಸಮನ್ವಿತಃ ॥ ೬೪

ಕುಂಭಕರ್ಣಃ ಪದನ್ಯಾಸೈರಕಂಪಯತ ಮೇದಿನೀಮ್ ॥

ಸ ರಾಜಮಾರ್ಗಂ ವಪುಷಾ ಪ್ರಕಾಶಯನ್
ಸಹಸ್ರರಶ್ಮಿರ್ಧರಣೀಮಿವಾಂಶುಭಿಃ ।
ಜಗಾಮ ತತ್ರಾಂಜಲಿಮಾಲಯಾ ವೃತಃ
ಶತಕ್ರತುರ್ಗೇಹಮಿವ ಸ್ವಯಂಭುವಃ ॥ ೬೫

---

ಎಂದು ನುಡಿದು ಹಾಸಿಗೆಯಿಂದ ಮೇಲೆದ್ದನು. ಹೃಷ್ಟನಾಗಿ ಮುಖವನ್ನು ತೊಳೆದು ಸ್ನಾನಮಾಡಿ ವಸ್ತ್ರಾದಿಗಳಿಂದ ಅಲಂಕರಿಕೊಂಡನು. ಅನಂತರ ಬಲವರ್ಧಕವಾದ ಮದ್ಯವನ್ನು ಪಾನಮಾಡಬೇಕೆಂದು ಅಪೇಕ್ಷಿಸಿ ಅದನ್ನು ತರುವಂತೆ ಸೇವಕನಿಗೆ ತಿಳಿಸಿದನು (೬೦-೬೧). ರಾವಣನು ಕುಂಭಕರ್ಣನನ್ನು ಆದರಿಸಬೇಕೆಂದು ಮೊದಲೇ ಸೂಚಿಸಿದ್ದರಿಂದ, ಕೂಡಲೇ ರಾಕ್ಷಸಭಟರು ಬಗೆಬಗೆಯ ಮದ್ಯಗಳನ್ನು ತುಂಬಿದ ಕೊಡಗಳನ್ನು ತಂದಿಟ್ಟರು (೬೨). ಕುಂಭಕರ್ಣನು ಎರಡುಸಾವಿರ ಕೊಡಗಳಷ್ಟು ಮದ್ಯವನ್ನು ಕುಡಿದು ಹೊರಡಲನುವಾದನು. ಸಹಜವಾಗಿಯೇ ಮತ್ತನಾಗಿದ್ದ ಆ ರಾಕ್ಷಸನಿಗೆ ಮದ್ಯಪಾನದಿಂದ ಇನ್ನೂ ಮದವೇರಿತು! ಅವನ ತೇಜೋಬಲಗಳು ಉದ್ದೀಪಿತವಾದವು (೬೩). ಕುಂಭಕರ್ಣನು ಸಂತೃಪ್ತನಾಗಿ ರಾಕ್ಷಸಪರಿವಾರದೊಡನೆ ಹೊರಟು ಕಾಲಾಂತಕನಂತೆ ಕಂಗೊಳಿಸುತ್ತ ತನ್ನ ಅಣ್ಣನ ಭವನದತ್ತ ಸಾಗಿದನು. ಅವನು ಹೆಜ್ಜೆಯಿಡುವ ರಭಸಕ್ಕೆ ಭೂಮಿಯು ಅದುರುತ್ತಿತ್ತು! (೬೪). ಕುಂಭಕರ್ಣನು ರಾಜಮಾರ್ಗದಲ್ಲಿ ಸಾಗುತ್ತಿರುವಾಗ, ಅವನು ಧರಿಸಿದ ರತ್ನ ಖಚಿತ ಕನಕಾಭರಣ

ತಂ ರಾಜಮಾರ್ಗಸ್ಥಮಮಿತ್ರಘಾತಿನಂ
ವನೌಕಸಸ್ತೇ ಸಹಸಾ ಬಹಿಃಸ್ಥಿತಾಃ ।
ದೃಷ್ಟ್ವಾಪ್ರಮೇಯಂ ಗಿರಿಶೃಂಗಕಲ್ಪಂ
ವಿತತ್ರಸುಸ್ತೇ ಹರಿಯೂಥಪಾಲಾಃ ॥ ೯೬

ಕೇಚಿಚ್ಛರಣ್ಯಂ ಶರಣಂ ಸ್ಮ ರಾಮಂ
ವ್ರಜಂತಿ ಕೇಚಿದ್ವ್ಯಥಿತಾಃ ಪತಂತಿ ।
ಕೇಚಿದ್ದಿಶಃ ಸ್ಮ ವ್ಯಥಿತಾಃ ಪ್ರಯಾಂತಿ
ಕೇಚಿದ್ಭಯಾರ್ತಾ ಭುವಿ ಶೇರತೇ ಸ್ಮ ॥ ೯೭

ತಮದ್ರಿಶೃಂಗಪ್ರತಿಮಂ ಕಿರೀಟನಂ
ಸ್ಪೃಶಂತಮಾದಿತ್ಯಮಿವಾತ್ಮತೇಜಸಾ ।

---

ಗಳ ಪ್ರಭೆಯು ಜಗ್ಗೆಂದು ಹರಡಿತ್ತು. ಸೂರ್ಯನು ತನ್ನ ಕಿರಣಗಳಿಂದ ಭೂಮಿಯನ್ನು ಬೆಳಗುವಂತೆ, ಕುಂಭಕರ್ಣನು ರಾಜಮಾರ್ಗವನ್ನು ಬೆಳಗುತ್ತ ಹೋದನು. ಪೌರರು ದಾರಿಯುದ್ದಕ್ಕೂ ನಿಂತು ಬದ್ಧಾಂಜಲಿಗಳಾಗಿ ಅವನಿಗೆ ಕೈಮುಗಿಯುತ್ತಿದ್ದರು. ದೇವೇಂದ್ರನು ಬ್ರಹ್ಮದೇವನ ಭವನಕ್ಕೆ ಹೋಗುವಂತೆ, ಆತನು ರಾವಣನ ಭವನಕ್ಕೆ (ಕಾರ್ಯವಶನಾಗಿ) ಹೋಗುತ್ತಿದ್ದನು (೯೫). ಗಿರಿಶೃಂಗದಂತೆ ಮಹೋನ್ನತಕಾಯನೂ ಶತ್ರುವಿಧ್ವಂಸಕನೂ ಆದ ಕುಂಭಕರ್ಣನು ಲಂಕೆಯ ರಾಜಮಾರ್ಗದಲ್ಲಿ ಹೋಗುತ್ತಿರುವಾಗ, ಲಂಕಾನಗರದ ಪ್ರಾಕಾರದ ಹೊರಗಡೆ ಇದ್ದ ಕಪಿನಾಯಕರಿಗೆ ಆತನು ಗೋಚರಿಸಿದನು ! ಅರಣ್ಯವಾಸಿಗಳಾದ್ದರಿಂದ (ಎಷ್ಟೋ ಭೀಕರಾಕೃತಿಗಳನ್ನು ನೋಡಿದ್ದ ಆ ಕಪಿವೀರರಿಗೂ ಸಹ) ಊಹಾತೀತ ಮಹೋನ್ನತಭೀಷಣಾಕಾರನಾದ ಕುಂಭಕರ್ಣನನ್ನು ಕಂಡು ಹೆದರಿಕೆಯಾಯಿತು ! (೯೬). ಆ ಕಪಿಗಳು ಹೆದರಿ ತತ್ತರಿಸಿಹೊದರು. ಶರಣಾಗತರಕ್ಷಕನಾದ ಶ್ರೀ ರಾಮನೇ ನಮಗೆ ಗತಿಯೆಂದು ಕೆಲವರು ಶ್ರೀರಾಮನ ಬಳಿಗೆ ಓಡಿಹೋದರು ! ಕೆಲವರು ಭಯದಿಂದ ನಡುಗುತ್ತ ಅಲ್ಲಿಯೇ ಉರುಳಿದರು ! ಕೆಲವರು ಅಂಜಿಕೆಯಿಂದ ಕಂಗೆಟ್ಟು ದಿಕ್ಕುದಿಕ್ಕಿಗೆ ಪಲಾಯನಮಾಡಿದರು ! ಕೆಲವರು ತಲ್ಲಣಿಸಿ ನೆಲವನ್ನಪ್ಪಿಕೊಂಡು ಮಲಗಿಬಿಟ್ಟರು! (೯೭). ಪರ್ವತಶಿಖರದಂತೆ ಉನ್ನತಾಕಾರನಾದ ಕುಂಭಕರ್ಣನು

**ವನೌಕಸಃ ಪ್ರೇಕ್ಷ್ಯ ವಿವೃದ್ಧಮದ್ಭುತಂ**
**ಭಯಾರ್ದಿತಾ ದುದ್ರುವಿರೇ ತತಸ್ತತಃ ॥ ೯೮**

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಷ್ಟಿತಮಃ ಸರ್ಗಃ

---

## ಏಕಷಷ್ಟಿತಮಃ ಸರ್ಗಃ

ಕುಂಭಕರ್ಣವೃತ್ತಕಥನಮ್

**ತತೋ ರಾಮೋ ಮಹಾತೇಜಾ ಧನುರಾದಾಯ ವೀರ್ಯವಾನ್ ।**
**ಕಿರೀಟಿನಂ ಮಹಾಕಾಯಂ ಕುಂಭಕರ್ಣಂ ದದರ್ಶ ಹ ॥ ೧**

**ತಂ ದೃಷ್ಟ್ವಾ ರಾಕ್ಷಸಶ್ರೇಷ್ಠಂ ಪರ್ವತಾಕಾರದರ್ಶನಮ್ ।**
**ಕ್ರಮಮಾಣಮಿವಾಕಾಶಂ ಪುರಾ ನಾರಾಯಣಂ ಪ್ರಭುಮ್ ॥ ೨**

---

ತಲೆಯಮೇಲೆ ಕಿರೀಟವನ್ನು ಧರಿಸಿದ್ದರಿಂದ, ತನ್ನ ತೇಜೋಮಹಿಮೆಯಿಂದ ಸೂರ್ಯವನ್ನು ಮುಟ್ಟುವನ್ನೋ ಎಂಬಂತೆ ಕಾಣುತ್ತಿದ್ದನು. ಇದ್ದಕ್ಕಿದ್ದಂತೆ ಎದ್ದು ಬಂದ ಆ ಅದ್ಭುತವನ್ನು ಕಂಡು, ವಾನರರು ತಲ್ಲಣಿಸಿ ಚಲ್ಲಾಪಿಲ್ಲಿಯಾಗಿ ದಿಕ್ಕುದಿಕ್ಕಿಗೆ ಓಡಿಹೋದರು ! (೯೮).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಅರುವತ್ತನೆಯ ಸರ್ಗ

---

## ಸರ್ಗ ೬೧

ವಿಭೀಷಣನು ಕುಂಭಕರ್ಣನ ವೃತ್ತಾಂತವನ್ನು ಶ್ರೀರಾಮನಿಗೆ ತಿಳಿಸುವುದು.

ಇತ್ತಲಾಗಿ ಶೂರಾಗ್ರೇಸರನಾದ ಶ್ರೀರಾಮನು ಕೋದಂಡವನ್ನು ಹಿಡಿದು ಲಂಕೆಯ ಕಡೆಗೆ ನೋಡಲು, ಮಹಾಕಾಯನಾದ ಕುಂಭಕರ್ಣನು ಕಿರೀಟಧಾರಿಯಾಗಿ ಹೋಗುತ್ತಿರುವುದು ಗೋಚರಿಸಿತು ! (೧). ಪರ್ವತಾಕಾರನಾದ ಆ ರಾಕ್ಷಸಪುಂಗವನು, ಹಿಂದೆ ತ್ರಿವಿಕ್ರಮಾವತಾರದಲ್ಲಿ ಆಕಾಶವನ್ನಳೆಯಲು ಉದ್ಯುಕ್ತನಾದ ಶ್ರೀಮನ್ನಾರಾಯಣನಂತೆ ಅದ್ಭುತರೂಪನಾಗಿ ಹೆಜ್ಜೆಯಿಡು

ಸತೋಯಾಂಬುದಸಂಕಾಶಂ ಕಾಂಚನಾಂಗದಭೂಷಣಮ್ ।
ದೃಷ್ಟ್ವಾ ಪುನಃ ಪ್ರದುದ್ರಾವ ವಾನರಾಣಾಂ ಮಹಾಚಮೂಃ ॥ ೩

ವಿದ್ರುತಾಂ ವಾಹಿನೀಂ ದೃಷ್ಟ್ವಾ ವರ್ಧಮಾನಂ ಚ ರಾಕ್ಷಸಮ್ ।
ಸವಿಸ್ಮಯಮಿದಂ ರಾಮೋ ವಿಭೀಷಣಮುವಾಚ ಹ ॥ ೪

ಕೋಽಸೌ ಪರ್ವತಸಂಕಾಶಃ ಕಿರೀಟೀ ಹರಿಲೋಚನಃ ।
ಲಂಕಾಯಾಂ ದೃಶ್ಯತೇ ವೀರ ಸವಿದ್ಯುದಿವ ತೋಯದಃ ॥ ೫

ಪೃಥಿವ್ಯಾಃ ಕೇತುಭೂತೋಽಸೌ ಮಹಾನೇಕೋಽತ್ರ ದೃಶ್ಯತೇ ।
ಯಂ ದೃಷ್ಟ್ವಾ ವಾನರಾಃ ಸರ್ವೇ ವಿದ್ರವಂತಿ ತತಸ್ತತಃ ॥ ೬

ಆಚಕ್ಷ್ವ ಮೇ ಮಹಾನ್ ಕೋಽಸೌ ರಕ್ಷೋ ವಾ ಯದಿ ವಾಸುರಃ ।
ನ ಮಯ್ಯೇವಂವಿಧಂ ಭೂತಂ ದೃಷ್ಟಪೂರ್ವಂ ಕದಾಚನ ॥ ೭

ಸ ಪೃಷ್ಟೋ ರಾಜಪುತ್ರೇಣ ರಾಮೇಣಾಕ್ಲಿಷ್ಟಕರ್ಮಣಾ ।
ವಿಭೀಷಣೋ ಮಹಾಪ್ರಾಜ್ಞಃ ಕಾಕುತ್ಸ್ಥಮಿದಮಬ್ರವೀತ್ ॥ ೮

---

ತ್ತಿದ್ದನು. ಚಿನ್ನದ ತೋಳ್ಬಳೆಗಳಿಂದ ಭೂಷಿತನಾದ ಕುಂಭಕರ್ಣನು (ಮಿಂಚಿನಿಂದೊಡಗೂಡಿದ) ಕಾರ್ಮೋಡದಂತೆ ಕಂಗೊಳಿಸುತ್ತಿದ್ದನು. ಅವನನ್ನು ನೋಡುತ್ತ ನೋಡುತ್ತ ವಾನರಸೇನೆಯು ಹೆದರಿ ಚಲ್ಲಾಪಿಲ್ಲಿಯಾಗಿ ಓಡಲಾರಂಭಿಸಿತು ! (೨–೩). ಇತ್ತ ಓಡುತ್ತಿದ್ದ ಸೇನೆಯನ್ನೂ ಅತ್ತ ಬೃಹದಾಕಾರನಾದ ರಾಕ್ಷಸನನ್ನೂ ನೋಡಿ ಶ್ರೀರಾಮನು ಅಚ್ಚರಿಗೊಂಡು ವಿಭೀಷಣನನ್ನು ಕರೆದು "ವಿಭೀಷಣ, ಯಾರವನು? ಲಂಕೆಯಲ್ಲಿ ಪರ್ವತಾಕಾರನಾದ ಒಬ್ಬ ರಾಕ್ಷಸನು ಕಾಣಿಸುತ್ತಿರುವನಲ್ಲ ! ಕಿರೀಟವನ್ನು ಧರಿಸಿ ಪಿಂಗಳನೇತ್ರನಾಗಿದ್ದಾನೆ. ಮಿಂಚಿನಿಂದ ಕೂಡಿದ ಮೇಘದಂತೆ ಕಾಣುತ್ತಾನೆ (೪–೫). ಬೃಹದಾಕಾರನಾದ ಆತನು ಇಡೀ ಭೂಮಂಡಲದ ಒಂದು ದೊಡ್ಡ ಧ್ವಜಸ್ತಂಭದಂತೆ ತೋರುತ್ತಾನೆ ! ಅವನನ್ನು ನೋಡಿ ಸಮಸ್ತ ವಾನರರೂ ದಿಕ್ಕುದಿಕ್ಕಿಗೆ ಓಡುತ್ತಿದ್ದಾರೆ (೬). ವಿಭೀಷಣ, ಯಾರವನು? ರಾಕ್ಷಸನೋ? ಅಸುರನೋ? ನಾನು ಇಂಥ ದೊಡ್ಡ ಭೂತವನ್ನು ಎಂದು ನೋಡಿಯೇ ಇರಲಿಲ್ಲ!" ಎಂದು ಕೇಳಿದನು. ಆಗ ಧೀಮಂತನಾದ ವಿಭೀಷಣನು ಕಾಕುತ್ಸ್ಥನನ್ನು ಕುರಿತು ಹೀಗೆಂದನು (೭–೮):

ಯೇನ ವೈವಸ್ವತೋ ಯುದ್ಧೇ ವಾಸವಶ್ಚ ಪರಾಜಿತಃ ।
ಸೈಷ ವಿಶ್ರವಸಃ ಪುತ್ರಃ ಕುಂಭಕರ್ಣಃ ಪ್ರತಾಪವಾನ್ ॥ ೯

ಅಸ್ಯ ಪ್ರಮಾಣಾತ್ಸದೃಶೋ ರಾಕ್ಷಸೋಽನ್ಯೋ ನ ವಿದ್ಯತೇ ॥

ಏತೇನ ದೇವಾ ಯುಧಿ ದಾನವಾಶ್ಚ
ಯಕ್ಷಾ ಭುಜಂಗಾಃ ಪಿಶಿತಾಶನಾಶ್ಚ ।
ಗಂಧರ್ವವಿದ್ಯಾಧರಕಿನ್ನರಾಶ್ಚ
ಸಹಸ್ರಶೋ ರಾಘವ ಸಂಪ್ರಭಗ್ನಾಃ ॥ ೧೦

ಶೂಲಪಾಣಿಂ ವಿರೂಪಾಕ್ಷಂ ಕುಂಭಕರ್ಣಂ ಮಹಾಬಲಮ್ ।
ಹಂತುಂ ನ ಶೇಕುಸ್ತ್ರಿದಶಾಃ ಕಾಲೋಽಯಮಿತಿ ಮೋಹಿತಾಃ ॥ ೧೧

ಪ್ರಕೃತ್ಯಾ ಹ್ಯೇಷ ತೇಜಸ್ವೀ ಕುಂಭಕರ್ಣೋ ಮಹಾಬಲಃ ।
ಅನ್ಯೇಷಾಂ ರಾಕ್ಷಸೇಂದ್ರಾಣಾಂ ವರದಾನಕೃತಂ ಬಲಮ್ ॥ ೧೨

ಏತೇನ ಜಾತಮಾತ್ರೇಣ ಕ್ಷುಧಾರ್ತೇನ ಮಹಾತ್ಮನಾ ।
ಭಕ್ಷಿತಾನಿ ಸಹಸ್ರಾಣಿ ಸತ್ತ್ವಾನಾಂ ಸುಬಹೂನ್ಯಪಿ ॥ ೧೩

ತೇಷು ಸಂಭಕ್ಷ್ಯಮಾಣೇಷು ಪ್ರಜಾ ಭಯನಿಪೀಡಿತಾಃ ।
ಯಾಂತಿ ಸ್ಮ ಶರಣಂ ಶಕ್ರಂ ತಮಪ್ಯರ್ಥಂ ನ್ಯವೇದಯನ್ ॥ ೧೪

---

"ಶ್ರೀ ರಾಮ, ಈತನು ಕುಂಭಕರ್ಣ. ವಿಶ್ರವಸ್ಸಿನ ಪುತ್ರ ! ಮಹಾಪ್ರತಾಪಶಾಲಿ. ಯುದ್ಧದಲ್ಲಿ ಯಮನನ್ನೂ ದೇವೇಂದ್ರನನ್ನೂ ಸೋಲಿಸಿ ಓಡಿಸಿದ್ದಾನೆ. ದೇಹಪ್ರಮಾಣದಲ್ಲಿ ಇವನಿಗೆ ಸಮಾನನಾದ ಇನ್ನೊಬ್ಬ ರಾಕ್ಷಸನೇ ಇಲ್ಲ !(೯) ಈತನು ಯುದ್ಧದಲ್ಲಿ ಎಷ್ಟೋ ಮಂದಿ ದೇವದಾನವರನ್ನೂ ಯಕ್ಷಭುಜಂಗರಾಕ್ಷಸರನ್ನೂ ಗಂಧರ್ವವಿದ್ಯಾಧರಕಿನ್ನರರನ್ನೂ ಭಗ್ನಗೊಳಿಸಿದ್ದಾನೆ. ಬಲಾಢ್ಯನೂ ವಿಕಟನೇತ್ರನೂ ಆದ ಈ ಕುಂಭಕರ್ಣನು ಶೂಲಪಾಣಿಯಾಗಿ ರಣಭೂಮಿಯನ್ನಿಳಿದಾಗ ದೇವತೆಗಳಿಗೂ ಇವನನ್ನು ಎದುರಿಸಲಾಗಲಿಲ್ಲ. 'ಓಹೋ ಇವನೇ ಕಾಲಯಮ' ಎಂದು ಭ್ರಮಿಸಿ ಅವರೆಲ್ಲರೂ ಓಡಿಹೋದರು ! (೧೦–೧೧). ಇತರ ರಾಕ್ಷಸರು ವರಬಲದಿಂದ ಬಲಾಢ್ಯರೆನಿಸಿದರೆ, ಈತನು ಸಹಜವಾಗಿಯೇ ಪ್ರಬಲಪರಾಕ್ರಮಿ. ರಾಘವ, ಈತನು ಹುಟ್ಟಿದೊಡನೆಯೇ ಹಸಿವುಹಸಿವೆಂದು ಒರಲುತ್ತ ಸಾವಿರಾರು ಪ್ರಾಣಿಗಳನ್ನು ಹಿಡಿದು ಭಕ್ಷಿಸಲಾರಂಭಿಸಿದನು ! ಪ್ರಜೆ

ಸ ಕುಂಭಕರ್ಣಂ ಕುಪಿತೋ ಮಹೇಂದ್ರೋ
ಜಘಾನ ವಜ್ರೇಣ ಶಿತೇನ ವಜ್ರೀ ।
ಸ ಶಕ್ರವಜ್ರಾಭಿಹತೋ ಮಹಾತ್ಮಾ
ಚಚಾಲ ಕೋಪಾಚ್ಚ ಭೃಶಂ ನನಾದ ॥ ೧೫

ತಸ್ಯ ನಾನದ್ಯಮಾನಸ್ಯ ಕುಂಭಕರ್ಣಸ್ಯ ಧೀಮತಃ ।
ಶ್ರುತ್ವಾ ನಿನಾದಂ ವಿತ್ರಸ್ತಾ ಪ್ರಜಾ ಭೂಯೋಽವಿತತ್ರಸುಃ ॥ ೧೬

ತತ್ರ ಕೋಪಾನ್ಮಹೇಂದ್ರಸ್ಯ ಕುಂಭಕರ್ಣೋ ಮಹಾಬಲಃ ।
ವಿಕೃಷ್ಯೈ ರಾವತಾದ್ದಂತಂ ಜಘಾನೋರಸಿ ವಾಸವಮ್ ॥ ೧೭

ಕುಂಭಕರ್ಣಪ್ರಹಾರಾರ್ತೋ ವಿಜಜ್ವಾಲ ಸ ವಾಸವಃ ।
ತತೋ ವಿಷೇದುಃ ಸಹಸಾ ದೇವಬ್ರಹ್ಮರ್ಷಿದಾನವಾಃ ॥ ೧೮

ಪ್ರಜಾಭಿಃ ಸಹ ಶಕ್ರಶ್ಚ ಯಯೌ ಸ್ಥಾನಂ ಸ್ವಯಂಭುವಃ ।
ಕುಂಭಕರ್ಣಸ್ಯ ದೌರಾತ್ಮ್ಯಂ ಶಶಂಸುಸ್ತೇ ಪ್ರಜಾಪತೇಃ ॥ ೧೯

ಪ್ರಜಾನಾಂ ಭಕ್ಷಣಂ ಚಾಪಿ ದೇವಾನಾಂ ಚಾಪಿ ಧರ್ಷಣಮ್ ।
ಆಶ್ರಮಧ್ವಂಸನಂ ಚಾಪಿ ಪರಸ್ತ್ರೀಹರಣಂ ಭೃಶಮ್ ॥ ೨೦

---

ಗಳು ಹೆದರಿ ಕಂಗಾಲಾಗಿ ದೇವೇಂದ್ರನನ್ನು ಮರೆಹೊಕ್ಕು ಈತನ ವೃತ್ತಾಂತವನ್ನರುಹಿದರು (೧೨–೧೪). ಆಗ ದೇವೇಂದ್ರನು ಕುಪಿತನಾಗಿ ಘೋರವಾದ ವಜ್ರಾಯುಧದಿಂದ ಕುಂಭಕರ್ಣನನ್ನು ಬಡಿದನು. ಧೀರನಾದ ಕುಂಭಕರ್ಣನು ಆ ಹೊಡೆತಕ್ಕೆ ಜಗ್ಗದೆ ಮತ್ತೆ ಮತ್ತೆ ಹೂಂಕರಿಸಿ ಗರ್ಜಿಸಲು, ಜಗತ್ತೇ ಹೆದರಿ ತಲ್ಲಣಿಸಿಹೋಯಿತು. (೧೫–೧೬). ಮಹಾಪರಾಕ್ರಮಿಯಾದ ಕುಂಭಕರ್ಣನು ಕೋಪದಿಂದ ಐರಾವತದ ದಂತವನ್ನೇ ಹಿರಿದು, ದೇವೇಂದ್ರನ ಎದೆಯ ಮೇಲಪ್ಪಳಿಸಿದನು! ಆ ಪ್ರಹಾರದಿಂದ ಇಂದ್ರನು ನೊಂದು ಕುಪಿತನಾದನೇ ಹೊರತು ಏನನ್ನೂ ಮಾಡಲಾಗಲಿಲ್ಲ. ಬ್ರಹರ್ಷಿಗಳೂ ದೇವದಾನವರೂ ವಿಷಣ್ಣರಾದರು (೧೭–೧೮). ಅನಂತರ ಇಂದ್ರನು ತನ್ನ ಪ್ರಜೆಗಳಾದ ದೇವತೆಗಳೊಡನೆ ಬ್ರಹ್ಮಲೋಕಕ್ಕೆ ಹೋಗಿ, ಕುಂಭಕರ್ಣನ ದೌಷ್ಟ್ಯವನ್ನು ಬ್ರಹ್ಮನಲ್ಲಿ ನಿವೇದಿಸಿಕೊಂಡನು. ಕುಂಭಕರ್ಣನು ಯಾವ ರೀತಿಯಲ್ಲಿ ಪ್ರಜೆಗಳನ್ನು ಭಕ್ಷಿಸುತ್ತ, ದೇವತೆಗಳನ್ನು ಪೀಡಿಸುತ್ತ, ಋಷ್ಯಾಶ್ರಮಗಳನ್ನು ಧ್ವಂಸಪಡಿಸುತ್ತ,

ಏವಂ ಪ್ರಜಾ ಯದಿ ತ್ವೇಷ ಭಕ್ಷಯಿಷ್ಯತಿ ನಿತ್ಯಶಃ ।
ಅಚಿರೇಣೈವ ಕಾಲೇನ ಶೂನ್ಯೋ ಲೋಕೋ ಭವಿಷ್ಯತಿ ॥ ೨೧

ವಾಸವಸ್ಯ ವಚಃ ಶ್ರುತ್ವಾ ಸರ್ವಲೋಕಪಿತಾಮಹಃ ।
ರಕ್ಷಾಂಸ್ಯಾವಾಹಯಾಮಾಸ ಕುಂಭಕರ್ಣಂ ದದರ್ಶ ಹ ॥ ೨೨

ಕುಂಭಕರ್ಣಂ ಸಮೀಕ್ಷ್ಯೈವ ವಿತತ್ರಾಸ ಪ್ರಜಾಪತಿಃ ।
ದೃಷ್ಟ್ವಾ ವಿಶ್ವಾಸ್ಯ ಚೈವೇದಂ ಸ್ವಯಂಭೂರಿದಮಬ್ರವೀತ್ ॥ ೨೩

ಧ್ರುವಂ ಲೋಕವಿನಾಶಾಯ ಪೌಲಸ್ತ್ಯೇನಾಸಿ ನಿರ್ಮಿತಃ ।
ತಸ್ಮಾತ್ತ್ವಮದ್ಯಪ್ರಭೃತಿ ಮೃತಕಲ್ಪಃ ಶಯಿಷ್ಯಸೇ ॥ ೨೪

ಬ್ರಹ್ಮಶಾಪಾಭಿಭೂತೋಽಥ ನಿಪಪಾತಾಗ್ರತಃ ಪ್ರಭೋಃ ।
ತತಃ ಪರಮಸಂಭ್ರಾಂತೋ ರಾವಣೋ ವಾಕ್ಯಮಬ್ರವೀತ್ ॥ ೨೫

---

ಪರಸ್ತ್ರೀಯರನ್ನು ಅಪಹರಿಸುತ್ತ ಉದ್ದಂಡನಾಗಿ ಮೆರೆಯುವನೆಂಬುದನ್ನು ಅವರೆಲ್ಲರೂ ಬ್ರಹ್ಮನಿಗೆ ಅರಿಕೆಮಾಡಿದರು (೧೯–೨೦). ಕಡೆಯಲ್ಲಿ 'ಬ್ರಹ್ಮದೇವ, ಈ ಕುಂಭಕರ್ಣನು ಜೀವಜಾತಗಳನ್ನು ಈ ಪ್ರಕಾರವಾಗಿ ಪ್ರತಿದಿನವೂ ತಿನ್ನುತ್ತ ಹೋಗುವುದಾದರೆ, ಇನ್ನು ಸ್ವಲ್ಪಕಾಲದಲ್ಲಿ ಜಗತ್ತು ನಿರ್ಜನವಾಗಿ ಶೂನ್ಯವಾಗುವುದು !' ಎಂದು ಹೇಳಿದರು (೨೧). ಇಂದ್ರಾದಿಗಳ ನುಡಿಯನ್ನು ಕೇಳಿ ಸರ್ವಲೋಕಗಳನ್ನೂ ಸೃಜಿಸಿ ಪಿತಾಮಹನೆನಿಸಿಕೊಂಡ ಬ್ರಹ್ಮದೇವನು ರಾಕ್ಷಸರೆಲ್ಲರನ್ನೂ ಕರೆಸಿಕೊಂಡು ಕುಂಭಕರ್ಣನನ್ನು ಸಮೀಕ್ಷಿಸಿದನು. ಬ್ರಹ್ಮನಿಗೂ ಸಹ ಕುಂಭಕರ್ಣನನ್ನು ನೋಡಿ ಹೆದರಿಕೆಯಾಯಿತು ! ಇಂದ್ರಾದಿಗಳ ಮಾತು ಸತ್ಯವೆಂದು ಮನವರಿಕೆಯಾಯಿತು (೨೨–೨೩). ಬ್ರಹ್ಮನು ಕುಂಭಕರ್ಣನನ್ನು ನೋಡಿ 'ಎಲೈ, ಲೋಕವಿನಾಶಕ್ಕಾಗಿಯೇ ವಿಶ್ರವಸ್ಸು ನಿನ್ನನ್ನು ಸೃಜಿಸಿರಬೇಕು ! ಈ ದಿನದಿಂದ ನೀನು ಸತ್ತವನಂತೆ ಬಿದ್ದು ಸದಾ ನಿದ್ರಿಸುತ್ತಿರು!' ಎಂದು ಆಕ್ರೋಶದಿಂದ ಹೇಳಿಬಿಟ್ಟನು (೨೪). ಒಡನೆಯೇ ಬ್ರಹ್ಮಶಾಪದಿಂದ* ಕುಂಭಕರ್ಣನು ಅವನೆದುರಿಗೇ ನಿದ್ರಾವಶ

---

* ಇದೆಲ್ಲವೂ ಕುಂಭಕರ್ಣನು ಬೆಳೆದು ತಪಸ್ಸು ಮಾಡಿದಮೇಲೆ ಸಂಭವಿಸಿದ ವೃತ್ತಾಂತ ತಪಸ್ಸು ಮುಗಿದಮೇಲೆ ಬ್ರಹ್ಮಶಾಪ. ನಿದ್ರಿಸುವವನಿಗೆ ತಪಸ್ಸು ಮಾಡಲು ಶಕ್ಯವಾದ್ದಲ್ಲ

ವಿವೃದ್ಧಃ ಕಾಂಚನೋ ವೃಕ್ಷಃ ಫಲಕಾಲೇ ನಿಕೃತ್ಯತೇ ।
ನ ನಪ್ತಾರಂ ಸ್ವಕಂ ನ್ಯಾಯ್ಯಂ ಶಪ್ತುಮೇವಂ ಪ್ರಜಾಪತೇ ॥ ೨೬

ನ ಮಿಥ್ಯಾವಚನಶ್ಚ ತ್ವಂ ಸ್ವಪ್ಸ್ಯತ್ಯೇಷ ನಸಂಶಯಃ ।
ಕಾಲಸ್ತು ಕ್ರಿಯತಾಮಸ್ಯ ಶಯನೇ ಜಾಗರೇ ತಥಾ ॥ ೨೭

ರಾವಣಸ್ಯ ವಚಃ ಶ್ರುತ್ವಾ ಸ್ವಯಂಭೂರಿದಮಬ್ರವೀತ್ ।
ಶಯಿತಾ ಹ್ಯೇಷ ಷಣ್ಮಾಸಾನೇಕಾಹಂ ಜಾಗರಿಷ್ಯತಿ ॥ ೨೮

ಏಕೇನಾಹ್ನಾ ತ್ವಸೌ ವೀರಶ್ಚರನ್ ಭೂಮಿಂ ಬುಭುಕ್ಷಿತಃ ।
ವ್ಯಾತ್ತಾಸ್ಯೋ ಭಕ್ಷಯೇಲ್ಲೋಕಾನ್ ಸಂಕ್ರುದ್ಧ ಇವ ಪಾವಕಃ ॥ ೨೯

ಸೋಽಸೌ ವ್ಯಸನಮಾಪನ್ನಃ ಕುಂಭಕರ್ಣಮಬೋಧಯತ್ ।
ತ್ವತ್ಪರಾಕ್ರಮಭೀತಶ್ಚ ರಾಜಾ ಸಂಪ್ರತಿ ರಾವಣಃ ॥ ೩೦

---

ನಾಗಿ ಬಿದ್ದು ಹೋದನು. ಆಗ ರಾವಣನು ಬಹಳ ವಿಷಣ್ಣನಾಗಿ ಬ್ರಹ್ಮನನ್ನು ಕುರಿತು 'ಭಗವನ್, ಬಂಗಾರದಂತಹ ಉತ್ತಮವೃಕ್ಷವನ್ನು ಸಾಕಿ ಬೆಳೆಸಿ, ಅದು ಹಣ್ಣು ಬಿಡುವ ಕಾಲದಲ್ಲಿ ಕಡಿದುಹಾಕಿದಂತಾಯಿತು ! ನಿನ್ನ ಮೊಮ್ಮಗನಿಗೆ ನೀನೇ ಈ ರೀತಿಯಲ್ಲಿ ಶಾಪನ್ನೀಯುವುದು ನ್ಯಾಯವೆ? (೨೫–೨೬) ಆದರೆ ನೀನಾಡಿದ ವಚನವು ಸತ್ಯವಾಗಲೇಬೇಕು. ಅದ್ದರಿಂದ ಕುಂಭಕರ್ಣನು ನಿದ್ರಿಸುವುದಕ್ಕೂ ಎಚ್ಚರವಾಗಿರುವುದಕ್ಕೂ ಒಂದು ಕಾಲನಿಯಮವನ್ನಾದರೂ ಗೊತ್ತುಮಾಡು' ಎಂದು ಪ್ರಾರ್ಥಿಸಿದನು (೨೭). ರಾವಣನ ಪ್ರಾರ್ಥನೆ ಯನ್ನಾಲಿಸಿ ಬ್ರಹ್ಮನು 'ಹಾಗಾದರೆ, ರಾವಣ, ಈ ಕುಂಭಕರ್ಣನು ಒಂದು ಸಲಕ್ಕೆ ಆರುತಿಂಗಳವರೆಗೆ ನಿದ್ರಿಸುತ್ತಿರಲಿ, ಅನಂತರ ಒಂದು ದಿನ ಮಾತ್ರ ಜಾಗ್ರತನಾಗಿರಲಿ (೨೮). ಭೂಮಂಡಲವನ್ನು ಸುತ್ತಿ ಜೀವಜಾತಗಳನ್ನು ತಿಂದು ಮುಕ್ಕಲು ಇವನಿಗೆ ಒಂದು ದಿನ ಸಾಕು! ಹಸಿದಿರುವಾಗ ಇವನು ಬಾಯ್ದೆರೆಂದು ಹೊರಟರೆ, ಪ್ರಜ್ವಲಿಸುವ ಅಗ್ನಿಯಂತೆ, ಬಳಿಯಲ್ಲಿರುವದನ್ನೆಲ್ಲಾ ಕಬಳಿಸುತ್ತ ಹೋಗುವನು' ಎಂದು ತಿಳಿಸಿದನು (೨೯). ಶ್ರೀರಾಮ, ಇದುವರೆಗೆ ಕುಂಭಕರ್ಣನು ನಿದ್ರೆಯಲ್ಲಿದ್ದನು. ರಾವಣನು ನಿನ್ನ ಪರಾಕ್ರಮಕ್ಕೆ ಅಂಜಿ ಕಷ್ಟಕಾಲಕ್ಕೆ ಸಿಕ್ಕಿಕೊಂಡಿರುವುದರಿಂದ ಈತನನ್ನು ಎಬ್ಬಿಸಿದ್ದಾನೆ !

ಸ ಏಷ ನಿರ್ಗತೋ ವೀರಃ ಶಿಬಿರಾದ್ಭೀಮವಿಕ್ರಮಃ ।
ವಾನರಾನ್ ಭೃಶಸಂಕ್ರುದ್ಧೋ ಭಕ್ಷಯನ್ ಪರಿಧಾವತಿ ॥ ೩೧

ಕುಂಭಕರ್ಣಂ ಸಮೀಕ್ಷ್ಯೈವ ಹರಯೋಽದ್ಯ ಪ್ರವಿದ್ರುತಾಃ ।
ಕಥಮೇನಂ ರಣೇ ಕ್ರುದ್ಧಂ ವಾರಯಿಷ್ಯಂತಿ ವಾನರಾಃ ॥ ೩೨

ಉಚ್ಯಂತಾಂ ವಾನರಾಃ ಸರ್ವೇ ಯಂತ್ರಮೇತತ್ಸಮುಚ್ಛ್ರಿತಮ್ ।
ಇತಿ ವಿಜ್ಞಾಯ ಹರಯೋ ಭವಿಷ್ಯಂತೀಹ ನಿರ್ಭಯಾಃ ॥ ೩೩

ವಿಭೀಷಣವಚಃ ಶ್ರುತ್ವಾ ಹೇತುಮತ್ಸುಮುಖೇರಿತಮ್ ।
ಉವಾಚ ರಾಘವೋ ವಾಕ್ಯಂ ನೀಲಂ ಸೇನಾಪತಿಂ ತದಾ ॥ ೩೪

ಗಚ್ಛ ಸೈನ್ಯಾನಿ ಸರ್ವಾಣಿ ವ್ಯೂಹ್ಯ ತಿಷ್ಠಸ್ವ ಪಾವಕೇ ।
ದ್ವಾರಾಣ್ಯಾದಾಯ ಲಂಕಾಯಾಶ್ಚರ್ಯಾಶ್ಚಾಪ್ಯಥ ಸಂಕ್ರಮಾನ್ ॥

---

ಭೀಮವಿಕ್ರಮನಾದ ಕುಂಭಕರ್ಣನು ತನ್ನ ನಿವಾಸದಿಂದ ಹೊರಟದ್ದಾನೆ. ಇನ್ನು ಕ್ರುದ್ಧನಾಗಿ ಯುದ್ಧಕ್ಕೆ ಬಂದು ವಾನರಸೈನಿಕರನ್ನು ಭಕ್ಷಿಸುತ್ತ ತಿರುಗಾಡುವನು ! (೩೦–೩೧). ಕುಂಭಕರ್ಣನನ್ನು ದೂರದಲ್ಲಿ ನೋಡಿಯೇ ಕಪಿಗಳು ಓಡುತ್ತಿರುವರಲ್ಲ, ಅವನನ್ನು ರಣರಂಗದಲ್ಲಿ ಇವರು ಅಡ್ಡಗಟ್ಟಬಲ್ಲರೆ? ಶ್ರೀರಾಮ, (ಈಗೊಂದು ಉಪಾಯವನ್ನು ಹವಣಿಸಬೇಕು.) 'ಲಂಕೆಯಲ್ಲಿ ಕಾಣುತ್ತಿರುವುದು ಒಂದು ಯಂತ್ರ–ಬೆದರುಬೊಂಬೆ! ಅದನ್ನು ಎತ್ತಿ ನಿಲ್ಲಿಸಿದ್ದಾರೆ' ಎಂದು ಸಮಸ್ತ ವಾನರರಿಗೂ ತಿಳಿಸಬೇಕು! ಆಗ ಮಾತ್ರವೇ ವಾನರರಿಗೆ ಹೆದರಿಕೆ ತಪ್ಪುತ್ತದೆ'' ಎಂದು ಹೇಳಿದನು (೩೨–೩೩). ಹೀಗೆ ವಿಭೀಷಣನು ಶಾಂತವಾದ ಮುಖಮುದ್ರೆಯಿಂದಲೇ ಯುಕ್ತಿಯುಕ್ತವಾಗಿ ಹೇಳಲು, ರಾಘವನು ಸೇನಾಪತಿಯಾದ ನೀಲನನ್ನು ಕರೆದು ''ಅಗ್ನಿತನಯ–ನೀಲ, ನೀನು ಹೋಗಿ (ವಿಭೀಷಣನು ಹೇಳಿದಂತೆ ವಾನರರನ್ನು ಸಂತೈಸಿ) ಸಕಲಸೇನೆಯನ್ನೂ ಶಿಸ್ತಿನಿಂದ ನಿಲ್ಲಿಸು. ಲಂಕೆಯ ದ್ವಾರಗಳಲ್ಲಿಯೂ ಕೋಟೆಯಮೇಲೆ ಇರುವ ಚರ್ಯಾಗೃಹಗಳ ಎದುರಿಗೂ ಕಂದಕಗಳನ್ನು ದಾಟುವ ಸೇತುವೆಗಳ ಬಳಿಯಲ್ಲಿಯೂ ಯೋಧರನ್ನು ಒಟ್ಟುಗೂಡಿಸು (೩೪–೩೫).

ಶೈಲಶೃಂಗಾಣಿ ವೃಕ್ಷಾಂಶ್ಚ ಶಿಲಾಶ್ಚಾಪ್ಯುಪಸಂಹರ ।
ತಿಷ್ಠಂತು ವಾನರಾಃ ಸರ್ವೇ ಸಾಯುಧಾಃ ಶೈಲಪಾಣಯಃ ॥ ೩೬

ರಾಘವೇಣ ಸಮಾದಿಷ್ಟೋ ನೀಲೋ ಹರಿಚಮೂಪತಿಃ ।
ಶಶಾಸ ವಾನರಾನೀಕಂ ಯಥಾವತ್ಕಪಿಕುಂಜರಃ ॥ ೩೭

ತತೋ ಗವಾಕ್ಷಃ ಶರಭೋ ಹನುಮಾನಂಗದಸ್ತಥಾ ।
ಶೈಲಶೃಂಗಾಣಿ ಶೈಲಾಭಾ ಗೃಹೀತ್ವಾ ದ್ವಾರಮಭ್ಯಯುಃ ॥ ೩೮

ರಾಮವಾಕ್ಯಮುಪಶ್ರುತ್ಯ ಹರಯೋ ಜಿತಕಾಶಿನಃ ।
ಪಾದಪೈರರ್ದಯನ್ ವೀರಾ ವಾನರಾಃ ಪರವಾಹಿನೀಮ್॥ ೩೯

ತತೋ ಹರೀಣಾಂ ತದನೀಕಮುಗ್ರಂ
ರರಾಜ ಶೈಲೋದ್ಯತದೀಪ್ತಹಸ್ತಮ್ ।
ಗಿರೇಃ ಸಮೀಪಾನುಗತಂ ಯಥೈವ
ಮಹನ್ಮಹಾಂಭೋಧರಜಾಲಮುಗ್ರಮ್ ॥ ೪೦

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕಷಷ್ಟಿತಮಃ ಸರ್ಗಃ

---

ಶೈಲಶೃಂಗಗಳನ್ನೂ ವೃಕ್ಷಗಳನ್ನೂ ಬಂಡೆಗಳನ್ನೂ ತರಿಸಿ ರಾಶಿಮಾಡಿಸು. ಸಮಸ್ತ ಕಪಿಯೋಧರೂ ತಮ್ಮ ತಮ್ಮ ಆಯುಧಗಳನ್ನೂ ಗಿರಿಶಿಖರಗಳನ್ನೂ ಹಿಡಿದು ಸನ್ನದ್ಧರಾಗಿ ನಿಲ್ಲಲಿ '' ಎಂದು ಆದೇಶವನ್ನಿತ್ತನು (೩೬). ಸೇನಾಪತಿಯಾದ ಆ ಕಪಿಕುಂಜರನು ಶ್ರೀರಾಮನ ಆಜ್ಞೆಯಂತೆ ವಾನರಸೇನೆಗೆ ಎಲ್ಲವನ್ನೂ ತಿಳಿಸಿ ವ್ಯವಸ್ಥೆಮಾಡಿದನು. ಪರ್ವತಾಕಾರನಾದ ಗವಾಕ್ಷ, ಶರಭ, ಹನುಮಂತ, ಅಂಗದರು ಪರ್ವತಶಿಖರಗಳನ್ನು ಹಿಡಿದು, ಲಂಕೆಯ ವಿವಿಧ ದ್ವಾರಗಳತ್ತ ಹೋಗಿ ನಿಂತರು (೩೭–೩೮). ಶ್ರೀರಾಮನ ಆಜ್ಞೆಯಂತೆ ಪರಾಕ್ರಮಿಗಳಾದ ವಾನರವೀರರು ವೃಕ್ಷಗಳನ್ನು ಹೊತ್ತುನಿಂತು ಶತ್ರುಪಕ್ಷವನ್ನು ಮರ್ದಿಸಬೇಕೆಂದು ಕಾಯುತ್ತಿದ್ದರು (೩೯). ಶೈಲಗಳನ್ನು ಧರಿಸಿ ನಿಂತಿದ್ದ ಉಗ್ರವಾದ ಆ ವಾನರಸೇನೆಯು, ಪರ್ವತಗಳನ್ನು ತಾಗಿ ನಿಂತ ವಿಶಾಲವಾದ ಮೇಘಪಂಕ್ತಿಯಂತೆ ಕಂಗೊಳಿಸುತ್ತಿದ್ದಿತು (೪೦).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಅರುವತ್ತೊಂದನೆಯ ಸರ್ಗ

## ದ್ವಿಷಷ್ಟಿತಮಃ ಸರ್ಗಃ

### ರಾವಣಾಭ್ಯರ್ಥನಾ

ಸ ತು ರಾಕ್ಷಸಶಾರ್ದೂಲೋ ನಿದ್ರಾಮದಸಮಾಕುಲಃ ।
ರಾಜಮಾರ್ಗಂ ಶ್ರಿಯಾ ಜುಷ್ಟಂ ಯಯೌ ವಿಪುಲವಿಕ್ರಮಃ ॥ ೧

ರಾಕ್ಷಸಾನಾಂ ಸಹಸ್ರೈಶ್ಚ ವೃತಃ ಪರಮದುರ್ಜಯಃ ।
ಗೃಹೇಭ್ಯಃ ಪುಷ್ಪವರ್ಷೇಣ ಕೀರ್ಯಮಾಣಸ್ತದಾ ಯಯೌ ॥ ೨

ಸ ಹೇಮಜಾಲವಿತತಂ ಭಾನುಭಾಸ್ವರದರ್ಶನಮ್ ।
ದದರ್ಶ ವಿಪುಲಂ ರಮ್ಯಂ ರಾಕ್ಷಸೇಂದ್ರನಿವೇಶನಮ್ ॥ ೩

ಸ ತತ್ತದಾ ಸೂರ್ಯ ಇವಾಭ್ರಜಾಲಂ
ಪ್ರವಿಶ್ಯ ರಕ್ಷೋಽಧಿಪತೇರ್ನಿವೇಶಮ್।
ದದರ್ಶ ದೂರೇಽಗ್ರಜಮಾಸನಸ್ಥಂ
ಸ್ವಯಂಭುವಂ ಶಕ್ರ ಇವಾಸನಸ್ಥಮ್ ॥ ೪

### ಸರ್ಗ ೬೨

ವಾನರಸೇನೆಯ ಸಂಹರಿಸಿ ತನಗೊದಗಿದ ವಿಪತ್ತನ್ನು ನೀಗಿಸಬೇಕೆಂದು ರಾವಣನು ಕುಂಭಕರ್ಣನನ್ನು ಕೇಳಿಕೊಳ್ಳುವುದು.

ಅತ್ತಲಾಗಿ ರಾಕ್ಷಸಶಾರ್ದೂಲನೂ ಮಹಾಪರಾಕ್ರಮಿಯೂ ಆದ ಕುಂಭಕರ್ಣನು ವೈಭವೋಪೇತವಾದ ರಾಜಮಾರ್ಗದಲ್ಲಿ ನಿದ್ರೆಯ ಜೋಮಿನಿಂದಲೂ ಮದ್ಯದ ಅಮಲಿನಿಂದಲೂ ಮತ್ತನಾಗಿ ಹೋಗುತ್ತಿದ್ದನು. ಸಾವಿರಾರು ಮಂದಿ ರಾಕ್ಷಸಭಟರು ಅವನೊಡನೆ ಸಾಗುತ್ತಿದ್ದರು. ರಾಜಮಾರ್ಗದ ಇಕ್ಕೆಲದಲ್ಲಿರುವ ಸೌಧಗಳಿರುವ ಪುಷ್ಪವೃಷ್ಟಿಯನ್ನು ಪ್ರಜೆಗಳು ಸುರಿಸುತ್ತಿದ್ದರು (೧-೨). ಕುಂಭಕರ್ಣನು ಹಾಗೆಯೇ ಹೋಗುತ್ತ ಮುಂದೆ ರಾಕ್ಷಸೇಂದ್ರನ ರಮ್ಯವೂ ವಿಶಾಲವೂ ಆದ ಅರಮನೆಯನ್ನು ಕಂಡನು. ಅದು ಸುವರ್ಣಮಯ ಗವಾಕ್ಷಗಳಿಂದ ಭೂಷಿತವಾಗಿ ಸೂರ್ಯಮಂಡಲದಂತೆ ವಿರಾಜಿಸುತ್ತಿತ್ತು (೩). ಸೂರ್ಯನು ಮೇಘಮಂಡಲನ್ನು ಪ್ರವೇಶಿಸುವಂತೆ ಕುಂಭಕರ್ಣನು ರಾಜಭವನ

ಭ್ರಾತುಃ ಸ ಭವನಂ ಗಚ್ಛನ್ ರಕ್ಷೋಗಣಸಮನ್ವಿತಮ್ ।
ಕುಂಭಕರ್ಣಃ ಪದನ್ಯಾಸೈರಕಂಪಯತ ಮೇದಿನೀಮ್ ॥ ೫

ಸೋಽಭಿಗಮ್ಯ ಗೃಹಂ ಭ್ರಾತುಃ ಕಕ್ಷ್ಯಾಮಭಿವಿಗಾಹ್ಯ ಚ ।
ದದರ್ಶೋದ್ವಿಗ್ನಮಾಸೀನಂ ವಿಮಾನೇ ಪುಷ್ಪಕೇ ಗುರುಮ್ ॥ ೬

ಅಥ ದೃಷ್ಟ್ವಾ ದಶಗ್ರೀವಃ ಕುಂಭಕರ್ಣಮುಪಸ್ಥಿತಮ್ ।
ತೂರ್ಣಮುತ್ಥಾಯ ಸಂಹೃಷ್ಟಃ ಸಂನಿಕರ್ಷಮುಪಾನಯತ್ ॥ ೭

ಅಥಾಸೀನಸ್ಯ ಪರ್ಯಂಕೇ ಕುಂಭಕರ್ಣೋ ಮಹಾಬಲಃ ।
ಭ್ರಾತುರ್ವವಂದೇ ಚರಣೌ ಕಿಂ ಕೃತ್ಯಮಿತಿ ಚಾಬ್ರವೀತ್ ॥ ೮

ಉತ್ಪತ್ಯ ಚೈನಂ ಮುದಿತೋ ರಾವಣಃ ಪರಿಷಸ್ವಜೇ ।
ಸ ಭ್ರಾತ್ರಾ ಸಂಪರಿಷ್ವಕ್ತೋ ಯಥಾವಚ್ಚಾಭಿನಂದಿತಃ ॥ ೯

ಕುಂಭಕರ್ಣಃ ಶುಭಂ ದಿವ್ಯಂ ಪ್ರತಿಪೇದೇ ವರಾಸನಮ್ ।
ಸ ತದಾಸನಮಾಶ್ರಿತ್ಯ ಕುಂಭಕರ್ಣೋ ಮಹಾಬಲಃ ॥ ೧೦

---

ವನ್ನು ಪ್ರವೇಶಿಸಿ, ಸಿಂಹಾಸನದಲ್ಲಿ ಮಂಡಿಸಿದ್ದ ರಾವಣನನ್ನು ದೂರದಲ್ಲಿ ಕಂಡನು. ದೇವೇಂದ್ರನು ಬ್ರಹ್ಮದೇವನನ್ನು ಹೋಗಿ ನೋಡುವಂತೆ ರಾವಣನನ್ನು ನೋಡಿದನು (೪). ಕುಂಭಕರ್ಣನು ತನ್ನ ಅಣ್ಣನ ಅರಮನೆಯನ್ನು ಪ್ರವೇಶಿಸುವಾಗ, ಅವನ ಹೆಜ್ಜೆಗಳ ಅಬ್ಬರಕ್ಕೆ ಭೂಮಿಯು ಕಂಪಿಸುತ್ತಿತ್ತು ! ಅವನು ಅರಮನೆಯ ಅನೇಕ ಕಕ್ಷ್ಯಗಳನ್ನು ದಾಟಿಹೋಗಿ, ಪುಷ್ಪಕವಿಮಾನದಲ್ಲಿ ವಿಷಣ್ಣನಾಗಿ ಕುಳಿತಿದ್ದ ತನ್ನ ಅಣ್ಣನನ್ನು ಸಂದರ್ಶಿಸಿದನು (೫–೬). ಕುಂಭಕರ್ಣನನ್ನು ಕಂಡೊಡನೆ ದಶಗ್ರೀವನು ಹರ್ಷದಿಂದ ಥಟ್ಟನೆ ಎದ್ದು ನಿಂತು, ಅವನನ್ನು ತನ್ನ ಬಳಿಗೆ ಬರಮಾಡಿಕೊಂಡನು. ರಾವಣನು ಮತ್ತೆ ತನ್ನ ಪೀಠದಲ್ಲಿ ಕುಳಿತುಕೊಳ್ಳಲು, ಕುಂಭಕರ್ಣನು ಸಮೀಪಕ್ಕೆ ಹೋಗಿ ಅಣ್ಣನ ಪಾದಗಳಿಗೆ ವಂದಿಸಿ "ಅಣ್ಣ ನಾನು ಮಾಡಬೇಕಾದ ಕಾರ್ಯವೇನು?" ಎಂದು ಕೇಳಿದನು (೭–೮). ಆಗ ರಾವಣನು ಸಂಪ್ರೀತನಾಗಿ ಎದ್ದು ಬಂದು ಕುಂಭಕರ್ಣನನ್ನು ಆಲಿಂಗಿಸಿಕೊಂಡು ಉಚಿತರೀತಿಯಲ್ಲಿ ಆದರಿಸಿದನು. ಅನಂತರ ಕುಂಭಕರ್ಣನು ಸುಂದರವಾದ ಒಂದು ದಿವ್ಯಾಸನದಲ್ಲಿ ಕುಳಿತನು.

ಸಂರಕ್ತನಯನಃ ಕೋಪಾದ್ರಾವಣಂ ವಾಕ್ಯಮಬ್ರವೀತ್ ।
ಕಿಮರ್ಥಮಹಮಾದೃತ್ಯ ತ್ವಯಾ ರಾಜನ್ ವಿಬೋಧಿತಃ ॥ ೧೧

ಶಂಸ ಕಸ್ಮಾದ್ಭಯಂ ತೇऽಸ್ತಿ ಕೋऽದ್ಯ ಪ್ರೇತೋ ಭವಿಷ್ಯತಿ ।
ಭ್ರಾತರಂ ರಾವಣಃ ಕ್ರುದ್ಧಂ ಕುಂಭಕರ್ಣಮವಸ್ಥಿತಮ್ ॥ ೧೨

ಈಷತ್ತು ಪರಿವೃತ್ತಾಭ್ಯಾಂ ನೇತ್ರಾಭ್ಯಾಂ ವಾಕ್ಯಮಬ್ರವೀತ್ ।
ಅದ್ಯ ತೇ ಸುಮಹಾನ್ ಕಾಲಃ ಶಯಾನಸ್ಯ ಮಹಾಬಲ ॥ ೧೩

ಸುಖಿತಸ್ತ್ವಂ ನ ಜಾನೀಷೇ ಮಮ ರಾಮಕೃತಂ ಭಯಮ್ ।
ಏಷ ದಾಶರಥೀ ರಾಮಃ ಸುಗ್ರೀವಸಹಿತೋ ಬಲೀ ॥ ೧೪

ಸಮುದ್ರಂ ಸಬಲಸ್ತೀರ್ತ್ವಾ ಮೂಲಂ ನಃ ಪರಿಕೃಂತತೀ ।
ಹಂತ ಪಶ್ಯಸ್ವ ಲಂಕಾಯಾಂ ವನಾನ್ಯುಪವನಾನಿ ಚ ॥ ೧೫

ಸೇತುನಾ ಸುಖಮಾಗಮ್ಯ ವಾನರೈಕಾರ್ಣವಂ ಕೃತಮ್ ।
ಯೇ ರಕ್ಷಸಾಂ ಮುಖ್ಯತಮಾ ಹತಾಸ್ತೇ ವಾನರೈರ್ಯುಧಿ ॥ ೧೬

---

ಅವನ ಕಣ್ಣುಗಳು ಕೆಂಪಡರಿದ್ದವು. ಕೋಪದಿಂದಲೇ ಅವನು ರಾವಣನನ್ನು ಕುರಿತು "ಮಹಾರಾಜ, ಇಷ್ಟೊಂದು ಆಸಕ್ತಿಯನ್ನು ವಹಿಸಿ ನನ್ನನ್ನೆಬ್ಬಿಸಲು ಕಾರಣವೇನು ? (೯–೧೧). ಯಾರಿಂದ ನಿನಗೆ ಭಯವುಂಟಾಗಿದೆ? ನನ್ನ ಕೈಯಿಂದ ಯಾರು ಸಾಯಬೇಕಾಗಿದೆ ! ಹೇಳು" ಎಂದು ಕೇಳಿದನು. ತಮ್ಮನು ಸಿಟ್ಟಾಗಿರುವುದನ್ನು ತಿಳಿದು ರಾವಣನ ಕಣ್ಣಾಲಿಗಳು ಕೊಂಚ ತಿರುಗಿದವು ! ಅವನು ಕುಂಭಕರ್ಣನನ್ನು ನೋಡುತ್ತ "ಮಹಾಬಲ–ಕುಂಭಕರ್ಣ, ಬಹುದಿನ ಗಳಿಂದ ನೀನು ಮಲಗಿಬಿಟ್ಟಿದ್ದೀಯೆ! (೧೨–೧೩). ರಾಮನಿಂದ ನಿನಗೆ ಸಂಭವಿಸಿದ ಭಯವೇನೆಂಬುದು ಸುಖವಾಗಿ ಮಲಗಿದ್ದ ನಿನಗೆ ತಿಳಿಯದು. ದಶರಥಾತ್ಮಜನಾದ ರಾಮನು ಸುಗ್ರೀವಸಹಿತನಾಗಿ ಬಂದಿದ್ದಾನೆ. ಅವನು ಬಲಶಾಲಿಯೇ ಹೌದು ! ವಾನರಸೇನೆಯೊಡನೆ ಸಮುದ್ರವನ್ನು ದಾಟಿಬಂದು ನಮ್ಮ ಬುಡವನ್ನೇ ಕೊರೆಯುತ್ತಿದ್ದಾನೆ. ಏನು ಹೇಳಲಿ, ನೋಡು ! ಸೇತುವೆ ಯನ್ನು ಕಟ್ಟಿ ದಾಟಿಬಂದು ಲಂಕಾಪರಿಸರದಲ್ಲಿರುವ ವನೋಪವನಗಳೆಲ್ಲವನ್ನೂ ವಾನರಮಯವಾದ ಸಮುದ್ರವನ್ನಾಗಿ ಮಾಡಿಬಿಟ್ಟಿದ್ದಾನೆ! (೧೪–೧೫). ನಮ್ಮ ರಾಕ್ಷಸರಲ್ಲಿ ಮುಖ್ಯರಾದ ಯೋಧರು ಯುದ್ಧದಲ್ಲಿ ಹತರಾದರು.

ವಾನರಾಣಾಂ ಕ್ಷಯಂ ಯುದ್ಧೇ ನ ಪಶ್ಯಾಮಿ ಕದಾಚನ ।
ನ ಚಾಪಿ ವಾನರಾ ಯುದ್ಧೇ ಜಿತಪೂರ್ವಾಃ ಕದಾಚನ ॥ ೧೭

ತದೇತದ್ಭಯಮುತ್ಪನ್ನಂ ತ್ರಾಯಸ್ವೇಹ ಮಹಾಬಲ ।
ನಾಶಯ ತ್ವಮಿಮಾನದ್ಯ ತದರ್ಥಂ ಬೋಧಿತೋ ಭವಾನ್ ॥ ೧೮

ಸರ್ವಕ್ಷಪಿತಕೋಶಂ ಚ ಸ ತ್ವಮಭ್ಯವಪದ್ಯ ಮಾಮ್ ।
ತ್ರಾಯಸ್ವೇಮಾಂ ಪುರೀಂ ಲಂಕಾಂ ಬಾಲವೃದ್ಧಾವಶೇಷಿತಾಮ್ ॥ ೧೯

ಭ್ರಾತುರರ್ಥೇ ಮಹಾಬಾಹೋ ಕುರು ಕರ್ಮ ಸುದುಷ್ಕರಮ್ ।
ಮಯ್ಯೈವಂ ನೋಕ್ತಪೂರ್ವೋ ಹಿ ಕಚ್ಚಿದ್ಭ್ರಾತಃ ಪರಂತಪ ॥ ೨೦

ತ್ವಯ್ಯಸ್ತಿ ತು ಮಮ ಸ್ನೇಹಃ ಪರಾ ಸಂಭಾವನಾ ಚ ಮೇ ।
ದೈವಾಸುರೇಷು ಯುದ್ಧೇಷು ಬಹುಶೋ ರಾಕ್ಷಸರ್ಷಭ ॥ ೨೧

ತ್ವಯಾ ದೇವಾಃ ಪ್ರತಿವ್ಯೂಹ್ಯ ನಿರ್ಜಿತಾಶ್ಚಾಸುರಾಯುಧಿ ।
ತದೇತತ್ಸರ್ವಮಾತಿಷ್ಠ ವೀರ್ಯಂ ಭೀಮಪರಾಕ್ರಮ ॥ ೨೨

---

ವಾನರಸೇನೆಯು ಮಾತ್ರ ಯುದ್ಧದಲ್ಲಿ ಕ್ಷೀಣವಾಗುವ ಲಕ್ಷಣವೇ ಕಾಣಿಸುವುದಿಲ್ಲ. ಇಷ್ಟು ದಿನಗಳ ಹೊಡೆದಾಟದಲ್ಲಿ ಅವರು ಸೋತಿರುವ ಪ್ರಸಂಗವೇ ಇಲ್ಲ (೧೬–೧೭). ಓ ಪರಾಕ್ರಮಿ–ಕುಂಭಕರ್ಣ, ಇದೇ ನಮಗೆ ಒದಗಿರುವ ಭಯ. ನಮ್ಮನ್ನು ಉಳಿಸು. ಈ ವಾನರರನ್ನು ಸಂಹರಿಸು. ಇದಕ್ಕಾಗಿಯೇ ನಿನ್ನನ್ನು ಎಬ್ಬಿಸಬೇಕಾಯಿತು. ನನ್ನ ಸರ್ವಸ್ವವೂ ನಾಶವಾಗುವ ಸಂದರ್ಭ ಸಂಭವಿಸಿತು. ಲಂಕೆಯಲ್ಲಿ ಹುಡುಗರು ಮುದುಕರು ಮಾತ್ರವೇ ಉಳಿದಿದ್ದಾರೆ. ನನಗೆ ಅವಲಂಬನೆಯನ್ನಿತ್ತು ಈ ರಾಜಧಾನಿಯನ್ನು ರಕ್ಷಿಸು (೧೮–೧೯). ತಮ್ಮ, ನೀನು ಶೂರಾಗ್ರೇಸರನಾಗಿದ್ದೀಯೆ. ನಿನ್ನ ಅಣ್ಣನಿಗೋಸ್ಕರ ಇದೊಂದು ಮಹಾಕಾರ್ಯವನ್ನು ವಹಿಸಿಕೊ. ವತ್ಸ–ಕುಂಭಕರ್ಣ, ಈ ರೀತಿಯಲ್ಲಿ ನಾನು ಎಂದಾದರೂ ನಿನಗೆ ಹೇಳಿದ್ದುಂಟೆ? (೨೦). ನಿನ್ನ ವಿಷಯದಲ್ಲಿ ನನಗೆ ಅತ್ಯಂತ ಪ್ರೀತಿಗೌರವಗಳುಂಟು. ಹಿಂದೆ ನಡೆದ ದೇವಾಸುರ ಯುದ್ಧಗಳಲ್ಲಿ ದೇವತೆಗಳನ್ನೂ ಅಸುರರನ್ನೂ ಸೋಲಿಸಿ ಓಡಿಸಿದ್ದೀಯೆ. ಆದ್ದರಿಂದ ಮಹಾಪರಾಕ್ರಮಿಯಾದ ನೀನು ನಿನ್ನ ಸಾಮರ್ಥ್ಯವೆಲ್ಲವನ್ನೂ

ನ ಹಿ ತೇ ಸರ್ವಭೂತೇಷು ದೃಶ್ಯತೇ ಸದೃಶೋ ಬಲೀ ॥

ಕುರುಷ್ವ ಮೇ ಪ್ರಿಯಹಿತಮೇತದುತ್ತಮಂ
ಯಥಾಪ್ರಿಯಂ ಪ್ರಿಯರಣ ಬಾಂಧವಪ್ರಿಯ ॥
ಸ್ವತೇಜಸಾ ವಿಧಮ ಸಪತ್ನವಾಹಿನೀಂ
ಶರದ್ಘನಂ ಪವನ ಇವೋದ್ಯತೋ ಮಹಾನ್ ॥ ೨೩

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವಿಷಷ್ಟಿತಮಃ ಸರ್ಗಃ

---

ಈಗ ಪ್ರದರ್ಶಿಸಬೇಕಾಗಿ ಬಂದಿದೆ. ಸಕಲ ಜೀವಜಾತಗಳಲ್ಲಿಯೂ ನಿನಗೆ ಸರಿದೂಗುವ ಇನ್ನೊಬ್ಬ ಬಲಾಢ್ಯನನ್ನು ನಾನು ಕಂಡಿಲ್ಲ (೨೧–೨೨) ಕುಂಭಕರ್ಣ, ಯುದ್ಧವೆಂದರೆ ನಿನಗೆ ಬಹಳ ಪ್ರೀತಿ. ಬಂಧುಗಳಲ್ಲಿ ಅತಿಶಯವಾದ ಮಮತೆ ನಿನಗುಂಟು. ನನಗೆ ಪ್ರಿಯವಾಗಿಯೂ ಹಿತಕರವಾಗಿಯೂ ಇರುವ ಈ ಕಾರ್ಯಭಾರವನ್ನು ನೀನು ನಡೆಸಿಕೊಡಬೇಕು. ನಮಗಿರುವ ಅನ್ಯೋನ್ಯವಾದ ಪ್ರೀತಿಗೆ ಅನುಗುಣವಾಗಿ ಈ ಕಾರ್ಯವನ್ನು ಸಾಧಿಸು. ನಿನ್ನ ತೇಜೋಮಹಿಮೆಯಿಂದ ಶತ್ರುಸೇನೆಯನ್ನು ವಿಧ್ವಂಸಗೊಳಿಸು. ಬಿರುಗಾಳಿಯು ಶರತ್ಕಾಲದ ಮೋಡವನ್ನು ಚದುರಿಸುವಂತೆ, ಈ ಕಪಿಸೇನೆಯನ್ನು ಹೊಡೆದೋಡಿಸು'' ಎಂದನು (೨೩).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಅರವತ್ತೆರಡನೆಯ ಸರ್ಗ

---

## ತ್ರಿಷಷ್ಟಿತಮಃ ಸರ್ಗಃ

ಕುಂಭಕರ್ಣಾನುಶೋಕಃ

**ತಸ್ಯ ರಾಕ್ಷಸರಾಜಸ್ಯ ನಿಶಮ್ಯ ಪರಿದೇವಿತಮ್ ।**
**ಕುಂಭಕರ್ಣೋ ಬಭಾಷೇಽಥ ವಚನಂ ಪ್ರಜಹಾಸ ಚ ॥** ೧

**ದೃಷ್ಟೋ ದೋಷೋ ಹಿ ಯೋಽಸ್ಮಾಭಿಃ ಪುರಾ ಮಂತ್ರವಿನಿರ್ಣಯೇ**
**ಹಿತೇಷ್ವನಭಿರಕ್ತೇನ ಸೋಽಯಮಾಸಾದಿತಸ್ತ್ವಯಾ ॥** ೨

**ಶೀಘ್ರಂ ಖಲ್ವಭ್ಯುಪೇತಂ ತ್ವಾಂ ಫಲಂ ಪಾಪಸ್ಯ ಕರ್ಮಣಃ ।**
**ನಿರಯೇಷ್ವೇವ ಪತನಂ ಯಥಾ ದುಷ್ಕೃತಕರ್ಮಣಃ ॥** ೩

**ಪ್ರಥಮಂ ವೈ ಮಹಾರಾಜ ಕೃತ್ಯಮೇತದಚಿಂತಿತಮ್ ।**
**ಕೇವಲಂ ವೀರ್ಯದರ್ಪೇಣ ನಾನುಬಂಧೋ ವಿಚಾರಿತಃ ॥** ೪

### ಸರ್ಗ ೬೩

ದುರ್ಮಾರ್ಗದಲ್ಲಿ ನಡೆದುದರಿಂದ ಈ ವಿಪತ್ತು ಸಂಭವಿಸಿತೆಂದು
ಕುಂಭಕರ್ಣನು ಹೇಳುವುದು. ರಾವಣನ ಅಸಮಾಧಾನ.
ಯುದ್ಧ ಮಾಡುವುದಾಗಿ ಕುಂಭಕರ್ಣನ ನಿಶ್ಚಯ.

ರಾಕ್ಷಸೇಂದ್ರನ ಈ ಗೋಳಾಟವನ್ನು ಕೇಳಿ ಕುಂಭಕರ್ಣನು ಗಟ್ಟಿಯಾಗಿ ನಕ್ಕು ಹೀಗೆಂದನು : ''ಅಣ್ಣ, ಹಿಂದೆ ನಾವು ಮಂತ್ರಾಲೋಚನೆ ಮಾಡುವಾಗ, ಯಾವ ವಿಪತ್ತು ಮುಂದೆ ಸಂಭವಿಸಬಹುದೆಂದು ಊಹಿಸಿದ್ದೆವೋ ಅದೇ ಈಗ ಪ್ರಾಪ್ತವಾಯಿತು. ಬುದ್ಧಿವಾದವನ್ನು ಅಲಕ್ಷಿಸಿ, ನೀನಾಗಿ ಈ ಸಂಕಟವನ್ನು ತಂದುಕೊಂಡಿದ್ದೀಯೆ (೧–೨). ಪಾಪಕರ್ಮದ ಫಲವು ಬಹುಬೇಗನೆ ಬಂದು ನಿನಗೆ ಗಂಟುಬಿದ್ದಿತು. ದುಷ್ಕಾರ್ಯಮಾಡಿದವನು ನರಕದಲ್ಲಿ ಬೀಳಲೇಬೇಕು! ಮಹಾರಾಜ, ಮೊದಲು ಸೀತೆಯನ್ನಪಹರಿಸುವಾಗ, ಇದು ಯುಕ್ತವೆ–ಅಯುಕ್ತವೆ ಎಂಬುದನ್ನು ನೀನು ಚಿಂತಿಸಲೇ ಇಲ್ಲ. ಅನಂತರ ಅದರ ಪರಿಣಾಮವೇನಾದೀತೆಂಬುದನ್ನೂ ನೀನು ಆಲೋಚಿಸಲಿಲ್ಲ. ಬರಿಯ ವೀರ್ಯ ದರ್ಪದಿಂದ ಇದೆಲ್ಲವನ್ನೂ ನಡೆಸಿಬಿಟ್ಟಿದ್ದೀಯೆ (೩–೪).

ಯಃ ಪಶ್ಚಾತ್ಪೂರ್ವಕಾರ್ಯಾಣಿ ಕುರ್ಯಾದೈಶ್ವರ್ಯಮಾಸ್ಥಿತಃ ।
ಪೂರ್ವಂ ಚೋತ್ತರಕಾರ್ಯಾಣಿ ನ ಸ ವೇದ ನಯಾನಯೌ ॥ ೫

ದೇಶಕಾಲವಿಹೀನಾನಿ ಕರ್ಮಾಣಿ ವಿಪರೀತವತ್ ।
ಕ್ರಿಯಮಾಣಾನಿ ದುಷ್ಯಂತಿ ಹವೀಂಷ್ಯ ಪ್ರಯತೇಷ್ವಿವ ॥ ೬

ತ್ರಯಾಣಾಂ ಪಂಚಧಾ ಯೋಗಂ ಕರ್ಮಣಾಂ ಯಃ ಪ್ರಪಶ್ಯತಿ ।
ಸಚಿವೈಃ ಸಮಯಂ ಕೃತ್ವಾ ಸ ಸಭ್ಯೇ ವರ್ತತೇ ಪಥಿ ॥ ೭

ಯಥಾಗಮಂ ಚ ಯೋ ರಾಜಾ ಸಮಯಂ ವಿಚಿಕೀರ್ಷತಿ ।
ಬುಧ್ಯತೇ ಸಚಿವಾನ್ ಬುದ್ಧ್ಯಾ ಸುಹೃದಶ್ಚಾನುಪಶ್ಯತಿ ॥ ೮

ಧರ್ಮಮರ್ಥಂ ಚ ಕಾಮಂ ಚ ಸರ್ವಾನ್ ವಾ ರಕ್ಷಸಾಂ ಪತೇ ।
ಭಜತೇ ಪುರುಷಃ ಕಾಲೇ ತ್ರೀಣಿ ದ್ವಂದ್ವಾನಿ ವಾ ಪುನಃ ॥ ೯

---

ಯಾವನು ಐಶ್ವರ್ಯಮದದಿಂದ, ಮೊದಲು ಮಾಡಬೇಕಾದ್ದನ್ನು ಕಡೆಗೂ ಕಡೆಗೆ ಮಾಡಬೇಕಾದ್ದನ್ನು ಮೊದಲೂ ಆಚರಿಸುವನೋ ಅವನಿಗೆ ನೀತಿ ಅನೀತಿಗಳೆರಡೂ ಗೊತ್ತಿಲ್ಲವೆಂದೇ ತಿಳಿಯಬೇಕು (೫). ದೇಶಕಾಲಗಳ ಅರಿವಿಲ್ಲದೆ ತಲೆಕೆಳಗಾಗಿ ನಡೆಸುವ ಕಾರ್ಯಗಳು ನಿಷ್ಫಲವಾಗುತ್ತವೆ. ಅಯೋಗ್ಯರು ಅಗ್ನಿಯಲ್ಲರ್ಪಿಸುವ ಹವಿಸ್ಸುಗಳಂತೆ ವ್ಯರ್ಥವಾಗುತ್ತವೆ (೬). ಕ್ಷಯ, ವೃದ್ಧಿ, ಸ್ಥಾನಗಳೆಂಬ ಮೂರು ಬಗೆಯ ಕರ್ತವ್ಯಕರ್ಮಗಳಿಗೆ ಆರಂಭೋಪಾಯವೇ ಮೊದಲಾದ ಐದು ಬಗೆಯ ಸಂಬಂಧವನ್ನು ಕಲ್ಪಿಸಿಕೊಂಡು ಮಂತ್ರಿಗಳೊಡನೆ ವಿಚಾರಮಾಡಿ, ಯಾವನು ಕರ್ತವ್ಯವನ್ನು ನಿರ್ಣಯಿಸಿಕೊಳ್ಳುವನೋ ಅವನು ಸಭ್ಯವಾದ ಮಾರ್ಗದಲ್ಲಿ ನಡೆಯುತ್ತಾನೆಂದು ತಿಳಿಯಬೇಕು* (೭). ಯಾವ ರಾಜನು ನೀತಿಶಾಸ್ತ್ರಾನುಗುಣವಾಗಿ ಕರ್ತವ್ಯವನ್ನು ನಿಶ್ಚಯಿಸುವನೋ ಸಚಿವರೊಡನೆಯೂ ಆಪ್ತಮಿತ್ರರೊಡನೆಯೂ ವಿಚಾರ ವಿನಿಮಯ ಮಾಡುವನೋ ಅವನೇ ಸಭ್ಯಮಾರ್ಗದಲ್ಲಿ ನಡೆಯತಕ್ಕವನು (೮). ರಾಕ್ಷಸೇಂದ್ರ, ಪುರುಷನು ಧರ್ಮಾರ್ಥಕಾಮಗಳಲ್ಲಿ ಯಾವುದಾದರೊಂದನ್ನೇ ಆಗಲಿ, ಜೋಡಿಯನ್ನೇ ಆಗಲಿ ಅಥವಾ ಅವು ಮೂರನ್ನೆ ಆಗಲಿ

---

* ಅನುಬಂಧವನ್ನು ನೋಡಿ

ತ್ರಿಷು ಚೈತೇಷು ಯಚ್ಛ್ರೇಷ್ಠಂ ಶ್ರುತ್ವಾ ತನ್ನಾವಬುಧ್ಯತೇ ।
ರಾಜಾ ವಾ ರಾಜಮಾತ್ರೋ ವಾ ವ್ಯರ್ಥಂ ತಸ್ಯ ಬಹುಶ್ರುತಮ್ ॥ ೧೦

ಉಪಪ್ರದಾನಂ ಸಾಂತ್ವಂ ವಾ ಭೇದಂ ಕಾಲೇ ಚ ವಿಕ್ರಮಮ್ ।
ಯೋಗಂ ಚ ರಕ್ಷಸಾಂ ಶ್ರೇಷ್ಠ ತಾವುಭೌ ಚ ನಯಾನಯೌ ॥ ೧೧

ಕಾಲೇ ಧರ್ಮಾರ್ಥಕಾಮಾನ್ ಯಃ ಸಂಮಂತ್ರ್ಯ ಸಚಿವೈಃ ಸಹ ।
ನಿಷೇವೇತಾತ್ಮವಾನ್ ಲೋಕೇ ನ ಸ ವ್ಯಸನಮಾಪ್ನುಯಾತ್ ॥ ೧೨

ಹಿತಾನುಬಂಧಮಾಲೋಚ್ಯ ಕಾರ್ಯಾಕಾರ್ಯಮಿಹಾತ್ಮನಃ ।
ರಾಜಾ ಸಹಾರ್ಥತತ್ತ್ವಜ್ಞೈಃ ಸಚಿವೈಃ ಸ ಹಿ ಜೀವತಿ ॥ ೧೩

ಅನಭಿಜ್ಞಾಯ ಶಾಸ್ತ್ರಾರ್ಥಾನ್ ಪುರುಷಾಃ ಪಶುಬುದ್ಧಯಃ ।
ಪ್ರಾಗಲ್ಭ್ಯಾದ್ವಕ್ತುಮಿಚ್ಛಂತಿ ಮಂತ್ರೇಷ್ವಭ್ಯಂತರೀಕೃತಾಃ ॥ ೧೪

---

ಸೇವಿಸಬಹುದು. ಆದರೆ ಅದಕ್ಕೆ ಒಂದು ಗೊತ್ತಾದ ಕಾಲವಿರಬೇಕು. ಚಕ್ರವರ್ತಿಯೇ ಆಗಲಿ ಸಾಮಂತರಾಜನೇ ಆಗಲಿ, ಈ ಮೂರು ಪುರುಷಾರ್ಥಗಳಲ್ಲಿ ಧರ್ಮವೇ ಶ್ರೇಷ್ಠವೆಂದು ತಿಳಿಯದಿದ್ದರೆ, ಅವನು ಕಲಿತದ್ದೆಲ್ಲವೂ ವ್ಯರ್ಥವೇ ಸರಿ (೯–೧೦). ಅಣ್ಣ, ಸಾಮ ದಾನ ಭೇದ ದಂಡ–ಇವುಗಳಲ್ಲೊಂದನ್ನಾಗಲಿ ಸಮುದಾಯವನ್ನಾಗಲಿ ಯಾವ ಕಾಲದಲ್ಲಿ ಬಳಸಬೇಕು, ನೀತಿ ಯಾವುದು–ಅನೀತಿ ಯಾವುದು, ಯಾವಾಗ ಧರ್ಮಾರ್ಥಕಾಮಗಳನ್ನು ಸೇವಿಸಬೇಕು ಎಂಬುದನ್ನು ಮಂತ್ರಿಗಳೊಡನೆ ಸಮಾಲೋಚಿಸಿ ನಡೆಸುವ ವಿವೇಕಿಯು ಯಾವಾಗಲೂ ಕಷ್ಟದಲ್ಲಿ ಸಿಕ್ಕಿಕೊಳ್ಳುವುದಿಲ್ಲ (೧೧–೧೨). ತನಗೆ ಹಿತಕರವಾದದ್ದು ಯಾವುದು, ಯಾವುದು ಕರ್ತವ್ಯವಲ್ಲ–ಎಂಬುದನ್ನು ವಿವೇಚನಾಶೀಲರಾದ ಸಚಿವರೊಡನೆ ಆಲೋಚಿಸಿ ನಡೆಯುವ ರಾಜನು ದೀರ್ಘಕಾಲದವರೆಗೆ ಸುಖದಿಂದ ಬಾಳುತ್ತಾನೆ (೧೩). ಆದರೆ ರಾಜನು ಆರಿಸಿಕೊಂಡ ಮಂತ್ರಿಗಳಲ್ಲಿ ಪಶುಬುದ್ಧಿಗಳಾದ ಪುರುಷರೂ ಇರುತ್ತಾರೆ! ಶಾಸ್ತ್ರಾರ್ಥದ ಗಂಧವೂ ಅವರಿಗಿರುವುದಿಲ್ಲ! ಏನನ್ನೂ ಅರಿಯದಿದ್ದರೂ ದುಡುಕಿನ ವಾಗ್ಜಾಲದಿಂದ ರಾಜನಿಗೆ ಸಲಹೆಕೊಡಲು ಮುಂದೆ ಬರುತ್ತಾರೆ! (೧೪).

ಅಶಾಸ್ತ್ರವಿದುಷಾಂ ತೇಷಾಂ ನ ಕಾರ್ಯಮಹಿತಂ ವಚಃ ।
ಅರ್ಥಶಾಸ್ತ್ರಾನಭಿಜ್ಞಾನಾಂ ವಿಪುಲಾಂ ಶ್ರಿಯಮಿಚ್ಛತಾಮ್ ॥ ೧೫

ಅಹಿತಂ ಚ ಹಿತಾಕಾರಂ ಧಾರ್ಷ್ಟ್ಯಾಜ್ಜಲ್ಪಂತಿ ಯೇ ನರಾಃ ।
ಅವೇಕ್ಷ್ಯ ಮಂತ್ರಬಾಹ್ಯಾಸ್ತೇ ಕರ್ತವ್ಯಾಃ ಕೃತ್ಯದೂಷಣಾಃ ॥ ೧೬

ವಿನಾಶಯಂತೋ ಭರ್ತಾರಂ ಸಹಿತಾಃ ಶತ್ರುಭಿರ್ಬುಧೈಃ ।
ವಿಪರೀತಾನಿ ಕೃತ್ಯಾನಿ ಕಾರಯಂತೀಹ ಮಂತ್ರಿಣಃ ॥ ೧೭

ತಾನ್ ಭರ್ತಾ ಮಿತ್ರಸಂಕಾಶಾನಮಿತ್ರಾನ್ ಮಂತ್ರನಿರ್ಣಯೇ ।
ವ್ಯವಹಾರೇಣ ಜಾನೀಯಾತ್ಸಚಿವಾನುಪಸಂಹಿತಾನ್ ॥ ೧೮

ಚಪಲಸ್ಯೇಹ ಕೃತ್ಯಾನಿ ಸಹಸಾನುಪ್ರಧಾವತಃ ।
ಛಿದ್ರಮನ್ಯೇ ಪ್ರಪದ್ಯಂತೇ ಕ್ರೌಂಚಸ್ಯ ಖಮಿವ ದ್ವಿಜಾಃ ॥ ೧೯

---

ಆ ಸಚಿವರಿಗೆ ಅರ್ಥಶಾಸ್ತ್ರವೂ ತಿಳಿಯದು, ಯಾವ ಶಾಸ್ತ್ರವೂ ತಿಳಿಯದು! ಶ್ರೇಯಸ್ಸನ್ನು ಬಯಸತಕ್ಕವರು ಅಂಥವರ ಮಾತನ್ನು ಕೇಳಬಾರದು. ಅವರು ಹೇಳುವುದು ಮೇಲ್ನೋಟಕ್ಕೆ ಹಿತವಾಗಿ ಕಂಡರೂ ಅಹಿತವೇ ಆಗಿರುತ್ತದೆ. ಅವಿವೇಕಮಯವಾದ ವಾಗ್ಜಾಲದಿಂದ ಏನನ್ನೋ ಹಲುಬುತ್ತಾರೆ. ಕೆಲಸ ವನ್ನೇ ಕೆಡಿಸತಕ್ಕ ಅಂಥವರನ್ನು ಮಂತ್ರಾಲೋಚನೆಗೆ ಸೇರಿಸಿಕೊಳ್ಳಬಾರದು! (೧೫–೧೬). ಅಷ್ಟೇ ಅಲ್ಲ; ಕೆಲವು ದುರ್ಮಂತ್ರಿಗಳು ಉಪಾಯಜ್ಞರಾದ ಶತ್ರುಗಳ ಪಕ್ಷವನ್ನು ವಹಿಸಿ ತಮ್ಮ ಸ್ವಾಮಿಯನ್ನೇ ನಾಶ ಮಾಡಲು ಉದ್ದೇಶಿಸು ತ್ತಾರೆ. ಅವರು ತಮ್ಮ ಸ್ವಾಮಿಯಿಂದ ಬೇಕೆಂತಲೇ ಅಕೃತ್ಯವನ್ನು ಮಾಡಿಸು ತ್ತಾರೆ (೧೭). ಮಿತ್ರರಂತೆ ನಟಿಸುವ ಅವರು ಶತ್ರುಗಳೇ ಸರಿ. ರಾಜನಾದ ವನು ಮಂತ್ರಾಲೋಚನೆ ಮಾಡುವಾಗ, ಅಂಥವರು ಶತ್ರುಪಕ್ಷಕ್ಕೆ ಸೇರಿದ್ದಾ ರೆಂಬುದನ್ನು ಅವರ ವ್ಯವಹಾರದಿಂದ ಕಂಡುಹಿಡಿಯಬೇಕು (೧೮). ವಿಚಾರ ವಿಲ್ಲದೆ ಕಾರ್ಯದಲ್ಲಿ ಧುಮುಕುವ ದುಡುಕಿನ ಮನುಷ್ಯನಲ್ಲಿ ಯಾವ ತಪ್ಪು ಸಂಭವಿಸುವುದೆಂದು ವೈರಿಗಳು ಕಾಯುತ್ತಿರುವರು. ಕ್ರೌಂಚಪರ್ವತದ ರಂಧ್ರದಲ್ಲಿ ಹಕ್ಕಿಗಳು ತೂರಿಹೋಗುವಂತೆ, ತಪ್ಪು ಸಿಕ್ಕಿದೊಡನೆ ಅದರ ಮೂಲಕ ವೈರಿಗಳು ಪಾರಾಗಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುತ್ತಾರೆ (೧೯).

ಯೋ ಹಿ ಶತ್ರುಮಭಿಜ್ಞಾಯ ನಾತ್ಮಾನಮಭಿರಕ್ಷತಿ ।
ಅವಾಪ್ನೋತಿ ಹಿ ಸೋಽನರ್ಥಾನ್ ಸ್ಥಾನಾಚ್ಚ ವ್ಯವರೋಪ್ಯತೇ ॥ ೨೦

ಯದುಕ್ತಮಿಹ ತೇ ಪೂರ್ವಂ ಕ್ರಿಯತಾಮನುಜೇನ ಚ ।
ತದೇವ ನೋ ಹಿತಂ ಕಾರ್ಯಂ ಯದಿಚ್ಛಸಿ ಚ ತತ್ಕುರು ॥ ೨೧

ತತ್ತು ಶ್ರುತ್ವಾ ದಶಗ್ರೀವಃ ಕುಂಭಕರ್ಣಸ್ಯ ಭಾಷಿತಮ್ ।
ಭ್ರುಕುಟಿಂ ಚೈವ ಸಂಚಕ್ರೇ ಕ್ರುದ್ಧಶ್ಚೈನಮಭಾಷತ ॥ ೨೨

ಮಾನ್ಯೋ ಗುರುರಿವಾಚಾರ್ಯಃ ಕಿಂ ಮಾಂ ತ್ವಮನುಶಾಸಸಿ ।
ಕಿಮೇವಂ ವಾಕ್ಶ್ರಮಂ ಕೃತ್ವಾ ಕಾಲೇ ಯುಕ್ತಂ ವಿಧೀಯತಾಮ್ ॥

ವಿಭ್ರಮಾಚ್ಚಿತ್ತಮೋಹಾದ್ವಾ ಬಲವೀರ್ಯಾಶ್ರಯೇಣ ವಾ ।
ನಾಭಿಪನ್ನಮಿದಾನೀಂ ಯದ್ವ್ಯರ್ಥಾಸ್ತಸ್ಯ ಪುನಃ ಕಥಾಃ ॥ ೨೪

---

ಯಾವ ರಾಜನು ನಿಜವಾಗಿ ತನ್ನ ವೈರಿ ಯಾರೆಂಬುದನ್ನು ಕಂಡುಕೊಳ್ಳದೆ ತನ್ನನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುವುದಿಲ್ಲವೋ ಅವನಿಗೆ ನಾನಾ ವಿಪತ್ತುಗಳು ಸಂಭವಿಸುತ್ತವೆ. ತನ್ನ ರಾಜಪದವಿಯಿಂದಲೂ ಅವನು ಕೆಳಗಿಳಿಯಬೇಕಾಗುತ್ತದೆ (೨೦). ಅಣ್ಣ, ಈ ವಿಷಯದಲ್ಲಿ ತಮ್ಮನಾದ ವಿಭೀಷಣನೂ ಇತರರೂ ಯುಕ್ತವಾದ್ದನ್ನು ಮೊದಲೇ ಹೇಳಿದ್ದಾರೆ. ಅದೇ ನಮಗೆ ಶ್ರೇಯಸ್ಕರವಾದುದು. ಈಗಲಾದರೂ ಅದರಂತೆ ಮಾಡು. ಇಲ್ಲವೆ, ನಿನಗೆ ತೋರಿದಂತೆ ಮಾಡಿಕೊ!'' ಎಂದು ಹೇಳಿದನು (೨೧). ಕುಂಭಕರ್ಣನ ಈ ಭಾಷಣವನ್ನು ಕೇಳಿ ದಶಕಂಠನ ಹುಬ್ಬು ಗಂಟಿಕ್ಕಿತು. ಅವನು ಸಿಟ್ಟಿನಿಂದ ''ಕುಂಭಕರ್ಣ, ಸಂಮಾನ್ಯನೂ ಆಚಾರಪ್ರವರ್ತಕನೂ ಆದ ಗುರುವಿನಂತೆ ನನಗೆ ಬುದ್ಧಿವಾದವನ್ನು ಹೇಳಲು ಬರುವೆಯಾ? ಹೀಗೆ ವ್ಯರ್ಥವಾದ ಮಾತನ್ನಾಡಿ ಏಕೆ ಆಯಾಸಪಟ್ಟುಕೊಳ್ಳುತ್ತೀಯೆ? ಈ ಸಮಯದಲ್ಲಿ ಯಾವುದು ಯುಕ್ತವೋ ಅದನ್ನು ಮಾಡು (೨೨–೨೩). ಭ್ರಮೆಯಿಂದಲೋ ಅವಿವೇಕದಿಂದಲೋ ನನ್ನ ಬಲಪರಾಕ್ರಮಗಳನ್ನು ನಂಬಿಕೊಂಡಿದ್ದರಿಂದಲೋ, ಆ ಉಪದೇಶವನ್ನು ನಾನು ಒಪ್ಪಿಕೊಳ್ಳಲಿಲ್ಲ. ಹಳೆಯ ಮಾತನ್ನು ಮತ್ತೆ ಮತ್ತೆ ಹೇಳುವುದು ವ್ಯರ್ಥವೇ ಸರಿ (೨೪).

ಅಸ್ಮಿನ್ ಕಾಲೇ ತು ಯದ್ಯುಕ್ತಂ ತದಿದಾನೀಂ ವಿಧೀಯತಾಮ್ ।
ಗತಂ ತು ನಾನುಶೋಚಂತಿ ಗತಂ ತು ಗತಮೇವ ಹಿ ॥ ೨೫

ಮಮಾಪನಯಜಂ ದೋಷಂ ವಿಕ್ರಮೇಣ ಸಮೀಕುರು ।
ಯದಿ ಖಲ್ವಸ್ತಿ ಮೇ ಸ್ನೇಹೋ ವಿಕ್ರಮಂ ವಾವಗಚ್ಛಸಿ ॥ ೨೬

ಯದಿ ವಾ ಕಾರ್ಯಮೇತತ್ತೇ ಹೃದಿ ಕಾರ್ಯತಮಂ ಮತಮ್ ।
ಸ ಸುಹೃದ್ಯೋ ವಿಪನ್ನಾರ್ಥಂ ದೀನಮಭ್ಯವಪದ್ಯತೇ ॥ ೨೭

ಸ ಬಂಧುರ್ಯೋಽಪನೀತೇಷು ಸಾಹಾಯ್ಯಾಯೋಪಕಲ್ಪತೇ ।
ತಮಥೈವಂ ಬ್ರುವಾಣಂ ತು ವಚನಂ ಧೀರದಾರುಣಮ್ ॥ ೨೮

ರುಷ್ಟೋಽಯಮಿತಿ ವಿಜ್ಞಾಯ ಶನೈಃ ಶ್ಲಕ್ಷ್ಣಮುವಾಚ ಹ ।
ಅತೀವ ಹಿ ಸಮಾಲಕ್ಷ್ಯ ಭ್ರಾತರಂ ಕ್ಷುಭಿತೇಂದ್ರಿಯಮ್ ॥ ೨೯

ಕುಂಭಕರ್ಣಃ ಶನೈರ್ವಾಕ್ಯಂ ಬಭಾಷೇ ಪರಿಸಾಂತ್ವಯನ್ ।
ಅಲಂ ರಾಕ್ಷಸರಾಜೇಂದ್ರ ಸಂತಾಪಮುಪಪದ್ಯ ತೇ ॥ ೩೦

---

ಆದದ್ದು ಆಗಿಹೋಯಿತು. ಈ ಸಮಯದಲ್ಲಿ ಯಾವುದು ಯುಕ್ತವೋ ಅದನ್ನೀಗ ಮಾಡಬೇಕಾಗಿದೆ. ಕಳೆದದ್ದನ್ನು ನೆನೆಸಿಕೊಂಡು ಯಾವ ಬುದ್ಧಿಶಾಲಿಯೂ ಪಶ್ಚಾತ್ತಾಪಪಡುತ್ತ ಕುಳಿತುಕೊಳ್ಳುವುದಿಲ್ಲ. ಗತಿಸಿದ್ದು ಗತಿಸಿ ಹೋಯಿತು (೨೫). ನಾನು ಅವಿವೇಕದಿಂದಲೇ ತಪ್ಪುಮಾಡಿರಬಹುದು. ನೀನು ಪರಾಕ್ರಮದಿಂದ ಅದನ್ನು ಸರಿಪಡಿಸು! ನನ್ನಲ್ಲಿ ನಿನಗೆ ಸ್ನೇಹವಿದ್ದರೆ, ನಿನ್ನಲ್ಲಿ ಪರಾಕ್ರಮವಿದೆಯೆಂಬ ನಂಬಿಕೆ ನಿನಗಿದ್ದರೆ, ಈಗ ಯುದ್ಧವೇ ಅವಶ್ಯ ಕರ್ತವ್ಯವೆಂದು ನಿನಗೆ ಅನ್ನಿಸಿದ್ದರೆ ಶತ್ರುಗಳೊಡನೆ ಯುದ್ಧಮಾಡಿ ತನ್ನ ತಪ್ಪನ್ನು ಸರಿಪಡಿಸು! ಕಷ್ಟದಲ್ಲಿ ಸಿಕ್ಕಿ ಮುಂಗಾಣದಿರುವವನಿಗೆ ನೆರವಾಗತಕ್ಕವನೇ ಸ್ನೇಹಿತ (೨೬–೨೭). ತಪ್ಪು ಮಾಡಿ ವಿಪತ್ತಿಗೊಳಗಾದವನಿಗೆ ಸಹಾಯ ಮಾಡತಕ್ಕವನೇ ಬಂಧು'' ಎಂದು ಹೇಳಿದನು. ರಾವಣನ ಮಾತಿನಲ್ಲಿ ಧೈರ್ಯವಿತ್ತು; ನೈಷ್ಠುರ್ಯವಿತ್ತು. ಆಗ ಅಣ್ಣನಿಗೆ ಸಿಟ್ಟುಬಂದಿದೆಯೆಂದೂ ಅವನ ಮನಸ್ಸು ಕ್ಷೋಭೆಗೊಂಡಿದೆಯೆಂದೂ ತಿಳಿದು, ಕುಂಭಕರ್ಣನು ರಾವಣನನ್ನು ಮೆಲ್ನುಡಿಯಿಂದ ಮೆಲ್ಲಗೆ ಸಂತೈಸುತ್ತ ಹೀಗೆಂದನು : ''ಮಹಾರಾಜ, ಅಷ್ಟು ಸಂತಾಪವೇಕೆ? (೨೮–೩೦).

ರೋಷಂ ಚ ಸಂಪರಿತ್ಯಜ್ಯ ಸ್ವಸ್ಥೋ ಭವಿತುಮರ್ಹಸಿ ।
ನೈತನ್ಮನಸಿ ಕರ್ತವ್ಯಂ ಮಯಿ ಜೀವತಿ ಪಾರ್ಥಿವ ॥ ೩೧

ತಮಹಂ ನಾಶಯಿಷ್ಯಾಮಿ ಯತ್ಕೃತೇ ಪರಿತಪ್ಯಸೇ ।
ಅವಶ್ಯಂ ತು ಹಿತಂ ವಾಚ್ಯಂ ಸರ್ವಾವಸ್ಥಂ ಮಯಾ ತವ ॥ ೩೨

ಬಂಧುಭಾವಾದಭಿಹಿತಂ ಭ್ರಾತೃಸ್ನೇಹಾಚ್ಚ ಪಾರ್ಥಿವ ।
ಸದೃಶಂ ಯತ್ತು ಕಾಲೇಽಸ್ಮಿನ್ ಕರ್ತುಂ ಸ್ನಿಗ್ಧೇನ ಬಂಧುನಾ ॥ ೩೩

ಶತ್ರೂಣಾಂ ಕದನಂ ಪಶ್ಯ ಕ್ರಿಯಮಾಣಂ ಮಯಾ ರಣೇ ।
ಅದ್ಯ ಪಶ್ಯ ಮಹಾಬಾಹೋ ಮಯಾ ಸಮರಮೂರ್ಧನಿ ॥ ೩೪

ಹತೇ ರಾಮೇ ಸಹ ಭ್ರಾತ್ರಾ ದ್ರವಂತೀಂ ಹರಿವಾಹಿನೀಮ್ ।
ಅದ್ಯ ರಾಮಸ್ಯ ತದ್ದೃಷ್ಟ್ವಾ ಮಯಾನೀತಂ ರಣಾಚ್ಛಿರಃ ॥ ೩೫

---

ಕೋಪಿಸಬೇಡ, ಶಾಂತನಾಗು ನಾನು ಬದುಕಿರುವಾಗ ಈ ಶತ್ರುವಿನ ಚಿಂತೆಯನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ.* ಯಾವ ಶತ್ರುವಿನ ವಿಷಯದಲ್ಲಿ ಖಿನ್ನನಾಗಿ ಕಳವಳಿಸುತ್ತಿರುವೆಯೋ ಅವನನ್ನು ನಾನು ಧ್ವಂಸಮಾಡುತ್ತೇನೆ ! ಸುಖದ ಕಾಲವಾಗಿರಲಿ ಕಷ್ಟದ ಕಾಲವಾಗಿರಲಿ, ಎಲ್ಲ ಸಂದರ್ಭದಲ್ಲಿಯೂ ನಿನಗೆ ಹಿತಕರವಾದ್ದನ್ನು ಹೇಳುವುದು ನನ್ನ ಕರ್ತವ್ಯವಾಗಿತ್ತು (೩೧–೩೨). ಮಹಾರಾಜ, ನಿನಗೆ ನಾನು ಬಂಧುವಾಗಿ –ಭ್ರಾತೃವಾಗಿ ಸ್ನೇಹದಿಂದಲೇ ಈ ಮಾತನ್ನಾಡಿದ್ದೇನೆ. ಅಣ್ಣ ಈ ಸಮಯದಲ್ಲಿ ಯುದ್ಧಮಾಡುವುದೇ ಯುಕ್ತವೆಂದು ನಿನ್ನ ಅಭಿಮತವಲ್ಲವೆ? ಒಳ್ಳೆಯದು. ನಾನು ನಿನಗೆ ಆಪ್ತಬಂಧುವಾಗಿ ಶತ್ರುಗಳೊಡನೆ ರಣರಂಗದಲ್ಲಿ ಹೇಗೆ ಹೋರಾಡುವೆನೆಂಬುದನ್ನು ನೋಡುತ್ತಿರು ! (೩೩). ಈ ದಿನವೇ ಸಮರಭೂಮಿಯಲ್ಲಿ ನಾನು ರಾಮನನ್ನೂ ಅವನ ತಮ್ಮನನ್ನೂ ಕೊಂದೆಸೆಯಲು, ಕಪಿಸೇನೆಯು ದಿಕ್ಕುದಿಕ್ಕಿಗೆ ಓಡಿಹೋಗುವ ಪರಿಯನ್ನಾದರೂ ನೋಡುತ್ತಿರು ! ಮಹಾಬಾಹು–ರಾಕ್ಷಸೇಶ್ವರ, ಈ ದಿನವೇ

---

* 'ಸ್ವಸ್ಥೋ ಭವಿತುಮರ್ಹಸಿ=ನೀನು ಸ್ವರ್ಗಸ್ಥನಾಗುವೆ. ನೈತನ್ಮನಸಿ ಕರ್ತವ್ಯಂ ಮಯಿ ಜೀವತಿ =ನಾನು ಬದುಕಿರುವುದಾರೆ ನೀನು ಚಿಂತಸಬೇಕಾಗಿಲ್ಲ, ಹೇಗಿದ್ದರೂ ನಾನು ಬದುಕುದೇ ಇಲ್ಲ !' ಎಂದು ಕೆಲವರು ಚಮತ್ಕಾರದ ಅತಿರೇಕವನ್ನು ತೋರಿಸಿ ವಾಖ್ಯಾನಮಾಡಿದ್ದಾರೆ.

ಸುಖೀ ಭವ ಮಹಾಬಾಹೋ ಸೀತಾ ಭವತು ದುಃಖಿತಾ ।
ಅದ್ಯ ರಾಮಸ್ಯ ಪಶ್ಯಂತು ನಿಧನಂ ಸುಮಹತ್ಪ್ರಿಯಮ್ ॥ ೩೬

ಲಂಕಾಯಾಂ ರಾಕ್ಷಸಾಃ ಸರ್ವೇ ಯೇ ತೇ ನಿಹತಬಾಂಧವಾಃ ।
ಅದ್ಯ ಶೋಕಪರೀತಾನಾಂ ಸ್ವಬಂಧುವಧಕಾರಣಾತ್ ॥ ೩೭

ಶತ್ರೋರ್ಯುಧಿ ವಿನಾಶೇನ ಕರೋಮ್ಯಸ್ರಪ್ರಮಾರ್ಜನಮ್ ।
ಅದ್ಯ ಪರ್ವತಸಂಕಾಶಂ ಸಸೂರ್ಯಮಿವ ತೋಯದಮ್ ॥ ೩೮

ವಿಕೀರ್ಣಂ ಪಶ್ಯ ಸಮರೇ ಸುಗ್ರೀವಂ ಪ್ಲವಗೋತ್ತಮಮ್ ।
ಕಥಂ ತ್ವಂ ರಾಕ್ಷಸೈರೇಭಿರ್ಮಯಾ ಚ ಪರಿರಕ್ಷಿತಃ ॥ ೩೯

ಜಿಘಾಂಸುಭಿರ್ದಾಶರಥಿಂ ವ್ಯಥಸೇ ತ್ವಮಿಹಾನಘ ।
ಅಥ ಪೂರ್ವಂ ಹತೇ ತೇನ ಮಯಿ ತ್ವಾಂ ಹಂತಿ ರಾಘವಃ ॥ ೪೦

ನಾಹಮಾತ್ಮನಿ ಸಂತಾಪಂ ಗಚ್ಛೇಯಂ ರಾಕ್ಷಸಾಧಿಪ ।
ಕಾಮಂ ತ್ವಿದಾನೀಮಪಿ ಮಾಂ ವ್ಯಾದಿಶ ತ್ವಂ ಪರಂತಪ ॥ ೪೧

---

ರಣಭೂಮಿಯಿಂದ ನಾನು ತರುವ ರಾಮನ ತಲೆಯನ್ನು ನೋಡಿ ನೀನು ಸಂತೋಷಿಸು ! ಸೀತೆಯು ದುಃಖದಿಂದ ಪರಿತಪಿಸಲಿ ! (೩೪–೩೫). ಈ ದಿನವೇ ಲಂಕೆಯಲ್ಲಿ ಬಂಧುಗಳನ್ನು ಕಳೆದುಕೊಂಡಿರುವ ಸಮಸ್ತರಾಕ್ಷಸರೂ ಆನಂದಕರವಾದ ರಾಮನ ಮರಣೋತ್ಸವವನ್ನು ನೋಡಿ ನಲಿಯಲಿ! ಈ ದಿನವೇ ಶತ್ರುವನ್ನು ವಧಿಸಿ, ಬಂಧುವಧೆಯಿಂದ ಶೋಕಾಕುಲರಾದ ರಾಕ್ಷಸರ ಕಣ್ಣೀರನ್ನು ಒರಸುವೆನು! (೩೬–೩೭). ಈ ದಿನವೇ ವಾನರೋತ್ತಮನೂ ಪರ್ವತಾಕಾರನೂ ಆದ ಆ ಸುಗ್ರೀವನು ನೆತ್ತರಲ್ಲಿ ನೆನೆದು, ತರಣಿಕಿರಣಾರುಣವಾದ ಮೇಘಮಂಡಲದಂತೆ ಉರುಳಿಬಿದ್ದಿರುವುದನ್ನು ನೋಡುತ್ತಿರು! (೩೮) ಮಹಾರಾಜ, ರಾಮನನ್ನು ವಧಿಸಲುದ್ಯುಕ್ತರಾದ ಈ ರಾಕ್ಷಸರೂ ನಾನೂ ನಿನಗೆ ರಕ್ಷಕರನಾಗಿ ನಿಂತಿರುವಾಗ, ನೀನು ವ್ಯಥೆಪಡುವುದಾದರೂ ಏಕೆ ? ನನ್ನನ್ನು ಮೊದಲು ಸಂಹರಿಸಿದಮೇಲೆ ತಾನೆ ರಾಘವನು ನಿನ್ನನ್ನು ಸಂಹರಿಸಲು ಬಂದಾನು ! ಎಂದಿಗೂ ನಾನು ಪರಾಜಯವನ್ನು ಹೊಂದತಕ್ಕವನೇ ಅಲ್ಲ ! (೩೯–೪೦). ವೀರಾಗ್ರಣಿ–ರಾಕ್ಷಸಾಧಿಪ, ಈಗಾಲಾದರೂ ನನಗೆ ಯುದ್ಧಕ್ಕೆ

ನ ಪರಃ ಪ್ರೇಷಣೀಯಸ್ತೇ ಯುದ್ಧಾಯಾತುಲವಿಕ್ರಮ ।
ಅಹಮುತ್ಸಾದಯಿಷ್ಯಾಮಿ ಶತ್ರೂಂಸ್ತವ ಮಹಾಬಲ ॥ ೪೨

ಯದಿ ಶಕ್ರೋ ಯದಿ ಯಮೋ ಯದಿ ಪಾವಕಮಾರುತೌ ।
ತಾನಹಂ ಯೋಧಯಿಷ್ಯಾಮಿ ಕುಬೇರವರುಣಾವಪಿ ॥ ೪೩

ಗಿರಿಮಾತ್ರಶರೀರಸ್ಯ ಶಿತಶೂಲಧರಸ್ಯ ಮೇ ।
ನರ್ದತಸ್ತೀಕ್ಷ್ಣದಂಷ್ಟ್ರಸ್ಯ ಬಿಭೀಯಾಚ್ಚ ಪುರಂದರಃ ॥ ೪೪

ಅಥವಾ ತ್ಯಕ್ತಶಸ್ತ್ರಸ್ಯ ಮೃದ್ನತಸ್ತರಸಾ ರಿಪೂನ್ ।
ನ ಮೇ ಪ್ರತಿಮುಖೇ ಸ್ಥಾತುಂ ಕಶ್ಚಿಚ್ಛಕ್ತೋ ಜಿಜೀವಿಷುಃ ॥ ೪೫

ನೈವ ಶಕ್ತ್ಯಾ ನ ಗದಯಾ ನಾಸಿನಾ ನೇಷುಭಿಃ ಶಿತೈಃ ।
ಹಸ್ತಾಭ್ಯಾಮೇವ ಸಂರಬ್ಧೋ ಹನಿಷ್ಯಾಮ್ಯಪಿ ವಜ್ರಿಣಮ್ ॥ ೪೬

ಯದಿ ಮೇ ಮುಷ್ಟಿವೇಗಂ ಸ ರಾಘವೋಽದ್ಯ ಸಹಿಷ್ಯತೇ ।
ತತಃ ಪಾಸ್ಯಂತಿ ಬಾಣೌಘಾ ರುಧಿರಂ ರಾಘವಸ್ಯ ತು ॥ ೪೭

---

ಹೋಗಲು ಆದೇಶವನ್ನು ಕೊಡು. ಇನ್ನು ಯಾರನ್ನೂ ಕಳಿಸಬೇಡ ! ನಿನ್ನ ವೈರಿಗಳನ್ನು ನಾನೇ ತೊಡೆದುಹಾಕುವೆನು (೪೧–೪೨) ಇಂದ್ರನೇ ಬರಲಿ, ಯಮನೇ ಬರಲಿ, ಅಗ್ನಿಮಾರುತರೇ ಬರಲಿ, ಕುಬೇರವರುಣರೇ ಬರಲಿ– ಅವರೆಲ್ಲರೊಡನೆ ನಾನೊರ್ವನೇ ಹೋರಾಡುವೆನು (೪೩). ಪರ್ವತಾಕಾರ ಶರೀರನಾದ ನಾನು ಹರಿತವಾದ ಈ ಶೂಲವನ್ನು ಹಿಡಿದು ಕೋರೆಯ ಹಲ್ಲುಗಳನ್ನು ಕಿರಿದು ಹೂಂಕರಿಸಿದೆನೆಂದರೆ, ದೇವೇಂದ್ರನೂ ಹೆದರಿ ಓಡದಿರುವನೆ! ಅಥವಾ ಶೂಲವೂ ಬೇಡ, ದೇಹಬಲದಿಂದಲೇ ಹಗೆಗಳನ್ನು ಕುಟ್ಟಿ ಅರೆಯುತ್ತ ಹೊರಟೆನೆಂದರೆ, ಬದುಕುವ ಆಸೆಯುಳ್ಳ ಯಾವನೂ ನನ್ನೆದುರಿಗೆ ನಿಲ್ಲಲಾರ ! (೪೪–೪೫). ಮಹಾರಾಜ, ನನಗೆ ಶಕ್ತ್ಯಾಯುಧವೂ ಬೇಡ, ಗದೆಯೂ ಬೇಡ, ಖಡ್ಗವೂ ಬೇಡ, ಕೂರಂಬುಗಳೂ ಬೇಡ! ಈ ಎರಡು ಕೈಗಳೇ ಸಾಕು. ವಜ್ರಧಾರಿಯಾದ ಇಂದ್ರನನ್ನೂ ಹಿಸುಕಿ ಕೊಂದೇನು! (೪೬). ಈ ನನ್ನ ಮುಷ್ಟಿಯ ಗುದ್ದಿನ ರಭಸವನ್ನು ರಾಮನು ಸಹಸಿಕೊಂಡಾನೆ ? ಒಂದು ವೇಳೆ ಸಹಸಿಕೊಂಡರೆ, ನನ್ನ ಬಾಣರಾಶಿಗಳು ಅವನ ನೆತ್ತರನ್ನು ಹೀರುತ್ತವೆ !

ಚಿಂತಯಾ ಬಾಧ್ಯಸೇ ರಾಜನ್ ಕಿಮರ್ಥಂ ಮಯಿ ತಿಷ್ಠತಿ ।
ಸೋಽಹಂ ಶತ್ರುವಿನಾಶಾಯ ತವ ನಿರ್ಯಾತುಮುದ್ಯತಃ ॥ ೪೮

ಮುಂಚ ರಾಮಾದ್ಭಯಂ ರಾಜನ್ ಹನಿಷ್ಯಾಮೀಹ ಸಂಯುಗೇ ।
ರಾಘವಂ ಲಕ್ಷ್ಮಣಂ ಚೈವ ಸುಗ್ರೀವಂ ಚ ಮಹಾಬಲಮ್ ॥ ೪೯

ಹನುಮಂತಂ ಚ ರಕ್ಷೋಘ್ನಂ ಲಂಕಾ ಯೇನ ಪ್ರದೀಪಿತಾ ।
ಹರೀಂಶ್ಚಾಪಿ ಹನಿಷ್ಯಾಮಿ ಸಂಯುಗೇ ಸಮವಸ್ಥಿತಾನ್ ॥ ೫೦

ಅಸಾಧಾರಣಮಿಚ್ಛಾಮಿ ತವ ದಾತುಂ ಮಹದ್ಯಶಃ ।
ಯದಿ ಚೇಂದ್ರಾದ್ಭಯಂ ರಾಜನ್ ಯದಿ ವಾಪಿ ಸ್ವಯಂಭುವಃ ॥ ೫೧

ಅಪಿ ದೇವಾಃ ಶಯಿಷ್ಯಂತೇ ಕ್ರುದ್ಧೇ ಮಯಿ ಮಹೀತಲೇ ।
ಯಮಂ ಚ ಶಮಯಿಷ್ಯಾಮಿ ಭಕ್ಷಯಿಷ್ಯಾಮಿ ಪಾವಕಮ್ ॥ ೫೨

ಆದಿತ್ಯಂ ಪಾತಯಿಷ್ಯಾಮಿ ಸನಕ್ಷತ್ರಂ ಮಹೀತಲೇ ।
ಶತಕ್ರತುಂ ವಧಿಷ್ಯಾಮಿ ಪಾಸ್ಯಾಮಿ ವರುಣಾಲಯಮ್ ॥ ೫೩

---

ಮಹಾರಾಜ, ನಾನಿರುವಾಗ ನಿನಗೇಕೆ ಚಿಂತೆ? ನಿನ್ನ ಹಗೆಯನ್ನು ತೊಡೆದು ಹಾಕುವುದಕ್ಕಾಗಿ, ಇದೋ, ಹೊರಡಲು ಸಿದ್ಧನಾಗಿದ್ದೇನೆ (೪೭–೪೮). ರಾಮನಿಂದ ನಿನಗೆ ಯಾವ ಹೆದರಿಕೆಯೂ ಬೇಡ. ನಾನು ಅವನನ್ನು ವಧಿಸುವೆನು. ರಾಮಲಕ್ಷ್ಮಣರನ್ನೂ ಮಹಾಬಲನೆನಿಸಿದ ಸುಗ್ರೀವನನ್ನೂ ಕೊಲ್ಲುವೆನು (೪೯). ಈ ಲಂಕಾನಗರವನ್ನು ಸುಟ್ಟು ನಮ್ಮ ರಾಕ್ಷಸರನ್ನು ಕೊಂದು ಹೋದ ಹನುಮಂತನನ್ನು ಬಿಡುವುದಿಲ್ಲ ! ಕೊಂದೇ ತೀರುವೆನು. ಸಮರ ಭೂಮಿಯಲ್ಲಿದುರಾಗುವ ಸಮಸ್ತ ಕಪಿಗಳನ್ನೂ ಧ್ವಂಸಮಾಡುವೆನು (೫೦). ಇಂದ್ರನೇ ಬರಲಿ, ಬ್ರಹ್ಮನೇ ಅಡ್ಡ ಗಟ್ಟಲಿ ಅವರೆಲ್ಲರನ್ನೂ ಗೆದ್ದು ಅಸಾಧಾರಣವಾದ ಕೀರ್ತಿಯನ್ನು ನಿನಗೆ ಗಳಿಸಕೊಡಲು ಸಂಕಲ್ಪಿಸಿದ್ದೇನೆ (೫೧). ನಾನು ಕ್ರುದ್ಧನಾದರೆ ದೇವತೆಗಳು ಹೆದರಿ ಅಡ್ಡ ಬೀಳುವರು, ರಣರಂಗದಲ್ಲಿ ಯಮನ ಕಥೆಯನ್ನು ಮುಗಿಸುವೆನು, ಅಗ್ನಿಯನ್ನು ಅಗಿದು ನುಂಗುವೆನು, ಸೂರ್ಯಮಂಡಲನ್ನು ನೆಲಕ್ಕೆ ಉರುಳಿಸುವೆನು, ನಕ್ಷತ್ರಗಳನ್ನುದುರಿಸುವೆನು, ಇಂದ್ರನನ್ನು ಕೊಂದು ಸಮುದ್ರವನ್ನು ಕುಡಿದುಬಿಡುವೆನು ! (೫೨–೫೩).

ಪರ್ವತಾಂಶ್ಚೂರ್ಣಯಿಷ್ಯಾಮಿ ದಾರಯಿಷ್ಯಾಮಿ ಮೇದಿನೀಮ್ ।
ದೀರ್ಘಕಾಲಂ ಪ್ರಸುಪ್ತಸ್ಯ ಕುಂಭಕರ್ಣಸ್ಯ ವಿಕ್ರಮಮ್ ॥ ೫೪

ಅದ್ಯ ಪಶ್ಯಂತು ಭೂತಾನಿ ಭಕ್ಷ್ಯಮಾಣಾನಿ ಸರ್ವಶಃ ।
ನನ್ವಿದಂ ತ್ರಿದಿವಂ ಸರ್ವಮಾಹಾರಸ್ಯ ನ ಪೂರ್ಯತೇ ॥ ೫೫

ವಧೇನ ತೇ ದಾಶರಥೇಃ ಸುಖಾರ್ಹಂ
ಸುಖಂ ಸಮಾಹರ್ತುಮಹಂ ವ್ರಜಾಮಿ ।
ನಿಹತ್ಯ ರಾಮಂ ಸಹ ಲಕ್ಷ್ಮಣೇನ
ಖಾದಾಮಿ ಸರ್ವಾನ್ ಹರಿಯೂಥಮುಖ್ಯಾನ್ ॥ ೫೬

ರಮಸ್ವ ಕಾಮಂ ಪಿಬ ಚಾಗ್ರ್ಯ ವಾರುಣೀಂ
ಕುರುಷ್ವ ಕೃತ್ಯಾನಿ ವಿನೀಯತಾಂ ಜ್ವರಃ ।
ಮಯಾದ್ಯ ರಾಮೇ ಗಮಿತೇ ಯಮಕ್ಷಯಂ
ಚಿರಾಯ ಸೀತಾ ವಶಗಾ ಭವಿಷ್ಯತಿ ॥ ೫೭

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರಿಷಷ್ಟಿತಮಃ ಸರ್ಗಃ

---

ಪರ್ವತಗಳನ್ನು ಪುಡಿ ಪುಡಿ ಮಾಡುವೆನು. ಪೃಥ್ವಿಯನ್ನೊಡೆದು ಸೀಳುವೆನು! ಅಣ್ಣ ಬಹುಕಾಲದಿಂದ ನಿದ್ರಿಸುತ್ತಿದ್ದ ಈ ಕುಂಭಕರ್ಣನ ವಿಕ್ರಮವನ್ನು ಈ ದಿನ ಜಗತ್ತು ನೋಡಲಿ! (೫೪). ಸಕಲ ಜೀವಜಾತಗಳನ್ನೂ ಜಗಿದು ನುಂಗುವ ಕುಂಭಕರ್ಣನ ಸಾಮರ್ಥ್ಯವನ್ನು ಆ ಜೀವಜಾತಗಳೇ ನೋಡಲಿ! ಏನು ಮಾಡಲಿ? ಮೂರು ಲೋಕಗಳಲ್ಲಿರುವ ಜೀವಿಗಳೂ ನನ್ನ ಆಹಾರಕ್ಕೆ ಸಾಲವು! (೫೫). ಅಣ್ಣ ಆ ದಶರಥಪುತ್ರನನ್ನು ವಧಿಸಿ ನಿನಗೆ ಪರಮಾನಂದವನ್ನು ತಂದುಕೊಡುವುದಕ್ಕಾಗಿ ಹೋಗುತ್ತಿದ್ದೇನೆ. ರಾಮಲಕ್ಷ್ಮಣರನ್ನು ಕತ್ತರಿಸಿ ಕೊಂದು, ನಿಖಿಲ ಕಪಿನಾಯಕರನ್ನೂ ತಿಂದುಬಿಡುತ್ತೇನೆ (೫೬). ನೀನು ಆನಂದದಿಂದಿರು. ಉತ್ತಮವಾದ ಮದ್ಯವನ್ನು ಯಥೇಷ್ಟವಾಗಿ ಕುಡಿ! ನಿನ್ನ ಕೆಲಸದಲ್ಲಿ ಮಗ್ನನಾಗು. ಚಿಂತೆಯನ್ನು ಪರಿತ್ಯಜಿಸು. ನಾನು ರಾಮನನ್ನ ಯಮಸದನಕಟ್ಟುವೆನು. ಆಮೇಲೆ ಸೀತೆಯು ಶಾಶ್ವತವಾಗಿ ನಿನ್ನ ವಶಕ್ಕೆ ಬರುವಳು!'' ಎಂದನು (೫೭).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಅರುವತ್ತು ಮೂರನೆಯ ಸರ್ಗ

## ಚತುಃಷಷ್ಟಿತಮಃ ಸರ್ಗಃ

### ಸೀತಾಪ್ರಲೋಭನೋಪಾಯಃ

ತದುಕ್ತಮತಿಕಾಯಸ್ಯ ಬಲಿನೋ ಬಾಹುಶಾಲಿನಃ ।
ಕುಂಭಕರ್ಣಸ್ಯ ವಚನಂ ಶ್ರುತ್ವೋವಾಚ ಮಹೋದರಃ ॥ ೧

ಕುಂಭಕರ್ಣ ಕುಲೇ ಜಾತೋ ಧೃಷ್ಟಃ ಪ್ರಾಕೃತದರ್ಶನಃ ।
ಅವಲಿಪ್ತೋ ನ ಶಕ್ನೋಷಿ ಕೃತ್ಯಂ ಸರ್ವತ್ರ ವೇದಿತುಮ್ ॥ ೨

ನ ಹಿ ರಾಜಾ ನ ಜಾನೀತೇ ಕುಂಭಕರ್ಣ ನಯಾನಯೌ ।
ತ್ವಂ ತು ಕೈಶೋರಕಾದ್ಧೃಷ್ಟಃ ಕೇವಲಂ ವಕ್ತುಮಿಚ್ಛಸಿ ॥ ೩

ಸ್ಥಾನಂ ವೃದ್ಧಿಂ ಚ ಹಾನಿಂ ಚ ದೇಶಕಾಲವಿಭಾಗವಿತ್ ।
ಆತ್ಮನಶ್ಚ ಪರೇಷಾಂ ಚ ಬುಧ್ಯತೇ ರಾಕ್ಷಸರ್ಷಭಃ ॥ ೪

### ಸರ್ಗ ೬೪

ಮಹೋದರನು ಕುಂಭಕರ್ಣನ ಹೇಳಿಕೆಯನ್ನು ಖಂಡಿಸುವುದು. ರಾಮಲಕ್ಷ್ಮಣರು ಹತರಾದರೆಂದು ಘೋಷಿಸಿ, ವಂಚನೆಯಿಂದ ಸೀತೆಯನ್ನು ವಶಪಡಿಸಿ ಕೊಳ್ಳಬೇಕೆಂದು ಅವನು ರಾವಣನಿಗೆ ತಿಳಿಸುವುದು.

ಮಹಾಶರೀರನೂ ಅತ್ಯಂತ ಶೂರನೂ ಆದ ಕುಂಭಕರ್ಣನ ಈ ಹೇಳಿಕೆಯನ್ನು ಸಹಿಸಲಾರದೆ ಮಹೋದರನೆಂಬ ಸಚಿವನು ಹೀಗೆಂದನು: "ಕುಂಭಕರ್ಣ, ನೀನು ದೊಡ್ಡವಂಶದಲ್ಲಿ ಜನಿಸಿದ್ದರೂ ಉದ್ಧತನಾಗಿದ್ದೀಯೆ; ಕ್ಷುದ್ರಬುದ್ಧಿಯಾಗಿದ್ದೀಯೆ, ಅಹಂಕಾರಿಯಾದ ನಿನಗೆ ಎಲ್ಲ ಸಂದರ್ಭಗಳಲ್ಲಿಯೂ ಕರ್ತವ್ಯವೇನೆಂಬುದನ್ನು ತಿಳಿಯುವ ಶಕ್ತಿ ಇಲ್ಲ (೧-೨). ನಮ್ಮ ಮಹಾರಾಜನಿಗೆ ನೀತಿ ಯಾವುದೂ ಅನೀತಿ ಯಾವುದೂ ಎಂಬುದು ಗೊತ್ತಿಲ್ಲದೆ ಇಲ್ಲ. ನೀನು ಮಾತ್ರ ದೃಪ್ತನಾಗಿ ಹುಡುಗಾಟಿಕೆಯಿಂದ ಏನನ್ನೂ ಹೇಳಲು ಹೊರಟಿದ್ದೀಯೆ (೩). ದೇಶ ಕಾಲ ವಿಭಾಗಗಳನ್ನು ಚೆನ್ನಾಗಿ ಬಲ್ಲ ನಮ್ಮ ರಾಕ್ಷಸೇಂದ್ರನು ತನ್ನ ಮತ್ತು ಶತ್ರುಗಳ ಸ್ಥಾನ*ವೃದ್ಧಿಕ್ಷಯಗಳನ್ನು ಸರಿಯಾಗಿ

* ಸ್ಥಾನ= ಬಲವೃದ್ಧಿ ಬಲಹಾನಿಗಳಿಲ್ಲದ ಸಮಸ್ಥಿತಿ.

ಯತ್ತು ಶಕ್ಯಂ ಬಲವತಾ ಕರ್ತುಂ ಪ್ರಾಕೃತಬುದ್ಧಿನಾ ।
ಅನುಪಾಸಿತವೃದ್ಧೇನ ಕಃ ಕುರ್ಯಾತ್ತಾದೃಶಂ ಬುಧಃ ॥ ೫

ಯಾಂಸ್ತು ಧರ್ಮಾರ್ಥಕಾಮಾಂಸ್ತ್ವಂ ಬ್ರವೀಷಿ ಪೃಥಗಾಶ್ರಯಾನ್ ।
ಅನುಬೋದ್ಧುಂ ಸ್ವಭಾವೇ ತಾನ್ನ ಹಿ ಲಕ್ಷಣಮಸ್ತಿ ತೇ ॥ ೬

ಕರ್ಮ ಚೈವ ಹಿ ಸರ್ವೇಷಾಂ ಕಾರಣಾನಾಂ ಪ್ರಯೋಜಕಮ್ ।
ಶ್ರೇಯಃ ಪಾಪೀಯಸಾಂ ಚಾತ್ರ ಫಲಂ ಭವತಿ ಕರ್ಮಣಾಮ್ ॥ ೭

ನಿಃಶ್ರೇಯ ಸಫಲಾಮೇವ ಧರ್ಮಾರ್ಥಾವಿತರಾವಪಿ ।
ಅಧರ್ಮಾನರ್ಥಯೋಃ ಪ್ರಾಪ್ತಂ ಫಲಂ ಚ ಪ್ರಾತ್ಯವಾಯಿಕಮ್ ॥

ಐಹಲೌಕಿಕಪಾರತ್ರಂ ಕರ್ಮ ಪುಂಭಿರ್ನಿಷೇವ್ಯತೇ ।
ಕರ್ಮಾಣ್ಯಪಿತು ಕಲ್ಯಾನಿ ಲಭತೇ ಕಾಮಮಾಸ್ಥಿತಃ ॥ ೯

---

ತಿಳಿದುಕೊಂಡಿದ್ದಾನೆ. ಗುರುಹಿರಿಯರನ್ನು ಸೇವಿಸದೆ ಅಲ್ಪಬುದ್ಧಿಯಾಗಿರುವ ಪುರುಷನು ಕೇವಲ ಬಲವನ್ನೇ ನಂಬಿಕೊಂಡು ಯಾವುದನ್ನು ಮಾಡುವನೋ ಅಂಥ ಕಾರ್ಯವನ್ನು ಪ್ರಾಜ್ಞನಾದ ರಾವಣನು ಎಂದಿಗಾದರೂ ಆಚರಿಸುವನೆ? (೪–೫). ಧರ್ಮಾರ್ಥಕಾಮಗಳಿಗೆ ವಿಭಿನ್ನಫಲಗಳಿವೆಯೆಂಬ ಅಭಿಪ್ರಾಯದಿಂದ ಮಾತನಾಡಿದೆಯಲ್ಲ, ಹಾಗೆ ಅವುಗಳ ಸ್ವರೂಪವನ್ನು ಹೇಳಲು ನಿನಗೆ ಯಾವ ಆಧಾರವೂ ಇಲ್ಲ (ಉದಾಹರಣೆಗೆ, ಧರ್ಮದಿಂದ ದುಃಖವೂ ಅಧರ್ಮದಿಂದ ಸುಖವೂ ಕಂಡುಬರುತ್ತದೆ–ಎನ್ನುವುದಕ್ಕೆ ಆಧಾರವೇನು?) (೬). ಒಳ್ಳೆಯದು ಕೆಟ್ಟದು ಎಂಬ ಸಕಲ ಫಲಗಳಿಗೂ ಕರ್ಮವೇ ಸಾಧಕವಾಗಿದೆ. ಈ ಲೋಕದಲ್ಲಿ ಪಾಪಕರ್ಮಗಳಿಗೂ ಒಳ್ಳೆಯ ಫಲವೇ ಕಂಡುಬರುತ್ತದೆ (೭). ಕರ್ಮಗಳು ಧರ್ಮಾರ್ಥಸಾಧನಗಳಾಗಲಿ, ಧರ್ಮಾರ್ಥಸಾಧನಗಳಲ್ಲದಿರಲಿ – ಅವು ನಮಗೆ ಒಳ್ಳೆಯ ಫಲವನ್ನು ಕೊಟ್ಟೇ ಕೊಡುತ್ತವೆ. ಒಂದು ವೇಳೆ ಅಧರ್ಮದಿಂದಲೂ ಅನರ್ಥಕ ಕರ್ಮದಿಂದಲೂ ಕೆಟ್ಟ ಫಲವಾದರೆ, ಅದು ವಿವಿಧ ವಿಘ್ನಗಳಿಂದ ಒದಗಿತೆಂದೇ ತಿಳಿಯಬೇಕು (೮). ಇದು ಇಹಲೋಕದಲ್ಲಿ ಫಲವನ್ನು ಕೊಡತಕ್ಕದ್ದು, ಇದು ಪರಲೋಕದಲ್ಲಿ ಫಲವನ್ನು ಕೊಡತಕ್ಕದ್ದು–ಎಂಬ ಅಭಿಪ್ರಾಯಿದಿಂದ ಜನರು ಶಾಸ್ತ್ರೀಯಕರ್ಮವನ್ನಾಚರಿಸುತ್ತಾರೆ. ಆದರೆ ಮನಸ್ಸು ಬಂದಂತೆ ಆಚರಿಸುವವನು ಕರ್ಮದ

ತತ್ರ ಕ್ಲೃಪ್ತಮಿದಂ ರಾಜ್ಞಾ ಹೃದಿ ಕಾರ್ಯಂ ಮತಂ ಚ ನಃ ।
ಶತ್ರೌ ಹಿ ಸಾಹಸಂ ಯತ್ಸ್ಯಾತ್ಕಿಮಿವಾತ್ರಾಪನೀಯತೇ ॥ ೧೦

ಏಕಸ್ಯೈವಾಭಿಯಾನೇ ತು ಹೇತುರ್ಯಃ ಕಥಿತಸ್ತ್ವಯಾ ।
ತತ್ರಾಪ್ಯನುಪಪನ್ನಂ ತೇ ವಕ್ಷ್ಯಾಮಿ ಯದಸಾಧು ಚ ॥ ೧೧

ಯೇನ ಪೂರ್ವಂ ಜನಸ್ಥಾನೇ ಬಹವೋಽತಿಬಲಾ ಹತಾಃ ।
ರಾಕ್ಷಸಾ ರಾಘವಂ ತಂ ತ್ವಂ ಕಥಮೇಕೋ ಜಯಿಷ್ಯಸಿ ॥ ೧೨

ಯೇ ಪುರಾ ನಿರ್ಜಿತಾಸ್ತೇನ ಜನಸ್ಥಾನೇ ಮಹೌಜಸಃ ।
ರಾಕ್ಷಸಾಂಸ್ತಾನ್ ಪುರೇ ಸರ್ವಾನ್ ಭೀತಾನದ್ಯಾಪಿ ಪಶ್ಯಸಿ ॥ ೧೩

ತಂ ಸಿಂಹಮಿವ ಸಂಕ್ರುದ್ಧಂ ರಾಮಂ ದಶರಥಾತ್ಮಜಮ್ ।
ಸರ್ಪಂ ಸುಪ್ತಮಿವಾಬಧ್ಯ ಪ್ರಬೋಧಯಿತುಮಿಚ್ಛಸಿ ॥ ೧೪

---

ಶುಭಫಲಗಳನ್ನು ಈ ಲೋಕದಲ್ಲಿಯೇ ಅನುಭವಿಸುತ್ತಾನೆ! (೯) ಹೀಗಿರುವಾಗ ನಮ್ಮ ಮಹಾರಾಜನು ಸುಖಾಪೇಕ್ಷೆಯಿಂದ ಸೀತೆಯನ್ನಪಹರಿಸಬೇಕೆಂದು ಸಂಕಲ್ಪಿಸಿದನು. ನಾವು ಅದನ್ನು ಅನುಮೋದಿಸಿದ್ದೇವೆ ! ಈಗ ಶತ್ರುವಿನ ವಿಷಯದಲ್ಲಿ ಸಾಹಸವನ್ನು ತೋರಿಸಬೇಕಾಗಿ ಬಂದಿದೆಯಲ್ಲ ಎಂದರೆ–ಹೌದು, ಅದಕ್ಕೆ ಮಾಡುವುದೇನು!* (೧೦). ಕುಂಭಕರ್ಣ, ಈಗ ನೀನೊಬ್ಬನೇ ದಂಡಯಾತ್ರೆಗೆ ಹೊರಡುವೆನೆಂದೂ ನಿನ್ನೊಬ್ಬನ ಬಲಪರಾಕ್ರಮಗಳೇ ಸಾಕೆಂದೂ ಹೇಳಿದೆಯಲ್ಲ! ನಿನ್ನ ಮಾತು ಅಯುಕ್ತವೂ ಅಹಿತಕರವೂ ಆಗಿದೆ. ಹೇಗೆಂದರೆ, ಹೇಳುವೆನು ಕೇಳು (೧೧): ಹಿಂದೆ ಜನಸ್ಥಾನದಲ್ಲಿ ಅತ್ಯಂತ ಪ್ರಬಲರಾದ ಖರಾದಿ ಬಹುಮಂದಿ ರಾಕ್ಷಸರನ್ನು ರಾಮನೊಬ್ಬನೇ ಕೊಂದುಹಾಕಿದ್ದಾನೆ. ಅಂಥ ಪರಾಕ್ರಮಿಯನ್ನು ನೀನೊಬ್ಬನೇ ಜಯಿಸಬಲ್ಲೆಯಾ? (೧೨). ಜನಸ್ಥಾನದಲ್ಲಿ ಯಾವ ರಾಕ್ಷಸರು ನಿರ್ಜಿತರಾದರೋ ಅಂಥ ಮಹಾಸಾಹಸಿಗಳಾದ ರಾಕ್ಷಸರೇ ಈಗ ಲಂಕೆಯಲ್ಲಿರತಕ್ಕುವರು. ಇವರೆಲ್ಲರೂ ರಾಮನಿಗೆ ಹೆದರಿ ನಡಗುತ್ತಿರುವುದು ನಿನ್ನ ಕಣ್ಣಿಗೆ

---

* ಈ ಸರ್ಗದಲ್ಲಿ 6 ರಿಂದ 10ಶ್ಲೋಕಗಳವರೆಗೆ ಅರ್ಥವು ಬಹಳ ಅಸ್ಫುಟವಾಗಿದೆ. ವ್ಯಾಖ್ಯಾನಕರಾರಲ್ಲಿ ಮತಭೇದಗಳುಂಟು. ಇದ್ದುದರಲ್ಲಿ ಸರಳವಾದ ತಾತ್ಪರ್ಯವನ್ನು ಇಲ್ಲಿ ಕೊಡಲಾಗಿದೆ.

ಜ್ವಲಂತಂ ತೇಜಸಾ ನಿತ್ಯಂ ಕ್ರೋಧೇನ ಚ ದುರಾಸದಮ್ ।
ಕಸ್ತಂ ಮೃತ್ಯುಮಿವಾಸಹ್ಯಮಾಸಾದಯಿತುಮರ್ಹತಿ ॥ ೧೫

ಸಂಶಯಸ್ಥಮಿದಂ ಸರ್ವಂ ಶತ್ರೋಃ ಪ್ರತಿಮಾಸನೇ ।
ಏಕಸ್ಯ ಗಮನಂ ತತ್ರ ನ ಹಿ ಮೇ ರೋಚತೇ ಭೃಶಮ್ ॥ ೧೬

ಹೀನಾರ್ಥಃ ಸುಸಮೃದ್ಧಾರ್ಥಂ ಕೋ ರಿಪುಂ ಪ್ರಾಕೃತಂ ಯಥಾ ।
ನಿಶ್ಚಿತ್ಯ ಜೀವಿತತ್ಯಾಗೇ ವಶಮಾನೇತುಮಿಚ್ಛತಿ ॥ ೧೭

ಯಸ್ಯ ನಾಸ್ತಿ ಮನುಷ್ಯೇಷು ಸದೃಶೋ ರಾಕ್ಷಸೋತ್ತಮ ।
ಕಥಮಾಶಂಸಸೇ ಯೋದ್ಧುಂ ತುಲ್ಯೇನೇಂದ್ರವಿವಸ್ವತೋಃ ॥ ೧೮

ಏವಮುಕ್ತ್ವಾ ತು ಸಂರಬ್ಧಂ ಕುಂಭಕರ್ಣಂ ಮಹೋದರಃ ।
ಉವಾಚ ರಕ್ಷಸಾಂ ಮಧ್ಯೇ ರಾವಣಂ ಲೋಕರಾವಣಮ್ ॥ ೧೯

---

ಕಾಣಿಸುವುದಿಲ್ಲವೆ ? ದಶರಥಾತ್ಮಜನಾದ ರಾಮನು ಕೆರಳಿದ ಸಿಂಹದಂತಿದ್ದಾನೆ. ಮಲಗಿದ ಮಹಾಸರ್ಪದಂತಿದ್ದಾನೆ. ಇದನ್ನರಿಯದೆ ಅವನನ್ನು ಕೆಣಕಲು ಬಯಸುವೆಯಾ? (೧೩-೧೪) ತೇಜೋರಾಶಿಯಾದ ರಾಮನು ಅಗ್ನಿಯಂತೆ ಜ್ವಲಿಸುತ್ತಿದ್ದಾನೆ. ರಾಕ್ಷಸರ ಮೇಲಿರುವ ಕ್ರೋಧದಿಂದ ದುರ್ಧರ್ಷನಾಗಿದ್ದಾನೆ. ಸಾಕ್ಷಾತ್ ಮೃತ್ಯುವಿನಂತೆ ದುರಾಸದನಾದ ಆತನ ಸಮೀಪಕ್ಕೆ ಹೋಗತಕ್ಕವನಾದರೂ ಯಾರು? (೧೫). ಇಡೀ ನಮ್ಮ ರಾಕ್ಷಸೇನೆಯೇ ಅವನೆದುರಿಗೆ ನಿಲ್ಲಲಾರದೆ ಸಂಶಯಗ್ರಸ್ತವಾಗಿದೆ. ಇಂಥ ಪರಿಸ್ಥಿತಿಯಲ್ಲಿ ನೀನೊಬ್ಬನೇ ಅಲ್ಲಿಗೆ ಹೋಗುವುದು ಸರ್ವಥಾ ನನಗೆ ಸರಿದೋರುವುದಿಲ್ಲ (೧೬). ನಮ್ಮ ಬಲವು ಕುಗ್ಗುತ್ತಿದೆ. ಹಗೆಯ ಬಲವು ಹಿಗ್ಗುತ್ತಿದೆ. ಅವನನ್ನು ಸಾಮಾನ್ಯನೆಂದು ತಿಳಿಯಬಹುದೆ? ಯಾವನು ತನ್ನ ಪ್ರಾಣದಲ್ಲಿ ಆಸೆಯನ್ನು ಬಿಟ್ಟು ಅಂಥ ಶತ್ರುವನ್ನು ಗೆಲ್ಲುವೆನೆಂದು ಹೊರಟಾನು? (೧೭). ರಾಕ್ಷಸೋತ್ತಮ-ಕುಂಭಕರ್ಣ, ಮನುಷ್ಯಜಾತಿಯಲ್ಲಿಯೇ ರಾಮನಿಗೆ ಸಮನಾದ ಇನ್ನೊಬ್ಬ ವೀರನು ಇಲ್ಲವೆಂದು ತಿಳಿ. ದೇವೇಂದ್ರನಿಗೂ ಆದಿತ್ಯನಿಗೂ ಸಾಟಿಯಾದ ಆ ತೇಜಸ್ವಿಯೊಡನೆ ಯುದ್ಧ ಮಾಡಲಿಚ್ಛಿಸುವೆಯಾ ?''(೧೮). ಈ ರೀತಿಯಲ್ಲಿ ಮಹೋದರನು ಕ್ರೋಧೋದ್ವಿಗ್ನನಾಗಿ ಕುಂಭಕರ್ಣನಿಗೆ ಹೇಳಿ, ಲೋಕರಾವಣನಾದ ರಾವಣನ ಕಡೆಗೆ ತಿರುಗಿ ರಾಕ್ಷಸ ಸಭಾಮಧ್ಯದಲ್ಲಿ

ಲಬ್ಧ್ವಾ ಪುನಸ್ತ್ವಂ ವೈದೇಹೀಂ ಕಿಮರ್ಥಂ ಸಂಪ್ರಜಲ್ಪಸಿ ।
ಯದೀಚ್ಛಸಿ ತದಾ ಸೀತಾ ವಶಗಾ ತೇ ಭವಿಷ್ಯತಿ ॥ ೨೦

ದೃಷ್ಟಃ ಕಶ್ಚಿದುಪಾಯೋ ಮೇ ಸೀತೋಪಸ್ಥಾನಕಾರಕಃ ।
ರುಚಿರಶ್ಚೇತ್ಸ್ವಯಾ ಬುದ್ಧ್ಯಾ ರಾಕ್ಷಸೇಶ್ವರ ತಂ ಶೃಣು ॥ ೨೧

ಅಹಂ ದ್ವಿಜಿಹ್ವಃ ಸಂಹ್ರಾದೀ ಕುಂಭಕರ್ಣೋ ವಿತರ್ದನಃ ।
ಪಂಚ ರಾಮವಧಾಯೈತೇ ನಿರ್ಯಾಂತ್ವಿತ್ಯವಘೋಷಯ ॥ ೨೨

ತತೋ ಗತ್ವಾ ವಯಂ ಯುದ್ಧಂ ದಾಸ್ಯಾಮಸ್ತಸ್ಯ ಯತ್ನತಃ ।
ಜೇಷ್ಯಾಮೋ ಯದಿ ತೇ ಶತ್ರೂನ್ನೋಪಾಯೈಃ ಕೃತ್ಯಮಸ್ತಿನಃ ॥ ೨೩

ಅಥ ಜೀವತಿ ನಃ ಶತ್ರುರ್ವಯಂ ಚ ಕೃತಸಂಯುಗಾಃ ।
ತತಸ್ತದಭಿಪತ್ಸ್ಯಾಮೋ ಮನಸಾ ಯತ್ಸಮೀಕ್ಷಿತಮ್ ॥ ೨೪

ವಯಂ ಯುದ್ಧಾದಿಹೈಷ್ಯಾಮೋ ರುಧಿರೇಣ ಸಮುಕ್ಷಿತಾಃ ।
ವಿದಾರ್ಯ ಸ್ವತನುಂ ಬಾಣೈ ರಾಮನಾಮಾಂಕಿತೈಃ ಶಿತೈಃ ॥ ೨೫

---

ಹೀಗೆಂದನು (೧೯): "ಮಹಾರಾಜ, ವೈದೇಹಿಯು ನಿನ್ನ ಕೈವಶದಲ್ಲಿರುವಾಗ, ಈ ಪ್ರಕಾರವಾಗಿ ನೀನು ಹಲುಬುವುದಾದರೂ ಏಕೆ? ನೀನು ಇಚ್ಛಿಸಿದರೆ ಸೀತೆಯು ನಿನ್ನ ಇಷ್ಟದಂತೆ ನಡೆದೇ ನಡೆಯುವಳು (೨೦). ಅವಳು ತಾನಾಗಿ ನಿನ್ನ ಬಳಿಗೆ ಬರುವಂತೆ ಮಾಡುವ ಒಂದು ಉಪಾಯವನ್ನು ನಾನು ಕಂಡುಹಿಡಿದಿದ್ದೇನೆ ! ಅದು ನಿನಗೆ ಸರಿ ಎನಿಸಿದರೆ, ರಾಕ್ಷಸೇಶ್ವರ, ನಿನ್ನ ಸ್ವಬುದ್ಧಿಯಿಂದ ಅದನ್ನು ಕೇಳು. ಇನ್ನೊಬ್ಬರ ಬುದ್ಧಿ ನಿನಗೆ ಬೇಡ! ಏನೆಂದರೆ : ನಾನು, ದ್ವಿಜಿಹ್ವ, ಸಂಹ್ರಾದಿ, ಕುಂಭಕರ್ಣ, ವಿತರ್ದನ–ಈ ಐವರು ಕೂಡಲೇ ಹೊರಟು ರಾಮನನ್ನು ವಧಿಸಿಬರಬೇಕೆಂದು ನಗರದಲ್ಲಿ ಡಂಗುರಹೊಡೆಸು! (೨೧–೨೨). ಆಮೇಲೆ ನಾವು ಐವರೂ ರಣರಂಗಕ್ಕೆ ಹೋಗಿ ಕೈಲಾದ ಪ್ರಯತ್ನ ಮಾಡಿ ಹೋರಾಡುತ್ತೇವೆ. ನಿನ್ನ ಶತ್ರುಗಳನ್ನು ಒಂದು ವೇಳೆ ನಾವು ಗೆದ್ದುಬಿಟ್ಟರೆ, ಸೀತೆಯನ್ನು ವಶಪಡಿಸಿಕೊಳ್ಳಲು ಯಾವ ಉಪಾಯವೂ ನಮಗೆ ಬೇಕಾಗುವುದೇ ಇಲ್ಲ ! (೨೩). ಹಾಗಾಗದೆ ಶತ್ರುವು ಬದುಕಿ ಉಳಿದರೆ, ನಾವು ಯುದ್ಧಮಾಡಿ, ಈಗ ನಾನು ಮನಸ್ಸಿನಲ್ಲಿ ಸಕಲ್ಪಿಸಿರುವ ಉದ್ದೇಶವನ್ನು ಸಾಧಿಸುತ್ತೇವೆ. ನನ್ನ ಉದ್ದೇಶವೇನೆಂದರೆ, ನಾವೆಲ್ಲರೂ ರಕ್ತದಲ್ಲಿ ನೆನೆದು

ಭಕ್ಷಿತೋ ರಾಘವೋಽಸ್ಮಾಭಿರ್ಲಕ್ಷ್ಮಣಶ್ಚೇತಿ ವಾದಿನಃ ॥
ತವ ಪಾದೌ ಗ್ರಹೀಷ್ಯಾಮಸ್ತ್ವಂ ನಃ ಕಾಮಂ ಪ್ರಪೂರಯ ॥ ೨೬

ತತೋಽವಘೋಷಯ ಪುರೇ ಗಜಸ್ಕಂಧೇನ ಪಾರ್ಥಿವ ।
ಹತೋ ರಾಮಃ ಸಹ ಭ್ರಾತ್ರಾ ಸಸೈನ್ಯ ಇತಿ ಸರ್ವತಃ ॥ ೨೭

ಪ್ರೀತೋ ನಾಮ ತತೋ ಭೂತ್ವಾ ಭೃತ್ಯಾನಾಂ ತ್ವಮರಿಂದಮ ।
ಭೋಗಾಂಶ್ಚ ಪರಿವಾರಾಂಶ್ಚ ಕಾಮಾಂಶ್ಚ ವಸು ದಾಪಯ ॥ ೨೮

ತತೋ ಮಾಲ್ಯಾನಿ ವಾಸಾಂಸಿ ವೀರಾಣಾಮನುಲೇಪನಮ್ ।
ಪೇಯಂ ಚ ಬಹು ಯೋಧೇಭ್ಯಃ ಸ್ವಯಂ ಚ ಮುದಿತಃ ಪಿಬ ॥ ೨೯

ತತೋಽಸ್ಮಿನ್ ಬಹುಲೀಭೂತೇ ಕೌಲೀನೇ ಸರ್ವತೋ ಗತೇ ।
ಭಕ್ಷಿತಃ ಸಸುಹೃದ್ರಾಮೋ ರಾಕ್ಷಸೈರಿತಿ ವಿಶ್ರುತೇ ॥ ೩೦

---

ಬರುತ್ತೇವೆ 'ರಾಮ' ಎಂಬ ಹೆಸರಿರುವ ಬಾಣಗಳನ್ನು ಮೈಗೆ ಚುಚ್ಚಿಕೊಂಡಿರುತ್ತೇವೆ! ೨೪–೨೫). ನಾವೆಲ್ಲರೂ 'ರಾಮಲಕ್ಷ್ಮಣರನ್ನು ಭಕ್ಷಿಸಿಬಿಟ್ಟೆವು !'' ಎಂದು ನಗರದಲ್ಲಿ ಘೋಷಿಸುತ್ತ ಬಂದು ನಿನ್ನ ಪಾದಗಳಿಗೆ ವಂದಿಸುತ್ತೇವೆ. ಆಗ ನೀನು ಸಂತೋಷದಿಂದ ನಮಗೆ ಪಾರಿತೋಷಿಕಗಳನ್ನು ಕೊಟ್ಟು ಆದರಿಸಿದಂತೆ ಮಾಡು ! (೨೬). ಅನಂತರ ರಾಕ್ಷಸಭಟರು ಆನೆಗಳ ಮೇಲೆ ಕುಳಿತು 'ರಾಮಲಕ್ಷ್ಮಣರು ಹತರಾದರು! ಕಪಿಸೇನೆಯು ನಾಶಹೊಂದಿತು!' ಎಂದು ನಗರದ ಮೂಲೆಮೂಲೆಗಳಲ್ಲಿಯೂ ಡಂಗುರಹೊಡೆದು ಸಾರುವಂತೆ ಏರ್ಪಡಿಸು (೨೭). ಆಮೇಲೆ, ಮಹಾರಾಜ, ನೀನು ಸಂಪ್ರೀತನಾದವನಂತೆ ವರ್ತಿಸಿ ರಾಕ್ಷಸಭಟರಿಗೆ ವಿವಿಧ ಭೋಗಸಾಮಗ್ರಿಗಳು, ದಾಸದಾಸಿಯರು, ಬಯಸಿದ ವಸ್ತುಗಳು, ಹಣ ಮುಂತಾದವುಗಳನ್ನು ಪಾರಿತೋಷಿಕಗಳೆಂದು ಕೊಡಿಸಬೇಕು (೨೮). ಯೋಧರಿಗೆ ವೀರೋಚಿತರಾದ ಹಾರ, ವಸ್ತ್ರ, ಸುಗಂಧದ್ರವ್ಯ ಮತ್ತು ವಿವಿಧ ಪೇಯಗಳನ್ನು ಬಹುಮಾನವಾಗಿ ಸಲ್ಲಿಸಿ ನೀನೂ ಆನಂದದಿಂದ ಮದ್ಯವನ್ನು ಕುಡಿಯುತ್ತ ಸಂಭ್ರಮದಿಂದಿರು! ನಿನಗೆ ಜಯವಾಯಿತೆಂಬ ಸುದ್ದಿಯು ಜನರಲ್ಲಿ ಹರಡಿಹೋಗುವುದು. ರಾಮನನ್ನೂ ಅವನ ಆಪ್ತಮಿತ್ರರನನ್ನೂ ರಾಕ್ಷಸರು ಭಕ್ಷಸಿಬಿಟ್ಟರೆಂಬ ವಾರ್ತೆಯು ಎಲ್ಲೆಲ್ಲಿಯೂ ಕೇಳಿಸುವುದು (೨೯–೩೦).

ಪ್ರವಿಶ್ಯಾಶ್ವಾಸ್ಯ ಚಾಪಿ ತ್ವಂ ಸೀತಾಂ ರಹಸಿ ಸಾಂತ್ವಯ ।
ಧನಧಾನ್ಯೈಶ್ಚ ಕಾಮ್ಯೈಶ್ಚ ರತ್ನೈಶ್ಚೈನಾಂ ಪ್ರಲೋಭಯ ॥ ೩೧

ಅನಯೋಪಧಯಾ ರಾಜನ್ ಭಯಶೋಕಾನುಬಂಧಯಾ ।
ಅಕಾಮಾ ತ್ವದ್ವಶಂ ಸೀತಾ ನಷ್ಟನಾಥಾ ಗಮಿಷ್ಯತಿ ॥ ೩೨

ರಂಜನೀಯಂ ಹಿ ಭರ್ತಾರಂ ವಿನಷ್ಟಮವಗಮ್ಯ ಸಾ ।
ನೈರಾಶ್ಯಾತ್ ಸ್ತ್ರೀಲಘುತ್ವಾಚ್ಚ ತ್ವದ್ವಶಂ ಪ್ರತಿಪತ್ಸ್ಯತೇ ॥ ೩೩

ಸಾ ಪುರಾ ಸುಖಸಂವೃದ್ಧಾ ಸುಖಾರ್ಹಾ ದುಃಖಕರ್ಶಿತಾ ।
ತ್ವಯ್ಯಧೀನಂ ಸುಖಂ ಜ್ಞಾತ್ವಾ ಸರ್ವಥೋಪಗಮಿಷ್ಯತಿ ॥ ೩೪

ಏತತ್ ಸುನೀತಂ ಮಮ ದರ್ಶನೇನ
ರಾಮಂ ಹಿ ದೃಷ್ಟ್ವೈವ ಭವೇದನರ್ಥಃ ।
ಇಹೈವ ತೇ ಸೇತ್ಸ್ಯತಿ ಮೋತ್ಸುಕೋ ಭೂ–
ರ್ಮಹಾನಯುದ್ಧೇನ ಸುಖಸ್ಯ ಲಾಭಃ ॥ ೩೫

---

ಆಗ ನೀನು ಏಕಾಂತದಲ್ಲಿ ಸೀತೆಯನ್ನು ಕಂಡು ಮೃದುನುಡಿಗಳಿಂದ ಅವಳನ್ನು ಸಂತೈಸು. ಧನಧಾನ್ಯಗಳನ್ನೂ ರತ್ನಗಳನ್ನೂ ಬಯಸಿದ ವಸ್ತುಗಳನ್ನೂ ಬೇಕಾದಷ್ಟು ಕೊಟ್ಟು ಆಸೆಯನ್ನು ಹುಟ್ಟಿಸಿ ಸೀತೆಯನ್ನು ವಶಪಡಿಸಿಕೊ! (೩೧). ಈ ಯುಕ್ತಿಯಿಂದ ಸೀತೆಗೆ ಭಯಶೋಕಗಳು ಆವರಿಸುತ್ತವೆ. ತನ್ನ ಪತಿಯು ಸತ್ತನೆಂದು ತಿಳಿದು ಬೇರೆ ಉಪಾಯವಿಲ್ಲದೆ, ಅವಳು ನಿನಗೆ ವಶಳಾಗುವಳು. ಮಹಾರಾಜ, ತನ್ನ ಪ್ರಿಯಪತಿಯು ಮೃತನಾದನೆಂದೇ ಸೀತೆಯು ತಿಳಿದುಕೊಳ್ಳುವಳು. ನಿರಾಸೆಯಿಂದಲೂ ಸ್ತ್ರೀಸಹಜವಾದ ಚಾಪಲ್ಯದಿಂದಲೂ ಅವಳು ನಿನ್ನ ಕೈಸೇರುವಳು (೩೨–೩೩). ಅವಳು ಹಿಂದೆ ಸುಖವಾಗಿ ಬೆಳೆದವಳು. ಸುಖದಲ್ಲಿ ಇರಬೇಕಾದವಳು. ಈಗ ನಾನಾಬಗೆಯ ದುಃಖದಿಂದ ನೊಂದು ಬೆಂದಿರುವಳು. ನಿನ್ನನ್ನು ಸೇರಿದರೇ ಸುಖವಿದೆಯೆಂದು ಅವಳಿಗೆ ಮನದಟ್ಟಾದಮೇಲೆ, ನಿಶ್ಚಯವಾಗಿಯೂ ನಿನ್ನನ್ನಾಶ್ರಯಿಸುವಳು (೩೪). ರಾಕ್ಷಸೇಂದ್ರ, ನನ್ನ ದೃಷ್ಟಿಯಲ್ಲಿ ಇದೇ ಸರಿಯಾದ ಸುಖಮಾರ್ಗ. ರಾಮನನ್ನೆದುರಿಸಿದರೆ ಅನರ್ಥವೇ ಸಂಭವಿಸುತ್ತದೆ. ಇಲ್ಲಿಯೇ ನಿನ್ನ ಇಷ್ಟ ಕೈಗೊಡುವುದು. ಯುದ್ಧದಲ್ಲಿ ಆಸಕ್ತಿಯನ್ನು ತೋರಿಸಬೇಡ. ಯುದ್ಧ

ಅನಷ್ಟಸೈನ್ಯೋ ಹ್ಯನವಾಪ್ತಸಂಶಯೋ
ರಿಪೂನಯುದ್ಧೇನ ಜಯನ್ನರಾಧಿಪಃ ।
ಯಶಶ್ಚ ಪುಣ್ಯಂ ಚ ಮಹನ್ಮಹೀಪತೇ
ಶ್ರೀಯಂ ಚ ಕೀರ್ತಿಂ ಚ ಚಿರಂ ಸಮಶ್ನುತೇ ॥ ೩೬

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುಃಷಷ್ಟಿತಮಃ ಸರ್ಗಃ

---

ವಿಲ್ಲದೆಯೇ ಸುಖವು ಲಭಿಸುವುದು (೩೫). ಮಹಾಪ್ರಭು, ರಾಜನು ಯುದ್ಧ ಮಾಡದೆಯೇ ಉಪಾಯದಿಂದ ಶತ್ರುವನ್ನು ಪರಾಭವಗೊಳಿಸಿದರೆ, ಸೇನೆಯೂ ನಷ್ಟವಾಗುವುದಿಲ್ಲ ; ವಿಪತ್ತಿನ ಸಂಶಯಕ್ಕೂ ಸಿಕ್ಕಿಕೊಳ್ಳುವುದಿಲ್ಲ ಯಶಸ್ಸೂ ಬರುತ್ತದೆ ಹಿಂಸೆಯಿಲ್ಲದ್ದರಿಂದ ಪುಣ್ಯವೂ ಉಂಟು. ಚಿರಕಾಲದವರೆಗೆ ಐಶ್ವರ್ಯವೂ ಕೀರ್ತಿಯೂ ಲಭಿಸುತ್ತವೆ ''* ಎಂದು ಹೇಳಿದನು (೩೬).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಅರುವತ್ತುನಾಲ್ಕನೆಯ ಸರ್ಗ

---

*ಸೀತೆಯು ಪರಿಶುದ್ಧಳಾಗಿಲ್ಲವೆಂದು ತಿಳಿದು ನಿರಾಸೆಯಿಂದ ಶ್ರೀರಾಮನು ಯುದ್ಧ ಮಾಡದೆಯೇ ಹೊರಟುಹೋಗುವನು ಮಹೋದರನ ಅಭಿಪ್ರಾಯ.

## ಪಂಚಷಷ್ಟಿತಮಃ ಸರ್ಗಃ

ಕುಂಭಕರ್ಣಾಭಿಷೇಣನಮ್

**ಸ ತಥೋಕ್ತಸ್ತು ನಿರ್ಭರ್ತ್ಸ್ಯ ಕುಂಭಕರ್ಣೋ ಮಹೋದರಮ್ ।**
**ಅಬ್ರವೀದ್ರಾಕ್ಷಸಶ್ರೇಷ್ಠಂ ಭ್ರಾತರಂ ರಾವಣಂ ತತಃ ॥** ೧

**ಸೋಽಹಂ ತವ ಭಯಂ ಘೋರಂ ವಧಾತ್ತಸ್ಯ ದುರಾತ್ಮನಃ ।**
**ರಾಮಸ್ಯಾದ್ಯ ಪ್ರಮಾರ್ಜಾಮಿ ನಿರ್ವೈರೋ ಹಿ ಸುಖೀ ಭವ ॥** ೨

**ಗರ್ಜಂತಿ ನ ವೃಥಾ ಶೂರಾ ನಿರ್ಜಲಾ ಇವ ತೋಯದಾಃ ।**
**ಪಶ್ಯ ಸಂಪದ್ಯಮಾನಂ ತು ಗರ್ಜಿತಂ ಯುಧಿ ಕರ್ಮಣಾ ॥** ೩

**ನ ಮರ್ಷಯತಿ ಜಾತ್ಮಾನಂ ಸಂಭಾವಯತಿ ನಾತ್ಮನಾ ।**
**ಅದರ್ಶಯಿತ್ವಾ ಶೂರಾಸ್ತು ಕರ್ಮ ಕುರ್ವಂತಿ ದುಷ್ಕರಮ್ ॥** ೪

### ಸರ್ಗ ೬೫

ಕುಂಭಕರ್ಣನು ಮಹೋದರನನ್ನು ನಿಂದಿಸಿ, ರಾಕ್ಷಸಪರಿವಾರದೊಂದಿಗೆ ಯುದ್ಧಸನ್ನದ್ಧನಾಗಿ ಹೊರಡುವುದು. ದಾರಿಯಲ್ಲಿ ದುಶ್ಶಕುನಗಳು, ವಾನರರಿಗೆ ಭಯ.

ಆಗ ಕುಂಭಕರ್ಣನು ಮಹೋದರನನ್ನು ಗದರಿಸಿ, ತನ್ನ ಅಣ್ಣನಾದ ರಾವಣನನ್ನು ನೋಡುತ್ತ ಹೀಗೆಂದನು : "ಅಣ್ಣ, ದುರಾತ್ಮನಾದ ರಾಮನನ್ನು ನಾನು ಸಂಹರಿಸಿ, ನಿನಗೊದಗಿದ ಘೋರಭಯವನ್ನು ತೊಡೆದುಹಾಕುವೆನು! ವೈರಿಯ ನಾಶದಿಂದ ಸುಖವಾಗಿ ಬಾಳು (೧–೨). ಶೂರರ ಗರ್ಜನೆಯೆಂಬುದು ನೀರಿಲ್ಲದ ಮೋಡಗಳ ಗುಡುಗಿನಂತೆ ವ್ಯರ್ಥವಾಗತಕ್ಕದ್ದಲ್ಲ. ಸಂಗ್ರಾಮದಲ್ಲಿ ಕಾರ್ಯವನ್ನು ಮಾಡಿ, ಈ ಗರ್ಜನೆಯು ಸಾರ್ಥಕವೆಂಬುದನ್ನು ತೋರಿಸಿಕೊಡುತ್ತೇನೆ, ನೋಡುತ್ತಿರು (೩). ಶೂರರಾದವರು ಇನ್ನೊಬ್ಬರ ಅವಮಾನದ ಹೇಳಿಕೆಯನ್ನು ಎಂದಿಗೂ ಸಹಿಸಿಕೊಳ್ಳುವುದಿಲ್ಲ, ತಮ್ಮನ್ನು ತಾವೇ ಹೊಗಳಿಕೊಳ್ಳುವುದೂ ಇಲ್ಲ. ಶೂರರು ತಮ್ಮ ಸಾಮರ್ಥ್ಯವನ್ನು ಹೇಳಿಕೊಳ್ಳದೆಯೇ ಅದ್ಭುತವಾದ ಕಾರ್ಯವನ್ನು ಮಾಡಿ ತೋರಿಸುತ್ತಾರೆ! (೪).

ವಿಕ್ಲವಾನಾಮಬುದ್ಧೀನಾಂ ರಾಜ್ಞಾ ಪಂಡಿತಮಾನಿನಾಮ್ ।
ಶೃಣ್ವತಾ ಸಾದಿತಮಿದಂ ತ್ವದ್ವಿಧಾನಾಂ ಮಹೋದರ ॥ ೫

ಯುದ್ಧೇ ಕಾಪುರುಷೈರ್ನಿತ್ಯಂ ಭವದ್ಭಿಃ ಪ್ರಿಯವಾದಿಭಿಃ ।
ರಾಜಾನಮನುಗಚ್ಛದ್ಭಿಃ ಕೃತ್ಯಮೇತದ್ಧಿ ಸಾಧಿತಮ್ ॥ ೬

ರಾಜಶೇಷಾ ಕೃತಾ ಲಂಕಾ ಕ್ಷೀಣಃ ಕೋಶೋ ಬಲಂ ಹತಮ್ ।
ರಾಜಾನಮಿಮಮಾಸಾದ್ಯ ಸುಹೃಚ್ಚಿಹ್ನಮಮಿತ್ರಕಮ್ ॥ ೭

ಏಷ ನಿರ್ಯಾಮ್ಯಹಂ ಯುದ್ಧಮುದ್ಯತಃ ಶತ್ರುನಿರ್ಜಯೇ ।
ದುರ್ನಯಂ ಭವತಾಮದ್ಯ ಸಮೀಕರ್ತುಮಿಹಾಹವೇ ॥ ೮

ಏವಮುಕ್ತವತೋ ವಾಕ್ಯಂ ಕುಂಭಕರ್ಣಸ್ಯ ಧೀಮತಃ ।
ಪ್ರತ್ಯುವಾಚ ತತೋ ವಾಕ್ಯಂ ಪ್ರಹಸನ್ ರಾಕ್ಷಸಾಧಿಪಃ ॥ ೯

ಮಹೋದರೋಽಯಂ ರಾಮಾತ್ತು ಪರಿತ್ರಸ್ತೋ ನ ಸಂಶಯಃ ।
ನ ಹಿ ರೋಚಯತೇ ತಾತ ಯುದ್ಧಂ ಯುದ್ಧವಿಶಾರದ ॥ ೧೦

---

ಎಲಾ ಮಹೋದರ, ಹೇಡಿಗಳೂ ಬುದ್ಧಿಹೀನರೂ ತಾವೇ ಪಂಡಿತರೆಂದು ಒಣಹೆಮ್ಮೆ ಪಡತಕ್ಕವರೂ ಆದ ನಿನ್ನಂಥವರ ಮಾತನ್ನು ಕೇಳಿ, ಮಹಾರಾಜನು ಈ ಕಷ್ಟವನ್ನು ತಂದುಕೊಂಡಿದ್ದಾನೆ. ಯುದ್ಧಕ್ಕೆ ಅಂಜುವ ಹೇಡಿಗಳು ನೀವು! ಮಹಾರಾಜನಿಗೆ ಯಾವಾಗಲೂ ಪ್ರಿಯವಾದ ಮಾತುಗಳನ್ನಾಡುತ್ತ ಅನುಸರಣೆ ಮಾಡತಕ್ಕವರು ನೀವು! ಸೀತಾಪಹರಣವೆಂಬ ಈ ಕೃತ್ಯವು ನಿಮ್ಮಿಂದಲೇ ನಡೆದಿದೆ! (೫–೬). ಈ ಲಂಕೆಯಲ್ಲಿ ರಾಜನೊಬ್ಬನುಳಿದು ಇತರ ಪ್ರಜೆಗಳು ಹತರಾಗುವಂತೆ ಮಾಡಿದವರು ನೀವು! ರಾಜಭಂಡಾರವನ್ನು ಬರಿದುಮಾಡಿದವರು ನೀವು! ರಾಕ್ಷಸಸೇನೆಯ ವಿನಾಶಕ್ಕೆ ನೀವೇ ಕಾರಣ. ಈ ರಾಕ್ಷಸೇಂದ್ರನ ಬಳಿಯಲ್ಲಿ ಸೇರಿಕೊಂಡು ಇಂಥ ಕೆಲಸಗಳನ್ನು ನಡೆಸಿದ್ದೀರಿ. ಸ್ನೇಹದ ಹೊದಿಕೆಯಲ್ಲಿ ಹಗೆತನವನ್ನು ಸಾಧಿಸಿದ್ದೀರಿ! (೭). ಇರಲಿ; ಇದೋ, ಶತ್ರುಗಳನ್ನು ಜಯಿಸಬೇಕೆಂಬ ದೃಢಸಂಕಲ್ಪದಿಂದ ಹೊರಡುತ್ತಿದ್ದೇನೆ. ನಿಮ್ಮೆಲ್ಲರ ದುರ್ನೀತಿಯನ್ನು ರಣರಂಗದಲ್ಲಿ ಧುಮುಕಿ ಸರಿಪಡಿಸುವೆನು!'' ಎಂದು ಗಜರಿದನು (೮). ಧೀರನಾದ ಕುಂಭಕರ್ಣನ ಮಾತನ್ನು ಕೇಳಿ ರಾವಣನು ನಗುತ್ತ ''ತಮ್ಮ ಕುಂಭಕರ್ಣ, ಈ ಮಹೋದರನು ರಾಮನಿಗೆ ಹೆದರಿದ್ದಾನೆ. ಅದರಲ್ಲಿ

ಕಶ್ಚಿನ್ಮೇ ತ್ವತ್ಸಮೋ ನಾಸ್ತಿ ಸೌಹೃದೇನ ಬಲೇನ ಚ ।
ಗಚ್ಛ ಶತ್ರುವಧಾಯ ತ್ವಂ ಕುಂಭಕರ್ಣ ಜಯಾಯ ಚ ॥ ೧೧

ತಸ್ಮಾತ್ತು ಭಯನಾಶಾರ್ಥಂ ಭವಾನ್ ಸಂಬೋಧಿತೋ ಮಯಾ ।
ಅಯಂ ಹಿ ಕಾಲಃ ಸುಹೃದಾಂ ರಾಕ್ಷಸಾನಾಮರಿಂದಮ ॥ ೧೨

ತದ್ಗಚ್ಛ ಶೂಲಮಾದಾಯ ಪಾಶಹಸ್ತ ಇವಾಂತಕಃ ।
ವಾನರಾನ್ ರಾಜಪುತ್ರೌ ಚ ಭಕ್ಷಯಾದಿತ್ಯ ತೇಜಸೌ ॥ ೧೩

ಸಮಾಲೋಕ್ಯ ತು ತೇ ರೂಪಂ ವಿದ್ರವಿಷ್ಯಂತಿ ವಾನರಾಃ ।
ರಾಮಲಕ್ಷ್ಮಣಯೋಶ್ಚಾಪಿ ಹೃದಯೇ ಪ್ರಸ್ಫುಟಿಷ್ಯತಃ ॥ ೧೪

ಏವಮುಕ್ತ್ವಾ ಮಹಾರಾಜಃ ಕುಂಭಕರ್ಣಂ ಮಹಾಬಲಮ್ ।
ಪುನರ್ಜಾತಮಿವಾತ್ಮಾನಂ ಮೇನೇ ರಾಕ್ಷಸಪುಂಗವಃ ॥ ೧೫

ಕುಂಭಕರ್ಣಬಲಾಭಿಜ್ಞೋ ಜಾನಂಸ್ತಸ್ಯ ಪರಾಕ್ರಮಮ್ ।
ಬಭೂವ ಮುದಿತೋ ರಾಜಾ ಶಶಾಂಕ ಇವ ನಿರ್ಮಲಃ ॥ ೧೬

---

ಸಂದೇಹವೇ ಇಲ್ಲ. ಆದ್ದರಿಂದ ಅವನಿಗೆ ಯುದ್ಧವು ಬೇಡವೆನಿಸಿದೆ! ನೀನು ಯುದ್ಧವಿಶಾರದನಾಗಿದ್ದೀಯ (೯–೧೦). ಸ್ನೇಹದಲ್ಲಾಗಲಿ ಶೌರ್ಯದಲ್ಲಾಗಲಿ ನಿನಗೆಣೆಯಾದ ಇನ್ನೊಬ್ಬನು ನನಗಿಲ್ಲ. ಕುಂಭಕರ್ಣ, ವೈರಿಯನ್ನು ವಧಿಸುವುದಕ್ಕಾಗಿ ಹೋಗಿ ಬಾ. ಜಯವನ್ನು ಗಳಿಸಿಕೊಂಡು ಬಾ. ಆ ವೈರಿಯಿಂದಾದ ಭಯವನ್ನು ಹೋಗಲಾಡಿಸಲೆಂದೇ ನಿನ್ನನ್ನು ನಾನು ಎಬ್ಬಿಸಿದೆನು. ಶೂರಾಗ್ರಣಿ, ಆಪ್ತರಾದವರಿಗೆ ನನ್ನಲ್ಲಿಟ್ಟಿರುವ ಪ್ರೀತಿಯನ್ನು ತೋರಿಸಲು ಇದೇ ಸಮಯವಲ್ಲವೆ?(೧೧–೧೨). ಆದ್ದರಿಂದ, ನಿನ್ನ ಶೂಲವನ್ನು ಹಿಡಿದು, ಪಾಶಹಸ್ತನಾದ ಯಮನಂತೆ ರಣಭೂಮಿಯಲ್ಲಿ ಧುಮುಕು, ಕಪಿಗಳನ್ನೂ ಸೂರ್ಯನಂತೆ ಬೆಳಗುವ ಆ ಇಬ್ಬರು ರಾಜಪುತ್ರರನ್ನೂ ತಿಂದುಬಿಡು! ನಿನ್ನ ಭೀಕರರೂಪವನ್ನು ನೋಡಿಯೇ ಆ ಮಂಗಗಳು ಓಡಿಹೋಗುತ್ತವೆ. ರಾಮಲಕ್ಷ್ಮಣರಿಗೆ ಹೃದಯಸ್ಫೋಟವಾಗುವುದು!'' ಎಂದನು (೧೩–೧೪). ರಾಕ್ಷಸೇಂದ್ರನು ಬಲಾಢ್ಯನಾದ ಕುಂಭಕರ್ಣನಿಗೆ ಈ ರೀತಿಯಲ್ಲಿ ಹೇಳಿ, (ಕುಂಭಕರ್ಣನ ರಣೋತ್ಸುಕತೆಯನ್ನು ಕಂಡು) ತಾನು ಮತ್ತೆ ಹುಟ್ಟಿ ಬಂದೆನೋ ಎಂಬಂತೆ ತಿಳಿದುಕೊಂಡನು (೧೫). ಕುಂಭಕರ್ಣನ ಸಾಮರ್ಥ್ಯವೇನು, ಅವನ

ಇತ್ಯೇವಮುಕ್ತಃ ಸಂಹೃಷ್ಟೋ ನಿರ್ಜಗಾಮ ಮಹಾಬಲಃ ।
ರಾಕ್ಷಸಸ್ತು ವಚನಂ ಶ್ರುತ್ವಾ ಕುಂಭಕರ್ಣಃ ಸಮುದ್ಯತಃ ॥ ೧೭

ಆದದೇ ನಿಶಿತಂ ಶೂಲಂ ವೇಗಾಚ್ಛತ್ರುನಿಬರ್ಹಣಮ್ ।
ಸರ್ವಕಾಲಾಯಸಂ ದೀಪ್ತಂ ತಪ್ತಕಾಂಚನಭೂಷಣಮ್ ॥ ೧೮

ಇಂದ್ರಾಶನಿಸಮಂ ಭೀಮಂ ವಜ್ರಪ್ರತಿಮಗೌರವಮ್ ।
ದೇವದಾನವಗಂಧರ್ವಯಕ್ಷಕಿನ್ನರಸೂದನಮ್ ॥ ೧೯

ರಕ್ತಮಾಲ್ಯಂ ಮಹಾಧಾಮ ಸ್ವತಶ್ಚೋದ್ಗತಪಾವಕಮ್ ।
ಆದಾಯ ನಿಶಿತಂ ಶೂಲಂ ಶತ್ರುಶೋಣಿತರಂಜಿತಮ್ ॥ ೨೦

ಕುಂಭಕರ್ಣೋ ಮಹಾತೇಜಾ ರಾವಣಂ ವಾಕ್ಯಮಬ್ರವೀತ್ ।
ಗಮಿಷ್ಯಾಮ್ಯಹಮೇಕಾಕೀ ತಿಷ್ಠತ್ವಿಹ ಬಲಂ ಮಹತ್ ॥ ೨೧

ಅದ್ಯ ತಾನ್ ಕ್ಷುಧಿತಃ ಕ್ರುದ್ಧೋ ಭಕ್ಷಯಿಷ್ಯಾಮಿ ವಾನರಾನ್ ।
ಕುಂಭಕರ್ಣವಚಃ ಶ್ರುತ್ವಾ ರಾವಣೋ ವಾಕ್ಯಮಬ್ರವೀತ್ ॥ ೨೨

---

ಪಾರಕ್ರಮವೆಂತಹುದು –ಎಂಬ ಅರಿವು ರಾವಣನಿಗೆ ಸಂಪೂರ್ಣವಾಗಿದ್ದುದರಿಂದ, ಅವನು ನಿಶ್ಚಿಂತನಾಗಿ ನಿರ್ಮಲಚಂದ್ರಮನಂತೆ ಪ್ರಸನ್ನನಾದನು. ರಾವಣನ ಹೊಗಳಿಕೆಯ ಮಾತನ್ನು ಕೇಳಿ ಮಹಾಬಲನಾದ ಕುಂಭಕರ್ಣನು ಹರ್ಷೋನ್ಮತ್ತನಾಗಿ ಎದ್ದುನಿಂತನು ! (೧೬–೧೭). ವೈರಿನಿಬರ್ಹಣವಾದ ತನ್ನ ನಿಶಿತಶೂಲವನ್ನು ಸರ್‍ರನೆ ಕೈಗೆತ್ತಿಕೊಂಡನು. ಅದು ಎಂತಹ ಶೂಲ? ಉಕ್ಕಿನಿಂದ ನಿರ್ಮಿತವಾಗಿ ಚಿನ್ನದ ಹಿಡಿಯಿಂದ ಮಿರಮಿರನೆ ಮಿರುಗುತ್ತಿದ್ದುದು. ಇಂದ್ರನ ವಜ್ರಾಯುಧದಂತೆ ಘೋರವಾದುದು. ವಜ್ರದಂತೆ ಘನವಾದ ಭಾರವುಳ್ಳುದು. ದೇವಾದಾನಗಂಧರ್ವರನ್ನೂ ಯಕ್ಷಕಿನ್ನರರನ್ನೂ ಹುರಿದು ಮುಕ್ಕಿದುದು (೧೮–೧೯). ಕೆಂಪು ಹೂಮಾಲೆಯಿಂದ ಭೂಷಿತವಾದುದು. ಕಿಡಿಯುಗುಳುವುದೋ ಎಂಬಂತೆ ಥಳಥಳನೆ ಹೊಳೆಯುತ್ತಿದ್ದುದು. ಶತ್ರುಗಳ ನೆತ್ತರಲ್ಲಿ ನೆನೆದುಹೋದುದು (೨೦). ಹರಿತವಾದ ಆ ಶೂಲವನ್ನು ಕೈಗೆತ್ತಿಕೊಂಡು ಅದ್ಭುತಸಾಹಸಿಯಾದ ಕುಂಭಕರ್ಣನು "ಅಣ್ಣ, ನಾನೊಬ್ಬನೇ ರಣರಂಗಕ್ಕೆ ಸಾಗುವೆನು. ಈ ನಿನ್ನ ದೊಡ್ಡ ಸೇನೆಯು ಇಲ್ಲಿಯೇ ಇರಲಿ! ನನಗೆ ಸಿಟ್ಟುಬಂದಿದೆ; ಹಸಿವಾಗಿದೆ. ಆ ವಾನರರನ್ನು ನಾನೊಬ್ಬನೇ ತಿಂದು

ಸೈನ್ಯೈಃ ಪರಿವೃತೋ ಗಚ್ಛ ಶೂಲಮುದ್ಗರಪಾಣಿಭಿಃ ।
ವಾನರಾ ಹಿ ಮಹಾತ್ಮಾನಃ ಶೀಘ್ರಾಃ ಸುವ್ಯವಸಾಯಿನಃ ॥ ೨೩

ಏಕಾಕಿನಂ ಪ್ರಮತ್ತಂ ವಾ ನಯೇಯುರ್ದಶನೈಃ ಕ್ಷಯಮ್ ।
ತಸ್ಮಾತ್ ಪರಮದುರ್ಧರ್ಷೈಃ ಸೈನ್ಯೈಃ ಪರಿವೃತೋ ವ್ರಜ ॥ ೨೪

ರಕ್ಷಸಾಮಹಿತಂ ಸರ್ವಂ ಶತ್ರುಪಕ್ಷಂ ನಿಷೂದಯ ।
ಅಥಾಸನಾತ್ ಸಮುತ್ಪತ್ಯ ಸ್ರಜಂ ಮಣಿಕೃತಾಂತರಾಮ್ ॥ ೨೫

ಆಬಬಂಧ ಮಹಾತೇಜಾಃ ಕುಂಭಕರ್ಣಸ್ಯ ರಾವಣಃ ।
ಅಂಗದಾನ್ಯಂಗುಲೀವೇಷ್ಟಾನ್ ವರಾಣ್ಯಾಭರಣಾನಿ ಚ ॥ ೨೬

ಹಾರಂ ಚ ಶಶಿಸಂಕಾಶಮಾಬಬಂಧ ಮಹಾತ್ಮನಃ ।
ದಿವ್ಯಾನಿ ಚ ಸುಗಂಧೀನಿ ಮಾಲ್ಯದಾಮಾನಿ ರಾವಣಃ ॥ ೨೭

ಶ್ರೋತ್ರೇ ಚಾಸಂಜಯಾಮಾಸ ಶ್ರೀಮತೀ ಚಾಸ್ಯ ಕುಂಡಲೇ ।
ಕಾಂಚನಾಂಗದಕೇಯೂರನಿಷ್ಕಾಭರಣಭೂಷಿತಃ ॥ ೨೮

---

ಬಿಡುವೆನು!'' ಎಂದನು (೨೧–೨೨). ಆಗ ರಾವಣನು ''ಕುಂಭಕರ್ಣ, ರಾಕ್ಷಸಯೋಧರಿಂದ ಪರಿವೃತನಾಗಿ ಹೋಗು. ಅವರು ಶೂಲಮುದ್ಗರಾದಿಗಳನ್ನು ಧರಿಸಿ ನಿನ್ನೊಡನೆ ಬರಲಿ. ವಾನರರು ಬಹಳ ಬುದ್ಧಿಶಾಲಿಗಳ; ಚಟುಲಗಾಮಿಗಳು; ದೃಢಸಂಕಲ್ಪದಿಂದ ಹೋರಾಡತಕ್ಕವರು (೨೩). ನೀನು ಏಕಾಕಿಯಾದಾಗ, ಸ್ವಲ್ಪ ಪ್ರಮಾದವಾದರೆ ಸಾಕು, ಹಲ್ಲುಗಳಿಂದ ಸಿಗಿದು ಬಿಟ್ಟಾರು! ಆದ್ದರಿಂದ ಅತ್ಯಂತ ಬಲಾಢ್ಯರಾದ ಸೈನಿಕರಿಂದ ಪರಿವೃತನಾಗಿ ಹೋಗು. ಶತ್ರುಗಳಲ್ಲಿ ದಕ್ಷರಾದ ಸಕಲರನ್ನೂ ಸಂಹರಿಸು'' ಎಂದು ಹೇಳಿ ತನ್ನ ಪೀಠದಿಂದೆದ್ದು ರತ್ನಭೂಷಿತವಾದ ಒಂದು ಹಾರವನ್ನು ಕುಂಭಕರ್ಣನ ಕೊರಳಿಗೆ ಹಾಕಿದನು (೨೪–೨೫). ಅನಂತರ ರಾವಣನು ಅವನ ತೋಳುಗಳಿಗೆ ತೋಳ್ಬಂದಿಗಳನ್ನು ತೊಡಿಸಿ, ಬೆರಳುಗಳಿಗೆ ಉಂಗುರಗಳನ್ನಿಟ್ಟು, ಉತ್ತಮವಾದ ಆಭರಣಗಳಿಂದ ಅಲಂಕರಿಸಿದನು. ಚಂದ್ರನಂತೆ ಹೊಳೆಯುವ ಮುತ್ತಿನಸರವನ್ನು ಕುಂಭಕರ್ಣನಿಗೆ ಹಾಕಿ, ಪರಿಮಳವನ್ನು ಬೀರುವ ದಿವ್ಯ ಪುಷ್ಪಮಾಲೆಗಳಿಂದ ಅವನನ್ನು ಸಿಂಗರಿಸಿದನು (೨೬–೨೭). ಅಷ್ಟೇ ಅಲ್ಲ, ರಾವಣನು ಹೊಳೆಯುವ ಎರಡು ಕುಂಡಲಗಳನ್ನು ಕುಂಭಕರ್ಣನ ಬೃಹತ್ತರ

ಕುಂಭಕರ್ಣೋ ಬೃಹತ್ಕರ್ಣಃ ಸುಹುತೋಽಗ್ನಿರಿವಾಬಭೌ ।
ಶ್ರೋಣೀಸೂತ್ರೇಣ ಮಹತಾ ಮೇಚಕೇನ ವ್ಯರಾಜತ ॥ ೨೯

ಅಮೃತೋತ್ಪಾದನೇ ನದ್ಧೋ ಭುಜಂಗೇನೇವ ಮಂದರಃ ॥

ಸ ಕಾಂಚನಂ ಭಾರಸಹಂ ನಿವಾತಂ
ವಿದ್ಯುತ್ಪ್ರಭಂ ದೀಪ್ತಮಿವಾತ್ಮಭಾಸಾ ।
ಆಬಧ್ಯಮಾನಃ ಕವಚಂ ರರಾಜ
ಸಂಧ್ಯಾಭ್ರಸಂವೀತ ಇವಾದ್ರಿರಾಜಃ ॥ ೩೦

ಸರ್ವಾಭರಣನದ್ಧಾಂಗಃ ಶೂಲಪಾಣಿಃ ಸ ರಾಕ್ಷಸಃ ।
ತ್ರಿವಿಕ್ರಮಕೃತೋತ್ಸಾಹೋ ನಾರಾಯಣ ಇವಾಬಭೌ ॥ ೩೧

ಭ್ರಾತರಂ ಸಂಪರಿಷ್ವಜ್ಯ ಕೃತ್ವಾ ಚಾಭಿಪ್ರದಕ್ಷಿಣಮ್ ।
ಪ್ರಣಮ್ಯ ಶಿರಸಾ ತಸ್ಮೈ ಸಂಪ್ರತಸ್ಥೇ ಮಹಾಬಲಃ ॥ ೩೨

---

ವಾದ ಕಿವಿಗಳಿಗೆ ತೊಡಿಸಿದನು. ಹೀಗೆ ಬಂಗಾರದ ಅಂಗದ, ಕೇಯೂರ, ವಕ್ಷೋಭೂಷಣಗಳಿಂದ ಭೂಷಿತನಾದ ಕುಂಭಕರ್ಣನು, ಅಗ್ನಿ ಕುಂಡದಲ್ಲಿ ತುಪ್ಪವನ್ನು ಸುರಿದಾಗ ಮೇಲೇಳುವ ಅಗ್ನಿಯಂತೆ, ತೊಳತೊಳಗುತ್ತಿದ್ದನು (೨೮). ಆ ಕುಂಭಕರ್ಣನು ಬಹಳ ದಪ್ಪನಾದ ಕರ್ರನೆಯ ಸೊಂಟದ ಪಟ್ಟಿಯನ್ನು ಬಿಗಿದಿರಲು, ಅಮೃತಮಂಥನಕಾಲದಲ್ಲಿ ವಾಸುಕಿಯನ್ನು ಸುತ್ತಿದ ಮಂದರ ಪರ್ವತದಂತೆ ಕಂಗೊಳಿಸಿದನು (೨೯). ಕಾಂಚನಭೂಷಿತವೂ ಮಣಗಟ್ಟಲೆ ಭಾರವುಳ್ಳದ್ದಾಗಿಯೂ ಶಸ್ತ್ರಾಭೇದ್ಯವೂ* ಆದ ಕವಚವನ್ನು ಕುಂಭಕರ್ಣನು ತೊಟ್ಟನು. ಆ ಕವಚವು ಮಿಂಚಿನಂತೆ ದೇದೀಪ್ಯಮಾನವಾಗಿತ್ತು. ಆ ಕವಚವನ್ನು ಧರಿಸಿದ ಕುಂಭಕರ್ಣನು, ಸಂಜೆಯ ಮೋಡದಿಂದ ಆವೃತವಾದ ಅಸ್ತಾಚಲದಂತೆ ತೋರಿದನು (೩೦). ಹೀಗೆ ಸರ್ವಾಭರಣಭೂಷಿತನಾಗಿ ಶೂಲಪಾಣಿಯಾಗಿ ನಿಂತ ಆ ರಾಕ್ಷಸನು ಮೂರುಲೋಕಗಳನ್ನೂ ಮೀರಿಸಲು ಹವಣಿಸಿದ ತ್ರಿವಿಕ್ರಮನಂತೆ ರಾರಾಜಿಸಿದನು. ಆಮೇಲೆ ಆ ಬಲಾಢ್ಯನು

---

* ನಿವೇತ = ಶಸ್ತ್ರಗಳಿಗೆ ಅಭೇದ್ಯವಾದುದು. ನಿವಾತಾವಾಶ್ರಯಾವಾತೌ ಶಸ್ತ್ರಾಭೇದ್ಯಂ ಚ ವರ್ಮ ಯತ್– ಅಮರಕೋಶ.

ನಿಷ್ಪತಂತಂ ಮಹಾಕಾಯಂ ಮಹಾನಾದಂ ಮಹಾಬಲಮ್ ।
ತಮಾಶೀರ್ಭಿಃ ಪ್ರಶಸ್ತಾಭಿಃ ಪ್ರೇಷಯಾಮಾಸ ರಾವಣಃ ॥ ೩೩

ಶಂಖದುಂದುಭಿನಿರ್ಘೋಷೈಃ ಸೈನ್ಯೈಶ್ಚಾಪಿ ವರಾಯುಧೈಃ ।
ತಂ ಗಜೈಶ್ಚ ತುರಂಗೈಶ್ಚ ಸ್ಯಂದನೈಶ್ಚಾಂಬುದಸ್ವನೈಃ ॥ ೩೪

ಅನುಜಗ್ಮುರ್ಮಹಾತ್ಮಾನಂ ರಥಿನೋ ರಥಿನಾಂ ವರಮ್ ।
ಸರ್ಪೈರುಷ್ಟ್ರೈಃ ಖರೈರಶ್ವೈಃ ಸಿಂಹದ್ವಿಪಮೃಗದ್ವಿಜೈಃ ॥ ೩೫

ಅನುಜಗ್ಮುಶ್ಚ ತಂ ಘೋರಂ ಕುಂಭಕರ್ಣಂ ಮಹಾಬಲಮ್ ॥

ಸ ಪುಷ್ಪವರ್ಷೈರವಕೀರ್ಯಮಾಣೋ
ಧೃತಾತಪತ್ರಃ ಶಿತಶೂಲಪಾಣಿಃ ।
ಮದೋತ್ಕಟಃ ಶೋಣಿತಗಂಧಮತ್ತೋ
ವಿನಿರ್ಯಯೌ ದಾನವದೇವಶತ್ರುಃ ॥ ೩೬

---

ಅಣ್ಣನಾದ ರಾವಣನನ್ನು ಆಲಿಂಗಿಸಿಕೊಂಡು ಪ್ರದಕ್ಷಿಣೆಮಾಡಿ ತಲೆಬಾಗಿ ವಂದಿಸಿ, ರಣಭೂಮಿಗೆ ಹೊರಟನು (೩೧–೩೨). ಮಹಾಕಾಯನೂ ಮಹಾಬಲನೂ ಆದ ಕುಂಭಕರ್ಣನು ಗಜಿಸುತ್ತ ಯುದ್ಧೋನ್ಮುಖವಾಗಿ ಹೊರಡುತ್ತಿರಲು, ರಾವಣನು ಅವನಿಗೆ ಆಶೀರ್ವಾದವನ್ನು ಮಾಡಿ ಬೀಳ್ಕೊಟ್ಟನು (೩೩). ಆಗ ಉತ್ತಮಾಯುಧಗಳನ್ನು ಧರಿಸಿದ್ದ ರಾಕ್ಷಸಯೋಧರು ಶಂಖಗಳನ್ನೂದುತ್ತ ರಣಭೇರಿಗಳನ್ನು ಹೊಯ್ಯುತ್ತ ಆನೆಗಳನ್ನೂ ಕುದುರೆಗಳನ್ನೂ ಮೇಘದಂತೆ ಗುಡುಗುಟ್ಟುವ ರಥಗಳನ್ನೂ ಏರಿ ಆ ಮಹಾರಥನನ್ನು ಹಿಂಬಾಲಿಸಿ ಪ್ರಯಾಣಮಾಡಿದರು. ಕೆಲವು ರಾಕ್ಷಸರು ಸರ್ಪ, ಒಂಟೆ, ಕತ್ತೆ ಕುದುರೆ, ಸಿಂಹ, ಆನೆಗಳನ್ನು ಹತ್ತಿದರು. ಕೆಲವರು ವನ್ಯಮೃಗಗಳನ್ನೂ ಪಕ್ಷಿಗಳನ್ನೂ ಏರಿದ್ದರು. ಅವರೆಲ್ಲರೂ ಕುಂಭಕರ್ಣನನ್ನು ಹಿಂಬಾಲಿಸಿ ಹೋದರು. (೩೪–೩೫). ದೇವದಾನವರನ್ನು ಭಗ್ನಗೊಳಿಸಿದ ಆ ಕುಂಭಕರ್ಣನು ಶ್ವೇತಛತ್ರವನ್ನು ಹಿಡಿದುಕೊಂಡು ಶೂಲಪಾಣಿಯಾಗಿ ರಾಜವೀಧಿಯಲ್ಲಿ ಹೋಗುತ್ತಿರಲು, ಇಬ್ಬದಿಯಿಂದಲೂ ಪೌರರು ಅವನ ಮೇಲೆ ಹೂಮಳೆ ಸುರಿಸುತ್ತಿದ್ದರು. ಮದೋದ್ಧತನಾದ ಆ ರಾಕ್ಷಸನಿಗೆ ರಕ್ತಪಾನದಿಂದ ಮತ್ತಷ್ಟು ಮದವೇರಿತ್ತು(೩೬).

ಪದಾತಯಶ್ಚ ಬಹವೋ ಮಹಾನಾದಾ ಮಹಾಬಲಾಃ ।
ಅನ್ವಯೂ ರಾಕ್ಷಸಾ ಭೀಮಾ ಭೀಮಾಕ್ಷಾಃ ಶಸ್ತ್ರಪಾಣಯಃ । ೩೭

ರಕ್ತಾಕ್ಷಾಃ ಸುಮಹಾಕಾಯಾ ನೀಲಾಂಜನಚಯೋಪಮಾಃ ।
ಶೂಲಾನುದ್ಯಮ್ಯ ಖಡ್ಗಾಂಶ್ಚ ನಿಶಿತಾಂಶ್ಚ ಪರಶ್ವಧಾನ್ ॥ ೩೮

ಬಹುವ್ಯಾಮಾಂಶ್ಚ ಪರಿಘಾನ್ ಗದಾಶ್ಚ ಮುಸಲಾನಿ ಚ ।
ತಾಲಸ್ಕಂಧಾಂಶ್ಚ ವಿಪುಲಾನ್ ಕ್ಷೇಪಣೀಯಾನ್ ದುರಾಸದಾನ್ ॥ ೩೯

ಅಥಾನ್ಯದ್ವಪುರಾದಾಯ ದಾರುಣಂ ರೋಮಹರ್ಷಣಮ್ ।
ನಿಷ್ಪಪಾತ ಮಹಾತೇಜಾಃ ಕುಂಭಕರ್ಣೋ ಮಹಾಬಲಃ ॥ ೪೦

ಧನುಃಶತಪರೀಣಾಹಃ ಸ ಷಟ್ಶತಸಮುಚ್ಛ್ರಿತಃ ।
ರೌದ್ರಃ ಶಕಟಚಕ್ರಾಕ್ಷೋ ಮಹಾಪರ್ವತಸಂನಿಭಃ ॥ ೪೧

---

ಅವನ ಹಿಂದೆ ಭೀಮಾಕಾರರೂ ಭೀಮಬಲರೂ ಕ್ರೂರನೇತ್ರರೂ ಆದ ಬಹುಮಂದಿ ಕಾಲಾಳುಗಳು ಶಸ್ತ್ರಪಾಣಿಗಳಾಗಿ ಪ್ರಯಾಣಮಾಡಿದರು. ಕಪ್ಪು ಕಾಡಿಗೆಯ ರಾಶಿಗಳಂತಿದ್ದ ಮಹಾಕಾಯರಾದ ರಾಕ್ಷಸರ ಕಣ್ಣುಗಳು ಕೆಂಪಡರಿದ್ದವು. ಕೆಲವರು ಶೂಲಗಳನ್ನೂ ಖಡ್ಗಗಳನ್ನೂ ಹರಿತವಾದ ಗಂಡುಗೊಡಲಿಗಳನ್ನೂ ಹಿಡಿದಿದ್ದರು (೩೭–೩೮). ಎಷ್ಟೋ ಮಾರುಗಳಷ್ಟು ಉದ್ದವಿದ್ದ ಪರಿಘಗಳನ್ನೂ ಗದೆಗಳನ್ನೂ ಮುಸಲಗಳನ್ನೂ ಕೆಲವರು ಹಿಡಿದಿದ್ದರು ಕೆಲವು ರಾಕ್ಷಸ ಭಟರು ತಾಳೆಯಮರದ ದೊಡ್ಡ ದೊಡ್ಡ ದಿಮ್ಮಿಗಳನ್ನು ಧರಿಸಿದ್ದಿರು. ಕೆಲವರು ಕ್ಷೇಪಣೀಯವೆಂಬ ಭೀಕರಾಯುಧಗಳನ್ನು ತಂದಿದ್ದರು (೩೯). ಅಷ್ಟರಲ್ಲಿ ಮಹಾಸಾಹಸಿಯಾದ ಕುಂಭಕರ್ಣನು ತನ್ನ ಅಲಂಕಾರವನ್ನು ಕಿತ್ತೊಗೆದು, ಮೈನವಿರೇಳಿಸುವ ಭೀಕರರೂಪನಾದನು ! ಅವನ ದೇಹದ ಸುತ್ತಳತೆ ಒಂದು ನೂರು ಧನಸ್ಸು*ಗಳಿಷ್ಟಿತ್ತು, ಎತ್ತರ ಆರುನೂರು ಧನಸ್ಸುಗಳಷ್ಟಿತ್ತು. ಪರ್ವತಾಕಾರನಾದ ಆ ರೌದ್ರರಾಕ್ಷಸನ ಕಣ್ಣುಗಳು ರಥದ ಚಕ್ರಗಳಂತಿದ್ದವು ! (೪೦–೪೧).

---

* ಧನಸ್ಸು=ನಾಲ್ಕು ಮೊಳ.ನೂರು ಧನಸ್ಸು= ನಾನೂರು ಮೊಳ–200ಗಜ. ಆರುನೂರು ಧನಸ್ಸು=1,200 ಗಜ–3,600ಅಡಿ.

ಸಂನಿಪತ್ಯ ಚ ರಕ್ಷಾಂಸಿ ದಗ್ಧಶೈಲೋಪಮೋ ಮಹಾನ್ ।
ಕುಂಭಕರ್ಣೋ ಮಹಾವಕ್ತ್ರಃ ಪ್ರಹಸನ್ನಿದಮಬ್ರವೀತ್ ॥ ೪೨

ಅದ್ಯ ವಾನರಮುಖ್ಯಾನಾಂ ತಾನಿ ಯೂಥಾನಿ ಭಾಗಶಃ ।
ನಿರ್ದಹಿಷ್ಯಾಮಿ ಸಂಕ್ರುದ್ಧಃ ಶಲಭಾನಿವ ಪಾವಕಃ ॥ ೪೩

ನಾಪರಾಧ್ಯಂತಿ ಮೇ ಕಾಮಂ ವಾನರಾ ವನಚಾರಿಣಃ ।
ಜಾತಿರಸ್ಮದ್ವಿಧಾನಾಂ ಸಾ ಪುರೋದ್ಯಾನವಿಭೂಷಣಮ್ ॥ ೪೪

ಪುರರೋಧಸ್ಯ ಮೂಲಂ ತು ರಾಘವಃ ಸಹಲಕ್ಷ್ಮಣಃ ।
ಹತೇ ತಸ್ಮಿನ್ ಹತಂ ಸರ್ವಂ ತಂ ವಧಿಷ್ಯಾಮಿ ಸಂಯುಗೇ ॥ ೪೫

ಏವಂ ತಸ್ಯ ಬ್ರುವಾಣಸ್ಯ ಕುಂಭಕರ್ಣಸ್ಯ ರಾಕ್ಷಸಾಃ ।
ನಾದಂ ಚಕ್ರುರ್ಮಹಾಘೋರಂ ಕಂಪಯಂತ ಇವಾರ್ಣವಮ್ ॥ ೪೬

ತಸ್ಯ ನಿಷ್ಪತತಸ್ತೂರ್ಣಂ ಕುಂಭಕರ್ಣಸ್ಯ ಧೀಮತಃ ।
ಬಭೂವುರ್ಘೋರರೂಪಾಣಿ ನಿಮಿತ್ತಾನಿ ಸಮಂತತಃ ॥ ೪೭

---

ಸುಟ್ಟ ಬೆಟ್ಟದಂತೆ ಕಪ್ಪಗೆ ಉನ್ನತಾಕಾರನೂ ವಿಶಾಲವದನನೂ ಆದ ಕುಂಭಕರ್ಣನು ಹಿಂದಕ್ಕೆ ತಿರುಗಿ ರಾಕ್ಷಸಭಟರನ್ನು ನೋಡಿ ವಿಕಟಹಾಸದಿಂದ ನಕ್ಕು, ''ಎಲೈ ರಾಕ್ಷಸರೆ, ಈ ದಿನ ಕಪಿನಾಯಕರನ್ನು ಹಿಂಡು ಹಿಂಡಾಗಿ ಹಿಡಿದು ಹಿಂಡಿಬಿಡುವೆನು. ಬೆಂಕಿಯು ದೀಪದ ಹುಳುಗಳನ್ನು ಸುಡುವಂತೆ ಸುಟ್ಟುಹಾಕುವೆನು ! (೪೨–೪೩). ಆದರೆ ಕಾಡಿನಲ್ಲಿ ಅಲೆದಾಡುವ ಈ ಕಪಿಗಳು ನನಗೆ ತೊಂದರೆಯನ್ನೇನೂ ಮಾಡಿಲ್ಲ ! ನಮ್ಮಂಥವರ ನಗರೋದ್ಯಾನಗಳಿಗೆ ಅಲಂಕಾರವಾಗಿ ಮೆರೆದಾಡಿಕೊಂಡಿರುವ ಕಪಿಜಾತಿ ಇದು! (೪೪). ಈ ನಗರವನ್ನು ಮುತ್ತಿರುವುದಕ್ಕೆ ಮೂಲಕಾರಣರು ರಾಮ ಮತ್ತು ಲಕ್ಷ್ಮಣ. ರಾಮನೊಬ್ಬನನ್ನು ಸಂಹರಿಸಿದರೆ ಅವರೆಲ್ಲರೂ ಸತ್ತಂತೆಯೇ! ಆದ್ದರಿಂದ ಮುಖ್ಯವಾಗಿ ರಾಮನನ್ನು ರಣದಲ್ಲಿ ಸಂಹರಿಸುವೆನು'' ಎಂದನು (೪೫). ಕುಂಭಕರ್ಣನು ಹೀಗೆ ಹೇಳಲು, ಆ ರಾಕ್ಷಸಭಟರು ಹರ್ಷೋನ್ಮಾದದಿಂದ ಕಡಲು ನಡುಗುವಂತೆ ಘೋರವಾಗಿ ಗರ್ಜಿಸಿದರು. ಧೀರನಾದ ಕುಂಭಕರ್ಣನು ಬೇಗಬೇಗನೆ ಮುಂದೆ ಸಾಗುತ್ತಿರಲು, ಘೋರವಾದ ಉತ್ಪಾತಗಳು ಕಾಣಿಸಿಕೊಂಡವು (೪೬–೪೭).

ಉಲ್ಕಾಶನಿಯುತಾ ಮೇಘಾ ಬಭೂವುರ್ಗರ್ದಭಾರುಣಾಃ ।
ಸಸಾಗರವನಾ ಚೈವ ವಸುಧಾ ಸಮಕಂಪತ ॥ ೪೮

ಘೋರರೂಪಾಃ ಶಿವಾ ನೇದುಃ ಸಜ್ವಾಲಕವಲೈರ್ಮುಖೈಃ ।
ಮಂಡಲಾನ್ಯಪಸವ್ಯಾನಿ ಬಬಂಧುಶ್ಚ ವಿಹಂಗಮಾಃ ॥ ೪೯

ನಿಷ್ಪಪಾತ ಚ ಮಾಲೇವ ಗೃಧ್ರೋಽಸ್ಯ ಪಥಿ ಗಚ್ಛತಃ ।
ಪ್ರಾಸ್ಫುರನ್ನಯನಂ ಚಾಸ್ಯ ಸವ್ಯೋ ಬಾಹುರಕಂಪತ ॥ ೫೦

ನಿಪಪಾತ ತದಾ ಚೋಲ್ಕಾ ಜ್ವಲಂತೀ ಭೀಮನಿಃಸ್ವನಾ ।
ಆದಿತ್ಯೋ ನಿಷ್ಪ್ರಭಶ್ಚಾಸೀನ್ನ ಪ್ರವಾತಿ ಸುಖೋಽನಿಲಃ ॥ ೫೧

ಅಚಿಂತಯನ್ ಮಹೋತ್ಪಾತಾನುತ್ಥಿತಾನ್ ರೋಮಹರ್ಷಣಾನ್ ।
ನಿರ್ಯಯೌ ಕುಂಭಕರ್ಣಸ್ತು ಕೃತಾಂತಬಲಚೋದಿತಃ ॥ ೫೨

ಸ ಲಂಘಯಿತ್ವಾ ಪ್ರಾಕಾರಂ ಪದ್ಭ್ಯಾಂ ಪರ್ವತಸಂನಿಭಃ ।
ದದರ್ಶಾಭ್ರಘನಪ್ರಖ್ಯಂ ವಾನರಾನೀಕಮದ್ಭುತಮ್ ॥ ೫೩

---

ಕತ್ತೆಗಳಂತೆ ಮಾಸಲುಗೆಂಪಿನ ಮೋಡಗಳು ಉಲ್ಕೆಗಳನ್ನೂ ಸಿಡಿಲುಗಳನ್ನೂ ಸುರಿಸಿದವು. ಸಾಗರವನಪರ್ಯಂತವಾಗಿ ಭೂಮಿಯು ಕಂಪಿಸಿತು. ವಿಕಾರರೂಪದ ನರಿಗಳು ಬಾಯಲ್ಲಿ ಬೆಂಕಿಯನ್ನು ಗುಳುತ್ತ ಊಳಿದವು. ಹಕ್ಕಿಗಳು ಅಪಸವ್ಯವಾಗಿ ಗುಂಪುಗಟ್ಟಿದವು (೪೮–೪೯). ಕುಂಭಕರ್ಣನ ಎದುರಿಗೆ ಹದ್ದುಗಳು ಸಾಲಾಗಿ ಸರದಂತೆ ಸಾಗಿದ್ದವು. ಅವನ ಎಡಗಣ್ಣು ಹಾರಿತು. ಎಡದೋಳು ಅದುರಿತು. ಭೀಕರವಾಗಿ ಸದ್ದುಮಾಡುತ್ತ ಉಲ್ಕೆಯೊಂದು ಉರಿಯುತ್ತ ಉದುರಿತು. ಸೂರ್ಯನು ಮಾಸಿದನು. ಸುಖಕರವಾಗಿ ಸುಳಿಯುತ್ತಿದ್ದ ಗಾಳಿ ಇದ್ದಕ್ಕಿದ್ದಂತೆ ಬಿರ್ರನೆ ಬೀಸಿತು (೫೦–೫೧). ಈ ರೀತಿಯಲ್ಲಿ ಮೈನವಿರೇಳಿಸುವ ಮಹೋತ್ಪಾತಗಳಾದರೂ ಕುಂಭಕರ್ಣನು ಲೆಕ್ಕಿಸದೆ ಮುಂದೆ ಮುಂದೆ ಸಾಗಿದನು. ಕಡೆಗಾಲವು ಬಲವಂತವಾಗಿ ಅವನನ್ನೆಳೆಯುತ್ತಿತ್ತು. ಅವನು (ಅಗಸೆಯ ಬಾಗಿಲಲ್ಲಿ ಹೋಗದೆ) ಲಂಕೆಯ ಕೋಟೆಯನ್ನು ಕಾಲಿನಿಂದಲೇ ದಾಟಿ ಹೋದನು ! ಎದುರಿಗೆ ಮೇಘಜಾಲಗಳಂತೆ ನೆರೆದಿದ್ದ ಅದ್ಭುತವಾದ ವಾನರಸೇನೆಯನ್ನು ಕಂಡನು (೫೨–೫೩).

ತೇ ದೃಷ್ಟ್ವಾ ರಾಕ್ಷಸಶ್ರೇಷ್ಠಂ ವಾನರಾಃ ಪರ್ವತೋಪಮಮ್ ।
ವಾಯುನುನ್ನಾ ಇವ ಘನಾ ಯಯುಃ ಸರ್ವಾದಿಶಸ್ತದಾ ॥ ೫೪

ತದ್ವಾನರಾನೀಕಮತಿಪ್ರಚಂಡಂ
ದಿಶೋ ದ್ರವದ್ಭಿನ್ನಮಿವಾಭ್ರಜಾಲಮ್ ।
ಸ ಕುಂಭಕರ್ಣಃ ಸಮವೇಕ್ಷ್ಯ ಹರ್ಷಾ-
ನ್ನನಾದ ಭೂಯೋ ಘನವದ್ಘನಾಭಃ ॥ ೫೫

ತೇ ತಸ್ಯ ಘೋರಂ ನಿನದಂ ನಿಶಮ್ಯ
ಯಥಾ ನಿನಾದಂ ದಿವಿ ವಾರಿದಸ್ಯ ।
ಪೇತುರ್ಧರಣ್ಯಾಂ ಬಹವಃ ಪ್ಲವಂಗಾ
ನಿಕೃತ್ತಮೂಲಾ ಇವ ಸಾಲವೃಕ್ಷಾಃ ॥ ೫೬

ವಿಪುಲಪರಿಘವಾನ್ ಸ ಕುಂಭಕರ್ಣೋ
ರಿಪು ನಿಧನಾಯ ವಿನಿಃಸೃತೋ ಮಹಾತ್ಮಾ ।

---

ಪರ್ವತಾಕಾರನಾದ ಈ ರಾಕ್ಷಸಶಾರ್ದೂಲನನ್ನು ಕಂಡೊಡನೆ ಆ ವಾನರರು ಬಿರುಗಾಳಿಯಿಂದ ಹೊಡೆದೋಡಿಸಲ್ಪಟ್ಟ ಮೇಘಜಾಲಗಳಂತೆ ದಿಕ್ಕುದಿಕ್ಕುಗಳಿಗೆ ಚದರಿ ಓಡತೊಡಗಿದರು !(೫೪). ಪ್ರಚಂಡವಾದ ಕಪಿಸೇನೆಯು ತನ್ನನ್ನು ಕಂಡು ಕಂಡ ಕಂಡ ದಿಕ್ಕಿಗೆ ಮೋಡಗಳ ಗಡಣದಂತೋಡುವುದನ್ನು ನೋಡಿ, ಮೇಘದಂತೆ ವಿಶಾಲಶ್ಯಾಮಕಾಯನಾದ ಕುಂಭಕರ್ಣನು ಹರ್ಷಾತಿರೇಕದಿಂದ ಮೇಘದಂತೆ ಗರ್ಜಿಸಿದನು ! (೫೫). ನಭೋಮಾರ್ಗದಲ್ಲಿ ಅಬ್ಬರಿಸುವ ಅಭ್ರಪಂಕ್ತಿಯಂತೆ, (ಉನ್ನತಶರೀರನಾದ) ಕುಂಭಕರ್ಣನು ನಭೋಮಾರ್ಗದಲ್ಲಿ ಘೋರವಾಗಿ ಬೊಬ್ಬಿರಿಯುವುದನ್ನು ಕೇಳಿ ಕಪಿಗಳು ತತ್ತರಸಿ ಕಾಲುಡುಗಿ, ಬುಡಕಡಿದ ಸಾಲವೃಕ್ಷಗಳಂತೆ ನೆಲದಲ್ಲಿ ಬಿದ್ದರು! (೫೬). ಪ್ರಳಯಕಾಲದಲ್ಲಿ 'ಏನು ಮಾಡಲಿ? ಏನು ಮಾಡಲಿ?' ಎಂದು ಆರ್ಭಟಿಸುತ್ತ ಕಾಲದಂಡವನ್ನು ಹಿಡಿದು ಹೊರಟ ಕಾಲಾಗ್ನಿ ರುದ್ರನಂತೆ, ಬಹುದೊಡ್ಡದಾದ ಪರಿಘಾಯುಧವನ್ನು ಹಿಡಿದು ವೈರಿವಧೆಗಾಗಿ ಬಂದ ಮಹಾಧೀರನಾದ

ಕಪಿಗಣಭಯಮಾದದತ್ ಸುಭೀಮಂ
ಪ್ರಭುರಿವ ಕಿಂಕರ ದಂಡವಾನ್ ಯುಗಾಂತೇ ॥ ೫೭

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚಷಷ್ಟಿತಮಃ ಸರ್ಗಃ

---

## ಷಟ್‌ಷಷ್ಟಿತಮಃ ಸರ್ಗ

ವಾನರಪರ್ಯವಸ್ಥಾಪನಮ್

ಸ ಲಂಘಯಿತ್ವಾ ಪ್ರಾಕಾರಂ ಗಿರಿಕೂಟೋಪಮೋ ಮಹಾನ್ ।
ನಿರ್ಯಯೌ ನಗರಾತ್ತೂರ್ಣಂ ಕುಂಭಕರ್ಣೋ ಮಹಾಬಲಃ ॥ ೧

ಸ ನನಾದ ಮಹಾನಾದಂ ಸಮುದ್ರಮಭಿನಾದಯನ್ ।
ಜನಯನ್ನಿವ ನಿರ್ಘಾತಾನ್ ವಿಧಮನ್ನಿವ ಪರ್ವತಾನ್ ॥ ೨

---

ಕುಂಭಕರ್ಣನು ಕಪಿಸೇನೆಗೆ ಎಂದೂ ಇಲ್ಲದಷ್ಟು ಘೋರವಾದ ಅಂಜಿಕೆಯನ್ನು ತಂದೊಡ್ಡಿದನು (೫೭).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಅರುವತ್ತೈದನೆಯ ಸರ್ಗ

---

## ಸರ್ಗ ೬೬

ಕುಂಭಕರ್ಣನಿಗೆ ಹೆದರಿ ಕಪಿಗಳ ಪಲಾಯನ. ಅಂಗದನು ಅವರಿಗೆ
ಧೈರ್ಯವನ್ನು ಹೇಳಿ ತಡೆದು ನಿಲ್ಲಿಸುವುದು.

ಶೈಲಶಿಖರದಂತೆ ಸ್ಥೂಲೋನ್ನತದೇಹನೂ ಮಹಾಪರಾಕ್ರಮಿಯೂ ಆದ ಕುಂಭಕರ್ಣನು ಲಂಕೆಯ ಪ್ರಾಕಾರವನ್ನು ದಾಟಿ ಬಂದು, ಕಡಲು ಮಾರ್ದನಿಗೊಡುವಂತೆ ಸಿಡಿಲುಗಳು ಸಿಡಿದಂತೆ, ಶೈಲಗಳು ಸೀಳುವಂತೆ ಘೋರವಾಗಿ ಗರ್ಜಿಸಿದನು. (೧–೨).

ತಮವಧ್ಯಂ ಮಘವತಾ ಯಮೇನ ವರುಣೇನ ವಾ ।
ಪ್ರೇಕ್ಷ್ಯ ಭೀಮಾಕ್ಷಮಾಯಾಂತಂ ವಾನರಾ ವಿಪ್ರದುದ್ರುವುಃ ॥ ೩

ತಾಂಸ್ತು ವಿಪ್ರದ್ರುತಾನ್ ದೃಷ್ಟ್ವಾ ವಾಲಿಪುತ್ರೋಽಂಗದೋಽಬ್ರವೀತ್
ನಲಂ ನೀಲಂ ಗವಾಕ್ಷಂ ಕುಮುದಂ ಚ ಮಹಾಬಲಮ್ ॥ ೪

ಆತ್ಮಾನಮತ್ರ ವಿಸ್ಮೃತ್ಯ ವೀರ್ಯಾಣ್ಯಭಿಜನಾನಿ ಚ ।
ಕ್ವ ಗಚ್ಛತ ಭಯತ್ರಸ್ತಾಃ ಪ್ರಾಕೃತಾ ಹರಯೋ ಯಥಾ ॥ ೫

ಸಾಧು ಸೌಮ್ಯಾ ನಿವರ್ತಧ್ವಂ ಕಿಂ ಪ್ರಾಣಾನ್ ಪರಿರಕ್ಷಥ ।
ನಾಲಂ ಯುದ್ಧಾಯ ವೈ ರಕ್ಷೋ ಮಹತೀಯಂ ವಿಭೀಷಿಕಾ ॥ ೬

ಮಹತೀಮುತ್ಥಿತಾಮೇನಾಂ ರಾಕ್ಷಸಾನಾಂ ವಿಭಿಷಿಕಾಮ್ ।
ವಿಕ್ರಮಾದ್ವಿಧಮಿಷ್ಯಾಮೋ ನಿವರ್ತಧ್ವಂ ಪ್ಲವಂಗಮಾಃ ॥ ೭

ಕೃಚ್ಛ್ರೇಣ ತು ಸಮಾಶ್ವಸ್ಯ ಸಂಗಮ್ಯ ಚ ತತಸ್ತತಃ ।
ವೃಕ್ಷಾದ್ರಿಹಸ್ತಾ ಹರಯಃ ಸಂಪ್ರತಸ್ಥೂ ರಣಾಜಿರಮ್ ॥ ೮

---

ದೇವೇಂದ್ರನಿಗಾಗಲಿ ಯಮ ವರುಣರಿಗಾಗಲಿ ವಧಿಸಲು ಶಕ್ಯನಲ್ಲದ ಆ ಭೀಮನೇತ್ರನನ್ನು ನೋಡಿ, ವಾನರರು ಚಲ್ಲಾಪಿಲ್ಲಿಯಾಗಿ ಓಡಿಹೋದರು (೩). ನಳ, ನೀಲ, ಗವಾಕ್ಷ, ಕುಮುದರೂ ಕೂಡ ಓಡುತ್ತಿರುವದನ್ನು ವೀಕ್ಷಿಸಿ ವಾಲಿತನಯನಾದ ಅಂಗದನು "ಎಲೈ ವಾನರವೀರರೆ, ಎಲ್ಲಿ ಹೋಗುವಿರಿ? ಪ್ರಾಕೃತರಾದ ಕಪಿಗಳಂತೆ ನೀವೂ ಹೆದರಿದಿರಾ? ನೀವು ಯಾರು, ನಿಮ್ಮ ಸಾಮರ್ಥ್ಯವೇನು, ನಿಮ್ಮ ವಂಶೋನ್ನತಿ ಎಂತಹದು–ಎಂಬುದನ್ನು ಮರೆತಿರಾ? (೪–೫). ಬಹಳ ಚೆನ್ನಾಯಿತು! ಮಿತ್ರರೆ, ಹಿಂದಿರುಗಿ. ಎಲ್ಲರೂ ಪ್ರಾಣವನ್ನುಳಿಸಿಕೊಳ್ಳಲು ಓಡುವಿರಾ? ಆ ರಾಕ್ಷಸನು ನಮ್ಮನ್ನೆದುರಿಸಿ ಯುದ್ಧಮಾಡಲಾರ ಅದೊಂದು ವೇಷಕಟ್ಟಿದ ವಿಡಂಬನೆ ! ಬೆದುರುಬೊಂಬೆ! (೬). ರಾಕ್ಷಸರು ಹುಟ್ಟಿಹಾಕಿದ ದೊಡ್ಡ ಈ ಬೆದರುಬೊಂಬೆಯನ್ನು ನಮ್ಮ ಪರಾಕ್ರಮದಿಂದ ಧೂಳೆಬ್ಬಿಸೋಣ! ಕಪಿವೀರರೆ, ಹಿಂದಿರುಗಿರಿ" ಎಂದು ಕೂಗಿ ಹೇಳಿದನು. ಆ ವಾನರರನ್ನು ತಡೆದು ನಿಲ್ಲಿಸುವುದು ಅಂಗದನಿಗೆ ಬಹು ಕಷ್ಟವಾಯಿತು. ಅವನು ಅಲ್ಲಲ್ಲಿಗೆ ಧಾವಿಸುತ್ತ ಹೋಗಿ ಧೈರ್ಯವನ್ನು ಹೇಳಿ ಅವರನ್ನು ತಡೆದನು. ಅನಂತರ ಅವರೆಲ್ಲರೂ ವೃಕ್ಷಗಳನ್ನೂ ಬೆಟ್ಟಗಳನ್ನೂ

ತೇ ನಿವೃತ್ಯ ತು ಸಂಕ್ರುದ್ಧಾಃ ಕುಂಭಕರ್ಣಂ ವನೌಕಸಃ ।
ನಿಜಘ್ನುಃ ಪರಮಕ್ರುದ್ಧಾಃ ಸಮದಾ ಇವ ಕುಂಜರಾಃ ॥ ೯

ಪ್ರಾಂಶುಭಿರ್ಗಿರಿಶೃಂಗೈಶ್ಚ ಶಿಲಾಭಿಶ್ಚ ಮಹಾಬಲಃ ।
ಪಾದಪೈಃ ಪುಷ್ಪಿತಾಗ್ರೈಶ್ಚ ಹನ್ಯಮಾನೋ ನ ಕಂಪತೇ ॥ ೧೦

ತಸ್ಯ ಗಾತ್ರೇಷು ಪತಿತಾ ಭಿದ್ಯಂತೇ ಶತಶಃ ಶಿಲಾಃ ।
ಪಾದಪಾಃ ಪುಷ್ಪಿತಾಗ್ರಾಶ್ಚ ಭಗ್ನಾಃ ಪೇತುರ್ಮಹೀತಲೇ ॥ ೧೧

ಸೋಽಪಿ ಸೈನ್ಯಾನಿ ಸಂಕ್ರುದ್ಧೋ ವಾನರಾಣಾಂ ಮಹೌಜಸಾಮ್ ।
ಮಮಂಥ ಪರಮಾಯತ್ತೋ ವನಾನ್ಯಗ್ನಿರಿವೋತ್ಥಿತಃ ॥ ೧೨

ಲೋಹಿತಾರ್ದ್ರಾಸ್ತು ಬಹವಃ ಶೇರತೇ ವಾನರರ್ಷಭಾಃ ।
ನಿರಸ್ತಾಃ ಪತಿತಾ ಭೂಮೌ ತಾಮ್ರಪುಷ್ಪಾ ಇವ ದ್ರುಮಾಃ ॥ ೧೩

ಲಂಘಯಂತಃ ಪ್ರಧಾವಂತೋ ವಾನರಾ ನಾವಲೋಕಯನ್ ।
ಕೇಚಿತ್ ಸಮುದ್ರೇ ಪತಿತಾಃ ಕೇಚಿದ್ಗಗನಮಾಶ್ರಿತಾಃ ॥ ೧೪

ವಧ್ಯಮಾನಾಸ್ತು ತೇ ವೀರಾ ರಾಕ್ಷಸೇನ ಬಲೀಯಸಾ ।
ಸಾಗರಂ ಯೇನ ತೇ ತೀರ್ಣಾಃ ಪಥಾ ತೇನ ಪ್ರದುದ್ರುವುಃ ॥ ೧೫

---

ಹೊತ್ತು ಮತ್ತೆ ರಣರಂಗಕ್ಕೆ ಹಿಂದಿರುಗಿದರು (೭–೮). ಆ ವಾನರಯೋಧರು ಮದಿಸಿದ ಆನೆಗಳಂತೆ ಕ್ರೋಧದಿಂದ ನುಗ್ಗಿಬಂದು, ಉನ್ನತವಾದ ಗಿರಿಶೃಂಗಗಳನ್ನೂ ಕಲ್ಲುದುಂಡಿಗಳನ್ನೂ ಕುಂಭಕರ್ಣನಮೇಲೆ ಬೀಸಿ ಹೊಡೆದರು. ಮರಗಳಿಂದ ಬಡಿದರು. ಕುಂಭಕರ್ಣನು ಜುಪ್ಪೆನ್ನಲಿಲ್ಲ; ಅಲ್ಲಾಡಲಿಲ್ಲ! (೯–೧೦). (ಆ ಹೊಡೆತಗಳನ್ನು ಅವನು ಗಣಿಸಲೇ ಇಲ್ಲ) ಅವನ ದೇಹವನ್ನಪ್ಪಳಿಸಿದ ಕಲ್ಲುದುಂಡಿಗಳು ನೂರಾರು ಚೂರಾದವು. ಹೂವರಳಿದ ಮರಗಳು ಮುರಿದು ಪುಡಿಯಾದವು. ಅನಂತರ ಕುಂಭಕರ್ಣನು ಕ್ರುದ್ಧನಾಗಿ ಕಪಿವೀರರ ಸೇನೆಯನ್ನು ಹಿಂಡುಹಿಂಡಾಗಿ ಹಿಡಿದು ಕಡೆಯತೊಡಗಿದನು. ದಾವಾಗ್ನಿಯು ವನಗಳನ್ನು ಸುಡುವಂತೆ ಧ್ವಂಸಮಾಡಲಾರಂಭಿಸಿದನು (೧೧–೧೨). ವಾನರಯೋಧರು ನೆತ್ತರಲ್ಲಿ ನೆನೆದು ನೆಲವನ್ನು ಹಿಡಿದರು. ಕೆಂಪುಹೂಗಳಿಂದ ತುಂಬಿದ ಮರಗಳಂತೆ ಭೂಮಿಯಲ್ಲಿ ಬಿದ್ದರು. ಪ್ರಬಲನಾದ ಆ ರಾಕ್ಷಸನ ರಭಸವನ್ನು ತಡೆಯಲಾರದೆ ವಾನರರು ಮತ್ತೆ ಓಡಲಾರಂಭಿಸಿದರು. ಹಿಂದಕ್ಕೆ

**ತೇ ಸ್ಥಲಾನಿ ತಥಾ ನಿಮ್ನಂ ವಿಷಣ್ಣವದನಾ ಭಯಾತ್ ।**
**ಋಕ್ಷಾ ವೃಕ್ಷಾನ್ ಸಮಾರೂಢಾಃ ಕೇಚಿತ್ ಪರ್ವತಮಾಶ್ರಿತಾಃ ॥ ೧೬**

**ಮಮಜ್ಜುರರ್ಣವೇ ಕೇಚಿದ್ಗುಹಾಃ ಕೇಚಿತ್ ಸಮಾಶ್ರಿತಾಃ ।**
**ನಿಷೇದುಃ ಪ್ಲವಗಾಃ ಕೇಚಿತ್ ಕೇಚಿನ್ನೈವಾವತಸ್ಥಿರೇ ॥ ೧೭**

**ಕೇಚಿದ್ಭೂಮೌ ನಿಪತಿತಾಃ ಕೇಚಿತ್ ಸುಪ್ತಾ ಮೃತಾ ಇವ ।**
**ತಾನ್ ಸಮೀಕ್ಷ್ಯಾಂಗದೋ ಭಗ್ನಾನ್ ವಾನರಾನಿದಮಬ್ರವೀತ್ ॥ ೧೮**

**ಅವತಿಷ್ಠತ ಯುಧ್ಯಾಮೋ ನಿವರ್ತಧ್ವಂ ಪ್ಲವಂಗಮಾಃ ।**
**ಭಗ್ನಾನಾಂ ವೋ ನ ಪಶ್ಯಾಮಿ ಪರಿಗಮ್ಯ ಮಹೀಮಿಮಾಮ್ ॥ ೧೯**

**ಸ್ಥಾನಂ ಸರ್ವೇ ನಿವರ್ತಧ್ವಂ ಕಿಂ ಪ್ರಾಣಾನ್ ಪರಿರಕ್ಷಥ ।**
**ನಿರಾಯುಧಾನಾಂ ದ್ರವತಾಮಸಂಗಗತಿಪೌರುಷಾಃ ॥ ೨೦**

---

ಸಹ ನೋಡದೆ ಕುಪ್ಪಳಿಸುತ್ತ ಓಡಿಹೋದರು. ಕೆಲವರು ಕಡಲಲ್ಲಿ ಬಿದ್ದರು! ಕೆಲವರು ಗಗನವನ್ನಡರಿದರು (೧೩–೧೫). ತಾವು ದಾಟಿಬಂದ ಸೇತುವೆಯ ಮಾರ್ಗವನ್ನು ಹಿಡಿದು ಕೆಲವರು ಧಾವಿಸಿದರು. ಭಯದಿಂದ ವಿಹ್ವಲಮುಖ ರಾಗಿ ಕೆಲವರು ತಗ್ಗಾದ ಸ್ಥಳಗಳಲ್ಲಿ ಮೈಮುದುರಿ ಅವಿತುಕೊಂಡರು. ಭಲ್ಲೂಕ ಯೋಧರು ಮರಗಳನ್ನು ಹತ್ತಿದರು. ಕೆಲವರು ಬೆಟ್ಟಗಳಿಗೆ ಓಡಿಹೋದರು. (೧೬). ಕೆಲವರು ಸಮುದ್ರಕ್ಕೆ ಹಾರಿ ಮುಳುಗಿಕೊಂಡರು. ಕೆಲವರು ಗುಹೆ ಗಳಲ್ಲಡಗಿದರು. ಕೆಲವರು ಸುಮ್ಮನೆ ಕುಳಿತುಬಿಟ್ಟರು! ಕೆಲವರು ನಿಲ್ಲಲಾರದೆ ಅಲ್ಲಿಯೇ ಕುಸಿದರು. ಕೆಲವರು ಓಡಲಾರದೆ ಬಿದ್ದುಹೋದರು. ಕೆಲವು ವಾನರರು ಸತ್ತವರಂತೆ ಸುಮ್ಮನೆ ನೆಲದಮೇಲೆ ಮಲಗಿಬಿಟ್ಟರು! ಈ ಪ್ರಕಾರ ದಲ್ಲಿ ಚದರಿ ಹಿಮ್ಮೆಟ್ಟಿದ ಕಪಿಸೇನೆಯನ್ನು ಕಂಡು, ಅಂಗದನು ಮತ್ತೆ ಕೂಗಿ ಹೇಳಿದನು (೧೭–೧೮): "ಎಲೈ ವಾನರಯೋಧರೆ, ಓಡಬೇಡಿ–ನಿಲ್ಲಿರಿ! ಹೋರಾಡೋಣ ಬನ್ನಿರಿ! ಯುದ್ಧದಿಂದ ಹಿಮ್ಮೆಟ್ಟಿ ಜಗತ್ತನ್ನೆಲ್ಲ ನೀವು ಸುತ್ತಿದರೂ ನಿರ್ಭಯವಾದ ಸ್ಥಳವು ನಿಮಗೆ ದೊರೆಯಲಾರದು ! ಎಲ್ಲರೂ ಹಿಂದುರುಗಿ ಬನ್ನಿರಿ. ಪ್ರಾಣನ್ನುಳಿಸಿಕೊಳ್ಳುವ ಹಂಬಲವೆ ನಿಮಗೆ? ತಡೆ ಯಿಲ್ಲದ ಗತಿಪೌರುಷವುಳ್ಳವರಲ್ಲವೆ ನೀವು? (೧೯–೨೦).

ದಾರಾ ಹ್ಯಪಹಸಿಷ್ಯಂತಿ ಸ ವೈ ಘಾತಸ್ತು ಜೀವಿನಾಮ್ ।
ಕುಲೇಷು ಜಾತಾಃ ಸರ್ವೇ ಸ್ಮ ವಿಸ್ತೀರ್ಣೇಷು ಮಹತ್ಸು ಚ ॥ ೨೧

ಕ್ವ ಗಚ್ಛತ ಭಯತ್ರಸ್ತಾ ಹರಯಃ ಪ್ರಾಕೃತಾ ಯಥಾ ।
ಅನಾರ್ಯಾಃ ಖಲು ಯದ್ಭೀತಾಸ್ತ್ಯಕ್ತ್ವಾ ವೀರ್ಯಂ ಪ್ರಧಾವತ ॥

ವಿಕತ್ಥನಾನಿ ವೋ ಯಾನಿ ತದಾ ವೈ ಜನಸಂಸದಿ ।
ತಾನಿ ವಃ ಕ್ವನು ಯಾತಾನಿ ಸೋದಗ್ರಾಣಿ ಮಹಾಂತಿ ಚ ॥ ೨೩

ಭೀರುಪ್ರವಾದಾಃ ಶ್ರೂಯಂತೇ ಯಸ್ತು ಜೀವತಿ ಧಿಕ್ಕೃತಃ ।
ಮಾರ್ಗಃ ಸತ್ಪುರುಷೈರ್ಜುಷ್ಟಃ ಸೇವ್ಯತಾಂ ತ್ಯಜ್ಯತಾಂ ಭಯಮ್ ॥

ಶಯಾಮಹೇಽಥ ನಿಹತಾಃ ಪೃಥಿವ್ಯಾಮಲ್ಪ ಜೀವಿತಾಃ ।
ದುಷ್ಪ್ರಾಪಂ ಬ್ರಹ್ಮಲೋಕಂ ವಾ ಪ್ರಾಪ್ನುಮೋ ಯುಧಿ ಸೂದಿತಾಃ ॥

ಸಂಪ್ರಾಪ್ನುಯಾಮ ಕೀರ್ತಿಂ ವಾ ನಿಹತ್ವಾ ಶತ್ರುಮಾಹವೇ ।
ಜೀವಿತಂ ವೀರಲೋಕಸ್ಯ ಭೋಕ್ಷ್ಯಾಮೋ ವಸು ವಾನರಾಃ ॥ ೨೬

---

ಆಯುಧಗಳನ್ನೊಗೆದು ಓಡಿಹೋದರೆ, ನಿಮ್ಮ ಹೆಂಡತಿಯರು ನಿಮ್ಮನ್ನು ಹಂಗಿಸಿ ಹಾಸ್ಯಮಾಡುವರಲ್ಲ! ಹೆಂಡತಿಯರಿಂದ ಹಂಗಿಸಿಕೊಳ್ಳುವುದು ಜೀವನ್ಮರಣವೇ ಅಲ್ಲವೆ? ಹೆಸರಾಂತ ದೊಡ್ಡ ವಂಶಗಳಲ್ಲಿ ಹುಟ್ಟಿದವರು ನಾವು. (೨೧). ಎಲೈ ವಾನರರೆ, ಪ್ರಾಕೃತರಾದ ಕಪಿಗಳಂತೆ ಹೆದರಿ ಎಲ್ಲಿಗೆ ಓಡುವಿರಿ? ಪೌರುಷವನ್ನು ಬದಿಗೊತ್ತಿ ಭಯದಿಂದ ಕಾಲ್ದೆಗೆಯುವಿರಲ್ಲ, ಹೇಡಿಗಳಾದ ಅಯೋಗ್ಯರು ನೀವು! ಜನರೆದುರಿಗೆ ನಿಮ್ಮ ಶೌರ್ಯವನ್ನು ಕುರಿತು ದೊಡ್ಡ ದೊಡ್ಡ ಬಡಾಯಿಗಳನ್ನು ಹೊಡೆಯುತ್ತಿದ್ದಿರಲ್ಲ, ಅವು ಏನಾದವು? ನಿಮ್ಮ ಜಂಭಗಳು ಎಲ್ಲಿ ಅಡಗಿದವು? (೨೨–೨೩). ಯಾವನು ಧಿಕ್ಕಾರಕ್ಕೊಳಗಾಗಿ ಜೀವಿಸುವನೋ ಅವನಿಗೆ ಹೇಡಿಯೆಂಬ ಕೆಟ್ಟ ಹೆಸರು ಶಾಶ್ವತವಾಗಿ ಉಳಿಯುವುದು. ಶಿಷ್ಟರಾದ ಶೂರರು ಹೋದ ದಾರಿಯನ್ನು ತುಳಿಯಿರಿ. ಅಂಜಿಕೆಯನ್ನು ತೊರೆಯಿರಿ. ಹೇಗಿದ್ದರೂ ಈ ಲೋಕದಲ್ಲಿ ನಮ್ಮ ಜೀವಿತಕಾಲವೇ ಅಲ್ಪವಾದದ್ದು. ಒಂದುವೇಳೆ ಯುದ್ಧದಲ್ಲಿ ಹತರಾಗಿ ಮಲಗಿದರೆ, ಅನ್ಯ ದುರ್ಲಭವಾದ ಬ್ರಹ್ಮಲೋಕವು ನಮಗೆ ದೊರೆಯುವುದು (೨೪–೨೫). ಇಲ್ಲವೆ, ರಣರಂಗದಲ್ಲಿ ನಾವೇ ಶತ್ರುವನ್ನು ಮರ್ದಿಸಿದರೆ, ವೀರರು ಜೀವಿತ

ನ ಕುಂಭಕರ್ಣಃ ಕಾಕುತ್ಸ್ಥಂ ದೃಷ್ಟ್ವಾ ಜೀವನ್ ಗಮಿಷ್ಯತಿ ।
ದೀಪ್ಯಮಾನಮಿವಾಸಾದ್ಯ ಪತಂಗೋ ಜ್ವಲನಂ ಯಥಾ ॥ ೨೭

ಪಲಾಯನೇನ ಚೋದ್ದಿಷ್ಟಾಃ ಪ್ರಾಣಾನ್ ರಕ್ಷಾಮಹೇ ವಯಮ್ ।
ಏಕೇನ ಬಹವೋ ಭಗ್ನಾ ಯಶೋ ನಾಶಂ ಗಮಿಷ್ಯತಿ ॥ ೨೮

ಏವಂ ಬ್ರುವಾಣಂ ತಂ ಶೂರಮಂಗದಂ ಕನಕಾಂಗದಮ್ ।
ದ್ರವಮಾಣಾಸ್ತತೋ ವಾಕ್ಯಮೂಚುಃ ಶೂರವಿಗರ್ಹಿತಮ್ ॥ ೨೯

ಕೃತಂ ನಃ ಕದನಂ ಘೋರಂ ಕುಂಭಕರ್ಣೇನ ರಕ್ಷಸಾ ।
ನ ಸ್ಥಾನಕಾಲೋ ಗಚ್ಛಾಮೋ ದಯಿತಂ ಜೀವಿತಂ ಹಿ ನಃ ॥ ೩೦

ಏತಾವದುಕ್ತ್ವಾ ವಚನಂ ಸರ್ವೇ ತೇ ಭೇಜಿರೇ ದಿಶಃ ।
ಭೀಮಂ ಭೀಮಾಕ್ಷಮಾಯಾಂತಂ ದೃಷ್ಟ್ವಾ ವಾನರಯೂಥಪಾಃ ॥

---

ವೆನಿಸಿದ ಕೀರ್ತಿಯು ನಮಗೆ ಲಭಿಸುವುದು. ವಿರೋಚಿತವಾದ ಐಶ್ವರ್ಯವು ದೊರೆಯುವುದು (೨೬). ಎಲೈ ವಾನನರೆ, ಈ ಯುದ್ಧದಲ್ಲಿ ಕುಂಭಕರ್ಣನು ಜೀವಸಹಿತವಾಗಿ ಹಿಂದಿರುಗುವುದಿಲ್ಲವೆಂದು ತಿಳಿಯಿರಿ. ಇವನಿಗೆ ಶ್ರೀರಾಮನು ಗೋಚರಿಸಿದನೆಂದರೆ ಸಾಕು, ಉರಿಯುವ ಬೆಂಕಿಯಲ್ಲಿ ಬಿದ್ದ ಮಿಡತೆಯಂತೆ ಈ ರಾಕ್ಷಸನು ಸುಟ್ಟು ಬೂದಿಯಾಗುವನು (೨೭). ರಣಶೂರರೆಂದು ವಿಖ್ಯಾತ ರಾದವರು ನಾವು. ಒಬ್ಬನಿಗೆ ಬಹುಮಂದಿ ಭಗ್ನರಾಗಿ ಓಡಿಹೋಗುವುದೆ? ಓಡಿಹೋಗಿ ಪ್ರಾಣವನ್ನುಳಿಸಿಕೊಂಡರೆ, ನಾವು ಗಳಿಸಿದ ಕೀರ್ತಿಯು ಸರ್ವ ನಾಶಹೊಂದುವುದು'' ಎಂದನು (೨೮). ಹೀಗೆ ಶೂರನಾದ ಅಂಗದನು ತನ್ನ ಕನಕಾಂಗದವು ಕಾಣುವಂತೆ ಕೈಯೆತ್ತಿ ವೀರವಾಣಿಯಿಂದ ಘೋಷಿಸುತ್ತಿದ್ದರೂ ಆ ಕಪಿಸೈನಿಕರು ಓಡುತ್ತಲೇ ಇದ್ದರು! ಶೂರರಿಗೆ ಅವಹೇಳನಕರವಾದ ರೀತಿ ಯಲ್ಲಿ ಆ ಕಪಿಗಳು ''ಇದುವರೆಗೆ ನಾವು ಕುಂಭಕರ್ಣನೊಡನೆ ಹಣಾಹಣಿಯಾಗಿ ಹೋರಾಡಿದ್ದು ಸಾಕು! ನಿಲ್ಲಲು ಸಮಯವಿಲ್ಲ! ನಾವು ಹೋಗಬೇಕು. ನಮಗೇನೂ ಪ್ರಾಣವೇ ಪ್ರಿಯವಾಗಿದೆ!'' ಎಂದು ಹೇಳಿ ದಿಕ್ಕುದಿಕ್ಕಿಗೆ ಪಲಾಯನಮಾಡಿದರು (೨೯–೩೦). ವಿಕಟನೇತ್ರನೂ ಭೀಕರನೂ ಆದ ಕುಂಭಕರ್ಣನು ನುಗ್ಗಿ ಬರುವುದನ್ನು ಕಂಡು, ಅವರು ಹೆದರಿ ಕಂಗಾಲಾಗಿದ್ದರು. ಆದರೂ ಅಂಗದನು ಬಿಡಲಿಲ್ಲ! ಕಪಿನಾಯಕರನ್ನು ಅಡ್ಡಗಟ್ಟಿ ಒಳ್ಳೆಯ

ದ್ರವಮಾಣಾಸ್ತು ತೇ ವೀರಾ ಅಂಗದೇವ ವಲೀಮುಖಾಃ ।
ಸಾಂತ್ವೈಶ್ಚೈವಾನುಮಾನೈಶ್ಚ ತತಃ ಸರ್ವೇ ನಿವರ್ತಿತಾಃ ॥ ೩೨

ಪ್ರಹರ್ಷಮುಪನೀತಾಶ್ಚ ವಾಲಿಪುತ್ರೇಣ ಧೀಮತಾ ।
ಆಜ್ಞಾಪ್ರತೀಕ್ಷಾಸ್ತಸ್ಥುಶ್ಚ ಸರ್ವೇ ವಾನರಯೂಥಪಾಃ ॥ ೩೩

ಋಷಭ ಶರಭ ಮೈಂದ ಧೂಮ್ರ ನೀಲಾಃ
ಕುಮುದ ಸುಷೇಣ ಗವಾಕ್ಷ ರಂಭ ತಾರಾಃ ।
ದ್ವಿವಿದ ಪನಸ ವಾಯುಪುತ್ರ ಮುಖ್ಯಾ-
ಸ್ತ್ವರಿತತರಾಭಿಮುಖಂ ರಣಂ ಪ್ರಯಾತಾಃ ॥ ೩೪

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಟ್ಷಷ್ಟಿತಮಃ ಸರ್ಗಃ

---

ಮಾತುಗಳಿಂದ ಸಂತೈಸಿದನು. ಸಮುದ್ರಬಂಧನ, ನಾಗಾಪಾಶವಿಮೋಚನ-ಮುಂತಾದ ಸಂದರ್ಭಗಳಿಂದ ಶ್ರೀರಾಮನ ಸಾಮರ್ಥ್ಯವೂ ಮಹಿಮೆಯೂ ಎಂತಹುದೆಂಬುದನ್ನು ಸೂಚಿಸಿ, ತಮಗೆ ವಿಜಯವಾಗುವುದೆಂಬ ಧೈರ್ಯವನ್ನು ಹುಟ್ಟಿಸಿ ಅವರನ್ನು ಹಿಂತಿರುಗಿಸಿದನು! (೩೧-೩೨). ಮಹಾಪ್ರಾಜ್ಞನೂ ಧೀರನೂ ಆದ ವಾಲಿತನಯನು ಆ ಕಪಿಯೋಧರಿಗೆ ನವಚೈತನಯವನ್ನುಂಟು ಮಾಡಿದನು. ಅವರೆಲ್ಲರೂ ಹಿಂದಿರುಗಿ ಬಂದು, ಮುಂದೆ ಯುದ್ಧದ ವಿಷಯದಲ್ಲಿ ಆಜ್ಞೆಯೇನೆಂದು ಕಾಯುತ್ತ ನಿಂತರು ! (೩೩). ಋಷಭ, ಶರಭ, ಮೈಂದ, ಧೂಮ್ರ, ನೀಲ, ಕುಮುದ, ಸುಷೇಣ, ಗವಾಕ್ಷ, ರಂಭ, ತಾರ, ದ್ವಿವಿದ, ಪನಸ-ಮುಂತಾದ ಕಪಿಯೂಥಪರು ಯುದ್ಧಾಭಿಮುಖರಾಗಿ ಹೊರಟರು. ಅಷ್ಟರಲ್ಲಿ ಆಂಜನೇಯನೂ ಸೇನಾಮಧ್ಯದಿಂದ ಬಂದು ಅವರೊಡನೆ ಸೇರಿದನು (೩೪).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಅರುವತ್ತಾರನೆಯ ಸರ್ಗ

---

## ಸಪ್ತಷಷ್ಟಿತಮಃ ಸರ್ಗಃ

ಕುಂಭಕರ್ಣವಧಃ

ತೇ ನಿವೃತ್ತಾ ಮಹಾಕಾಯಾಃ ಶ್ರುತ್ವಾಂಗದವಚಸ್ತದಾ ।
ನೈಷ್ಠಿಕೀಂ ಬುದ್ಧಿಮಾಸಾದ್ಯ ಸರ್ವೇ ಸಂಗ್ರಾಮಕಾಂಕ್ಷಿಣಃ ॥ ೧

ಸಮುದೀರಿತವೀರ್ಯಾಶ್ಚ ಸಮಾರೋಪಿತವಿಕ್ರಮಾಃ ।
ಪರ್ಯವಸ್ಥಾಪಿತಾ ವಾಕ್ಯೈರಂಗದೇನ ವಲೀಮುಖಾಃ ॥ ೨

ಪ್ರಯಾತಾಶ್ಚ ಗತಾ ಹರ್ಷಂ ಮರಣೇ ಕೃತನಿಶ್ಚಯಾಃ ।
ಚಕ್ರುಃ ಸುತುಮುಲಂ ಯುದ್ಧಂ ವಾನರಾಸ್ತ್ಯಕ್ತಜೀವಿತಾಃ ॥ ೩

ಅಥ ವೃಕ್ಷಾನ್ ಮಹಾಕಾಯಾಃ ಸಾನೂನಿ ಸುಮಹಾಂತಿ ಚ ।
ವಾನರಾಸ್ತೂರ್ಣಮುದ್ಯಮ್ಯ ಕುಂಭಕರ್ಣಮಭಿದ್ರುತಾಃ ॥ ೪

ಸ ಕುಂಭಕರ್ಣಃ ಸಂಕ್ರುದ್ಧೋ ಗದಾಮುದ್ಯಮ್ಯ ವೀರ್ಯವಾನ್ ।
ಅರ್ದಯನ್ ಸುಮಹಾಕಾಯಃ ಸಮಂತಾದ್ವ್ಯಾಕ್ಷಿಪದ್ರಿಪೂನ್ ॥ ೫

### ಸರ್ಗ ೬೭

ಕುಂಭಕರ್ಣ ಘೋರವಾದ ಯುದ್ಧ. ಹನುಮತನು ಅವನ ಶೂಲವನ್ನು ಮುರಿಯುವುದು. ಸುಗ್ರೀವನೊಡನೆ ಯುದ್ಧ. ಕಡೆಯಲ್ಲಿ ಶ್ರೀರಾಮನಿಂದ ಕುಂಭಕರ್ಣನ ವಧೆ.

ಅಂಗದನ ಧೀರವಾಣಿಯನ್ನು ಕೇಳಿ ಬೃಹತ್ಕಾಯರಾದ ಆ ಕಪಿಯೂಥಪರು ಸ್ಥೈರ್ಯದಿಂದ ಹೋರಾಡಬೇಕೆಂದು ನಿಶ್ಚಯಿಸಿ ರಣಭೂಮಿಗೆ ಮರಳಿದರು. ಅಂಗದನು ಅವರ ಶೌರ್ಯವನ್ನು ಕೊಂಡಾಡಿ ಪೌರುಷದ ನುಡಿಗಳಿಂದ ಹುರಿದುಂಬಿಸಿದನು (೧–೨). ಆ ವಾನರರು ಯುದ್ಧದಲ್ಲಿ ತಮಗೆ ಮರಣ ವಾದರೂ ಆಗಲೆಂದು ನಿಶ್ಚಯಿಸಿ ಉತ್ಸಾಹದಿಂದ ಹಿಂದಿರುಗಿಬಂದು, ಪ್ರಾಣದ ಆಸೆಯನ್ನು ತೊರೆದು ತುಮುಲಯುದ್ಧವನ್ನಾರಂಭಿಸಿದರು. ವೃಕ್ಷಗಳನ್ನೂ ಗಿರಿಶೃಂಗಗಳನ್ನೂ ಹೊತ್ತು ಕುಂಭಕರ್ಣನನ್ನೆದುರಿಸಿದರು (೩–೪). ಬಲಾಢ್ಯ ನಾದ ಕುಂಭಕರ್ಣನು ಸಂಕ್ರುದ್ಧನಾಗಿ ತನ್ನ ಗದೆಯನ್ನೆತ್ತಿ ಸುತ್ತಲೂ

ಶತಾನಿ ಸಪ್ತ ಚಾಷ್ಟೌಚ ಸಹಸ್ರಾಣಿ ಚ ವಾನರಾಃ ।
ಪ್ರಕೀರ್ಣಾಃ ಶೇರತೇ ಭೂಮೌ ಕುಂಭಕರ್ಣೇನ ಪೋಥಿತಾಃ ॥ ೬
ಷೋಡಶಾಷ್ಟೌ ಚ ದಶ ಚ ವಿಂಶತ್ ತ್ರಿಂಶತ್ತಥೈವ ಚ ।
ಪರಿಕ್ಷಿಪ್ಯ ಚ ಬಾಹುಭ್ಯಾಂ ಖಾದನ್ ವಿಪರಿಧಾವತಿ ॥ ೭
ಭಕ್ಷಯನ್ ಭೃಶಸಂಕ್ರುದ್ಧೋ ಗರುಡಃ ಪನ್ನಗಾನಿವ।
ಕೃಚ್ಛ್ರೇಣ ಚ ಸಮಾಶ್ವಸ್ತಾಃ ಸಂಗಮ್ಯ ಚ ತತಸ್ತತಃ ॥ ೮
ವೃಕ್ಷಾದ್ರಿಹಸ್ತಾ ಹರಯಸ್ತಸ್ಥುಃ ಸಂಗ್ರಾಮಮೂರ್ಧನಿ ।
ತತಃ ಪರ್ವತಮುತ್ಪಾಟ್ಯ ದ್ವಿವಿದಃ ಪ್ಲವಗರ್ಷಭಃ ॥ ೯
ದುದ್ರಾವ ಗಿರಿಶೃಂಗಾಭಂ ವಿಲಂಬ ಇವ ತೋಯದಃ ।
ತಂ ಸಮುತ್ಪತ್ಯ ಚಿಕ್ಷೇಪ ಕುಂಭಕರ್ಣಸ್ಯ ವಾನರಃ ॥ ೧೦
ತಮಪ್ರಾಪ್ಯೋ ಮಹಾಕಾಯಂ ತಸ್ಯ ಸೈನ್ಯೇಽಪತತ್ತದಾ ।
ಮಮರ್ದಾಶ್ವಾನ್ ಗಜಾಂಶ್ಚಾಪಿ ರಥಾಂಶ್ಚೈವ ನಗೋತ್ತಮಃ ॥ ೧೧

---

ಬಡಿಯುತ್ತ ಹೋದನು. ಅವನ ಒಂದೊಂದು ಬಡಿತಕ್ಕೆ ಏಳು ನೂರು–ಎಂಟು ನೂರು–ಒಂದು ಸಾವಿರದಂತೆ ಕಪಿಗಳು ಕೈಕಾಲು ಮುರಿಸಿಕೊಂಡು ನೆಲದ ಮೇಲುರುಳುತ್ತಿದ್ದರು! (೫–೬). ಅಲ್ಲದೆ ಆ ಕುಂಭಕರ್ಣನು ತೋಳುಗಳಿಂದ ಕಪಿಗಳನ್ನು ಬರಗಿ ಬಾಯಲ್ಲೆಸೆದುಕೊಂಡು ತಿನ್ನುತ್ತ ಹೋದನು! ಒಂದೊಂದು ಸಲವೂ ಕೈನೀಡಿ ಬರಗಿದಾಗ, ಹದಿನಾರು–ಹದಿನೆಂಟು–ಇಪ್ಪತ್ತು–ಮೂವತ್ತರಂತೆ ಕಪಿಗಳು ಸಿಕ್ಕಿ ಬೀಳುತ್ತಿದ್ದವು. ಅವರೆಲ್ಲರನ್ನೂ ಭಕ್ಷಿಸುತ್ತ ಕುಂಭಕರ್ಣನು ಸಂಗ್ರಾಮಭೂಮಿಯಲ್ಲಿ ರಭಸದಿಂದ ಸಂಚರಿಸುತ್ತಿದ್ದನು (೭). ಸರ್ಪಗಳನ್ನು ಹಿಡಿದೆಳೆದ ತಿನ್ನುವ ರೋಷಾವಿಷ್ಟನಾದ ಗರುಡನಂತೆ ತಿರುಗುತ್ತಿದ್ದನು. ಅಂಗದನ ಮಹಾಪ್ರಯತ್ನದಿಂದ ಧೈರ್ಯವನ್ನಲಂಬಿಸಿ ಬಂದಿದ್ದ ಬಲಾಢ್ಯರಾದ ಕೆಲವು ಕಪಿಯೋಧರು ವೃಕ್ಷಗಳನ್ನೂ ಶೈಲಗಳನ್ನೂ ಹಿಡಿದು ಅಲ್ಲಲ್ಲಿ ನಿಂತಿದ್ದರು (೮). ಆಗ ವಾನರೋತ್ತಮನಾದ ದ್ವಿವಿದನು ಒಂದು ಪರ್ವತವನ್ನು ಕಿತ್ತುಕೊಂಡು ಕುಂಭಕರ್ಣನ ಕಡೆಗೆ ಧಾವಿಸಿದನು. ಜಲಭಾರದಿಂದ ಜೋಲುವ ಮೇಘವು ಗಿರಿಶಿಖರದ ಕಡೆಗೆ ಧಾವಿಸುವಂತೆ, ಗಿರಶೃಂಗದಂತಿದ್ದ ಆ ರಾಕ್ಷಸನ ಬಳಿಗೆ ನುಗ್ಗಿ ಅವನ ಮೇಲೆ ಪರ್ವತವನ್ನು ಬೀಸಿದನು(೯–೧೦). ಆ ಬೆಟ್ಟವು ಕುಂಭಕರ್ಣನಿಗೆ ತಾಗದೆ, ಮಧ್ಯದಲ್ಲಿದ್ದ ರಾಕ್ಷಸರ ಸೇನೆಯ ನಡುವೆ

ತಾನಿ ಚಾನ್ಯಾನಿ ರಕ್ಷಾಂಸಿ ಪುನಶ್ಚಾನ್ಯದ್ಗಿರೇಃ ಶಿರಃ ।
ತಚ್ಛೈಲಶೃಂಗಾಭಿಹತಂ ಹತಾಶ್ವಂ ಹತಸಾರಥಿ ॥ ೧೨

ರಕ್ಷಸಾಂ ರುಧಿರಕ್ಲಿನ್ನಂ ಬಭೂವಾಯೋಧನಂ ಮಹತ್ ।
ರಥಿನೋ ವಾನರೇಂದ್ರಾಣಾಂ ಶರೈಃ ಕಾಲಾಂತಕೋಪಮೈಃ ॥ ೧೩

ಶಿರಾಂಸಿ ನದತಾಂ ಜಹ್ರುಃ ಸಹಸಾ ಭೀಮನಿಃಸ್ವನಾಃ ।
ವಾನರಾಶ್ಚ ಮಹಾತ್ಮಾನಃ ಸಮುತ್ಪಾಟ್ಯ ಮಹಾದ್ರುಮಾನ್ ॥ ೧೪

ರಥಾನಶ್ವಾನ್ ಗಜಾನುಷ್ಟ್ರಾನ್ ರಾಕ್ಷಸಾನಭ್ಯಸೂದಯನ್ ।
ಹನೂಮಾನ್ ಶೈಲಶೃಂಗಾಣಿ ವೃಕ್ಷಾಂಶ್ಚ ವಿವಿಧಾನ್ ಬಹೂನ್ ॥ ೧೫

ವವರ್ಷ ಕುಂಭಕರ್ಣಸ್ಯ ಶಿರಸ್ಯಂಬರಮಾಸ್ಥಿತಃ ।
ತಾನಿ ಪರ್ವತಶೃಂಗಾಣಿ ಶೂಲೇನ ಸ ಬಿಭೇದ ಹ ॥ ೧೬

ಬಭಂಜ ವೃಕ್ಷವರ್ಷಂ ಚ ಕುಂಭಕರ್ಣೋ ಮಹಾಬಲಃ ॥

---

ಬಿದ್ದಿತು. ಸೇನೆಯಲ್ಲಿದ್ದ ಗಜಾಶ್ವರಥಗಳು ಜಜ್ಜಿ ನುಚ್ಚು ನೂರಾದವು. ಬಹು ಮಂದಿ ರಾಕ್ಷಸಸೈನಿಕರು ಹತರಾದರು. ದ್ವಿವಿದನು ಮತ್ತೆ ಇನ್ನೊಂದು ಗಿರಿ ಶೃಂಗವನ್ನು ಬೀಸಿ ಹೊಡೆದನು. ಅದೂ ಸಹ ರಾಕ್ಷಸೇನೆಯಲ್ಲಿ ಬಿದ್ದು ಬಹು ಮಂದಿ ಸಾರಥಿಗಳನ್ನೂ ಅಶ್ವಗಳನ್ನೂ ನಾಶಪಡಿಸಿತು (೧೧–೧೨). ರಾಕ್ಷಸರ ರಕ್ತವೂ ರಣಭೂಮಿಯನ್ನು ನೆನೆಯಿಸಿತು. ಆಗ ಕುಪಿತರಾದ ರಾಕ್ಷಸರಥಿಕರು ಕಾಲಾಂತಕಸದೃಶಗಳಾದ ಕೂರಂಬುಗಳಿಂದ ವಾನರವೀರರ ಶಿರಸ್ಸುಗಳನ್ನು ತರಿಯುತ್ತಿದ್ದರು. ಸಿಂಹನಾದಗೈಯುವ ವಾನರರನ್ನು ಸಿಂಹನಾದಗೈಯುತ್ತಲೇ ರಾಕ್ಷಸರು ಎದುರಿಸಿದರು (೧೩–೧೪). ಬಲಾಢ್ಯರಾದ ಕಪಿಯೋಧರು ಮಹಾ ವೃಕ್ಷಗಳಿಂದ ಬಡಿದು ರಾಕ್ಷಸರ ರಥಾಶ್ವಗಳನ್ನೂ ಗಜಗಳನ್ನೂ ಒಂಟೆಗಳನ್ನೂ ಧ್ವಂಸಮಾಡುತ್ತಿದ್ದರು. ರಾಕ್ಷಸರನ್ನು ಬಡಿದು ಕೊಲ್ಲುತ್ತಿದ್ದರು. ಆಮೇಲೆ ಹನುಮಂತನು ಶೈಲಶೃಂಗಗಳನ್ನೂ ವಿವಿಧ ವೃಕ್ಷಗಳನ್ನೂ ತಂದು ತಂದು ಆಕಾಶದಲ್ಲಿ ನಿಂತು ಕುಂಭಕರ್ಣನ ತಲೆಯಮೇಲೆ ಸುರಿಯತೊಡಗಿದನು. ಬಲಾಢ್ಯನಾದ ಕುಂಭಕರ್ಣನು ಅವೆಲ್ಲವನ್ನೂ ಶೂಲಾಯುಧದಿಂದ ವಿಧ್ವಂಸ ಗೊಳಿಸಿದನು (೧೫–೧೬).

ತತೋ ಹರೀಣಾಂ ತದನೀಕಮುಗ್ರಂ
ದುದ್ರಾವ ಶೂಲಂ ನಿಶಿತಂ ಪ್ರಗೃಹ್ಯ ।
ತಸ್ಥೌ ತತೋಽಸ್ಯಾಪತತಃ ಪುರಸ್ತಾ-
ನ್ಮಹೀಧರಾಗ್ರಂ ಹನುಮಾನ್ ಪ್ರಗೃಹ್ಯ ॥ ೧೭

ಸ ಕುಂಭಕರ್ಣಂ ಕುಪಿತೋ ಜಘಾನ
ವೇಗೇನ ಶೈಲೋತ್ತ ಮಭೀಮಕಾಯಮ್ ।
ಸ ಚುಕ್ಷುಭೇ ತೇನ ತದಾಭಿಭೂತೋ
ಮೇದಾರ್ದ್ರಗಾತ್ರೋ ರುಧಿರಾವಸಿಕ್ತಃ ॥ ೧೮

ಸ ಶೂಲಮಾವಿಧ್ಯ ತಡಿತ್ಪ್ರಕಾಶಂ
ಗಿರಿಂ ಯಥಾ ಪ್ರಜ್ವಲಿತಾಗ್ರಶೃಂಗಮ್ ।
ಬಾಹ್ವಂತರೇ ಮಾರುತಿಮಾಜಘಾನ
ಗುಹೋಽಚಲಂ ಕ್ರೌಂಚಮಿವೋಗ್ರಶಕ್ತ್ಯಾ ॥ ೧೯

ಸ ಶೂಲನಿರ್ಭಿನ್ನಮಹಾಭುಜಾಂತರಃ
ಪ್ರವಿಹ್ವಲಃ ಶೋಣಿತಮುದ್ವಮನ್ ಮುಖಾತ್ ।
ನನಾದ ಭೀಮಂ ಹನುಮಾನ್ ಮಹಾಹವೇ
ಯುಗಾಂತಮೇಘಸ್ತನಿತಸ್ವನೋಪಮಮ್ ॥ ೨೦

---

ಅನಂತರ ಕುಂಭಕರ್ಣನು ಉಗ್ರವಾದ ನಿಶಿತಶೂಲವನ್ನೆತ್ತಿಹಿಡಿದು ಕಪಿಸೇನೆಯಲ್ಲಿ ನುಗ್ಗಿದನು. ಅಷ್ಟರಲ್ಲಿ ಹನುಮಂತನು ಇನ್ನೊಂದು ಗಿರಿಶಿಖರವನ್ನೆತ್ತಿಕೊಂಡು ಅವನಿಗೆದುರಾದರು ! ಹನುಮಂತನು ಕೋಪಾವಿಷ್ಟನಾಗಿದ್ದನು. ಪರ್ವತದಂತೆ ಭೀಮಕಾಯನಾಗಿದ್ದ ಆ ರಾಕ್ಷಸರನ್ನು ಗಿರಿಶಿಖರದಿಂದ ಅಪ್ಪಳಿಸಲು, ಕುಂಭಕರ್ಣನ ದೇಹದಿಂದ ಮೇದಸ್ಸು ಸುರಿಯಿತು. ರಕ್ತಸಿಕ್ತನಾದ ಕುಂಭಕರ್ಣನು ಆರ್ಭಟಿಸಿದನು (೧೭–೧೮). ಕೂಡಲೆ ಪ್ರಜ್ವಲಿಸುವ ಘೋರ ಶೂಲವನ್ನೆತ್ತಿದನು. ಮಿಂಚು ಮಿಂಚಿದಾಗ ಮಿಂಚುವ ಶಿಖರವುಳ್ಳ ಶೈಲದಂತೆ ಝಗಝಗಿಸುವ ಆ ಶೂಲವನ್ನೆತ್ತಿದ ಕುಂಭಕರ್ಣನು, ಕ್ರೌಂಚಪರ್ವತವನ್ನು ತನ್ನ ಉಗ್ರಶಕ್ತಿಯಿಂದ ಷಣ್ಮುಖನು ತಿವಿದಂತೆ, ಮಾರುತಿಯ ಎದೆಯನ್ನಿರಿದನು (೧೯). ಮಾರುತಿಯ ವಿಶಾಲವಕ್ಷಸ್ಥಳವು ಶೂಲದಿಂದ ನಿರ್ಭಿನ್ನ

ತತೋ ವಿನೇದುಃ ಸಹಸಾ ಪ್ರಹೃಷ್ಟಾ
ರಕ್ಷೋಗಣಾಸ್ತಂ ವ್ಯಥಿತಂ ಸಮೀಕ್ಷ್ಯ ।
ಪ್ಲವಂಗಮಾಸ್ತು ವ್ಯಥಿತಾ ಭಯಾರ್ತಾಃ
ಪ್ರದುದ್ರುವುಃ ಸಂಯತಿ ಕುಂಭಕರ್ಣಾತ್ ॥ ೨೧

ತತಸ್ತು ನೀಲೋ ಬಲವಾನ್ ಪರ್ಯವಸ್ಥಾಪಯನ್ ಬಲಮ್ ।
ಪ್ರವಿಚಿಕ್ಷೇಪ ಶೈಲಾಗ್ರಂ ಕುಂಭಕರ್ಣಾಯ ಧೀಮತೇ ॥ ೨೨

ತಮಾಪತಂತಂ ಸಂಪ್ರೇಕ್ಷ್ಯ ಮುಷ್ಟಿನಾಭಿಜಘಾನ ಹ ।
ಮುಷ್ಟಿಪ್ರಹಾರಾಭಿಹತಂ ತಚ್ಛೈಲಾಗ್ರಂ ವ್ಯಶೀರ್ಯತ ॥ ೨೩

ಸವಿಸ್ಫುಲಿಂಗಂ ಸಜ್ವಾಲಂ ನಿಪಪಾತ ಮಹೀತಲೇ ।
ಋಷಭಃ ಶರಭೋ ನೀಲೋ ಗವಾಕ್ಷೋ ಗಂಧಮಾದನಃ ॥ ೨೪

ಪಂಚ ವಾನರಶಾರ್ದೂಲಾಃ ಕುಂಭಕರ್ಣಮುಪಾದ್ರವನ್ ।
ಶೈಲೈರ್ವೃಕ್ಷೈಸ್ತಲೈಃ ಪಾದೈರ್ಮುಷ್ಟಿಭಿಶ್ಚ ಮಹಾಬಲಾಃ ॥ ೨೫

ಕುಂಭಕರ್ಣಂ ಮಹಾಕಾಯಂ ಸರ್ವತೋಽಭಿಪ್ರದುದ್ರುವುಃ ।
ಸ್ಪರ್ಶಾನಿವ ಪ್ರಹಾರಾಂಸ್ತಾನ್ ವೇದಯಾನೋ ನ ವಿವ್ಯಥೇ ॥ ೨೬

---

ವಾಯಿತು. ಬಾಯಿಂದ ರಕ್ತವನ್ನುಗಳುತ್ತ ವಿಹ್ವಲನಾದ ಹನುಮಂತನು ಪ್ರಳಯಕಾಲದ ಮೇಘವು ಗುಡುಗಿದಂತೆ ಭೀಕರವಾಗಿ ಅರಚಿದನು (೨೦). ಹನುಮಂತನು ಗಾಯಗೊಂಡು ಕೆಂಗೆಟ್ಟುದನ್ನು ಕಂಡು, ರಾಕ್ಷಸಯೋಧರು ಹರ್ಷೋದ್ಗಾರಮಾಡಿದರು. ವಾನರರು ಕುಂಭಕರ್ಣನಿಗೆ ಹೆದರಿ ಓಡಲಾರಂಭಿಸಿದರು. (೨೧). ಆಗ ಬಲಶಾಲಿಯಾದ ನೀಲನು ವಾನರಸೇನೆಗೆ ಧೈರ್ಯ ಹೇಳುತ್ತ, ಒಂದು ಶೈಲಶಿಖರವನ್ನು ಕಿತ್ತು ಧೀರನಾದ ಕುಂಭಕರ್ಣನಮೇಲೆ ಬೀಸಿದನು. ಕುಂಭಕರ್ಣನು ಮುಷ್ಟಿಯಿಂದ ಅದನ್ನು ಅಪ್ಪಳಿಸಲು, ಶೈಲ ಶಿಖರವು ಪುಡಿಪುಡಿಯಾಗಿ ಕಿಡಿಯುಗುಳುತ್ತ ಬಿದ್ದಿತು (೨೨–೨೩). ಆಗ ಋಷಭ, ನೀಲ, ಗವಾಕ್ಷ, ಗಂಧಮಾದನ–ಎಂಬ ಐವರು ವಾನರವೀರರೂ ಒಂದಾಗಿ ಕುಂಭಕರ್ಣನನ್ನಾಕ್ರಮಿಸಿದರು. ಶೈಲಗಳನ್ನು ಬೀಸುತ್ತ ವೃಕ್ಷ ಗಳಿಂದ ಬಡಿಯುತ್ತ, ಕರತಳಗಳಿಂದ ಅಪ್ಪಳಿಸುತ್ತ, ಪಾದಗಳಿಂದ ಒದೆಯುತ್ತ ಮುಷ್ಟಿಗಳಿಂದ ಗುದ್ದುತ್ತ ಕುಂಭಕರ್ಣನನ್ನು ಮುತ್ತಿದರು (೨೪–೨೫). ಕುಂಭಕರ್ಣನಿಗೆ ಅದರಿಂದ ಯಾವ ಹಿಂಸೆಯೂ ಆಗಲಿಲ್ಲ, ಆ ಹೊಡೆತ

ಋಷಭಂ ತು ಮಹಾವೇಗಂ ಬಾಹುಭ್ಯಾಂ ಪರಿಷಸ್ವಜೇ ।
ಕುಂಭಕರ್ಣಭುಜಾಭ್ಯಾಂ ತು ಪೀಡಿತೋ ವಾನರರ್ಷಭಃ ॥ ೧೭

ನಿಪಪಾತರ್ಷಭೋ ಭೀಮಃ ಪ್ರಮುಖಾದ್ವಾಂತಶೋಣಿತಃ ।
ಮುಷ್ಟಿನಾ ಶರಭಂ ಹತ್ವಾ ಜಾನುನಾ ನೀಲಮಾಹವೇ ॥ ೧೮

ಆಜಘಾನ ಗವಾಕ್ಷಂ ತು ತಲೇನೇಂದ್ರರಿಪುಸ್ತದಾ ।
ಪಾದೇನಾಭ್ಯಹನತ್ ಕ್ರುದ್ಧಸ್ತರಸಾ ಗಂಧಮಾದನಮ್ ॥ ೧೯

ದತ್ತಪ್ರಹಾರವ್ಯಥಿತಾ ಮುಮುಹುಃ ಶೋಣಿತೋಕ್ಷಿತಾಃ ।
ನಿಪೇತುಸ್ತೇ ತು ಮೇದಿನ್ಯಾಂ ನಿಕೃತ್ತಾ ಇವ ಕಿಂಶುಕಾಃ ॥ ೨೦

ತೇಷು ವಾನರಮುಖ್ಯೇಷು ಪತಿತೇಷು ಮಹಾತ್ಮಸು ।
ವಾನರಾಣಾಂ ಸಹಸ್ರಾಣಿ ಕುಂಭಕರ್ಣಂ ಪ್ರದುದ್ರುವುಃ ॥ ೨೧

ತಂ ಶೈಲಮಿವ ಶೈಲಾಭಾಃ ಸರ್ವೇ ತೇ ಪ್ಲವಗರ್ಷಭಾಃ ।
ಸಮಾರುಹ್ಯ ಸಮುತ್ಪತ್ಯ ದದಂಶುಶ್ಚ ಮಹಾಬಲಾಃ ॥ ೨೨

ತಂ ನಖೈರ್ದಶನೈಶ್ಚಾಪಿ ಮುಷ್ಟಿಭಿರ್ಜಾನುಭಿಸ್ತಥಾ ।
ಕುಂಭಕರ್ಣಂ ಮಹಾಕಾಯಂ ತೇ ಜಘ್ನುಃ ಪ್ಲವಗರ್ಷಭಾಃ ॥ ೨೩

---

ಬಡಿತಗಳೆಲ್ಲವೂ ಆತನಿಗೆ ಮೃದುವಾಗಿ ಮೈಯನ್ನು ಸವರಿದಂತಾದವು! ಮಹಾವೇಗದಿಂದ ಆಕ್ರಮಣವನ್ನೆಸಗುತ್ತಿದ್ದ ಋಷಭನನ್ನು ಕುಂಭಕರ್ಣನು ತೋಳುಗಳಿಂದ ಬಿಗಿದು ಅಮುಕಿದನು. ಋಷಭನು ರಕ್ತವನ್ನು ಕಕ್ಕುತ್ತ ಕೆಳಗೆ ಬಿದ್ದನು (೧೬–೧೭). ಅನಂತರ ಕ್ರುದ್ಧನಾದ ಆ ರಾಕ್ಷಸನು ಶರಭನನ್ನು ಮುಷ್ಟಿಯಿಂದ ಗುದ್ದಿ, ನೀಲನನ್ನು ಮೊಳಕಾಲಿಂದ ತಿವಿದು, ಗವಾಕ್ಷನನ್ನು ಅಂಗೈಯಿಂದ ಅಪ್ಪಳಿಸಿ, ಗಂಧಮಾದನನನ್ನು ಕಾಲಿಂದ ಒದ್ದನು. ಆ ವಾನರರು ಗಾಯಗೊಂಡು ರಕ್ತಸಿಕ್ತರಾಗಿ ತತ್ತರಿಸುತ್ತ, ಅರಳಿದ ಮುತ್ತುಗದ ಮರಗಳಂತೆ ನೆಲದಲ್ಲುರುಳಿದರು (೧೮–೨೦). ಧೀರರಾದ ಆ ವಾನರೋತ್ತಮರು ಬಿದ್ದುದನ್ನು ಕಂಡು, ಮಹಾಕಾಯರಾದ ಕಪಿಯೋಧರು ಸಾವಿರಗಟ್ಟಲೆ ಮುಂದೆ ನುಗ್ಗಿ ಒಂದೇಸಲಕ್ಕೆ ಕುಂಭಕರ್ಣನನ್ನು ಮುತ್ತಿದರು. ಪರ್ವತಾಕಾರದ ಆ ರಾಕ್ಷಸನ ಮೈಮೇಲೆ ಕೆಲವರು ಹತ್ತಿಹೋದರು ! ಕೆಲವರು ಕುಪ್ಪಳಿಸಿ ಹಾರಿದರು (೨೧–೨೨). ಶೈಲಗಳಂತಿದ್ದ ಕಪಿಯೋಧರು ಕುಂಭಕರ್ಣನನ್ನು

ಸ ವಾನರಸಹಸ್ರೈಸ್ತೈರಾಚಿತಃ ಪರ್ವತೋಪಮಃ ।
ರರಾಜ ರಾಕ್ಷಸವ್ಯಾಘ್ರೋ ಗಿರಿರಾತ್ಮರುಹೈರಿವ ॥ ೩೪

ಬಾಹುಭ್ಯಾಂ ವಾನರಾನ್ ಸರ್ವಾನ್ ಪ್ರಗೃಹ್ಯ ಸುಮಹಾಬಲಃ ।
ಭಕ್ಷಯಾಮಾಸ ಸಂಕ್ರುದ್ಧೋ ಗರುಡಃ ಪನ್ನಗಾನಿವ ॥ ೩೫

ಪ್ರಕ್ಷಿಪ್ತಾಃ ಕುಂಭಕರ್ಣೇನ ವಕ್ತ್ರೇ ಪಾತಾಲಸಂನಿಭೇ ।
ನಾಸಾಪುಟಾಭ್ಯಾಂ ನಿರ್ಜಗ್ಮುಃ ಕರ್ಣಾಭ್ಯಾಂ ಚೈವ ವಾನರಾಃ ॥ ೩೬

ಭಕ್ಷಯನ್ ಭೃಶಸಂಕ್ರುದ್ಧೋ ಹರೀನ್ ಪರ್ವತಸಂನಿಭಃ ।
ಬಭಂಜ ವಾನರಾನ್ ಸರ್ವಾನ್ ಸಂಕ್ರುದ್ಧೋರಾಕ್ಷಸೋತ್ತಮಃ ॥ ೩೭

ಮಾಂಸಶೋಣಿತಸಂಕ್ಲೇದಾಂ ಭೂಮಿಂ ಕುರ್ವನ್ ಸ ರಾಕ್ಷಸಃ ।
ಚಚಾರ ಹರಿಸೈನ್ಯೇಷು ಕಾಲಾಗ್ನಿರಿವ ಮೂರ್ಛಿತಃ ॥ ೩೮

ವಜ್ರಹಸ್ತೋ ಯಥಾ ಶಕ್ರಃ ಪಾಶಹಸ್ತ ಇವಾಂತಕಃ ।
ಶೂಲಹಸ್ತೋ ಬಭೌ ಸಂಖ್ಯೇ ಕುಂಭಕರ್ಣೋ ಮಹಾಬಲಃ ॥ ೩೯

---

ಉಗುರಗಳಿಂದ ಪರಚುತ್ತ, ಹಲ್ಲುಗಳಿಂದ ಕಚ್ಚುತ್ತ, ಮುಷ್ಟಿಗಳಿಂದ ಗುದ್ದುತ್ತ, ಕಣಕಾಲುಗಳಿಂದ ತಿವಿಯುತ್ತ ವಿಧವಿಧದಲ್ಲಿ ಹಿಂಸೆಪಡಿಸಿದರು (೩೩). ಸಾವಿರಾರು ಕಪಿಗಳು ಮೈಮೇಲೆ ಹತ್ತಿ ನಿಂತಿರುವಾಗ, ಬಹುದೊಡ್ಡ ದೇಹದ ಆ ರಾಕ್ಷಸಶಾರ್ದೂಲನು ಮರಗಳು ಬೆಳೆದಿರುವ ಪರ್ವತದಂತೆ ಕಂಗೊಳಿಸುತ್ತಿದ್ದನು! ಅನಂತರ ಅಪ್ರಮೇಯಬಲನಾದ ಕುಂಭಕರ್ಣನು ಸಂಕ್ರುದ್ಧನಾಗಿ ಆ ವಾನರರನ್ನು ಕೈಗಳಿಂದ ಎಳೆದೆಳೆದು, ಗರುಡನು ಹಾವು ಗಳನ್ನೆಳೆದು ತಿನ್ನುವಂತೆ ತಿನ್ನತೊಡಗಿದನು! (೩೪–೩೫). ಪಾತಾಳದ ಗುಹೆ ಯಂತಿದ್ದ ತನ್ನ ಬಾಯೊಳಗೆ ಕಪಿಗಳನ್ನು ಎಸೆದುಕೊಳ್ಳುತ್ತಿದ್ದನು. ಆ ಕಪಿ ಗಳಾದರೋ ಆತನ ಮೂಗಿನ ಹೊಳ್ಳೆಗಳಿಂದಲೂ ಕಿವಿಗಳ ರಂಧ್ರಗಳಿಂದಲೂ ಹಾರಿಹಾರಿ ಹೊರಗೆ ಬರುತ್ತಿದ್ದರು! (೩೬). ಕುಂಭಕರ್ಣನ ಸಿಟ್ಟು ನೆತ್ತಿಗೇರಿತು. ಆ ಕಪಿಗಳನ್ನು ಜಗಿದು ನುಂಗುತ್ತ, ಸಿಕ್ಕಿದವರನ್ನು ನೆಲಕ್ಕೆ ಬಡಿಯುತ್ತ ಈಡಾಡಿದನು. ರಣರಂಗವು ರಕ್ತಮಾಂಸಗಳಿಂದ ತುಂಬಿ ಹೋಯಿತು. ಆವೇಶಗೊಂಡ ಕಾಲಾಗ್ನಿಯಂತೆ ಕಪಿಸೇನೆಯನ್ನು ಧ್ವಂಸ ಗೊಳಿಸುತ್ತ ಅಲೆದಾಡಿದನು (೩೭–೩೮). ಬಲಾಢ್ಯನಾದ ಕುಂಭಕರ್ಣನು ಶೂಲಹಸ್ತನಾಗಿ, ವಜ್ರಹಸ್ತನಾದ ಇಂದ್ರನಂತೆಯೂ ಪಾಶಹಸ್ತನಾದ

ಯಥಾ ಶುಷ್ಕಾನ್ಯರಣ್ಯಾನಿ ಗ್ರೀಷ್ಮೇ ದಹತಿ ಪಾವಕಃ ।
ತಥಾ ವಾನರಸೈನ್ಯಾನಿ ಕುಂಭಕರ್ಣೋ ವಿನಿರ್ದಹತ್ ॥ ೪೦

ತತಸ್ತೇ ವಧ್ಯಮಾನಾಸ್ತು ಹತಯೂಥಾ ವಿನಾಯಕಾಃ ।
ವಾನರಾ ಭಯಸಂವಿಗ್ನಾ ವಿನೇದುರ್ವಿಸ್ವರಂ ಭೃಶಮ್ ॥ ೪೧

ಅನೇಕಶೋ ವಧ್ಯಮಾನಾಃ ಕುಂಭಕರ್ಣೇನ ವಾನರಾಃ ।
ರಾಘವಂ ಶರಣಂ ಜಗ್ಮುರ್ವ್ಯಥಿತಾಃ ಖಿನ್ನಚೇತಸಃ ॥ ೪೨

ಪ್ರಭಗ್ನಾನ್ ವಾನರಾನ್ ದೃಷ್ಟ್ವಾ ವಜ್ರಹಸ್ತಸುತಾತ್ಮಜಃ ।
ಅಭ್ಯಧಾವತ ವೇಗೇನ ಕುಂಭಕರ್ಣಂ ಮಹಾಹವೇ ॥ ೪೩

ಶೈಲಶೃಂಗಂ ಮಹದ್ಗೃಹ್ಯ ವಿನದಂಶ್ಚ ಮುಹುರ್ಮುಹುಃ ।
ತ್ರಾಸಯನ್ ರಾಕ್ಷಸಾನ್ ಸರ್ವಾನ್ ಕುಂಭಕರ್ಣಪದಾನುಗಾನ್ ॥ ೪೪

ಚಿಕ್ಷೇಪ ಶೈಲಶಿಖರಂ ಕುಂಭಕರ್ಣಸ್ಯ ಮೂರ್ಧನಿ ।
ಸ ತೇನಾಭಿಹತೋಽತ್ಯರ್ಥಂ ಗಿರಿಶೃಂಗೇಣ ಮೂರ್ಧನಿ ॥ ೪೫

ಕುಂಭಕರ್ಣಃ ಪ್ರಜಜ್ವಾಲ ಕೋಪೇನ ಮಹತಾ ತದಾ ।
ಸೋಽಭ್ಯಧಾವತ ವೇಗೇನ ವಾಲಿಪುತ್ರಮಮರ್ಷಣಃ ॥ ೪೬

---

ಯಮನಂತಯೂ ರಣಭೂಮಿಯಲ್ಲಿ ಸಂಚರಿಸಿದನು. ಬೇಸಿಗೆಯಲ್ಲಿ ಒಣಗಿದ ವನಗಳನ್ನು ಕಾಳ್ಗಿಚ್ಚು ಸುಡುವಂತೆ, ಕಪಿಸೇನೆಯನ್ನು ಸುಟ್ಟು ಉರುಬಿದನು (೩೯–೪೦). ವಾನರಸೇನೆಯು ಗುಂಪುಗುಂಪಾಗಿ ಹತವಾಗುತ್ತಿದ್ದಿತು. ಮಾರ್ಗದರ್ಶಿಗಳಾದ ಸೇನಾನಿಗಳಿರಲಿಲ್ಲ. ವಾನರರು ಭಯದಿಂದ ಕಂಗೆಟ್ಟು ಆರ್ತಸ್ವರದಿಂದ ಅರಚಿಕೊಂಡರು. ಎಲ್ಲೆಲ್ಲಿಯೂ ಹಾಹಾಕಾರವುಂಟಾಯಿತು. ಕುಂಭಕರ್ಣನ ಹಾವಳಿಗೆ ಸಿಕ್ಕಿದ ಆ ಕಪಿಯೋಧರು ವಿಷಣ್ಣರಾಗಿ ವ್ಯಥೆಪಡುತ್ತ, ಶ್ರೀರಾಮನೇ ತಮ್ಮನ್ನು ರಕ್ಷಿಸಲೆಂದು ಅವನ ಬಳಿಗೆ ಓಡಿಹೋದರು (೪೧–೪೨). ಕಪಿಯೋಧರು ಭಗ್ನರಾಗಿ ಓಡುತ್ತಿರುವುದು ವಾಲಿಪುತ್ರನಾದ ಅಂಗದನಿಗೆ ಗೋಚರಿಸಿತು. ಒಂದು ದೊಡ್ಡ ಶೈಲಶಿಖರವನ್ನೆತ್ತಿಕೊಂಡು ಗರ್ಜಿಸುತ್ತ, ಆತನು ಕುಂಭಕರ್ಣನಿದ್ದೆಡೆಗೆ ಧಾವಿಸುತ್ತ ಬಂದನು. ಕುಂಭಕರ್ಣನೊಡನೆ ಬಂದಿದ್ದ ರಾಕ್ಷಸಪಡೆಗೆ ಅಂಗದನನ್ನು ಕಂಡು ಅಂಜಿಕೆಯಾಯಿತು (೪೩–೪೪). ಅಂಗದನು ಆ ಶೈಲಶೃಂಗವನ್ನು ಕುಂಭಕರ್ಣನ ತಲೆಗೆ ಗುರಿಯಿಟ್ಟು ಬೀಸಿದನು. ಅದರ ಪೆಟ್ಟಿನಿಂದ ನೊಂದ ಕುಂಭಕರ್ಣನು ರೋಷಾವೇಶ

ಕುಂಭಕರ್ಣೋ ಮಹಾನಾದಸ್ತ್ರಾಸಯನ್ ಸರ್ವವಾನರಾನ್ ।
ಶೂಲಂ ಸಸರ್ಜ ವೈ ರೋಷಾದಂಗದೇ ಸ ಮಹಾಬಲಃ ॥ ೪೭
ತಮಾಪತಂತಂ ಬುದ್ಧ್ವಾ ತು ಯುದ್ಧಮಾರ್ಗವಿಶಾರದಃ ।
ಲಾಘವಾನ್ಮೋಚಯಾಮಾಸ ಬಲವಾನ್ ವಾನರರ್ಷಭಃ ॥ ೪೮
ಉತ್ಪತ್ಯ ಚೈನಂ ಸಹಸಾ ತಲೇನೋರಸ್ಯ ತಾಡಯತ್ ।
ಸ ತೇನಾಭಿಹತಃ ಕೋಪಾತ್ ಪ್ರಮುಮೋಹಾಚಲೋಪಮಃ ॥ ೪೯
ಸ ಲಬ್ಧ ಸಂಜ್ಞೋ ಬಲವಾನ್ ಮುಷ್ಟಿಮಾವರ್ತ್ಯ ರಾಕ್ಷಸಃ ।
ಅಪಹಸ್ತೇನ ಚಿಕ್ಷೇಪ ವಿಸಂಜ್ಞಃ ಸ ಪಪಾತ ಹ ॥ ೫೦
ತಸ್ಮಿನ್ ಪ್ಲವಗಶಾರ್ದೂಲೇ ವಿಸಂಜ್ಞೇ ಪತಿತೇ ಭುವಿ ।
ತಚ್ಛೂಲಂ ಸಮುಪಾದಾಯ ಸುಗ್ರೀವಮಭಿದುದ್ರುವೇ ॥ ೫೧
ತಮಾಪತಂತಂ ಸಂಪ್ರೇಕ್ಷ್ಯ ಕುಂಭಕರ್ಣಂ ಮಹಾಬಲಮ್ ।
ಉತ್ಪಪಾತ ತದಾ ವೀರಃ ಸುಗ್ರೀವೋ ವಾನರಾಧಿಪಃ ॥ ೫೨
ಪರ್ವತಾಗ್ರಂ ಸಮುತ್ಕ್ಷಿಪ್ಯ ಸಮಾವಿಧ್ಯ ಮಹಾಕಪಿಃ ।
ಅಭಿದುದ್ರಾವ ವೇಗೇನ ಕುಂಭಕರ್ಣಂ ಮಹಾಬಲಮ್ ॥ ೫೩

---

ದಿಂದ ಸಕಲವಾನರರೂ ಹೆದರುವಂತೆ ಗರ್ಜಿಸುತ್ತ ಬಂದು, ಶೂಲವನ್ನೆತ್ತಿ ಅಂಗದನನ್ನು ತಿವಿದರು (೪೫–೪೭). ಯುದ್ಧವಿಶಾರದನಾದ ಆ ವಾಲಿಪುತ್ರನು ದೇಹಲಾಘವದಿಂದ ಥಟ್ಟನೆ ಬೇರೆಡೆಗೆ ಹಾರಿ, ಶೂಲದ ತಿವಿತವನ್ನು ತಪ್ಪಿಸಿ ಕೊಂಡನು. ಅಲ್ಲದೆ ಮರುಕ್ಷಣದಲ್ಲಿ ಛಂಗನೆ ಏರಿಬಂದು, ಕುಂಭಕರ್ಣನ ಎದೆಯ ಮೇಲೆ ಅಪ್ಪಳಿಸಿ ಹೊಡೆದನು. ಆ ಹೊಡೆತಕ್ಕೆ ಪರ್ವತಾಕಾರನಾದ ಕುಂಭಕರ್ಣನ ಎದೆಯಮೇಲೆ ಅಪ್ಪಳಿಸಿಹೊಡೆದನು. ಆ ಹೊಡೆತಕ್ಕೆ ಪರ್ವತಾಕಾರನಾದ ಕುಂಭಕರ್ಣನೂ ತತ್ತರಿಸಿ ಬಸವಳಿದನು (೪೮–೪೯). ಹಾಗೆಯೇ ಚೇತರಿಸಿ ಕೊಂಡ ಆ ರಾಕ್ಷಸನು ಎಡಗೈ ಮುಷ್ಟಿಯನ್ನು ಬಿಗಿದು ಅಂಗದನನ್ನು ಗುದ್ದಲು, ಅಂಗದನು ಎಚ್ಚರದಪ್ಪಿ ಬಿದ್ದನು. ಕಪಿಶಾರ್ದೂಲನೆನಿಸಿದ ಅಂಗದನು ಮೂರ್ಛಿತನಾಗಿ ಬೀಳಲು, ಕುಂಭಕರ್ಣನು ಶೂಲವನ್ನೆತ್ತಿ ಹಿಡಿದು ಸುಗ್ರೀವನ ಮೇಲೆ ನುಗ್ಗಿ ಹೋದನು (೫೦–೫೧). ಕುಂಭಕರ್ಣನು ತನ್ನ ಕಡೆಗೆ ಬರು ತ್ತಿರುವುದನ್ನು ಕಂಡು ರಭಸದಿಂದ ಸುಗ್ರೀವನು ಛಂಗನೆ ಹಾರಿ, ಒಂದು ಪರ್ವತಶಿಖರವನ್ನು ಹೊತ್ತು ಧಾವಿಸುತ್ತ ಬಂದನು. ಅವನು ಎದುರಾಗಿ ಬರುವುದನ್ನು ನೋಡಿ, ಅತ್ಯಂತ ವಿಕೃತರೂಪನಾದ ಕುಂಭಕರ್ಣನು

ತಮಾಪತಂತಂ ಸಂಪ್ರೇಕ್ಷ್ಯ ಕುಂಭಕರ್ಣಃ ಪ್ಲವಂಗಮಮ್ ।
ತಸ್ಥೌ ವಿಕೃತಸರ್ವಾಂಗೋ ವಾನರೇಂದ್ರಸಮುನ್ಮುಖಃ ॥ ೫೪

ಕಪಿಶೋಣಿತದಿಗ್ಧಾಂಗಂ ಭಕ್ಷಯಂತಂ ಪ್ಲವಂಗಮಾನ್ ।
ಕುಂಭಕರ್ಣಂ ಸ್ಥಿತಂ ದೃಷ್ಟ್ವಾ ಸುಗ್ರೀವೋ ವಾಕ್ಯಮಬ್ರವೀತ್ ॥ ೫೫

ಪಾತಿತಾಶ್ಚ ತ್ವಯಾ ವೀರಾಃ ಕೃತಂ ಕರ್ಮ ಸುದುಷ್ಕರಮ್ ।
ಭಕ್ಷಿತಾನಿ ಚ ಸೈನ್ಯಾನಿ ಪ್ರಾಪ್ತಂ ತೇ ಪರಮಂ ಯಶಃ ॥ ೫೬

ತ್ಯಜ ತದ್ವಾನರಾನೀಕಂ ಪ್ರಾಕೃತೈಃ ಕಿಂ ಕರಿಷ್ಯಸಿ ।
ಸಹಸ್ವೈಕನಿಪಾತಂ ಮೇ ಪರ್ವತಸ್ಯಾಸ್ಯ ರಾಕ್ಷಸ ॥ ೫೭

ತದ್ವಾಕ್ಯಂ ಹರಿರಾಜಸ್ಯ ಸತ್ತ್ವಧೈರ್ಯಸಮನ್ವಿತಮ್ ।
ಶ್ರುತ್ವಾ ರಾಕ್ಷಸಶಾರ್ದೂಲಃ ಕುಂಭಕರ್ಣೋಽಬ್ರವೀದ್ವಚಃ ॥ ೫೮

ಪ್ರಜಾಪತೇಸ್ತು ಪೌತ್ರಸ್ತ್ವಂ ತಥೈವರ್ಕ್ಷರಜಃಸುತಃ ।
ಶ್ರುತಪೌರುಷಸಂಪನ್ನಃ ತಸ್ಮಾದ್ಗರ್ಜಸಿ ವಾನರ ॥ ೫೯

---

ಆ ವಾನರೇಂದ್ರನ ಸಮ್ಮುಖಕ್ಕೆ ಬಂದು ನಿಂತನು. ಕಪಿಯೋಧರನ್ನು ತಿಂದು ತಿಂದು ಮುಕ್ಕುತ್ತಿದ್ದ ಕುಂಭಕರ್ಣನ ದೇಹವು ಕಪಿಗಳ ರಕ್ತದಿಂದ ತೊಯ್ದಿತ್ತು (೫೨–೫೪). ಸಮ್ಮುಖದಲ್ಲಿ ಬಂದು ನಿಂತ ಕುಂಭಕರ್ಣನನ್ನು ನೋಡಿ ಸುಗ್ರೀವನು ''ಎಲೈ ರಾಕ್ಷಸ, ಬಹುಮಂದಿ ಕಪಿಯೋಧರನ್ನು ಹೊಡೆದುರುಳಿಸಿ ದುಷ್ಕರಕರ್ಮವನ್ನೆಸಗಿದ್ದೀಯೆ. ನಮ್ಮ ಸೇನೆಯನ್ನು ತಿಂದು ಮುಕ್ಕುತ್ತಿದ್ದೀಯೆ. ಭಲಾ! ಅದ್ಭುತವಾದ ಕೀರ್ತಿಯನ್ನು ನೀನು ಗಳಿಸಿದೆ (೫೫–೫೬). ಆ ಕಪಿ ಸೇನೆಯ ಗೊಡವೆಯನ್ನು ಬಿಟ್ಟುಬಿಡು. ಸಾಮಾನ್ಯಜನರೊಡನೆ ನಿನಗೇಕೆ ಯುದ್ಧ? ಈ ಪರ್ವತದಿಂದ ನಿನ್ನನ್ನಪ್ಪಳಿಸುವೆನು. ಇದೊಂದು ಹೊಡೆತವನ್ನು ತಡೆದುಕೊ, ನೋಡೋಣ!'' ಎಂದನು (೫೭). ವಾನರೇಂದ್ರನ ಶೌರ್ಯ ಧೈರ್ಯಾನ್ವಿತವಾದ ಆ ಮಾತನ್ನು ಕೇಳಿ ರಾಕ್ಷಸಶಾರ್ದೂಲನಾದ ಕುಂಭಕರ್ಣನು ''ಎಲಾ ವಾನರ, ನೀನು ಬ್ರಹ್ಮನ ಪೌತ್ರನೂ ಋಕ್ಷರಜಸ್ಸಿನ ಪುತ್ರನೂ ಆಗಿದ್ದೀಯಲ್ಲವೆ? ನಿನ್ನಲ್ಲಿ ವಿದ್ಯೆ ಇದೆ, ಪೌರುಷವಿದೆ. ಆದ್ದರಿಂದ ಗರ್ಜಿಸುತ್ತಿದ್ದೀಯೆ!'' * ಎಂದನು (೫೮–೫೯).

---

* ಕುಂಭಕರ್ಣನ ನುಡಿಯಲ್ಲಿ ವ್ಯಂಗ್ಯಾರ್ಥ ಉಂಟು. ವಿವರಗಳಿಗೆ ಅನುಬಂಧವನ್ನು ನೋಡಿ.

ಸ ಕುಂಭಕರ್ಣಸ್ಯ ವಚೋ ನಿಶಮ್ಯ
ವ್ಯಾವಿಧ್ಯ ಶೈಲಂ ಸಹಸಾ ಮುಮೋಚ ।
ತೇನಾಜಘಾನೋರಸಿ ಕುಂಭಕರ್ಣಂ
ಶೈಲೇನ ವಜ್ರಾಶನಿಸಂನಿಭೇನ ॥ ೬೦

ತಚ್ಛೈಲಶೃಂಗಂ ಸಹಸಾ ವಿಕೀರ್ಣಂ
ಭುಜಾಂತರೇ ತಸ್ಯ ತದಾ ವಿಶಾಲೇ ।
ತತೋ ವಿಷೇದುಃ ಸಹಸಾ ಪ್ಲವಂಗಾ
ರಕ್ಷೋಗಣಾಶ್ಚಾಪಿ ಮುದಾ ವಿನೇದುಃ ॥ ೬೧

ಸ ಶೈಲಶೃಂಗಾಭಿಹತಶ್ಚು ಕೋಪ
ನನಾದ ಕೋಪಾಚ್ಚ ವಿವೃತ್ಯ ವಕ್ತ್ರಮ್ ।
ವ್ಯಾವಿಧ್ಯ ಶೂಲಂ ಚ ತಡಿತ್ಪ್ರಕಾಶಂ
ಚಿಕ್ಷೇಪ ಹರ್ಯೃಕ್ಷಪತೇರ್ವಧಾಯ ॥ ೬೨

ತತ್ ಕುಂಭಕರ್ಣಸ್ಯ ಭುಜಪ್ರವಿದ್ಧಂ
ಶೂಲಂ ಶಿತಂ ಕಾಂಚನದಾಮಜುಷ್ಟಮ್ ।
ಕ್ಷಿಪ್ರಂ ಸಮುತ್ಪತ್ಯ ನಿಗೃಹ್ಯ ದೋರ್ಭ್ಯಾಂ
ಬಭಂಜ ವೇಗೇನ ಸುತೋಽನಿಲಸ್ಯ ॥ ೬೩

---

ಆಗ ಸುಗ್ರೀವನು ತಾನು ಹಿಡಿದಿದ್ದ ಗಿರಿಶೃಂಗದಿಂದ, ವಜ್ರಾಯುಧದಿಂದ ಅಪ್ಪಳಿಸಿದಂತೆ ಕುಂಭಕರ್ಣನ ಎದೆಗೆ ರಪ್ಪನೆ ಬಡಿದನು. ಅದು ಕುಂಭಕರ್ಣನ ವಿಶಾಲವಾದ ವಕ್ಷಸ್ಥಳಕ್ಕೆ ತಾಗಿ ಪುಡಿಪುಡಿಯಾಗಿ ಬಿದ್ದಿತು. ಅದನ್ನು ನೋಡುತ್ತಿದ್ದ ಕಪಿಯೋಧರು ವಿಷಣ್ಣರಾದರು. ರಾಕ್ಷಸಭಟರು ಹರ್ಷಘೋಷಮಾಡಿದರು (೬೦–೬೧). ಕುಂಭಕರ್ಣನು ಕೋಪದಿಂದ ದೊಡ್ಡದಾಗಿ ಬಾಯ್ದೆರೆದು ಗರ್ಜಿಸಿ, ಸುಗ್ರೀವನನ್ನು ಮುಗಿಸಿಬಿಡಬೇಕೆಂದು ನಿಶ್ಚಯಿಸಿ, ಮಿಂಚಿನಂತೆ ಮಿಂಚುವ ತನ್ನ ಶೂಲವನ್ನು ಸುಗ್ರೀವನಿಗೆ ಗುರಿಯಿಟ್ಟು ಬೀಸಿದನು (೬೨). ಅಷ್ಟರಲ್ಲಿ ಹನುಮಂತನು ಛಂಗನೆ ಹಾರಿಬಂದು, ಕುಂಭಕರ್ಣನು ಬೀಸಿದ ತೀಕ್ಷ್ಣಾಗ್ರವಾದ ಶೂಲವನ್ನು ಎರಡು ಕೈಗಳಿಂದ ಹಿಡಿದು ಥಟ್ಟನೆ ಮುರಿದು

ಕೃತಂ ಭಾರಸಹಸ್ರಸ್ಯ ಶೂಲಂ ಕಾಲಾಯಸಂ ಮಹತ್ ।
ಬಭಂಜ ಜಾನುನ್ಯಾರೋಪ್ಯ ಪ್ರಹೃಷ್ಟಃ ಪ್ಲವಗರ್ಷಭಃ ॥ ೬೪

ಶೂಲಂ ಭಗ್ನಂ ಹನುಮತಾ ದೃಷ್ಟ್ವಾ ವಾನರವಾಹಿನೀ ।
ಹೃಷ್ಟಾ ನನಾದ ಬಹುಶಃ ಸರ್ವತಶ್ಚಾಪಿ ದುದ್ರುವೇ ॥ ೬೫

ಬಭೂವಾಥ ಪರಿತ್ರಸ್ತೋ ರಾಕ್ಷಸೋ ವಿಮುಖೋಽಭವತ್ ।
ಸಿಂಹನಾದಂ ಚ ತೇ ಚಕ್ರುಃ ಪ್ರಹೃಷ್ಟಾ ವನಗೋಚರಾಃ ॥ ೬೬

ಮಾರುತಿಂ ಪೂಜಯಾಂಚಕ್ರುರ್ದೃಷ್ಟ್ವಾ ಶೂಲಂ ತಥಾಗತಮ್ ।

ಸ ತತ್ತದಾ ಭಗ್ನಮವೇಕ್ಷ್ಯ ಶೂಲಂ
ಚುಕೋಪ ರಕ್ಷೋಽಧಿಪತಿರ್ಮಹಾತ್ಮಾ ।
ಉತ್ಪಾಟ್ಯ ಲಂಕಾಮಲಯಾತ್ ಸ ಶೃಂಗಂ
ಜಘಾನ ಸುಗ್ರೀವಮುಪೇತ್ಯ ತೇನ ॥ ೬೭

ಸ ಶೈಲಶೃಂಗಾಭಿಹತೋ ವಿಸಂಜ್ಞಃ
ಪಪಾತ ಭೂಮೌ ಯುಧಿ ವಾನರೇಂದ್ರಃ ।

---

ಬಿಟ್ಟನು! ಉಕ್ಕಿನಿಂದ ನಿರ್ಮಿತವಾದ ಆ ಮಹಾಶೂಲಾಯುಧವು ಒಂದು ಸಾವಿರ ಭಾರಗಳ* ತೂಕವಿತ್ತು. ಹನುಮಂತನು ಆ ಶೂಲವನ್ನು ಮೊಳಕಾಲಿಗೆ ಕೊಟ್ಟು ಮುರಿದೆಸೆದನು! (೬೩–೬೪). ಶೂಲವು ಭಗ್ನವಾದುದನ್ನು ಕಂಡು ವಾನರವಾಹಿನಿಯು ಹರ್ಷೋದ್ಗಾರಮಾಡಿತು. ಓಡಿಹೋದ ವಾನರರು ಮತ್ತೆ ಹಿಂದಕ್ಕೆ ಬಂದರು! ದಿಗ್ಭ್ರಾಂತನಾದ ಕುಂಭಕರ್ಣನು ಮುಖವನ್ನು ತಿರುಗಿಸಿಕೊಂಡನು! ಕಪಿಯೋಧರು ಸಂತೋಷದಿಂದ ನಲಿಯುತ, ಮುರಿದೆಸೆದ ಶೂಲವನ್ನು ನೋಡಿ ಹನುಮಂತನನ್ನು ಕೊಂಡಾಡಿದರು (೬೫–೬೬). ಆಮೇಲೆ ಶೂರಗ್ರೇಸರನಾದ ಕುಂಭಕರ್ಣನು ತನ್ನ ಶೂಲವು ಭಗ್ನವಾದುದನ್ನು ಕಂಡು ಕೋಪಾವಿಷ್ಟನಾಗಿ, ಲಂಕೆಯ ಬಳಿಯಲ್ಲಿದ್ದ ಪರ್ವತಶಿಖರವನ್ನು ಕಿತ್ತುತಂದು ಸುಗ್ರೀವನನ್ನು ಬಡಿದನು. ವಾನರೇಂದ್ರನು

---

* ೧ ಭಾರ=ಸುಮಾರು ೨೫೦ ಪೌಂಡುಗಳು. ೧,೦೦೦ ಭಾರ= ೧೧೧ಟನ್, ೧೭ಪೌಂಡು.

ತಂ ಪ್ರೇಕ್ಷ್ಯ ಭೂಮೌ ಪತಿತಂ ವಿಸಂಜ್ಞಂ
ನೇದುಃ ಪ್ರಹೃಷ್ಟಾಸ್ತ್ವಥ ಯಾತುಧಾನಾಃ ॥ ೬೮

ತಮಭ್ಯುಪೇತ್ಯಾದ್ಭುತಘೋರವೀರ್ಯಂ
ಸ ಕುಂಭಕರ್ಣೋ ಯುಧಿ ವಾನರೇಂದ್ರಮ್ ।
ಜಹಾರ ಸುಗ್ರೀವಮಭಿಪ್ರಗೃಹ್ಯ
ಯಥಾನಿಲೋ ಮೇಘಮತಿಪ್ರಚಂಡಃ ॥ ೬೯

ಸ ತಂ ಮಹಾಮೇಘನಿಕಾಶರೂಪ-
ಮುತ್ಪಾಟ್ಯ ಗಚ್ಛನ್ ಯುಧಿ ಕುಂಭಕರ್ಣಃ ।
ರರಾಜ ಮೇರುಪ್ರತಿಮಾನರೂಪೋ
ಮೇರುರ್ಯಥಾಭ್ಯುಚ್ಛ್ರಿತಘೋರಶೃಂಗಃ ॥ ೭೦

ತತಸ್ತಾಮುತ್ಪಾಟ್ಯ ಜಗಾಮ ವೀರಃ
ಸಂಸ್ತೂಯಮಾನೋ ಯುಧಿ ರಾಕ್ಷಸೇಂದ್ರೈಃ ।
ಶೃಣ್ವನ್ನಿನಾದಂ ತ್ರಿದಶಾಲಯಾನಾಂ
ಪ್ಲವಂಗರಾಜಗ್ರಹವಿಸ್ಮಿತಾನಾಮ್ ॥ ೭೧

---

ಎಚ್ಚರದಪ್ಪಿ ನೆಲದಲ್ಲಿ ಬಿದ್ದನು. ಅದನ್ನು ನೋಡಿ ರಾಕ್ಷಸಭಟರು ಹರ್ಷೋನ್ಮತ್ತರಾಗಿ ಗರ್ಜಿಸಿದರು (೬೭-೬೮). ಅದ್ಭುತಪರಾಕ್ರಮಿಯಾದ ಸುಗ್ರೀವನು ಉರುಳಿಬಿದ್ದುದನ್ನು ಕಂಡು, ಕುಂಭಕರ್ಣನು ಅವನನ್ನೆತ್ತಿಕೊಂಡು ಹೊರಟುಬಿಟ್ಟನು. ಝಂಝಾವಾತವು ಮೇಘವನ್ನು ಹೊತ್ತೊಯ್ಯುವಂತೆ ಸುಗ್ರೀವನನ್ನು ಹೊತ್ತುಕೊಂಡು ಹೊರಟನು (೬೯). ಮೇರುಪರ್ವತದಂತೆ ಬೃಹದಾಕಾರನಾದ ಕುಂಭಕರ್ಣನು ಮಹಾಮೇಘದಂತೆ ಬೃಹತ್ಕಾಯನಾದ ಸುಗ್ರೀವನನ್ನು ಎತ್ತಿಕೊಂಡು ಹೋಗುವಾಗ, ಉನ್ನತಶಿಖರದಿಂದ ವಿರಾಜಿಸುವ ಮೇರುಗಿರಿಯಂತೆ ಕಂಗೊಳಿಸಿದನು (೭೦). ರಾಕ್ಷಸಭಟರು ಕುಂಭಕರ್ಣನ ಸಾಹಸವನ್ನು ಮೆಚ್ಚಿ ಕೊಂಡಾಡತೊಡಗಿದರು. ವಾನರೇಂದ್ರನು ಸೆರೆಸಿಕ್ಕಿದುದನ್ನು ನೋಡಿ ವಿಸ್ಮಿತರಾದ ದೇವತೆಗಳು ಹಾಹಾಕಾರಮಾಡಿದರು. ಅದನ್ನಾಲಿಸುತ್ತ ಕುಂಭಕರ್ಣನು ಲಂಕಾಭಿಮುಖನಾಗಿ ತೆರಳಿದನು (೭೧).

ತತಸ್ತಮಾದಾಯ ತದಾ ಸ ಮೇನೇ
ಹರೀಂದ್ರಮಿಂದ್ರೋಪಮಮಿಂದ್ರವೀರ್ಯಃ ।
ಅಸ್ಮಿನ್ ಹೃತೇ ಸರ್ವಮಿದಂ ಹೃತಂ ಸ್ಯಾತ್
ಸರಾಘವಂ ಸೈನ್ಯಮಿತೀಂದ್ರ ಶತ್ರುಃ ॥ ೭೨

ವಿದ್ರುತಾಂ ವಾಹಿನೀಂ ದೃಷ್ಟ್ವಾ ವಾನರಾಣಾಂ ತತಸ್ತತಃ ।
ಕುಂಭಕರ್ಣೇನ ಸುಗ್ರೀವಂ ಗೃಹೀತಂ ಚಾಪಿ ವಾನರಮ್ ॥ ೭೩

ಹನುಮಾಂಶ್ಚಿಂತಯಾಮಾಸ ಮತಿಮಾನ್ ಮಾರುತಾತ್ಮಜಃ ।
ಏವಂ ಗೃಹೀತೇ ಸುಗ್ರೀವೇ ಕಿಂ ಕರ್ತವ್ಯಂ ಮಯಾ ಭವೇತ್ ॥ ೭೪

ಯದ್ವೈ ನ್ಯಾಯ್ಯಂ ಮಯಾ ಕುರ್ತುಂ ತತ್ ಕರಿಷ್ಯಾಮಿ ಸರ್ವಥಾ ।
ಭೂತ್ವಾ ಪರ್ವತಸಂಕಾಶೋ ನಾಶಯಿಷ್ಯಾಮಿ ರಾಕ್ಷಸಮ್ ॥ ೭೫

ಮಯಾ ಹತೇ ಸಂಯತಿ ಕುಂಭಕರ್ಣೇ
ಮಹಾಬಲೇ ಮುಷ್ಟಿವಿಕೀರ್ಣದೇಹೇ ।
ವಿಮೋಚಿತೇ ವಾನರಪಾರ್ಥಿವೇ ಚ
ಭವಂತು ಹೃಷ್ಟಾಃ ಪ್ಲವಗಾಃ ಸಮಸ್ತಾಃ ॥ ೭೬

---

'ಇಂದ್ರಸದೃಶನಾದ ವಾನರೇಶ್ವರನನ್ನು ಸೆರೆಹಿಡಿದು ಒಯ್ದುಬಿಟ್ಟರೆ, ವಾನರಸೇನೆಯನ್ನು ಹೊಡೆದೋಡಿಸಿದಂತೆಯೇ ಸರಿ. ರಾಮನೂ ಗತ್ಯಂತರ ವಿಲ್ಲದೆ ಸುಮ್ಮನೆ ಹೊರಟುಹೋಗುವನು' ಎಂದು ದೈತ್ಯನಾದ ಕುಂಭಕರ್ಣನು ಭಾವಿಸಿದನು (೭೨). ಇತ್ತ ವಾನರಸೇನೆಯು ಹೆದರಿ ಓಡತೊಡಗಿತ್ತು ಸುಗ್ರೀವನನ್ನು ಕುಂಭಕರ್ಣನು ಅಪಹರಿಸಿ ಕೊಂಡೊಯ್ಯುತ್ತಿದ್ದನು. ಇದೆಲ್ಲ ವನ್ನೂ ಹನುಮಂತನು ಗಮನಿಸಿದನು ಮಾರುತಾತ್ಮಜನಾದ ಆ ಧೀಮಂತನು ತನ್ನ ಮನಸ್ಸಿನಲ್ಲಿ 'ಎಲಾ! ಸುಗ್ರೀವನು ಈ ರೀತಿಯಲ್ಲಿ ಸೆರೆಸಿಕ್ಕಿದನಲ್ಲ, ಈಗ ನಾನೇನು ಮಾಡಲಿ? (೭೩–೭೪). ಯಾವುದು ಯುಕ್ತವೆನಿಸುವುದೋ ಅದನ್ನು ಮಾಡಿಯೇ ತೀರುವೆನು ! ಪರ್ವತಾಕಾರನಾಗಿ ಬೆಳೆದು ಈ ರಾಕ್ಷಸ ನನ್ನು ಕೊಂಡುಬಿಡುವೆನು ಸಂಗ್ರಾಮದಲ್ಲಿ ಮುಷ್ಟಿಯಿಂದ ಗುದ್ದಿ ಕುಂಭಕರ್ಣನ ದೇಹವನ್ನು ಈಡಾಡಿಬಿಟ್ಟೇನು! ಇವನನ್ನು ಕೊಂದು ನಮ್ಮ ಮಹಾರಾಜ ನನ್ನು ಬಿಡಿಸಿಕೊಳ್ಳುವೆನು. ಸಮಸ್ತವಾನರರೂ ಸಂತೋಷದಿಂದ ನಲಿಯಲಿ !

ಅಥವಾ ಸ್ವಯಮಪ್ಯೇಷ ಮೋಕ್ಷಂ ಪ್ರಾಪ್ಸ್ಯತಿ ಪಾರ್ಥಿವಃ ।
ಗೃಹಿತೋಽಯಂ ಯದಿ ಭವೇತ್ ತ್ರಿದಶೈಃ ಸಾಸುರೋರಗೈಃ ॥ ೭೭

ಮನ್ಯೇ ನ ತಾವದಾತ್ಮಾನಂ ಬುಧ್ಯತೇ ವಾನರಾಧಿಪಃ ।
ಶೈಲಪ್ರಹಾರಾಭಿಹತಃ ಕುಂಭಕರ್ಣೇನ ಸಂಯುಗೇ ॥ ೭೮

ಅಯಂ ಮುಹೂರ್ತಾತ್ ಸುಗ್ರೀವೋ ಲಬ್ಧಸಂಜ್ಞೋ ಮಹಾಹವೇ ।
ಆತ್ಮನೋ ವಾನರಾಣಾಂ ಚ ಯತ್ಪಥ್ಯಂ ತತ್ಕರಿಷ್ಯತಿ ॥ ೭೯

ಮಯಾ ತು ಮೋಕ್ಷಿತಸ್ಯಾಸ್ಯ ಸುಗ್ರೀವಸ್ಯ ಮಹಾತ್ಮನಃ ।
ಅಪ್ರೀತಿಶ್ಚ ಭವೇತ್ ಕಷ್ಟಾ ಕೀರ್ತಿನಾಶಶ್ಚ ಶಾಶ್ವತಃ ॥ ೮೦

ತಸ್ಮಾನ್ಮುಹೂರ್ತಂ ಕಾಂಕ್ಷಿಷ್ಯೇ ವಿಕ್ರಮಂ ಪಾರ್ಥಿವಸ್ಯ ನಃ ।
ಭಿನ್ನಂ ಚ ವಾನರಾನೀಕಂ ತಾವದಾಶ್ವಾಸಯಾಮ್ಯಹಮ್ ॥ ೮೧

ಇತ್ಯೇವಂ ಚಿಂತಯಿತ್ವಾ ತು ಹನುಮಾನ್ ಮಾರುತಾತ್ಮಜಃ ।
ಭೂಯಃ ಸಂಸ್ತಂಭಯಾಮಾಸ ವಾನರಾಣಾಂ ಮಹಾಚಮೂಮ್ ॥

---

(೭೫–೭೬). ಆದರೆ, (ಇದು ಸರಿಯಲ್ಲ) ದೇವಾಸುರರಾಗಲಿ ಉರಗರಾಗಲಿ ವಾನರೇಶ್ವರನನ್ನು ಹಿಡಿದು ನಿಲ್ಲಿಸಬಾರದು. ಅವರ ಹಿಡಿತದಿಂದ ತಾನೊಬ್ಬನೇ ಬಿಡಿಸಿಕೊಂಡು ಬರುವ ಸಾಮರ್ಥ್ಯವು ಸುಗ್ರೀವನಿಗುಂಟು (೭೭). ಈ ವಾನರೇಂದ್ರನು ಇನ್ನೂ ಮೂರ್ಛೆಯಿಂದ ಚೇತರಿಸಿಕೊಂಡಿಲ್ಲವೆಂದು ತೋರುತ್ತದೆ. ಕುಂಭಕರ್ಣನ ಶೈಲಪ್ರಹಾರದಿಂದ ಎಚ್ಚರದಪ್ಪಿದ್ದಾನೆ. ಸ್ವಲ್ಪ ಹೊತ್ತಿನಲ್ಲಿ ಅವನು ಮೂರ್ಛೆಯಿಂದೇಳುವನು. ಆಗ ತನಗೂ ವಾನರರಿಗೂ ಯುಕ್ತವಾದ ಕ್ರಮವನ್ನು ಅವನೇ ಕೈಗೊಳ್ಳುವನು (೭೮–೭೯). ನಾನು ಸುಗ್ರೀವನನ್ನು ಬಿಡಿಸಿದರೆ, ಆ ಮಹಾತ್ಮನಿಗೆ ಕಿರಿಕಿರಿಯಾಗಬಹುದು, ಅಸಮಾಧಾನವಾಗಬಹುದು. ಅದು ಒಳ್ಳೆಯದಲ್ಲ, ಮತ್ತು ಅವನಿಗೆ ಶಾಶ್ವತವಾಗಿ ಅಪಕೀರ್ತಿ ಬರುವುದು (೮೦). ಆದ್ದರಿಂದ ಸ್ವಲ್ಪಕಾಲದವರೆಗೆ ಕಾದು ನೋಡೋಣ. ನಮ್ಮ ಮಹಾರಾಜನು ವಿಕ್ರಮವನ್ನು ಮೆರೆಸಿಬರುವನೋ ಎಂದು ಕಾದುನೋಡುವೆನು ಹೆದರಿ ಚದರಿದ ಸೇನೆಯನ್ನು ಮೊದಲು ಸಂತೈಸುವೆನು' ಎಂದು ಆಲೋಚಿಸಿ, ಚಲ್ಲಾಪಿಲ್ಲಿಯಾಗಿ ಚದರಿದ ದೊಡ್ಡ ಕಪಿಸೇನೆಗೆ ಧೈರ್ಯವನ್ನು ಹೇಳಿ ನಿಲ್ಲಿಸಿದನು (೮೧–೮೨).

ಸ ಕುಂಭಕರ್ಣೋಽಥ ವಿವೇಶ ಲಂಕಾಂ
ಸ್ಫುರಂತಮಾದಾಯ ಮಹಾಕಪಿಂ ತಮ್ ।
ವಿಮಾನಚರ್ಯಾಗೃಹಗೋಪುರಸ್ಥೈಃ
ಪುಷ್ಪಾಗ್ರ್ಯವರ್ಷೈರವಕೀರ್ಯಮಾಣಃ ॥ ೮೩

ಲಾಜಗಂಧೋದವರ್ಷೈಸ್ತು ಸಿಚ್ಯಮಾನಃ ಶನೈಃ ಶನೈಃ ।
ರಾಜಮಾರ್ಗಸ್ಯ ಶೀತತ್ವಾತ್ ಸಂಜ್ಞಾಮಾಪ ಮಹಾಬಲಃ ॥ ೮೪

ತತಃ ಸ ಸಂಜ್ಞಾಮುಪಲಭ್ಯ ಕೃಚ್ಛ್ರಾ-
ದ್ಬಲೀಯಸಸ್ತಸ್ಯ ಭುಜಾಂತರಸ್ಥಃ ।
ಅವೇಕ್ಷಮಾಣಃ ಪುರರಾಜಮಾರ್ಗಂ
ವಿಚಿಂತಯಾಮಾಸ ಮುಹುರ್ಮಹಾತ್ಮಾ ॥ ೮೫

ಏವಂ ಗೃಹೀತೇನ ಕಥಂ ನು ನಾಮ
ಶಕ್ಯಂ ಮಯಾ ಸಂಪ್ರತಿಕರ್ತುಮದ್ಯ ।
ತಥಾ ಕರಿಷ್ಯಾಮಿ ಯಥಾ ಹರೀಣಾಂ
ಭವಿಷ್ಯತೀಷ್ಟಂ ಚ ಹಿತಂ ಚ ಕಾರ್ಯಂ ॥ ೮೬

---

ಇತ್ತಲಾಗಿ ಕುಂಭಕರ್ಣನು ಹೊರಳಾಡುತ್ತಿದ್ದ ಸುಗ್ರೀವನನ್ನೆತ್ತಿಕೊಂಡು ಲಂಕೆಯನ್ನು ಪ್ರವೇಶಿಸಿದನು. ಲಂಕಾಪ್ರಾಕಾರದ ರಕ್ಷಾಗೃಹಗಳಲ್ಲಿಯೂ ಗೋಪುರಗಳಲ್ಲಿಯೂ ಉಪ್ಪರಿಗೆಗಳಲ್ಲಿಯೂ ಇದ್ದ ರಾಕ್ಷಸಪ್ರಜೆಗಳು ಸಂತೋಷ ದಿಂದ ಕುಂಭಕರ್ಣನಮೇಲೆ ಪುಷ್ಪವೃಷ್ಟಿಯನ್ನು ಸುರಿಸುತ್ತಿದ್ದರು (೮೩). ಅರಳನ್ನು ಬೀರುತ್ತಿದ್ದರು. ಗಂಧೋದಕವನ್ನು ಚೆಲ್ಲುತ್ತಿದ್ದರು. ರಾಜಮಾರ್ಗವು ಶೀತಳವಾಗಿತ್ತು. ರಾಕ್ಷಸರು ಸುರಿಸಿದ ಗಂಧೋದಕಾದಿಗಳು ಸುಗ್ರೀವನ ಮೇಲೆಯೂ ಬಿದ್ದವು. ಮೆಲ್ಲನೆ ಸುಗ್ರೀವನು ಮೂರ್ಛೆಯಿಂದ ಎಚ್ಚತ್ತನು (೮೪). ಬಲಾಢ್ಯನಾದ ಆ ಧೀರನು ತಾನೆಲ್ಲಿದ್ದೇನೆಂದು ನೋಡಿಕೊಂಡನು. ಬಲಶಾಲಿಯಾದ ಕುಂಭಕರ್ಣನ ತೋಳುಗಳಲ್ಲಿ ಸಿಲುಕಿಕೊಂಡಿರುವೆನೆಂಬುದು ಹೊಳೆಯಿತು. ಲಂಕೆಯ ರಾಜವೀಥಿಯು ಗೋಚರಿಸುತ್ತಿತ್ತು (೮೫)ಆಗ ಸುಗ್ರೀವನು ತನ್ನಲ್ಲಿಯೇ 'ಎಲಾ! ಕುಂಭಕರ್ಣನ ಕೈಗೆ ಸಿಕ್ಕಿಬಿದ್ದಿರುವೆನು ! ಇದಕ್ಕೆ ಪರಿಹಾರವೇನು? ವಾನರಯೋಧರಿಗೆ ಇಷ್ಟವೂ ಹಿತಕರವೂ ಆದ

ತತಃ ಕರಾಗ್ರೈಃ ಸಹಸಾ ಸಮೇತ್ಯ
ರಾಜಾ ಹರೀಣಾಮಮರೇಂದ್ರಶತ್ರುಮ್ ।
ಖರೈಶ್ಚ ಕರ್ಣೌ ದಶನೈಶ್ಚ ನಾಸಾಂ
ದದಂಶ ಪಾರ್ಶ್ವೇಷು ಚ ಕುಂಭಕರ್ಣಮ್ ॥ ೮೭

ಸ ಕುಂಭಕರ್ಣೋ ಹೃತಕರ್ಣನಾಸೋ
ವಿದಾರಿತಸ್ತೇನ ವಿಮರ್ದಿತಶ್ಚ ।
ರೋಷಾಭಿಭೂತಃ ಕ್ಷತಜಾರ್ದ್ರಗಾತ್ರಃ
ಸುಗ್ರೀವಮಾವಿಧ್ಯ ಪಿಪೇಷ ಭೂಮೌ ॥ ೮೮

ಸ ಭೂತಲೇ ಭೀಮಬಲಾಭಿಪಿಷ್ಟಃ
ಸುರಾರಿಭಿಸ್ತೈರಭಿಹನ್ಯಮಾನಃ ।
ಜಗಾಮ ಖಂ ವೇಗವದಭ್ಯುಪೇತ್ಯ
ಪುನಶ್ಚ ರಾಮೇಣ ಸಮಾಜಗಾಮ ॥ ೮೯

ಕರ್ಣನಾಸಾವಿಹೀನಸ್ತು ಕುಂಭಕರ್ಣೋ ಮಹಾಬಲಃ ।
ರರಾಜ ಶೋಣಿತೈಃ ಸಿಕ್ತೋ ಗಿರಿಃ ಪ್ರಸ್ರವಣೈರಿವ ॥ ೯೦

---

ಕಾರ್ಯವನ್ನು ಈಗ ಮಾಡಲೇಬೇಕು. ಮಾಡುವೆನು!' ಎಂದು ಆಲೋಚಿಸಿದನು (೮೬). ಕೂಡಲೇ ಆ ವಾನರೇಂದ್ರನು ಖರತರಗಳಾದ ಉಗುರುಗಳಿಂದ ಪರಚಿ ಕುಂಭಕರ್ಣನ ಕಿವಿಗಳನ್ನು ಹರಿದು, ಹಲ್ಲುಗಳಿಂದ ಕಚ್ಚಿ ಮೂಗನ್ನು ತರಿದು, ಅವನ ಎಡಬಲ ಪಾರ್ಶ್ವಗಳನ್ನು ಬಲವಾಗಿ ಕಡಿದನು! (೮೭). ಕುಂಭಕರ್ಣನ ಕಿವಿ ಮೂಗುಗಳು ಹೋದವು. ಪರಚಿ ಕಚ್ಚಿದುದರಿಂದ ಮೈಯಲ್ಲಿ ಗಾಯಗಳಾಗಿ ರಕ್ತವು ಸುರಿದು ದೇಹವೆಲ್ಲವೂ ಒದ್ದೆಯಾಯಿತು. ಕುಂಭಕರ್ಣನು ರೋಷಾವಿಷ್ಟನಾಗಿ ಸುಗ್ರೀವನನ್ನು ಮೇಲೆತ್ತಿ ನೆಲದಮೇಲೆ ಕುಕ್ಕಿದನು! (೮೮). ರಾಕ್ಷಸರು ಮುತ್ತಿಕೊಂಡು ಸುಗ್ರೀವನನ್ನು ಥಳಿಸಲಾರಂಭಿಸಿದರು. ಆಗ ವಾನರೇಂದ್ರನು ಥಟ್ಟನೆ ಆಕಾಶಕ್ಕೆ ನೆಗೆದು ವೇಗದಿಂದ ಹಾರುತ್ತ ಶ್ರೀರಾಮನ ಬಳಿಗೆ ಬಂದು ಸೇರಿದನು! (೮೯). ಕಿವಿಮೂಗುಗಳನ್ನು ಕಳೆದುಕೊಂಡು ಕುಂಭಕರ್ಣನು ರಕ್ತಾರ್ದ್ರಶರೀರನಾದನು. ಬೆಟ್ಟದಿಂದ

ಶೋಣಿತಾರ್ದ್ರೋ ಮಹಾಕಾಯೋ ರಾಕ್ಷಸೋ ಭೀಮವಿಕ್ರಮಃ ।
ಯುದ್ಧಾಯಾಭಿಮುಖೋ ಭೂಯೋ ಮನಶ್ಚಕ್ರೇ ಮಹಾಬಲಃ ॥ ೯೧

ಅಮರ್ಷಾಚ್ಛೋಣಿತೋದ್ಗಾರೀ ಶುಶುಭೇ ರಾವಣಾನುಜಃ ।
ನೀಲಾಂಜನಚಯಪ್ರಖ್ಯಃ ಸಸಂಧ್ಯ ಇವ ತೋಯದಃ ॥ ೯೨

ಗತೇ ತು ತಸ್ಮಿನ್ ಸುರರಾಜಶತ್ರುಃ
ಕ್ರೋಧಾತ್ ಪ್ರದುದ್ರಾವ ರಣಾಯ ಭೂಯಃ ।
ಅನಾಯುಧೋಽಸ್ಮೀತಿ ವಿಚಿಂತ್ಯ ರೌದ್ರೋ
ಘೋರಂ ತದಾ ಮುದ್ಗರಮಾಸಸಾದ ॥ ೯೩

ತತಃ ಸ ಪುರ್ಯಾಃ ಸಹಸಾ ಮಹೌಜಾ
ನಿಷ್ಕ್ರಮ್ಯ ತದ್ವಾನರಸೈನ್ಯಮುಗ್ರಮ್ ।
ತೇನೈವ ರೂಪೇಣ ಬಭಂಜ ರುಷ್ಟಃ
ಪ್ರಹಾರಮುಷ್ಟ್ಯಾ ಚ ಪದೇನ ಸದ್ಯಃ ॥ ೯೪

ಬಭಕ್ಷ ರಕ್ಷೋ ಯುಧಿ ಕುಂಭಕರ್ಣಃ
ಪ್ರಜಾ ಯುಗಾಂತಾಗ್ನಿರಿವ ಪ್ರದೀಪ್ತಃ ।

---

ಗಿರಿನದಿಗಳು ಹರಿಯುವಂತೆ ರಕ್ತದ ಹೊನಲು ಹರಿಯಿತು. ಭೀಮವಿಕ್ರಮನಾದ ಆ ಬಲಾಢ್ಯನು ಪುನಃ ಯುದ್ಧಕ್ಕೆ ಹೋಗಬೇಕೆಂದು ನಿರ್ಧರಿಸಿದನು (೯೦–೯೧). ಕಪ್ಪು ಕಾಡಿಗೆಯ ರಾಶಿಯಂತಿದ್ದ ಆ ರಾಕ್ಷಸನು ರಕ್ತಸಿಕ್ತನಾಗಿ, ಸಂಜೆಯ ಕೆಮ್ಮೋಡದಂತೆ ಕಂಗೊಳಿಸಿದನು. ಸುಗ್ರೀವನು ತಪ್ಪಿಸಿಕೊಂಡು ಹೋದನೆಂಬ ಕೋಪದಿಂದ ಕುದಿಯುತ್ತಿದ್ದ ಕುಂಭಕರ್ಣನು ಮತ್ತೆ ರಣರಂಗಕ್ಕೆ ಧಾವಿಸಿದನು. ತನ್ನ ಕೈಯಲ್ಲಿ ಆಯುಧವಿಲ್ಲವೆಂದು ಚಿಂತಿಸಿ, ಆ ರುದ್ರ ರಾಕ್ಷಸನು ಘೋರವಾದ ಮುದ್ಗರವನ್ನು ಗೈಗೆತ್ತಿಕೊಂಡನು (೯೨–೯೩). ಆ ಸಾಹಸಿಯು ನೇರವಾಗಿ ರಣಭೂಮಿಗೆ ಧುಮುಕಿ ಉಗ್ರರೂಪನಾಗಿ, ಮೊದಲಿನಂತೆಯೇ ಕೈಯಿಂದಪ್ಪಳಿಸುತ್ತ, ಗುದ್ದುತ್ತ, ಕಾಲಿನಿಂದೊದೆಯುತ್ತ ಕಪಿಸೇನೆಯನ್ನು ಧ್ವಂಸಪಡಿಸಲಾರಂಭಿಸಿದನು (೯೪). ಕಪಿಗಳ ರಕ್ತವನ್ನು ಹೀರಿ ಮಾಂಸವನ್ನು ಭಕ್ಷಿಸಬೇಕೆಂಬ ಬಯಕೆಯಿಂದ ಕುಂಭಕರ್ಣನು ವಾನರಸೇನೆಯಲ್ಲಿ ನುಗ್ಗಿದನು. ಪ್ರಜ್ವಲಿಸುವ ಕಾಲಾಗ್ನಿಯಂತೆ ನುಗ್ಗಿ, ಕಪಿಸೇನೆಯನ್ನು

ಬಭುಕ್ಷಿತಃ ಶೋಣಿತಮಾಂಸಗೃಧ್ನುಃ ।
ಪ್ರವಿಶ್ಯ ತದ್ವಾನರಸೈನ್ಯಮುಗ್ರಮ್ ॥ ೯೫

ಚಖಾದ ರಕ್ಷಾಂಸಿ ಹರೀನ್ ಪಿಶಾಚಾ-
ನೃಕ್ಷಾಂಶ್ಚ ಮೋಹಾದ್ಯುಧಿ ಕುಂಭಕರ್ಣಃ ।
ಯಥೈವ ಮೃತ್ಯುರ್ಹರತೇ ಯುಗಾಂತೇ
ಸ ಭಕ್ಷಯಾಮಾಸ ಹರೀಂಶ್ಚ ಮುಖ್ಯಾನ್ ॥ ೯೬

ಏಕಂ ದ್ವೌತ್ರೀನ್ ಬಹೂನ್ ಕ್ರುದ್ಧೋ ವಾನರಾನ್ ಸಹ ರಾಕ್ಷಸೈಃ ।
ಸಮಾದಾಯೈಕಹಸ್ತೇನ ಪ್ರಚಿಕ್ಷೇಪ ತ್ವರನ್ ಮುಖೇ ॥ ೯೭

ಸಂಪ್ರಸ್ರವಂಸ್ತದಾ ಮೇದಃ ಶೋಣಿತಂ ಚ ಮಹಾಬಲಃ ।
ವಧ್ಯಮಾನೋ ನಗೇಂದ್ರಾಗ್ರೈರ್ಭಕ್ಷಯಾಮಾಸ ವಾನರಾನ್ ॥ ೯೮

ತೇ ಭಕ್ಷ್ಯಮಾಣಾ ಹರಯೋ ರಾಮಂ ಜಗ್ಮುಸ್ತದಾ ಗತಿಮ್ ।
ಕುಂಭಕರ್ಣೋ ಭೃಶಂ ಕ್ರುದ್ಧಃ ಕಪೀನ್ ಖಾದನ್ ಪ್ರಧಾವತಿ ॥ ೯೯

ಶತಾನಿ ಸಪ್ತ ಚಾಷ್ಟೌ ಚ ವಿಂಶತ್ ತ್ರಿಂಶತ್ತಥೈವ ಚ ।
ಸಂಪರಿಷ್ವಜ್ಯ ಬಾಹುಭ್ಯಾಂ ಖಾದನ್ ವಿಪರಿಧಾವತಿ ॥ ೧೦೦

---

ಭಕ್ಷಿಸುತ್ತ ಹೋದನು (೯೫). ಯುದ್ಧೋನ್ಮತ್ತನಾದ ಆ ನಿಶಾಚರನು ರಾಕ್ಷಸರು ಯಾರು–ಕಪಿಗಳು ಯಾರು ಎಂಬ ವಿವೇಚನೆಯಿಲ್ಲದೆ ಕೈಗೆ ಸಿಕ್ಕಿದವರನ್ನು ತಿನ್ನುತ್ತಹೋದನು ! ಪ್ರಳಯಕಾಲದ ಮೃತ್ಯುವಿನಂತೆ ರಾಕ್ಷಸರನ್ನೂ ಭಲ್ಲೂಕಗಳನ್ನು ಭಕ್ಷಿಸಿದನು (೯೬). ಕ್ರೋಧಾವೇಶದಿಂದ ಕೈಚಾಚಿ ಕೈಗೆ ಸಿಕ್ಕಿದವರನ್ನು ಬಾಯಲ್ಲಿ ತುರುಕಿಕೊಳ್ಳುತ್ತ ಹೋದನು. ಒಂದೊಂದುಸಲಕ್ಕೆ ಒಬ್ಬರು, ಇಬ್ಬರು,ಮೂವರು ಅಥವಾ ಬಹುಮಂದಿ ವಾನರರು ಸಿಕ್ಕಿಕೊಳ್ಳುತ್ತಿದ್ದರು (೯೭). ವಾನರಯೋಧರು ಗಿರಿಶಿಖರಗಳಿಂದ ಕುಂಭಕರ್ಣನನ್ನು ಬಡಿಯುತ್ತಲೇ ಇದ್ದರು. ಅದನ್ನು ಗಣಿಸದೆ ಆ ಬಲಾಢ್ಯನು ವಾನರರನ್ನು ಬಾಯಿಗೆಸೆದುಕೊಂಡು ಜಗಿಯುತ್ತಲೇ ಹೋದನು. ಅವನ ಬಾಯಿಂದ ಕಪಿಗಳ ದೇಹದಲ್ಲಿದ್ದ ಕೊಬ್ಬು ಜಿನುಗುತ್ತಿತ್ತು (೯೮). ಕಪಿಯೋಧರು ದಿಗ್ಭ್ರಾಂತರಾಗಿ ಶ್ರೀರಾಮನಿಗೆ ಶರಣಾಗತರಾಗಲು ಓಡಲಾರಂಭಿಸಿದರು. ಕುಂಭಕರ್ಣನು ಎರಡು ಕೈಗಳನ್ನೂ ನೀಡಿ ಅವರನ್ನು ಬರಗಲಾರಂಭಿಸಿದನು. ಏಳು, ಎಂಟು, ಇಪ್ಪತ್ತು ಮೂವತ್ತು ನೂರು ಕಪಿಗಳನ್ನು ಒಂದೊಂದು ಸಲಕ್ಕೆ

ಮೇದೋವಸಾಶೋಣಿತದಿಗ್ಧಗಾತ್ರಃ
ಕರ್ಣಾವಸಕ್ತಗ್ರಥಿತಾಂತ್ರಮಾಲಃ ।
ವವರ್ಷ ಶೂಲಾನಿ ಸುತೀಕ್ಷ್ಣದಂಷ್ಟ್ರಃ
ಕಾಲೋ ಯುಗಾಂತಾಗ್ನಿರಿವ ಪ್ರವೃದ್ಧಃ ॥ ೧೦೧

ತಸ್ಮಿನ್ ಕಾಲೇ ಸುಮಿತ್ರಾಯಾಃ ಪುತ್ರಃ ಪರಬಲಾರ್ದನಃ ।
ಚಕಾರ ಲಕ್ಷ್ಮಣಃ ಕ್ರುದ್ಧೋ ಯುದ್ಧಂ ಪರಪುರಂಜಯಃ ॥ ೧೦೨

ಸ ಕುಂಭಕರ್ಣಸ್ಯ ಶರಾನ್ ಶರೀರೇ ಸಪ್ತ ವೀರ್ಯವಾನ್ ।
ನಿಚಖಾನಾದದೇ ಬಾಣಾನ್ ವಿಸಸರ್ಜ ಚ ಲಕ್ಷ್ಮಣಃ ॥ ೧೦೩

ಭಿದ್ಯಮಾನಸ್ತದಾ ತೈಸ್ತು ವಿಷೇಹೇ ತತ್ ಸ ರಾಕ್ಷಸಃ ।
ತತಶ್ಚುಕೋಪ ಬಲವಾನ್ ಸುಮಿತ್ರಾನಂದವರ್ಧನಃ ॥ ೧೦೪

ಅಥಾಸ್ಯ ಕವಚಂ ಶುಭ್ರಂ ಜಾಂಬೂನದಮಯಂ ಶುಭಮ್ ।
ಪ್ರಚ್ಛಾದಯಾಮಾಸ ಶರೈಃ ಸಂಧ್ಯಾಭ್ರೈರಿವ ಮಾರುತಃ ॥ ೧೦೫

---

ಹಿಡಿದೆಳೆದು ತಿನ್ನುತ್ತ ಅಲೆದಾಡಿದನು (೯೯–೧೦೦). ಅವನ ದೇಹವು ಮೇದೋಮಾಂಸರಕ್ತಗಳಿಂದ ನೆನೆಯಿತು. ಕೊಲ್ಲಲ್ಪಟ್ಟ ಕಪಿಗಳ ಕರುಳನ್ನು ಕುಂಭಕರ್ಣನು ಕಿವಿಗಳಿಗೆ ಸಿಕ್ಕಿಸಿಕೊಂಡನು. ತೀಕ್ಷ್ಣವಾದ ಕೋರೆಯಹಲ್ಲುಗಳನ್ನು ಕಿರಿದಿದ್ದ ಆ ರಾಕ್ಷಸನು ಕಪಿಸೇನೆಗೆ ನಾನಾಪೀಡೆಗಳನ್ನುಂಟುಮಾಡಿ, ಕಾಲಮೃತ್ಯುವಿನಂತೆ ವಿಜೃಂಭಿಸಿದನು (೧೦೧). ಅಷ್ಟರಲ್ಲಿ ಶತ್ರುಬಲವನ್ನು ಮರ್ದಿಸುತ್ತಿದ್ದ ಸುಮಿತ್ರಾಪುತ್ರನಾದ ಲಕ್ಷ್ಮಣನು ಕುಂಭಕರ್ಣನ ಹಾವಳಿಯನ್ನು ಕಂಡು ಕ್ರುದ್ಧನಾಗಿ, ಅವನನ್ನೆದುರಿಸಲು ಬಂದು ಕದನವನ್ನಾರಂಭಿಸಿದನು. ಮೊದಲಿಗೇ ಏಳು ಬಾಣಗಳನ್ನು ಕುಂಭಕರ್ಣನ ದೇಹದಲ್ಲಿ ನೆಟ್ಟು, ಆ ವೀರನು ಮತ್ತೆ ಮತ್ತೆ ಕೂರಂಬುಗಳನ್ನು ಕುಂಭಕರ್ಣನಮೇಲೆ ಸುರಿಸತೊಡಗಿದನು (೧೦೨–೧೦೩). ಆ ಸರಳುಗಳಿಂದ ದೇಹವು ಕೆತ್ತಿಹೋಗುತ್ತಿದ್ದರೂ ಆ ರಾಕ್ಷಸನು ಅದನ್ನು ಗಮನಿಸಲೇ ಇಲ್ಲ! ಲಕ್ಷ್ಮಣನ ಸಿಟ್ಟು ಹೆಚ್ಚಿತು. ಅವನ ಶರಗಳು ಮಹಾವೇಗದಿಂದ ಕುಂಭಕರ್ಣನ ಕವಚವನ್ನೆರಗುತ್ತ ಕವಚವನ್ನು ಆಚ್ಛಾದಿಸದವು. ಬಿರುಗಾಳಿಯು ಸಂಧ್ಯಾಕಾಲದ ಕೆಮ್ಮೋಡಗಳಿಂದ ಗಗನತಳವನ್ನು ಮುಚ್ಚುವಂತೆ, ಲಕ್ಷ್ಮಣನು ಪ್ರಜ್ವಲಿಸುವ

ನೀಲಾಂಜನಚಯಪ್ರಖ್ಯೈಃ ಶರೈಃ ಕಾಂಚನಭೂಷಣೈಃ ।
ಆಚ್ಛಾದ್ಯಮಾನಃ ಶುಶುಭೇ ಮೇಘೈಃ ಸೂರ್ಯ ಇವಾಂಶುಮಾನ್ ॥

ತತಃ ಸ ರಾಕ್ಷಸೋ ಭೀಮಃ ಸುಮಿತ್ರಾನಂದವರ್ಧನಮ್ ।
ಸಾವಜ್ಞಮೇವಂ ಪ್ರೋವಾಚ ವಾಕ್ಯಂ ಮೇಘೌಘನಿಃಸ್ವನಮ್ ॥ ೧೦೭

ಅಂತಕಸ್ಯಾಪಿ ಕ್ರುದ್ಧಸ್ಯ ಭಯದಾತಾರಮಾಹವೇ ।
ಯುಧ್ಯತಾ ಮಾಮಭೀತೇನ ಖ್ಯಾಪಿತಾ ವೀರತಾ ತ್ವಯಾ ॥ ೧೦೮

ಪ್ರಗೃಹೀತಾಯುಧಸ್ಯೈವ ಮೃತ್ಯೋರಿವ ಮಹಾಮೃಧೇ ।
ತಿಷ್ಠನ್ನಪ್ಯಗ್ರತಃ ಪೂಜ್ಯಃ ಕಿಮು ಯುದ್ಧಪ್ರದಾಯಕಃ ॥ ೧೦೯

ಐರಾವತಗಜಾರೂಢೋ ವೃತಃ ಸರ್ವಾಮರೈಃ ಪ್ರಭುಃ ।
ನೈವ ಶಕ್ರೋಽಪಿ ಸಮರೇ ಸ್ಥಿತಪೂರ್ವಃ ಕದಾಚನ ॥ ೧೧೦

---

ತನ್ನ ಶರಗಳಿಂದ ಸುವರ್ಣಮಯವಾದ ಕುಂಭಕರ್ಣನ ಕವಚವನ್ನು ಮುಚ್ಚಿದನು (೧೦೪–೧೦೫). ಕನಕಭೂಷಿತವಾಗಿಯೂ ಅಂಜನದಂತೆ ಕಪ್ಪಾಗಿಯೂ ಇದ್ದ ಲಕ್ಷ್ಮಣನಬಾಣಗಳಿಂದ ಆಚ್ಛಾದಿತನಾದ ಕುಂಭಕರ್ಣನು, ಮೇಘಗಳಿಂದ ಆವೃತನಾದರೂ ಬೆಳಗುವ ಆದಿತ್ಯನಂತೆ ಗೋಚರಿಸಿದನು (೧೦೬). ಅನಂತರ ಭೀಮಕಾಯನಾದ ಆ ರಾಕ್ಷಸನು ಅಸಡ್ಡೆಯಿಂಜದ ಸೌಮಿತ್ರಿಯನ್ನು ನೋಡುತ್ತ ಮೇಘವು ಗುಡುಗುವಂತೆ "ಭಪ್ಪರೇ! ಲಕ್ಷ್ಮಣ! ಕ್ರುದ್ಧನಾದ ಯಮನನ್ನೂ ರಣರಂಗದಲ್ಲಿ ತಲ್ಲಣಗೊಳಿಸಿ ಅಂಜಿಸಿದವನು ನಾನು! ಅಂತಹ ನನಗೆ ಅಂಜದೆ ಯುದ್ಧಕ್ಕೆ ನಿಂತೆಯಲ್ಲ, ನೀನು ವೀರನೇ ಹೌದು! ನಿನ್ನ ವೀರ್ಯವನ್ನು ಮೆರೆಸಿದ್ದೀಯೆ (೧೦೭–೧೦೮). ಸಮರಭೂಮಿಯಲ್ಲಿ ನಾನು ಆಯುಧಧಾರಿಯಾಗಿ ನಿಂತರೆ ಮಹಾಮೃತ್ಯುವೇ ನಿಂತಂತಾಗುವುದು! ನನ್ನೆದುರಿಗೊಬ್ಬನು ಹೆದರದೆ ಸುಮ್ಮನೆ ಬಂದು ನಿಂತರೆ ಸಾಕು, ಅವನು ಧೀರನೆಂದು ಸನ್ಮಾನಿಸಬಹುದು! ಹೀಗಿರಲು ಯುದ್ಧವನ್ನೇ ಕೈಗೊಂಡ ನೀನು ವೀರನೆಂಬುದರಲ್ಲಿ ಸಂದೇಹ ವೇನು?(೧೦೯). ದೇವೇಂದ್ರನು ಮಹಾಸಮರ್ಥನೆನಿಸಿಕೊಂಡು ಐರಾವತವನ್ನೇರಿ ಸಮಸ್ತದೇವತೆಗಳೊಡನೆ ಮೆರೆಯುತ್ತಾನಲ್ಲವೆ? ಒಮ್ಮೆಯೂ ಆತನಿಗೆ ನನ್ನನ್ನು ಎದುರಿಸಿ ಹೋರಾಡುವುದಕ್ಕಾಗಲಿಲ್ಲ! ವೀರಾಗ್ರಣಿಯೇ, ಕೇಳು!

ಶೃಣು ಮೇ ವೀರ ಸಂಕ್ಷೋಭಂ ಶ್ಲಾಘನೀಯೋಽಸಿ ಮೇ ರಿಪುಃ ।
ಅದ್ಯ ತ್ವಯಾಹಂ ಸೌಮಿತ್ರೇ ಬಾಲೇನಾಪಿ ಪರಾಕ್ರಮೈಃ ॥ ೧೧೧

ತೋಷಿತೋ ಗಂತುಮಿಚ್ಛಾಮಿ ತ್ವಾಮನುಜ್ಞಾಪ್ಯ ರಾಘವಮ್ ।
ಸತ್ತ್ವಧೈರ್ಯಬಲೋತ್ಸಾಹೈಸ್ತೋಷಿತೋಽಹಂ ರಣೇ ತ್ವಯಾ ॥

ರಾಮಮೇವೈಕಮಿಚ್ಛಾಮಿ ಹಂತುಂ ಯಸ್ಮಿನ್ ಹತೇ ಹತಮ್ ।
ರಾಮೇ ಮಯಾ ಚೇನ್ನಿಹತೇ ಯೇಽನ್ಯೇ ಸ್ಥಾಸ್ಯಂತಿ ಸಂಯುಗೇ ॥

ತಾನಹಂ ಯೋಧಯಿಷ್ಯಾಮಿ ಸ್ವಬಲೇನ ಪ್ರಮಾಥಿನಾ ।
ಇತ್ಯುಕ್ತವಾಕ್ಯಂ ತದ್ರಕ್ಷಂ ಪ್ರೋವಾಚ ಸುಸ್ತುಸಂಹಿತಮ್ ॥ ೧೧೪

ಮೃಧೇ ಘೋರತರಂ ವಾಕ್ಯಂ ಸೌಮಿತ್ರಿಃ ಪ್ರಹಸನ್ನಿವ ।
ಯತ್ತ್ವಂ ಶಕ್ರಾದಿಭಿರ್ದೇವೈರಸಹ್ಯಃ ಪ್ರಾಪ್ಯ ಪೌರುಷಮ್ ॥ ೧೧೫

ತತ್ ಸತ್ಯಂ ನಾನ್ಯಥಾ ವೀರ ದೃಷ್ಟಸ್ತೇಽದ್ಯ ಪರಾಕ್ರಮಃ ।
ಏಷ ದಾಶರಥೀ ರಾಮಸ್ತಿಷ್ಠತ್ಯದ್ರಿರಿವಾಪರಃ ॥ ೧೧೬

---

ನನ್ನ ಚಿತ್ತವು ಕ್ಷುಬ್ಧವಾಗಿದೆ. ಶ್ಲಾಘಿಸಲ್ಪಡಬೇಕಾದ ಶತ್ರು ನೀನೆಂದು ಒಪ್ಪಿಕೊಳ್ಳುತ್ತೇನೆ. ನೀನು ಚಿಕ್ಕವನಾದರೂ ನಿನ್ನ ಪರಾಕ್ರಮವನ್ನು ಕಂಡು ಸಂತುಷ್ಟನಾಗಿದ್ದೇನೆ ! (೧೧೦–೧೧೧). ನಿನ್ನ ಅನುಜ್ಞೆಯನ್ನು ಪಡೆದು ರಾಮನ ಬಳಿಗೆ ಹೋಗಬೇಕೆಂದಿದ್ದೇನೆ. ನಿನ್ನ ಶೌರ್ಯಧೈರ್ಯಗಳಿಗೂ ಬಲೋತ್ಸಾಹ ಗಳಿಗೂ ಮೆಚ್ಚಿದ್ದೇನೆ! ಆದರೆ, ನನ್ನ ಉದ್ದೇಶ ಹೀಗಿದೆ: ರಾಮನೊಬ್ಬನನ್ನು ಸಂಹರಿಸಬೇಕು. ಅವನನ್ನು ಸಂಹರಿಸಿದರೆ ಈ ವಾನರಸೇನೆಯೆಲ್ಲವೂ ಸತ್ತಂತೆಯೇ! (೧೧೨). ಅವನನ್ನು ಕೊಂದಮೇಲೆ ಇನ್ನು ಯಾರಾದರೂ ತಲೆಯೆತ್ತಿ ನಿಂತು ಯುದ್ಧಕ್ಕೆ ಬಂದರೆ, ಸರ್ವಧ್ವಂಸಿಯಾದ ನನ್ನ ಬಲವನ್ನುಪ ಯೋಗಿಸಿ, ಆಗ ಅವರೊಡನೆ ಹೋರಾಡಬೇಕು. ಇದು ನನ್ನ ಉದ್ದೇಶ!'' ಎಂದು ಹೇಳಿದನು (೧೧೩). ಕುಂಭಕರ್ಣನ ಈ ಮಾತನ್ನು ಕೇಳಿ ಸೌಮಿತ್ರಿಯು ಆತನನ್ನು ಹೊಗಳುವಂತೆ ಮುಗುಳ್ನಗೆಯಿಂದ, ''ವೀರಾಗ್ರಣಿ–ಕುಂಭಕರ್ಣ, ನಿನ್ನ ಮಾತು ಸತ್ಯ. ಇಂದ್ರಾದಿದೇವತೆಗಳಿಗೂ ನೀನು ದುರ್ಜಯನೇ ಹೌದು! ನಿನ್ನ ಪೌರುಷವು ಅಸಾಧಾರಣವಾದುದು. ಆ ಪೌರುಷವನ್ನು ನಾನು ನೋಡಿದೆ ನಲ್ಲ! ಅಗೋ, ಅಲ್ಲಿ ನೋಡು. ದಶರಥಾತ್ಮಜನಾದ ಶ್ರೀರಾಮನು ಬೆಟ್ಟದಂತೆ

ಮನೋರಥೋ ರಾತ್ರಿಚರ ತತ್ಸಮೀಪೇ ಭವಿಷ್ಯತಿ ।
ಇತಿ ಶ್ರುತ್ವಾ ಹ್ಯನಾದೃತ್ಯ ಲಕ್ಷ್ಮಣಂ ಸ ನಿಶಾಚರಃ ।	೧೧೭

ಅತಿಕ್ರಮ್ಯ ಚ ಸೌಮಿತ್ರಿಂ ಕುಂಭಕರ್ಣೋ ಮಹಾಬಲಃ ।
ರಾಮಮೇವಾಭಿದುದ್ರಾವ ದಾರಯನ್ನಿವ ಮೇದಿನೀಮ್ ॥	೧೧೮

ಅಥ ದಾಶರಥೀ ರಾಮೋ ರೌದ್ರಮಸ್ತ್ರಂ ಪ್ರಯೋಜಯನ್ ।
ಕುಂಭಕರ್ಣಸ್ಯ ಹೃದಯೇ ಸಸರ್ಜ ನಿಶಿತಾನ್ ಶರಾನ್ ॥	೧೧೯

ತಸ್ಯ ರಾಮೇಣ ವಿದ್ಧಸ್ಯ ಸಹಸಾಭಿಪ್ರಧಾವತಃ ।
ಅಂಗಾರಮಿಶ್ರಾಃ ಕ್ರುದ್ಧಸ್ಯ ಮುಖಾನ್ನಿಶ್ಚೇರುರರ್ಚಿಷಃ ॥	೧೨೦

ರಾಮಾಸ್ತ್ರವಿದ್ಧೋ ಘೋರಂ ವೈ ನದನ್ ರಾಕ್ಷಸಪುಂಗವಃ ।
ಅಭ್ಯಧಾವತ ಸಂಕ್ರುದ್ಧೋ ಹರೀನ್ ವಿದ್ರಾವಯನ್ ರಣೇ ॥	೧೨೧

ತಸ್ಯೋರಸಿ ನಿಮಗ್ನಾಶ್ಚ ಶರಾ ಬರ್ಹಿಣವಾಸಸಃ ।
ಹಸ್ತಾಚ್ಚಾಪಿ ಪರಿಭ್ರಷ್ಟಾ ಪಪಾತೋರ್ವ್ಯಾಂ ಮಹಾಗದಾ ॥	೧೨೨

---

ಸ್ಥೈರ್ಯದಿಂದ ನಿಂತಿದ್ದಾನೆ (೧೧೪-೧೧೬). ಅವನಲ್ಲಿ ಎಲೈ ರಾಕ್ಷಸೋ-ತ್ತಮ, ನಿನ್ನ ಮನೋರಥವು ಫಲಿಸುವುದು!'' ಎಂದನು. ಬಲಾಢ್ಯನಾದ ಕುಂಭಕರ್ಣನು ಲಕ್ಷ್ಮಣನನ್ನು ಲೆಕ್ಕಿಸದೆ, ಭೂಮಿಯು ನಡುಗುವಂತೆ ರಭಸ ದಿಂದ ಹೆಜ್ಜೆಯಿಡುತ್ತ ಶ್ರೀರಾಮನ ಕಡೆಗೆ ನುಗ್ಗಿದನು (೧೧೭-೧೧೮). (ಅವನು ದೂರದಿಂದ ಬರುತ್ತಿರುವಾಗಲೇ) ಶ್ರೀರಾಮನು ಅವನಮೇಲೆ ರೌದ್ರಾಸ್ತ್ರ ಗಳನ್ನೇ ಪ್ರಯೋಗಿಸಬೇಕೆಂದು ನಿಶ್ಚಯಿಸಿ, ಕೂರಂಬುಗಳನ್ನು ಅವನ ಎದೆಗೆ ಗುರಿಯಿಟ್ಟು ಹೂಡಿದನು. ಧಾವಿಸುತ್ತ ಬರುತ್ತಿದ್ದ ಕುಂಭಕರ್ಣನ ಎದೆಗೆ ಕೂರಂಬುಗಳು ನಾಟಲು, ಅವನ ಮುಖದಲ್ಲಿ ಕ್ರೋಧಜ್ವಾಲೆಯು ಭುಗ್ಗೆಂದಿತು. ಕಿಡಿಗಳು ಸಿಡಿದವು (೧೧೯-೧೨೦). ರಾಮಾಸ್ತ್ರಗಳಿಂದ ವಿದ್ಧನಾಗಿ ಕಂಗೆಟ್ಟ ರಾಕ್ಷಸಪುಂಗವನು ಘೋರವಾಗಿ ಗರ್ಜಿಸುತ್ತ ಮುಂದೆ ನುಗ್ಗಲು, ಕಪಿಯೋಧರು ಹೆದರಿ ಓಡಿಹೋದರು. ನವಿಲುಗರಿಗಳನ್ನು ಬಿಗಿದಿದ್ದ ರಾಮಾಸ್ತ್ರಗಳು ಮತ್ತೆ ಮತ್ತೆ ಬಂದು ತಾಗಲು, ಕುಂಭಕರ್ಣನಿಗೆ ಎಚ್ಚರದಪ್ಪಿದಂತಾಗಿ, ಅವನು ಭೀಷಣ ಗದೆಯು ಕೈಯಿಂದ ಸಡಲಿ ಕೆಳಗೆ ಬಿದ್ದಿತು (೧೨೧-೧೨೨).

ಆಯುಧಾನಿ ಚ ಸರ್ವಾಣಿ ವಿಪ್ರಕೀರ್ಯಂತ ಭೂತಲೇ ।
ಸ ನಿರಾಯುಧಮಾತ್ಮಾನಂ ಯದಾ ಮೇನೇ ಮಹಾಬಲಃ ॥ ೧೨೩

ಮುಷ್ಟಿಭ್ಯಾಂ ಚರಣಾಭ್ಯಾಂ ಚ ಚಕಾರ ಕದನಂ ಮಹತ್ ।
ಸ ಬಾಣೈರತಿವಿದ್ಧಾಂಗಃ ಕ್ಷತಜೇನ ಸಮುಕ್ಷಿತಃ ॥ ೧೨೪

ರುಧಿರಂ ಪ್ರತಿಸುಸ್ರಾವ ಗಿರಿಃ ಪ್ರಸ್ರವಣಂ ಯಥಾ ।
ಸ ತೀವ್ರೇಣ ಚ ಕೋಪೇನ ರುಧಿರೇಣ ಚ ಮೂರ್ಛಿತಃ ॥ ೧೨೫

ವಾನರಾನ್ ರಾಕ್ಷಸಾನೃಕ್ಷಾನ್ ಖಾದನ್ ವಿಪರಿಧಾವತಿ ।
ಅಥ ಶೃಂಗಂ ಸಮಾವಿಧ್ಯ ಭೀಮಂ ಭೀಮಪರಾಕ್ರಮಃ ॥ ೧೨೬

ಚಿಕ್ಷೇಪ ರಾಮಮುದ್ದಿಶ್ಯ ಬಲವಾನಂತಕೋಪಮಃ ।
ಅಪ್ರಾಪ್ತಮಂತರಾ ರಾಮಃ ಸಪ್ತಭಿಸ್ತೈರಜಿಹ್ಮಗೈಃ ॥ ೧೨೭

ಶರೈಃ ಕಾಂಚನಚಿತ್ರಾಂಗೈಶ್ಚಿಚ್ಛೇದ ಪುರುಷರ್ಷಭಃ ।
ತನ್ಮೇರುಶಿಖರಾಕಾರಂ ದ್ಯೋತಮಾನಮಿವ ಶ್ರಿಯಾ ॥ ೧೨೮

---

ಅವನಲ್ಲಿದ್ದ ಸಕಲ ಆಯುಧಗಳೂ ಬಿದ್ದು ಚೆಲ್ಲಾಪಿಲ್ಲಿಯಾಗಿ ನೆಲದಲ್ಲಿ ಹರಡಿದವು. ತನ್ನ ಬಳಿಯಲ್ಲಿ ಯಾವ ಆಯುಧವೂ ಇಲ್ಲವೆಂಬುದು ಅನಂತರ ಕುಂಭಕರ್ಣನಿಗೆ ಗೊತ್ತಾಯಿತು ! ಆಗ ಎರಡು ಕೈಗಳಿಂದಲೂ ರಾಮಾಸ್ತ್ರಗಳನ್ನು ಎದುರಿಸುತ್ತ ವಾನರರನ್ನು ಗುದ್ದುತ್ತ ಎಡಗಾಲಿಂದಲೂ ಬಲಗಾಲಿಂದಲೂ ಒದೆಯುತ್ತ ಆ ರಾಕ್ಷಸನು ಅದ್ಭುತವಾದ ಕಾಳಗವನ್ನು ನಡೆಸಿದನು. ರಾಮಬಾಣಗಳಿಂದ ಅವನ ದೇಹವು ಕ್ಷತವಿಕ್ಷತವಾಯಿತು. ರಕ್ತದಲ್ಲಿ ಅವನು ನೆನೆದುಹೋದನು (೧೨೩–೧೨೪). ಬೆಟ್ಟದಿಂದ ಗಿರಿನದಿಯು ಹರಿಯುವಂತೆ ಅವನ ದೇಹದಿಂದ ನೆತ್ತರು ಹೊನಲಾಗಿ ಹರಿಯಿತು. ಸಿಟ್ಟು ನೆತ್ತಿಗೇರಿತು. ರಕ್ತದ ಮಡುವಿನಲ್ಲಿ ಮುಳುಗಿದ ಕುಂಭಕರ್ಣನಿಗೆ ಹೊರಗಿನ ಪರಿವೆ ಸರಿಯಿತು. ಅವನು ಅವಿಷ್ಟನಾಗಿ ಕೈಗೆ ಸಿಕ್ಕಿದವರನ್ನು –ಕಪಿಗಳನ್ನೂ ಕರಡಿಗಳನ್ನೂ ತನ್ನವರೇ ಆದ ರಾಕ್ಷಸರನ್ನೂ ಬಾಯಿಗೆಸೆದುಕೊಳ್ಳುತ್ತ ಅತ್ತಿಂದಿತ್ತ ಧಾವಿಸತೊಡಗಿದನು (೧೨೫–೧೨೬). ಅನಂತರ ಭೀಮಪರಾಕ್ರಮನೂ ಮೃತ್ಯುಸಮಾನನೂ ಆದ ಆ ನಿಶಾಚರನು ಒಂದು ಗಿರಿಶಿಖರವನ್ನೆತ್ತಿ ತೂಗಿ ಶ್ರೀರಾಮನ ಕಡೆಗೆ ಎಸೆದನು. ಪುರುಷಶ್ರೇಷ್ಠನಾದ ರಾಘವನು ಏಳು ಕೊಂಕುಬಾಣಗಳಿಂದ ಅದನ್ನು ಮಧ್ಯ

ದ್ವೇ ಶತೇ ವಾನರೇಂದ್ರಾಣಾಂ ಪತಮಾನಮಪಾತಯತ್ ।
ತಸ್ಮಿನ್ ಕಾಲೇ ಸ ಧರ್ಮಾತ್ಮಾ ಲಕ್ಷ್ಮಣೋ ವಾಕ್ಯಮಬ್ರವೀತ್ ॥

ಕುಂಭಕರ್ಣವಧೇ ಯುಕ್ತೋ ಯೋಗಾನ್ ಪರಿಮೃಶನ್ ಬಹೂನ್ ।
ನೈವಾಯಂ ವಾನರಾನ್ ರಾಜನ್ನಾಪಿ ಜಾನಾತಿ ರಾಕ್ಷಸಾನ್ ॥ ೧೩೦

ಮತ್ತಃ ಶೋಣಿತಗಂಧೇನ ಸ್ವಾನ್ ಪರಾಂಶ್ಚೈವ ಖಾದತಿ ।
ಸಾಧ್ವೇನಮಧಿರೋಹಂತು ಸರ್ವೇ ತೇ ವಾನರರ್ಷಭಾಃ ॥ ೧೩೧

ಯೂಥಪಾಶ್ಚ ಯಥಾ ಮುಖ್ಯಾಸ್ತಿಷ್ಠಂತ್ವಸ್ಯ ಸಮಂತತಃ ।
ಅಪ್ಯಯಂ ದುರ್ಮತಿಃ ಕಾಲೇ ಗುರುಭಾರಪ್ರಪೀಡಿತಃ ॥ ೧೩೨

ಪ್ರಪತನ್ ರಾಕ್ಷಸೋ ಭೂಮೌ ನಾನ್ಯಾನ್ ಹನ್ಯಾತ್ ಪ್ಲವಂಗಮಾನ್ ।
ತಸ್ಯ ತದ್ವಚನಂ ಶ್ರುತ್ವಾ ರಾಜಪುತ್ರಸ್ಯ ಧೀಮತಃ ॥ ೧೩೩

ತೇ ಸಮಾರುರುಹುರ್ಹೃಷ್ಟಾಃ ಕುಂಭಕರ್ಣಂ ಪ್ಲವಂಗಮಾಃ ।
ಕುಂಭಕರ್ಣಸ್ತು ಸಂಕ್ರುದ್ಧಃ ಸಮಾರೂಢಃ ಪ್ಲವಂಗಮೈಃ ॥ ೧೩೪

---

ದಲ್ಲಿಯೇ ಕತ್ತರಿಸಿ ಚೆಲ್ಲಿದನು (೧೨೭–೧೨೮). ಮೇರುಶಿಖರದಂತೆ ವಿರಾಜಿಸುತ್ತಿದ್ದ ಆ ಮಹಾಶಿಖರವು ಕೆಳಗೆ ಬಿದ್ದು, ಅಲ್ಲಿದ್ದ ಇನ್ನೂರು ವಾನರಯೋಧರನ್ನು ಉರುಳಿಸಿತು. ಆಗ ಲಕ್ಷ್ಮಣನು ಕುಂಭಕರ್ಣನನ್ನು ವಧಿಸಲೇಬೇಕೆಂದು ಸಂಕಲ್ಪಿಸಿ, ಅದಕ್ಕಾಗಿ ವಿವಿಧೋಪಾಯಗಳನ್ನು ಪರಿಶೀಲಿಸುತ್ತ ಶ್ರೀರಾಮನನ್ನು ನೋಡಿ "ಅಣ್ಣ ಈತನಿಗೆ ವಾನರರು ಯಾರೆಂಬುದೂ ತಿಳಿಯದು; ರಾಕ್ಷಸರು ಯಾರೆಂಬುದೂ ತಿಳಿಯದು! (೧೨೯–೧೩೦). ಇವನು ರಕ್ತಪಾನದಿಂದ ಮತ್ತನಾಗಿ ತನ್ನವರು ಪರರು ಎಂಬ ಭೇದವಿಲ್ಲದೆ ಕೈಗೆ ಸಿಕ್ಕಿದವರನ್ನೆಲ್ಲ ಬಾಚಿ ನುಂಗುತ್ತಿದ್ದಾನೆ! ಆದ್ದರಿಂದ, ಈಗ ವಾನರಯೋಧರೆಲ್ಲರೂ ಇವನ ದೇಹವನ್ನು ಹತ್ತಲಿ! (೧೩೧). ಬಲಶಾಲಿಗಳಾದ ಮುಖ್ಯಯೂಥಪರು ಸುತ್ತಲೂ ಕುಂಭಕರ್ಣನನ್ನು ತರುಬಿ (ದೇಹದ ಬಲವನ್ನು ಹಿಡಿಯಲು) ನಿಂತಿರಲಿ! ಈ ದುರುಳನು ಭಾರಾತಿಶಯದಿಂದ ಮರಣಕಾಲದಲ್ಲಿ ಬೀಳುವಾಗ ಇತರ ಕಪಿಗಳನ್ನಾದರೂ ಕೊಲ್ಲದಂತಾಗಲಿ. (ನೇರವಾಗಿ ಅಡ್ಡಬಿದ್ದರೆ ಇವನ ಭಾರದಿಂದಲೇ ಬಹುಮಂದಿ ವಾನರರು ಸತ್ತುಹೋದರು!)" ಎಂದು ಹೇಳಿದನು (೧೩೨–೧೩೩). ಧೀಮಂತನಾದ ಲಕ್ಷ್ಮಣನು ಹಾಗೆಂದೊಡನೆಯೇ ವಾನರರು

ವ್ಯಧೂನಯತ್ತಾನ್ ವೇಗೇನ ದುಷ್ಟಹಸ್ತೀವ ಹಸ್ತಿಪಾನ್ ।
ತಾನ್ ದೃಷ್ಟ್ವಾ ನಿರ್ಧುತಾನ್ ರಾಮೋ ದುಷ್ಟೋಽಯಮಿತಿ ರಾಕ್ಷಸಃ

ಸಮುತ್ಪಪಾತ ವೇಗೇನ ಧನುರುತ್ತಮಮಾದದೇ ।
ಕ್ರೋಧತಾಮ್ರೇಕ್ಷಣೋ ವೀರೋ ನಿರ್ದಹನ್ನಿವ ಚಕ್ಷುಷಾ ॥ ೧೩೬

ರಾಘವೋ ರಾಕ್ಷಸಂ ರೋಷಾದಭಿದುದ್ರಾವ ವೇಗಿತಃ ।
ಯೂಥಪಾನ್ ಹರ್ಷಯನ್ ಸರ್ವಾನ್ ಕುಂಭ ಕರ್ಣಭಯಾರ್ದಿತಾಮನ್

ಸ ಚಾಪಮಾದಾಯ ಭುಜಂಗಕಲ್ಪಂ
ದೃಢಜ್ಯಮುಗ್ರಂ ತಪನೀಯಚಿತ್ರಮ್ ।
ಹರೀನ್ ಸಮಾಶ್ವಾಸ್ಯ ಸಮುತ್ಪಪಾತ
ರಾಮೋ ನಿಬದ್ಧೋತ್ತಮತೂಣಬಾಣಃ ॥ ೧೩೮

ಸ ವಾನರಗಣೈಸ್ತೈಸ್ತು ವೃತಃ ಪರಮದುರ್ಜಯಃ ।
ಲಕ್ಷ್ಮಣಾನುಚರೋ ರಾಮಃ ಸಂಪ್ರತಸ್ಥೇ ಮಹಾಬಲಃ ॥ ೧೩೯

---

ಉತ್ಸಾಹದಿಂದ ಹೋಗಿ ಕುಂಭಕರ್ಣನ ದೇಹವನ್ನಡರಿದರು ತನ್ನ ಮೈಮೇಲೆ ಕಪಿಗಳು ಮತ್ತೆ ಹತ್ತಿದುದನ್ನು ನೋಡಿ, ಕುಂಭಕರ್ಣನು ರೋಷದಿಂದ ಮೈಯನ್ನೊದರಿದನು. ಮದವೇರಿದ ಮಾತಂಗವು ಮೈಯನ್ನೊದರಿದಾಗ, ಮೇಲಿರುವ ಮಾವುತರು ಕೆಳಗೆ ಬೀಳುವಂತೆ ಕಪಿಗಳು ಕೆಳಗೆ ಉದುರಿದವು! (೧೩೪–೧೩೫). ಅದನ್ನು ವೀಕ್ಷಿಸಿ ಶ್ರೀರಾಮನು "ಓಹೊ! ಇವನು ಬಹು ದುಷ್ಟ !" ಎಂದು ಉದ್ಗರಿಸುತ್ತ, ಶ್ರೇಷ್ಠವಾದ ಒಂದು ಧನುಸ್ಸನ್ನು ಬೇಗನೆ ಕೈಗೆತ್ತಿಕೊಂಡನು. ಆ ವೀರನು ರೋಷತಾಮ್ರೇಕ್ಷಣನಾಗಿ ಕುಂಭಕರ್ಣನನ್ನು ಸುಡುವನೋ ಎಂಬಂತೆ ಕೆಂಗಣ್ಣಿನಿಂದ ನೋಡುತ್ತ ರಭಸದಿಂದ ಮುಂದೆ ಬಂದನು. ಕುಂಭಕರ್ಣನ ಭಯದಿಂದ ತಲ್ಲಣಿಸುತ್ತಿದ್ದ ವಾನರರಿಗೆ ಶ್ರೀರಾಮನನ್ನು ಕಂಡು ಹರ್ಷವಾಯಿತು (೧೩೬–೧೩೭). ಭುಜಂಗಮದಂತೆ ಬಾಗಿ, ಸುವರ್ಣಾಲಂಕೃತವಾಗಿ, ಬಲವಾದ ಹೆದೆಯನ್ನಳವಡಿಸಿದ್ದ ಉಗ್ರಚಾಪವನ್ನು ಹಿಡಿದು, ನಿಶಿತಾಸ್ತ್ರಗಳನ್ನು ತುಂಬಿದ್ದ ಬತ್ತಳಿಕೆಯನ್ನು ಬೆನ್ನಿಗೆ ಬಿಗಿದು, ಶ್ರೀರಾಮನು ಕಪಿಯೋಧರನ್ನು ಸಂತೈಸುತ್ತ ಮುಂದೆ ಬಂದನು. (೧೩೮). ವೀರಾಗ್ರಣಿಯಾದ ಶ್ರೀರಾಮನನ್ನು ಹಿಂಬಾಲಿಸಿ ಕಪಿಯೋಧರು ಬಂದರು.

ಸ ದದರ್ಶ ಮಹಾತ್ಮಾನಂ ಕಿರೀಟಿನಮರಿಂದಮಮ್
ಶೋಣಿತಾಪ್ಲುತಸರ್ವಾಂಗಂ ಕುಂಭಕರ್ಣಂ ಮಹಾಬಲಮ್ ॥ ೧೪೦

ಸರ್ವಾನ್ ಸಮಭಿಧಾವಂತಂ ಯಥಾ ರುಷ್ಟಂ ದಿಶಾಗಜಮ್ ।
ಮಾರ್ಗಮಾಣಂ ಹರೀನ್ ಕ್ರುದ್ಧಂ ರಾಕ್ಷಸೈಃ ಪರಿವಾರಿತಮ್ ॥ ೧೪೧

ವಿಂಧ್ಯಮಂದರಸಂಕಾಶಂ ಕಾಂಚನಾಂಗದಭೂಷಣಮ್ ।
ಸ್ರವಂತಂ ರುಧಿರಂ ವಕ್ತ್ರಾದ್ವರ್ಷಮೇಘಮಿವೋತ್ಥಿತಮ್ ॥ ೧೪೨

ಜಿಹ್ವಯಾ ಪರಿಲಿಹ್ಯಂತಂ ಶೋಣಿತಂ ಶೋಣಿತೇಕ್ಷಣಮ್ ।
ಮೃದ್ನಂತಂ ವಾನರಾನೀಕಂ ಕಾಲಾಂತಕಯಮೋಪಮಮ್ ॥ ೧೪೩

ತಂ ದೃಷ್ಟ್ವಾ ರಾಕ್ಷಸಶ್ರೇಷ್ಠಂ ಪ್ರದೀಪ್ತಾನಲವರ್ಚಸಮ್ ।
ವಿಸ್ಫಾರಯಾಮಾಸ ತದಾ ಕಾರ್ಮುಕಂ ಪುರುಷರ್ಷಭಃ ॥ ೧೪೪

ಸ ತಸ್ಯ ಚಾಪನಿರ್ಘೋಷಾತ್ ಕುಪಿತೋ ರಾಕ್ಷಸರ್ಷಭಃ ।
ಅಮೃಷ್ಯಮಾಣಸ್ತಂ ಘೋಷಮಭಿದುದ್ರಾವ ರಾಘವಮ್ ॥ ೧೪೫

---

ಲಕ್ಷ್ಮಣನು ಸಮೀಪದಲ್ಲಿದ್ದನು. ಶ್ರೀರಾಮನು ಮುಂದೆ ಬಂದು ಮಹಾಧೀರನೂ ಕಿರೀಟಧಾರಿಯೂ ವೈರಿಮರ್ದನನೂ ಆದ ಕುಂಭಕರ್ಣನನ್ನು ಸಮೀಪದಲ್ಲಿ ಕಂಡನು. ಕುಂಭಕರ್ಣನು ರಕ್ತಾರ್ದ್ರಶರೀರನಾಗಿ ಕೆರಳಿದ ದಿಗ್ಗಜದಂತೆ ಅತ್ತಿಂದಿತ್ತ ಧಾವಿಸುತ್ತ ಕಪಿಗಳನ್ನರಸುತ್ತಿದ್ದನು. ರಾಕ್ಷಸಪರಿವಾರವು ಮುತ್ತಿಕೊಂಡಿತ್ತು (೧೩೯–೧೪೧) ಕಾಂಚನಾಂಗದಗಳಿಂದ ಅಲಂಕೃತನಾದ ಆ ನಿಶಾಚರನು ಮೇರುವೋ ಮಂದರಗಿರಿಯೋ ಎಂಬಂತೆ ಬೃಹದಾಕಾರನಾಗಿದ್ದನು. ವರ್ಷಾಕಾಲದ ಮೇಘದಿಂದ ಮಳೆ ಸುರಿಯುವಂತೆ ಅವನ ಬಾಯಿಂದ ರಕ್ತವು ಸುರಿಯುತ್ತಿದ್ದಿತು (೧೪೨). ಕಣ್ಣುಗಳು ಕೆಂಪಡರಿದ್ದವು ನಾಲಗೆಯನ್ನು ಸುಲಿದು ನೆತ್ತರನ್ನು ನೆಕ್ಕುತ್ತ ವಾನರರನ್ನು ಮರ್ದಿಸುತ್ತಿದ್ದ ಆ ನಿಶಾಚರನು, ಪ್ರಳಯಕಾಲದಲ್ಲಿ ಸರ್ವನಾಶಕ್ಕಾಗಿ ಹೊರಟ ಯಮನಂತೆ ವಿಜೃಂಭಿಸುತ್ತಿದ್ದನು (೧೪೨). ಉರಿಯುವ ಬೆಂಕಿಯ ಜ್ವಾಲೆಯಂತೆ ಕಂಗೊಳಿಸುತ್ತದ್ದ ಕುಂಭಕರ್ಣನನ್ನು ಕಂಡೊಡನೆ, ಶ್ರೀರಾಮನು ಧನಸ್ಸನ್ನು ಜೇಗೈದನು. ಧನುಸ್ಸಿನ ಝೇಂಕಾರವನ್ನು ಕೇಳಿ ಸಿಡಿದೆದ್ದ ಕುಂಭಕರ್ಣನು ಶ್ರೀರಾಮನ ಬಳಿಗೆ ಧಾವಿಸಿದನು (೧೪೪–೧೪೫).

ಪುರಸ್ತಾದ್ರಾಘವಸ್ಯಾರ್ಥೇ ಗದಾಯುಕ್ತೋ ವಿಭೀಷಣಃ ।
ಅಭಿದುದ್ರಾವ ವೇಗೇನ ಭ್ರಾತಾ ಭ್ರಾತರಮಾಹವೇ ॥ ೧೪೬

ವಿಭೀಷಣಂ ಪುರೋ ದೃಷ್ಟ್ವಾ ಕುಂಭಕರ್ಣೋಽಬ್ರವೀದಿದಮ್ ।
ಪ್ರಹರಸ್ವ ರಣೇ ಶೀಘ್ರಂ ಕ್ಷತ್ರಧರ್ಮೇ ಸ್ಥಿರೋ ಭವ ॥ ೧೪೭

ಭ್ರಾತೃಸ್ನೇಹಂ ಪರಿತ್ಯಜ್ಯ ರಾಘವಸ್ಯ ಪ್ರಿಯಂ ಕುರು ।
ಅಸ್ಮತ್ಕಾರ್ಯಂ ಕೃತಂ ವತ್ಸ ಯಸ್ತ್ವಂ ರಾಮಮುಪಾಗತಃ ॥ ೧೪೮

ತ್ವಮೇಕೋ ರಕ್ಷಸಾಂ ಲೋಕೇ ಸತ್ಯಧರ್ಮಾಭಿರಕ್ಷಿತಾ ।
ನಾಸ್ತಿ ಧರ್ಮಾಭಿರಕ್ತಾನಾಂ ವ್ಯಸನಂ ತು ಕದಾಚನ ॥ ೧೪೯

ಸಂತಾನಾರ್ಥಂ ತ್ವಮೇವೈಕಂ ಕುಲಸ್ಯಾಸ್ಯ ಭವಿಷ್ಯಸಿ ।
ರಾಘವಸ್ಯ ಪ್ರಸಾದಾತ್ತ್ವಂ ರಕ್ಷಸಾಂ ರಾಜ್ಯಮಾಪ್ಸ್ಯಸಿ ॥ ೧೫೦

ಪ್ರಕೃತ್ಯಾ ಮಮ ದುರ್ಧರ್ಷ ಶೀಘ್ರಂ ಮಾರ್ಗಾದಪಕ್ರಮ ।
ನ ಸ್ಥಾತವ್ಯಂ ಪುರಸ್ತಾನ್ಮೇ ಸಂಭ್ರಮಾನ್ನಷ್ಟಚೇತಸಃ ॥ ೧೫೧

---

ಆಷ್ಟರಲ್ಲಿ ಅವನ ತಮ್ಮನಾದ ವಿಭಿಷಣನು ರಾಘವನಿಗೆ ನೆರವಾಗಲೆಂದು ಗದಾಪಾಣಿಯಾಗಿ ಓಡುತ್ತ ಬಂದು ಕುಂಭಕರ್ಣನನ್ನು ಅಡ್ಡಗಟ್ಟಿದನು. ಕುಂಭಕರ್ಣನು ವಿಭೀಷಣನನ್ನು ನೋಡಿ "ವಿಭೀಷಣ, ತಡವೇಕೆ ? ಪ್ರಹರಿಸು ! ಇದು ಯುದ್ಧಭೂಮಿ. ಕ್ಷತ್ರಿಯಧರ್ಮದಲ್ಲಿ ಸ್ಥಿರವಾಗಿ ನಿಲ್ಲು (೧೪೬–೧೪೭). ಸೋದರಸ್ನೇಹವನ್ನು ಪರಿತ್ಯಜಿಸಿ, ರಾಮನಿಗೆ ಹಿತವಾದುದನ್ನು ನಡೆಸಿಬಿಡು ! ವತ್ಸ– ವಿಭೀಷಣ, ನೀನು ರಾಮನನ್ನಾಶ್ರಯಿಸಿದ್ದು ಒಳ್ಳೆಯದೇ ಆಯಿತು. ನಾವು ಮಾಡಬೇಕಾದುದನ್ನು ನೀನೇ ಮಾಡಿದೆ ! ರಾಕ್ಷಸಲೋಕದಲ್ಲಿ ಸತ್ಯ ಧರ್ಮಗಳನ್ನೂ ಪಾಲಿಸತಕ್ಕವನು ನೀನೊಬ್ಬನೇ. ಧರ್ಮನಿಷ್ಠರಿಗೆ ಎಂದಿಗೂ ವಿಪತ್ತು ಸಂಭವಿಸುವುದಿಲ್ಲ (೧೪೮–೧೪೯). ನಮ್ಮ ವಂಶಾಭಿವೃದ್ಧಿಗೆ ನೀನೊಬ್ಬನಾದರೂ ಉಳಿಯುವೆ ! ರಾಘವನ ಅನುಗ್ರಹದಿಂದ ರಾಕ್ಷಸರಾಜ್ಯವು ನಿನಗೆ ದೊರೆಯುವುದು. ಆದರೆ, ವಿಭೀಷಣ, ನನ್ನ ದಾರಿಗೆ ಅಡ್ಡ ಬರಬೇಡ ! ಬೇಗನೆ ಅತ್ತ ಹೊರಟುಹೋಗು. ನನ್ನೆದುರಿಗೆ ನೀನು ನಿಲ್ಲುವುದು ಸರಿಯಲ್ಲ. ರಣಸಂಭ್ರಮದಲ್ಲಿ ನನ್ನ ಬುದ್ಧಿ ಕೆಟ್ಟುಹೋಗುವುದು ! ಇದು ನನ್ನ ಸ್ವಭಾವ (೧೫೦–೧೫೧).

ನ ವೇದ್ಮಿ ಸಂಯುಗೇ ಶಕ್ತಃ ಸ್ವಾನ್ ಪರಾನ್ ವಾ ನಿಶಾಚರ
ರಕ್ಷಣೀಯೋಽಸಿ ಮೇ ವತ್ಸ ಸತ್ಯಮೇತದ್ಬ್ರವೀಮಿ ತೇ ॥ ೧೫೨

ಏವಮುಕ್ತೋ ವಚಸ್ತೇನ ಕುಂಭಕರ್ಣೇನ ಧೀಮತಾ ।
ವಿಭೀಷಣೋ ಮಹಾಬಾಹುಃ ಕುಂಭಕರ್ಣಮುವಾಚ ಹ ॥ ೧೫೩

ಗದಿತಂ ಮೇ ಕುಲಸ್ಯಾಸ್ಯ ರಕ್ಷಣಾರ್ಥಮರಿಂದಮ ।
ನ ಶ್ರುತಂ ಸರ್ವರಕ್ಷೋಭಿಸ್ತತೋಽಹಂ ರಾಮಮಾಗತಃ ॥ ೧೫೪

ಏವಮುಕ್ತ್ವಾ ಶ್ರುಪೂರ್ಣಾಕ್ಷೋ ಗದಾಪಾಣಿರ್ವಿಭೀಷಣಃ ।
ಏಕಾಂತಮಾಶ್ರಿತೋ ಭೂತ್ವಾ ಚಿಂತಯಾಮಾಸ ಸಂಸ್ಥಿತಃ ॥ ೧೫೫

ತತಸ್ತು ವಾತೋದ್ಧತಮೇಘಕಲ್ಪಂ
ಭುಜಂಗರಾಜೋತ್ತಮಭೋಗಬಾಹುಮ್ ।
ತಮಾಪತಂತಂ ಧರಣೀಧರಾಭ-
ಮವಾಚ ರಾಮೋ ಯುಧಿ ಕುಂಭಕರ್ಣಮ್ ॥ ೧೫೬

---

ರಣರಂಗಕ್ಕಿಳಿದಾಗ, ನನ್ನವರು ಯಾರು, ಪರರು ಯಾರು –ಎಂಬ ಅರಿವೇ ನನಗೆ ಹೋಗಿಬಿಡುವುದು ! ತಮ್ಮ –ವಿಭೀಷಣ, ಹೇಗಾದರೂ ನಿನ್ನನ್ನು ನಾನು ಉಳಿಸಲೇಬೇಕು. ಇದು ಸತ್ಯವೆಂದು ತಿಳಿ'' ಎಂದು ಹೇಳಿದನು. (೧೫೨). ಬುದ್ಧಿಶಾಲಿಯಾದ ಕುಂಭಕರ್ಣನು ಹೀಗೆನ್ನಲು, ವಿಭೀಷಣನು ಅವನನ್ನು ಕುರಿತು ''ಅಣ್ಣ ನಮ್ಮ ವಂಶವನ್ನುಳಿಸಬೇಕೆಂದೇ ನಾನು ಬಗೆಬಗೆಯಲ್ಲಿ ಬುದ್ಧಿವಾದವನ್ನು ಹೇಳಿದೆನು. ಯಾರೂ ನನ್ನ ಮಾತನ್ನು ಕೇಳಲಿಲ್ಲ. ಗತ್ಯಂತರಲವಿಲ್ಲದೆ ನಾನು ರಾಘವನ ಬಳಿಗೆ ಬರಬೇಕಾಯಿತು'' ಎಂದು ನುಡಿದನು (೧೫೩–೧೫೪). ಹೀಗೆ ನುಡಿಯುವಾಗ ವಿಭೀಷಣನ ಕಣ್ಣಲ್ಲಿ ನೀರು ತುಂಬಿತು. ಅವನು ಗದಾಪಾಣಿಯಾಗಿ ದೂರದಲ್ಲೊಂದು ಏಕಾಂತಸ್ಥಳಕ್ಕೆ ಹೋಗಿ ಸುಮ್ಮನೆ ನಿಂತುಕೊಂಡು ಚಿಂತಾಕುಲನಾದನು (೧೫೫). ಅನಂತರ ಕುಂಭಕರ್ಣನು ರಾಘವನ ಕಡೆಗೆ ರಭಸದಿಂದ ಸಾಗಿದನು. ಬಿರುಗಾಳಿಯು ಸೆಳೆದೊಯ್ಯುವ ಕಾರ್ಮೋಡದಂತೆ ಅಬ್ಬರಿಸುತ್ತ ಭುಜಂಗರಾಜನ ಭೋಗ *

* ಭೋಗ = ಶರೀರ (ಸಪ್ತಶರೀರ ).

ಆಗಚ್ಛ ರಕ್ಷೋಽಧಿಪ ಮಾ ವಿಷಾದ-
ಮವಸ್ಥಿತೋಽಹಂ ಪ್ರಗೃಹೀತಚಾಪಃ ।
ಅವೇಹಿ ಮಾಂ ಶಕ್ರಸಪತ್ನ ರಾಮಂ
ಮಯಾ ಮುಹೂರ್ತಾದ್ಭವಿತಾ ವಿಚೇತಾಃ ॥ ೧೫೭

ರಾಮೋಽಯಮಿತಿ ವಿಜ್ಞಾಯ ಜಹಾಸ ವಿಕೃತಸ್ವನಮ್ ।
ಅಭ್ಯಧಾವತ ಸಂಕ್ರುದ್ಧೋ ಹರೀನ್ ವಿದ್ರಾವಯನ್ ರಣೇ ॥ ೧೫೮

ಪಾತಯನ್ನಿವ ಸರ್ವೇಷಾಂ ಹೃದಯಾನಿ ವನೌಕಸಾಮ್ ।
ಪ್ರಹಸ್ಯ ವಿಕೃತಂ ಭೀಮಂ ಸ ಮೇಘಸ್ತನಿತೋಪಮಮ್ ॥ ೧೫೯

ಕುಂಭಕರ್ಣೋ ಮಹಾತೇಜಾ ರಾಘವಂ ವಾಕ್ಯಮಬ್ರವೀತ್ ।
ನಾಹಂ ವಿರಾಧೋ ವಿಜ್ಞೇಯೋ ನ ಕಬಂಧಃ ಖರೋ ನ ಚ ॥ ೧೬೦

ನ ವಾಲೀ ನ ಚ ಮಾರೀಚಃ ಕುಂಭಕರ್ಣೋಽಹಮಾಗತಃ ।
ಪಶ್ಯ ಮೇ ಮುದ್ಗರಂ ಘೋರಂ ಸರ್ವಕಾಲಾಯಸಂ ಮಹತ್ ॥ ೧೬೧

---

ದಂತಿರುವ ನಿಡಿದಾದ ಭುಜಗಳನ್ನು ಬೀಸುತ್ತ ಸಾಗಿಬಂದ ಪರ್ವತಾಕಾರನಾದ ಕುಂಭಕರ್ಣನನ್ನು ನೋಡಿ ಶ್ರೀರಾಮನು "ರಾಕ್ಷಸಾಧಿಪ, ಮುಂದೆ ಬಾ! (ಹೋರಾಡಲು ಸರಿಜೋಡಿಯಾದವರು ಸಿಗಲಿಲ್ಲವೆಂದು) ವಿಷಾದಿಸಬೇಡ. ಧನುರ್ಧಾರಿಯಾಗಿ ನಾನು ನಿಂತಿದ್ದೇನೆ. ನಾನೇ ರಾಮನೆಂದು ತಿಳಿ! ನೀನು ಇಂದ್ರನನ್ನು ಜಯಿಸಿದವನಲ್ಲವೆ ? ಇನ್ನು ಸ್ವಲ್ಪ ಕಾಲದಲ್ಲಿಯೇ ಹತನಾಗಿ ಸಕಲವನ್ನೂ ಮರೆಯುವೆ!" ಎಂದನು (೧೫೬–೧೫೭). ಅವನು ಶ್ರೀರಾಮನೆಂದು ತಿಳಿಯಲು, ಕುಂಭಕರ್ಣನು ಕೇಕೆಹಾಕಿ ಗಟ್ಟಿಯಾಗಿ ನಕ್ಕನು. ಮೋಡವು ಗುಡುಗಿದಂತಾಯಿತು. ಅವನ ವಿಕೃತಾಟ್ಟಹಾಸವನ್ನು ಕೇಳಿ, ವಾನರರಿಗೆ ಎದೆಯೊಡೆದಂತಾಯಿತು. ಅವರು ಅಂಜಿ ಓಡಿಹೋದರು (೧೫೮–೧೫೯). ಕುಂಭಕರ್ಣನು ಕ್ರೋಧದಿಂದ ಮುಂದೆ ಬಂದು "ರಾಘವ, ನಾನು ಯಾರೆಂದು ತಿಳಿದ? ನಾನು ವಿರಾಧನಲ್ಲ, ಕಬಂಧನಲ್ಲ, ಖರನೂ ಅಲ್ಲ! ವಾಲಿಯೂ ಅಲ್ಲ, ಮಾರೀಚನೂ ಅಲ್ಲ! ಬಂದವನು ನಾನು; ಕುಂಭಕರ್ಣ! ಇಲ್ಲಿ ನೋಡು ಉಕ್ಕಿನಿಂದ ನಿರ್ಮಿಸಿದ ಘೋರವಾದ ಈ ಮುದ್ಗರವನ್ನು! (೧೬೦–೧೬೧).

ಅನೇನ ನಿರ್ಜಿತಾ ದೇವಾ ದಾನವಾಶ್ಚ ಪುರಾ ಮಯಾ ।
ವಿಕರ್ಣನಾಸ ಇತಿ ಮಾಂ ನಾವಜ್ಞಾತುಂ ತ್ವಮರ್ಹಸಿ ॥ ೧೬೨

ಸ್ವಲ್ಪಾಪಿ ಹಿ ನ ಮೇ ಪೀಡಾ ಕರ್ಣನಾಸಾವಿನಾಶನಾತ್ ।
ದರ್ಶಯೇಕ್ಷ್ವಾಕುಶಾರ್ದೂಲ ವೀರ್ಯಂ ಗಾತ್ರೇಷು ಮೇ ಲಘು ॥

ತತಸ್ತ್ವಾಂ ಭಕ್ಷಯಿಷ್ಯಾಮಿ ದೃಷ್ಟಪೌರುಷವಿಕ್ರಮಮ್ ॥ ೧೬೩

ಸ ಕುಂಭಕರ್ಣಸ್ಯ ವಚೋ ನಿಶಮ್ಯ
ರಾಮಃ ಸುಪುಂಖಾನ್ ವಿಸಸರ್ಜ ಬಾಣಾನ್ ।
ತೈರಾಹತೋ ವಜ್ರಸಮಪ್ರವೇಗೈ –
ರ್ನ ಚುಕ್ಷುಭೇ ನ ವ್ಯಥತೇ ಸುರಾರಿಃ ॥ ೧೬೪

ಯೈಃ ಸಾಯಕೈಃ ಸಾಲವರಾ ನಿಕೃತ್ತಾ
ವಾಲೀ ಹತೋ ವಾನರಪುಂಗವಶ್ಚ ।
ತೇ ಕುಂಭಕರ್ಣಸ್ಯ ತದಾ ಶರೀರೇ
ವಜ್ರೋಪಮಾ ನ ವ್ಯಥಯಾಂಬಭೂವುಃ ॥ ೧೬೫

---

ದೇವದಾನವರನ್ನು ಇದರಿಂದಲೇ ನಾನು ಜಯಸಿದ್ದು! ಎಲಾ ರಾಮ, ನನ್ನ ಕಿವಿಮೂಗುಗಳು ಹರಿದುಹೋಗಿವೆಯೆಂದು ಅವಹೇಳನಮಾಡಬೇಡ ! ಕಿವಿಮೂಗುಗಳು ಕತ್ತರಿಸಿಹೋದರೇನಾಗುವುದು? ನನಗೆ ಯಾವ ನೋವೂ ಇಲ್ಲ! ರಾಮ, ಇದೋ, ವಿಶಾಲವಾದ ನನ್ನ ದೇಹ ಉಂಟು. ನಿನ್ನ ಪರಾಕ್ರಮವನ್ನು ಇದರಲ್ಲಿ ಮೆರೆಸು ! ನಿನ್ನ ಪೌರುಷಪರಾಕ್ರಮಗಳನ್ನು ಪರೀಕ್ಷೆಮಾಡಿ, ಅನಂತರ ನಿನ್ನನ್ನು ಭಕ್ಷಿಸುವೆನು!'' ಎಂದು ಘೋಷಿಸಿದನು (೧೬೨–೧೬೩). ಕುಂಭಕರ್ಣನ ನುಡಿಯನ್ನು ಕೇಳಿ ಶ್ರೀರಾಮನು ವಜ್ರಸಮಾನಗಳಾದ ಗರಿಗಟ್ಟಿದ ಕೂರ್ಗಣೆಗಳನ್ನು ತೆಗೆದು ಗುರಿಯಿಟ್ಟು ಹೊಡೆಯಲಾರಂಭಿಸಿದನು. ಅವುಗಳ ಹೊಡೆತವನ್ನು ಕುಂಭಕರ್ಣನು ಗಣಿಸಲೇ ಇಲ್ಲ, ಅವನು ಉದ್ವಿಗ್ನನೂ ಆಗಲಿಲ್ಲ, ವೇದನೆಯನ್ನೂ ಅನುಭವಿಸಲಿಲ್ಲ! (೧೬೪). ಯಾವ ಕೂರ್ಗಣೆಯು ಸಪ್ತಸಾಲಗಳನ್ನು ಭೇದಿಸಿ ತೂರಿಹೋಗಿದ್ದಿತೋ, ವಾನರವೀರಾಗ್ರೇಸರನಾದ ವಾಲಿಯನ್ನು ಯಾವುದು ಒಂದೇಸಲಕ್ಕೆ ವಧಿಸಿದ್ದಿತೋ, ಅಂತಹ ವಜ್ರಸಮಾನಗಳಾದ ಹಲವಾರು ಕೂರ್ಗಣೆಗಳೂ ಕುಂಭಕರ್ಣನಿಗೆ ಕಿಂಚಿತ್ ಯಾತನೆಯನ್ನೂ

ಸ ವಾರಿಧಾರಾ ಇವ ಸಾಯಕಾಂಸ್ತಾನ್
ಪಿಬನ್ ಶರೀರೇಣ ಮಹೇಂದ್ರ ಶತ್ರುಃ ।
ಜಘಾನ ರಾಮಸ್ಯ ಶರಪ್ರವೇಗಂ
ವ್ಯಾವಿಧ್ಯ ತಂ ಮುದ್ಗರಮುಗ್ರವೇಗಮ್ ॥ ೧೬೬

ತತಸ್ತು ರಕ್ಷಃ ಕ್ಷತಜಾನುಲಿಪ್ತಂ
ವಿತ್ರಾಸನಂ ದೇವಮಹಾಚಮೂನಾಮ್ ।
ವಿವ್ಯಾಧ ತುಂ ಮುದ್ಗರಮುಗ್ರವೇಗಂ
ವಿದ್ರಾವಯಾಮಾಸ ಚಮೂಂ ಹರೀಣಾಮ್ ॥ ೧೬೭

ವಾಯವ್ಯಮಾದಾಯ ತತೋ ವರಾಸ್ತ್ರಂ
ರಾಮಃ ಪ್ರಚಿಕ್ಷೇಪ ನಿಶಾಚರಾಯ ।
ಸಮುದ್ಗರಂ ತೇನ ಜಘಾನ ಬಾಹುಂ
ಸ ಕೃತ್ತ ಬಾಹುಸ್ತುಮುಲಂ ನನಾದ ॥ ೧೬೮

ಸ ತಸ್ಯ ಬಾಹುರ್ಗಿರಿಶೃಂಗಕಲ್ಪಃ
ಸಮುದ್ಗರೋ ರಾಘವಬಾಣಕೃತ್ತಃ ।

---

ಉಂಟುಮಾಡಲಾರದೆ (ಹೋದವು ! (೧೬೫). ಶ್ರೀರಾಮನ ಶರಪರಂಪರೆಗಳು ಕುಂಭಕರ್ಣನ ಶರೀರದಲ್ಲಿ, ಮಳೆಯ ಧಾರೆಗಳು ಪರ್ವತದಲ್ಲಿ ಸುರಿವಂತೆ ಬಂದು ತಾಗಿದವು. ದೇವೇಂದ್ರನನ್ನು ಪರಾಜಯಗೊಳಿಸಿದ ಆ ರಾಕ್ಷಸನು ತನ್ನ ಮುದ್ಗರವನ್ನು ಬೀಸಿ, ವೇಗದಿಂದ ಬರುವ ಶ್ರೀರಾಮನ ಶರಗಳನ್ನು ತಡೆಯುತ್ತಿದ್ದನು (೧೬೬). ದೇವತೆಗಳ ಮಹಾಸೈನ್ಯವನ್ನಂಜಿಸಿದ ರಕ್ತಸಿಕ್ತರಾದ ಮುದ್ಗರವನ್ನು ಆ ಕುಂಭಕರ್ಣನು ಆಗಾಗ ವಾನರಸೇನೆಯ ಕಡೆಗೆ ಬೀಸುತ್ತಿರಲು, ವಾನರರು ಅಂಜಿ ಓಡುತ್ತಿದ್ದರು. ಆಮೇಲೆ ಶ್ರೀರಾಮನು ವಾಯವ್ಯಾಸ್ತ್ರವನ್ನು ಪ್ರಯೋಗಿಸಿ, ಮುದ್ಗರವನ್ನು ಹಿಡಿದಿದ್ದ ಕುಂಭಕರ್ಣನ ತೋಳನ್ನು ಕತ್ತರಿಸಿದನು. ಆಗ ಕುಂಭಕರ್ಣನು ಘೋರವಾಗಿ ಗರ್ಜಿಸಿದನು (೧೬೭–೧೬೮). ರಾಘವನ ವಾಯುವ್ಯಾಸ್ತ್ರದಿಂದ ಕತ್ತರಿಸಲ್ಪಟ್ಟ ಆ ರಾಕ್ಷಸನ ತೋಳು ವಾನರಸೇನಾಮಧ್ಯದಲ್ಲಿ ದೊಪ್ಪನೆ ಬಿದ್ದಿತು. ಗಿರಿಶಿಖರದಂತಿದ್ದ ತೋಳು ಮುದ್ಗರಸಹಿತವಾಗಿ ಬಿದ್ದೊಡನೆ, ಕಪಿಸೇನೆಯಲ್ಲಿದ್ದ ಬಹುಮಂದಿ

ಪಪಾತ ತಸ್ಮಿನ್ ಹರಿರಾಜಸೈನ್ಯೇ
ಜಘಾನ ತಾಂ ವಾನರವಾಹಿನೀಂ ಚ ॥ ೧೬೯

ತೇ ವಾನರಾ ಭಗ್ನಹತಾವಶೇಷಾಃ
ಪರ್ಯಂತಮಾಶ್ರಿತ್ಯ ತದಾ ವಿಷಣ್ಣಾಃ ।
ಪ್ರವೇಪಿತಾಂಗಾ ದದೃಶುಃ ಸುಘೋರಂ
ನರೇಂದ್ರ ರಕ್ಷೋಽಧಿಪಸಂನಿಪಾತಮ್ ॥ ೧೭೦

ಸ ಕುಂಭಕರ್ಣೋಽಸ್ತ್ರ ನಿಕೃತ್ತ ಬಾಹು-
ರ್ಮಹೇಂದ್ರಕೃತ್ತಾಗ್ರ ಇವಾಚಲೇಂದ್ರಃ ।
ಉತ್ಪಾಟಯಾಮಾಸ ಕರೇಣ ವೃಕ್ಷಂ
ತತೋಽಭಿದುದ್ರಾವ ರಣೇ ನರೇಂದ್ರಮ್ ॥ ೧೭೧

ಸ ತಸ್ಯ ಬಾಹುಂ ಸಹಸಾಲವೃಕ್ಷಂ
ಸಮುದ್ಯತಂ ಪನ್ನಗಭೋಗಕಲ್ಪಮ್ ।
ಐಂದ್ರಾಸ್ತ್ರಯುಕ್ತೇನ ಜಘಾನ ರಾಮೋ
ಬಾಣೇನ ಜಾಂಬೂನದಚಿತ್ರಿತೇನ ॥ ೧೭೨

ಸ ಕುಂಭಕರ್ಣಸ್ಯ ಭುಜೋ ನಿಕೃತ್ತಃ
ಪಪಾತ ಭೂಮೌ ಗಿರಿಸಂನಿಕಾಶಃ ।

---

ಯೋಧರು ಅದರ ಕೆಳಗೆ ಸಿಕ್ಕಿ ಸತ್ತುಹೋದರು! (೧೬೯). ಅಳಿದುಳಿದ ವಾನರರು ಹೆದರಿ ತಲ್ಲಣಿಸುತ್ತ ದೂರಕ್ಕೆ ಸರಿದು, ಶ್ರೀರಾಮನಿಗೂ ಕುಂಭಕರ್ಣನಿಗೂ ನಡೆಯುತ್ತಿದ್ದ ಘೋರಸಂಗ್ರಾಮವನ್ನು ನೋಡುತ್ತ ನಿಂತರು (೧೭೦). ಕುಂಭಕರ್ಣನ ಒಂದು ತೋಳು ಕತ್ತರಿಸಿಹೋದರೂ ಅವನು ಯುದ್ಧೋತ್ಸಾಹದಿಂದ ಹಿಂದೆಗೆಯಲಿಲ್ಲ. ಇಂದ್ರನು ಗಿರಿಶಿಖರವನ್ನು ಕತ್ತರಿಸಿದಾಗ ಕಾಣುವ ಪರ್ವತರಾಜನಂತೆ ಕೊಂಗೊಳಿಸುತ್ತ, ಕುಂಭಕರ್ಣನು ಒಂದೇ ಕೈಯಿಂದಲೇ ಒಂದು ಸಾಲವೃಕ್ಷವನ್ನು ಕಿತ್ತು ಶ್ರೀರಾಮನನ್ನೆದುರಿಸಿದನು (೧೭೧). ವೃಕ್ಷವನ್ನೆತ್ತಿಹಿಡಿದಿದ್ದ ಅವನ ತೋಳು, ಮಹಾಸರ್ಪದಂತೆ ನೀಳವಾಗಿ ಭೀಕರವಾಗಿತ್ತು. ಶ್ರೀರಾಮನು ಐಂದ್ರಾಸ್ತ್ರದಿಂದ ಆ ತೋಳನ್ನೂ ಕತ್ತರಿಸಿದನು. ಪರ್ವತದಂತೆ ಅತಿಸ್ಥೂಲವಾಗಿದ್ದ ಕುಂಭಕರ್ಣನ ಭುಜವು ಗಿರ್ರೆನ್ನುತ್ತ ನೆಲದಲ್ಲಿ

ವಿವೇಷ್ಟಮಾನೋಽಭಿಜಘಾನ ವೃಕ್ಷಾನ್
ಶೈಲಾನ್ ಶಿಲಾ ವಾನರರಾಕ್ಷಸಾಂಶ್ಚ ॥ ೧೭೩

ತಂ ಛಿನ್ನಬಾಹುಂ ಸಮವೇಕ್ಷ್ಯ ರಾಮಃ
ಸಮಾಪತಂತಂ ಸಹಸಾ ನದಂತಮ್ ।
ದ್ವಾವರ್ಧಚಂದ್ರೌ ನಿಶಿತೌ ಪ್ರಗೃಹ್ಯ
ಚಿಚ್ಛೇದ ಪಾದೌ ಯುಧಿ ರಾಕ್ಷಸಸ್ಯ ॥ ೧೭೪

ತೌ ತಸ್ಯ ಪಾದೌ ಪ್ರದಿಶೋ ದಿಶಶ್ಚ
ಗಿರೀನ್ ಗುಹಾಶ್ಚೈವ ಮಹಾರ್ಣವಂ ಚ ।
ಲಂಕಾಂ ಚ ಸೇನಾಂ ಕಪಿರಾಕ್ಷಸಾನಾಂ
ವಿನಾದಯಂತೌ ವಿನಿಪೇತತುಶ್ಚ ॥ ೧೭೫

ನಿಕೃತ್ತ ಬಾಹುರ್ವಿನಿಕೃತ್ತಪಾದೋ
ವಿದಾರ್ಯ ವಕ್ತ್ರಂ ಬಡಬಾಮುಖಾಭಮ್ ।
ದುದ್ರಾವ ರಾಮಂ ಸಹಸಾಭಿಗರ್ಜನ್
ರಾಹುರ್ಯಥಾ ಚಂದ್ರಮಿವಾಂತರಿಕ್ಷೇ ॥ ೧೭೬

ಬಿಟ್ಟಿತು. ಬೀಳುವಾಗ ಅದರ ರಭಸಕ್ಕೆ ಮರಗಳು ಮುರಿದವು ಬೆಟ್ಟಗಳು ಕುಸಿದವು. ಬಂಡೆಗಳ ಉರುಳಿದವು. ಬಹುಮಂದಿ ವಾನರರೂ ರಾಕ್ಷಸರೂ ಸತ್ತರು! (೧೭೨–೧೭೩). ಎರಡು ಭುಜಗಳು ಕತ್ತರಿಸಿಬಿದ್ದರೂ ಕುಂಭಕರ್ಣನು ಅಬ್ಬರಿಸುತ್ತ ಶ್ರೀರಾಮನ ಕಡೆಗೆ ನುಗ್ಗಿದನು. ಶ್ರೀರಾಮನು ಎರಡು ಅರ್ಧಚಂದ್ರಾಸ್ತ್ರಗಳನ್ನು ಪ್ರಯೋಗಿಸಿಸ ಆ ರಾಕ್ಷಸನ ಎರಡು ಕಾಲುಗಳನ್ನೂ ತುಂಡರಿಸಿದನು (೧೭೪). ತುಂಡರಿಸಲ್ಪಟ್ಟ ಕಾಲುಗಳು ಭೋರೆಂದು ಶಬ್ದ ಮಾಡುತ್ತ ನೆಲಕ್ಕುರುಳಿದವು. ಆ ಮಹಾಶಬ್ದವು ದಿಗ್ದಿಗಂತಗಳನ್ನು ಮೊಳಗಿಸಿ ಗಿರಿಗುಹಗಳಲ್ಲಿ ಪ್ರತಿಧ್ವನಿಸಿ ಸಮುದ್ರದಲ್ಲಿ ಮಾರ್ದನಿಗೊಂಡಿತು. ಆ ಶಬ್ದವು ಲಂಕಗೆ ಕೇಳಿಸಿತ್ತು, ಕಪಿಗಳೂ ರಾಕ್ಷಸರೂ ಕಾಲುಗಳು ವೇಗಕ್ಕೆ ಸಿಕ್ಕಿ ಹಾಹಾಕಾರಮಾಡುತ್ತ ಬಿದ್ದರು! (೧೭೫). ಹೀಗೆ ಕೈಕಾಲುಗಳು ಕತ್ತರಿಸಿಬಿದ್ದ ಮೇಲೆ, ಕುಂಭಕರ್ಣನು ಬಡಬಾಗ್ನಿಯ ಮುಖದಂತಿರುವ ತನ್ನ ಬಾಯನ್ನು ತೆರೆದು ಅರ್ಭಟಿಸುತ್ತ, ಶ್ರೀರಾಮನನ್ನು ನುಂಗಬೇಕೆಂದು ತೆವಳುತ್ತ ನುಗ್ಗಿದನು.

ಆಪೂರಯತ್ತಸ್ಯ ಮುಖಂ ಶಿತಾಗ್ರೈಃ
ರಾಮಃ ಶರೈರ್ಹೇಮಪಿನದ್ಧಪುಂಖೈಃ ।
ಸ ಪೂರ್ಣವಕ್ತ್ರೋ ನ ಶಶಾಕ ವಕ್ತುಂ
ಚುಕೂಜ ಕೃಚ್ಛ್ರೇಣ ಮುಮೋಹ ಚಾಪಿ ॥ ೧೭೭

ಅಥಾದದೇ ಸೂರ್ಯಮರೀಚಿಕಲ್ಪಂ
ಸ ಬ್ರಹ್ಮದಂಡಾಂತಕಕಾಲಕಲ್ಪಮ್ ।
ಅರಿಷ್ಟಮೈಂದ್ರಂ ನಿಶಿತಂ ಸುಪುಂಖಂ
ರಾಮಃ ಶರಂ ಮಾರುತತುಲ್ಯವೇಗಮ್ ॥ ೧೭೮

ತಂ ವಜ್ರಜಾಂಬೂನದಚಾರುಪುಂಖಂ
ಪ್ರದೀಪ್ತಸೂರ್ಯಜ್ವಲನಪ್ರಕಾಶಮ್ ।
ಮಹೇಂದ್ರವಜ್ರಾಶನಿತುಲ್ಯವೇಗಂ
ರಾಮಃ ಪ್ರಚಿಕ್ಷೇಪ ನಿಶಾಚರಾಯ ॥ ೧೭೯

ಸ ಸಾಯಕೋ ರಾಘವಬಾಹುಚೋದಿತೋ
ದಿಶಃ ಸ್ವಭಾಸಾ ದಶ ಸಂಪ್ರಕಾಶಯನ್ ।

---

ರಾಹುವು ಚಂದ್ರನನ್ನು ನುಂಗಲು ಹೋಗುವಂತೆ ಹೋದನು (೧೭೬). ಆಗ ರಾಘವನು ಸುವರ್ಣಪುಂಖಾಂಕಿತಗಳಾದ ಕೂರಂಬುಗಳಿಂದ ಅವನ ಬಾಯನ್ನು ತುಂಬಿಬಿಟ್ಟನು. ಕುಂಭಕರ್ಣನಿಗೆ ಗರ್ಜಿಸಲು ಸಾಧ್ಯವಾಗಲಿಲ್ಲ. ಆದರೂ ಕಷ್ಟ ದಿಂದ ಅರಚುತ್ತ ಎಚ್ಚರದಪ್ಪಿದಂತಾದನು (೧೭೭). ಅಷ್ಟರಲ್ಲಿ ಶ್ರೀರಾಮನು ನಿಶಿತವಾದ ಐಂದ್ರಾಸ್ತ್ರವನ್ನು ಸೆಳೆದನು. ರಾಕ್ಷಸರಿಗೆ ಅರಿಷ್ಟಸೂಚಕವಾದ ಆ ಧಿವ್ಯಾಸ್ತ್ರವು ಸೂರ್ಯಮರೀಚಿಯಂತೆ ಜಗಜಗಿಸುತ್ತಿತ್ತು, ಬ್ರಹ್ಮದಂಡ ದಂತೆ ಹೊಳೆಯುತ್ತಿತ್ತು, ಕಾಲಮೃತ್ಯುವಿನಂತೆ ಭುಗಿಲೆನ್ನುತ್ತಿತ್ತು, ವಾಯುವಿ ನಂತೆ ವೇಗಶಾಲಿಯಾಗಿತ್ತು (೧೭೮). ಚಿನ್ನದ ಹಿಡಿಕಟ್ಟನಿಂದ ದೇದೀಪ್ಯ ಮಾನವಾಗಿದ್ದ ಆ ದಿವ್ಯಾಸ್ತ್ರವು ಸೂರ್ಯನಂತೆ ರಾರಾಜಿಸುತ್ತಿತ್ತು, ಅಗ್ನಿ ಯಂತೆ ಬೆಳಗುತ್ತಿತ್ತು, ಇಂದ್ರನ ವಜ್ರಾಯುಧದಂತೆ ಅಜೇಯವಾಗಿತ್ತು, ಸಿಡಿಲಿನಂತೆ ಪ್ರಚಂಡವಾಗಿತ್ತು. ಅಂತಹ ಐಂದ್ರಾಸ್ತ್ರವನ್ನು ಶ್ರೀರಾಮನು ಆ ರಾಕ್ಷಸನಮೇಲೆ ಪ್ರಯೋಗಿಸಿದನು (೧೭೯). ರಾಘವನಿಂದ ಹೊಡೆಯಲ್ಪಟ್ಟ

ವಿಧೂಮವೈಶ್ವಾನರದೀಪ್ತದರ್ಶನೋ
ಜಗಾಮ ಶಕ್ರಾಶನಿವೀರ್ಯವಿಕ್ರಮಃ ॥ ೧೮೦

ಸ ತನ್ಮಹಾಪರ್ವತಕೂಟಸಂನಿಭಂ
ನಿವೃತ್ತದಂಷ್ಟ್ರಂ ಚಲಚಾರುಕುಂಡಲಮ್ ।
ಚಕರ್ತ ರಕ್ಷೋಽಧಿಪತೇಃ ಶಿರಸ್ತಥಾ
ಯಥೈವ ವೃತ್ರಸ್ಯ ಪುರಾ ಪುರಂದರಃ ॥ ೧೮೧

ಕುಂಭಕರ್ಣಶಿರೋ ಭಾತಿ ಕುಂಡಲಾಲಂಕೃತಂ ತಂ ಮಹತ್ ।
ಆದಿತ್ಯೇಽಭ್ಯುದಿತೇ ರಾತ್ರೌ ಮಧ್ಯಸ್ಥ ಇವ ಚಂದ್ರಮಾಃ । ೧೮೨

ತದ್ರಾಮಬಾಣಾಭಿಹತಂ ಪಪಾತ
ರಕ್ಷಃಶಿರಃ ಪರ್ವತಸಂನಿಕಾಶಮ್ ।
ಬಭಂಜ ಚರ್ಯಾಗೃಹಗೋಪುರಾಣಿ
ಪ್ರಾಕಾರಮುಚ್ಚಂ ತಮಪಾತಯಚ್ಚ ॥ ೧೮೩

---

ಆ ಮಹಾಸ್ತ್ರವು ದಶದಿಕ್ಕುಗಳನ್ನೂ ಬೆಳಗಿಸುತ್ತ ಹೊಗೆಯಿಲ್ಲದ ಜ್ವಾಲೆಯಂತೆ ಪ್ರಜ್ವಲಿಸುತ್ತ ಸಿಡಿಲಿನಂತೆ ಪ್ರಚಂಡವೇಗದಿಂದ ಸಿಡಿಯಿತು (೧೮೦). ಸಿಡಿದು ಬಂದ ಘೋರಸಾಯಕವು ಗಿರಿಶಿಖರದಂತಿದ್ದ ಕುಂಭಕರ್ಣನ ಶಿರಸ್ಸನ್ನು ಕತ್ತರಿಸಿತು. ಇಂದ್ರನ ವಜ್ರಾಯುಧವು ವೃತ್ರಾಸುರನ ಶಿರಸ್ಸನ್ನು ತುಂಡರಿಸಿದಂತೆ ತುಂಡರಿಸಿತು. ಕುಂಭಕರ್ಣನ ಕೋರೆಯ ಹಲ್ಲುಗಳು ಕಿರಿದವು. ಕರ್ಣಕುಂಡಲಗಳು ಅಲ್ಲಾಡಿದವು (೧೮೧). (ಕತ್ತರಿಸಿದ ವೇಗಕ್ಕೆ ಕುಂಭಕರ್ಣನ ಶಿರಸ್ಸು ಆಕಾಶಕ್ಕೆ ಹಾರಿತು.) ಕುಂಡಲಾಲಂಕೃತವಾದ ಆ ಮಹಾಶಿರಸ್ಸು, ರಾತ್ರಿಯಲ್ಲಿ ಪುನರ್ವಸು ನಕ್ಷತ್ರಗಳು* ಉದಿಸಿದಾಗ ಅವೆರಡರ ಮಧ್ಯದಲ್ಲಿರುವ ಚಂದ್ರನಂತೆ ಗೋಚರಿಸಿತು (೧೮೨). ಶ್ರೀರಾಮನ ಬಾಣದಿಂದ ಹಾರಿಸಲ್ಪಟ್ಟ ಪರ್ವತಸದೃಶವಾದ ಆ ಶಿರಸ್ಸು ಲಂಕೆಯಲ್ಲಿ ಬಿದ್ದಿತು. ಬೀಳುವಾಗ ಪ್ರಾಕಾರದ ಮೇಲೆ ಕಾವಲಿಗಾಗಿ ನಿರ್ಮಿಸಿದ ಚರ್ಯಾಗೃಹಗಳನ್ನು ಗೋಪುರಗಳನ್ನೂ ಉನ್ನತವಾದ ಕೋಟೆಯನ್ನೂ ಉರುಳಿಸಿತು (೧೮೩).

---

* ಅನುಬಂಧವನ್ನು ನೋಡಿ.

ನ್ಯಪಪತ್ ಕುಂಭಕರ್ಣೋಽಥ ಸ್ವಕಾಯೇನ ನಿಪಾತಯನ್ ।
ಪ್ಲವಂಗಮಾನಾಂ ಕೋಟ್ಯಶ್ಚ ಪರಿತಃ ಸಂಪ್ರಧಾವತಾಮ್ ॥ ೧೮೪

ತಚ್ಚಾತಿಕಾಯಂ ಹಿಮವತ್ಪ್ರಕಾಶಂ
ರಕ್ಷಸ್ತ ತಸ್ತೋಯನಿಧೌ ಪಪಾತ ।
ಗ್ರಾಹನ್ ವರಾನ್ ಮೀನವರಾನ್ ಭುಜಂಗಾನ್
ಮಮರ್ದ ಭೂಮಿಂ ಚ ತದಾ ವಿವೇಶ ॥ ೧೮೫

ತಸ್ಮಿನ್ ಹತೇ ಬ್ರಾಹ್ಮಣದೇವಶತ್ರೌ
ಮಹಾಬಲೇ ಸಂಯತಿ ಕುಂಭಕರ್ಣೇ ।
ಚಚಾಲ ಭೂರ್ಭೂಮಿಧರಾಶ್ಚ ಸರ್ವೇ
ಹರ್ಷಾಚ್ಚ ದೇವಾಸ್ತುಮುಲಂ ಪ್ರಣೇದುಃ ॥ ೧೮೬

ತತಸ್ತು ದೇವರ್ಷಿಮಹರ್ಷಿಪನ್ನಗಾಃ
ಸುರಾಶ್ಚ ಭೂತಾನಿ ಸುಪರ್ಣಗುಹ್ಯಕಾಃ ।
ಸಯಕ್ಷಗಂಧರ್ವಗಣಾ ನಭೋಗತಾಃ
ಪ್ರಹರ್ಷಿತಾ ರಾಮಪರಾಕ್ರಮೇಣ ॥ ೧೮೭

ತತಸ್ತು ತೇ ತಸ್ಯ ವಧೇನ ಭೂರಿಣಾ
ಮನಸ್ವಿನೋ ನೈರ್ಋತರಾಜಬಾಂಧವಾಃ ।

---

ಆಮೇಲೆ ಕುಂಭಕರ್ಣನ ಶರೀರವು ಒಲೆದು, ಮಧ್ಯದಲ್ಲಿ ಅತ್ತಿತ್ತ ಓಡುತ್ತಿದ್ದ ಬಹುಮಂದಿ ವಾನರರನ್ನು ಉರುಳಿಸಿ ಸಮುದ್ರಕ್ಕೆ ಬಿದ್ದಿತು. ಹಿಮವಂತನಂತೆ ಅತಿಸ್ಥೂಲವಾದ ಆ ದೇಹವು ಸಮುದ್ರದಲ್ಲಿದ್ದ ದೊಡ್ಡ ದೊಡ್ಡ ಮೊಸಳೆ, ಮೀನು, ಸರ್ಪಗಳನ್ನು ಮರ್ದಿಸುತ್ತ ಸಮುದ್ರತಳವನ್ನು ಸೇರಿತು (೧೮೪–೧೮೫). ದ್ವಿಜರಿಗೂ ದೇವತೆಗಳಿಗೂ ವಿರೋಧಿಯೂ ಮಹಾಬಲನೂ ಆದ ಕುಂಭಕರ್ಣನು ಯುದ್ಧದಲ್ಲಿ ಹತನಾಗಲು ಭೂದೇವಿಯು ಹರ್ಷದಿಂದ ತೂಗಾಡಿದಳು. ಪರ್ವತ ಗಳು ಅಲ್ಲಾಡಿದವು. ದೇವತೆಗಳು ಆನಂದದಿಂದ ಕೂಗಾಡಿದರು (೧೮೬). ಅಂತರಿಕ್ಷದಲ್ಲಿ ನೆರೆದಿದ್ದ ದೇವರ್ಷಿ ಮಹರ್ಷಿ ಪನ್ನಗರೂ, ದೇವತೆಗಳೂ, ಭೂತ ಗಳೂ, ಸುಪರ್ಣ ಗುಹ್ಯಕರೂ, ಯುಕ್ಷಗಂಧರ್ವರೂ ಶ್ರೀರಾಮನ ಪರಾಕ್ರಮ ವನ್ನು ಕಂಡು ಆನಂದತುಂದಿಲರಾದರು (೧೮೭). ಅದುವರೆಗೆ ಧೈರ್ಯದಿಂದ

ವಿನೇದುರುಚ್ಚೈರ್ವ್ಯಥಿತಾ ರಘೂತ್ತಮಂ
ಹರಿಂ ಸಮೀಕ್ಷ್ಯೈವ ಯಥಾ ಸುರಾರ್ದಿತಾಃ ॥ ೧೮೮

ಸ ದೇವಲೋಕಸ್ಯ ತಮೋ ನಿಹತ್ಯ
ಸೂರ್ಯೋ ಯಥಾ ರಾಹುಮುಖಾದ್ವಿಮುಕ್ತಃ ।
ತಥಾ ವ್ಯಭಾಸೀದ್ಭುವಿ ವಾನರೌಘೇ
ನಿಹತ್ಯ ರಾಮೋ ಯುಧಿ ಕುಂಭಕರ್ಣಮ್ ॥ ೧೮೯

ಪ್ರಹರ್ಷಮೀಯುರ್ಬಹವಸ್ತು ವಾನರಾಃ
ಪ್ರಬುದ್ಧ ಪದ್ಮಪ್ರತಿಮೈರಿವಾನನೈಃ ।
ಅಪೂಜಯನ್ ರಾಘವಮಿಷ್ಟಭಾಗಿನಂ
ಹತೇ ರಿಪೌ ಭೀಮಬಲೇ ದುರಾಸದೇ ॥ ೧೯೦

ಸ ಕುಂಭಕರ್ಣಂ ಸುರಸಂಘಮರ್ದನಂ
ಮಹತ್ಸು ಯುದ್ಧೇಷು ಪರಾಜಿತಶ್ರಮಮ್ ।

---

ಕಾದಾಡಿದ ರಾಕ್ಷಸಭಟರು ಅತ್ಯದ್ಭುತವಾದ ಕುಂಭಕರ್ಣವಧೆಯಿಂದ ದುಃಖಿತರಾದರು. ದೇವತೆಗಳೊಡನೆ ಕಾದಾಡುವಾಗ ಸಾಕ್ಷಾತ್ ಮಹಾವಿಷ್ಣುವನ್ನೇ ಎದುರಿಗೆ ಕಂಡಂತಾಗಿ, ಶ್ರೀರಾಮನನ್ನು ನೋಡಿ ತಲ್ಲಣಿಸಿ ಹಾಹಾಕಾರ ಮಾಡುತ್ತ ಗೋಳಾಡಿದರು (೧೮೮). ರಾಹುಮುಖದಿಂದ ವಿಮುಕ್ತರಾದ ಸೂರ್ಯನು ಕತ್ತಲೆಯನ್ನು ಧ್ವಂಸಪಡಿಸಿ ಗಗನತಳದಲ್ಲಿ ಹೇಗೆ ವಿರಾಜಿಸುವನೋ, ಹಾಗೆ ಶ್ರೀರಾಮನು ಕುಂಭಕರ್ಣನನ್ನು ಸಂಹರಿಸಿ (ಸಮಸ್ತಲೋಕದ ಭಯವನ್ನು ನಿರ್ಮೂಲಗೊಳಿಸಿ) ವಾನರಸೇನಾಮಧ್ಯದಲ್ಲಿ ವಿರಾಜಿಸಿದನು (೧೮೯). ದುರ್ಧರ್ಷನೂ ಭೀಮಪರಾಕ್ರಮಿಯೂ ಆದ ಕುಂಭಕರ್ಣನು ಹತನಾಗಲು, ವಾನರರ ಮುಖಗಳು ಹರ್ಷದಿಂದ ಹಿಗ್ಗಿದವು; ಕಮಲಗಳಂತೆ ಅರಳಿದವು. ತಮ್ಮ ಅಭೀಷ್ಟವನ್ನು ನೆರವೇರಿಸಿಕೊಟ್ಟ (ಸೂರ್ಯನಂತೆ ವಿರಾಜಿಸುತ್ತಿದ್ದ) ಶ್ರೀರಾಮನನ್ನು ವಾನರರು ಕೊಂಡಾಡಿದರು (೧೯೦). ಅಮರೇಶ್ವರನು ವೃತ್ರಾಸುರನನ್ನು ವಧಿಸಿದಂತೆ, ರಾಘವನು ಆ ರಾಕ್ಷಸಶಾರ್ದೂಲನನ್ನು ವಧಿಸಿದನು. ದಣಿವಿಲ್ಲದಂತೆ ಘೋರಸಂಗ್ರಾಮಗಳಲ್ಲಿ ಕಾದಾಡಿ

ನನಂದ ಹತ್ವಾ ಭರತಾಗ್ರಜೋ ರಣೇ
ಮಹಾಸುರಂ ವೃತ್ರಮಿವಾಮರಾಧಪಃ ॥ ೧೯೧

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಚತುರ್ವಿಂಶತಿ ಸಹಸ್ರಿಕಾಯಾಂ ಸಂಹಿತಾಯಾಂ ಯುದ್ಧಕಾಂಡೇ ಸಪ್ತಷಷ್ಟಿತಮಃ ಸರ್ಗಃ

---

ದೇವತೆಗಳನ್ನು ಮರ್ದಿಸುತ್ತಿದ್ದ ಕುಂಭಕರ್ಣನನ್ನು ಸಂಹರಿಸಿ, ಭರತಾಗ್ರಜನಾದ ಶ್ರೀರಾಮಚಂದ್ರನು ಸಂಪ್ರೀತನಾದನು (೧೯೧).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ಅರುವತ್ತೇಳನೆಯ ಸರ್ಗ

ಇಲ್ಲಿಗೆ ಪೂರ್ವಾರ್ಧವು ಸಂಪೂರ್ಣವಾಯಿತು.

---

ಕಲ್ಯಾಣೋಲ್ಲಾಸಸೀಮಾ ಕಲಯತು ಕುಶಲಂ ಕಾಲಮೇಘಾಭಿರಾಮಾ
ಕಾಚಿತ್ ಸಾಕೇತಧಾಮಾ ಭವಗಹನಗತಿಕ್ಲಾಂತಿಹಾರಿಪ್ರಣಾಮಾ ।
ಸೌಂದರ್ಯಹ್ರೀಣಕಾಮಾ ಧೃತಜನಕಸುತಾಸಾದರಾಪಾಂಗದಾಮಾ
ದಿಕ್ಷು ಪ್ರಖ್ಯಾತಭೂಮಾ ದಿವಿಷದಭಿನುತಾ ದೇವತಾ ರಾಮನಾಮಾ ॥

# ಅನುಬಂಧ

## ೧

## ಭುಜ್ಯೈಃ ಪರಮನಾರೀಣಾಮಭಿಮೃಷ್ಟಮನೇಕಧಾ

–ಪುಟ ೧೪೩

'ಉತ್ತಮ ಸ್ತ್ರೀಯರು ಶ್ರೀರಾಮ ಬಾಹುವನ್ನು ನೀವುತ್ತಿದ್ದರು' ಎಂದಾಗ ಆ ಉತ್ತಮ ಸ್ತ್ರೀಯರು ಯಾರು? ಶ್ರೀರಾಮನ ಪತ್ನಿಯರೆ? ಎಂಬ ಸಂದೇಹಕ್ಕೆ ಅವಕಾಶ ಉಂಟು. ಅಯೋಧ್ಯಾಕಾಂಡದ ಎಂಟನೆಯ ಸರ್ಗ ದಲ್ಲಿ 'ಹೃಷ್ಟಾಃ ಖಲು ಭವಿಷ್ಯಂತಿ ರಾಮಸ್ಯ ಪರಮಾಃ ಸ್ತ್ರಿಯಃ' ಎಂದು ಮಂಥರೆಯು ಹೇಳುತ್ತಾರೆ. 'ರಾಮನಿಗೆ ಪಟ್ಟಾಭಿಷೇಕವಾದರೆ ರಾಮನ ಉತ್ತಮ ಸ್ತ್ರೀಯರಿಗೆ ಆನಂದವಾಗುತ್ತದೆ' ಎಂದು ಅವಳ ಅಭಿಪ್ರಾಯ. ಸುಂದರಕಾಂಡದ ಇಪ್ಪತ್ತೆಂಟನೆಯ ಸರ್ಗದಲ್ಲಿ ಸೀತೆಯು ಶೋಕಾರ್ತಳಾಗಿ ವಿಲಪಿಸುತ್ತಿರುವಾಗ 'ಸ್ತ್ರೀಭಿಸ್ತು ಮನ್ಯೇ ವಿಪುಲೇಕ್ಷಣಾಭಿಸ್ತ್ವಂ ರಂಸ್ಯಸೇ ವೀತಭಯಃ ಕೃತಾರ್ಥಃ' ಎನ್ನುತ್ತಾಳೆ. 'ಹಾ ರಾಮ, ನೀನು ಅರಣ್ಯವಾಸ ದಿಂದ ಹಿಂದಿರುಗಿ ಸುಂದರಿಯಾದ ಸ್ತ್ರೀಯರೊಡನೆ ವಿಹರಿಸಬಹುದು!' ಎಂದು ಹೇಳಿಕೊಳ್ಳುತ್ತಾಳೆ. ಮುಂದೆ ಉತ್ತರಕಾಂಡದ ತೊಂಬತ್ತೊಂದನೆಯ ಸರ್ಗದಲ್ಲಿ ಬರುವ ಅಶ್ವಮೇಧ ಪ್ರಸ್ತಾವದಲ್ಲಿ 'ಮಾತರಶ್ಚೈವ ಮೇ ಸರ್ವಾಃ ಕುಮಾರಾಃ ಸ್ತ್ರೀಗಣಾನಿ ಚ ! ಅಗ್ರತೋ ಭರತಂ ಕೃತ್ವಾ. ಗಚ್ಛಂತ್ವಗ್ರೇ ಸಮಾಧಿನಾ' ಎಂಬ ಶ್ಲೋಕವು ದೊರೆಯುತ್ತದೆ. ಶ್ರೀರಾಮನು 'ನನ್ನ ಸ್ತ್ರೀಗಣಗಳು ಯಜ್ಞಶಾಲೆಗೆ ಹೋಗಲಿ' ಎನ್ನುತ್ತಾನೆ. ಇಲ್ಲಿ ಸ್ತ್ರೀಗಣ ಗಳೆಂದರೆ ಯಾರು? ಆದ್ದರಿಂದ ಶ್ರೀರಾಮನಿಗೆ ಸೀತೆಯಲ್ಲದೆ ಇತರ ಮಡದಿ ಯರು ಇದ್ದಿರಬಹುದೆ? ಎಂಬ ಶಂಕೆ ಮೂಡುತ್ತದೆ.

ಆದರೆ ಶ್ರೀರಾಮನು ಏಕಪತ್ನೀವ್ರತಸ್ಥನೆಂದು ದೀರ್ಘಕಾಲದಿಂದಲೂ ನಮ್ಮಲ್ಲಿ ವಿಶ್ವಾಸವಿದೆ. ಶಿಷ್ಟರಲ್ಲಿ ನೆಲೆಸಿರುವ ವಿಶ್ವಾಸ, ಶ್ರದ್ಧೆ, ಪ್ರತೀತಿಗಳಿಗೆ ಮೂಲವಿದ್ದೇ ಇರಬೇಕು. ಇತರ ಪುರಾಣಾದಿಗಳಲ್ಲಿ ಎಲ್ಲಿಯೂ ಶ್ರೀರಾಮನಿಗೂ ಅನೇಕಪತ್ನಿಯರಿದ್ದರೆಂದು ಹೇಳಿಲ್ಲ. ಆನಂದರಾಮಾಯಣದಲ್ಲಿ ಅವನು ಏಕಪತ್ನೀವ್ರತಸ್ಥನೆಂದು ಸ್ಪಷ್ಟವಾಗಿ ತಿಳಿಸಿದೆ. ಅಯೋಧ್ಯೆಯಲ್ಲಿದ್ದ ಕೆಲವು

ವೇಶ್ಯೆಯರು ಶ್ರೀರಾಮನ ಸೌಂದರ್ಯಕ್ಕೆ ಮರುಳಾಗಿ ಏಕಾಂತದಲ್ಲಿ ಅವನನ್ನು ಬೇಟಮಾಡಿದರೆಂದೂ, ಆಗ ಶ್ರೀರಾಮನು ತಾನು ಏಕಪತ್ನೀವ್ರತಸ್ಥನಾದ್ದ ರಿಂದ ಅವರ ಅಭೀಷ್ಟವು ನೆರವೇರುವುದು ಸಾಧ್ಯವಿಲ್ಲವೆಂದೂ, ಮುಂದೆ ಶ್ರೀಕೃಷ್ಣಾವತಾರದಲ್ಲಿ ಆ ವೇಶ್ಯೆಯರ ಕೋರಿಕೆಯನ್ನು ನಡೆಸುವುದಾಗಿ ಹೇಳಿದ ನೆಂದೂ ಆನಂದರಾಮಾಯಣದಲ್ಲಿ ಉಕ್ತವಾಗಿದೆ. ವಾಲ್ಮೀಕಿರಾಮಾಯಣ ದಲ್ಲಿಯೂ ಸಹ ಸೀತೆಯಲ್ಲದೆ ಇತರ ಮಡದಿಯರಿದ್ದರೆಂದು ಎಲ್ಲಿಯೂ ಹೇಳಿಲ್ಲ. ಆದ್ದರಿಂದ ಮೇಲ್ಕಂಡ ಶಂಕಾವಚನಗಳಿಗೆ ಬೇರೆ ರೀತಿಯಲ್ಲಿ ಅರ್ಥ ಹೇಳುವುದೇ ಯುಕ್ತವಾದದ್ದು. ಹೇಗೆಂದರೆ, 'ಭುಜ್ಯೈಃ ಪರಮನಾರೀಣಾಂ' ಎಂಬುದರ ಅಭಿಪ್ರಾಯ ಹೀಗೆ: ಹಿಂದೆ ಶ್ರೀರಾಮನು ಅರಮನೆಯಲ್ಲಿದ್ದಾಗ ಅನೇಕ ಪರಿಚರಿಕೆಯರು ಆತನನ್ನು ಉಪಚರಿಸುತ್ತಿದ್ದರು. ಮಡದಿಯರಲ್ಲದೆ ಇತರರು ಅವನ ಸ್ಪರ್ಶವನ್ನೂ ಮಾಡುತ್ತಿರಲಿಲ್ಲವೆನ್ನುವುದು ಅತಿರೇಕದ ನುಡಿಯೇ ಸರಿ. ರಾಜಪುತ್ರರ ಸೇವೆಯನ್ನು ಅಂತಃಪುರದ ದಾಸಿಯರು ಮಾಡುತ್ತಿದ್ದರೆಂಬುದಕ್ಕೆ ಕಾವ್ಯಗಳಲ್ಲಿ ಅನೇಕ ನಿರ್ದಶನಗಳುಂಟು. ಶೂದ್ರಕನೆಂಬ ರಾಜನು ಬ್ರಹ್ಮಚಾರಿ ಯಾಗಿ ಸ್ತ್ರೀವಿಮುಖನಾಗಿದ್ದರೂ ಸ್ತ್ರೀಯರು ಅವನಿಗೆ ಸ್ನಾನಮಾಡಿಸುತ್ತಿದ್ದ ರೆಂದು ಬಾಣಭಟ್ಟನು ಕಾದಂಬರಿಯಲ್ಲಿ ವರ್ಣಿಸಿದ್ದಾನೆ. ಆದ್ದರಿಂದ ಇಲ್ಲಿ ಪರಮನಾರಿಯರೆಂದರೆ ಅಂತಃಪುರದ ದಾಸಿಯರಾಗಬಹುದು. ಕೌಸಲ್ಯಾದಿ ಮಾತೆಯರೂ ಆಗಬಹುದು. ಅಲ್ಲದೆ ಶ್ರೀರಾಮನ ಬಾಲ್ಯದಲ್ಲಿ ಪರಮನಾರಿ ಯರು ಆತನ ಬಾಹುವನ್ನು ನೀವಿ ಸ್ನಾನಮಾಡಿಸುತ್ತಿದ್ದರೆಂಬ ತಾತ್ಪರ್ಯ ವನ್ನೂ ಹೇಳಬಹುದಾಗಿದೆ.

'ಹೃಷ್ಟಾಃ ಖಲು ಭವಿಷ್ಯಂತಿ ರಾಮಸ್ಯ ಪರಮಾಃ ಸ್ತ್ರಿಯಃ' ಎಂಬಲ್ಲಿಯೂ ಅಷ್ಟೆ. ಶ್ರೀರಾಮನನ್ನು ಪ್ರೀತಿಸುವ ಸ್ತ್ರೀಯರೆಲ್ಲರೂ ಸಂತುಷ್ಟರಾಗುವರು ಎಂದು ಮಂಥರೆಯು ಸ್ತ್ರೀಜಾತಿಗೆ ಸಹಜವಾದ ಮಾತನ್ನಾಡಿದ್ದಾಳೆ. ಶ್ರೀರಾಮ ನನ್ನು ಪ್ರೀತಿಸುವ ಸ್ತ್ರೀಯರು ಪತ್ನಿಯರೇ ಆಗಬೇಕಾಗಿಲ್ಲ. ಸೀತೆ, ಅವಳ ಸಖಿಯರು, ಅಂತಃಪುರದಲ್ಲಿದ್ದ ರಾಮಮಾತೆಯರೂ ಆಗಬಹುದು.

'ಸ್ತ್ರೀಭಿಸ್ತ್ವ ಮನ್ಯೇ ವಿಪುಲೇಕ್ಷಣಾಭಿಃ ....' ಎಂಬುದು ದುಃಖಾರ್ತಳಾದ ಸೀತೆಯ ಒಂದು ಮನೋವಿಕಲ್ಪ. ''ನಾನಿಲ್ಲದಿದ್ದರೇನಾಯಿತು? ನನ್ನಂತಹ ಬಹುಮಂದಿ ಸ್ತ್ರೀಯರು ನಿನಗೆ ದೊರಕಲಾರರೆ? ಅವರನ್ನು ಮದುವೆಯಾಗಿ ನೀನು

ವಿಲಾಸದಿಂದರಬಹುದು'' ಎಂದು ಅಭಿಪ್ರಾಯ ಈಗಾಗಲೇ ಆ ಸ್ತ್ರೀಯರನ್ನು ಮದುವೆಯಾಗಿಬಿಟ್ಟಿದ್ದಾನೆ ಎಂಬ ಕಲ್ಪನೆಗೆ ಬುಡವೇನೂ ಇಲ್ಲ.

ಉತ್ತರಕಾಂಡದಲ್ಲಿ '...ಕುಮಾರಾಃ ಸ್ತ್ರೀಗಣಾನಿ ಚ' ಎಂಬಲ್ಲಿ ಭರತ ಲಕ್ಷ್ಮಣಾದಿಗಳ ಕುಮಾರರು ಮತ್ತು ಅವರ ಪತ್ನಿಯರು ಎಂದೇ ಅರ್ಥವನ್ನು ಹೇಳಬೇಕು. ಅಶ್ವಮೇಧಯಾಗಕ್ಕೆ ಪೂರ್ವದಲ್ಲಿ ಲವಕುಶರೂ ಸಹ ಶ್ರೀರಾಮನ ಬಳಿಯಲ್ಲಿರಲಿಲ್ಲ. ಆದ್ದರಿಂದಲೂ 'ಕುಮಾರಾಃ' ಎಂದು ಬಹುವಚನವಿರುವುದ ರಿಂದಲೂ ಭರತಾದಿಗಳ ಪುತ್ರರೆಂದೇ ಹೇಳಬೇಕು. ಸ್ತ್ರೀಗಣಗಳೂ ಭರತಾದಿ ಗಳಿಗೆ ಸೇರಿದವರೇ. ಅಲ್ಲದೇ 'ಮಮ ಮಾತೃಸ್ತಥಾ ಸರ್ವಾಃ ಕುಮಾರಾಂತಃ ಪುರಾಣಿ ಚ ' ಎಂಬ ಪಾಠವೇ ವಿಶೇಷವಾಗಿ ಉತ್ತರಕಾಂಡದಲ್ಲಿ ದೊರೆಯು ತ್ತದೆ. ಈ ಪಾಠದಲ್ಲಿ ಶಂಕೆಗೇ ಅವಕಾಶವಿಲ್ಲ.

ಶ್ರೀರಾಮನು ಏಕಪತ್ನೀವ್ರತಸ್ಥನಾದ್ದರಿಂದಲೇ ಯಾಗಸಂದರ್ಭದಲ್ಲಿ ಸೀತೆಯಿಲ್ಲದ್ದರಿಂದ ಸೀತೆಯ ಕಾಂಚನಪ್ರತಿಮೆಯನ್ನು ಪ್ರತಿನಿಧಿಯಾಗಿಟ್ಟು ಕೊಂಡಿದ್ದನು. 'ಕಾಂಚನೀಂ ಮಮ ಪತ್ನೀಂ ಚ ದೀಕ್ಷಾರ್ಹಾಂ ಯಜ್ಞ ಕರ್ಮಣಿ' ಎಂದು ಸ್ಪಷ್ಟವಾಗಿ ಶ್ರೀರಾಮನೇ ಹೇಳಿದ್ದಾನೆ. ಸೀತೆಯನ್ನು ಪರಿತ್ಯಜಿಸಿದಮೇಲೆ ಇನ್ನೊಬ್ಬಳನ್ನು ಮದುವೆಯಾಗಲೇ ಇಲ್ಲವೆಂದೂ ಪ್ರತಿ ಯೊಂದು ಯಾಗದಲ್ಲಿಯೂ ಸೀತೆಯು ಕಾಂಚನಪ್ರತಿಮೆಯನ್ನೇ ಇಟ್ಟುಕೊಳ್ಳು ತ್ತಿದ್ದನೆಂದೂ

**ನ ಸೀತಾಯಾಃ ಪರಾಂ ಭಾರ್ಯಾಂ ವವ್ರೇ ಸ ರಘುನಂದನಃ ।**
**ಯಜ್ಞೇ ಯಜ್ಞೇ ಚ ಪತ್ನ್ಯರ್ಥಂ ಕಾಂಚನೀ ಜಾನಕೀ ಭವೇತ್ ॥**

— ಉತ್ತರ. ೯೯–೮

ಎಂಬ ಶ್ಲೋಕದಲ್ಲಿ ಸ್ಪಷ್ಟವಾಗಿ ಹೇಳಿದೆ

ಶ್ರೀರಾಮನು ವನವಾಸಕ್ಕೆ ಹೊರಡುವಾಗ ಸಕಲ ಅಂತಃಪುರಸ್ತ್ರೀಯರೂ ದುಃಖಾರ್ತರಾಗಿ ನೆರೆದಿದ್ದರು. ಅವನಿಗೆ ಇತರ ಪತ್ನಿಯರಿದ್ದರೆ ಅವರ ವೃತ್ತಾಂತ ವೇಕೆ ಬಂದಿಲ್ಲ? ದಶರಥ, ಕೌಶಲ್ಯೆ ಮುಂತಾದವರ ವಿಲಾಪವಚನಗಳಲ್ಲಿ ಎಲ್ಲಿಯೂ ಇಂತಹ ಸೂಚನೆಯೂ ತೋರುವುದಿಲ್ಲ. ಆದ್ದರಿಂದ ಶ್ರೀರಾಮನು ಏಕಪತ್ನೀವ್ರತಸ್ಥನೆಂಬುದೇ ನಿಶ್ಚಿತವಾದ ಅಭಿಪ್ರಾಯ.

೨

**ಶುಶುಭೇ ಸುಭಗಃ ಶ್ರೀಮಾನ್ ಸ್ವಾತೀಪಥ ಇವಾಂಬರೇ**

– ಪುಟ ೧೬೨

ಸೂರ್ಯಾದಿಗ್ರಹಗಳಿಗೆ ಆಕಾಶಮಾರ್ಗದಲ್ಲಿ ಆರೋಹಣ–ಅವರೋಹಣ ಸ್ಥಾನಗಳುಂಟು. ಜಾರದ್ಗವ, ಐರಾವತ, ವೈಶ್ವಾನರ ಎಂದು ಅವುಗಳಲ್ಲಿ ಮೂರು ಪ್ರಕಾರಗಳಿವೆ. ಜಾರದ್ಗವಕ್ಕೆ ಮಧ್ಯಮಾರ್ಗವೆಂದೂ, ಐರಾವತಕ್ಕೆ ಉತ್ತರಮಾರ್ಗವೆಂದೂ, ವೈಶ್ವಾನರಕ್ಕೆ ದಕ್ಷಿಣಮಾರ್ಗವೆಂದೂ ಹೆಸರು. ಇವುಗಳಲ್ಲಿ ಒಂದೊಂದು ಮಾರ್ಗಕ್ಕೂ ಮೂರು ವೀಥಿಗಳಿವೆ. ಹಸ್ತ, ಚಿತ್ರಾ ಮತ್ತು ಸ್ವಾತೀ ನಕ್ಷತ್ರಗಳ ಮಾರ್ಗಕ್ಕೆ ಗೋವೀಥಿಯೆಂದು ಹೆಸರು. ಸ್ವಾತೀ ಪಥವೆಂದರೆ ಈ ಗೋವೀಥಿ. ಇದು ಗ್ರಹಗಳ ಮಧ್ಯಮಾರ್ಗದಲ್ಲಿ ಮಧ್ಯಮ ವೀಥಿಯಾಗುತ್ತದೆ. ಸಮುದ್ರದಲ್ಲಿ ಬಂಧಿಸಿದ ಸೇತುವಿಗೂ ಆ ಸ್ವಾತೀ ಪಥಕ್ಕೂ ಹೋಲಿಕೆ ಹೇಗೆ? ಸಾಧಾರಣ ಧರ್ಮ ಯಾವುದು ? ಎಂಬುದು ಸ್ಪಷ್ಟವಾಗುವುದಿಲ್ಲ. ಸ್ವಾತೀನಕ್ಷತ್ರದ ಸುತ್ತಲೂ ಬೆಳಕು ಚೆಲ್ಲಿರುವುದರಿಂದ ಆ ಮಾರ್ಗವು ಬೆಳ್ಳಗೆ ಹೊಳೆಯುತ್ತಿರಬಹುದು. Milky-Way ಎಂದು ತಾತ್ಪರ್ಯವಿರಬಹುದು. ಸಮುದ್ರವು ಆಕಾಶದಂತೆಯೂ, ಸೇತುವೆಯು ಈ 'ಕ್ಷೀರಪಥ'ದಂತೆಯೂ, ಶ್ರೀರಾಮಾದಿಗಳು ಆ ಮಾರ್ಗದಲ್ಲಿ ಹೋಗುವ ಸೂರ್ಯಾಗ್ರಹಗಳಂತೆಯೂ ಎಂದು ಭಾವವಿರಬಹುದು.

೩

**ಮಂಡಲಾನಿ ವಿಚಿತ್ರಾಣಿ ...........।**
**ಅಭಿದ್ರವಣಮಾಪ್ಲಾವಂ ..........।**
**ಉಪನ್ಯಸ್ತ ಮಪನ್ಯಸ್ತಂ ಯುದ್ಧಮಾರ್ಗವಿಶಾರದೌ ॥**

– ಪುಟ ೨೮೬

೧ ಮಂಡಲ=ಪರಿಭ್ರಮಣವಿಶೇಷ. ಏಕಪಾದದಿಂದ ನಡೆಯುವ ಗತಿವಿಶೇಷಕ್ಕೆ ಚಾರಿಯೆಂದು ಹೆಸರು. ಪಾದದ್ವಯದ ಗತಿವಿಶೇಷಕ್ಕೆ ಕರಣವೆಂದು ಹೆಸರು. ಅನೇಕವಿಧವಾದ ಚಾರಿ ಮತ್ತು ಕರಣಗಳ ಸಮುದಾಯಕ್ಕೆ ಖಂಡವೆಂದು ಹೆಸರು. ಎರಡು ಅಥವಾ ಮೂರು ಖಂಡಗಳ ಸಮುದಾಯವು ಮಂಡಲವೆನಿಸಿಕೊಳ್ಳುತ್ತದೆ.

೨ ಸ್ಥಾನ=ಪಾದಗಳನ್ನು ಹಿಂದೆ ಮುಂದೆ ಅಥವಾ ಪಕ್ಕಕ್ಕೆ ನೀಡಿ ಸಿಂಹ, ಹುಲಿ ಮುಂತಾದ ಪ್ರಾಣಿಗಳಂತೆ ನಿಲ್ಲುವ ಸ್ಥಿತಿ. ಇದು ವೈಷ್ಣವ, ಸಮಪಾದ, ವೈಶಾಖ, ಮಂಡಲ, ಪ್ರತ್ಯಾಲೀಢ ಮತ್ತು ಅನಾವಿದ್ಧ ಎಂದು ಆರು ವಿಧವಾಗಿದೆ.

೩. ಗೋಮುತ್ರಿಕಾ=ಗೋವು ಮೂತ್ರವನ್ನು ಹೊಯ್ಯುವಂತೆ ವಕ್ರವಕ್ರವಾಗಿ ಸಂಚರಿಸುವುದು.

೪. ಗತ=ಶತ್ರುವಿನಮೇಲೆ ಥಟ್ಟನೆ ನುಗ್ಗುವುದು.

೫ ಪ್ರತ್ಯಾಗತ=ಶತ್ರುವಿನ ಬಳಿಯಿಂದ ಥಟ್ಟನೆ ಹಿಂದಕ್ಕೆ ಸುರಿಯುವುದು.

೬ ತಿರಶ್ಚೀನಗತ= ಅಡ್ಡ ಸುರಿಯುವುದು.

೭ ವಕ್ರಗತ = ಪ್ರದಕ್ಷಿಣೆಯಾಗಿ ಅಥವಾ ಅಪಸವ್ಯವಾಗಿ ಸುತ್ತುವುದು.

೮ ಪರಿಮೋಕ್ಷ=ಶತ್ರುವಿನ ಪ್ರಹಾರವನ್ನು ತಪ್ಪಿಸಿಕೊಳ್ಳುವುದು.

೯ ವರ್ಜನ=ತನ್ನ ಪ್ರಹಾರವು ವ್ಯರ್ಥವಾದೀತೆಂದು ತೋರಿದಾಗ ಪ್ರಹರಿಸದೆ ಇರುವುದು.

೧೦ ಪರಿಧಾವನ=ಶತ್ರುವು ನಿಂತಿರುವಾಗ ಅವನ ಸುತ್ತಲೂ ಓಡುವುದು.

೧೧ ಅಭಿದ್ರವಣ=ಶತ್ರುವಿನಮೇಲೆ ಬಹುರಭಸದಿಂದ ನುಗ್ಗುವುದು.

೧೨ ಆಪ್ಲಾವ=ಶರೀರವನ್ನು ಬಗ್ಗಿಸಿ ಕಪ್ಪೆಯಂತೆ ಹೋಗುವುದು.

೧೩ ಆಸ್ಥಾನ=ಸುಮ್ಮನೆ ಎದುರಿಗೆ ನಿಲ್ಲುವುದು.

೧೪ ಪರಾವೃತ್ತ=ಮುಖವನ್ನು ಹಿಂದಿರುಗಿಸಿಕೊಂಡು ಹಿಂದಕ್ಕೆ ಬರುವುದು.

೧೫ ಅಪಾವೃತ್ತ=ನಿಂತ ಸ್ಥಳದಲ್ಲಿಯೇ ಪಕ್ಕಕ್ಕೆ ವಾಲುವುದು.

೧೬ ಅನದ್ರುತ=ಶತ್ರುವನ್ನು ಗಪ್ಪನೆ ಹಿಡಿಯಬೇಕೆಂದು ಥಟ್ಟನೆ ಬಗ್ಗುವುದು.

೧೭ ಅವಪ್ಲುತ=ಶತ್ರುವನ್ನು ಒದೆಯಬೇಕೆಂದು ಸ್ವಲ್ಪ ಬಗ್ಗಿ ಮುಂದಕ್ಕೆ ಹಾರುವುದು.

೧೮ ಉಪನ್ಯಸ್ತ=ಶತ್ರುವಿನ ಕೈಯನ್ನು ಹಿಡಿಯುವುದಕ್ಕಾಗಿ ಕೈನೀಡುವುದು.

೧೯ ಅಪನ್ಯಸ್ತ=ಶತ್ರುವಿನ ಹಿಡಿತವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ತನ್ನ ತೋಳನ್ನು ಸರಿಸುವುದು.

೪

## ಉಮಾ ನಂದೀಶ್ವರಶ್ಚಾಪಿ ರಂಭಾ ವರುಣಕನ್ಯಕಾ

—ಪುಟ ೪೭೬

### ೧. ರಾವಣನಿಗೆ ಅನರಣ್ಯನ ಶಾಪ :

ಒಂದು ಸಲ ರಾವಣನು ಅಯೋಧ್ಯೆಗೆ ಹೋಗಿ ಅನರಣ್ಯನೊಡನೆ ಯುದ್ಧ ಮಾಡಿದನು. ಅನರಣ್ಯನು ಪರಾಜಿತನಾಗಲು ರಾವಣನು ಅವನನ್ನು ಹಂಗಿಸಿದನು. ಆಗ ಅನರಣ್ಯನು ''ಎಲಾ ರಾವಣ, ಇಕ್ಷ್ವಾಕುವಂಶದವರನ್ನು ಹಂಗಿಸುವೆಯಾ? ಕಾಲವಶದಿಂದ ನಾನು ಸೋತುಹೋದೆನು. ಅದಕ್ಕಾಗಿ ಪರಿಹಾಸ ಮಾಡಬಹುದೆ? ಮುಂದೆ ನನ್ನ ವಂಶದಲ್ಲಿ ಜನಿಸುವ ರಾಮ ಎಂಬುವನಿಂದ ನಿನಗೆ ಮರಣವು ಸಂಭವಿಸುವುದು'' ಎಂದು ಶಪಿಸಿ ಸ್ವರ್ಗಸ್ಥನಾದನು. ಈ ಕಥೆಯು ಉತ್ತರಕಾಂಡದ ೧೯ನೆಯ ಸರ್ಗದಲ್ಲಿ ಬಂದಿದೆ.

### ೨. ವೇದವತಿಯ ಶಾಪ :

ಇವಳು ಕುಶಧ್ವಜನೆಂಬ ಬ್ರಹ್ಮರ್ಷಿಯ ಮಗಳು. ಶ್ರೀಮನ್ನಾರಾಯಣನೇ ತನಗೆ ಪತಿಯಾಗಬೇಕೆಂದು ತಪಸ್ಸನ್ನಾಚರಿಸುತ್ತಿದ್ದಳು. ರಾವಣನು ಇವಳನ್ನು ಕಂಡು ಕಾಮಮೋಹಿತನಾಗಿ ಈಕೆಯ ತಲೆಗೂದಲನ್ನು ಹಿಡಿದೆಳೆದನು. ಆಗ ವೇದವತಿಯು ಕೋಪದಿಂದ ''ಎಲೈ ರಾಕ್ಷಸ, ನಾನೇ ಇನ್ನೊಂದು ಜನ್ಮದಲ್ಲಿ ಬಂದು ನಿನ್ನ ವಧೆಗೆ ನಿಮಿತ್ತಳಾಗುವೆನು'' ಎಂದು ಶಪಿಸಿ ಅಗ್ನಿಪ್ರವೇಶಮಾಡಿದಳು ಈ ಕಥೆಯು ಉತ್ತರಕಾಂಡದ ೧೭ನೆಯ ಸರ್ಗದಲ್ಲಿ ಬಂದಿದೆ.

### ೩. ಪಾರ್ವತಿಯ ಶಾಪ :

ರಾವಣನು ಕೈಲಾಸಪರ್ವತವನ್ನು ಅಲ್ಲಾಡಿಸಿದಾಗ ಪಾರ್ವತಿಯು ಕುಪಿತಳಾಗಿ ''ರಾವಣ, ಈ ಪರ್ವತವನ್ನಲ್ಲಾಡಸಿ ಸ್ತ್ರೀಯಾದ ನನಗೆ ಹೆದರಿಕೆ

ಯನ್ನು ಉಂಟುಮಾಡಿದೆಯಲ್ಲವೆ? ಸ್ತ್ರೀಯಿಂದಲೇ ನಿನಗೆ ಮರಣಭಯ ವುಂಟಾಗಲಿ'' ಎಂದು ಶಪಿಸಿದಳೆಂದು ಹೇಳುತ್ತಾರೆ. ಪುರಾಣಾಂತರದಲ್ಲಿ ಈ ಕತೆಯನ್ನು ಹುಡುಕಬೇಕಾಗಿದೆ.

**೪. ನಂದೀಶ್ವರನು ಶಾಪ :**

ರಾವಣನು ಒಂದು ಸಲ ನಂದೀಶ್ವರನು ''ಯಾರಿವನು? ವಾನರಮುಖ ದವನು!'' ಎಂದು ಹಾಸ್ಯಮಾಡಿದನು ಆಗ ನಂದೀಶ್ವರನು ''ಎಲಾ ರಾವಣ, ನನ್ನನ್ನು ವಾನರಮುಖನೆಂದು ಹಾಸ್ಯಮಾಡುವೆಯಾ? ವಾನರರೇ ಬಂದು ನಿನ್ನ ದರ್ಪವನ್ನು ನಾಶಮಾಡುವರು'' ಎಂದು ಶಪಿಸಿದನು. ಈ ಕಥೆಯು ಉತ್ತರಕಾಂಡದ ೧೬ನೆಯ ಸರ್ಗದಲ್ಲಿ ಬಂದಿದೆ.

**೫. ರಂಭೆಯ ಶಾಪ :**

ರಂಭಾನಿಮಿತ್ತವಾಗಿ ನಳಕೂಬರನ ಶಾಪವು ಇಲ್ಲಿ ವಿವಕ್ಷಿತವಾಗಿದೆ. ನಳಕೂಬರನ ಮನೆಗೆ ಹೋಗುತ್ತಿದ್ದ ರಂಭೆಯನ್ನು ರಾವಣನು ಬಲಾತ್ಕರಿಸಿ ದನು. ಇದು ನಳಕೂಬರನಿಗೆ ಗೊತ್ತಾಗಲು ಆತನು ''ಈ ದಿನದಿಂದ ರಾವಣನು ಯಾವ ಸ್ತ್ರೀಯನ್ನಾದರೂ ಬಲಾತ್ಕರಿಸಿದಲ್ಲಿ ಅವನ ಶಿರಸ್ಸು ಸೀಳಿಹೋಗಲಿ '' ಎಂದು ಶಪಿಸಿದನು. ಈ ವೃತ್ತಾಂತವು ಉತ್ತರಕಾಂಡದ ೨೬ನೆಯ ಸರ್ಗದಲ್ಲಿ ಬಂದಿದೆ.

**೬. ಪುಂಜಿಕಸ್ಥಲೆಯ ಶಾಪ :**

ಇವಳ ನಿಮಿತ್ತವಾಗಿ ಬಂದ ಬ್ರಹ್ಮನ ಶಾಪವು ಇಲ್ಲಿ ವಿವಕ್ಷಿತವಾಗಿದೆ. ಇವಳು ಮುಖ್ಯಳಾದ ಒಬ್ಬ ಅಪ್ಸರೆ. ಕುಬೇರನ ಓಲಗದಲ್ಲಿ ವಿಶೇಷವಾಗಿ ಇರುತ್ತಾಳೆಂದು ಮಹಾಭಾರತದ ಸಭಾಪರ್ವದಲ್ಲಿ ಹೇಳಿದೆ. ಇವಳನ್ನು ರಾವಣನು ಪೀಡಿಸಿದ್ದರಿಂದ ಬ್ರಹ್ಮನ ಶಾಪವು ಬಂದಿತೆಂದು ಯುದ್ಧಕಾಂಡದ ೧೩ನೆಯ ಸರ್ಗದಲ್ಲಿ ಉಕ್ತವಾಗಿದೆ. ರಂಭೆ ಮತ್ತು ಪುಂಜಿಕಸ್ಥಲೆಯರ ವೃತ್ತಾಂತವು ಪ್ರಕೃತದಲ್ಲಿ ನೇರವಾಗಿ ರಾವಣನ ಮರಣಕ್ಕೆ ಸಂಬಂದಿಸಿದ್ದಲ್ಲ. ಆದರೆ ಕಷ್ಟದಲ್ಲಿದ್ದ ಆತನಿಗೆ ಈ ವೃತ್ತಾಂತಗಳೆಲ್ಲವೂ ಸ್ಮರಣೆಗೆ ಬಂದಿವೆಯೆಂದು

ತಿಳಿಯಬೇಕು ''ಪರಸ್ತ್ರೀನಿಮಿತ್ತದಿಂದ ನಿನಗೆ ಮರಣವಾಗಲಿ'' ಎಂದು ಶಾಪ ವಿಟ್ಟಿರಬಹುದು.

೫

**ನವ ಷಟ್ ಸಪ್ತ ಚಾಷ್ಟೌ ಚ ಮಾಸಾನ್ ಸ್ವಪಿತಿ ರಾಕ್ಷಸಃ ।**
**ಮಂತ್ರಯಿತ್ವಾ ಪ್ರಸುಪ್ತೋಽಯಮಿತಸ್ತು ನವಮೇಽಹನಿ ॥**

—ಪುಟ ೪೬೭

ಮುಂದೆ ವಿಭೀಷಣನು ಶ್ರೀರಾಮನಿಗೆ ಕುಂಭಕರ್ಣವೃತ್ತಾಂತವನ್ನು ಹೇಳುವಾಗ 'ಶಯಿತಾ ಹ್ಯೇಷ ಷಣ್ಮಾಸಾನೇಕಾಹಂ ಜಾಗರಿಷ್ಯತಿ' (ಸ.೬೧, ಶ್ಲೋ. ೨೮) ಎನ್ನುತ್ತಾನೆ. ಆರು ತಿಂಗಳ ನಿದ್ರೆಯು ಬ್ರಹ್ಮನಿಂದ ಕುಂಭಕರ್ಣ ನಿಗೆ ಶಾಪವಾಗಿ ಬಂದಿತೆಂದು ಆದರಿಂದ ಗೊತ್ತಾಗುತ್ತದೆ. ಕುಂಭಕರ್ಣನು ಬ್ರಹ್ಮನಲ್ಲಿ ವರವನ್ನು ಕೇಳಿಕೊಳ್ಳುವಾಗ ಮತಿಭ್ರಮೆಯಿಂದ ದೇವ, ಬಹುವರ್ಷಗಳವರೆಗೆ ನಿದ್ರೆಮಾಡಬೇಕೆಂಬುದು ನನಗೆ ಇಷ್ಟ' ಎಂದು ಕೇಳಿ ಕೊಂಡನೆಂದು ಉತ್ತರಕಾಂಡದಲ್ಲಿ ಹೇಳಿದೆ : 'ಸ್ವಪ್ತುಂ ವರ್ಷಾಣ್ಯನೇಕಾನಿ ದೇವದೇವ ಮಮೇಪ್ಸಿತಮ್' (ಉತ್ತರ. ಸ ೧೦, ಶ್ಲೋ. ೪೫). ಇದು ಪರಸ್ಪರ ವಿರುದ್ಧವಲ್ಲದೆ ?

ಇದಕ್ಕೆ ಸಮಾಧಾನವೇನೆಂದರೆ : ಕುಂಭಕರ್ಣನು ವರಬಲದಿಂದ ಬಹು ವರ್ಷ ನಿದ್ರಿಸಿದನು. 'ಬಹೂನ್ಯಬ್ದ ಸಹಸ್ರಾಣಿ ಶಯಾನೋ ನ ಪ್ರಬುಧ್ಯತೇ' (ಉತ್ತರ. ಸ. ೧೩, ಶ್ಲೋ. ೮) ಆ ನಿದ್ರೆಯಲ್ಲಿ ಅವನಿಗೆ ಸ್ವಾತಂತ್ರ್ಯ ಉಂಟು. ಅನಂತರ ಎಚ್ಚೆತ್ತಾಗ ಲೋಕಕಂಟಕನಾಗಿ ಮತ್ತೆ ಸಂಚರಿಸಿತೊಡಗಿದನು. ಆಗ ಬ್ರಹ್ಮನಿಂದ ಶಾಪರೂಪವಾಗಿ ನಿದ್ರೆಯು ಪ್ರಾಪ್ತವಾಯಿತು. 'ಆರು ತಿಂಗಳಿಗೆ ಕಡಿಮೆಯಾಗಿ ನಿದ್ರೆಯಿಲ್ಲ' ಎಂಬುದು ಶಾಪದ ತಿರುಳು. ಅದಕ್ಕೂ ಹೆಚ್ಚಾದರೆ ಭಾಧಕವೇನೂ ಇಲ್ಲ. ಆದ್ದರಿಂದ 'ನವ ಷಟ್ ಸಪ್ತ ಚಾಷ್ಟೌ' ಎಂಬುದರಲ್ಲಿ ವಿರೋಧವಿಲ್ಲ.

ವ್ಯಾಖ್ಯಾನಕಾರರ ವ್ಯಾಖ್ಯಾಕೌಶಲಕ್ಕೆ ಇಲ್ಲಿ ಒಂದು ನಿದರ್ಶನವನ್ನು ಕೊಡಬಹದು. 'ನವ ಸಪ್ತ ದಶಾಷ್ಟೌ ಚ ಮಾಸಾನ್ ಸ್ವಪಿತಿ ರಾಕ್ಷಸಃ' ಎಂಬುದು ಸರಿಯಾದ ಪಾಠವೆಂದು ಅವರು ಹೇಳುತ್ತಾರೆ. ಅದರ ಅರ್ಥ

ಹೀಗೆ: ನವಸಪ್ತ=ಹದಿನಾರು. ಅಷ್ಟಿಯೆಂದರೆ ಭಕ್ಷಣ–ವಿನಾಶ–ಲೋಪ. ದಶಾನಾಮಷ್ಟಿಃ ದಶಾಷ್ಟಿಃ ಹತ್ತರ ಲೋಪವೆಂದರ್ಥ. ಹದಿನಾರರಲ್ಲಿ ದಶಾಷ್ಟೌ=ಹತ್ತನ್ನು ಕಳೆದರೆ, ಆರು ಉಳಿಯುತ್ತದೆ. ಆದ್ದರಿಂದ 'ನವ ಸಪ್ತ ದಶಾಷ್ಟೌ ಚ ಮಾಸನ್' ಎಂಬುದಕ್ಕೆ ಆರು ತಿಂಗಳು ಎಂದರ್ಥ !

ಅಲ್ಲದೆ 'ಷಡಹ್ಯೇರ್ಹಿ ಮಾಸಾನ್ ಸಂಪಶ್ಯಂತಿ' ಎಂಬ ವಚನದಂತೆ ಆರು ದಿನಗಳಿಗೆ ಒಂದು ಮಾಸವೆಂಬ ವೈದಿಕವ್ಯವಹಾರ ಉಂಟು 'ನವ ಷಟ್ ಸಪ್ತ ಚಾಷ್ಟೌ ಚ' ಎಂದರೆ ಒಟ್ಟು ಮೂವತ್ತು, ಮೂವತ್ತು ತಿಂಗಳೆಂದರೆ ಮೇಲ್ಕಂಡ ರೀತಿಯಲ್ಲಿ ೧೮೦ ದಿನಗಳಾಹುತ್ತವೆ. ೧೮೦ ದಿನಗಳಿಗೆ ಪ್ರಸಿದ್ಧ ಕ್ರಮದಂತೆ ೬ ತಿಂಗಳಾಗುತ್ತವೆ.

೬ ತಿಂಗಳು ನಿದ್ರಿಸಬೇಕೆಂಬುದು ಬ್ರಹ್ಮನ ಶಾಪವಾದರೆ, ಈಗ ಮಧ್ಯ ದಲ್ಲಿಯೇ ರಾಕ್ಷಸಭಟರು ಕುಂಭಕರ್ಣನನ್ನು ಹೇಗೆ ಎಬ್ಬಿಸಿದರು? ಅವನನ್ನು ಎಬ್ಬಿಸಬೇಕೆಂದು ರಾವಣನು ಆಜ್ಞೆಮಾಡದ್ದಾದರೂ ಹೇಗೆ? ಇದಕ್ಕೆ ಸಮಾಧಾನವೇನಂದರೆ : ಮಹಾಪ್ರಯತ್ನದಿಂದ ಮಧ್ಯದಲ್ಲಿಯೇ ಕುಂಭಕರ್ಣ ನನ್ನು ಎಬ್ಬಿಸಲು ಸಾಧ್ಯವಿತ್ತು, ನಿದ್ರೆಗೆ ಅಡ್ಡಿಯನ್ನು ಯಾರೂ ತಾರದಿದ್ದರೆ ಆರು ತಿಂಗಳೊಳಗೆ ಅವನಿಗೆ ಎಚ್ಚರವಾಗುತ್ತಿರಲಿಲ್ಲ ಎಂದು ತಿಳಿಯಬೇಕು.

ಕುಂಭಕರ್ಣನು ತಮೋಗುಣಪ್ರಧಾನನಾದ ರಾಕ್ಷಸ. ಅವನ ಬಹು ಕಾಲವು ನಿದ್ರೆಯಲ್ಲಿ ಕಳೆದುಹೋಗುತ್ತಿದ್ದಿತೆಂಬುದು ಮುಖ್ಯವಾದ ತಾತ್ಪರ್ಯ.

ಇಂದಿಗೆ ಒಂಬತ್ತನೆಯ ದಿನ ಕುಂಭಕರ್ಣನು ಮಲಗಿದ್ದಾನೆಂದು ರಾವಣನು ಹೇಳಿದನಷ್ಟೆ. ಇದರ ಗಣನಾಕ್ರಮದಲ್ಲಿ ಮತಭೇದ ಉಂಟು:

೧. ಶ್ರೀರಾಮನಿಂದ ರಾವಣನಿಗೆ ಮಕುಟಭಂಗವಾದದ್ದು ಫಾಲ್ಗುಣ ಬಹುಳ ಬಿದಿಗೆಯಂದು. ಅಲ್ಲಿಂದ ಹಿಂದೆ ಒಂಬತ್ತನೆಯ ದಿನವೆಂದರೆ ಫಾಲ್ಗುಣ ಶುದ್ಧನವಮಿ. ಫಾಲ್ಗುಣ ಶುದ್ಧ ಅಷ್ಟಮಿಯ ದಿನ ರಾವಣನ ಮಂತ್ರಾಲೋಚನೆ. ಮಾರನೆಯ ದಿನವೇ ಕುಂಭಕರ್ಣನ ನಿದ್ರಾರಂಭ. ಆ ದಿನವೇ ವಿಭೀಷಣನ ಶರಣಾಗತಿ. ಅಂದೇ ದರ್ಭಶಯನಾರಂಭ. ನವಮಿ, ದಶಮಿ, ಏಕಾದಶಿ– ಮೂರುದಿನ ದರ್ಭಶಯನ. ಹುಣ್ಣಿಮೆಯ ಪೂರ್ತಿ ಸೇತುಬಂಧನ. ಹುಣ್ಣಿಮೆಯ ದಿನವೇ ಸುವೇಲಾರೋಹಣ. ಅಂದೇ ರಾವಣ ಸುಗ್ರೀವ

ಯುದ್ಧ. ಪಾಡ್ಯದಲ್ಲಿ ತುಮುಲಯುದ್ಧ. ಅದೇ ರಾತ್ರಿ ನಾಗಪಾಶ ಬಂಧನ. ಬಿದಿಗೆಯಂದು ಪ್ರಹಸ್ತವಧೆ. ಅಂದೇ ರಾವಣನ ಮುಕುಟಭಂಗ.

೨. ರಾವಣನ ಮಕುಟಭಂಗವೆಂದರೆ ಸುಗ್ರೀವನಿಂದಾದ ಮಕುಟ ಭಂಗ. ಅದು ಹುಣ್ಣಿಮೆಯಂದು ನಡೆಯಿತು. ಅಲ್ಲಿಂದ ಒಂಬತ್ತು ದಿನಗಳ ಹಿಂದೆ-ಫಾಲ್ಗುಣ ಶುದ್ಧ ಸಪ್ತಮಿಯಂದು ಕುಂಭಕರ್ಣನ ನಿದ್ರಾರಂಭ. ಶ್ಲೋಕದಲ್ಲಿರುವ 'ಇತಃ' ಎಂಬ ಶಬ್ದಕ್ಕೆ ಯುದ್ಧಾರಂಭದ ದಿನದಿಂದ ಎಂದರ್ಥ. ರಾವಣಸುಗ್ರೀವರ ದ್ವಂದ್ವಯುದ್ಧವಾದ ಹುಣ್ಣಿಮೆಯನ್ನೇ ಯುದ್ಧಾರಂಭದ ದಿನವೆಂದು ಗಣಿಸಬಹುದು.

೩. ಫಾಲ್ಗುಣಶುದ್ಧ ಪಾಡ್ಯದಲ್ಲಿ ಕುಂಭಕರ್ಣನ ನಿದ್ರಾರಂಭ.

೪. ಮಾಘಶುದ್ಧ ಪಾಡ್ಯದಿಂದ ಬಹುಮಾಸಗಳವರೆಗೆ ರಾಮಾಯಣದ ಯುದ್ಧವು ನಡೆದಿದೆ. ಆಶ್ವಯಜ ಶುದ್ಧ ನವಮಿಯ ದಿನ ರಾವಣನ ವಧೆ ಯಾಯಿತು. ಕುಂಭಕರ್ಣನು ಮಂತ್ರಾಲೋಚನೆಯನ್ನು ಹೇಳಿ ನಿದ್ರಿಸ ಲಾರಂಭಿಸಿ ಆರು ತಿಂಗಳು ಕಳೆದುಹೋಗಿತ್ತು. ಅನಂತರ ಅವನನ್ನು ಎಬ್ಬಿಸ ಲಾಯಿತು. 'ಮಂತ್ರಯಿತ್ವಾ ಪ್ರಸುಪ್ತೋಽಯಮಿತಸ್ತು ನವಮೇಽಹನಿ' ಎಂಬ ಪಾಠವು ಅನೇಕ ಪ್ರತಿಗಳಲ್ಲಿ ದೊರೆಯುವುದಿಲ್ಲ.

ಹೀಗೆ ಅನೇಕ ಮತಭೇದಗಳು ವ್ಯಾಖ್ಯಾನಗಳಲ್ಲಿ ಕಂಡುಬರುತ್ತವೆ. ಯಾವುದು ಸರಿಯೆಂದು ನಿರ್ಣಯಿಸುವುದು ಅಶಕ್ಯವಾಗಿದೆ.

೬

**ತ್ರಯಾಣಾಂ ಪಂಚಧಾ ಯೋಗಂ ಕರ್ಮಣಾಂ ಯಃ ಪ್ರಪಶ್ಯತಿ**

—ಪುಟ ೪೯೭

ಕ್ಷಯ=ತಾನು ದುರ್ಬಲನಾಗಿದ್ದಾಗ ವೈರಿಯೊಡನೆ ನಡೆಸಬೇಕಾದ ಸಾಮೋಪಾಯ. ವೃದ್ಧಿ=ತಾನು ಪ್ರಬಲನಾಗಿದ್ದಾಗ ನಡೆಸಬೇಕಾದ ದಂಡ. ಸ್ಥಾನ=ತಾನೂ ಶತ್ರುವೂ ಸಮಬಲರಾಗಿದ್ದಾಗ ನಡೆಸಬೇಕಾದ ದಾನ ಅಥವಾ ಭೇದ.

ಆರಂಭೋಪಾಯವೇ ಮೊದಲಾದ ಐದು ಸಾಧನಗಳು :

೧. ಆರಂಭೋಪಾಯ. ೨. ಪುರುಷದ್ರವ್ಯಸಂಪತ್. ೩. ದೇಶ ಕಾಲವಿಭಾಗ. ೪. ವಿಪತ್ತಿಪ್ರತೀಕಾರ. ೫. ಕಾರ್ಯಸಿದ್ಧಿ.

೭

**ಪ್ರಜಾಪತೇಸ್ತು ಪುತ್ರಸ್ತ್ವಂ ತಥೈವರ್ಕ್ಷರಜಃಸುತಃ**

—ಪುಟ ೫೪೨

ಬ್ರಹ್ಮನು ಆಕಳಿಸುವಾಗ ಅವನ ಬಾಯಿಂದ ಋಕ್ಷರಜಸ್ಸೆಂಬ ವಾನರನು ಹುಟ್ಟಿದನು. ಶಾಪಗ್ರಸ್ಥವಾಗಿದ್ದ ಒಂದು ಸರೋವರದಲ್ಲಿ ಅವನು ಮುಳುಗಿದಾಗ ಅಪ್ಸರೆಯಾದನು! ಅವಳಲ್ಲಿ ಇಂದ್ರನೂ ಸೂರ್ಯನೂ ಕಾಮಮೋಹಿತ ರಾದರು. ಇಂದ್ರನಿಂದ ವಾಲಿಯೂ ಸೂರ್ಯನಿಂದ ಸುಗ್ರೀವನೂ ಹುಟ್ಟಿದರು. ಅನಂತರ ಬ್ರಹ್ಮನು ಋಕ್ಷರಜಸ್ಸಿಗೆ ಪೂರ್ವರೂಪವನ್ನು ಅನುಗ್ರಹಿಸಿ ಆ ಬಾಲಕರೊಡನೆ ಕಿಷ್ಕಿಂಧೆಗೆ ಕಳಿಸಿದನು. ಆದ್ದರಿಂದ ಸುಗ್ರೀವನು ಬ್ರಹ್ಮನ ಮೊಮ್ಮಗನಾದನು.

ಕುಂಭಕರ್ಣನು ಬ್ರಹ್ಮನ ಮೊಮ್ಮಗನಾದ ವಿಶ್ರವಸ್ಸಿನ ಪುತ್ರನಷ್ಟೆ. ''ನನ್ನಂತೆ ನೀನೂ ಬ್ರಹ್ಮವಂಶಜನೆಂದು ಗರ್ವಪಡುವೆಯಾ? ನಿನ್ನ ತಂದೆ ಗಂಡಸೋ? ಹೆಂಗಸೊ? ಹೆಂಡತಿಯನ್ನು ರಕ್ಷಿಸಿಕೊಳ್ಳಲಾರದೆ ಅವಳನ್ನು ವಾಲಿಗೆ ಒಪ್ಪಿಸಿ ಅಲೆದಾಡುತ್ತಿದ್ದ ನೀನು ವಿಖ್ಯಾತಪೌರುಷನಲ್ಲವೆ !'' ಎಂದು ಕುಂಭಕರ್ಣನ ಚುಚ್ಚುಮಾತು.

೮

**ಕುಂಭಕರ್ಣಶಿರೋ ಭಾತಿ ಕುಂಡಲಾಲಂಕೃತಂ ಮಹತ್ ।**
**ಆದಿತ್ಯೇಽಭ್ಯುದಿತೇ ರಾತ್ರೌ ಮಧ್ಯಸ್ಥಃ ಇವ ಚಂದ್ರಮಾ ॥**

—ಪುಟ ೫೬೮

ಪುನರ್ವಸು ನಕ್ಷತ್ರವು ಅದಿತಿದೇವತಾಕವಾದದ್ದು. ಎರಡು ತಾರೆಗಳು ಪುನರ್ವಸು ನಕ್ಷತ್ರದಲ್ಲಿರುತ್ತವೆ. ಕುಂಭಕರ್ಣನ ಕುಂಡಲಗಳಿಗೂ ಈ ಎರಡು ತಾರೆಗಳಿಗೂ ಹೋಲಿಕೆಯನ್ನು ಕೊಡಲಾಗಿದೆ. ಮಧ್ಯದಲ್ಲಿರುವ ಶಿರಸ್ಸಿಗೂ ಚಂದ್ರನಿಗೂ ಹೋಲಿಕೆ. ರಾಕ್ಷಸನ ಮುಖಕ್ಕೂ ಚಂದ್ರನಿಗೂ ಸಾದೃಶ್ಯವು

ಕೂಡುವುದಿಲ್ಲವಾದರೂ ತಾರೆಗಳಂತಿದ್ದ ಕುಂಡಲಗಳ ಮಧ್ಯದಲ್ಲಿದ್ದುದರಿಂದಲೂ ಆಕಾಶದಲ್ಲಿ ಗೋಚರಿಸಿದ್ದರಿಂದಲೂ ಸಾದೃಶ್ಯವನ್ನು ಕಲ್ಪಿಸಲಾಗಿದೆ. ಕುಂಭಕರ್ಣನ ಕಿವಿಗಳು ಕತ್ತರಿಸಿದ್ದವೆಂದು ಹಿಂದೆ ವರ್ಣಿಸಲ್ಪಟ್ಟಿದ್ದರೂ ಕಿವಿಗಳ ಏಕದೇಶವು ಕತ್ತರಿಸಿತ್ತೆಂದು ತಿಳಿಯಬೇಕು.

ಕೆಲವರು ಈ ಶ್ಲೋಕಕ್ಕೆ ಅರ್ಥಾಂತರವನ್ನು ಕಲ್ಪಿಸಿದ್ದಾರೆ :

ಕುಂಡಲಾಲಂಕೃತಂ=ಕುಂಡಲರಹಿತವಾದದ್ದು. ಅಲಂ ಶಬ್ದಕ್ಕೆ ನಿಷೇಧ ವೆಂಬ ಅರ್ಥ ಉಂಟು. ಅರಾತ್ರೌ ಎಂದು ಪದಚ್ಛೇದ. ಅರಾತ್ರೌ=ಪ್ರಾತಃ ಕಾಲದಲ್ಲಿ ಆದಿತ್ಯೇ=ಸೂರ್ಯನು ಹುಟ್ಟಿದಾಗ ಕಾಣಿಸುವ ಚಂದ್ರನಂತೆ ಕುಂಭಕರ್ಣನ ಶಿರಸ್ಸು ತೇಜೋಹೀನವಾಗಿತ್ತು ಇತ್ಯಾದಿ.

ಮಂಗಳಂ ಕೋಸಲೇಂದ್ರಾಯ ಮಹನೀಯ ಗುಣಾಬ್ಧಯೇ ।
ಚಕ್ರವರ್ತಿತನೂಜಾಯ ಸಾರ್ವಭೌಮಾಯ ಮಂಗಳಮ್ ॥